ಪದ್ಮಣಾಂಕಕವಿಕೃತ

ಪದ್ಮರಾಜಪುರಾಣ

.

ಪ್ರಕಾಶಕರು :

ಶ್ರೀ ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು
ಮುರುಘಾಮಠ
ಧಾರವಾಡ

.

ಸಂಪಾದಕರು :

ರ್. ಸಿ. ಹಿರೇಮಠ, ಎಂ.ಎ.,ಪಿಎಚ್.ಡಿ.,
ಕನ್ನಡ ಪ್ರಾಧ್ಯಾಪಕರು
ರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

VEC, Library
003179
81

VEC, Library
003179
884K
VECKAN893
VIJAYA EVENING COLLEGE,
LIBRARY
BANGALORE-4.
ACCN. NO. 3179
SECTION
COST Rs. 5/-
Date 19/2/1972 Librarian.

884K

ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ — ೧೩

ಪದ್ಮಣಾಂಕಕವಿಕೃತ

ಪದ್ಮರಾಜಪುರಾಣ

***

ಪ್ರಕಾಶಕರು :

ಶ್ರೀ ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು
ಮುರುಘಾಮಠ
ಧಾರವಾಡ

***

ಸಂಪಾದಕರು :

ಡಾ. ಆರ್. ಸಿ. ಹಿರೇಮಠ, ಎಂ.ಎ.,ಪಿಎಚ್.ಡಿ.,
ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಪ್ರಕಾಶಕರು :

ಶ್ರೀ ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು

ಮುರುಘಾಮಠ, ಹಾವೇರಿಪೇಟೆ

ಮಠ ನಂ. ೭೬೬೮

ಧಾರವಾಡ

[ಎಲ್ಲ ಹಕ್ಕುಗಳನ್ನು ಪ್ರಕಾಶಕರು ಕಾದಿರಿಸಿದ್ದಾರೆ.]

೧೯೫೮

ಬೆಲೆ : ೫ ರೂಪಾಯಿ

ಮುದ್ರಕರು :

ಶ್ರೀ ಬಿಳಗಿ ರಾಮಣ್ಣನವರು

ಲಿಂಗರಾಜ ಆರ್ಟ ಪ್ರೆಸ್, ಮನೆ ನಂ. ೨೨೦

ಮಾಳಮಡ್ಡಿ, ಧಾರವಾಡ



ಶ್ರೀಮನ್ನಿರಂಜನ ಪ್ರಣವಸ್ವರೂಪಿ

ಶ್ರೀ ಮುರುಘೇಂದ್ರ ಮಹಾ ಶಿವಯೋಗಿಗಳು

ಗಚ್ಚಿನಮಠ, ಅಥಣಿ

ಅರ್ಪಣೆ

ಶಿವಶರಣರ ಸಾಮರಸ್ಯದ ಮಾರ್ಗದಲ್ಲಿ ನಡೆದು

ಬೆಳಗಿನೊಳಗಿನ ಬೆಳಗು ಮಹಾಬೆಳಗನ್ನು ಕಂಡು

ಪರಮವೈರಾಗ್ಯಮೂರ್ತಿಗಳೂ

ಮಹಾಶಿವಯೋಗಿಗಳೂ

ಆದ

ಅಥಣಿ ಗಚ್ಚಿನಮಠದ

ಲಿಂಗೈಕ್ಯ

ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ

ಶ್ರೀ ಮುರುಘೇಂದ್ರ ಮಹಾಶಿವಯೋಗಿಗಳವರ

ದಿವ್ಯಪಾದಾರವಿಂದಂಗಳಲ್ಲಿ

ಈ ಗ್ರಂಥವನ್ನು ಭಕ್ತಿಪುರಸ್ಸರವಾಗಿ

ಸಮರ್ಪಿಸಲಾಗಿದೆ

ವಿಷಯಸೂಚಿಕೆ

ವಿಷಯ	ಪುಟ
ಮುನ್ನುಡಿ	೧-೨
ಪ್ರಸ್ತಾವನೆ	೧-೧೦೮
ಕಥಾಸಾರ	೧-೧೩೯
ಪದ್ಮರಾಜಪುರಾಣ	
ಸಂಧಿ ೧ — ಪೀಠಿಕಾ ಸಂಧಿ	೧
ಸಂಧಿ ೨ — ಪದ್ಮರಸರ ಜನನ	೧೬
ಸಂಧಿ ೩ — ಪದ್ಮರಸರ ವಿವಾಹ	೩೭
ಸಂಧಿ ೪ — ದಂಡನಾಥ ಪದ್ಮರಸರು	೫೯
ಸಂಧಿ ೫ — ಹರೀಶ್ವರ ಪದ್ಮರಸರ ಹಿರಿಮೆ	೭೭
ಸಂಧಿ ೬ — ಪದ್ಮರಸರು ಕೆರೆ ನಿರ್ಮಿಸಿದುದು	೯೩
ಸಂಧಿ ೭ — ಪದ್ಮರಸರ ಶಿವಪೂಜಾ ಸಂಭ್ರಮ	೧೨೧
ಸಂಧಿ ೮ — ವನವಿಹಾರ	೧೩೫
ಸಂಧಿ ೯ — ವಾದಕ್ಕೆ ನೃಪಸಭೆಗೆ ಪೋದುದು	೧೬೨
ಸಂಧಿ ೧೦ — ತ್ರಿಭುವನತಾತನ ಪರಾಜಯ	೧೭೪
ಸಂಧಿ ೧೧ — ಶೈವಾಧಿಕ್ಯ	೨೬೦
ಸಂಧಿ ೧೨ — ಶಿವದೀಕ್ಷೆ	೩೧೬
ಸಂಧಿ ೧೩ — ಕೆರೆಯ ಪದ್ಮರಸರು ವಿಶ್ವನಾಥನಲ್ಲಿ ಐಕ್ಯವಾದುದು	೩೩೨
ಶಬ್ದಕೋಶ	
ಒಪ್ಪೋಲೆ	

ಪ್ರಸ್ತಾವನೆಯಲ್ಲಿ ಬಳಸಿದ
ಸಂಕೇತಗಳ ವಿವರಣೆ

ಕ. ಚ.	ಕರ್ನಾಟಕ ಕವಿಚರಿತೆ
ಕಾ. ಪ್ರ.	ಕಾವ್ಯಪ್ರಕಾಶ
ಕೆ. ಕ. ಜೀ.	ಕೆಲವು ಕನ್ನಡ ಕವಿಗಳ ಜೀವನ ಕಾಲವಿಚಾರ
ಗಿ. ಕ.	ಗಿರಿಜಾ ಕಲ್ಯಾಣ
ಗಿ. ಕ. ಮ.	ಗಿರಿಜಾ ಕಲ್ಯಾಣ ಮಹಾಪ್ರಬಂಧ (ಸಂಗ್ರಹ)
ಗು. ಚಾ.	ಗುರುರಾಜ ಚಾರಿತ್ರ
ಚೆ. ಬ. ಪು.	ಚೆನ್ನಬಸವ ಪುರಾಣ
ಪ. ಪು.	ಪದ್ಮರಾಜ ಪುರಾಣ
ಭೈ. ಕಾ. ಕ.	ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರ
ಮ. ರಾ.	ಮಹಾಕವಿ ರಾಘವಾಂಕ
ರಾ. ಚಾ.	ರಾಘವಾಂಕ ಚಾರಿತ್ರ
ರಾ. ಶೇ. ವಿ.	ರಾಜಶೇಖರ ವಿಳಾಸ
ಶ. ಮ. ದ.	ಶಬ್ದಮಣಿ ದರ್ಪಣ
ಶ. ಸಾ.	ಶರಣ ಸಾಹಿತ್ಯ
ಸಾ. ಚ.	ಸಾನಂದ ಚರಿತೆ
ಸಿ. ಚಾ.	ಸಿದ್ಧರಾಮ ಚಾರಿತ್ರ
ಸಿ. ಪು.	ಸಿದ್ಧರಾಮ ಪುರಾಣ
ಸೂ. ಸು.	ಸೂಕ್ತಿ ಸುಧಾರ್ಣವ
ಸೋ. ಚ	ಸೋಮನಾಥ ಚರಿತೆ
ಹ. ಕಾ. ಸಂ.	ಹರಿಶ್ಚಂದ್ರ ಕಾವ್ಯ ಸಂಗ್ರಹ

ಮುನ್ನುಡಿ

ಶ್ರೀ ಬಾಲಲೀಲಾಮಹಾಂತ ಶಿವಯೋಗೀಶ್ವರ ಗ್ರಂಥಮಾಲೆಯ ೨೩ ನೆಯ ಪುಷ್ಪವಾಗಿ ಪದ್ಮಣಾಂಕ ಕವಿಯು ಬರೆದ ಪದ್ಮರಾಜಪುರಾಣವು ಇದೀಗ ಪ್ರಕಟವಾಗಿದೆ. ಸಾಹಿತ್ಯಶರಣರೂ ಭಕ್ತರೂ ಇದನ್ನು ಸ್ವೀಕರಿಸಬೇಕು.

ಪದ್ಮರಾಜಪುರಾಣವು ಶರಣರೂ ಕವಿಗಳೂ ಪವಾಡಪುರುಷರೂ ಆದ ಕೆರೆಯ ಪದ್ಮರಸರನ್ನು ಕುರಿತು ಬರೆದ ಹಿರಿಯ ಕಾವ್ಯ. ಕೆರೆಯ ಪದ್ಮರಸರು ಹೊಯ್ಸಳ ನರಸಿಂಹಬಲ್ಲಾಳನ ಆಸ್ಥಾನದಲ್ಲಿ ವೈಷ್ಣವವಾದಿಯಾದ ತ್ರಿಭುವನತಾತನನ್ನು ಸೋಲಿಸಿ ಶಿವಾದ್ವೈತಸಿದ್ಧಾಂತವನ್ನು ಪ್ರತಿಷ್ಠಾಪಿಸಿ ಆತನಿಗೆ ಲಿಂಗದೀಕ್ಷೆಯನ್ನು ಕೊಟ್ಟು ಷಟ್‌ಸ್ಥಲೋಪದೇಶಮಾಡಿದ ವಿಷಯ ಇತಿಹಾಸಪ್ರಸಿದ್ಧವಾಗಿದೆ. ಕೆರೆಯ ಪದ್ಮರಸರು ಪ್ರಸಿದ್ಧ ಶಿವಶರಣರೂ ವಚನಕಾರರೂ ಆದ ಸಕಲೇಶ ಮಾದರಸರ ಮೊಮ್ಮಕ್ಕಳು; ಕ್ರಾಂತಿಕಾರಕರೂ, ಮಹಾಕವಿಗಳೂ, ಶಿವಶರಣರೂ ಆದ ಹರಿಹರರಾಘವಾಂಕರ ಸಮಕಾಲೀನರು. ಮಹಾತ್ಮಾ ಬಸವಣ್ಣನವರ ತರುವಾಯ ಉದಯವಾಗಿ ಸಾಹಿತ್ಯ, ಧರ್ಮಗಳಲ್ಲಿ ಕ್ರಾಂತಿಯನ್ನೆಸಗಿದ ಪುಣ್ಯ ಪುರುಷರಿವರು.

ಇಂಥ ಪುಣ್ಯಪುರುಷರ ಚರಿತ್ರೆಯನ್ನು ಕೇಳಿ ಜನ ಬದುಕಬೇಕೆಂಬ ಉದ್ದೇಶದಿಂದ ಅವರ ವಿಷಯವಾಗಿ ಕಾವ್ಯಗಳನ್ನು ಬರೆಯುವ ಒಂದು ಸತ್ ಸಂಪ್ರದಾಯ ವೀರಶೈವ ಕವಿಗಳಿಂದ ಆರಂಭವಾಯಿತು. ಪೌರಾಣಿಕ ಹಾಗೂ ಕಾಲ್ಪನಿಕ ಕಥೆಗಳಿಗೆ ಪ್ರತಿಯಾಗಿ ಐತಿಹಾಸಿಕ ವ್ಯಕ್ತಿಗಳ ಜೀವನಚರಿತ್ರೆಯನ್ನು ಕನ್ನಡದಲ್ಲಿ ಕಾವ್ಯಮುಖಾಂತರ ಬರೆದುದು ಒಂದು ವೈಶಿಷ್ಟ್ಯ. ಅದರಿಂದ ನಮ್ಮ ಸಾಹಿತ್ಯದ ಘನತೆ ಹೆಚ್ಚಿದೆ; ಜನತೆಯ ಬಾಳು ಹಸನಾಗಿದೆ; ಆಗುತ್ತದೆ. ಪದ್ಮರಾಜಪುರಾಣವು ಇಂಥ ಘನವಾದ ಕೃತಿಗಳಲ್ಲಿ ಒಂದು.

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಡಾ. ಆರ್. ಸಿ. ಹಿರೇಮಠ, ಎಂ.ಎ.,ಪಿಎಚ್.ಡಿ., ಅವರು ಬಹು ಶ್ರಮಪಟ್ಟು ಪದ್ಮರಾಜಪುರಾಣದ ತಾಳೆಯೋಲೆಯ ಪ್ರತಿಗಳನ್ನು ದೊರಕಿಸಿ ಒಳ್ಳೇ ಶಾಸ್ತ್ರೀಯವಾಗಿ ಸಂಸ್ಕರಿಸಿ ಪದ್ಮರಾಜಪುರಾಣದ ಸಂಪಾದನೆಯ ಕಾರ್ಯವನ್ನು ಪೂರೈಸಿರುವರು. ಅಲ್ಲದೆ

ಅತ್ಯಂತ ಸಂಶೋಧನಾತ್ಮಕ ಹಾಗೂ ವಿಮರ್ಶಾತ್ಮಕ ದೃಷ್ಟಿಯಿಂದ ಬಹು ಬೆಲೆಯುಳ್ಳ ಪ್ರಸ್ತಾವನೆಯನ್ನು ಬರೆದಿರುವರು. ಕಥಾಸಾರ, ಕಠಿಣ ಶಬ್ದಗಳ ಕೋಶ, ಮತ್ತು ಪದ್ಯಗಳ ಅಕಾರಾದಿಗಳನ್ನು ರಚಿಸಿ ಪದ್ಮರಾಜಪುರಾಣವು ಸರ್ವಾಂಗ ಸುಂದರವಾಗುವಂತೆ ಮಾಡಿರುವರು. ಶ್ರೀ ಶಿವಯೋಗೀಶ್ವರನು ಇವರಿಗೆ ಇತ್ಯೋಪ್ಯತಿಶಯವಾದ ಶಕ್ತಿಯನ್ನಿತ್ತು ಮಂಗಲವನ್ನುಂಟುಮಾಡಲಿ.

ಧಾರವಾಡದ ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗ ಸ್ಕೂಲಿನ ನಿವೃತ್ತ ಹೆಡ್ ಮಾಸ್ತರರಾದ ಶ್ರೀ ಕೆ. ಎಸ್. ಪಾಟೀಲ ಅವರು ಎಲೆಯಮರೆಯ ಹೂವಿನಂತೆ ಕಾರ್ಯಮಾಡುವವರು. ಅವರು ಅಂದವಾದ ಅಕ್ಷರಗಳಿಂದ ಅಮೋಘವಾದ ಕನ್ನಡ ಕಾವ್ಯದ ಅಚ್ಚಿನ ಪ್ರತಿಯನ್ನು ಸಿದ್ಧಗೊಳಿಸಿ ಸಂಸ್ಕರಣ ಕಾರ್ಯದಲ್ಲಿ ನೆರವಾಗಿ ನಮ್ಮ ಸಾಹಿತ್ಯಕ್ಕೆ ಮಹದುಪಕಾರ ಮಾಡಿದ್ದಾರೆ. ಅವರಿಗೆ ಶಿವಯೋಗಿಗಳು ಸದಾ ಸನ್ಮಂಗಲವನ್ನುಂಟುಮಾಡಲಿ.

ಲಿಂಗರಾಜ ಆರ್ಟ ಪ್ರೆಸ್ಸಿನ ಒಡೆಯರಾದ ಬಿಳಗಿ ಬಂಧುಗಳು ಭಕ್ತಿಯಿಂದ ಮುದ್ರಣಕಾರ್ಯವನ್ನು ಅಲ್ಪಾವಧಿಯಲ್ಲಿ ಪೂರೈಸಿಕೊಟ್ಟಿರುವರು. ಅವರು ಶಿವಯೋಗಿಗಳ ರಾಜತೇಜದಲ್ಲಿರುವಂತಾಗಲಿ.

ಕನ್ನಡ ಸಾಹಿತ್ಯಶರಣರೂ, ಸಹೃದಯರೂ ಈ ಕೃತಿಯನ್ನು ಸ್ವೀಕರಿಸುವರೆಂದು ಹಾರೈಸುತ್ತೇವೆ.

ಮುರುಘಾಮಠ ಪ್ರಕಾಶಕರು

೨೫—೧—೧೯೫೮

ಪದ್ಮರಾಜಪುರಾಣ

ಪ್ರಸ್ತಾವನೆ

ಕವಿಯ ವಂಶಪರಂಪರೆ

ಪದ್ಮರಾಜಪುರಾಣವನ್ನು ಬರೆದ ಕವಿ ಪದ್ಮಣಾಂಕ.[೧] ಈತನು ಕನ್ನಡ ಸಾಹಿತ್ಯದಲ್ಲಿ ನೆಗಳ್ತೆವೆತ್ತ ಸಕಲೇಶಮಾದರಸ ಹಾಗೂ ಕೆರೆಯ ಪದ್ಮರಸರ ವಂಶಜನು.[೨] ಈ ವಂಶದವರು ಆರಾಧ್ಯಕುಲಚಕ್ರವರ್ತಿಗಳೆಂದೂ ದೇಶಿಕಶಿಖಾಮಣಿಗಳೆಂದೂ ಹೆಸರಾಗಿರುವರು.[೩] ಪದ್ಮರಾಜಪುರಾಣವು ಹೇಳುವಂತೆ[೪] ಆ ವಂಶಾವಳಿ ಹೀಗೆ ಇದೆ:

---

(೧) ಪ. ಪು. ಸಂ. ೧. ಪ. ೨೯; ಪ್ರತಿಯೊಂದು ಸಂಧಿಯ ಉಪಾಂತ್ಯಪದ್ಯವನ್ನೂ ನೋಡಬೇಕು.

(೨) ಪ. ಪು. ಸಂ. ೧. ಪ. ೧೭,೧೯.

(೩) ಪ. ಪು. ಸಂ. ೧. ಪ. ೨೧,೨೬,೨೭.
,, ಸಂ. ೩. ಪ. ೩೫.
,, ಸಂ. ೯. ಪ. ೨೭.
,, ಸಂ. ೧೩. ಪ. ೨೧.
,, ಸಂ. ೨. ಪ. ೨.

(೪) ಪ. ಪು. ಸಂ. ೧. ಪ. ೧೬-೨೯.

ಶಿವಯೋಗಿ ಮಲ್ಲರಸ
|
ಸಕಲೇಶಮಾದರಸ
|
ಮಾಯಿದೇವಾರ್ಯ
|
ಕೆರೆಯ ಪದ್ಮರಸ
|
ಕುಮಾರ ಪದ್ಮರಸ
|
ವಿಶ್ವಾರಾಧ್ಯ
|
ದೇವಾರಾಧ್ಯ
|
ಗೌರಾರ್ಯ
|
ದೇವಾರ್ಯ
|
ವೀರಣಾಚಾರ್ಯ
|
ಪದ್ಮಣಾರ್ಯ — ಚಾಮುಂಡಾರ್ಯ
|
ಪದ್ಮಣಾಂಕ (ಪದ್ಮರಾಜಪುರಾಣದ ಕರ್ತೃ)

ಈ ವಂಶಜರೆಲ್ಲ ಸತ್ಯಶರಣರು; ನಿತ್ಯ ಶಿವಾನುಭಾವಿಗಳು; ಲಿಂಗಾಂಗ ಸಾಮರಸ್ಯಸುಖಿಗಳು; ಸರಸ ಸಾಹಿತ್ಯಜ್ಞರು; ನಿರುಪಮ ಪಾಂಡಿತ್ಯವನ್ನು ಸಂಪಾದಿಸಿದವರು; ಕಾಶೀ ವಿಶ್ವನಾಥನ ನಿಸ್ಸೀಮಭಕ್ತರು; ಪ್ರಪಂಚದಲ್ಲಿದ್ದು ಪಾರಮಾರ್ಥವನ್ನು ಸಾಧಿಸಿದ ಪರಮ ವೀರಶೈವರು.

ಈ ಮನೆತನದ ಮೂಲಪುರುಷರಾದ ಮಲ್ಲರಸರು ಕಲ್ಲುಕುರಿಕೆಯವರು. ಕಲ್ಲುಕುರಿಕೆ 'ಕರ್ನಾಟಕದ ಕೊರಲಹಾರ'ದಂತೆ ಶೋಭಿಸುತ್ತಿತ್ತಂತೆ.[೧] ಮಲ್ಲರಸರು ಅಲ್ಲಿ ಭೂಪಾಲವೃತ್ತಿಯಿಂದಿದ್ದು ಶೈವಸಾಮ್ರಾಜ್ಯವನ್ನೂ ಪರಿಪಾಲಿಸುತಿದ್ದರು.[೨] ವಿಶ್ವನಾಥನ ಸರ್ವಸಾಮರ್ಥ್ಯವೇ ಲೋಕಹಿತಾರ್ಥವಾಗಿ ಜನಿಸಿದಂತಿದ್ದರು.

೧) ಪ. ಪು. ಸಂ. ೨. ಪ. ೪. (೨) ಪ. ಪು. ಸಂ. ೨. ಪ. ೫.

ಅವರು ಪರಮಶಿವಯೋಗಿಗಳಾಗಿ, ಜನರೆಲ್ಲರನ್ನೂ ಲಿಂಗೈಕ್ಯರನ್ನಾಗಿಮಾಡಿ, ಮಾಯಾರಚನೆಯನ್ನು ವರ್ಜಿಸಿ, ವೈರಾಗ್ಯದಿಂದ ಶ್ರೀಗಿರಿಗೆಯ್ದಿ ಅಲ್ಲಿ ಲಿಂಗೈಕ್ಯರಾದರು.[೧]

ಸಕಲೇಶಮಾದರಸರು ಶಿವಯೋಗಿಮಲ್ಲರಸರ ಮಕ್ಕಳು. ಅವರು ಕ್ರಿಯಾ ವಿಹಿತವೃತ್ತಿಯನ್ನು ಆಚರಿಸಿ, ಶರಣಮಾರ್ಗಕ್ಕೆ ಸ್ಫುರಣೆಯನ್ನಿತ್ತ ಯುಗಪುರು ಷರು.[೨] ವೈರಾಗ್ಯಭಾವನೆಯಿಂದ ತಮ್ಮ ರಾಜಧಾನಿಯಾದ ಕಲ್ಲುಕುರಿಕೆಯನ್ನು ಬಿಟ್ಟು ಹೊರಟಾಗ, ಅಂಬೆಯೆಂಬ ಊರ ಭಕ್ತರು ಅವರನ್ನು ತಡೆದರು. ಆದುದ ರಿಂದ ಮಾದರಸರು ಅಲ್ಲಿಯೇ ಸ್ಥಿರವಾಗಿ ನಿಂತುಬಿಟ್ಟರು. ಮುಂದೆ ಮಲ್ಲರಸರ ನಿರೂಪಣೆಯಂತೆ ಸುಮಾರು ಐವತ್ತು ವರುಷ ಜೀವಿಸಿದರು. ಬಸವಾದಿಪ್ರಮಥ ರೊಡನೆ ಕೆಲಕಾಲ ಕಳೆದು ಅವರನ್ನು ಮುಕ್ತಿಗೆ ಸಲಿಸಿ ತಾವು ಶ್ರೀಶೈಲಕ್ಕೆ ತೆರಳಿ ಲಿಂಗದಲ್ಲಿ ಬಯಲಾದರು.[೩]

ಅಲ್ಲಿಂದ ಮುಂದೆ ಅಂಬೆಯೇ ಪದ್ಮಣಾಂಕನ ಮನೆತನದವರಿಗೆ ವಾಸಸ್ಥಳ ವಾಯಿತು. ಜ್ಞಾನನೇತ್ರನೂ ಪದಾರ್ಥತ್ರಯಜ್ಞಾನಸಂಪನ್ನನೂ ಆಚಾರ್ಯ ಚೂಡಾರತ್ನನೂ ಆದ ಮಾಯಿದೇವಮಹಾತ್ಮನು ಅಂಬೆಯಲ್ಲಿಯೇ ನೆಲಸಿ; ವೇದಾ ಗಮಗಳಲ್ಲಿ ಪಾರಂಗತನಾಗಿ ವಾದಿಗಳನ್ನು ಜಯಿಸಿ ಮಹಾದೇವನೇ ದೇವನೆಂಬು ದನ್ನು ಪ್ರತಿಷ್ಠಾಪಿಸಿದನು.[೪]

---

(೧) ಪ. ಪು. ಸಂ. ೨. ಪ. ೭,೮. (೨) ಪ. ಪು ಸಂ. ೨. ಪ. ೧೦,೧೧.

(೩) ... ... ಮಗನೆ ನಿನಗೆ
ಇನ್ನುಂ ಧರಣಿಯೊಳೈವತ್ತು ಬರಿಸದ ವರ್ತ
ನಮನೆನೆವು ನನನಿನ್ನು ಬಸವಾದಿಗಳ್ ಭಕ್ತಿ
ಯಂನಿಲಿಸಲೆಂದು ಕಲ್ಯಾಣದೊಳ್ ಬಂದಿರ್ಪರವರೊಡನೆ ಕಳೆಯೆಂದೆನೆ
(ಪ. ಪು. ಸಂ. ೨. ಪ. ೨೨.)
... ... ಬಸವಾದ್ಯಸಂಖ್ಯಾತರಂ
ವಿನುತ ಮುಕ್ತಿಗೆ ಸಲಿಸಿ ಐವತ್ತು ಬರಿಸವಂ
ದಿನ ದಿನಕ್ಕಾಗೆಯುಲ್ಲಿಂ ತಳದುರ್ ದಾರಿಯೊಳ
ಗನಘ ಶರಣಂ ಗೊಪೆಯ ಶಿವದೇವನೆಂಬ ವೀರವ್ರತಿಯು ಪುರವೊಸೆದಿರೆ
(ಪ. ಪು. ಸಂ. ೨. ಪ. ೨೬.)

(೪) ಪ. ಪು. ಸಂ. ೨. ಪ. ೩೨,೩೩.

ಮಾಯಿದೇವ ವಿಭು ಮಂಗಳದೇವಿಯರೇ ಕೆರೆಯ ಪದ್ಮರಸರ ತಂದೆತಾಯಿಗಳು. ಪದ್ಮರಸರು ವಾದದಲ್ಲಿ ತ್ರಿಭುವನತಾತನನ್ನು ಸೋಲಿಸಿ 'ಶಿವಾದ್ವೈತ ಸಾಕಾರಸಿದ್ಧಾಂತಪ್ರತಿಷ್ಠಾಪನಾಚಾರ್ಯ'ರೆನಿಸಿದುದೂ ಪವಾಡವನ್ನು ಮೆರೆದು ಕೆರೆಕಟ್ಟಿಸಿದುದೂ ಸುಪ್ರಸಿದ್ಧವಾಗಿವೆ.[೧] ನರಸಿಂಹಬಲ್ಲಾಳನ ಮಂತ್ರಿಯಾಗಿಯೂ ಸಾನಂದಚರಿತೆ ದೀಕ್ಷಾಬೋಧೆಗಳೆಂಬ ಗ್ರಂಥಗಳ ಕರ್ತೃವಾಗಿಯೂ ಕೆರೆಯ ಪದ್ಮರಸರು ಹೆಸರಾಗಿರುವರು.

ಕುಮಾರ ಪದ್ಮರಸರು ಕೆರೆಯ ಪದ್ಮಣಾರ್ಯರ ಉದರಸಂಭವರು. ತ್ರಿಭುವನತಾತನೊಡನೆ ತಂದೆಯ ಪರವಾಗಿ ವಾದಮಾಡಿದವರು ಇವರೇ. ಪದ್ಮರಾಜ ಪುರಾಣದ ಹತ್ತನೆಯ ಸಂಧಿ, ಕುಮಾರಪದ್ಮರಸರೇ ತಮ್ಮ ತಂದೆಯ ಆಜ್ಞಾನುಸಾರವಾಗಿ ರಚಿಸಿದ[೨] ಸಾನಂದಚರಿತೆ ಈ ಗ್ರಂಥಗಳನ್ನು ನೋಡಿದರೆ ವೇದಾಗಮ ಪುರಾಣಗಳ ಜ್ಞಾನವೇ ಸಾಕಾರವಾಗಿದೆಯೆಂಬ ಕಲ್ಪನೆಯುಂಟಾಗುತ್ತದೆ. ಅಷ್ಟು

---

(೧) ಸಾನಂದ ಚರಿತೆ ಉಪೋದ್ಘಾತ.
ರಾ. ಚಾ. ಸಂ. ೧೬. ಪ. ೨.
ಚೆ. ಬ. ಪು ದಲ್ಲಿ ಈ ಕಥೆ ಸ್ವಲ್ಪ ಬೇರೆ ತೆರನಾಗಿದೆ.

ಮತ್ತೆ ಕೇಳಲ್ಲಿ ಪದ್ಮರಸನೆನಿಸುವ ಬ್ರಾಹ್ಮ
ಣೋತ್ತಮಂ ವೀರಶೈವಾಚಾರ್ಯನಿರಲಲ್ಲಿ
ಗತ್ತಣಿಂ ಬಂದು ತ್ರಿಭುವನತಾತನೆನಿಪನವರೊಡನೆ ವಾದವ ಮಾಡಲು
ಚಿತ್ತದಿಂದರಿದವನ ತೃಣಪುರುಷನಿಂ ಗೆಲ್ದು
ಬಿತ್ತರದೆ ವೀರಶೈವೋಪದೇಶವನಾಗ
ಳಿತ್ತು ವರಶಿಷ್ಯನಂ ಮಾಡಿಕೊಂಡಿರೆ ಬಿಟ್ಟು ಬಲ್ಲಾಳನವರ ಕರೆಸಿ
(ಚೆ. ಬ. ಪು. ಸಂ. ೬೨. ಪ. ೫೭.)

ಬಳಿಕಲಾ ಪದ್ಮರಸರಂ ನೀವು ನಮಗೊಂದು
ಬಲುಗೆರೆಯ ಕಟ್ಟಿಸೆಂದಧಿಕ ಧನವಂ ಕೊಟ್ಟು
ಕಳುಹಲಾ ರೊಕ್ಕದಿಂ ಜಂಗಮಾರ್ಚನೆಯ ನಲವಿಂ ಮಾಡಿ ಶಿವನೊಲವಿನಿಂ
ತಳುವದಾ ಕೆರೆಯ ಕಟ್ಟಿಸಲರಸನಾ ಕೆರೆಯ
ಕೆಳಗಿರ್ಪ ಬಯಲನೆಂಬತ್ತೆಂಟು ಮಂದಿಯಾ
ಸ್ಥಲದ ಬ್ರಹ್ಮರಿಗಿತ್ತು ಕೆರೆಯ ಪದ್ಮರಸರಂ ಮೊಗನೋಡುತಿಂತೆಂಬನು
(ಚೆ. ಬ. ಪು. ಸಂ. ೬೨. ಪ. ೫೮.)

(೨) ಪ. ಪು. ಸಂ. ೧೨. ಪ. ೫೬.

ಘನವಾಗಿದೆ ಅವರ ಪಾಂಡಿತ್ಯ. ಕುಮಾರಪದ್ಮರಸರು ಪರವಾದಿಭೀಕರರು, ಜ್ಞಾನ ರತ್ನಾಕರರು, ಲಿಂಗಭಕ್ತಿಪ್ರಭಾಕರರು.

ಇವರ ಮಕ್ಕಳು ಆರ್ಯಪ್ರಸರಚಕ್ರವರ್ತಿ ವಿಶ್ವಾರಾಧ್ಯರು. ಅವರೂ ಪರಮತಧ್ವಾಂತ ಪ್ರಚಂಡ ಭಾಸ್ಕರರಾಗಿದ್ದರು. ವಿಶ್ವಾರಾಧ್ಯರು ಶರಣಚರಣಾ ನುರಕ್ತರಾಗಿ ಕರದ ಲಿಂಗದಲ್ಲಿ ಸದ್ಯಃಪ್ರಸನ್ನತೆವಡೆದು ನಿರತಿಶಯವಾದ ಸಂವಿತ್ ಸುಖ ಸಾಗರದಲ್ಲಿ ಮುಳುಗಿದ್ದರು.

ಇವರ ಮಕ್ಕಳಾದ ದೇವಾರ್ಯಶರಣರು ಪರಶಿವನನ್ನು ಸ್ತುತಿಸಿ ಮಳೆ ವಡೆದು ಕೆರೆ ತುಂಬಿಸಿದರಂತೆ.

ದೇವಾರ್ಯರ ಉದರದಲ್ಲಿ ಗೌರಾರ್ಯರು ಜನಿಸುವರು. ಇವರು ಕನ್ನಡ ದಲ್ಲಿ ನೂರೊಂದುಪಾದದ ಗದ್ಯ(೧)ವನ್ನು ರಚಿಸಿರುವರಂತೆ. ಆ ಗ್ರಂಥ ಇನ್ನೂ ಉಪ ಲಬ್ಧವಾಗಿರುವುದಿಲ್ಲ.

ಗೌರಾರ್ಯರ ಹೊಟ್ಟೆಯಲ್ಲಿ ದೇಶಿಕಚಕ್ರವರ್ತಿ ದೇವಾರ್ಯರ ಜನನ ವಾಗುವುದು. ಸಮಸ್ತಾಗಮಾಚಾರ್ಯರೂ ಶಿವಾನುಭಾವಿಗಳೂ ಆದ ವೀರಣಾ ಚಾರ್ಯರು ದೇವಾರ್ಯರ ಮಕ್ಕಳು. ಶಿವನ ದಾನ ಅಭಯ ಕರಯುಗಳದಂತೆ, ವೃಷಭೇಂದ್ರನ ವಿಷಾಣದ್ವಯದಂತೆ, ಶಿವಭಕ್ತನ ಚಿತ್‌ಕ್ರಿಯೆಗಳಂತೆ ವೀರಣಾ ಚಾರ್ಯರ ಹೊಟ್ಟೆಯಲ್ಲಿ ಪದ್ಮಣಾರ್ಯ ಚಾಮುಂಡಾರ್ಯರೆಂಬ ಇಬ್ಬರು ಮಕ್ಕಳು ಜನಿಸುವರು. ಈ ಪದ್ಮಣಾರ್ಯರ ಮಗ ಪದ್ಮಣಾಂಕನೇ ಪದ್ಮರಾಜ ಪುರಾಣವನ್ನು ಬರೆದ ಕವಿ.

ಬಹುತರ ಕೋಟಿ ಜನ್ಮಗಳೊಳಾರ್ಜಿಸಿದ ಉತ್ತಮ ಪುಣ್ಯದೇಳ್ಗೆಯಿಂದಲೇ ಪದ್ಮಣಾಂಕರಿಗೆ ಇಂತಹ ವಂಶಪರಂಪರೆ ಪ್ರಾಪ್ತವಾಗಿದೆ. ಎರಡು ಶತಮಾನ ಗಳ ವರೆಗೆ ಈ ಮನೆತನದಲ್ಲಿ ಜನಿಸಿದ ಪ್ರತಿಯೊಬ್ಬ ಮಹಾನುಭಾವರೂ ಜ್ಞಾನ ಭಾಂಡಾರದ ಮುದ್ರೆಯನ್ನೊಡೆಯುತ್ತ ಬಂದಿರುವರು. ಶಿವಾನುಭವಸುಖಿಗಳಾ ಗಿರುವರು; ಮಹಾ ಜ್ಞಾನಿಗಳೂ ಆಗಿರುವರು. ವಾದದಲ್ಲಿ ಪರಮತವನ್ನು ಸೋಲಿಸಿ ಶಿವಾದ್ವೈತವನ್ನು ಪ್ರತಿಷ್ಠಾಪಿಸುವಶಕ್ತಿ ಈ ಮನೆತನದವರಿಗೆ ಆನು ವಂಶಿಕವಾಗಿ ಪ್ರಾಪ್ತವಾದಂತಿದೆ. ಒಂದೇ ಮನೆತನದಲ್ಲಿ ಅಖಂಡವಾಗಿ ಎರಡು

(೧) ಷ. ಪು. ಸಂ. ೧. ಪ. ೨೫.

ಶತಮಾನಗಳವರೆಗೆ ಪ್ರತಿಭೆ-ಪಾಂಡಿತ್ಯ, ಕ್ರಿಯೆ-ಜ್ಞಾನಗಳ ಪ್ರವಾಹ ಒಂದಾಗಿ ಹರಿದಿರುವುದು, ಸುಂದರವಾಗುತ್ತ ಮುಂದುವರಿದಿರುವುದು ನಮ್ಮ ನಾಡಿನ ಇತಿಹಾಸದಲ್ಲಿಯೇ ವಿರಳವೆಂದು ಹೇಳಿದರೆ ಅತಿಶಯೋಕ್ತಿಯಲ್ಲವೆಂದು ನಮ್ಮ ಭಾವನೆ. ತಂದೆ ಪ್ರಬಲನಾಗಿದ್ದರೆ ಮಗ ದುರ್ಬಲನಾಗುವುದು ನಮ್ಮ ನಾಡಿನ ಇತಿಹಾಸದ ಸಹಜ ಗುಣವಾದಂತಿದೆ. ಅಲ್ಲಲ್ಲಿ ಕೆಲವು ಅಪವಾದಗಳೂ ಇಲ್ಲವೆಂದಲ್ಲ. ಒಟ್ಟಿನಲ್ಲಿ ಒಮ್ಮೆ ಒಂದು ಮನೆತನದಲ್ಲಿ ತಲೆದೋರಿದ ಶಕ್ತಿ ಅವ್ಯಾಹತವಾಗಿ ಮುಂದುವರಿದಿರುವುದು ಕಡಮೆಯೆಂಬುದು ಈ ಮಾತಿನ ಮಥಿತಾರ್ಥ. ಈ ಹಿನ್ನೆಲೆಯಲ್ಲಿ ನೋಡಿದರೆ, ಪದ್ಮಣಾಂಕನ ವಂಶಪರಂಪರೆ ಅತ್ಯಂತ ಉಜ್ವಲವಾದುದೆಂಬುದೂ ವೈಶಿಷ್ಟ್ಯಪೂರ್ಣವಾದುದೆಂಬುದೂ ಸ್ಪಷ್ಟವಾಗುತ್ತದೆ. ಇಂತಹ ವಂಶಪರಂಪರೆಯನ್ನು ಪಡೆದ ಕವಿ ಪದ್ಮಣಾಂಕನೂ ಧನ್ಯನು; ಕನ್ನಡ ನಾಡೂ ಧನ್ಯವಾದುದು. ಆದುದರಿಂದಲೇ ಆತನು ಕಲಾಭಿಜ್ಞನೂ ಆಗಮಜ್ಞನೂ ಆಗಿರುವನು; ಪ್ರತಿಭೆ ಪಾಂಡಿತ್ಯಗಳ ತವರಾಗಿರುವನು; ಉಭಯ ಕವಿತಾವಿಶಾರದನಾಗಿರುವನು.[೧] ಎಲ್ಲಕ್ಕೂ ಮೇಲಾಗಿ ಆತನು ಪರಮಶಿವಭಕ್ತನಾಗಿರುವನು.[೨] ರಸಿಕರಾನಂದಿಪಂತೆ ಪಂಡಿತರು ತಲೆದೂಗುವಂತೆ ಪದ್ಮಣಾಂಕ ತನ್ನ ಪ್ರಪಿತಾಮಹರಾದ ಕೆರೆಯ ಪದ್ಮರಸರನ್ನು ಕುರಿತು ಪದ್ಮರಾಜಪುರಾಣವನ್ನು ರಚಿಸಿ ಶಿವಾರ್ಪಿತವನೆಸಗಿರುವನು. ಪದ್ಮಣಾಂಕನ ವಂಶಪರಂಪರೆಯನ್ನು ವಿವರವಾಗಿ ಬಣ್ಣಿಸುವ ಪದ್ಮರಾಜಪುರಾಣ ತನ್ನ ಕರ್ತೃವಿನ ವಿಷಯವಾಗಿ ಹೆಚ್ಚಿಗೆ ಹೇಳುವುದಿಲ್ಲ. ಪದ್ಮಣಾಂಕನು ಜೀವಿಸಿದುದು ಎಂದು ಮತ್ತು ಎಲ್ಲಿ ? ತನ್ನ ಪಿತಾಮಹರಂತೆ ಈತನೂ ವಾದದಲ್ಲಿ ಯಾವ ಮತವನ್ನಾದರೂ ಜಯಿಸಿದನೇ ? ಯಾವರಾಜನಿಂದಾದರೂ ಮನ್ನಣೆವಡೆದಿದ್ದನೇ ? ಕೊನೆಗೆ ಮಕ್ಕಳನ್ನು ಹಡೆದಿದ್ದನೇ ? ಹೀಗೆ ಆತನ ವೈಯಕ್ತಿಕ ಜೀವನಕ್ಕೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಪದ್ಮರಾಜ ಪುರಾಣದಲ್ಲಿ ಉತ್ತರ ದೊರೆಯುವಂತಿಲ್ಲ. ಬೇರೆ ಕೃತಿಗಳಲ್ಲಿಯೂ ಈ ವಿಷಯ ಉಪಲಬ್ಧವಿಲ್ಲ. ಅಂತೆ ಕವಿಯೊಡನೆ ನಾವೂ ಈ ವಿಷಯವಾಗಿ ಮೌನವನ್ನು ತಳೆಯಬೇಕಾಗಿದೆ.

---

(೧) ಶ. ಪು. ಸಂ. ೧. ಪ. ೨೯.

(೨) ಪದ್ಮರಾಜಪುರಾಣದ ಅಶ್ವಾಸಾಂತ್ಯದ ಪದ್ಯ.

ಕಾಲವಿಚಾರ

ಪದ್ಮಣಾಂಕನು ಕ್ರಿ. ಶ. ಸು. ೧೩೪೫ರಲ್ಲಿ ಜೀವಿಸಿರಬಹುದೆಂದು ಕವಿಚರಿತೆ ಕಾರರ ಅಭಿಪ್ರಾಯ. "ಇವನು ಕೆರೆಯ ಪದ್ಮರಸನಿಂದ (ಸು. ೧೧೬೫) ಎಂಟನೆಯ ತಲೆಯವನಾದುದರಿಂದ ಅವನ ಕಾಲಕ್ಕೆ ಸುಮಾರು ೨೦೦ ವರ್ಷ ಈಚೆಯವನಾಗಿದ್ದಿರಬೇಕು; ಸುಮಾರು ಕ್ರಿ. ಶ. ೧೩೪೫ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ."[೧] ಎಂದು ಆರ್. ನರಸಿಂಹಾಚಾರ್ಯರು ಅಭಿಪ್ರಾಯವಿತ್ತಿರುವರು.

ಆರ್. ನರಸಿಂಹಾಚಾರ್ಯರ ಈ ಊಹೆ ಕೆರೆಯ ಪದ್ಮರಸರ ಕಾಲವನ್ನು ಅವಲಂಬಿಸಿದೆ. ಆದರೆ, ಕೆರೆಯ ಪದ್ಮರಸರ ಕಾಲ ಕನ್ನಡಸಾಹಿತ್ಯಚರಿತ್ರೆಯಲ್ಲಿಯೇ ಒಂದು ಜಟಿಲವಾದ ಸಮಸ್ಯೆಯಾಗಿದೆ. ಸಮಕಾಲೀನ ಕವಿಗಳಾದ ಹರಿಹರ, ರಾಘವಾಂಕ ಮತ್ತು ಕೆರೆಯ ಪದ್ಮರಸರ[೨] ಕಾಲದ ವಿಷಯವಾಗಿ ಕಳೆದ ಕಾಲುಶತಮಾನದಿಂದಲೂ ಚರ್ಚೆ ನಡೆಯುತ್ತಲೇ ಇದೆ. ಇದುವರೆಗೆ ಬಂದ ನಿರ್ಣಯಗಳವಿವರ ಇಂತಿದೆ :

೧.	ರೆ. ಕಿಟೆಲ್[೩]	ಕ್ರಿ. ಶ. ೧೨೯೦
೨.	ಶ್ರೀ. ಆರ್. ನರಸಿಂಹಾಚಾರ್ಯರ್[೪]	,, ೧೧೬೫
೩.	ಡಾ. ವೆಂಕಟಸುಬ್ಬಯ್ಯ[೫]	,, ೧೩೦೦
೪.	ಶ್ರೀ. ಏ. ಆರ್. ಕೃಷ್ಣಶಾಸ್ತ್ರಿಗಳು[೬]	,, ೧೨೦೦
೫.	,, ಕೆ. ಜಿ. ಕುಂದಣಗಾರ, ಮತ್ತು ಶ್ರೀ. ಎಸ್. ಎಸ್. ಮಾಳವಾಡ[೭]	,, ೧೨೧೬
೬.	,, ಗೋವಿಂದ ಪೈ.[೮]	,, ೧೨೨೦

---

(೧) ಕ. ಚ. ಭಾಗ ೧. ಪು. ೪೩೩. (೨) ಪ. ಪು. ಸಂ. ೫; ಪ. ಪು. ಸಂ. ೯. ಪ. ೨೯-೩೦. (೩) ನಾಗವರ್ಮನ ಛಂದೋಂಬುಧಿಯ ಉಪೋದ್ಘಾತ.
(೪) ಕ. ಚ. ಭಾಗ ೧. (೫) ಕೆ. ಕ. ಜೀ. ಕಾ. ವಿ. ಪು. ೨೬೬.
(೬) ಹ. ಕಾ. ಸಂ. xiv. (೭) ಹರಿಹರದೇವ ಪು. ೬೬.
(೮) ಪ್ರಭಾತ (ದಸರಾಸಂಚಿಕೆ ೧೯೩೯) ಪು. ೬೧.

೭. ಶ್ರೀ. ಡಿ. ಎಲ್. ನರಸಿಂಹಾಚಾರ್ಯ[೧] ,, ೧೨೦೦
೮. ಡಾ. ಆರ್. ಸಿ. ಹಿರೇಮಠ[೨] ,, ೧೨೨೫
೯. ಶ್ರೀ. ಎಚ್. ದೇವೀರಪ್ಪ[೩] ,, ೧೩೦೦

ಹರಿಹರ, ರಾಘವಾಂಕ, ಕೆರೆಯ ಪದ್ಮರಸರ ಕಾಲದ ವಿಷಯವಾಗಿದ್ದ ಈ ಭಿನ್ನಾಭಿಪ್ರಾಯಗಳು ವಿಷಯದ ಮಹತಿಯನ್ನೂ ಜಟಿಲತೆಯನ್ನೂ ಎತ್ತಿ ತೋರಿಸುತ್ತವೆ. ಕ್ರಿ. ಶ. ೧೩೦೦ರ ಸುಮಾರು ಈ ಕವಿಗಳು ಜೀವಿಸಿರಬೇಕೆಂದು ರೆ ಕಿಟೆಲ್ ಅವರಿಂದ ಆರಂಭವಾದ ಈ ವಾದ ಮತ್ತೆ ಶ್ರೀ. ಎಚ್. ದೇವೀರಪ್ಪನವರಿಂದ ಅದೇ ನಿರ್ಣಯಕ್ಕೆ ಬಂದು ಮುಟ್ಟಿದಂತಿದೆ. ಆದುದರಿಂದ ಈ ವಿಷಯವನ್ನಿಲ್ಲಿ ಪುನರ್ವಿಮರ್ಶಿಸುವುದು ಅವಶ್ಯವೆನಿಸಿದೆ.

೧

ಕೆರೆಯ ಪದ್ಮರಸರು ನರಸಿಂಹಬಲ್ಲಾಳನಲ್ಲಿ ಮಂತ್ರಿಗಳಾಗಿದ್ದರು, ಹರಿಹರದೇವನು ಈ ನರಸಿಂಹಬಲ್ಲಾಳನಲ್ಲಿ ಕರಣಿಕಾಗ್ರಣಿಯಾಗಿದ್ದನು, ಎಂದು ಪದ್ಮರಾಜ ಪುರಾಣ, ರಾಘವಾಂಕ ಚಾರಿತ್ರ, ಭೈರವೇಶ್ವರಕಾವ್ಯದ ಕಥಾಸೂತ್ರರತ್ನಾಕರ, ಚೆನ್ನಬಸವಪುರಾಣ ಮೊದಲಾದ ಗ್ರಂಥಗಳಲ್ಲಿ ಹೇಳಲಾಗಿದೆ. ನರಸಿಂಹಬಲ್ಲಾಳನ ಸಭೆಯಲ್ಲಿ ಕೆರೆಯ ಪದ್ಮರಸರು ತ್ರಿಭುವನತಾತನನ್ನು ವಾದದಲ್ಲಿ ಸೋಲಿಸುವ ಸಮಯದಲ್ಲಿ ರಾಘವಾಂಕನೂ ಆ ಸಭೆಗೆ ಬಂದಿದ್ದನೆಂದು ಹೇಳಲಾಗಿದೆ.[೪] ಅಲ್ಲದೆ, ಹೊಯ್ಸಳ ಎಂಬ ಪದ ರಾಘವಾಂಕನ ಕಾವ್ಯಗಳಲ್ಲಿ ಎರಡುಸಲ ಬಂದಿದೆ.[೫] ರಾಘವಾಂಕನು ಓರುಂಗಲ್ಲಿಗೆ ಹೋಗಿ ಏಕಸಂಧಿ ದ್ವಿಸಂಧಿ ತ್ರಿಸಂಧಿ ಗ್ರಾಹಿಗಳನ್ನು ಸೋಲಿಸಿ ಕಾಕತೀಯ ರುದ್ರಪ್ರತಾಪನಿಂದ ಪೂಜೆವಡೆದನೆಂದು ಹೇಳಲಾಗಿದೆ.[೬] ಆದುದರಿಂದ ಹರಿಹರ, ರಾಘವಾಂಕ, ಕೆರೆಯಪದ್ಮರಸರು ಹೊಯ್ಸಳರಾಜ್ಯ ಮತ್ತು ಕಾಕತೀಯ ರಾಜ್ಯಗಳು ಇನ್ನೂ ಅಸ್ತಿತ್ವದಲ್ಲಿ ಇರುವಾಗ ಜೀವಿಸಿದ್ದರೆಂದು ಅರ್ಥವಾಗುತ್ತದೆ. ಹೊಯ್ಸಳರಾಜ್ಯ ಕ್ರಿ. ಶ. ೧೩೧೦ರಲ್ಲಿ ಲಯವಾಗಿದೆ. ಕಾಕತೀಯರ ರಾಜ್ಯವೂ ಕ್ರಿ. ಶ. ೧೩೨೩ ರಲ್ಲಿ ಹಾಳಾಗಿದೆ.[೭] ಇದರ ಮೇಲಿಂದ ಕ್ರಿ. ಶ. ೧೩೧೦, ೧೩೨೩ರ ಪೂರ್ವದಲ್ಲಿ. ಈ ಕವಿಗಳು ಇದ್ದರೆಂದು ಸ್ಪಷ್ಟವಾಗುತ್ತದೆ.

---

(೧) ಸಿ. ಪು. xxii (೨) ಮ. ರಾ. ಪು. ೩೮ (೩) ಗಿ. ಕ. ಮ. xiv
(೪) ಪ. ಪು. ಸಂ. ೯. ಪ. ೨೯; ಸಾನಂದಚರಿತೆಯ ಉಪೋದ್ಘಾತ.
( ) ಸೋ. ಚ. ಸಂ. ೬. ಪ. ೭೧; ಸಿ. ಚಾ. ಸಂ. ೮. ಪ. ೫೮.
(೬) ರಾ. ಚಾ. ಸಂ. ೧೮. ಪ. ೪೦,೪೨; ಗು. ಚಾ. ಭೈ. ಕಾ. ಕ. ಸೂ. ರ. ಪು. ೩೫.
(೭) Historical Sketches of Ancient Dekkan P. 305

೨

ಅಬ್ಬಲೂರು ಶಿಲಾಶಾಸನದಲ್ಲಿ ಏಕಾಂತರಾಮಯ್ಯನು ತ್ರಿಭುವನಮಲ್ಲ ಸೋಮೇಶ್ವರನಿಂದಲೂ ಕದಂಬ ಕಾಮರಸನಿಂದಲೂ ಪೂಜೆವಡೆದಂತೆ ಹೇಳಲಾಗಿದೆ. ಸೋಮೇಶ್ವರನ ಕಾಲ ಕ್ರಿ. ಶ. ೧೧೮೨-೧೧೯೯; ಮತ್ತು ಕಾಮರಸನ ಕಾಲ ಕ್ರಿ. ಶ. ೧೧೮೧-೧೨೦೩ ಎಂದು ತಿಳಿದುಬರುತ್ತದೆ. ಆದುದರಿಂದ ಏಕಾಂತ ರಾಮಯ್ಯನು ಕ್ರಿ. ಶ. ೧೨೦೦ರ ವರೆಗೆ ಜೀವಿಸಿರಬಹುದೆಂದು ಹೇಳಬಹುದು. ಹರಿಹರದೇವನು ಆ ಮೇಲೆ ಏಕಾಂತರಾಮಯ್ಯನ ರಗಳೆಯನ್ನು ಬರೆದಿರುವನು.

ಕೆರೆಯ ಪದ್ಮರಸರ ಮಕ್ಕಳಾದ ಕುಮಾರಪದ್ಮರಸರು ತಂದೆ ಸಂಸ್ಕೃತದಲ್ಲಿ ರಚಿಸಿದ ಸಾನಂದಚರಿತೆಯನ್ನು ಅವರ ಅಪ್ಪಣೆಯ ಮೇರೆಗೆ ಕನ್ನಡದಲ್ಲಿ ರಚಿಸಿರುವರು.[೧] ಈ ಗ್ರಂಥವನ್ನು ಆರಂಭಿಸುವಾಗ ಪದ್ಮರಸರು ಜೀವದಿಂದ ಇದ್ದು ಮುಕ್ತಾಯವಾಗುವ ಹೊತ್ತಿಗೆ ಆಗಲೇ ಅವರು ಶಿವೈಕ್ಯರಾದಂತೆ ತೋರುತ್ತದೆ. ಏಕೆಂದರೆ ಸಾನಂದಚರಿತೆಯ ಕೊನೆಗೆ ಶಿವನ ಓಲಗದಲ್ಲಿದ್ದ ಶರಣರನ್ನೂ ಪ್ರಮಥರನ್ನೂ ವರ್ಣಿಸುವಾಗ ಪುರಾತನರ ಹಾಗೂ ಶಿವಶರಣರ ಹೆಸರುಗಳೊಡನೆ ಕೆಳಗೆ ಕಾಣಿಸಿದ ಹೆಸರುಗಳು ಬಂದಿವೆ.[೨]

> ಮಲ್ಲಿಕಾರ್ಜುನ, ಸಿದ್ಧರಾಮ, ಸೊಡ್ಡಳಬಾಚರಸ, ಗೋಪೆಯ ಶಿವದೇವ, ಆದಯ್ಯ, ಏಕಾಂತರಾಮಯ್ಯ, ಶಂಕರ ದಾಸಿಮಯ್ಯ, ಮಡಿವಳಮಾಚಿದೇವ, ದೇವರ ದಾಸಿಮಯ್ಯ, ಅಲ್ಲಮಪ್ರಭು, ಬಸವೇಶ್ವರ, ಸಕಲೇಶಮಾದರಸ, ಮಹಲಿಂಗರಾಮ, ಕೆರೆಯಪದ್ಮರಸ, ಮಹಾದೇವಿಯಕ್ಕ, ಹಾವಿನಹಾಳ-ಕಲ್ಲಯ್ಯ, ಸುಲಿಯ ಚಂದಯ್ಯ, ಉರಿಲಿಂಗಪೆದ್ದಿ, ಕುರುಗೋಡನೃಪ ರಾಚಮಲ್ಲ.

ಇಲ್ಲಿ ಬಸವಣ್ಣನವರ ಸಮಕಾಲೀನರನೇಕರ ಹೆಸರುಗಳು ಬಂದಿರುವುವಲ್ಲದೆ ಅವರ ತರುವಾಯ ಬಂದ ಕೆಲವು ಜನ ಶಿವಶರಣರ ಹೆಸರುಗಳು ಹೆಚ್ಚು ಗಮನಾರ್ಹವಾಗಿವೆ. ಅವರಲ್ಲಿ ಸುಮಾರು ಕ್ರಿ. ಶ. ೧೨೦೦ ರ ವರೆಗೆ ಜೀವಿಸಿರಬಹುದಾದ ಏಕಾಂತರಾಮಯ್ಯ[೩] ಹಾಗೂ ೧೧೮೪ ರಲ್ಲಿ ಜೀವಿಸಿದ್ದ ಕುರುಗೋಡನೃಪ

---

(೧) ಸಾನಂದ ಚರಿತೆಯ ಉಪೋದ್ಘಾತ; ಪ. ಪು. ಸಂ. ೧೨. ಪ. ೫೬.

(೨) ಸಾನಂದ ಚರಿತೆ ಸಂ. ೯;

(೩) ವೀರಶೈವ ಚರಿತ್ರೆಯ ನೂತನಾಂಶಗಳು-ಪಿ. ಬಿ. ದೇಸಾಯಿ: ಶರಣಸಾಹಿತ್ಯ ಜುಲೈ ೧೯೫೭.

ರಾಚಮಲ್ಲ[1] ಇವರ ತರುವಾಯವೇ ಕುಮಾರಪದ್ಮರಸರು ಸಾನಂದಚರಿತೆಯನ್ನು ರಚಿಸಿರಬೇಕು. ಆದುದರಿಂದ ಹರಿಹರ, ರಾಘವಾಂಕ, ಕೆರೆಯ ಪದ್ಮರಸರು ಕ್ರಿ. ಶ. ೧೨೦೦ರಿಂದ ೧೩೦೦ ರ ನಡುವಣ ಕಾಲಾವಧಿಯಲ್ಲಿ ಜೀವಿಸಿರಬೇಕೆಂದು ವಿದಿತವಾಗುತ್ತದೆ.

೩

ಕೆರೆಯ ಪದ್ಮರಸರು ಸಕಲೇಶಮಾದರಸರ ಮಗನ ಮಕ್ಕಳು. ಸಕಲೇಶ ಮಾದರಸರು ಬಸವಾದ್ಯಸಂಖ್ಯಾತರನ್ನು ಮುಕ್ತಿಗೆ ಸಲಿಸಿ ತಾವೂ ಐಕ್ಯರಾಗಲು ಶ್ರೀ ಶೈಲಪರ್ವತದ ಕಡೆಗೆ ನಡೆದಾಗ ಗೊಪೆಯ ಶಿವದೇವನೆಂಬ ವೀರವ್ರತಿಯು ಅವರನ್ನು ಪೂಜಿಸಿ ಅವರಿಂದ ಬಸವಾದ್ಯರೈಕ್ಯವಾರ್ತೆಯನ್ನು ಕೇಳಿ ಆ ಗುರುವಿನ ಅಡಿವಿಡಿದು ಪ್ರಾಣಲಿಂಗದಲ್ಲಿ ಅಡಗಿದರು, ಆಕ್ಷೀಣ ಶಿವದೇವನನ್ನು ಮೆರೆದು ಸಕಲೇಶಮಾದರಸರು ಆತನನ್ನು ಹೊಗಳುತ್ತ ಅಲ್ಲಿಂದ ನಡೆದರು, ಎಂದು ಪದ್ಮ ರಾಜಪುರಾಣದಲ್ಲಿ ಉಕ್ತವಾಗಿದೆ.[2] ಶಿವೈಕ್ಯರಾಗಿ ಶಿವನ ಓಲಗದಲ್ಲಿ ವಿರಾಜಿ ಸುತ್ತಿದ್ದರೆಂದು ಸಾನಂದಚರಿತೆಯಲ್ಲಿ ಹೇಳಲಾದ ಶಿವಶರಣರ ಹೆಸರುಗಳಲ್ಲಿ ಗೊಪೆಯ ಶಿವದೇವನ ಹೆಸರೂ ಇದೆ. ಅಲ್ಲದೆ ಗೊಪೆಯ ಶಿವದೇವನು ಸಕ ಲೇಶಮಾದರಸರ ಕರುಣೆವಡೆದ ಪ್ರಿಯಶಿಷ್ಯನಾಗಿದ್ದನೆಂದು ಕುಮಾರಪದ್ಮರಸರ ಹೇಳಿಕೆಯಿದೆ.

ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ೨೪೪ ನೆಯ ಶಾಸನದಲ್ಲಿ[3] ಗೋಪೆ ಯ ಶಿವದೇವನ ಮಗ ಶಿವಶರಣನು ಶಿವರಾತ್ರಿಯ ಮಾಯಿದೇವರಿಗೆ ಒಂದು ಹೂದೋಟವನ್ನು 'ಕ್ರಯಪ್ರಮಾಣಪತ್ರ 'ಪೂರ್ವಕವಾಗಿ ಕೊಟ್ಟ ಉಲ್ಲೇಖವಿದೆ. ಈ ಶಾಸನದ ಆರಂಭದಲ್ಲಿ " ಸಕವರುಷಂ ೧೨೦೭ ನೆಯ ಪಾರ್ಥಿವ ಸಂವತ್ಸ ರದ ಭಾದ್ರಪದ ಬಹುಳ ೧೦ ಆದಿವಾರದಂದು .... ವೀರನರಸಿಂಹ ದೇವರಸರ್‍ರು ದೋರಸಮುದ್ರನಗರಿಯಲು ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಿರ್ದ ಸಮಯದಲು " ಎಂದಿರುವುದರಿಂದ ಇದರ ಕಾಲ ಕ್ರಿ. ಶ. ೧೨೮೫ ಎಂದು ಆಗುತ್ತದೆ.

---

(೧) ಸಿ. ಪು. XX. (೨) ಪ. ಪು. ಸಂ. ೨. ಪ. ೨೬, ೨೭, ೨೮.

(೩) Epigraphic Karnatika: Vol. v.

ಚೌಡದಾನಪುರದ ಶಾಸನಗಳಲ್ಲಿಯೂ ಒಬ್ಬ ಗೋಪೆಯ ಶಿವದೇವನ ಉಲ್ಲೇಖವಿದೆ.[೧] ಈ ಮೂವರೂ ಬೇರೆ ಬೇರೆಯೆ ? ಇಬ್ಬರೆ ? ಒಬ್ಬರೆ ? ಎಂಬುದು ವಿಚಾರಾರ್ಹವಾಗಿದೆ.

ಚೌಡದಾನಪುರದ ಶಾಸನಗಳಲ್ಲಿ ಉಕ್ತನಾದ ಶಿವದೇವನು "ಶಕವರ್ಷ ೧೧೪೭ನೆಯ ಪಾರ್ಥಿವ ಸಂವತ್ಸರದ ಭಾದ್ರಪದ ಶುದ್ಧ ೧೫ ಸೋಮವಾರ ಚಂದ್ರೋಪರಾಗ ಪುಣ್ಯತಿಥಿಯ ಮಧ್ಯಾಹ್ನಸಮಯದೊಳು ಬಂದು ಮುಕ್ತಿಕ್ಷೇತ್ರಮಂ ಪೊಕ್ಕರು "[೨] ಎಂದಿದೆ. ಅಂದರೆ ಅವರು ಭೂಮಿಗೆ ಅವತರಿಸಿದ ಕಾಲ ಕ್ರಿ. ಶ. ೧೨೨೬ ಎಂದಾಯಿತು.

ಪದ್ಮರಾಜಪುರಾಣದಲ್ಲಿ ಉಕ್ತನಾದ ಶಿವದೇವನಿಗೂ ಚೌಡದಾನಪುರದ ಶಾಸನಗಳಲ್ಲಿ ಉಕ್ತನಾದ ಶಿವದೇವನಿಗೂ ಕೆಲವು ಸಾಮ್ಯಗಳಿವೆ. ಇಬ್ಬರೂ ವೀರವ್ರತಿಗಳು. ಗೊಪೆಯ ಶಿವದೇವನೆಂಬ ವೀರಬ್ರತಿಯು.[೩]

ತನಗೆ ಸೀಮಾಲಂಘನವ್ರತಮೆಸೆಯೆ ನಿಜ ಸ
ದನದಲ್ಲಿಯೊಂದು ಗೊಪೆಯಂ ತೋಡಿಕೊಂಡು ತ
ನ್ನನುವಿಂಗೆ ಕೊರತೆ ಬರೆಯಸುಗಳೆವೆನೆಂಬ ನಿಷ್ಠೆಯನಾಂತು ವಿಜಯಿಯಾಗಿ

ಎಂದು ಪದ್ಮರಾಜಪುರಾಣದಲ್ಲಿ ಗೊಪೆಯ ಶಿವದೇವನ ವರ್ಣನೆಯಿದ್ದರೆ, ಚೌಡದಾನಪುರದ ಶಾಸನದಲ್ಲಿ[೪]

ವೀರಬ್ರತಮಂ ಧರಿಸಿದನತುಳಬಳವಿಕ್ರಮಂ ಸೀಮೆಯನುಲ್ಲಂಘಿಸದುದೆ
ನೆಪ ಧರೆಗೊರಗದಿಪ್ಪುದೆ ಸಲೆ ನಿಯಮಮು ॥ ಎಂದಿದೆ.

ಆದರೆ ಕ್ರಿ. ಶ. ೧೨೨೬ರಲ್ಲಿ ಜನಿಸಿದ ಚೌಡದಾನಪುರದ ಶಾಸನೋಕ್ತ ಶಿವದೇವನು ಸುಮಾರುಕ್ರಿ.ಶ.೧೨೫೦ರ ವರೆಗಾದರೂ ಜೀವಿಸಿದ್ದರೆಂದು ಇಟ್ಟುಕೊಂಡರೆ ಇವರ ಗುರುವಾದ ಸಕಲೇಶಮಾದರಸರು ಇವರನ್ನು ಪ್ರಾಣಲಿಂಗದಲ್ಲಿ ಅಡಗಿಸಿ ಆ ಮೇಲೆ ತಾವು ಐಕ್ಯವಾಗಬೇಕಾದರೆ ಅವರು ಕ್ರಿ. ಶ. ೧೨೫೦ರ ವರೆಗಾದರೂ

(೧) ಎಂ ಜಿ. ನಂಜುಂಡಾರಾಧ್ಯ : ಶಿವದೇವವಿಜಯ ಅನುಬಂಧ ೧.

(೨) ,, ,, ,, ,, ,, ಪುಟ ೧೧.

(೩) ಪ. ಪು. ಸಂ. ೨. ಪ. ೨೬.

(೪) ಎಂ. ಜಿ. ನಂಜುಂಡಾರಾಧ್ಯ : ಶಿವದೇವವಿಜಯ ಅನುಬಂಧ ಪುಟ ೧೨.

ಜೀವಿಸಿರಬೇಕಾಗುತ್ತದೆ. ಆದರೆ ಬಸವಣ್ಣನವರ ಸಮಕಾಲೀನ[೧]ರಾದ ಸಕಲೇಶ ಮಾದರಸರು ಕ್ರಿ.ಶ. ೧೨೫೦ರ ವರೆಗೆ ಜೀವಿಸಿದ್ದರೆಂದು ಊಹಿಸುವುದು ಕಷ್ಟವಾಗುತ್ತದೆ. ಬಸವಣ್ಣನವರು ಐಕ್ಯವಾಗುವಾಗ ಅಂದರೆ ಕ್ರಿ.ಶ. ೧೧೬೭ರಲ್ಲಿ ಸುಮಾರು ೩೦–೩೫ ವರ್ಷದವರಾಗಿರಬಹುದಾದ ಸಕಲೇಶಮಾದರಸರು ಕ್ರಿ. ಶ. ೧೨೫೦ರ ವರೆಗೆ ಜೀವಿಸಿರಬೇಕಾದರೆ ಸುಮಾರು[೨] ೧೨೦ ವರ್ಷ ಬಾಳಿರಬೇಕೆಂದು ಅರ್ಥವಾಗುತ್ತದೆ. ಇಂತಹ ಊಹೆಗಳಿಗೆ ಇತಿಹಾಸದಲ್ಲಿ ಅವಕಾಶವಿಲ್ಲದ ಕಾರಣ ಸಕಲೇಶಮಾದರಸರು ಗೊಪೆಯ ಶಿವದೇವರನ್ನು ಪ್ರಾಣಲಿಂಗದಲ್ಲಿ ಅಡಗಿಸಿ ಮುಂದೆ ಸಾಗಿದರೆಂಬ ಅಂಶವನ್ನು ಸದ್ಯಕ್ಕೆ ಬಿಟ್ಟು ಬಿಡಬೇಕಾಗುತ್ತದೆ.

ಪದ್ಮರಾಜಪುರಾಣ ಮತ್ತು ಚೌಡದಾನಪುರದ ಶಾಸನಗಳಲ್ಲಿ ಉಕ್ತರಾದ ಇಬ್ಬರೂ ಶಿವದೇವರಲ್ಲಿ ಕೆಲವೊಂದು ವ್ಯತ್ಯಾಸಗಳು ಕಂಡುಬರುತ್ತವೆ. ಪುರಾಣೋಕ್ತ ಗೊಪೆಯ ಶಿವದೇವನು ಸಕಲೇಶಮಾದರಸರ ಪರಮಭಕ್ತನು. ಕುಮಾರ ಪದ್ಮರಸನು ಸಾನಂದಚರಿತೆಯಲ್ಲಿ ಈ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾನೆ. ಪದ್ಮರಾಜಪುರಾಣದಲ್ಲಿಯೂ ಇದು ಸ್ಪಷ್ಟವಾಗಿದೆ.

ಅನಘಸಕಲೇಶಮಾದರಸರಡಿದಾವರೆಯೊ
ಳನುದಿನಂ ನಿಜಮನೋಮಧುಕರನ ನಾಡಿಸುತೆ
ವಿನುತನಾದಸಮ ಶಿವದೇವನ[೩] . . . . .
'ತತ್ ಪ್ರಾಣಲಿಂಗದೊಳಾರ್ಯನಡಿವಿಡಿದಡಂಗೆ'[೪]

---

(೧) ಸಕಲೇಶಮಾದರಸರ ತಂದೆ ಮಲ್ಲಿಕಾರ್ಜುನನು ಹೀಗೆ ನುಡಿಯುತ್ತಾನೆ;
... ... ಮಗನೆ ನಿನಗೆ
ಇನ್ನುಂ ಧರಣಿಯೊಳೈವತ್ತು ಬರಿಸದ ವರ್ತ
ನಂ ನೆರೆವುದದನೆಮ್ಮ ಬಸವಾದಿಗಳ್ ಭಕ್ತಿ
ಯಂ ನಿಲಿಸಲೆಂದು ಕಲ್ಯಾಣದೊಳ್ ಬಂದಿರ್ಪರವರೊಡನೆ ಕಳೆಯೆಂದೆನೆ
(ಪ. ಪು. ಸಂ. ೨. ಪ. ೨೨)

(೨) 1166 A. D. In this year the next power of Bijjala ii collapsed.—Historical Inscripticus of South India p.114

(೩) ಪ. ಪು. ಸಂ. ೨. ಪ. ೨೭.

(೪) ಪ. ಪು. ಸಂ. ೨. ಪ. ೨೮. ಬಸವಣ್ಣನವರ ಜೀವನ ಕಾಲವು ಕ್ರಿ. ಶ. ೧೧೨೦ ರಿಂದ ೧೧೬೭ ರ ವರೆಗೆ ಎಂದು ಇಟ್ಟುಕೊಳ್ಳಬಹುದು. ಪಿ. ಬಿ. ದೇಸಾಯಿ, ಶ. ಸಾ. ಸಂ. ೨೦. ಪ. ೪.

ಚೌಡದಾನಪುರದ ಶಾಸನಗಳಲ್ಲಿಯಾದರೊ ಶಿವದೇವನು ಲಿಂಗೋದ್ಭವನೆಂದು ಹೇಳಲಾಗಿದೆ.[೧] ಈತನು ಭಕ್ತಿಯನ್ನು ಪ್ರಕಟಿಸಿದಂತೆ ಕಾಣುವದಿಲ್ಲ; ಏಕೆಂದರೆ ತಾನೇ ಗುರುವಾಗಿರುವನು. ಶಾಸನಗಳಲ್ಲಿ ಕೆಲವುಸಲ ಅತ್ಯುಕ್ತಿಗಳು ಬರುವುದೂ ಉಂಟು. ಒಬ್ಬ ವ್ಯಕ್ತಿಯನ್ನು ಬಣ್ಣಿಸುವುದೇ ಮುಖ್ಯ ಉದ್ದೇಶವಾಗಿದ್ದ ಶಾಸನಕರ್ತನಂತೂ ಇಂತಹ ಅತಿಶಯೋಕ್ತಿಗೆ ಪಕ್ಕಾಗುವುದು ತೀರ ಸಹಜ. ಈ ತತ್ವಕ್ಕನುಸರಿಸಿ ಚೌಡದಾನಪುರದ ಶಾಸನಗಳಲ್ಲಿ ಉಕ್ತವಾದ ಶಿವದೇವನು ಲಿಂಗೋದ್ಭವನೆಂದೂ ಅಂಗನೆಯನ್ನು ಮುಟ್ಟದವನೆಂದೂ ಬಣ್ಣಿಸಲಾಗಿದೆ. ಹೆಸರಿನ ಸಾಮ್ಯ, ಅವರಿಬ್ಬರೂ ಕೈಕೊಂಡಿರುವ ವ್ರತ, ಅವರ ಇಷ್ಟದೇವತೆ (ವೀರಭದ್ರ). ಇವುಗಳಲ್ಲಿರುವ ಸಾಮ್ಯ ಇವನ್ನು ಅನುಲಕ್ಷಿಸಿ ಇವರಿಬ್ಬರೂ ಒಂದೇ ಆಗಿರಬೇಕೆಂದು ನಾವು ಊಹಿಸುವೆವು.

೪

ಇನ್ನು ಚೌಡದಾನಪುರದ ಶಾಸನ ಮತ್ತು ಹಾಸನ ಜಿಲ್ಹೆಯ ಬೇಲೂರ ತಾಲೂಕಿನ ೨೪೪ ನೆಯ ಶಾಸನಗಳಲ್ಲಿ ಉಲ್ಲಿಖಿತರಾದ ಶಿವದೇವರ ಸಂಬಂಧವೇನು ? ಹಾಸನದ ಶಾಸನದಲ್ಲಿ. ಗೋಪೆಯ ಶಿವದೇವನಿಗೆ ಒಬ್ಬ ಮಗನುಂಟು; ಆತನ ಹೆಸರು ಶಿವಶರಣ. ಆ ಶಿವಶರಣನು ಸ್ತ್ರೀಪುತ್ರಜ್ಞಾತಿಸಾಮಂತದಾಯಾದ್ಯರನು ಮತದಿಂ ಶಿವರಾತ್ರಿಯ ಮಾಯಿದೇವರಿಗೆ ಕ್ರಯಪ್ರಮಾಣಪತ್ರಪೂರ್ವಕವಾಗಿ ಹೂದೋಟವನ್ನು ಕೊಟ್ಟಿರುವನು.

ಚೌಡದಾನಪುರದ ಶಾಸನದಲ್ಲಿಯಾದರೊ ಶಿವದೇವನಿಗೆ ಮಕ್ಕಳಿದ್ದ ಉಲ್ಲೇಖವಿಲ್ಲ. 'ಲಿಂಗವನಪ್ಪಿದ ತೋಳ್ಗಳಿನಂಗನೆಯರನಪ್ಪನಳಿಪಿ ನೋಡೆಂ ಕೂಡೆಂ '[೧] ಎಂದು ಶಿವದೇವನು ಶಂಕರನಿಗೆ ಭಾಷೆಯನ್ನು ಕೊಡುವನು. ಇದರಿಂದ ಆತನು ಮದುವೆಯಾಗಿರಲಿಕ್ಕಿಲ್ಲವೆಂದು ಊಹಿಸಬೇಕಾಗುತ್ತದೆ. ಆದರೆ, ಈ ವರ್ಣನೆಯಲ್ಲಿ ಅತಿಶಯೋಕ್ತಿಯಿರಬೇಕೆಂದೂ, ಇವರಿಬ್ಬರೂ ಒಬ್ಬರೇ ಆಗಿರಬೇಕೆಂದೂ ಈ ಹಿಂದೆ ವಿವರಿಸಲಾಗಿದೆ. ಆದುದರಿಂದ ಈ ಶಿವದೇವನು ಪದ್ಮರಾಜಪುರಾಣದಲ್ಲಿ ಹೇಳಿದಂತೆ ಭಕ್ತನಾಗಿರಬೇಕು. ವ್ರತ ಕೈಕೊಂಡಿದ್ದರೂ ಮನೆಯಲ್ಲಿದ್ದಾನೆ; ವಿರಕ್ತನಾಗಿ ಮನೆ ಬಿಟ್ಟು ಹೋಗಿಲ್ಲ. ಆದುದರಿಂದ ಈತನು ಪ್ರಾಪಂಚಿಕನಾಗಿರಬೇಕೆಂದು ಊಹಿಸಲವಕಾಶವಿದೆ.

---

(೧) ಶಿವದೇವ ವಿಜಯ ಅನುಬಂಧ ೧. ಪುಟ ೧೪.

ಹಾಸನ ಜಿಲ್ಲಾ ಬೇಲೂರು ತಾಲೂಕಿನ ೨೪೪ ನೆಯ ಶಾಸನದಲ್ಲಿ ಉಲ್ಲಿಖಿತನಾದ ಶಿವದೇವನು ಪ್ರಾಪಂಚಿಕನಾಗಿದ್ದು ಆತನ ಮಗ ಶಿವರಾತ್ರೆಯ ಮಾಯಿದೇವರಿಗೆ ದತ್ತಿಯನ್ನು ಬಿಟ್ಟಿರುವನು.

ಚೌಡದಾನಪುರದ ಶಾಸನದಲ್ಲಿ ಗೊಪೆಯ ಶಿವದೇವನು ವೀರಭದ್ರನ ಶ್ರೀಪಾದವನ್ನು ಸ್ಮರಿಸಿದನೆಂದು ಹೇಳಲಾಗಿದೆ.[೧]

ಬೇಲೂರು ಶಾಸನದಲ್ಲಿ ಗೋಪೆಯ ಶಿವದೇವರ ಮಗನು ವೀರಭದ್ರನನ್ನು ಸ್ಮರಿಸಿ ದತ್ತಿಯನ್ನು ಕೊಟ್ಟಂತೆ ತಿಳಿಯಬರುತ್ತದೆ.[೨] ಆದುದರಿಂದ ಪದ್ಮರಾಜ ಪುರಾಣ, ಹಾಸನ ಜಿಲ್ಲೆಯ ಬೇಲೂರ ತಾಲೂಕಿನ ೨೪೪ ನೆಯ ಶಾಸನ ಹಾಗೂ ಚೌಡದಾನಪುರದ ಶಾಸನ ಈ ಮೂರರಲ್ಲಿಯೂ ಉಕ್ತನಾದ ಶಿವದೇವನು ಒಬ್ಬನೇ ಎಂದು ನಾವು ಊಹಿಸುತ್ತೇವೆ. ಕ್ರಿ. ಶ. ೧೨೨೬ ರಲ್ಲಿ ಹುಟ್ಟಿದ ಗೋಪೆಯ ಶಿವದೇವನ ಮಗ ಶಿವಶರಣನು ಶಕವರುಷ ೧೨೦೭ (ಕ್ರಿ. ಶ. ೧೨೮೫) ನೆಯ ತಾರಣಸಂವತ್ಸರದ ಫಾಲ್ಗುಣ ಶು. ೮ ರಂದು ಶಿವರಾತ್ರೆಯ ಮಾಯಿದೇವರಿಗೆ ಕ್ರಯಪ್ರಮಾಣಪೂರ್ವಕವಾಗಿ ಒಂದು ಹೂದೋಟವನ್ನು ಕೊಟ್ಟಿರುವುದು ಅಸಂಭವವೇನಲ್ಲ.

ಈ ಶಿವರಾತ್ರೆ ಮಾಯಿದೇವರ ಗುರು (ತಂದೆ?) ಹುಲಿಗೆಱೆಯ ಪುರಾಣದ ಮಾಯಿಪಂಡಿತರು ಎಂದು ಅದೇ ಶಾಸನದಲ್ಲಿ ಅಂದರೆ ಹಾಸನ ಜಿಲ್ಲಾ ಬೇಲೂರ ತಾಲೂಕಿನ ೨೪೪ನೆಯ ಶಾಸನದಲ್ಲಿ ಹೇಳಲಾಗಿದೆ.[೩] ಈ ಶಾಸನದ ಕಾಲ ಕ್ರಿ. ಶ. ೧೨೮೫ ಎಂದೂ ಹಿಂದೆ ವಿವರಿಸಲಾಗಿದೆ. ಕ್ರಿ. ಶ. ೧೨೮೫ ಇದು, ಶಿಷ್ಯರಾದ ಶಿವರಾತ್ರೆಯ ಮಾಯಿದೇವರ ಕಾಲವಾದರೆ, ಅವರ ಗುರು ಹುಲಿಗೆಱೆಯ ಪುರಾಣದ ಮಾಯಿದೇವಪಂಡಿತರ ಕಾಲ ಕ್ರಿ. ಶ. ೧೨೬೦ ಎಂದು ಇಟ್ಟುಕೊಳ್ಳ ಬೇಕಾಗುತ್ತದೆ.

---

(೧) ಶಿವದೇವ ವಿಜಯ ಅನುಬಂಧ ೧. ಪು. ೧೧, ೧೨.

(೨) ವೀರಭದ್ರದೇವರಿಗೆ......ಡಿಕೊಟ್ಟ...(ಹಾಸನ ಜಿಲ್ಹಾ ಬೇಲೂರ ತಾಲೂಕಿನ ೨೪೪ ನೆಯ ಶಾಸನದ ಕೊನೆಯಲ್ಲಿ)

(೩) ಹುಲಿಗೆಱೆಯ ಕ್ಷೇತ್ರವಾಸಿಗಳುಮಪ್ಪ ಪುರಾಣದ ಮಾಯಿದೇವಪಂಡಿತರ... ಸಕಳ ನಯಸಂಪನ್ನರುಮಪ್ಪ ಶಿವರಾತ್ರೆಯ ಮಾಯಿದೇವರಿಗೆ.

ಪದ್ಮರಾಜಪುರಾಣದಲ್ಲಿ ಕೆಱೆಯ ಪದ್ಮರಸರು ತ್ರಿಭುವನತಾತನೊಡನೆ ವಾದ ಮಾಡಲು ನೃಪಸಭೆಗೆ ಹೊರಟಾಗ ಅವರೊಡನೆ

ಸಕಲಜನಸೇವ್ಯ ದೋರಾಂಬುಧಿಯ ರಾಮಣ್ಣ
ನಕಲಂಕನುಭಯಕವಿಶರಭಭೇರುಂಡನೆನಿ
ಪ ಕವೀಂದ್ರರಾಘವಂ ಹುಲಿಗೆಱೆಯ ಮಾಯಿದೇವ ಪುರಾಣಭಟ್ಟರೆಸೆವ
ಸುಕರ ಗುರುಭಕ್ತ ಕಾಮಣ್ಣನಭಿಯಾತಿತಿಮಿ
ರಕುಲಸಪ್ತಾಶ್ವವಿಶ್ವಣ್ಣನುದ್ಧತಶಾಸ್ತ್ರಿ
ನಿಕರಭಂಜನ ನಾಗನಾಥಾರ್ಯನತಿ ರಸಿಕ ಕರ್ಣಾಭರಣಬುಧವರಂ[1]

ಪರಮುಪದವಾಕ್ಯಪ್ರಮಾಣಜ್ಞನಾದ ದೇ
ವರಸಪಂಡಿತರನೇಕ ಕಲಾವಿದಂ ಹಂಪೆ
ಯುರು ರಾಮಿತಂದೆ ಸನ್ಮೇಧ್ಯ ಜಗದಾರಾಧ್ಯನಾ ನಾಗಿದೇವೋತ್ತಮಂ
ಸ್ಫುರದಷ್ಟಭಾಷಾಕವೀಶ್ವರಂ ಶಿವದಾಸ
ರರರೆ ಶೈವವಿರುದ್ಧಮತದಾವದಾವದಾ
ವರಸರಿವರಾದಿಯಾದನುಪಮಿತ ಶೈವವಿದ್ವಜ್ಜನಂ ನಡೆದುದೊಲವಿಂ[2]

ಈ ಪದ್ಯಗಳಲ್ಲಿ ಉಕ್ತರಾದ ದೋರಾಂಬುಧಿಯ ರಾಮಣ್ಣ, ಕವಿಶರಭಭೇರುಂಡ ರಾಘವಾಂಕ, ಹುಲಿಗೆಱೆಯ ಮಾಯಿದೇವ ಪುರಾಣಭಟ್ಟ, ಗುರುಭಕ್ತಕಾಮಣ್ಣ, ವಿಶ್ವಣ್ಣ, ನಾಗನಾಥಾಚಾರ್ಯ ಇವರೇ ಮೊದಲಾದವರು ಆ ಸಭೆಗೆ ಹೋದರೆಂದು ಹೇಳಲಾಗಿದೆ.[3] ಕೆಱೆಯ ಪದ್ಮರಸರ ಕಾಲದಲ್ಲಿಯೇ ಅವರ ಅಪ್ಪಣೆಯ ಮೇರೆಗೆ ಅವರ ಮಗನಾದ ಕುಮಾರ ಪದ್ಮರಸರು ರಚಿಸಿದ ಸಾನಂದಚರಿತೆ ಯಲ್ಲಿಯೂ ಇದೇ ಜನರೇ ಪದ್ಮರಸರೊಡನೆ ಸಭೆಗೆ ಹೊರಟರೆಂದು ಹೇಳಲಾಗಿದೆ. ಕುಮಾರ ಪದ್ಮರಸರು ಸ್ವತಃ ಆ ಸಭೆಗೆ ಹೋಗಿ, ವಾದದಲ್ಲಿ ಭಾಗವಹಿಸಿ[4]ರುವುದ

---

(೧) ಪ. ಪು. ಸಂ-೯ ಪ. ೨೯ (೨) ಪ. ಪು. ೯ ಪ. ೩೦

(೩) ಸಾನಂದಚರಿತೆಯ ಉಪೋದ್ಘಾತ.

(೪) ಸಾದರದೆ ಕಳಿಪೆನ್ನನಲ್ಲಿಗೆನೆ ನಸುನಗುತೆ
ವಾದವೊಂದೆಡೆಯೊಳೊಗೆಯಲ್ಕಲ್ಲಿಗೆಯ್ದುದುಳಿ
ದಾದ ಕರ್ಮದೊಳಿರ್ಪುದೆಮ್ಮ ಮಾಹೇಶ್ವರರ ಮಾರ್ಗವಲ್ತದು ನಿಮಿತ್ತಂ
ಮೋದದಿಂದಾವು ನೋಡಿದಪೆವವನೋಳ್ ನೀಂ ವಿ
ವಾದಮುಂ ಮಾಡುವೈ ಬಾರೆನುತಖಿಲ ಭಕ್ತ
ಪಾದಾಬ್ಜಮುಂ ಸ್ಮರಿಸುತುಂ ಶಿವಾಣುವ.....
(ಪ. ಪು. ಸಂ. ೯. ಪದ್ಯ ೨೮)

ರಿಂದ ಅವರ ಮಾತುಗಳು ಹೆಚ್ಚು ವಿಶ್ವಾಸಾರ್ಹವಾಗಿವೆ. ಇಲ್ಲಿ ಉಲ್ಲಿಖಿತರಾದವರೆಲ್ಲ ಪದ್ಮರಸರನ್ನು ಬಣ್ಣಿಸಿದ ಉಕ್ತಿಗಳು ಸಾನಂದಚರಿತೆಯಲ್ಲಿ ಉದ್ಧೃತವಾಗಿವೆ[೧]. ಆದುದರಿಂದ ಕೆಱೆಯ ಪದ್ಮರಸ, ರಾಘವಾಂಕ, ಹುಲಿಗೆಱೆಯ ಪುರಾಣದ ಮಾಯಿದೇವಪಂಡಿತ ಇವರೆಲ್ಲ ಸಮಕಾಲೀನರೆಂಬುದರಲ್ಲಿ ಸಂಶಯವಿಲ್ಲ. ಇಲ್ಲಿ ಉಕ್ತನಾದ ಹುಲಿಗೆಱೆಯ ಪುರಾಣದ ಮಾಯಿದೇವ ಭಟ್ಟನೂ, ಹಾಸನ ಜಿಲ್ಲೆಯ ಬೇಲೂರಿನ ೨೪೪ ನೆಯ ಶಾಸನದಲ್ಲಿ ಹೇಳಿದ ಹುಲಿಗೆಱೆಯ ಪುರಾಣದ ಮಾಯಿದೇವ ಪಂಡಿತನೂ ಒಬ್ಬನೇ ಆಗಿರಬಹುದು ಎಂದು ನಮ್ಮ ಊಹೆ. ಅದು ನಿಜವಿದ್ದರೆ, ಹುಲಿಗೆಱೆಯ ಪುರಾಣದ ಮಾಯಿದೇವಪಂಡಿತ, ರಾಘವಾಂಕ, ಕೆಱೆಯ ಪದ್ಮರಸ ಇವರು ಕ್ರಿ. ಶ. ೧೨೬೦ ರಲ್ಲಿ ಜೀವಿಸಿದ್ದರೆಂದು ತಿಳಿಯಬೇಕಾಗುತ್ತದೆ.

೫

ಕೆಱೆಯ ಪದ್ಮರಸರು ತ್ರಿಭುವನತಾತನನ್ನು ವಾದದಲ್ಲಿ ಸೋಲಿಸಿದುದು ನರಸಿಂಹಬಲ್ಲಾಳನ ಸಭೆಯಲ್ಲಿ ಎಂದು, ಸ್ವತಃ ಆ ಸಭೆಗೆ ಹೋಗಿ, ವಾದದಲ್ಲಿ ಭಾಗವಹಿಸಿದ, ಕೆಱೆಯ ಪದ್ಮರಸರ ಮಕ್ಕಳಾದ ಕುಮಾರಪದ್ಮರಸರು ರಚಿಸಿದ ಸಾನಂದಚರಿತೆಯಲ್ಲಿ ಉಕ್ತವಾಗಿದೆ[೨]. ಕ್ರಿ. ಶ. ೧೨೬೦ರ ಸುಮಾರು ಆಳುತ್ತಿದ್ದ ನರಸಿಂಹಬಲ್ಲಾಳನೆಂದರೆ ಕ್ರಿ. ಶ. ೧೨೫೪ ರಿಂದ ೧೨೯೧ ರವರೆಗೆ ರಾಜ್ಯಭಾರ ಮಾಡಿದ ಮೂರನೆಯ ನರಸಿಂಹಬಲ್ಲಾಳ

ತ್ರಿಭುವನತಾತನೊಡನೆ ವಾದಮಾಡಿ ಬಂದೊಡನೆಯೇ ಕೆಱೆಯ ಪದ್ಮರಸರ ಅಪ್ಪಣೆಯ ಮೇರೆಗೆ ಕುಮಾರಪದ್ಮರಸರು ಸಾನಂದಚರಿತ್ರೆಯನ್ನು ಬರೆಯಲು ಆರಂಭಮಾಡಿರುವರೆಂದು ಊಹಿಸಲು ಬಲವಾದ ಆಧಾರಗಳಿವೆ.

(೧) ಸಾನಂದಚರಿತ್ರೆಯಲ್ಲಿ ಒಂದು ಉಪೋದ್ಘಾತವಿದೆ. ಆ ಉಪೋದ್ಘಾತದಲ್ಲಿ ದೋರಾಂಬುಧಿಯ ರಾಮಣ್ಣ, ರಾಘವಾಂಕ, ಹುಲಿಗೆಱೆಯ

---

(೧) ಪದ್ಮರಾಜ ಪುರಾಣ, ರಾಘವಾಂಕ ಚಾರಿತ್ರ, ಗುರುರಾಜ ಚಾರಿತ್ರ, ಭೈರವೇಶ್ವರ ಕಾವ್ಯದ ಕಥಾಸೂತ್ರರತ್ನಾಕರ, ಚೆನ್ನಬಸವಪುರಾಣ, ಇವೇ ಮೊದಲಾದ ಗ್ರಂಥಗಳೂ ಈ ವಿಷಯವನ್ನು ಕಂಠೋಕ್ತವಾಗಿ ಸಾರುತ್ತವೆ.

(೨) ಪ. ಪು. ಸಂ. ೧೨. ಪ. ೫೬.

ಪುರಾಣದ ಮಾಯಿದೇವಭಟ್ಟ, ದೇವರಸ, ದಾವರಸ ಮೊದಲಾದವರು ತ್ರಿಭುವನತಾತನನ್ನು ಕೆಱೆಯ ಪದ್ಮರಸರು ವಾದದಲ್ಲಿ ಗೆದ್ದಾಗ ಅವರನ್ನು ಸ್ತುತಿಸಿದ ವಾಕ್ಯಗಳಿವೆ. ವಾದ ಮುಗಿದ ಕಾವಿನಲ್ಲಿಯೇ ಈ ಕಾವ್ಯ ಆರಂಭವಾದುದರಿಂದ, ಉತ್ಸಾಹದ ಭರದಲ್ಲಿ ಆನಂದದ ಉದ್ರೇಕದಲ್ಲಿ ಕುಮಾರ ಪದ್ಮರಸರು ಈ ವಾಕ್ಯಗಳನ್ನು ಆಗ ತಾನೇ ಆರಂಭಿಸಿದ ಸಾನಂದಚರಿತ್ರೆಯಲ್ಲಿ ಉದ್ಧರಿಸಿದಂತಿದೆ. ಇಲ್ಲವಾದರೆ ಈ ವಾಕ್ಯಗಳಿಗೆ ಅಲ್ಲಿ ಸ್ಥಾನವೇ ಇಲ್ಲ.

(೨) ವಾದ ಮುಗಿದಕೂಡಲೆ ಸಮಯಸ್ಥಾಪನಾರ್ಥವಾಗಿ ಸಾನಂದಚರಿತೆಯನ್ನು ಸಂಸ್ಕೃತದಲ್ಲಿ ಬರೆದು ಅದನ್ನು ಕುಮಾರ ಪದ್ಮರಸರಿಂದ ಕರ್ಣಾಟಕ ಭಾಷೆಯಲ್ಲಿ ಬರೆಯಿಸಲಾರಂಭಿಸಿದರು.

ಈ ಕಾವ್ಯಗಳನ್ನು ಪೂರೈಸಲು ೪–೫ ವರ್ಷ ಹಿಡಿದಿವೆಯೆಂದಿಟ್ಟುಕೊಂಡರೆ ಕ್ರಿ. ಶ. ೧೨೬೫ರ ಹೊತ್ತಿಗೆ ಕೆರೆಯ ಪದ್ಮರಸರು ಲಿಂಗೈಕ್ಯರಾಗಿರಬೇಕು. ಏಕೆಂದರೆ – ಸಾನಂದಚರಿತ್ರೆಯ ಕೊನೆಯ ಭಾಗದಲ್ಲಿ ಶಿವನ ಓಲಗದಲ್ಲಿದ್ದ ಶರಣರನ್ನೂ ಪ್ರಮಥಗಣರನ್ನೂ ಹೆಸರಿಸುವಾಗ ಪದ್ಮರಸರ ಹೆಸರೂ ಬಂದಿದೆ.[೧]

೭

ಪದ್ಮರಾಜಪುರಾಣದ ಕೊನೆಯಲ್ಲಿ[೨] ಶಿವನು ವಿಧವೆಯೋರ್ವಳ ಕಷ್ಟಾರ್ಜಿತ ಧನವನ್ನು ಅಪಹರಿಸಿ ತಂದು ಪದ್ಮರಸರಿಗೆ ಪಡಿಹೊನ್ನು ಕೊಟ್ಟ ಕಥೆಯೊಂದು ಬಂದಿದೆ. ಧನವನ್ನು ಕಳೆದುಕೊಂಡ ಆ ಬಡವೆಯ ಗೋಳನ್ನು ಕೇಳಿ ಕನಿಕರಪಟ್ಟು ಪದ್ಮರಸರು ‘ ವಿತ್ತನಾಥಾಪ್ತನೂ ಸುವರ್ಣಾದ್ರಿವಾಸನೂ ಆದ ಶಿವನು ಗಣಪತಿ ನೃಪಾಲನರಮನೆಯ ವಿತ್ತ’ವನ್ನು ಕೊಂಡರೆ ಕೊಳ್ಳಲಿ, ಬಡವೆಯ ತುತ್ತನ್ನೇಕೆ ಅಪಹರಿಸಿದನು ? ಎಂದು ಉದ್ಗಾರ ತೆಗೆದಿರುವರು. ಈ ಗಣಪತಿ ನೃಪಾಲನು ಕಾಕತೀಯ ಗಣಪತಿಯಿರಬೇಕು. ಈ ಧನದವರು ‘ಅಟ್ಟಿಬಂದೊಡೆ ಆನೇಂ ಗುಂಡಬೊಮ್ಮಯ್ಯನೇ ಕಾಯ್ವರೆ’[೩] ಎಂದು ಪದ್ಮರಸರು ನುಡಿದಿರುವರು. ಕಾಕತೀಯ ಗಣಪತಿದೊರೆಯ ಕಾಲದಲ್ಲಿ ಕಳವು ಮಾಡಿ ಬಂದು ಮೊರೆಹೊಕ್ಕವರನ್ನು ಸಂರಕ್ಷಿಸಲು ‘ ಗುಂಡಬೊಮ್ಮಯ್ಯನು ’ ಶೂಲಕ್ಕೇರಿದ ಕಥೆಯಿದೆ.[೪]

(೧) ಸಾ. ಚ. ಸಂ. ೯. (೨) ಪ. ಪು. ಸಂ. ೧೩. ಪ. ೯. (೩) ಪ. ಪು. ಸಂ.೧೩. ಪ. ೭.
(೪) ಪ. ಪು. ಸಂ. ೧೩. ಪ. ೯; ಚೆ. ಬ. ಪು. ಸಂ. ೬೨. ಪ ೨೭.

ಈ ಕಾಕತೀಯ ಗಣಪತಿಯ ಕಾಲ ಕ್ರಿ. ಶ. ೧೨೦೦ ರಿಂದ ೧೨೬೦. ಕಾಕತೀಯ ಗಣಪತಿ ತೀರಿಹೋದಮೇಲೆ ಪದ್ಮರಸರು ಈ ಮಾತು ಹೇಳಿರುವುದು ಅಸಾಧ್ಯ. ಶೈವಪಕ್ಷಪಾತಿಯೂ ಶಿವಭಕ್ತನೂ ಆದ ಈ ದೊರೆ ಆಳುತ್ತಿರುವಾಗಲೇ ಪದ್ಮರಸರ ಬಾಯಿಂದ ಈ ಮಾತು ಬಂದಿರಲಿಕ್ಕೆ ಸಾಕು. ಪದ್ಮರಸರ ಜೀವನದ ಕೊನೆಕೊನೆಗೆ ಈ ಘಟನೆ ನಡೆದಂತೆ ಊಹಿಸಬಹುದಾದುದರಿಂದ ಮೇಲಿನ ನಿರ್ಣಯಕ್ಕೆ ಈ ಮಾತು ಪುಷ್ಟಿಕೊಡುವಂತಿದೆ.

೭

ಮೇಲೆ ನಿರ್ದೇಶಿಸಿದ ಶಿವನ ಓಲಗದಲ್ಲಿದ್ದ ಶಿವಶರಣರ ಹೆಸರುಗಳಲ್ಲಿ ಹರಿಹರ, ರಾಘವಾಂಕರ ನಾಮ ನಿರ್ದೇಶವಾದಂತಿಲ್ಲ.[೧] ಆದುದರಿಂದ ಸಾನಂದಚರಿತೆ ಮುಕ್ತಾಯವಾಗುವ ಹೊತ್ತಿಗೆ ಹರಿಹರ ರಾಘವಾಂಕರಿನ್ನೂ ಶಿವೈಕ್ಯರಾಗಿರಲಿಕ್ಕಿಲ್ಲವೆಂದು ಊಹಿಸಬಹುದೇ ?

ಪದ್ಮರಸರು ಕಾಶಿಗೆ ಹೊರಟಾಗ ಹಂಪೆಗೆ ಹೋಗಿ ಹರೀಶ್ವರನಿಗೆ ‘ ಉಮಾವರಂ ನಿಮ್ಮನಿಂದಿಂಗೆಂಟನೆಯ ದಿನಕೆ ತನ್ನೊಳ್ ನೆರಪಲಿರ್ದಪಂ; ಅಂತಱಿಂ ನೀವೀಗಳೊರೆವೀ ಮಹಾಕಾವ್ಯಮಂ ತಡೆಯದನಿತಱೊಳ್ ಪಾರವೆಯ್ದಿಪುದು ’[೨] ಎಂದು ನುಡಿವಿರುವುದರಿಂದ ಮುಂದೆ ಹರೀಶ್ವರನು ಬಹು ದಿವಸ ಬಾಳಿರಲಿಕ್ಕಿಲ್ಲವೆಂದೂ ಊಹಿಸಲು ಬರುವಂತಿದೆ.

೮

ರಾಘವಾಂಕನು ಕ್ರಿ. ಶ. ೧೨೯೧ ರಲ್ಲಿ ಓರುಂಗಲ್ಲಿಗೆ ಹೋಗಿ, ಪ್ರತಾಪರುದ್ರನ ಸಭೆಯಲ್ಲಿ ವಾದಿಗಳನ್ನು ಸೋಲಿಸಿ ಮರಳಿಬರುವಾಗ ದಾರಿಯಲ್ಲಿ ಆ ವಾದಿಗಳಿಂದಲೇ ಗಾಯಗೊಂಡು ಮುಂದೆ ಲಿಂಗೈಕ್ಯನಾಗಿರಬೇಕು.[೩] ಅಂದರೆ ರಾಘವಾಂಕನು ಕ್ರಿ. ಶ. ೧೨೯೧ ರ ವರೆಗೆ ಜೀವಿಸಿರಬೇಕು ಎಂದು ಅರ್ಥವಾಗುತ್ತದೆ.

---

(೧) ಸಾ. ಚ. ಸಂ. ೯.

(೨) ಪ. ಪು. ಸಂ. ೧೩. ಪ. ೨೮.

(೩) ರಾ. ಚ. ಸಂ. ೧೮. ಪ. ೭೭, ೮೩.

೬

ಸೂಕ್ತಿಸುಧಾರ್ಣವ ಗ್ರಂಥದಲ್ಲಿ ಗಿರಿಜಾಕಲ್ಯಾಣದಿಂದ ಪದ್ಯಗಳು ಉದ್ಧೃತವಾಗಿರುವುದೂ[೧] ಶಬ್ದಮಣಿದರ್ಪಣದಲ್ಲಿ ಎರಡು ಕಡೆಗೆ ಗಿರಿಜಾಕಲ್ಯಾಣದ ಪದ್ಯಭಾಗಗಳು ಉದಾಹೃತವಾಗಿರುವುದೂ[೨] ಗಮನಾರ್ಹವಾಗಿದೆ. ಸೂಕ್ತಿಸುಧಾರ್ಣವದ ಎಲ್ಲ ಪ್ರತಿಗಳಲ್ಲಿಯೂ ಗಿರಿಜಾಕಲ್ಯಾಣದ ಈ ಪದ್ಯಗಳು ದೊರೆಯುವುದರಿಂದ ಅವು ಪ್ರಕ್ಷಿಪ್ತವಾದವುಗಳೆನ್ನುವಂತಿಲ್ಲ. ಶಬ್ದಮಣಿದರ್ಪಣದಲ್ಲಿ ಗಿರಿಜಾಕಲ್ಯಾಣದ ಒಂದೆರಡು ಪದ್ಯಭಾಗಗಳು ಬಂದಿರುವುದು ಇನ್ನೂ ಗಮನಾರ್ಹವಾಗಿದೆ. ಇವುಗಳಲ್ಲಿ 'ಮೂವರ್ ರಾಯರನೆ ಮಾರುವಂತೆಸೆದಿರ್ಕುಂ' ಎಂಬ ಭಾಗ ಗಿರಿಜಾಕಲ್ಯಾಣದ ಎಲ್ಲ ಪ್ರತಿಗಳಲ್ಲಿಯೂ ದೊರೆಯುತ್ತದೆ.[೩] ಶಬ್ದಮಣಿದರ್ಪಣದ ಮಂಗಳೂರು ಹಾಗು ಸಾಹಿತ್ಯಪರಿಷತ್ತಿನ ಪ್ರತಿಗಳಲ್ಲಿ ಈ ಭಾಗ ಉದಾಹೃತವಾದುದು ಕಂಡು ಬರುತ್ತದೆ.[೪] ಲಿಂಗಣಾರಾಧ್ಯರ ವೃತ್ತಿಸಹಿತ ಪ್ರಕಟವಾದ ಮದ್ರಾಸ ಪ್ರತಿಯಲ್ಲಿ ಈ ಉದಾಹರಣೆಯನ್ನು ಕಂಸಿನಲ್ಲಿ ಕೊಡಲಾಗಿದೆ. ಇದರಿಂದಲೂ ಶ್ರೀ. ಎಚ್. ದೇವೀರಪ್ಪನವರು ನೋಡಿರುವ ಶಬ್ದಮಣಿದರ್ಪಣದ ೮ ಪ್ರತಿಗಳ ಆಧಾರದಿಂದಲೂ[೫] ಈ ಉದಾಹರಣೆ

ಸೂಕ್ತಿ ಸುಧಾರ್ಣವ		ಗಿರಿಜಾಕಲ್ಯಾಣ		ಸೂಕ್ತಿ ಸುಧಾರ್ಣವ		ಗಿರಿಜಾಕಲ್ಯಾಣ	
ಆಶ್ವಾಸ	ಪದ್ಯ	ಆಶ್ವಾಸ	ಪದ್ಯ	ಆಶ್ವಾಸ	ಪದ್ಯ	ಆಶ್ವಾಸ	ಪದ್ಯ
೧	೪೬	೧	೨೩	೮	೧೭೮	೪	೯೩
೧	೪೭	೧	೨೦	೮	೧೮೩	೪	೯೦
೨	೪೪	೧	೪೭	೮	೧೮೪	೪	೯೨
೨	೪೫	೧	೮೬	೮	೧೮೬	೪	೮೦
೩	೨೦೪	೧	೩	೮	೧೯೬	೪	೯೫
೩	೨೦೫	೧	೧೨೭	೮	೨೦೭	೪	೯೯
೩	೨೦೬	೧	೧೨೮	೮	೨೦೮	೪	೧೦೦
೩	೨೨೫	೧	೧೦೮	೮	೨೧೮	೪	೯೮
೮	೮೦	೪	೭೭	೮	೨೨೧	೪	೯೭
೮	೮೧	೪	೭೩	೮	೨೨೩	೪	೯೬
೮	೮೩	೪	೭೨	೮	೩೧೮	೪	೧೨೦
೮	೧೩೬	೪	೮೨	೮	೩೩೬	೪	೧೫೯
೮	೧೩೭	೪	೮೪	೮	೩೩೭	೪	೧೫೮
೮	೧೫೭	೪	೮೭				

(೨) ಗಿ. ಕ. ಆ. ೨. ಪ. ೯೪. (೩) ಗಿ. ಕ. ಆ. ೨. ಪ. ೯೪. (೪) ಶ. ಮ. ದ. ಸೂ.೬೩.
(೫) ಗಿ. ಕ. ಸಂ. xiv. ಎಚ್. ದೇವೀರಪ್ಪ, ದೇ. ಜವರೇಗೌಡ

ಕೆಲವು ಪ್ರತಿಗಳಲ್ಲಿ ಇಲ್ಲವೆಂದು ಸ್ಪಷ್ಟವಾಗುತ್ತದೆ. ಹಾಗಿದ್ದರೆ ಈ ಭಾಗ ಶಬ್ದಮಣಿದರ್ಪಣದಲ್ಲಿ ಪ್ರಕ್ಷಿಪ್ತವಾಗಿರಬೇಕು. ಇಲ್ಲವೆ ಪ್ರತಿಮಾಡುವಾಗ ಒಂದೆಡೆ ಈ ಭಾಗವನ್ನು ಬರೆಯಲು ಮರೆತಿರಬೇಕು. ಕಂದ ಪದ್ಯದ ಒಂದು ಚರಣವನ್ನು ಮಾತ್ರ ಗಿರಿಜಾಕಲ್ಯಾಣದಿಂದ ತಂದು, ಶಬ್ದಮಣಿದರ್ಪಣದಲ್ಲಿ ಸೇರಿಸಿ, ಬೇರೆಯವರು ಯಾವ ಪುರುಷಾರ್ಥವನ್ನೂ ಸಾಧಿಸುವಂತಿಲ್ಲ. ಆದರೆ ಕೈತಪ್ಪಿ ಆವುದೊಂದನ್ನು ಬರೆಯದೆ ಬಿಟ್ಟಿರುವುದು ಮಾನವಸ್ವಭಾವಕ್ಕೆ ಸಹಜವಾಗಿದೆ. ಒಂದು ಪ್ರತಿಯಲ್ಲಿ ಉಳಿದರೆ ಅದರ ಬಳಗಕ್ಕೆ ಸೇರಿದ ೮ ಪ್ರತಿಗಳಲ್ಲಿಯೂ ಉಳಿಯುವುದು ಸ್ವಾಭಾವಿಕವಾಗಿದೆ. ಆದುದರಿಂದ ಗಿರಿಜಾಕಲ್ಯಾಣದ ಈ ಭಾಗ ಶಬ್ದಮಣಿ ದರ್ಪಣದಲ್ಲಿ ಮೂಲತಃ ಇರಬೇಕೆಂದು ನಮ್ಮ ಮತ.

ಇನ್ನು ಎರಡನೆಯದಾದ ‘ ಎಣ್ಣೆಯೊಳರನೇರಿಲ ತನಿವಣ್ಣಂ ನುಣ್ಣಿಸಿದನಬ್ಜಭವಂ ’೧ ಎಂಬ ಭಾಗ ಗಿರಿಜಾಕಲ್ಯಾಣದ ಪ್ರಕಟಿತವಾದ ಯಾವ ಪ್ರತಿಗಳಲ್ಲಿಯೂ ದೊರೆಯದಿರುವದರಿಂದ ಆ ಭಾಗವು ಈಗ ವಿಚಾರಾರ್ಹವಲ್ಲವೆಂದು ಬಿಡಬಹುದು.

ಸೂಕ್ತಿ ಸುಧಾರ್ಣವದ ಕಾಲದ ವಿಷಯವಾಗಿ ಭಿನ್ನಾಭಿಪ್ರಾಯಗಳಿವೆ. ಇದರ ರಚನೆಯ ಕಾಲ ಕ್ರಿ. ಶ. ೧೨೪೫ ಎಂದು೨ ಶ್ರೀ. ಆರ್. ನರಸಿಂಹಾಚಾರ್ಯರೂ, ಕ್ರಿ. ಶ. ೧೨೬೩ ಎಂದು೩ ಡಾ. ವೆಂಕಟಸುಬ್ಬಯ್ಯನವರೂ ಅಭಿಪ್ರಾಯಪಡುತ್ತಾರೆ. ‘ ಸೂಕ್ತಿಸುಧಾರ್ಣವ ’ವನ್ನು ವೀರ ಹೊಯ್ಸಳ ಸೋವಿದೇವನ ವಿನೋದಾಕರ್ಣನಕ್ಕಾಗಿ ಆತನು ದೋರಸಮುದ್ರದಲ್ಲಿದ್ದಾಗ೪ ರಚಿಸಲಾ

(೧) ಶ. ಮ. ದ—ಸೂತ್ರ ೬೯

(೨) ಕ. ಚ. ಭಾ. ೧. ಪು. ೨೯೯.

(೩) ಕೆ. ಕ. ಜೀ.—ಪುಟ (೧೨೮-೧೪೯)

(೪) i ಇದು ವೀರಹೊಯ್ಸಳ ಸೋವಿದೇವರಾಯ ವಿನೋದಾಕರ್ಣನ ಕೌತುಕೋತ್ಪಾದಿತಮುಂ-ಸೂ. ಸು. ದ ಆಶ್ವಾಸಾಂತ್ಯಗದ್ಯ.

ii ಕೆಯ್ಕೊಂಡು ಮೆಚ್ಚಿದನಾ ಸೂಕ್ತಿಸುಧಾರ್ಣವಾಧ್ವಕೃತಿಪಾತ್ರ ಶ್ರೀಗೆ ಸೋಮೇಶ್ವರಂ ಸೂ. ಸು. ಪುರವರ್ಣನಂ ಪ. ೧೧೦

iii ಓರಂತೆ ಮೆಚ್ಚಿದಂ ಕೃತಿ
ಸಾರಂಕೃತಿ ಶೇಖರಕ್ಕೆ ಹೊಯ್ಸಳವಂಶೋ
ದ್ಧಾರಂ ನರಸಿಂಹ ಸುತಂ
ದೋರೆ ಸಮುದ್ರಾಧಿನಾಯಕಂ ಸೋಮನೃಪಂ (ಸೂ. ಸು. ಪುರವರ್ಣನ ಪ. ೧೧೧

ಗಿದೆಯೆಂದು ಆ ಗ್ರಂಥದಿಂದಲೇ ತಿಳಿದುಬರುತ್ತದೆ. ಕ್ರಿ. ಶ. ೧೨೫೪ ರಲ್ಲಿ ಈ ಸೋಮೇಶ್ವರನು ತೀರಿದನೆಂದು ಹಲವು ಇತಿಹಾಸಜ್ಞರ ಅಭಿಪ್ರಾಯವಿದೆ.೧ ಕ್ರಿ. ಶ. ೧೨೫೭ ರಿಂದ ಅವನ ಮಕ್ಕಳಾದ ಇಮ್ಮಡಿನರಸಿಂಹ ಹಾಗೂ ರಾಮನಾಥ ಇವರ ಶಾಸನಗಳು ಕ್ರಮವಾಗಿ ಕರ್ನಾಟಕ ಹಾಗೂ ತಮಿಳು ನಾಡುಗಳಲ್ಲಿ ದೊರೆತಿವೆ. ಬಾಚಳ್ಳಿಯ ಶಾಸನವು ಕ್ರಿ. ಶ. ೧೨೫೬ ರಲ್ಲಿ ಸೋಮೇಶ್ವರನು ತೀರಿದನೆಂದು ಸ್ಪಷ್ಟವಾಗಿ ಹೇಳುತ್ತದೆ. ಆದರೆ, ತಿರುಚನಾಪಳ್ಳಿಯ ನೆರೆಯ ತಿರುವಾಶಿಯ ಶಾಸನದ ಆಧಾರದಮೇಲೆ ರಾವಬಹಾದ್ದೂರ ಎಚ್. ಕೃಷ್ಣಶಾಸ್ತ್ರಿಗಳು ಹಾಗೂ ವೆಂಕಟಸುಬ್ಬಯ್ಯನವರು ಸೋಮೇಶ್ವರನು ಕ್ರಿ. ಶ. ೧೨೬೩ ರ ವರೆಗೆ ಜೀವಿಸಿರಬಹುದೆಂದು ಊಹಿಸುತ್ತಾರೆ.

ತಮಿಳುನಾಡಿನ ಈ ಶಾಸನದಲ್ಲಿ ಶಕವರ್ಷವಾಗಲಿ ಚಾಂದ್ರಸಂವತ್ಸರಗಳಾಗಲಿ ಉಕ್ತವಾಗಿಲ್ಲ. ಸೋಮೇಶ್ವರನ ಆಳಿಕೆಯ ೨೯ನೆಯ ವರ್ಷದ ಶಾಸನವೆಂದು ಅಲ್ಲಿ ಹೇಳಲಾಗಿದೆ. ನಂಜನಗೂಡಿನ ೩೬ನೆಯ ಶಾಸನವು ವೀರಸೋಮೇಶ್ವರನು ೧೨೨೮ರಲ್ಲಿ ಕಣ್ಣನೂರಿನಲ್ಲಿ ರಾಜ್ಯಭಾರಮಾಡುತ್ತಿದ್ದನೆಂದು ತಿಳಿಸುವುದು. ಆತನು ಯುವರಾಜನಾಗಿದ್ದ ಈ ವರ್ಷದಿಂದಲೇ ತಮಿಳುನಾಡಿನಲ್ಲಿ ಕಾಲಗಣನೆ ಮಾಡಿರಬೇಕೆಂದು ಡಾ. ಎಮ್. ಎಚ್. ಕೃಷ್ಣರವರು ಅಭಿಪ್ರಾಯ ಪಡುತ್ತಾರೆ.೨ ಆದುದರಿಂದ ಹೊಯ್ಸಳ ವೀರಸೊಮೇಶ್ವರನ ಆಳಿಕೆಯ ಕೊನೆಯ ವರುಷ ಕ್ರಿ. ಶ. ೧೨೫೬ ಎಂದು ಇಟ್ಟುಕೊಳ್ಳುವುದೇ ಸಮಂಜಸವೆಂದು ತೋರುತ್ತದೆ. ಸೋಮೇಶ್ವರನ ಆಳಿಕೆ (೧೨೩೪-೧೨೫೬) ಯಲ್ಲಿ ಸೂಕ್ತಿಸುಧಾರ್ಣವವು ರಚಿತವಾಗಿರಬೇಕು. ಸು. ಕ್ರಿ. ಶ. ೧೨೪೫ ಅಥವಾ ಅದಕ್ಕಿಂತ ಪೂರ್ವದಲ್ಲಿ ಇದು ಹುಟ್ಟಿರಬೇಕೆಂದು ಶ್ರೀ. ಆರ್. ನರಸಿಂಹಾಚಾರ್ಯರ ಅಭಿಪ್ರಾಯವಿದೆ. ಸೋಮೇಶ್ವರನು ಕರ್ನಾಟಕದಲ್ಲಿ ಸ್ಥಿರವಾಗಿದ್ದುದು ಕ್ರಿ. ಶ. ೧೨೪೦ರ ವರೆಗೆ. ಅಲ್ಲಿಂದ ಮುಂದೆ ಅಂತ್ಯಕಾಲದವರೆಗೆ ಆತನು ಕಣ್ಣನೂರಿನಲ್ಲಿಯೇ ರಾಜ್ಯಭಾರ ಮಾಡುತ್ತಿದ್ದನೆಂದು

---

(೧) i. On his death in 1254.. Mysore and Coorg from Inscriptions.

ii. Someshwar appears to have died in 1254.

—Mysore Gazzetter Vol. II, P. 1339

(೨) ಮೈಸೂರ ಶಾಸನ ಇಲಾಖೆಯ ೧೯೩೧ನೆಯ ಇಸವಿಯ ವರದಿ.

ಅರಸೀಕೇರಿಯ ೧೦೮ನೆಯ ಶಾಸನದಿಂದ ವ್ಯಕ್ತವಾಗುತ್ತದೆ.[೧] ಆ ಕಾಲಕ್ಕಿಂತ ಮೊದಲೇ ಮಲ್ಲಿಕಾರ್ಜುನನು ಆತನ ಆಸ್ಥಾನಕವಿಯಾಗಿದ್ದು ಈ ಗ್ರಂಥ ರಚಿಸಿರಬೇಕು. ಇದರ ಪರಮಾವಧಿ ಕಾಲ ಕ್ರಿ. ಶ. ೧೨೪೦

ಆದುದರಿಂದ ಸೂಕ್ತಿಸುಧಾರ್ಣವವು ಕ್ರಿ. ಶ. ೧೨೪೦ ರ ಸುಮಾರು ಹುಟ್ಟಿರಬೇಕು. ಕಾರಣ ಹರೀಶ್ವರನ ಗಿರಿಜಾಕಲ್ಯಾಣವು ೧೨೪೦ ರ ಪೂರ್ವದಲ್ಲಿಯೇ ರಚಿತವಾಗಿ ಪ್ರಸಿದ್ಧಕಾವ್ಯವೆಂದು ಪರಿಗಣಿತವಾಗಿರಬೇಕು. ಇಷ್ಟೇ ಏಕೆ ? ಕ್ರಿ. ಶ. ೧೨೨೨ ರ ಸುಮಾರು ಹರಿಹರ, ಕೆರೆಯಪದ್ಮರಸರು ಪ್ರಸಿದ್ಧ ಕವಿಗಳೆಂದೂ ಪೂಜ್ಯವ್ಯಕ್ತಿಗಳೆಂದೂ ಗಣ್ಯರಾಗಿ ಶೃಂಗಾರಸಾರವೆಂಬ ಕಾವ್ಯವನ್ನು ಬರೆದ ಸೋಮರಾಜನ ಸ್ತುತಿಗೆ ಪಾತ್ರರಾಗಿರುವ ಸಂಭವವೂ ಉಂಟು.[೨] ಕಾರಣ ಹರಿಹರ, ಕೆರೆಯ ಪದ್ಮರಸರು ಕ್ರಿ. ಶ. ೧೨೦೦ ರ ಸುಮಾರು ಹುಟ್ಟಿ ಎರಡನೆಯ ನರಸಿಂಹನಲ್ಲಿ ಅನುಕ್ರಮವಾಗಿ ಕರಣಿಕ, ಮಂತ್ರಿಗಳಾಗಿರಬೇಕು. ಪಂಪಾವಿರೂಪಾಕ್ಷನ ತೆರೆಯ ಪವಾಡ ಕ್ರಿ. ಶ. ೧೨೧೬ ರಲ್ಲಿ ನಡೆದಿರಬಹುದು.[೩] ರಾಘವಾಂಕನು ಇವರಿಗಿಂತ ೧೦-೧೨ ವರ್ಷ ಕಿರಿಯವನಾಗಿರಬೇಕು.

---

(೧) From about (1239 A. D. his capital being at Kannanus..... With an interval in 1252 A. D. he stayed there till 1254..... Mysore Gazetteer Vol. II, Part II, PP. 1384, See P. 102 Mysore and Coorg from Inscriptions.

(೨) ಮಹಾಕವಿ ರಾಘವಾಂಕ ಪು. ೨೬.

(೩) ರಾಘವಾಂಕ ಚಾರಿತ್ರದಲ್ಲಿ ಹೀಗೆ

ಭೂವರಂ ಬಲ್ಲಾಳರಾಯಂಗೆ ಶ್ರೀಮುಖಂ
ಪಾವನೇಶ್ವರ ವತ್ಸರದ ಮಾರ್ಗಶೀರ್ಷ ದಶ
ಮೀ ವಿಧು ಸುವಾಸರದೊಳು ಮಧ್ಯಾಹ್ನದವಸರದ ನೈವೇದ್ಯಕಾಲದಲ್ಲಿ
ತೆರೆಯು ಮರೆಯುಲಿ ಸಮರ್ಪಿಸಿದ ಧೂಪಾರತಿಯು
ನಿರಿಸಲ್ ತದಂಗಾರ್ ಸಂಸ್ಪರ್ಶನದಿ ತಿರ
ಸ್ಕರಣಿ ಬೇವುತ್ತಿರಲ್ಕಾ ಸಮಯದೊಳಗೆಮ್ಮಸುತ ಹಸಹರಂ ನಂದಿಸಿಪೊರಮಟ್ಟು

(ರಾ. ಚಾ. ಸಂ. ೧೪ ಪದ್ಯ ೫೮-೫೯)

ಸ್ವಾಮಿ ಕಣ್ಣು ಪಿಳ್ಳೈ ಇವರ ಪಂಚಾಂಗದ ಆಧಾರದಿಂದ ಮೇಲೆ ಕಾಣಿಸಿದ ಮಿತಿ ಮುಂತಾದುವು ಕೆಳಗಿನಂತಿವೆ.

ಕ್ರಿ. ಶ. ೧೨೧೬ ಡಿಶಂಬರ ೫ ಮಂಗಳವಾರವು ಈಶ್ವರ ಸಂವತ್ಸರ ಮಾರ್ಗಶೀರ್ಷ ಶುದ್ಧ ದಶಮಿ ಮಂಗಳವಾರ ಆಗುತ್ತದೆ. ಶಾಸನಗಳಲ್ಲಿಯೂ ಹೀಗೆ ವಾರ ತಿಥಿಗಳಲ್ಲಿಒಂದೆರಡು ದಿನದ ವ್ಯತ್ಯಾಸ ಪಂಚಾಂಗದೊಳಗೆ ಕಂಡುಬರುವುದುಂಟು.

೧೦

ಒಟ್ಟಿನಲ್ಲಿ ಹರಿಹರ, ಕೆರೆಯಪದ್ಮರಸರು ಕ್ರಿ. ಶ. ಸು. ೧೨೦೦ ರಲ್ಲಿ ಜನಿಸಿರಬೇಕು. ರಾಘವಾಂಕನು ಕ್ರಿ. ಶ. ೧೨೧೦ ರ ಸುಮಾರು ಜನಿಸಿರುವ ಸಂಭವವಿದೆ. ಆತನು ೧೧-೧೨ ವರ್ಷಗಳ ಬಾಲ್ಯದಲ್ಲಿಯೇ ಷಟ್ಪದಿಯಲ್ಲಿ ಕಾವ್ಯಗಳನ್ನು ಬರೆಯಲು ಆರಂಭಿಸಿರುವ ಸಂಭವವೂ ಉಂಟು. ಏಕೆಂದರೆ :

ಪೋಲಾಳ್ವದಂಡನಾಥನೆಂಬ ಬ್ರಾಹ್ಮಣಕವಿಯು ಹರಿಚಾರಿತ್ರವೆಂಬ ಷಟ್ಪದಿಗ್ರಂಥವನ್ನು ರಚಿಸಿರುವುದಾಗಿ ಕ್ರಿ. ಶ. ೧೨೨೪ ರಲ್ಲಿ ಹುಟ್ಟಿದ ದಾವಣಗೆರೆಯ ೨೫ ನೆಯ ಶಾಸನದಿಂದ ತಿಳಿದುಬರುತ್ತದೆ. ಈತನು ಹೊಯ್ಸಳ ವೀರಬಲ್ಲಾಳನಲ್ಲಿಯೂ (ಕ್ರಿ. ಶ. ೧೧೭೩-೧೨೨೦) ಅವನ ಮಗ ವೀರನರಸಿಂಹನಲ್ಲಿಯೂ (ಕ್ರಿ. ಶ. ೧೨೨೦-೧೨೩೫) ಅಮಾತ್ಯನಾಗಿದ್ದನು. ಈ ಆಧಾರದ ಮೇಲಿಂದ ಈತನ ಕಾಲ ಕ್ರಿ. ಶ. ೧೨೨೪ ಎಂದು ಶ್ರೀ. ಆರ್. ನರಸಿಂಹಾಚಾರ್ಯರು ನಿರ್ಣಯಿಸಿರುವರು. ರಾಘವಾಂಕನು ಕ್ರಿ. ಶ. ೧೨೨೪ ರ ನಂತರ ತನ್ನ ಷಟ್ಪದಿಕಾವ್ಯಗಳನ್ನು ಬರೆದಿದ್ದರೆ, ಸಿದ್ಧನಂಜೇಶ ಮೊದಲಾದವರು ಆತನನ್ನು ಷಟ್ಪದಿ ಸಂಪ್ರದಾಯ ಸ್ಥಾಪನಾಚಾರ್ಯನೆಂದು ಕರೆಯುವ ಪ್ರಸಂಗವೇ ಬರುತ್ತಿರಲಿಲ್ಲ. ರಾಘವಾಂಕನ ಕಾವ್ಯಗಳಲ್ಲಿ ಪ್ರಯೋಗವಾಗಿರುವ ಷಟ್ಪದಿಗಳ ಅವಸ್ಥೆಯನ್ನು ಪರಿಶೀಲಿಸಿದರೆ, ಸಿದ್ಧನಂಜೇಶ ಮೊದಲಾದವರ ಮಾತಿನಲ್ಲಿ ಸತ್ಯಾಂಶವಿರುವಂತೆ ತೋರುತ್ತದೆ. ಅಲ್ಲದೆ ಯಾವ ಬ್ರಾಹ್ಮಣಕವಿಯೂ ಪೋಲ್ವಾಳದಂಡನಾಥನು ಷಟ್ಪದಿಕಾವ್ಯಗಳನ್ನು ಬರೆಯುವದರಲ್ಲಿ ಮೊದಲಿಗನಾದನೆಂದು ಹೇಳುವ ಸಾಹಸಮಾಡಿಲ್ಲ. ಮತಪ್ರಶಂಸೆಯ ಆ ಕಾಲದಲ್ಲಿ ಇಂತಹ ಮಹತ್ವದ ವಿಷಯವನ್ನು ಉಲ್ಲೇಖಿಸದಿರುವುದು ಅಸಂಭವವೆಂದೇ ಹೇಳಬೇಕಾಗುತ್ತದೆ. ಆದುದರಿಂದ ರಾಘವಾಂಕನು ಪೋಲಾಳ್ವ ದಂಡನಾಥನಿಗಿಂತಲೂ (೧೨೨೪) ಮೊದಲಿಗನಾಗಿ ಷಟ್ಪದಿಕಾವ್ಯಗಳಲ್ಲಿ ಕೆಲವನ್ನಾದರೂ ಬರೆದು ಷಟ್ಪದಿಯ ಹಾದಿಯನ್ನು ಸಿದ್ಧಗೊಳಿಸಿರಬೇಕು.

೧೧

ಇವೆಲ್ಲ ಆಧಾರಗಳ ಬಲದಿಂದ ಹರಿಹರ, ರಾಘವಾಂಕ, ಕೆಱೆಯ ಪದ್ಮರಸರು ದೀರ್ಘಾಯುಷ್ಯವನ್ನು ಪಡೆದು ಹದಿಮೂರನೆಯ ಶತಮಾನದ ಮುಕ್ಕಾಲು ಭಾಗವನ್ನು ಸಹಜವಾಗಿಯೇ ವ್ಯಾಪಿಸಿರುವರೆಂದು ನಿರ್ಣಯಿಸಬಹುದಾಗಿದೆ.

೧೨

ಕೆಱೆಯ ಪದ್ಮರಸರು ಸು. ಕ್ರಿ. ಶ. ೧೨೦೦ ರಲ್ಲಿ ಜನಿಸಿದ್ದರೆ, ಅವರಿಂದ ೮ ನೆಯ ತಲೆಯವರಾದ ಪದ್ಮರಾಜಪುರಾಣದ ಕರ್ತೃ ಪದ್ಮಣಾಂಕನು ೨೦೦ ವರ್ಷ ಈಚೆಗೆ ಅಂದರೆ, ಸುಮಾರು ಕ್ರಿ. ಶ. ೧೪೦೦ ರಲ್ಲಿ ಜನಿಸಿರುವ ಸಂಭವವಿದೆ.

ಸಕಲೇಶಮಾದರಸರಿಂದ ಪದ್ಮಣಾಂಕನು ೧೦ ನೆಯ ತಲೆಯವನು. ಸಕಲೇಶಮಾದರಸರ ಕಾಲದ ವಿಷಯವಾಗಿ ಶ್ರೀ. ಆರ್. ನರಸಿಂಹಾಚಾರ್ಯರು ಹೀಗೆ ಬರೆಯುತ್ತಾರೆ.[೧]

" ಬಸವನೊಡನೆ ಕೆಲಕಾಲ ಇದ್ದು ಬಾ ಎಂದು ಮಲ್ಲರಸನು ಹೇಳಿದ ನೆಂದು ಭೀಮಕವಿಯ (೧೩೬೯) ಬಸವ ಪುರಾಣದಲ್ಲಿ (ಸಂಧಿ ೧೦) ಹೇಳಿದೆ. ಇದರಿಂದ ಇವನು ಬಸವನಿಗಿಂತ (ಸು. ಕ್ರಿ. ಶ. ೧೧೬೦) ಕೆಲವು ಕಾಲ ಹಿಂದೆ ಇದ್ದವನೆಂದೂ ಕೆರೆಯ ಪದ್ಮರಸನ (ಕ್ರಿ. ಶ. ೧೧೬೫) ಪಿತಾಮಹನೆಂದೂ ತಿಳಿಯುತ್ತದೆ. ಆದುದರಿಂದ ಇವನ ಕಾಲವು ಸು. ಕ್ರಿ. ಶ. ೧೧೫೦ ಆಗಬಹುದು." ಎಂದು.

ಆದರೆ ಸಕಲೇಶಮಾದರಸರ ಕಾಲ ಇನ್ನೂ ಮುಂದೆ ಬರಬೇಕಾಗುತ್ತದೆ. ನಿನಗೆ ಭೂಮಿಯಲ್ಲಿ ಇನ್ನೂ ೫೦ ವರ್ಷದ ವರ್ತನವುಂಟು. ಅದನ್ನು ಕಲ್ಯಾಣದಲ್ಲಿ ಬಸವಾದಿಗಳೊಡನೆ ಕಳೆ. ಎಂದು ಮಲ್ಲರಸರು ಹೇಳಿ, ಆತನನು ಮರು ಕ್ಷಣದಲ್ಲಿಯೇ ಕಲ್ಯಾಣದಲ್ಲಿ ತಂದಿರಿಸುವರು. ಬಸವಣ್ಣನವರು ಕಲ್ಯಾಣದಲ್ಲಿ ಮಂತ್ರಿಗಳಾಗಿದ್ದುದೇ ಸು. ೧೦ ವರ್ಷವೆಂದು ತೋರುತ್ತದೆ.[೨] ಅವರ ಕೀರ್ತಿ ಸುತ್ತೆಲ್ಲ ಪಸರಿಸಿ ಮಲ್ಲಿಕಾರ್ಜುನ, ಸಕಲೇಶಮಾದರಸರವರೆಗೆ ಬರಬೇಕಾದರೆ ಸುಮಾರು ೪-೫ ವರ್ಷ ಹಿಡಿದಿವೆಯೆಂದು ಇಟ್ಟುಕೊಂಡರೆ ಸಕಲೇಶಮಾದರಸರು ೪-೫ ವರ್ಷಗಳನ್ನು ಮಾತ್ರ ಬಸವಣ್ಣನವರೊಡನೆ ಕಲ್ಯಾಣದಲ್ಲಿ ಕಳೆದರೆಂದು ತಿಳಿಯಬೇಕಾಗುತ್ತದೆ. ಮಲ್ಲಿಕಾರ್ಜುನ ಅವರ ತಂದೆ ಹೇಳಿದಂತೆ ಅವರು ಆ ಮೇಲೆ ೫೦ ವರ್ಷ ಭೂಮಿಯಲ್ಲಿದ್ದರೆ ಬಸವಣ್ಣನವರ ತರುವಾಯ (ಕ್ರಿ. ಶ. ೧೧೬೭) ಸುಮಾರು ೪೫ ವರ್ಷ ಬದುಕಿರಬೇಕೆಂದು ಇಟ್ಟುಕೊಳ್ಳಬೇಕಾಗುತ್ತದೆ. ಅಂದರೆ, ಸಕಲೇಶಮಾದರಸರು ಸು. ೧೨೧೫ ರ ವರೆಗೆ ಜೀವಿಸಿರಬೇಕಾಗುತ್ತದೆ. ಅಂದಮೇಲೆ ಅವರಿಂದ ಹತ್ತನೆಯ ತಲೆಯವರಾದ ಪದ್ಮರಾಜಪುರಾಣದ ಕರ್ತೃ ಪದ್ಮಣಾಂಕಕವಿಯು ಸು. ಕ್ರಿ. ಶ. ೧೪೨೦ ರ ವರೆಗೂ ಜೀವಿಸಿರಬಹುದು.

---

(೧) ಕ. ಚ. ಭಾಗ ೧ ಪು. ೧೬೭.

(೨) ಬಿಜ್ಜಳನ ಆಳಿಕೆ ಕ್ರಿ. ಶ. ೧೧೫೬-೧೧೬೭ ರವರೆಗೆ.

ಮತವಿವೇಚನೆ

ಪದ್ಮಣಾಂಕನ ವಂಶಜರೆಲ್ಲ ವೀರಶೈವರೆಂಬುದರಲ್ಲಿ ಆವ ಸಂದೇಹವೂ ಇಲ್ಲ. ಆದರೆ, ಪದ್ಮರಾಜಪುರಾಣದಲ್ಲಿ ಪ್ರಕಟವಾದ ಅವರ ವೀರಶೈವ, ಹಲವು ವಿಶಿಷ್ಟ ಲಕ್ಷಣಗಳಿಂದ ಕೂಡಿದೆ. ಸಾಮಾನ್ಯವಾಗಿ ವೀರಶೈವರ ಇತಿಹಾಸವನ್ನು ಕಂಡು ಹಿಡಿಯಹೊರಟವರು ಬಸವಾದಿಪ್ರಮಥರ ಪೂರ್ವದಲ್ಲಿ ಆಗಮೋಕ್ತ ವೀರಶೈವ ವೊಂದು ಇದ್ದಿತೆಂದೂ ೧೨ ನೆಯ ಶತಮಾನದಲ್ಲಿ ಬಸವಾದಿ ಶರಣರು ಅದ್ಭುತವಾದ ಕ್ರಾಂತಿಯನ್ನೆಸಗಿ, ಅದನ್ನುದ್ಧರಿಸಿ, ಅದಕ್ಕೆ ಹೊಸ ಜೀವಕಳೆಯನ್ನೂ ವಿಶಿಷ್ಟ ಸ್ವರೂಪವನ್ನೂ ತಂದುಕೊಟ್ಟರೆಂದೂ, ಆ ಕ್ರಾಂತಿ ವಿಪ್ಲವದಲ್ಲಿ ಕೊನೆಗೊಂಡುದ ರಿಂದ ವೀರಶೈವಧರ್ಮವು ಒಂದೆರಡು ಶತಮಾನ ಹಳೆ ಹೊಸ ಸಂಪ್ರದಾಯ ಗಳೆರಡನ್ನೂ ನಡೆಸಿಕೊಂಡು ಮುಂದೆ ನಡೆಯಿತೆಂದೂ, ಮುಂದೆ ಹದಿನೈದನೆಯ ಶತಮಾನದ ನೂರೊಂದು ವಿರಕ್ತರ ಕಾಲದಲ್ಲಿ ಅದು ಸುಸಂಘಟಿತವಾದ ಸುಸ್ಪಷ್ಟ ವಾದ ಸ್ವರೂಪವನ್ನು ಪಡೆಯಿತೆಂದೂ ಹೇಳುವುದುಂಟು. ಪದ್ಮರಾಜಪುರಾಣದಲ್ಲಿ ಶಿವಶರಣರ ಹಾಗೂ ನೂರೊಂದು ವಿರಕ್ತರ ನಡುವಣ ಸಂಧಿಕಾಲದ ವೀರಶೈವ ಪ್ರಕಟವಾಗಿದೆ ಅಂತೆಯೇ ಅದು ಹಲವು ವೈಶಿಷ್ಟ್ಯಗಳಿಂದೊಡಗೂಡಿದೆಯೆಂದು ಈ ಪೂರ್ವದಲ್ಲಿ ಹೇಳಿಗುದು. ಪದ್ಮರಾಜಪುರಾಣದ ಆಧಾರದಿಂದ ಕೆರೆಯ ಪದ್ಮರಸರ ವಂಶಜರು ಅನುಸರಿಸಿದ ವೀರಶೈವದ ಲಕ್ಷಣಗಳನ್ನೂ ತನ್ಮೂಲಕ ಸಂಧಿ ಕಾಲದ ವೀರಶೈವದ ವೈಶಿಷ್ಟ್ಯಗಳನ್ನೂ ವಿವೇಚಿಸುವುದು ವಿಹಿತವೆನಿಸಿದೆ. ಇದರಿಂದ ಶಿವಾದ್ವೈತ ಸಿದ್ಧಾಂತದ ಸ್ಥೂಲಕಲ್ಪನೆಯಾಗಬಹುದೆಂದು ಆಶಿಸಲಾಗಿದೆ.

ಶಿವಯೋಗಿಮಲ್ಲರಸರನ್ನು ಮೊದಲು ಮಾಡಿಕೊಂಡು ಪದ್ಮಣಾಂಕನ ವಂಶಜರೆಲ್ಲ ಆಚಾರ್ಯಪಟ್ಟವನ್ನೇರಿರುವರು. 'ಆರಾಧ್ಯಚಕ್ರವರ್ತಿ,'[೧] 'ಆರಾಧ್ಯ ಕುಲಶಿರೋರತ್ನ'[೨] 'ದೇಶಿಕಚಕ್ರವರ್ತಿ'[೩] 'ದೇಶಿಕಶಿಖಾಮಣಿ'[೪] 'ಯತಿ ಕುಲಾರಾಧ್ಯ'[೫] 'ಶಿಷ್ಯಕುಲಸಾರ್ವಭೌಮ'[೬] ಎಂಬ ಪ್ರಯೋಗಗಳು ಪದ್ಮರಾಜ ಪುರಾಣದಲ್ಲಿ ವಿಪುಲವಾಗಿ ದೊರೆಯುತ್ತವೆ. ಆಚಾರ್ಯಪಟ್ಟ ವೀರಶೈವರಲ್ಲಿ

---

(೧) ಪ. ಪು. ಸಂ. ೧, ಸೂಚನೆ; (೨) ಪ. ಪು. ಸಂ. ೧ (ಪ. ೩೬.)
(೩) ಪ. ಪು. ಸಂ. ೧, (ಪ. ೨೬.) (೪) ಪ. ಪು. ಸಂ. ೨ (ಪ. ೨.)
(೫) ಪ. ಪು. ಸಂ. ೩, (ಪ. ೭.) (೬) ಪ. ಪು. ಸಂ. ೨, (ಪ. ೯.)

ಗುರುದ್ಯೋತಕವಾದ ಪೂಜ್ಯಸ್ಥಾನ. ಪದ್ಮಣಾಂಕನೂ ಆತನ ಪೂರ್ವಜರೂ ಇಂತಹ ಉನ್ನತವಾದ ಸ್ಥಾನದಲ್ಲಿದ್ದರು. ಆಚಾರ್ಯಪಟ್ಟದ ಸಂಪ್ರದಾಯ ವೀರ ಶೈವದಲ್ಲಿ ಇಂದಿಗೂ ಕಂಡು ಬರುತ್ತದೆ. ಲಿಂಗಧಾರಣೆ, ದೀಕ್ಷೆ ಮೊದಲಾದ ಸಂಸ್ಕಾರಗಳನ್ನು ನೆರವೇರಿಸುವ ಹಕ್ಕು ಈ ಪಟ್ಟದ ಸ್ವಾಮಿಗಳಿಗಿರುತ್ತದೆ. ಕೆಱೆಯ ಪದ್ಮರಸರ ವಂಶದ ಈ ಆಚಾರ್ಯರೂ ಸಹ ದೀಕ್ಷೆ ಮೊದಲಾದ ಸಂಸ್ಕಾರಗಳನ್ನು ನೆರವೇರಿಸುವ ಹಕ್ಕನ್ನು ಪಡೆದಂತೆ ಕಂಡುಬರುತ್ತದೆ.[೧] ತ್ರಿಭುವನ ತಾತನಿಗೆ ವೀರಶೈವ ದೀಕ್ಷೆಯನ್ನು ಕೆಱೆಯ ಪದ್ಮರಸರೇ ಕೊಟ್ಟಿರುವರು.[೨] ಇಂಥ ಕೆಲವು ಪರಂಪರೆಗಳು ಅಂದಿನಿಂದ ಇಂದಿನವರೆಗೂ ನಡೆದು ಬಂದಿರುವುದನ್ನು ನಾವು ಗಮನಿಸಬೇಕು.

ಆಚಾರ್ಯಪದದಲ್ಲಿದ್ದ ಈ ಮಹಾನುಭಾವರು ಶರಣಮಾರ್ಗಾನುಯಾಯಿ ಗಳೂ ಆಗಿರುವರು. ಇಷ್ಟೇ ಏಕೆ ? ಪದ್ಮರಾಜಪುರಾಣದಲ್ಲಿ ಸಕಲೇಶಮಾದ ರಸರನ್ನು ' ಶರಣಮಾರ್ಗಪ್ರತಿಷ್ಠಾಪಕ ' ರೆಂದೂ ಕರೆಯಲಾಗಿದೆ. ' ತದ್ಯುಗಮಂ ಪ್ರತಿಷ್ಠಿಸಾ ಸುಪ್ರತಿಷ್ಠೆಯೆ ಯೆಮ್ಮ ಶರಣಮಾರ್ಗಂ[೩] ' ' ತದ್ಯುಗಸ್ಫುರಣ ಮಂ ಮಾಡು[೪] ' ಎಂದು ಶಿವಯೋಗಿಮಲ್ಲರಸರು ಸಕಲೇಶಮಾದರಸರಿಗೆ ಅಪ್ಪಣೆಕೊಟ್ಟಿರುವರು. ಬಸವೇಶ್ವರಾದಿಗಳನ್ನೂ ಕವಿ ' ವೀರಶೈವಪ್ರತಿಷ್ಠಾ ಚಾರ್ಯ ' ರೆಂದು ಕರೆದಿರುವನು. ' ಕ್ರಿಯಾಜ್ಞಾನವಿಹಿತವೃತ್ತಿಯೇ ಶರಣ ಮಾರ್ಗದ ಮುಖ್ಯ ಲಕ್ಷಣ '[೫] ಶರಣನು ಚಿದನ್ವಿತನಾಗಿದ್ದರೂ ನಿಷ್ಕ್ರಿಯನಾಗಿರ ಕೂಡದು. ಕ್ರಿಯಾಜ್ಞಾನಸಾಮರಸ್ಯ ವೀರಶೈವದ ಮುಖ್ಯಲಕ್ಷಣ.

ಪದ್ಮರಸರ ವಂಶಜರಲ್ಲಿ ಕೆಲವರು ಶರಣಸಾರ್ವಭೌಮರಾಗಿಯೂ[೬] ಮತ್ತೆ ಕೆಲವರು ಶರಣಮಾರ್ಗದಲ್ಲಿ ಅತ್ಯಂತ ನಿಷ್ಠೆಯುಳ್ಳವರಾಗಿಯೂ ಇರುವರು. ಸಾನಂದಚರಿತೆಯ ಪ್ರತಿಸಂಧಿಯ ಆದಿಯಲ್ಲಿ ಕುಮಾರಪದ್ಮರಸರು 'ಮಡಿವಳ ಮಾಚಿದೇವೇಭ್ಯೋ ನಮಃ' ಎಂದು ನಮಿಸಿರುವರಲ್ಲದೆ ಶಿವನ ಓಲಗದಲ್ಲಿದ್ದ ಶರಣರನ್ನು ಉಲ್ಲೇಖಿಸುವಾಗ ' ಎನ್ನ ಕುಲದೊಡೆಯ ಮಡಿವಳಮಾಚಿದೇವ ' ಎಂದು ನುಡಿದಿರುವರು. ಆಚಾರ್ಯ ಪದದಲ್ಲಿದ್ದ ಪದ್ಮರಸರ ಕುಲದೊಡೆಯ ಮಡಿವಳಮಾಚಿದೇವರೆಂಬುದು ನಿಜವಾಗಿಯೂ ಗಮನಾರ್ಹವಾಗಿದೆ.

---

(೧) ಹರಿಸದಿಂದಾಚಾರ್ಯಮಂ ಕಟ್ಟಿ ಪ. (ಪು. ಸಂ. ೧೨ ಪ ೧೬-೧೯) ; ವಿದ್ಯುಕ್ತ ವಾಗಾಚಾರ್ಯಪಟ್ಟಮಂಕಟ್ಟಿ (ಪ. ಪು. ಸಂ. ೧೩. ಪ.೧೮.)

(೨) ಪ. ಪು. ಸಂ. ೧೨, ಪ. ೬-೭.

(೩) ಪ. ಪು. ಸಂ, ೨. ಪ. ೧೦. (೪) ಪ. ಪು. ಸಂ. ೩, ಪ. ೧೧.

(೫) ಪ. ಪು. ಸಂ. ೨, ಪ. ೧೦. (೬) ಪ. ಪು. ಸಂ, ೧, ಪ. ೩೩.

ಪದ್ಮರಾಜ ಪುರಾಣದುದ್ದಕ್ಕೂ ಶರಣಮಾರ್ಗದ ಪ್ರಭಾವ ಎದ್ದುನಿಂತಂತಿದೆ. 'ವಿಶ್ವಪತಿ ಶರಣಸಸ್ಯಮಂ ಸಲಹುಗೆಂದು'[೧] ಕಾವ್ಯದ ಆದಿಯಲ್ಲಿ ಕವಿಯ ಪ್ರಾರ್ಥನೆಯಿದೆ. ಬಸವಣ್ಣನವರನ್ನೂ ಅವರ ಪತ್ನಿ ಗಂಗಾಂಬಿಕೆಯನ್ನೂ ಸಕಲ ಶರಣರನ್ನೂ ಕವಿ ಪದ್ಮಣಾಂಕನು ಕಾವ್ಯಾರಂಭದಲ್ಲಿ ಸ್ತುತಿಸಿದ್ದಾನೆ.[೨] ಕೆಱೆಯ ಪದ್ಮರಸರ ಜನನವಾದೊಡನೆಯೇ ಶಿಶುವನ್ನು 'ಶಿವಶರಣ ಚರಣಾಂಬು' ವಿಂದ ಮೈದೊಳೆವರು;[೩] ಶಿವಭಕ್ತರೆಲ್ಲರೂ ಹರಸುವರು.[೪] ಆಗ ಶರಣಸಂತತಿಯ ಆರಾಧನೆಯಾಗುತ್ತದೆ. ಪದ್ಮರಸರು 'ಶರಣರಿಚ್ಛೈಸಿದುದನಿಲ್ಲೆನ್ನದೀವ' ಭಾಷೆಯನ್ನು ತೊಟ್ಟು,[೫] ಶರಣರನ್ನು ಸತ್ಕರಿಸುವರು;[೬] ಶರಣಮುಖಪದಪದ್ಮಮಿತ್ರರಾಗುವರು.[೭] 'ಶರಣರೇ ಕುಲಜರು'[೮] ಶರಣರೊಲ್ದೊಡೆ ಫಲಿಸದಿಪ್ಪ ಕಜ್ಜಗಳುಂಟೇ ?[೯] 'ಶರಣರನ್ಯಧನವ ನಿಚ್ಛೈಪರೇ ?'[೧೦] ಹೀಗೆ ಶರಣನಿಧಿಯ ಜಪಗೆ ಪದ್ಮರಾಜಪುರಾಣದಲ್ಲಿ ಮತ್ತೆ ಮತ್ತೆ ಕೇಳಬರುತ್ತದೆ. ಕೆಱೆಯ ಪದ್ಮರಸರು ಶರಣತತಿಯಲ್ಲಿ ಉದ್ದಾಮರೆನಿಸಿ ಬಾಳುವರು.[೧೧] ಶಿವಶರಣಗೋಷ್ಠಿಯಲ್ಲಿ ಎಸೆವರು.[೧೨]

ಹೀಗೆ ಪದ್ಮಣಾಂಕಪಿತಾಮಹರು ಆಚಾರ್ಯಕುಲಶೇಖರರೂ ಶರಣನಿಧಿಗಳೂ[೧೩] ಆಗಿ ಶರಣಪದ ಆಚಾರ್ಯಪದಗಳೆರಡನ್ನೂ ಸಮನ್ವಯ ಮಾಡಿಕೊಂಡಿರುವರು.

ಪದ್ಮರಾಜಪುರಾಣದಲ್ಲಿ ಉಕ್ತನಾದ ವೀರಶೈವಧರ್ಮ ಹೀಗೆ ಶಿವಶರಣರ ಪ್ರಭಾವಕ್ಕೆ ಒಳಗಾಗಿದ್ದರೂ ಅದನ್ನು 'ವೇದೋಕ್ತ ವೀರಶೈವಸರಣಿ'[೧೪] ಎಂದು ಕರೆದಿರುವುದು ಅತ್ಯಂತ ಗಮನಾರ್ಹವಾಗಿದೆ. ಪದ್ಮಣಾಂಕನಿಗೆ ವೇದಗಳ ವಿಷಯವಾಗಿ ಬಹಳ ಗೌರವವಿದೆ. ಪಾರ್ವತಿ ವೇದೌಘವಿಖ್ಯಾತೆ;[೧೫] ವೇದತಂತ್ರಾವಳಿಗೆ ಭಾಷ್ಯ, ದೀಪಿಕೆ, ವೃತ್ತಿ, ವ್ಯಾಖ್ಯಾನಗಳನ್ನು ಬರೆದ ಬೋಧಾಯನಾರ್ಯ, ಶಂಕರಾರ್ಯ, ಹರದತ್ತ, ತ್ರಿಲೋಚನ, ಅಘೋರಶಿವ, ಭೂತಿಕಂಠ ಇವರನ್ನು ಪೂರ್ವಾ

(೧) ಪ. ಪು. ಸಂ. ೧. ಪ. ೧.
(೨) ಪ. ಪು. ಸಂ. ೧. ಪ. ೫, ೬, ೧೫.
(೩) ,, ,, ೨. ಪ. ೬೪.
(೪) ,, ,, ೨. ಪ. ೬೫.
(೫) ,, ,, ೪. ಪ. ೧೮
(೬) ,, ,, ೩. ಪ. ೪೯.
(೭) ,, ,, ೪. ಪ. ೨೬.
(೮) ,, ,, ೪. ಪ. ೪೬.
(೯) ,, ,, ೪. ಪ. ೫೨.
(೧೦) ,, ,, ೬. ಪ. ೧೬.
(೧೧) ,, ,, ೩. ಪ. ೭೮.
(೧೨) ,, ,, ೧೨. ಪ. ೪.
(೧೩) ,, ,, ೩. ಪ. ೩೫.
(೧೪) ,, ,, ೪. ಪ. ೨೭.
(೧೫) ,, ,, ೧. ಪ. ೪.

ಚಾರ್ಯರೆಂದು ಕರೆದು ಅವರಿಗೆ ಮೊದಲು ವಂದಿಸಿರುವನು.[೧] ಆ ಮೇಲೆ ಬಸವಾದಿ ಪ್ರಮಥರಿಗೆ ವಂದನೆಗಳನ್ನರ್ಪಿಸಿರುವನು. ಶರಣಮಾರ್ಗವನ್ನು ಅಪ್ಪಿ, ವೇದ ಮಾರ್ಗವನ್ನು ಮನ್ನಿಸುತ್ತಿರುವುದು ಇಂದು ಸೋಜಿಗವೆನಿಸಿದರೂ ಶಿವಶರಣರ ಹಾಗೂ ನೂರೊಂದು ವಿರಕ್ತರ ನಡುವಣ ಸಂಧಿಕಾಲದಲ್ಲಿ ಅಂತಹ ಪರಿಸ್ಥಿತಿ ಇದ್ದಿತೆಂಬುದು ಸ್ಪಷ್ಟವಾಗುತ್ತದೆ. ಪದ್ಮರಸರು ತಮ್ಮ ಶಿವಪೂಜೆಯಲ್ಲಿ ಶತರುದ್ರೀಯದ ಮಂತ್ರಗಳನ್ನು ಪಠಿಸುವರು. ವಿಷ್ಣು ವೇದವೇದ್ಯನಲ್ಲವೆಂಬುದನ್ನು ಮಂಡಿಸುವಾಗ, ಶಿವನ ಸೊತ್ತಾದ ವೇದವನ್ನು ನಿಲ್ಲಿಸಲು ಆತನು ಅತ್ಯಾಶ್ರಮಿ ಬುದ್ಧನಾಗಿ ಜನಿಸಿದನೆಂದು ಹೇಳಿ, ಶಿವಭಕ್ತರಾದ ತಾವು ವೇದಪರರೆಂಬುದನ್ನು ಸೂಚಿಸಿದಂತಿದೆ.[೨] ಎಲ್ಲಕ್ಕೂ ಮೇಲಾಗಿ ಪದ್ಮರಸರು ಲಿಂಗಪೂಜೆಗೆ ಕುಳಿತಾಗ—

೧. ೧೦೮ ರುದ್ರಾಕ್ಷಿಗಳನ್ನು ಯಜ್ಞೋಪವೀತಾಕಾರವಾಗಿ ಧರಿಸಿರುವರು.[೩] ಅಲ್ಲದೆ,

೨. ಯಜ್ಞಸೂತ್ರವನ್ನು ಧರಿಸಿರುವರು.[೪]

ಇದರಿಂದ ಪದ್ಮರಸರ ವೀರಶೈವತ್ವವನ್ನು ಶಂಕಿಸುವಂತಿಲ್ಲ. ವೀರಶೈವದ ಸಾರವೆಂದು ಹೇಳುವ ಇಷ್ಟಲಿಂಗವು ಅವರಿಗಿದೆ.

೧. ಅಪ್ರತಿಮಯೋಗಿ ಎಮ್ಮಾತ್ಮಜಂಗೆ ಈ ಮಹಾದಿವ್ಯಲಿಂಗಮಂ ಧರಿಸೆನುತ್ತೆ ಒಂದು ಲಿಂಗಮಂ ಮಾಯಿದೇವನ ಕರಾಬ್ಜಾತದಲ್ಲಿತ್ತನು.[೫]

೨. ಆ ಮಹಾಯೋಗಿಯ ಆದೇಶದಂತೆ ಕೆಱೆಯ ಪದ್ಮರಸ ಜನನವಾದೊಡನೆಯೇ 'ಲಿಂಗಶಿಶುಗೆ ಗಳದಲ್ಲಿ ಲಿಂಗಮಂ ಧರಿಸುವರು'[೬] ಇದೇ ರೀತಿ ಕುಮಾರ ಪದ್ಮರಸರ ಉದಯಸಮಯದೊಳಸಮಶಿಶುಗೆ ಲಿಂಗವನ್ನು ಧರಿಸುವರು.[೭]

---

(೧) ಪ. ಪು. ಸಂ. ೧. ಪ. ೧೧. (೨) ಪ. ಪು. ಸಂ. ೧೦. ಪ. ೧೫೮.

(೩) ,, ,, ೭. ಪ. ೧೩.

(೪) ವರಯಜ್ಞಸೂತ್ರಮಂ ಶಕ್ತಿತ್ರಯೋರು ಗುಣಯುತ ಸೂತ್ರದೊಡನೆ ಕೂಡಿ (ಪ. ಪು. ಸಂ. ೭. ಪ. ೧೬.) (೫) ಪ. ಪು. ಸಂ. ೨. ಪ. ೫೪.

(೬) ಪ. ಪು. ಸಂ. ೨. ಪ. ೬೩. (೭) ಪ. ಪು. ಸಂ. ೪. ಪ. ೩೧.

೩. ಕೆಱೆಯ ಪದ್ಮರಸರ ತೊಳಗುವ ಎರ್ದೆದಾವರೆಯ, ನಡುವೆ ಥಳಥಳಿಸಿ ಘುಳುಘುಳಿಸುವ ಪರಂಜ್ಯೋತಿರಾಕಾರದ ಲಿಂಗವಿದೆ.[೧]

೪. ಆತನು ನಿರ್ಮಳ ಲಿಂಗವನ್ನು ಸೆಜ್ಜೆಯಿಂದ ತೆಗೆದು, ನಿಜಕರಸ್ಥಲ ದೊಳಿಟ್ಟು ಪೂಜಿಸುವನು.[೨]

೫. ನಿಜಲಿಂಗಸಂಗದ ಚೆಲುವ ನೋಡಿ ನೋಡಿ ತಣಿವನು.[೩] ಇಷ್ಟಲಿಂಗ ದಲ್ಲಿ ನಿಜದೃಷ್ಟಿಯನ್ನಿಟ್ಟು ನೋಡಿ ಆನಂದಪಡುವುದು ಶಿವಯೋಗದ ಸಾಧನೆ.

೬. ಅವರು ಲಿಂಗಾರ್ಪಿತಮಾಡದೆ ಯಾವುದನ್ನೂ ಸ್ವೀಕರಿಸುವುದಿಲ್ಲ.

ಇಷ್ಟ, ಪ್ರಾಣ, ಮತ್ತು ಭಾವಲಿಂಗಗಳು[೪]; ಗುರುಭಕ್ತಿ, ಲಿಂಗಭಕ್ತಿ, ಜಂಗಮಭಕ್ತಿ ಈ ಭಕ್ತಿತ್ರಯದ ಉಲ್ಲೇಖವೂ ಬಂದಿದೆ.[೫]

ಇಷ್ಟೇ ಅಲ್ಲ. ಕೆಱೆಯ ಪದ್ಮರಸರು 'ಅಮಲಷಟ್‌ಸ್ಥಲಮಾರ್ಗ ದುರುತರ ಸುವೃತ್ತಿಯೊಳ್ ತಪ್ಪದೆ ನಡೆದವರು.[೬] ಶಿವಯೋಗದ ಸಾಧನೆಯಿಂದ ಲಿಂಗಾಂಗ ಸಂಯೋಗದಲ್ಲಿ ನಿಂದವರು.[೭] ಶಿವಯೋಗ ಸುಖಾಬ್ಧಿಯಲ್ಲಿ ಮುಳು ಗಿದವರು.[೮] ಷಟ್‌ಸ್ಥಳಸ್ಥಾಪನಾರ್ಥವಾಗಿ ಷಣ್ಮುಖನ ಅಪರಾವತಾರ ದಂತಿದ್ದ ಕುಮಾರಪದ್ಮರಸರನ್ನು ಹಡೆದವರು. ಹೀಗೆ ಷಟ್‌ಸ್ಥಲಜ್ಞಾನ ಶಿಷ್ಟರಾದ ಕೆಱೆಯ ಪದ್ಮರಸರು ತ್ರಿಭುವನತಾತನಿಗೆ ಷಟ್‌ಸ್ಥಲ ಜ್ಞಾನೋಪದೇಶಮಾಡುವರು; ಅಂಗಸ್ಥಲ, ಲಿಂಗಸ್ಥಲಗಳ ವಿವರವನ್ನೂ, ಲಿಂಗಾಂಗಸಾಮರಸ್ಯದ ಇರವನ್ನೂ ಬೋಧಿಸುವರು.[೧೦] ಅಷ್ಟಾವರಣದ ವಿವರಣೆಯನ್ನೂ ಮಾಡುವರು.[೧೧]

ತ್ರಿಭುವನತಾತನಿಗೆ ಶಿವದೀಕ್ಷೆಯನ್ನು ಕೊಡುವಾಗ ಪದ್ಮರಸರು ಪಂಚಕಲಶ ಗಳನ್ನು ಹೂಡಿರುವರು.

---

(೧) ಪ. ಪು ಸಂ. ೫. ಪ. ೩೧. (೨) ಪ. ಪು. ಸಂ. ೬. ಪ. ೧೪.
(೩) ,, ,, ೬. ಪ. ೩೦. (೪) ,, ,, ೨. ಪ. ೨೮.
(೫) ,, ,, ೨. ಪ. ೩೨. (೬) ,, ,, ೨. ಪ. ೬೨.
(೭) ,, ,, ೪. ಪ. ೨೧. (೮) ,, ,, ೨. ಪ. ೫೪.
(೯) ,, ,, ೪. ಪ. ೨೮. (೧೦) ,, ,, ೧೨. ಪ. ೩೧-೪೪.
(೧೧) ,, ,, ೧೧. ಪ. ೧೦೩-೧೧೦.

'ನವಸ್ವರ್ಣಾದಿ ಕಲಶಪಂಚಕಮನವಜೀರವೆಸೆಯೆ ಮಧ್ಯದಲ್ಲೊಂದಂ ಚತುಷ್ಕೋನದಲ್ಲಿ ನಾಲ್ಕಂ ಸ್ಥಾಪಿಸಿರುವರು'೧

ಹೀಗಿದ್ದರೂ ಇದನ್ನು ವೇದೋಕ್ತ ವೀರಶೈವವೆಂದು ಕರೆದುದರ ಅರ್ಥವೇನು? ಶಿವಶರಣರು ವೇದವನ್ನು ಪ್ರತಿಭಟಿಸಿ, ವರ್ಣಾಶ್ರಮಗಳನ್ನು ಖಂಡಿಸಿ, ಭಕ್ತಿಪಂಥವನ್ನು ಪ್ರತಿಷ್ಠಾಪಿಸಿದರು. ಆ ಭಕ್ತಿಪಂಥದಲ್ಲಿ ಮೇಲುಕೀಳಿನ ಪ್ರಶ್ನೆಯೇ ಇಲ್ಲ ಪದ್ಮರಾಜಪುರಾಣದಲ್ಲಿಯೂ ಶಿವಶರಣರ ದಿವ್ಯನಿನಾದ ಕೇಳಿಬರುತ್ತದೆ.

ಕುಷ್ಠರೋಗಿಯಾದ ಅಂತ್ಯಜನು ಶಿವಭಕ್ತನಾಗಿರಲು, ಪದ್ಮರಸರು ಅವನ ಕಾಲ್ಗೆರಗುವರು. ಕುಲಹೀನನೊಡನೆ ಬೆರೆಸಿ ಬ್ರಹ್ಮವನ್ನು ಪೊಲೆಗಲಸಿದನೆಂಬ ಆರೋಪ ಪದ್ಮರಸರ ಮೇಲೆ ಬರಲು,೨ ಪದ್ಮರಸರು 'ಉದ್ಧತಕುಲಜರಧಮಕುಲಜರೆಂಬ ಬುದ್ಧಿಯ ಬಿಡು."೩ 'ನರಕ್ಕೆ ಗುರುಮುಟ್ಟೆ ಗುರುವಾಗನೇ?'೪ ಶರಣರೇ ಕುಲಜರು '೫ ಶಿವಭಕ್ತಿಯುಳ್ಳ ಚಾಂಡಾಲನೇ ಬ್ರಾಹ್ಮಣಪ್ರವರನು' 'ಭಕ್ತಿಯಿಲ್ಲದ ಭೂಸುರನು ಶ್ವಪಚನಿವಹಕ್ಕಧಮ'೬ ಎಂದು ವೇದವನ್ನೂ ವರ್ಣಾಶ್ರಮವನ್ನೂ ಬ್ರಾಹ್ಮಣ್ಯವನ್ನೂ ಖಂಡಿಸಿರುವರು.

ಆದುದರಿಂದ ಪದ್ಮರಾಜಪುರಾಣದಲ್ಲಿ ಉಕ್ತವಾದ ವೀರಶೈವವನ್ನು ವೇದೋಕ್ತ ವೀರಶೈವವೆನ್ನುವುದಕ್ಕಿಂತ, ಆಗಮೋಕ್ತ ವೀರಶೈವವೆಂದರೆ ಹೆಚ್ಚು ಸಲ್ಲಬಹುದು. ಏಕೆಂದರೆ, ಶೈವ ವೀರಶೈವ ಇವು ಆಗಮಿಕ ಧರ್ಮಗಳು; ಈ ಧರ್ಮದ ಮೂಲತತ್ವಗಳನ್ನು ಶಿವಾಗಮಗಳಲ್ಲಿ ಕಾಣಬಹುದಾಗಿದೆ. ಈ ಮಾತಿಗೆ ಪುಷ್ಟಿ ದೊರೆಯುವಂತೆ ಪದ್ಮರಸರ ಶಿವಪೂಜೆ, ಮದುವೆ ಹಾಗೂ ಅವರು ತ್ರಿಭುವನತಾತನಿಗಿತ್ತ ಶಿವದೀಕ್ಷೆ, ಇವೆಲ್ಲ ಶಿವಾಗಮವಿಧಾನದಿಂದಲೇ ನೆರವೇರಿವೆ.೭ ಪದ್ಮರಸರ ವಂಶಜರನ್ನು 'ಶಿವಾಗಮಾಭರಣ'೮ 'ಸಮಸ್ತಾಗಮಾಚಾರ್ಯಮುಕುರ'೯ ಎಂದು ಕರೆದಿರುವುದು ಅರ್ಥಪೂರ್ಣವಾಗಿದೆ.

---

(೧) ಪ. ಪು. ಸಂ. ೧೨. ಪ. ೯. (೨) ಪ. ಪು. ಸಂ. ೪. ಪ. ೩೯-೪೦.
(೩) ,, ,, ೪. ಪ. ೪೩. (೪) ,, ,, ೪. ಪ. ೪೨.
(೫) ,, ,, ೪. ಪ. ೪೬. (೬) ,, ,, ೪. ಪ. ೪೯.
(೭) ,, ,, ೭; ಸಂ. ೩. ಪ. ೭೫; ಸಂ. ೧೨, ಪ. ೪-೨೦.
(೮) ,, ,, ೧. ಪ. ೨೪. (೯) ಪ. ಪು. ಸಂ. ೧. ಪ. ೨೭.

ಒಟ್ಟಿನಲ್ಲಿ ಯಜ್ಞೋಪವೀತದಂತಹ ಕೆಲವು ವೈದಿಕ ಪರಂಪರೆಗಳು ಪದ್ಮರಾಜಪುರಾಣದಲ್ಲಿ ಉಕ್ತವಾದ ವೀರಶೈವದಲ್ಲಿ ಕಂಡರೂ ಸತ್ವಗುಂದಿದ ಸಂಸ್ಥೆಯುಳಿಯದಂತೆ ಅವು ಉಳಿದಿವೆ. ಸತ್ವದಲ್ಲಿ ಇದು ಶರಣಮಾರ್ಗ; ಮೇಲುಕೀಳೆಂಬ, ಉಚ್ಚ ನೀಚ ಎಂಬ, ಭಾವನೆಗೆ ಎಡೆಗುಡದ ಭಕ್ತಿಮಾರ್ಗ;[೧] ಅಲ್ಲಿ ಭಕ್ತ ಮಹೇಶರೆಂಬ ಭೇದಭಾವವಿಲ್ಲ; ಆಚಾರ್ಯ ಶರಣರೆಂಬ ತಾರತಮ್ಯವಿಲ್ಲ; ಭಕ್ತಿ, ಜ್ಞಾನ, ಕ್ರಿಯೆಗಳು ಮುಪ್ಪುರಿಗೊಂಡ ಸಮನ್ವಯ ಮಾರ್ಗ. ಪ್ರಪಂಚ ಪಾರಮಾರ್ಥಗಳೆರಡನ್ನೂ ಒಂದುಗೂಡಿಸಿ ನಡೆಸುವ ದಿವ್ಯಮಾರ್ಗ.[೨]

---

(೧) ಪ. ಪು. ಸಂ. ೪. ಪ. ೪೩-೪೫.

(೨) ಶರಣರ್ಗೆ ಸಂಸಾರಸಂಗಂ ತಿಳಿಯೆ ಬಂಧ ಮುಕ್ತ (ಪ. ಪು. ಸಂ. ೩. ಪ. ೩೮.)

ಕವಿ ಪದ್ಮಣಾಂಕ

ಪದ್ಮರಾಜಪುರಾಣದಲ್ಲಿ ಕಾವ್ಯದ ದೇವಾಲಯದ ಮೇಲೆ ಶಾಸ್ತ್ರದ ಗೋಪುರವನ್ನಿಟ್ಟಂತಿದೆ, ಆ ಕಾವ್ಯವನ್ನು ಓದಿದರೆ, ಕಾವ್ಯಾರಾಮದಲ್ಲಿ ವಿಹರಿಸಿ, ಶಾಸ್ತ್ರ ಶ್ರೀರೋಹಣಗಿರಿಯನ್ನು ಏರಿದಂತಾಗುತ್ತದೆ. ಹದಿಮೂರು ಸಂಧಿಗಳ ಈ ಪುರಾಣದಲ್ಲಿ, ಹತ್ತು ಸಂಧಿಗಳಲ್ಲಿ (೧ ರಿಂದ ೯ ಹಾಗೂ ೧೩) ಕಾವ್ಯವಿಲಾಸವಿದ್ದರೆ, ಉಳಿದ ಮೂರು ಸಂಧಿಗಳಲ್ಲಿ (೧೦ ರಿಂದ ೧೨) ಶಾಸ್ತ್ರ ವಿಚಾರಗಳ ಹೋರಾಟ, ನಿಲುಗಡೆ; ತರ್ಕದ ತಿಕ್ಕಾಟ ನಡೆದಿದೆ. ಈ ಕಾವ್ಯದೇವಾಲಯ ಕಲೆಯ ಕುಸುರಿನ ಮೂಲಕ ರಸಿಕಜನ ಚೇತೋಹಾರಿಯಾಗಿದೆ. ಪದ್ಮಣಾಂಕನು ನವ ಕವಿತಾಚಿಂತಾರತ್ನವನ್ನೂ ಪಡೆದಿದ್ದಾನೆ. ಎರಡರಲ್ಲಿಯೂ ಆತನದು ಪರುಷ ಹಸ್ತ. ಆದರೆ, ಪದ್ಮಣಾಂಕನ ಒಂದು ವಿಶೇಷಗುಣವೆಂದರೆ ಕಾವ್ಯ ಶಾಸ್ತ್ರಗಳೆರಡನ್ನೂ ಬೆರೆಸಿ ಹದಗೆಡಿಸದಿರುವುದು. ಕಾವ್ಯವೆಲ್ಲಿ, ಶಾಸ್ತ್ರವೆಲ್ಲಿ ಎಂಬುದನ್ನು ಅರಿತುಕೊಂಡ ನಿಪುಣ ಕವಿಯಾತನು. ಅಂತೆಯೇ ಕಾವ್ಯದ ಸ್ಥಳದಲ್ಲಿ ಕಾವ್ಯವನ್ನೂ ಶಾಸ್ತ್ರದ ಸ್ಥಳದಲ್ಲಿ ಶಾಸ್ತ್ರವನ್ನೂ ಆತನು ವಿವರಿಸಿದ್ದಾನೆ. ಮೊದಲು ತನ್ನ ಔಚಿತ್ಯಜ್ಞಾನದೃಷ್ಟಿಯಿಂದ ಕವಿ ಕಥಾವಸ್ತುವನ್ನು ಸರಿಯಾಗಿ ನಿರೀಕ್ಷಿಸಿದ್ದಾನೆ. ಪ್ರತಿಭೆಯ ಕಣ್ಣು ತನ್ನ ಕ್ಷೇತ್ರವನ್ನು ವ್ಯಾಪಿಸಿದೆ. ಶಾಸ್ತ್ರದ ದೃಷ್ಟಿ ತನ್ನ ಸ್ಥಲದಲ್ಲಿ ನೆಲಸಿದೆ. ಒಂದು ಇನ್ನೊಂದರ ಮೇಲೆ ಆಕ್ರಮಣ ಮಾಡಹೊರಟಿಲ್ಲ. ರಸಿಕನಾದ ಪದ್ಮಣಾಂಕ ತಿಳಿಯಾದ, ಸರಸಕಾವ್ಯವನ್ನು ವಿರಚಿಸಿದರೆ, ಬಹುಶ್ರುತನಾದ ಪದ್ಮಣಾಂಕ ಗಭೀರವಾದ, ಶಾಸ್ತ್ರವಿಷಯವನ್ನು ವಿವೇಚಿಸಿದ್ದಾನೆ. ತನ್ನ ಪಾಂಡಿತ್ಯದ ಹೊರೆ ಇಳುಹುವದಕ್ಕಾಗಿ, ಕವಿ ಶಾಸ್ತ್ರವಿಷಯಕ್ಕೆ ಕೈಹಾಕಿಲ್ಲವೆಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು. ಕೆಱೆಯ ಪದ್ಮರಸರು ತ್ರಿಭುವನತಾತನೊಡನೆ ವಾದಮಾಡಿ, ಶಿವಾದ್ವೈತಸಾಕಾರಸಿದ್ಧಾಂತವನ್ನು ಪ್ರತಿಷ್ಠಾಪಿಸಿದ ವಿಷಯ ನಮ್ಮ ಸಾಹಿತ್ಯದಲ್ಲಿ ಸುಪ್ರಸಿದ್ಧವಾಗಿದೆ.[೧]

ಆ ವಿಷಯವನ್ನು ಬಿಟ್ಟರೆ ಕೆಱೆಯ ಪದ್ಮರಸರ ಜೀವನಚರಿತೆಯೇ ಪೂರ್ಣವಾಗುವಂತಿಲ್ಲ. ಅಂತೆ, ಅವರ ಜೀವನಚರಿತೆಯನ್ನು ಬರೆಯಹೊರಟ ಕವಿಗೆ,

---

(೧) ಸಾನಂದ ಚರಿತೆ ಉಪೋದ್ಘಾತ

ರಾ. ಚಾ. ಸಂ. ೧೬. ಪ. ೨. ಭೈ. ಕಾ. ಕ. ಸೂ. ರ. ಚೆ. ಬ. ಪು. ಸಂ. ೬೨. ಪ. ೫೭.

ಕೆಱೆಯ ಪದ್ಮರಸರು ಶಿವಾದ್ವೈತ ಸಾಕಾರಸಿದ್ಧಾಂತವನ್ನು ಪ್ರತಿಷ್ಠಾಪಿಸಿದ ವಿಷಯವನ್ನು ವಿವರಿಸುವುದು ಅನಿವಾರ್ಯವಾಗಿದೆ; ಅವಶ್ಯವಾಗಿದೆ. ಕವಿ ಪದ್ಮಣಾಂಕನು ಕೆಱೆಯ ಪದ್ಮರಸರ ಜೀವನದ ಮಿಕ್ಕ ಅಂಶಗಳನ್ನು ವಿವರಿಸುವಾಗ ಕಾವ್ಯಮಯವಾದ ಸನ್ನಿವೇಶಗಳಾವುವೆಂಬುದನ್ನು ಕಂಡುಹಿಡಿದಿದ್ದಾನೆ. ಅಲ್ಲಿ ತನ್ನ ಪ್ರತಿಭೆಯನ್ನು ಉನ್ನತವಾದ ಮಟ್ಟಕ್ಕೇರಿಸಿದ್ದಾನೆ. ಕವಿ ಪದ್ಮಣಾಂಕ ನಿರರ್ಗಳವಾಗಿ ಕಥೆ ಹೇಳುತ್ತಾನೆ; ಭಾವದ ಆವೇಶದಲ್ಲಿ ಮೈಮರೆಯುತ್ತಾನೆ; ಸಹೃದಯರನ್ನೂ ಮೈಮರೆಸುತ್ತಾನೆ. ರಸದ ಹೊನಲನ್ನು ಹರಿಸುತ್ತಾನೆ. ದಿವ್ಯದರ್ಶನವನ್ನು ಮಾಡಿಸುತ್ತಾನೆ.

ಪದ್ಮಣಾಂಕನು ಶಕ್ತಿವಂತನಾದ ಭಕ್ತಕವಿ; ಸರಸ ಸತ್ಕವಿ. ಆತನು ಪದ್ಮರಸ ದೇಶಿಕ ಶಿರೋಮಣಿಗೆ ಮತಿಯನ್ನು ಮಾರಿಕೊಂಡಿರುವನು.[೧] ತನ್ನ ಪಾಪಕ್ಷಯಾರ್ಥವಾಗಿ, ಗುರುಸ್ತುತಿಯನ್ನು ಭಕ್ತಿಯಿಂದ ಬಲ್ಲವೋಲ್ ವಿರಚಿಸಿರುವನು.[೨] ಪದ್ಮರಸಾರ್ಯರ ಅಂಘ್ರಿಯನ್ನು ವಾಕ್ಪುಷ್ಪದಿಂದ ಅರ್ಚಿಸಿರುವನು.[೩] ಕೊನೆಗೆ ಈ ಕೃತಿಯನ್ನು ಹಡೆದು ಶಿವಾರ್ಪಿತವನ್ನೆಸಗಿರುವನು.[೪] ಪದ್ಮಣಾಂಕನ ಕಾವ್ಯಕೆ ಭಕ್ತಿ ಹೇಗೆ ಸ್ಥಾಯಿಯಾಗಿದೆಯೆಂಬುದು ಈ ಉಕ್ತಿಗಳಿಂದ ಸ್ಪಷ್ಟವಾಗುತ್ತದೆ.[೫] ಭಕ್ತಿಯ ಬೆಳಗಿನಲ್ಲಿ ನಡೆವ ಕವಿಗೆ ತಪ್ಪುವೆನೆಂಬ ಭಯವಿಲ್ಲದಾಗಿದೆ. ತಪ್ಪಿದರೂ ಅದಕ್ಕೆ ಹೊಣೆ ತಾನಲ್ಲವಂತೆ.

ಧಾನುಷ್ಕನೊಂದು ಗುರಿಯೆಸೆ ತಪ್ಪಿದೊಡೆ ಶರಕೆ
ಹೀನವೋ ಎಚ್ಚಂಗೆ ಹೀನವೋ ವೀಣೆಯಂ
ಗಾನಿ ಬಾಜಿಸೆ ಸುತಾನಂ ತೇನ ತೇನವಾಗುಣ್ಮದೊಡೆ ಬಂದಕೊಱತೆ
ಗಾನಿಗೋ ವೀಣೆಗೋ ನೀನಾಡಿಸುವ ಹಾಹೆ
ಯಾನಾದ ಕತದಿನಿಂತೀ ಕೃತಿಯೊಳಗೆ ನೆಗಳ್ದ
ಹಾನಿವೃದ್ಧಿಗಳೆನಗೊ ನಿನಗೊ ನೀನಿದನಱಿದು ನಡಸಯ್ಯ
ವಿಶ್ವಪತಿಯೇ[೫]

---

೧. ಪ. ಪು. ಸಂ. ೧. ಪ. ೪೭, ೨. ಪ. ಪು. ಸಂ. ೧. ಪ. ೪೯.
೩. ,, ,, ೧. ಪ. ೩೩. ೪. ,, ,, ೧. ಪ. ೩೧.
೫. ,, ,, ೧. ಪ. ೩.

ಭಕ್ತಿವತ್ಸಲನಾದ ಪರಮಾತ್ಮನು ಈ ಕವಿಯ ಹಾನಿವೃದ್ಧಿ ತನ್ನವೆಂದು ಬಗೆದು ಆತನನ್ನು ಕೈಹಿಡಿದು ನಡೆಸಬೇಕಾಗಿದೆ. ಇದಕ್ಕೆ ಇನ್ನೊಂದು ಕಾರಣವೂ ಉಂಟು. ಶಂಭು 'ಮಹಾಕವಿ'ಯು.[೧] ಆದಿಕರ್ತನಾದ ಆ ಮಹಾಕವಿಯು ಈ ಕವಿಯ ಯೋಗಕ್ಷೇಮವಹಿಸಬೇಕಾಗಿದೆ. ಇಂತಹ ದಿವ್ಯದರ್ಶನದಲ್ಲಿ ನಡೆವಾಗ ಎಡಹಿದರೆ— ?

'ಭಕ್ತವಿತಾನವಿಮಿದನೊಲ್ದು ತಿರ್ದುಗೆ; ತಿರ್ದುವಂತೆ ಕಾವಂ
ತನ್ನ ಪೂವಿನಂಬಂ'[೨]

ಪದ್ಮಣಾಂಕನು ಭಕ್ತನಷ್ಟೇ ಅಲ್ಲ; ಕವಿಯಾತನು. ಕೇವಲ ಭಕ್ತನಾಗಿದ್ದರೆ, ಸಾಮಾನ್ಯಕವಿಯಾಗಿದ್ದರೆ ಮೊದಲನೆಯ ತಿರ್ದುಗೆಗೆ ನಿಂತುಬಿಡುತ್ತಿದ್ದನು. ದಾರ್ಶನಿಕ ಕವಿ ಮುಂದೆ ಬಂದು ತಿರ್ದುಗೆ ಕಾವಂ ತನ್ನ ಪೂವಿನಂಬಂ ತಿರ್ದುವಂತೆ ಎಂದು ಹೇಳಿಬಿಡುತ್ತಾನೆ. ಆ ಉಪಮಾಧ್ವನಿಯಲ್ಲಿ ಅರ್ಥದ ಸಾರ್ಥಕತೆ, ಸೌಂದರ್ಯದಸಾರ ಹುದುಗಿ ಕುಳಿತು ಚಿತ್ತವೃತ್ತಿಗೆ ಅಪಾರವಾದ ಆನಂದವನ್ನು ನೀಡುತ್ತವೆ.

ವಿಶ್ವಪತಿಯ ಕರುಣೆ, ಭಕ್ತಿಪ್ರತಾನದ ಭರವಸೆ ಇವೆರಡರ ಹಸಾದವನ್ನು ಹಡೆದು ಪದ್ಮಣಾಂಕನ ಕಾವ್ಯಶಕ್ತಿ ಕೃತಿಯನ್ನಾರಂಭಿಸಿದೆ. ಕಾವ್ಯದ ಅಂಗೋಪಾಂಗಗಳ ಅರಿವೂ ಪದ್ಮಣಾಂಕನಿಗಿದೆ.

ನುಡಿ ಬೆಡಂಗಂ ಬೀಱಿ ರೀತಿ ವಿಖ್ಯಾತಿಯಂ
ಮಡಲಿಡೆ ಚಮತ್ಕಾರವಮಮ ಸತ್ಕಾರಮಂ
ಸಡಗರಿಸೆ ಮೋಹನಂ ಮೋಹರಿಸೆ ಗಾಡಿ ಪರಿದಾಡೆ ಪೊಸದೇಶಿಸೂಸೆ
ಕಡುಜಾಣ್ಮೆ ಕಯ್ಗಣ್ಮೆ ಮೃದುಪದಂ ಸಂಪದಮ
ನಡರೆ ಭಾವಂ ಸತ್‌ಪ್ರಭಾವಮಂ ಕಯ್ಗೆಯ್ಯೆ
ಪಡೆದು ಕೃತಿಯಂ ಶಿವಾರ್ಪಿತವನೆಸಗುವ ನಿನ್ನ ಸೈಪಿಂಗೆ
ಸಾಟಿಯುಂಟೇ[೩]

ಕಾವ್ಯದಲ್ಲಿ ಭಾವದ ಸತ್‌ಪ್ರಭಾವ, ಮೃದುಪದದ ಸಂಪದ, ರೀತಿಯ ವಿಖ್ಯಾತಿ, ಚಮತ್ಕಾರದ ಸತ್ಕಾರ, ನುಡಿಯಬೆಡಗು ಇರಬೇಕೆಂದು ಆಶಿಸಿದ ಕವಿ

---

೧. ಪ. ಪು. ಸಂ. ೧. ಪ. ೫೯.　　೨. ಪ. ಪು. ಸಂ. ೧. ಪ. ೪೩.
೩. „ „ ೧. ಪ. ೩೧.

ಸತ್ಕವಿಯಲ್ಲವೇ ? ತನ್ನ ಕಾವ್ಯ ರಸದ ಹೊನಲಾಗಬೇಕೆಂಬ ಹಿರಿಯ ಬಯಕೆಯು ಪದ್ಮಣಾಂಕನಿಗಿದೆ.

ರಸದಾಳಿಯೆಸೆವ ಪಾಲ್ವನಲೊ ಸೊಗಯಿಪ ಪೊಚ್ಚ
ಪೊಸ ಜೇನಸೋನೆಯೋ ಹುಣ್ಣಿಮೆಯ ಸಸಿಯ ಬ
ಟ್ಟೊಸರ್ದುರ್ ಪರಿತರ್ಪ ದಿವ್ಯಾಮೃತದ ತೊಱೆಯೊ ಪಾಲ್ಗಡಲುರ್ವಿ ಮೇರೆದಪ್ಪಿ
ಒಸೆದು ದಾಂಗುಡಿಯಿಟ್ಟು ಪಸರಿಸಿತೊ ಈ ಕೃತಿಯ
ರಸವೊ ಪೇಳೆಂದೆಲ್ಲ ರಸಿಕರಾನಂದಿಪಂ
ತೆಸಗುವುದು[೧]

ರಸಿಕತನವೇ ಕಾವ್ಯದ ಸುಳಿ; ರಸವೇ ಆತ್ಮ. ರಸಿಕರಾನಂದಪಡುವಂತೆ ಕಾವ್ಯವನ್ನು ರಚಿಸಬೇಕು. ಎಂದು ನುಡಿದು ನಡೆದ ಕವಿಪದ್ಮಣಾಂಕನು ಸತ್ಕವಿಯೆಂಬುದರಲ್ಲಿ ಸಂದೇಹವಿಲ್ಲ. ಆ ವಿಧವಾಗಿ ರಚಿಸದಿದ್ದರೆ ಬಯ್ವರೇ ? ಬಡಿವರೇ ? ಜಡಿವರೇ ?[೨] ಎಂದು ಕೇಳುವ ಕುಲರಸಿಕನಾತನು. ತನ್ನ ಕಾವ್ಯಕೇಳ್ವರ ಕರ್ಣಾಭರಣವಾಗುವುದು;[೩] ರಸಿಕರಮನವನ್ನು ಜಕ್ಕುಲಿಸುವುದು;[೪] ವಿವೇಕಿಗಳ ಚಿತ್ತವನ್ನು ವಶೀಕರಿಸುವುದು.[೫] ಎಂಬ ಶ್ರದ್ಧೆ ಪದ್ಮಣಾಂಕನಿಗಿದೆ.

ಸರಸತ್ವದಿಂ ಸಲಕ್ಷಣದಿಂ ಬೆಡಂಗಿನಿಂ
ಪರಮಸೌಂದರ್ಯದಿಂ ಜಾತಿಯಿಂ ಗುಣದಿನು
ತ್ಕರ ವೃತ್ತಿಯಿಂದಲಂಕಾರದಿಂ ಮೋಹನದೆ ಭಾವದಿಂ ನಿರ್ದೋಷದಿಂ
ನಿರುಪಮ ಮೃದೂಕ್ತಿಯಿಂ ಪ್ರೌಢಿಯಿಂ ರೀತಿಯಿಂ
ವರ ಗಮಕದೆಸಕದಿಂದೊಳ್ಪಿಂ ಸಕಲ ಕಲಾ
ಸ್ಫುರಣದಿಂದೊಪ್ಪುವೀ ಕೃತಿಯುವತಿ ಕೋವಿದರನೇಂ ಸೋಲಿಸದೆ ಬಿಡುವಳೇ[೬]

---

೧. ಪ. ಪು. ಸಂ. ೧. ಪ. ೩೦. ೨. ಪ. ಪು. ಸಂ. ೧. ಪ. ೩೦.
೩. ,, ,, ೧. ಪ. ೪೪. ೪. ,, ,, ೧. ಪ. ೫೧.
೫. ,, ,, ೬. ,, ,, ೧. ಪ. ೪೦.

ಸರಸವಾಗಿ, ನಿರರ್ಗಳವಾಗಿ, ಮೃದುಪದಗಳನ್ನು ಬಳಸಿ ಪ್ರೌಢಶೈಲಿಯಲ್ಲಿ ನಾದಮಾಧುರ್ಯ ಹೊರಹೊಮ್ಮುವಂತೆ ಕಾವ್ಯವನ್ನು ರಚಿಸುವುದು ಪದ್ಮಣಾಂಕನ ವಿಶಿಷ್ಟಗುಣ.

ಕಾವ್ಯವು ಭಾವನೆ, ಕಲ್ಪನೆ, ಆಲೋಚನೆ, ಸೂಕ್ಷ್ಮನಿರೀಕ್ಷಣೆ ಮುಂತಾದವುಗಳಿಂದ ಬಿಗಿವಡೆದಿರಬೇಕು. ಕಾವ್ಯದ ಆಳ, ಅಗಲ, ಎತ್ತರಗಳನ್ನು ಅಳೆವ ಅಳತೆಗೋಲು ಇವೇ. ಜೀವನದ ವಿವಿಧ ಸನ್ನಿವೇಶಗಳಲ್ಲಿ ಹೃದಯದ ಅಂತರಾಳದಿಂದ ಗಗನದವರೆಗೆ ಪುಟನೆಗೆವ ಅನಂತಭಾವಗಳನ್ನು ಗ್ರಹಿಸುವ ಶಕ್ತಿ ಕವಿಗಿರಬೇಕಾಗುತ್ತದೆ. ಅನುಭೂತಿಯೇ ಇದಕ್ಕೆ ಆಗರ. ಪದ್ಮರಾಜಪುರಾಣದಲ್ಲಿ ಇಂತಹ ಅನುಭೂತಿ ವಿವಿಧಮುಖವಾಗಿ ಹೊರಹೊಮ್ಮಿದೆ. ಉತ್ತಮವಾದ ಕಾವ್ಯವನ್ನು ಹೆತ್ತಿದೆ; ಹೊತ್ತಿದೆ. ರಸದ ಪ್ರವಾಹವನ್ನು ಹರಿಸಿದೆ.

ಶಾಂತಿಯೇ ಸಾಕಾರವಾದಂತೆ, ಶೈವತೇಜವೇ ನಡೆಗಲಿತಂತೆ ಕೆರೆಯ ಪದ್ಮರಸರ ಜೀವನ ವಿಕಸನವಾಗುತ್ತದೆ. ಕಾವ್ಯಪ್ರವಾಹವೂ ಪ್ರಶಾಂತವಾಗಿ, ನಿರರ್ಗಳವಾಗಿ ಹರಿಯುತ್ತದೆ. ಘರ್ಷಣೆ ಆರಂಭವಾಗುತ್ತದೆ. ಧ್ಯೇಯಗಳ ಹೋರಾಟದಲ್ಲಿ ಭಾವಗಳ ತಿಕ್ಕಾಟನಡೆಯುತ್ತದೆ. ಮಿಂಚು ಹೊರಹೊಮ್ಮುತ್ತದೆ. ಕಾವ್ಯಕ್ಷೇತ್ರಕ್ಕೆ ವರ್ಷಾಕಾಲ ಪ್ರಾಪ್ತವಾಯ್ತೆಂದೆನಿಸುತ್ತದೆ. ಭಾವಗಳ ಮೇಘದಿಂದ ರಸವರ್ಷ ಧೋ ಧೋ ಎಂದು ಸುರಿಯುತ್ತದೆ. ಧಾರೆಧಾರೆಯಾಗಿ ಸುರಿಯುತ್ತದೆ; ಪ್ರವಾಹವಾಗಿ ಹರಿಯುತ್ತದೆ.

ಆ ಘರ್ಷಣೆ ಹೀಗಿದೆ. ಪದ್ಮರಸರು ಕೆರೆಗೆಂದು ತೆಗೆದುಕೊಂಡ ರಾಜ್ಯದ ಬೊಕ್ಕಸದ ಹಣವನ್ನು ವಿಟಜಂಗಮರಿಗೆ ಕೊಟ್ಟರೆಂಬ ಆರೋಪವನ್ನು ಹೊರಿಸುತ್ತಾರೆ ಪಿಸುಣರು, ಪರವಾದಿಗಳು. ನರಸಿಂಹಬಲ್ಲಾಳನು ಅದನ್ನು ಕೇಳಿ ಸಿಟ್ಟು ಬೆಂಕಿಯಾಗುವುದನ್ನು ನೋಡಿರಿ.

> ಭೂಪನಾ ದುರ್ಜನರ ದುಷ್ಪ್ರೋಕ್ತಿಯಂ ಕೇಳ್ದು
> ಕೋಪವೇ ರೂಪಾದವೋಲ್ ಛಿಟಿಲೆನುತ್ತೆ ನಾ
> ಸಾಪುಟದೊಳತ್ಯುತ್ಕಟೋಚ್ಛ್ವಾಸಮುಣ್ಮೆ ಕಡೆಗಣ್ ಕೆಂಪನಾಂತು ಚಲಿಸೆ
> ಆ ಪುರ್ವು ಗಂಟಿಕ್ಕೆ ದಷ್ಟೋಷ್ಠದಿಂ ಹೊಂಕ್ರ
> ತೋಪಚಿತ ಕಂಠನಾಗುತೆ ಮೀಸೆ ಕುಣಿಯೆ ಭ
> ಕ್ತಾಪರಾಧಕ್ಕಲಸದುದ್ರೇಕದಿಂದೋರ್ವ ಚರನನೀಕ್ಷಿಸುತೆ ಪೇಳ್ದಂ[೧]

---

೧. ಪ. ಪು. ಸಂ. ೬. ಪ. ೧೦.

ಕೋಪವೇ ಮೈವೆತ್ತಂತಾಗುತ್ತದೆ. ಹುಬ್ಬುಗಂಟಿಕ್ಕುತ್ತದೆ; ಮೀಸೆ ಕುಣಿಯುತ್ತವೆ. ಹೂಂಕೃತಿ ಕಂಠದಿಂದ ಹೊರಹೊಮ್ಮುತ್ತದೆ. ಕಾವ್ಯಕ್ಕೂ ಕಾವೇರುತ್ತದೆ. ಕಳೆಬರುತ್ತದೆ.

ಶರಣರೊಡನೆ ಎಲುದೋರಿ ಸರಸವಾಡಿದರೆ ನಡೆಯದು. ಪದ್ಮರಸರು ನರಸಿಂಹಬಲ್ಲಾಳನಲ್ಲಿ

ಪೋಗೆನೆ ಪೋಪ ಬಾರೆಲವೊ ಬಾರೆನೆ ಜೀಯಹಸಾದವೆಂದು ಬೆ
ಳ್ಳಾಗುತೆ ಬರ್ಪ ಮಾಣೆಲವೊ ಸುಮ್ಮನಿರೆಂದೊಡೆ ಸುಮ್ಮನಿರ್ಪ ಮ
ತ್ತಾಗಳೆ ಝಂಕಿಸಲ್ ನಡುಗಿ ಬೀಳುವ . . . [೧]

ಸೇವೆಯ ಕೃಷ್ಣವೃತ್ತಿಯನ್ನು ಸ್ವೀಕರಿಸದವರಲ್ಲ. ಲೋಕಹಿತಾರ್ಥವಾಗಿ, ನಿಮಿತ್ತ ಮಾತ್ರರಾಗಿ ರಾಜ್ಯವೃತ್ತಿಯಲ್ಲಿದ್ದರು. ಶೈವಸಾಮ್ರಾಜ್ಯವೇ ಅವರ ಸಾಮ್ರಾಜ್ಯ. ಶರಣಪದದಲ್ಲಿ ನಿಂದವರು ಅನ್ಯಧನವನ್ನು ಅಪಹರಿಸಿದರೆಂಬ ಆರೋಪವನ್ನು ಸಹಿಸುವದೆಂತು ? ಒಳ್ಳೇ ತೀಕ್ಷ್ಣವಾದ ಉತ್ತರವನ್ನೇ ಕೊಡುವರು.

ಬಾವನ್ನಮಂ ಪೊರೆದು ರಂಜಿಸುವ ರಸಿಕನಿರ
ದೋವೊ ಕಿಸುಕುಳವನೇಂ ಪೊರೆವನೇ ದಿವ್ಯ ಕಾಂ
ತಾವಿಸುತಸುರತಾನುಭವಿ ಹಡಿಕೆದೊಳ್ತಿಂಗೆ ರಮಿಸುವನೆ ಪರಮಾನ್ನಮಂ
ಸೇವಿಸುವ ಭೋಗಿ ಕಲಗರ್ಚಿಂಗೆ ಮೋಹಿಸುವ
ನೇ ವಿಪುಲ ಸಿಂಹಶಿಶು ನಾಯ ಮೊಲೆಯುಂಬುದೇ
ಭೂವರಾ ಬಿಡುಬಿಡಾ ಸಂದೇಹಮಂ ಶರಣರನ್ಯಧನಕಿಚ್ಛೈಪರೇ[೨]

ಅನ್ಯರ ಧನವನ್ನು ಅಪಹರಿಸುವ ಮಾತೇಕೆ? ಆ ಇಚ್ಛೆಯೂ ಅವರಲ್ಲಿ ಅಂಕುರಿಸದು.

---

೧. ಹರಿಹರದೇವ : ಪಂಪಾಶತಕ—ಪ. ೪೮.

೨. ಪ. ಪು. ಸಂ. ೬. ಪ. ೧೬.

ಪೊಡವಿ ಬಾಯ್ಬಿಟ್ಟು ನರರಂ ತಿಂಬೊಡಂ ಮೇಗ
ಣಡಿಕಿಲಾಗಿರ್ದಜಾಂಡಂಗಳೊಂದೊಂದಾಗಿ
ನಡುನೆತ್ತಿಯೊಳ್ ಬೀಳ್ವೊಡಂ ಮಾತೃಕಾ ಕುಚಕ್ಷೀರಂ ಗರಳಮಾ
ದೊಡಂ
ಮುಡಿದ ಪೂಮಾಲೆಯುಗ್ರವ್ಯಾಲಸಾದೊಡಂ
ಕಡೆಗೆ ಸಸಿ ಮಸಿಯಾದೊಡಂ ಮಲಯಮಾರುತಂ
ಸುಡುವ ಕಿಚ್ಚಾದೊಡಂ ಶಿವಭಕ್ತರಿತರಧನಕೆಳಸುವರೆ ಧಾತ್ರೀಧವಾ[1]

ಶಿವಭಕ್ತರಿತರ ಧನಕೆಳಸರೆಂಬುದನ್ನು ಪದ್ಮರಸರು ಮತ್ತೆ ಮತ್ತೆ ಒತ್ತಿ ಹೇಳುವರು. ಶಿವಶರಣರು ಮುಳಿದೊಡೆ ಬ್ರಹ್ಮನನ್ನು ತೃಣಕ್ಕಿಂತ ಕೀಳುಮಾಡಬಲ್ಲರು; ಒಲಿದರೆ ತೃಣವನ್ನೂ ಬ್ರಹ್ಮಂಗಧಿಪತಿಯೆನಿಸುವರು. ಸಕಲ ಸೃಷ್ಟಿಯೆಲ್ಲ ಮಾಹೇಶ್ವರರ ಕಣ್ಸನ್ನೆಯಿಂದೊಗೆವುವು; ಅಳಿವವು. ಹೀಗಿದ್ದಾಗ ನಿನ್ನ ವಿತ್ತದಲ್ಲಿ ನಾನು ಒಂದಿನಿತನ್ನಾದರೂ ಮುಟ್ಟುವೆನೆ ? ಮುಟ್ಟಿದರೆ ಮಲಹರನ ಭಕ್ತರೊಲ್ವರೆ ? ಎಂದು ದೃಢವಾಗಿ ನುಡಿವರು.

ಇಲ್ಲಿಂದ ಮುಂದೆ ಮಾತು ಮಾತುಗಳ ಮಥನಕ್ರಿಯೆ ನಡೆಯುತ್ತದೆ. ಕಾವ್ಯದ ನವನೀತ ಹೊರಹೊಮ್ಮುತ್ತದೆ. ಅರಸನೂ ಪರವಾದಿಗಳೂ ಅಣಕವಾಡುವುದನ್ನು ನೋಡಿರಿ.

' ನಿನ್ನ ಸಲ್ಲಾಪಮೇ ದಿಟಮಪ್ಪವು
ಅಂತಾದೊಡೆಮ್ಮ ಕೆಱೆಯೇಪರಿಯೊ
ಳಿರ್ಪುದುಸಿರು'[2]

ಎಂದು ಭೂಪತಿಯು ಕೇಳುವನು. ಅದಕ್ಕೆ ಪದ್ಮರಸರು ಉತ್ತರಕೊಡದ ಮುನ್ನ

ಅಱೆವರುಳರಾದ ವಾದಿಗಳೆಂದರೆಲೆ ಭೂಪ
ಕೆಱೆಯ ಮಾತೇಂ ಗರ್ದೆಗಳ್ ಬಿತ್ತಿಯಂಕುರಿಸಿ
ಮಿಱುಗುತವೆ ತೋಂಟದೊಳ್ ಕ್ರಮುಕಾದಿಗಳ ಸಸಿಗಳೆಸೆವುತವೆ
ತದ್ವಿಭವಮಂ
ಮಱೆಯೇಕೆ ನೀಂ ನೋಡಲೆಯ್ದುವುದೆ ತಳ್ವಿ[3]

೧, ಪ. ಪು. ಸಂ. ೬. ಪ. ೧೭. ೨. ಪ. ಪು. ಸಂ. ೬. ಪ. ೨೦.
೩. ,, ,, ೬. ಪ, ೨೧.

ಎಂದು ಪರವಾದಿಗಳೇ ಚುಚ್ಚುಮಾತನಾಡುವರು. ಆಗ ಪದ್ಮರಸರು ನಸುನಕ್ಕು

‘ ಈ ತೊವಲ ಬೊಂಬೆಗಳ್ ತಾನೆಯಾಡಲ್ ಸ್ವತಂತ್ರಮೇ[1]
ವಿಶ್ವಪತಿಯಾಡಿಸಿದೊಡಲ್ಲದೆ ಆಡರು. ’ ಎಂದು ನುಡಿವರು. ಭಾವನೆ,

ಆಲೋಚನೆಗಳೆರಡೂ ಹೆಪ್ಪುಗಟ್ಟಿ ನಿಂತಾಗ ಎಂತಹ ಉನ್ನತವಾದ ಕಾವ್ಯನಿರ್ಮಿತಿಯಾಗುತ್ತದೆಯೆಂಬುದಕ್ಕೆ ಉತ್ತಮನಿದರ್ಶನವಿದು.

‘ ಅವರ ವಿತ್ತವನವರ್ಗೊಪ್ಪಿಸಿದೆನು’[2] ಎಂದು ಪದ್ಮರಸರು ನುಡಿವಲ್ಲಿ ಅವರ ಭಾವ ಬತ್ತಲೆಯಾಗಿದೆ; ನಿಜದಲ್ಲಿ ನಿಂದಿದೆ. ವ್ಯಷ್ಟಿ ಸಮಷ್ಟಿಯಲ್ಲಿ ಬೆರೆತು ಹೋಗಿದೆ. ‘ ಮಾಡಿದೆನೆಂಬುದು ಮನದಲ್ಲಿ ಹೊಳೆಯದಂತೆ ’ ಇರುವರು. ಆದುದರಿಂದ ಅವರ ಸತ್ವಪರೀಕ್ಷೆಯೆಂದರೆ ವಿಶ್ವಶಕ್ತಿಯ ಪರೀಕ್ಷೆಯಿದ್ದಂತೆ. ಪದ್ಮರಸರ ಮನದಲ್ಲಿ ಭಕ್ತಿಯ ತರಂಗಗಳೆದ್ದಂತೆ ನಿಯೋಜಿತ ಸ್ಥಳದಲ್ಲಿ ಜಲತರಂಗಗಳೂ ಎದ್ದುವು. ಆಗ ಹೊರಹೊಮ್ಮಿದುವು ವ್ಯಷ್ಟಿಯ ಭಾವನೆಗಳಲ್ಲ; ಸಮಷ್ಟಿಯಭಾವನೆಗಳು. ಅಂತೆಯೇ ಅವುಗಳಿಗೆ ಅಷ್ಟು ಆವೇಶವಿದೆ; ಸೌಂದರ್ಯವಿದೆ. ಇವೆಲ್ಲ ಸತ್ಯವನ್ನು ಅರಸಿ ಹೊರಟಿರುವುದರಿಂದ ಅವುಗಳಿಗೆ ನಿತ್ಯನೂತನತೆಯಿದೆ.

ಎಲೆಲೆ ಮುಟ್ಟಿದ ಮೋಹದಿಂದೆ ಗಂಗಾದೇವಿ
ಪಲವು ಮೊಗವಾಂತು ಗುರುವರನನೀಕ್ಷಿಸಲೆಂದು
ತಲೆದೋಱಿದಳೊ ಎಂಬ ಭಾವದಿಂದಾ ತಾಣದೊಳಗಲ್ಲಿಗಲ್ಲಿಗ
ಮರ್ದು
ಜಲವುರ್ಕಿ ಭೂದೇವಿ ಮುಡಿದ ಬೆಳ್ದಾವರೆಯ
ರಲ ಪರಿಕರಮೊ ಎಂಬವೋಲ್ ಸೊಗಸುದೋಱಿಯು
ಜ್ವಲಿಸುವವಸರದೊಳಚ್ಚರಿಯೊಂದಿ ಘನಭೀತಿಯಾವರಿಸಿ
ಗಡಬಡಿಸುತೆ[3]

ಭಾವಶುದ್ಧಿಯಿಂದ ಪದ್ಮರಸರು ಮುಟ್ಟಿದ ತಾಣದಲ್ಲಿ ಅಲ್ಲಲ್ಲಿಗೆ ಜಲ ಪುಟನೆಗೆಯಿತಂತೆ ನಾನು ತಾನೆಂಬ ಭಾವನೆಯುನ್ನಳಿದು ನಿಜದನಿರಾಳದಲ್ಲಿ ನಿಂತ ಶರಣನ

---

೧. ಪ. ಪು. ಸಂ. ೬. ಪ. ೨೨. ೨. ಪ. ಪು. ಸಂ. ೬. ಪ. ೧೯.
೩. ,, ,, ೬. ಪ. ೫೨.

ಮನದಲ್ಲಿ ಭಕ್ತಿಯ ಲಹರಿಗಳಿದ್ದಂತೆ ಹೊರಗೆ ಗಂಗಾಲಹರಿಯೂ ಕಂಗೊಳಿಸಿದೆ. ಇದೇ ಶಿವಾದ್ವೈತ ಸಾಕಾರರೂಪು. ಈ ರೂಹನ್ನು ಕಂಡರಸುವಾಗ ಕಾವ್ಯವೂ ಗಂಗಾಲಹರಿಯಷ್ಟೇ ಸುಂದರವಾಗಿದೆ; ಸಹಜವಾಗಿದೆ. ಅಲ್ಲಲ್ಲಿ ಪುಟಿಯುತ್ತಿರುವ ನೀರಿನ ಸೆಲೆಗಳು ಕವಿಯ ಕಣ್ಣಿಗೆ ಗಂಗಾದೇವಿ ಹಲವು ಮೊಗವಾಂತು ಗುರುವರನನ್ನು ನಿರೀಕ್ಷಿಸಲೆಂದು ತಲೆದೋರಿದಂತೆ ಭಾಸವಾಗಿದೆ. ಶರಣವೃಂದದಲ್ಲೆಲ್ಲ ಆನಂದವೇ ಆನಂದ.

ಹರಿಸದಿಂ ತೂಗುತುಂ ಬಾಗುತುಂ ತೊನೆಯುತುಂ
ಭರವಸದಿ ನಲಿವುತುಂ‌ಮಲೆವುತುಂ ಕೆಲೆವುತಿಂ
ತಿರದುರ್ಬಿ ಬೊಬ್ಬಿಡುತೆ ತಮ್ಮ ಹರಿ ತಮ್ಮ ಕೊಳಲೆಂಬಂತದೇಂ
ನೆಗಳ್ದರೋ[1]

ಭಾವ ಭಾಷೆಗಳ ವಿದ್ಯುದಾಲಿಂಗನವೇ ಕಾವ್ಯ. ಭಾವಕುಣಿದಂತೆ ಇಲ್ಲಿ ಕಾವ್ಯವೂ ಕುಣಿದಾಡಿಲ್ಲವೇ ? ಶರಣರ ಆನಂದ ಅಲೆ ಅಲೆಯಾಗಿ ಬಂದು ಅವರು ಕುಕಿಲಿಱಿದು ಕುಣಿಕುಣಿದಾಡಿ ಶಿವಾನಂದಲೀಲೆಯಲ್ಲಿ ಮೂಡಿ ಮುಳುಗಾಡಿದುದನ್ನು ಪದ್ಮಣಾಂಕನು ಒಳ್ಳೇ ಸ್ಫುಟವಾಗುವಂತೆ, ಸಹಜವಾಗುವಂತೆ ಮೂಡಿಸಿದ್ದಾನೆ. ಅವರು ಭಕ್ತಿಯ ಭರದಲ್ಲಿ, ಆನಂದದ ಉದ್ರೇಕದಲ್ಲಿ ಕೆಱೆಯನ್ನೂ ಗುರುವನ್ನೂ ಬಣ್ಣಿಸುವಲ್ಲಿ[1] ಭಾವದ ಆವೇಶವಿದೆ; ಕಾವ್ಯದ ಸೌಂದರ್ಯವಿದೆ. ನೀರ್ವರಸಿದ ಗಂಧಶಾಲಿವನವನ್ನು ಕವಿ ಎಷ್ಟು ಸುಂದರವಾಗಿ ಚಿತ್ರಿಸಿರುವನೆಂಬುದನ್ನು ನೋಡಿರಿ.

ಆದಿ ಪುರುಷನ ದಿಟ್ಟಿಗೊನೆವೆಳಗ ಸೋಂಕಿನಿಂ
ಭೂದೇವತೆಗೆ ಸಾತ್ವಿಕಂ ತನುವಿನೊಳ್
ಸ್ವೇದಾಂಬುವುಣ್ಮಿ ಪುಳಕಂ ಪೊಣ್ಮಿ ರಾರಾಜಿಪಂದವೋ ಎಂಬ
ಪಾಂಗಿಂ

ಮೋದದಿಂ ನೀರ್ವರಸು ಶಾಲಿಗಳ ಸಸಿಗಳಿಂ
ದಾದವೊಪ್ಪಿದುವು ಗರ್ದೆಯಮಡಿಗಳ್[೨] . . . .

---

೧. ಪ. ಪು. ಸಂ. ೬. ಪ. ೮೨—೯೦.

೨. ,, ,, ೬. ಪ. ೭೩.

ಆದಿಪುರುಷನ ಕಡೆಗಣ್ಣ ನೋಟದ ಸೋಂಕಿನಿಂದ ಭೂದೇವತೆಯ ಸಾತ್ವಿಕ ತನುವಿನಲ್ಲಿ ಸ್ವೇದಾಂಬು ಹೊರಹೊಮ್ಮಿದಂತೆ ಜಲವೂ, ರೋಮಾಂಚನವೆದ್ದಂತೆ ಸಸಿಗಳೂ ಕಂಗೊಳಿಸಿದವಂತೆ. ಮಾನವರ ವ್ಯಾಪಾರವನ್ನು ಪ್ರಕೃತಿಪುರುಷರಲ್ಲಿ ಕಂಡು, ಅದನ್ನು ರೋಮಾಂಚನಕಾರಿಯಾಗುವಂತೆ ಕಾವ್ಯದಲ್ಲಿ ಚಿತ್ರಿಸಿದ್ದಾನೆ. 'ಮೃಡರೂಪಸನುತ್ಸವಕೆ ಜಯಲಕ್ಷ್ಮಿ ಪಿಡಿದ ಕನ್ನಡಿಯೆಂಬಂತೆ'[೧] ಆ ಕೆರೆ ಕಂಗೊಳಿಸಿದ ದೃಶ್ಯವನ್ನು ಕವಿ ಭಕ್ತಿಯ ಭರದಿಂದ ಉತ್ತಮ ಕಾವ್ಯವಾಗುವಂತೆ ಚಿತ್ರಿಸಿದ್ದಾನೆ. ಆ ದೃಶ್ಯ ಆಲೋಕಿಪರ ಕಣ್ಣ ಪುಣ್ಯದ ಸತ್ಫಲಗಳಂತೆ[೨] ಕಂಗೊಳಿಸಿದರೆ ಅದನ್ನು ಚಿತ್ರಿಸುವ ಕಾವ್ಯವೂ ಸಹೃದಯರಮನಸ್ಸಿನ ಪುಣ್ಯದ ಫಲವಾಗಿದೆ. ಈ ಸನ್ನಿವೇಶವನ್ನು ಪದ್ಮಣಾಂಕನು ಎಷ್ಟು ಭಾವಭರಿತನಾಗಿ ಚಿತ್ರಿಸಿರುವನೆಂಬುದನ್ನು ನೋಡಿದುದಾಯಿತು. ಭಕ್ತಿಯೇ ಪದ್ಮರಾಜಪುರಾಣದ ಮುಖ್ಯರಸ. ಆ ಭಕ್ತಿ ಬಂದಲ್ಲಿ, ಕಾವ್ಯ ತುಂಬಿಹರಿಯುವ ತುಂಗಭದ್ರೆಯಂತೆ ಪ್ರವಹಿಸುತ್ತದೆ. ಭಕ್ತಿಯ ಭಾವನೆಗಳು ತೆರೆ ತೆರೆಯಾಗಿ ಹರಿಯುತ್ತವೆ. ಸಹೃದಯರಿಗೆ ಪುಣ್ಯಸ್ನಾನ ಮಾಡಿಸಿ ದಿವ್ಯದರ್ಶನವನ್ನು ನೀಡುತ್ತವೆ.

ಎನ್ನ ಭವತಿಮಿರಭಾನುವೆ ಕಾಮಧೇನುವೇ
ಎನ್ನನಾಳ್ಗೊಂಡ ಗುರುವೇ ಶರಣಸುರತರುವೆ
ಎನ್ನ ಕಾರುಣ್ಯರಸವರ್ಷವೇ ದಿವ್ಯಪರುಷವೆ ಎನ್ನ ನಿಧಿಯೆ ಸುಧೆಯೇ
ಎನ್ನ ಚಿತ್ತಿನ ತಿರುಳೆ ಎನ್ನ ಪುಣ್ಯದ ಪುರುಳೆ
ಎನ್ನ ಮುಕ್ತಿಯ ನಿಲವೆ ಎನ್ನ ಭಕ್ತಿಯ ಬಲವೆ
ಎನ್ನ ನನ್ನಿಯೆ ಎನ್ನ ಚೆನ್ನಿಗನೆ ಎನ್ನ ಗತಿಯೇ ಮತಿಯೆ ಧೃತಿಯೆ ಪತಿಯೇ[೩]

ಪದ್ಮರಾಜಪುರಾಣದಲ್ಲಿ ನಿರ್ಭರವಾದ ಭಕ್ತಿ ಪುಟನೆಗೆದು ಬಂದ ಇಂತಹ ಪದ್ಯಗಳು ಹೇರಳವಾಗಿವೆ. ಅವುಗಳೊಡನೆ ದನಿಗೂಡಿಸಿ ಜೀವನವನ್ನು ಪಾವನಗೆಯ್ದುಕೊಳ್ಳದ ಮಾನವರಾರು ? ಆ ಪ್ರಾರ್ಥನೆಗಳಲ್ಲಿ ಸಮಸ್ತ ಮಾನವಕುಲದ ಪ್ರಾರ್ಥನೆಯಡಗಿದೆ. ಅಲ್ಲಿ ಉತ್ಕಟವಾದ ಕಾವ್ಯವೂ ಇದೆಯೆಂದು ಬೇರೆ ಹೇಳಬೇಕಿಲ್ಲ.

---

೧. ಪ. ಪು. ಸಂ. ೬. ಪ. ೪೬. ೨. ಪ. ಪು. ಸಂ. ೬. ಪ. ೪೭.
೩. ,, ,, ೭. ಪ. ೩೯.

ಪದ್ಮಣಾಂಕಕವಿಯ ಭಾವದ ಆವೇಶವನ್ನು ಪರಿಶೀಲಿಸಿದುದಾಯಿತು. ಇನ್ನು ಆತನು ತನ್ನ ಕಾವ್ಯದಲ್ಲಿ ಕಲ್ಪನೆಯ ಕುಸುರನ್ನು ಹೇಗೆ ಸೂರೆಗೆಯ್ದಿರುವನೆಂಬುದನ್ನು ವಿಚಾರಿಸಬಹುದು. ಕಲ್ಪನೆಯ ಕಣ್ಣಿಲ್ಲದೆ ಕವಿಯ ಕಾವ್ಯ ಮುನ್ನಡೆಯಲಾರದು. ವಾಸ್ತವಸೃಷ್ಟಿಗೆ ಕಾವ್ಯದೃಷ್ಟಿಯನ್ನು ನೀಡುವುದೇ ಕಲ್ಪನೆಯ ಕಾರ್ಯ. ಕಾವ್ಯವನ್ನೋದುವಾಗ ಜೀವನದ ಚಿತ್ರವನ್ನೇ ಕಂಡಂತಾದರೂ ಅಲ್ಲಿ ಒಂದು ಬಗೆಯ ವಿನೂತನವಾದ ಸೊಬಗಿರುವುದನ್ನು ಅನುಭವಿಸುತ್ತೇವೆ. ಅಂತೆಯೇ ವಾಸ್ತವಜಗತ್ತಿನಲ್ಲಿ ದಣಿದು ಕಾವ್ಯಸೃಷ್ಟಿಗೆ ಹೋಗಿ, ಅಲ್ಲಿ ವಿಹರಿಸಿ ವಿಶ್ರಮಿಸಿ ಆನಂದಪಡುತ್ತೇವೆ. ಇದು ಕವಿಯ ಕಲ್ಪನಾಶಕ್ತಿಯ ಕಾರ್ಯ. ಕವಿಯ ಭಾವನೆಗಳಿಗೆ ಪ್ರತಿಮೆಗಳನ್ನು ಒದಗಿಸುವ ಕಾರ್ಯವನ್ನು ಈ ಶಕ್ತಿಯೇ ಮಾಡುತ್ತದೆ. ಆದುದರಿಂದ ಕವಿಯ ಕಲ್ಪನೆಗೆ ವಿಶಿಷ್ಟವಾದ ಸ್ಥಾನವಿದೆ.

ಸಹೃದಯರನ್ನು ಬೆರಗುಗೊಳಿಸಿ ಕಾವ್ಯಕ್ಕೆ ಒಳ್ಳೇಮೆರುಗನ್ನೀಯುವ ಕಲ್ಪನಾವಿಲಾಸ ಪದ್ಮರಾಜಪುರಾಣದ ಕಾವ್ಯವಿಭಾಗದಲ್ಲೆಲ್ಲ ಕಂಗೊಳಿಸುತ್ತದೆ. ಸೂರ್ಯೋದಯ, ಸೂರ್ಯಾಸ್ತ, ಚಂದ್ರೋದಯ ಮುಂತಾದುವನ್ನು ಕವಿ ಬಹು ಸುಂದರವಾಗಿ ವರ್ಣಿಸುತ್ತಾನೆ. ಮಬ್ಬು ಹಬ್ಬಿ ಆಕಾಶದಲ್ಲಿ ನಕ್ಷತ್ರಗಳು ಮೂಡಿದ ವಿಷಯವನ್ನು ಪದ್ಮಣಾಂಕನು ಬಣ್ಣಿಸಿರುವ ರೀತಿಯನ್ನು ನೋಡಿದರೆ ಅವನ ಕಲ್ಪನಾಶಕ್ತಿಯ ಹಿರಿಮೆ ದ್ಯೋತಕವಾಗುವಂತಿದೆ.

ಇರದೆ ದಶದಿಕ್ಕನಾ ಕುಜನರಪಕೀರ್ತಿಲತೆ
ಕರಮುಡರ್ದವೋಲ್ ಮರ್ವು ಪರ್ವಿ ತೀಯೊಸಗೆಗಂ
ಡಿರುಳೆಂಬ ಪೆಣ್ಣ ಮೆಯ್ಯೊಳ್ ನೆಗೆದ ಬೆಮರ್ವನಿಗಳಂತೆ
ಭಗಣಂ ನೆಗೆದುವು[೧]

ನಕ್ಷತ್ರಗಳು ರಾತ್ರಿಯೆಂಬ ಹೆಣ್ಣ ಮೈಯಲ್ಲಿ ಒಗೆದ ಬೆವರ ಹನಿಗಳೆಂಬಲ್ಲಿ ಘನವಾದ ಕಲ್ಪನೆಯಿದೆ.

ಹೀಗೆ ಅಲ್ಲಲ್ಲಿ ಚಲ್ಲವರಿದ ಕಲ್ಪನೆಯ ವಿಲಾಸದಿಂದ ಕವಿ ಪದ್ಮಣಾಂಕನು ತೃಪ್ತಿಹೊಂದದೆ ಅದಕ್ಕೊಂದು ವಿಶಿಷ್ಟವಾದ ಸ್ಥಾನವನ್ನೇ ಕಲ್ಪಿಸಿಕೊಂಡಿರುವನು. ಅದೆಂದರೆ ವನವಿಹಾರದ ಸನ್ನಿವೇಶ. ನಮ್ಮ ಪ್ರಾಚೀನ ಕಾವ್ಯಗಳಲ್ಲಿ ವನವಿಹಾರದ ಸನ್ನಿವೇಶಗಳನ್ನು ತರುವುದೊಂದು ಸಂಪ್ರದಾಯವೇ ಆಗಿದೆ. ಕಥಾವಸ್ತುವಿನಲ್ಲಿ

೧. ಪ. ಪು ಸಂ. ೬. ಪ. ೯೭.

ಸಹಜವಾಗಿ ಬಾರದೇ ಇರುವ ವಿಷಯಗಳನ್ನೆಲ್ಲ ಅಲ್ಲಿ ವಿವರಿಸುತ್ತಿದ್ದರು. ಶೃಂಗಾರ ಹಾಸ್ಯ ಮೊದಲಾದ ರಸಗಳನ್ನು ಅಧಿಕ ಪ್ರಮಾಣದಲ್ಲಿ ಆ ಸನ್ನಿವೇಶದಲ್ಲಿ ಬಳಸುವುದುಂಟು.

ಪದ್ಮರಸರಿಗೇಕೆ ವನವಿಹಾರ ಎಂದು ಯಾರಾದರೂ ಕೇಳಬಹುದು. ಏಕೆಂದರೆ ಶರಣಸಂಪ್ರದಾಯದವರಿಗೆ ಇವು ಸಲ್ಲದ ವಿಷಯಗಳೆಂದು ತೋರುತ್ತದೆ. ಆದರೆ, ಪದ್ಮರಸರು ಇಲ್ಲಿ ಸಲ್ಲಿ, ಅಲ್ಲಿ ಸಲ್ಲುವ ಮಹಾನುಭಾವರು. ಪ್ರಪಂಚವನ್ನು ಹೇಯವೆಂದು ಬಗೆಯದೆ ಅದನ್ನು ಬಸವಾದಿಪ್ರಮಥರಂತೆ ಮುಕ್ತಿಗೆ ಸಾಧನವೆಂದು ಅವರು ತಿಳಿದಿದ್ದರು.ಲಿಂಗಪ್ರಸಾದವೆಂದು ಭಾವಿಸಿ ಇಹದ ತುಂಬುಜೀವನವನ್ನು ಜೀವಿಸುತ್ತಿದ್ದರು. ಈಸಬೇಕು; ಈಸಿ ಜಯಿಸಬೇಕು. ಎಂಬುದು ಅವರ ಜೀವನದ ಸೂತ್ರವಾಗಿದ್ದಿತು. ಅವರು ರಸಿಕ ಚಕ್ರೇಶ್ವರರು; ವಿನೋದಿಗಳು. ಇಂತಹ ಕಥಾನಾಯಕರಿಗಾಗಿ ಕವಿ ವನವಿಹಾರದ ದೃಶ್ಯವನ್ನು ಕಲ್ಪಿಸಿಕೊಂಡಿರುವುದು ಸಹಜವೆನಿಸಿದೆ. ಎಂಟು ಸಂಧಿಗಳವರೆಗೆ ನಿರರ್ಗಳವಾಗಿ ಓಡಿದ ಕಥೆಗೆ ಸ್ವಲ್ಪ ವಿರಾಮದೊರೆಯುತ್ತದೆ. ಕವಿಯ ಕಲ್ಪನಾಶಕ್ತಿ ಅಂಕುರಿಸಿ ಹೂತು ಮೃದುಮಧುರವಾದ ಫಲಗಳನ್ನು ಬಿಡುತ್ತದೆ.

ವಸಂತಮಾಸ ಕಣ್ದೆರೆಯಿತು. ಮಾಹೇಶ್ವರರು ಅದರ ಸೊಗಸನ್ನು ಈಕ್ಷಿಸಲು ಉದ್ಯುಕ್ತರಾದರು. ಅವರಳ್ತಿಯನ್ನು ಸಲಿಸಬೇಕೆಂದು ಪದ್ಮರಸರು ಅಂಗನೆ ತನೂಜ, ವಿಲಾಸಿನಿಯರು ಶಿಷ್ಯವ್ರಾತದೊಡನೆ ನಸುನಗುತೆ ವನವಿಹಾರಕ್ಕೆಂದು ಹೊರಟು ಅರವಟ್ಟಿಗೆಗಳನ್ನು ಕಂಡರು. ಅರವಟ್ಟಿಗೆಗಳೆಂದರೆ ಶೃಂಗಾರದ ತವರು; ಹಾಸ್ಯದ ಹೊನಲು. ಅಲ್ಲಿ:

ಚಲ್ಲಗಣ್ಣಡೆಯ ಕುಡಿವೆಳಗೆಂಬುರುಳ್ಗಣ್ಣಿ
ಯಲ್ಲಿ ಪಥಿಕಮನೋಮೃಗವನೆಯ್ದೆ ಬೀಱುತಂ
ದಿಲ್ಲಿ ತಡೆವರಿವಳ್ದಿರೇಂ ವ್ಯಾಧವಧುಗಳೋ ಮೇಣ್ ಪ್ರಪಾವಧು
ಗಳೋಯೆನೆ[1]

ಕವಿಯ ಕಲ್ಪನೆಯಲ್ಲಿ ಪ್ರಪಾವಧುಗಳು ಪಥಿಕಮನೋಮೃಗವನ್ನು ಬೆನ್ನಟ್ಟುವ ವ್ಯಾಧವಧುಗಳಾಗಿದ್ದಾರೆ. ನಮ್ಮ ಹಿಂದಿನ ಅರವಟ್ಟಿಗೆಗಳ ಕಲ್ಪನೆಯನ್ನು

---

(೧) ಪ. ಪು. ಸಂ. ೮. ಪ. ೯.

ಮನಸ್ಸಿನಲ್ಲಿ ತಂದುಕೊಂಡರೆ ಕವಿಯ ಈ ಕಲ್ಪನೆಗೆ ನಾವೆಲ್ಲ ತಲೆದೂಗಬೇಕಾಗುತ್ತದೆ.

ಭೋರನೊರ್ವಂ ಬಿಸಿಲಡಿಸಿ ಬಂದು ತಾರೆಲೆಲೆ
ನಾರಿವಾರಿಯನೆನೆಯವಳ್ ಬಱಿಯ ಸಸಿಗಲ್ಲ
ತೋರಕರಗವನಣಕದಿಂದೆ ತಂದಿತ್ತು ನೋಡುತಿರೆ ತನ್ನ ಮುಖೇಂದುವಾ
ಸಾರಕದು ಕಟ್ಟನೆ ಕರಗೆ ತಜ್ಜಲವನೀಂಟಿ
ಭೂರಿಶ್ರಮವನಲೆದನದನಱಿಯದಿವನಿದೇಂ
ದಾರಿಕಾರನೊ ಮಾಯಕಾರನೋ ಯೆಂದಗಿವಮುಗ್ಧೆ ನಗಿಸಿದಳೆಲ್ಲರಂ[1]

ಕವಿ ಆಗಿನ ರಸಿಕ ಜೀವನದ ಕಡೆಗೆ ಪೂರ್ಣಕಣ್ದೆರೆದಿದ್ದಾನೆ. ಅರವಟ್ಟಿಗೆಗಳಲ್ಲಿ ನಡೆಯುತ್ತಿದ್ದ ಶೃಂಗಾರ ಹಾಸ್ಯಮಯಜೀವನದ ಸಹಜಸುಂದರವಾದ ಚಿತ್ರವನ್ನು ಮೂಡಿಸುತ್ತದೆ ಆತನ ಪ್ರತಿಭೆ. ನೀರಡಿಸಿ ಬಂದವನು ನೀರು ಕೇಳಿದರೆ ಆಕೆ ಚಂದ್ರಕಾಂತ ಶಿಲೆಯ ಕೊಡವನ್ನು ತಂದಿಟ್ಟಳಂತೆ. ಆಕೆಯ ಮುಖಚಂದ್ರಮನ ಸಾನ್ನಿಧ್ಯದಿಂದ ಆ ಸಸಿಗಲ್ಲು ಕರಗಲು ಅದೇ ನೀರನ್ನು ಕುಡಿದು ಆಕೆಯನ್ನು ಬೆರಗುಗೊಳಿಸಿದನಂತೆ ಆತ. ಆ ಯುವತಿಯ ಮುಗ್ಧತೆಗೆ ಎಲ್ಲರೂ ನಕ್ಕರಂತೆ. ಲೋಕಾನುಭವದ ಸಂಗತಿಗಳೇನು, ಕವಿಸಮಯದ ಸಾಧನಸಂಪತ್ತಿಯೇನು ಸಮರ್ಥನಾದ ಕವಿಯು ಯಾವುದು ಬೇಕಾದುದನ್ನೂ ಸುಂದರವಾಗಿ ಬಳಸಬಲ್ಲ. ಕವಿಯ ಕಲ್ಪನೆ ಕವಿಸಮಯದ ಚರ್ವಿತಚರ್ವಣವಾದ ಅಂಶವನ್ನೇ ಉಪಯೋಗಿಸಿ ಎಂತಹ ಸುಂದರವಾದ ಕಾವ್ಯವನ್ನು ನಿರ್ಮಿಸಬಲ್ಲುದೆಂಬುದಕ್ಕೆ ಇದೊಂದು ಉತ್ತಮ ನಿದರ್ಶನ.

ಅರವಟ್ಟಿಗೆಯಿಂದ ಶಾಲಿವನಕ್ಕೆ ಆಗಮನ. ಸತ್ಕವಿಕಾವ್ಯದಂತೆ ಶಾಲಿವನ ರಸಭರಿತವಾಗಿದೆ. ಕವಿಯ ಕಲ್ಪನೆ, ಅಲ್ಲಿ ಗಿಳಿಸೋವ ಪಾಮರಿಯರನ್ನು ಬಣ್ಣಿಸುತ್ತಿರುವುದನ್ನು ನೋಡಿರಿ.

---

(೧) ಪ. ಪ. ಸ. ೮. ಪ. ೧೦.

ಪಾಲ್ದುಂಬಿ ಮೆಱೆವ ಕಮ್ಮಂಗಳವೆದೆನೆಯ
ನೊಲ್ದು ಪಿಡಿದಲ್ಲಿ ಪಾಮರಿ ಚರಿಸುತಾವನಕೆ
ನಾಲ್ದೆಸೆಯಿನೊಸೆದು ಬಂದೆಱಪ ಗಿಳಿವಳಗಮುಂ ಕೈಯ್ಯೆತ್ತಿ
ರಯ್ಯಮಾಗಿ
ಬಲ್ದನಿವೆರಸು ಸೋವೆಯುದನೊಂದು ಗಿಳಿಕಂಡೊ
ಱಲ್ದು ಬಂದಾ ಕಯ್ಯ ತೆನೆಗೆಱಗೆ ಮಾನಸವ
ರಲ್ದು ಕಳ್ಕನೆ ಪಿಡಿದು ಕುಟುಕನೀವುತೆ
ಬಿನದಿಸುತ್ತೆಸೆದಳತಿಹರ್ಷದಿಂ[೧]

ಕೈಯಲ್ಲಿ ತೆನೆ ಹಿಡಿದುಕೊಂಡು ಗಿಳಿಹಾರಿಸುತ್ತಿರುವ ಪಾಮರೆಯ ಕೈಯ ತೆನೆಗೆ ಒಂದು ಗಿಳಿ ಬಂದೆರಗಿತಂತೆ. ಮನವರಳಿ ಆಕೆ ಗಕ್ಕನೆ ಆ ಗಿಳಿಯನ್ನು ಹಿಡಿದು ಅದಕ್ಕೆ ಕುಟುಕನ್ನಿತ್ತಳಂತೆ. ವಾಸ್ತವಿಕ ಜೀವನದಲ್ಲಿ ಈ ಸಂಗತಿ ನಡೆಯಲಿ, ನಡೆಯದಿರಲಿ—ನಡೆಯುವುದು ಅಸಂಭವವೇನಲ್ಲ—ಕವಿಯ ಕಲ್ಪನಾ ಸೃಷ್ಟಿಯಲ್ಲಿ ಮಾತ್ರ ಇಂತಹ ಘಟನೆಗಳು ನಡೆದೇ ನಡೆಯುತ್ತವೆ. ಅಂತಹ ಚಿತ್ರದಲ್ಲಿ ನಾವು ಆನಂದ ಪಡುತ್ತೇವೆ. ನಿತ್ಯಜೀವನವನ್ನು ಬಿಟ್ಟು ಅದಕ್ಕಿಂತಲೂ ಸುಂದರವಾದ, ಅದರ ಆಧಾರದಿಂದಲೇ ನಿರ್ಮಿತವಾದ ಲೋಕಕ್ಕೆ ಹೋದಂತಾಗುತ್ತದೆ. ಸದ್ಯಃಪರನಿರ್ವೃತಿಯ ಅನುಭವವುಂಟಾಗುತ್ತದೆ. ಕಬ್ಬಿಗರಘಟಿತ ಘಟನಾನೂತನ ಬ್ರಹ್ಮರೆನ್ನುವುದು ಈ ಕಾರಣಕ್ಕಾಗಿ.

ವೇಶ್ಯಾವಾಟವೂ ಬಂದಿತು. ಮದನನ ಆಜ್ಞೆಗಳ್ಕದವರು ಮೋಹಿಗಳ ಕುಲಕೆ ಹೊರಗೆಂದು ನೂಪುರರವದಿಂದ ಅಂಗನೆಯರಲ್ಲಿ ನಾದವನ್ನು ಹೊಯ್ದರಂತೆ. ಓಂ ನಮೋ ರತೀಶಾಯ ಎಂದು ಮನ್ಮಥನ ಪೂಜೆ ನಡೆದಿರುವುದನ್ನು ಕವಿ ಬಹು ಸುಂದರವಾಗಿ ಚಿತ್ರಿಸಿದ್ದಾನೆ.

ಪೊಳೆವ ತಣ್ಗದಿರ್ಗಲ್ಲ ಪಸೆಯೊಳೇಳೆಲೆವಾಳೆ
ಯೆಳೆಯೆಲೆಯ ಪಚ್ಚಡಿಸಿ ಸಿರಿಪಚ್ಚಗರ್ಪುರದ
ಹಳಿಯನೊಡೆದಾ ಧೂಳಿಯಂ ಹರಹಿ ಮೇಲೆ ಪನಿನೀರ್ದಳಿದು
ತನ್ನಿನಿಯನಂ

(೧) ಪ. ಪು. ಸಂ. ೮. ಪ. ೧೬.

ಕಳವಳಿಪ ಕಾಂತೆಯ ಮಲಂಗಿಸಿ ಕಳೇವರಕೆ
ಬಳಿದು ಚಂದನವನಲರ್ವಿಜ್ಜಣದೆ ತಣ್ಣೆಲರ
ಸುಳಿವನೊದವಿಸುತೋಂ ನಮೋರತೀಶಾಯಯೆನುತಳವಳಿದುದಾಳೀ
ಜನಂ[೧]

ರಸಿಕನಾದ ಕವಿ ಪದ್ಮಣಾಂಕ ಈ ಚಿತ್ರವನ್ನು ಬಹಳ ಸುಂದರವಾಗಿ ಮೂಡಿಸಿದ್ದಾನೆ. ವಿರಹದ ಬೇಗೆಯಿಂದ ಬಳಲಿದವಳಿಗೆ ಮಾಡುವ ಶೈತ್ಯೋಪಚಾರವಿದು. ಚಂದ್ರಕಾಂತಶಿಲೆಯ ಹಾಸಿಗೆ, ಅದರ ಮೇಲೆ ಏಳು ಬಾಳೆಯ ಎಲೆಗಳು. ಪಚ್ಚಗಪ್ಪುರದ ಧೂಳಿಯನ್ನು ಹರಹಿ ತನಿನೀರ್ದಳಿದು, ಆಕೆಯ ಮೈಗೆ ಶ್ರೀಗಂಧವನ್ನು ಬಳಿದು ಹೂವಿನ ಬೀಸಣಿಕೆಯಿಂದ ಗಾಳಿ ಹಾಕಿ ಓಂ ನಮೋರತೀಶಾಯ ಎಂದು ಸೇವಕಿಯರು ಅಳವಳಿದರಂತೆ. ಪದ್ಮಣಾಂಕನ ಕಲ್ಪನೆ, ಹಾಸ್ಯದ ದೃಷ್ಟಿ, ಸೃಷ್ಟಿ ಇವೆಲ್ಲ ನಿಜವಾಗಿಯೂ ಸಂಸ್ತವನೀಯವಾಗಿವೆ.

ವಾಣಿಯೋ ಮೇಣಿವಳ್ ಲಕ್ಷ್ಮಿಯೋ ಎಂಬ ಸಂಶಯವನ್ನು ಹುಟ್ಟಿಸುವ ಇನ್ನೊರ್ವಳ ಚಿತ್ರವನ್ನು ಕವಿಯ ಕಲ್ಪನೆ ಎಷ್ಟು ಸುಂದರವಾಗಿ ಕಂಡರಿಸುತ್ತಿದೆಯೆಂಬುದನ್ನು ಕೆಳಗೆ ಕಾಣಬಹುದು.

ವೀಣೆಯಂ ಬಲ್ತೊಲೆಯ ಮೇಲೌಂಕಿಕೊಂಡೊಲ್ದು
ಮಾಣದೋದುವ ಗಿಳಿಯ ಮುಂಗಯ್ಯೊಳಿಟ್ಟು ಕ
ಟ್ಟಾಣಿ ಮುತ್ತಿನ ಕಂಠಮಾಲೆಯಂ ಕಟ್ಟಿ ಮಲಯಜ
ವನೊಲವಿಂ ಲೇಪಿಸಿ
ಜಾಣಮರೆ ಪೊಂಬಟ್ಟೆಯುಟ್ಟು ನೀಲಾಬ್ಜಮಂ
ಪಾಣಿಯೊಳ್ ಪಿಡಿದು ಪದಪಿಂದೊರ್ವಳೊಪ್ಪಿದಳ್
ವಾಣಿಯೋ ಮೇಣಿವಳ್ ಲಕ್ಷ್ಮಿಯೋಯೆಂಬ ಸಂಶಯ
ರಸಮನೊಸೆದೆಸಗುತೆ[೨]

ಪದ್ಮಣಾಂಕನ ಕಲ್ಪನೆಗೆ ಅರ್ಥವ್ಯಕ್ತಿತ್ವದ ಗುಣವಿದೆ. ಓದುತ್ತ ಹೋದಂತೆ ಅದರ ಮಾಧುರ್ಯ ಮನವನ್ನು ವ್ಯಾಪಿಸಿ ಅಮಿತವಾದ ಆನಂದವನ್ನು ನೀಡುತ್ತದೆ. ಇಂತಹ ಪ್ರಸಾದಗುಣವಿದೆಯಾದುದರಿಂದಲೇ ಆ ಕಲ್ಪನೆ ಕಾವ್ಯದಲ್ಲಿ ಪ್ರಸನ್ನತೆವಡೆದಿದೆ.

---

(೧) ಪ. ಪು. ಸಂ. ೮. ಪ. ೯೨. (೨) ಪ. ಪು. ಸಂ. ೮. ಪ. ೯೬.

ಜೀವಂಬಡೆದ ಪೂಗಣೆಗಳಂತಿರ್ದ ಗಣಿಕೆಯರ ಚಿತ್ರವನ್ನು ಕವಿಪದ್ಮಣಾಂಕನು ತನ್ನ ಕಲ್ಪನೆಯ ಬಲದಿಂದ ಬಹು ಸರಸವಾಗಿ ಸುಂದರವಾಗಿ ರೇಖಿಸಿದ್ದಾನೆ. ಆತನ ಕಲ್ಪನೆಯ ವೈಭವವನ್ನು ನೋಡಬೇಕಿಲ್ಲಿ.

ಇಷ್ಟು ರಸವತ್ತಾದ ಕಾವ್ಯಭಾಗವನ್ನು ಶೃಂಗಾರಪೂರ್ಣವಾದ ಈ ವೇಶ್ಯಾವಾಟದ ಸನ್ನಿವೇಶವನ್ನು ಕಥಾನಾಯಕರಾದ ಕೆರೆಯಪದ್ಮರಸರ ವ್ಯಕ್ತಿತ್ವಕ್ಕೆ ಒಂದಿನಿತೂ ಚ್ಯುತಿಬಾರದಂತೆ ಇಷ್ಟೇ ಅಲ್ಲ, ಆ ವ್ಯಕ್ತಿತ್ವದ ಘನತೆಗೆ ಕಳೆಯೇರುವಂತೆ ಚಿತ್ರಿಸುವಲ್ಲಿ ಕವಿಪದ್ಮಣಾಂಕನ ಔಚಿತ್ಯಜ್ಞಾನದ ಅರಿವಾಗುತ್ತದೆ.

ಈ ಶಾರ್ಪಣಂಗೆಯ್ಯುವುದಕ್ಕಾಗಿಯೇ ವನವಿಹಾರವನ್ನು[೧] ಕೈಕೊಂಡರೆಂಬುದನ್ನೂ ಪದ್ಮರಸರು ಸರಸವಿನೋದಿಗಳೂ ರಸಿಕಚಕ್ರೇಶ್ವರರೂ[೨] ಆಗಿದ್ದರೆಂಬುದನ್ನೂ[೩] ವನವಿಹಾರವಾರಂಭವಾಗುವಮೊದಲೇ ಕವಿ ಸ್ಪಷ್ಟಪಡಿಸಿದ್ದಾನೆ. ಪುರವಿಲಾಸವನ್ನು ನೋಡಿ ಬಂದ ಪದ್ಮರಸರು ಜಿತಪುಷ್ಪಚಾಪರೆಂದು[೪] ಕೊನೆಗೂ ಸ್ಪಷ್ಟಪಡಿಸುತ್ತಾನೆ. ಇಷ್ಟು ಪ್ರಜ್ಞೆ ಇದೆ ಕವಿಗೆ. ಪುರವಿಲಾಸವನ್ನು ನೋಡಿ ಬಂದವರು, ವಿಲಾಸಿ ಪದ್ಮರಸರಲ್ಲ. ಅವರನ್ನು ನೋಡಲು ಬಂದ ಪಾಣ್ಬೆಯರ ಮನದಲ್ಲಿ ಸಹ ಸದ್ಭಾವನೆ ಮೂಡುತ್ತದೆ.[೪] 'ಉತ್ತಮರ ಸಂಗವಘಮರ್ಗಮಾಕಾಲದಘಮಂ ಕೆಡಿಸದೆ'[೫] 'ಪರಮಪುರುಷರ ದರ್ಶನದೊಳಿರ್ದನಿತುಪೊಳ್ತು ದುರ್ವ್ಯಸನಗುಣವೊಗೆವುದೇ'[೬]

'ಉತ್ತಮ ಪುರುಷರ ತೇಜೋಮಧ್ಯದಲ್ಲಿ ಕೃಷ್ಣಾಚರಣಮೇಂ ಘಟಿಪುದೇ'[೭]

ಪದ್ಮಣಾಂಕನು ಈ ಸನ್ನಿವೇಶದಲ್ಲಿ ನುಡಿದ ಅರ್ಥಾಂತರನ್ಯಾಸಗಳು ಅರ್ಥಪೂರ್ಣವಾಗಿ ಕಥಾನಾಯಕರ ವ್ಯಕ್ತಿತ್ವದ ಘನತೆಯನ್ನು ಎತ್ತಿ ತೋರಿಸುತ್ತವೆ. ಕಲ್ಪನೆಯ ವಿಲಾಸದಲ್ಲಿ, ವರ್ಣನೆಯ ವೈಭವದಲ್ಲಿ ಕವಿ ಕಥಾನಾಯಕರ ವ್ಯಕ್ತಿತ್ವಕ್ಕೆ ಭಂಗತಾರದೆ ಅವರ ಘನತೆಯನ್ನು ಪ್ರಕಟಿಸಲು ಪೋಷಕವಾಗುವಂತೆ ತನ್ನ ಕಲ್ಪನಾ ಶಕ್ತಿಯನ್ನು ಬಳಸಿರುವುದು ಅತ್ಯಂತ ಪ್ರಶಂಸನೀಯವಾಗಿದೆ. ಕಲ್ಪನೆಯ

---

(೧) ಪ. ಪು. ಸಂ. ೮. ಪ. ೫. (೨) ಪ. ಪು. ಸಂ. ೮. ಪ. ೩೮.

(೩) ,, ,, ೮. ಪ. ೧೦೦. (೪) ,, ,, ೮. ಪ. ೬೯,೭೦,೭೧,೭೨.

(೫) ,, ,, ೮. ಪ. ೬೯. (೬) ,, ,, ೮. ಪ. ೭೧.

(೭) ,, ,, ೮. ಪ. ೭೨.

ಕುದುರೆ ಎತ್ತ ಬೇಕತ್ತ ಜಿಗಿದು ಕವಿ ನಿರ್ಮಿಸಿದ ಸುಂದರವಾದ ತೋಟವನ್ನು ತೊತ್ತಳದುಳಿಯದೆ ಅದು ನಿಯಂತ್ರಣದಲ್ಲಿ ಉಳಿದು ಆ ತೋಟದ ಕೃಷಿಗೆ ನೆರವನ್ನು ನೀಡುತ್ತಿದೆ. ಇದೇ ಒಂದು ವೈಶಿಷ್ಟ್ಯ.

ಕಲ್ಪನಾಶಕ್ತಿಯ ಬಲದಿಂದ ಕವಿ ವಸ್ತುವಿನ ವಿಷಯಗಳ ಹಾಗೂ ಭಾವದ ಸೌಂದರ್ಯದರ್ಶನ ಮಾಡಿಸಿದಂತೆ ಅವುಗಳ ವಾಸ್ತವವರ್ಣನೆಯಲ್ಲಿಯೂ ಕವಿ ಕಾವ್ಯವನ್ನು ಹುಟ್ಟಿಸಬಲ್ಲ; ಉತ್ತಮ ಕಾವ್ಯವನ್ನೂ ನಿರ್ಮಿಸಿ ಸಹೃದಯರ ಮನ ವನ್ನು ಸೆಳೆಯಬಲ್ಲ. ಒಂದು ರೀತಿಯಿಂದ ಮೊದಲನೆಯದಕ್ಕಿಂತಲೂ ಎರಡನೆಯ ಕಾವ್ಯಮಾರ್ಗ ಕಠಿನವಾದುದೆಂದೇ ಹೇಳಬೇಕಾಗುತ್ತದೆ. ಮೊದಲನೆಯ ವಿಧಾನ ದಲ್ಲಿ ಕವಿ ತನ್ನ ಕಲ್ಪನೆಯ ಬಲದಿಂದ ಅಲಂಕಾರಗಳನ್ನೋ, ಗುಣಗಳನ್ನೋ, ರೀತಿ ಯನ್ನೋ, ಪ್ರತಿಮೆಗಳನ್ನೋ ನಿರ್ಮಿಸಿಕೊಂಡು ತನ್ಮೂಲಕ ಭಾವಗಳಿಗೆ ಅಭಿ ವ್ಯಕ್ತಸ್ವರೂಪಕೊಡುವುದರಿಂದ ರಸಾನುಭೂತಿಗೆ ಹೆಚ್ಚು ಸಹಾಯವಾಗುತ್ತದೆ. ಆದರೆ ಎರಡನೆಯ ವಿಧಾನದಲ್ಲಿ ಕವಿ ವಸ್ತುಸ್ವಭಾವಾದಿಗಳನ್ನು ಇದ್ದಕ್ಕಿದ್ದಂತೆಯೇ ವರ್ಣಿಸಿ ರಸನಿಷ್ಪತ್ತಿಯಾಗುವಂತೆ ಮಾಡಬೇಕಾಗುತ್ತದೆ. ಈ ಎರಡನೆಯ ವಿಧಾನ ದಲ್ಲಿಯೂ ಪದ್ಮಣಾಂಕಕವಿಯು ಕೈಪಳಗಿದೆಯೆಂದು ಹೇಳಬಹುದು.

ಯೌವನದ ವಾಸ್ತವ ಚಿತ್ರವನ್ನು ನೋಡಬಹುದು.

.......ಕೋಮಲಾಂಗದ ನಳನಳಿಕೆ ಲಲ್ಲೆ
ವಾತಿನ ಸೊಗಸು ನೋಟದಿಂಪು ನಗೆಮೊಗದ ರಸ
ವಾತುರಿಪ ಮನದ ಬರ್ದುಗಳವನ ಪೊಸ ಜವ್ವನಮನೇಂ
ಸೂಚಿಸಿದುವೋ(೧)

ಯೌವನವನ್ನು ವರ್ಣಿಸಲು ಕವಿ ನಳನಳಿಸುವ ಕೋಮಲಾಂಗ, ಲಲ್ಲೆ ವಾತು, ಇನಿದಾದ ನೋಟ, ನಗೆಮೊಗ, ಮನದ ಆತುರ ಇಷ್ಟನ್ನಾಯ್ದುಕೊಂಡು ಅದರ ಪೂರ್ಣ ಚಿತ್ರವನ್ನು ನಿರ್ಮಿಸುತ್ತಾನೆ. ನಿರ್ಮಿಸುತ್ತಾನೆನ್ನುವುದಕ್ಕಿಂತಲೂ ಯೌವನದ ಪೂರ್ಣ ಚಿತ್ರವನ್ನು ಊಹಿಸಿಕೊಳ್ಳಲು ಅನುವು ಮಾಡಿಕೊಡುತ್ತಾನೆ.

ಮಧುವಿನ ಜಯ ಮಾಗಿಯ ಅಪಜಯಗಳನ್ನು ಕವಿ ಹೀಗೆ ಮೂಡಿಸಿದ್ದಾನೆ.

---

(೧) ಪ. ಪು. ಸಂ. ೩, ಪ. ೨.

........ಮೆಲ್ಲ ಮೆಲ್ಲನೆ ಹಿಮಂ ಸರಿಯೆ ಪೊಸವಿಸಿಲ್
ಪೊರೆಯೇಱೆ ಮೆಯ್ಯಬಿಱುಬುಗಳಡಂಗಿ ಲಸತ್ ಪ್ರಸನ್ನತೆಯ
ನಪ್ಪುಗೆಯ್ಯೆ
ಕೊರಗಿದಂಬುಜವನಂ ಸೊಂಪೇಱೆ ಬಲ್ಗಾಳಿ
ಸರಿದು ತಂಬೆಲರ ಕಾಲಾಟವಗ್ಗಳಿಸೆ ನಸು
ಮೊರೆಯುತುಂ ತುಂಬಿ ಸುಳಿದಾಡೆ ಮೆಱೆದುದು ಮಾಗಿಯಪ ಜಯಂ
ಮಧುವಿನ ಜಯಂ(೧)

ಚಳಿಗಾಲ ಸಾವಕಾಶವಾಗಿ ಹಿಂದೆ ಸರಿದಂತೆ ಬಿಸಿಲಿಗೆ ಕಳೆಯೇರುತ್ತದೆ. ಮೈಯ ಬಿರುಕುಗಳಡಗುತ್ತವೆ. ಬಿರುಗಾಳಿ ನಿಂತು ತಂಗಾಳಿ ಸೂಸತೊಡಗುತ್ತದೆ. ಇಷ್ಟು ಲಕ್ಷಣಗಳನ್ನು ನಾವು ಪ್ರಕೃತಿಯಲ್ಲಿ ಕಂಡರೆ ಸಾಕು, ಮಾಗಿ ಹಿಂದೆ ಸರಿದು ಮಧುಮಾಸ ಬಂದಿತೆಂದು ಒಮ್ಮೆಲೆ ಊಹಿಸಬಹುದು. ಸ್ವಭಾವೋಕ್ತಿಯ ವರ್ಣನೆಯಲ್ಲಿ ಕವಿ ವಸ್ತುವಿನ ಸಾರವನ್ನೇ ಹೀರಲು ಸಮರ್ಥನಾಗಿರಬೇಕಾಗುತ್ತದೆ.

ವೇಶ್ಯಾವಾಟದ ಚಿತ್ರವಂತೂ ಕವಿಯು ವಸ್ತುಸ್ವಭಾವಗಳನ್ನು ಇದ್ದಕ್ಕಿದ್ದಂತೆಯೇ ವರ್ಣಿಸಿ ಒಳ್ಳೇ ಸ್ಫುಟವಾದ ಚಿತ್ರಗಳನ್ನು ಮೂಡಿಸಬಲ್ಲನೆಂಬುದಕ್ಕೆ ಅತ್ಯುತ್ತಮ ನಿದರ್ಶನವಾಗಿದೆ.

ಪುರುಡಿನ ಗರುಡಿ ಸೊರ್ಕಿನಿರ್ಕೆ ಮುಳಿಸಿನಬೆಳಸು
ವೆರಗಿನ ವಿಪಂಚಿ ಪಡಪಿನ ಪಂಜರಂ ಬಲ್ ಚ
ದುರ ಚಾವಡಿ ಚಥಾಳದೋಳಿ ಬೇಟದ ಧಾಟಿ ಸಿಂಗರದ ರಂಗಭೂಮಿ
ಅರಲಂಬನಂಗಡಿ ರತಿಯ ರಾಗದೋವರಿ ಪ
ದಿರ ಪಾಳೆಯಂ ಮೋಕಿನಾಕೆ ಗಾಡಿಯಗಡಿ ಕು
ಪರಿಯುಪರಿಯೆನಿಪುದಂಗಜನ ಘಾರಾಘಾರಿ ರಾಜಿಸುವ
ಸೂಳೆಗೇರಿ(೨)

ಇವೆಲ್ಲ ಗುಣಗಳಿಗೆ ವೇಶ್ಯಾವಾಟವಲ್ಲದೆ ಬೇರೆ ಯಾವುದು ಆಗರವಾಗಬಲ್ಲುದು ?

---

(೧) ಪ. ಪು. ಸಂ. ೮. ಪ. ೨.   (೨) ಪ. ಪು. ಸಂ. ೮. ಪ. ೮೬.

ಅಂತೂ ವಸ್ತು,ವಿಷಯಗಳ ಆಂತರ್ಯವನ್ನೋ ಬಾಹ್ಯವನ್ನೋ ವರ್ಣಿಸುವಲ್ಲಿ, ಚಿತ್ರಿಸುವಲ್ಲಿ ಪದ್ಮಣಾಂಕನ ಶಕ್ತಿ ಹಿರಿದಾಗಿದೆಯೆಂದು ಇದುವರೆಗಣ ವಿವೇಚನೆಯಿಂದ ವಿದಿತವಾಗುತ್ತದೆ. ಇದರ ರಹಸ್ಯವೇನು ? ಪದ್ಮಣಾಂಕನು ಸೂಕ್ಷ್ಮ ನಿರೀಕ್ಷಣ ಶಕ್ತಿಯನ್ನು ಪಡೆದ ಕವಿಯಾಗಿರುವನು. ಲೋಕಶಾಸ್ತ್ರ ಕಾವ್ಯಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸುವ ಶಕ್ತಿ ಕವಿಗೆ ಅವಶ್ಯವಾಗಿಬೇಕು. ದರ್ಶನಶಕ್ತಿಯೆಂದು ಕರೆವುದು ಇಂತಹ ಪ್ರತಿಭಾಪೂರ್ಣ ನಿರೀಕ್ಷಣೆಯನ್ನೇ. ಸಾಮಾನ್ಯದೃಷ್ಟಿಗೂ ಕವಿದರ್ಶನಕ್ಕೂ ಇರುವ ಅಂತರವೇ ಇಲ್ಲಿದೆ. ಸಾಮಾನ್ಯರ ದೃಷ್ಟಿಗೆ ವಸ್ತುವಿನಲ್ಲಿ ಹುದುಗಿರುವ ಸೌಂದರ್ಯದರ್ಶನವಾಗದೆ ಅವರ ಕಣ್ಣು ಮುಂದೆ ಅದು ಸುಳಿದು ಹೋದರೂ ಅದರ ಕಡೆಗೆ ಅವರ ದೃಷ್ಟಿ ಬೀಳುವುದಿಲ್ಲ. ಕವಿ ತನ್ನ ದರ್ಶನ ಶಕ್ತಿಯ ಮೂಲಕ ಅದರ ಸೌಂದರ್ಯಸಾರವನ್ನೋ, ವೈಶಿಷ್ಟ್ಯವನ್ನೋ ಗ್ರಹಿಸಿ ನಿರೂಪಿಸಿದರೆ ಅದಕ್ಕೆ ಸಾಮಾನ್ಯರು, ಸಹೃದಯರು ಹೌದೆನ್ನುತ್ತಾರೆ; ತಲೆದೂಗುತ್ತಾರೆ. ಈ ದರ್ಶನ ಪ್ರದರ್ಶನ ಶಕ್ತಿಗಳೇ ಕವಿಯನ್ನು ಸಾಮಾನ್ಯಸಹೃದಯನಿಂದ ಬೇರ್ಪಡಿಸುವ ಸಾಧನಸಂಪತ್ತಿ. ಪದ್ಮಣಾಂಕನಲ್ಲಿ ಇಂತಹ ದರ್ಶನ ಶಕ್ತಿ, ಸೂಕ್ಷ್ಮ ನಿರೀಕ್ಷಣಶಕ್ತಿ ವಿಪುಲವಾಗಿ ಕಂಡುಬರುತ್ತಿವೆ. ಅಂತೆಯೇ ಆತನನ್ನು ದಾರ್ಶನಿಕ ಕವಿ, ಶಕ್ತಿಯುತನಾದ ಸತ್ಕವಿ ಎಂದು ಕರೆದಿರುವುದು.

ಪದ್ಮಣಾಂಕನ ಲೋಕಾನುಭವವೂ ಹಿರಿದಾದುದು. ಆ ಅನುಭವ ಕಾವ್ಯವಾಗಿ ಹರಿದು ಕಾವ್ಯಕ್ಕೊಂದು ಹೆಚ್ಚಿನ ಮೆರುಗನ್ನಿತ್ತಿದೆ. ಕೆರೆಗಾಗಿ ತೆಗೆದಿರಿಸಿದ ಹಣವನ್ನು ಪದ್ಮರಸರು ವಿಟಜಂಗಮರಿಗೆ ಕೊಟ್ಟರೆಂದು ಗಜಬಜಿಸುತ್ತಿರುವ ಕರಣಿಕರ ದೃಶ್ಯವನ್ನು ಲೋಕಾನುಭವದಿಂದಲೇ ಎತ್ತಿ ಇಟ್ಟಂತಿದೆ.

ಅರೆಬರಿಂತೆಸಗಲಕ್ಕುಮೆಯೆಂಬರಲ್ಲಿ ಮ
ತ್ತರೆಬರೆಸಗಿದೊಡಮೆಸಗುಗೆ ಪಾತ್ರಮೇಯೆಂಬ
ರರೆಬರಾದೊಡಮದೇಂ ತನ್ನೊಡವೆಯೇಯೆಂಬರರೆಬರದು ತಾನಾದೊಡಂ
ಸೂಳೆಗಂಗಷ್ಟಾಂಗದಿಂ ನಮಿಸಿ ಕೊಡುವುದಿದು
ಪಾಳಿಯೇ ತನಗೆಂಬರರೆಬರಿತ್ತುಂ ಕಾರ್ಯ
ದಾಳಾಪಮಾಗೊಂದನುಸಿರ್ದುರ್ ನೀಂ ಕೆಱೆಗಟ್ಟಿಸೆಂದು ಕಳುಪದೆ [ಸುಮ್ಮನೆ
ಕಾಲಮಲ್ತೆಂದಾತನಂ ತಗುಳ್ದು ತಾಂ ಜಂಗ
ಮಾಳಿ ಬಂದಿರ್ಪುದೆನೆ ಪರಿದು ಪೋಪುದು ಮಂತ್ರಿ
ಮೌಳಿಮಣಿಗಳ ಗುಣವೆಯೆಂ(೧) . . . .

(೧) ಪ. ಪು. ಸಂ. ೫. ಪ. ೪೮, ೪೯.

VIJAYA EVENING COLLEGE LIBRARY
BANGALORE-4.
3179

ಕರಣಿಕರಲ್ಲಿ ಒಬ್ಬೊಬ್ಬರಾಡುವ ಮಾತನ್ನೂ ನಿತ್ಯಜೀವನದಿಂದ ಎತ್ತಿ ಇಟ್ಟಂತಿದೆ. ಯಾವುದೊಂದು ಘಟನೆ ಸಮಾಜದಲ್ಲಿ ನಡೆದಾಗ ಹಲವರು ಕೂಡಿ ವಿಮರ್ಶಿನಡಿಸಿದಾಗ ಇಂತಹ ಮಾತುಗಳು ಅವರ ಬಾಯಿಂದ ಹೊರಡುವುದನ್ನು ನಾವೆಲ್ಲ ಕೇಳಿರಲಿಕ್ಕೆ ಸಾಕು. ಸೂಕ್ಷ್ಮ ನಿರೀಕ್ಷಣ ಶಕ್ತಿಯನ್ನೂ ಲೋಕಾನುಭವ ವನ್ನೂ ಪಡೆದ ಕವಿ ನಿತ್ಯಜೀವನದಿಂದಲೇ ಆ ದೃಶ್ಯವನ್ನೆತ್ತಿ ಸುಂದರವಾದ ಕಾವ್ಯವನ್ನು ನಿರ್ಮಿಸಿರುವನು.

ನರಪತಿಗೆ ಈ ವಿಷಯವನ್ನು ಆ ಕರಣಿಕರು ತಿಳಿಸುತ್ತಿರುವ ದೃಶ್ಯವನ್ನು ನೋಡಿರಿ.

ಎಂದುವುಂ ಮಾಳ್ಪ ಕರ್ಮಾಳಿಗಳ
ನಂತಂತೆ ನೆಗಳ್ದು ಬಳಿಕೋರೋರ್ವರಾಗಿ ಭೂ
ಕಾಂತನೋಲಗಕೆ ಗಮನಿಸಿ ತನ್ನೃಪಾಲನಂ ಕಂಡು ಕುಳ್ಳಿರ್ದು ಮುದದಿಂ
ಒಂದಿನಿಸುಪೊಳ್ತನಂತಿಂತು ಕಳೆದವನಿಪಂ
ಗೆಂದರ್ ದುರಾತ್ಮರಿಲೆ ಭೂಪಾಲ(೧) . . . .

ಯಾವುದಾದರೊಂದು ವಿಷಯವನ್ನು ನಿರೂಪಿಸಲಿಕ್ಕೆ ಹೋದವರು ನೇರವಾಗಿ ವಿಷಯದ ಪ್ರಸ್ತಾಪವನ್ನೇ ಎತ್ತಿದರೆ ಅದು ಅಷ್ಟು ಪರಿಣಾಮಕಾರಿಯಾಗುವುದಿಲ್ಲ. ಧೂರ್ತರಾದ ಕರಣಿಕರು ಮಾನವಸ್ವಭಾವದ ಈ ಗುಣವನ್ನರಿತು ಅರಸನಲ್ಲಿಗೆ ಹೋಗಿ ಕೆಲಕಾಲ ಅದನ್ನೂ ಇದನ್ನೂ ಮಾತನಾಡಿ ಆ ಮೇಲೆ ಮುಖ್ಯವಿಷಯವ ನ್ನರುಹಿರುವರು. ಇಲ್ಲಿದೆ ಪದ್ಮಣಾಂಕನ ಜಾಣಿಗೆ. ಪ್ರಪಂಚದ ರೀತಿನೀತಿಗಳನ್ನು ಅರಿತು ಅನುಭವಿಸಿದ ಕವಿಗೆ ಮಾತ್ರ ಇದು ಸಾಧ್ಯ.

ಇಂತಹದೇ ಇನ್ನೊಂದು ದೃಶ್ಯ. ಪಿಸುಣಿಗರ ಆರೋಪಕ್ಕೆ ದೊರೆ ಕಿವಿ ಗೊಟ್ಟು ಕೆರೆತೋರಿಸಬೇಕೆಂದು ಆಗ್ರಹಪಡಿಸಿದಾಗ ಭಕ್ತರ ಮನಸ್ಥಿತಿಯನ್ನು ಕವಿ ಬಹಳ ಸುಂದರವಾಗಿ ಚಿತ್ರಿಸಿದ್ದಾನೆ.

---

(೧) ಪ. ಪು. ಸಂ. ೬. ಪ. ೫, ೬.

ಏನಪ್ಪದೋ ಶಿವಶಿವಾ ಪದ್ಮಣಾಂಕಂಗ
ನೂನಕರುಣಾಳುಗಿಂದಿನದಿನದಪಾಯವೆನು
ತಾ ನಿರೋಧದೆ ಮಱುಗುವರ್ ಕೆಲರ್[1]... ...

ಈ ಪಿಸುಣರೇನನಾದೊಡವೊರೆಯೆ ಕೇಳ್ವೆಮ್ಮ
ಭೂಪನೆಂತಪ್ಪಜ್ಞನೋ ತಾನದೇನಱಿಯನೇ[2]... ..

ಇದು ದೇಸಿ. ಲೋಕಾನುಭವದಿಂದ ಬಂದ ಮಾತುಗಳು. ಈ ಕಾವ್ಯಕ್ಕೆ ಈ ದೇಸಿಯಿಂದ ಹೆಚ್ಚಿನ ಮೆರುಗು ಬಂದಿದೆಯೆಂಬುದನ್ನು ಬೇರೆ ಹೇಳುವ ಅವಶ್ಯಕತೆಯೇ ಇಲ್ಲ.

ಪದ್ಮಣಾಂಕನು ಪ್ರತಿಭಾವಂತನಾದ ಕವಿಯೆಂಬುದು ಇದುವರೆಗಣ ವಿವೇಚನೆಯಿಂದ ಸ್ಪಷ್ಟವಾಗುವುದು. ಭಾವನೆ, ಕಲ್ಪನೆ, ಸೂಕ್ಷ್ಮನಿರೀಕ್ಷಣೆ ಲೋಕಾನುಭವಗಳಿಂದ ಸ್ಫುರಣೆಗೊಂಡ ಈ ಕವಿಯ ಕಾವ್ಯ ರಸಭರಿತವಾಗಿದೆ. ರಸಭರಿತವಾದ ಆತನ ಕಾವ್ಯದಲ್ಲಿ ಧ್ವನಿಯ ಸ್ಥಾನವೇನೆಂಬುದನ್ನು ವಿವೇಚಿಸಬಹುದು. ಏಕೆಂದರೆ ಧ್ವನಿಯೇ ಕಾವ್ಯದ ಆತ್ಮವೆಂದು ಹೇಳುವರು. ಧ್ವನಿರೂಪವಾಗಿ ಹೇಳಿದ ಕಾವ್ಯ ರಸಭರಿತವಾಗುತ್ತದೆ. ಆದುದರಿಂದ ಪದ್ಮಣಾಂಕನ ಕಾವ್ಯಶೈಲಿಯಲ್ಲಿ ಧ್ವನಿಯ ಸ್ಥಾನವಾವುದೆಂಬದನ್ನು ಇಲ್ಲಿ ವಿಚಾರಿಸಬಹುದು.

ಕಾವ್ಯಾರಂಭದಲ್ಲಿ ಪದ್ಮಣಾಂಕನು 'ಮಹಾಕವಿ ಶಂಭುವಂ ಬಣ್ಣಿಪೆನೆಳ್ತಿಯಿಂ'[3] ಎಂದಿರುವನು. ಶಂಭು ಮಹಾಕವಿಯೆಂಬಲ್ಲಿ ಧ್ವನಿಯಡಗಿದೆ. ಕವಿಸೃಷ್ಟಿಯ ಘನತೆ, ಇಂತಹ ಸೃಷ್ಟಿಯ ಕರ್ತನು ಶಂಭುವಿಗೆ ಸರಿಸಮಾನನೆಂಬ ವಿಚಾರ, ... ಇದೆಲ್ಲ ಅರ್ಥ ಆಳವಾಗಿ ವಿಚಾರಿಸಿದಷ್ಟೂ ಹೊರಹೊಮ್ಮುತ್ತದೆ; ಅಮಿತವಾದ ಆನಂದವಾಗುತ್ತದೆ.

ಕವಿಗಳಲ್ಲಿ ಕೆಲವರು ದುರ್ಜನಂಗೆ ವಂದಿಪೆವೆಂಬರು. ಪದ್ಮಣಾಂಕನು ಈ ಸಂದರ್ಭದಲ್ಲಿ 'ಅವಂ ತನ್ನಿಂದೆ ತಾನೆ ವಂದಿಪ'[4]ನೆಂಬನು. ಇಲ್ಲಿ ಸಭಿಕರು ಸತ್ಕವಿಯನ್ನು ಮೆಚ್ಚಿ ಹೊಗಳಿದರೆ ಅವನು ಲಜ್ಜೆಯಿಂದ ತಲೆವಾಗುವನೆಂಬರ್ಥ ಧ್ವನಿತವಾಗುತ್ತದೆ.

---

(೧) ಪ. ಪು. ಸಂ. ೬. ಪ. ೩೧. (೨) ಪ. ಪು. ಸಂ. ೬. ಪ. ೭.
(೩) ,, ,, ೧. ಪ. ೫೦. (೪) ,, ,, ೧. ಪ. ೩೬.

ನೀನಾಡಿಸುವ ಹಾಹೆಯಾನಾದ ಕತದಿಂ,[೧] 'ಈ ತೊವಲಬೊಂಬೆಗಳ್ ತಾವೆ ಯಾಡಲ್ ಸ್ವತಂತ್ರವೆ?'[೨] ಈ ಉಕ್ತಿಗಳಲ್ಲಿ ಬಂದಿರುವ ಹಾಹೆ, ತೊವಲಬೊಂಬೆ ಎಂಬ ಪದಗಳಲ್ಲಿ ಹುದುಗಿರುವ ಧ್ವನಿ ಮಾನವನ ಅಸಹಾಯಕತೆಯನ್ನು ಸೂಚಿಸುತ್ತದೆ.

'ಈ ಕೃತಿಯಂ ಶಿವಾರ್ಪಿತವನೆಸಗುವ... ...'[೩]
ಪದ್ಮರಸದೇಶಿಕಶಿರೋಮಣಿಗೆ ಮಾಱಿದೆನೆನ್ನಮತಿಯಂ[೪]

ಮತಿಯನ್ನು ಶಿವನಿಗೆ ಮಾರಿಕೊಳ್ಳುವಲ್ಲಿಯೂ ಕೃತಿಯನ್ನು ಶಿವಾರ್ಪಿತಮಾಡುವಲ್ಲಿಯೂ ಕವಿಯ ನಿಷ್ಠೆ, ಅರ್ಪಿತ ಭಾವನೆ ಇವು ಧ್ವನಿತವಾಗುತ್ತವೆ. ಅರ್ಪಿತ ಈ ಪದವು ವೀರಶೈವದಲ್ಲಿ ಒಂದು ಪರಿಭಾಷೆಯಾಗಿದ್ದು ಅದನ್ನು ಇಲ್ಲಿ ಬಳಸಿರುವುದರಿಂದ ಅದಕ್ಕೆ ಹೆಚ್ಚಿನ ಅರ್ಥ ಪ್ರಾಪ್ತವಾಗಿದೆ.

'ವಸಂತಮಾಸ ಕಣ್ದೆಱೆಯಿತು.[೫] ತೆಂಬೆಲರ ಕಾಲಾಟವಗ್ಗಳಿಸಿತು.[೬] ಎಂದು ಹೇಳುವಲ್ಲಿ ಕಣ್ದೆಱೆ, ಕಾಲಾಟ ಎಂಬ ಪದಗಳಲ್ಲಿ ಧ್ವನಿ ವಿಶೇಷವಿರುವುದನ್ನು ಯಾರಾದರೂ ಅರಿಯಬಹುದಾಗಿದೆ. ಮಾಗಿ ಸರಿದು ವಸಂತ ಬಂದರೆ ಕವಿಗೆ ಹೊಸ ಋತು ಕಣ್ದೆಱೆದಂತಾಗಿದೆ. ಇದು ವರೆಗೆ ಇದ್ದ ಹಿಮದ ಕಾಟ ಹಿಮ್ಮೆಟ್ಟಿ ಸುಖಿಜನಕೆ ಸಂತಸದ ಕಾಲ ಬಂದಿತೆಂಬುದು ಇಲ್ಲಿ ಧ್ವನಿತವಾಗಿದೆ. 'ಕಾಲಾಟ' ಎಂಬ ಪದವು ತೆಂಗಾಳಿ ಸಾವಧಾನವಾಗಿ ಬೀಸುತ್ತಿರುವುದನ್ನು ನಮ್ಮ ಅವಗಾಹನೆಗೆ ತರುತ್ತದೆ. ಬಿರುಗಾಳಿ ನಿಂತು ತೆಂಗಾಳಿ ಬೀಸತೊಡಗಿದಾಗ ಕವಿ ಅದರ ಕಾಲಾಟವಗ್ಗಳಿಸಿತು ಎಂದು ಸುಂದರವಾಗಿ ನಿರೂಪಿಸಿದ್ದಾನೆ.

ಪ್ರಪಾಶಾಲೆಯೊಳಗಿನ ಹೆಣ್ಣುಮಗಳು 'ಚೆಲ್ಲ ಗಣ್‌ಗಡೆಯ ಕುಡಿವೆಳಗೆಂಬುರುಳ್ಗಣ್ಣಿಯಲ್ಲಿ ಪಥಿಕ'[೭]ರನ್ನು ಬಿಗಿವಡೆದಳಂತೆ; ವೇಶ್ಯಾವಾಟದಲ್ಲಿ ಓರ್ವಳು 'ಬಟ್ಟೆಗರನ್ನು ಬಗಸೆಗಣ್ಣಿನಿಂದ ಕರೆದಳಂತೆ'[೮] ಆ ಗಣಿಕೆಯರು 'ಜೀವಂ ಬಡೆದ ಪೂಗಣೆಗಳಂತೆ'[೯] ಇದ್ದರಂತೆ. ಇಲ್ಲಿ ಹುದುಗಿರುವ ಧ್ವನಿಯನ್ನು ವಿವರಿಸುವ ಆವಶ್ಯಕತೆಯಿಲ್ಲ. ಸಹೃದಯರು ಅನುಭವಿಸಿ ಅರಿಯಬಹುದಾಗಿದೆ.

---

೧. ಪ. ಪು. ಸಂ. ೧. ಪ. ೩.   ೨. ಪ. ಪು. ಸಂ. ೬. ಪ. ೨೨.
೩. ,, ,, ೧. ಪ. ೩೧.   ೪. ,, ,, ೧. ಪ. ೩೧.
೫. ,, ,, ೮. ಪ. ೩.   ೬. ,, ,, ೧. ಪ. ೨.
೭. ,, ,, ೮. ಪ. ೯.   ೮. ,, ,, ೮. ಪ. ೧೧.
೯. ,, ,, ೮. ಪ. ೯೯.

ಕೊನೆಗೆ 'ಓಂ ನಮೋರತೀಶಾಯ' ಎಂದು ಪರಿಚಾರಿಕೆಯರು ವಿರಹದಲ್ಲಿ ಬೆಂದು ಬೇಕರಿವೋಗುವವಳಿಗೆ ಶೈತ್ಯೋಪಚಾರ ಮಾಡಿದರೆಂದು ಹೇಳುವಾಗ ವಿಶ್ವದಷ್ಟು ಅರ್ಥ ಅಲ್ಲಿ ಹುದುಗಿದೆಯೆಂದು ನಮ್ಮ ಅನುಭವಕ್ಕೆ ಬರುತ್ತದೆ. ಆಳೀಜನದ ಭಕ್ತಿ, ವಿರಹಿಣಿಯ ಪ್ರಾಣ ಹೋಗುವ ಸ್ಥಿತಿ ಇನೆಲ್ಲ ಅರ್ಥಗಳು ಅಲೆಅಲೆಯಾಗಿ ಬಂದು ಸಹೃದಯರಿಗೆ ಅಪಾರವಾದ ಆನಂದವನ್ನು ನೀಡುತ್ತವೆ.

ಇಷ್ಟು ಉದಾಹರಣೆಗಳು ಪದ್ಮಣಾಂಕನ ಧ್ವನಿಕಾವ್ಯದ ಕಲ್ಪನೆಯನ್ನು ಸಹಜವಾಗಿಯೇ ಮೂಡಬಲ್ಲವು. ಆತನ ಕಾವ್ಯ ಧ್ವನಿಪೂರಿತವಾಗಿರುವುದರಿಂದಲೇ ರಸಭರಿತವಾಗಿದೆ.

ಪದ್ಮಣಾಂಕನು ಶಕ್ತಿಯುತನಾದ ಸತ್ಕವಿಯೆಂಬುದಕ್ಕೆ ಬೇರೆ ಆಧಾರಗಳು ಬೇಕೆ ?

ಶಾಸ್ತ್ರಕೋವಿದ ಪದ್ಮಣಾಂಕ

ಪದ್ಮಣಾಂಕನು ಶಾಸ್ತ್ರ ಶ್ರೀರೋಹಣ ಗಿರಿಯನ್ನೇರಿ ಅಲ್ಲಿಯೂ ಸಿದ್ಧಪದದಲ್ಲಿ ನಿಂದವನು. 'ಆರಾರೇರರ್ ಶಾಸ್ತ್ರ ಶ್ರೀರೋಹಣ ಗಿರಿಯಂ'[೧] ಎಂದು ಷಡಕ್ಷರ ದೇವನು ಹೇಳುವಂತೆ ಯಾರು ಬೇಕಾದವರೂ ಏರಬಹುದಾದ ಶಾಸ್ತ್ರಶ್ರೀರೋಹಣ ಗಿರಿಯಲ್ಲ ಪದ್ಮಣಾಂಕನೇರಿದುದು. ಅನೇಕರಿಗೆ ಅಸಾಧ್ಯವಾದ ಶಾಸ್ತ್ರಜ್ಞಾನ ಆತನಿಗಿದ್ದಿತು. ಪದ್ಮರಾಜಪುರಾಣವು ಬಹುಶ್ರುತರನ್ನು ಬೆರಗುಗೊಳಿಸುವಂತಹ ಶಾಸ್ತ್ರಜ್ಞಾನವನ್ನು ಪ್ರಕಟಪಡಿಸುತ್ತದೆ. ಹೀಗೆ ಕವಿಯು ತನಗಿರುವ ಅಪಾರ ಶಾಸ್ತ್ರಜ್ಞಾನವನ್ನು ವ್ಯಕ್ತಗೊಳಿಸಿದ್ದರೂ ಎಲ್ಲೆಲ್ಲಿಯೂ ಕಾವ್ಯಕ್ಕೂ ಕಲೆಗೂ ತಡೆ ಯುಂಟಾಗದಂತೆ, ಬಹುಜಾಣ್ಮೆಯಿಂದ ಅದನ್ನು ನಿರೂಪಿಸಿದ್ದಾನೆ.

ಕಾವ್ಯ ನಿರ್ಮಿತಿಗೆ ಬೀಜದಂತಿರುವ ಶಕ್ತಿಯ ಜೊತೆಗೆ ಶಾಸ್ತ್ರಪಂಚಯವೂ ಕವಿಗೆ ಅವಶ್ಯವೆಂಬುದನ್ನು ಭಾರತೀಯ ಆಲಂಕಾರಿಕರು ಸ್ಪಷ್ಟವಾಗಿ ಸಾರಿದ್ದಾರೆ.

ಶಕ್ತಿರ್ನಿಪುಣತಾ ಲೋಕ ಶಾಸ್ತ್ರಕಾವ್ಯಾದ್ಯವೇಕ್ಷಣಾತ್
ಕಾವ್ಯಜ್ಞ ಶಿಕ್ಷಯಾಭ್ಯಾಸ ಇತಿ ಹೇತುಸ್ತದುದ್ಭವೇ[೨]

ಇಲ್ಲಿ ಶಕ್ತಿ, ಲೋಕ, ಶಾಸ್ತ್ರ ಕಾವ್ಯಗಳ ನಿರೀಕ್ಷಣೆಯಿಂದ ಬಂದ ನೈಪುಣ್ಯತೆ, ಸತತಾಭ್ಯಾಸ ಇವೆಲ್ಲ ಒಟ್ಟುಗೂಡಿದರೆ ಮಾತ್ರ ಘನವಾದ ಕಾವ್ಯದ ನಿರ್ಮಿತಿ ಯೆಂಬುದನ್ನು ಮಮ್ಮಟನು ಸ್ಪಷ್ಟಪಡಿಸಿದ್ದಾನೆ. ಶಕ್ತಿಯಿಂದ ಅಂದರೆ ಪ್ರತಿಭೆ ಯಿಂದ ಕಾವ್ಯ ಹುಟ್ಟಿದರೂ ಅದು ಅಷ್ಟುದೊಡ್ಡ ಕಾವ್ಯವಾಗಲಾರದೆಂದು ಈ ಆಲಂಕಾರಿಕರ ಮತ. ಕಾವ್ಯಕ್ಕೂ ಶಾಸ್ತ್ರಕ್ಕೂ ಆವ ಸಂಬಂಧ ಎಂಬ ಪ್ರಶ್ನೆ ಇಲ್ಲಿ ಸಹಜವಾಗಿ ಉದ್ಭವಿಸುತ್ತದೆ. ಕವಿಗೆ ಅನುಭವ ಅವಶ್ಯ. ಈ ಅನುಭವವನ್ನು ಆತನು ನಾನಾಮುಖವಾಗಿ ಸಂಗ್ರಹಿಸಿದಷ್ಟೂ ನೆಟ್ಟಗೆ. ಲೋಕ, ಶಾಸ್ತ್ರ ಕಾವ್ಯಾದಿ ಗಳಿಂದ ಆತನು ಅನುಭವವನ್ನೂ ಜ್ಞಾನವನ್ನೂ ಸಂಪಾದಿಸಿದರೆ ಕಾವ್ಯಕ್ಕೆ ಆಳ, ಅಗಲ, ಎತ್ತರಗಳು ಪ್ರಾಪ್ತವಾಗುತ್ತವೆ. ಆಳ, ಅಗಲ, ಎತ್ತರಗಳಿಲ್ಲದ ಕಾವ್ಯ

---

೧. ರಾ. ಕೇ. ವಿ. ಆ. ೧. ಪ. ೨೯.   ೨. ಕಾ. ಪ್ರ. ಉಲ್ಲಾಸ.

ಘನವಾದ ಕಾವ್ಯವೇ ಅಲ್ಲ. ಆದುದರಿಂದಲೇ ಶಕ್ತಿ, ಶಾಸ್ತ್ರಪರಿಚಯ, ಲೋಕಾನುಭವ, ಸತತಾಭ್ಯಾಸ ಇವೆಲ್ಲ ಒಟ್ಟುಗೂಡಿಯೇ ಕಾವ್ಯಕ್ಕೆ ಕಾರಣವಾಗುತ್ತವೆಂಬ ಅಭಿಪ್ರಾಯವನ್ನು ಭಾರತೀಯ ಆಲಂಕಾರಿಕರು ವ್ಯಕ್ತಪಡಿಸಿರುವರು. ಭಾವಕ್ಕೂ ರಸಕ್ಕೂ ಅವರು ಕಾವ್ಯದಲ್ಲಿ ಪ್ರಥಮಸ್ಥಾನವನ್ನು ಪ್ರಧಾನಸ್ಥಾನವನ್ನು ಕೊಟ್ಟಿರುವರೆಂಬುದನ್ನು ಬೇರೆ ಹೇಳುವ ಕಾರಣವೇಇಲ್ಲ. ಶಕ್ತಿಯೇ ಕಾವ್ಯದಬೀಜವೆಂದಿರುವರು. ಬೀಜವಿಲ್ಲದೆ ವೃಕ್ಷವೆಲ್ಲಿ? ಪದ್ಮಣಾಂಕನಲ್ಲಿ ಬೀಜರೂಪದ ಈ ಶಕ್ತಿ ಅತ್ಯಂತ ಪ್ರಫುಲ್ಲಿತವಾದ ಸ್ಥಿತಿಯಲ್ಲಿರುವುದನ್ನು ನೋಡಲಾಗಿದೆ. ಆತನಲ್ಲಿ ಶಾಸ್ತ್ರಜ್ಞಾನವೂ ಅತ್ಯುನ್ನತವಾದ ಮಟ್ಟದಲ್ಲಿದೆ. ಪದ್ಮಣಾಂಕನು ಪ್ರತಿಭಾವಂತನಾದ ಕವಿ; ಘನವಾದ ಪಂಡಿತ; ಶಾಸ್ತ್ರಕೋವಿದ.

ಶಕ್ತಿ ಎಂದರೆ ಪ್ರತಿಭೆ ಜನ್ಮತಃ ಪ್ರಾಪ್ತವಾಗುವುದೆಂದು ಹೇಳುವರು. ನವಕವಿತಾ ಚಿಂತಾರತ್ನವು ಮಾರಾರಿಯ ಕೃಪೆಯಿಲ್ಲದಂಗೆ ದೊರೆಯದೆಂದೂ[೧] ಅದು 'ಬಹುತರ ಕೋಟಿ ಜನ್ಮಗಳೊಳಾರ್ಜಿಸಿದುತ್ತಮ ಪುಣ್ಯದೇಳ್ಗೆಯಿಂದ'[೨] ಪ್ರಾಪ್ತವಾಗುವುದೆಂದೂ ಷಡಕ್ಷರದೇವನ ಅಭಿಮತ. ಪದ್ಮಣಾಂಕನಿಗೆ ಪ್ರತಿಭೆ ನಿಸರ್ಗಸುಭಗವಾಗಿ ಬಂದಂತೆ ಪಾಂಡಿತ್ಯವೂ ಆನುವಂಶಿಕವಾಗಿಯೇ ಬಂದಂತಿದೆ. ಆಚಾರ್ಯಕುಲ ಶಿರೋರತ್ನರೆನಿಸಿದ ಈ ಮನೆತನದವರು ನಿಜವಾಗಿಯೂ ವೇದಾಗಮ ಶಾಸ್ತ್ರಜ್ಞಾನದಲ್ಲಿ ಆಚಾರ್ಯಪುರುಷರೇ ಎನಿಸಿದ್ದರು. ಸಕಲೇಶಮಾದರಸರ ಮಕ್ಕಳಾದ ಮಾಯಿದೇವಾರ್ಯರು ಪದಾರ್ಥತ್ರಯಜ್ಞಾನಸಂಕಾಶರೆನಿಸಿದ್ದರು.[೩] ಕೆರೆಯ ಪದ್ಮರಸರಂತೂ ಶಿವಾದ್ವೈತಸಾಕಾರಸಿದ್ಧಾಂತ ಪ್ರತಿಷ್ಠಾಪನಾಚಾರ್ಯರು; ತ್ರಿಭುವನ ತಾತನಂತಹ ವಾದಿಯನ್ನು ಪರಾಭವಗೊಳಿಸಿದವರು; ಸಾನಂದ ಚರಿತೆ ದೀಕ್ಷಾಬೋಧೆಗಳಂತಹ ಗ್ರಂಥಗಳನ್ನು ರಚಿಸಿದವರು. ಅವರ ಮಕ್ಕಳಾದ ಕುಮಾರ ಪದ್ಮರಸ 'ಜ್ಞಾನರತ್ನಾಕರ'[೪]ರೆನಿಸಿರುವರು. ಕೆರೆಯ ಪದ್ಮರಸರ ಸಮ್ಮುಖದಲ್ಲಿ ತ್ರಿಭುವನತಾತನೊಡನೆ ವಾದವನ್ನು ಹೂಡಿದವರೂ ಅವನನ್ನು ಪರಾಭವಗೊಳಿಸಿದವರೂ ಕುಮಾರಪದ್ಮರಸರೇ. ದೇವಾರ್ಯರು 'ಪ್ರಣತಬುಧಸ್ತೋಮ, ಗುಣಾಭಿರಾಮರೆನಿಸಿ'[೫]ದ್ದರೆ ಗೌರಾರ್ಯರು 'ಶಿವಾಗಮಾಭರಣ'[೬]ರೆನಿಸಿರುವರು. ಗೌರಾರ್ಯರ ಮಕ್ಕಳಾದ ವೀರಣಾರ್ಯರು 'ಸಮಸ್ತಾಗಮಾಚಾರ್ಯ'[೭]ರಾಗಿರು

---

೧. ರಾ. ಕೇ. ಪಿ. ಆ. ೧. ಪ. ೨೯.
೨. ಕ. ಶಂ. ವಿ. ಆ. ೫. ಪ.
೩. ಪ. ಪು. ಸಂ, ೧. ಪ. ೧೪.
೪. ಪ. ಪು. ಸಂ. ೧. ಪ. ೨೦.
೫. ,, ,, ೧. ಪ. ೨೨.
೬. ,, ಸಂ. ೧. ಪ. ೨೪.
೭. ,, ,, ೧. ಪ. ೨೭.

ವರು. ಈ ವೀರಣಾರ್ಯರ ಮಗ ಪದ್ಮರಾಜಪುರಾಣದ ಕರ್ತೃ ಕವಿ ಪದ್ಮಣಾಂಕ. ಅಖಂಡವಾಗಿ ೮-೧೦ ತಲೆಮಾರುಗಳ ವರೆಗೆ ಪಾಂಡಿತ್ಯ ಅವರ ಮನೆತನವನ್ನು ಬೆನ್ನುಹತ್ತಿ ಬಂದಂತಿದೆ. ಶಾಸ್ತ್ರಾಧ್ಯಯನ ಅವರ ನಿತ್ಯ ಜೀವನದ ವ್ಯವಸಾಯ ವಾಗಿದೆ; ವ್ಯಾಸಂಗವಾಗಿದೆ. ಮಾನವಜೀವನದ ವಿಕಸನಕಾರ್ಯದಲ್ಲಿ ಪರಂಪರೆಗೆ ಮಹತ್ವದ ಸ್ಥಾನವಿದೆ. ಹೀಗೆ ಶಾಸ್ತ್ರಪರಂಪರೆಯುಳ್ಳ ಪಂಡಿತರ, ಆಚಾರ್ಯಶಿರೋ ಮಣಿಗಳ ಮನೆತನದಲ್ಲಿ ಜನಿಸಿದ ಪದ್ಮಣಾಂಕನು ಶಾಸ್ತ್ರಸಂಪನ್ನನಾಗಿರುವುದು ತೀರ ಸಹಜವಾಗಿದೆ. ಶಾಸ್ತ್ರವೆಂದರೆ ಅವನಿಗೆ ಉಸುರಾಡಿಸುವಷ್ಟು ಸಹಜವಾಗಿದೆ.

ವೇದ, ಆಗಮ, ಶಾಸ್ತ್ರ ಮತ್ತು ಸಿದ್ಧಾಂತ ಇವುಗಳ ವಿಷಯವಾಗಿ ಪದ್ಮಣಾಂಕನಿಗಿದ್ದ ಆದರ ಮತ್ತು ಅಭಿರುಚಿ ಪದ್ಮರಾಜಪುರಾಣದ ಆರಂಭದಲ್ಲಿಯೇ ವ್ಯಕ್ತವಾಗಿದೆ.

ಬಸವಾದಿಪ್ರಮಥರಿಗೆ ವಂದನೆಗಳನ್ನರ್ಪಿಸಿದಮೇಲೆ ಕೆಳಗೆ ಕಾಣಿಸಿದ ಆಚಾರ್ಯಶ್ರೇಷ್ಠರಿಗೆ ನಮಸ್ಕಾರ ಮಾಡಿರುವರು.

ಶ್ರೀ ವಿಶುದ್ಧ ಪ್ರಕರಣಂಗಳನೆಸಗಿ ವೇದ
ಶೈವತಂತ್ರಾವಳಿಗೆ ಭಾಷ್ಯಮಂ ದೀಪಿಕೆಯು
ನಾ ವೃತ್ತಿಯಂ ವ್ಯಾಖ್ಯೆಯಂ ಬರೆದ ಬೋಧಾಯನಾಯನುರು
ಶಂಕರಾರ್ಯಂ
ವ್ಯೋ ವ್ಯೋ ಹರದತ್ತರ್ ತ್ರಿಲೋಚನಾಘೋರ ಶಿವ
ದೇವಗುಣ ನಿಲಯ ಸರ್ವಾತ್ಮ ಶಂಭುಗಳಾನ
ತಾವನರ್ ಭೂತಿಕಂಠಾದಿ ಪೂರ್ವಾಚಾರ್ಯರೀವುದೆಮಗಮಲ
ಮತಿಯಂ

ವೀರಮಾಹೇಶ್ವರಾಚಾರಸಂಗ್ರಹ ಶಾಸ್ತ್ರ
ಕಾರನೆನಿಸಿದ ನೀಲಕಂಠ ನಾಗಾರ್ಯಂಗೆ
ಸಾರತರ ಬಸವರಾಜೀಯಮಂ ನೆಗಳ್ದಪಾಲ್ಕುರಿಕೆ
ಸೋಮೇಶ್ವರಂಗೆ
ಚಾರುಸಾರೋದ್ಧಾರಮಂ ಪಡೆದ ಲಕ್ಷ್ಮೀಧ
ರಾರಾಧ್ಯಪತಿಗುರು ಶಿವಜ್ಞಾನದೀಪಿಕೆಯ
ನೋರಂತೆ ರಚಿಸಿದನುಪಮ ಮಲ್ಲಿಕಾರ್ಜುನಾಚಾರ್ಯಂಗೆ
ವಂದಿಸಿದಪೆಂ

ಖಂಡಿತಪ್ರತಿಪಕ್ಷ ಶಿವಲೆಂಕಮಂಚಣ್ಣ
ಪಂಡಿತರ ಭರ್ಗವೇತಂಡಭೂತೋರ್ಧ್ವಾರ್ಕ್ಷ
ಪಂಡಿತರ ಪರವಾದಿತುಂಡಪದ್ಮಾಬ್ಜಪ್ರಚಂಡವಿಭವ ಶ್ರೀಪತಿ
ಪಂಡಿತರ ಹರನ ದೋರ್ದಂಡಬಲರೆನಿಪಖಿಲ
ಪಂಡಿತರ ವಿಮಲ ಚರಣಾಬ್ಜಂಗಳೆಮ್ಮ ಹೃತ್
ಪುಂಡರೀಕಾಕರದೊಳಿರ್ಕೆ ಸತ್ಕವಿಹಂಸಮಂಡಲಂ ವಿಹರಿಪಂತೆ[೧]

ಇಲ್ಲಿ ಉಕ್ತರಾದ ಪೂರ್ವಾಚಾರ್ಯರೂ ನೂತನಾಚಾರ್ಯರೂ ಶೈವ, ವೀರಶೈವ ಸಿದ್ಧಾಂತಗಳಲ್ಲಿ ಪ್ರಖ್ಯಾತರಾದವರು. ಅವರು ಬರೆದ ಭಾಷೆಗಳೂ ದೀಪಿಕೆಗಳೂ ವ್ಯಾಖ್ಯಾನಗಳೂ ಸುಪ್ರಸಿದ್ಧವಾಗಿವೆ. ಶೈವ, ವೀರಶೈವ ಶಾಸ್ತ್ರಗಳಲ್ಲಿ ನಿಪುಣನಾದ ಪದ್ಮಣಾಂಕನಿಗೆ ಈ ಆಚಾರ್ಯರ ಬಗೆಗೆ ಗೌರವವಿರುವುದು ಸ್ವಾಭಾವಿಕವಾಗಿದೆ. ಸತ್ಕವಿಹಂಸಮಂಡಲವು ವಿಹರಿಸುವಂತೆ ಅವರ ಪಾದಕಮಲಗಳು ತನ್ನ ಹೃದಯದಲ್ಲಿ ನೆಲಸಲೆಂದು ಪ್ರಾರ್ಥಿಸಿದ್ದಾನೆ.

ವೇದಾಗಮಪುರಾಣಗಳಲ್ಲಿ ಬಲ್ಲಿದನಾದ ಪದ್ಮಣಾಂಕನು ವ್ಯಾಕರಣ ಅಲಂಕಾರ ಶಾಸ್ತ್ರಗಳಲ್ಲಿ ಪಾರಂಗತನಾಗಿದ ನೆಂದು ಬೇರೆ ಹೇಳಬೇಕೆ ? ಏಕೆಂದರೆ ಸಾಹಿತ್ಯಕ್ಕೆ ಆ ಶಾಸ್ತ್ರಗಳು ತೀರ ನಿಕಟವರ್ತಿಗಳು. ಆದುದರಿಂದ ಕವಿಯಾದ ಪದ್ಮಣಾಂಕನು ಅವುಗಳನ್ನು ಆಸ್ಥೆಯಿಂದ ಅಭ್ಯಸಿಸಿರುವುದು ಸಹಜವಾಗಿದೆ.

ಸತಿಸಪ್ತಮಿಯ ಭೇದಮಂ ರಳಕುಳಕ್ಷಳಮ
ನತಿಶಯದ ಗಮಕಕ್ರಿಯಾಸಮಾಸಂಗಳಂ
ಶ್ರುತಿಸಹ್ಯಸಂಧಿಯಂ ತದ್ಧಿತಪದಮನಪಭ್ರಂಶದೇಶೀಯಂಗಳಂ
ನುತಮಾಗೆಯೋಗಿಪ ಸಮಾಸಮಂ ಸುಸಮಸಂ
ಸ್ಕೃತಮಂ ವಿರಹಿತಾವ್ಯಯೋರುಸಂಸ್ಕೃತಲಿಂಗ
ತತಿ ಶಿಥಿಲಪದಮುಖಾದ್ಯುಕ್ತಲಕ್ಷಣಮಱಿವಚತುರರೀಕೃತಿ
ಗೊಲಿಯರೆ ?[೨]

ಶಬ್ದಮಣಿದರ್ಪಣದ ಕರ್ತೃ ಕೇಶಿರಾಜನ ಮೇಲೆ ಮಾರ್ಪುಮಾಡಿದ ಪದ್ಮಣಾಂಕನು ಉತ್ತಮ ವೈಯಾಕರಣಿಯಾಗಿರಬೇಕೆಂದು ಬೇರೆ ಹೇಳಬೇಕಿಲ್ಲ. ಕೇಶಿರಾಜನು

೧. ಪ. ಪು. ಸಂ. ೧. ಪ. ೧೧, ೧೨, ೧೩, ೨. ಪ. ಪು. ಸಂ. ೧. ಪ. ೩೯.

ಗಮಕ ಸಮಾಸವೊಂದನ್ನೇ ಕನ್ನಡದ ಅಸಾಧಾರಣ ಲಕ್ಷಣಗಳಲ್ಲಿ ಸೇರಿಸಿದ್ದರೆ ಪದ್ಮಣಾಂಕನು ಅದರೊಡನೆ ಕ್ರಿಯಾಸಮಾಸವನ್ನೂ ಹೇಳಿದ್ದಾರೆ. ಕನ್ನಡಭಾಷಾ ಶಾಸ್ತ್ರವನ್ನು ಬಲ್ಲವರಿಗೆ ಕ್ರಿಯಾಸಮಾಸದ ವೈಶಿಷ್ಟ್ಯ ತಿಳಿದಿರಲಿಕ್ಕೆ ಸಾಕು. ಅಂತೆಯೇ ಈ ಪದ್ಯ ಪದ್ಮಣಾಂಕನ ವ್ಯಾಕರಣಪ್ರೌಢಿಮೆಯ ದ್ಯೋತಕವಾಗಿದೆ. ಕಾವ್ಯಗುಣಗಳನ್ನೂ ದೋಷಗಳನ್ನೂ ಮಿಕ್ಕವರಂತೆ ಈತನೂ ವಿವರಿಸಿದ್ದಾನೆ.[೧] ಅಲಂಕಾರಶಾಸ್ತ್ರದಲ್ಲಿ ಈತನು ಬಲ್ಲಿದನಾಗಿರಬೇಕೆಂದು ಇದರಿಂದ ವ್ಯಕ್ತವಾಗುತ್ತದೆ. ಆದರೆ ಪದ್ಮರಾಜಪುರಾಣದಲ್ಲಿ ಮನೋಜ್ಞವಾದ ಕೆಲವೇ ಅಲಂಕಾರಗಳು–ಉಪಮೆ, ರೂಪಕ, ಉತ್ಪ್ರೇಕ್ಷೆ ಮುಂತಾದುವು–ಹಿತಮಿತವಾಗಿ ಬಂದಿರುವವು. ಕವಿ ತನ್ನ ಪಾಂಡಿತ್ಯ ಪ್ರದರ್ಶನಕ್ಕಾಗಿ ಶ್ಲೇಷ, ಪರಿಸಂಖ್ಯೆಗಳಂತಹ ಭಾರವಾದ ಅಲಂಕಾರಗಳನ್ನು ಬಳಸಿಲ್ಲವೆಂದೇ ಹೇಳಬಹುದು. ಅಂತೆಯೇ, ಕವಿ ಪದ್ಮಣಾಂಕ ಶಾಸ್ತ್ರಕೋವಿದ ಪದ್ಮಣಾಂಕ-ಎರಡು ವ್ಯಕ್ತಿತ್ವಗಳೂ ಈ ಪುರಾಣದಲ್ಲಿ ಬೇರೆ ಬೇರೆಯಾಗಿಯೇ ನಿಂತು ಕಾರ್ಯಮಾಡಿವೆಯೆಂದು ಹೇಳುವುದು. ಕಾವ್ಯದಲ್ಲಿ ಪಾಂಡಿತ್ಯ ಮುಂದೆ ಬಂದು ಕಾವ್ಯದ ರಸಾಸ್ವಾದನೆಗೆ, ಕಥೆಯ ಓಟಕ್ಕೆ ತಡೆಯನ್ನುಂಟು ಮಾಡಿಲ್ಲವೆಂದೇ ಹೇಳಬೇಕಾಗುತ್ತದೆ.

ಆದರೂ ಒಂದು ಕಡೆಗೆ ಅಪವಾದವೆಂಬಂತೆ ಕೆರೆಯಪದ್ಮರಸರನ್ನು ಮದುವೆಗೆಂದು ಇದಿರುಗೊಳ್ಳುವ ಮೆರೆವಣಿಗೆಯನ್ನು ವರ್ಣಿಸುವಾಗ ಪದ್ಮಣಾಂಕನು ತನಗಿದ್ದ ಸಂಗೀತಶಾಸ್ತ್ರಪರಿಚಯವನ್ನೆಲ್ಲ ಪ್ರದರ್ಶಿಸಹೊರಟಂತೆ ತೋರುತ್ತದೆ.

ತರದಿಂ ವಿಪಂಚಿ ವಲ್ಲಕಿ ಚಿತ್ರೆಯಾಜ್ಯೇಷ್ಠೆ
ವರಘೋಷವತಿ ವಿಜಯೆ ನಕುಲೋಷ್ಠಿ ಕೂರ್ಮಿ ತುಂ
ಬುರಿ ವಿಕುಬ್ಜಿಕೆ ಹಸ್ತಿಕಾಖ್ಯೆ ಶತತಂತ್ರಿ ಕಿನ್ನರಿ ಲಸತ್ ಪರಿವಾದಿನಿ
ಕರಮೆ ಸಾರಂಗಿ ತತ್ರಿಶರಿಯಾಲಾಪಿನಿ ವಿ
ಚರಿತರಾವಣ ಹಸ್ತೆ ಡಕ್ಕುಲಿ ಪ್ರಮುಖ ಬಂ
ಧುರತತಮನಂತೆ ಪಟಹಂ ಹುಡುಕ್ಕೆ ಕುಡುಕ್ಕೆ ಡಕ್ಕೆ ಪಟಹಂ
ಮೃದಂಗಂ[೨]

ಹೀಗೆಯೇ ಕರಡಿ, ಡಕ್ಕುಲಿ, ಮುಂಡಿಡಕ್ಕೆ ಶಲ್ಲುಕೆ ಕುಡುವೆ, ರುಂಜೆ, ಸತ್ರಿವಳಿ, ಡವಸೆ, ನಿಸ್ಸಾಣ, ಡಮರುಕ, ಭೇರಿ, ಸ್ತಂಭಕಿ, ತಾಳ, ಕಾಂಸ್ಯತಾಳ,

---

೧. ಪ. ಪು. ಸಂ. ೧. ಪ. ೩೭, ೩೮.   ೨. ಪ. ಪು. ಸಂ. ೩. ಪ. ೫೨.

ಮನದಲ್ಲಿ ಭಕ್ತಿಯು ಲಹರಿಗಳೆದ್ದಂತೆ ಹೊರಗೆ ಗಂಗಾಲಹರಿಯೂ ಕಂಗೊಳಿಸಿದೆ. ಇದೇ ಶಿವಾದ್ವೈತ ಸಾಕಾರರೂಪು. ಈ ರೂಹನ್ನು ಕಂಡರಸುವಾಗ ಕಾವ್ಯವೂ ಗಂಗಾಲಹರಿಯಷ್ಟೇ ಸುಂದರವಾಗಿದೆ; ಸಹಜವಾಗಿದೆ. ಅಲ್ಲಲ್ಲಿ ಪುಟಿಯುತ್ತಿರುವ ನೀರಿನ ಸೆಲೆಗಳು ಕವಿಯ ಕಣ್ಣಿಗೆ ಗಂಗಾದೇವಿ ಹಲವು ಮೊಗವಾಂತು ಗುರುವರ ನನ್ನು ನಿರೀಕ್ಷಿಸಲೆಂದು ತಲೆದೋರಿದಂತೆ ಭಾಸವಾಗಿದೆ. ಶರಣವೃಂದದಲ್ಲೆಲ್ಲ ಆನಂದವೇ ಆನಂದ.

ಹರಿಸದಿಂ ತೂಗುತುಂ ಬಾಗುತುಂ ತೊನೆಯುತುಂ
ಭರವಸದಿ ನಲಿವುತುಂ.ಮಲೆವುತುಂ ಕೆಲೆವುತಿಂ
ತಿರದುರ್ಬಿ ಬೊಬ್ಬಿಡುತೆ ತಮ್ಮ ಹರೆ ತಮ್ಮ ಕೊಳಲೆಂಬಂತದೇಂ
ನೆಗಳ್ದರೋ[೧]

ಭಾವ ಭಾಷೆಗಳ ವಿದ್ಯುದಾಲಿಂಗನವೇ ಕಾವ್ಯ. ಭಾವಕುಣಿದಂತೆ ಇಲ್ಲಿ ಕಾವ್ಯವೂ ಕುಣಿದಾಡಿಲ್ಲವೇ ? ಶರಣರ ಆನಂದ ಅಲೆ ಅಲೆಯಾಗಿ ಬಂದು ಅವರು ಕುಕಿಲಿಱಿದು ಕುಣಿಕುಣಿದಾಡಿ ಶಿವಾನಂದಲೀಲೆಯಲ್ಲಿ ಮೂಡಿ ಮುಳುಗಾಡಿದು ದನ್ನು ಪದ್ಮಣಾಂಕನು ಒಳ್ಳೇ ಸ್ಫುಟವಾಗುವಂತೆ, ಸಹಜವಾಗುವಂತೆ ಮೂಡಿಸಿ ದ್ದಾನೆ. ಅವರು ಭಕ್ತಿಯ ಭರದಲ್ಲಿ, ಆನಂದದ ಉದ್ರೇಕದಲ್ಲಿ ಕೆಱೆಯನ್ನೂ ಗುರುವನ್ನೂ ಬಣ್ಣಿಸುವಲ್ಲಿ[೧] ಭಾವದ ಆವೇಶವಿದೆ; ಕಾವ್ಯದ ಸೌಂದರ್ಯವಿದೆ. ನೀರ್ವೆರಸಿದ ಗಂಧಶಾಲಿವನವನ್ನು ಕವಿ ಎಷ್ಟು ಸುಂದರವಾಗಿ ಚಿತ್ರಿಸಿರುವನೆಂಬು ದನ್ನು ನೋಡಿರಿ.

ಆದಿ ಪುರುಷನ ದಿಟ್ಟಿಗೊನೆವೆಳಗ ಸೋಂಕಿನಿಂ
ಭೂದೇವತೆಗೆ ಸಾತ್ವಿಕಂ ತನುವಿನೋಳ್
ಸ್ವೇದಾಂಬುವುಣ್ಮಿ ಪುಳಕಂ ಪೊಣ್ಮಿ ರಾರಾಜಿಪಂದವೋ ಎಂಬ
ಪಾಂಗಿಂ
ಮೋದದಿಂ ನೀರ್ವೆರಸು ಶಾಲಿಗಳ ಸಸಿಗಳಿಂ
ದಾದವೊಪ್ಪಿದುವು ಗರ್ದೆಯಮಡಿಗಳ್[೨] . . . .

---

೧. ಪ. ಪು. ಸಂ. ೬. ಪ. ೮೨—೯೦.

೨. ,, ,, ೬. ಪ. ೭೩.

ಆದಿಪುರುಷನ ಕಡೆಗಣ್ಣ ನೋಟದ ಸೋಂಕಿನಿಂದ ಭೂದೇವತೆಯ ಸಾತ್ವಿಕ ತನುವಿನಲ್ಲಿ ಸ್ವೇದಾಂಬು ಹೊರಹೊಮ್ಮಿದಂತೆ ಜಲವೂ, ರೋಮಾಂಚನವೆದ್ದಂತೆ ಸಸಿಗಳೂ ಕಂಗೊಳಿಸಿದವಂತೆ. ಮಾನವರ ವ್ಯಾಪಾರವನ್ನು ಪ್ರಕೃತಿಪುರುಷರಲ್ಲಿ ಕಂಡು, ಅದನ್ನು ರೋಮಾಂಚನಕಾರಿಯಾಗುವಂತೆ ಕಾವ್ಯದಲ್ಲಿ ಚಿತ್ರಿಸಿದ್ದಾನೆ. 'ಮೃಡರೂಪನುತ್ಸವಕೆ ಜಯಲಕ್ಷ್ಮಿ ಪಿಡಿದ ಕನ್ನಡಿಯೆಂಬಂತೆ'[೧] ಆ ಕೆರೆ ಕಂಗೊಳಿಸಿದ ದೃಶ್ಯವನ್ನು ಕವಿ ಭಕ್ತಿಯ ಭರದಿಂದ ಉತ್ತಮ ಕಾವ್ಯವಾಗುವಂತೆ ಚಿತ್ರಿಸಿದ್ದಾನೆ. ಆ ದೃಶ್ಯ ಆಲೋಕಿಪರ ಕಣ್ಣ ಪುಣ್ಯದ ಸತ್ಫಲಗಳಂತೆ[೨] ಕಂಗೊಳಿಸಿದರೆ ಅದನ್ನು ಚಿತ್ರಿಸುವ ಕಾವ್ಯವೂ ಸಹೃದಯರಮನಸ್ಸಿನ ಪುಣ್ಯದ ಫಲವಾಗಿದೆ. ಈ ಸನ್ನಿವೇಶವನ್ನು ಪದ್ಮಣಾಂಕನು ಎಷ್ಟು ಭಾವಭರಿತನಾಗಿ ಚಿತ್ರಿಸಿರುವನೆಂಬುದನ್ನು ನೋಡಿದುದಾಯಿತು. ಭಕ್ತಿಯೇ ಪದ್ಮರಾಜಪುರಾಣದ ಮುಖ್ಯರಸ. ಆ ಭಕ್ತಿ ಬಂದಲ್ಲಿ, ಕಾವ್ಯ ತುಂಬಿಹರಿಯುವ ತುಂಗಭದ್ರೆಯಂತೆ ಪ್ರವಹಿಸುತ್ತದೆ. ಭಕ್ತಿಯ ಭಾವನೆಗಳು ತೆರೆ ತೆರೆಯಾಗಿ ಹರಿಯುತ್ತವೆ. ಸಹೃದಯರಿಗೆ ಪುಣ್ಯಸ್ನಾನ ಮಾಡಿಸಿ ದಿವ್ಯದರ್ಶನವನ್ನು ನೀಡುತ್ತವೆ.

ಎನ್ನ ಭವತಿಮಿರಭಾನುವೆ ಕಾಮಧೇನುವೇ
ಎನ್ನನಾಳ್ಗೊಂಡ ಗುರುವೇ ಶರಣಸುರತರುವೆ
ಎನ್ನ ಕಾರುಣ್ಯರಸವರ್ಷವೇ ದಿವ್ಯಪರುಷವೆ ಎನ್ನ ನಿಧಿಯೆ
ಸುಧೆಯೇ
ಎನ್ನ ಚಿತ್ತಿನ ತಿರುಳೆ ಎನ್ನ ಪುಣ್ಯದ ಪುರುಳೆ
ಎನ್ನ ಮುಕ್ತಿಯ ನಿಲವೆ ಎನ್ನ ಭಕ್ತಿಯ ಬಲವೆ
ಎನ್ನ ನನ್ನಿಯೆ ಎನ್ನ ಚೆನ್ನಿಗನೆ ಎನ್ನ ಗತಿಯೇ ಮತಿಯೆ ಧೃತಿಯೆ
ಪತಿಯೇ[೩]

ಪದ್ಮರಾಜಪುರಾಣದಲ್ಲಿ ನಿರ್ಭರವಾದ ಭಕ್ತಿ ಪುಟನೆಗೆದು ಬಂದ ಇಂತಹ ಪದ್ಯಗಳು ಹೇರಳವಾಗಿವೆ. ಅವುಗಳೊಡನೆ ದನಿಗೂಡಿಸಿ ಜೀವನವನ್ನು ಪಾವನಗೆಯ್ದುಕೊಳ್ಳದ ಮಾನವರಾರು ? ಆ ಪ್ರಾರ್ಥನೆಗಳಲ್ಲಿ ಸಮಸ್ತ ಮಾನವಕುಲದ ಪ್ರಾರ್ಥನೆಯಡಗಿದೆ. ಅಲ್ಲಿ ಉತ್ಕಟವಾದ ಕಾವ್ಯವೂ ಇದೆಯೆಂದು ಬೇರೆ ಹೇಳಬೇಕಿಲ್ಲ.

---

೧. ಪ. ಪು. ಸಂ. ೬. ಪ. ೪೬. ೨. ಪ. ಪು. ಸಂ. ೬. ಪ. ೪೭.
೩. ,, ,, ೭. ಪ. ೩೯.

ಪದ್ಮಣಾಂಕಕವಿಯ ಭಾವದ ಆವೇಶವನ್ನು ಪರಿಶೀಲಿಸಿದುದಾಯಿತು. ಇನ್ನು ಆತನು ತನ್ನ ಕಾವ್ಯದಲ್ಲಿ ಕಲ್ಪನೆಯ ಕುಸುರನ್ನು ಹೇಗೆ ಸೂರೆಗೆಯ್ದಿರುವ ನೆಂಬುದನ್ನು ವಿಚಾರಿಸಬಹುದು. ಕಲ್ಪನೆಯ ಕಣ್ಣಿಲ್ಲದೆ ಕವಿಯ ಕಾವ್ಯ ಮುನ್ನಡೆಯಲಾರದು. ವಾಸ್ತವಸೃಷ್ಟಿಗೆ ಕಾವ್ಯದೃಷ್ಟಿಯನ್ನು ನೀಡುವುದೇ ಕಲ್ಪನೆಯ ಕಾರ್ಯ. ಕಾವ್ಯವನ್ನೋದುವಾಗ ಜೀವನದ ಚಿತ್ರವನ್ನೇ ಕಂಡಂತಾದರೂ ಅಲ್ಲಿ ಒಂದು ಬಗೆಯ ವಿನೂತನವಾದ ಸೊಬಗಿರುವುದನ್ನು ಅನುಭವಿಸುತ್ತೇವೆ. ಅಂತೆಯೇ ವಾಸ್ತವಜಗತ್ತಿನಲ್ಲಿ ದಣಿದು ಕಾವ್ಯಸೃಷ್ಟಿಗೆ ಹೋಗಿ, ಅಲ್ಲಿ ವಿಹರಿಸಿ ವಿಶ್ರಮಿಸಿ ಆನಂದಪಡುತ್ತೇವೆ. ಇದು ಕವಿಯ ಕಲ್ಪನಾಶಕ್ತಿಯ ಕಾರ್ಯ. ಕವಿಯ ಭಾವನೆಗಳಿಗೆ ಪ್ರತಿಮೆಗಳನ್ನು ಒದಗಿಸುವ ಕಾರ್ಯವನ್ನು ಈ ಶಕ್ತಿಯೇ ಮಾಡುತ್ತದೆ. ಆದುದರಿಂದ ಕವಿಯ ಕಲ್ಪನೆಗೆ ವಿಶಿಷ್ಟವಾದ ಸ್ಥಾನವಿದೆ.

ಸಹೃದಯರನ್ನು ಬೆರಗುಗೊಳಿಸಿ ಕಾವ್ಯಕ್ಕೆ ಒಳ್ಪೇಮೆರುಗನ್ನೀಯುವ ಕಲ್ಪನಾ ವಿಲಾಸ ಪದ್ಮರಾಜಪುರಾಣದ ಕಾವ್ಯವಿಭಾಗದಲ್ಲೆಲ್ಲ ಕಂಗೊಳಿಸುತ್ತದೆ. ಸೂರ್ಯೋದಯ, ಸೂರ್ಯಾಸ್ತ, ಚಂದ್ರೋದಯ ಮುಂತಾದುವನ್ನು ಕವಿ ಬಹು ಸುಂದರವಾಗಿ ವರ್ಣಿಸುತ್ತಾನೆ. ಮಬ್ಬು ಹಬ್ಬಿ ಆಕಾಶದಲ್ಲಿ ನಕ್ಷತ್ರಗಳು ಮೂಡಿದ ವಿಷಯವನ್ನು ಪದ್ಮಣಾಂಕನು ಬಣ್ಣಿಸಿರುವ ರೀತಿಯನ್ನು ನೋಡಿದರೆ ಅವನ ಕಲ್ಪನಾಶಕ್ತಿಯ ಹಿರಿಮೆ ದ್ಯೋತಕವಾಗುವಂತಿದೆ.

ಇರದೆ ದಶದಿಕ್ಕನಾ ಕುಜನರಪಕೀರ್ತಿಲತೆ
ಕರಮುಡರ್ದಪ್ವೋಲ್ ಮರ್ವು ಪರ್ವಿ ತೀಯೊಸಗೆಗಂ
ಡಿರುಳೆಂಬ ಪೆಣ್ಣ ಮೆಯ್ಯೊಳ್ ನೆಗೆದ ಬೆಮರ್ವನಿಗಳಂತೆ
ಭಗಣಂ ನೆಗೆದುವು[೧]

ನಕ್ಷತ್ರಗಳು ರಾತ್ರಿಯೆಂಬ ಹೆಣ್ಣ ಮೈಯಲ್ಲಿ ಒಗೆದ ಬೆವರ ಹನಿಗಳೆಂಬಲ್ಲಿ ಘನವಾದ ಕಲ್ಪನೆಯಿದೆ.

ಹೀಗೆ ಅಲ್ಲಲ್ಲಿ ಚೆಲ್ಲವರಿದ ಕಲ್ಪನೆಯ ವಿಲಾಸದಿಂದ ಕವಿ ಪದ್ಮಣಾಂಕನು ತೃಪ್ತಿಹೊಂದದೆ ಅದಕ್ಕೊಂದು ವಿಶಿಷ್ಟವಾದ ಸ್ಥಾನವನ್ನೇ ಕಲ್ಪಿಸಿಕೊಂಡಿರುವನು. ಅದೆಂದರೆ ವನವಿಹಾರದ ಸನ್ನಿವೇಶ. ನಮ್ಮ ಪ್ರಾಚೀನ ಕಾವ್ಯಗಳಲ್ಲಿ ವನವಿಹಾರದ ಸನ್ನಿವೇಶಗಳನ್ನು ತರುವುದೊಂದು ಸಂಪ್ರದಾಯವೇ ಆಗಿದೆ. ಕಥಾವಸ್ತುವಿನಲ್ಲಿ

೧. ಪ. ಪು ಸಂ. ೬. ಪ. ೯೭.

ಸಹಜವಾಗಿ ಬಾರದೇ ಇರುವ ವಿಷಯಗಳನ್ನೆಲ್ಲ ಅಲ್ಲಿ ವಿವರಿಸುತ್ತಿದ್ದರು. ಶೃಂಗಾರ ಹಾಸ್ಯ ಮೊದಲಾದ ರಸಗಳನ್ನು ಅಧಿಕ ಪ್ರಮಾಣದಲ್ಲಿ ಆ ಸನ್ನಿವೇಶದಲ್ಲಿ ಬಳಸುವುದುಂಟು.

ಪದ್ಮರಸರಿಗೇಕೆ ವನವಿಹಾರ ಎಂದು ಯಾರಾದರೂ ಕೇಳಬಹುದು. ಏಕೆಂದರೆ ಶರಣಸಂಪ್ರದಾಯದವರಿಗೆ ಇವು ಸಲ್ಲದ ವಿಷಯಗಳೆಂದು ತೋರುತ್ತದೆ. ಆದರೆ, ಪದ್ಮರಸರು ಇಲ್ಲಿ ಸಲ್ಲಿ, ಅಲ್ಲಿ ಸಲ್ಲುವ ಮಹಾನುಭಾವರು. ಪ್ರಪಂಚವನ್ನು ಹೇಯವೆಂದು ಬಗೆಯದೆ ಅದನ್ನು ಬಸವಾದಿಪ್ರಮಥರಂತೆ ಮುಕ್ತಿಗೆ ಸಾಧನವೆಂದು ಅವರು ತಿಳಿದಿದ್ದರು.ಲಿಂಗಪ್ರಸಾದವೆಂದು ಭಾವಿಸಿ ಇಹದ ತುಂಬುಜೀವನವನ್ನು ಜೀವಿಸುತ್ತಿದ್ದರು. ಈಸಬೇಕು; ಈಸಿ ಜಯಿಸಬೇಕು. ಎಂಬುದು ಅವರ ಜೀವನದ ಸೂತ್ರವಾಗಿದ್ದಿತು. ಅವರು ರಸಿಕ ಚಕ್ರೇಶ್ವರರು; ವಿನೋದಿಗಳು. ಇಂತಹ ಕಥಾನಾಯಕರಿಗಾಗಿ ಕವಿ ವನವಿಹಾರದ ದೃಶ್ಯವನ್ನು ಕಲ್ಪಿಸಿಕೊಂಡಿರುವುದು ಸಹಜವೆನಿಸಿದೆ. ಎಂಟು ಸಂಧಿಗಳವರೆಗೆ ನಿರರ್ಗಳವಾಗಿ ಓಡಿದ ಕಥೆಗೆ ಸ್ವಲ್ಪ ವಿರಾಮದೊರೆಯುತ್ತದೆ. ಕವಿಯ ಕಲ್ಪನಾಶಕ್ತಿ ಅಂಕುರಿಸಿ ಹೂತು ಮೃದುಮಧುರವಾದ ಫಲಗಳನ್ನು ಬಿಡುತ್ತದೆ.

ವಸಂತಮಾಸ ಕಣ್ದೆರೆಯಿತು. ಮಾಹೇಶ್ವರರು ಅದರ ಸೊಗಸನ್ನು ಈಕ್ಷಿಸಲುದ್ಯುಕ್ತರಾದರು. ಅವರಳ್ತಿಯನ್ನು ಸಲಿಸಬೇಕೆಂದು ಪದ್ಮರಸರು ಅಂಗನೆ ತನೂಜ, ವಿಲಾಸಿನಿಯರು ಶಿಷ್ಯವ್ರಾತದೊಡನೆ ನಸುನಗುತ್ತೆ ವನವಿಹಾರಕ್ಕೆಂದು ಹೊರಟು ಅರವಟ್ಟಿಗೆಗಳನ್ನು ಕಂಡರು. ಅರವಟ್ಟಿಗೆಗಳೆಂದರೆ ಶೃಂಗಾರದ ತವರು; ಹಾಸ್ಯದ ಹೊನಲು. ಅಲ್ಲಿ:

ಚಲ್ಲಗಣ್ಣಡೆಯ ಕುಡಿವೆಳಗೆಂಬುರುಳ್ಗಣ್ಣಿ
ಯಲ್ಲಿ ಪಥಿಕಮನೋಮೃಗವನೆಯ್ದೆ ಬೀಱುತಂ
ದಿಲ್ಲಿ ತಡೆವರಿವಳ್ದಿರೇಂ ವ್ಯಾಧವಧುಗಳೋ ಮೇಣ್ ಪ್ರಪಾವಧು
ಗಳೋಯೆನೆ[1]

ಕವಿಯ ಕಲ್ಪನೆಯಲ್ಲಿ ಪ್ರಪಾವಧುಗಳು ಪಥಿಕಮನೋಮೃಗವನ್ನು ಬೆನ್ನಟ್ಟುವ ವ್ಯಾಧವಧುಗಳಾಗಿದ್ದಾರೆ. ನಮ್ಮ ಹಿಂದಿನ ಅರವಟ್ಟಿಗೆಗಳ ಕಲ್ಪನೆಯನ್ನು

(೧) ಪ. ಪು. ಸಾ. ೮. ಪ. ೯.

ಮನಸ್ಸಿನಲ್ಲಿ ತಂದುಕೊಂಡರೆ ಕವಿಯ ಈ ಕಲ್ಪನೆಗೆ ನಾವೆಲ್ಲ ತಲೆದೂಗಬೇಕಾಗುತ್ತದೆ.

ಭೋರನೊರ್ವಂ ಬಿಸಿಲಡಿಸಿ ಬಂದು ತಾರೆಲೆಲೆ
ನಾರಿವಾರಿಯನೆನೆಯವಳ್ ಬಱಿಯ ಸಸಿಗಲ್ಲ
ತೋರಕರಗವನಣಕದಿಂದೆ ತಂದಿತ್ತು ನೋಡುತಿರೆ ತನ್ನ
ಮುಖೇಂದುವಾ
ಸಾರಕದು ಕಟ್ಟನೆ ಕರಗೆ ತಜ್ಜಲವನೀಂಟಿ
ಭೂರಿಶ್ರಮವನಲೆದನದನಱಿಯದಿವನಿದೇಂ
ದಾರಿಕಾರನೊ ಮಾಯಕಾರನೋ ಯೆಂದಗಿವಮುಗ್ಧೆ
ನಗಿಸಿದಳೆಲ್ಲರಂ[೧]

ಕವಿ ಆಗಿನ ರಸಿಕ ಜೀವನದ ಕಡೆಗೆ ಪೂರ್ಣಕಣ್ದೆರೆದಿದ್ದಾನೆ. ಅರವಟ್ಟಿಗೆಗಳಲ್ಲಿ ನಡೆಯುತ್ತಿದ್ದ ಶೃಂಗಾರ ಹಾಸ್ಯಮಯಜೀವನದ ಸಹಜಸುಂದರವಾದ ಚಿತ್ರವನ್ನು ಮೂಡಿಸುತ್ತದೆ ಆತನ ಪ್ರತಿಭೆ. ನೀರಡಿಸಿ ಬಂದವನು ನೀರು ಕೇಳಿದರೆ ಆಕೆ ಚಂದ್ರಕಾಂತ ಶಿಲೆಯ ಕೊಡವನ್ನು ತಂದಿಟ್ಟಳಂತೆ. ಆಕೆಯ ಮುಖಚಂದ್ರಮನ ಸಾನ್ನಿಧ್ಯದಿಂದ ಆ ಸಸಿಗಲ್ಲು ಕರಗಲು ಅದೇ ನೀರನ್ನು ಕುಡಿದು ಆಕೆಯನ್ನು ಬೆರಗುಗೊಳಿಸಿದನಂತೆ ಆತ. ಆ ಯುವತಿಯ ಮುಗ್ಧತೆಗೆ ಎಲ್ಲರೂ ನಕ್ಕರಂತೆ. ಲೋಕಾನುಭವದ ಸಂಗತಿಗಳೇನು, ಕವಿಸಮಯದ ಸಾಧನಸಂಪತ್ತಿಯೇನು ಸಮರ್ಥನಾದ ಕವಿಯು ಯಾವುದು ಬೇಕಾದುದನ್ನೂ ಸುಂದರವಾಗಿ ಬಳಸಬಲ್ಲ. ಕವಿಯ ಕಲ್ಪನೆ ಕವಿಸಮಯದ ಚರ್ವಿತಚರ್ವಣವಾದ ಅಂಶವನ್ನೇ ಉಪಯೋಗಿಸಿ ಎಂತಹ ಸುಂದರವಾದ ಕಾವ್ಯವನ್ನು ನಿರ್ಮಿಸಬಲ್ಲುದೆಂಬುದಕ್ಕೆ ಇದೊಂದು ಉತ್ತಮ ನಿದರ್ಶನ.

ಅರವಟ್ಟಿಗೆಯಿಂದ ಶಾಲಿವನಕ್ಕೆ ಆಗಮನ. ಸತ್ಕವಿಕಾವ್ಯದಂತೆ ಶಾಲಿವನ ರಸಭರಿತವಾಗಿದೆ. ಕವಿಯ ಕಲ್ಪನೆ, ಅಲ್ಲಿ ಗಿಳಿಸೋವ ಪಾಮರಿಯರನ್ನು ಬಣ್ಣಿಸುತ್ತಿರುವುದನ್ನು ನೋಡಿರಿ.

---

(೧) ಪ. ಪು. ಸ. ೪. ಪ. ೧೦.

ಪಾಲ್ದುಂಬಿ ಮೆಱೆವ ಕಮ್ಮಂಗಳವೆದೆನೆಯ
ನೊಲ್ದು ಪಿಡಿದಲ್ಲಿ ಪಾಮರಿ ಚರಿಸುತಾವನಕೆ
ನಾಲ್ದೆಸೆಯಿನೊಸೆದು ಬಂದೆಱಪ ಗಿಳಿವಳಗಮುಂ ಕೈಯ್ಯೆತ್ತಿ
ರಯ್ಯಮಾಗಿ
ಬಲ್ದನಿವೆರಸು ಸೋವೆಯದನೊಂದು ಗಿಳಿಕಂಡೊ
ಱಲ್ದು ಬಂದಾ ಕಯ್ಯ ತೆನೆಗೆಱಗೆ ಮಾನಸವ
ರಲ್ಪ ಕಳ್ಕನೆ ಪಿಡಿದು ಕುಟುಕನೀವುತೆ
ಬಿನದಿಸುತ್ತೆಸೆದಳತಿಹರ್ಷದಿಂ[೧]

ಕೈಯಲ್ಲಿ ತೆನೆ ಹಿಡಿದುಕೊಂಡು ಗಿಳಿಹಾರಿಸುತ್ತಿರುವ ಪಾಮರೆಯ ಕೈಯ ತೆನೆಗೆ ಒಂದು ಗಿಳಿ ಬಂದೆರಗಿತಂತೆ. ಮನವರಳಿ ಆಕೆ ಗಕ್ಕನೆ ಆ ಗಿಳಿಯನ್ನು ಹಿಡಿದು ಅದಕ್ಕೆ ಕುಟುಕನ್ನಿತ್ತಳಂತೆ. ವಾಸ್ತವಿಕ ಜೀವನದಲ್ಲಿ ಈ ಸಂಗತಿ ನಡೆಯಲಿ, ನಡೆಯದಿರಲಿ—ನಡೆಯುವುದು ಅಸಂಭವವೇನಲ್ಲ—ಕವಿಯ ಕಲ್ಪನಾ ಸೃಷ್ಟಿಯಲ್ಲಿ ಮಾತ್ರ ಇಂತಹ ಘಟನೆಗಳು ನಡೆದೇ ನಡೆಯುತ್ತವೆ. ಅಂತಹ ಚಿತ್ರದಲ್ಲಿ ನಾವು ಆನಂದ ಪಡುತ್ತೇವೆ. ನಿತ್ಯಜೀವನವನ್ನು ಬಿಟ್ಟು ಅದಕ್ಕಿಂತಲೂ ಸುಂದರವಾದ, ಅದರ ಆಧಾರದಿಂದಲೇ ನಿರ್ಮಿತವಾದ ಲೋಕಕ್ಕೆ ಹೋದಂತಾಗುತ್ತದೆ. ಸಧ್ಯಃಪರನಿರ್ಮಿತಿಯ ಅನುಭವವುಂಟಾಗುತ್ತದೆ. ಕಬ್ಬಿಗರಘಟಿತ ಘಟನಾನೂತನ ಬ್ರಹ್ಮರೆನ್ನುವುದು ಈ ಕಾರಣಕ್ಕಾಗಿ.

ವೇಶ್ಯಾವಾಟವೂ ಬಂದಿತು. ಮದನನ ಆಜ್ಞೆಗಳ್ಕದವರು ಮೋಹಿಗಳ ಕುಲಕೆ ಹೊರಗೆಂದು ನೂಪುರರವದಿಂದ ಅಂಗನೆಯರಲ್ಲಿ ನಾದವನ್ನು ಹೊಯ್ದರಂತೆ. ಓಂ ನಮೋ ರತೀಶಾಯ ಎಂದು ಮನ್ಮಥನ ಪೂಜೆ ನಡೆದಿರುವುದನ್ನು ಕವಿ ಬಹು ಸುಂದರವಾಗಿ ಚಿತ್ರಿಸಿದ್ದಾನೆ.

ಪೊಳೆವ ತಣ್ಗದಿರ್ಗಲ್ಲ ಪಸೆಯೊಳೀಳೆಲೆವಾಳೆ
ಯೆಳೆಯೆಲೆಯು ಪಚ್ಚಡಿಸಿ ಸಿರಿಪಚ್ಚಗರ್ಪುರದ
ಹಳಿಯನೊಡೆದಾ ಧೂಳಿಯಂ ಹರಹಿ ಮೇಲೆ ಪನಿನೀರ್ದಳಿದು
ತನ್ನಿನಿಯನಂ

(೧) ಪ. ಪು. ಸಂ. ೮. ಪ. ೧೬.

ಕಳವಳಿಪ ಕಾಂತೆಯ ಮಲಂಗಿಸಿ ಕಳೇವರಕೆ
ಬಳಿದು ಚಂದನವನಲರ್ವಿಜ್ಜಣದೆ ತಣ್ಣೆಲರ
ಸುಳಿವನೊದವಿಸುತೋಂ ನಮೋರತೀಶಾಯಯೆನುತಳವಳಿದುದಾಳೀ
ಜನಂ[1]

ರಸಿಕನಾದ ಕವಿ ಪದ್ಮಣಾಂಕ ಈ ಚಿತ್ರವನ್ನು ಬಹಳ ಸುಂದರವಾಗಿ ಮೂಡಿಸಿದ್ದಾನೆ. ವಿರಹದ ಬೇಗೆಯಿಂದ ಬಳಲಿದವಳಿಗೆ ಮಾಡುವ ಶೈತ್ಯೋಪಚಾರವಿದು. ಚಂದ್ರಕಾಂತಶಿಲೆಯ ಹಾಸಿಗೆ, ಅದರ ಮೇಲೆ ಏಳು ಬಾಳೆಯ ಎಲೆಗಳು. ಪಚ್ಚ ಗಪ್ಪುರದ ಧೂಳಿಯನ್ನು ಹರಹಿ ತನಿನೀರ್ದಳಿದು, ಆಕೆಯ ಮೈಗೆ ಶ್ರೀಗಂಧವನ್ನು ಬಳಿದು ಹೂವಿನ ಬೀಸಣಿಕೆಯಿಂದ ಗಾಳಿ ಹಾಕಿ ಓಂ ನಮೋರತೀಶಾಯ ಎಂದು ಸೇವಕಿಯರು ಅಳವಳಿದರಂತೆ. ಪದ್ಮಣಾಂಕನ ಕಲ್ಪನೆ, ಹಾಸ್ಯದ ದೃಷ್ಟಿ, ಸೃಷ್ಟಿ ಇವೆಲ್ಲ ನಿಜವಾಗಿಯೂ ಸಂಸ್ತವನೀಯವಾಗಿವೆ.

ವಾಣಿಯೋ ಮೇಣಿವಳ್ ಲಕ್ಷ್ಮಿಯೋ ಎಂಬ ಸಂಶಯವನ್ನು ಹುಟ್ಟಿಸುವ ಇನ್ನೊರ್ವಳ ಚಿತ್ರವನ್ನು ಕವಿಯ ಕಲ್ಪನೆ ಎಷ್ಟು ಸುಂದರವಾಗಿ ಕಂಡರಿಸುತ್ತಿದೆಯೆಂಬುದನ್ನು ಕೆಳಗೆ ಕಾಣಬಹುದು.

ವೀಣೆಯಂ ಬಲ್ತೊಲೆಯ ಮೇಲೌಂಕಿಕೊಂಡೊಲ್ದು
ಮಾಣದೋದುವ ಗಿಳಿಯ ಮುಂಗಯ್ಯೊಳಿಟ್ಟು ಕ
ಟ್ಟಾಣಿ ಮುತ್ತಿನ ಕಂಠಮಾಲೆಯಂ ಕಟ್ಟಿ ಮಲಯಜ
ವನೊಲವಿಂ ಲೇಪಿಸಿ
ಜಾಣಮರೆ ಪೊಂಬಟ್ಟೆಯುಟ್ಟು ನೀಲಾಬ್ಜಮಂ
ಪಾಣಿಯೊಳ್ ಪಿಡಿದು ಪದಪಿಂದೊರ್ವಳೊಪ್ಪಿದಳ್
ವಾಣಿಯೋ ಮೇಣಿವಳ್ ಲಕ್ಷ್ಮಿಯೋಯೆಂಬ ಸಂಶಯ
ರಸಮನೊಸೆದೆಸಗುತೆ[2]

ಪದ್ಮಣಾಂಕನ ಕಲ್ಪನೆಗೆ ಅರ್ಥವ್ಯಕ್ತಿತ್ವದ ಗುಣವಿದೆ. ಓದುತ್ತ ಹೋದಂತೆ ಅದರ ಮಾಧುರ್ಯ ಮನವನ್ನು ವ್ಯಾಪಿಸಿ ಅಮಿತವಾದ ಆನಂದವನ್ನು ನೀಡುತ್ತದೆ. ಇಂತಹ ಪ್ರಸಾದಗುಣವಿದೆಯಾದುದರಿಂದಲೇ ಆ ಕಲ್ಪನೆ ಕಾವ್ಯದಲ್ಲಿ ಪ್ರಸನ್ನತೆವಡೆದಿದೆ.

---

(೧) ಪ. ಪು. ಸಂ. ೮. ಪ. ೯೨. (೨) ಪ. ಪು. ಸಂ. ೮. ಪ. ೯೭.

ಜೀವಂಬಡೆದ ಪೂಗಣೆಗಳಂತಿರ್ದ ಗಣಿಕೆಯರ ಚಿತ್ರವನ್ನು ಕವಿಪದ್ಮಣಾಂಕನು ತನ್ನ ಕಲ್ಪನೆಯ ಬಲದಿಂದ ಬಹು ಸರಸವಾಗಿ ಸುಂದರವಾಗಿ ರೇಖಿಸಿದ್ದಾನೆ. ಆತನ ಕಲ್ಪನೆಯ ವೈಭವವನ್ನು ನೋಡಬೇಕಿಲ್ಲಿ.

ಇಷ್ಟು ರಸವತ್ತಾದ ಕಾವ್ಯಭಾಗವನ್ನು ಶೃಂಗಾರಪೂರ್ಣವಾದ ಈ ವೇಶ್ಯಾವಾಟದ ಸನ್ನಿವೇಶವನ್ನು ಕಥಾನಾಯಕರಾದ ಕೆರೆಯಪದ್ಮರಸರ ವ್ಯಕ್ತಿತ್ವಕ್ಕೆ ಒಂದಿನಿತೂ ಚ್ಯುತಿಬಾರದಂತೆ ಇಷ್ಟೇ ಅಲ್ಲ, ಆ ವ್ಯಕ್ತಿತ್ವದ ಘನತೆಗೆ ಕಳೆಯೇರುವಂತೆ ಚಿತ್ರಿಸುವಲ್ಲಿ ಕವಿಪದ್ಮಣಾಂಕನ ಔಚಿತ್ಯಜ್ಞಾನದ ಅರಿವಾಗುತ್ತದೆ.

ಈ ಶಾರ್ಪಣಂಗೆಯ್ಯುವುದಕ್ಕಾಗಿಯೇ ವನವಿಹಾರವನ್ನು[೧] ಕೈಕೊಂಡರೆಂಬುದನ್ನೂ ಪದ್ಮರಸರು ಸರಸವಿನೋದಿಗಳೂ ರಸಿಕಚಕ್ರೇಶ್ವರರೂ[೨] ಆಗಿದ್ದರೆಂಬುದನ್ನೂ ವನವಿಹಾರವಾರಂಭವಾಗುವವೊದಲೇ ಕವಿ ಸ್ಪಷ್ಟಪಡಿಸಿದ್ದಾನೆ. ಪುರವಿಲಾಸವನ್ನು ನೋಡಿ ಬಂದ ಪದ್ಮರಸರು ಜಿತಪುಷ್ಪಚಾಪರೆಂದು[೩] ಕೊನೆಗೂ ಸ್ಪಷ್ಟಪಡಿಸುತ್ತಾನೆ. ಇಷ್ಟು ಪ್ರಜ್ಞೆ ಇದೆ ಕವಿಗೆ. ಪುರವಿಲಾಸವನ್ನು ನೋಡಿ ಬಂದವರು, ವಿಲಾಸಿ ಪದ್ಮರಸರಲ್ಲ. ಅವರನ್ನು ನೋಡಲು ಬಂದ ಪಾಣ್ಸೆಯರ ಮನದಲ್ಲಿ ಸಹ ಸದ್ಭಾವನೆ ಮೂಡುತ್ತದೆ.[೪] 'ಉತ್ತಮರ ಸಂಗವಧಮರ್ಗಮಾಕಾಲದಘಮಂ ಕೆಡಿಸದೆ'[೫] 'ಪರಮಪುರುಷರ ದರ್ಶನದೊಳಿರ್ದನಿತುಪೊಳ್ತು ದುರ್ವ್ಯಸನಗುಣವೊಗೆವುದೇ'[೬]

'ಉತ್ತಮ ಪುರುಷರ ತೇಜೋಮಧ್ಯದಲ್ಲಿ ಕೃಷ್ಣಾಚರಣಮೇಂ ಘಟಿಪುದೇ'[೭]

ಪದ್ಮಣಾಂಕನು ಈ ಸನ್ನಿವೇಶದಲ್ಲಿ ನುಡಿದ ಅರ್ಥಾಂತರನ್ಯಾಸಗಳು ಅರ್ಥಪೂರ್ಣವಾಗಿ ಕಥಾನಾಯಕರ ವ್ಯಕ್ತಿತ್ವದ ಘನತೆಯನ್ನು ಎತ್ತಿ ತೋರಿಸುತ್ತವೆ. ಕಲ್ಪನೆಯ ವಿಲಾಸದಲ್ಲಿ, ವರ್ಣನೆಯ ವೈಭವದಲ್ಲಿ ಕವಿ ಕಥಾನಾಯಕರ ವ್ಯಕ್ತಿತ್ವಕ್ಕೆ ಭಂಗತಾರದೆ ಅವರ ಘನತೆಯನ್ನು ಪ್ರಕಟಿಸಲು ಪೋಷಕವಾಗುವಂತೆ ತನ್ನ ಕಲ್ಪನಾ ಶಕ್ತಿಯನ್ನು ಬಳಸಿರುವುದು ಅತ್ಯಂತ ಪ್ರಶಂಸನೀಯವಾಗಿದೆ. ಕಲ್ಪನೆಯ

---

(೧) ಪ. ಪು. ಸಂ. ೮. ಪ. ೫. (೨) ಪ. ಪು. ಸಂ. ೮. ಪ. ೩೮.

(೩) ,, ,, ೮. ಪ. ೧೦೦. (೪) ,, ,, ೮. ಪ. ೬೯,೭೦,೭೧,೭೨.

(೫) ,, ,, ೮. ಪ. ೬೯. (೬) ,, ,, ೮. ಪ. ೭೧.

(೭) ,, ,, ೮. ಪ. ೭೨.

ಕುದುರೆ ಎತ್ತ ಬೇಕತ್ತ ಜಿಗಿದು ಕವಿ ನಿರ್ಮಿಸಿದ ಸುಂದರವಾದ ತೋಟವನ್ನು ತೊತ್ತಳದುಳಿಯದೆ ಅದು ನಿಯಂತ್ರಣದಲ್ಲಿ ಉಳಿದು ಆ ತೋಟದ ಕೃಷಿಗೆ ನೆರವನ್ನು ನೀಡುತ್ತಿದೆ. ಇದೇ ಒಂದು ವೈಶಿಷ್ಟ್ಯ.

ಕಲ್ಪನಾಶಕ್ತಿಯ ಬಲದಿಂದ ಕವಿ ವಸ್ತುವಿನ ವಿಷಯಗಳ ಹಾಗೂ ಭಾವದ ಸೌಂದರ್ಯದರ್ಶನ ಮಾಡಿಸಿದಂತೆ ಅವುಗಳ ವಾಸ್ತವವರ್ಣನೆಯಲ್ಲಿಯೂ ಕವಿ ಕಾವ್ಯವನ್ನು ಹುಟ್ಟಿಸಬಲ್ಲ; ಉತ್ತಮ ಕಾವ್ಯವನ್ನೂ ನಿರ್ಮಿಸಿ ಸಹೃದಯರ ಮನ ವನ್ನು ಸೆಳೆಯಬಲ್ಲ. ಒಂದು ರೀತಿಯಿಂದ ಮೊದಲನೆಯದಕ್ಕಿಂತಲೂ ಎರಡನೆಯ ಕಾವ್ಯಮಾರ್ಗ ಕಠಿನವಾದುದೆಂದೇ ಹೇಳಬೇಕಾಗುತ್ತದೆ. ಮೊದಲನೆಯ ವಿಧಾನ ದಲ್ಲಿ ಕವಿ ತನ್ನ ಕಲ್ಪನೆಯ ಬಲದಿಂದ ಅಲಂಕಾರಗಳನ್ನೋ, ಗುಣಗಳನ್ನೋ, ರೀತಿ ಯನ್ನೋ, ಪ್ರತಿಮೆಗಳನ್ನೋ ನಿರ್ಮಿಸಿಕೊಂಡು ತನ್ಮೂಲಕ ಭಾವಗಳಿಗೆ ಅಭಿ ವ್ಯಕ್ತಸ್ವರೂಪಕೊಡುವುದರಿಂದ ರಸಾನುಭೂತಿಗೆ ಹೆಚ್ಚು ಸಹಾಯವಾಗುತ್ತದೆ. ಆದರೆ ಎರಡನೆಯ ವಿಧಾನದಲ್ಲಿ ಕವಿ ವಸ್ತುಸ್ವಭಾವಾದಿಗಳನ್ನು ಇದ್ದಕ್ಕಿದ್ದಂತೆಯೇ ವರ್ಣಿಸಿ ರಸನಿಷ್ಪತ್ತಿಯಾಗುವಂತೆ ಮಾಡಬೇಕಾಗುತ್ತದೆ. ಈ ಎರಡನೆಯ ವಿಧಾನ ದಲ್ಲಿಯೂ ಪದ್ಮಣಾಂಕಕವಿಯ ಕೈಪಳಗಿದೆಯೆಂದು ಹೇಳಬಹುದು.

ಯೌವನದ ವಾಸ್ತವ ಚಿತ್ರವನ್ನು ನೋಡಬಹುದು.

......ಕೋಮಲಾಂಗದ ನಳನಳಿಕೆ ಲಲ್ಲೆ
ವಾತಿನ ಸೊಗಸು ನೋಟದಿಂಪು ನಗೆಮೊಗದ ರಸ
ವಾತುರಿಪ ಮನದ ಬರ್ದುಗಳವನ ಪೊಸ ಜವ್ವನಮನೇಂ
ಸೂಚಿಸಿದುವೋ(೧)

ಯೌವನವನ್ನು ವರ್ಣಿಸಲು ಕವಿ ನಳನಳಿಸುವ ಕೋಮಲಾಂಗ, ಲಲ್ಲೆ ವಾತು, ಇನಿದಾದ ನೋಟ, ನಗೆಮೊಗ, ಮನದ ಆತುರ ಇಷ್ಟನ್ನಾಯ್ದುಕೊಂಡು ಅದರ ಪೂರ್ಣ ಚಿತ್ರವನ್ನು ನಿರ್ಮಿಸುತ್ತಾನೆ. ನಿರ್ಮಿಸುತ್ತಾನೆನ್ನುವುದಕ್ಕಿಂತಲೂ ಯೌವನದ ಪೂರ್ಣ ಚಿತ್ರವನ್ನು ಊಹಿಸಿಕೊಳ್ಳಲು ಅನುವು ಮಾಡಿಕೊಡುತ್ತಾನೆ.

ಮಧುವಿನ ಜಯ ಮಾಗಿಯ ಅಪಜಯಗಳನ್ನು ಕವಿ ಹೀಗೆ ಮೂಡಿಸಿದ್ದಾನೆ.

---

(೧) ಪ. ಪು. ಸಂ. ೩, ಪ. ೨.

.......ಮೆಲ್ಲ ಮೆಲ್ಲನೆ ಹಿಮಂ ಸರಿಯೆ ಪೊಸವಿಸಿಲ್
ಪೊರೆಯೇಱಿ ಮೆಯ್ಯಬಿಱುಬುಗಳಡಂಗಿ ಲಸತ್ ಪ್ರಸನ್ನತೆಯ
ನಪ್ಪುಗೆಯ್ಯೆ
ಕೊರಗಿದಂಬುಜವನಂ ಸೊಂಪೇಱಿ ಬಲ್ಗಾಳಿ
ಸರಿದು ತಂಬೆಲರ ಕಾಲಾಟವಗ್ಗಳಿಸೆ ನಸು
ಮೊರೆಯುತುಂ ತುಂಬಿ ಸುಳಿದಾಡೆ ಮೆಱೆದುದು ಮಾಗಿಯಪ ಜಯಂ
ಮಧುವಿನ ಜಯಂ(೧)

ಚಳಿಗಾಲ ಸಾವಕಾಶವಾಗಿ ಹಿಂದೆ ಸರಿದಂತೆ ಬಿಸಿಲಿಗೆ ಕಳೆಯೇರುತ್ತದೆ. ಮೈಯ ಬಿರುಕುಗಳಡಗುತ್ತವೆ. ಬಿರುಗಾಳಿ ನಿಂತು ತಂಗಾಳಿ ಸೂಸತೊಡಗುತ್ತದೆ. ಇಷ್ಟು ಲಕ್ಷಣಗಳನ್ನು ನಾವು ಪ್ರಕೃತಿಯಲ್ಲಿ ಕಂಡರೆ ಸಾಕು, ಮಾಗಿ ಹಿಂದೆ ಸರಿದು ಮಧುಮಾಸ ಬಂದಿತೆಂದು ಒಮ್ಮೆಲೆ ಊಹಿಸಬಹುದು. ಸ್ವಭಾವೋಕ್ತಿಯ ವರ್ಣನೆಯಲ್ಲಿ ಕವಿ ವಸ್ತುವಿನ ಸಾರವನ್ನೇ ಹೀರಲು ಸಮರ್ಥನಾಗಿರಬೇಕಾಗುತ್ತದೆ.

ವೇಶ್ಯಾವಾಟದ ಚಿತ್ರವಂತೂ ಕವಿಯು ವಸ್ತುಸ್ವಭಾವಗಳನ್ನು ಇದ್ದಕ್ಕಿದ್ದಂತೆಯೇ ವರ್ಣಿಸಿ ಒಳ್ಳೇ ಸ್ಫುಟವಾದ ಚಿತ್ರಗಳನ್ನು ಮೂಡಿಸಬಲ್ಲನೆಂಬುದಕ್ಕೆ ಅತ್ಯುತ್ತಮ ನಿದರ್ಶನವಾಗಿದೆ.

ಪುರುಡಿನ ಗರುಡಿ ಸೊರ್ಕಿನಿರ್ಕೆ ಮುಳಿಸಿನಬೆಳಸು
ವೆರಗಿನ ವಿಪಂಚಿ ಪಡಪಿನ ಪಂಜರಂ ಬಲ್ ಚ
ದುರ ಚಾವಡಿ ಚಥಾಳದೋಳಿ ಬೇಟದ ಧಾಟಿ ಸಿಂಗರದ ರಂಗಭೂಮಿ
ಅರಲಂಬನಂಗಡಿ ರತಿಯ ರಾಗದೋವರಿ ಪ
ದಿರ ಪಾಳೆಯಂ ಮೇಕಿನಾಕೆ ಗಾಡಿಯಗಡಿ ಕು
ಪರಿಯುಪರಿಯೆನಿಪುದಂಗಜನ ಘಾರಾಘಾರಿ ರಾಜಿಸುವ
ಸೂಳೆಗೇರಿ(೨)

ಇವೆಲ್ಲ ಗುಣಗಳಿಗೆ ವೇಶ್ಯಾವಾಟವಲ್ಲದೆ ಬೇರೆ ಯಾವುದು ಆಗರವಾಗಬಲ್ಲುದು ?

---

(೧) ಪ. ಪು. ಸಂ. ೮. ಪ. ೨. (೨) ಪ. ಪು. ಸಂ. ೮. ಪ. ೪೬.

ಅಂತೂ ವಸ್ತು, ವಿಷಯಗಳ ಆಂತರ್ಯವನ್ನೋ ಬಾಹ್ಯವನ್ನೋ ವರ್ಣಿಸುವಲ್ಲಿ, ಚಿತ್ರಿಸುವಲ್ಲಿ ಪದ್ಮಣಾಂಕನ ಶಕ್ತಿ ಹಿರಿದಾಗಿದೆಯೆಂದು ಇದುವರೆಗಣ ವಿವೇಚನೆ ಯಿಂದ ವಿದಿತವಾಗುತ್ತದೆ. ಇದರ ರಹಸ್ಯವೇನು ? ಪದ್ಮಣಾಂಕನು ಸೂಕ್ಷ್ಮ ನಿರೀಕ್ಷಣ ಶಕ್ತಿಯನ್ನು ಪಡೆದ ಕವಿಯಾಗಿರುವನು. ಲೋಕಶಾಸ್ತ್ರ ಕಾವ್ಯಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸುವ ಶಕ್ತಿ ಕವಿಗೆ ಅವಶ್ಯವಾಗಿಬೇಕು. ದರ್ಶನಶಕ್ತಿಯೆಂದು ಕರೆವುದು ಇಂತಹ ಪ್ರತಿಭಾಪೂರ್ಣ ನಿರೀಕ್ಷಣೆಯನ್ನೇ. ಸಾಮಾನ್ಯದೃಷ್ಟಿಗೂ ಕವಿದರ್ಶನಕ್ಕೂ ಇರುವ ಅಂತರವೇ ಇಲ್ಲಿದೆ. ಸಾಮಾನ್ಯರ ದೃಷ್ಟಿಗೆ ವಸ್ತುವಿನಲ್ಲಿ ಹುದುಗಿರುವ ಸೌಂದರ್ಯದರ್ಶನವಾಗದೆ ಅವರ ಕಣ್ಣು ಮುಂದೆ ಅದು ಸುಳಿದು ಹೋದರೂ ಅದರ ಕಡೆಗೆ ಅವರ ದೃಷ್ಟಿ ಬೀಳುವುದಿಲ್ಲ. ಕವಿ ತನ್ನ ದರ್ಶನ ಶಕ್ತಿಯ ಮೂಲಕ ಅದರ ಸೌಂದರ್ಯಸಾರವನ್ನೋ, ವೈಶಿಷ್ಟ್ಯವನ್ನೋ ಗ್ರಹಿಸಿ ನಿರೂಪಿಸಿದರೆ ಅದಕ್ಕೆ ಸಾಮಾನ್ಯರು, ಸಹೃದಯರು ಹೌದೆನ್ನುತ್ತಾರೆ; ತಲೆದೂಗು ತ್ತಾರೆ. ಈ ದರ್ಶನ ಪ್ರದರ್ಶನ ಶಕ್ತಿಗಳೇ ಕವಿಯನ್ನು ಸಾಮಾನ್ಯಸಹೃದಯ ನಿಂದ ಬೇರ್ಪಡಿಸುವ ಸಾಧನಸಂಪತ್ತಿ. ಪದ್ಮಣಾಂಕನಲ್ಲಿ ಇಂತಹ ದರ್ಶನ ಶಕ್ತಿ, ಸೂಕ್ಷ್ಮ ನಿರೀಕ್ಷಣಶಕ್ತಿ ವಿಪುಲವಾಗಿ ಕಂಡುಬರುತ್ತಿವೆ. ಅಂತೆಯೇ ಆತ ನನ್ನು ದಾರ್ಶನಿಕ ಕವಿ, ಶಕ್ತಿಯುತನಾದ ಸತ್ಕವಿ ಎಂದು ಕರೆದಿರುವುದು.

ಪದ್ಮಣಾಂಕನ ಲೋಕಾನುಭವವೂ ಹಿರಿದಾದುದು. ಆ ಅನುಭವ ಕಾವ್ಯ ವಾಗಿ ಹರಿದು ಕಾವ್ಯಕ್ಕೊಂದು ಹೆಚ್ಚಿನ ಮೆರುಗನ್ನಿತ್ತಿದೆ. ಕೆರೆಗಾಗಿ ತೆಗೆದಿರಿಸಿದ ಹಣವನ್ನು ಪದ್ಮರಸರು ವಿಟಜಂಗಮರಿಗೆ ಕೊಟ್ಟರೆಂದು ಗಜಬಜಿಸುತ್ತಿರುವ ಕರಣಿ ಕರ ದೃಶ್ಯವನ್ನು ಲೋಕಾನುಭವದಿಂದಲೇ ಎತ್ತಿ ಇಟ್ಟಂತಿದೆ.

ಅರೆಬರಿಂತೆಸಗಲಕ್ಕುಮೆಯೆಂಬರಲ್ಲಿ ಮ
ತ್ತರೆಬರೆಸಗಿದೊಡಮೆಸಗುಗೆ ಪಾತ್ರಮೇಯೆಂಬ
ರರೆಬರಾದೊಡಮದೇಂ ತನ್ನೊಡವೆಯೇಯೆಂಬರರೆಬರದು ತಾನಾದೊಡಂ
ಸೂಳೆಗಂಗಷ್ಟಾಂಗದಿಂ ನಮಿಸಿ ಕೊಡುವುದಿದು
ಪಾಳಿಯೇ ತನಗೆಂಬರರೆಬರಿತ್ತುಂ ಕಾರ್ಯ
ದಾಳಾಪಮಾಗೊಂದನುಸಿರ್ದು ನೀಂ ಕೆಱಿಗಟ್ಟಿಸೆಂದು ಕಳುಪದೆ [ಸುಮ್ಮನೆ
ಕಾಲಮಲ್ತೆಂದಾತನಂ ತಗುಳ್ದು ತಾಂ ಜಂಗ
ಮಾಳಿ ಬಂದಿರ್ಪುದೆನೆ ಪರಿದು ಪೋಪುದು ಮಂತ್ರಿ
ಮೌಳಿಮಣಿಗಳ ಗುಣವೆಯೆಂ(೧) . . . .

(೧) ಪ. ಪು. ಸಂ. ೫. ಪ. ೪೮, ೪೯.

VIJAYA EVENING COLLEGE LIBRARY
BANGALORE-4.
3179

ಕರಣಿಕರಲ್ಲಿ ಒಬ್ಬೊಬ್ಬರಾಡುವ ಮಾತನ್ನೂ ನಿತ್ಯಜೀವನದಿಂದ ಎತ್ತಿ ಇಟ್ಟಂತಿದೆ. ಯಾವುದೊಂದು ಘಟನೆ ಸಮಾಜದಲ್ಲಿ ನಡೆದಾಗ ಹಲವರು ಕೂಡಿ ವಿಮರ್ಶಿನಡಿಸಿದಾಗ ಇಂತಹ ಮಾತುಗಳು ಅವರ ಬಾಯಿಂದ ಹೊರಡುವುದನ್ನು ನಾವೆಲ್ಲ ಕೇಳಿರಲಿಕ್ಕೆ ಸಾಕು. ಸೂಕ್ಷ್ಮ ನಿರೀಕ್ಷಣ ಶಕ್ತಿಯನ್ನೂ ಲೋಕಾನುಭವವನ್ನೂ ಪಡೆದ ಕವಿ ನಿತ್ಯಜೀವನದಿಂದಲೇ ಆ ದೃಶ್ಯವನ್ನೆತ್ತಿ ಸುಂದರವಾದ ಕಾವ್ಯವನ್ನು ನಿರ್ಮಿಸಿರುವನು.

ನರಪತಿಗೆ ಈ ವಿಷಯವನ್ನು ಆ ಕರಣಿಕರು ತಿಳಿಸುತ್ತಿರುವ ದೃಶ್ಯವನ್ನು ನೋಡಿರಿ.

ಎಂದುವುಂ ಮಾಳ್ಪ ಕರ್ಮಾಳಿಗಳ
ನಂತಂತೆ ನೆಗಳ್ದು ಬಳಿಕೋರೋರ್ವರಾಗಿ ಭೂ
ಕಾಂತನೋಲಗಕೆ ಗಮನಿಸಿ ತನ್ನೃಪಾಲನಂ ಕಂಡು ಕುಳ್ಳಿರ್ದು ಮುದದಿಂ
ಒಂದಿನಿಸುಪೊಳ್ತನಂತಿಂತು ಕಳೆದವನಿಪಂ
ಗೆಂದರ್ ದುರಾತ್ಮರಿಲೆ ಭೂಪಾಲ(೧) . . . .

ಯಾವುದಾದರೊಂದು ವಿಷಯವನ್ನು ನಿರೂಪಿಸಲಿಕ್ಕೆ ಹೋದವರು ನೇರವಾಗಿ ವಿಷಯದ ಪ್ರಸ್ತಾಪವನ್ನೇ ಎತ್ತಿದರೆ ಅದು ಅಷ್ಟು ಪರಿಣಾಮಕಾರಿಯಾಗುವುದಿಲ್ಲ. ಧೂರ್ತರಾದ ಕರಣಿಕರು ಮಾನವಸ್ವಭಾವದ ಈ ಗುಣವನ್ನರಿತು ಅರಸನಲ್ಲಿಗೆ ಹೋಗಿ ಕೆಲಕಾಲ ಅದನ್ನೂ ಇದನ್ನೂ ಮಾತನಾಡಿ ಆ ಮೇಲೆ ಮುಖ್ಯವಿಷಯವನ್ನರುಹಿರುವರು. ಇಲ್ಲಿದೆ ಪದ್ಮಣಾಂಕನ ಜಾಣಿಗೆ. ಪ್ರಪಂಚದ ರೀತಿನೀತಿಗಳನ್ನು ಅರಿತು ಅನುಭವಿಸಿದ ಕವಿಗೆ ಮಾತ್ರ ಇದು ಸಾಧ್ಯ.

ಇಂತಹದೇ ಇನ್ನೊಂದು ದೃಶ್ಯ. ಪಿಸುಣಿಗರ ಆರೋಪಕ್ಕೆ ದೊರೆ ಕಿವಿಗೊಟ್ಟು ಕೆರೆತೋರಿಸಬೇಕೆಂದು ಆಗ್ರಹಪಡಿಸಿದಾಗ ಭಕ್ತರ ಮನಸ್ಥಿತಿಯನ್ನು ಕವಿ ಬಹಳ ಸುಂದರವಾಗಿ ಚಿತ್ರಿಸಿದ್ದಾನೆ.

---

(೧) ಪ. ಪು. ಸಂ. ೬. ಪ. ೫, ೬.

ಏನಪ್ಪದೋ ಶಿವಶಿವಾ ಪದ್ಮಣಾಂಕಂಗ
ನೂನಕರುಣಾಳುಗಿಂದಿನದಿನದಪಾಯವೆನು
ತಾ ನಿರೋಧದೆ ಮಱುಗುವರ್ ಕೆಲರ್[1]... ...

ಈ ಪಿಸುಣರೇನನಾದೊಡವೊರೆಯೆ ಕೇಳ್ವೆಮ್ಮ
ಭೂಪನೆಂತಪ್ಪಜ್ಞನೋ ತಾನದೇನಱಿಯನೇ[2]... ..

ಇದು ದೇಸಿ. ಲೋಕಾನುಭವದಿಂದ ಬಂದ ಮಾತುಗಳು. ಈ ಕಾವ್ಯಕ್ಕೆ ಈ ದೇಸಿಯಿಂದ ಹೆಚ್ಚಿನ ಮೆರುಗು ಬಂದಿದೆಯೆಂಬುದನ್ನು ಬೇರೆ ಹೇಳುವ ಅವಶ್ಯಕತೆಯೇ ಇಲ್ಲ.

ಪದ್ಮಣಾಂಕನು ಪ್ರತಿಭಾವಂತನಾದ ಕವಿಯೆಂಬುದು ಇದುವರೆಗಣ ವಿವೇಚನೆಯಿಂದ ಸ್ಪಷ್ಟವಾಗುವುದು. ಭಾವನೆ, ಕಲ್ಪನೆ, ಸೂಕ್ಷ್ಮನಿರೀಕ್ಷಣೆ ಲೋಕಾನುಭವಗಳಿಂದ ಸ್ಫುರಣೆಗೊಂಡ ಈ ಕವಿಯ ಕಾವ್ಯ ರಸಭರಿತವಾಗಿದೆ. ರಸಭರಿತವಾದ ಆತನ ಕಾವ್ಯದಲ್ಲಿ ಧ್ವನಿಯ ಸ್ಥಾನವೇನೆಂಬುದನ್ನು ವಿವೇಚಿಸಬಹುದು. ಏಕೆಂದರೆ ಧ್ವನಿಯೇ ಕಾವ್ಯದ ಆತ್ಮವೆಂದು ಹೇಳುವರು. ಧ್ವನಿರೂಪವಾಗಿ ಹೇಳಿದ ಕಾವ್ಯ ರಸಭರಿತವಾಗುತ್ತದೆ. ಆದುದರಿಂದ ಪದ್ಮಣಾಂಕನ ಕಾವ್ಯಶೈಲಿಯಲ್ಲಿ ಧ್ವನಿಯ ಸ್ಥಾನವಾವುದೆಂಬದನ್ನು ಇಲ್ಲಿ ವಿಚಾರಿಸಬಹುದು.

ಕಾವ್ಯಾರಂಭದಲ್ಲಿ ಪದ್ಮಣಾಂಕನು 'ಮಹಾಕವಿ ಶಂಭುವಂ ಬಣ್ಣಿಪೆನಳ್ತಿಯಿಂ'[3] ಎಂದಿರುವನು. ಶಂಭು ಮಹಾಕವಿಯೆಂಬಲ್ಲಿ ಧ್ವನಿಯಡಗಿದೆ. ಕವಿಸೃಷ್ಟಿಯ ಘನತೆ, ಇಂತಹ ಸೃಷ್ಟಿಯ ಕರ್ತನು ಶಂಭುವಿಗೆ ಸರಿಸಮಾನವೆಂಬ ವಿಚಾರ, ... ಇದೆಲ್ಲ ಅರ್ಥ ಆಳವಾಗಿ ವಿಚಾರಿಸಿದಷ್ಟೂ ಹೊರಹೊಮ್ಮುತ್ತದೆ; ಅಮಿತವಾದ ಆನಂದವಾಗುತ್ತದೆ.

ಕವಿಗಳಲ್ಲಿ ಕೆಲವರು ದುರ್ಜನಂಗೆ ವಂದಿಪೆವೆಂಬರು. ಪದ್ಮಣಾಂಕನು ಈ ಸಂದರ್ಭದಲ್ಲಿ 'ಅವಂ ತನ್ನಿಂದೆ ತಾನೆ ವಂದಿಪ'[4]ನೆಂಬನು. ಇಲ್ಲಿ ಸಭಿಕರು ಸತ್ಕವಿಯನ್ನು ಮೆಚ್ಚಿ ಹೊಗಳಿದರೆ ಅವನು ಲಜ್ಜೆಯಿಂದ ತಲೆವಾಗುವನೆಂಬರ್ಥ ಧ್ವನಿತವಾಗುತ್ತದೆ.

---

(೧) ಪ. ಪು. ಸಂ. ೬. ಪ. ೩೧. (೨) ಪ. ಪು. ಸಂ. ೬. ಪ. ೭.
(೩) ,, ,, ೧. ಪ. ೫೦. (೪) ,, ,, ೧. ಪ. ೩೬.

ನೀನಾಡಿಸುವ ಹಾಹೆಯಾನಾದ ಕತದಿಂ,[೧] 'ಈ ತೊವಲಬೊಂಬೆಗಳ್ ತಾಮೆ ಯಾಡಲ್ ಸ್ವತಂತ್ರವೆ? '[೨] ಈ ಉಕ್ತಿಗಳಲ್ಲಿ ಬಂದಿರುವ ಹಾಹೆ, ತೊವಲಬೊಂಬೆ ಎಂಬ ಪದಗಳಲ್ಲಿ ಹುದುಗಿರುವ ಧ್ವನಿ ಮಾನವನ ಅಸಹಾಯಕತೆಯನ್ನು ಸೂಚಿಸುತ್ತದೆ.

'ಈ ಕೃತಿಯಂ ಶಿವಾರ್ಪಿತವನೆಸಗುವ... ...'[೩]
ಪದ್ಮರಸದೇಶಿಕಶಿರೋಮಣಿಗೆ ಮಾಱಿದೆನೆನ್ನಮತಿಯಂ[೪]

ಮತಿಯನ್ನು ಶಿವನಿಗೆ ಮಾರಿಕೊಳ್ಳುವಲ್ಲಿಯೂ ಕೃತಿಯನ್ನು ಶಿವಾರ್ಪಿತಮಾಡುವಲ್ಲಿಯೂ ಕವಿಯ ನಿಷ್ಠೆ, ಅರ್ಪಿತ ಭಾವನೆ ಇವು ಧ್ವನಿತವಾಗುತ್ತವೆ. ಅರ್ಪಿತ ಈ ಪದವು ವೀರಶೈವದಲ್ಲಿ ಒಂದು ಪರಿಭಾಷೆಯಾಗಿದ್ದು ಅದನ್ನು ಇಲ್ಲಿ ಬಳಸಿರುವುದರಿಂದ ಅದಕ್ಕೆ ಹೆಚ್ಚಿನ ಅರ್ಥ ಪ್ರಾಪ್ತವಾಗಿದೆ.

'ವಸಂತಮಾಸ ಕಣ್ದೆಱೆಯಿತು.'[೫] ತೆಂಬೆಲರ ಕಾಲಾಟವಗ್ಗಳಿಸಿತು.[೬] ಎಂದು ಹೇಳುವಲ್ಲಿ ಕಣ್ದೆಱೆ, ಕಾಲಾಟ ಎಂಬ ಪದಗಳಲ್ಲಿ ಧ್ವನಿ ವಿಶೇಷವಿರುವುದನ್ನು ಯಾರಾದರೂ ಅರಿಯಬಹುದಾಗಿದೆ. ಮಾಗಿ ಸರಿದು ವಸಂತ ಬಂದರೆ ಕವಿಗೆ ಹೊಸ ಋತು ಕಣ್ದೆಱೆದಂತಾಗಿದೆ. ಇದು ವರೆಗೆ ಇದ್ದ ಹಿಮದ ಕಾಟ ಹಿಮ್ಮೆಟ್ಟಿ ಸುಖಿಜನಕೆ ಸಂತಸದ ಕಾಲ ಬಂದಿತೆಂಬುದು ಇಲ್ಲಿ ಧ್ವನಿತವಾಗಿದೆ. 'ಕಾಲಾಟ' ಎಂಬ ಪದವು ತೆಂಗಾಳಿ ಸಾವಧಾನವಾಗಿ ಬೀಸುತ್ತಿರುವುದನ್ನು ನಮ್ಮ ಅವಗಾಹನೆಗೆ ತರುತ್ತದೆ. ಬಿರುಗಾಳಿ·ನಿಂತು ತೆಂಗಾಳಿ ಬೀಸತೊಡಗಿದಾಗ ಕವಿ ಅದರ ಕಾಲಾಟವಗ್ಗಳಿಸಿತು ಎಂದು ಸುಂದರವಾಗಿ ನಿರೂಪಿಸಿದ್ದಾನೆ.

ಪ್ರಪಾಶಾಲೆಯೊಳಗಿನ ಹೆಣ್ಣುಮಗಳು 'ಚಲ್ಲ ಗಣ್ಗಡೆಯ ಕುಡಿವೆಳಗೆಂಬುರುಳ್ಗಣ್ಣಿಯಲ್ಲಿ ಪಥಿಕ'[೭]ರನ್ನು ಬಿಗಿವಡೆದಳಂತೆ; ವೇಶ್ಯಾವಾಟದಲ್ಲಿ ಓರ್ವಳು 'ಬಟ್ಟೆಗರನ್ನು ಬಗಸೆಗಣ್ಣಿನಿಂದ ಕರೆದಳಂತೆ'[೮] ಆ ಗಣಿಕೆಯರು 'ಜೀವಂ ಬಡೆದ ಪೂಗಣೆಗಳಂತೆ'[೯] ಇದ್ದರಂತೆ. ಇಲ್ಲಿ ಹುದುಗಿರುವ ಧ್ವನಿಯನ್ನು ವಿವರಿಸುವ ಆವಶ್ಯಕತೆಯಿಲ್ಲ. ಸಹೃದಯರು ಅನುಭವಿಸಿ ಅರಿಯಬಹುದಾಗಿದೆ.

---

೧. ಪ. ಪು. ಸಂ. ೧. ಪ. ೩. ೨. ಪ. ಪು. ಸಂ. ೬. ಪ. ೨೨.
೩. ,, ,, ೧. ಪ. ೩೧. ೪. ,, ,, ೧. ಪ. ೩೧.
೫. ,, ,, ೮. ಪ. ೩. ೬. ,, ,, ೧. ಪ. ೨.
೭. ,, ,, ೮. ಪ. ೯. ೮. ,, ,, ೮. ಪ. ೧೧.
೯. ,, ,, ೮. ಪ. ೯೯.

ಕೊನೆಗೆ 'ಓಂ ನಮೋರತೀಶಾಯ' ಎಂದು ಪರಿಚಾರಿಕೆಯರು ವಿರಹದಲ್ಲಿ ಬೆಂದು ಬೇಕರಿವೋಗುವವಳಿಗೆ ಶೈತ್ಯೋಪಚಾರ ಮಾಡಿದರೆಂದು ಹೇಳುವಾಗ ವಿಶ್ವದಷ್ಟು ಅರ್ಥ ಅಲ್ಲಿ ಹುದುಗಿದೆಯೆಂದು ನಮ್ಮ ಅನುಭವಕ್ಕೆ ಬರುತ್ತದೆ. ಆಳೀ ಜನದ ಭಕ್ತಿ, ವಿರಹಿಣಿಯ ಪ್ರಾಣ ಹೋಗುವ ಸ್ಥಿತಿ ಇನ್ನೆಲ್ಲ ಅರ್ಥಗಳು ಅಲೆಅಲೆಯಾಗಿ ಬಂದು ಸಹೃದಯರಿಗೆ ಅಪಾರವಾದ ಆನಂದವನ್ನು ನೀಡುತ್ತವೆ.

ಇಷ್ಟು ಉದಾಹರಣೆಗಳು ಪದ್ಮಣಾಂಕನ ಧ್ವನಿಕಾವ್ಯದ ಕಲ್ಪನೆಯನ್ನು ಸಹಜವಾಗಿಯೇ ಮೂಡಬಲ್ಲವು. ಆತನ ಕಾವ್ಯ ಧ್ವನಿಪೂರಿತವಾಗಿರುವುದರಿಂದಲೇ ರಸಭರಿತವಾಗಿದೆ.

ಪದ್ಮಣಾಂಕನು ಶಕ್ತಿಯುತನಾದ ಸತ್ಕವಿಯೆಂಬುದಕ್ಕೆ ಬೇರೆ ಆಧಾರಗಳು ಬೇಕೆ ?

ಶಾಸ್ತ್ರಕೋವಿದ ಪದ್ಮಣಾಂಕ

ಪದ್ಮಣಾಂಕನು ಶಾಸ್ತ್ರ ಶ್ರೀರೋಹಣ ಗಿರಿಯನ್ನೇರಿ ಅಲ್ಲಿಯೂ ಸಿದ್ಧಪದದಲ್ಲಿ ನಿಂದವನು. 'ಆರಾರೇರರ್ ಶಾಸ್ತ್ರ ಶ್ರೀರೋಹಣ ಗಿರಿಯಂ'[೧] ಎಂದು ಷಡಕ್ಷರ ದೇವನು ಹೇಳುವಂತೆ ಯಾರು ಬೇಕಾದವರೂ ಏರಬಹುದಾದ ಶಾಸ್ತ್ರಶ್ರೀರೋಹಣ ಗಿರಿಯಲ್ಲ ಪದ್ಮಣಾಂಕನೇರಿದುದು. ಅನೇಕರಿಗೆ ಅಸಾಧ್ಯವಾದ ಶಾಸ್ತ್ರಜ್ಞಾನ ಆತನಿಗಿದ್ದಿತು. ಪದ್ಮರಾಜಪುರಾಣವು ಬಹುಶ್ರುತರನ್ನು ಬೆರಗುಗೊಳಿಸುವಂತಹ ಶಾಸ್ತ್ರಜ್ಞಾನವನ್ನು ಪ್ರಕಟಪಡಿಸುತ್ತದೆ. ಹೀಗೆ ಕವಿಯು ತನಗಿರುವ ಅಪಾರ ಶಾಸ್ತ್ರಜ್ಞಾನವನ್ನು ವ್ಯಕ್ತಗೊಳಿಸಿದ್ದರೂ ಎಲ್ಲೆಲ್ಲಿಯೂ ಕಾವ್ಯಕ್ಕೂ ಕಲೆಗೂ ತಡೆ ಯುಂಟಾಗದಂತೆ, ಬಹುಜಾಣ್ಮೆಯಿಂದ ಅದನ್ನು ನಿರೂಪಿಸಿದ್ದಾನೆ.

ಕಾವ್ಯ ನಿರ್ಮಿತಿಗೆ ಬೀಜದಂತಿರುವ ಶಕ್ತಿಯ ಜೊತೆಗೆ ಶಾಸ್ತ್ರಪಂಚಯವೂ ಕವಿಗೆ ಅವಶ್ಯವೆಂಬುದನ್ನು ಭಾರತೀಯ ಆಲಂಕಾರಿಕರು ಸ್ಪಷ್ಟವಾಗಿ ಸಾರಿದ್ದಾರೆ.

ಶಕ್ತಿರ್ನಿಪುಣತಾ ಲೋಕ ಶಾಸ್ತ್ರಕಾವ್ಯಾದ್ಯವೇಕ್ಷಣಾತ್
ಕಾವ್ಯಜ್ಞ ಶಿಕ್ಷಯಾಭ್ಯಾಸ ಇತಿ ಹೇತುಸ್ತದುದ್ಭವೇ[೨]

ಇಲ್ಲಿ ಶಕ್ತಿ, ಲೋಕ, ಶಾಸ್ತ್ರ ಕಾವ್ಯಗಳ ನಿರೀಕ್ಷಣೆಯಿಂದ ಬಂದ ನೈಪುಣ್ಯತೆ, ಸತತಾಭ್ಯಾಸ ಇವೆಲ್ಲ ಒಟ್ಟುಗೂಡಿದರೆ ಮಾತ್ರ ಘನವಾದ ಕಾವ್ಯದ ನಿರ್ಮಿತಿ ಯೆಂಬುದನ್ನು ಮಮ್ಮಟನು ಸ್ಪಷ್ಟಪಡಿಸಿದ್ದಾನೆ. ಶಕ್ತಿಯಿಂದ ಅಂದರೆ ಪ್ರತಿಭೆ ಯಿಂದ ಕಾವ್ಯ ಹುಟ್ಟಿದರೂ ಅದು ಅಷ್ಟುದೊಡ್ಡ ಕಾವ್ಯವಾಗಲಾರದೆಂದು ಈ ಆಲಂಕಾರಿಕರ ಮತ. ಕಾವ್ಯಕ್ಕೂ ಶಾಸ್ತ್ರಕ್ಕೂ ಆವ ಸಂಬಂಧ ಎಂಬ ಪ್ರಶ್ನೆ ಇಲ್ಲಿ ಸಹಜವಾಗಿ ಉದ್ಭವಿಸುತ್ತದೆ. ಕವಿಗೆ ಅನುಭವ ಅವಶ್ಯ. ಈ ಅನುಭವವನ್ನು ಆತನು ನಾನಾಮುಖವಾಗಿ ಸಂಗ್ರಹಿಸಿದಷ್ಟೂ ನೆಟ್ಟಗೆ. ಲೋಕ, ಶಾಸ್ತ್ರ ಕಾವ್ಯಾದಿ ಗಳಿಂದ ಆತನು ಅನುಭವವನ್ನೂ ಜ್ಞಾನವನ್ನೂ ಸಂಪಾದಿಸಿದರೆ ಕಾವ್ಯಕ್ಕೆ ಆಳ, ಅಗಲ, ಎತ್ತರಗಳು ಪ್ರಾಪ್ತವಾಗುತ್ತವೆ. ಆಳ, ಅಗಲ, ಎತ್ತರಗಳಿಲ್ಲದ ಕಾವ್ಯ

---

೧. ರಾ. ಕೇ. ವಿ. ಆ. ೧. ಪ. ೨೯. ೨. ಕಾ. ಪು. ಉಲ್ಲಾಸ.

ಘನವಾದ ಕಾವ್ಯವೇ ಅಲ್ಲ. ಆದುದರಿಂದಲೇ ಶಕ್ತಿ, ಶಾಸ್ತ್ರಪರಿಚಯ, ಲೋಕಾನುಭವ, ಸತತಾಭ್ಯಾಸ ಇವೆಲ್ಲ ಒಟ್ಟುಗೂಡಿಯೇ ಕಾವ್ಯಕ್ಕೆ ಕಾರಣವಾಗುತ್ತವೆಂಬ ಅಭಿಪ್ರಾಯವನ್ನು ಭಾರತೀಯ ಆಲಂಕಾರಿಕರು ವ್ಯಕ್ತಪಡಿಸಿರುವರು. ಭಾವಕ್ಕೂ ರಸಕ್ಕೂ ಅವರು ಕಾವ್ಯದಲ್ಲಿ ಪ್ರಥಮಸ್ಥಾನವನ್ನು ಪ್ರಧಾನಸ್ಥಾನವನ್ನು ಕೊಟ್ಟಿರುವರೆಂಬುದನ್ನು ಬೇರೆ ಹೇಳುವ ಕಾರಣವೇ ಇಲ್ಲ. ಶಕ್ತಿಯೇ ಕಾವ್ಯದಬೀಜವೆಂದಿರುವರು. ಬೀಜವಿಲ್ಲದೆ ವೃಕ್ಷವೆಲ್ಲಿ? ಪದ್ಮಣಾಂಕನಲ್ಲಿ ಬೀಜರೂಪದ ಈ ಶಕ್ತಿ ಅತ್ಯಂತ ಪ್ರಫುಲ್ಲಿತವಾದ ಸ್ಥಿತಿಯಲ್ಲಿರುವುದನ್ನು ನೋಡಲಾಗಿದೆ. ಆತನಲ್ಲಿ ಶಾಸ್ತ್ರಜ್ಞಾನವೂ ಅತ್ಯುನ್ನತವಾದ ಮಟ್ಟದಲ್ಲಿದೆ. ಪದ್ಮಣಾಂಕನು ಪ್ರತಿಭಾವಂತನಾದ ಕವಿ; ಘನವಾದ ಪಂಡಿತ; ಶಾಸ್ತ್ರಕೋವಿದ.

ಶಕ್ತಿ ಅಂದರೆ ಪ್ರತಿಭೆ ಜನ್ಮತಃ ಪ್ರಾಪ್ತವಾಗುವುದೆಂದು ಹೇಳುವರು. ನವಕವಿತಾ ಚಿಂತಾರತ್ನವು ಮಾರಾರಿಯ ಕೃಪೆಯಿಲ್ಲದಂಗೆ ದೊರೆಯದೆಂದೂ[೧] ಅದು 'ಬಹುತರ ಕೋಟಿ ಜನ್ಮಗಳೊಳಾರ್ಜಿಸಿದುತ್ತಮ ಪುಣ್ಯದೇಳ್ಗೆಯಿಂದ'[೨] ಪ್ರಾಪ್ತವಾಗುವುದೆಂದೂ ಷಡಕ್ಷರದೇವನ ಅಭಿಮತ. ಪದ್ಮಣಾಂಕನಿಗೆ ಪ್ರತಿಭೆ ನಿಸರ್ಗಸುಭಗವಾಗಿ ಬಂದಂತೆ ಪಾಂಡಿತ್ಯವೂ ಆನುವಂಶಿಕವಾಗಿಯೇ ಬಂದಂತಿದೆ. ಆಚಾರ್ಯಕುಲ ಶಿರೋರತ್ನರೆನಿಸಿದ ಈ ಮನೆತನದವರು ನಿಜವಾಗಿಯೂ ವೇದಾಗಮ ಶಾಸ್ತ್ರಜ್ಞಾನದಲ್ಲಿ ಆಚಾರ್ಯಪುರುಷರೇ ಎನಿಸಿದ್ದರು. ಸಕಲೇಶಮಾದರಸರ ಮಕ್ಕಳಾದ ಮಾಯಿದೇವಾರ್ಯರು ಪದಾರ್ಥತ್ರಯಜ್ಞಾನಸಂಕಾಶರೆನಿಸಿದ್ದರು.[೩] ಕೆರೆಯ ಪದ್ಮರಸರಂತೂ ಶಿವಾದ್ವೈತಸಾಕಾರಸಿದ್ಧಾಂತ ಪ್ರತಿಷ್ಠಾಪನಾಚಾರ್ಯರು; ತ್ರಿಭುವನ ತಾತನಂತಹ ವಾದಿಯನ್ನು ಪರಾಭವಗೊಳಿಸಿದವರು; ಸಾನಂದ ಚರಿತೆ ದೀಕ್ಷಾಬೋಧೆಗಳಂತಹ ಗ್ರಂಥಗಳನ್ನು ರಚಿಸಿದವರು. ಅವರ ಮಕ್ಕಳಾದ ಕುಮಾರ ಪದ್ಮರಸ 'ಜ್ಞಾನರತ್ನಾಕರ'[೪]ರೆನಿಸಿರುವರು. ಕೆರೆಯ ಪದ್ಮರಸರ ಸಮ್ಮುಖದಲ್ಲಿ ತ್ರಿಭುವನತಾತನೊಡನೆ ವಾದವನ್ನು ಹೂಡಿದವರೂ ಅವನನ್ನು ಪರಾಭವಗೊಳಿಸಿದವರೂ ಕುಮಾರಪದ್ಮರಸರೇ. ದೇವಾರ್ಯರು 'ಪ್ರಣತಬುಧಸ್ತೋಮ, ಗುಣಾಭಿರಾಮರೆನಿಸಿ'[೫]ದ್ದರೆ ಗೌರಾರ್ಯರು 'ಶಿವಾಗಮಾಭರಣ'[೬]ರೆನಿಸಿರುವರು. ಗೌರಾರ್ಯರ ಮಕ್ಕಳಾದ ವೀರಣಾರ್ಯರು 'ಸಮಸ್ತಾಗಮಾಚಾರ್ಯ'[೭]ರಾಗಿರು

---

೧. ರಾ. ಕೇ. ಪ. ಆ. ೧. ಪ. ೨೯. ೨. ಶ. ಶಂ. ವಿ. ಆ. ೫. ಪ.
೩. ಪ. ಪು. ಸಂ, ೧. ಪ. ೧೪. ೪. ಪ. ಪು. ಸಂ. ೧. ಪ. ೨೦.
೫. ,, ,, ೧. ಪ. ೨೨. ೬. ,, ಸಂ. ೧. ಪ. ೨೪.
೭. ,, ,, ೧. ಪ. ೨೭.

ವರು. ಈ ವೀರಣಾರ್ಯರ ಮಗ ಪದ್ಮರಾಜಪುರಾಣದ ಕರ್ತೃ ಕವಿ ಪದ್ಮಣಾಂಕ. ಅಖಂಡವಾಗಿ ೮-೧೦ ತಲೆಮಾರುಗಳ ವರೆಗೆ ಪಾಂಡಿತ್ಯ ಅವರ ಮನೆತನವನ್ನು ಬೆನ್ನುಹತ್ತಿ ಬಂದಂತಿವೆ. ಶಾಸ್ತ್ರಾಧ್ಯಯನ ಅವರ ನಿತ್ಯ ಜೀವನದ ವ್ಯವಸಾಯ ವಾಗಿದೆ; ವ್ಯಾಸಂಗವಾಗಿದೆ. ಮಾನವಜೀವನದ ವಿಕಸನಕಾರ್ಯದಲ್ಲಿ ಪರಂಪರೆಗೆ ಮಹತ್ವದ ಸ್ಥಾನವಿದೆ. ಹೀಗೆ ಶಾಸ್ತ್ರಪರಂಪರೆಯುಳ್ಳ ಪಂಡಿತರ, ಆಚಾರ್ಯಶಿರೋ ಮಣಿಗಳ ಮನೆತನದಲ್ಲಿ ಜನಿಸಿದ ಪದ್ಮಣಾಂಕನು ಶಾಸ್ತ್ರಸಂಪನ್ನನಾಗಿರುವುದು ತೀರ ಸಹಜವಾಗಿದೆ. ಶಾಸ್ತ್ರವೆಂದರೆ ಅವನಿಗೆ ಉಸುರಾಡಿಸುವಷ್ಟು ಸಹಜವಾಗಿದೆ.

ವೇದ, ಆಗಮ, ಶಾಸ್ತ್ರ ಮತ್ತು ಸಿದ್ಧಾಂತ ಇವುಗಳ ವಿಷಯವಾಗಿ ಪದ್ಮಣಾಂಕನಿಗಿದ್ದ ಆದರ ಮತ್ತು ಅಭಿರುಚಿ ಪದ್ಮರಾಜಪುರಾಣದ ಆರಂಭದಲ್ಲಿಯೇ ವ್ಯಕ್ತವಾಗಿದೆ.

ಬಸವಾದಿಪ್ರಮಥರಿಗೆ ವಂದನೆಗಳನ್ನರ್ಪಿಸಿದಮೇಲೆ ಕೆಳಗೆ ಕಾಣಿಸಿದ ಆಚಾರ್ಯಶ್ರೇಷ್ಠರಿಗೆ ನಮಸ್ಕಾರ ಮಾಡಿರುವರು.

ಶ್ರೀ ವಿಶುದ್ಧ ಪ್ರಕರಣಂಗಳನೆಸಗಿ ವೇದ
ಶೈವತಂತ್ರಾವಳಿಗೆ ಭಾಷ್ಯಮಂ ದೀಪಿಕೆಯ
ನಾ ವೃತ್ತಿಯಂ ವ್ಯಾಖ್ಯೆಯಂ ಬರೆದ ಬೋಧಾಯನಾಯನುರು
ಶಂಕರಾರ್ಯಂ
ವೋ ವೋ ಹರದತ್ತರ್ ತ್ರಿಲೋಚನಾಘೋರ ಶಿವ
ದೇವಗುಣ ನಿಲಯ ಸರ್ವಾತ್ಮ ಶಂಭುಗಳಾನ
ತಾವನರ್ ಭೂತಿಕಂಠಾದಿ ಪೂರ್ವಾಚಾರ್ಯರೀವುದೆಮಗಮಲ
ಮತಿಯಂ

ವೀರಮಾಹೇಶ್ವರಾಚಾರಸಂಗ್ರಹ ಶಾಸ್ತ್ರ
ಕಾರನೆನಿಸಿದ ನೀಲಕಂಠ ನಾಗಾರ್ಯಂಗೆ
ಸಾರತರ ಬಸವರಾಜೀಯಮಂ ನೆಗಳ್ದಪಾಲ್ಕುರಿಕೆ
ಸೋಮೇಶ್ವರಂಗೆ
ಚಾರುಸಾರೋದ್ಧಾರಮಂ ಪಡೆದ ಲಕ್ಷ್ಮೀಧ
ರಾರಾಧ್ಯಪತಿಗುರು ಶಿವಜ್ಞಾನದೀಪಿಕೆಯ
ನೋರಂತೆ ರಚಿಸಿದನುಪಮ ಮಲ್ಲಿಕಾರ್ಜುನಾಚಾರ್ಯಂಗೆ
ವಂದಿಸಿದಪೆಂ

ಖಂಡಿತಪ್ರತಿಪಕ್ಷ ಶಿವಲೆಂಕಮಂಚಣ್ಣ
ಪಂಡಿತರ ಭರ್ಗವೇತಂಡಭೂತೋಧ್ವರ್ಾಕ್ಷ
ಪಂಡಿತರ ಪರವಾದಿತುಂಡಪದ್ಮಾಬ್ಜಪ್ರಚಂಡವಿಭವ ಶ್ರೀಪತಿ
ಪಂಡಿತರ ಹರನ ದೋರ್ದಂಡಬಲರೆನಿಪಖಿಲ
ಪಂಡಿತರ ವಿಮಲ ಚರಣಾಬ್ಜಂಗಳೆಮ್ಮ ಹೃತ್
ಪುಂಡರೀಕಾಕರದೊಳಿರ್ಕೆ ಸತ್ಕವಿಹಂಸಮಂಡಲಂ ವಿಹರಿಪಂತೆ[೧]

ಇಲ್ಲಿ ಉಕ್ತರಾದ ಪೂರ್ವಾಚಾರ್ಯರೂ ನೂತನಾಚಾರ್ಯರೂ ಶೈವ, ವೀರಶೈವ ಸಿದ್ಧಾಂತಗಳಲ್ಲಿ ಪ್ರಖ್ಯಾತರಾದವರು. ಅವರು ಬರೆದ ಭಾಷೆಗಳೂ ದೀಪಿಕೆಗಳೂ ವ್ಯಾಖ್ಯಾನಗಳೂ ಸುಪ್ರಸಿದ್ಧವಾಗಿವೆ. ಶೈವ, ವೀರಶೈವ ಶಾಸ್ತ್ರಗಳಲ್ಲಿ ನಿಪುಣನಾದ ಪದ್ಮಣಾಂಕನಿಗೆ ಈ ಆಚಾರ್ಯರ ಬಗೆಗೆ ಗೌರವವಿರುವುದು ಸ್ವಾಭಾವಿಕವಾಗಿದೆ. ಸತ್ಕವಿಹಂಸಮಂಡಲವು ವಿಹರಿಸುವಂತೆ ಅವರ ಪಾದಕಮಲಗಳು ತನ್ನ ಹೃದಯ ದಲ್ಲಿ ನೆಲಸಲೆಂದು ಪ್ರಾರ್ಥಿಸಿದ್ದಾನೆ.

ವೇದಾಗಮಪುರಾಣಗಳಲ್ಲಿ ಬಲ್ಲಿದನಾದ ಪದ್ಮಣಾಂಕನು ವ್ಯಾಕರಣ ಅಲಂಕಾರ ಶಾಸ್ತ್ರಗಳಲ್ಲಿ ಪಾರಂಗತನಾಗಿದ ನೆಂದು ಬೇರೆ ಹೇಳಬೇಕೆ ? ಏಕೆಂದರೆ ಸಾಹಿತ್ಯಕ್ಕೆ ಆ ಶಾಸ್ತ್ರಗಳು ತೀರ ನಿಕಟವರ್ತಿಗಳು. ಆದುದರಿಂದ ಕವಿಯಾದ ಪದ್ಮಣಾಂಕನು ಅವುಗಳನ್ನು ಆಸ್ಥೆಯಿಂದ ಅಭ್ಯಸಿಸಿರುವುದು ಸಹಜವಾಗಿದೆ.

ಸತಿಸಪ್ತಮಿಯ ಭೇದಮಂ ರಳಕುಳಕ್ಷಳಮ
ನತಿಶಯದ ಗಮಕಕ್ರಿಯಾಸಮಾಸಂಗಳಂ
ಶ್ರುತಿಸಹ್ಯಸಂಧಿಯಂ ತದ್ಧಿತಪದಮನಪಭ್ರಂಶದೇಶೀಯಂಗಳಂ
ನುತಮಾಗೆಯೋಗಿಪ ಸಮಾಸಮಂ ಸುಸಮಸಂ
ಸ್ಕೃತಮಂ ವಿರಹಿತಾವ್ಯಯೋರುಸಂಸ್ಕೃತಲಿಂಗ
ತತಿ ಶಿಥಿಲಪದಮುಖಾದ್ಯುಕ್ತಲಕ್ಷಣಮಱಿವಚತುರರೀಕೃತಿ
ಗೊಲಿಯರೆ ?[೨]

ಶಬ್ದಮಣಿದರ್ಪಣದ ಕರ್ತೃ ಕೇಶಿರಾಜನ ಮೇಲೆ ಮಾರ್ಪುಮಾಡಿದ ಪದ್ಮಣಾಂಕನು ಉತ್ತಮ ವೈಯಾಕರಣಿಯಾಗಿರಬೇಕೆಂದು ಬೇರೆ ಹೇಳಬೇಕಿಲ್ಲ. ಕೇಶಿರಾಜನು

---

೧. ಪ. ಪು. ಸಂ. ೧. ಪ. ೧೧, ೧೨, ೧೩. ೨. ಪ. ಪು. ಸಂ. ೧. ಪ. ೩೯.

ಗಮಕ ಸಮಾಸವೊಂದನ್ನೇ ಕನ್ನಡದ ಅಸಾಧಾರಣ ಲಕ್ಷಣಗಳಲ್ಲಿ ಸೇರಿಸಿದ್ದರೆ ಪದ್ಮಣಾಂಕನು ಅದರೊಡನೆ ಕ್ರಿಯಾಸಮಾಸವನ್ನೂ ಹೇಳಿದ್ದಾರೆ. ಕನ್ನಡಭಾಷಾ ಶಾಸ್ತ್ರವನ್ನು ಬಲ್ಲವರಿಗೆ ಕ್ರಿಯಾಸಮಾಸದ ವೈಶಿಷ್ಟ್ಯ ತಿಳಿದಿರಲಿಕ್ಕೆ ಸಾಕು. ಅಂತೆಯೇ ಈ ಪದ್ಯ ಪದ್ಮಣಾಂಕನ ವ್ಯಾಕರಣಪ್ರೌಢಿಮೆಯ ದ್ಯೋತಕವಾಗಿದೆ. ಕಾವ್ಯಗುಣಗಳನ್ನೂ ದೋಷಗಳನ್ನೂ ಮಿಕ್ಕವರಂತೆ ಈತನೂ ವಿವರಿಸಿದ್ದಾನೆ.[೧] ಅಲಂಕಾರಶಾಸ್ತ್ರದಲ್ಲಿ ಈತನು ಬಲ್ಲಿದನಾಗಿರಬೇಕೆಂದು ಇದರಿಂದ ವ್ಯಕ್ತವಾಗುತ್ತದೆ. ಆದರೆ ಪದ್ಮರಾಜಪುರಾಣದಲ್ಲಿ ಮನೋಜ್ಞವಾದ ಕೆಲವೇ ಅಲಂಕಾರಗಳು—ಉಪಮೆ, ರೂಪಕ, ಉತ್ಪ್ರೇಕ್ಷೆ ಮುಂತಾದುವು–ಹಿತಮಿತವಾಗಿ ಬಂದಿರುವವು. ಕವಿ ತನ್ನ ಪಾಂಡಿತ್ಯ ಪ್ರದರ್ಶನಕ್ಕಾಗಿ ಶ್ಲೇಷ, ಪರಿಸಂಖ್ಯೆಗಳಂತಹ ಭಾರವಾದ ಅಲಂಕಾರಗಳನ್ನು ಬಳಸಿಲ್ಲವೆಂದೇ ಹೇಳಬಹುದು. ಅಂತೆಯೇ, ಕವಿ ಪದ್ಮಣಾಂಕ ಶಾಸ್ತ್ರಕೋವಿದ ಪದ್ಮಣಾಂಕ-ಎರಡು ವ್ಯಕ್ತಿತ್ವಗಳೂ ಈ ಪುರಾಣದಲ್ಲಿ ಬೇರೆ ಬೇರೆಯಾಗಿಯೇ ನಿಂತು ಕಾರ್ಯಮಾಡಿವೆಯೆಂದು ಹೇಳುವುದು. ಕಾವ್ಯದಲ್ಲಿ ಪಾಂಡಿತ್ಯ ಮುಂದೆ ಬಂದು ಕಾವ್ಯದ ರಸಾಸ್ವಾದನೆಗೆ, ಕಥೆಯ ಓಟಕ್ಕೆ ತಡೆಯನ್ನುಂಟು ಮಾಡಿಲ್ಲವೆಂದೇ ಹೇಳಬೇಕಾಗುತ್ತದೆ.

ಆದರೂ ಒಂದು ಕಡೆಗೆ ಅಪವಾದವೆಂಬಂತೆ ಕೆರೆಯಪದ್ಮರಸರನ್ನು ಮದುವೆಗೆಂದು ಇದಿರುಗೊಳ್ಳುವ ಮೆರೆವಣಿಗೆಯನ್ನು ವರ್ಣಿಸುವಾಗ ಪದ್ಮಣಾಂಕನು ತನಗಿದ್ದ ಸಂಗೀತಶಾಸ್ತ್ರಪರಿಚಯವನ್ನೆಲ್ಲ ಪ್ರದರ್ಶಿಸಹೊರಟಂತೆ ತೋರುತ್ತದೆ.

ತರದಿಂ ವಿಪಂಚಿ ವಲ್ಲಕಿ ಚಿತ್ರೆಯಾಜ್ಯೇಷ್ಠೆ
ವರಘೋಷವತಿ ವಿಜಯೆ ನಕುಲೋಷ್ಠಿ ಕೂರ್ಮಿ ತುಂ
ಬುರಿ ವಿಕುಬ್ಜಿಕೆ ಹಸ್ತಿಕಾಖ್ಯೆ ಶತತಂತ್ರಿ ಕಿನ್ನರಿ ಲಸತ್ ಪರಿವಾದಿನಿ
ಕರಮೆ ಸಾರಂಗಿ ತತ್ರಿಶರಿಯಾಲಾಪಿನಿ ವಿ
ಚರಿತರಾವಣ ಹಸ್ತೆ ಡಕ್ಕುಲಿ ಪ್ರಮುಖ ಬಂ
ಧುರತತಮನಂತೆ ಪಟಹಂ ಹುಡುಕ್ಕೆ ಕುಡುಕ್ಕೆ ಡಕ್ಕೆ ಪಟಹಂ
ಮೃದಂಗಂ[೨]

ಹೀಗೆಯೇ ಕರಡಿ, ಡಕ್ಕುಲಿ, ಮಂಡಿಡಕ್ಕೆ ಶಲ್ಲುಕೆ ಕುಡುವೆ, ರುಂಜೆ, ಸತ್ರಿವಳಿ, ಡವಸೆ, ನಿಸ್ಸಾಣ, ಡಮರುಕ, ಭೇರಿ, ಸ್ತಂಭಕಿ, ತಾಳ, ಕಾಂಸ್ಯತಾಳ,

---

೧. ಪ. ಪು. ಸಂ. ೧. ಪ. ೩೭, ೩೮. ೨. ಪ. ಪು. ಸಂ. ೩. ಪ. ೫೨.

ಜಯಘಂಟೆ, ಕುಡುಕ, ಕಮ್ರ, ಪಾಲಿಕೆ, ಮುಹುರಿ, ಶೃಂಗವಂಶ, ಕಹಳೆ, ಶಂಖ ಇವೇ ಮೊದಲಾದ ವಾದ್ಯವಿಶೇಷಗಳನ್ನೂ, ತಳಸಂಚು, ಮಧ್ಯಸಂಚು, ಉಪ್ಪರದ ಸಂಚು, ಇವುಗಳನ್ನು ಅಳವಡಿಸಿ, ಅಸ್ವರ ಸ್ವರಜನಿತವಾದ ಎಂಬತ್ತೆಂಟು ಪಾಠ ಭೇದಗಳನ್ನೂ ತಿಳಿದು ತಾಳಾನುಗತವಾಗಿ ಬಾಜಿಸುತ್ತ ಹೋದುದನ್ನು ಕವಿ ನಾಲ್ಕು ಪದ್ಯಗಳಲ್ಲಿ ವಿಸ್ತಾರವಾಗಿಯೇ ಬಣ್ಣಿಸಿದ್ದಾನೆ. ಆ ಮೇಲೆ ನಾಲ್ಕು ಪದ್ಯಗಳಲ್ಲಿ[1] ವಿಜಯ, ಸಾಳಗ, ಪ್ರಥಮ, ಕೀಲ, ಪರಸ, ಅಸಮಪಟು ಇವೇ ಮೊದಲಾದ ಮಠ್ಠಗಳನ್ನೆಲ್ಲ ನಿವರಿಸುವನು. ಆ ಮೇಲೆ ಮದ್ದಳೆಯವರು, ತಾಳದವರು, ಗಾನದವರು, ನರ್ತಕ ನರ್ತಕಿಯರು ಇವರೇ ಮೊದಲಾದವರು ಪ್ರಕಟಪಡಿಸಿದ ಜಾಣ್ಮೆಯನ್ನು ವಿವರಿಸಿರುವನು.[2] ಇಲ್ಲಿಯೂ ಆಯಾ ವಾದ್ಯಗಳ ಬಗೆಗಿರುವ ಶಾಸ್ತ್ರ ವಿಶೇಷದ ಪರಿಚಯ ಪದ್ಮಣಾಂಕನಿಗಿದ್ದಿತೆಂಬುದು ಸ್ಪಷ್ಟವಾಗುತ್ತದೆ. ಪರಿಚಯ ವಿಷ್ಟೇ ಅಲ್ಲ, ಕವಿ ಆ ವಿಷಯಗಳನ್ನು ಲೀಲಾಜಾಲವಾಗಿ ಉಪಯೋಗಿಸುವ ರೀತಿಯನ್ನು ನೋಡಿದರೆ ಸಂಗೀತಶಾಸ್ತ್ರದಲ್ಲಿ ಆತನು ಪರಿಣತಮತಿಯಾಗಿದ್ದನೆಂದು ಸ್ಪಷ್ಟವಾಗಿ ಹೇಳಬಹುದು. ಈ ಶಾಸ್ತ್ರ ವಿವರಣೆಗಾಗಿ ೧೩ ಪದ್ಯಗಳನ್ನು ಕವಿ ಪದ್ಮಣಾಂಕನು ಏಕೆ ಬಳಸಿದನೆಂಬುದು ವಿಚಾರಾರ್ಹವಾಗಿದೆ. ಒಮ್ಮೆ ಕಥೆಯನ್ನಾರಂಭಿಸಿದ ಕವಿ ಸಾಂಪ್ರದಾಯಕವಾದ ಯಾವ ವರ್ಣನೆಗಳಿಗೂ ಮನಸೋತಿಲ್ಲ. ಹೀಗಿರುವಾಗ ಸಂಗೀತಶಾಸ್ತ್ರದ ವಿಷಯವೇಕೆ ಇಲ್ಲಿ ವಿಸ್ತೃತವಾಗಿ ಬಂದಿದೆ? ಇದರ ಅರ್ಥವಾಗಬೇಕಾದರೆ ಹಳ್ಳಿಯ ಮೆರವಣಿಗೆಗಳ ದೃಶ್ಯವನ್ನು ನಮ್ಮ ಮನದ ಕಣ್ಣೆದುರು ತಂದುಕೊಳ್ಳಬೇಕು. ಎಲ್ಲ ವಾದ್ಯದವರಿಗೂ ಅಲ್ಲಿ ಸ್ಥಾನ. ಪ್ರತಿಯೊಂದು ವಾದ್ಯದವರೂ ತಮ್ಮ ತಮ್ಮ ಜಾಣ್ಮೆಯನ್ನು ಪ್ರಕಟಪಡಿಸುವವರೇ. ಹೀಗಾಗಿ ಸಂಜೆ ೧೦ ಗಂಟೆಗೆ ಹೊರಟ ಮೆರವಣಿಗೆ ಅರ್ಧಮೈಲು ಹೋಗಬೇಕಾದರೆ ಬೆಳಗಾಗಿ ಹೋಗುತ್ತದೆ. ಇದನ್ನು ಕಣ್ಣಾರೆ ಕಂಡು, ಆ ಶಾಸ್ತ್ರಗಳ ಸವಿಯನ್ನು ಮನವಾರೆ ಸವಿದ ಪದ್ಮಣಾಂಕನಿಗೆ ಅದನ್ನು ವಿವರಿಸಿದೆ ಗತ್ಯಂತರವಿಲ್ಲವೆನಿಸಿದೆ. ತಾವು ಮನಸೋತ ಪ್ರಸಂಗಗಳನ್ನು ಔಚಿತ್ಯವಿರಲಿ ಇಲ್ಲದಿರಲಿ ಪುಟಪುಟಗಳವರೆಗೆ ವರ್ಣಿಸಿದ ಕವಿಗಳೂ ಉಂಟು; ಸಾಮಾನ್ಯಕವಿಗಳಲ್ಲ ದೊಡ್ಡ ಕವಿಗಳು; ಹಿರಿಯಕವಿಗಳು. ಅದನ್ನು ಅನುಲಕ್ಷಿಸಿದರೆ ಪದ್ಮಣಾಂಕನ ವರ್ಣನೆ ಕ್ಷಮ್ಯವೆಂದೇ ಹೇಳಬೇಕಾಗುತ್ತದೆ.

---

೧. ಪ. ಪು. ಸಂ. ೩. ಪ. ೫೬, ೫೭, ೫೮, ೫೯.

೨. ,, ,, ೩. ಪ. ೬೦, ೬೫.

ಸಂಗೀತಶಾಸ್ತ್ರಜ್ಞಾನವನ್ನು ಪ್ರಕಟಿಸುವ ಈ ಭಾಗದಲ್ಲಿ[೧] ಕಾವ್ಯವಿಲ್ಲವೆಂಬುದನ್ನು ನಾವು ಒಪ್ಪಲೇಬೇಕು. ಅಂತೆಯೇ ಶಾಸ್ತ್ರವನ್ನು ಹಿಂದೆ ಸರಿಸಿ ಒಮ್ಮೆಲೆ ಕಾವ್ಯ ಮುಂದೆ ಬಂದು ನಮ್ಮನ್ನು ಬೆರಗುಗೊಳಿಸುತ್ತದೆ.

ನಲಿ ನಲಿದು ಗತಿಗತಿಗೆ ಕುಣಿಕುಣಿದು ಕುಕಿಲಿಜಿವ
ಸುಲಭರ ದಿಗಂತಮಂ ವ್ಯಾಪಿಸಿ ಮೊರೆವ ವಾದ್ಯ
ಕುಲದ ಬಹುರಭಸದಿಂದವನಿ ಶಬ್ದಬ್ರಹ್ಮಮಯವಾಗಿ ಗಮಿಸುವಲ್ಲಿ[೨]

ಅವನಿ ಶಬ್ದ ಬ್ರಹ್ಮಮಯವಾಯಿತು. ಎಂಬ ಒಂದು ಮಾತಿನಲ್ಲಿ ಇಡೀ ಮೆರೆವಣಿಗೆಯ ರಭಸದ ಕಲ್ಪನೆ ಬಂದು ಹೋಗುತ್ತದೆ. ಅಂತಹ ಮೆರೆವಣಿಗೆಗಳಲ್ಲಿ ಪ್ರಕಟವಾಗುವುದು ಸಂಗೀತ ಶಾಸ್ತ್ರ; ಸೌಂದರ್ಯವಲ್ಲ. ವಾದ್ಯಗಳ ರಭಸ; ನಯವಲ್ಲ. ಇದನ್ನರಿತ ಕವಿ ಪದ್ಮಣಾಂಕನು ಮೆರೆವಣಿಗೆಯ ವಾಸ್ತವಿಕ ಚಿತ್ರವನ್ನೇ ಕೊಟ್ಟಿರುವನೆಂದು ಹೇಳಬಹುದು.

ಪದ್ಮಣಾಂಕನು ಶಾಸ್ತ್ರಶ್ರೀರೋಹಣಗಿರಿಯನ್ನೇರಿರುವುದು ಕೆಜಿಯ ಪದ್ಮರಸರು ತ್ರಿಭುವನತಾತನೊಡನೆ ವಾದಹೂಡಿ ಶಿವಾದ್ವೈತಸಾಕಾರಸಿದ್ಧಾಂತವನ್ನು ಪ್ರತಿಷ್ಠಾಪಿಸುವ ಸಮಯದಲ್ಲಿ.[೩] ಆ ಭಾಗವನ್ನು ಓದಿದರೆ ಕವಿಯ ವೇದ, ಆಗಮ, ಶಾಸ್ತ್ರ, ಪುರಾಣಗಳ ಅಗಾಧವಾದ ಜ್ಞಾನಕ್ಕೆ ಎಲ್ಲರೂ ತಲೆದೂಗಬೇಕಾಗುವುದು. 'ಈ ವಾದ ಪ್ರಕರಣದೊಳ್ ಸಕಲ ವೇದೋಪನಿಷತ್,ಪುರಾಣ,ಸ್ಮೃತಿ,ಇತಿಹಾಸ, ಆಗಮಾದಿಗಳೊಳ್ ಎಂತೊರೆದವಂತೆ ಪೇಳ್ದೆನಲ್ಲದೆ ಎನ್ನವಾಗ್ಬಲದಿಂದ ಅರ್ಥಾತಿರೇಕಮಂ ಪೇಳ್ವುದಿಲ್ಲ."[೪] ಎಂದು ಪದ್ಮಣಾಂಕನೇ ಹೇಳಿದ್ದಾನೆ. ವಾದದ ವಿಷಯ ಇಷ್ಟು—

ತ್ರಿಭುವನತಾತನೆಂಬ ವೈಷ್ಣವವಾದಿಯು ನರಸಿಂಹಬಲ್ಲಾಳನಲ್ಲಿಗೆ ಬಂದು ಅರಮನೆಯ ಹೆಬ್ಬಾಗಿಲಿಗೆ ಒಂದು ಪತ್ರವನ್ನು ಕಟ್ಟಿ ವಿಷ್ಣುವೇ ಪರತತ್ತ್ವ, ಪರದೈವ; ಆತನಿಗಿಂತ ಆಧಿಕವಾದ ದೈವವಿಲ್ಲ. ಎಂದು ಹೀಗೆ ಸಾರಿದನು:

---

೧. ಪ. ಪು. ಸಂ. ೧, ಪ. ೫೭-೬೫.

೨. ಪ. ಪು. ಸಂ. ೩, ಪ. ೬೬.

೩. ಪ. ಪು. ಸಂ. ೧೦, ೧೧.

೪. ಪ. ಪು. ಸಂ. ೧೦, ಪ. ೧.

ಸಲೆ ನ ದೇವಃ ಕೇಶವಾತ್ ಪರೋಽಯೆಂದೆನಲ್
ಜಲಜಾಂಬಕಂಗಧಿಕದೈವವಿಲ್ಲಿಂತಿದು
ಜ್ವಲಿಸುವಾವ್ಯಾಸಮತವಲ್ತೆಂಬನಾವನಾತಂಗೆ ಕಟ್ಟಿದುದಿದೆಂದು[೧]
ವರಮೋಕ್ಷದಂ ಜ್ಞಾನದಂ ಸರ್ವಜನಕಂ ಸು
ಕರನಯೋನಿಜನಚ್ಯುತಂ ವೇದವೇದ್ಯನುರು
ತರಚರಣದೊಳ್ ಗಂಗೆಯಂ ಪೆತ್ತವಂ ಭಂಗರಹಿತಂ ಸ್ವತಂತ್ರ ಚರಿತಂ
ಒರೆಯಲೇಂ ಧ್ಯೇಯಂ ವಲಂ ಜ್ಞೇಯನಂತಱಿಂ ಹರಿಯೆ ಪರತತ್ತ್ವ[೨]

ತ್ರಿಭುವನ ತಾತನ ವಾದವನ್ನು ಕೆರೆಯಪದ್ಮರಸರು ಸಪ್ರಮಾಣವಾಗಿ ಖಂಡಿಸಿ ಶಿವನೇ ಪರದೈವ, ಆತನೇ ಮೋಕ್ಷಪ್ರದ, ಜ್ಞಾನದಾತ, ಸರ್ವಜನಕ, ಸುಕರ, ಅಯೋನಿಜ, ವೇದವೇದ್ಯ, ಜ್ಞಾನ, ಜ್ಞೇಯ, ಎಂದು ಸ್ಪಷ್ಟಪಡಿಸಿ ಶಿವಾದ್ವೈತ ಸಾಕಾರ ಸಿದ್ಧಾಂತವನ್ನು ಪ್ರತಿಷ್ಠಾಪಿಸಿದರು. ಒಂದೊಂದು ವಿಷಯಕ್ಕೂ ನೂರಾರು ಕಡೆಯಿಂದ ಆಧಾರಗಳು. ವೇದಗಳೋ, ಉಪನಿಷತ್ತುಗಳೋ, ಆಗಮಗಳೋ, ಪುರಾಣಗಳೋ ಎಲ್ಲ ಶಾಸ್ತ್ರಗಳಿಂದಲೂ ಆಧಾರಗಳ ಮಹಾಪೂರವೇ ಬಂದಂತಾಗುತ್ತದೆ. ಆತನು ವಿಪುಲವಾಗಿ ಉದ್ಧರಿಸಿದ ಶಾಸ್ತ್ರಗಳ ವಿವರ ಹೀಗಿದೆ :

ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಶ್ವೇತಾಶ್ವತರೋಪನಿಷತ್ತು, ಕೈವಲ್ಯೋಪನಿಷತ್ತು, ಬ್ರಹ್ಮೋಪನಿಷತ್ತು, ಶಿವಸಂಕಲ್ಪೋಪನಿಷತ್ತು, ತೈತ್ತಿರೀಯೋಪನಿಷತ್ತು, ನಾರಾಯಣೋಪನಿಷತ್ತು, ಗರ್ಭೋಪನಿಷತ್ತು, ಬ್ರಹ್ಮಬಿಂದೂಪನಿಷತ್ತು, ಸೂತಗೀತೆ, ಈಶ್ವರಗೀತೆ, ಬ್ರಹ್ಮಗೀತೆ.

ಶಿವರಹಸ್ಯ, ಶಿವಧರ್ಮ, ಕಾಳಿಕಾಖಂಡ, ಕಾಶೀಖಂಡ, ಯಜ್ಞವೈಭವಖಂಡ, ಜ್ಞಾನಯೋಗಖಂಡ, ಮುಕ್ತಿಖಂಡ.

ಸೂತಸಂಹಿತೆ, ಸೌರಸಂಹಿತೆ, ವಾಯುವೀಯಸಂಹಿತೆ, ಧರ್ಮಸಂಹಿತೆ,

ಬೋಧಾಯನಸ್ಮೃತಿ, ಗೌತಮಸ್ಮೃತಿ, ಯಮಸ್ಮೃತಿ, ಸೌರಸ್ಮೃತಿ,

ಸ್ಕಾಂದಪುರಾಣ, ಲೈಂಗ್ಯಪುರಾಣ, ಮಾನವಪುರಾಣ, ಸಾಂಬಪುರಾಣ, ಆದಿಪುರಾಣ, ಕೂರ್ಮಪುರಾಣ, ಪದ್ಮಪುರಾಣ, ವಿಷ್ಣುಪುರಾಣ, ಬ್ರಹ್ಮಾಂಡಪುರಾಣ, ಶೈವಪುರಾಣ.

---

೧. ಪ. ಪು. ಸಂ. ೧೦, ಪ. ೫. ೨. ಪ. ಪು. ಸಂ. ೧೦, ಪ. ೬

ರಾಮಾಯಣ, ಮಹಾಭಾರತ, ಭಾಗವತ, ಪಾಂಚರಾತ್ರ, ವೈಷ್ಣವತಂತ್ರ, ಅಜೋಕ್ತಿ, ಸೂತೋಕ್ತಿ ಶರಭೋಕ್ತಿ ಗಜಾಸುರೋಕ್ತಿ

ಹರಿಸೂಕ್ತಿ, ಮನುಸೂಕ್ತಿ, ಲಿಂಗಸೂಕ್ತಿ, ಸಾಂಖ್ಯಯೋಗ, ಪಾಶುಪತ, ವ್ಯಾಸಾಷ್ಟಕ,

ಈ ಪಟ್ಟಿಯು ಪದ್ಮಣಾಂಕನ ಬಹುಶ್ರುತತ್ವವನ್ನು ಸಾರಿಹೇಳುವ ಪತಾಕೆಯಂತಿದೆ.

ಈ ಗ್ರಂಥಗಳನ್ನು ಪದ್ಮಣಾಂಕನು ಅಧಿಕೃತವಾಗಿ ಬಳಸುತ್ತಾನೆ. ವಿಪುಲವಾಗಿ ಬಳಸುತ್ತಾನೆ. ಲೀಲಾಜಾಲವಾಗಿ ಅರ್ಥೈಸುತ್ತಾನೆ; ಕನ್ನಡಿಸುತ್ತಾನೆ. ಶಾಸ್ತ್ರಕೋವಿದ ಪದ್ಮಣಾಂಕನ ಬಹುಶ್ರುತತೆಯನ್ನೂ ತರ್ಕಸರಣಿಯನ್ನೂ ನೋಡಬೇಕಿಲ್ಲಿ.

ಬ್ರಹ್ಮ, ವಿಷ್ಣು, ಇಂದ್ರ ಮೊದಲಾದ ದೇವತೆಗಳನ್ನು ಹರಣ ಮಾಡಿದುದರಿಂದ ಶಿವನಿಗೆ ಹರನೆಂಬ ಹೆಸರು ಪ್ರಾಪ್ತವಾಗಿದೆ. —ಸ್ಕಾಂದ

ವಿಷ್ಣುವಿನ ಕಪಾಲ ಶಿವನ ಹಾರದಲ್ಲಿದೆ, —ಶರಭೋಕ್ತಿ

ಹರಿಯು ಮತ್ಸ್ಯಾವತಾರ ತಾಳಿದಾಗ ರುದ್ರನು ಬಕನಾಗಿ ಆತನ ಕುತ್ತಿಗೆಯನ್ನು ಕತ್ತರಿಸಿದನು. ಶಿವನು ಶರಭಾವತಾರ ತಾಳಿ ನರಸಿಂಹನನ್ನು ಸಂಹರಿಸಿದನು. —ಕಾಳಿಕಾಖಂಡ

ವಿಷ್ಣು ವೇದವೇದ್ಯನಲ್ಲ; ಏಕೆಂದರೆ ಆತನು ಅವೈದಿಕವಾದ ಬೌದ್ಧಾವತಾರ ತಾಳಿರುವನು. ಗಂಗೆ ವಿಷ್ಣುಪದೋದ್ಭೂತೆಯಲ್ಲ. ಆಕೆ ತ್ರಿಪಥಗೆಯಾಗಿ ಆಕಾಶ, ಭೂಮಿ, ಪಾತಾಳಗಳಲ್ಲಿ ಹರಿದಿರುವಳು. ವಿಷ್ಣು ಶಬ್ದಕ್ಕೆ ಆಕಾಶ ಎಂಬ ಅರ್ಥವಿದೆ. ಆದುದರಿಂದ ಆಕಾಶಗಂಗೆಗೆ 'ವಿಷ್ಣು ಪದೆ' ಎಂಬ ಹೆಸರು ರೂಢವಾಯಿತು. ಹರಿಗೂ ಗಂಗೆಗೂ ಏನೂ ಸಂಬಂಧವಿಲ್ಲ

ನಾರಾಯಣಂ ಪರಂ ಬ್ರಹ್ಮ ತತ್ತ್ವಂ; ನಮೋ ವಿಷ್ಣವೇ ಎಂದು ನಾರಾಯಣೋಪನಿಷತ್ತು, ಯಜುರ್ವೇದಾದಿಗಳಲ್ಲಿ ಬಂದಿರುವ ಮಾತುಗಳು

ಶಿವನಿಗೆ ಸಂಬಂಧಪಟ್ಟಿವೆ; ಹರಿಗಲ್ಲ. ಏಕೆಂದರೆ ನಾರ ಎಂದರೆ ಜನ ಸಮೂಹ; ಅಲ್ಲಿ ವರ್ತಿಸುವವನು ನಾರಾಯಣ; ಆದುದರಿಂದ ನಾರಾಯಣ ನೆಂಬುದು ಶಿವನ ಗೌಣನಾಮ.

'ವಿಷ್ಣು' ಎಂಬ ಪದ ವಿಷಲ್ ವ್ಯಾಪ್ತೌ ಎಂಬ ಧಾತುವಿನಿಂದ ನಿಷ್ಪನ್ನ ವಾಗಿದೆ. ವ್ಯಾಪ್ತಿಯುಳ್ಳವನು ಶಿವನೊಬ್ಬನೇ. ಆದುದರಿಂದ ನಮೋ ವಿಷ್ಣವೇ ಎಂದರೆ ನಮಃ ಶಿವಾಯ ಎಂದರ್ಥ.

ಆ ವಾದವನ್ನೆಲ್ಲ ಇಲ್ಲಿ ಸಂಗ್ರಹಿಸಲು ಸಾಧ್ಯವಿಲ್ಲ. ಅದರ ಸಾದ್ಯಂತ ವಿವರವನ್ನು ಪದ್ಮರಾಜಪುರಾಣದ ೧೦-೧೧ ನೆಯ ಸಂಧಿ-ಕಥಾಸಾರದಲ್ಲಿ ಯಾದರೂಸರಿಯೆ-ಗಳನ್ನು ನೋಡಬಹುದು.

ವಾದಿಯು ಮಂಡಿಸಿದ ವಿಷಯಗಳನ್ನು ಸಭಿಕರು ಮೆಚ್ಚುವಂತೆ, ತ್ರಿಭು ವನತಾತನೇ ಒಪ್ಪುವಂತೆ ಖಂಡಿಸಿ, ಶಿವಾದ್ವೈತಸಾಕಾರಸಿದ್ಧಾಂತವನ್ನು ಪ್ರತಿ ಷ್ಠಾಪಿಸುತ್ತಾರೆ. ಪದ್ಮಣಾಂಕನ ಶಾಸ್ತ್ರಜ್ಞಾನ' ಪರವಾದಿಯು ಮಂಡಿಸಿದ ವಿಷಯಗಳಮೇಲೆ ತಾಂಡವವಾಡಿ ಶಿವಾದ್ವೈತಸಾಕಾರಸಿದ್ಧಾಂತವನ್ನು ಪ್ರತಿಷ್ಠಾಪಿಸಿದಂತಿದೆ.

ಇಲ್ಲಿ ನಡೆದಿರುವುದು ಸಿದ್ಧಾಂತಗಳ ಚರ್ಚೆಯಲ್ಲ. ಶಿವ ವಿಷ್ಣು ಈ ಸಾಕಾರದೇವತೆಗಳನ್ನು ಕುರಿತು ಚರ್ಚೆ ನಡೆದಿದೆ. ಈ ಚರ್ಚೆಗೆ ಇಂದಿನ ಯುಗದಲ್ಲಿ ಅಷ್ಟು ಮಹತ್ವವಿರಲಿಕ್ಕಿಲ್ಲ. ಆದರೆ ಶಿವತತ್ತ್ವ ವಿಷ್ಣುತತ್ತ್ವಗಳ ಹಿಂದೆ ದೊಡ್ಡ ದೊಡ್ಡ ಧ್ಯೇಯಗಳಿವೆ; ಸಿದ್ಧಾಂತಗಳಿವೆ. ಆ ಧ್ಯೇಯಗಳಲ್ಲಿ, ಸಿದ್ಧಾಂತಗಳಲ್ಲಿ ನಂಬುಗೆಯನ್ನಿಟ್ಟು ಬಾಳಿದ ಜನಾಂಗಗಳಿದ್ದುವು; ಇಂದಿಗೂ ಇವೆ. ಅಂತೆಯೇ ಒಂದು ಕಾಲಕ್ಕೆ ಇಂತಹ ವಾದವಿವಾದಗಳು ನಡೆದುವು. ಆ ವಾದವಿವಾದಗಳನ್ನೇ ಅಂದಿನ ಮತ ಧರ್ಮಗಳ ಪ್ರಸಾರ ಹೆಚ್ಚಾಗಿ ಅವಲಂಬಿಸುತ್ತಿದ್ದುವು. ಈ ದೃಷ್ಟಿಯಿಂದ ನೋಡಿದಾಗ ಪದ್ಮಣಾಂಕನೂ ಆತನ ಪೂರ್ವಜರೂ ಶೈವ, ವೀರಶೈವಗಳ ಬಳವಿಗೆ ಮಹದುಪಕಾರ ಮಾಡಿ ದ್ದಾರೆ. ಅವರ ಪಾಂಡಿತ್ಯಕ್ಕೆ ಅನ್ಯಮತಗಳು ಬೆಕ್ಕಸಬೆರಗಾಗಿವೆ. ವಾದಿಗಳು ನಿರುತ್ತರರಾಗಿದ್ದಾರೆ. ಪ್ರಾಯಶಃ ಕನ್ನಡ ಕವಿಗಳಲ್ಲಿ ಇಷ್ಟು ಶಾಸ್ತ್ರಪಾ ರಾಂಗತರಾದವರನ್ನು ಕಾಣುವುದೇ ಕಷ್ಟವೆಂದೇ ತೋರುತ್ತದೆ.

ಸಿದ್ಧಾಂತವಿಷಯಕವಾದ ಚರ್ಚೆ ನಡೆಯಲಿಲ್ಲವೆಂದು ಈ ಪೂರ್ವದಲ್ಲಿ ಹೇಳ ಲಾಯಿತು. ಆದರೆ ಷಟಸ್ಥಲ ಸಿದ್ಧಾಂತದ ವಿವರಣೆ ನಿರೂಪಣೆ ಪದ್ಮರಾಜಪುರಾ ಣದ ೧೨ನೆಯ ಸಂಧಿಯಲ್ಲಿ ನಡೆದಿದೆ.

ತ್ರಿಭುವನತಾತನು ವಾದದಲ್ಲಿ ಪರಾಜಿತನಾಗಿದ್ದಾನೆ; ಶಿವದೀಕ್ಷೆಯನ್ನು ಪಡೆಯಬೇಕೆಂದು ಕಾತರಿಸಿ ಕೂತಿದ್ದಾನೆ. ಒಂದು ವರ್ಷ ತಡೆದು ಆ ಮೇಲೆ ಅವನಿಗೆ ಶಿವದೀಕ್ಷೆಯನ್ನು ಕೊಡುತ್ತಾರೆ. ಪಂಚಕಲಶಗಳನ್ನು ಹೂಡಿ ದೀಕ್ಷಾ ಸಮಾರಂಭವನ್ನು ನೆರವೇರಿಸುವಲ್ಲಿಯೂ ಕೆರೆಯ ಪದ್ಮರಸರು ಶಿವಪೂಜೆಯನ್ನು ಮಾಡುವಲ್ಲಿಯೂ, ಪದ್ಮಣಾಂಕನು ವೀರಶೈವದ ಅತ್ಯಂತ ಸೂಕ್ಷ್ಮವಾದ ವಿಧಿ ವಿಧಾನಗಳ ಪರಿಚಯವನ್ನು ಮಾಡಿಕೊಡುವನು. ಶಿವಾಗಮಗಳಲ್ಲಿ ವೀರಶೈವ ಶಾಸ್ತ್ರದಲ್ಲಿ ಪದ್ಮಣಾಂಕನಿಗೆ ಅನ್ಯಾದೃಶ್ಯವಾದ ಪ್ರಭುತ್ವವಿದ್ದಂತೆ ತೋರುತ್ತದೆ. ಅತಿ ಗಹನವಾದ ಷಟ್‌ಸ್ಥಲಶಾಸ್ತ್ರವನ್ನು ಬಹು ಸುಲಭವಾಗಿ ವಿವರಿಸಿರುವನು.

ಪರಾತ್ಪರವೆನಿಸುವ ಶಿವತತ್ತ್ವವು ಚರಾಚರದ ಲಯ ಗಮನಕ್ಕೆ ಕಾರಣವಾಗಿ ಲಿಂಗವೆನಿಸಿತು. ಅದು ಮಹತ್ತಿನಿಂದ ಕೂಡಿ ಮಹಾಲಿಂಗವಾಯಿತು. ಅದರಿಂದ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಚರಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂದು ಲಿಂಗಷಟ್ಕವುತ್ಪನ್ನವಾಯಿತು.

ಅಂಗ—ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂದು ಷಟ್‌ಸ್ಥಲವುಳ್ಳುದಾಗಿರುವುದು.

ಅಂಗಸ್ಥಲಗಳು ಲಿಂಗಸ್ಥಲದಲ್ಲಿ ಬೆರೆಸಿ ಬೇರಿಲ್ಲದಂತಿರುವುದೇ ಮುಕ್ತಿ.

ಆಚಾರಲಿಂಗಕ್ಕೆ ಗಂಧವನ್ನೂ ಗುರುಲಿಂಗಕ್ಕೆ ರಸವನ್ನೂ ಶಿವಲಿಂಗಕ್ಕೆ ನೇತ್ರ ವನ್ನೂ ಚರಲಿಂಗಕ್ಕೆ ಸ್ಪರ್ಶವನ್ನೂ ಪ್ರಸಾದಲಿಂಗಕ್ಕೆ ಶಬ್ದವನ್ನೂ ಮಹಾಲಿಂಗಕ್ಕೆ ದ್ರವ್ಯಪರಿಣಾಮವನ್ನೂ ಅರ್ಪಣ ಮಾಡಬೇಕು.

ಈ ಸಾಧನೆಯನ್ನು ಇಷ್ಟಲಿಂಗದ ಮುಖಾಂತರ ಮಾಡಿ ಪ್ರಾಣಲಿಂಗ, ಭಾವಲಿಂಗಗಳ ರಹಸ್ಯವನ್ನರಿವುದೇ ಷಟ್‌ಸ್ಥಲಮಾರ್ಗ.

ಈ ಸಿದ್ಧಾಂತವನ್ನು ಪದ್ಮಣಾಂಕನು ಬಹು ಸುಲಭವಾಗಿ ವಿವರಿಸಿರುವು ದನ್ನು ನೋಡಿದರೆ ಅದರಲ್ಲಿ ಅವನಿಗಿದ್ದ ಪ್ರಭುತ್ವ ವ್ಯಕ್ತವಾಗುತ್ತದೆ.

ಪದ್ಮಣಾಂಕನು ಶಾಸ್ತ್ರ ಶ್ರೀರೋಹಣಗಿರಿಯನೇರಿದವನೆಂಬುದು ಇದು ವರೆಗಣ ವಿವೇಚನೆಯಿಂದ ಸ್ಪಷ್ಟವಾಗುತ್ತದೆ.

ಕೆರೆಯ ಪದ್ಮರಸರ ವ್ಯಕ್ತಿತ್ವ

ಪದ್ಮಣಾಂಕನ ಪದ್ಮರಾಜಪುರಾಣವನ್ನು ವಿಮರ್ಶಿಸುವಾಗ ಕವಿ ಕಾವ್ಯದಲ್ಲಿ ಕಥಾನಾಯಕನ ವ್ಯಕ್ತಿತ್ವವನ್ನು ಹೇಗೆ ಚಿತ್ರಿಸಿರುವನೆಂದು ವಿಚಾರಿಸುವುದು ಸಹಜವಾಗಿದೆ. ಸಾಮಾನ್ಯವಾಗಿ ಪುರಾಣಗಳಲ್ಲಿ ವ್ಯಕ್ತಿಚಿತ್ರಣದ ಕಡೆಗೆ ನಮ್ಮ ಕವಿಗಳು ಗಮನಕೊಡುವುದೇ ಕಡಿಮೆ. ಪುರಾಣಗಳಲ್ಲಿ ಎಲ್ಲ ಬಗೆಯ ಜ್ಞಾನಸಂಗ್ರಹವಾಗಬೇಕೆಂಬ ಉದ್ದೇಶದಿಂದ ಕಲೆಯ ಕೊಲೆಮಾಡಿ, ಔಚಿತ್ಯಕ್ಕೆ ಭಂಗವನ್ನು ತಂದುಕೊಂಡು ಆ ವಿಷಯಗಳನ್ನೂ ವರ್ಣನೆಗಳನ್ನೂ ಪುರಾಣಗಳಲ್ಲಿ ತಂದು ತುಂಬುವುದುಂಟು. ಶಿವಪುರಾಣ, ವಿಷ್ಣುಪುರಾಣ, ಲಿಂಗಪುರಾಣ, ಜಗನ್ನಾಥವಿಜಯ, ಚೆನ್ನಬಸವಪುರಾಣದಂತಹ ಕೆಲವು ಗ್ರಂಥಗಳನ್ನು ಈ ಸಂದರ್ಭದಲ್ಲಿ ಹೆಸರಿಡಬಹುದು.

ಆದರೆ ಪದ್ಮರಾಜ ಪುರಾಣದಲ್ಲಿ ಕವಿ ಪದ್ಮಣಾಂಕನ ದೃಷ್ಟಿ ಮೊದಲಿನಿಂದ ಕೊನೆಯವರೆಗೂ ಕಥಾನಾಯಕನ ವ್ಯಕ್ತಿತ್ವವನ್ನು ಚಿತ್ರಿಸುವುದರ ಕಡೆಗಿದೆ. ಒಂದೆರಡು ಕಡೆಗೆ ಅಂದರೆ ಹರಿಹರನ ಪವಾಡಗಳನ್ನು ವರ್ಣಿಸುವಲ್ಲಿ[೧] ಹಾಗೂ ವಾದದ ವಿಷಯ ನಡೆದಲ್ಲಿ ಪದ್ಮರಸರ ವ್ಯಕ್ತಿಚಿತ್ರಣದ ಕಾರ್ಯ ನಿಂತಂತೆ ಭಾಸವಾಗುವುದೇನೋ ನಿಜ. ಆದರೆ ಹರೀಶ್ವರ ಪದ್ಮರಸರಿಬ್ಬರೂ ಅತ್ಯಂತ ಆತ್ಮೀಯರು. ಶಿವಶರಣರ ಮಹಿಮೆಯನ್ನು ನರಸಿಂಹಬಲ್ಲಾಳನಿಗೂ ಧರೆಯ ಜನರಿಗೂ ತೋರಿಸಿಕೊಡುವುದು ಪದ್ಮರಸರ ಧ್ಯೇಯವಾಗಿದ್ದಿತು. ಆದುದರಿಂದ ಪರವಾದಿಗಳು ಅಣಕವಾಡಿದಾಗ ಪದ್ಮರಸರೇ ಮುಂದೆ ಬಂದು ಹರಿಹರದೇವನ ಮಹಿಮೆಯನ್ನು ಪ್ರಕಟಪಡಿಸಿರುವರು.

ತ್ರಿಭುವನತಾತನೊಡನೆ ವಾದ ನಡೆದಾಗ ಪದ್ಮರಸರ ಶಿವಾದ್ವೈತಸಾಕಾರ ಸಿದ್ಧಾಂತವೇ ಪ್ರತಿಷ್ಠಾಪಿತವಾಗಿರುವುದು. ಒಟ್ಟಿನಲ್ಲಿ ಕವಿಯ ದೃಷ್ಟಿ ಪದ್ಮರಾಜ ಪುರಾಣದಲ್ಲಿ ಕಥಾನಾಯಕನ ವ್ಯಕ್ತಿತ್ವವನ್ನು ಪಡಿಮೂಡಿಸುವುದರ ಕಡೆಗಿದೆ. ಅನವಶ್ಯಕವಾದ ವರ್ಣನೆಗಳನ್ನೂ ವಿಷಯಗಳನ್ನೂ ತುಂಬುವುದರ ಕಡೆಗೆ ಕವಿಯ

---

೧. ಪ. ಪು. ಸಂ. ೫.

ಗಮನವಿಲ್ಲ. ಕಥಾನಾಯಕರ ವ್ಯಕ್ತಿತ್ವದ ಕಡೆಗೇ ಗಮನಕೊಡುವ ಕೆಲವು ವೀರಶೈವ ಪುರಾಣಗಳಿವೆ; ಅವುಗಳಲ್ಲಿ ಪದ್ಮರಾಜಪುರಾಣವೊಂದು. ಅಲ್ಲಿ ಪದ್ಮರಸರ ವ್ಯಕ್ತಿತ್ವ ಮುಗಮುಗಿಸುವ ಹೂವಿನಂತೆ ಅರಳಿದೆ.

ಕುಲಹೀನನಂ ಕುಷ್ಠನಂ ಶ್ರೇಷ್ಠನೆಂದು ನಿ
ರ್ಮಲ ತನುವನಿತ್ತುದಱಿನಿದೆ ಮಹಾಸತ್ವವವಿ
ಚಲವಾದಿ ಬರೆ ಕುಂದದವನಂ ಗೆಲಲ್ ಪೆರ್ಚಿದುದಱಿನಿದೆ
ಯತಿಗಭೀರಂ
ಸಲೆ ವಿಧವೆಯಂ ಪೊರೆದುದಱಿನಿದೆ ಕೃಪಾಳುತ್ವ
ವಲಘು ನಿಜನುತಿಗಳ್ಕುವದಱಿನವಿಕತ್ಥನಂ
ಫಲಿಸುತಿದೆ ಪದ್ಮಣಾರ್ಕ್ಯಂ ಸುಧೀರೋದಾತ್ತ ನಾಯಕರ್ಗಾರ್ಯರ್
ನಲ್ತೇ[೧]

ಎಂದು ಶರಣವೃಂದವು ಪದ್ಮರಸರ ವ್ಯಕ್ತಿತ್ವದ ಮುಖ್ಯ ಗುಣಗಳಾದ ಮಹಾಸತ್ವ, ಗಭೀರತ್ವ, ಕೃಪಾಳುತ್ವ, ಅವಿಕತ್ಥನ—ಇವುಗಳನ್ನು ಬಣ್ಣಿಸಿರುವುದು.

ಪದ್ಮರಸರ ವ್ಯಕ್ತಿತ್ವ ಈ ಕಾವ್ಯದಲ್ಲಿ ಎಂಟೆಸಳಕುಸುಮದಂತೆ ಅರಳಿದೆ. ಆ ಎಂಟೆಸಳುಗಳನ್ನು ಹೀಗೆ ವಿವರಿಸಬಹುದು.

೧. ಕೃಪಾಳುತ್ವ
೨. ಭಕ್ತಿ
೩. ನಿಷ್ಠೆ — ಭಾಷೆ
೪. ಪ್ರಪಂಚವನ್ನು ಸ್ವೀಕರಿಸಿದ ಬಗೆ
೫. ಮಹಾಸತ್ವಗುಣ — ಕಾರಣಿಕ
೬. ರಸಿಕ ಚಕ್ರೇಶ್ವರ
೭. ಶಿವಾದ್ವೈತಸಾಕಾರಸಿದ್ಧಾಂತ ಪ್ರತಿಷ್ಠಾಪನಾಚಾರ್ಯ
೮. ಸಮದೃಷ್ಟಿ, ಸಮ್ಯಕ್‌ದೃಷ್ಟಿ

ಪದ್ಮರಸರ ವ್ಯಕ್ತಿತ್ವದ ವಿವಿಧಮುಖಗಳಲ್ಲಿ ಆತನ ಕೃಪಾಳುತ್ವ ಅಂದರೆ ದಯ ಬಹು ಮುಖ್ಯವಾದುದೆಂದು ಹೇಳಬಹುದು. ತಾನು ದುಡಿದು ಸಂಪಾ

---

೧. ಪ. ಪು. ಸಂ. ೧೩. ಪ. ೨೦.

ದಿಸಿದ ಹೊನ್ನು ಕಳೆದುಕೊಂಡ ತಾಯಿ ಗೋಳಿಡುವುದನ್ನು ಕೇಳಿದೊಡನೆಯೇ ಪದ್ಮರಸರ ಹೃದಯ ಕರಗಿ ನೀರಾಗುತ್ತದೆ. ಶಿವನು ಆದಿನ ತನಗೆ ಕೊಟ್ಟ ಪಡಿಹೊನ್ನು ಆ ಬಡ ತಾಯಿಯವೆಂದು ಭಾವಿಸಿ ಗುರುವರರು ಅದನ್ನು ಆಕೆಗೆ ಕೊಟ್ಟು ಕಳಿಸುವರು. ಪದ್ಮರಸರ ಹೃದಯದಲ್ಲಿ ಹುದುಗಿದ ದಯವೇ ಇದಕ್ಕೆಲ್ಲ ಕಾರಣವೆಂದು ಹೇಳಬಹುದು. ಕಾರಣ ಮಾನವ ಜೀವನದ ಅನೇಕಮೌಲ್ಯಗಳಲ್ಲಿ ದಯೆ ಮುಖ್ಯವಾದುದು. ಮಾನವತೆಯಿಂದ ದೇವತ್ವಕ್ಕೆ ಏರುವ ಮುಖ್ಯ ಸೋಪಾನವದು. ದಯವೇ ಧರ್ಮವೆಂದೂ ಪರಮಾತ್ಮನೆಂದೂ ಹೇಳುವುದು ಈ ಕಾರಣಕ್ಕಾಗಿ. ಪದ್ಮರಸರ ವ್ಯಕ್ತಿತ್ವದ ಮಂದಿರದಮೇಲೆ ಕಳಸವನ್ನಿಟ್ಟಂತೆ ಈ ಸನ್ನಿವೇಶವನ್ನು ಕವಿ ಕಾವ್ಯದ ಕೊನೆಯಲ್ಲಿ ವಿವರಿಸಿರುವನು. ಜೀವನದ ವಿಕಾಸನಕ್ಕಲ್ಲ, ಇದು ಮೂಲಭೂತವಾದುದೆಂದು ಇಲ್ಲಿ ಅದಕ್ಕೆ ಮೊದಲನೆಯ ಸ್ಥಾನವನ್ನು ಕೊಡಲಾಗಿದೆ.

ಪದ್ಮರಸರ ಭಕ್ತಿಯ ಬಗೆಯನ್ನು ಪದ್ಮಣಾಂಕನ ಬಾಯಿಂದಲೇ ಕೇಳಬೇಕು. ಆತನು ಮೂಡಿಸಿರುವ ಪದ್ಮರಸರ ಸುಂದರವಾದ ಸಾಕಾರ ಚಿತ್ರವಿದು.

> ಪರಮಭಕ್ತಿಗೆ ಶಿರಮೊದವಿತೊ ಶಾಂತಿಗೆ ಮುಖಂ
> ಸ್ಫುರಿಸಿತೋ ಶಿವನ ದಾನಾಭಯದ ಗುಣಯುಗಕೆ
> ಕರಮುಮರ್ದುವೋ ಚಿದ್ವಿಲಾಸಕೆರ್ದೆ ರಾಜಿಸಿತೊ ಸುಚರಿತಕೆ
> ಕಾಲ್ ಬಂದುವೋ
> ಇರದಖಿಳ ಲೋಕವನನುಗ್ರಹಿಪ ಶಿವಶಕ್ತಿ
> ಗರರೆ ಬೆನ್ನುಂ ಬಸಿರುಮೊಗೆದುವೋ ಕಡೆಗಿದೇಂ
> ಗಿರಿಶನಿಪ್ಪತ್ತಾರನೆಯ ಲೀಲೆಯೋ ಎಂದು ವಿಬುಧರ್
> ಬಗೆಯಲೊಪ್ಪಿದಂ[೧]

ಭಕ್ತಿ. ಶಾಂತಿ, ಸಚ್ಚರಿತ್ರಗಳಂತಹ ಸದ್ಗುಣಗಳೇ ಮೈವೆತ್ತಂತಿದ್ದ ಪದ್ಮರಸರು ಗಿರಿಶನ ಇಪ್ಪತ್ತಾರನೆಯ ಲೀಲೆಯಂತೆ ಕಂಗೊಳಿಸಿದುದೇನಾಶ್ಚರ್ಯವಲ್ಲ. ಮಾಯೆಯ ಅಂಕುರವು ಅವರಲ್ಲಿ ಮೊದಲಿನಿಂದಲೂ ತಲೆದೋರಿಲ್ಲ. ಶಿವಭಾವ, ಶಿವನಿಷ್ಠೆ, ಶಿವಪೂಜೆಗಳು ಅಂಕುರಿಸಿ ಪಲ್ಲವಿಸಿ ಕುಸುಮಿತವಾಗಿ ಪದ್ಮರಸರಲ್ಲಿ ಫಲಿಸಿದ್ದವು.

---

೧. ಪ. ಪು. ಸಂ. ೨. ಪ. ೭೯.

ಶಿವನಿಷ್ಠೆ ಶಿವಪೂಜನಂ ಶಿವೈಕ್ಯರಸೇವೆ
ಶಿವವೃತ್ತಿ ಶಿವವೀಕ್ಷಣಂ ಶಿವಕಥಾಪ್ರಸಂ
ಗ ವಿನೋದಗೋಷ್ಠಿ ಶಿವನಿಜಗುಣಸ್ತೋತ್ರಾನುಭಾಷಣಂ
ಶಿವವೈಭವಂ
ಶಿವತತ್ತ್ವನಿರ್ಣಯವಿಚಾರಂ ಶಿವೋತ್ಸವಂ
ಶಿವಕಥಾವೇಶಂ ಶಿವಾವಧಾನಾದಿಗಳಿ
ವವನೊಳಂಕುರಿಸಿ ಪಲ್ಲವಿಸಿ ಕುಸುಮಿತಮಾಗಿ ಫಲಿಸಿದುವದೇಂ
ಶಾಂತಿಯೋ[೧]

ತನುಗುಣವಳಿದು ಶಿವಭಾವ ನೆಲೆಗೊಂಡಾಗ ಶಿವನಲ್ಲದನ್ಯದಕ್ಕೆ ಶರಣರ ಮನವೆಳಸದು. ಆ ಮನಕ್ಕೆ ಶಿವಮಂತ್ರದ ಧ್ಯಾನವೇ ಧ್ಯಾನ.

ನಡೆವಲ್ಲಿ ನುಡಿವಲ್ಲಿ ಯುಂಡುವಲ್ಲಿ ಯುಣ್ಬಲ್ಲಿ
ಪೊಡರ್ವ ನಿದ್ರಾವಸ್ಥೆಯಲ್ಲಿ ದರ್ಶನದಲ್ಲಿ
ಪಿಡಿವಲ್ಲಿ ಬಿಡುವಲ್ಲಿ ಕೊಡುವಲ್ಲಿ ಕೊಳ್ವಲ್ಲಿ ಯಡಸಿದುದ್ಯೋಗದಲ್ಲಿ
ತೊಡುವಲ್ಲಿ ಪೊದೆವಲ್ಲಿ ಸಡಗರದ ಸಮಯದ
ಲ್ಲೊಡನೆ ಕುಳ್ಳಿರ್ಪಲ್ಲಿ ಯೇಳ್ವಲ್ಲುಳಿದ ಕೃತ್ಯ
ದೆಡೆಯಲ್ಲಿ ಮೃಡಮಂತ್ರವವನನಿಡಿದಡಸಿ ಬಿಡದಿರ್ಪುದೇಂ
ವಶಮಾದುದೋ[೨]

ಹೀಗೆ ಶಿವಾನುಭಾವವಳವಟ್ಟು ಶಿವಮಂತ್ರ ಮನವನ್ನು ವ್ಯಾಪಿಸಿದುದರಿಂದ ಪದ್ಮರಸರಿಗೆ ಶಿವಶರಣರಲ್ಲಿ, ಶಿವಭಕ್ತಮಾಹೇಶ್ವರರಲ್ಲಿ ಅಗಾಧವಾದ ಭಕ್ತಿಯಿದೆ. ತನುಮನಧನಗಳನ್ನು ತ್ರಿಕರಣಪೂರ್ವಕವಾಗಿ ಗುರುಲಿಂಗ ಜಂಗಮಕ್ಕರ್ಪಿಸಿದ್ದರು. ಹೊಯ್ಸಳ ಸಾಮ್ರಾಜ್ಯದ ಮಂತ್ರಿಗಳಾಗಿದ್ದರೂ ಭಕ್ತಿ ಸಾಮ್ರಾಜ್ಯದಲ್ಲಿ ಶಿವಭಕ್ತರ ಸೇವಕರಾಗಿದ್ದರು; ಮಾಹೇಶ್ವರರ ಕಿಂಕರರಾಗಿದ್ದರು.

. . . . . ಅಖಿಳವಸ್ತುಚಯಮುಂ
ಆ ಮಲಹರನ ಭಕ್ತತತಿಗಿತ್ತು ನುತಿಸುತು
ದ್ದಾಮರಿರ ನಿಮ್ಮ ಬಾಗಿಲ್ಗಾಪಿನಾಳ್ ನಿಮ್ಮ
ಕೋಮಲಾಂಘ್ರಿಯ ಕೆರ್ಪುದಳೆವವಂ ನಿಮ್ಮ ಭೃತ್ಯರ
ಭೃತ್ಯತತಿಯ ಭೃತ್ಯಂ[೩]

---

೧. ಪ. ಪು. ಸಂ. ೨. ಪ. ೭೮. ೨. ಪ. ಪು. ಸಂ. ೨. ಪ. ೭೭.
೩. ,, ,, ೪. ಪ. ೧೭.

ಶರಣಮಾರ್ಗದಲ್ಲಿ ನಿಷ್ಠೆಯನ್ನಿಟ್ಟು ಅದರಂತೆ ನಡೆದು ಶರಣಪದವನ್ನು ಪಡೆದ ಪದ್ಮರಸರ ಭಕ್ತಿ ನಿಷ್ಠೆಗಳು ಬಸವಣ್ಣನವರ ಭಕ್ತಿಯನ್ನೂ ನಿಷ್ಠೆಯನ್ನೂ ಸ್ಮರಣೆಗೆ ತರುತ್ತವೆ.

ಬಸವಣ್ಣನವರಂತೆ ಪದ್ಮರಸರೂ ಭಕ್ತಿಯ ಭಾಷೆ ತೊಟ್ಟವರು.

.... ಶಿವಸಮಯ
ಮಂ ನಿಲಿಸುವುದು ಭಾಷೆ ಶರಣರಿಚ್ಛೆಯಿಸಿದುದ ನಿಲ್ಲೆನ್ನದೀವ ಭಾಷೆ

ಪರವಾದಿಗಳನೆಱಗಿಸುವ ಭಾಷೆ ಶಿವತಂತ್ರ
ದೊರೆಯನೂರ್ಜಿತಮನಾಗಿಪ ಭಾಷೆ ಶಿವಭಕ್ತ
ವರರನಾರಾಧಿಸುವ ಭಾಷೆ ಶಿವಪೂಜೆಯಂ ಸಾಂಗದಿಂ ರಚಿಪಭಾಷೆ
ಪರನಾರಿ ಗುರುನಾರಿಯೆಂದು ಚರಿಸುವ ಭಾಷೆ
ಇರದಾರ್ತರಂ ಪೋಷಿಸುವ ಭಾಷೆ ಮಾಹೇಶ್ವ
ರರ ಕುಲಮನಾರಯ್ಯದದು ಭಾಷೆ ಶಿವನಿಂದೆಯಂ
ಕೇಳದಚಲಭಾಷೆ

ಪಲವೇಂ ಶಿವಾನರ್ಪಿತಂಗೊಳ್ಳದುರುಭಾಷೆ
ಯೊಲವಿನಿಂ ಭವಿಪಾಕಮಂ ಬೆರಸದತಿ ಭಾಷೆ
ಗೆಲವನಿತರರ್ಗೀಯದೆಸೆವಸಮಭಾಷೆ ಭಕ್ತರ್ಗೆ ಗೆಲವೀವ ಭಾಷೆ
ಛಲದಿಂ ವ್ರತಭ್ರಷ್ಟರುಮನೀಕ್ಷಿಸದ ಭಾಷೆ
ನಲಿದು ಶಿವಭಕ್ತರಂ ಶಿವನೆಂದಱಿವ ಭಾಷೆ
ಸಲೆ ಶಿವಾದ್ವೈತಸಾಕಾರಸಿದ್ಧಾಂತ ಪ್ರತಿಷ್ಠೆಯಂ ನೆಗಳ್ವ ಭಾಷೆ
ನರರನಾಶ್ರಯಿಸದುತ್ಕಟ ಭಾಷೆಯನೃತಮಂ
ವಿರಚಿಸದ ಭಾಷೆ ಕರಣೇಂದ್ರಿಯಾದಿಗಳ
ಪರಿದಾಟಮಂ ಬಿಡಿಸಿ ಲಿಂಗಾಂಗಸಂಯೋಗದೋಳ್ ನಿಲಿಸುವಸಮ
ಭಾಷೆ[೧]

ಶಿವಭಕ್ತಿಯನ್ನು ನಡೆಸುವುದೂ, ಆರ್ತರನ್ನು ಪೋಷಿಸುವುದೂ ಶಿವಾದ್ವೈತ ಸಾಕಾರ ಸಿದ್ಧಾಂತವನ್ನು ಪ್ರತಿಷ್ಠಾಪಿಸುವುದೂ, ನರರನ್ನು ಆಶ್ರಯಿಸದಿರುವುದೂ,

೧. ಪ. ಪು. ಸಂ. ೪. ಪ. ೧೮, ೧೯, ೨೦.

ಕರಣೇಂದ್ರಿಯಗಳ ಹರಿದಾಟವನ್ನು ನಿಲ್ಲಿಸಿ ಲಿಂಗಾಂಗ ಸಂಯೋಗವನ್ನು ಹೊಂದು ವುದೂ—ಇವು ಪದ್ಮರಸರ ಭಾಷೆಗಳಲ್ಲಿ ಮುಖ್ಯವಾದುವು. ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪುವುದು ಶರಣಮಾರ್ಗವಲ್ಲ. ಪದ್ಮರಸರು ನಡೆನುಡಿಗಳನ್ನು ಒಂದು ಮಾಡಿದ ಮಹಿಮರು; ಮಹಾಸತ್ವಶಾಲಿಗಳು; ಕಾರಣಿಕ ಪುರುಷರು. ಅಂದ ಮೇಲೆ ಪವಾಡಪುರುಷರಾಗಿರುವುದೇನಾಶ್ಚರ್ಯವಲ್ಲ.

ಶರಣರಿಚ್ಛಯಿಸಿದುದನಿಲ್ಲೆನ್ನದೀವ ಭಾಷೆ. ಪರೀಕ್ಷೆ ನಡೆದೇ ಹೋಯಿತು. ಬೇಲೂರಲ್ಲಿ ಕೆರೆಕಟ್ಟಿಸಬೇಕೆಂದು ಭಂಡಾರದ ಹೊನ್ನು ಕೊಡುವ ಪ್ರಸಂಗದಲ್ಲಿ ಒಬ್ಬ ವಿಟಜಂಗಮನು ಬಂದು ಹಣಬೇಡುತ್ತಾನೆ. ಪದ್ಮರಸರು ಇಲ್ಲೆನ್ನದೆ ಆ ಹಣವನ್ನೇ ಕೊಟ್ಟು ಬಿಡುತ್ತಾರೆ. ಹೀಗಾದುದರಿಂದ ಪವಾಡವನ್ನು ಮೆರೆದು ಕೆರೆ ಕಟ್ಟಿಸಿದರೆಂಬ ಕಥೆ ಪದ್ಮರಾಜ ಪುರಾಣದಲ್ಲಿ ಬರುತ್ತದೆ ಇದರರ್ಥವೇನು ?

ಮಹಾಸತ್ವಶಾಲಿಗಳೂ ಕಾರಣಿಕಪುರುಷರೂ ಆದವರು ಅಸಾಧಾರಣ ಕ್ರಿಯೆಯನ್ನೆಸಗುತ್ತಾರೆ ಅದು ಅವರಿಗೆ ಸ್ವಾಭಾವಿಕವಾದರೂ ಮಿಕ್ಕವರಿಗೆ ಅದ್ಭುತವಾದ ಆಕಸ್ಮಿಕವಾದ ಘಟನೆಯೆನಿಸುತ್ತದೆ. ಆ ವ್ಯಕ್ತಿಗಳ ವಿಷಯವಾಗಿ ಜನತೆಯ ಭಕ್ತಿ ವಿಶ್ವಾಸಗಳು ಬೆಳೆದಷ್ಟೂ ಇಂತಹ ಆಕಸ್ಮಿಕಗಳು ಬಣ್ಣದಳೆ ಯುತ್ತ ಹೋಗುತ್ತವೆ. ಪದ್ಮರಸರ ಸುತ್ತು ಬಂದಿರುವ ಒಂದೆರಡು ಪವಾಡ ಗಳು ಹೀಗೆ ಆಗಿದ್ದರೂ ಅಲ್ಲಿ ಅರ್ಥವಿಲ್ಲದಿಲ್ಲ.

ಜಂಗಮನು ಹೊನ್ನು ಕೇಳಿದೊಡನೆ ಪದ್ಮರಸರು ಕೊಟ್ಟು ಬಿಟ್ಟಿದ್ದಾರೆ. ಭಕ್ತಿ ಬಲಿತು ಫಲಿತು ಭಾವ ಬತ್ತಲೆಯಾದಲ್ಲಿ ಮಾತ್ರ ಇಂತಹ ಘಟನೆ ಸಾಧ್ಯ. ಆಗ ಭಾವಕ್ಕೆ ಅಂಟಿಕೊಂಡಿದ್ದ ಉಪಾದಿಗಳೆಲ್ಲ ಬಯಲಾಗುತ್ತವೆ. ಆಗ ವ್ಯಷ್ಟಿ ಸಮಷ್ಟಿಯಾಗುತ್ತದೆ. ಅಂಗ ಲಿಂಗವಾಗುತ್ತದೆ. ಇಂತಹ ಸ್ಥಿತಿಯಲ್ಲಿ ನೆನೆ ಯದ ಮುನ್ನ ಕಾರ್ಯಗಳಾಗುತ್ತವೆ. ಪದ್ಮರಸರನ್ನು ಪರವಾದಿಗಳು ಸತ್ವ ಪರೀಕ್ಷೆಗೆ ಗುರಿಮಾಡಿರುವರೆಂಬ ಸುದ್ದಿ ನೀರಮೇಗಣ ಎಣ್ಣೆಯಂತೆ ಪಸರಿಸಿರ ಬೇಕು, ಅವರು ಗುರುಲಿಂಗಜಂಗಮದಲ್ಲಿಟ್ಟಷ್ಟು ನಿಷ್ಠೆಯನ್ನು ನಾಡಿನ ಜನತೆ ಪದ್ಮರಸರ ಮೇಲಿಟ್ಟಿದೆ. ಅವರೆಲ್ಲ ಒಟ್ಟುಗೂಡಿ ಪರವಾದಿಗಳು ಬೆರಳು ಕಚ್ಚುವಂತೆ ಆ ಕೆರೆಯನ್ನು ಕಟ್ಟಿರಬಾರದೇಕೆ ? ಶಿವನಿಚ್ಛೆಯಿಂದ ಇಂತಹ ಆಕ ಸ್ಮಿಕವಾದ ಕಾರ್ಯ ನಡೆದುದರಿಂದ ಶಿವನು ಬಿಟ್ಟಿಗೆ ಈ ಕೆರೆಕಟ್ಟಿದನೆಂಬ ಭಾವನೆ ರೂಢವಾಗಿರಬೇಕು. ಶಿವನೆಂದರೇನು ಸತ್ಕ್ರಿಯೆ, ಸದ್ಭಾವನೆ, ಸದಾ

ಚಾರಗಳಲ್ಲವೇ ? ಒಟ್ಟಿನಲ್ಲಿ ಪದ್ಮರಸರು ಮಹಾಸತ್ವಶಾಲಿಗಳಾಗಿ ತಮ್ಮ ಸದ್ಭಕ್ತಿ, ಸತ್ಕ್ರಿಯೆ, ಸತ್ವಗುಣಗಳಮೂಲಕ ಅಂದಿನ ಜನತೆಯನ್ನು ಬೆರಗುಗೊಳಿಸುವಂತಹ ಕಾರ್ಯಗಳನ್ನೆಸಗಿರುವುದರಲ್ಲಿ ಸಂದೇಹವಿಲ್ಲ.

ಪದ್ಮರಸರು ಪ್ರಪಂಚವನ್ನು ಕಂಡ, ಉಂಡ ದೃಷ್ಟಿಮಾರ್ಮಿಕವಾಗಿದೆ; ಮನನೀಯವಾಗಿದೆ. ವೀರಶೈವಧರ್ಮ ಪ್ರಪಂಚವನ್ನು ತ್ಯಾಗಮಾಡಬೇಕೆಂದು ಬೋಧಿಸಲಿಲ್ಲ. ಅದು ಪ್ರವೃತ್ತಿಪರವಾದ ಧರ್ಮ. ಶರಣನು ಲಿಂಗ ಭೋಗೋಪಭೋಗಿಯಾಗಿ ಪ್ರಪಂಚವನ್ನು ಸ್ವೀಕರಿಸಬೇಕೆಂದು ವೀರಶೈವದ ಮತ; ಶಿವಶರಣರ ಮಾರ್ಗ. ಪ್ರಪಂಚವನ್ನು ಲಿಂಗಮುಖವಾಗಿ ಸ್ವೀಕರಿಸುವ ಬಗೆ ಷಟ್‌ಸ್ಥಲದ ವಿವರಣೆಯಲ್ಲಿ ಹೀಗೆ ಬಂದಿದೆ.

ನಾಸಿಕೇಂದ್ರಿಯದೊಳಾಚಾರಲಿಂಗಕ್ಕತಿ ವಿ
ಲಾಸದಿಂ ಪೃಥ್ವೀಮುಖದೆ ಗಂಧಮಂ ಕೊಟ್ಟು
ಭಾಸಿಸುವ ಜಿಹ್ವೇಂದ್ರಿಯದೊಳೆ ಗುರುಲಿಂಗಕಂಬೋಮುಖದೆ
ರಸವನಿತ್ತು
ಆ ಸೌಮ್ಯನೇತ್ರೇಂದ್ರಿಯದೊಳೆ ಶಿವಲಿಂಗಕು
ಲ್ಲಾಸದಿಂದಗ್ನಿಮುಖದಿಂದೆ ರೂಪಮನಿತ್ತು
ಲೇಸಿಂ ತ್ವಗಕ್ಷದೊಳ್ ಚರಲಿಂಗಕನಿಲಮುಖದಿಂ ಸ್ಪರ್ಶಮಿತ್ತು
ಬಳಿಕಂ

ಮೋದದಿಂ ಶ್ರೋತ್ರೇಂದ್ರಿಯದೊಳುಜ್ವಲಿಸುವಾ ಪ್ರ
ಸಾದಲಿಂಗಕೆ ಗಗನಮುಖದೆ ಶಬ್ದವನಿತ್ತು
ಸಾದರದೆ ಮನ ಇಂದ್ರಿಯದೊಳಾ ಮಹಾಲಿಂಗಕಾತ್ಮಮುಖದಿಂದೆ
ಕೂರ್ತು
ಈ ದ್ರವ್ಯಪರಿಣಾಮವಿತ್ತು ತತ್‌ತತ್‌ಪ್ರಸಾ
ದೋದಧಿ ನಿಮಗ್ನನಾಗುವುದು ತನು ಸೋಂಕಿದ ಸು
ಖಾದಿಗಳೆ ಶೇಷಂಗಳಪ್ಪವಿಂತಖಿಲಾಂಗದೊಳ್
ಲಿಂಗಮಿರ್ಪ ಕತದಿಂ,[೧]

---

೧. ಪ. ಪು. ಸಂ. ೧೨. ಪ. ೩೬, ೩೭.

ವೀರಶೈವದಲ್ಲಿ ಲಿಂಗಕ್ಕೆ ಇಷ್ಟು ವ್ಯಾಪಕವಾದ ಅರ್ಥವಿದೆ. ಅಖಿಲಾಂಗ ದಲ್ಲಿ ಲಿಂಗಧಾರಿಯಾಗಿರುವುದರಿಂದ ಶರಣನು ಲಿಂಗಮುಖದಿಂದಲೇ ಇಂದ್ರಿಯ ವಿಷಯಗಳನ್ನು ಸ್ವೀಕರಿಸುತ್ತಾನೆ. ಲಿಂಗಮುಖವಾಗಿ ಸ್ವೀಕೃತವಾಗುವುದರಿಂದ ಅದು ಪ್ರಸಾದವಾಗುತ್ತದೆ.

ಉಂಡು ಉಪವಾಸಿಗಳಾಗಿರುವ ತಂತ್ರವೇ ಇದು. ಪದ್ಮರಸರು ಈ ಕಲೆ ಯಲ್ಲಿ ಬಲ್ಲಿದರಾದವರು. ಅವರ ತಂದೆ ಕೆಲವು ಭೋಗಗಳನ್ನು ಪದ್ಮರಸರಿಗೆ ಒದವಿಸುವಾಗ ಮಾಡಿದ ಉಪದೇಶವಿದು.

ಮತ್ತಮಿಂತೆಂದು ಬೋಧಿಸಿದ ನೆಲೆಮಗನೆ ಕೇ
ಳುತ್ತಮ ಶಿವಜ್ಞಾನಿ ಪಿಡಿದಡೇನವು ಶಿವನಿ
ಮಿತ್ತಮಲ್ಲದೆ ಮಾಯಿಕಂಗಳೆನಿಪವೆ ಹೇಮವಂ ಭಾಮೆಯಂ ಭೂಮಿಯಂ
ಪೊತ್ತಲ್ಲದೆಂತು ದಾಸೋಹಮುತ್ಕರ್ಷಿಪುದು
ದಾತ್ತ ಬಸವೇಶ್ವರಾದಿಗಳವಂ ಗ್ರಹಿಸಿ ತದ್
ವೃತ್ತಿಯಿಂ ವೀರಶೈವ ಪ್ರತಿಷ್ಠಾಚಾರ್ಯರೆನಿಸಿ ಶಿವನೋಳ್ ಬೆರೆಯರೇ[೧]

ಒಳ್ಳೇ ಅರ್ಥಪೂರ್ಣವಾದ ಬೋಧೆ. ಪ್ರಪಂಚವೆಲ್ಲ ಮಾಯೆಯೆಂದೂ ಹೇಯವೆಂದೂ ಆದಷ್ಟು ಬೇಗನೆ ಅದರಿಂದ ಬಿಡುಗಡೆ ಹೊಂದಬೇಕೆಂದೂ ಬೋಧಿ ಸುವ ಸನ್ನಿವೇಶಗಳೇ ಭಾರತೀಯ ಸಾಹಿತ್ಯದಲ್ಲಿ ಬಹಳ. ಇಂತಹ ಉಪದೇಶ ಗಳನ್ನು ಓದಿದಾಗ ಓಯಸಿಸ್ ಕಂಡಷ್ಟು ಆನಂದವಾಗುತ್ತದೆ. ಹೇಮ, ಭಾಮೆ, ಭೂಮಿ.— ಇವು ಮಾಯಿಕವಲ್ಲ. ಶಿವಜ್ಞಾನಿ ಹಿಡಿದರೆ ಅವು ಶಿವನಿಮಿತ್ತವಾಗು ತ್ತವೆ; ಪ್ರಸಾದವಾಗುತ್ತವೆ. ಇಲ್ಲಿಗೇ ನಿಲ್ಲದೆ ಈ ಹೇಮ, ಭೂಮಿ, ಭಾಮೆ— ಇವನ್ನು ಸ್ವೀಕರಿಸದೆ ದಾಸೋಹವೇ ಬೆಳೆಯದು ಎಂದು ಶಿವಶರಣರ ಅಭಿಮತ. ಭಕ್ತಿಪಂಥಕ್ಕೆ ಈ ತುಂಬುಜೀವನ ಆವಶ್ಯ. ಅಂತೆಯೇ ಬಸವೇಶ್ವರಾದಿಗಳು ಅವನ್ನು ಸ್ವೀಕರಿಸಿದರು. ಪದ್ಮರಸರೂ ಆ ಮಾರ್ಗದಲ್ಲಿ ಅವನ್ನು ಸ್ವೀಕರಿಸಿ ಶರಣ ಮಾರ್ಗದಲ್ಲಿ ನಡೆದರು.

---

೧. ಪ. ಪು. ಸಂ. ೩. ಪ. ೫.

ಪದ್ಮರಸರು ಸಂಸಾರಸಂಗವು ಬಂಧವೆಂದು ಬಗೆಯಲಿಲ್ಲ. ಕಾಮಿ-ನಿಷ್ಕಾಮಿ, ಸದ್ವ್ಯಸನಿ - ದುರ್ವ್ಯಸನಿ, ರತ - ವಿರತ — ಈ ದ್ವಂದ್ವಗಳನ್ನು ದಾಟಿ ಆಚೆಯ ಅವಸ್ಥೆಯಲ್ಲಿ ನಿಂತಿದ್ದರು ಪದ್ಮರಸರು.

ಹೀಗೆ ಬಾಳಬಟ್ಟೆಯನ್ನು ನಿರ್ಣಯಿಸಿಕೊಂಡ ಯೋಗಿಪದ್ಮರಸರು ಜಗತ್ತಿನ ವ್ಯಾಪಾರಗಳನ್ನೆಲ್ಲ ಸರಿಯಾಗಿ ಸಾಗಿಸುತ್ತಾರೆ. ಇಲ್ಲದಿದ್ದರೆ ಲೌಕಿಕ ಪಾರಮಾರ್ಥಗಳೆರಡೂ ಒಂದುಗೂಡುವ ಬಗೆಯೆಂತು ? ರಾಜ್ಯಕ್ಕೆ ಮಂತ್ರಿಯಾಗಿ, ಸತಿಗೆ ಪತಿಯಾಗಿ, ಮಕ್ಕಳಿಗೆ ತಂದೆಯಾಗಿ, ಗೆಳೆಯರಿಗೆ ಗೆಳೆಯರಾಗಿ ಪ್ರಪಂಚದ ಎಲ್ಲ ಅಂಗಗಳೂ ಒಟ್ಟುಗೂಡಿ ಬಾಳಿನ ಸುಂದರವಾದ ಪರಿಪೂರ್ಣವಾದ ಚಿತ್ರವಾಗುವಂತೆ ನಡೆದಿದ್ದಾರೆ.

ಪದ್ಮರಸರಲ್ಲಿ ಅಗಾಧವಾದ ಶಾಸ್ತ್ರಜ್ಞಾನ ತುಂಬಿತುಳುಕುತ್ತಿದ್ದರೂ ವಿಲಕ್ಷಣವಾದ ರಸಿಕತನವಿದೆ ಅವರಿಗೆ. ಅವರನ್ನು ಕವಿ 'ರಸಿಕಚಕ್ರೇಶ್ವರ'[೧]ರೆಂದು ಕರೆದಿರುವುದು ಸಾರ್ಥಕವಾಗಿದೆ. ಪ್ರಪಂಚದಲ್ಲಿ ಜಯಶೀಲರಾಗಿ ಬಾಳಬೇಕಾದರೆ ರಸಿಕತನ ಅವಶ್ಯವಾಗಿ ಬೇಕು. ಆ ಗುಣವಿಲ್ಲದಿದ್ದರೆ ಬಾಳು ಭಾರವಾಗುತ್ತದೆ. ಪದ್ಮರಸರಂತೂ 'ರಸೋ ವೈ ಸಃ' ಎಂದು ಬಲ್ಲರು. ಜೀವನದ ಸಾರಸಾರಾಯವನ್ನೆಲ್ಲ ಶಿವಾರ್ಪಿತಭಾವನೆಯಿಂದ ಸ್ವೀಕರಿಸಿರುವರು. ಜಿತಪುಷ್ಪಚಾಪರಾಗಿ ವೇಶ್ಯಾವಾಟದಲ್ಲಿ ಸಂಚರಿಸಿರುವರು. ಆಗತಾನೇ ಕಣ್ದೆರೆದ ವಸಂತಮಾಸದ ಸುಖವನ್ನು ಲಿಂಗಕ್ಕರ್ಪಿಸಲು ವನವಿಹಾರ ಗೆಯ್ದಿರುವರು. ಅವರ ಆಂತರಿಕ ಜೀವನ ಎಷ್ಟು ರಸಭರಿತವಾಗಿದ್ದಿತು; ಪರಿಶುದ್ಧವಾಗಿದ್ದಿತು ಎಂಬುದನ್ನು ಧ್ವನಿಸುವ ಕನ್ನಡಿಯಿದು.

ಹೀಗೆ ಪದ್ಮರಸರು ಬೇಕು ಬೇಡಗಳನ್ನು ಅತಿಗಳೆದು ಒಳಹೊರಗೊಂದಾದ ಮಹಾಶರಣರು. ಅವರದು ಸಮದೃಷ್ಟಿ; ಸಮ್ಯಕ್‌ದೃಷ್ಟಿ. ಉಚ್ಚ, ನೀಚ ಭಾವನೆಗಳಿಗೆ ಅವರಲ್ಲಿ ಎಡೆಯೇ ಇರಲಿಲ್ಲ. ಉದ್ಧತಕುಲಜರು, ಅಧಮಕುಲಜರು ಎಂಬ ಭಾವನೆಯನ್ನು ಅವರು ಸದಾ ಖಂಡಿಸಿದವರು;[೨] ಶರಣರೇ ಕುಲಜರೆಂದು ನಂಬಿದವರು ಆ ಶರಣರ ಮಾರ್ಗದಲ್ಲಿ ನಡೆದು ಶರಣಮುಖಪದಪದ್ಮಮಿತ್ರರೆನಿಸಿದರು.

---

೧. ಪ. ಪು. ಸಂ. ೮. ಪ. ೫೮.   ೨. ಪ. ಪು. ಸಂ. ೪. ಪ. ೪೩.

. . . . ಭಕ್ತಿಯೆನಿಪ್ಪ
ಜೋಡುದೊಟ್ಟಸಮ ಕ್ರಿಯಾಫಲಕಮಂ ಪಿಡಿದು ಸುಜ್ಞಾನ ಖಡ್ಗದಿಂದೆ
ಪಾಡೆಸೆಯೆ ವಿಷಮ ಮಾಯಾಸಮರಮಂ[1] . . .
ಗೆದ್ದ ಪುಣ್ಯಪುರುಷರು ಪದ್ಮರಸರು.

---

೧. ಪ. ಪು. ಸಂ. ೩. ಪ. ೯.

ಪದ್ಮಣಾಂಕನ ಕಥನಕಲೆ

ಪದ್ಮರಾಜಪುರಾಣದ ವೈಶಿಷ್ಟ್ಯವಡಗಿರುವುದು ಕಥನಕಲೆಯಲ್ಲಿ. ಕವಿ ಪದ್ಮಣಾಂಕನು ರಸಿಕನಾಗಿ ಕಥನ ಕಲೆಯ ರಹಸ್ಯವನ್ನರಿತಿರುವನು. ಆತನ ಕಾವ್ಯದಲ್ಲಿ ಸಾಂಪ್ರದಾಯಕವಾದ ಅಷ್ಟಾದಶವರ್ಣನೆಗಳು ಇಲ್ಲವೆ ಇತರ ವರ್ಣನೆಗಳು ಬಾರದೆ ಎಲ್ಲಿ ನೋಡಿದಲ್ಲಿ ಕಥೆಗಳ ಪ್ರವಾಹವೇ ಕಂಡುಬರುತ್ತದೆ. ವರ್ಣನೆಗಳಿಗಿಂತಲೂ ಕಥೆಯ ಕಡೆಗೆ ಕವಿಯ ಗಮನವಿದ್ದುದು ಸ್ಪಷ್ಟವಾಗುತ್ತದೆ.

ಪದ್ಮರಾಜಪುರಾಣದಲ್ಲಿ ಕವಿಗೆ ಕೆರೆಯ ಪದ್ಮರಸರ ಜೀವನಚರಿತೆಯನ್ನೊರೆಯಬೇಕಾಗಿದೆ. ಹಲವಾರು ಕಥೆ ಸನ್ನಿವೇಶಗಳಿಂದ ಈ ಕಾರ್ಯವನ್ನು ಯಶಸ್ವಿಯಾಗಿ ಸಾಗಿಸುತ್ತಾನೆ. ಕಾವ್ಯದ ಈ ಮೂಲೋದ್ದೇಶವನ್ನು ಸಾಧಿಸುವಾಗಲೇ ಕವಿ ಮತ್ತೆ ಕೆಲವು ಕಥೆ ಹೇಳಬೇಕಾಗಿದೆ. ಕವಿ ಪದ್ಮಣಾಂಕನು ಕಥಾನಾಯಕನ ವಂಶದಲ್ಲಿ ಹುಟ್ಟಿ ಬೆಳೆದುದರಿಂದ ತನ್ನ ಹಿಂದಿನ ಹತ್ತು ತಲೆಮಾರಿನ ಕಥೆ ಕವಿಗೆ ಗೊತ್ತಿದೆ ಅದೊಂದು ಸುಸಂಸ್ಕೃತವಾದ ಪಂಡಿತರ ಮನೆತನವಾದುದರಿಂದ ಕವಿಗೆ ತನ್ನ ಪೂರ್ವಜರ ವಿಷಯವಾಗಿ ಅನೇಕ ಸಂಗತಿಗಳು ಉಪಲಬ್ಧವಿರುವುದು ಸಹಜವಾಗಿದೆ. ಕೆರೆಯ ಪದ್ಮರಸರ ಚರಿತ್ರೆಯನ್ನು ಕವಿ ಶಿವಯೋಗಿಮಲ್ಲರಸರ ಚರಿತ್ರೆಯಿಂದಲೇ ಆರಂಭಿಸುತ್ತಾನೆ. ಪದ್ಮಣಾಂಕನಿಗೆ ಕಥೆಯ ದೃಷ್ಟಿಯಿಂದ ಔಚಿತ್ಯಜ್ಞಾನವಿದೆ. ಅಂತೆ ಹಿಂದಣವರ ಕಥೆಗಳನ್ನು ಅತಿ ಸಂಕ್ಷೇಪವಾಗಿ ಹೇಳುತ್ತಾನೆ. ಒಂದೊಂದು ಷಟ್ಪದಿಯಲ್ಲಿ ಅವರ ವ್ಯಕ್ತಿತ್ವವನ್ನು ಸ್ಫುಟವಾಗುವಂತೆ ಕಂಡರಿಸುತ್ತಾನೆ. ಅವರವರ ಸಾಧನೆ ಬೋಧನೆಗಳೆಲ್ಲ ವಿದಿತವಾಗುತ್ತವೆ. ಅವರೆಲ್ಲರ ವಿಷಯವಾಗಿ ಕವಿಗೆ ಅನೇಕ ಸಂಗತಿಗಳು ತಿಳಿದಿರುವ ಸಂಭವ ಹೆಚ್ಚಿದೆ; ಆದರೆ ಅವನ್ನೆಲ್ಲ ವಿವರಿಸುವ ಹುಚ್ಚಿಲ್ಲ. ಹತ್ತು ಜನರಲ್ಲಿ ಮುಖ್ಯರಾದ ಮೂವರ ಕಥೆಗಳನ್ನು ಸ್ವಲ್ಪ ವಿವರವಾಗಿ ಹೇಳುತ್ತಾನೆ ಅದಕ್ಕೆ ಕಾರಣ ಆ ವ್ಯಕ್ತಿಗಳ ಹಿರಿಮೆಯೆಂದು ಬೇರೆ ಹೇಳಬೇಕಿಲ್ಲ. ಶಿವಯೋಗಿಮಲ್ಲರಸರು ಮನೆತನದ ಮೂಲಪುರುಷರು. ಶಿವಾನುಭಾವಿಗಳು; ಶಿವಯೋಗಿಗಳು. ಅವರ ಶಿವಾನುಭಾವ, ಶಿವಯೋಗ, ಶ್ರೀಶೈಲಮಲ್ಲಿಕಾರ್ಜುನನಲ್ಲಿ ಅವರು ಬೆರಸಿ ಬೇರಿಲ್ಲದಿರುವ ಸ್ಥಿತಿ ಇವನ್ನೆಲ್ಲ ಪದ್ಮಣಾಂಕನು ಭಕ್ತಿಕಂಪಿತಹೃದಯನಾಗಿ ಚಿತ್ರಿಸುತ್ತಾನೆ. ಮಲ್ಲರಸರ ಶಿವಯೋಗದ, ಶಿವಾನುಭಾವದ ದಿವ್ಯತೇಜಸ್ಸನ್ನು ಸೆರೆಹಿಡಿದಿದ್ದಾನೆ ಕವಿ ಅಲ್ಲಿ. ಇದೇ ರೀತಿಯಾಗಿ ಸಕಲೇಶಮಾದರಸರೂ ಕವಿಯ ವಂಶದಲ್ಲಿ ಅತ್ಯಂತ ಕೀರ್ತಿ

ಶಾಲಿಗಳಾದ ಮಹಿಮರು. ಅವರು ಕ್ರಿಯಾಜ್ಞಾನಸಾಮರಸ್ಯವನ್ನು ಕಂಡು ಶರಣಯುಗವನ್ನು ಸ್ಫುರಣಮಾಡಿದರು. ಆ ಹಿರಿಯಕಥೆಯನ್ನು ಕವಿ ಕಿರಿದರಲ್ಲಿಯೇ ಹೇಳುತ್ತಾನೆ. ಶಿವಯೋಗಿಮಲ್ಲರಸರ ಜೀವನವನ್ನು ಚಿತ್ರಿಸುವಾಗ ಅವರ ಶಿವಾನುಭಾವದ ಕಡೆಗೆ ಕವಿಯ ಗಮನವಿದ್ದರೆ ಸಕಲೇಶಮಾದರಸರ ಕಥೆ ಹೇಳುವಾಗ ಅವರ ಕ್ರಿಯಾಜ್ಞಾನಸಾಮರಸ್ಯದ ಕಡೆಗೆ ಕವಿಯ ಚಿತ್ತವಿದೆ. ಮಾಯಿದೇವಾರ್ಯರ ಮಾನವಹೃದಯ,ಪ್ರಪಂಚದ ವಿಷಯವಾಗಿ ಅವರಿಗಿದ್ದ ಅತ್ಯಂತ ಆದರ ಇವನ್ನುಕವಿ ರಸಭರಿತವಾಗಿ ಚಿತ್ರಿಸಿದ್ದಾನೆ.ಭಾವಿಸುವೊಡೆ ಶರಣನಿಗೆ ಸಂಸಾರಸಂಗ ಬಂಧನವಲ್ತು ಎಂಬ ದಿವ್ಯಸಂದೇಶವನ್ನು, ಕಲಾತ್ಮಕವಾಗಿ ಚಿತ್ರಿಸಿದ ಮಾಯಿದೇವಾರ್ಯರ ಕಥೆ ಸಾರುತ್ತದೆ. ಆರಂಭದ ಎರಡು ಸಂಧಿಗಳನ್ನು ಅವಲೋಕಿಸಿದರೆ ಕವಿಗಿದ್ದ ತಾರತಮ್ಯಭಾವನೆ, ಔಚಿತ್ಯಜ್ಞಾನ ಇವು ಸ್ಪಷ್ಟವಾಗುತ್ತವೆ. ಮುಖ್ಯವಾಗಿ ಸಹೃದಯರ ಮನಸನ್ನು ಸೆಳೆಯುವಂತೆ ಕಥೆಯನ್ನು ಚಿತ್ರಿಸಲು ಬೇಕಾದ ಸಾಧನ ಸಾಮಗ್ರಿ ಎಲ್ಲಿದೆಯೆಂಬುದನ್ನು ಕಂಡು ಹಿಡಿಯುವ ಸೂಕ್ಷ್ಮ ನಿರೀಕ್ಷಣ ಶಕ್ತಿ ಕತೆಗಾರ ಪದ್ಮಣಾಂಕನಿಗಿದೆ. ಅದನ್ನು ಆಯ್ದುಕೊಂಡು ಕಾವ್ಯದ ಕಥೆಯ ಚೌಕಟ್ಟಿನಲ್ಲಿ ಅದು ಗಾತ್ರದೃಷ್ಟಿಯಿಂದಲೂ ಸತ್ವದೃಷ್ಟಿಯಿಂದಲೂ ಸರಿಹೊಂದುವಂತೆ ಮಾಡುತ್ತಾನೆ. ಇಲ್ಲಿಯೇ ಅವನ ಕಥನಕಲೆಯ ಶಕ್ತಿ ಪ್ರಕಟವಾಗಿರುವುದು

ಹೊಯ್ಸಳರಾಜ್ಯೋದಯದ ಕಥೆಯನ್ನು[೧] ಕವಿ ಬಾಣಬಿಟ್ಟಂತೆ ಹೇಳಿಬಿಡುತ್ತಾನೆ. ಸಳನೆಂಬ ಯದುಕುಲಜನೊರ್ವಂ ಎಂದು ಕಥೆಯನ್ನು ಆರಂಭಿಸಿದರೆ ನಿರರ್ಗಳವಾದ ಓಟದಿಂದ ಅದನ್ನು ಮುಂದುವರಿಸಿ ಮೂರು ಪದ್ಯಗಳಲ್ಲಿ ಮುಗಿಸಿಬಿಡುತ್ತಾನೆ. ಕಥೆಯ ಮುಖ್ಯ ಘಟನೆಗಳನ್ನು ಪೋಣಿಸುವ ಜಾಣ್ಮೆಯನ್ನು ನೋಡಬೇಕಿಲ್ಲಿ. ಎರಡು ಪದ್ಯಗಳಲ್ಲಿ ಹನ್ನೆರಡು ಘಟನೆಗಳ ಮಣಿಹಾರವನ್ನು ಹೆಣೆದಂತಿದೆ. ಸುಂದರವಾದ ಘಟನೆಗಳ ಆಯ್ಕೆ, ಅವುಗಳ ತಡೆಯಿಲ್ಲದ ಓಟ, ಕಥೆ ಹೇಳುವಲ್ಲಿ ಗೋಚರವಾಗುವ ಉತ್ಸಾಹ ಇವೆಲ್ಲ ಒಟ್ಟುಗೂಡಿ ಬಟ್ಟೆಗಿಳಿದು ಹೊಯ್ಸಳರಾಜ್ಯೋದಯದ ಕಥೆಯನ್ನು ಈ ಕಾವ್ಯದಲ್ಲಿ ಚಿರಸ್ಮರಣೀಯವಾಗುವಂತೆ ಮಾಡಿವೆ. ಹೊಯ್ಸಳರ ಕಥೆ ಇಲ್ಲಿ ಬರುವುದಕ್ಕೆ ಒಂದು ಔಚಿತ್ಯವುಂಟು. ಏಕೆಂದರೆ-ಕಾವ್ಯದ ಕಥಾನಾಯಕರಾದ ಕೆರೆಯಪದ್ಮರಸರು ಮಂತ್ರಿಗಳಾಗಿರುವುದು ಹೊಯ್ಸಳರಲ್ಲಿ; ಕಾವ್ಯದ ಮುಖ್ಯ ಘಟನೆಗಳು ನಡೆದಿರುವುದು ಹೊಯ್ಸಳವಿಷಯದಲ್ಲಿ. ಇಂಥ ಪ್ರಸಂಗ ಸಾಂಪ್ರದಾಯಕಕವಿಯ ಕೈಯಲ್ಲಿ ಸಿಕ್ಕಿದ್ದರೆ ಹೊಯ್ಸಳರಾಜ್ಯೋದಯವನ್ನೂ ವಿಷಯವನ್ನೂ ವರ್ಣಿಸಲು ನೂರಾರು ಪದ್ಯಗಳ ಒಂದೆರಡು

---

೧. ಪ. ಪು. ಸಂ. ೩. ಪ. ೧೫, ೧೭.

ಸಂಧಿಗಳನ್ನು ವಿನಿಯೋಗಿಸಬಹುದಿತ್ತು. ಮೂಲ ಕಥಾವಸ್ತುವನ್ನೂ ಹಾಗೂ ಕಥಾನಾಯಕರನ್ನೂ ಕೆಲಕಾಲ ಮರೆತರೂ ಚಿಂತೆಯಿಲ್ಲ; ಈ ಕಾರ್ಯವನ್ನು ಸಾಧಿಸುವ ಹವ್ಯಾಸ ಬಹುಜನಕವಿಗಳಿಗೆ. ಆದರೆ ಪದ್ಮಣಾಂಕನು ವರ್ಣನಾಪ್ರಿಯನಾದ ಕವಿಯಲ್ಲ. ಆತನು ಕಥನಕಲಾಪ್ರಿಯನು. ಅಂತೆಯೇ ಮೂಲಕಥೆಯ ಓಟಕ್ಕೆ, ಅದರ ನೆನಹಿಗೆ ತಡೆಯುಂಟಾಗದಂತೆ ಹೊಯ್ಸಳರಾಜ್ಯೋದಯದ ಕಥೆಯನ್ನು ಕವಿಪದ್ಮಣಾಂಕನು ಕಲಾತ್ಮಕವಾಗಿ ಹೇಳಿ ಮುಗಿಸಿ ಮುಂದೆ ಸಾಗುತ್ತಾನೆ. ಎಷ್ಟು ಕಥೆಗಳನ್ನು ಹೇಳಿದರೂ ಈ ಕಾವ್ಯದಲ್ಲಿ ಬಗೆಬಗೆಯ ಬಣ್ಣದ ಒಂದೇ ಬಟ್ಟೆಯನ್ನು ನೆಯ್ದಂತಾಗಿದೆ. ಅಷ್ಟು ಏಕ ಸೂತ್ರತೆಯಿದೆ ಅಲ್ಲಿ. ಪ್ರತಿಯೊಂದು ಕಥೆಯೂ ಸರಿಯಾದ ಅವಶ್ಯವಾದ ಸ್ಥಾನದಲ್ಲಿ, ಸಮಯದಲ್ಲಿ ಪ್ರವೇಶಮಾಡಿ ತನ್ನ ಕಾರ್ಯವನ್ನು ಚೆನ್ನಾಗಿಯೇ ಪೂರಯಿಸಿ ಮುಕ್ತಾಯವಾಗುತ್ತದೆ.

ಪದ್ಮರಾಜಪುರಾಣದಲ್ಲಿ ಸ್ವಲ್ಪ ದೀರ್ಘವಾಗಿ ಬಂದಿರುವ ಉಪಕಥೆಯೆಂದರೆ ಹಂಪೆಯ ಹರೀಶ್ವರನಿಗೆ ಸಂಬಂಧಪಟ್ಟುದು ಸುಮಾರು ೩೦ ಪದ್ಯಗಳನ್ನು ವ್ಯಾಪಿಸಿದೆ ಈ ಕಥೆ.[೧] ಪದ್ಮಣಾಂಕನ ದೃಷ್ಟಿಯಲ್ಲಿ ಇದೊಂದು ವಿಸ್ತಾರವಾದ ಕಥೆಯೆಂದೇ ಹೇಳಬಹುದು. ಪದ್ಮರಸರ ಚರಿತ್ರೆಯಲ್ಲಿ ಹರೀಶ್ವರನ ಕಥೆಗೇಕೆ ಪ್ರಾಶಸ್ತ್ಯ ಎಂದು ಯಾರಾದರೂ ಕೇಳಬಹುದು. ಮೊದಲನೆಯದಾಗಿ ಈ ಕವಿಗಳೀರ್ವರೂ ಒಡಲೆರಡು, ಒಂದೇ ಜೀವವೆಂಬಂತೆ ಬಾಳಿದವರು; ಶರಣಮಾರ್ಗದಲ್ಲಿ ನಡೆದ ಪರಮ ಭಕ್ತರು; ಕವಿಗಳು. ನರಸಿಂಹ ಬಲ್ಲಾಳನ ಆಸ್ಥಾನದಲ್ಲಿಯೇ ಇದ್ದವರು. ಶಿವಶರಣರ ಮಹಿಮೆ ಪ್ರಕಟವಾಗುವ ಘಟನೆಗಳು, ಪದ್ಮರಸರ ಜೀವನದಲ್ಲಿ ನಡೆದಂತೆ ಹರೀಶ್ವರನ ಜೀವನದಲ್ಲಿಯೂ ನಡೆದಿವೆ. ತುಂಬಿದ ಸಭೆಯಲ್ಲಿಯೇ ಇಂತಹದೊಂದು ಘಟನೆ ನಡೆದೇ ಬಿಟ್ಟಿತು. ಲೆಕ್ಕ ಬರೆಯುತ್ತಿದ್ದಂತೆ ಹರಿಹರನು ಎರಡೂ ಕೈಗಳನ್ನು ಮೇಲಕ್ಕೆತ್ತಿ ಒರಸಿದನು. ವಾದಿಗಳ ಸನ್ನೆಯಿಂದ ನೃಪತಿಯು ನಕ್ಕನು; ಹರಿಯಣ್ಣನಿಗೆ ಮರುಳು ಹಿಡಿದಿದೆಯೆಂದನು. ವಾದಿಗಳು ಗಹಗಹಿಸಿ ನಕ್ಕರು. ಶರಣರಾದ ಪದ್ಮರಸರು ಇದನ್ನು ಸಹಿಸಬಲ್ಲರೇ ? ಪಂಪಾವಿರೂಪಾಕ್ಷನ ತೆರೆಗೆ ಹತ್ತಿದ ಉರಿಯನ್ನು ಹರೀಶ್ವರನು ತನ್ನ ಕೈಗಳಿಂದ ತಿಕ್ಕಿ ಆರಿಸಿದನೆಂಬುದನ್ನು ಪದ್ಮರಸರು ಚರರನ್ನುಕಳಿಸಿ ಪ್ರತ್ಯಕ್ಷ ಮಾಡಿ ತೋರಿಸಿದರು.

ಹೀಗೆ ಹರೀಶ್ವರ ಕೆರೆಯಪದ್ಮರಸರಿಬ್ಬರೂ ಶಿವಶರಣರ ಮಹಿಮೆಯನ್ನು ದೊರೆಯ ಸಭೆಯಲ್ಲಿ ಪ್ರತ್ಯಕ್ಷಮಾಡಿ ತೋರಿಸಿದಕಾರಣ ಪದ್ಮರಾಜಪುರಾಣದಲ್ಲಿ

---

೧. ಪ. ಪು. ಸಂ. ೫. ಪ. ೬, ೩೬.

ಹರೀಶ್ವರನ ಕಥೆಯ ಪ್ರಸ್ತಾಪ ಬಂದಿತು. ಪದ್ಮಣಾಂಕನು ಶಿವಭಕ್ತನು. ಕೆರೆಯ ಪದ್ಮರಸರೊಡನೆ ಇದ್ದು, ಕನ್ನಡದಲ್ಲಿ ಅದ್ಭುತವಾದ ಕ್ರಾಂತಿಯನ್ನೆಸಗಿದ ಮಹಾಕವಿ ಹರಿಹರನು ಪದ್ಮಣಾಂಕನ ಮನವನ್ನು ಸೂರೆಗೊಂಡಿರುವನು. ಆದುದರಿಂದ ಕವಿಯು ಹರೀಶ್ವರನ ಜೀವನದಲ್ಲಿ ನಡೆದ ಒಂದೆರಡು ರಸನಿಮಿಷಗಳನ್ನಿತ್ತು ಸುಂದರವಾದ ಕಥೆಗಳನ್ನು ಹೆಣೆದೇ ಬಿಡುವನು. ಆ ಕಥೆಗಳೆಂದರೆ:

೧. ಗುಹಾರಣ್ಯದೊಳಗಿನ ಹರಿಹರದೇವಾಲಯದಲ್ಲಿದ್ದ ಬ್ರಹ್ಮರಾಕ್ಷಸನನ್ನು ಓಡಿಸಿದುದು.

೨. ಆಂಧ್ರದೇಶದಿಂದ ಬಂದ ಗಣಿಕಾಗ್ರಣಿಯ ಕಥೆ.

ಎರಡನೆಯದು ಹರೀಶ್ವರನ ಮಹಿಮೆಯನ್ನು ಪ್ರಕಟಪಡಿಸುವ ಸರಸ ಸುಂದರವಾದ ಕಥೆ.

ಹರೀಶ್ವರನ ಕಾವ್ಯರಸವನ್ನೂ, ಅಲ್ಲಿರುವ ಮೋಹನಚಾತುರ್ಯವನ್ನೂ, ಕಲಾಪ್ರೌಢಿಮೆಯನ್ನೂ ಕಂಡು ಮನಸೋತು ಆತನನ್ನು ವರಿಸುವೆನೆಂದು ಬಗೆದು ಆಂಧ್ರದೇಶದ ಗ್ರಣಿಕಾಗ್ರಣಿಯೋರ್ವಳು ಹಂಪೆಗೈತರುವಳು.

ಕತೆಗಾರಪದ್ಮಣಾಂಕನಿಗೆ ಸಮಯ ಸನ್ನಿವೇಶಗಳನ್ನು ಮಾನವ ಜೀವನಕ್ಕೆ ಸರಿಹೊಂದುವಂತೆ ನಿರ್ಮಿಸುವ, ಜೋಡಿಸುವ ಜಾಣ್ಮೆಯಿದೆ. ಅಂತೆಯೇ ಗಣಿಕಾಗ್ರಣಿ ರವಿ ಪಶ್ಚಿಮಾಂಬುಧಿಗಿಳಿದೊಡನೆಯೇ ಹಂಪೆಗೆ ಬಂದು ಪಂಪಾವಿರೂಪಾಕ್ಷನನ್ನು ಸ್ತುತಿಸಿ ನಡುರಾತ್ರಿಯಲ್ಲಿ ಆತನನ್ನು ಕಾಣಲಿಕ್ಕೆ ಬರುವಳು. ಮಧ್ಯರಾತ್ರಿಯಲ್ಲಿ ಮಹಾ ಶಿವಯೋಗಿಯೆಡೆಗೆ ಗಣಿಕಾಗ್ರಣಿಯೊರ್ವಳು ಬರುತ್ತಿರುವುದನ್ನು ಸ್ಮರಿಸಿದರೆ ಅಲ್ಲಿರುವ ವಸ್ತುಧ್ವನಿಯ ಕಲ್ಪನೆ ಬರುತ್ತದೆ. ಆಕೆಯ ಇಂಗಿತವನ್ನರಿತು ಹರೀಶ್ವರನು ಹೆಂಡರಿಗೆ ಹೆಂಡರು ಪ್ರೀತಿಸಿ ಬಂದುದುಂಟೆ ? ನಾನು ಶಿವನಿಗೆ ಗಂಡುದೊತ್ತಾಗಿರುವೆನು. ತಾಯೇ, ಹೀಗೆ ಬಳಲಿ ಬಾಯಾರಿ ಬರುವುದುಂಟೆ ? ಎಂದು ಕೇಳುತ್ತಾನೆ.

ಶಾಂತಿರಸದಿಂದ ಎರಕಹೊಯ್ದಂತಿದ್ದ ಪರಮಶಿವಯೋಗಿಯನ್ನು ಕಂಡೊಡನೆಯೇ ಕಾಮನು ಬಿಲ್ಲನಿಳುಹಿದ್ದನು; ರತಿ ವಿರತಿಯಾಗಿದ್ದಳು. ಆತನ ವಾತ್ಸಲ್ಯಪೂರಿತ ಮಾತು ಕೇಳಿದೊಡನೆಯೇ ಕಾಮದ ಕತ್ತಲೆಕಳೆದು ಶಿವಭಕ್ತಿಯ ರತಿಯುಂಟಾಯಿತು. ಆಕೆ ಭಕ್ತಿಯಿಂದೆರಗಿ ನೀವು ಪಶುಪತಿಗೆ ಗಂಡುದೊತ್ತಾಗಿದ್ದರೆ ನಾನು ನಿಮಗೆ ಪೊರಗುಂಡನಾಗಿ ನಿಮ್ಮ ಸೇವೆಯಲ್ಲಿರುವೆನು. ಎಂದು

ಪ್ರಾರ್ಥಿಸಿ ಶಿವದೀಕ್ಷೆಯನ್ನು ಸ್ವೀಕರಿಸುವಳು. ಹೀಗೆ ಶಿವಭಕ್ತಳಾಗಿ ಕೆಲಕಾಲ ಸೇವೆಯಲ್ಲಿ ಕಳೆದು ಕೊನೆಗೆ ಪಂಪಾಕ್ಷೇತ್ರದಲ್ಲಿಯೇ ಶಿವೈಕ್ಯಳಾಗುವಳು.

ಶೃಂಗಾರದ ಸನ್ನಿವೇಶಗಳು ಭಕ್ತಿಯಲ್ಲಿ ಕೊನೆಗೊಳ್ಳುವುದನ್ನು ಹರೀಶ್ವರನ ಕಾವ್ಯದಲ್ಲಿ ಅನೇಕಸಲ ನೋಡುತ್ತೇವೆ. ಪ್ರತ್ಯಕ್ಷ ಆತನ ಜೀವನದಲ್ಲಿ ನಡೆದ ಘಟನೆ ಹರೀಶ್ವರನ ಈ ದಿವ್ಯ ವ್ಯಕ್ತಿತ್ವದ ಪ್ರಭಾವವನ್ನು ಪ್ರಕಟಪಡಿಸುತ್ತದೆ. ಇಂತು ರಮ್ಯವಾದ, ರಮಣೀಯವಾದ ದೃಶ್ಯವನ್ನು ಪದ್ಮಣಾಂಕನು ರಸಭರಿತವಾಗುವಂತೆ ಚಿತ್ರಿಸಿದ್ದಾನೆ. ಹರೀಶ್ವರ ಹಾಗೂ ಗಣಿಕಾಗ್ರಣಿ ಇಬ್ಬರ ವ್ಯಕ್ತಿತ್ವವನ್ನೂ ಕವಿ ಚಿರಸ್ಮರಣೀಯವಾಗುವಂತೆ ಮೂಡಿಸಿದ್ದಾನೆ. ಒಂದು ಸನ್ನಿವೇಶದಿಂದ ಇಡೀ ವ್ಯಕ್ತಿತ್ವದ ಮಂದಿರದ ದರ್ಶನವಾಗುತ್ತದೆ. ಕರಿಯು ಕನ್ನಡಿಯಲ್ಲಡಗಿದಂತೆ ಕತೆಗಾರನಾಯ್ದುಕೊಂಡ ಹಲಕೆಲವು ಸನ್ನಿವೇಶಗಳಲ್ಲಿ ಘನವಾದ ವ್ಯಕ್ತಿತ್ವ ಪ್ರಕಟವಾಗಬೇಕು. ಕಥೆಯ ರಹಸ್ಯವಿರುವುದೇ ಇಲ್ಲಿ. ವ್ಯಕ್ತಿಯ ಜೀವನದಲ್ಲಿ ನಡೆದ ಯಾವಘಟನೆಗಳಿಗೆ, ಸನ್ನಿವೇಶಗಳಿಗೆ ಇಂತಹ ಶಕ್ತಿಯಿದೆಯೆಂಬುದನ್ನು ಅರಿತುಕೊಳ್ಳುವಲ್ಲಿಯೇ ಪ್ರತಿಭಾಶಕ್ತಿಯಿರುವುದು. ಪದ್ಮಣಾಂಕನು ಅಂತಹ ಸನ್ನಿವೇಶಗಳನ್ನು ಆಯ್ದುಕೊಳ್ಳುವಲ್ಲಿಯೂ, ಅವುಗಳನ್ನು ಮನಹಿಡಿಯುವಂತೆ ನಿರೂಪಣೆಮಾಡುವುದರಲ್ಲಿಯೂ ಬಲ್ಲಿದನಾಗಿರುವನು.

ಪದ್ಮರಾಜಪುರಾಣದಲ್ಲಿ ಬಂದಿರುವ ಈ ಕಥೆಗೆ ಕನ್ನಡಸಾಹಿತ್ಯದಲ್ಲಿ ಅತಿ ಮಹತ್ವದಸ್ಥಾನ ಸಲ್ಲುತ್ತದೆ. ಮೊದಲನೆಯದಾಗಿ ಆ ಕಥೆ ಒಳ್ಳೇ ರಸಭರಿತವಾಗಿದೆ. ಮಹಾಕವಿಯೋರ್ವನ ಕಾವ್ಯಗಳನ್ನು ಓದಿ ಒಬ್ಬ ತರುಣಿ ಮನಸೋಲುವ ದೃಶ್ಯ ಒಳ್ಳೇ ಚಿತ್ತಾಕರ್ಷಕವಾಗಿದೆ. ಮುಂದೇನು ಎಂಬ ಪ್ರಶ್ನೆ ಬರುತ್ತದೆ ಕಥೆಯಲ್ಲಿ ಪ್ರತಿಯೊಂದು ಘಟನೆಯೂ, ನಿರೂಪಣೆಯೂ ಮುಂದೇನು, ಮುಂದೇನು ಎಂಬ ಕುತೂಹಲಬುದ್ಧಿಯನ್ನು ಕೆರಳಿಸಬೇಕು. ಪದ್ಮಣಾಂಕನಿಗೆ ಈ ರಹಸ್ಯ ವಿದಿತವಾಗಿದ್ದಿತು. ಅಂತೆಯೇ ಈ ಕತೆಯಲ್ಲಿ ಒಳ್ಳೆಯ ಕಲೆಯಡಗಿದೆ.

ಎರಡನೆಯದಾಗಿ ಈ ಕಥೆಯ ವಸ್ತು ಒಬ್ಬ ಕ್ರಾಂತಿಕಾರಕನಾದ ಮಹಾಕವಿಯ ಜೀವನಕ್ಕೆ ಸಂಬಂಧಪಟ್ಟಿದೆ. ಆತನ ಆಂತರಿಕ ಜೀವನದ ದರ್ಶನ ಮಾಡಿಸುತ್ತದೆ; ಬಾಹ್ಯ ಜೀವನದಲ್ಲಿ ನಡೆದ ಕೆಲವು ಮಹತ್ವದ ಘಟನೆಗಳನ್ನು ವಿವರಿಸುತ್ತದೆ. ರಾಘವಾಂಕನು ಬರೆದ 'ಹರಿಹರಮಹತ್ವ' ಎಂಬ ಗ್ರಂಥ ಇದುವರೆಗೂ ಉಪಲಬ್ಧವಾಗಿರುವುದಿಲ್ಲ. ಪದ್ಮಣಾಂಕನ ಕಾವ್ಯದಲ್ಲಿ ಬಂದಿರುವ ಈ ಭಾಗವನ್ನು ಕನ್ನಡಸಾಹಿತ್ಯ ಭಕ್ತರು ಆದರದಿಂದ ಬರಮಾಡಿಕೊಳ್ಳುತ್ತಾರೆ.

ಪದ್ಮರಾಜಪುರಾಣದ ೧೦, ೧೧ ನೆಯ ಸಂಧಿಗಳಲ್ಲಿ ಕವಿ ಕತೆಗಳನ್ನು ಸೂರೆಗೆಯ್ದಿದ್ದಾನೆ. ತ್ರಿಭುವನತಾತನೊಡನೆ ವಾದಮಾಡುವಾಗ ಆತನ ಪ್ರತಿಯೊಂದು ಮುದ್ದೆಯನ್ನೂ ವಿವೇಚನೆಗೆ ತೆಗೆದುಕೊಂಡು ಸಾಧಾರವಾಗಿ ವಿಷ್ಣುಪಾರಮ್ಯವನ್ನು ಖಂಡಿಸಿ, ಶಿವಪಾರಮ್ಯವನ್ನು ಸಿದ್ಧಮಾಡಿ ತೋರಿಸುತ್ತಾನೆ. ಹೀಗೆ ಮಾಡುವಲ್ಲಿ ಒಂದೊಂದು ವಿಷಯಕ್ಕೆ ಸಂಬಂಧಪಟ್ಟ ಅನೇಕ ಕಥೆಗಳನ್ನು ಕವಿ ಉಲ್ಲೇಖಿಸುತ್ತಾನೆ; ಉದಾಹರಿಸುತ್ತಾನೆ; ವಿವರಿಸುತ್ತಾನೆ. ವೇದ, ಆಗಮ, ಶ್ರುತಿ, ಸ್ಮೃತಿ, ಪುರಾಣಗಳಿಂದ ವಾಕ್ಯಗಳನ್ನು ಉದ್ಧರಿಸಿ, ಕನ್ನಡಿಸಿ ಅವಕ್ಕೆ ಆಧಾರವಾಗಿ ಕಥೆಗಳನ್ನು ಹೇಳುವುದರಿಂದ ವಿಷಯ ಹೆಚ್ಚು ಸ್ಪಷ್ಟವಾಗುತ್ತದೆ. ಹೀಗೆ ಶಿವಾದ್ವೈತ ಸಾಕಾರ ಸಿದ್ಧಾಂತವನ್ನು ಪ್ರತಿಷ್ಠಾಪನೆ ಮಾಡಲು ಕವಿ ವೇದ, ಆಗಮ, ಪುರಾಣ ಮೊದಲಾದವುಗಳಿಂದ ಅನೇಕ ಕಥೆಗಳನ್ನು ಉದ್ಧರಿಸಿರುವನು. ಈ ಸಂದರ್ಭದಲ್ಲಿ ಉಲ್ಲಿಖಿತವಾದ ಕಥೆಗಳ ವಿವರ ಹೀಗಿದೆ :—

೧. ತೃಣಬಿಂದು ಮುನಿಯಕಥೆ
೨. ವ್ಯಾಸನಕಥೆ
೩. ದಕ್ಷಯಾಗದಕಥೆ
೪. ಸತ್ಯಸಂಧನಕಥೆ
೫. ದತ್ತಾತ್ರೇಯಜನನವೃತ್ತಾಂತ
೬. ದುರ್ವಾಸರ ಜನನ
೭. ನಂದಿಯಜನನವೃತ್ತಾಂತ
೮. ನರಸಿಂಹಾವತಾರದಕಥೆ
೯. ವಿಷ್ಣುವಿಗೆ ಭೃಗುಮುನಿಯಶಾಪ
೧೦. ದಶಾವತಾರದಕಥೆ
೧೧. ಏಕಶೃಂಗವರಾಹನಕಥೆ
೧೨. ಯಾದವಕುಲ ಒನಕೆಯಿಂದ ಹಾಳಾದ ಕಥೆ
೧೩. ಕೃಷ್ಣನ ಕೊನೆಯದಿನಗಳು
೧೪. ಶಬರರು ಹರಿಯ ಸತಿಯರನ್ನು ಕೊಂಡೊಯ್ದ ಕಥೆ
೧೫. ಬುದ್ಧನ ಜನನವೃತ್ತಾಂತ
೧೬. ಶತಧನುರ್ನೃಪತಿಯ ಕಥೆ
೧೭. ಸುಧನ್ವತಿಯಪತಿ ವಿಶ್ವರೂಪನ ಕಥೆ
೧೮. ಗಂಗಾಜನನದ ಕಥೆ
೧೯. ಉರುಲಿಂಗದ ಕಥೆ

೨೦. ಭಿಕ್ಷಾಟನ ಲೀಲೆ
೨೧. ದಕ್ಷಯಾಗದ ಕಥೆ
೨೨. ದಧೀಚಿಯು ಹರಿಚಕ್ರವನ್ನು ಮುರಿದ ಕಥೆ
೨೩. ಜರಾಸಂಧನ ವೃತ್ತಾಂತ
೨೪. ತಾರಕನ ಕಥೆ
೨೫. ಸೇತುಬಂಧದ ಕಥೆ
೨೬. ಶಿವನಿಟ್ಟಪುಲ್ಗೆ ಸುರಾಸುರರಳಿದ ಕಥೆ
೨೭. ಗಜಾಸುರನ ಚರ್ಮಧಾರಣದ ಕಥೆ
೨೮. ಮೋಹನಾಕಾರವನ್ನು ತಳೆದ ಮಾರಾರಿಯ ಕಥೆ
೨೯. ದುರ್ವಾಸಋಷಿಯು ಹರಿಗೆ ಶಾಪಕೊಟ್ಟ ಕಥೆ
೩೦. ದಧೀಚಿಯೊದೆದ ಕಥೆ
೩೧. ಉಪಮನ್ಯುವಿನಿಂದ ಕ್ಷೀರಾಬ್ಧಿಯನ್ನು ಪಡೆದ ಕಥೆ
೩೨. ಚತುರ್ಥಿಯ ಚಂದ್ರ
೩೩. ಅಂಬರೀಷನ ಶಾಪ
೩೪. ತ್ರಿಪುರದಹನ ಕಥೆ
೩೫. ಉತ್ತುಂಗಲಿಂಗದ ಕಥೆ
೩೬. ಹರಿ ಆಯುಧಪಡೆದ ಕಥೆ
೩೭. ಹರಿಯಚಕ್ರ ಬಯಲಾದ ಕಥೆ
೩೮. ಹರಿ ಪುತ್ರರನ್ನು ಪಡೆದ ಕಥೆ
೩೯. ಭೃಗುಮುನಿಯ ಶಾಪ
೪೦. ಅನಸೂಯೆ ಪಂಚಾಕ್ಷರ ಕಥೆ
೪೧. ಚೋರರಿಂದ ಮಡಿದವನು ಭಸ್ಮದಿಂದ ಪ್ರಾಣಪಡೆದ ಕಥೆ
೪೨. ಅರುಂಧತಿ ವಿಭೂತಿಯಿಂದ ಶಾಪವನ್ನು ಕಳೆದ ಕಥೆ
೪೩. ದುರ್ವಾಸರು ಅಹಲ್ಯೆಯನ್ನು ಭಸ್ಮದಿಂದ ಉದ್ಧರಿಸಿದ ಕಥೆ
೪೪. ವಿಷ್ಣು ಧವಲಾಂಗನಾದ ಕಥೆ
೪೫. ಚಂಡಾಲನು ರುದ್ರಾಕ್ಷಿಯ ಬಲದಿಂದ ಶಿವಪುರಕ್ಕೆ ಹೋದ ಕಥೆ
೪೬. ಬೇಡನ ನಾಯಿಯನ್ನು ಉದ್ಧರಿಸಿದ ಕಥೆ
೪೭. ಸಾನಂದ ಚರಿತೆ
೪೮. ವಿದಳನ ಕಥೆ
೪೯. ನರವರ್ಮಸತಿ ವಸುದೇವಿಯ ಕಥೆ
೫೦. ಚಿತ್ರರಥನ ಕಥೆ

೫೧. ಪೂರ್ಣಭದ್ರನಸುತ ಪಿಂಗಳನ ಕಥೆ
೫೨. ಘಂಟಾಕರ್ಣನ ಕಥೆ
೫೩. ಚೋರನು ಕುಬೇರನಾದ ಕಥೆ
೫೪. ಜೈನಿಷತವ್ಯನ ಕಥೆ
೫೫. ಫಣಿಪನು ಆದಿಶೇಷಪದವಿಯನ್ನು ಪಡೆದ ಕಥೆ
೫೬. ಶ್ವೇತನ ಕಥೆ
೫೭. ಮಾರ್ಕಂಡೇಯನ ಕಥೆ
೫೮. ಸುಕುಮಾರನ ಕಥೆ
೫೯. ಕೋಲಾಹಲನ ಕಥೆ
೬೦. ಶರಧಿಪತಿಗೋಲೆಯನು ಬರೆದ ಕಥೆ

ಇವೇ ಮೊದಲಾದ ಕಥೆಗಳನ್ನು ಕವಿ ವಿಷ್ಣು ಪಾರಮ್ಯವನ್ನು ಖಂಡಿಸಿ ಶಿವಪಾರಮ್ಯವನ್ನು ಪ್ರತಿಷ್ಠಾಪಿಸಲು ಉಲ್ಲೇಖಿಸಿದ್ದಾನೆ. ಎಲ್ಲ ಕಥೆಗಳ ಧ್ಯೇಯ ಒಂದೇ ಆದರೂ ವ್ಯಕ್ತಿ, ವಿಷಯ, ಸನ್ನಿವೇಶಗಳ ವೈವಿಧ್ಯದಿಂದ ಅವನ್ನು ಓದಿದರೆ ಬೇಸರಿಕೆ ಬರುವಂತಿಲ್ಲ. ಅವೆಲ್ಲ, ಪುರಾಣಗಳಿಂದ ಬಂದ ಕಥೆಗಳಾದುದರಿಂದ ಅಲ್ಲಿ ಮಾನವ ಅಂಶಕ್ಕಿಂತ ನಾ ಹೆಚ್ಚು ನೀ ಹೆಚ್ಚು ಎಂದು ಹೋರಾಡುವ ದೇವತೆಗಳ ಹೋರಾಟವೇ ಹೆಚ್ಚಾಗಿದೆ. ಈ ಕಥೆಗಳಲ್ಲಿ ವಿಶ್ವಸಮ್ಮತವಾಗುವ ಅಂಶಗಳು ಕಡಮೆಯೆಂದೇ ಹೇಳಬೇಕಾಗುತ್ತದೆ. ಅಲ್ಲಿ ಧರ್ಮಬೋಧೆಗಿಂತಲೂ ಮತದ ಹೋರಾಟ ಹೆಚ್ಚಿದೆ. ಆದರೂ ಅದರೊಳಗಿನ ಅನೇಕ ಕಥೆಗಳು ಶೈವಸಂಪ್ರದಾಯದಲ್ಲಿ ಬಹು ಪ್ರಚಾರದಲ್ಲಿವೆ. ಎಲ್ಲ ಜನಾಂಗದವರ ಒಪ್ಪಿಗೆ ಪಡೆಯಬಹುದಾದ ಕಥೆಗಳೂ ಕೆಲವಿವೆ. ಉದಾಹರಣೆಗಾಗಿ ಶ್ವೇತನ ಕಥೆ, ಮಾರ್ಕಂಡೇಯನ ಕಥೆ, ಸಾನಂದಚರಿತೆ, ಅನಸೂಯೆ-ಪಂಚಾಕ್ಷರರ ಕಥೆ, ಬೇಡನನಾಯಿ ಉದ್ಧಾರವಾದ ಕಥೆ ಮೊದಲಾದುವನ್ನು ಉಲ್ಲೇಖಿಸಬಹುದು. ಕೆಲವು ಕಥೆಗಳು ಸ್ವಾರಸ್ಯಪೂರ್ಣವಾಗಿವೆ. ಯಾದವರ ವಂಶ ಒನಕೆಯಿಂದ ಹಾಳಾದ ಕಥೆಯನ್ನು ಕವಿ ಹೃದಯಂಗಮವಾಗಿ ಬಣ್ಣಿಸಿದ್ದಾನೆ. ಗಂಗಾಜನನದ ಕಥೆಯಂತೂ ಅದ್ಭುತವಾಗಿದೆ.

ಇವೆಲ್ಲ ಕಥೆಗಳಿಂದ ವ್ಯಕ್ತವಾಗುವುದೆಂದರೆ :

೧. ಪದ್ಮಣಾಂಕನು ಬಹು ಶ್ರುತನು.
೨. ಕಥೆಯ ಕಡೆಗೆ ಆತನ ಒಲವು ವಿಶೇಷವಾಗಿದೆ.

೩. ಕಥೆ ಹೇಳುವ ರೀತಿ ಅವನಿಗೆ ಜನ್ಮಸಿದ್ಧವಾಗಿ ಬಂದಂತಿದೆ.

೪. ಕಥೆಯನ್ನು ಹಿಗ್ಗಿಸುವುದೆಲ್ಲಿ, ವಿವರಿಸುವುದೆಲ್ಲಿ ಎಂಬ ಜಾಣ್ಮೆ ಪದ್ಮಣಾಂಕನಿಗೆ ವಿಶೇಷವಾಗಿದೆ. ಒಂದು ಪದ್ಯದಲ್ಲಿ, ಪದ್ಯಾರ್ಧದಲ್ಲಿ ಮುಗಿಯುವ ಕಥೆಗಳೂ ಉಂಟು. ಪದ್ಯಪದ್ಯಗಳವರೆಗೆ ಓದುವ ಕಥೆಗಳೂ ಉಂಟು.

೫. ಕಥೆಸಣ್ಣದಿರಲಿ, ದೊಡ್ಡದಿರಲಿ, ಉದ್ದೇಶವನ್ನು ಸ್ಪಷ್ಟಮಾಡುವ ಶಕ್ತಿಯಿದೆ ಕವಿಗೆ.

೬. ಒಟ್ಟಿನಲ್ಲಿ ಕವಿಯ ಸಂಗ್ರಹ ಶಕ್ತಿ, ಕಥೆಯ ತಂತ್ರ, ಸ್ತೋತ್ರಾರ್ಹವಾಗಿವೆ.

೭. ಈ ಕಥೆಗಳನ್ನು ಮತೀಯ ಭಾವನೆಯಿಂದಲೇ ಆಯ್ದುಕೊಂಡಿರುವುದರಿಂದ ಅವು ಆ ಮತದವರಿಗೆ ಮಾತ್ರ ರುಚಿಸಬಲ್ಲವು. ಆದರೆ ಕವಿಯ ಶಕ್ತಿಯನ್ನೂ ಕಥನ ತಂತ್ರವನ್ನೂ ಎಲ್ಲರೂ ಮೆಚ್ಚಬಹುದಾಗಿದೆ.

ಪದ್ಮಣಾಂಕನು ಹಲವೆಡೆ ಮಾನವಹೃದಯವನ್ನು ಬಿತ್ತರಿಸುವ, ವಿಶ್ವಸಮ್ಮತವಾಗಬಹುದಾದ ಕಥೆಗಳನ್ನು ಹೇಳಿದ್ದಾನೆ.

೧. ಮಾದಾಂಬೆಯ ಕಥೆ

೨. ಬಡ ವಿಧವೆಯ ಕಥೆ

ಸಕಲೇಶಮಾದರಸರ ಪೂಜೆಗಾಗಿ ಒಬ್ಬ ಭಕ್ತನು ಮಾದಾಂಬೆಯನ್ನು ಒತ್ತೆಯಿಟ್ಟು ಹಣ ತರುವನು. ಒತ್ತೆಗೊಂಡವನು ಹಟ್ಟಳೆಯೆಳಿಸಿ ಮಾದಾಂಬೆಗೆ ತೊಂದರೆ ಕೊಡುವನು. ಮಾದರಸರು ಈ ದೃಶ್ಯವನ್ನು ಲಿಂಗದಲ್ಲಿ ಕಂಡು ಮನನೊಂದು ಮಾದಾಂಬೆಯನ್ನು ಒತ್ತೆಯವನಿಂದ ಬಿಡಿಸಿ ವೈರಾಗ್ಯಭಾವನೆಯನ್ನು ತಾಳಿ ಶ್ರೀಶೈಲದ ಕಡೆಗೆ ತೆರಳುವರು.

ಈ ಕಥೆ ಒಂದೆರಡು ಪದ್ಯಗಳಲ್ಲಿ ಮಾತ್ರ ನಿರೂಪಿತವಾಗಿದೆ.[೧] ಗುರುವಿನ ಹೃದಯದ ಕರುಣೆ, ಭಕ್ತನ ಭಕ್ತಿ ಎರಡೂ ಬಹಳ ಎತ್ತರದ ನಿಲವಿನಲ್ಲಿ ನಿಲ್ಲತಕ್ಕುವು. ಕವಿ ಅವನ್ನು ಮರೆತರೂ ಮರೆಯದಂತಹ ಕಲಾಶಕ್ತಿಯಿಂದ ನಿರೂಪಿಸಿದ್ದಾನೆ. ಇನ್ನಷ್ಟು ಏಕೆ ಈ ಕಥೆಯನ್ನು ವಿವರಿಸಿಲ್ಲ ಎನಿಸುತ್ತದೆ. ಕಥನಕಲೆಯ ಹಿರಿಮೆಯಡಗಿರುವುದೇ ಇಲ್ಲಿ.

---

೧. ಪ. ಪು. ಸಂ. ೨. ಪ. ೧೮, ೧೯.

ಬಡವಿಧವೆಯ ಕಥೆಯು ಪದ್ಮರಸರ ಹೃದಯದ ಔನ್ನತ್ಯವನ್ನು ಎತ್ತಿ ಹಿಡಿಯುತ್ತದೆ. ಒಬ್ಬ ಬಡವಿ ! ಪತಿಯನ್ನು ಕಳೆದುಕೊಂಡು ವಿಧವೆಯಾಗಿದ್ದಾಳೆ. ಆಕೆಗೆ ಉಳಿದ ಆಸ್ತಿಪಾಸ್ತಿಯೆಂದರೆ ಒಬ್ಬ ಮಗ. ಕಷ್ಟದಿಂದ ದುಡಿಯುವಳು ಮಗನನ್ನು ಸಾಕಿ ಸಲಹುವಳು.

ಆಕೆಗೆ ಜೀವನದಲ್ಲಿ ಒಂದು ಧ್ಯೇಯವಿದೆ. ಮಗನಿಗೆ ಮದುವೆಮಾಡಬೇಕು; ತನ್ನ ಬಳ್ಳಿ ಕುಡಿವರಿದು ಹಂದರವೇರಬೇಕು. ಎಂಬ ಆಶೆ ಆ ತಾಯಿಯ ಮನದಲ್ಲಿ ಬಲವಾಗಿದೆ. ಮದುವೆಗೆ ಧನಬೇಕಲ್ಲವೆ ? ಸರ್ವೇ ಗುಣಾಃ ಕಾಂಚನ ಮಾಶ್ರಯಂತಿ. ಅಂದಮೇಲೆ ಹಣವಿಲ್ಲದೆ ಮದುವೆಯೆಲ್ಲಿ ! ದುಡಿದು ದುಡಿದು ಹನ್ನೆರಡು ಹೊನ್ನು ಗಳಿಸುತ್ತಾಳೆ. ಅವನ್ನು ಒಂದು ಗಡಿಗೆಯಲ್ಲಿಟ್ಟು ಬಾಯಿ ಮುಚ್ಚಿರಲು ಇದ್ದಕಿದ್ದಂತೆಯೇ ಹಣ ಕಾಣದಾಗಿದೆ. ಬಡತಾಯಿ ಭೋರ್ಗರೆದು ಅಳುತ್ತಾಳೆ. ಪದ್ಮರಸರ ಹೃದಯ ಆ ಅಳುವನ್ನು ಕೇಳಿದೊಡನೆ ಕರಗಿ ನೀರಾಗುತ್ತದೆ. ಆ ತಾಯಿಯನ್ನು ಕರೆಸಿ ವಿಚಾರಿಸಲು, ಶಿವನು ಅಂದು ತನಗೆ ಪಡಿಹೊನ್ನು ಕೊಟ್ಟುದು ಆ ಬಡವೆಯ ಧನವೆಂದು ತಿಳಿದು ಬಂದಿತು. ಆಕೆಗೆ ಅವಳ ಧನವನ್ನು ಕೊಟ್ಟು ಸಂತೈಸಿದರು; ಶಿವನಮೇಲೆ ಸಿಟ್ಟಾದರು; ಈ ರೀತಿಯಾಗಿ ಬಂದ ಹಣ ಅಗ್ರಾಹ್ಯವೆಂದರು. ಶಿವನಾದರೇನು ? ಯಾರಾದರೇನು ಇದು ಖಂಡನೀಯವೆಂದರು. ಅಂದು ಮೊದಲ್ಗೊಂಡು ಪಡಿಹೊನ್ನು ಸ್ವೀಕರಿಸುವುದಿಲ್ಲವೆಂದು ನುಡಿದರು.

ಈ ಕಥೆ ಮಾನವ ಜೀವನದಿಂದ ಎತ್ತಿ ಇಟ್ಟಂತಿದೆ. ಬಡವೆಯ ಜೀವನದ ಚಿತ್ರ ಬಹು ಸೊಗಸಾಗಿದೆ. ನಮ್ಮ ಸಾಹಿತ್ಯದಲ್ಲಿಯೇ ಸಂಸ್ಮರಣೀಯವಾಗಿದೆ. ಒಂದು ಕಥೆ ಸಾಕು; ಪದ್ಮರಸರ ಹೃದಯದ ಘನತೆಯನ್ನು ವಿವರಿಸಲು. ಇಂತಹ ಕಥೆಗಳಿಂದ ಪದ್ಮರಾಜಪುರಾಣದ ಘನತೆ ಹಿರಿದಾಗಿದೆ.

ಹೀಗೆಯೇ ಪದ್ಮಣಾಂಕನು ಕೆಳಗೆ ಕಾಣಿಸಿದ ಕಥೆಗಳನ್ನು ಕಿರಿದರಲ್ಲಿಯೇ ಸ್ವಾರಸ್ಯಪೂರ್ಣವಾಗಿ ಹೇಳಿದ್ದಾನೆ.

೧. ಗೊಪೆಯ ಶಿವದೇವನ ಕಥೆ
೨. ಮಹಲಿಂಗ ರಾಮನ ಕಥೆ
೩. ಚಿಕ್ಕ ಮಾದಣ್ಣನ ಕಥೆ
೪. ಗಜೇಶ ಮಸಣಯ್ಯನ ಕಥೆ
೫. ರವಧ್ಯಾನಿ ಶಿವದೇವನ ಕಥೆ

೬. ಗುಡ್ಡವ್ವೆಯ ಕಥೆ
೭. ಗುಮ್ಮಟಯ್ಯಗಳ ಕಥೆ
೮. ಮಾದರ ದೂಡಿದೇವನ ಕಥೆ
೯. ಇಳಿಹಾಳ ಬೊಮ್ಮಿದೇವನ ಕಥೆ
೧೦. ಕಿನ್ನರಿ ಬ್ರಹ್ಮಯ್ಯಗಳ ಕಥೆ

ಮೂಲಕಥೆಯಂತೂ ತುಂಬಿಹರಿವ ತುಂಗಭದ್ರೆಯಂತೆ ಸಾಗಿದೆ. ಈ ಕಾವ್ಯದಲ್ಲಿ ಬಂದ ನೂರಾರು ಉಪಕಥೆಗಳು ಪ್ರವಾಹದ ಮೇಗಣ ತೆರೆಗಳಂತೆ, ಬಂದು ಮೂಲಕಥೆಗೆ ಮೆರುಗನ್ನಿತ್ತಿವೆ. ವರ್ಣನೆಗಳಿಂದಾಗಲಿ, ಉಪಕಥೆಗಳಿಂದಾಗಲಿ ಮೂಲಕಥೆಗೆ ಎಲ್ಲಿಯೂ ತಡೆಯುಂಟಾಗಿಲ್ಲ. ಕುಷ್ಠರೋಗಿಯಾಗಿದ್ದ ಶಿವಭಕ್ತನ ದೇಹವು ಸುವರ್ಣದಂತೆ ಹೊಳೆಯುವ ಹಾಗೆ ಮಾಡಿದ ಕಥೆ, ಕೆರೆಯ ಪವಾಡ, ತ್ರಿಭುವನತಾತನು ವಾದಕ್ಕೆ ಬರುವ ಸನ್ನಿವೇಶ, ಪದ್ಮರಸರೂ ಅವರ ಅನುಯಾಯಿಗಳೂ ವಾದಕ್ಕೆ ಹೊರಟ ಸನ್ನಿವೇಶ ಇವೇ ಮೊದಲಾದ ಕಡೆಗೆ ಪದ್ಮರಸರ ಕಥನಕಲೆ ವೈಭವಪೂರ್ಣವಾಗಿ ಪ್ರಕಟವಾಗಿದೆ.

ಪದ್ಮರಾಜಪುರಾಣವೊಂದು ಕಥಾಕುಸುಮವೃಕ್ಷ. ಪದ್ಮಣಾಂಕನ ಕಥನಕಲೆ ಶ್ಲಾಘನೀಯವಾಗಿದೆ.

ಪದ್ಮಣಾಂಕನ ಷಟ್ಪದಿ

ನಿರುಪಮ ಮೃದೂಕ್ತಿಯಿಂ ಪ್ರೌಢಿಯಿಂ ರೀತಿಯಿಂ
ವರಗಮಕದೆಸಕದಿಂದೊಳ್ಪಿಂ ಸಕಲ ಕಲಾ
ಸ್ಫುರಣದಿಂದೊಪ್ಪುವೀ ಕೃತಿಯುವತಿ ಕೋವಿದರನೇಂ
ಸೋಲಿಸದೆ ಬಿಡುವಳೇ[1]

ಪದ್ಮಣಾಂಕನು ಈ ಪದ್ಯಾರ್ಧದಲ್ಲಿ ತನ್ನ ಶೈಲಿ—ಷಟ್ಪದಿ—ಯ ಕೆಲವು ಲಕ್ಷಣಗಳನ್ನು ಹೇಳಿರುವನು. ಮೃದೂಕ್ತಿ, ಪ್ರೌಢಿಮೆ, ಗಮಕದ ಎಸಕ—ಇವು ಆತನ ಷಟ್ಪದಿಯ ಸಹಜ ಲಕ್ಷಣಗಳೆಂಬುದರಲ್ಲಿ ಆವ ಸಂದೇಹವೂ ಇಲ್ಲ. ಕವಿ ಪದ್ಮಣಾಂಕನ ಹೃದಯದಲ್ಲಿ ಕುಳಿತ ವಿಮರ್ಶನ ಶಕ್ತಿ ತನ್ನ ತಾನರಿದಿದೆ.

ಷಟ್ಪದಿಯ ರಹಸ್ಯವಡಗಿರುವುದು ಸಂಗೀತದಲ್ಲಿ; ತಾಳದಲ್ಲಿ. ಷಟ್ಪದಿಯ 'ಲಯ'ಗಳನ್ನು ಪರಿಶೀಲಿಸಿದರೆ ಈ ಮಾತಿನ ಅರ್ಥವಾಗುತ್ತದೆ.

ಮಂದರಧರಗಣಂ
ಬಂದಿರ್ಪ್ಪುರಂತ್ಯದೊಳ್
ಕುಂದದೆನೆಲಸುಗೆ ಮದನಹರಂ
ಇಂದುನಿಭಾನನೆ
ಮುಂದಣ ತೆಱನೀ
ಯಂದಮೆಯಾಗಿರೆ ಷಟ್ಪದಿಕೇಳ್

ಎಂಬ ನಾಗವರ್ಮನ ಪದ್ಯ ಶರಷಟ್ಪದಿಯ ಲಕ್ಷಣಗಳನ್ನು ಹೇಳುವುದಲ್ಲದೆ ಷಟ್ಪದಿಯ ತತ್ತ್ವವನ್ನೇ ವಿವರಿಸುತ್ತದೆ. ಈ ತತ್ತ್ವವನ್ನು ಆಧರಿಸಿ ತಾಳಗಳ ದಾರಿಯನ್ನು ಹಿಡಿದು ವಿವಿಧ ಷಟ್ಪದಿಗಳು ಹುಟ್ಟಿದಂತೆ ತೋರುತ್ತದೆ. ಅಂತೆಯೇ ಶರ, ಕುಸುಮ. ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಿಕ—ಈ ಷಟ್ಪದಿಗಳಲ್ಲಿ ತೋರುವ ೪×೪; ೫×೫; ೩×೩×೩×೩; ೩×೪×೩×೪×೩×

---

೧. ಪ. ಪು. ಸಂ. ೧. ಪ. ೪೦.

ಳ×ಳ×ಳ×ಳ; ೫×೫×೫×೫ — ಈ ಗಣಗಳ ವಿನ್ಯಾಸವನ್ನು ತಾಳ ಗಳಲ್ಲಿಯೂ ಕಾಣುತ್ತೇವೆ. ಳ×೫×ಳ×೫ ಈ ಮಾತ್ರೆಗಳುಳ್ಳ ಸುಪ್ರಸಿದ್ಧವಾದ ತಾಳ ಸಂಗೀತಶಾಸ್ತ್ರದಲ್ಲಿ ಕಂಡುಬರುವುದಿಲ್ಲ. ತದನುಗುಣವಾಗಿ ಈ ಗಣಗಳ ವಿನ್ಯಾಸವುಳ್ಳ ಷಟ್ಪದಿಯೂ ನಮ್ಮಲ್ಲಿ ಕಂಡುಬರುವುದಿಲ್ಲ ಕೆಲವು ವರ್ಷಗಳ ಹಿಂದೆ ಇಂತಹ ಕೆಲವು ಷಟ್ಪದಿಗಳನ್ನು ರಚಿಸಲಾಗಿದ್ದಿತು. ಆದರೆ ಅವು ನಿಲ್ಲಲಿಲ್ಲ; ನಿಲ್ಲುವಂತಿಲ್ಲ. ಷಟ್ಪದಿಯ ಮೂಲತತ್ತ್ವವೆಂದರೆ ಅದನ್ನು ತಾಲಬದ್ಧವಾಗಿ ಹಾಡ ಲಿಕ್ಕೆ ಬರುವುದು. ತಾಲಬದ್ಧವಾಗಿ ಹಾಡಲಿಕ್ಕೆ ಬರುವ ಈ ಷಟ್ಪದಿ ಮಾತ್ರೆಗಳ ನಿಯಮವನ್ನು ಅನುಸರಿಸಿದ್ದರೂ ಅದರ ತಳಹದಿಯಲ್ಲಿ ಅಂಶಗಣಗಳು ಹುದುಗಿ ಕುಳಿತಿರುವುದು ಒಂದು ವೈಶಿಷ್ಟ್ಯ. ಷಟ್ಪದಿಯ ಲಯದಲ್ಲಿ ಸಿದ್ಧಿವಡೆದ ಕವಿ ಅಂಶ ಗಣ ಮತ್ತು ಮಾತ್ರಾಗಣಗಳನ್ನು ಸಮನ್ವಯಗೊಳಿಸುವ ಕಲೆಯನ್ನರಿತಿರಬೇಕಾ ಗುತ್ತದೆ. ಈ ಲಯಕ್ಕನುಗುಣವಾದ ಶಬ್ದಗಳ ಹೊಂದಿಕೆಯಿರಬೇಕಾಗುತ್ತದೆ. ಅಂದರೆ ಷಟ್ಪದಿಯ ಶೈಲಿಯಲ್ಲಿ ಕಾವ್ಯ ಬರೆದ ಕವಿಯ ಶಬ್ದಗಳು ಅಂಶಗಣ ಮತ್ತು ಮಾತ್ರಾಗಣಗಳ ತಾಳಕ್ಕೆ ಕುಣಿಯಬೇಕಾಗುತ್ತದೆ. ಲಯಕ್ಕಾಗಿ ಶಬ್ದಗಳನ್ನು ಸಿಕ್ಕಂತೆ ಒಡೆಯುವುದೂ ಶಬ್ದಗಳಲ್ಲಿ ಅಂಶಗಣ ಮಾತ್ರಾಗಣಗಳನ್ನು ಸಮನ್ವಯಿಸಿ ಕೊಳ್ಳುವ ಶಕ್ತಿಯಿಲ್ಲದಿರುವುದೂ ಷಟ್ಪದಿಯ ಗತಿಗೆ ಸ್ಖಾಲಿತ್ಯವನ್ನು ತರುತ್ತದೆ. ಇವು ಮುಪ್ಪುರಿವಡೆದಲ್ಲಿ ಷಟ್ಪದಿಗೆ ಕಳೆ ಬರುತ್ತದೆ. ಪ್ರಾಸಾದಿಕ ಕವಿಗಳ ಷಟ್ಪದಿ ಯಲ್ಲಿ ಈ ತ್ರಿಕೂಟವನ್ನು ಕಾಣುತ್ತೇವೆ.

ಈ ತತ್ತ್ವಗಳನ್ವಯ ಪರಿಶೀಲಿಸಿದರೆ ಪದ್ಮಣಾಂಕನ ಷಟ್ಪದಿಗೆ ಕನ್ನಡ ಷಟ್ಪ ದಿಯ ಇತಿಹಾಸದಲ್ಲಿ ಒಂದು ಉನ್ನತವಾದ ಸ್ಥಾನವನ್ನು ಕೊಡಬೇಕಾಗುತ್ತದೆ. ಪದ್ಮಣಾಂಕನು ಪ್ರಾಸಾದಿಕಕವಿ. ಷಟ್ಪದಿಯ ಲಯದಲ್ಲಿ ಸಿದ್ಧಿವಡೆದ ಕವಿ. ಆತನ ಯಾವ ಷಟ್ಪದಿಯನ್ನು ತೆಗೆದುಕೊಂಡರೂ ಸುಂದರವಾದ ಗತಿಯನ್ನು ಕಾಣುತ್ತೇವೆ. ಶಬ್ದಗಳು ತಾಲವನ್ನನುಸರಿಸಿ ಲೀಲಾಜಾಲವಾಗಿ ಬರುತ್ತವೆ.

ನಡೆವಲ್ಲಿ ನುಡಿವಲ್ಲಿ ಉಡುವಲ್ಲಿ ಉಣ್ಬಲ್ಲಿ
ಪೊಡರ್ವ ನಿದ್ರಾವಸ್ಥೆಯಲ್ಲಿ ದರ್ಶನದಲ್ಲಿ
ಪಿಡಿವಲ್ಲಿ ಬಿಡುವಲ್ಲಿ ಕೊಡುವಲ್ಲಿ ಕೊಳ್ವಲ್ಲಿ ಯಡಿಸಿದುದ್ಯೋಗದಲ್ಲಿ
ತೊಡುವಲ್ಲಿ ಪೊದೆವಲ್ಲಿ ಸಡಗರದ ಸಮಯದ
ಲ್ಲೊಡನೆ ಕುಳ್ಳಿರ್ಪಲ್ಲಿ ಯೇಳ್ವಲ್ಲುಳಿದ ಕೃತ್ಯ
ದೆಡೆಯಲ್ಲಿ ಮೃಡಮಂತ್ರವವನನಿಡಿದಡಿಸಿ ಬಿಡದಿರ್ಪುದೇಂ
ವಶಮಾದುದೋ[1]

---

೧. ಪ. ಪು. ಸಂ. ೨. ಪ. ೭೭.

ಭಕ್ತಾಂಗಸ್ಥಲಗಳು ಲಿಂಗಸ್ಥಲಗಳೊಡನೆ ಓರಂತೆ ಒಂದಿ ಮುಕ್ತಿಯನ್ನು ಪಡೆವಂತೆ ಕವಿ ತನ್ನ ಕಾವ್ಯದಲ್ಲಿ ಬಳಸುವ ಶಬ್ದಗಳು ಲಯದೊಡನೆ ಹೊಂದುಗೂಡಿ, ಒಂದುಗೂಡಿ ಮೋಕ್ಷವನ್ನು ಪಡೆಯಬೇಕು. ಈ ದೃಷ್ಟಿಯಿಂದ ಮೇಗಣಪದ್ಯದಲ್ಲಿ ಲಯ ಮತ್ತು ಶಬ್ದಗಳು ತಾದಾತ್ಮ್ಯಹೊಂದಿದಂತಿವೆ.

ಶಿವನಿಷ್ಠೆ ಶಿವಪೂಜನಂ ಶಿವೈಕ್ಯರ ಸೇವೆ
ಶಿವವೃತ್ತಿ ಶಿವವೀಕ್ಷಣಂ ಶಿವಕಥಾಪ್ರಸಂಗ ವಿನೋದಗೋಷ್ಠಿ

ಹೀಗೆ ಎಲ್ಲಿ ನೋಡಿದಲ್ಲಿ ನಿರರ್ಗಳವಾದ ಗತಿಯನ್ನು ಕಾಣುತ್ತೇವೆ. ಮಾತ್ರಾಗಣ ಅಂಶಗಣವನ್ನು ಮೇಳವಿಸಿಕೊಂಡು ಅನುಗುಣವಾದ ಶಬ್ದಗಳಿಂದ ಮುಂದೆ ಸಾಗಿರುವುದನ್ನು ಪದ್ಮಣಾಂಕನ ಷಟ್ಪದಿಯಲ್ಲಿ ಕಾಣುತ್ತೇವೆ. ಸ್ಖಾಲಿತ್ಯವಿಲ್ಲದ ಗತಿ ಪದ್ಮಣಾಂಕನ ಷಟ್ಪದಿಗಿದೆ.

ಕಾಮಿ ನಿಷ್ಕಾಮಿ ದುರ್ವ್ಯಸನಿ ಸದ್ವ್ಯಸನಿ ದಲ್
ಸೀಮಂ ವಿಗತಸೀಮನುರುರತಂ ವಿರತನೆಂ
ಬೀ ಮಾತಿನವನೆ ಶಿವಮುಖಕಿತ್ತು ಭೋಗಿಸಲ್ ಬಲ್ಲಸುಖಿ
ಗಿರಿಜಾವರಂ

ಒಟ್ಟಿನಲ್ಲಿ ಪದ್ಮಣಾಂಕನು ಷಟ್ಪದಿಯ ಲಯದಲ್ಲಿ ಸಿದ್ಧಿವಡೆದ ಕವಿಯೆಂದು ನಿಸ್ಸಂದೇಹವಾಗಿ ಹೇಳಬಹುದು.

ಷಟ್ಪದಿಯಲ್ಲಿ ಒಮ್ಮೆ ದಾರಿ ಸುಗಮವಾದ ಮೇಲೆ ಸತತಾಭ್ಯಾಸದ ಬಲದಿಂದ ಕೆಲಮಟ್ಟಿಗೆ ಇದನ್ನು ಸಾಧಿಸಲು ಪ್ರಯತ್ನಮಾಡಬಹುದು. ಆದರೆ ರಾಘವಾಂಕ ಪದ್ಮಣಾಂಕರ ಮಾತು ಹೀಗಲ್ಲ. ರಾಘವಾಂಕನು ಷಟ್ಪದಿಯ ಮಾರ್ಗದ ಸಂಸ್ಥಾಪಕನೆನಿಸಿ ಸುಲಲಿತವಾದ ಗಂಭೀರವಾದ ವಾರ್ಧಿಕಷಟ್ಪದಿಯಲ್ಲಿ ಕೆಲವು ಕಾವ್ಯಗಳನ್ನು ರಚಿಸಿದನು. ಪದ್ಮಣಾಂಕನಲ್ಲಿ ವಾರ್ಧಿಕಷಟ್ಪದಿಗೆ ಇನ್ನೂ ಹೆಚ್ಚಿನಕಳೆ ಬರುತ್ತದೆ. ಆ ಲಯ, ಲಾಲಿತ್ಯ, ಆ ಮಾಧುರ್ಯ, ಆ ಪ್ರೌಢಿಮೆ ಆ ಅರ್ಥವ್ಯಕ್ತಿತ್ವ ಒಟ್ಟುಗೂಡಿ ಅತ್ಯಂತ ಸುಸಂಸ್ಕೃತವಾದ, ಪ್ರೌಢಶೈಲಿಯನ್ನು ನಿರ್ಮಿಸಿವೆ. ಕನ್ನಡದಲ್ಲಿ ಷಟ್ಪದಿ ಎರಡು ಹಾದಿಯಿಂದ ನಡೆದಿದೆ. ಒಂದು ಗಂಭೀರವಾದ, ಸುಸಂಸ್ಕೃತವಾದ, ಪ್ರೌಢಶೈಲಿ-ವಾರ್ದಕದ ಮಾರ್ಗವಾಗಿ ನಡೆದುದು-; ಇನ್ನೊಂದು ದೇಸಿನಿಷ್ಠವಾದ ಭಾಮಿನಿಯ ಶೈಲಿ. ರಾಘವಾಂಕನೊಬ್ಬನು ಇವೆರಡೂ ಮಾರ್ಗಗಳನ್ನು ಸಮನ್ವಯಮಾಡಿಕೊಂಡ ಮಹಾಕವಿ

ಅವನನ್ನು ಬಿಟ್ಟರೆ ಸುಸಂಸ್ಕೃತವಾದ ಪ್ರೌಢಷಟ್ಪದಿಯ ಶೈಲಿಗೆ ಪದ್ಮಣಾಂಕನೇ ಮೊದಲಿಗನೆನ್ನಬೇಕು:

ಮೃದೂಕ್ತಿ ಪದ್ಮಣಾಂಕನ ಷಟ್ಪದಿಯ ಮುಖ್ಯ ಗುಣವೆಂದು ಹಿಂದೆ ಹೇಳಲಾಗಿದೆ. ಪದ್ಮರಾಜಪುರಾಣವು ಕಾಳಗದ ಕಥೆಯಲ್ಲ; ವಿಷಯಗಳೇಳಿಗೆಯ ನಿಧಿಯಲ್ಲ. ಶಾಂತಿಯೇ ಸಾಕಾರವಾದಂತಿದ್ದ ಕೆರೆಯ ಪದ್ಮರಸರ ಜೀವನವನ್ನು ಚಿತ್ರಿಸುವ ಶಾಂತಿರಸಪ್ರಧಾನವಾದ ಕಾವ್ಯವಿದು. ಭಕ್ತಿರಸವೂ ಇಲ್ಲಿ ತುಂಬಿ ತುಳುಕುತ್ತದೆ. ವನವಿಹಾರ, ಅರವಟ್ಟಿಗೆ, ವೇಶ್ಯಾವಾಟಗಳನ್ನು ವಿಶದವಾಗಿ ವರ್ಣಿಸುವಲ್ಲಿ ಶೃಂಗಾರರಸವು ಹೊನಲಾಗಿ ಹರಿದಿದೆ. ಅಂತೂ ಪದ್ಮರಾಜ ಪುರಾಣದಲ್ಲಿ ಖಡ್ಗಗಳ ಖಾಡಾಖಾಡಿಯಿಲ್ಲ. ಭಕ್ತಿ, ಶೃಂಗಾರ, ಶಾಂತಿರಸ ಪ್ರಧಾನವಾದ ಕಾವ್ಯದಲ್ಲಿ ಕೋಮಲವಾದ ಭಾವಗಳಿರುವುದು ಸಹಜವಾಗಿದೆ. ಪದ್ಮಣಾಂಕನು ಕೋಮಲಪ್ರಕೃತಿಯ ಕವಿ. ಆತನ ಕೋಮಲ ಪ್ರಕೃತಿಗನು ಗುಣವಾಗಿ ಕೋಮಲಭಾವಗಳೂ, ಕೋಮಲಭಾವಕ್ಕೆ ಹೊಂದಿಕೆಯಾಗುವ ಕೋಮಲಶಬ್ದಗಳೂ ಈ ಕಾವ್ಯದಲ್ಲಿ ಅತಿ ಸಹಜವಾಗಿ ಹೊರಹೊಮ್ಮಿವೆ. ಆದುದರಿಂದಲೇ ಮೃದೂಕ್ತಿ ಪದ್ಮಣಾಂಕನ ಸಹಜಗುಣವೆಂದು ಹೇಳಿದುದು.

ಕೇಳ್ವವರ ಕರ್ಣಾಭರಣವಮಲರಸಜಲದೊ
ಳಾಳ್ವವರ ಕಾಯಸಂಸಿದ್ಧಿಯನುಭವಸುಖದೆ
ಬಾಳ್ವವರ ಭಾಗ್ಯದೇವತೆ ಕಲಾವಿದರ ಚಿಂತಾರತ್ನವಮುರ್ದಸೊಗಸಂ
ತಳ್ವದೊರೆವವರ ಜಿಹ್ವಾಮೃತಂ ಮನಮೊಲ್ದು
ತಾಳ್ವವರ ಹೃದಯಕಮಲಾನಂದವೆನಲಿದಂ
ಪೇಳ್ವೆನಾಲಿಪುದೆಲ್ಲ ಶಿವಭಕ್ತರೇಕೆಂದೊಡಾಂ ನಿಮ್ಮ ಭೃತ್ಯನದಱಿಂ[೧]

ಕವಿಯೇ ಹೇಳುವಂತೆ ಈ ಕಾವ್ಯ ಕೇಳ್ವವರ ಕರ್ಣಾಭರಣವಾಗಿದೆ. ಇದೇ ಪದ್ಯವನ್ನೇ ಚಿತ್ತಗೊಟ್ಟು ಲಾಲಿಸಿದರೆ ಇಲ್ಲಿರುವ ಮೃದುಮಧುರವಾದ ಶಬ್ದಗಳು ಲಾಲಿತ್ಯವನ್ನು ಹೇಗೆ ಉಂಟುಮಾಡಿವೆಯೆಂಬುದರ ಅರ್ಥವಾಗುತ್ತದೆ.

ಪಲವೇಂ ಸಕಲಜನಾನಂದನಂ ನಂದನಂ
ಜಲಜಸೌಗಂಧಿಕಕುಮುದಸಂಕುಳಂ ಕೊಳಂ
ವಿಲಸಿತ ಚರದ್ಯೋಗಿಪಾವನಂ ವನವಂಚೆವಿಂಡುಗಳ ಬಿನದಂ ನದಂ

---

೧. ಪ. ಪು. ಸಂ. ೧. ಪ. ೪೪.

ಸಲೆ ಸಿರಿಯ ಹೊಯ್ಕಯ್ವಲಂ ಕೆಯ್ವೊಲಂ ರತ್ನ
ಕಲಿತ ಲುಲಿತಸಗೋಪುರಂ ಪುರಮನಾಕುಲೋ
ಜ್ವಲಭಾಗ್ಯಸಂಗ್ರಹಂ ಗೃಹಮಖಿಲ ಸುಖಭಾಜನಂ ಜನಂ
ತದ್ದೇಶದ[1]

ಕವಿಗೆ ಅನುನಾಸಿಕಗಳ, ಯಮಕಾದಿ ಅಲಂಕಾರಗಳ ಎಲ್ಲಕ್ಕೂ ಮೇಲಾಗಿ ಮೃದುಪದಗಳ ಮಹತಿ ಸ್ಪಷ್ಟವಾಗಿ ಗೊತ್ತಿದೆ. 'ಸಕಲಾಜನಾನಂದನಂ ನಂದನಂ' 'ಕುಮುದ ಸಂಕುಳಂ ಕೊಳಂ' ಯೋಗಿಪಾವನಂ ವನಂ, ಅಂಚೆವಿಂಡುಗಳ ಬಿನದಂ ನದಂ, ಇವೇ ಮೊದಲಾದ ಪ್ರಯೋಗಗಳಲ್ಲಿ ಕಾಣುವ ಅರ್ಥಸೌಂದರ್ಯ, ಶಬ್ದಸೌಂದರ್ಯಗಳ ಸವಿಯನ್ನು ಎಷ್ಟು ಸವಿದರೂ ಕಡಮೆಯೇ, ಪದ್ಮಣಾಂಕನಿಗೆ ಈ ರೀತಿಯ ಪದಲಾಲಿತ್ಯ ಬಲು ಸಹಜವಾಗಿದೆ.

ಶಾಂತಿಯೇ ಸಾಕಾರಮಾದುದೋ ಶೈವತೇ
ಜಂ ತಾನೆ ನಡೆಗಲ್ತುದೋ ಶಿವಶಿವಾ ಪೊಗಳ್ವೆ
ನೆಂತೋ ಮೂಲ ಪ್ರಣವಮೇ ಸೊಗಸುವಾತನಾಡಲ್ತೊಡಗಿತೋ
ರುದ್ರನ
ಅಂತಃಕರಣ ಶಕ್ತಿ ಮೆಯ್ವೆತ್ತು ಬಹುಶಾಸ್ತ್ರ
ಮಂ ತಿಳಿಯಲುದ್ಯೋಗಿಸಿತೊ ಶರಣರಾನಂದ
ಸಂತತಿಯ ಬಾಳ್ಮೊದಲೊ ಯೆನಿಸಿ ಸುಕುಮಾರಪದ್ಮರಸಾಂಕ
ನೊಪ್ಪುತಿರ್ದಂ[2]

ಶಾಂತಿಯೇ ಸಾಕಾರವಾದಂತಿರ್ದ ಕುಮಾರಪದ್ಮರಸರನ್ನು ಬಣ್ಣಿಸುವ ಈ ಪದ್ಯದಲ್ಲಿ ಶಕಾರ ಸಕಾರಗಳ ಪುನರಾವೃತ್ತಿ ಎಷ್ಟು ಮೃದುವಾಗಿ, ಮಧುರವಾಗಿ, ಲಲಿತವಾಗಿ ಕಿವಿಗೆ ಕೇಳುತ್ತಿದೆಯೆಂಬುದನ್ನು ನಾವು ಗಮನಿಸಬೇಕು. ಕೋಮಲವಾದ ಭಾವಕ್ಕೆ ತಕ್ಕ ವರ್ಣಗಳು ಬರುತ್ತಿರುವುದು ಈ ಕವಿಗೆ ತೀರ ಸಹಜವಾಗಿದೆ. ಇಲ್ಲಿರುವ ಶಕಾರ, ಸಕಾರಗಳ ಪುನರಾವೃತ್ತಿ ಸಹಜವಾಗಿ ಬಂದುದು; ಕೃತ್ರಿಮವಾಗಿ ತಂದುದಲ್ಲ.

---

೧. ಪ. ಪು. ಸಂ. ೩. ಪ. ೧೪.

೨. ಪ. ಪು. ಸಂ. ೪. ಪ. ೩೬.

ಸಿಂಗರದ ಸೀಮೆಗೆಳೆವೆಣ್ಗಳರಸಿಗೆ ಮೋಹ
ನಾಂಗಿಗೀ ಸಿಂಗರದ ಹಂಗುಂಟೆ ಮಂಗಲದ
ಸಾಂಗಕ್ಕೆ ಸಿಂಗರಿಪೆವೆನುತೆ[೧] ......

ಇಲ್ಲಿಯೂ ಮೃದು ಮಧುರವಾದ ಶಬ್ದಗಳು ಹೇಗೆ ನಾ ಮುಂದೆ ನೀ ಮುಂದೆ ಎಂದು ಬರುತ್ತಿವೆಯೆಂಬುದನ್ನು ಗಮನಿಸಬೇಕು. ಸಕಾರ, ಅನುನಾಸಿಕಗಳಿಂದ ಕೂಡಿದ ಶಬ್ದಗಳು ಮತ್ತೆ ಮತ್ತೆ ಬಂದು ಕಾವ್ಯಕ್ಕೆ ಇಂಪನ್ನು ನೀಡಿವೆ.

ಹೀಗೆ ಮಾರ್ದವ, ಮಾಧುರ್ಯ ಲಾಲಿತ್ಯಗಳು ಪದ್ಮಣಾಂಕನ ಶೈಲಿಯಲ್ಲಿ ವಿವಿಧಮುಖವಾಗಿ ಮೈವೆತ್ತಿವೆ.

ಗಮಕದೆಸಕ ಪದ್ಮಣಾಂಕನ ಷಟ್ಪದಿಯ ಇನ್ನೊಂದು ಮುಖ್ಯಗುಣ. ಷಟ್ಪದಿಯ ರಹಸ್ಯವನ್ನು ಅರಿತ ಕವಿಯಾತನು; ಆ ಲಯದಲ್ಲಿ ಸಿದ್ಧಿಯನ್ನೂ ಪಡೆದಿರುವನು. ಮೇಲಾಗಿ ಆತನು ಗಾನಲೋಲನು. ವರ್ಣಗಳಲ್ಲಿ, ಶಬ್ದಗಳಲ್ಲಿ ಹುದುಗಿರುವ ನಾದಮಾಧುರ್ಯದ ಕಡೆಗೆ ಕವಿಯ ಕಿವಿ ಸದಾ ತೆರೆದಿರುತ್ತದೆ. ಆದುದರಿಂದ ಆತನ ಷಟ್ಪದಿಗೆ ಗಮಕಗುಣ ಬಹು ಸಹಜವಾಗಿ ಪ್ರಾಪ್ತವಾಗಿದೆ.

ಪೊಂಗುತುಂ ಪೊರೆಯೇಱುತುಂ ಕರಗುತುಂ ಕೊರಗು
ತುಂ ಗಾಡಿಯಿಂದುರ್ಬುತುಂ ಕೊರ್ಬುತುಂ ಪರ್ಬು
ತುಂ ಗಮಕವಮರೆ ಕುಕಿಲಿರಿವುತುಂ ಕೂಗುತುಂ ತೂಗುತುಂ
ತೊನೆದಾಡುತುಂ
ಸಿಂಗರದಿನುಲಿವುತುಂ ಕೆಲೆಯುತುಂ ಮಲೆಯುತುಂ
ಮಂಗಲಾಕಾರನಂ ಮಿಗೆ ನೋಡಿ ನೋಡಿ ಪೆಱ
ಪಿಂಗದಾನಂದದಿಂ ಬೆಚ್ಚಂತಿರೊಚ್ಚತಂ ಬಾಗಿ ನಲಿ ನಲಿ ದಾಡುತೇ[೨]

ಗಮಕವಮರುವಂತೆ ತೂಗುತ್ತ, ತೊನೆಯುತ್ತ ಪದ್ಮರಸರು ನಲಿನಲಿದು ಹಾಡಿದ ಪದ್ಯದಲ್ಲಿ ನಿಜವಾಗಿಯೂ ಗಮಕದೆಸಕ ಕಂಗೊಳಿಸುತ್ತದೆ. ಲಯಬದ್ಧವಾಗಿ ಹಾಡಿದರೆ ಅದು ಸಹಜವಾಗಿಯೇ ನಮ್ಮ ಅನುಭವಕ್ಕೆ ಬರುತ್ತದೆ.

---

೧. ಪ. ಪು. ಸಂ. ೩. ಪ. ೪೨. ೨. ಪ. ಪು. ಸಂ. ೭. ಪ. ೩೭.

ಎನ್ನ ಭವತಿಮಿರಭಾನುವೆ ಕಾಮಧೇನುವೇ
ಎನ್ನನಾಳ್ದೊಂಡ ಗುರುವೇ ಶರಣಸುರತರುವೆ
ಎನ್ನ ಕಾರುಣ್ಯರಸವರ್ಷವೇ ದಿವ್ಯಪರುಷವೆಯೆನ್ನನಿಧಿಯೆ
ಸುಧೆಯೇ
ಎನ್ನ ಚಿತ್ತಿನ ತಿರುಳೆಯೆನ್ನಪುಣ್ಯದ ಪುರುಳೆ
ಎನ್ನ ಮುಕ್ತಿಯ ನಿಲವೆಯೆನ್ನ ಭಕ್ತಿಯ ಬಲವೆ
ಎನ್ನ ನನ್ನಿಯೆಯೆನ್ನಚೆನ್ನಿಗನೆಯೆನ್ನಗತಿಯೇ ಮತಿಯೆ ಧೃತಿಯೆ
ಪತಿಯೇ

ಪದ್ಮರಸರು ನಿರ್ಭರವಾದ ಭಕ್ತಿರಸದಲ್ಲಿ ಮುಳುಗಿದ್ದಾರೆ. ಭಾವಪರವಶತೆಯಲ್ಲಿ ಹಾಡುವಾಗ ಪದಗಳು ಕುಣಿಯುತ್ತ ಬರುತ್ತಿರುವುದಿಲ್ಲವೇ ?

ಅರ್ಥವ್ಯಕ್ತಿತ್ವ ಪದ್ಮಣಾಂಕನ ಶೈಲಿಯ ಮುಖ್ಯಗುಣ. ಮೃದುಮಧುರವಾದ ಸರಸಸುಂದರವಾದ ಆತನ ಪದ್ಯಗಳನ್ನು ಹಾಡಿದರೆ ಅಲ್ಲಿರುವ ಗಮಕದ ಗುಣಕ್ಕೆ ಎಲ್ಲರೂ ತಲೆದೂಗುತ್ತಾರೆ. ತತ್‌ಕ್ಷಣದಲ್ಲಿಯೇ ಅರ್ಥಗಮ್ಯವಾಗಿ ಆನಂದತುಂದಿಲರಾಗುತ್ತಾರೆ. ಈ ಕಾರಣದ ಮೂಲಕವೇ ಮುಂದಿನ ಅನೇಕ ಕವಿಗಳಿಗೆ ಪದ್ಮಣಾಂಕನ ಷಟ್ಪದಿ ಮಾದರಿಯಾಗಿದೆ.

ಪದ್ಮಣಾಂಕನ ಬಂಧ ಬಿಗುವಾಗಿದೆ; ಅಂತೆ ಆತನ ಷಟ್ಪದಿ ಪ್ರೌಢವಾಗಿದೆ. ಶಾಸ್ತ್ರಕೋವಿದನೂ ಉಭಯಭಾಷಾವಿಶಾರದನೂ ಆದ ಪದ್ಮಣಾಂಕನ ಷಟ್ಪದಿ ಪ್ರೌಢವಾಗಿರುವುದು ತೀರ ಸಹಜ. ಏಕೆಂದರೆ ಶಾಸ್ತ್ರಾಧ್ಯಯನದಿಂದ ಬಿಗುವಿನ ಶೈಲಿ ಸಹಜವಾಗಿಯೇ ಅಳವಡುತ್ತದೆ. ಅಲ್ಲದೆ ಪದ್ಮಣಾಂಕನು ಗಂಭೀರ ಪ್ರಕೃತಿಯ ಕವಿಯು. ಆದುದರಿಂದ ಆತನ ಕಾವ್ಯ ಗಾಂಭೀರ್ಯದಿಂದ ತುಂಬಿ ತುಳುಕುತ್ತದೆ. ಆದರೆ, ಆತನ ಪ್ರೌಢಿಮೆ, ಗಾಂಭೀರ್ಯ ಬಿಗುವಿನ ಶೈಲಿಗಳಿಗೆ ಒಂದು ವೈಶಿಷ್ಟ್ಯವಿದೆ. ಅರ್ಥವ್ಯಕ್ತಿತ್ವ ಯಾವಾಗಲೂ ಆತನ ಷಟ್ಪದಿಯಲ್ಲಿ ಒಡೆದು ಕಾಣುವ ಗುಣವಾಗಿದೆ. ಹಿಂದಿನ ಚಂಪೂಶೈಲಿ ಸಾಕಷ್ಟು ಶಿಥಿಲವಾಗಿದೆ. ಆದರೆ ಕನ್ನಡ ಪದಗಳೂ ದೇಸಿಯ ಪ್ರಯೋಗಗಳೂ ನಡುಗನ್ನಡದ ಪ್ರತ್ಯಯಗಳೂ ಉಪಯೋಗವಾದುದರಿಂದ ಅದಕ್ಕೆ ಸರಳತೆ ಪ್ರಾಪ್ತವಾಗಿದೆ. ಕೆಳಗಿನ ಪದ್ಯದಲ್ಲಿ ಬಿಗುವಿನ ಬಂಧವನ್ನು ನೋಡಬೇಕು.

ಆ ಶಿವಸುಖಾಬ್ಧಿಮಗ್ನಸ್ವಾಂತನಾದ ಸಕ
ಲೇಶಮಾದರಸರಾತ್ಮೋದ್ಭವಂ ವಿಚ್ಛೇದಿ
ತಾಶಾ ಸಮೂಹನಾಶಾ ಸಮೂಹಭ್ರಮಿತಕೀರ್ತಿವೈಮಲ್ಯಮೂರ್ತಿ
ಪಾಶಪಶುಪತಿ ಪದಾರ್ಥತ್ರಯ ಜ್ಞಾನಸಂ
ಕಾಶನಘನಾಶನೆನಿಸಿದ ಮಾಯಿದೇವಾರ್ಯ
ದೇಶಿಕೋದ್ಭಾನು ಮನ್ಮುಖಾಂಬುಜಮಂ ವಿಕಾಶಿಸುಗೆ
ನಿಜತೇಜದಿಂ[೧]

ಇಲ್ಲಿ ದೀರ್ಘವಾದ ಸಂಸ್ಕೃತ ಪದಗಳ ಬಳಕೆ ವಿಶೇಷವಾಗಿರುವುದರಿಂದ ಶೈಲಿಗೆ ಬಿಗುವು ತಾನಾಗಿಯೇ ಪ್ರಾಪ್ತವಾಗಿದೆ. ಆದರೆ ಪ್ರೌಢಿಮೆಯಿದ್ದರೂ ಅರ್ಥ ವ್ಯಕ್ತಿತ್ವಕ್ಕೆ ಆತಂಕವಿಲ್ಲ.

ಶಿವಕಥಾಮೃತರಸಾಯನಪೂರ್ಣಕುಂಡ ವೈ
ಭವಕರ್ಣನು ಭಯಲಿಂಗವಿಧಾನವೀಕ್ಷಣೋ
ತ್ಸವ ವಿಶಾಲಾಕ್ಷ ನೀಶಾನಂದಬಾಷ್ಪಾಂಬುಕಣಗಲಿತಗಂಡಸ್ಥಲಂ
ಭವಿಮನುಜಮಧುಕರಾಸ್ಪೃಶ್ಯಗಂಧೋಚ್ಛ್ವಾಸ
ಸುವಿಲಸತ್ ಚಾಂಪೇಯಕೋಪಮಾಘ್ರಾಣನು
ನುತ್ಸವಕಾರಿ ಪಂಚಾಕ್ಷರೀವಧೂಲಾಸ್ಯರಂಗಸ್ಥಲೀಭೂತಜಿಹ್ವಂ[೨]

ಸುದೀರ್ಘವಾದ ಸಮಸ್ತಪದಗಳನ್ನು ಉಪಯೋಗಿಸಿದರೂ ಕವಿ ತಿಳಿಯಾಗಿ ಹೇಳುತ್ತಾನೆ. ಸ್ಪಷ್ಟತೆ ಪದ್ಮಣಾಂಕನ ಹುಟ್ಟುಗುಣ. ಆತನ ಭಾವನೆ, ಕಲ್ಪನೆ, ಪ್ರತಿಮೆಗಳು ಸ್ಪಷ್ಟವಾಗಿರುವುದರಿಂದ ದೀರ್ಘವಾದ ಸಮಸ್ತ ಪದಗಳನ್ನು ಬಳಸಿದರೂ ಕಾವ್ಯದ ಅರ್ಥವ್ಯಕ್ತವಾಗುತ್ತದೆ. ವಾಣಿ ವೀಣಾಪಾಣಿಯಾಗಿ ಆತನಕಾವ್ಯದುದ್ದಕ್ಕೂ ನಿನಾದಗೈಯುತ್ತಿರುವುದರಿಂದ ಆ ಬಿಗುವಿನ ಶೈಲಿಗೂ ಮೆರುಗು ಪ್ರಾಪ್ತವಾಗಿದೆ.

ಭಾನೋರ್ಮರೀಚಿವಚ್ಛಾಂಭೋರನನ್ಯಾತ್ಮ
ತಾನುಪಮವಿಭವಾನುಸಾರಿಣೀಂ ಪ್ರಾಣಿನಾ
ಮಾನಂದಕಾರಿಣೀಂ ಮಹಿಮಾವಿಕಾರಿಣೀಂ ವಿಪದರ್ಣವೋ
ತ್ತಾರಿಣೀಂ

---

೧. ಪ. ಪು. ಸಂ. ೧. ಪ. ೧೪. ೨. ಪ. ಪು. ಆ. ೬. ಪ. ೩೭.

ಸ್ವಾನುಭೂತ್ಯದ್ಭವಿಸ್ತಾರಿಣೀಮಾವೃತಿ ವಿ
ತಾನಾಪಹಾರಿಣೀಂ ಘನದಯಾಪೂರಿಣೀಂ
ಜ್ಞಾನಕ್ರಿಯಾನಂತ್ಯಚಾರಿಣೀಮಿಶದ್ವಿತೀಯಾಮಹಂ ನಮಾಮಿ.

ಪದ್ಯಪೂರ್ತಿಯಾಗಿ ಸಂಸ್ಕೃತದಲ್ಲಿರುವುದರಿಂದ ಬಂಧ ಸಹಜವಾಗಿಯೇ ಬಿಗುವಾಗಿದೆ. ಆದರೆ ನಾದಮಾಧುರ್ಯದಿಂದ, ಮನಸ್ಸು ಪ್ರಸನ್ನವಾಗಿ ಅರ್ಥೈಸ ತೊಡಗಿದರೆ ಅರ್ಥಗ್ರಾಹ್ಯವಾಗುತ್ತದೆ. ಈ ವಿಶೇಷ ಗುಣಗಳಮೂಲಕ ಪದ್ಮಣಾಂಕನ ಪ್ರೌಢಶೈಲಿ ಲಲಿತವಾಗಿದೆ; ಸುಲಭಗ್ರಾಹ್ಯವೂ ಆಗಿದೆ.

ಪದ್ಮಣಾಂಕನು ಘನವಾದ ಪಂಡಿತನಾಗಿದ್ದರೂ ಕನ್ನಡಭಾಷೆಯ ಮೇಲೆ, ದೇಸಿಯ ಮೇಲೆ ಆತನಿಗೆ ಪೂರ್ಣಪ್ರಭುತ್ವವಿದೆ. ತಾನು ಬರೆಯುತ್ತಿರುವುದು ಕನ್ನಡ ಕಾವ್ಯವೆಂಬುದರ ಅರಿವು ಕವಿಗಿದೆ. ಆದುದರಿಂದ ಪಂಡಿತಪದ್ಮಣಾಂಕನಿಗಿಂತಲೂ ಈ ಷಟ್ಪದಿಗಳಲ್ಲಿ ಕನ್ನಡದಕವಿ ಪದ್ಮಣಾಂಕನ ವ್ಯಕ್ತಿತ್ವ ಒಡೆದು ಕಾಣುತ್ತದೆ. ಅಂತೆ ಪದ್ಮಣಾಂಕನ ಪ್ರತಿಯೊಂದು ಷಟ್ಪದಿಯಲ್ಲಿಯೂ ಕನ್ನಡ ಪದಗಳ ಪ್ರಯೋಗ ವಿಪುಲವಾಗಿದೆ. ಸಂಸ್ಕೃತ ಅವಶ್ಯವಿದ್ದಲ್ಲಿ ಬಂದು ಬಂಧಕ್ಕೆ ಬಿಗುವನ್ನೂ ಶೈಲಿಗೆ ಲಾಲಿತ್ಯವನ್ನೂ ತಂದಿದೆ. ಆತನ ಷಟ್ಪದಿಗಳು ಅಚ್ಚಗನ್ನಡದಿಂದ ಬಿಗಿವಡೆದು ಎಡೆಯೆಡೆಯಲ್ಲಿ ಸಕ್ಕದದ ನಲ್ನುಡಿಗಳನ್ನು ಪಡೆದಿವೆ.

ಸಕ್ಕರೆಸವಿಯ ತೊಂಡೆವಾಯ್ದೆಱೆಯಸೊಗಸನುಗು
ಳ್ವಕ್ಕಜದ ಮುದ್ದುವಾತಿನ ನಾಡೆ ಕಡುಚೆಲ್ವು
ಮಿಕ್ಕು ಪೊಗರುಗುವ ಹೊಂಬಣ್ಣವೊಲೆಯಾಯತದ
ಸೆಕ್ಕುಂದುಱುಂಬಿನ ಸುಖಂ
ಜಕ್ಕುಲಿಪ ಮನದ ನನೆಗಣೆಯನರಸಿಗೆ ನೋಡೆ
ಸಕ್ಕ ಸಮವೆನಿಪ ರೂಹಿನ ಮೋಹನಂ ಜನಿಪ
ಚಿಕ್ಕ ಹರೆಯದ ಬೆಚ್ಚಿದೆರಳೆಗಣ್ಮರಲ ಪೆಣ್ಮಕ್ಕಳೆಯ್ತಂದ
ರೊಸೆದು

ಸುಂದರವಾದ ಕನ್ನಡ ಶಬ್ದಗಳ ಸುರಿಮಳೆ. ಅವಕ್ಕೆ ಕಾಂತಿಯನ್ನೀವ ೩,೪ ಸಂಸ್ಕೃತ ಶಬ್ದಗಳು. ಎಷ್ಟು ಮಧುರವಾಗಿ ಮೃದುವಾಗಿ ಓಡುತ್ತಿದೆ ಈ ಷಟ್ಪದಿ. ಹೀಗೆ ಅಚ್ಚಗನ್ನಡ ಶಬ್ದಗಳಿಂದ ಬಿಗುವಿನ, ಬಂಧದ, ಪ್ರೌಢ ಷಟ್ಪದಿಗಳನ್ನು ರಚಿಸಿರುವುದು ಪದ್ಮಣಾಂಕನ ವೈಶಿಷ್ಟ್ಯ.

ಮಲಹರಂ ಪದ್ಮರಸರಂ ಮೆಱೆವೆನೆಂಬ ಮನ
ದೊಲವಿನಿಂ ಪುಲಿದೊವಲನಸವಾಂಬರಂಗೆಯ್ದು
ಲಲಿತಾಂಗದೊಳ್ ಪೊದೆದು ಫಣಿಗಳ ಫಣಾಮಣಿಯ ಕಡುಕಂ
ತಳೆದು ಭಸಿತದ
ತಿಲಕದಿಂ ನೊಸಲ ಕಣ್ಣಂ ಮಱಿಸಿಯಸ್ಥಿಯು
ಜ್ವಳಮಾಲೆಯಂ ತಾರಹಾರಮಾಗಿಸಿ ಧರಿಸಿ
ಸಲೆವಿನುಪ ಕೊರಲಕರ್ಪ ತೆಗೆದಮರ್ದುಗಱೆವವೋಲ್ ಮಾಡಿ
ತುಟಿಯೊಳಾಂತು

ಹೀಗೆ ಯಾವ ಸನ್ನಿವೇಶವನ್ನು ತೆಗೆದುಕೊಂಡರೂ ಕನ್ನಡ ಶಬ್ದಗಳಿಗೆ ಪದ್ಮಣಾಂಕನ ಶೈಲಿಯಲ್ಲಿ ಪ್ರಾಧಾನ್ಯ ದೊರೆತಿದೆ. ಕಾಶಿಯೊಡೆಯನನ್ನು ಕನ್ನಡದಲ್ಲಿಯೂ, ವಿಶ್ವೇಶ್ವರನನ್ನು ಪ್ರಾಕೃತದಲ್ಲಿಯೂ ಸ್ತುತಿಸಿ, ಎರಡೂ ಭಾಷೆಗಳ ಮೇಲೆ ತನಗಿರುವ ಪೂರ್ಣ ಪ್ರಭುತ್ವವನ್ನು ಪ್ರಕಟಪಡಿಸಿರುವನು.

ಪದ್ಮಣಾಂಕನ ಷಟ್ಪದಿ ದೇಸಿಯ ಲಾಸ್ಯವಾಡುತ್ತಿದೆ. ಷಟ್ಪದಿಗೆ ಕನ್ನಡದಲ್ಲಿ ವಿಶಿಷ್ಟಸ್ಥಾನ ಸಂದುದು ಈ ದೇಸಿಯ ಮೂಲಕ.

‘ಸಕಲೇಶ್ವರನ ತಂತ್ರವಿದು’;[೧] ‘ಕಾಲ್ಗೆಹಟ್ಟಳೆವೊಲಿದುಕೊಂಡಿರೆ’[೨] ‘ಸುಸೂತ್ರಂ ತಪ್ಪದಂತೆ ಸೇರುವೆಗಿಕ್ಕಿ’[೩] ‘ದೂಷಕರ್ ಬೂತುಗೆಯ್ಯುತುಂ ಗಹಗಹಿಸುತಿರೆ’[೪] ‘ಒಡನೆ ಬೇಲೂರವಂ ಬರುತ್ತಿರೆ ಕಾಲವಲ್ಲವಿಂದಿಂಗೆ ನಡೆಯೆಂದಾತನಂ ಕಳಿಪಿ’[೫] ‘ಆಪದುವಿ ದೇವಂ ಗಂಡುಗೆಲೆವೃತ್ತಿರ್ದಪಂ’[೬] ಇಂಥ ಸಹಸ್ರಾರು ದೇಸಿಯ ಪ್ರಯೋಗಗಳನ್ನು ಪದ್ಮಣಾಂಕನು ತನ್ನ ಸುಸಂಸ್ಕೃತವಾದ ಶೈಲಿಯಲ್ಲಿ ಬಳಸಿರುವನು. ಆಗಾಗ ಸುಂದರವಾದ ಅಚ್ಚಗನ್ನಡ ಶಬ್ದಗಳನ್ನು ನಿರ್ಮಿಸುತ್ತಿರುವನು, ‘ಸಸಿಯ ಬಟ್ಟ’[೭] (ಚಂದ್ರಬಿಂಬ); ಕುಳಿರ್ವೆಟ್ಟು ಮಗಳು[೮] (ಹಿಮಗಿರಿ ತನೂಜೆ ಪಾರ್ವತಿ); ಪೆಣ್ದಲೆರನ್ನ[೯]; ಪಗಲಬಲ್ಲಹನಕೆಂಗದಿರ್ತೊಂಗಲು[೧೦], ತಣ್ಬಿಸಿಲ್[೧೧], ಇಂತಹ ಅನೇಕ ಅಚ್ಚ

---

೧. ಪ. ಪು. ಸಂ. ೨. ಪ. ೧೪ ೨. ಪ. ಪು. ಸಂ. ೨. ಪ. ೧೮.
೩. ,, ,, ೪. ಪ. ೨೭. ೪. ,, ,, ೫. ಪ. ೧೧.
೫. ,, ,, ೫. ಪ. ೪೭. ೬. ,, ,, ೬. ಪ. ೧೨.
೭. ,, ,, ೧. ಪ. ೩೦. ೮. ,, ,, ೧. ಪ. ೩೨.
೯. ,, ,, ೨. ಪ. ೪೦. ೧೦. ,, ,, ೮. ಪ. ೨೭.
೧೧. ,, ,, ೮. ಪ. ೭೪.

ಗನ್ನಡ ಶಬ್ದಗಳನ್ನು ಕವಿ ಪದ್ಮಣಾಂಕನು ಸಂಸ್ಕೃತಶಬ್ದಗಳಿಗೆ ಪ್ರತಿಯಾಗಿ ನಿರ್ಮಾಣ ಮಾಡಿಕೊಂಡಿರುವನು. ಕನ್ನಡ, ಸಂಸ್ಕೃತ, ಪ್ರಾಕೃತ ಮೂರೂ ಭಾಷೆಗಳಲ್ಲಿ ಬಲ್ಲಿದನಾದ ಕವಿ ಪದ್ಮಣಾಂಕನು ಶಬ್ದ ನಿರ್ಮಿತಿಯ ಕಾರ್ಯ ವನ್ನು ಲೀಲಾಜಾಲವಾಗಿ ಮಾಡಿಬಿಡುವನು. ಇಂತಹ ಶಬ್ದಸಂಪತ್ತು ಪದ್ಮ ಣಾಂಕನ ಷಟ್ಪದಿಗೆ ಹೆಚ್ಚಿನ ಕಳೆಯನ್ನೂ, ಶಕ್ತಿಯನ್ನೂ ತಂದಿರುವುದಲ್ಲದೆ ಕನ್ನಡದ ಶಬ್ದಭಾಂಡಾರದ ಶ್ರೀಮಂತಿಕೆಯನ್ನು ಹೆಚ್ಚಿಸಿದೆ.

ಕೊನೆಯದಾಗಿ ನಾಣ್ಣುಡಿಗಳೂ, ಅರ್ಥಾಂತರನ್ಯಾಸಗಳೂ ಪದ್ಮಣಾಂಕನ ಷಟ್ಪದಿಗೆ ಅರ್ಥಗೌರವವನ್ನು ತಂದಿವೆ. 'ಕಾಮಿಗಳ್ ಕಣ್ಗಾಣರ್'[೧] 'ಈವಗುಣಮೇಗೆಯ್ಯದೋ'[೨]; 'ಉತ್ತಮರ ಸಂಗಮಧರ್ಮಾಕಾಲದ ಘಮಂ ಕೆಡಿಸದೆ'[೩]; ಅನ್ಯಾಯಪರರಂದಿನಲ್ಪಸುಖಮಂ ನೋಳ್ಪರಲ್ಲದುಪ ರಿಯ ಪುಣ್ಯಮಂ ನೋಳ್ಪರೇ[೪]? ಉತ್ತಮಪುರುಷರ ತೇಜೋಮಧ್ಯದಲ್ಲಿ ಕೃಷ್ಣಾಚರಣಮೇಂ ಘಟಿಪುದೇ?[೫] ಅರ್ಥಭಾರದಿಂದ ಬಳುಕುವ ಇಂಥ ಮಾತೆಂಬ ಜ್ಯೋತಿರ್ಲಿಂಗದ ಬೆಳಗಿನಲ್ಲಿಯೇ ಪದ್ಮಣಾಂಕನ ಷಟ್ಪದಿ ಮುನ್ನಡೆ ದಿದೆ. ಕನ್ನಡಕ್ಕೆ ಬೆಳಗನ್ನಿತ್ತಿದೆ.

---

೧. ಪ. ಪು. ಸಂ. ೮. ಪ. ೯೦. ೨. ಪ. ಪು. ಸಂ. ೮. ಪ. ೯೩.
೩. ,, ಸಂ. ೮. ಪ. ೬೯. ೪. ,, ,, ೮. ಪ. ೭೦.
೫. ,, ,, ೮. ಪ. ೭೨.

ಪದ್ಮರಾಜಪುರಾಣದ ಘನತೆ

ಪದ್ಮರಾಜಪುರಾಣವು ಕನ್ನಡಸಾಹಿತ್ಯದ ಅತಿ ಮಹತ್ವವಾದ ಗ್ರಂಥಗಳಲ್ಲಿ ಒಂದಾಗಿದೆ. ಈ ಗ್ರಂಥವು ಕಾವ್ಯ ಇತಿಹಾಸ ಮತ್ತು ಸಿದ್ಧಾಂತಗಳಿಂದ ಮುಪ್ಪುರಿವಡೆದಿದೆ. ಶರಣಕವಿಯೋರ್ವನ ಜೀವನೇತಿಹಾಸ ಪದ್ಮರಾಜ ಪುರಾಣದಲ್ಲಿ ಅರಳಿ ಕಾವ್ಯದ ಪರಿಮಳವನ್ನು ಸೂಸುತ್ತದೆ. ಪದ್ಮಣಾಂಕನ ಪಾಂಡಿತ್ಯಕ್ಕೂ ಕಾವ್ಯದ ಸೆಕೆ ತಟ್ಟದೆ ಹೋಗಿಲ್ಲ. ಅಂತೆಯೇ ಕನ್ನಡ ಸಾಹಿತ್ಯ ದಲ್ಲಿ ಇದೊಂದು ವೈಶಿಷ್ಟ್ಯಪೂರ್ಣವಾದ ಗ್ರಂಥವೆಂದು ಹೇಳಿದುದು.

ಹರಿಹರ, ರಾಘವಾಂಕ, ಕೆರೆಯಪದ್ಮರಸರು ಕನ್ನಡಸಾಹಿತ್ಯಚರಿತ್ರೆಯಲ್ಲಿ ಹೊಸ ಯುಗವನ್ನು ಪ್ರವರ್ತಿಸಿದ ಹಿರಿಯ ಕವಿಗಳು. ಕನ್ನಡ ಕಾವ್ಯಕ್ಕೆ ಹೊಸ ಮಾರ್ಗವನ್ನು ಕಲ್ಪಿಸಿಕೊಟ್ಟ ಪ್ರತಿಭಾನ್ವಿತ ಕವಿಗಳವರು. ರಗಳೆ, ಷಟ್ಪದಿಗಳು ಕನ್ನಡದ ಸೊಲ್ಲಿಗೆ ಸಲ್ಲುವಂತೆ ಮಾಡಿದ ಶ್ರೇಯಸ್ಸು ಹರಿಹರ, ರಾಘವಾಂಕ ಮತ್ತು ಕೆರೆಯಪದ್ಮರಸರಿಗೆ ಸಲ್ಲುತ್ತದೆ. ಹರೀಶ್ವರನ ಶಿವಗಣದ ರಗಳೆ, ಕೆರೆಯ ಪದ್ಮರಸರ ದೀಕ್ಷಾಬೋಧೆ ಇವು ರಗಳೆಯ ರೂಪದಲ್ಲಿ ಬರೆದ ಪ್ರಥಮ ಕಾವ್ಯಗಳು. ನಾಗವರ್ಮನು (ಕ್ರಿ. ಶ. ಸು. ೯೯೦) ತನ್ನ ಛಂದೋಂಬುಧಿಯಲ್ಲಿ ರಗಳೆಯ ಲಕ್ಷಣವನ್ನು ವಿವರಿಸಿರುವುದೇನೋ ನಿಜ.

ಗಣನಿಯಮ ವಿಪರ್ಯಾಸದೊ
ಳೆಣೆವಡೆದೊಪ್ಪೆಸೆಯೆ ಮಾತ್ರೆ ಸಮನಾಗೆ ಗುಣಾ
ಗ್ರಣಿಯ ಮತದಿಂದೆ ತಾಳದ
ಗಣನೆಗೊಡಂಬಟ್ಟಡದುವೆ ರಘಟಾಬಂಧಂ

ಎಂದು ರಗಳೆಯ ಲಕ್ಷಣವನ್ನು ಕಂದಪದ್ಯದಲ್ಲಿ ಹೇಳಿರುವನು. ಸಾಮಾನ್ಯ ವಾಗಿ ಪ್ರತಿಯೊಂದು ವೃತ್ತದ ಲಕ್ಷಣವನ್ನು ಆಯಾ ವೃತ್ತದಲ್ಲಿಯೇ ವಿವರಿಸುವ

ಪದ್ಧತಿಯನ್ನಿಟ್ಟುಕೊಂಡ[೧] ನಾಗವರ್ಮನು ರಗಳೆಯ ಲಕ್ಷಣವನ್ನು ಮಾತ್ರ ಕಂದಪದ್ಯದಲ್ಲಿ ಹೇಳಿರುವುದು ಗಮನಾರ್ಹವಾಗಿದೆ. ರಗಳೆ ಆಗ ವಿಶೇಷವಾಗಿ ಹದವಟ್ಟಿರಲಿಕ್ಕಿಲ್ಲವೆಂದು ಇದರಿಂದ ಧ್ವನಿತವಾಗುತ್ತದೆ. ಶಕ್ತರಾದ ಕೆಲವು ಕನ್ನಡ ಕವಿಗಳು ತಮ್ಮ ಚಂಪೂಕಾವ್ಯಗಳಲ್ಲಿ ಹಲವೆಡೆ ರಗಳೆಗಳನ್ನು ಬಳಸಿರುವುದುಂಟು.[೨] ಆದರೆ ಸಮಗ್ರಕಾವ್ಯವನ್ನು ಬರೆಯಲು ರಗಳೆಯನ್ನು ಉಪಯೋಗಿಸಿದ ಶ್ರೇಯಸ್ಸು ಹರಿಹರ, ಕೆರೆಯಪದ್ಮರಸರಿಗೆ ಸಲ್ಲುತ್ತದೆ. ಹರಿಹರನು ಕಥನಕವನಕ್ಕೆ ರಗಳೆಯನ್ನು ಉಪಯೋಗಿಸಿದರೆ, ಕೆರೆಯಪದ್ಮರಸರು ಅದನ್ನು ಶಾಸ್ತ್ರಕಾವ್ಯಕ್ಕೆ (ದೀಕ್ಷಾಬೋಧೆಗೆ) ಬಳಸಿರುವರು. ಇದನು ಅವರು ಆಕಸ್ಮಿಕವಾಗಿ ಬಳಸಿದಂತಿಲ್ಲ. ಏಕೆಂದರೆ - ಕ್ರಾಂತಿಕಾರಕರಾದ ಈ ಕವಿಗಳು ಸಾಹಿತ್ಯದ ವಸ್ತು, ಉದ್ದೇಶ, ಪ್ರಕಾರ ಮುಂತಾದವುಗಳ ಬಗೆಗೆ ಸಮಾಲೋಚನೆ ಮಾಡಿ ಬಹು ದೂರದೃಷ್ಟಿಯಿಂದ ಈ ಛಂದಸ್ಸನ್ನು ಆಯ್ದುಕೊಂಡಿರುವರು; ರಗಳೆ, ಷಟ್ಪದಿಗಳನ್ನು ಹದಗೊಳಿಸಿರುವರು.

ಹೀಗೆ ಈ ರೂಪಗಳು ಹದಗೊಂಡುದರಿಂದ ಭಾವನೆಗಳ ಅಭಿವ್ಯಕ್ತಿಗೆ ಅತಿ ಸಹಜವಾದ, ಸುಲಭವಾದ, ದೇಸಿನಿಷ್ಠವಾದ ದಾರಿ ಸಿಕ್ಕಂತಾಯಿತು. ಬಿಗುವಿನ ಮಾರ್ಗದ ಶೈಲಿ ಹಿಮ್ಮೆಟ್ಟಿ, ಬಹುಜನ ಕವಿಗಳಿಗೆ ತಮ್ಮ ಸುಖದುಃಖಗಳನ್ನು ಜೀವನದ ಗೊತ್ತುಗುರಿಗಳನ್ನು ಹಾಡಿಕೊಳ್ಳಲು, ತೋಡಿಕೊಳ್ಳಲು ಅನುಕೂಲವಾಯಿತು. ಕನ್ನಡಸಾಹಿತ್ಯ ಹಿಗ್ಗಿತು; ಅರಳಿತು; ಗಾತ್ರದಲ್ಲಿ ಸಮೃದ್ಧವಾಯಿತು; ಸತ್ವದಲ್ಲಿ ಹಿರಿದಾಯಿತು. ರಗಳೆ ಇಪ್ಪತ್ತನೆಯ ಶತಮಾನದಲ್ಲಿ

---

೧. ತ್ರಿಪದಿಯ ಲಕ್ಷಣ ತ್ರಿಪದಿಯಲ್ಲಿಯೇ ಇದೆ.

ಬಿಸರುಹೋದ್ಭವಗಣಂ ರಸ ದಶಸ್ಥಾನದೊಳ್
ಬಿಸರುಹನೇತ್ರಗಣವೆ ಬರ್ಕುಮೈದುವು
ಬಿಸರುಹನೇತ್ರೇ ತ್ರಿಪದಿಗೆ ...... (೫-೨೪೮)

‘ ಮೊದಲೊಳಜಗಣಂ ಕುಂದದೆ ಬರ್ಕತ್ತಮಯ್ದು ಗಣಂಗಳೆ ವಿಷ್ಣುವಕ್ಕುಂ ’ ಎಂದು ಮುಂತಾಗಿ ಪಿರಿಯಕ್ಕರದ ಲಕ್ಷಣವನ್ನು ಛಂದೋಂಬುಧಿಯಲ್ಲಿ ಪಿರಿಯಕ್ಕರದಲ್ಲಿಯೇ ಹೇಳಲಾಗಿದೆ.

೨. ಪೊನ್ನ : ಶಾಂತಿಪುರಾಣ-ಆ. ೩. ಪ. ೭, ರನ್ನ : ಅಜಿತಪುರಾಣ-ಆ. ೨. ಪ. ೮. ಪಂಪ: ಭಾರತ. ಆ-೧. ಪ. ೫೮. ಆ. ೩. ಪ. ೨೨, ಪಂಪ : ಆದಿಪುರಾಣ-ಆ. ೪. ಪ. ೩೦. ಆ. ೪. ಪ. ೧೦

ಆಧುನಿಕ ಕಾವ್ಯಕ್ಕೆ ಹೊಂದಿಕೊಳ್ಳುವ ಛಂದಸ್ಸಾಯಿತೆಂಬುದನ್ನು[೧] ಗಮನಿಸಿದರೆ ಅವರ ಪ್ರತಿಭೆಯ ದೂರದೃಷ್ಟಿಯ ಕಲ್ಪನೆಯಾಗುತ್ತದೆ. ಆ ಕವಿಗಳು ತಮ್ಮ ಕಾಲಕ್ಕೆ ಮಾತ್ರ ಸಂಬಂಧಪಟ್ಟವರಾಗಿರದೆ ಮುಂದಿನ ಕವಿಗಳ ಮೇಲೆ ಚಿರಂತನವಾದ ಪ್ರಭಾವಮುದ್ರೆಯನ್ನು ಬೀರಿರುವರು.

೧. ಅನ್ಯರನ್ನು ಹೊಗಳದೆ ಗಿರಿಶಂಗೆ ಮತಿಯನ್ನು ಮಾರಿಕೊಳ್ಳಬೇಕೆಂಬ ಕಾವ್ಯೋದ್ದೇಶ

೨. ಹಾಡುಗಬ್ಬಗಳು[೨]

ಎಲ್ಲೆಲ್ಲಿ ಕಂಡುಬರುತ್ತವೆಯೋ ಅಲ್ಲೆಲ್ಲ ಈ ಕವಿಗಳ ಪ್ರಭಾವಮುದ್ರೆ ಕಂಡು ಬರುತ್ತದೆ. ಅಂತೆಯೇ ಅವರನ್ನು ಬಲಗೊಂಡು ಬರೆಯದ ವೀರಶೈವ ಕವಿಗಳಿಲ್ಲ.

ಪ್ರಮಥಾನೀಕ ಕಥಾರ್ಣವೇಂದು ಹರಿದೇವಾಚಾರ್ಯನಂ ಧೈರ್ಯನಂ
ಸಮುದಂಚದ್ವೃಷಭಸ್ತವಾಮರಮಹೀಜಾರಾಮನಂ ಸೋಮನಂ
ವಿಮಲ ಜ್ಞಾನ ಸುದೀಪಿಕಾ ಸ್ಫುರಿತ ಚೇತಸ್ಸದ್ಮನಂ ಪದ್ಮನಂ
ಕ್ರಮದಿಂದಂ ಬಲಗೊಂಡು ಪೇಳ್ವೆನೊಸೆದಾನೀ ಕಾವ್ಯಮಂ
ಸೇವ್ಯಮಂ

ಎಂದು 'ಶೃಂಗಾರಸಾರ'ವೆಂಬ ಕಾವ್ಯದ ಕರ್ತೃ ಸೋಮರಾಜನು (ಕ್ರಿ. ಶ. ಸು. ೧೨೨೨) ಬಣ್ಣಿಸಿದರೆ, ಷಡಕ್ಷರದೇವನು.

ಪರಮ ಲಯಕ್ಷ್ಮಾಭೃತ್ ಸಂ
ಚರಣಂ ಸಂಸರ್ಗಮುದಿತ ಸುಮನೋಬಾಣಂ
ಹರಿದೇವಸಖಂ ಭೃತ ಪ
ದ್ಮರಸಂ ಸುಕವಿತ್ವಪವನನಾದತಿ ಭೀಮಂ[೩]

---

೧. ಈಗಿನ ಕಾಲದವರು ಇಂಗ್ಲಿಷಿನ ಬ್ಲ್ಯಾಂಕ್‌ವರ್ಸನ್ನು ಅನುಕರಣಮಾಡಿ ಸರಳರಗಳೆಯೆಂದು ಕರೆಯುವ ರಗಳೆಗೆ ಹರೀಶ್ವರನೇ (ಪ್ರಾಸವನ್ನು ಬಿಟ್ಟರೆ) ಮಾರ್ಗದರ್ಶಕನು. ...... (ಕನ್ನಡ ಕೈಪಿಡಿ ಸಂ. ೧ ಪು. ೧೩೧)

೨. ಆತನ (ರಾಘವಾಂಕನ) ತರುವಾಯ ಬಂದ ಚೆನ್ನಬಸವಪುರಾಣ, ಜೈಮಿನಿಭಾರತ ಮುಂತಾದ ಪ್ರಸಿದ್ಧ ಷಾರ್ಥಿಕಷಟ್ಪದಿಗ್ರಂಥಗಳೆಲ್ಲ ಭಾವ, ಶೈಲಿ, ವರ್ಣನೆ, ಅಲಂಕಾರ. ಚಮತ್ಕಾರಗಳಲ್ಲಿ ಹರಿಶ್ಚಂದ್ರಚರಿತ್ರೆಯನ್ನೇ ಹೋಲುತ್ತವೆ.— (ಎ. ಆರ್. ಕೃಷ್ಣಶಾಸ್ತ್ರಿಗಳು, ಹರಿಶ್ಚಂದ್ರಕಾವ್ಯದ ಮುನ್ನುಡಿ).

೩. ವೃಷಭೇಂದ್ರವಿಜಯ. ಆ. ೧. ಪ. ೪.

ಎಂದು ಪ್ರಾರ್ಥಿಸಿರುವನು. ಅಂತೆಯೇ ಈ ಕವಿಗಳನ್ನು ಯುಗಪುರುಷರೆಂದು ಕರೆವುದು.

ಮಹಾಕವಿಗಳ ಜೀವನವನ್ನೇ ಕುರಿತು ಕಾವ್ಯವನ್ನು ಹಾಡಿದ ಶ್ರೇಯಸ್ಸು ವೀರಶೈವ ಕವಿಗಳಿಗೆ ಸಲ್ಲುತ್ತದೆ. ರಾಮಾಯಣ, ಮಹಾಭಾರತ, ಜೈನ ಪುರಾಣಗಳಷ್ಟೇ, ಕನ್ನಡಸಾಹಿತ್ಯಕ್ಕೆ ವಸ್ತುಸಾಮಗ್ರಿಯನ್ನು ಪೂರೈಸುವ ಕೇಂದ್ರ ಗಳೆಂಬ ಕಲ್ಪನೆಯನ್ನು ಅಲ್ಲಗಳೆದು, ಇಲ್ಲಿ ಜಗಕ್ಕೆ ಸಲ್ಲಿ ಅಲ್ಲಿಯೂ ಸಂದ ಮಹಾನುಭಾವರನ್ನು ಕುರಿತು ವೀರಶೈವಕವಿಗಳು ಕಾವ್ಯಗಳನ್ನು ರಚಿಸತೊಡ ಗಿದರು. ಮಾನವಲೋಕದಲ್ಲಿ ಹುಟ್ಟಿ ಪ್ರಪಂಚದ ಕಷ್ಟನಷ್ಟಗಳನ್ನು ಎದುರಿಸಿ ಜೀವನದಲ್ಲಿ ಜಯಶೀಲರಾದ ಶರಣರೂ, ಕವಿಗಳೂ, ಭಕ್ತರೂ ಕಾವ್ಯಕ್ಷೇತ್ರಕ್ಕೆ ಬಂದರು. ಕನ್ನಡಕಾವ್ಯಕ್ಕೆ ಕನ್ನಡನಾಡಿನ ಇತಿಹಾಸವೇ ವಸ್ತು— ಸಾಮಗ್ರಿ ಯನ್ನು ಪೂರೈಸುವ ವೈಶಿಷ್ಟ್ಯ ಪ್ರಾಪ್ತವಾಯಿತು. ರಾಘವಾಂಕನು ಹರಿಹರ ದೇವನ ಜೀವನವನ್ನು ಕುರಿತು '**ಹರಿಹರಮಹತ್ವ**'ವೆಂಬ ಗ್ರಂಥವನ್ನು ಬರೆದರೆ, ರಾಘವಾಂಕನ ಜೀವನಚರಿತೆಯನ್ನು ಕಥಾವಸ್ತುವನ್ನಾಗಿಟ್ಟು ಸಿದ್ಧ ನಂಜೇಶನು '**ರಾಘವಾಂಕ ಚಾರಿತ್ರ**'ವನ್ನು ರಚಿಸಿರುವನು. ಕನ್ನಡ ಸಾಹಿತ್ಯದ ಅತ್ಯಂತ ವೈಶಿಷ್ಟ್ಯಪೂರ್ಣವಾದ ಈ ಸಂಪ್ರದಾಯದಲ್ಲಿ ಹುಟ್ಟಿ ಬಂದಿದೆ **ಪದ್ಮಣಾಂಕನ ಪದ್ಮರಾಜಪುರಾಣ.**

ಪದ್ಮರಾಜಪುರಾಣದಲ್ಲಿ ಕೆಳಗೆ ಕಾಣಿಸಿದ ಮಹತ್ವದ ಐತಿಹಾಸಿಕಸಂಗತಿ ಗಳ ಉಲ್ಲೇಖವಿದೆ.

೧. ಕೆರೆಯಪದ್ಮರಸ, ಹರಿಹರ, ರಾಘವಾಂಕರ ಜೀವನಚರಿತೆಗೆ ಸಂಬಂಧಿಸಿದ ಅನೇಕ ವಿಷಯಗಳು.
೨. ಈ ಕವಿಗಳ ಕಾಲನಿರ್ಣಯಕ್ಕೆ ಸಹಾಯಕವಾಗಬಲ್ಲ ಅನೇಕ ವಿಷಯಗಳು.

ಹರಿಹರ, ರಾಘವಾಂಕ, ಕೆರೆಯಪದ್ಮರಸರು ಕನ್ನಡಸಾಹಿತ್ಯಚರಿತ್ರೆಯಲ್ಲಿ ನೂತನಯುಗವನ್ನು ಆರಂಭಿಸಿದವರೆಂದು ಈ ಪೂರ್ವದಲ್ಲಿ ವಿವರಿಸಲಾಗಿದೆ. ಇಂತಹ ಕವಿಗಳ ಜೀವನಚರಿತ್ರೆಯನ್ನೂ, ಕಾಲಮಾನವನ್ನೂ, ಯುಗಧರ್ಮ ವನ್ನೂ ತಿಳಿದುಕೊಳ್ಳಬೇಕೆಂಬ ಜಿಜ್ಞಾಸೆ ಕನ್ನಡ ಸಾಹಿತ್ಯ ಭಕ್ತರಿಗೆ ಉಂಟಾಗು ವುದು ಸಹಜವಾಗಿದೆ. ಪಾಶ್ಚಾತ್ಯವಿಮರ್ಶನತತ್ವಗಳನ್ವಯ ಅದು ಅವಶ್ಯವೂ

ಎನಿಸಿದೆ. ಇಂತಹ ಕುತೂಹಲಬುದ್ಧಿಗೆ ಪದ್ಮರಾಜಪುರಾಣವು ಅನೇಕ ಐತಿಹಾಸಿಕ ಅಂಶಗಳನ್ನು ಪೂರೈಸುತ್ತದೆ. ಅವೆಲ್ಲ ವಿಚಾರಾರ್ಹವಾಗಿವೆ.

೧. ಹರಿಹರ, ಕೆರೆಯಪದ್ಮರಸರು ನರಸಿಂಹಬಲ್ಲಾಳನಲ್ಲಿ ಅನುಕ್ರಮವಾಗಿ ಕರಣಿಕ ಹಾಗೂ ಮಂತ್ರಿಗಳಾಗಿದ್ದರೆಂದು ತಿಳಿದುಬರುತ್ತದೆ.

೨. ಈ ನರಸಿಂಹಬಲ್ಲಾಳನಿಗೆ ಬಿಟ್ಟಿದೇವನೆಂಬ ಮಗನಿದ್ದನು.

೩. ಪದ್ಮರಸರು ತ್ರಿಭುವನತಾತನೊಡನೆ ವಾದಮಾಡುವಾಗ ನರಸಿಂಹಬಲ್ಲಾಳನ ಸಭೆಗೆ ದೋರಾಂಬುಧಿಯ ರಾಮಣ್ಣ, ಕವಿಶರಭಭೇರುಂಡ ರಾಘವಾಂಕ, ಹುಲಿಗೆರೆಯ ಮಾಯಿದೇವ ಪುರಾಣಪಂಡಿತ, ವಿಶ್ವಣ್ಣ, ದೇವರಸ, ದಾವರಸ, ಇವರೇ ಮೊದಲಾದ ಗಣ್ಯವ್ಯಕ್ತಿಗಳು ಹೋಗಿದ್ದರು.

೪. ಶಿವನು ಬಡವೆಯ ಧನವನ್ನು ಪದ್ಮರಸರಿಗೆ ಪಡಿಹೊನ್ನೆಂದು ತಂದುಕೊಟ್ಟಾಗ ಕೆರೆಯ ಪದ್ಮರಸರು ಆ ವಿಧವೆಯ ಗೋಳನ್ನು ಕೇಳಿ ಮಮ್ಮಲ ಮರುಗಿ ವಿತ್ತನಾಥಾಪ್ತನು ನನಗಾಗಿ ಬಡವೆಯ ಧನವನ್ನು ಅಪಹರಿಸುವುದೇ ? ಗಣಪತಿನೃಪಾಲರಮನೆಯ ವಿತ್ತವನ್ನು ಅಪಹರಿಸಿದರೆ ಅಪಹರಿಸಲಿ. ಧನದವರು ಅರೆಯಟ್ಟಿ ಬಂದರೆ ಅವನನ್ನು ಉಳಿಸಲು ನಾನೇನು ಗುಂಡಬೊಮ್ಮಯ್ಯನೇ ? ಎಂದು ನುಡಿದಿರುವರು. ಹೀಗೆ ಕಾಕತೀಯ ಗಣಪತಿನೃಪಾಲನ ಉಲ್ಲೇಖ ಈ ಕಾವ್ಯದಲ್ಲಿದೆ.

೫. ಸಕಲೇಶಮಾದರಸರು ಬಸವೇಶ್ವರಾದಿಗಳನ್ನು ಸಂದರ್ಶಿಸಿ ಅವರೊಡನೆ ಕೆಲಕಾಲ ಕಳೆದರು.

೬. ಸಕಲೇಶಮಾದರಸರು ಗೊಪೆಯ ಶಿವದೇವನೆಂಬ ಶಿವಶರಣನನ್ನು ಪ್ರಾಣಲಿಂಗದಲ್ಲಿ ಅಡಗಿಸಿದರು.

೭. ಪದ್ಮಣಾಂಕಕವಿಯ ಹಿಂದಿನ ಹತ್ತು ತಲೆಮಾರಿನ ವಂಶಾವಳಿ, ಅವರ ಸಾಧನೆ, ಬೋಧನೆಗಳ ಸಂಕ್ಷಿಪ್ತ ವಿವರಣೆ ದೊರೆಯುತ್ತದೆ.

ಇವೇ ಮೊದಲಾದ ಐತಿಹಾಸಿಕ ಅಂಶಗಳು ಪದ್ಮರಾಜಪುರಾಣದಲ್ಲಿ ದೊರೆಯುವುದರಿಂದ ಈ ಗ್ರಂಥವು ಕನ್ನಡ ಸಾಹಿತ್ಯಚರಿತೆಯ ಸಂಶೋಧಕರಿಗೆ

ವಿಶೇಷವಾಗಿ ಹರಿಹರ, ರಾಘವಾಂಕ, ಕೆರೆಯ ಪದ್ಮರಸರನ್ನು ಕುರಿತು ಅಭ್ಯಾಸ ಮಾಡುವವರಿಗೆ ಬಹಳ ಉಪಯುಕ್ತವಾಗಿದೆ.

ಪದ್ಮರಾಜಪುರಾಣದಲ್ಲಿ ಸುಂದರವಾದ ಕಾವ್ಯ, ಕೆರೆಯಪದ್ಮರಸರ ವ್ಯಕ್ತಿತ್ವ, ಉತ್ತಮವಾದ ಕಥನಕಲೆ ಇವುಗಳ ನಿರೂಪಣೆ ಇದೆ. ರಸವತ್ತಾಗಿ ಕಾವ್ಯವನ್ನು ಬರೆಯುವ ಕಲೆ, ಕಥೆ ಹೇಳುವ ರೀತಿ, ಪದ್ಮರಾಜಪುರಾಣದಲ್ಲಿವೆ. ಅನವಶ್ಯಕವಾದ ವರ್ಣನೆಗಳ ಪ್ರಸ್ತಾಪ ಈ ಕಾವ್ಯದಲ್ಲಿ ಇಲ್ಲವೇ ಇಲ್ಲ. ಅಂತೆ ಪದ್ಮಣಾಂಕನ ಕಲಾಭಿಜ್ಞತೆ ಸಹೃದಯರ ಮನವನ್ನೂ ಸೆಳೆಯುತ್ತದೆ. ಮೊದ ಲಿನಿಂದ ಕೊನೆಯವರೆಗೂ ಪದ್ಮರಸರ ಜೀವನವನ್ನು ಚಿತ್ರಿಸುವುದರ ಕಡೆಗೇ ಕವಿ ದೃಷ್ಟಿಯಿಟ್ಟಿರುವುದು ಶ್ಲಾಘನೀಯವಾಗಿದೆ. ಪದ್ಮಣಾಂಕನು ದರ್ಶನ ಶಕ್ತಿಯನ್ನು ಪಡೆದ ಸತ್ಕವಿ. ಅಂತೆಯೇ ಆತನ ನಿರೂಪಣೆ, ವರ್ಣನೆ, ದರ್ಶನ ಇವುಗಳಿಗೊಂದು ಬಗೆಯ ಸೊಗಸಿದೆ.

ಪದ್ಮಣಾಂಕನ ಪ್ರದರ್ಶನ ಶಕ್ತಿ ಮಿಗಿಲಾದುದು. ಸುಂದರವಾದ ದರ್ಶನ ವನ್ನು ಪ್ರದರ್ಶಿಸಲು ಸಹಜವಾದ, ಸುಂದರವಾದ ಶಬ್ದಗಳು ಕುಣಿಯುತ್ತ ಬರುತ್ತವೆ. ಆತನ ಷಟ್ಪದಿಗೆ ಕನ್ನಡ ಷಟ್ಪದಿಯ ಇತಿಹಾಸದಲ್ಲಿ ಒಂದು ವಿಶಿಷ್ಟ ವಾದ ಸ್ಥಾನವಿದೆ. ರಾಘವಾಂಕನು ಷಟ್ಪದಿಯಲ್ಲಿ ಕಾವ್ಯಗಳನ್ನು ರಚಿಸುವಾಗ ಆ ಷಟ್ಪದಿಯ ವಿರಚನೆಯಲ್ಲಿ ಮಹತ್ವದ ಎರಡಂಶಗಳು ಕಂಡು ಬರುತ್ತವೆ.

೧. ದೇಸಿಯನ್ನು ಬಳಸಿ ಷಟ್ಪದಿಯ ಸುಸಂಸ್ಕೃತತೆಯನ್ನೂ, ಬಿಗು ವನ್ನೂ ಉಳಿಸಿಕೊಂಡು ಬಂದುದು.

೨. ಹಾಡು ಶಬ್ದಗಳಿಗೆ ಅವಶ್ಯವಾದ ಲಾಲಿತ್ಯ, ನಾದಮಾಧುರ್ಯಗಳನ್ನು ಷಟ್ಪದಿಯ ಶೈಲಿಯಲ್ಲಿ ತಂದುದು

ಆತನ ತರುವಾಯ ಷಟ್ಪದಿಯು ಎರಡು ಶಾಖೆಗಳಾಗಿ ಹರಿದಿದೆ. ಒಂದು ದೇಸಿಗೆ ಹೆಚ್ಚಿನ ಪ್ರಾಧಾನ್ಯವಿತ್ತು ಒಮ್ಮೊಮ್ಮೆ ಗ್ರಾಮ್ಯವೆಂದು ಕಂಡುಬಂದರೂ ಕಾವ್ಯಾಂಶದಿಂದ ತುಂಬಿತುಳುಕುವ, ಶಬ್ದ, ಮಾತು, ನುಡಿಕಟ್ಟು ಮುಂತಾದವು ಗಳನ್ನು ಬಳಸುವುದು. ಇಂತಹ ಶೈಲಿಗೆ ಭಾಮಿನಿಷಟ್ಪದಿ ಬಹು ಸಹಜವೆನಿಸಿ ದಂತೆ ತೋರುತ್ತದೆ. ರಾಘವಾಂಕನ ತರುವಾಯ ಈ ಶಾಖೆ ಮೊತ್ತಮೊದಲು ಪ್ರವರ್ಧಮಾನವಾಗಿರುವುದು ಭೀಮಕವಿಯ ಬಸವಪುರಾಣದಲ್ಲಿ. ಅಲ್ಲಿಂದ ಮುಂದೆ ಚಾಮರಸ, ಕುಮಾರವ್ಯಾಸರಂತಹ ಕವಿಗಳ ಪ್ರತಿಭೆಯಲ್ಲಿ ಆ ಶೈಲಿ ಪಳಗಿ ಸುಮಧುರವಾದ ಫಲಗಳನ್ನಿತ್ತಿದೆ.

ಇನ್ನೊಂದು ಸುಸಂಸ್ಕೃತವಾದ ಷಟ್ಪದಿಯ ಶೈಲಿ, ಅಲ್ಲಿ ದೇಸಿಯಿದ್ದರೂ ಗ್ರಾಮ್ಯಕ್ಕೆ ಎಡೆಯಿಲ್ಲ. ಗಂಭೀರವಾದ ವಾರ್ಧಿಕಷಟ್ಪದಿ ಈ ಬಗೆಯ ಶೈಲಿಗೆ ಸಹಜವೆನಿಸಿತು. ಪದ್ಮಣಾಂಕನಲ್ಲಿಯೇ ಈ ಎರಡನೆಯ ಶಾಖೆಯ ಆದಿಯನ್ನು ಕಾಣುತ್ತೇವೆ. ಮುಂದೆ ವಿರೂಪಾಕ್ಷಪಂಡಿತ, ಲಕ್ಷ್ಮೀಶರಂತಹ ಉದ್ದಾಮ ಕವಿಗಳ ಕೈಯಲ್ಲಿ ಈ ಬಗೆಯ ಶೈಲಿ ಪಳಗಿದೆ; ಫಲಿಸಿದೆ. ಆದುದರಿಂದ ಷಟ್ಪದಿಯ ಶೈಲಿಯ ದೃಷ್ಟಿಯಿಂದ ಪದ್ಮರಾಜಪುರಾಣಕ್ಕೆ ಮಹತ್ವದ ಸ್ಥಾನವಿದೆ.

ಪದ್ಮಣಾಂಕನ ಕಥನಶೈಲಿಯೂ ಮಾರ್ಮಿಕವಾಗಿದೆ. ಆತನು ಕಥೆ ಹೇಳುವ ತಂತ್ರವನ್ನು ಬಲ್ಲ ಕವಿ. ಅದರ ಆದಿ ಮಧ್ಯಾಂತ್ಯಗಳು ಯಾವರೀತಿಯಾಗಿರಬೇಕೆಂಬ ಹದವನ್ನರಿತ ಕವಿಯಾತನು. ಕಥನ, ಕಲೆಯರಹಸ್ಯ ಪದ್ಮಣಾಂಕನಿಗೆ ವಿದಿತವಾಗಿರುವುದರಿಂದ ಆತನು ಹೇಳುವ ಕಥೆಗಳೆಲ್ಲ ಸ್ವಾರಸ್ಯಮಯವಾಗಿವೆ. ಅವು ಸಂಕ್ಷಿಪ್ತವಾಗಿರಲಿ, ವಿವರವಾಗಿರಲಿ ಸಂಸ್ಮರಣೀಯವಾದ ಘಟನೆಗಳ ಹಾಗೂ ಸನ್ನಿವೇಶಗಳ ಚಿತ್ರಗಳನ್ನು ನಮ್ಮ ಮನದೆದುರು ನಿಲ್ಲಿಸುತ್ತವೆ. ಪದ್ಮರಾಜಪುರಾಣವೊಂದು ಕಥಾಪುಷ್ಪಗಳರಳಿದ ವೃಕ್ಷದಂತೆ ಕಂಗೊಳಿಸುತ್ತದೆ. ಈ ದೃಷ್ಟಿಯಿಂದಲೂ ಈ ಕಾವ್ಯಕ್ಕೊಂದು ವೈಶಿಷ್ಟ್ಯವುಂಟು; ಮಹತ್ವವುಂಟು; ಮೆರುಗುಂಟು.

ಕೊನೆಯದಾಗಿ ಪದ್ಮರಾಜಪುರಾಣದಲ್ಲಿ ಬರುವ ಶಾಸ್ತ್ರವಿವೇಚನೆ. ವೇದ, ಆಗಮ, ಉಪನಿಷತ್ತು, ಪುರಾಣ ಮುಂತಾದ ಗ್ರಂಥಗಳಿಂದ ವಿಪುಲವಾದ ಆಧಾರಗಳನ್ನಿತ್ತು ಪದ್ಮರಸರು ಶಿವಾದ್ವೈತಸಾಕಾರಸಿದ್ಧಾಂತ ಪ್ರತಿಷ್ಠಾಪನೆ ಮಾಡಿದ ವಿಷಯ ವರ್ಣನಾತೀತವಾಗಿದೆ. ಪದ್ಮಣಾಂಕನ ತರ್ಕಸರಣಿ ಅದ್ಭುತವಾದುದು. ಆತನು ಕೊಡುವ ಶಾಸ್ತ್ರಾಧಾರ, ಹೂಡಿದ ತರ್ಕಸರಣಿ ಎಂತಹ ಪಂಡಿತರನ್ನಾದರೂ ಬೆರಗುಗೊಳಿಸುತ್ತವೆ. ಕೊನೆಗೆ ಪದ್ಮರಾಜಪುರಾಣದಲ್ಲಿ ಬಂದ ಷಟ್‌ಸ್ಥಲೋಪದೇಶ ಈ ಕಾವ್ಯದ ಘನತೆಯನ್ನು ಇನ್ನೂ ಹೆಚ್ಚಿಸಿದೆ. ಷಟ್‌ಸ್ಥಲವೊಂದು ತತ್ತ್ವಸಂಗ್ರಹವಲ್ಲ; ಸಾಧನೆಯ ಮಾರ್ಗವೆಂದು ವಾದ ಹೂಡುವವರಿಗೆ ಉತ್ತರ ಇಲ್ಲಿ ದೊರೆಯುತ್ತದೆ. ಷಟ್‌ಸ್ಥಲಶಾಸ್ತ್ರವು ಜೀವ, ಜಗತ್ತು, ಈಶ್ವರ ಈ ಮಹತ್ವದ ತತ್ತ್ವಗಳ ಸಂಬಂಧದ ಬಗೆಗೆ ವಿವೇಚನೆಯನ್ನು ಕೊಡುವುದಲ್ಲದೆ ಜೀವನು ಜಗತ್ತಿನ ಮುಖಾಂತರ ಶಿವನಲ್ಲಿ ಐಕ್ಯವಾಗುವ ಮಾರ್ಗವನ್ನೂ ಬೋಧಿಸುತ್ತದೆ ಎಂಬ ಸ್ಪಷ್ಟವಾದ ಕಲ್ಪನೆ ಪದ್ಮರಾಜಪುರಾಣದಲ್ಲಿ ಬಂದ ವಿವರಣೆಯಿಂದ ಉಂಟಾಗುತ್ತದೆ.

ಇವೆಲ್ಲ ಕಾರಣಗಳ ಮೂಲಕ ಪದ್ಮರಾಜಪುರಾಣಕ್ಕೆ ಕನ್ನಡಸಾಹಿತ್ಯದಲ್ಲಿ ಒಂದು ವಿಶಿಷ್ಟವಾದ ಸ್ಥಾನವಿದೆ; ಮಹತ್ವದ ಸ್ಥಾನವಿದೆ. ಕಾವ್ಯ, ಇತಿಹಾಸ, ತತ್ವವಿವೇಚನೆಗಳಿಂದ ಮುಪ್ಪುರಿವಡೆದ ಈ ಕಾವ್ಯಕ್ಕೆ ಕನ್ನಡ ಸಾಹಿತ್ಯದಲ್ಲಿ ಅಚ್ಚಳಿಯದ ಸ್ಥಾನವಿದೆ. ಇದನ್ನೊರೆದ ಕವಿ ಪದ್ಮಣಾಂಕನು ಕನ್ನಡ ಸಾಹಿತ್ಯಕ್ಕೆ ಒಂದು ಅತ್ಯುತ್ತಮವಾದ ಕಾಣಿಕೆಯನ್ನರ್ಪಿಸಿರುವನು. ಆತನು ನಮ್ಮ ಸಾಹಿತ್ಯೇತಿಹಾಸದಲ್ಲಿ ಸಂಸ್ಮರಣೀಯನಾದ ಸತ್ಕವಿಯೆಂಬುದರಲ್ಲಿ ಸಂದೇಹವಿಲ್ಲ.

ಗ್ರಂಥಸಂಸ್ಕರಣ

ಪದ್ಮರಾಜಪುರಾಣವು ಕಾವ್ಯ, ಇತಿಹಾಸ ಮತ್ತು ಸಿದ್ಧಾಂತಗಳಿಂದ ಮುಪ್ಪುರಿವಡೆದ ಹಿರಿಯ ಕಾವ್ಯ; ಪ್ರೌಢಗ್ರಂಥ. ಇದರ ಸಂಪಾದನೆಯ ಕಾರ್ಯವನ್ನು ಕೈಕೊಳ್ಳಬೇಕೆಂಬ ಇಚ್ಛೆ ಕಳೆದ ಏಳೆಂಟುವರ್ಷಗಳಿಂದಲೂ ಒಳ್ಳೇ ಪ್ರಬಲವಾಗಿಯೇ ಇದ್ದಿತು. ಎಷ್ಟು ಪ್ರಯತ್ನಬಟ್ಟರೂ ಪದ್ಮರಾಜಪುರಾಣದ ತಾಳೆಯೋಲೆಯ ಪ್ರತಿಗಳನ್ನು ದೊರಕಿಸುವುದು ಸಾಧ್ಯವಾಗಲಿಲ್ಲ. ಅಷ್ಟು ವಿರಳವಾಗಿವೆ ಈ ಗ್ರಂಥದ ಪ್ರತಿಗಳು. ಹಸ್ತಲಿಖಿತ ಪ್ರತಿಗಳು ದೊರೆಯದ ಕಾರಣ ನಿರಾಶರಾಗಿದ್ದೆವು.

ಕಾಲ ಬಂದೊದಗಿತು. ದೇವರು ಬಂದಂತೆ ಬಂದರು. ಬಾಗಲಕೋಟೆಯ ಬಸವೇಶ್ವರ ಕಾಲೇಜದ ಹಿಂದಿ ಪ್ರಾಧ್ಯಾಪಕರಾದ ಶ್ರೀ ಉಮಾಪತಿ ಶಾಸ್ತ್ರಿಗಳು. ಪರಮಪೂಜ್ಯರಾದ ಪ್ರಿ. ಡಾ. ಎಸ್. ಸಿ. ನಂದೀಮಠ, ಎಂ. ಎ., ಪಿ ಎಚ್ ಡಿ., (ಲಂಡನ್) ಅವರ ನೇತೃತ್ವದಲ್ಲಿ ಪ್ರೊ. ಎಂ. ಎಸ್. ಸುಂಕಾಪೂರ ಹಾಗೂ ಪ್ರೊ. ಉಮಾಪತಿಶಾಸ್ತ್ರಿ ಇವರು ಬಸವೇಶ್ವರ ಕಾಲೇಜದೊಳಗೆ ಹಸ್ತಲಿಖಿತಗ್ರಂಥಗಳನ್ನು ಸಂಗ್ರಹಿಸುವ ಮಹಾ ಕಾರ್ಯವನ್ನು ಕೈಕೊಂಡುದು ನನ್ನ ನೆನಹಿನಲ್ಲಿದ್ದಿತು. ಅಂತೆಯೇ ಶ್ರೀ ಶಾಸ್ತ್ರಿಗಳವರನ್ನು ಕಂಡಕೂಡಲೇ ಪದ್ಮರಾಜಪುರಾಣದ ಪ್ರತಿಗಳ ಪ್ರಸ್ತಾಪವನ್ನೆತ್ತಿದೆನು. ತಾವು ಹೈದರಾಬಾದ ಕನ್ನಡ ಪ್ರದೇಶದಿಂದ ಸಂಗ್ರಹಿಸಿ ತಂದ ಪ್ರತಿಗಳಲ್ಲಿ ಪದ್ಮರಾಜಪುರಾಣದ ತಾಳೆಯೋಲೆಯ ಪ್ರತಿ ಒಂದು ಉಂಟೆಂದು ಶಾಸ್ತ್ರಿಗಳು ಒಮ್ಮೆಲೇ ಹೇಳಿಬಿಟ್ಟರು. ಆಶ್ಚರ್ಯ ! ಆನಂದ ! ! ಶಾಸ್ತ್ರಿಗಳನ್ನು ಮತ್ತೆ ಮತ್ತೆ ಕೇಳಿದೆ. ನಿಜವಾಗಿಯೂ ಉಂಟೆಂದು ಅವರು ನಿಶ್ಚಿತವಾಗಿ ಹೇಳಿದರು. ನಮ್ಮ ಬಹು ದಿನದ ಬಯಕೆಯನ್ನು ಅವರಿಗೆ ನಿವೇದಿಸಲು ಶ್ರೀ ಉಮಾಪತಿಶಾಸ್ತ್ರಿಗಳು ಆ ತಾಳೆಯೋಲೆಯ ಪ್ರತಿಯನ್ನು ದಯವಿಟ್ಟು ನಮ್ಮ ಕಡೆಗೆ ಕಳುಹಿಸಿಕೊಟ್ಟರು. ಆ ಪ್ರತಿ ನಮ್ಮ ಕೈಸೇರಿದುದು ೧೯೫೭ ನೆಯ ಮಾರ್ಚ ತಿಂಗಳಲ್ಲಿ.

ಇದರಿಂದ ಸ್ವಲ್ಪ ಉತ್ತೇಜನ ದೊರೆತಂತಾಗಿ ಮೈಸೂರು ಓರಿಯೆಂಟಲ್ ರಿಸರ್ಚ ಇನ್‌ಸ್ಟಿಟೂಟದ ಡಾಯರೆಕ್ಟರರೂ, ಉತ್ತಮ ಸಂಶೋಧಕರೂ ಆದ

ಶ್ರೀ ಎಚ್. ದೇವೀರಪ್ಪನವರಿಗೆ ಒಂದು ಆತ್ಮೀಯತೆಯ ಕಾಗದ ಬರೆದು ಪದ್ಮರಾಜಪುರಾಣದ ಹಸ್ತಲಿಖಿತ ಪ್ರತಿಯ ಪ್ರಸ್ತಾಪವೆತ್ತಿದ್ದೆನು. ಅವರು ಒಂದು ವಾರ ಮೌನದಿಂದಿದ್ದು ಒಮ್ಮೆಲೇ ಪದ್ಮರಾಜಪುರಾಣದ ತಾಳೆಯೋಲೆಯ ಪ್ರತಿಯನ್ನು ಕಳುಹಿಸಿದರು.

ಸುಮಾರು ಅರ್ಧಶತಮಾನದ ಹಿಂದೆ ತೀರ ಹಳೆಯರೀತಿಯಲ್ಲಿ ಪ್ರಕಟವಾದ ಒಂದು ಪ್ರತಿಯನ್ನು ಧಾರವಾಡದ ಕನ್ನಡಸಂಶೋಧನಸಂಸ್ಥೆಯ ರೀಡರರಾದ ಶ್ರೀ ಬಿ. ಎಸ್. ಕುಲಕರ್ಣಿಯವರು ಒದಗಿಸಿದರು.

ಹೀಗೆ ೧೯೫೭ ನೆಯ ಮಾರ್ಚ ತಿಂಗಳಲ್ಲಿ ಸುದೈವದಿಂದ ಮೂರು ಪ್ರತಿಗಳನ್ನು ಸಂಗ್ರಹಿಸಲಾಯಿತು. ಅವುಗಳ ವಿವರ ಹೀಗಿದೆ :

ಪ್ರತಿ :	ಸಂಕೇತ :
೧. ಅರ್ಧ ಶತಮಾನದ ಹಿಂದೆ ದಾವಣಗೇರಿಯಲ್ಲಿ ಅಚ್ಚಾದ ಪ್ರತಿ	ಅ
೨. ಬಾಗಲಕೋಟೆಯ ಬಸವೇಶ್ವರಕಾಲೇಜದಿಂದ ಪಡೆದ ತಾಳೆಯೋಲೆಯ ಪ್ರತಿ	ಬ
೩. ಮೈಸೂರು ಓರಿಯೆಂಟಲ್ ರಿಸರ್ಚ ಇನ್‌ಸ್ಟಿಟೂಟ ದಿಂದ ದೊರಕಿಸಿದ ತಾಳೆಯೋಲೆಯ ಪ್ರತಿ	ಕ

ಸಂಸ್ಕರಣ ಕಾರ್ಯ ಆರಂಭವಾಯಿತು ಮೇ ೧೯೫೭ ರಲ್ಲಿ.

೧. ಶ್ರೀ. ಕೆ. ಎಸ್. ಪಾಟೀಲ, ನಿವೃತ್ತ ಹೆಡ್ ಮಾಸ್ತರರು, ಪ್ರ್ಯಾಕ್ಟಿಸಿಂಗಸ್ಕೂಲ, ಗಂ. ಸರಕಾರಿ ಟ್ರೇ. ಕಾ., ಧಾರವಾಡ

೨. ಶ್ರೀ. ಎಸ್. ಸಿ. ಹಿರೇಮಠ, ಬಿ. ಎ., ಎಲ್‌ಎಲ್. ಬಿ., (ನಮ್ಮ ತಮ್ಮಂದಿರು)

ಇವರೀರ್ವರು ಪಾಠಾಂತರಗಳನ್ನು ಗುರುತಿಸುವ ಹಾಗೂ ಸಂಸ್ಕರಣಮಾಡುವ ಕಾರ್ಯದಲ್ಲಿ ನಿರಂತರ ನೆರವನ್ನು ನೀಡಿದರು. ಜುಲೈ ೧೯೫೭ ರಲ್ಲಿ ಸಂಸ್ಕರಣ ಕಾರ್ಯ ಮುಗಿಯಿತು. ನಮಗೆ ದೊರೆತ ಮೂರು ಪ್ರತಿಗಳಲ್ಲಿ ಮೂಲ ಮಾತೃಕೆಯನ್ನು ನಿರ್ಣಯಿಸಿ ಶಾಸ್ತ್ರೀಯ ದೃಷ್ಟಿಯಿಂದಲೇ ಸಂಸ್ಕರಣಕಾರ್ಯವನ್ನು ನೆರವೇರಿಸಲಾಯಿತು.

ಈ ಕಾರ್ಯವಲ್ಲಿ ನೆರವಾದ ಎಲ್ಲ ಮಹನೀಯರಿಗೂ ಹೃತ್ಪೂರ್ವಕವಾದ ಕೃತಜ್ಞತೆಗಳನ್ನರ್ಪಿಸುತ್ತೇನೆ.

ಪ್ರ ಣ ತಿ ಗ ಳು

ಧಾರವಾಡದ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಮೃತ್ಯುಂಜಯ ಮಹಾಸ್ವಾಮಿಗಳವರು ಪರಮದಾಸೋಹಮೂರ್ತಿಗಳು. ಅನ್ನ, ಸಾಹಿತ್ಯ, ಶಿವಾನುಭವ—ಈ ತ್ರಿವಿಧ ದಾಸೋಹವನ್ನು ಕೈಕೊಂಡು ಅವರು ಕನ್ನಡ ನಾಡಿಗೂ ವೀರಶೈವಧರ್ಮಕ್ಕೂ ಅಪಾರವಾದ ಸೇವೆಯನ್ನು ಸಲ್ಲಿಸುತ್ತಿರುವರು. ಖಿಲವಾಗಿ ಹೋಗುತ್ತಿದ್ದ ಹಳೆಯ ತಾಳೆಯೋಲೆಯ ಗರಿಗಳು ಅವರ ದಿವ್ಯ ಹಸ್ತ ಸ್ಪರ್ಶದಿಂದ ಕಣ್ದೆರೆದವು; ಬೆಳಕು ಕಂಡವು. ಅತ್ಯಮೌಲ್ಯವಾದ ಕುಸುಮಗಳು ಅರಳಿ ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರರ ಗ್ರಂಥಮಾಲೆ ಶೋಭಾಯಮಾನವಾಯಿತು; ಶಿವಯೋಗಿಗಳ ಸಿರಿಯಡಿಗಳಿಗೆ ಆ ಗ್ರಂಥಗಳು ಅರ್ಪಿತವಾದುವು. ಸಾಹಿತ್ಯದ ಪರಿಮಳ ಕನ್ನಡ ನಾಡಿನಲ್ಲೆಲ್ಲ ಪಸರಿಸಿತು. ಭಕ್ತಿಯ ಪುಷ್ಪಗಳು ಅರಳಿ ಮಗಮಗಿಸಿದುವು. ಶ್ರೀಗಳವರ ಈ ಸೇವೆಯನ್ನು ಬಣ್ಣಿಸುವ ಶಕ್ತಿ ಶಬ್ದಕ್ಕಿಲ್ಲ. ಅವರ ಸನ್ನಿಧಿಯಿಂದ ನೂತನ ಅನುಭವ ಮಂಟಪ ಶ್ರೀ ಮುರುಘಾಮಠದಲ್ಲಿ ಉದಯವಾದಂತಿದೆ. ಭಕ್ತರು, ಕವಿ ಗಮಕಿ ವಾದಿ ವಾಗ್ಮಿಗಳು, ವಿಮರ್ಶಕರು, ಸಂಶೋಧಕರು, ಕಲಾವಿದರು ಇವರೆಲ್ಲರ ಮೇಲೆ ಶ್ರೀಗಳವರ ಕೃಪೆ ಹೊನಲಾಗಿ ಹರಿದಿದೆ; ಹರಿಯುತ್ತಿದೆ. ಒಂದು ಬಗೆಯ ನವಚೈತನ್ಯವುಂಟಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಲ್ಲ.

ಅವರ ಪ್ರೇರಣೆಯಿಂದಲೇ ಪದ್ಮರಾಜಪುರಾಣ ಬೆಳಕು ಕಂಡಿದೆ. ಅವರ ಅಡಿದಾವರೆಗಳಲ್ಲಿ ಭಕ್ತಿಪುರಸ್ಸರವಾದ ಪ್ರಣತಿಗಳನ್ನರ್ಪಿಸುತ್ತೇನೆ.

ಈ ಗ್ರಂಥದ ಎಲ್ಲ ಅಂಗಗಳು ಸಿದ್ಧವಾಗುವಾಗ ನನಗೆ ಪೂರ್ಣ ಸಹಾಯವನ್ನು ನೀಡಿದವರು ನಮ್ಮ ಶ್ರೀ ಪಾಟೀಲ ಮಾಸ್ತರರು. ಅವರು ತಮ್ಮ ಮನೆ-ಮಾರು ಮರೆತು ಸಮಗ್ರ ೩-೪ ತಿಂಗಳ ಇಲ್ಲಿಯೇ ಉಳಿದು ಭಕ್ತಿಯ ಭಾವನೆಯಿಂದಲೂ ನಿಸ್ವಾರ್ಥಬುದ್ಧಿಯಿಂದಲೂ ಸಾಹಿತ್ಯಪ್ರೇಮದಿಂದಲೂ ನೆರವನ್ನಿತ್ತಿರುವರು. ೪-೫ ತಿಂಗಳಲ್ಲಿ ಈ ಗ್ರಂಥದ ಎಲ್ಲ ಕಾರ್ಯ ಮುಕ್ತಾಯವಾಗಬೇಕಾದರೆ ಅವರು ನೀಡಿದ ಸಾಹಾಯ್ಯ ಮಾಡಿದ ಆಗ್ರಹ ಇವೇ ಕಾರಣ. ಅವರಿಗೆ ಹೃತ್ಪೂರ್ವಕವಾಗಿ ವಂದನೆಗಳನ್ನರ್ಪಿಸುತ್ತೇನೆ.

ಅಚ್ಚಿನ ಕಾರ್ಯ ಆರಂಭವಾದುದು ೧೯-೮-೧೯೫೭ರಂದು. ಅದು ಮುಕ್ತಾಯವಾದುದು ೧೯-೧-೧೯೫೮. ಇದನ್ನು ಅವಲೋಕಿಸಿದರೆ ಲಿಂಗರಾಜ ಆರ್ಟ ಪ್ರೆಸ್ಸಿನವರ ಕಾರ್ಯದಕ್ಷತೆ, ಉತ್ಸಾಹ, ಪ್ರೇಮ, ಭಕ್ತಿ ಇವು ಸ್ಪಷ್ಟವಾಗುತ್ತವೆ. ಇಲ್ಲವಾದರೆ ಇಂತಹ ಗ್ರಂಥ ಇಷ್ಟು ಬೇಗ ಅಚ್ಚಾಗುವುದು ಸಾಧ್ಯವೇ ಇಲ್ಲ. ಶ್ರೀ ಬಿಳಗಿ ಬಂಧುಗಳ ಕೃತಜ್ಞತೆಯನ್ನು ನಾನಿಲ್ಲಿ ಸ್ಮರಿಸದಿರಲಾರೆ.

ಶಿವಯೋಗಿಗಳ ಅಡಿಗೆ, ಕನ್ನಡ ತಾಯಿಯ ಸಿರಿಮುಡಿಗೆ ಈ ಪುಷ್ಪವನ್ನರ್ಪಿಸಿದ್ದೇನೆ. ಕನ್ನಡಿಗರು ಇದನ್ನು ಆದರದಿಂದ ಬರಮಾಡಿಕೊಳ್ಳಬೇಕೆಂದು ಪ್ರಾರ್ಥನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ
೨೫-೧-೧೯೫೮

ಆರ್. ಸಿ. ಹಿರೇಮಠ

ಪದ್ಮಣಾಂಕಕವಿಕೃತ

ಪದ್ಮರಾಜಪುರಾಣ

ಪದ್ಮರಾಜ ಪುರಾಣ

ಕಥಾಸಾರ

ಪೀಠಿಕಾ ಸಂಧಿ

ಮಂಗಲಕರವಾಗಿ ಅಂಗದ ಮೇಲೆ ಧರಿಸಿದ ಕರಿಚರ್ಮವೇ ಮೇಘವಾಗಿ, ಕರ್ಣಮಂಡಲದಲ್ಲಿ ಶೋಭಿಸುವ ಆದಿಶೇಷನ ಘೋಷವೇ ಮೇಘನಿನಾದವಾಗಿ, ಕರದಲ್ಲಿ ಮೆರೆಯುವ ಖಡ್ಗದ ಕಾಂತಿಯೇ ಮಿಂಚಾಗಿ, ಸುರಸ್ತ್ರೀಯರು ಬೀಸುವ ಚಾಮರದ ಗಾಳಿಯಿಂದ ಜಟಾಗಂಗೆಯ ಜಲದಲ್ಲೇಳುವ ತುಂತುರಹನಿಗಳೇ ಮಳೆಯಾಗಿ ಇಂತು ಆವಾಗಳೂ ಮಳೆಗಾಲದಂತೆ ಶೋಭಿಸುವ ವಿಶ್ವಪತಿಯು ಲೋಕಹಿತಾರ್ಥವಾಗಿ ಶರಣಸಂದೋಹವೆಂಬ ಸಸ್ಯವನ್ನು ಸಂರಕ್ಷಿಸಲಿ. ದೇವಗಣದಿಂದ ವಿವಿಧ ಪೂಜೆಗಳನ್ನು ಸ್ವೀಕರಿಸುವುದರಿಂದ ವಿಶ್ವತಃಪಾದನೆನಿಸಿದನು, ಅವರೆಲ್ಲರನ್ನು ಕೃಪಾಕಟಾಕ್ಷದಿಂದ ನೋಡುವುದರಿಂದ ವಿಶ್ವತಃಚಕ್ಷುವೆನಿಸಿದನು, ತಂತ್ರತ್ರಯಿಯ ಮುಖವಾಗಿ ಬೋಧಿಸುವುದರಿಂದ ವಿಶ್ವತೋಮುಖನೆನಿಸಿದನು, ಭುಕ್ತಿಮುಕ್ತಿಗಳನ್ನು ಕೊಡುವುದರಿಂದ ವಿಶ್ವತೋಬಾಹುವೆನಿಸಿದನು, ವಿಷ್ಣುವಿನ ಮೇಗಣ ಸ್ಥಾನದಲ್ಲಿರುವುದರಿಂದ ವಿಶ್ವಪತಿಯೆನಿಸಿದನು, ಇಂತಹ ವಿಶ್ವನಾಥನಿಗೆ ಎರಗುವೆನು.

ಧಾನುಷ್ಕನೊಂದು ಗುರಿಹೊಡೆಯಲು ತಪ್ಪಿದರೆ ಶರಕೆ ಕುಂದೋ ಎಚ್ಚವನಿಗೆ ಕುಂದೋ, ಗಾನಿ ವೀಣೆಯನ್ನು ಬಾರಿಸಲು ತಾನು ಹೊರಡದಿದ್ದರೆ ಕೊರತೆ ಯಾರಿಗೆ, ವೀಣೆಗೋ ಗಾನಿಗೋ ? ನಾನು ನೀನಾಡಿಸುವ ಗೊಂಬೆಯಾದ ಕಾರಣ ಈ ಕಾವ್ಯಕೃತಿಯಲ್ಲಿ ಬಂದ ಹಾನಿವೃದ್ಧಿಗಳು ಎನಗೋ ನಿನಗೋ. ತಂದೆ ವಿಶ್ವಪತಿಯೇ ಇದನ್ನರಿದು ನೀನೆನ್ನ ನಡೆಸಬೇಕು. ಪಾತಕಸಮೂಹವನ್ನು ನಾಶಗೊಳಿಸುವ ವಿಶ್ವೇಶ್ವರಸಮೇತೆ ಹಿಮಗಿರಿತನೂಜಾತೆ ಮಹಾಮಾತೆ ಪಾರ್ವತಿ ನಮ್ಮನ್ನು ಸಂರಕ್ಷಿಸಲಿ. ಐರಾವಣ, ಮರಾಳ, ಆದಿಶೇಷ, ಕಾಮಧೇನು, ನಾರದ, ಸ್ಫಟಿಕ, ಕುಂದ, ಮಂದಾಕಿನಿ, ಕ್ಷೀರ, ಶರತ್ಕಾಲದ ಮೇಘಹಾರ, ಕರ್ಪೂರ, ಡಿಂಡೀರ, ಮಂದಾರ, ಶಶಿ, ತಾರ ಇವೆಲ್ಲವುಗಳ ಬೆಳಗನ್ನು ಬಸವಣ್ಣನವರ ಕೀರ್ತಿ

ಪ್ರಭೆಯು ಧಿಃಕರಿಸುತ್ತದೆ. ಇಂತಹ ಬಸವೇಶ್ವರನು ನಮ್ಮನ್ನು ಪೊರೆಯಲಿ. ಬಸವಗಣೇಶ್ವರನ ಮನೋರಮಣಿಯಾದ ಗಂಗಾಂಬಿಕೆಯ ವಿಮಲಪದಕಮಲ ಗಳನ್ನು ಆನು ಭ್ರಮರನಂತೆ ಒಂದಿ ನುಡಿಯಲು ಎನಗೆ ಇಂಚರಪ್ರಾಪ್ತವಾಗುವು ದೇನಾಶ್ಚರ್ಯವೇ ? ದಕ್ಷಾಧ್ವರಧ್ವಂಸಿಯಾದ ವೀರಭದ್ರೇಶ್ವರನು ನಮ್ಮನ್ನು ಕಾಯುವನು. ಧ್ಯೇಯನೊಬ್ಬನೇ ಶಿವ; ಆತನೇ ಕಲ್ಯಾಣವನ್ನುಂಟುಮಾಡುವನು. ಅವನೊಬ್ಬನನ್ನು ಬಿಟ್ಟು ಉಳಿದುದೆಲ್ಲ ತ್ಯಾಜ್ಯ ಎಂದು ನುಡಿವ ಅಥರ್ವವೇ ದೋಕ್ತಿಯಂತೆ ನಡೆದು ತನ್ನ ಅತುಲವಾದ ಶಿವಭಕ್ತಿಯನ್ನು ಪ್ರಕಟಪಡಿಸಿದ ಭೃಂಗಿಗೆ ಆನು ಲೆಂಗಿಯಪ್ಪೆನು. ಪರಶಿವನು ಸುತಮೋಹದಿಂದ ತನ್ನ ಐದು ಮುಖಗಳನ್ನು ಷಣ್ಮುಖನ ಐದು ಮುಖಗಳಲ್ಲಿಟ್ಟು ಮುದ್ದಾಡುತ್ತಿರಲು ಷಣ್ಮುಖನ ಉಳಿದ ಆರನೆಯ ಮುಖವೊಂದು ದೈನ್ಯರಸವನ್ನು ಸೂಸುತ್ತಿತ್ತು. ಅದನ್ನು ಪಾರ್ವತಿಯು ಕಣ್ಸನ್ನೆಯಿಂದ ಗಣಪತಿಗೆ ತೋರಿಸುತ್ತ ತೆಗೆದೆತ್ತಿ ಮುದ್ದಾಡಿ ಮೊಲೆ ಯೂಡಿದಳು. ಜಗನ್ಮಾತೆಯ ಮೊಲೆಯುಂಡು ನಲಿವ ಆ ಷಣ್ಮುಖನು ನಮಗೆ ಪ್ರಸಾದಸ್ತನ್ಯವನ್ನು ಕೊಡಲಿ. ಪ್ರಮಥಗಣಂಗಳು, ರುದ್ರಗಣಂಗಳು, ಅರುವತ್ತು ಮೂವರು ಪುರಾತನರು, ಷೋಡಶಗಣಂಗಳು, ತೇರಸರು, ದಶಗಣಂಗಳು, ಅಮರ ಗಣಂಗಳು, ಅಸಂಖ್ಯಾತಭಕ್ತರು ಎನ್ನ ಮನದ ಚಂಚಲತೆಯನ್ನು ತೊಲಗಿಸಿ ಅದು ಶಿವಪದದಲ್ಲಿ ಸ್ಥಿರವಾಗಿ ನಿಲುವಂತೆ ಮಾಡಲೆಂದು ಅವರಡಿಗಳಿಗೆ ವಂದಿಸುವೆನು. ಬೋಧಾಯನಾರ್ಯ, ಶಂಕರಾರ್ಯ, ಹರದತ್ತ, ತ್ರಿಲೋಚನ, ಅಘೋರ, ಶಿವ ದೇವ, ಭೂತಿಕಂಠಾದಿ ಪೂರ್ವಾಚಾರ್ಯರು ಎಮಗೆ ಅಮಲಮತಿಯನ್ನು ದಯ ಪಾಲಿಸಬೇಕು. ವೀರಮಾಹೇಶ್ವರಾಚಾರಸಂಗ್ರಹಶಾಸ್ತ್ರಕಾರನೆನಿಸಿದ ನೀಲಕಂಠ ನಾಗಾರ್ಯ, ಶ್ರೇಷ್ಠವಾದ ಬಸವರಾಜೀಯವನ್ನು ಬರೆದ ಪಾಲ್ಕುರಿಕೆಸೋಮೇಶ್ವರ, ಶಿವಜ್ಞಾನದೀಪಿಕೆಯನ್ನು ರಚಿಸಿದ ಮಲ್ಲಿಕಾರ್ಜುನಾಚಾರ್ಯ ಇವರೆಲ್ಲರಿಗೆ ವಂದಿ ಸುವೆನು. ಪ್ರತಿಪಕ್ಷವನ್ನು ಖಂಡಿಸುವುದರಲ್ಲಿ ಬಲ್ಲಿದನಾದ ಶಿವಲೆಂಕಮಂಚಣ್ಣ, ಪರವಾದಿಗಳಿಗೆ ಪ್ರಚಂಡಸ್ವರೂಪರಾದ ಶ್ರೀಪತಿಪಂಡಿತರು ಇವರೆಲ್ಲರ ಪಾದ ಕಮಲಗಳು ನಮ್ಮ ಹೃದಯಸರೋವರದಲ್ಲಿರಲಿ. ಬುಧರು ಸಂತಸದಿಂದ ಆಶ್ರ ಯಿಸುವ ಬಾಣ, ಶಿವಭಕ್ತನಾದ ಉದ್ಭಟ, ಅತುಳಕವಿರಾಘವಾಂಕ, ಕುಕವಿಗಳ ಮುಖಚಂದ್ರನಿಗೆ ರಾಹುಸ್ವರೂಪನಾದ ಭೋಜ, ಮಂಗಳಮಯನಾದ ಹರೀಶ್ವರ, ಸದಧೀಶದೇವನಾದ ಆರ್ಯಭೀಮ, ಗುರುಗಣಾಸ್ಪದನಾದ ಮಯೂರ, ಜಿತ ಕಂದರ್ಪನೆನಿಸಿದ ಮಲ್ಹಣ, ಲೋಕಾಪ್ತನಾದ ಭಾರವಿ ಈ ಕವಿವರರನ್ನು ನವಗ್ರಹಬಲಾರ್ಥವಾಗಿ ನಮಸ್ಕರಿಸುವೆನು. ಭೂತಕಾಲದಲ್ಲಿ ವಿಭೂತಿ ರುದ್ರಾಕ್ಷಿ ಮಂತ್ರ ಲಿಂಗಗಳನ್ನು ಧಾರಣಮಾಡಿ ಮೆರೆದ ಸತ್ಪುರುಷವೃಂದಕ್ಕೆ, ವರ್ತಮಾನ

ಕಾಲದಲ್ಲಿ ಶಿವನನ್ನು ಭಜಿಸಿ ಮೆರೆಯುತ್ತಿರುವ ಶರಣಸಂದೋಹಕ್ಕೆ ಭವಿಷತ್ ಕಾಲದಲ್ಲಿ ಶಿವಾವರನನ್ನು ಅರ್ಚಿಸಿ ಶೋಭಿಸುವ ಭಕ್ತತತಿಗೆ ನಮಸ್ಕರಿಸುವೆನು. ಅವರು ಈ ಕಾವ್ಯಕ್ಕೆ ಸರಸೋಕ್ತಿಗಳನ್ನಿತ್ತು ಇದನ್ನು ನಡೆಸಲೆಂದು ಪ್ರಾರ್ಥಿಸುತ್ತೇನೆ.

ಅನಘರೂ ಆನಂದರೂಪರೂ ಯತಿಶ್ರೇಷ್ಠರೂ ಪರಮಶಿವಯೋಗಿಗಳೂ ಶಾಂತಿಸಾಂದ್ರರೂ ಆದ ಶಿವಯೋಗಿಮಲ್ಲರಸರು (ಕವಿಯ ವಂಶದ ಮೂಲ ಪುರುಷರು) ಎನ್ನ ಮತಿಸರೋಜವನ್ನರಳಿಸಲಿ. ಶಿವಸಾಮರ್ಥ್ಯರೂಪ ಶಿವಯೋಗಿ ಮಲ್ಲರಸಾರ್ಯಶೇಖರಸೂನು ಆನತಜನರಿಗೆ ಕಾಮಧೇನು, ಭಕ್ತಜನರ ಮುಖಕಮಲಕ್ಕೆ ಭಾನು ಆಗಿರುವನು. ಹೀಗೆ ಅಭಿನವಮಹೇಶರೆನಿಸಿದ ಸಕಳೇಶ ಮಾದರಸರು ನಿರುಪಮಶಿವೈಕ್ಯರೂ ಸತ್ಯವಾಕ್ಯರೂ ಆಗಿ ಮೆರೆಯುವರು ಇವರು ಎನ್ನ ಮತಿಗೆ ಮಂಗಳವನ್ನುಂಟುಮಾಡಲಿ. ಶಿವಸುಖಾಬ್ಧಿಯಲ್ಲಿ ಮಗ್ನಹೃದಯರಾದ ಸಕಳೇಶಮಾದರಸರ ಸೂನು ಮಾಯಿದೇವಾರ್ಯರು. ಇವರು ಆಶಾಸಮೂಹವನ್ನು ವಿಚ್ಛೇದನಮಾಡಿದವರು, ಪಾಶುಪತಿಪದಾರ್ಥತ್ರಯಜ್ಞಾನ ಸಂಕಾಶರು, ಆಶಾಸಮೂಹಭ್ರಮಿತಕೀರ್ತಿವೈಮಲ್ಯಮೂರ್ತಿಗಳು. ಈ ಗುರುವರರು ತಮ್ಮ ತೇಜದಿಂದ ನನ್ನ ಮುಖಕಮಲವನ್ನರಳಿಸಲಿ. ಮಾಯಿದೇವಾರ್ಯರ ಗರ್ಭವೆಂಬ ಇಂದ್ರದಿಙ್ಮಂಡಲದಲ್ಲಿ ಉದಿಸಿದ ಮಾರ್ತಂಡರೂ ಶಿವಜ್ಞಾನಪಿಂಡರೂ ಸುಗುಣಮಣಿಕರಂಡರೂ ಭವಾಂಬುಧಿತರಣತರಂಡರೂ ಆದ ಕೆರೆಯ ಪದ್ಮಣಾರ್ಯರು ಒಲವಿನಿಂದ ಸನ್ಮತಿಯನ್ನೀಯಲಿ. ಆ ಕೆರೆಯ ಪದ್ಮಣಾರ್ಯರ ಉದರದಲ್ಲಿ ಪರವಾದಿಭೀಕರನೂ ವಿಲಸತ್ಕೃಪಾಕರನೂ ಜ್ಞಾನರತ್ನಾಕರನೂ ಆದ ಕುಮಾರಪದ್ಮರಸರು ಜನಿಸಿದರು. ಅವರೂ ಈ ಕೃತಿಯನ್ನೋವಲಿ. ನಿರುಪಮ ಕುಮಾರಪದ್ಮರಸಾರ್ಯರಾತ್ಮಜನೂ ಪರಮತಧ್ವಾಂತಪ್ರಚಂಡಭಾಸ್ಕರನೂ ಇಷ್ಟಲಿಂಗದಲ್ಲಿ ಸದ್ಯಃಪ್ರಸನ್ನತೆವಡೆದು ನಿರತಿಶಯ ಸಂವಿತ್ಸುಖವನೆಯ್ದಿದವನೂ ಆದ ಆರ್ಯಪ್ರಸರಚಕ್ರವರ್ತಿ ವಿಶ್ವಾರಾಧ್ಯರು ನಿರಂತರವಾಗಿ ನನ್ನ ನಾಲಗೆಯಲ್ಲಿ ನೆಲೆಗೊಳ್ಳಲಿ. ಆ ಮಹಾಮಹಿಮ ವಿಶ್ವಾರಾಧ್ಯರ ಉದರಾಬ್ಧಿಸೋಮನೂ ವಿವೇಕವಿಶ್ರಾಮನೂ ಶರಣಸಾರ್ವಭೌಮನೂ ಆದ ದೇವಾರಾಧ್ಯರು ನನ್ನ ಹೃದಯಕಮಲದಲ್ಲಿ ನೆಲೆಗೊಳ್ಳಲಿ. ಪದ್ಮರಸರು ನಿರ್ಮಿಸಿದ ಕೆರೆಯು ಅನಾವೃಷ್ಟಿಯಿಂದ ಬತ್ತಿರಲು ತನ್ನ ಭಕ್ತಿಪ್ರಭಾವದಿಂದ ಶಿವಸಾಕ್ಷಾತ್ಕಾರಮಾಡಿಕೊಂಡು ಮಳೆವಡೆದು ಆ ಕೆರೆಯನ್ನು ತುಂಬಿದವರು ದೇವಾರಾಧ್ಯರು. ಇಂಥ ದೇವಾರ್ಯರ ಮಕ್ಕಳು ಗೌರಣಾರ್ಯರು ಇವರು ಅನುಪಮಾಚರಣರೂ ಶಿವಾಗಮಾಭರಣರೂ ಆಗಿದ್ದು ದಿನಕ್ಕೆ ನೂರೊಂದು

ಕುಸುಮಗಳಿಂದ ಶಿವನನ್ನು ಪೂಜಿಸುವ ದೃಢವ್ರತವನ್ನು ಹಿಡಿದಿದ್ದರು. ಒಂದು ದಿನ ಅವರಿಗೆ ಏನುಮಾಡಿದರೂ ಶಿವಾರ್ಚನೆಗೆ ಹೂವು ದೊರೆಯಲಿಲ್ಲ. ಆಗ ಅವರು ನೂರೊಂದು ಪದ್ಯಗಳನ್ನು ರಚಿಸಿ, ಶಿವನನ್ನು ಸ್ತುತಿಸಿ ಮೆಚ್ಚಿಸಿ ಪದ ವೊಂದಕ್ಕೆ ಒಂದೊಂದು ಕುಸುಮವನ್ನು ಅವನಿಂದ ಪಡೆದು ತಮ್ಮ ವ್ರತವನ್ನು ಪೂರಯಿಸಿದರು. ದೇವರಸರೆಂಬವರು ಈ ಗೌರಣಾರ್ಯರ ಮಕ್ಕಳು. ಇವರು ಸುಜ್ಞಾನಿಗಳೂ ಉಜ್ವಲಕೀರ್ತಿವಂತರೂ ಶ್ರೇಷ್ಠಶಿವವ್ರತಿಗಳೂ ಆಗಿದ್ದರು. ಸಮಸ್ತಾಗಮಾಚಾರ್ಯಮುಖಮುಕುರನೂ ಶಿವಪೂಜಾನುರಕ್ತನೂ ಶಿವಾನು ಭಾವಿಯೂ ಆದ ವೀರಣಾಚಾರ್ಯನೆಂಬವನು ಇವರ ಸುತನು. ಈ ವೀರಣಾ ಚಾರ್ಯರ ಉದರದಲ್ಲಿ ಶಿವನ ದಾನಾಭಯದ ಕರಯುಗಳದಂತೆ, ವೃಷಭೇಂದ್ರನ ವೃಷಾಣದ್ವಯಗಳಂತೆ ಶಿವಯೋಗಿಯ ಚಿತ್‌ಕ್ರಿಯೆಗಳಂತೆ ಪದ್ಮಣಾರ್ಯ, ಚಾಮುಂಡಾರ್ಯರೆಂಬ ಕುವರರಿರ್ವರು ಜನಿಸಿದರು. ಇವರಲ್ಲಿ ಹಿರಿಯರಾದ ಪದ್ಮಣಾರ್ಯರ ಮಕ್ಕಳೇ ಈ ಕಾವ್ಯದ ಕರ್ತೃ ಪದ್ಮಣಾಂಕರು. ಇಂತಹ ಪುನೀತಾನ್ವಯದಲ್ಲಿ ಜನಿಸಿ ವಿಶ್ವನಾಥನ ನಿಷ್ಠಾವಂತಭಕ್ತನೂ ಕಲಾಭಿಜ್ಞನೂ ಆಗಮಜ್ಞನೂ ಉಭಯಕವಿತಾವಧೂವಶೀಕೃತನೂ ಶಿವಭಕ್ತಭೃತ್ಯನೂ ಆದ ತಾನು ಬರೆದ ಈ ಕಾವ್ಯವನ್ನು ಯಾರು ಮೆಚ್ಚಲಾರರು ! ರಸದಾಳಿಯ ಪಾಲ್ಬೊನಲಂತೆ, ಹೊಸಜೇನಸೋನೆಯಂತೆ,ಹುಣ್ಣಿವೆಯ ಚಂದ್ರನಿಂದೊಸರಿದ ಅಮೃತದ ತೊರೆಯಂತೆ ಕ್ಷೀರಸಮುದ್ರದ ಒತ್ತಿನಂತೆ ಅತ್ಯಂತ ಆನಂದಕರವಾದ ರಸಭರಿತಕಾವ್ಯವನ್ನು ರಚಿಸಿ ರಸಿಕರನ್ನು ಆನಂದಾಬ್ಧಿಯಲ್ಲಿ ಓಲಾಡಿಸುವುದು ಕವಿಯಾದವನ ಧರ್ಮ. ಹೀಗೆ ನುಡಿಯ ಬೆಡಗಿನ, ವಿಖ್ಯಾತರೀತಿಯ, ಸೂಸುವಪೊಸದೇಸಿಯ, ಮೃದು ಪದಸಂಪದದ, ಸತ್‌ಪ್ರಭಾಪೂರ್ಣವುಳ್ಳ ಭಾವದ ಕೃತಿಯನ್ನು ರಚಿಸಿ ಶಿವಾರ್ಪಿತ ಮಾಡುವ ನಿನ್ನ ಪುಣ್ಯಕ್ಕೆ ಸರಿದೊರೆಯುಂಟೇ ! ನೀನು ನಿಜವಾಗಿಯೂ ಪಾರ್ವತಿಯ ಪ್ರಸನ್ನ ಪ್ರಸಾದದಿಂದ ಬಳೆದವನಾದುದರಿಂದಲೇ ನಿನ್ನ ಉಕ್ತಿಗಳು ಹೀಗೆ ಸವಿಯಾದವಾಗಿರುವುವು. ಇಲ್ಲದಿದ್ದರೆ ಅವಕ್ಕೆ ಈ ವಿನಿರ್ಮಲತೆ, ಮಧು ರತೆ, ಸುಬದ್ಧತೆ, ಸನ್ಮೋಹನತೆಗಳು ದೊರೆಯುತ್ತಿದ್ದವೇ ಪದ್ಮಣಾಂಕಾ ಹೇಳು ? ಎಂದು ಸಕಲಕಲಾಪ್ರವೀಣರಾದ ಪಂಡಿತರು ಪದೆದು ಪ್ರೇರಿಸಲು, ಶಿವಭಕ್ತತತಿ ತನ್ನ ಕಂದನ ತೊದಲ್ನುಡಿಗಳೆಂದು ಪುಳಕಿತರಾಗಿ ಹಾಡಿ ಹರಸುತ್ತಿರಲು ಪದ್ಮರಸರ ಪಾದಕಮಲಗಳನ್ನು ಈ ವಾಕ್ಪುಷ್ಪದಿಂದರ್ಚಿಸುವೆನು. ಈ ನನ್ನ ಉತ್ಕರ್ಷವನ್ನು ಸಹಿಸದ ಕುಜನರು ಒಂದು ವೇಳೆ ಬಾಯ್ಗೆ ಬಂದಂತೆ ಹೀಗಳೆ ದರೂ ಅವರಿಗೆ ಸುಖವಾಗಲಿ. ಅದು ಎಂದಿಗೂ ಸ್ವಭಾವಗುಣ. ಸರ್ಪವಾಶ್ರ ಯಿಸುವುದೆಂದು ಅಂಜಿ ಮನೆಯನ್ನು ಮಾಡದಿರುವರೇ ? ಮುಳ್ಳು ನೆಡುವ

ವೆಂದು ಪ್ರಯಾಣ ನಿಲ್ಲಿಸುವರೇ ? ಶ್ವಾನಗಳುಂಟೆಂದು ರಾಜಮಾರ್ಗದಲ್ಲಿ ನಡೆಯದಿರುವರೇ ? ಮಾತ್ಸರ್ಯದಿಂದ ಮೂಢರು ಹಳಿಯುವರೆಂದು ಕವಿಗಳು ಸತ್ಕಾವ್ಯವನ್ನು ರಚಿಸದಿರುವರೇ ? ಇವರಿಗೆಲ್ಲ ದಿವ್ಯಮಂತ್ರ, ಕೆರ್ಪು, ಕೋಲು, ವಾಗ್ಬಂಧನಗಳ ನೆರವಿಲ್ಲವೇ ? ಪೂರ್ವದ ಕವಿಗಳಲ್ಲಿ ಕೆಲವರು ತಮ್ಮ ಕಾವ್ಯಾರಂಭದಲ್ಲಿ ದುರ್ಜನರಿಗೆ ನಮಿಸುವೆವೆಂದು ನುಡಿದಿರುವರು. ಅಜ್ಞರಾದವರಿಗೆ ಪ್ರಾಜ್ಞರು ನಮಸ್ಕರಿಸುವುದು ಉಚಿತವೇ ? ಅಜ್ಞನು ತನ್ನಿಂದ ತಾನೇ ನಮಸ್ಕರಿಸಿಕೊಳ್ಳುವನು ಹೇಗೆಂದರೆ:-ಸಭೆಯಲ್ಲಿ ಉನ್ನತರು ಕಾವ್ಯವನ್ನು ಮೆಚ್ಚಿ ಬಣ್ಣಿಸಲು ಅದನ್ನು ಕಂಡು ದುರ್ಜನರು ತಲೆಬಾಗುವರು; ಹಾಗು ಅಲ್ಲಿರುವುದು ಉಚಿತವಲ್ಲವೆಂದು ಲಜ್ಜೆಯಿಂದ ತಲೆಕೆಳಗೆಹಾಕುವರು. ಇದು ಸಮುಸ್ಕಾರವಲ್ಲವೇ ಮತ್ತೆ ಅವನಿಗೆ ಬೇರೆ ನಮಸ್ಕರಿಸುವುದೇಕೆ ? ಸತ್ಕಾವ್ಯವನ್ನು ಪ್ರಾಜ್ಞರರಿವಂತೆ ಮಲಿನಾತ್ಮರು ಅರಿಯರು. ಪುಷ್ಪದ ಸೌರಭವನ್ನು ಭ್ರಮರಗಳರಿವಂತೆ ಬಂಭರಗಳು ತಿಳಿಯಬಲ್ಲುವೇ ? ಅರಿಸಮಾಸ, ರಸಾಭಾಸ, ಅಚಮತ್ಕಾರ, ದುಸ್ಸಂಧಿ, ಅಪಶಬ್ದ, ಹೀನೋಪಮೆ, ಕರ್ತೃ ಕರ್ಮ ಕ್ರಿಯಾಪದಗಳ ಅಸಂಬಂಧ, ವಿಭಕ್ತಿದೋಷ, ಶಾಸ್ತ್ರವಿರೋಧ, ಛಂದೋಭಂಗ, ಪಾದಪೂರಣ ಮೊದಲಾದ ದೋಷಗಳನ್ನರಿಯದೆ ಬಾಯಿಗೆ ಬಂದಂತೆ ಬರೆದ ಕೃತಿ ಪಂಡಿತರ ಮನ್ನಣೆಯನ್ನು ಪಡೆಯದು. ಸತಿಸಪ್ತಮಿ, ರಳಕುಳಕ್ಷಳ, ಗಮಕಕ್ರಿಯಾಸಮಾಸಗಳು, ಶ್ರುತಿಸಹ್ಯಸಂಧಿ, ತದ್ಧಿತ ಅಪಭ್ರಂಶ ದೇಶೀಯಪದಗಳನ್ನು ಒಂದುಗೂಡಿಸಿ ಹೊಂದಿಸುವ ಸಮಾಸ, ಸಮಸಂಸ್ಕೃತ ವಿರಹಿತಾವ್ಯಯ ಸಂಸ್ಕೃತಲಿಂಗ, ಶಿಥಿಲತ್ವ ಮೊದಲಾದ ಲಕ್ಷಣಗಳನ್ನರಿವ ಪಂಡಿತರು ಈ ಕೃತಿಗೆ ಮೆಚ್ಚದಿರುವರೇ ? ಅರೆವಿರಿದ ತಾವರೆಯ ಬಂಡನುಂಡು ಆನಂದದಿಂದ ಮೈಮರೆದು ಝೇಂಕರಿಸುವ ಭ್ರಮರದ ಲೀಲೆಯಂತೆ ರಸಿಕರ ಮನವನ್ನು ಈ ಕಾವ್ಯ ಸೆಳೆಯದಿರುವುದೇ ? ಅಂಗಕ್ರೀಗಳೆಲ್ಲಾ ಲಿಂಗಕ್ರೀಗಳಾಗಿ ತನ್ನ ಇರವೆಲ್ಲ ಲಿಂಗದ ಇರವಾಗಿ ಲಿಂಗದ ಇರವೇ ತನ್ನದಾಗಿ ಕುಸುಮಗಂಧದ ತೆರದಿಂದ ಅನ್ಯೋನ್ಯವಾದ ಲಿಂಗಾಂಗಸಂಯೋಗಿಯ ಬೋಧದಂತೆ ಈ ಕಾವ್ಯ ವಿವೇಕಶೀಲರ ಚಿತ್ತವನ್ನು ಸೆಳೆಯಬಲ್ಲುದು. ರಸಾನಂದದಿಂದ, ಮರವೆಯಿಂದ, ಜಾಡ್ಯಭಾವದಿಂದ ಹಲವೆಡೆಗೆ ಕಂಡುಬರಬಹುದಾದ ದೋಷಗಳನ್ನು ಭಾಷಾಪ್ರವೀಣರು ಶಿವಾನುಭಾವಿಗಳು ಭಕ್ತಪ್ರಕರು ಒಲ್ದು ತಿದ್ದಬೇಕು. ಕಾಮನು ತನ್ನ ಹೂಬಾಣಗಳನ್ನು ತಿದ್ದುವಂತೆ ಕೇಳುವವರ ಕರ್ಣಕ್ಕೆ ಕಮನೀಯವಾಗುವಂತೆ ರಸಾಸ್ವಾದನೆ ಮಾಡುವವರ ಕಾಯಕ್ಕೆ ಸಿದ್ಧಿದೊರೆವಂತೆ ಈ ಕಾವ್ಯವನ್ನು ಹೇಳುವೆನು. ಇದು ಬಾಳಿನ ಭಾಗ್ಯದೇವತೆ, ಕಲಾವಿದರ ಚಿಂತಾರತ್ನ, ಅಮೃತದ ಸೊಗಸು. ಆಶೀರ್ವಚನ, ನಮಸ್ಕೃತಿ, ವಸ್ತುನಿರ್ದೇಶ, ಕವಿಕುಲಸ್ತುತಿ,

ಆತ್ಮಶಕ್ತಿಯ ವಿವರಣೆ, ಕುಕವಿಗಳ ಖಂಡನೆ ಮುಂತಾದುವು ಶಾಸ್ತ್ರಮಾರ್ಗದಿಂದ ಬಂದುವೆಂದು ಅವನ್ನು ಮನ್ನಿಸಿ ಈ ಕಾವ್ಯದಲ್ಲಿ ಬಳಸಿರುವೆನು ಮಹೇಶಭಕ್ತರ ಸಭೆಯೊಳಗೆ ಆತ್ಮಸ್ತುತಿಗೆ ಇಂಬಿಲ್ಲ. ಆತ್ಮಸ್ತುತಿಯ ಭಾರವನ್ನು ಕೋರಿ ಮೂರ್ಖ ನೆನಿಸುವುದು ನನಗೆ ಬೇಡ. ಪೂರ್ವದ ಕೃತಿಗಳು ಹಲವುಂಟು, ಅವುಗಳಂತೆ ಈ ನೂತನ ಕಾವ್ಯ ಹೃದ್ಯವಾಗಿರುವುದೇ ? ಎಂದು ಕೇಳಲಾಗದು. ಇದು ಹೃದ್ಯವೇ ಆಗಿದೆ. ಹೇಗೆದಂರೆ: ಹಳೆದುಪ್ಪವೆಷ್ಟಿದ್ದರೂ ಹೊಸಘೃತವು ಪ್ರಿಯ ವಲ್ಲವೇ ! ಅಂದಿನವರಿಂದಿನವರೆಂಬ ಭ್ರಾಂತಿ ಹೊಲ್ಲದು. ಅಶುದ್ಧದ ಮಡಲು, ಕೆಟ್ಟ ಒಡಲು ಇವನ್ನು ಹೊತ್ತು ಕರ್ಮದ ಕುತ್ತದಲ್ಲಿ ಕುದಿಯುವ ಹುಲ್ಲುಮಾನವ ರನ್ನೂ ಕ್ಷುದ್ರ ದೈವಗಳನ್ನೂ ಹೊಗಳಿ ಮತಿಯನ್ನು ಕೆಡಿಸಿಕೊಂಡರು ಅಧಮ ಕವಿಗಳು. ಅವರ ಮಾತೇಕೆ ಇಲ್ಲಿ ! ಸಮಸ್ತ ಲೋಕಾರಾಧ್ಯರೆನಿಸುವ ಪದ್ಮರಸ ದೇಶಿಕಶಿರೋಮಣಿಗಳಿಗೆ ಎನ್ನ ಮತಿಯನ್ನು ಮಾರಿಕೊಂಡಿರುವೆನು. ಮಾಹೇಶ್ವ ರರು ಎನ್ನ ಪ್ರತಿಜ್ಞೆಯನ್ನು ಲಾಲಿಸಬೇಕು. ಜಗತ್‌ಪ್ರಭುವೆನಿಪ ವಿಶ್ವನಾಥನನ್ನೂ ಆತನ ಪ್ರಮಥರನ್ನೂ ಸ್ತುತಿಸುವೆನು. ಅನ್ಯರನ್ನು ಬಣ್ಣಿಸಿದೊಡೆ ನಾನು ನಿಮ್ಮ ಪ್ರಸಾದಕ್ಕೆ ದೂರವಾಗಲಿ! ಗುರುವಿನಿಂದ ಅಧಿಕವಾದ ತತ್ವ ಬೇರೆ ಆವುದೂ ಇಲ್ಲ; ಗುರುವಾಙ್ಮನೋತೀತನು. ಎಂದು ಸಮಸ್ತ ಸೂಕ್ತಿಗಳು ಉಸಿರುತ್ತಿರಲು ಆ ಪರಾತ್ಪರಗುರುವನ್ನು ಈತನು ಸ್ತುತಿಸುವನಂತೆ ಇದು ಸರಿಯಲ್ಲ ಎಂದು ಎನ್ನ ದಿರಿ. ಪಾಪವೆಂಬ ಕತ್ತಲೆಯು ಏತರಿಂದ ಹರಿದುಹೋಗುವುದು ? ಗುರುಸ್ತುತಿ ಯಿಂದಲ್ಲವೇ ! ಎನ್ನ ಪಾಪಕ್ಷಯಾರ್ಥವಾಗಿ ಭಕ್ತಿಯೊಳು ಬಲ್ಲಂದದಿಂದ ಗುರುವ ಸ್ತುತಿಸುವೆನು. ಸಾಕ್ಷಾತ್ ಆದಿಕರ್ತನೆನಿಸಿದ ಮಹಾಕವಿ, ವಿದ್ಯಾಧಿಪತಿಯೆನಿಸಿದ ಬ್ರಹಸ್ಪತಿ, ಸಹಸ್ರನಾಲಗೆಯೊಳ್ಳ ಆದಿಶೇಷ ಮೊದಲಾದವರು ಹೊಗಳಿ ಗುರು ವನ್ನು ಕಂಡುದಿಲ್ಲ. ಅಲ್ಪಮತಿಯಾದ ನನಗೆ ಇದು ಶಕ್ಯವೇ ? ನನ್ನ ವಾಕ್‌ಶುದ್ಧಿ ಗಾಗಿ ಭಕ್ತಿಯಿಂದ ಗುರುನಾಥನನ್ನು ಬಣ್ಣಿಸುವೆನು. ಪದ್ಮರಸರು ಭಕ್ತಜನ ನೇತ್ರಕ್ಕೆ ಜೀವವಿದ್ದಂತೆ. ಅವರು ಭಕ್ತರಕ್ಷಾಮಣಿಗಳು; ಭಕ್ತವತ್ಸಲರು. ಇಂತಹರ ಕೃತಿಯನ್ನು ನಾನು ವಿರಚಿಸುವೆನು.

ಎರಡನೆಯ ಸಂಧಿ

ಪದ್ಮರಸರ ಜನನ

ಮೇರು ಪರ್ವತ! ಪರಶಿವನೇ ಪತಿ; ನಾವೆಲ್ಲರೂ ಪಶುಗಳು. ಎಂಬ ವಾಕ್ಯವನ್ನು ಪ್ರತಿಷ್ಠಾಪನೆಗೆಯ್ಯುವಂತೆ ದೇವತೆಗಳೆಲ್ಲ ನೆರೆದು ಸುವರ್ಣದಿಂದ ಸಮೆದು ನಿಲ್ಲಿಸಿದ ಜಯಸ್ತಂಭವೋ, ದೀಪಾರಾಧನೆಯೇ ಮಹಾಫಲದಾಯಕ ವೆಂದು ಭೂದೇವಿ ಶಿವನಿಗೆ ಬೆಳಗಲು ನೆತ್ತಿಯ ಮೇಲಿಟ್ಟುಕೊಂಡ ದೀಪವೋ ಎಂಬಂತೆ ಅದು ಮೆರೆಯುವುದು. ಅದರ ತೆಂಕಲ್ಗೆ ಬಿಂಕವಾಗಿ ಕರ್ನಾಟದೇಶ ವೊಪ್ಪುವುದು. ಅದರ ಮಧ್ಯದಲ್ಲಿ ಭೂದೇವಿಯ ಮುಖಚಂದ್ರಮನಂತೆ ಕಲ್ಲು ಕುರಿಕೆಯೆಂಬ ಪಟ್ಟಣವು ಶೋಭಿಸುವುದು. ಅಲ್ಲಿ ಪರಂಜ್ಯೋತಿಸ್ವರೂಪನೂ ವಿಶ್ವನಾಥನ ಸರ್ವಸಾಮರ್ಥ್ಯವೇ ಸಾಕಾರವಾದಂತಹನೂ ಆದ ಗುರು ಮಲ್ಲಿ ಕಾರ್ಜುನನು ಶೈವಸಾಮ್ರಾಜ್ಯವನ್ನೂ ಭೂಸಾಮ್ರಾಜ್ಯವನ್ನೂ ಸಂರಕ್ಷಿಸುತ್ತಿದ್ದನು. ಕಲ್ಲುಕುರಿಕೆ ರಾಜಧಾನಿ. ಅಲ್ಲಿಯ ಜನರೆಲ್ಲರನ್ನೂ ಈ ದೊರೆ ಲಿಂಗೈಕ್ಯರನ್ನು ಮಾಡಿದನು. ಭಕ್ತಿಲತೆ ಈತನ ನಿಮಿತ್ತದಿಂದ ಪಲ್ಲವಿಸಿ, ಪರ್ವಿ ಮಡಲಿಟ್ಟಿತು. ಕಡಲುಡಿಗೆಯಾದ ಪೊಡವಿಯಲ್ಲಿ ಹೀಗೆ ಉಲ್ಹಾಸದಿಂದ ಕೆಲವು ವರುಷ ಇದ್ದು, ಈ ಭೋಗಸುಖವನ್ನು ಒಲ್ಲದೆ ಮಾಯೆಯನ್ನು ನಾಯಿಯಂತೆ ಪರಿತ್ಯಜಿಸಬೇಕೆಂಬ ಉಕ್ತಿಯನ್ನು ಮನದಂದು ಅದನ್ನು ಬಿಡಲುದ್ಯುಕ್ತನಾದನು. ವೈರಾಗ್ಯದಿಂದ ಶ್ರೀಗಿರಿಗೆ ಹೋಗಿ ಮಲ್ಲಿಕಾರ್ಜುನನ್ನು ಸ್ಮರಿಸಲು ಆತನು ದೇಶಿಕಾಕಾರದಿಂದ ಬಂದು ಸಂತೈಸಿ, ಶ್ರೀಗಿರಿಯ ಮಹಿಮೆಯೆಲ್ಲವನ್ನೂ ತೋರಿಸಿ, ಆತನ ಚಿತ್ತಕ್ಕೆ ಅನುಗ್ರಹಮಾಡಿ, "ಯತಿಕುಲಕ್ಕೆ ಆರಾಧ್ಯನಾಗಿ ಈ ಬಿಲ್ವವನದಲ್ಲಿ ನಾನಿರುವ ವರೆಗೂ ನೀನಿರಬೇಕು. ಈ ನವ್ಯ ದಿವ್ಯ ಪುಣ್ಯಕ್ಷೇತ್ರದಲ್ಲಿ ನಾನೇ ನೀನಾಗಿ ಸಂಚರಿ ಸಬೇಕು" ಎಂದು ಪರಶಿವನು ಆಜ್ಞಾಪಿಸಿ ಆತನ ಹೃದಯದಲ್ಲಿಯೇ ಅಡಗಿದನು. ಆತನ ಅನುಗ್ರಹದಿಂದ ಶಿವಯೋಗಿಮಲ್ಲರಸರು ಅದೃಶ್ಯಾಕಾರರಾಗಿ ಶಿವಸ್ವರೂಪ ರಾದರು.

ಈ ಮಲ್ಲಿಕಾರ್ಜುನರಿಗೆ ಒಬ್ಬ ಮಗನಿದ್ದನು. ಈತನ ಪೂರ್ವಾಪರವೆಂದರೆ: ಪೂರ್ವದಲ್ಲಿ ರುದ್ರಗಣಂಗಳೊಳಗೆ ಸಹನೇಶ, ಗಗನೇಶರೆಂಬ ಗಣ್ಯರಿದ್ದರು.

ಒಮ್ಮೆ ಅದಾವಕಾರಣದಿಂದಲೋ ಗಗನೇಶನೆಂಬವನು ಚಿದಾನಂದಾನುಭವದಲ್ಲಿ ದ್ದಾಗ ಕ್ರಿಯಾನಿಷ್ಠರನ್ನು ನೋಡಿ ನಕ್ಕನು. ಅದನ್ನು ಕಂಡ ಅವನ ಸಹಚರ ಸಹನೇಶನು ಗಗನೇಶನಿಗೆ ಸಿಟ್ಟಿನಿಂದ "ನೀನು ಚಿದ್ವಿಶ್ರಮಣನೆಂಬಹಂಕಾರದಿಂದ ಸತ್ಕ್ರಿಯಾನಿರಸನಮಾಡಿದೆ. ಆದುದರಿಂದ ನೀನು ಭೂಮಿಯಲ್ಲಿ ಹುಟ್ಟಿ ಅಲ್ಲಿ ಹದಿನಾಲ್ಕುನೂರುವರುಷಗಳವರೆಗೆ ಕ್ರಿಯಾಜ್ಞಾನವಿಹಿತವಾದ ವೃತ್ತಿಯಲ್ಲಿ ಪ್ರವರ್ತಿಸಿ ಆ ಯುಗವನ್ನು ಪ್ರತಿಷ್ಠಾಪಿಸು. ಇದು ನಮ್ಮ ಶರಣಮಾರ್ಗ. ಸ್ತ್ರೀಯು ಎಷ್ಟೇ ಸ್ವಭಾವಸುಂದರಿಯಾಗಿದ್ದರೂ ವಸ್ತ್ರ ಭೂಷಣ ಸುಮಾಲ್ಯ ಪರಿಮಳಾದಿಗಳಿಂದ ಅಲಂಕೃತಳಾಗದಿದ್ದರೆ ಪುರುಷರು ಅವಳನ್ನು ಮೆಚ್ಚರು. ಅದರಂತೆಯೇ ಚಿದನ್ವಿತನಾದರೂ ಕ್ರಿಯಾರಹಿತನಾದವನನ್ನು ಶರಣರು ಒಪ್ಪರು. ಆದುದರಿಂದ ತದ್ಯುಗಪ್ರತಿಷ್ಠಾಪನೆ ಮಾಡಿ ಜಗದ್ಧಿತಕಾರಿಯಾಗು" ಎಂದನು. ಗಗನೇಶನು ಅದಕ್ಕೊಪ್ಪಿ ಮಲ್ಲಿಕಾರ್ಜುನ ಪ್ರಭುವಿಗೆ ಸುತನಾಗಿ ಜನಿಸಿ ಸಕಳೇಶಮಾದರಸರೆಂಬ ಹೆಸರಿನಿಂದ ಪ್ರಸಿದ್ಧನಾದನು. ಮಲ್ಲಿಕಾರ್ಜುನರು ವೈರಾಗ್ಯಸ್ಥರಾಗಿ ಶ್ರೀಗಿರಿಗೆ ಹೋಗಲು ಆತನ ರಾಜ್ಯಭಾರವನ್ನು ವಹಿಸಿ ಬಹುಕಾಲ ಪ್ರತಾಪದಿಂದ ರಾಜ್ಯವಾಳಿದರು; ಹರಭಕ್ತಿಯನ್ನು ಪ್ರತಿಷ್ಠಿಸಿದರು. ಈ ಪ್ರಕಾರ ಅತ್ಯಂತ ಸಂತೋಷದಿಂದಿರುವಾಗ ಒಂದು ದಿನ ಅವರಿಗೆ ತಮ್ಮ ತಂದೆಯಾದ ಮಲ್ಲರಸರ ವೈರಾಗ್ಯ ಸ್ಮರಣೆಯಾಯಿತು. ಆ ವಿಚಾರದಿಂದಾಗಿ ಅವರಿಗೂ ವೈರಾಗ್ಯವುತ್ಪನ್ನವಾಯಿತು. ಮನೆಬಿಟ್ಟು ಗಿರಿಯತ್ತ ಹೊರಟರು. ಕೂಡಲೆ ಅವರ ಹೆಂಡತಿ ಮಗ ಸೊಸೆ ಹಲಕೆಲವು ಬಕುತರು ಎಲ್ಲರೂ ಅವರ ಬೆನ್ನುಹತ್ತಿದರು. ಮಾದರಸರು ಮನದಲ್ಲಿ ಶಿವನೇ ನಾನು ಬಿಟ್ಟರೂ ನಿನ್ನ ಮಾಯೆ ನನ್ನನ್ನು ಬಿಡದು ಎನ್ನುತ್ತ ಪ್ರಯಾಣಬೆಳಿಸಿದರು. ದಾರಿಯಲ್ಲಿ ಭಕ್ತಿಕಾಂತೆಯ ಸವಿಸ್ತಾರ ರಮ್ಯೋರುಸ್ಥಳದಂತೆ ಶೋಭಿಸುವ ಅಂಬೆಯೆಂಬ ಊರಿತ್ತು. ಆ ಊರ ಭಕ್ತರು ಇವರು ಬರುತ್ತಿರುವ ಸುದ್ದಿಯನ್ನು ಕೇಳಿ ಸರ್ವಸಂಭ್ರಮದೊಡನೆ ಬಂದು ಇವರನ್ನು ಇದಿರ್ಗೊಂಡು ಕರೆದುಕೊಂಡು ಹೋಗಿ ಶ್ರದ್ಧಾಪೂರ್ವಕವಾಗಿ ಅಪೂರ್ವೋಪಚಾರಗಳಿಂದ ಸತ್ಕರಿಸಿದರು. ಮತ್ತು ತಮ್ಮ ನಿರ್ಮಲಭಕ್ತಿಪಾಶದಿಂದ ಅವರನ್ನು ಶ್ರೀಗಿರಿಗೆ ಹೋಗಗೊಡದೆ ಅಲ್ಲಿಯೇ ತಡೆದರು. ಇದೆಲ್ಲ ಶಿವನ ತಂತ್ರವೆಂದಂದುಕೊಂಡು ಮಾದರಸರು ಅಂಬೆಯಲ್ಲಿಯೇ ಉಳಿದರು. ಅಲ್ಲಿ ಶಿವಪೂಜೆಯೇ ಅವರ ಸರ್ವಸಂಭ್ರಮ; ಮೂವತ್ತೆರಡು ಬಗೆಯ ವೀಣೆಗಳಲ್ಲಿ ಶಿವನಿಗಿಷ್ಟವಾದುದನ್ನು ನುಡಿಸುವುದೇ ಅವರ ಭಕ್ತಿವಿಶೇಷ. ಪ್ರತಿದಿನದ ಪೂಜೆಗೆ ಹನ್ನೆರಡು ಹೊನ್ನು ಬೇಕು. ಊರ ಭಕ್ತರೇ ಪಾಳಿಯಿಂದ ಆ ವೆಚ್ಚವನ್ನು ವಹಿಸುತ್ತಿದ್ದರು. ಹೀಗೆ ಮಾದರಸರು ಆ ಊರಲ್ಲಿ ಒಂದು ಸಾವಿರದಾ ಮೂರುನೂರಾ ಮೂವತ್ತೆಂಟು ವರುಷಗಳ ಕಾಲ ಶಿವವೈಭವ

ದಲ್ಲಿದ್ದರು. ಹೀಗಿರಲು ಒಂದು ದಿನ ಪೂಜೆಯ ವೆಚ್ಚದ ಪಾಳಿ ಒಬ್ಬ ಬಡಭಕ್ತನ ಪಾಲಿಗೆ ಬಂತು. ದೇಶಿಕರ ಪೂಜೆಗೆ ಬೇಕಾದ ಧನ ಅವನಲ್ಲಿರಲಿಲ್ಲ; ದೊರೆಯಲೂ ಇಲ್ಲ. ಆದರೂ ಅವನು ಎದೆಗೆಡದೆ ತನ್ನ ಮಗಳನ್ನೊತ್ತೆಯಿಟ್ಟು ಹನ್ನೆರಡು ಹೊನ್ನುಗಳನ್ನು ತಂದು ಗುರುವಿನ ಪೂಜೆಗೆ ಅರ್ಪಿಸಿದನು. ಮಗಳು ಮಾದಾಂಬೆಯನ್ನು ಒತ್ತೆಯಿಟ್ಟುಕೊಂಡವನು ಅವಳು ಓಡಿಹೋಗಬಹುದೆಂಬ ಭಯದಿಂದ ಅವಳ ಕಾಲಿಗೆ ಬೇಡಿ ಹಾಕಿದನು. ಇತ್ತ ಗುರುವು ಲಿಂಗಾರ್ಚನೆ ಮಾಡಿ ಆರತಿಯನ್ನೆತ್ತುವಾಗ ಆ ಲಿಂಗದ ರಮ್ಯವಾದ ಗರ್ಭದಲ್ಲಿ ಆ ತರುಣಿಯು ಬೇಡಿಸಹಿತವಾಗಿ ಕಾಣಿಸಿಕೊಂಡಳು. ಗುರುವಿಗೆ ಅತ್ಯಾಶ್ಚರ್ಯವಾಯಿತು. ಭಕ್ತರನ್ನು ಕರೆದು ವಿಚಾರಿಸಲು ನಿಜಸಂಗತಿ ತಿಳಿಯಿತು. ಕರುಣೆಯಿಂದ ಕರಗಿ ಕೊರಗಿದ ಮಾದರಸರು ಹೊನ್ನುಕೊಟ್ಟು ಒತ್ತೆಯವನಿಂದ ಆ ಸತಿಯನ್ನು ಬಿಡಿಸಿದರು. ಮತ್ತು ತನ್ನಿಂದ ಭಕ್ತರಿಗೆ ಈ ತೆರನಾದ ವಿಪತ್ತು ಒದಗಿತೆಂದು ಮನದಂದು ಮಗನಾದ ಮಾಯಿದೇವಾರ್ಯರನ್ನು ಕರೆದು "ನೀನು ಇಲ್ಲಿಯೇ ಇರು. ನಿನ್ನುದರದಲ್ಲಿ ಕಾರಣಿಕಪುರುಷನೊಬ್ಬನು ಜನಿಸುವನು. ಆತನಿಂದ ಈಶಕೃತ್ಯವು ಪರಿಪೂರ್ಣವಾಗುವುದು." ಹೀಗೆ ತಾವು ಜ್ಞಾನಚಕ್ಷುವಿನಲ್ಲಿ ಕಂಡ ಭವಿಷ್ಯವನ್ನು ತಿಳಿಸಿ ಅವರನ್ನು ಅದಕ್ಕೆ ಒಪ್ಪಿಸಿದರು. ಅದರಂತೆ ಶಿಷ್ಯರೆಲ್ಲರನ್ನೂ ಸಂತಯಿಸಿ ಕಳಿಸಿ ತಾವು ವೈರಾಗ್ಯದಿಂದ ಶ್ರೀಗಿರಿಗೆ ಬಂದರು. ಅಲ್ಲಿ ಮಲ್ಲಿಕಾರ್ಜುನಯತಿಯನ್ನು ಅರಸುತ್ತ ಹೊರಟರು. ಯತಿಗಳು ನಿಜರೂಪವನ್ನಡಗಿಸಿ ಭೂತಿಯ ಬೆಟ್ಟದಾಕಾರದಲ್ಲಿ ದಾರಿಗೆ ಅಡ್ಡವಾಗಿ ಮಲಗಿದ್ದರು. ಮಾದರಸರು ಆ ಬೆಟ್ಟಾಕೃತಿಯ ತಲೆಯ ಕಡೆಗೆ ಮೂರು ವರ್ಷ ಪಾದದ ಕಡೆಗೆ ಎಂಟು ವರ್ಷ ಅಲೆದು ಅರಸಿದರು. ಗುರುದರ್ಶನ ಲಭಿಸಲಿಲ್ಲ. ಆದುದರಿಂದ ಅವರು ನಿಶ್ಚಲಚಿತ್ತರಾಗಿ ಅತಿ ದೈನ್ಯತೆಯಿಂದ ಗುರುಸ್ತುತಿಯನ್ನು ಮಾಡಲು ಮಲ್ಲಿಕಾರ್ಜುನಯೋಗಿಗಳು ಆ ಭೀಕರಾಕಾರವನ್ನು ತ್ಯಜಿಸಿ ಮುನ್ನಿನ ತಮ್ಮ ರೂಪುದೋರಿದರು. ಮಾದರಸರನ್ನು ಪ್ರೇಮದಿಂದ ಅಪ್ಪಿಕೊಂಡು ಆಶ್ರಮಕ್ಕೆ ಕರೆದೊಯ್ದು ಉಪಚರಿಸಿದರು. ಕೆಲವು ವೇಳೆ ಶಿವಾನುಭವದಲ್ಲಿ ಸಂದು ಆ ಮೇಲೆ "ಮಗನೇ, ನೀನು ಇನ್ನೂ ಐವತ್ತು ವರುಷ ಈ ಭೂಮಿಯಲ್ಲಿ ಇರಬೇಕಾಗಿದೆ. ನಮ್ಮ ಬಸವಾದಿ ಪ್ರಮಥರು ಶಿವಭಕ್ತಿವಿಸ್ತಾರಕ್ಕಾಗಿ ಕಲ್ಯಾಣದಲ್ಲಿ ಬಂದಿರುವರು. ನೀನು ಅವರೊಡನೆ ಇದ್ದು ಶಿವಭಕ್ತಿಯನ್ನು ಮೆರೆಯುತ್ತ ಈ ಕಾಲಾವಧಿಯನ್ನು ಕಳೆ" ಎಂದರು. ಮಾದರಸರು ಅದಕ್ಕೆ ಒಪ್ಪದೆ ನಿಮ್ಮಂಘ್ರಿಯನ್ನು ಬಿಡಲಾರೆನೆಂದರು. ಕಡೆಗೆ ಗುರುವೇ ಒಪ್ಪಿಕೊಂಡು ಮಾದರಸರಿಗೆ ತಪೋವಿಧಿಯನ್ನರುಹಿ ತಪವನ್ನೆಸಗಲು ಒಂದು ದಿನ ತಮ್ಮಲ್ಲಿಯೇ ಇಟ್ಟುಕೊಂಡರು. ಮರುದಿನ ಅವರ ಮನಸ್ಸನ್ನು ಪರೀಕ್ಷಿಸುವ ಸಲುವಾಗಿ

ಗೊಪೆಯ ರೂಪದಲ್ಲಿ ವಿಶೇಷವಾಗಿ ಕಾಡಹತ್ತಲು ಮಾದರಸರು ಸಿಟ್ಟಿಗೆದ್ದರು. ಆಗ ಮಲ್ಲಿಕಾರ್ಜುನರು ನಗುತ್ತ ನಿಜರೂಪುದೋರಿ ಶಾಂತಿ ದಾಂತಿಗಳನ್ನು ಬೋಧಿಸಿ "ಮಗುವೇ, ನಿನ್ನ ಆಯು: ಪ್ರಮಾಣ ಹದಿನಾಲ್ಕುನೂರು ವರುಷಗಳಾಗಲಿಕ್ಕೆ ಐವತ್ತು ವರುಷ ಉಳಿದಿವೆ. ಅವು ಸಂದೊಡನೆ ನಿನ್ನನ್ನು ಶಿವಸಂಯೋಗ ಸೌಖ್ಯದಲ್ಲಿ ಬೆರಸುವೆನು. ಈಗ ಬೇರೆ ನಿನ್ನಿಷ್ಟವೇನು ಬೇಡು ನೀಡುವೆನೆ"ನಲು ಮಾದರಸರು "ಹೊನ್ನು ಹೆಣ್ಣು ಮಾಯೆಗೀಡು, ಇಂದ್ರಪದವಿ ಕೈಲಾಸವಾಸಗಳು ಅಸ್ಥಿರ; ಆದುದರಿಂದ ಅವನ್ನು ನಾನು ಬೇಡಲಾರೆ. ನನ್ನ ಪ್ರಾಣದೊಡೆಯನಾದುದರಿಂದ ನನ್ನ ಮನಸ್ಸನ್ನು ನೀನೇ ಬಲ್ಲೆ" ಎಂಬೀ ಭಾವದ ಒಂದು ಗೀತವನ್ನು ರಚಿಸಿ, ಹಾಡಿ ನಮಸ್ಕಾರಮಾಡುತ್ತಿದ್ದಂತೆಯೇ ಗುರು ಮಲ್ಲಿಕಾರ್ಜುನರು ಅವರನ್ನು ಕಲ್ಯಾಣದಲ್ಲಿ ಬಸವಣ್ಣನವರ ಮುಂದೆ ಇಳುಹಿದ್ದರು. ಬಸವಣ್ಣನವರು ಕರಸ್ಥಳದ ಲಿಂಗದಲ್ಲಿ ಮಾದರಸರ ಬರವನ್ನು ಕಂಡು ನಲಿದು ಅವರಲ್ಲಿಗೆಯ್ತಂದು ದಂಡಪ್ರಣಾಮಂಗೈದರು; ಅವರನ್ನು ಸತ್ಕರಿಸಿ ಅವರೊಡನೆ ಪರಮಾನುಭವ ಗೋಷ್ಠಿಯಲ್ಲಿ ಇರತೊಡಗಿದರು. ಹೀಗಿರುವಾಗ ಒಂದು ದಿನ ಚಿಕ್ಕಮಾದಣ್ಣನೆಂಬ ಅವರ ಪ್ರಿಯಶಿಷ್ಯನೊಬ್ಬನು ಮನೆಯೊಳಗೆ ಇದ್ದಕ್ಕಿದ್ದಂತೆ ಲಿಂಗೈಕ್ಯನಾಗಲು ಅವನ ಮಗ ಬಂದು ನಿಜಸ್ಥಿತಿಯನ್ನು ಮಾದರಸರಿಗೆ ತಿಳಿಸಿದನು. ಇದು ಸಕಲೇಶ್ವರನ ನಿರೂಪವೆಂದೆಣಿಸಿ ಮಾದರಸರು ಆ ಶಿಷ್ಯನ ಮನೆಗೆ ಹೋಗಿ ಪೆಸರ್ಗೊಂಡು ಕರೆದಾಕ್ಷಣವೇ ಆತನಿಗೆ ಅಸು ಬಂದಿತು. ಮುಂದೆ ಬಸವಾದಿ ಪ್ರಮಥರಿಗೆ ಮುಕ್ತಿಯನ್ನು ದಯಪಾಲಿಸಿದರು. ಅಂದಿಗೆ ಐವತ್ತು ವರುಷಗಳು ಮುಗಿಯಲು ಅಲ್ಲಿಂದ ಹೊರಟರು. ದಾರಿಯಲ್ಲಿ ಗೊಪೆಯ ಶಿವದೇವನೆಂಬ ವೀರವ್ರತಿಯ ಪುರವು ಶೋಭಿಸುತ್ತಿತ್ತು. ಗೊಪೆಯ ಶಿವದೇವನು ಸೀಮಾಲಂಘನವ್ರತವನ್ನು ಹಿಡಿದು ತನ್ನ ಮನೆಯಲ್ಲಿಯೇ ಒಂದು ಗುಹೆಯನ್ನು ತೋಡಿಕೊಂಡು ಅದರಲ್ಲಿರುತ್ತಿದ್ದನು. ಅವನು ತನ್ನ ಈ ವ್ರತಕ್ಕೆ ಕೊರತೆ ಬಂದರೆ ಅಸುಗಳೆವೆನೆಂಬ ನಿಷ್ಠೆಯುಳ್ಳವನಾಗಿದ್ದನು. ಸಕಲೇಶಮಾದರಸರ ಅಡಿದಾವರೆಯಲ್ಲಿ ಅಪಾರವಾದ ಭಕ್ತಿಯು ಆತನಿಗಿತ್ತು. ಇಂತು ಅಸಮನಾದ ಶಿವದೇವನ ಪುರವನ್ನು ಪ್ರವೇಶಿಸಿ ಸಕಲೇಶಮಾದರಸರು ಅವನ ಮನೆಗೆ ಬಂದರು. ಅವರನ್ನು ಕಂಡೊಡನೆಯೇ ಶಿವದೇವನು ಸಾಷ್ಟಾಂಗದಿಂದ ನಮಸ್ಕರಿಸಿ ಮತ್ಪ್ರಾಣೇಶಾ ಭವನಾಶಾ, ನಾನು ಧನ್ಯನಾದೆನು ಎಂದು ನುತಿಸಿ ಅವರನ್ನು ಸತ್ಕರಿಸಿದನು. ಬಸವಾದಿಪ್ರಮಥರು ಐಕ್ಯವಾದ ವಿಷಯವನ್ನು ಅವರಿಂದ ತಿಳಿದುಕೊಂಡರು. ಗುರುದೇವದರ್ಶನವು ಪ್ರಾಣದಂತೆ ಪ್ರಾಪ್ತವಾಗಿರಲು ಇದೇ ಸಮಯವೆಂದು ಶಿವದೇವನು ಪ್ರಾಣಲಿಂಗದಲ್ಲಿ ಅಡಗಿದನು. ಸ್ಥಿರಂಜೀವಿಯಾದ ಶಿವದೇವನನ್ನು ಹೀಗೆ ಮೆರೆದು ಆತನನ್ನು

ಹೊಗಳುತ್ತ ಸಕಲೇಶಮಾದರಸರು ಅಲ್ಲಿಂದ ಮುಂದೆ ನಡೆದರು. ಮುಂದೊಂದು ಊರಲ್ಲಿ ಮಹಲಿಂಗರಾಮನವೀರನೆಂಬ ಪರಮಶಿವಭಕ್ತನ ಮನೆಗೆ ಹೋದರು. ಗುರುವನ್ನು ಕಂಡ ಆತನು ವಿನಯದಿಂದ ಸಾಷ್ಟಾಂಗನಮಸ್ಕಾರ ಮಾಡಿ“ಗುರುವೇ ಈ ಮರ್ತ್ಯದಲ್ಲಿ ಇನ್ನು ನಾನಿರಲಾರೆನು ಕರುಣಿಸಬೇಕು” ಎಂದು ಬಿನ್ನವಿಸಿದನು. ಅವನ ಇಚ್ಛೆಯಂತೆ ಮಾದರಸರು ಮಹಾಶಿವಸೂಕ್ತಿಯನ್ನು ನೆನೆಯುತ್ತ ಅವನ ಮಸ್ತಕದ ಮೇಲೆ ಹಸ್ತವನ್ನಿಡಲು ಆತನು ಲಿಂಗದೊಳಗಾದನು. ಮುಂದೆ ಮಾದರಸರು ಶ್ರೀಗಿರಿಯ ಆಶ್ರಮಕ್ಕೆ ಹೋಗಿ ಮಲ್ಲರಸರನ್ನು ಕಂಡು ನೀರಲ್ಲಿ ನೀರು, ಅಮೃತದಲ್ಲಿ ಅಮೃತವು ಬೆರೆತಂತೆ ಶಿವಲಿಂಗದಲ್ಲಿ ಐಕ್ಯರಾದರು; ನಿರಾವರಣ ನಿರುಪಾಧಿಕ ಚಿದಾಂಬುಧಿಯಲ್ಲಿ ಓಲಾಡತೊಡಗಿದರು.

ಇತ್ತ ಅಂಬೆಯೂರಲ್ಲಿ ನಿರುಪಮಚರಿತ್ರನಾದ ಮಾಯಿದೇವಾರ್ಯನು ಭಕ್ತರ ಪ್ರಾರ್ಥನೆಗಳಿಂದ ಶಿವನಿಷ್ಠೆ ಬಲಿದು ಭಕ್ತಿತ್ರಯಪ್ರತಿಷ್ಠಾಪನಮಾಡುತ್ತ ಸಕಲ ವೇದ ಆಗಮ ಶಾಸ್ತ್ರ ಶಬ್ದ ತರ್ಕ ನ್ಯಾಯ ಮೊದಲಾದವುಗಳಲ್ಲಿ ಅಪಾರ ಜ್ಞಾನ ವನ್ನಳವಡಿಸಿಕೊಂಡು ದೃಷ್ಟಾಂತಪೂರ್ವಕವಾಗಿ ಪರವಾದಿಗಳನ್ನು ಜಯಿಸುತ್ತ ಮಹಾದೇವನೇ ದೇವನು, ಅವನ ಭಕ್ತರೇ ಕುಲಜರು. ಎಂಬುದನ್ನು ಸಂಸ್ಥಾಪಿಸಿ ಸತಿ ಮಂಗಳೆದೇವಿಯೊಡನೆ ಕೆಸರೊಳಗಣ ಕಮಲದಂತೆ ವಿಷಯದೊಳಗಿದ್ದೂ ಇಲ್ಲ ದಂತೆ ಒಪ್ಪುತ್ತಿದ್ದನು. ಆತನ ಸತಿ ಮಂಗಳೆದೇವಿ ಶಿವಭಕ್ತಿ ಗುರುಭಕ್ತಿ ಜಂಗಮ ಭಕ್ತಿ ಪತಿಭಕ್ತಿ ಮುಂತಾದ ಸದ್ಭಕ್ತಿಸಮುದಯವೆಲ್ಲವೂ ಇವಳಿಂದ ಒಗೆದವೆಂಬಂತೆ ಭಕ್ತಿಯುತೆಯಾಗಿದ್ದಳು. ಮಾಣಿಕಕೆ ಮರಕತಕೆ ಮೌಕ್ತಿಕಕೆ ಗುಣ ರತಿ ವಿನಿರ್ಮ ಲತೆಯೆಲ್ಲ ಮಂಗಳೆದೇವಿಯರ ಮಹಾಗುಣದಿಂದ ಶಿವಾರ್ಚನಾಭಿರತಿಯಿಂದ ಮತ್ತು ಅವರ ವಿನಿರ್ಮಲತೆಯಿಂದ ಉಂಟಾದುವು; ಇಲ್ಲದಿರೆ ಪಾಷಾಣಜಾತಿಗೆ ಇವೆಲ್ಲಿಯವು ? ಇಂತು ಸಲ್ಲಕ್ಷಣಾನ್ವಿತೆಯೆನಿಸಿ ಮೆರೆವ ಸೀಮಂತಿನೀಸೀಮಂತ ಮಣಿ ಮಂಗಳೆದೇವಿಯೊಡನೆ ಮಾಯಿದೇವಾರ್ಯನು ಹರುಷದಿಂದ ಕಾಲಕಳೆಯು ತ್ತಿದ್ದನು. ಹೀಗಿರಲು ಶಾಂತಿರೂಪನು ಕಾರಣಿಕನು ಆದಿಪುರುಷನು ಶಂಭುವಿನ ಶಕ್ತಿಸ್ವರೂಪನು ಆದ ಮಹಾತ್ಮನು ಲೋಕಹಿತಾರ್ಥವಾಗಿ ಮಂಗಳೆದೇವಿಯರ ಗರ್ಭವನ್ನು ಪ್ರವೇಶಿಸಿದನು. ಕಣ್ಗಳ ಸಿರಿ, ಅಲರ್ವಕ್ಕಿಗಳ ಪಳಿವ ನುಣ್ಗುರುಳ ನೀರೆ, ತುಂಬುಚೆಂದಿರನಂದದ ಮೊಗದ ಚೆಲ್ವೆ, ಸೈಪಿನ ನಡೆ, ಸುಗ್ಗಿಯ ಸೋರಿ ಪೆಣ್ಗಳರಸಿ ಆದ ಮಂಗಳೆದೇವಿಗೆ ಗರ್ಭಚಿಹ್ನವಂಕುರಿಸಿತು. ಶಿವನನ್ನು ಶಿವಭಕ್ತರನ್ನು ಅರ್ಚಿಸುವ ಬಯಕೆ, ಅವರು ಇಚ್ಛಿಸಿದುದನ್ನು ನೀಡುವ ಬಯಕೆ, ಶಿವಮಹಿಮೆ ಯನ್ನು ಕೇಳುವ ಬಯಕೆ, ಶಾಸ್ತ್ರಗಳನ್ನರಿವ ಬಯಕೆ, ಆರ್ತರನ್ನು ಪೊರೆವ ಬಯಕೆ ಮಂಗಳೆದೇವಿಗೆ ಆದುವು. ನಿತ್ಯತೃಪ್ತಮಹಾಮಹಿಮನು ಗರ್ಭದಲ್ಲಿದ್ದುದರಿಂದ

ಅನ್ನದ ಇಚ್ಛೆ ತಪ್ಪಿತು. ಚಿತ್ಸುಧಾರುಚಿಜ್ಞನು ಗರ್ಭಸ್ಥನಾಗಿದ್ದಕಾರಣ ಆಕೆಗೆ ವಿವಿಧ ವಸ್ತುಗಳಲ್ಲಿ ಅರುಚಿಯುಂಟಾಯಿತು. ಅಂತಃಕಲಾಕಾಂತಿಲೋಲನು ಒಳಗಿದ್ದಕಾರಣ ಬೆಳಗು ಹೊರಹೊಮ್ಮಿ ಕೋಮಲೆಯ ತನು ಬೆಳ್ಳಗಾಯಿತು. ಒಳಗಿದ್ದ ಶಿಶು ಶಿವಾರ್ಪಿತವಲ್ಲದುದಕ್ಕೆ ಹೇಸಿದನೆಂಬಂತೆ ಆಕೆಗೆ ಓಕರಿಕೆಯಾಯಿತು. ಲಿಂಗಪ್ರಸಾದಕ್ಕೆ ಬಾಯ್ಬಿಡುವನೆಂಬಂತೆ ಮಂಗಳೆದೇವಿಗೆ ಆಕುಳಿಕೆಯಂಕುರಿಸಿತು. ಶಿವಾನುಭವದಿಂದ ಆತನು ಪರವಶನಾದನೆಂಬಂತೆ ಆಕೆಗೆ ನಿದ್ರೆಬಂದಿತು. ಶಿವಭಕ್ತಿಲತೆಯು ಈತನಿಂದ ಮುಂದೆ ಈ ರೀತಿಯಾಗಿ ಕವಲೊಡೆವುದೆಂದು ತೋರುವಂತೆ ಮಂಗಳಾಂಗಿಯ ಮುಂಗುರುಳುಗಳು ಪ್ರಚುರವಾದುವು. ಪರವಾದಿಗಳ ವದನಗಳು ಹೀಗೆ ಕಂದುವವೆಂದು ತೋರಿಸುವಂತೆ ಕುಚಚೂಚಕಗಳು ಕಪ್ಪಾದುವು. ಈ ಮಗುವಿನಿಂದ ತಾಪತ್ರಯಗಳು ಅಳಿವುವೆಂಬುದನ್ನು ಪ್ರಕಟಪಡಿಸುವಂತೆ ತ್ರಿವಳಿಗಳಡಗಿದುವು. ಶಿವಸಮಯವೀರೀತಿ ಬಳೆವುದೆಂಬುದನ್ನು ಸೂಚಿಸುವಂತೆ ಕೂಸು ಗರ್ಭದಲ್ಲಿ ಬಳೆದುದು, ಅಮಲಶಿಶು ತಾಯ ಗರ್ಭದಲ್ಲಿ ಹೀಗೆ ಅನುಪಮವಾದ ಸುಖದಿಂದಿರುತ್ತಿರಲು ಒಂದು ರಾತ್ರಿ ಮಾಯಿದೇವಾರ್ಯರು ಯೋಗನಿದ್ರಾಮುದ್ರೆಯಿಂದಿದ್ದರು. ಆಗ ನಸುಗಾವಿಹೊಳೆಯುವ ದೋತ್ರ, ಲಸಿತಭಸಿತ, ರುದ್ರಾಕ್ಷಮಾಲೆ, ಕರದಪುಸ್ತಕ ಇವೆಲ್ಲ ಮೆರೆಯಲಾಗಿ ಕಾಶೀಪುರವರಾಧೀಶ್ವರನು ಯತಿವೇಷಧಾರಣಮಾಡಿ ಮಾಯಿದೇವಾರ್ಯನ ಹತ್ತಿರ ಬಂದು ಕೈಯೊಳಗಣ ಬೆತ್ತದಿಂದ ಹೊಡೆದು ''ಎಲೆ ಮಗನೇ, ಏಳೇಳು'' ಎಂದು ನುಡಿದನು. ಮಾಯಿದೇವಾರ್ಯನು ಕಣ್ದೆರೆದು ನೋಡಿ ಅಪ್ರತಿಮ ಯತಿವರನನ್ನು ಕಂಡು ಪುಳಕಿತನಾಗಿ ನಮಸ್ಕರಿಸಿ ಭಯಭಕ್ತಿಯಿಂದ ನುತಿಸಿದನು. ವಿಶ್ವನಾಥನು "ಎಲೆ ಮಗನೇ, ಇನ್ನೆರಡು ಪ್ರಹರಗಳಲ್ಲಿ ಕಾರಣಿಕನೋರ್ವನು ನಿನಗೆ ತನಯನಾಗಿ ಜನಿಸುವನು. ಆತನಿಂದ ನಮ್ಮ ಶಿವಸಮಯವು ಪ್ರಬಲವಾಗುವುದು; ಸಫಲವಾಗುವುದು. ಆತನು ಎನ್ನ ಮಗನು. ಅವನಿಗೆ ಈ ಮಹಾ ದಿವ್ಯಲಿಂಗವನ್ನು ಧರಿಸು." ಎಂದು ನುಡಿದು ಲಿಂಗವೊಂದನ್ನು ಮಾಯಿದೇವರ ಕೈಯಲ್ಲಿರಿಸಿದನು. ಮತ್ತು "ಅವನು ಎಲ್ಲರ ಅಂತಸ್ತಮವನ್ನು ಹರಿಸುವವನಾದುದರಿಂದ ಅವನಿಗೆ ಪದ್ಮರಾಜನೆಂದು ಹೆಸರಿಡು. ಇದನ್ನರುಹಲೆಂದೇ ನಾವು ಅಲ್ಲಿಂದಿಲ್ಲಿಗೆಯ್ತಂದೆವು. ಇನ್ನು ಎಮ್ಮಾಶ್ರಮಕ್ಕೆ ಹೊರಡುವೆವು." ಎಂದು ಯತಿಯು ನುಡಿಯಲು "ದೇವರ ಅಭಿಧಾನವಾವುದು, ತಮ್ಮ ಆಶ್ರಮವೆಲ್ಲಿ ಕರುಣಿಸಬೇಕು." ಎಂದು ಮಾಯಿದೇವನು ಪ್ರಾರ್ಥಿಸಿದನು. ''ಎಮ್ಮ ಆಶ್ರಮವಿರುವುದು ಕಾಶೀಪುರದಲ್ಲಿ. ಪರಕ್ಷೇತ್ರದಲ್ಲಿ ಮಾಡಿದ ಪಾಪ ಆ ಕ್ಷೇತ್ರದಲ್ಲಿ ಬಯಲಾಗುವುದು. ಶಿವನ ಜಟಾಗ್ರದೊಳಗಣ ಗಂಗೆ ಅಲ್ಲಿ ಭಾಗೀರಥಿಯಾಗಿ ಹರಿದಿರುವಳು. ಅದರ ಬೆಡಗನ್ನು ಬಣ್ಣಿಸಲು ಅಸಾಧ್ಯ. ಇಂತು ಪುಣ್ಯತಮವಾದ

ಸುಂದರವಾದ ತಾಣದಲ್ಲಿ ನಾವು ವಾಸಿಸುವೆವು. ಎಮ್ಮ ಹೆಸರು ವಿಶ್ವನಾಥಯೋಗಿ. ತಮ್ಮಾ, ನಿಮ್ಮ ಪಿತೃವಂಶದವರು ತಮ್ಮ ಮಕ್ಕಳು ಒಂದಿನಿತು ಬಳೆದೊಡನೆಯೇ ವೈರಾಗ್ಯಭಾವನೆಯಿಂದ ಸಕಲ ಸಾಮ್ರಾಜ್ಯವನ್ನೂ ತೃಣಕೆ ಎಣೆಗಂಡು ಅದನ್ನು ತ್ಯಜಿಸಿ ಶಿವನಲ್ಲಿ ಒಡವೆರೆದರೆಂದು ಎಮ್ಮ ಕಡೆ ಸುದ್ದಿಯಾಗಿರುವುದು. ನೀನೇನು ಸಾಮಾನ್ಯನೇ ? ನಿನ್ನ ಮಗನು ಬಳೆದೊಡನೆಯೇ ಎಮ್ಮೂರಿಗೆ ಬಾ. ಅಲ್ಲಿ ಸುಖದಿಂದಿರು.'' ಎಂದು ಹೇಳಿ ಯತೀಂದ್ರನು ಅದೃಶ್ಯನಾದನು. ಮಾಯಿದೇವಾರ್ಯನು ಸುತ್ತೆಲ್ಲ ನೋಡಿದನು. ಯತಿಶ್ರೇಷ್ಠನು ಎಲ್ಲಿಯೂ ಕಾಣಲಿಲ್ಲ. ಮನದಲ್ಲಿ ಆಶ್ಚರ್ಯಪಟ್ಟು ಪಂಚಾಕ್ಷರಿಮಂತ್ರ ಪಠನಮಾಡಲು ಆ ಮಂತ್ರಯೋಗದಲ್ಲಿ ಯತೀಂದ್ರನ ದರುಶನವಾಯಿತು ಜಗದ್ವ್ಯಾಪಕನಾದ ವಿಶ್ವನಾಥನೇ ಆ ಯತಿಶ್ರೇಷ್ಠನು; ಆತನಿಲ್ಲದ ತಾಣವಿಲ್ಲ. ಎಮ್ಮ ಮೇಲಣ ಕೃಪೆಯಿಂದಲೇ ಆ ಕಾಶೀಪುರವರಾಧೀಶ್ವರ ಇಲ್ಲಿಗೆ ಆಗಮಿಸಿದನು. ಎಂದು ಸಂತೋಷದಿಂದ ಹಿಗ್ಗಿ ಹಾಡಿದನು ಮತ್ತು ಸಕಲ ಶಿವಭಕ್ತರನ್ನು ಕರೆಸಿ ಸತ್ಕರಿಸಿ ನಡೆದ ಸಂಗತಿಯನ್ನೆಲ್ಲ ಅವರಿಗೆ ತಿಳಿಸಿದನು. ಅವರು ಹಿರಿ ಹಿರಿ ಹಿಗ್ಗುತ್ತ ''ಧನ್ಯ! ಪುಣ್ಯಾತ್ಮ!! ನಿನಗಾರು ಸರಿ!!!'' ಎಂದು ಧನ್ಯವಾದಗಳನ್ನರ್ಪಿಸಿದರು. ಇತ್ತ ಮಂಗಳೆದೇವಿಯ ಗರ್ಭದಲ್ಲಿ ಶಿವಯೋಗಸುಖದಲ್ಲಿದ್ದ ಶಿಶುರೂಪೀಚಿದ್ಭಾನು ಕುಮತಕೌಶಿಕಗಳ ಕಣ್ಮುಚ್ಚಿಸಲು, ಭಕ್ತಹೃತ್ಕಮಲಗಳನ್ನು ಅರಳಿಸಲು, ಅವಿದ್ಯಾತಮವನ್ನು ಸವರಲು ಶಿವಪ್ರೇರಣೆಯಿಂದ ಮಂಗಳೆದೇವಿಗೆ ಆವಬಗೆಯ ನೋವೂ ತಲೆದೋರದಂತೆ ಭುವಿಯೊಳುದಿಸಿದನು ಮಾಯಿದೇವಾರ್ಯನು ಮನದಲ್ಲಿ ಗುರುವಿಶ್ವನಾಥನನ್ನು ಸ್ಮರಿಸಿ ಆತನು ಕೊಟ್ಟ ಲಿಂಗವನ್ನು ಮಗುವಿನ ಕೊರಳಲ್ಲಿ ಧರಿಸಿದನು. ಶಿವಶರಣರಿಗೆ ಭಸ್ಮ ತಾಂಬೂಲ ವಸ್ತುಗಳನ್ನು ಕೊಟ್ಟು ಸತ್ಕರಿಸಿದನು. ಅಷ್ಟರಲ್ಲಿ ಬಾಲಕನ ಬೆಳಕಿನಂಕುರದಂತೆ ಬೆಳಗಾಯಿತು.

ಶಿಶುಚೂಡಾಮಣಿಯನೀಕ್ಷಿಸುತ್ತ ತಾಯಿತಂದೆಗಳು ಸಂತೋಷಪಡುವರು. ಶಿವಶರಣರ ಪಾದೋದಕದಿಂದ ಮಗುವಿನ ಮೈದೊಳೆದು ಭಕ್ತರು ನೀಡಿದ ವಿಭೂತಿಯನ್ನು ಪಂಚಾಕ್ಷರೀಮಂತ್ರಪಠನದೊಂದಿಗೆ ಸರ್ವಾಂಗದಲ್ಲಿ ಧರಿಸುವರು. ಸಕಲ ಶರಣಸಂತತಿಯನ್ನು ಆರಾಧಿಸಿ ಗುರುರೂಪ ವಿಶ್ವಪತಿಹೇಳಿದಂತೆ ಪರಮಪಾವನ ತನೂಜನಿಗೆ ಪದ್ಮರಸರೆಂದು ಹೆಸರಿಟ್ಟರು. ಪರಮಪ್ರಸಾದದಿಂದ ಬಾಯಿಗೆ ಬೆಣ್ಣೆಯನ್ನಿಟ್ಟು ತಾಯಿ ಮಗುವಿಗೆ ಮೊಲೆಯುಣಿಸಿದಳು. ಹರಭಕ್ತವಲ್ಲರಿಕಂದನೂ ದಯಾರಸದುಕ್ಕಂದನೂ ನಿರುಪಮಜ್ಞಾನಫಲಭರಿತ ಮಾಕಂದನೂ ಆದ ಮಗನನ್ನು ತಾಯಿತಂದೆಗಳು ನೋಡಿ ನಲಿಯುವರು; ಮುಂಡಾಡಿ ಕೊಂಡಾಡುವರು. ಆತನ ಬಾಲಲೀಲೆಯ ಸಂಭ್ರಮದಲ್ಲಿ ಮಾತಾಪಿತೃಗಳು ಸುಖದಿಂದ ಕಾಲಕಳೆಯುವರು.

ಮಹಾಶಿವಯೋಗಿಯಾದ ಬಾಲಕನು ತನ್ನೊಳಗಣ ದಿವ್ಯನಾದವನ್ನು ಕೇಳಿ ಮೆಯ್ಮರೆಯುವನೋ ಎಂಬಂತೆ ಮೊಲೆಯುಣ್ಣುವಾಗ ಒಮ್ಮೊಮ್ಮೆ ಸುಮ್ಮನಿರುತ್ತಿದ್ದನು. ಶಿವಯೋಗಾಮೃತರಸವನ್ನು ಕುಡಿವಂತೆ ತನ್ನ ಬೆರಳನ್ನೇ ಸೀಪುವನು. ಶಿವಶರಣರನ್ನು ಕಂಡು ಹೀಗೆ ಕಂಪಿಸುವೆನೆಂಬುದನ್ನು ಪ್ರಕಟಿಸುವಂತೆ ಒಮ್ಮೊಮ್ಮೆ ಬೆದರಿಬೆಚ್ಚುವನು. ಪರಮಾನಂದಸುಖವನ್ನು ತೋರ್ಪಡಿಸುವಂತೆ ಆಗಾಗ ಅಳುವನು. ಆದ್ಯರ ಗೀತಗಳನ್ನು ಲಾಲಿಸುವಂತೆ ಜೋಗುಳವನ್ನು ಲಾಲಿಸಿಕೇಳುವನು. ಅವರಿಗೆ ನಮಸ್ಕರಿಸುವಂತೆ ಹೊಡಮುರಳಿಬೀಳುವನು. ಭವಬಾಧೆಯಲ್ಲಿ ಬಳಲಿಬಂದು ಪಾದಕ್ಕೆಬಿದ್ದ ಮಾನವರನ್ನು ಕರುಣದಿಂದ ಹಿಡಿದೆತ್ತುವಂತೆ ತಲೆಯೆತ್ತುವನು. ಶಿವಪೂಜೆಗೆ ಕುಳಿತುಕೊಳ್ಳುವ ರೀತಿಯನ್ನು ಕಲಿಯುವಂತೆ ಕುಳಿತುಕೊಳ್ಳುವನು. ಶರಣರು ಚತುರ್ವಿಧಪದವಿಗಳನ್ನು ಮೆಟ್ಟಿನಿಂದಿರುವರೆಂಬುದನ್ನು ತೋರಿಸುವಂತೆ ಅಂಬೆಗಾಲಿಕ್ಕುವನು. ಶಿವಸಮಯವನ್ನು ಹೀಗೆ ನಿಲ್ಲಿಸುವೆನೆಂದು ತೋರಿಸುವಂತೆ ಎದ್ದು ನಿಲ್ಲುವನು. ಷಟ್‌ಸ್ಥಲಮಾರ್ಗದಲ್ಲಿ ಇಂತು ಸಂತೋಷದಿಂದ ಚರಿಸುವೆನೆಂದು ಪ್ರಕಟಪಡಿಸುವಂತೆ ದಟ್ಟಡಿಯಿಡುವನು. ಶಿವಪೂಜಾಸಂಭ್ರಮದಲ್ಲಿ ಹೊರಹೊಮ್ಮುವ ಗದ್ಗದಸ್ತುತಿಯಂತೆ ತೊದಲ್ನುಡಿಯಾಡುವನು. ಶಿವಭಕ್ತರ ಸನ್ನಿಧಿಗೆ ಹರಿದುಹೋಗುವಂತೆ ಹರಿದಾಡುವನು. ಹೀಗೆ ಶಿವಾವಸ್ಥೆಯೆಂಬಂತೆ ಬಾಲ್ಯಾವಸ್ಥೆಯನ್ನು ನಟಿಸಿ ಶೈಶವದ ಲೀಲೆಯನ್ನು ಶಿವಪೂಜಾಲೀಲೆಯನ್ನಾಗಿ ಮಾರ್ಪಡಿಸಿ ಮಗು ಬೆಳೆದು ದೊಡ್ಡವನಾದನು. ಅವನ ಶಿಕ್ಷಣವೂ ಆರಂಭವಾಯಿತು. ಲೆಕ್ಕ, ಬರೆಹ, ಓದು, ಷಡಂಗವೇದ, ಮೀಮಾಂಸೆ, ನ್ಯಾಯ, ವ್ಯಾಕರಣ, ಪುರಾಣ, ಧರ್ಮಶಾಸ್ತ್ರ, ಸಂಗೀತಶಾಸ್ತ್ರ, ಆಯುರ್ವೇದ, ಧನುರ್ವೇದ, ಶಿವರಹಸ್ಯ ಮೊದಲಾದುವೆಲ್ಲ ಅವನಿಗೆ ಮುಖೋದ್ಗತವಾದುವು. ಪದ್ಮಣಾರ್ಯನು ಪ್ರಥಮಶಾಬ್ದಿಕನೆಂದು ವಿದ್ವಜ್ಜನರು ಕೊಂಡಾಡಿದರು. ಸೋಜಿಗದ ಸಂಗತಿಯೆಂದರೆ : ಪದ್ಮರಸನ ಮನದಲ್ಲಿ ತಂದೆ-ತಾಯಿಗಳು ಬಂಧು-ಬಳಗದವರಿವರೆಂಬ ಮಾಯಾಂಕುರವೇ ತಲೆದೋರಲಿಲ್ಲ. ಭಾವ-ವಿಶ್ವಾಸದಿಂದ ನಮಸ್ಕಾರ ಪೂಜೆಗಳಿಂದ ತಾಯಿತಂದೆಗಳನ್ನು ತೃಪ್ತಿಪಡಿಸುತ್ತ ಅವರ ಸೇವೆಯೇ ತನ್ನ ಜೀವವಾಗಿ ವರ್ತಿಸುವನು. ನಡೆವಲ್ಲಿ ನುಡಿವಲ್ಲಿ ಉಡುವಲ್ಲಿ ಉಂಬಲ್ಲಿ ನಿದ್ರಾವಸ್ಥೆಯಲ್ಲಿ ದರ್ಶನದಲ್ಲಿ ಹಿಡಿವಲ್ಲಿ ಬಿಡುವಲ್ಲಿ ಕೊಡುವಲ್ಲಿ ಕೊಂಬಲ್ಲಿ ಉದ್ಯೋಗದಲ್ಲಿ ತೊಡುವಲ್ಲಿ ಹೊದೆವಲ್ಲಿ ಸಡಗರದ ಸಮಯದಲ್ಲಿ ಕುಳಿತಲ್ಲಿ ಏಳುವಲ್ಲಿ ಉಳಿದ ಎಲ್ಲಾ ಕೃತ್ಯದೆಡೆಯಲ್ಲಿ ಮೃಡಮಂತ್ರವನ್ನು ಬಿಡದಿರ್ಪುದೇ ಪದ್ಮರಸರ ನಡೆಯಾಯಿತು. ಶಿವನಿಷ್ಠೆ, ಶಿವಪೂಜೆ, ಶಿವೈಕ್ಯರಸೇವೆ, ಶಿವವೃತ್ತಿ, ಶಿವವೀಕ್ಷಣ, ಶಿವಕಥಾಪ್ರಸಂಗದಲ್ಲಿ ವಿನೋದಗೋಷ್ಠಿ ಶಿವಸ್ತೋತ್ರದಭಾಷಣ ಶಿವವೈಭವ ಶಿವತತ್ವನಿರ್ಣಯವಿಚಾರ ಇವೆಲ್ಲ ಪದ್ಮರಸರ

ಮನದಲ್ಲಿ ಅಂಕುರಿಸಿ ಪಲ್ಲವಿಸಿ ಕುಸುಮಿತವಾಗಿ ಫಲಿಸಿ ಮನಸ್ಸಿಗೆ ಅಪಾರವಾದ ಶಾಂತಿಯನ್ನು ನೀಡಿದುವು. ಭಕ್ತಿಗೆ ಶಿರವೊದವಿತೋ, ಶಾಂತಿಗೆ ಮುಖಸ್ಫುರಿಸಿತೋ, ಶಿವನ ದಾನಾಭಯಗುಣಯುಗಕೆ ಕರಗಳಮರ್ದುವೋ, ಚಿದ್ವಿಲಾಸಕ್ಕೆ ಎಡೆ ರಾಜಿಸಿತೋ, ಸಚ್ಚರಿತಕ್ಕೆ ಕಾಲ್ ಬಂದುವೋ, ಅಖಿಲ ಲೋಕವನನುಗ್ರಹಿಸುವ ಶಿವಶಕ್ತಿಗೆ ಬೆನ್ನು ಬಸಿರು ಪುಟ್ಟಿದುವೋ, ಏನಿದು ಪರಮೇಶ್ವರನ ಇಪ್ಪತ್ತಾರನೆಯ ಲೀಲೆಯೋ ಎಂದು ಪಂಡಿತರು ಭಾವಿಸುವಂತೆ ಪದ್ಮರಸರು ಮೆರೆದರು.

ಮೂರನೆಯ ಸಂಧಿ

ಪದ್ಮರಸರ ವಿವಾಹ

ಅಖಿಲಭಕ್ತರು ಬಣ್ಣಿಸುವಂತೆ ವೀರಮಾಹೇಶ್ವರಾಚಾರವಿಖ್ಯಾತನಾಗಿದ್ದ ಸುಕುಮಾರಚೂಡಾಮಣಿಗೆ ಶೈಶವವು ಸಾವಧಾನವಾಗಿ ಜಾರಿತು. ಆತನ ಕೋಮಲತನು ನಳನಳಿಸತೊಡಗಿತು. ಲಲ್ಲೆವಾತಿನ ಸೊಗಸು, ನಗೆಮುಖ, ರಸವಾತುರಿಪಮನ ಇವೆಲ್ಲ ಆತನ ಹೊಸ ಜವ್ವನವನ್ನು ಸೂಚಿಸಿದುವು. ದೇಹದ ಕಾಂತಿಯೆಲ್ಲಾ ತಿಂತಿಣಿಸಿ ಘನಕಾಂತಿಮಯವಾದಂತೆ ಕಣ್ಗೆ ಮಂಗಳಮಯವಾದನು. ಹೀಗೆ ಹೊಸ ಯೌವ್ವನವನ್ನು ಪಡೆದ ಕುಲದೀಪಕನಾದ ಅಮಲಚಿದ್ರೂಪಕನಾದ ಮಗನನ್ನು ಮಾಯಿದೇವರು ಕೃಪಾಪೂರಿತವಾದ ದೃಷ್ಟಿಯಿಂದ ನಿರೀಕ್ಷಿಸಿ ಅಂತಃಕರಣಪೂರ್ಣವಾದ ಹೃದಯದಿಂದ ಸಮೀಪಕ್ಕೆ ಕರೆದು "ಮಗನೇ, ಶಂಭುವಿನ ಅಪ್ಪಣೆಯಮೇರೆಗೆ ನಿನಗಿನ್ನು ಕೆಲವು ಭೋಗಗಳು ಪ್ರಾಪ್ತವಾಗುವವು. ಅವನ್ನು ನಿನ್ನ ಪುಣ್ಯಕ್ಕೆ ವಿಘ್ನಗಳೆಂದು ತಿಳಿಯದೆ ನೀನು ಅಂಗೀಕರಿಸಬೇಕು. ಉತ್ತಮ ಶಿವಜ್ಞಾನಿ ಹಿಡಿದ ಭೋಗಂಗಳು ಶಿವನಿಮಿತ್ತಮಲ್ಲದೆ ಮಾಯಿಗಳಲ್ಲ. ಹೇಮ, ಭಾಮೆ, ಭೂಮಿ, ಇವನ್ನು ಹೊತ್ತಲ್ಲದೆ ದಾಸೋಹವು ಉತ್ಕರ್ಷಹೊಂದಲಾರದು. ಉದಾತ್ತರಾದ ಬಸವೇಶ್ವರಾದಿಗಳು ಅವನ್ನು ಗ್ರಹಿಸಿ ವೀರಶೈವಪ್ರತಿಷ್ಠಾಚಾರ್ಯರೆನಿಸಿ ಶಿವನಲ್ಲಿ ಬೆರೆದು ಬೇರಿಲ್ಲದಿಪ್ಪರು. ಶಿವಮುಖಕಿತ್ತು ಭೋಗಿಸಲು ಬಲ್ಲ ಸುಖಿಯು ಕಾಮ-ನಿಷ್ಕಾಮ, ಸದ್ವ್ಯಸನ, ದುರ್ವ್ಯಸನ-ರತ-ವಿರತ ಎಂಬ ಮಾತಿನವನಲ್ಲ. ಆತನು ಪ್ರಪಂಚದಲ್ಲಿ ಸಿಲುಕಿಯೂ ಸಿಲುಕದವನು. ತಾಳ ಲಯ ಸಂಗೀತ ವಾದ್ಯಗಳಿಂದ ಕೂಡಿದ ಮೇಳದ ಅನುಗುಣಕೆ ನಟಿಯು ನರ್ತಿಸುತ್ತಿದ್ದರೂ ತನ್ನ ತಲೆಯ ಮೇಲಿದ್ದ ಕೊಡವನ್ನು ಆಕೆಯು ಪರಿರಕ್ಷಣೆಗೆಯ್ಯುವಳು. ಇದರಂತೆಯೇ ನಿಶ್ಚಲಶಿವೈಕ್ಯನು ಸಂಸಾರದ ವಿಷಯಸುಖದ ಕೇಳಿಯೊಳಗಿದ್ದರೂ ಶಿವಯೋಗಚೇತೋವಿಶಾಲತೆಯನ್ನು ಕೂಡಿಕೊಂಡಿರುವನು. ಕಮಲದಳಗತ ಜಲದಂತೆ ತೊಳಗಿಬೆಳಗುವನು. ಆದುದರಿಂದ ನಮ್ಮ ಶಿವಶರಣರಿಗೆ ಸಂಸಾರವು ಬಂಧವಲ್ಲ. ನೀನು ತಡೆಯದೆ ಈ ಭೋಗವನ್ನು ಗ್ರಹಿಸಿ ಶಿವಶರಣರನ್ನು ಆರಾಧಿಸಿ ಅವರನ್ನು ಶಿವನೆಂದೇ ನಂಬಿ ಅವರ ಗೋಷ್ಠಿಯನ್ನು ಬಿಡದೆ ಪರವಾದವನ್ನು ಖಂಡಿಸಿ

ಶಿವಾಧಿಕ್ಯವನ್ನು ಪ್ರತಿಷ್ಠಾಪನೆ ಮಾಡಬೇಕು. ಶಿವನು ಕಾಡಿನೋಡುವನೆಂಬ ಭಕ್ತರ ಉಕ್ತಿಯನ್ನು ಮನ್ನಿಸಿ ಭಕ್ತಿಯೆಂಬ ಜೋಡುತೊಟ್ಟು ಕ್ರಿಯಾಫಲಕವನ್ನು ಹಿಡಿದು ಸುಜ್ಞಾನವೆಂಬ ಖಡ್ಗದಿಂದ ವಿಷಮಮಾಯಾಸಮರವನ್ನು ಗೆಲ್ಲುವ ಗಾಡಿ ಕಲಿಯಬೇಕು. ಶಿವನು ಕರುಣಿಸುವನು. ಹಲವು ಮಾತೇನು? ನಿನ್ನದು ಕರ್ಮ ತನುವಲ್ಲ ನೀನು ಜಗದ್ಧಿತಾರ್ಥವಾದ ವ್ಯಕ್ತಿ. ನಿನ್ನುದಯಸಮಯದಲ್ಲಿ ಎಮ್ಮ ಗುರುರೂಪ ವಿಶ್ವಪತಿ ಯತಿವೇಷದಿಂದ ಬಂದು ನಿನಗೆ ಈ ದಿವ್ಯಲಿಂಗವನ್ನು ಕೊಟ್ಟು ನೀನು ಪ್ರಾಪ್ತವಯಸ್ಕನಾದಮೇಲೆ ನಾನು ತನ್ನೆಡೆಗೆ ಬರಬೇಕೆಂದು ಆಪ್ಪಣೆಕೊಟ್ಟನು. ಅದರಿಂದ ಕಾಶೀಪ್ರಯಾಣವು ನನಗೆ ಅವಶ್ಯಕವಾಗಿದೆ" ಎಂದು ಬೋಧಿಸಿದನು. ಆ ಬೋಧೆಯನ್ನು ಪದ್ಮರಸರು ಮನದಲ್ಲಿ ದೃಢವಾಗಿಟ್ಟು ಕೊಂಡು ವಿಯೋಗವ್ಯಥೆಗೆ ಅಳಲಕಡಲಲ್ಲಿ ಮುಳುಗಿ ಹಾ ! ದೇಶಿಕೇಂದ್ರಾ ! ದೇಶಿಕಕುಲೋತ್ತಮನೇ ! ಆಳ್ದವನೇ! ಗತಿಯೇ ಮತಿಯೇ!! ನೀವು ಹೀಗೆ ಅಗಲಿ ದರೆ ನಾನು ಉಳಿವುದೆಂತು ? ಎಂದು ಚರಣದಲ್ಲಿ ಬಿದ್ದು ಒರಲುವನು. ಅವ ನೊಡನೆಯೇ ಮಾಯಿದೇವರ ಪತ್ನಿಯೂ ಸಕಲಭಕ್ತರೂ ದುಃಖಿಸುವರು. ಮಾಯಿದೇವಾರ್ಯರು ಆತ್ಮಜನನ್ನೂ ಪತ್ನಿಯನ್ನೂ ಸಕಲಭಕ್ತರನ್ನೂ ತೆಗೆದೆತ್ತುತ್ತೆ ಸತ್ಕರಿಸಿ ಮೈದಡವಿ ಕಣ್ಣೀರ್ಗಳನ್ನು ತೊಡೆದು ಚಿತ್ಕಾಯರಾದ ತಾವು ಅವರಿಗೆ ಈಶ್ವರನ ಸಾಕ್ಷಾತ್ಕಾರಯೋಗವನ್ನು ತಿಳಿಸಿ ಪರಮಾನಂದಸೌಖ್ಯವನ್ನು ಕಾಣಿಸಿ ಅವರ ಹೃದಯಕಂಪನವನ್ನು ಪರಿಹರಿಸಿದರು. ಸುತಾದ್ಯರಿಗೆ ಸುಮಹತ್ಕರುಣ ವನ್ನು ಬೀರಿ ಬೀಳ್ಕೊಟ್ಟು ಮನದೊಳಗೆ ಜಗತ್ಕರ್ತುವಾದ ಶಂಭುವನ್ನು ಜಾನಿ ಸುತ್ತೆ ಕಾಶೀಪುರಾಭಿಮುಖವಾಗಿ ನಡೆದರು. ಕೆಲವು ದಿನಗಳ ಮೇಲೆ ಅತಿಹರ್ಷದಿಂದ ಆ ಪಟ್ಟಣವನ್ನು ಮುಟ್ಟಿ ಪರಮಸದ್ಗುರು ವಿಶ್ವಪತಿಯ ಆಲಯವನ್ನು ಹೊಕ್ಕು ಕೈಮುಗಿದು ಸ್ತುತಿಸತೊಡಗಿದರು. ಸಿತಿಗಳನು ಪೂರ್ವದ ಯತಿವೇಷದಿಂದ ಲಿಂಗಮುಖವಾಗಿ ಇದಿರ್ವಂದು ಬಾ ಸುತನೇ, ಎನುತೆ ತೆಗೆದೆತ್ತಿ ಬಿಗಿಯಪ್ಪಿ ತನ್ನುದರವನ್ನು ತೆರೆಯಲು ಮಾಯಿದೇವರು ಅದರಲ್ಲಿ ಹೊಕ್ಕು ಮುಕ್ತಿಸುಖ ವನ್ನು ಪಡೆದರು. ಕ್ಷಿತಿಜನಮುಘೇಯುಘೇಯೆಂದಿತು.

ಇತ್ತ ಪದ್ಮರಸರು ತಮ್ಮ ತಾಯಿ ಮತ್ತು ಸಕಲ ಭಕ್ತವೃಂದದೊಡನೆ ಮರಳಿ ಹೋಗಿ ಶಿವತತ್ವ ಸಾಕ್ಷಾತ್ ಸಚ್ಚಿದಮಲ ದಿವ್ಯಾನುಭವಸುಖದಿಂದ ಇದ್ದರು. ಗುರು ಕುಲಾಗ್ರಣಿಯ ವಿರಹಾವಸ್ಥೆಯಿಂದಾದ ಮನದ ನೋವನ್ನು ಉಳಿದು ಉತ್ತುಂಗ ವೃತ್ತಿಯಿಂದ ಇರುತ್ತಿರಲು ಹೊಯ್ಸಳರಾಜ್ಯವು ಶೋಭಾಯಮಾನವಾಯಿತು ಅದೆಂತೆಂದರೆ :

ಯದುವಂಶದ ಸಳನೆಂಬುವನು ಭಾಗ್ಯವಿಹೀನನಾಗಿ ದೇಶಾಂತರಹೊರಟು ಬರುತ್ತ ದಾರಿಯಲ್ಲಿ ಈ ಪ್ರದೇಶದ ಕೊಪಣಪುರದ ದುರ್ಗಾಂಬಿಕೆಯ ಗುಡಿಯನ್ನು ಕಂಡು ಸೂರ್ಯಾಸ್ತಮಯಸಮಯದಲ್ಲಿ ಅಲ್ಲಿಗೆ ಬಂದನು. ಒಳಗೋರ್ವ ಯತೀಂದ್ರನು ವಿನಿಶ್ಚಳವಾದ ತಪದಲ್ಲಿ ಇರುತ್ತಿರಲು ನೋಡಿ ನಮಿಸಿ ಆತನಿಗೆ ತನ್ನ ಹೆಸರು ಮೊದಲಾಗಿ ಸಮಾಚಾರವನ್ನೆಲ್ಲವನ್ನುಸುರಿ ಕುಳಿತುಕೊಂಡನು. ಅಷ್ಟರಲ್ಲಿ ಆ ಸ್ಥಳದ ನಾಲ್ಕೈದುಗಾವುದದಳತೆಯೊಳಗೆ ಯಾರನ್ನೂ ಬರಗೊಡದಂತೆ ಅರಿಯಟ್ಟಿ ತಿಂದು ಅಳವುಮಿಕ್ಕಿದ್ದ ದುಷ್ಟವ್ಯಾಘ್ರವೊಂದು ಗುಡುಗುತ್ತ ಅಲ್ಲಿಗೆ ಬಂದು ದೇವಾಲಯವನ್ನು ಹೊಕ್ಕು ಇವರೀರ್ವರ ಮೇಲೆ ಬೀಳಲು ಪ್ರಯತ್ನಿಸಿತು. ಅದನ್ನು ಕಂಡು ಯತಿಯು ಸಳನ ಕೈಗೆ ಸೆಳೆಗೊಟ್ಟು ಹೊಯ್ ಸಳ ಎನ್ನಲು ಧರಣಿಯದಿರುವಂತೆ ಅಬ್ಬರಿಸಿ ಹೊಯ್ದು ಆ ಧೀರನು ಹುಲಿಯನ್ನು ಕೊಂದನು. ಅಸಮಬಳನಾದ ಸಳನ ಧೈರ್ಯಕ್ಕೆ ಮೆಚ್ಚಿ ಯತಿವರನು ಇವನಿಂದ ಈ ಧರೆಯ ನಾಳಿಸುವೆನೆಂದು ಬಗೆದು ತನ್ನಸಿತಾಳಪತ್ರಮಂ ಕೊಟ್ಟು ಇದು ಸಕಲ ಸಿದ್ಧಿಕರ ಮೆಂದುಸುರಿ ಅದರ ಮಂತ್ರವನ್ನು ಬೆಸಸಿ ಕರುಣೆಗೆಯ್ದು ಕಳಿಸಿದನು. ಆ ಆಶೀರ್ವಾದಬಲದಿಂದ ಸಳನು ನಿಜಸಾಮರ್ಥ್ಯವನ್ನು ಪ್ರಕಟಿಸಿ ದಿಗ್ವಿಜಯಿಯಾಗಿ ಆ ಭೂಮಿಯನ್ನಾಳಿದನು. ಅದರಿಂದಲೇ ಅದು ಹೊಯ್ಸಳದೇಶವೆನಿಸಿ ಮೆರೆಯುವುದು.

ಆ ನಾಡಿನಲ್ಲಿ ನೋಡಿದತ್ತ ನೇತ್ರಾನಂದಕರವಾದ ತೋಟಗಳಿದ್ದುವು. ತೋಟಗಳಲ್ಲಿ ಕಮಲ ಹಾಗೂ ಹಂಸಗಳಿಂದ ತುಂಬಿದ ಸರೋವರಗಳು ಕಂಗೊಳಿಸುವುವು. ನದಿಗಳೂ ಕಾಲುವೆಗಳೂ ಅವುಗಳ ಕೆಳಗೆ ಬತ್ತದಗದ್ದೆಗಳೂ ಮೆರೆಯುತ್ತಿದ್ದುವು. ಅವುಗಳ ನೆರೆಯಲ್ಲಿಯೇ ರತ್ನಮಯಗೋಪುರಗಳಿಂದ ಶೋಭಿಸುವ ಪಟ್ಟಣಗಳು ವಿರಾಜಿಸುವುವು. ಪಟ್ಟಣಗಳು ಉಜ್ವಲ ಸುಖಸೌಕರ್ಯಗಳಿಂದ ಕೂಡಿದ ಮನೆಗಳಿಂದ ತುಂಬಿದ್ದುವು. ಆ ನಾಡಿನಲ್ಲಿ ಯಾರೂ ಅರಿಯದಂತೆ ಬಾಣಪ್ರಯೋಗ ಮಾಡಿ ನೋಯಿಸುವ ಮಾರಚೋರನ ಹಾವಳಿಯಲ್ಲದೆ ಮಿಕ್ಕ ಚೋರರ ಹಾವಳಿಯಿಲ್ಲ. ಪಾಪದಲ್ಲಿ ಭೀತಿಯಲ್ಲದೆ ಬೇರೆ ಭಯವೇ ಇಲ್ಲ. ಮಹಾಪೂರದಲ್ಲಿ ನದಿಗಳು ಮೀರಿದಪ್ಪುವುವಲ್ಲದೆ ಆಚಾರದಲ್ಲಿ ಮೀರಿದಪ್ಪುವವರಿಲ್ಲ. ಆ ದೇಶಮಧ್ಯದಲ್ಲಿ ಭೂದೇವತೆಯ ಶಿರೋರತ್ನವೋ, ಪರಬ್ರಹ್ಮನು ಭೂಲೋಕಕ್ಕೆ ತಂದ ಮಾತೃಕಾನಗರವೋ, ದಿವ್ಯಲಕ್ಷ್ಮೀವಿಲಾಸಲೀಲಾಭವನವೋ, ಚೆಲ್ವಿನ ಕರಂಡವೋ ಎನ್ನುವಂತೆ ದೋರಸಮುದ್ರವೆಂಬ ಪುರವು ಶೋಭಿಸುವುದು. ಎತ್ತುಗಲ್ಲು ಪಿರಿಯಡಂಕಣಿ, ಕೈಗತ್ತರಿ ಉರುಳ್ಗಣ್ಣಿ ಬಲ್ಗುಂಡು ಕೊರಡು ಕಾಯ್ದ ಮಣಲರಾಶಿ

ಬಂಡಿಯಗಾಲಿ ಉಪ್ಪುಗುಂಡು ದಸಿ ಮರುಳಕೈಕವಣೆ ನಿಡುಗಲ್ಲನೊತ್ತ ಈ ನುಡಿಯೇ ವಿಚಾರಿಸಿದರೆ ಆ ಪಟ್ಟಣದಲ್ಲಿಲ್ಲ. ಇದು ಆ ಹೊಯ್ಸಳರಾಜನ ಸಾಮರ್ಥ್ಯವನ್ನು ಬಿತ್ತರಿಸದೇ ! ಕವಿಗಳ ಗಮಕಿಗಳ ವಾದಿಗಳ ವಾಗ್ಮಿಗಳ ಕಲಾವಿದರ ಸಚಿವರ ವಿವೇಕಿಗಳ ಪುರೋಹಿತರ ತಾಂತ್ರಿಕರ ಮಾಂತ್ರಿಕರ ಶಾಸ್ತ್ರಜ್ಞರ ದಂಡನಾಥರ ಸಾಮಂತರ ವಣಿಗ್ವರರ ಅಶ್ವಗಜವಾಹಕರ ಧನಿಕ ಭಟ ಗಣಿಕಾದಿಗಳ ಗೃಹಗಳಿಂದ ಆ ಪಟ್ಟಣವು ಶೋಭಿಸುವುದು. ಅದರ ಮಧ್ಯದಲ್ಲಿ ಆ ಪುರಸ್ತ್ರೀಯ ಮುಖಕಿಟ್ಟ ಬೊಟ್ಟೆಂಬಂತೆ ಭೂಪಾಲನ ಗೃಹವು ವಿರಾಜಿಸುವುದು. ಅದರಲ್ಲಿ ಶೂರನೂ ಸುಂದರನೂ ಕೀರ್ತಿವಂತನೂ ಗುಣಗ್ರಾಹಿಯೂ ಆದ ಸಳವಂಶದ ನರಸಿಂಹ ಬಲ್ಲಾಳನೆಂಬ ಅರಸನು ವಾಸಿಸುವನು. ಆತನಿಗೆ ಬಿಟ್ಟಿದೇವರಾಯನೆಂಬ ಮಗನಿದ್ದು ಆತನು ಯುವರಾಜನಾಗಿದ್ದನು. ಯಾದವಾನ್ವಯೋದ್ಧರಣನಾದ ಆ ವೀರ ಸಳನೃಪನ ಪರಂಪರೆಯಿಂದ ಬಂದ ಸಿಂಹಾಸನವನ್ನು ನರಸಿಂಹಬಲ್ಲಾಳನು ಏರಿದ್ದನು. ಚತುಶ್ಶರಧಿಯಿಂದ ಸುತ್ತುಗಟ್ಟಿದ ಭೂಮಿಯಲ್ಲೆಲ್ಲ ತನ್ನ ಪ್ರಬಲ ಪ್ರತಾಪವನ್ನು ಸ್ಥಿರಗೊಳಿಸಿ ಈ ದೊರೆ ಶೋಭಿಸುತ್ತಿದ್ದನು. ಆ ನರಾಧಿಪಶೇಖರನಿಗೆ ದಕ್ಷಿಣಭುಜಸ್ಥಾನನೆನ್ನುವಂತೆ ಗೌರಪದಣಾಯಕನೆಂಬ ಮಂತ್ರೀಶ್ವರನು ಇದ್ದನು. ಆತನು ಕಮ್ಮಕುಲವಲ್ಲಭನು, ಶಿವಭಕ್ತಿಪಾರಂಗತನು; ನಾನಾ ಕಲಾವಿದನು. ನರಸಿಂಹಬಲ್ಲಾಳನ ರಾಜ್ಯಭಾರವನ್ನೆಲ್ಲ ಹೊತ್ತು ಭೂಮಂಡಲವನ್ನುದ್ಧರಿಸುತ್ತ ಸುಖದಿಂದಿದ್ದನು. ಹೀಗೆ ಶೋಭಿಸುವ ಪರಮ ಶಿವಭಕ್ತನುದರದಲ್ಲಿ ಉಮಾಕಾಂತನ ನಿರೂಪದಿಂದ ಪಾರ್ವತಿಯ ಸಾಮರ್ಥ್ಯಸಂತಾನವು ಅಂಗನೆಯ ರೂಪದಿಂದ ಹುಟ್ಟಿ ಮಾದೇವಿಯರೆಂಬ ಹೆಸರನ್ನು ಪಡೆದು ಬಾಲ್ಯಾವಸ್ಥೆಯನ್ನು ಕಳೆದು ಹೊಸ ಯೌವನವು ಪ್ರಾಪ್ತವಾಗಲು ನಳನಳಿಸಿ ಬಳೆಯುತ್ತಿದ್ದಳು. ಆಕೆಯ ಅಡಿದಳದ ಸೊಂಪು ಕೆಂದಳಿರ ಕೆಂಪನ್ನು ತಿರಸ್ಕರಿಸಿ ಮರನೇರುವಂತೆ ಮಾಡಿತು. ವಯೋಮಾನಕ್ಕೆ ಸರಿಯಾಗಿ ಆ ರಾಜಪುತ್ರಿಯ ಸಮಸ್ತ ಅಂಗಾಂಗಗಳೂ ವಿಕಸಿತವಾಗಿ ನೈಜಶೋಭೆಯನ್ನುಂಟುಮಾಡಿದ್ದರಿಂದ ಅವಳು ನೋಟಕ್ಕೆ ರತಿಯ ಶೋಭೆಯನ್ನು ಮೀರಿ ಚೆಲ್ವಾಗಿ ತೋರುತ್ತಿದ್ದಳು. ಇಂತು ಥಳಥಳಿಸಿ ಹೊಳೆವ ಏರುಂಜವ್ವನೆಯನ್ನು, ಅಖಿಳ ಕಾಂತಾದೇವತೆಯನ್ನು, ನೋಡುವವರ ಕಣ್ಣ ಪುಣ್ಯವೇ ತಾನೆನಿಪ ಅಮಲಾಂಗಿಯನ್ನು ತಂದೆ ನೋಡಿ ಆನಂದಪಡುತ್ತ ಈ ಲತಾಂತಗಂಧಿಗೆ ವರನದಾರೆಂಬ ಎಣಿಕೆಗೊಳಗಾದನು. ಕೂಡಲೇ ಅವನ ಸುಕೃತದ ಫಲದ ಕುರುಹಾಗಿ ಅವನಿಗೆ ಈ ತೆರದ ಆಲೋಚನೆ ಹೊಳೆಯಿತು. ಸಾಕ್ಷಾತ್ ಮಹೇಶ್ವರನ ಅವತಾರನಂತಿದ್ದ ಮಲ್ಲಿಕಾರ್ಜುನಾಚಾರ್ಯರಿಗೆ ಸಕಲೇಶಮಾದರಸರು ಮಕ್ಕಳು, ಆತನಿಗೆ ಮಗ ಮಾಯಿದೇವ, ಎಮ್ಮಕ್ಕನು ಅತನರ್ಧಾಂಗಿ, ಆ ಮಾಯಿದೇವರು ಮೊನ್ನೆ ಶಿವೈಕ್ಯರಾದರೆಂದು ಕೇಳಿರುವೆನು.

ಆ ಶಿವಾನ್ವಯಸ್ಥನೂ ಪರಮ ಕಾರುಣಿಕನೂ ಆಚಾರ್ಯಕುಲಶೇಖರನೂ ಶರಣ ನಿಧಿಯೂ ಸಚ್ಚರಿತನೂ ಅಖಿಲ ಆಗಮಜ್ಞನೂ ಆದ ಮಾಯಿದೇವಾರ್ಯರ ಸೂನು ಪದ್ಮಣಾರ್ಯನು ಅಂಬಾನಗರಿಯಲ್ಲಿರುವನೆಂದು ಕೇಳ್ದು ಬಲ್ಲೆವು. ಆತನು ಪರನಲ್ಲ, ಎಮಗೆ ಸೋದರಳಿಯ. ಆ ಮಹಾಪುರುಷನೇ ಈ ನನ್ನ ಮಗಳಿಗೆ ತಕ್ಕ ವರನು. ಎಂದು ಭಾವಿಸಿ ಸಭ್ಯರನ್ನು ಬರಮಾಡಿಕೊಂಡು ತನ್ನ ಆಲೋಚನೆ ಯನ್ನು ಅವರಿಗೆ ತಿಳಿಸಿ ಅವರ ಅಭಿಪ್ರಾಯವನ್ನು ಪಡೆದನು. ಆನಂದೋತ್ಸಾಹ ಗಳಿಂದ ಪದ್ಮರಸರನ್ನು ಕಾಣಲು ಅಂಬಾನಗರಿಗೆ ಹೊರಟನು. ಅವನ ಬರವನ್ನು ಕೇಳಿ ಅಂಬಾನಗರಿಯ ದೊರೆ ಸಕಲಸಂಭ್ರಮದಿಂದ ಆತನನ್ನು ಇದಿರ್ಗೊಂಡನು. ಸಚಿವವರಗೌರಣಾಯಕನು ಪುರಪ್ರವೇಶಮಾಡಿ ಶಂಕರಸದೃಶರಾದ ಪದ್ಮರಸರನ್ನು ಕಾಣುವ ತವಕದಿಂದ ಅವರ ಮನೆಗೆ ನಡೆದನು. ಮಹಾಭಕ್ತಜನಸಭಾಮಧ್ಯದಲ್ಲಿ ಶಿವತತ್ತ್ವಗೋಷ್ಠ್ಯಾನುಭವಗೋಷ್ಠಿಯಿಂದ ಎರಡನೆಯ ಶಂಭುವೆಂಬಂತೆ ಪದ್ಮರಸಾ ರ್ಯರು ಅಲ್ಲಿ ತೊಳತೊಳಗುತ್ತಿದ್ದರು. ಗೌರಪದಣಾಯಕನು ಅವರನ್ನು ಕಂಡು ಸಂತೋಷವುಕ್ಕಿ ಮೆಯ್ಯಿಕ್ಕಿದನು. ಶರಣಾವಳಿಗೆ ನಮಿಸಿದನು ಅಕ್ಕನ ಪಾದ ಕಮಲಗಳಿಗೆ ಅಭಿನಂದಿಸಿದನು. ಕಾಲೋಚಿತ ಮಾತು ಕತೆ ಸತ್ಕಾರಗಳಾದುವು. ಪರಸ್ಪರರು ಪರಸ್ಪರರ ಯೋಗಕ್ಷೇಮಗಳನ್ನು ಕೇಳಿಕೊಂಡರು. ಸದುವಿನಯ ಭಯಬಕುತಿಗಳಿಂದ ಕೂಡಿದ ಮಾತುಗಳೊಡನೆ ಗೌರಣಾರ್ಯಮಂತ್ರೀಶ್ವರನು ಇಂತೆಂದನು: ಎಲೆ ಭಕ್ತಲೋಲ, ಸುಗುಣಗಣಆಲವಾಲ, ಬಾಲೇಂದುಧರಕೃಪಾ ಪಾತ್ರೆಯಾದ ನನ್ನ ಮಗಳನ್ನು ಕೈಕೊಂಡು ನನ್ನನ್ನು ಪಾಲಿಸಬೇಕು. ಎಂದು ಪೊಡಮಟ್ಟು ಬಿನ್ನವಿಸಿದನು. ಶಿವತಂತ್ರವೆನುತ ಗುರುವರನು ಅದಕ್ಕೆ ಒಪ್ಪಿದನು. ಗುರುವರನನ್ನು ದೋರಸಮುದ್ರಕ್ಕೆ ಬಿಜಯಂಗೆಯ್ಸಬೇಕೆಂದು ಓರ್ವ ಸಭ್ಯರನ್ನು ಸಕಲ ವಿನಿಯೋಗದವರು ಸಹಿತ ಅಲ್ಲಿ ಬಿಟ್ಟು ತಾನು ದೋರಸಮುದ್ರಕ್ಕೆ ತಿರುಗಿ ಬಂದನು. ಮತ್ತು ಕೂಡಲೇ ಮಂಗಲಕಾರ್ಯಕ್ಕಾಗಿ ಪುರವನ್ನು ಸಿಂಗರಿಸ ಬೇಕೆಂದು ಸಂಬಂಧಿಸಿದವರಿಗೆ ಅಪ್ಪಣೆಮಾಡಿದನು. ಆಜ್ಞೆಯಮೇರೆಗೆ ಸಾರಣೆ ರಂಗವಲ್ಲಿ ಗುಡಿ ತೋರಣ ಪತಾಕೆ ಚಿತ್ರಪತ್ರ ಮೊದಲಾದವುಗಳಿಂದ ಪರಿಚರರು ಪುರವನ್ನು ಸಿಂಗರಿಸಿದರು. ಉಪಮಾತೀತವಾದ ಹಂದರವೊಂದನ್ನು ನಿರ್ಮಿಸಿ ದರು. ಗೌರಣಾರ್ಯನು ಅದನ್ನು ನೋಡಿ ಮನದಲ್ಲಿ ಮೆಚ್ಚಿ ಅವರಿಗೆ ಬಹು ಮಾನಾದಿಗಳನ್ನು ಕೊಟ್ಟನು. ನಾನಾಕಡೆಯ ಶಿವಭಕ್ತರು ಪುಣ್ಯಪಣ್ಯಾಂಗನೆಯರು ಮೊದಲಾದ ಸಕಲರನ್ನು ಬರಮಾಡಿಕೊಂಡು ಗಣಪರ್ವವನ್ನು ಮಾಡಿಸಿದನು. ಪುಣ್ಯಾಂಗನೆಯರಾದ ಸಖೀಜನರಿಗೆ ಮಗಳನ್ನು ಸಿಂಗರಿಸಲು ಹೇಳಿದನು. ಅವನ ನುಡಿಗೆ ಆ ಲತಾಂಗಿಯರ ಉತ್ತರವಿದು: "ಸಿಂಗರದ ಸೀಮೆಯಾದ ಈ ಮೋಹ

ನಾಂಗಿಗೆ ಸಿಂಗರದ ಹಂಗುಟೇ ? ಮಂಗಲಕಾರ್ಯದ ನಿಮಿತ್ತ ಸಿಂಗರಿಸುವೆವು ” ಹೀಗೆಂದು ನುಡಿದು ವಾದ್ಯಗಳುಲಿಯಲು ಶೋಭನವನ್ನು ಹಾಡುತ್ತ ಕಟ್ಬಾಣಿ ಮುತ್ತನ್ನು ತೊಳೆವಂತೆ ಮಂಗಳಮಜ್ಜನಂಗೆಯ್ಸಿ ಹೊಸ ಪೀತಾಂಬರವನ್ನುಡಿಸಿದರು. ಎಣ್ಣೆ ಹೂಸುವಾಗ ಆ ಗಾಡಿಕಾರ್ತಿಯರ ಅವಯವಗಳ ಚಲನವಲನ ಹಾಗೂ ಆಗ ತೋರಿಬರುವ ಅವರ ರೂಪಲಾವಣ್ಯಗಳನ್ನು ರಸಿಕಕವಿಯೇ ವರ್ಣಿಸಬಲ್ಲ! ಆ ಮೇಲೆ ಯಕ್ಷಕರ್ದಮಾದಿಗಳನ್ನು ಲೇಪಿಸಿ ಕಮ್ಮಲರ್ಗಳನ್ನು ಮುಡಿಸಿದರು. ವೀರಮುದ್ರಿಕೆ ಉಲಿವ ಕಾಲುಂಗುರ ಪಿಲ್ಲೆ ಮಂಟಿಗೆ ಮೊದಲಾದವುಗಳನ್ನು ಆ ರಮಣಿಗೆ ಅಲಂಕರಿಸಿದರು. ನೇವುರ ಪಾಯವಟ್ಟಂಗಳನ್ನು ವಿರಚಿಸಿದರು. ಹಂಸ ಕವನಿಕ್ಕಿ ಝುಣಝುಣಿಸುವ ಕಿಂಕಿಣಿ ತಾತಿ ಮೊದಲಾದವುಗಳನ್ನು ಕಟ್ಟಿ ಪಟ್ಟಿ ಯನ್ನಿಟ್ಟರು. ಕೇಯೂರ, ತೋಳರಕ್ಕೆಯಮಣಿ, ಕಂಕಣ, ಬೆರಲರತ್ನೋ ರ್ಮಿಕೆ, ಕುಸುರಿಗೆಲಸದಮಣಿಪದಕ, ಮುತ್ತಿನ ಹಾರಾವಳಿ, ಉಜ್ವಲಿಪ ಲೇವಣ, ನಕ್ಷತ್ರಮಾಲೆ, ಕಂಠಾಭರಣಗಳನ್ನು ಭೂಷಿಸಿದರು. ಕೆಂಬರಲೋಲೆಯನ್ನು ಕಿವಿಗೆ ಹಾಕಿ ಥಳಥಳಿಸುವ ಪೊಸಕಟ್ಮಾಣಿಮುತ್ತು ಎಸೆವ ಮೂಗುತಿಯನ್ನು ನಾಸಿಕಕಿಟ್ಟು ಹಣೆಗೆ ಬೊಟ್ಟಿಟ್ಟು ಬೈತಲೆಯನ್ನು ಸರಿಗೊಳಿಸಿ ಕೋಮಲೆಯರು ಸೀಮಂತಮಣಿಯನ್ನು ಧರಿಸಿದರು. ಕರ್ಪೂರ ತಾಂಬೂಲವಿತ್ತು ಆರತಿಯನೆತ್ತಿ ದರು. ಸಚಿವಾಗ್ರಣಿಯು ಮಗಳನ್ನು ನೋಡಿ ಹೆಂದದಾನಂದದಿಂದಿದ್ದನು.

ಇತ್ತ ಪದ್ಮರಸರು ಮಾಹೇಶ್ವರರ ಪಾದೋದಕವೊಂದಿದ ಜಲವನ್ನು ಮಿಂದ್ರು ಭಸಿತಧಾರಣಮಾಡಿಕೊಂಡು ರುದ್ರಾಕ್ಷಿಗಳಿಂದಲಂಕೃತರಾಗಿ ಶಿವಾರ್ಪಿತಕುಸುಮ ವನ್ನು ಸಿರಿಮುಡಿಗೆ ಧರಿಸಿಕೊಂಡು ಶಿವಶೇಷಕರ್ಪೂರತಾಂಬೂಲವನ್ನು ಸ್ವೀಕ ರಿಸಿ ಶರಣಶ್ರೇಣಿಯನ್ನು ಸತ್ಕರಿಸಿ ಇದು ಶಿವಭಕ್ತಿಪ್ರವರ್ಧನಕಾರ್ಯಕ್ಕೆ ಸಂಚ ಕಾರವೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಳ್ಳುತ್ತ ತನ್ನ ತಾಯಿ ಮತ್ತು ಭಕ್ತವೃಂದ ದೊಡನೆ ಅಂಬಾನಗರಿಯಿಂದ ಪೊಂದಣವನೇರಿ ಹೊರವಂಟು ದೋರಸಮುದ್ರಕ್ಕೆ ಬಂದರು. ಇವರು ಬಂದ ವಾರ್ತೆಯನ್ನು ಕೇಳಿದ ಮಂತ್ರಿಗೌರಪದಣಾಯಕರು ಅಖಿಲವೈಭವದೊಡನೆ ಚತುರಂಗಬಲಸಮೇತವಾಗಿ ಹೋಗಿ ಇದಿರುಗೊಂಡು ಪದ್ಮರಸರನ್ನು ಭದ್ರಗಜದ ಮೇಲೆ ಕೂಡ್ರಿಸಿ ವೈಭವದ ಮೆರೆವಣಿಗೆಯಿಂದ ಪುರ ದೊಳಕ್ಕೆ ಕರೆತಂದರು. ಆಗ ಕಂಡುಬಂದ ಛತ್ರ ಚಾಮರ ಗುಡಿ ಪತಾಕೆ ಮೊದ ದವುಗಳ ಹೊಂದಾಣಿಕೆಗಳು ಅತ್ಯಂತ ಶೋಭಾವಹವಾಗಿದ್ದುವು. ವಿಪಂಚಿ, ವಲ್ಲಕಿ, ಚಿತ್ರೆ, ಜ್ಯೇಷ್ಠೆ, ಘೋಷವತಿ, ವಿಜಯೆ, ನಕುಲೋಷ್ಠಿ, ಕೂರ್ಮಿ, ತುಂಬುರಿ, ವಿಕುಬ್ಜಿಕೆ, ಹಸ್ತಿಕೆ, ಶತತಂತ್ರಿ, ಕಿನ್ನರಿ, ಪರಿವಾದಿನಿ, ಸಾರಂಗಿ,

ರಾವಣಹಸ್ತೆ, ಪಟಹ, ಹುಡುಕ್ಕೆ, ಕುಡುಕ್ಕೆ, ಡಕ್ಕೆ, ಮೃದಂಗ, ಕರಡೆ, ಡಕ್ಕುಲಿ, ಮುಂಡಿಡಕ್ಕೆ, ಸೆಲ್ಲುಕೆ, ಕುಡುವೆ, ಉರುರುಂಜೆ, ಸತ್ರಿವಳಿ, ಡವಸೆ, ನಿಸ್ಸಾಳ, ಡಮರುಕ, ಭೇರಿ, ಸ್ತಂಭಕಿ, ತಾಳ, ಕಾಂಸ್ಯತಾಳ, ಜಯಘಂಟೆ, ಕುಡುಕ, ಕಮ್ರು, ಘನಮನ, ಪಾಲಿಕೆ, ಮುಹುರಿ, ಶೃಂಗವಂಶ, ಕಹಳೆ, ಶಂಖ, ಮುಂತಾದ ವಾದ್ಯಸಮೂಹವನ್ನು ತಳಸಂಚು ಮಧ್ಯಸಂಚು ಉಪ್ಪರದಸಂಚು ಇವುಗಳನ್ನು ಅಳವಡಿಸಿಕೊಂಡು ಸಂಯೋಗ ವಿಪ್ರಯೋಗಗಳ ಕ್ರಮದಿಂದ ಅಸ್ವರ ಸ್ವರಜನಿತ ವಾದ ವಿವಿದ ಪಾಠಂಗಳನ್ನು ತಳಪಾಟ ಹಸ್ತಪಾಟದ್ವಯದಿಂದ ಅಮರ್ದು ಹಸ್ತ ದ್ವಯಾಂಗುಲಿಕೋಣ ಜಿಹ್ವಿಕೋಪಾಧಿಗಳಿಂದ ಸ್ಫುರಿಸಿ ಬಾರಿಸುವರು. ಪಂಚ ವಿಂಶತಿವಿಧವನಾರ್ಬೈದು ಎಂಭತ್ತೆಂಟು ಪಾಠಭೇದಂಗಳಿಂದ ಮಿಳಿರ್ವ ವಾದ್ಯವರ್ಗ ಪ್ರಭೇದದ ಶುದ್ಧಕೂಟದಿಂದ ಕೋಮಲ ಅತ್ಯಂತಕೋಮಲ ಪಾಟಕುಳಗಳಿಂದ ಆ ಮೇಳವು ಶೋಭಾಯಮಾನವಾಗಿರಲು ತಾಳಾನುಗತಮಾಗಿ ಕುಶಲಗತಿಯಿಂದ ಬಾರಿಸತೊಡಗಿದರು. ಕಂದಾವುಜಕೆ ವಿಜಯಮತ್ಥ, ಡಮರುಗಕ್ಕೆ ಸಾಳುಗಮತ್ಥ, ಹಸ್ತಾವುಜಕೆ ಪ್ರಥಮಮತ್ಥ, ಆರುಂಜೆಗೆ ಕೀಲಮತ್ಥ, ಚೌಡಿಕೆಗೆ ಸರಸಮತ್ಥ, ಕುಡುಕ್ಕಂದಲೆಗೆ ಪಟುಮತ್ಥ, ಅಡ್ಡಾವುಜಕೆ ರವಿಮತ್ಥ, ಭಾರಿವಾದ್ಯಕ್ಕೆ ಚಕ್ರಮತ್ಥ, ಕುಂಭಕ್ಕೆ ವಿರಾಮಮತ್ಥ, ಕರಠವಣೆಗೆ ಧನಂಜಯಮತ್ಥ, ಪಂಚಮುಖಿಗೆ ಶ್ರೀಮತ್ಥ, ತರ್ಪಟೆಗೆ ಅಹೋರಂಗಮತ್ಥ, ಮಲಹರಿಗೆ ಜಯಪ್ರಿಯಮತ್ಥ, ಶುದ್ಧಕೆ ಒಡ್ಡಿಯಮತ್ಥ, ಕುಡುಪಾವುಜಕೆ ನಿರ್ವಾಣಮತ್ಥ, ಡಕ್ಕುಲಿಗೆ ವಿಚಾರ ಮತ್ಥ, ಕಮ್ರುಗೆ ಮೂಲಕಲ್ಯಾಣಮತ್ಥ, ಮುಂಡಿಡಕ್ಕೆಗೆ ಕರಾಳಮತ್ಥ, ಕರಟೆಗೆ ವಿಲಾಸಮತ್ಥ, ಡಕ್ಕೆಗೆ ವಲ್ಲಭಮತ್ಥ ಪಟ್ಟವಾದ್ಯಕೆ ಘನಮತ್ಥ, ಕಲಾಪಮತ್ಥ, ಶಂಖಕೆ ಚಿತ್ರಮತ್ಥ, ಕಹಳೆಗೆ ಮುದ್ರಿತಮತ್ಥ, ವೀರಣಕ್ಕೆ ಆಲಾಪಮತ್ಥ, ಶೃಂಗಕೆ ತಾರಾಪ್ರತಿಮಮತ್ಥ, ತ್ರಿವಳಿಗೆ ವರಣಮತ್ಥ, ನಿಸ್ಸಾಳಕ್ಕೆ ಗಭೀರಮತ್ಥ, ಕಾಂಸಾಳಕೆ ವಾಮಮತ್ಥ, ಗಿಡಬಿಡಿಗೆ ಭಿನ್ನಮತ್ಥ, ಭೇರಿಗೆ ಕಳಿಂಗಮತ್ಥ, ರಣಭೇರಿಗೆ ಸಂಕೀರ್ಣಮತ್ಥ ಇವು ಹೊರಹೊಮ್ಮಲು ವಾದ್ಯಧರರು ಬಾರಿಸಿದರು. ಮೇಳಾಪಕ, ದೇಶಾಖ್ಯ ಪದ್ಧತಿ, ಆಳಾಪಚಾರಿಣಿ, ಆಕುರವ, ವೈಖರಿ, ವಹಣಿ, ಶ್ರಮ ವೈಖರಿ, ಕುರುಚಾಲಿಕ, ಸುಚಾಲಿಕ, ಕೂಟಮಾನ ಇವುಗಳನ್ನು ಚಾಲಿ ಬೈಸಿ ಗಯು ನೆತ್ತಿ ಬಾಜಿಸುವ ಮದ್ದಳಿಗನನ್ನು ಪದ್ಮರಸರು ಮನ್ನಿಸುತ್ತ ನಡೆದರು. ಮಾರ್ಗ ವನ್ನಿರಿಸಿ, ಕ್ರಿಯಾಜಾಲವನ್ನು ಸ್ಫುರಿಸಿ, ಉಚಿತಾಂಗವನ್ನು ಸಂಗಳಿಸಿ, ನೆಲೆಯರಿದು ಜಾತಿಯ ಸಂಪ್ರಯೋಗಿಸಿ, ಕಳೆಯ ಪತ್ತಿಸಿ, ಲಯವನ್ನು ನೇತಿಗೆಯ್ದು, ಯತಿಯನ ಮರ್ಚಿ, ಪ್ರಸ್ತಾರಜ ಪ್ರಯೋಗಜಮಾದ ತಾಳವನ್ನು ಲಕ್ಷ್ಯ ಲಕ್ಷಣಸಹಿತವಾಗಿ ಎತ್ತಿ, ಶಬ್ದಾದಿಗಳನ್ನು ರಚಿಸಿ, ರಮಣೀಯಮಾದ ಅತಿಚಮತ್ಕೃತಿಗಳನ್ನು ತಜ್ಞ

ಸಮಿತಿಗೆ ಕೌತೂಹಲಂದೋರುವಂತೆ ಉಗ್ಘಡಿಪ ತಾಳಧರರನ್ನು ಪದ್ಮರಸರು ಪೊಗಳುತ್ತ ನಡೆದರು. ಸ್ಥಾಯಿಯನ್ನು ಮಾಡಿ ಸಂಚಾಲಿಸಿ ಸ್ವರನ್ಯಾಯದಿಂದ ಮಂದ್ರ ಮಧ್ಯ ತಾರಗಳ ಸಿದ್ಧಿಯನ್ನು ಪಡೆದು ಸ್ತ್ರೀ-ಪುರುಷರ ಆಯೋಗವನುನುಂಟುಮಾಡಿ ಮೋಹನಮನುದಯಿಸಿ ಠಾಯನಿಯಮವ್ಯಾಪ್ತಿಗೆಯ್ದು ತಿರುಪ, ಆಯತ್ತಕಂಪಿತ, ಲೀನಮಾಂದೋಲಿತ, ವಲತ್ರಿಭಿನ್ನ, ಕುರುಳಮಾಹತ, ಹುಂಪಿತ, ಮುದ್ರಿತ, ನಾಮಿತ, ಮಿಶ್ರಿತಮೆನಿಪ್ಪ ಗಮಕವನ್ನು ನಿರ್ಮಿಸಿ, ಅಪಸ್ವರ, ಶಿರಃಕಂಪನ, ಅಲ್ಪಕಂಠ, ಮುಖವಿಕೃತಿ, ನಾಸಾಸ್ವರ ಇವೇ ಮೊದಲಾದ ದೋಷಗಳನ್ನು ಅತಿಗಳೆದು ಶುದ್ಧ ಸಂಕೀರ್ಣ ಸಾಳಗಸ್ಫುರಣದಿಂದ ತಾನ ವಿತಾನಗಳನ್ನು ಬೀರಿ ರಸಲಹರಿಗಳನ್ನು ರಚಿಸಿ, ಮೂರ್ಛೆಯನೆಸಗಿ ಪಾಡುವ ಜಾಣಗಾಣನ ಸಂಗೀತವನ್ನು ಲಾಲಿಸಿದರು. ರೇಖಾಸ್ಥಾಪನ, ಸೌಷ್ಠವಥಾಳ, ಸಾರತರತಾಳ, ಸಂಧಿಜ್ಞತಾನಿಜವಣೋದಾರ, ಲಳಿಕೂರ್ಮ, ಝುಂಕಾಂಕ, ಕೋಮಲಿಕಾಂಕ, ರಸವೃತ್ತಿ, ಹಂಸಗಮನ, ಆರಾಜದೋಯಾರ, ವೈಷಿಕಾಡಿಳ್ಳಾಯಿ, ಕಳಾಸಮುಖ, ಮೊದಲಾದ ನೃತ್ಯಾಂಗಗಳು ಆವಿರ್ಭವಿಸಲು ಶೃಂಗಾರಾದಿ ರಸಗಳನ್ನು ಅಭಿನಯಿಸಿ ಮೋಹಿಪ ನರ್ತಕಿಯನು ನೋಡುತ್ತ ನಡೆದರು. ಉಲಿವ ಪಡಿಯರರ, ಗಡಬಡಿಪ ಕೈವಾರಿಗಳ, ಹೊಗಳುವ ವಂದಿಮಾಗದರ, ವೈತಾಳಿಕರ, ನೆಲೆಯರಿದು ಮೇಳವನಮರ್ಚಿ ನರ್ತಿಸುವ ನರ್ತಕರಸತಿಯರ, ನಲಿನಲಿದು ಗತಿಗತಿಗೆ ಕುಣಿಕುಣಿದು ಕುಕಿಲಿರಿವ ಸುಲಭರ, ದಿಗಂತವನ್ನು ವ್ಯಾಪಿಸಿ ಮೊರೆವ ವಾದ್ಯಕುಲದ ರಭಸದಿಂದ ಅವನಿ ಶಬ್ದಬ್ರಹ್ಮಮಯವಾಯಿತು. ಸಕ್ಕರೆಯಸವಿಯ ತೊಂಡೆವಣ್ಬಾಯಿಯ, ಸೊಗಸನುಗುಳ್ವ ಅಕ್ಕಜದಮುದ್ದುವಾತಿನ, ಚೆಲ್ವುಹೊರಹೊಮ್ಮುವ ಹೊಂಬಣ್ಣದ ಸ್ತನದ, ವಿಶಾಲವಾದ ಸೆಕ್ಕುಂದುರುಂಬಿನ ರತಿಗೆ ಸರಿಸಮವೆನಿಪ ರೂಹಿನ, ಮೋಹನವನ್ನು ಹುಟ್ಟಿಸುವ ಚಿಕ್ಕಹರೆಯದ ಬೆದರಿದ ಎರಳೆಗಂಗಳ ಪೆಣ್ಮಕ್ಕಳು ಸಂಭ್ರಮವನ್ನು ನೋಡಲು ಧಾವಿಸಿಬಂದರು. ಬಾಣಾಸನವು (ಕಬ್ಬು) ಬಾಧೆಗೊಳಗಾಗಿ ಊರೂರಿಗೆ ಗಾಣದಲ್ಲಿಕ್ಕಿ ಅರೆಯಿಸಿಕೊಳ್ಳುತ್ತಿದೆ, ಬಾಣಂಗಳಾದರೊ ಕೋಗಿಲೆ ಮೊದಲಾದವುಗಳ ವಶವಾದುವು, ಅಕಟಾ ಹೆದೆಯು ಆರಡಿಗೊಂಡು ಭ್ರಮಿಸುವುದು, ಧನುರ್ಧರನು ಮೆಯ್ಗರೆದನು ಎಂದು ತಮ್ಮ ಪ್ರಾಣಕಾಂತರ ಸಹಾಯದಿಂದ ಮನ್ಮಥನನ್ನು ಜರಿವ ಚದುರಿಯರು ಅಲ್ಲಿ ನೆರೆದರು. ನೀನು ತಪ್ಪದೆ ಭೋಗಾಭಿಮುಖಿಯಾಗು. ಸಜ್ಜನಸಮೂಹದಲ್ಲಿ ಬೆರಸು. ನಿಷ್ಕಪಟವನ್ನು ಚಂದದಿಂದ ವ್ಯವಹರಿಸು. ಕೂರ್ತು ಕೂಡಿದವರನ್ನು ವಿಜಯಾಭಿರಾಮರೆನಿಸು. ರಾಗವೇ ರೂಹುವಡೆದುದೆಂಬಂತೆ ಸಂಪ್ರೀತಿಯಿಂದ ಕೂಡಿಕೊಂಡು ಚಲಿಸದಿರು. ಸನ್ಮಾರ್ಗವೃತ್ತಿಯಲ್ಲಿರು. ಎಂದು ಚದುರಿನಿಂದ ಬುದ್ಧಿ

ಹೇಳುವ ತಾಯಿಗಳೊಡನೆ ಗಣಿಕೆಯರು ಅಲ್ಲಿಗೆ ಒಲವಿನಿಂದ ಬಂದರು. ಬಾಡಿದ ಎಳೆವಳ್ಳಿಯಂತಹ ಮೈ ಬತ್ತಿದ ಕಪೋಲ, ರಸವುಡುಗಿದ ತುಟಿ, ಕೊರಗಿದ ವದನ, ಮತ್ತೆ ಮತ್ತೆ ಬರುವ ನಿಡುಸುಯ್, ಬಳಲಿದ ಕಣ್ಣು, ಬಡಿದುಕೊಳ್ಳುವ ಎದೆ, ದೈನ್ಯವಾಚನ ಇವೆಲ್ಲವುಗಳಿಂದ ಕೂಡಿ ಬೇರೊಂದು ಸೊಗಸನ್ನು ಸೂಸುತ್ತ ಕಾಮನ ಬಾಣಕ್ಕೆ ಗುರಿಯಾಗಿ ಶಿಶಿರೋಪಚಾರಕ್ಕೆ ದೇಹಮನಿತ್ತು ಪಾಡಳಿದ ವಿರಹಿಣಿಯರು ಶಾಂತಿಮಯಪದ್ಮರಸರನ್ನು ಈಕ್ಷಿಸುವ ಆಶೆಯಿಂದ ಬಂದರು. ಇಂತು ನಡೆತಂದು ಮೋಹನದೇಹರಾದ ಪದ್ಮರಸರನ್ನು ನೋಡುವ ಸಂತೋಷದಿಂದ ಉಪ್ಪರಿಗೆ, ಗೋಡೆ, ಚಪ್ಪರ, ಮಾಳಿಗೆ, ಕಟ್ಟೆಗಳನ್ನೇರಿ ತಮ್ಮ ಕಣ್ಸನ್ನೆಯಿಂದ ಕಾಮನನ್ನು ಪುಟ್ಟಿಸುತ್ತ ತಮ್ಮ ತಮ್ಮೊಳು ಒಬ್ಬರೊಬ್ಬರಿಗೆ ಪದ್ಮರಸರನ್ನು ತೋರಿಸುತ್ತ ಬಾಯತಿಂಡೆ ತೀರುವಂತೆ ಆತನನ್ನು ಹೊಗಳಿ ನೇಹದಿಂದ ನೋಡುತ್ತಿದ್ದರು. ಅವರಲ್ಲೊಬ್ಬಳು ತನ್ನ ಮಗಳಿಗೆ ಅನುಪಮರಾದ ಪದ್ಮರಸರನ್ನು ತೋರಿಸಲು ಎವೆಯಿಡದೆ ನೋಳ್ಪ ಆ ನರಯುವತಿ ಸುರಯುವತಿಯಂತೊಪ್ಪಿದಳು. ಮತ್ತೋರ್ವಳು ತನ್ನ ಮಗಳಿಗೆ ಆತನನ್ನು ತೋರಿಸಲು ಸಮ್ಯಕ್‌ಗತಿಯುಳ್ಳ ಆ ಮನವು ನವಭಕ್ತಿರತಿಯಂತುಟಾಯಿತು. ನಾನಾ ಸತೀನಿವಹವು ಈ ರೀತಿಯಾಗಿ ಈಕ್ಷಿಸುತ್ತಿರಲು ಪದ್ಮರಸರು ಬಂದು ಗಜದಿಂದಿಳಿದು ವಿಲಾಸದಿಂದ ಮಂಟಪವನ್ನು ಪ್ರವೇಶಿಸಿ ಸಕಲ ಶರಣರರ್ಗೆರಗಿ ಕುಳಿತುಕೊಂಡರು.

ಕೂಡಲೇ ಮಂತ್ರೀಶಗೌರಪದಣಾಯಕರು ಅತಿಥಿಪೂಜೆ, ಅಘನಕ್ಷತ್ರ ಈಶ್ವರಯೋಗ, ಶಿವೋಪಕರಣ, ಶಿವಶರಣಚರಣಲಗ್ನ ದೃಕ್ ಕ್ರಿಯಾಬಲಾನ್ವಿತರಾದ ವೀರಶೈವ ಆಚಾರ್ಯರಿಗೆ ವಾರ ತಿಥಿ ಯೋಗ ಕರಣಾದಿ ಎಲ್ಲವೂ ಶುಭಕಾಲವೇ ಎನ್ನುತ್ತ ಪರಮಪಾವನೆಯಾದ ತನ್ನ ಮಗಳನ್ನು ಕರೆತಂದು ಶಿವಶರಣರಿಗೆ ಬಾಗಿಸಿ ಶಿವಾಗಮಾಚರಣಗಳು ಸಾಂಗವಾಗಲು ಎಲೆ ಮಹಾಪುರುಷಾ, ಎನ್ನ ಭಕಿ ಪ್ರಾರ್ಥನೆಗಳನ್ನು ಮನ್ನಿಸೆನುತ್ತ ಆ ತನ್ನ ಮಗಳ ಹಸ್ತವನ್ನು ಶಿವಸ್ವರೂಪೀ ಪದ್ಮರಸರ ಹಸ್ತದಲ್ಲಿರಿಸಿದನು. ಕೂಡಲೇ ಸುಮಂಗಲೆಯರು ಆರತಿಯನ್ನೆತ್ತಿ ಆಶೀರ್ವದಿಸಿದರು. ವಾದ್ಯಗಳು ಮೊಳಗಿದುವು. ದಂಪತಿಗಳು ಎದ್ದು ಭಕ್ತರಿಗೆ ನಮಿಸಿ ಅವರ ಆಶೀರ್ವಾದಪಡೆದರು. ಪದ್ಮರಸರು ಆ ಭಕ್ತಾವಳಿಯನ್ನು ಕುರಿತು ತಂದೆಗಳೇ, ನಿಮ್ಮ ಆಜ್ಞೆಯನ್ನು ಶಿರಸಾವಹಿಸಿ ಆಚರಿಸುವ ಭೃತ್ಯನಾದ ನನ್ನನ್ನು ಸಂರಕ್ಷಿಸಿರೆಂದು ಬಿನ್ನವಿಸುತ್ತ ಧನ ಆಭರಣ ವಸ್ತ್ರ ಮೊದಲಾದವನ್ನಿತ್ತು ನಮಸ್ಕರಿಸಿ ಅವರ ಅಪ್ಪಣೆಪಡೆಕೊಂಡರು. ಮತ್ತು ಉಳಿದವರನ್ನು ಯಥೋಚಿತವಾಗಿ ಮನ್ನಿಸಿ ಕಳಿಸಿ ಸಂಭ್ರಮದಿಂದ ಮಹದೇವಿಸಹಿತವಾಗಿ ಅಂತಃಪುರವನ್ನು

ಹೊಕ್ಕು ಸಾಂಗವಾಗಿ ಶಿವಾರ್ಚನೆಯನೆಸಗಿ ಪ್ರಸಾದವನ್ನು ಸ್ವೀಕರಿಸಿ ಶೇಷ ಕರ್ಪೂರ ತಾಂಬೂಲವನ್ನು ಸವಿಯುತ್ತಿದ್ದರು. ರತಿಗೆ ರತಿಯನ್ನು ಹುಟ್ಟಿಸುವ ರೂಪು, ವಾಣಿಗೆ ಉನ್ನತವಾಣಿಯನ್ನು ಕಲಿಸುವ ವಾಗ್ವಿಲಾಸ, ಸೂರ್ಯಸತಿಗೆ ತೇಜದ ಓಜೆಗೆಯ್ವ ಕಾಂತಿ, ಸಿರಿಗೆ ಸಿರಿಯನ್ನು ಹುಟ್ಟಿಸುವ ಮೆಯ್ಸಿರಿ, ಕ್ಷಿತಿಗೆ ಧೃತಿಯನ್ನು ತೋರಿಸುವ ಶಮತೆ, ಗಂಗೆಗೆ ಪವಿತ್ರತೆಯನ್ನು ದರ್ಶಿಸುವ ಪಾವಿತ್ರ್ಯ, ಅರುಂಧತಿಗೆ ಪತಿವ್ರತವನ್ನು ಬೋಧಿಸುವ ಪಾತಿವ್ರತ್ಯ ಎರಡನೆಯ ಈ ಉಮಾದೇವಿಯಲ್ಲಿರುವವೆಂದು ಉತ್ತಮರು ಬಣ್ಣಿಸುವರು. ಮಹಾದೇವಿ ಮಡದಿಯರ ತಲೆವಣಿಯೆನಿಸಿ ಮೆರೆದಳು ಇಂತು ಸಚ್ಚರಿತಕ್ಕೆ ಮಾತೃಕೆಯೆನಿಸಿ ಮೆರೆವ ಕಾಂತಾ ಶಿರೋಮಣಿ ಮಹಾದೇವಿಯರೊಡನೆ ಪರಶಿವನ ಪಾದಕಮಲಗಳನ್ನು ಪರಮಾನುರಾಗದಿಂದರ್ಚಿಸುತ್ತೆ ಶರಣಸಂತತಿಯನಾರಾಧಿಸುತ್ತೆ ಪದ್ಮರಸರು ದಿವ್ಯಾನುಭವ ಲಹರಿಯಲ್ಲಿದ್ದರು.

ನಾಲ್ಕನೆಯ ಸಂಧಿ

ದಂಡನಾಥ ಪದ್ಮರಸರು

ಗೌರಣಾರ್ಯರು ತಮ್ಮ ಮಗಳನ್ನು ಉಮಾರೂಪರಾದ ಪದ್ಮರಸರಿಗೆ ಕೊಟ್ಟು ಕೆಲವು ದಿನ ಸಂತೋಷದಿಂದಿದ್ದು ನಿಮ್ಮ ಶರಣನಿಗೆ ಎಮ್ಮ ಮಗಳನ್ನು ಕೊಟ್ಟೆನೆಂಬ ಸಂತಸದ ವಾರ್ತೆಯನ್ನು ಗಣಕುಲಕೆ ತಿಳುಹಲು ಕೈಲಾಸಕ್ಕೆ ಹೋದನೋ ಎಂಬಂತೆ ಆತನು ಶಿವೈಕ್ಯನಾದನು. ಬಲ್ಲಾಳರಾಯನು ಆ ಸುದ್ದಿಯನ್ನು ಕೇಳಿ ಚಿಂತಾಕುಲಿತಹೃದಯನಾದನು. ಗೌರಣಾಯಕರ ಬಂಧುಬಳಗದವರನ್ನೆಲ್ಲ ಕರಸಿ "ಈ ರಾಜ್ಯಭಾರವನ್ನು ನಡೆಸಿಕೊಂಡು ಹೋಗುವ ಬಲ್ಲಾಳು ನಿಮ್ಮಲ್ಲಿ ಯಾರಾದರೂ ಉಂಟೇ" ಎಂದು ಕೇಳಿದನು. ಆಗಲವರು "ಗೌರಣಾಮಾತ್ಯರ ಅಳಿಯನು ಎರಡನೆಯ ಶಿವನಂತಿರುವನು. ಅಖಿಳ ವೇದಾಗಮಪುರಾಣಾದಿಗಳ ರಹಸ್ಯಾರ್ಥವನ್ನು ಆತನು ಅರಿತಿರುವನು. ಶ್ರೀಗುರುಪರಂಪರೆಯಿಂದ ಬಂದವನು. ಎಲ್ಲಾ ಕಲೆಗಳಿಗೆ ಆಗರನಾಗಿರುವನು. ಆತನೇ ಪದ್ಮರಸನು." ಎಂದು ನುಡಿದರು. ಅದನ್ನು ಕೇಳಿ ಅರಸನು ತನ್ನ ಚಿಂತೆಯನ್ನು ನೀಗಿ ಆನಂದಭರಿತನಾಗಿ ತನ್ನ ಆತ್ಮೀಯರನ್ನು ಕರೆದು "ನೀವು ಈ ಸುವರ್ಣದ ಅಂದಣವನ್ನು ತೆಗೆದುಕೊಂಡು ಹೋಗಿ ಪದ್ಮರಸರಿಗೆ ಕಾರ್ಯಾಂತರವನ್ನು ತಿಳಿಸಿ ಅವರನ್ನು ಕರೆದುಕೊಂಡು ಬರಬೇಕೆ"ಂದು ಆಜ್ಞಾಪಿಸಿದನು. ರಾಯಭಾರಿಗಳು ಬಾಳ್ದೆವೆಂದು ಆನಂದಪುಲಕಿತರಾದರು. ದೊರೆಯ ಮಾತನ್ನು ಶಿರಸಾವಹಿಸಿ ಪದ್ಮರಸರಲ್ಲಿಗೆ ಹೋಗಿ ಅವರನ್ನು ಕಂಡು ನಮಸ್ಕರಿಸಿ ಭಯಭಕ್ತಿಪೂರ್ವಕವಾಗಿ ಹೀಗೆ ಬಿನ್ನವಿಸಿದರು : "ಮಹಾಪುರುಷರೇ, ಚಿತ್‌ಸುಖಾಸ್ವಾದಿಗಳಾದ ತಮಗೆ ಇಹದ ಭೋಗ, ಸ್ವರ್ಗ, ಮೋಕ್ಷ ಇವು ಲಕ್ಷ್ಯವಲ್ಲ. ಮಾಯೆಯ ಸುಖ ನಿಮಗೆ ಪ್ರಿಯಕರವಾದುದಲ್ಲ. ಆದರೂ ನೀವು ಲೋಕರಕ್ಷಕರಾಗಿ ಜನಿಸಿದ ಕೃಪಾಳುಗಳಾದುದರಿಂದ ಎಮ್ಮರಸನ ಇಷ್ಟವೊಂದನ್ನು ಸಲಿಸಬೇಕು. ಅವನೇನು ನಿಮಗೆ ಹೊರಗೇ? ಪ್ರಧಾನಪಟ್ಟಕ್ಕೆ ಭಂಡಾರಕ್ಕೆ ಪರಿವಾರಕ್ಕೆ ಆಪ್ತವರ್ಗಕ್ಕೆ ಅಶ್ವಗಜರಥಕ್ಕೆ ಇಡೀ ಭೂಮಿಯ ರಕ್ಷೆಗೆ ಶಿಕ್ಷೆಗೆ ಉಳಿದೆಲ್ಲಕ್ಕೆ ವಿಚಾರಿಸಲು ನೀವೇ ದೊರೆಗಳು. ಇದನ್ನು ಚಿತ್ತಯಿಸಿ ಎಮ್ಮರಸನನ್ನು ಪರಿರಕ್ಷಣಮಾಡಬೇಕು." ಎಂಬ ಸಭ್ಯರ

ನುಡಿಯನ್ನು ಕೇಳಿ ಪದ್ಮರಸರು ಇದು ಗುರುವಾಜ್ಞೆಯೆಂದು ತಿಳಿದು ಅದಕ್ಕೆ ಒಪ್ಪಿಗೆಯನ್ನಿತ್ತರು. ಸರ್ವ ಮಾಹೇಶ್ವರರ ಸಮೂಹಕ್ಕೆ ಮೆಯ್ಯಿಕ್ಕಿ ಬೀಳ್ಕೊಂಡು ಬಂದು ಬಹು ಕಾಂತಿಮಯವಾಗಿ ಥಳಥಳಿಪ ಪೊನ್ನಂದಣವನೇರಿ ಸಕಲ ವೈಭವ ದಿಂದ ದೊರೆಯ ಆಸ್ಥಾನಕ್ಕೆ ನಡೆತಂದರು. ಬಲ್ಲಾಳರಾಯನು ಈ ವಾರ್ತೆ ಯನ್ನು ಕೇಳಿ ಮೈಯುಬ್ಬಿ ಇದಿರ್ವಂದು ಪರಮಾನಂದದಿಂದ ಆತನನ್ನು ನೋಡಿ ಅತ್ಯಂತ ಸೌಜನ್ಯದಿಂದ ಪದ್ಮರಸರನ್ನು ಉಪಚರಿಸಿ ಅವರನ್ನು ತನ್ನ ಸಭಾಸ್ಥಾನಕ್ಕೆ ಕೊಂಡೊಯ್ದು ತನ್ನ ಸಿಂಹಾಸನದ ಬಲಗಡೆಯ ಉನ್ನತಾಸನದಲ್ಲಿ ಕುಳ್ಳಿರಿಸಿದನು. "ಸಕಲ ಧನಧಾನ್ಯ ವಸ್ತ್ರ ಆಭರಣ ರಾಜ್ಯ ಅಶ್ವ ಹಸ್ತಿ ರಥ ಸೈನ್ಯಾದಿ ವೈಭವವೆಲ್ಲ ನಿನ್ನ ವಶವು. ನಾನು ನಿನ್ನನ್ನೇ ನಂಬಿರುವೆನು. ಇವನ್ನೆಲ್ಲ ಪಾಲಿಸುತ್ತ ನನ್ನ ಕಾರ್ಯವನ್ನು ಉನ್ನತಗೊಳಿಸಿ ಚತುಸ್ಸಮುದ್ರಗಳವರೆಗೆ ನನ್ನ ಕೀರ್ತಿ ಹಬ್ಬು ವಂತೆಸಗಬೇಕು." ಎಂದು ಅತ್ಯಂತ ವಿನಯೋಕ್ತಿಯಿಂದ ಆ ಮಹಾತ್ಮನಿಗೆ ಬಲ್ಲಾಳ ಭೂಪಾಲನು ನುಡಿವು ವಿಧಿಪೂರ್ವಕವಾಗಿ ದಂಡೇಶಪಟ್ಟವನ್ನು ಕಟ್ಟಿದನು. ವಸ್ತ್ರ ಆಭರಣ ಲೇಪನಾದಿಗಳಿಂದ ಆರಾಧಿಸಿ ಗೌರಣಾಯಕರ ಸಕಲ ಸಂಪತ್ಸಂತತಿ ಯನ್ನೂ ಆತನಿಗೆ ಒಪ್ಪಿಸಿಕೊಟ್ಟನು. ಆ ನೇಲೆ ಎಲ್ಲರೂ ಆತನಿಗೆ ಕಾಣಿಕೆಯನ್ನು ಸಲ್ಲಿಸಿದರು. ತದನಂತರ ಶಿವಸಮಯೋಪಕಾರಿಯಾದ ಪದ್ಮರಸರನ್ನು ಅರಸನು ಮನೆಗೆ ಕರೆದುಕೊಂಡು ಹೋಗುವಾಗ ಹೀಗೆ "ನುಡಿದರು : ನೃಪಾಲಾಗ್ರಣಿಯೇ ಆಗಳೇ ನೀನು ನಮ್ಮನ್ನು ನೋಡಿ, ನಿನ್ನ ನಂಬಿದೆನು ಎಂದು ನುಡಿದೆ. ಚತುರ್ದಶ ಭುವನಗಳನ್ನು ರಕ್ಷಿಸಲು ಶಕ್ತನಾದ ಚಂದ್ರಮೌಳಿಗೆ ನಿನ್ನೊಬ್ಬನನ್ನು ಸಲಹು ವುದು ಅರಿದೇ ? ಈಶಭಕ್ತರದೆಸೆಗೆ ಅಕೃತ್ಯವನ್ನು ತಾಳದಿರು. ನಿನ್ನ ಕೀರ್ತಿ ಸಪ್ತ ಸಾಗರದವರೆಗೂ ಹಬ್ಬುವದು" ಎಂದು ನುಡಿದ ದಂಡಾಧಿನಾಥನ ಉಚಿತೋಕ್ತಿಗೆ ಮನಂದಣಿದು ಸಂತಸಂಬಟ್ಟು ಹಿರಿಯಾನೆಯನ್ನು ತರಿಸಿ ಆತನನ್ನು ಕುಳ್ಳಿರಿಸಿ ಭೂಪತಿಯು ಕಳುಹಿಸಿದನು. ಹೇದದಾನಂದದಿಂದ ಪದ್ಮರಸರು ಬಂದು ತಮ್ಮರ ಮನೆಯ ಮುಂದೆ ಆನೆಯಿಂದಿಳಿದು ಅಂತಃಪುರವನ್ನು ಪ್ರವೇಶಿಸಿದರು. ಇದನ್ನು ಕಂಡು ಭೂದೇವಿ ಪುಲಕಿತೆಯಾದಳು.

ಪದ್ಮರಸರ ಭಕ್ತ್ಯಾತಿಶಯವನ್ನು ಬಣ್ಣಿಸಬೇಕಾದರೆ ಒಂದೊಂದು ನಾಲಗೆಯುಳ್ಳ ಎಮ್ಮಂದಿಗರ ಹವಣಲ್ಲ. ಬಹಳ ಹೇಳುವದೇನು ! ಎರಡು ಸಾಸಿರ ನಾಲಗೆ ಯುಳ್ಳ ಆದಿಶೇಷನಿಗೂ ಅದು ಅಸಾಧ್ಯ. ಕಾಲಕಂಠನೊಬ್ಬನೇ ಅದನ್ನು ಬಲ್ಲ. ಶಿವಭಕ್ತವೃಂದವನ್ನು ಸಂತೋಷದಿಂದ ಬರಮಾಡಿಕೊಂಡು ನಮುಸ್ಕರಿಸಿ ಅವರ ಅಡಿದೊಳೆದು ಪಾದೋದಕವನ್ನು ಸ್ವೀಕರಿಸಿ ತಮ್ಮ ಮನೆಯಲ್ಲಿ ಉನ್ನತಾಸನದ

ಮೇಲೆ ಮೃತ್ಯುಂಜಯಯನ ಆ ಮಹಾಶರಣರನ್ನು ಮೂರ್ತಿಗೊಳಿಸುತ್ತೆ ಅವರಿಗೆ ಪೂಜೆಯನ್ನು ಸಲ್ಲಿಸಿ ಉತ್ತಮ ಭಕ್ಷ್ಯವನ್ನು ನೀಡಿ "ಜಯ ಜಯ ಸ್ವಾಮೀ ಅವಧಾರು" ಎಂದು ಜಂಗಮಪ್ರಾಣಿ ಸಾಷ್ಟಾಂಗ ನಮಸ್ಕರಿಸುವನು. ಭಕ್ತನಿಕರವು ಆತನನ್ನು ಹರಸಿ ಲಿಂಗಾರ್ಪಿತವನ್ನು ಮಾಡಿ ಆ ಷಡ್ರಸಾನ್ನವನ್ನು ಲಿಂಗಭೋಗೋಪಭೋಗಂಗೆಯ್ದು ಕರ್ಪೂರತಾಂಬೂಲವನ್ನು ಸ್ವೀಕರಿಸುವರು. ಹೀಗೆ ಹರಗಣಂಗಳು ಶೈವಾಂಬುಧಿಯ ತೆರೆತೆರೆಗಳಂತೆ ಪದ್ಮರಸರ ಮನೆಗೆ ಬರುತ್ತಿದ್ದರು. ಆ ತಿಂತಿಣಿಯನೀಕ್ಷಿಸಿ ಪದ್ಮರಸರು ಆನಂದತುಂದಿಲರಾಗಿ ರೋಮಾಂಚನವನ್ನು ತಾಳುವರು. ಕಾಮಿನಿಯರನ್ನೂ ಹೇಮನಿವಹವನ್ನೂ ಭೂಮಿಯನ್ನೂ ದಿವ್ಯಾಂಬರಗಳನ್ನೂ ವಾಹನಾದ್ಯಖಿಳವಸ್ತುಗಳನ್ನೂ ಶಿವಭಕ್ತರಿಗಿತ್ತು ಅವರನ್ನು ಸ್ತುತಿಸುತ್ತ "ನಿಮ್ಮ ಬಾಗಿಲ್ಕಾಪಿನ ಆಳು ನಾನು. ನಿಮ್ಮ ಕೋಮಲಾಂಘ್ರಿಯ ಪಾದರಕ್ಷೆಗಳನ್ನು ತಳೆದವನು ನಾನು. ನಿಮ್ಮ ಭೃತ್ಯರ ಭೃತ್ಯತತಿಯ ಭೃತ್ಯನು. ನನ್ನನ್ನು ಇದೇ ರೀತಿಯಾಗಿ ನಿತ್ಯವೂ ಪೊರೆಯಬೇಕು. ಎನ್ನೊಡೆಯರೇ, ನಿಮ್ಮ ಸಮಯವನ್ನು ಪಡೆಯಲಿಕ್ಕೆ ಹರಿ, ಅಜ, ಇಂದ್ರ ಮೊದಲಾದವರಿಗೂ ಸಾಧ್ಯವಿಲ್ಲ. ನಾನೆಂತಹ ಭಾಗ್ಯನು !" ಎಂದು ಸನ್ನುತಿಗಳಿಂದ ತುಷ್ಟಿವಡಿಸಿ ಆ ಭಕ್ತರಿಗೆ ತನ್ನ ಭಾಷೆಯನ್ನು ಹೀಗೆ ವಿವರಿಸಿದನು:

"ಶಿವಸಮಯವನ್ನು ನಿಲಿಸುವ ಭಾಷೆ. ಶರಣರಿಚ್ಛೈಸಿದುದನ್ನು ಇಲ್ಲೆನ್ನದೀವ ಭಾಷೆ. ಪರವಾದಿಗಳನ್ನು ಎರಗಿಸುವ ಭಾಷೆ. ಶಿವತಂತ್ರದ ಒರೆಯನ್ನು ಊರ್ಜಿತಗೊಳಿಸುವ ಭಾಷೆ. ಶಿವಭಕ್ತರನ್ನು ಆರಾಧಿಸುವ ಭಾಷೆ. ಶಿವಪೂಜೆಯನ್ನು ಸಾಂಗವಾಗಿ ರಚಿಸುವ ಭಾಷೆ. ಪರನಾರಿ ಗುರುನಾರಿಯೆಂದು ಚರಿಸುವ ಭಾಷೆ. ಆರ್ತರನ್ನು ಪೋಷಿಸುವ ಭಾಷೆ. ಮಾಹೇಶ್ವರರ ಕುಲವನ್ನು ವಿಚಾರಿಸದ ಭಾಷೆ. ಶಿವನಿಂದೆಯನ್ನು ಕೇಳದ ಅಚಲಭಾಷೆ. ಶಿವಾರ್ಪಿತವಲ್ಲದುದನ್ನು ಸ್ವೀಕರಿಸದ ಭಾಷೆ. ಭವಿಪಾಕವನ್ನು ಬೆರಸದ ಭಾಷೆ. ಇತರರ್ಗೆ ಗೆಲವನ್ನೀಯದಿಹ ಭಾಷೆ. ಭಕ್ತರ್ಗೆ ಗೆಲವೀವ ಭಾಷೆ. ವ್ರತಭ್ರಷ್ಟರನ್ನು ಈಕ್ಷಿಸದ ಭಾಷೆ. ಶಿವಭಕ್ತರನ್ನು ಶಿವನೆಂದು ತಿಳಿಯುವ ಭಾಷೆ. ಶಿವಾದ್ವೈತಸಿದ್ಧಾಂತವನ್ನು ಪ್ರತಿಷ್ಠೆಮಾಡುವ ಭಾಷೆ. ನರರನಾಶ್ರಯಿಸದ ಉತ್ಕಟಭಾಷೆ. ಅನೃತವನ್ನು ನುಡಿಯದ ಭಾಷೆ. ಕರಣೇಂದ್ರಿಯಾದಿಗಳ ಹರಿದಾಟವನ್ನು ಬಿಡಿಸಿ ಲಿಂಗಾಂಗಸಂಯೋಗದಲ್ಲಿ ನಿಲಿಸುವ ಭಾಷೆ. ಈ ಭಾಷೆಯೆಲ್ಲವನ್ನೂ ನಿಮ್ಮ ಪಾದಕಮಲಗಳ ಸಹಾಯದಿಂದ ಹೊತ್ತು ನಡೆಸುವೆನೆ"ಂದು ಶರಣಸಭೆಯಲ್ಲಿ ನುಡಿದು ಆ ಗಣಶ್ರೇಣಿಗೆ ಅಷ್ಟಾಂಗದಿಂದ ನಮಿಸಿ ಅವರನ್ನು ಕಳುಹಿಸಿಕೊಟ್ಟನು.

ಕಾಲಾನುಕೂಲವಾದ ಶಿವಪೂಜೆಯನ್ನು ಮುಗಿಸಿ ಪ್ರಸಾದ ಸ್ವೀಕರಿಸಿ ತನ್ನರಮನೆಯಿಂದ ರಾಯನ ಓಲಗಕ್ಕೆ ಬಂದು ದಕ್ಷಿಣಪೀಠದಲ್ಲಿ ಕುಳಿತುಕೊಂಡು ಕಾರ್ಯಭರವನ್ನು ನಡೆಸಿದನು. ಮುಂದೆ ಕರಣಶಾಲೆಗೆ ಹೋಗಿ ಹರಿಹರದೇವ ಮೊದಲಾದ ಹದಿನಾರುಜನ ಕರಣದವರನ್ನು ಕರೆಯಿಸಿ ಆಯವ್ಯಯದ ವಿವರವನ್ನು ವಿಚಾರಿಸಿದನು. ಅವರು ಹೇಳಿದುದನ್ನೆಲ್ಲ ಕೇಳಿ, ಅದನ್ನೆಲ್ಲ ಸರಿಯಾಗಿ ಗ್ರಹಿಸಿ ಭಂಡಾರ, ಬೊಕ್ಕಸ, ಉಗ್ರಾಣ, ಕಣಜ ಮುಂತಾದವುಗಳನ್ನೂ ಆನೆ, ಕುದುರೆ ಮೊದಲಾದವುಗಳನ್ನೂ ಹೊರವೆಚ್ಚ ಒಳವೆಚ್ಚ ಸುಂಕ ತಳಾರಿಕೆ ಎಲ್ಲವನ್ನೂ ಪರೀಕ್ಷಿಸಿದನು. ಎಲ್ಲೆಲ್ಲಿಯೂ ತಕ್ಕ ಸೂಚನೆಗಳನ್ನೂ ನಿಯಮಗಳನ್ನೂ ಮಾಡಿ ರಾಜ್ಯದಲ್ಲೆಲ್ಲ ತನ್ನ ಆಜ್ಞೆ ಮೆರೆವಂತೆ ಮಾಡಿದನು. ಬಲ್ಲಾಳನೃಪತಿಗೆ ವಿಪುಲವಾದ ದ್ರವ್ಯವನ್ನೂ ಯಶವನ್ನೂ ಪ್ರತಾಪವನ್ನೂ ಉಂಟುಮಾಡುತ್ತ ಆತನ ಬಲಭಾಗದ ದೇವರೆನಿಸಿ ಒಳ್ಳೆಯ ಶಕ್ತಿವಂತನೂ ಕೀರ್ತಿಶಾಲಿಯೂ ಆದನು. ಅನ್ಯಾಯಕ್ಕೆ ಎಡೆಗೊಡದಂತೆ ಅರಸೊತ್ತಿಗೆಯನ್ನು ನಡೆಸುತ್ತ ಪದ್ಮರಸರು ಬುಧರು ಭಾಪು ಎನ್ನುವಂತೆ ಮಾಡಿದರು. ಶಿವನಿಮಿತ್ತವನ್ನು ಶರಣಮುಖಪದ್ಮಮಿತ್ರರಾದ ಪದ್ಮರಸರು ಸರಿಯಾಗಿಯೇ ನಟಿಸಿತೋರಿಸಿದರು. ಈ ರೀತಿಯಲ್ಲಿ ರಾಜಕಾರ್ಯವನ್ನು ಪರಿಪೂರ್ತಿಗೊಳಿಸುತ್ತ ಸಮಸ್ತ ಮಾಹೇಶ್ವರರ ಪಾದಕಮಲಗಳನ್ನು ಭಾವಶುದ್ಧಿಯಿಂದ ಸೇವಿಸುವರು. ವೇದೋಕ್ತವೀರಶೈವಮಾರ್ಗವನ್ನು ದುಷ್ಕೃತ್ಯವೆಂಬ ಗಿಡು, ಬಳ್ಳಿ, ಹುಲ್ಲು, ಮರ, ಕಂಟಿ, ಕಲ್ಲು, ಮುಳ್ಳುಗಳು ಆವರಿಸದಂತೆ ಅದನ್ನು ಸುಗಮವಾಗಿಸಿ ಶರಣಾನುಭವಸೌಖ್ಯದಿಂದ ಒಪ್ಪುತ್ತಿದ್ದರು.

ಅಷ್ಟರಲ್ಲಿ ಮಹಾದೇವಿಯರ ಗರ್ಭದಲ್ಲ ಷಟ್‌ಸ್ಥಲಸ್ಥಾಪನಾರ್ಥವಾಗಿ ಕಡು ಮಹಿಮೆವಡೆದ ಷಣ್ಮುಖನ ಅತುಳಶಕ್ತಿಯು ಬಂದು ಒಳಪೊಕ್ಕು ಶೋಭಿಸಿತು. ಮೃಡಭಕ್ತರಾನಂದವು ಅಂಕುರಿಸಿತು. ಗಡಬಡಿಪ ಪರವಾದಿಗಳ ಸಂಭ್ರಮಾಟವಿಗೆ ಅಡವಿಗಿಚ್ಚಿನ ಬೀಜ ಬಿದ್ದಂತಾಯಿತು. ನವಮಾಸ ತುಂಬಲು ಅಮೃತಲತೆಯಲ್ಲಿ ದಿವ್ಯಫಲಮುದಯಿಸುವಂತೆ ಪಾಲ್ಗಡಲಲ್ಲಿ ಕಲ್ಪವೃಕ್ಷ ಹುಟ್ಟುವಂತೆ ಮಾದೇವಿಯ ಉದರದಲ್ಲಿ ಸುಕುಮಾರಕುಲಶೇಖರನು ಜನಿಸಿದನು. ಉದಯಸಮಯದಲ್ಲಿ ಅಸಮಶಿಶುಗೆ ಸದಮಲಾತ್ಮನು ಅನಘಲಿಂಗವನ್ನು ಧರಿಸಿದನು. ಸಕಲ ಮಾಹೇಶ್ವರರ ಪಾದೋದಕದಿಂದ ಮೆಯ್ದೊಳೆದು ಶಿವಮಂತ್ರವನ್ನು ಸ್ಮರಿಸುತ್ತ ಹಣೆಗೆ ಸರ್ವಾಂಗಕ್ಕೆ ಭಸಿತವನ್ನಿಟ್ಟು ಕುಮಾರಪದ್ಮರಸರೆಂಬ ಹೆಸರನ್ನಿಟ್ಟನು. ಸಕಲ ವಾದ್ಯಗಳನು ಘೋಷಿಸಿದುವು. ಶಿವಭಕ್ತನಿಕರಕ್ಕೆ ತಣಿಯುವಂತೆ ಆರಾಧನೆಯಾಯಿತು. ಸುಕುಮಾರಪದ್ಮರಸರನ್ನು ಆ ಭಕ್ತಸಂದೋಹಕ್ಕೆ

ಪರಮ ಭಕ್ತಿಯಿಂದೆ ತಂದು ಎರಗಿಸಿ ಅವರ ಹರಕೆಯನ್ನು ಕೊಡಿಸಿ ಪ್ರಸಾದವನ್ನಿತ್ತು ದಂಪತಿಗಳು ಮಗುವನ್ನು ಸಲಹುತ್ತಿದ್ದರು. ಶಿವದೂಷಕರ ಬಾಯ್ಗಳನ್ನು ಮುಚ್ಚಿಸುವ ನುಡಿಯೊಡನೆಯೇ ಆತನು ನುಡಿಗಲಿತನು. ಮಾಯಾಪ್ರಪಂಚವನ್ನು ಕೆಡೆಮೆಟ್ಟಿ ನಡೆವ ನಡೆಯೊಡನೆಯೇ ನಡೆಗಲಿತನು. ಶಿವಯೋಗಸೌಖ್ಯಸುಧೆಯನ್ನು ಉಂಬುದರೊಡನೆಯೇ ಉಣಗಲಿತನು. ಶಿವಭಕ್ತರ ಅಡಿಯನರ್ಚಿಸುವ ಬುದ್ಧಿಯೊಡನೆಯೇ ಬುದ್ಧಿಗಲಿತನು. ಯಮನಾಳುಗಳನ್ನು ಕೆಡಿಸುವ ಆಟದೊಡನೆಯೇ ಆಟವಾಡಕಲಿತನು. ಚತುಃಷಷ್ಠಿ ಕಲೆಗಳೊಳಗಣ ತಿಳಿವು ಹದಿನೆಂಟು ತೆರದ ವಿದ್ಯೆಗಳ ಕಣ್ದೆರವು ಸಂಸ್ಕೃತ ಕನ್ನಡ ಪ್ರಾಕೃತ ಮಾಗಧೀಯ ಸೌರಸೇನೆ ದೇಶಿ ಪೈಶಾಚಿಕ ಅಪಭ್ರಂಶಚೂಳಿಕೆ ಮುಂತಾದ ಅಷ್ಟಭಾಷಾಕವಿತ್ವ ಶಿವರಹಸ್ಯದ ಹೃದಯ ಇವೆಲ್ಲ ಶಿವಕುಮಾರ (ಕುಮಾರಪದ್ಮರಸ) ನಿಗೆ ಒಮ್ಮೆಲೇ ಸ್ಫುಟವಾದುವು. ಬೃಹಸ್ಪತಿಯು ಪುಣ್ಯಜನವಿರುದ್ಧವಾದ ಆಚರಣೆಯುಳ್ಳವನು ರಜೋಗುಣವಿಕಾರಿಯು, ಬ್ರಹ್ಮನು ಜಡಜಜಾತನು ಆದಿಶೇಷನು ವಿಷಾನ್ವಿತಮುಖನು, ಜಗತ್ಪ್ರಾಣವನ್ನು ತನ್ನ ಅಶನವನ್ನಾಗಿ ಮಾಡಿಕೊಂಡವನು. ಎಂದು ಈ ಮೂವರನ್ನೂ ಬಿಟ್ಟು ವಾಣಿ ಭಯಭಕ್ತಿಯಿಂದ ಶಿವಮಂತ್ರ ಉಜ್ವಲಿಸುವ ಎಡೆಯೆಂದು ಪದ್ಮರಸರ ಮುಖವನ್ನಾಶ್ರಯಿಸಿದಳು.ಸುಕುಮಾರಪದ್ಮರಸರು ಶಾಂತಿಯೇ ಸಾಕಾರವಾಯಿತೋ,ಶೈವತೇಜವೇ ನಡೆಗಲಿತುದೋ,ಮೂಲಪ್ರಣಮವೇ ಮಾತನಾಡತೊಡಗಿತೋ ರುದ್ರನ ಅಂತಃಕರಣ ಶಕ್ತಿಯೇ ಮೈವೆತ್ತು ಬಹುಶಾಸ್ತ್ರಗಳನ್ನು ತಿಳಿಯಲು ಉದ್ಯೋಗಿಸಿತೋ, ಶರಣರ ಆನಂದಸಂತತಿಯಬಾಳ್ ಮೊದಲಾಯಿತೋ ಎನ್ನುವಂತೆ ಶೋಭಿಸತೊಡಗಿದರು.ಈ ಪರಿಯ ಸುಕುಮಾರನ ವಿಮಲಚಿದ್ವ್ಯಾಪಾರವನ್ನೂ ಭಕ್ತಿಕಾಂತಾವಶೀಕೃತವಾದ ಕಲೆಯನ್ನೂ ಶಿವಾರ್ಪಿತಯೌವನವನ್ನೂ ಪದ್ಮರಸರು ನಿರೀಕ್ಷಿಸಿ ಮುದವೆತ್ತು ಸಮರೂಪ ಸಮವಿಭವ ಸಮಶೀಲ ಸಮಗುಣಗಣೋದ್ದೀಪಿತೆಯಾದ ಓರ್ವ ಕನ್ಯೆಯನ್ನು ಮಗನಿಗೆ ಮದುವೆಮಾಡಿ ಸುಖದಿಂದಿದ್ದರು.

ದಂಡನಾಯಕತಿಲಕಪದ್ಮರಸರು ಒಂದುದಿನ ಮಹೀಮಂಡಲೇಶನ ಸಭೆಗೆ ಹೋಗಿ ಎಲ್ಲ ಕಾರ್ಯವನ್ನೂ ನಡೆಸಿ ಅಲ್ಲಿ ಕೆಲಹೊತ್ತು ಇದ್ದು ಆಮೇಲೆ ಅರಸನೊಡನೆ ರಾಜವೀಥಿಗೆ ಬಂದು ಹೊಸಕುದುರೆಗಳ ಸಮೂಹವನ್ನು ನಿರೀಕ್ಷಿಸುವಲ್ಲಿ ತಮ್ಮರಮನೆಗೆ ಶಿವಭಕ್ತರು ಆಗಮಿಸಿದುದನ್ನು ಕಂಡರು. ಹರಿದು ಹೋಗಿ ಸಾಷ್ಟಾಂಗದಿಂದ ನಮಸ್ಕರಿಸಿ ಪದ್ಮರಸರು ಅವರೊಡನೆ ಹೋಗುತ್ತಿರಲು ಭೂಪತಿಗೆ ಪರವಾದಿಗಳು ಹೀಗೆ ನುಡಿದರು: ನೋಡಿದಿರೇ ದೇವಾ, ನಿಮ್ಮ ಮಂತ್ರಿಯ ಚರಿತವನ್ನು. ಕಟ್ಟೊಡೆಯನಾದ ನಿನ್ನನ್ನು ಎಳ್ಳಷ್ಟೂ ಲೆಕ್ಕಿಸದೆ ನಿರ್ಭೀತಿಯಿಂದ

ಹೋಗಿ ಅವರ ಕಾಲ್ಗೆರಗಿದನು. ಅದಿರಲಿ. ಹೋಗುವ ಈ ಜಂಗಮಾಳಿಯಲ್ಲಿ ಒಬ್ಬ ಕುಲಹೀನನು ಮೆಯ್‌ಕೆಟ್ಟು ಕೂಳ್‌ಪುಟ್ಟದೆ ಅಲೆಯುತ್ತ ಭಕ್ತನಾಗಿರುವನು. ಆತನನ್ನು ತಮ್ಮ ನಿಲಯಕ್ಕೆ ಕರೆತಂದು ಅವನ ಕಾಲ್ದೊಳೆದು ಆ ನೀರನ್ನು ಕುಡಿದು ಅವನಿಗೆ ಉಣಗೊಟ್ಟು ಮಿಕ್ಕುದನ್ನು ಉಂಡು ಹೊಲೆಗಲಸಿರುವನು. ಬ್ರಹ್ಮವಿನ್ನೆಲ್ಲಿಯದು ? ಎಂದು ನುಡಿಯಲು ಅರಸನು ಕಲುಷಾತ್ಮನಾಗಿ ಪದ್ಮರಸರನ್ನು ಕರೆಯಿಸಿ, ಮೆಯ್ಕೆಟ್ಟ ಅಂತ್ಯಜನಲ್ಲಿ ನೀವು ಇಂತು ಬೆರಸುವದು ಉಚಿತವೇ ? ಎಂದು ಕೇಳಿದನು. ಶಿವಶಿವಾಯೆನುತ ಪದ್ಮರಸರು ತನ್ನ ಎರಡೂ ಕೈಗಳನ್ನು ಕಿವಿಯ ಮೇಲೆ ಇಟ್ಟುಕೊಂಡು ಈ ಮಹಾಪಾತಕರ, ಭವಜಲಧಿಯಲ್ಲಿ ಮಗ್ನರಾದವರ, ವಿವೇಕಹೀನರ, ಧರ್ಮಬಾಹಿರರ, ನರಕಲಗ್ನರ ಕುಯುಕ್ತಿಗಳಿಗೆ ನೀನು ಕಿವಿಗೊಟ್ಟು ಭ್ರಾಂತನಾಗುವರೇ ಅವನೀಶನೇ. ವಿಚಾರಿಸಿದರೆ ಆ ಅಯ್ಯನು ಅಂತ್ಯಜನಲ್ಲ. ಆತನು ವೇದಾಂತ್ಯಜನು. ವಿವೇಕಿಗಳ ನಿಶ್ಚಲಮನೋಂತ್ಯಜನು. ಸಂವಿದಂತ್ಯಜನು ಅದೆಂತೆಂದೊಡೆ: ಕುಲ ನಗ ಗ್ರಾಮಾದಿಗಳಿಂದ ಬಂದ ನೀರು ಗಂಗಾಂಬುವನ್ನು ಹೊಕ್ಕು ತೀರ್ಥಾಂಬುವೆನಿಸವೇ ? ಕಾಗೆಗಳು ಮೇರುವನ್ನು ಸೇರಿ ಮಿಸುನಿವಣ್ಣದಿಂದೆಸೆಯವೇ ? ಸಕಲವಿಧದ ಕಾಷ್ಠಂಗಳು ಅಗ್ನಿಯನ್ನು ಸೋಂಕಿ ಉಜ್ವಲಭಸ್ಮವಾಗವೇ ? ಅಂತೆ ನರನಿಗೆ ಗುರು ಮುಟ್ಟಿದರೆ ಆತನೂ ಗುರುವಾಗುತ್ತಾನೆ. ಇವರು ಉನ್ನತ ಕುಲದವರು ಇವರು ಅಧಮಕುಲದವರು ಎಂಬ ವಿಚಾರವನ್ನು ಬಿಡು. ಏಕೆಂದರೆ: ರಸಸಿದ್ಧಿಯಿಂದ ತಾಮ್ರವು ಹೇಮವಾದ ಮೇಲೆ ಮತ್ತೆ ತಾಮ್ರವಾಗುವುದೇ ? ಬೆಣ್ಣೆಕಾಯ್ದು ಘೃತವಾದಮೇಲೆ ಮತ್ತೆ ಬೆಣ್ಣೆಯಾಗುವುದೇ ? ಶುಕ್ತಿಯನ್ನು ಪ್ರವೇಶಿಸಿ ಮುತ್ತಾದ ನೀರು ಮರಳಿ ಜಲವಾಗುವುದೇ ? ಅಂತೆಯೇ ಶಿವದೀಕ್ಷೆಯನ್ನು ಹೊಂದಿದ ನರನು ಪೂರ್ವಾಶ್ರಯದಂತೆ ಇರುವನೇ ? ಹೀಗೆಂದು ವೇದ ಆಗಮ ಪುರಾಣಗಳು ಹಲವು ಬಗೆಯಾಗಿ ಉಲಿವುತ್ತಿರಲು ಭೂಕಾಂತನೇ ನೀನು ಅಜ್ಞಾನಿಗಳ ಮಾತನ್ನು ಕೇಳುವುದೇ ? ಅವರಿಗೆ ಗುರುವೆನಿಸಿ ಮೆರೆಯುವ ಆ ವ್ಯಾಸನು ವ್ಯಾಧಕನ್ಯೆಯ ಗರ್ಭದಲ್ಲಿ ಹುಟ್ಟಿ ಅಯೋಗ್ಯನಾದನೇ ? ಅಂತ್ಯಜೆಮಾತಂಗಿಗೊಗೆದ ಮತಂಗನು ಮಾನ್ಯನಲ್ಲವೇ ? ಶುನಕಿಗೆ ಜನಿಸಿದ ಶೌನಕನು ಅಧಮನೇ ? ಊರ್ವಸಿಗೆ ಉದಯಿಸಿದ ವಶಿಷ್ಠನು ಹೀನನೇ ? ಇವರು ಅಪೂರ್ವವಾದ ಶಿವದೀಕ್ಷೆಯಿಂದ ತ್ರಿಲೋಕಕ್ಕೆ ಪೂಜ್ಯರಾಗಿ ಮೆರೆದರು. ಅಕಟಾ ! ಕೀಟವು ಭ್ರಮರವನ್ನಾಶ್ರಯಿಸಿ ಭ್ರಮರವೇ ಆಗದೇ ? ಮಲಿನಾತ್ಮರಲ್ಲಿರುವ ರತ್ನವು ನಿಂದ್ಯವಾದುದೇ ? ಶಿಲಾಪೂರ್ವಮಳಿದು ಎಸೆವ ಲಿಂಗವು ಶಿಲೆಯೇ ? ಅದರಂತೆಯೇ ಶಿವಾರ್ಚಕನು ಮೆರೆಯಲಾರನೆ ? ದುರ್ಜಾತಿ ಸಂಭವನಾಗಿಯೂ ಭಕ್ತನು ಪವಿತ್ರನು. ಅದೆಂತೆಂದರೆ: ಪಾಷಾಣದಲ್ಲಿ ಹೇಮ,

ಕಾಷ್ಠದಲ್ಲಿ ಅಗ್ನಿ, ಕೆಸರಿನಲ್ಲಿ ಕಮಲ ಇವು ಜನಿಸಿಯೂ ಎಲ್ಲರಿಂದಲೂ ಸೇವ್ಯ ವಸ್ತುಗಳಾಗಿ ರಾರಾಜಿಸುವವು. ಭೂವರನೇ ಮತ್ತೂ ಕೇಳು. ಶರಣರು ಕುಲಜರಲ್ಲವೆಂದು ನುಡಿವವರ ಬಾಯನ್ನು ಎಡದ ಪಾದರಕ್ಷೆಯಿಂದ ಮುಚ್ಚುತ್ತಿದೆ ವೇದಾಂತತತಿ; ಶ್ವಪಚನಾದರೂ ಶಿವನೆಂಬ ಚಂಡಾಲನು ಉತ್ತಮನು. ಅವನೊಡನೆ ಮಾತನಾಡಬೇಕು, ಊಟಮಾಡಬೇಕು, ಆತನೊಡನೆ ಸಹವಾಸಮಾಡಬೇಕು. ಎಂದು ಜಾಬಾಲೋಪನಿಷದುಕ್ತಿ ಸಾರುತ್ತಿರಲು ಮಂದಮತಿಗಳ ನುಡಿಗೆ ಕಿವಿಗುಡುವರೇ ? ಶಿವಭಕ್ತಿಯುಳ್ಳ ಚಾಂಡಾಲನೇ ಬ್ರಾಹ್ಮಣಶ್ರೇಷ್ಠನು, ಭಕ್ತಿಯಿಲ್ಲದ ಭೂಸುರನು ಶ್ವಪಚನಿವಹಕ್ಕಿಂತಲೂ ಅಧಮನು. ಎಂದು ಶಿವರಹಸ್ಯಾದಿ ಅಖಿಲ ಶಾಸ್ತ್ರಂಗಳು ಉಲಿಯುತ್ತಿರಲು ಇವು ಸೇವ್ಯವೋ, ಮೂಢನರರ ಉಕ್ತಿ ಸೇವ್ಯವೋ ? ವಿಚಾರಿಸಬೇಕು. ಪರಮನೇ ಪರಬ್ರಹ್ಮನೆನಿಸಿಕೊಳ್ಳಲು ಅರ್ಹನು ಆ ಪರಮಸದ್ಬ್ರಹ್ಮಾಚರಣಮುಳ್ಳವರೇ ಬ್ರಾಹ್ಮಣರೆನಿಸುವರು. ಇದು ಆಮ್ನಾಯಮತ. ಆದುದರಿಂದ ಬ್ರಹ್ಮಾಚರಣವಿಲ್ಲದ ಆ ನರಕಿಗಳಿಗೆ ಬ್ರಹ್ಮತ್ವವುಂಟೇ ? ಶಂಕರನ ಶರಣರಿಗಲ್ಲದೆ ಬ್ರಹ್ಮತ್ವವಿನ್ನಾರಿಗುಂಟು ? ಇದನ್ನು ಬಿಟ್ಟು ಜಾತಿಯೇ ಪರವೆಂದೊಡೆ ಭಕ್ತರಿಗೆ ಇಂತಹ ಜಾತಿ ಗೀತಿ ತಾನು ಗಹನವಾದುದೇ ? ಅದೆಂತೆಂದೊಡೆ: ಪರಮ ಶಿವನಿಷ್ಠನಾದ ವಶಿಷ್ಠನು ಕರುಣೆಯಿಂದ ವಿಶ್ವಾಮಿತ್ರ ಭೂಪನನ್ನು ಬ್ರಹ್ಮರ್ಷಿಯನ್ನಾಗಿ ಮಾಡಲಿಲ್ಲವೇ ? ಹರಿಯನ್ನು ಹತ್ತುಸಾರಿ ಭವಕ್ಕೆ ಬರಿಸಿದ ಶಿವಭಕ್ತನಾದ ಭೃಗು ಹವ್ಯಾಖ್ಯನರಪತಿಗೆ ಭೂಸುರವರ್ಯಪಟ್ಟವನ್ನು ಕಟ್ಟಿ ಪ್ರತಿಷ್ಠೆಯನೆಸಗಲಿಲ್ಲವೇ ? ಭಾರತವೇ ಇದನ್ನು ಉಲಿಯುತ್ತಿರುವುದು. ಆದುದರಿಂದ ಶರಣರೊಲಿದೊಡೆ ಫಲಿಸದಿರುವ ಕಾರ್ಯವೊಂದೂ ಇರುವದಿಲ್ಲ. ಧರಣೀಧವನೇ, ಆ ಮಾತು ಹಾಗಿರಲಿ. ನೀನು ಆ ಅಯ್ಯನು ಮೆಯ್ಕೆಟ್ಟವನೆಂದು ನುಡಿದೆ. ಅದು ಪುಸಿ. ಯಮನ ಗದೆಯ ಹಿರಿಯ ಹೊಡೆತಕ್ಕೆ ಮೆಯ್ಕೆಟ್ಟವನು ಮೆಯ್ಕೆಟ್ಟವನು. ಭವಕ್ಕೆ ತಿರುತಿರುಗಿ ಬರತಕ್ಕವನು ಮೆಯ್ಕೆಟ್ಟವನು. ಇವನು ಮೆಯ್ಯಿದ್ದು ಮೆಯ್ಕೆಟ್ಟವ (ತನುಗುಣವಳಿದವ) ನೆಂದು ಹೇಳಬಹುದು. ಅಲ್ಲದೆ ಕುಷ್ಠರೋಗದಿಂದ ಮೆಯ್ಕೆಟ್ಟವನೆಂದರೆ-ಸಲ್ಲುವುದೇ ? ವಿಪ್ರಕುಲಕೆ ದೇವರಾದ ಸೂರ್ಯನೇ ಕುಷ್ಠನಲ್ಲನೇ ? ತಮ್ಮೊಳಗನರಿಯದ ಮೂಢರುಕ್ತಿಗಳವೇನು ? ಬಿಡು ಬಿಡು. ಚಿದಂಬುಧಿಯಲ್ಲಿ ಮಗ್ನರಾದವರು ತನುಸ್ಥಿತಿಯನ್ನು ಎಳ್ಳಷ್ಟೂ ಲಕ್ಷಿಸುವದಿಲ್ಲ. ಹೊಳೆಯ ನಡುವೆ ಶಿವಪೂಜಾಲೀಲೆಯಿಂದಿರ್ದು ಹೊಳೆ ಬಂದರೂ ಅರಿಯದೆ ಏಳುದಿವಸ ಶಿವಸುಖದ ನಿಬ್ಬೆರಗಿನಿಂದ ಗಜೇಶಮಸಣಯ್ಯನಿರಲಿಲ್ಲವೇ ? ಭೂಸುರಾಧಮರು ಶಿವದೇವನ ಶಿವಧ್ಯಾನವನ್ನು ಕೆಡಿಪೆವೆಂದು ಬಗೆದು ಅವನಮೇಲೆ ಹುಳ್ಳಿಯನ್ನಿಟ್ಟು ಕಿಚ್ಚುಕೊಡಲು ಆತನು ಅಳ್ಕಿದನೇ ?

ನದೀಮಧ್ಯದಲ್ಲಿ ಹೋಗುವಾಗ ಗುರುವರನು ಗುರುಭಕ್ತನಿಗೆ "ನೀನಿಲ್ಲಿಯೇ ಇರು. ನಾನು ಹೋಗಿ ಬರುವೆನೆ"ಂದು ಅಪ್ಪಣೆಯನ್ನಿತ್ತು ಹೋಗಲು ಆತನು ಗುರ್ವಾಜ್ಞೆಯಲ್ಲಿಯೇ ಚೇತೋನಿಷ್ಠನಾಗಿದ್ದನು. ತನುವೆಲ್ಲ ಜೀರ್ಣವಾಗಿ ಅಸ್ಥಿಮಾತ್ರ ಉಳಿದರೂ ಆತನು ಅದನ್ನು ಬಗೆದನೇ ? ಶರೀರವೆಂತಿರ್ದರೇನು, ನಿರ್ಮಲರು ಅದನ್ನು ನೋಡುವರೇ ? ಅವರು ಒಂದು ನೆವದಿಂದ ಸುವಿಧಾನವಂ ಮಾಳ್ಪೆವೆಂದು ಈಕ್ಷಿಸಿದರೆ ಆಕ್ಷಣವೇ ಅದು ಆಗಲಾರದೇ ? ಪೃಥ್ವೀಶ್ವರಾ, ಗುಡ್ಡವ್ವೆಯೆಂಬ ಅವಿಚಲಿತಭಕ್ತೆ ಶಿವಭಾವಪ್ರಯುಕ್ತೆಯಾಗಿ ಒಂದು ದಿನ ನಾವಂದಿಯೆಂಬ ಅಗ್ರಹಾರವನ್ನು ಹೊಕ್ಕು ನಡೆಯುತ್ತಿರಲು ಅಲ್ಲಿಯ ವಿಪ್ರರು ಆಕೆಯನ್ನು ಕಂಡು, "ಅಂತ್ಯಜೆ ಮೇಲಾಗಿ ಕುಷ್ಠರೋಗಾವೃತ ಶರೀರೆ. ಈಕೆ ನಮ್ಮ ಊರಿಗೆ ಬರುವುದೆಂತು ? ವಿಚಾರಿಸದೆ ಬರುವುದೇ ? ಆಕೆಯನ್ನು ಹೊರದೂಡಿರಿ" ಎಂದು ನುಡಿಯಲು ಅದನ್ನು ಕೇಳಿ ನಸುನಗುತ್ತ ಅನಘೆಗುಡ್ಡವ್ವೆ ಹೀಗೆ ನುಡಿದಳು : "ಕರ್ಮಚಂಡಾಲರಿರ, ನಾನು ಹೋಗಿ ನಿಮ್ಮ ಪೆಂಪನ್ನು ತಿಳಿಸುವೆನೆ"ನುತ್ತ ನೊಂದು ಸೌರಾಷ್ಟ್ರಪುರದ ಕಡೆಗೆ ನಡೆದು ಸೋಮನಾಥನನ್ನು ಸಂದರ್ಶಿಸಿ ತಾನು ದಿವ್ಯಾಂಗಿಯಾಗಿ ಭೂಸುರಪುರದಲ್ಲಿ ಪರಮಾತ್ಮನನ್ನು ನಿಲಿಸಿ ವಿಪ್ರರನ್ನೆಲ್ಲ ಕುಷ್ಠರನ್ನಾಗಿ ಮಾಡಿ ಅವರು ಶರಣೆಂದು ಮೊರೆಹೊಕ್ಕಮೇಲೆ ಮತ್ತೆ ಅವರನ್ನು ಕಾಯಲಿಲ್ಲವೇ? ಸೂರ್ಯನಿಂದ ಹೋಗದ ಆಶ್ವಿತ್ರರುಜೆಯನ್ನು ಮಯೂರನು ಶಿವಸ್ಮರಣದಿಂದ ಅಳಿಯಲಿಲ್ಲವೇ ? ವಿಷ್ಣುವಿನಿಂದ ಪರಿಹರಿಸಲಾಗದ ಕುಷ್ಠವನ್ನು ಅಹೋದಂಡಿ ಶಿವನನ್ನು ಲಕ್ಷಿಸಿ ಆತನ್ನು ಸ್ತುತಿಸಿ ಕಳೆದುಕೊಳ್ಳಲಿಲ್ಲವೇ ? ಗುಮ್ಮಟಯ್ಯನು ಅರ್ಧೇಂದುಮೌಳಿಯನ್ನು ಬಣ್ಣಿಸಿ ತನ್ನ ದುರ್ವರ್ಣವನ್ನು ಕೆಡಿಸಲಿಲ್ಲವೇ ? ಇವರು ಶಿವನಿಂದಲೇ ಪಡೆದವರು. ಎಲೆ ನೃಪತಿ ಎಮ್ಮ ಶಿವಭಕ್ತರ ಅಳವನು ಏನೆಂದು ಹೇಳಲಿ ! ಕೃಪಾರ್ಣವಮನೋಹರಗಣೇಶನ ಪಾದಾಂಬುವನೀಂಟಿ ರವಿ ತನ್ನ ಕುಷ್ಠವನ್ನು ಕಳೆದುಕೊಳ್ಳಲಿಲ್ಲವೇ ? ಮತ್ತೆ ಮಾದರ ದೂಡಿದೇವನೆಂಬ ನಿಶ್ಚಲಭಕ್ತನಿಧಿ ಮಿಂದ ನೀರ್ ಬಚ್ಚಲಲ್ಲಿ ಕೆಸರು ತುಂಬಿರಲು ಕುಷ್ಠರೋಗವಡಸಿದ ವಿಪ್ರನೊಬ್ಬನು ಕತ್ತಲೆಯಲ್ಲಿ ಪಶುವನ್ನು ಹುಡುಕಿಕೊಂಡು ಹೋಗುವಾಗ ಆ ಬಚ್ಚಲಲ್ಲಿ ಕಾಲಿಟ್ಟು ಹೇಸುತ್ತ ಮನೆಗೆ ಬಂದು ಕಾಲು ತೊಳೆದುಕೊಂಡು ಮಲಗಿದನು. ಬೆಳಗಾಗಲು ಎದ್ದು ನೋಡುವಲ್ಲಿ ಕೆಸರಲ್ಲಿ ಮುಳುಗಿದಷ್ಟು ಪಾದವು ಉತ್ತಮ ಸುವರ್ಣವರ್ಣದಿಂದ ಶೋಭಿಸುತ್ತಿತ್ತು. ಅದನ್ನು ನೋಡಿ ಸಂತಸದಿಂದ ಹಿಗ್ಗಿ ಅಲ್ಲಿಗೆ ಬಂದು ಆ ಮಜ್ಜನಾಂಬುವಿನಲ್ಲಿ ಮುಳುಗಿ ಕುಷ್ಠರೋಗವನ್ನು ಕಳೆದುಕೊಂಡನು. ದೂಡಯನಿಗೆ ಎರಗಿ ಆತನ ಕರುಣೆಯನ್ನು ಪಡೆದನು. ಆ ವಾರ್ತೆಯನ್ನು ಕೇಳಿ ಏಳುನೂರುಜನ ಬ್ರಾಹ್ಮಣರು ತಮ್ಮ ಮೆಯ್ಯ ಕುಷ್ಠಂಗಳನ್ನು ಆ

ಜಲದಲ್ಲಿ ಮಿಂದು ಕಳೆದುಕೊಂಡರು. ಇದೆಲ್ಲವನ್ನು ಕೇಳಿ ಆ ನೃಪತಿಯೆಂದನು : "ಈ ಗಾದಿಗಳ ಗಂಟುಕಟ್ಟಿರಿ. ಕತೆಗಿತೆಗಳೇನು ಮಾಡಬಲ್ಲುವು ? ತೆಗೆಯಿರಿ ಅವನ್ನು. ಸತ್ಯವಾಗಿ ತೋರಿಸಬಲ್ಲೊಡೆ ನಿಮ್ಮ ಶೈವನಂಗದ ಕುಷ್ಠವನ್ನು ಅಪಹರಿಸಿ ಅದನ್ನು ಈ ವಿಪ್ರರಲ್ಲಿ ತೋರಿಸಬೇಕು. ಹಾಗೆ ಮಾಡಬಲ್ಲರೆ ನುಡಿಯಿರಿ" ಎಂದು ನುಡಿದನು. ಮೊದಲಿಸಿ ನುಡಿದಂತೆ ತೋರದಿರುವುದು ಶಿವಭಕ್ತರ ಆಚಾರವಲ್ಲವೆಂದು ಪದ್ಮರಸರು ಅದಕ್ಕೆ ಒಡಂಬಟ್ಟು ಪೊನ್ನಂದಣವನ್ನು ಕಳಿಸಿ ಆ ಅಯ್ಯಂಗಳನ್ನು ಮೇದಿನೀಶನ ಸಭೆಗೆ ಬರಿಸಿ ಹಿರಿಯ ಗದ್ದುಗೆಯಲ್ಲಿ ಆದಿರುದ್ರ ಪ್ರತಿಮನಾದ ಆತನನ್ನು ಮೂರ್ತಿಗೊಳಿಸಿ ಪರವಾದಿಗಳು ನೋಡುತ್ತಿರಲು ಆ ಜಂಗಮನು ತೊಟ್ಟ ಬಟ್ಟೆಯನ್ನು ಹಿಡಿದು "ದೇವಾ, ನನಗೆ ಈ ಬೀಳುಡೆಯನ್ನು ಕೊಡಬೇಕು" ಎಂದು ವಿಮಲಮತಿಪದ್ಮರಸರು ಅದನ್ನು ತೆಗೆಯಲು ಸೂರ್ಯನನ್ನು ಮುಸುಕಿದ ಬೆಳ್ಮುಗಿಲನ್ನು ಮಂದಮಾರುತನು ತೊಲಗಿಸಲು ಸೂರ್ಯನು ತೊಳತೊಳಗುವಂತೆ ಪರಮ ತೇಜೋವಿಲಾಸದಿಂದ ಆ ಭಕ್ತನು ಉಜ್ವಲಿಸತೊಡಗಿದನು. ಭೂಸುರರ ದೇಹವನ್ನು ಕುಷ್ಠರೋಗವಡಸಿತು. ಹೊಳೆಹೊಳೆವ ಭಕ್ತನನ್ನು ಅವನ ನೆರೆಯಲ್ಲಿದ್ದ ಪದ್ಮರಸರನ್ನು ಕುಷ್ಠರೋಗವಡಸಿದ ಬ್ರಾಹ್ಮಣರನ್ನು ದೊರೆ ನಿರೀಕ್ಷಿಸುತ್ತ ಆಶ್ಚರ್ಯಭರಿತನಾಗಿರಲು ಆ ವಾದಿಗಳು ಬಂದು ಇವರ ಚರಣದಲ್ಲಿ ಬಿದ್ದು "ಕಾಯಯ್ಯ ಕರುಣಾಂಬುರಾಶಿ ಪದ್ಮರಸಾಂಕ ಮಾಯಾಂಧರಾದ ಎಮ್ಮೊಳೇಕೆ ನಿನ್ನ ಬಿಂಕ ? ಈ ಅಧಮರ ರುಜೆಯನಪಹರಿಸಿ ಸಲಹು" ಎಂದು ಒರಲುತ್ತಿರಲು ಆತನು ನಸುನಗುತ್ತೆ ಆ ಯತೀಂದ್ರನ ಕರದ ಭಸಿತವನ್ನು ದ್ವಿಜರ ಕಾಯದಲ್ಲಿ ತಳಿದು ಅವರನ್ನು ಸೌಮ್ಯಾಂಗರನ್ನಾಗಿ ಮಾಡಿದನು. ಜಯ ಜಯ ದ್ವಿತೀಯ ಶಂಭು ಎಂದು ಸಭ್ಯರು ಆತನನ್ನು ಕೀರ್ತಿಸಿದರು. ಆ ಮೇಲೆ ಬಲ್ಲಾಳರಾಯನು ಕನಕಾಭರಣ ಮೊದಲಾದ ಸುವಸ್ತುಗಳನಿತ್ತು ಪ್ರಾರ್ಥನಾಪೂರ್ವಕವಾಗಿ ವಂದಿಸಿ ವಿನಯದಿಂದ ಅವರನ್ನು ಬೀಳ್ಕೊಂಡನು. ಅನಘರಾದ ಆ ಅಯ್ಯಂಗಳನ್ನು ಪದ್ಮರಸರು ಆನೆಯ ಮೇಲೆ ಕುಳ್ಳಿರಿಸಿ ಮೆರೆಯಿಸಿ ಸ್ವಗೃಹಕ್ಕೆ ಬಂದು ಈಶಭಕ್ತಾರ್ಚನೆಯಲ್ಲಿ ತೊಡಗಿದರು.

ಐದನೆಯ ಸಂಧಿ

ಹರೀಶ್ವರ ಪದ್ಮರಸರ ಹಿರಿಮೆ

ಮತ್ತೊಂದು ದಿವಸ ಪದ್ಮರಸದಂಡನಾಯಕರು ನೃಪನ ಸಭೆಗೆ ಹೋಗಿ ಅವನ ಬಲದ ಉತ್ತುಂಗಪೀಠದಲ್ಲಿ ಮಂಡಿಸಿದರು. ದಂಡನಾಥ, ಮಾಂಡಳಿಕರ, ಮಕುಟವರ್ಧನರ, ಮಂತ್ರಿಗಳ, ಸಾಮಂತರ, ಪದ ವಾಕ್ಯ ಪ್ರಮಾಣಪ್ರವೀಣರ, ಕವೀಂದ್ರರ, ಕಲಾಭಿಜ್ಞರ, ನಾಯಕರ, ನರ್ತಕರ, ಕೀರ್ತನಾಜೀಯರ, ಚತುರ್ವಿಧ ಸಖರ, ನಾನಾವಿಧ ನಾಯಕಜನದ, ರಸಿಕರ, ಹಾಸ್ಯಾಸ್ಯರ, ರಾವುತರ, ಪಟುಭಟು ನಿಕಾಯಾದಿಯಾಗೆಸೆವ ವಿನಿಯೋಗ ಸಮೂಹದ ವಿಳಾಸ ವಿನೋದ ವೈಭವ ವಿಭ್ರಮಗಳು ಸಭೆಯಲ್ಲಿ ಪೆಂಪನ್ನಿತ್ತುವು. ಗೌರಕೆಲಕಾಗು. ಬಾ ತುರುಕಾ ಮೈಯಿಕ್ಕು ಮಲಯಾಳ ಕೂಗದಿರು, ಕೊಂಕಣ ಕಳವಳವನುಡುಗು, ಹೋ ಹೋ ಲಾಳ ನಗದಿರು. ಆಂಧ್ರ ಬಿನ್ನವಿಸು, ಚೋಳಾದಿಗಳೇ ನಿಲ್ಲಿರಿ. ಹೀಗೆ ಚೆಪ್ಪನ್ನ ದೇಶದ ಮಹೀಪಾಲರನ್ನು ಕಾಣಿಸುವ ಕಳುಹಿಸುವ ಪಡಿಯರರ ಕೋಳಾಹಳವು ಆ ಸಭೆಯಲ್ಲಿ ಹೊರಹೊಮ್ಮಿತು. ಎಲೆ ರಾಜೇಂದ್ರಾ, ಇವು ರಮ್ಯವಾದ ಒಡವೆಗಳು, ಇದು ಕರಿನಿಕರ, ಇವು ತುರಗಗಳು, ಇವು ವಿವಿಧ ವಸ್ತ್ರಗಳು, ಇಲ್ಲಿ ತರುಣಿಯರು, ಇತ್ತ ಅನರ್ಘ್ಯರತ್ನಗಳು ಇವು ಪರಿಮಳ ದ್ರವ್ಯಗಳು ಈ ಪ್ರಕಾರವಾಗಿ ನರಪತಿಗೆ ಕಾಣ್ಕೆಯಾಗಿ ಬಂದ ವಸ್ತುಗಳನ್ನೆಲ್ಲ ಅವನಿಗೆ ವಿವರಿಸಿ ತೋರಿಸುತ್ತ ತೆಗೆಯಿಸುತ್ತ ಪದ್ಮರಸರು ಸಭಾಮಧ್ಯದಲ್ಲಿ ಶೋಭಿಸಿದರು. ಈ ಸಭಾಮಧ್ಯದೊಳಗೇ ಷೋಡಶಪ್ರತಿಯ ಕರಣಿಕರೊಳಗೆ ಅಗ್ರಗಣ್ಯನೆನಿಸಿ, ವಿರೂಪಾಕ್ಷನ ಇರವನ್ನು ಮನಶ್ಶೂಳಿಕಾಪಟದಲ್ಲಿರಿಸಿ ಉಳಿದ ಬಾಹ್ಯವೃತ್ತಿಯನ್ನು ಆಚರಿಸುತ್ತ ವಿಷಮ ಸಂಸಾರವಾರ್ಧಿಗೆ ವಡವಾನಲದಂತಿರ್ದ ಗುರುಲಿಂಗ ಜಂಗಮಸೇವೆಯನ್ನು ಮಾಡಿ ತಣಿಯದ ತವಕದಿಂದ ಉಬ್ಬಿಕೊಬ್ಬಿ ನಲಿದಾಡುತ್ತಿದ್ದನು ಹರೀಶ್ವರನೆಂಬ ಓರ್ವ ಅನುಪಮಚರಿತ್ರನು. ಆತನು ಹಂಪೆಯ ಮಹಾದೇವರ ಜಠರ ಸುಧಾ ಶರಧಿಸಂಭವಸುಧಾಕರನು. ಅಖಿಳ ಶಿವಭಕ್ತಕರುಣಾಕಟಾಕ್ಷಪ್ರಭಾಪುಂಜ ರಂಜಿತಾಂಗನು. ದೇಹಗುಣವಿಭಂಗನು. ಮನ್ಮಥ, ಕಾಲ, ಮಾಯೆ ಮೊದಲಾದವುಗಳಿಗೆ ಎಡದ ಪದದಲ್ಲಿ ತೊಡರನಿಕ್ಕಿ ಡಂಗುರಹೊಯ್ಸಿ ವರ್ತಿಸುವವನು.

ಶಿವಮಂತ್ರಸಿದ್ಧನು. ಚಿತ್‌ಅನುಬದ್ಧನು. ಅಧಿಕಶುದ್ಧನು. ಸತ್‌ಕಲಾಪ್ರಬುದ್ಧನು. ಆದಿಶೇಷನಿಗೆ ಅರಿದೆನಿಪ ಸದ್ವಿನೀತನು. ಸರಸ ಮೃದು ಮಧುರವಾದ ಅಖಿಲ ಲಕ್ಷ್ಯ ಲಕ್ಷಣಯುಕ್ತವಾದ ವಸ್ತುಕ ವರ್ಣಕ ಕಾವ್ಯಗಳಿಂದ ಶಿವನನ್ನು ಶಿವೈಕ್ಯ ರನ್ನು ನುತಿಸಿದಾತನು. ಶಿವಕವೀಂದ್ರನು. ಲೆಕ್ಕವೆಲ್ಲವನ್ನೂ ಮದನಹರ ಪಂಪಾವಿರೂಪಾಕ್ಷ ಎಂದು ಬರೆದು ಅರಸನು ಪರೀಕ್ಷಿಸಿದಾಗ ನಿಜದ ಮಹಿಮೆ ಯನ್ನು ನಿಷ್ಪ್ರಯಾಸದಿಂದ ತೋರಿಸಿದ ಮಹಿಮನಾತನು. ಅರಸನು ಗೋವಿಂದ ಪ್ರತಿಷ್ಠೆಮಾಡಿ ದೇವಾಲಯದೊಳಗೆ ಆತನನ್ನು ಕರೆಯಲು ಒಳಪುಗದೆ ಸಿಟ್ಟಿಗೆದ್ದು ಹೋಗಿ ದೊಡ್ಡ ಮಳೆಯೊಳಗೆ ನನೆಯದೆ ನಿಂದ ಮಹಾಮಹಿಮನು. ಇಂತಹ ಮಹಾಕವಿ ಹಂಪೆಯ ಹರೀಶ್ವರನು ಅಧಿಕ ತೇಜದಿಂದ ಓಜೆವೆತ್ತು ನೃಪಾಸ್ಥಾನದ ಕರಣಿಕರ ಮಧ್ಯದಲ್ಲಿ ಶೋಭಿಸುತ್ತಿದ್ದನು. ಒಂದು ದಿನ ಈತನು ಅಕಸ್ಮಾತ್ ಓಲೆ ಒರೆಯುವದನ್ನು ಬಿಟ್ಟು ಎರಡೂ ಕೈಗಳನ್ನು ಮೇಲಕ್ಕೆ ಎತ್ತಿ ದುರ್ಘವದ ಏಳಿಗೆ ಯನ್ನು ಒರೆಸುವಂತೆ ಹಸ್ತಗಳನ್ನು ತಿಕ್ಕಲು ನೃಪತಿಯು ಪರವಾದಿಗಳ ಸನ್ನೆಯಿಂದ ಅದನ್ನರಿದು ನಗುತ್ತ "ಅಯ್ಯೋ ಹರಿಯಣ್ಣನಿಗೆ ಇದೇಕೆ ಬಲ್ಮರುಳು ಆವರಿಸಿತೋ" ಎನೆ ಆ ದೂಷಕರು ಗಹಗಹಿಸಿನಕ್ಕರು. ಆಗ ಪದ್ಮಣಾಮಾತ್ಯರು ಕೋಪದಿಂದ "ಎಲೆ ಭೂಪಾಲ, ಶಾಪದಗ್ಧರ, ಶಠರ, ಕೂಳರ, ಕುತರ್ಕಿಗಳ, ಪಾಪಾತ್ಮರ, ದೂಷ ಕರ ದುರ್ಬೋಧಕ್ಕೆ ನೀನಿಂತು ಮರುಳಾಗುವರೇ ? ಲಿಂಗಸಂಗಸೌಖ್ಯಾವೇಶಿಯಾದ ಹರೀಶ್ವರನ ಇರವನ್ನು ಮಹೇಶನೇ ಬಲ್ಲನಲ್ಲದೆ ಲೋಕದ ವ್ಯಾಪಾರಿಗಳಿಗೆ ಅದು ಅರಿದು. ಅಲ್ಲದೆ ಈತನು ಕಾಪುರುಷನೇ ? ವಿಚಾರಿಸಿದರೆ ಈತನು ವಿರೂಪಾಕ್ಷ ಸದೃಕ್ಷನು." ಎನ್ನುವಷ್ಟರಲ್ಲಿ ಮುಗುಳ್ನಗೆ ಬೀರುತ್ತ ನಮ್ಮ ಹರಿದೇವನು ಇಂತು ನುಡಿದನು: "ನೃಪತಿಯೇ ಕೇಳು. ಪಂಪಾಪುರೀಶ್ವರನ ಓಲಗದೊಳಗೆ ಆರತಿಯ ನೆತ್ತುತ್ತಿರಲು ಅದರ ಜಳತಾಕಿ ಮೇಲ್ಕಟ್ಟಿನ ಆ ದಿವ್ಯಾಂಬರವು ಭುಗಿಲ್ ಭುಗಿಲ್ ಎಂದು ಉರಿಯತೊಡಗಿತು. ಅದನ್ನು ಕಂಡು ಎರಡೂ ಕೈಗಳಿಂದೊರಿಸಿ ಆ ಉರಿಯನ್ನು ಕಳೆದೆನು. ಈಶ್ವರಭಕ್ತರು ದೇಹವಳಿದರೂ ಅನಿಮಿತ್ತಕ್ರಿಯೆಯನ್ನು ನೆಗಳಲಾರರು." ಎಂದು ನುಡಿಯಲು ವಾದಿಗಳು ಆ ಮಾತನ್ನು ಕೇಳಿ ಅಕ್ಕಕ್ಕು ಆ ಹಂಪೆಯೊಳಗುರಿವ ಮೇಲ್ಕಟ್ಟನ್ನು ಅತ್ಯಾದರದಲ್ಲಿ ಇಲ್ಲಿಯೇ ಕುಳಿತು ಒರೆ ಸುವ ಅಸಮಶಕ್ತಿ ಯಾರಿಗುಂಟು ? ಎಲೈ ಭೂಪೋತ್ತಮನೇ ಈ ದುರ್ಘಟದ ಭಕ್ತಿಯನ್ನು ನೋಡಬೇಕು ಎಂದು ವ್ಯಂಗ್ಯವಾಗಿ ನುಡಿಯಲು ಮೇದಿನೀಪತಿಯು ಚರರನ್ನು ಹಂಪೆಗೆ ಕಳುಹಿದನು. ಅವರು ಸಂತೋಷದಿಂದ ಪಂಪಾಕ್ಷೇತ್ರಕ್ಕೆ ಬಂದು, ವಿರೂಪಾಕ್ಷದೇವಾಲಯವನ್ನು ಪ್ರವೇಶಮಾಡಿ, ಭಯಭಕ್ತಿಯಿಂದ ವಂದಸೆಗೈದು, ಬೆಂದಿರ್ದ ಮೇಲ್ಕಟ್ಟನ್ನು ಕಂಡು "ಇದೇನು ಕಾರಣ ಹೀಗಿದೆ"

ಎಂದು ಅರ್ಚಕರನ್ನು ಕೇಳಿದರು. ಆಗ ಅವರು "ಹೋದ ರವಿವಾರ ಮಧ್ಯಾಹ್ನದ ಸಮಯದಲ್ಲಿ ವಿರೂಪಾಕ್ಷನಿಗೆ ಆರತಿಯನ್ನು ಎತ್ತುತ್ತಿರಲು ಅದರ ಜ್ವಾಲೆ ಆವರಿಸಿ ತೆರೆ ಉರಿಯುವಾಗ ದಯಾರಸಭರಿತದೃಷ್ಟಿಯುಳ್ಳವನೂ ದಾಕ್ಷಿಣ್ಯ ವಿಲಸಿತ ಮುಖನೂ ಸುಶೀಲನೂ ಅಂಗಾಂಗಗಳಲ್ಲಿ ಭಸಿತ ಧಾರಣಮಾಡಿದವನೂ ಕೊರಳಲ್ಲಿ ರುದ್ರಾಕ್ಷಮಾಲೆ ಧರಿಸಿದವನೂ ನಡಕ್ಕೆ ದೋತ್ರದಿಂದ ಕಾಶೀಕಟ್ಟಿಕೊಂಡವನೂ ಶುಭ್ರವಾದ ಉತ್ತರೀಯವನ್ನು ಹೊತ್ತುಕೊಂಡವನೂ ಸಾತ್ವಿಕೋದಯಶರೀರನೂ ಆದ ಓರ್ವ ಮಹಾಪುರುಷನು ಬಂದು ತನ್ನ ಹೆಸರು ಹರಿಗನೆಂದು ಬೆಸಸಿ ಕೈಯೊಳಗಣ ಓಲೆ ಕಂಠಗಳನ್ನು ಬಿಸುಟು ಇದನ್ನು ಒರೆಯಿಸಿಹೋದನು. ಇದನ್ನು ಎಲ್ಲರೂ ನಿರೀಕ್ಷಿಸಿದೆವು" ಎಂದು ಹೇಳಲು ಅದನ್ನು ಕೇಳಿ ಚರರು ಆ ಬಟ್ಟೆಯನ್ನು ಒಯ್ದು ದೊರೆಗೆ ತೋರಿಸಬೇಕೆಂದು ವಿರೂಪಾಕ್ಷನ ಊಳಿಗದವರೊಂದಿಗೆ ಅದನ್ನು ತೆಗೆದುಕೊಂಡು ಬಂದು ಬಲ್ಲಾಳರಾಯನಿಗೆ ವಾದಿಗಳ ಎದೆ ಹೀಗೆ ಬೆಂದು ಬೇಕರಿವೋಗದಿರವು ಎಂಬುದನ್ನು ತೋರಿಸುವಂತೆ ಅರೆಯರೆ ಉರಿದ ಆ ಬಟ್ಟೆಯನ್ನು ತೋರಿಸಿ ನಡೆದ ಸಂಗತಿಯನ್ನೆಲ್ಲ ವಿಜ್ಞಾಪಿಸಿದರು. ಅದನ್ನು ಕಂಡು ಭೂಪನು ಆಶ್ಚರ್ಯಚಕಿತನಾದನು. ಆತನಿಗೆ ಭಯವು ಆವರಿಸಿತು. ಹರಿಯಣ್ಣನು ಸಾಕ್ಷಾತ್ ಶಿವನಲ್ಲದೆ ಸಾಮಾನ್ಯನಲ್ಲ ಎಂದು ನುತಿಸಿ ನಮಸ್ಕರಿಸಿದನು. ಪದ್ಮರಸ ದಂಡೇಶನ ಆನಂದಸಿಂಧು ಮೇಲ್ವರಿಯಲಾಗಿ ಆತನು ಹರಿಹರನನ್ನು ಹೀಗೆ ಸ್ತುತಿಸಿದನು : "ಭಾಪುರೆ ಹರೀಶಾ ಎಮ್ಮ ಈಶಸಂವಿತ್ಕೋಶ ಭಾಪು ಹರಿದೇವ ಮದ್ದೇವ ಮಧುರಾರಾವ, ಭಾಪು ಹರಿಯಣ್ಣ ಎಮ್ಮಣ್ಣ ಕಲಿಯುಗದ ಮುಕ್ಕಣ್ಣ ಮಝು ಭಾಪು ಭಲರೇ! ಆ ಹಂಪೆಯಲ್ಲಿ ಉರಿವ ಮೇಲ್ಕಟ್ಟನ್ನು ಇಲ್ಲಿ ಭೂಪಾಲನ ಓಲಗದಲ್ಲಿ ಕುಳಿತು ಅದನ್ನೊರೆಸುವ ಈ ಪೆಂಪು ನಿನಗಲ್ಲದೆ ಬೇರಾರಿಗುಂಟು" ಎಂದು ಬಣ್ಣಿಸಲು ಭಕ್ತರು ಉಘೇ ಉಘೇ ಎಂದು ಜಯಘೋಷಮಾಡಿದರು. ಆ ಮೇಲೆ ಹರಿದೇವನಿಂತೆಂದನು : "ಎಲೆ ಮನುಜೇಶಾ ಕೇಳು, ಇಂದು ಮೊದಲಾಗಿ ಸಕಲ ದೇವದೇವನ ಸೇವೆಯಲ್ಲದೆ ಮನುಜಸೇವೆ ಎನಗೆ ಅಗ್ರಾಹ್ಯವು ಇದು ನನ್ನ ಭಾಷೆ" ಎನುತ ಎನಿತೊಡಂಬಡಿಸಿದರೂ ಅದಕ್ಕೊಪ್ಪದೆ ಅಲ್ಲಿಂದ ಹೊರಟು ಮನೆಗೆ ಬಂದು ನೃಪನ ಒಡವೆಯಾಗಿದ್ದುದೆಲ್ಲವನ್ನೂ ಬಿಟ್ಟು ತನಗೆ ಸಲ್ಲುವ ಒಡವೆಯನ್ನು ಭಕ್ತತತಿಗೆ ಆರಾಧನೆಗೈದು ವೈರಾಗ್ಯದಿಂದ ಪದ್ಮಣಾಮಾತ್ಯ ಮೊದಲಾದ ಅಖಿಳ ಶಿವಗಣಸಂತತಿಗೆ ಭಯಭಕ್ತಿಯಿಂದ ಮೆಯ್ಯಿಕ್ಕಿ ಅವರ ಕರುಣೆಯನ್ನು ಪಡೆದು ಬೀಳ್ಕೊಂಡು ಪಂಪಾಪುರಾಭಿಮುಖವಾಗಿ ನಡೆದನು.

ಹೀಗೆ ಬರುತ್ತಿರಲು ದಾರಿಯಲ್ಲಿ ಗುಹಾರಣ್ಯವೆಂಬ ಪುಣ್ಯಕ್ಷೇತ್ರವಿದ್ದಿತು. ಅದನ್ನು ಪ್ರವೇಶಮಾಡಿ ಆ ಕ್ಷೇತ್ರಪತಿಯಾದ ಹರಿಹರಲಿಂಗದಾಲಯಕ್ಕೆ ಬಂದನು.

ದೇಗುಲದ ಬಾಗಿಲು ಮುಚ್ಚಿರುವುದನ್ನು ಕಂಡು ಆಶ್ಚರ್ಯಬಟ್ಟು ನಡುಹಗಲಲ್ಲಿ ಈ ಶಿವಾಲಯದ ಬಾಗಿಲವನ್ನು ಮುಚ್ಚಿರುವುದೇಕೆ ? ಎಂದು ವಿಚಾರಿಸಲು ಈ ದೇಗುಲದಲ್ಲಿ ಒಂದು ಬ್ರಹ್ಮರಾಕ್ಷಸವಿರುವುದು. ಅದು ಯಾರನ್ನೂ ಒಳಗೆ ಪ್ರವೇಶಮಾಡಗೊಡದು. ಎಂದು ಆ ಸ್ಥಾನದವರು ನುಡಿಯಲು ಅದನ್ನು ಕೇಳಿ ಆತನು ಕೋಪದಿಂದ ಆ ಬ್ರಹ್ಮರಾಕ್ಷಸನನ್ನು ಕರೆಯಲು ಅದು ನಡುಗುತ್ತ ನವೀನ ಬ್ರಾಹ್ಮಣನ ವೇಷದಿಂದ ಬಂದು ಅಡಿಗೆರಗಿತು. ಅದನ್ನು ನೋಡಿ ಹರಿಯಣ್ಣನು "ಎಲೆ ಬೊಮ್ಮರಕ್ಕಸನೇ, ಈ ಮಹಾಸ್ಥಾನಕ್ಕೆ ಉಪದ್ರವವನ್ನು ಕೊಡುವುದು ನಿನಗೆ ಉಚಿತವಾದುದೇ ? ಪೋ. ಪೋಗು." ಎನ್ನಲು ಅದು ಹರೀಶನ ದರುಶನದಿಂದ ಗ್ರಹತ್ವವನ್ನು ನೀಗಿ ವಂದಿಸಿ ನುತಿಸಿ ಸ್ವರ್ಗದತ್ತ ನಡೆಯಿತು. ಇತ್ತ ನಿರ್ಮಲ ಚರಿತ ನಾದ ಹರೀಶ್ವರನು ಶಿವಾಲಯವನ್ನು ಪ್ರವೇಶಿಸಿ ಭಜಿಸಿ ಶಿವನೊಲವನ್ನು ಪಡೆದು ಕೃತಾರ್ಥತೆಯನ್ನು ಹೊಂದಿದನು. ಇದು ಆಶ್ಚರ್ಯಕರವೆಂದು ಎಲ್ಲರೂ ಹೊಗಳಿ ದರು. ಹರೀಶನು ಅಲ್ಲಿಂದ ಹೊರಟು ಪಂಪಾಪುರಕ್ಕೆಂದು ಬರುತ್ತಿರಲು ಪಂಪಾ ಪುರೀಶನ ಆಸ್ಥಾನದವರೆಲ್ಲರ ಕನಸಿನಲ್ಲಿ ವಿರೂಪಾಕ್ಷನು ಬಂದು "ಎನ್ನ ಸುತ ಹರಿ ದೇವನು ಬರುತ್ತಿರುವನು. ಆತನನ್ನು ಇದಿರ್ಗೊಳ್ಳಬೇಕೆ"ಂದು ತಿಳಿಸಿ ಹೊಳೆ ಯುವ ತನ್ನ ಪಲ್ಲಕ್ಕಿಯನ್ನು ಕಳಿಸಲು ಹರೀಶ್ವರನು ಅದಕ್ಕೆ ನಮಸ್ಕರಿಸಿ ಅದನ್ನೇ ತಾನು ಹೊತ್ತುಕೊಂಡು ಬಂದು ಗುರುವಿರೂಪಾಕ್ಷನ ದರ್ಶನಮಾಡಿಕೊಂಡನು. ಒಗೆದ ರೋಮಾಂಚಕಂಚುಕಿತತನುವಿನಿಂದ, ಆನಂದರಸಭರಿತನೇತ್ರದಿಂದ, ನೆಗೆವು ತಿರ್ಪ ಬೆಮರ್ವನಿಗಳಿಂದ, ಸೆರೆಬಿಗಿವ ಕೊರಳಿಂದ, ಕರಗುವ ಎದೆಯಿಂದ, ಒಕ್ಕ ಲಿಕ್ಕಿ ಹೊರಹೊಮ್ಮುವ ಗದ್ಗದಾಲಾಪದಿಂದ ಮೈಯಿಕ್ಕಿ ದೈನ್ಯವನ್ನು ತೋರಿಸುತ್ತ ಮೋಹವನ್ನು ಬೀರುತ್ತ ನಮಿಸಿ ಹರಿದೇವನು ಶಿವನ ಕೃಪೆಯನ್ನು ಪಡೆದನು. ತುಂಗಭದ್ರಾನದಿಯ ಜಲವನ್ನು, ಮಘಮಘಿಸುವ ನವ್ಯಕುಸುಮಗಳನ್ನು, ದಿವ್ಯಗಂಧಾಕ್ಷತೆಗಳನ್ನು, ದಶಾಂಗಧೂಪ ಅಖಿಳದೀಪಗಳನ್ನು, ಲಲಿತವಾದ ನೈವೇದ್ಯ ತಾಂಬೂಲಾದಿಗಳನ್ನು ಸಂಭ್ರಮದಿಂದ ತಂದು ವಿರೂಪಾಕ್ಷಲಿಂಗವನ್ನು ಪೂಜಿಸಿ ಗಣಕುಲಾರ್ಚನೆಗೆಯ್ಯುತ್ತ ಹರೀಶ್ವರನು ಶಿವಾನುಭವದಿಂದಿರ್ದನು.

ಆ ಹರೀಶನ ಕವಿತಾರಸವನ್ನು ಮೋಹನದಿಂದೊಡಗೂಡಿದ ಆತನ ಕಲಾ ಪ್ರೌಢಿಯನ್ನು ಮಿನುಗುವ ಊಹೆಗಳನ್ನು ಆಲಿಸಿ ಆಂಧ್ರದೇಶದ ಓರ್ವ ಅಪೂರ್ವ ರೂಪಿಣಿಯಾದ ಗಣಿಕಾಗ್ರಣಿಯು ನೇಹವಿಮ್ಮಡಿಸಲು ಕಿವಿವೇಟವಗ್ಗಳಿಸಿ ವಿರಹಿಣಿ ಯಾಗಿ ತಪ್ತವಾಗಿ ಹರೀಶ್ವರನೊಡನೆ ಮನ್ಮಥಸುಖಾಂಬುಧಿಯಲ್ಲಿ ಓತು ಮುಳು ಗುವೆನೆಂದು ನೆನೆದು ದೇವಪ್ರಾರ್ಥನೆಯ ನೆವದಿಂದ ಅಂದಣವನೇರಿ ಸಕಲ ವೈಭವ

ದೊಡನೆ ಹರೀಶ್ವರನಿಗೆ ಕಾಮದೇವನು ತಂದರ್ಪಿಸುವ ಕಾಣಿಕೆಯೋ ಎಂಬಂತೆ ಪಂಪಾಪುರಕ್ಕೆ ಬಂದು ಬಿಡಾರವೊಂದನ್ನು ಪ್ರವೇಶಿಸಿದಳು. ಅಷ್ಟರಲ್ಲಿ ರವಿ ಪಶ್ಚಿಮಾಂಬುಧಿಗಿಳಿದನು. ವಿವಿಧ ವಿಭವದಿಂದ ಅವಳು ಆ ವಿರುಪಾಕ್ಷನಾಲಯಕ್ಕೆ ಬಂದು ನಿನ್ನವನಿರವನು ಎನಗೆ ತೋರೆಂದು ಎರಗಿ ಬೇಡಿಕೊಳ್ಳುವಂತೆ ನಮಸ್ಕರಿಸಿ ಕಾಣ್ಕೆಯಿತ್ತು ಪೂಜೆಯನ್ನು ರಚಿಸಿ ಮನೆಗೆ ಬಂದು ಆ ಮೇಲೆ ಹರಿದೇವನನ್ನು ಕಾಣುವ ತವಕದಿಂದ ಪ್ರಾಣಸಖಿಯೊಬ್ಬಳೊಡನೆ ಹೊರಟು ಶಿಥಿಲಕರ್ಮನು ಆಚಾರ್ಯನನ್ನು ಅರಸಿಕೊಂಡು ಬರುವಂತೆ ಆ ಮಹಾತ್ಮನನ್ನರಸುತ್ತ ಬಂದು ಶಿವಾಲಯದ ಸನಿಹದ ಆಶ್ರಮದೊಳಗೆ ಮೆರೆವ ಶಿವಯೋಗಿಯನ್ನು ಕಂಡಳು. ಶಿವಯೋಗಿಯಾದ ಆ ಹರಿದೇವನು ವಿಭೂತಿ ರುದ್ರಾಕ್ಷಿಗಳನ್ನು ಉಜ್ವಲವಾದ ಅಂಗದಲ್ಲಿ ಧರಿಸಿ ನಸುಗಾವಿಯ ಬಟ್ಟೆ (ಕಪನಿ) ಯನ್ನು ತೊಟ್ಟು ಪಾವುಡವನ್ನು ತಲೆಗೆ ಸುತ್ತಿ ಮೇಲ್ವಸ್ತ್ರವನ್ನು ಹೊತ್ತು ದೋತ್ರವನ್ನು ಟೊಂಕಕ್ಕೆ ಬಿಗಿದುಕಟ್ಟಿ ಪದ್ಮಾಸನವನ್ನು ಹಾಕಿ ಶಾಂತಿರಸದ ಎರಕಹೊಯ್ದು ಸಮೆದ ಪುತ್ಥಳಿಯೆಂಬಂತೆ ಅಂತರ್ಮುಖಾಕ್ಷಿಯಾಗಿ ಕುಳಿತಿದ್ದನು. ಆತನು ತನ್ನ ಹೃದಯಕಮಲದಲ್ಲಿ ಥಳಥಳಿಸಿ ಹೊಳೆಯುವ ಪರಂಜ್ಯೋತಿರಾಕಾರಲಿಂಗವನ್ನು ಬಳಸಿ ಬಿಗಿದು ಒಳಹೊಕ್ಕು ತಾನು ಅದು ಎಂಬ ಭೇದಭಾವವನ್ನರಿಯದೆ ಅನುಪಮಸುಖಾವೇಶದಿಂದಿದ್ದನು. ಆತನನ್ನು ಕಂಡು ಕಾಮನು ಬಿಲ್ಲನಿಳುಹಿದನು. ರತಿ ವಿರತಿಯನ್ನು ಧರಿಸಿದಳು. ಸಸಿ ಮಸಿಯಾಯಿತು. ಮಲಯಮಾರುತನು ವನಪ್ರವೇಶಮಾಡಿದನು. ವಸಂತನು ಭ್ರಾಂತನಾದನು. ಏನು ಹೇಳುವದು ! ಆ ಕಾಂತೆಯಲ್ಲಿ ಉದ್ಭವಿಸಿದ ಕಾಮದ ಕತ್ತಲೆಯು ತವಿಸಿ ಶಿವಭಕ್ತಿಯು ಅವಳ ಒಳ ಹೊರಗನಾವರಿಸಿತು. ವಿಶ್ರಾಂತಳಾಗಿ ಹರಿದೇವನಿಗೆ ಸಾಷ್ಟಾಂಗನಮಸ್ಕರಿಸಿ ಅವನನ್ನು ಸ್ತುತಿಸತೊಡಗಿದಳು. ಶಾಂತಿರೂಪನು ಕಣ್ದೆರೆದು ನೋಡಿ "ಎಮ್ಮಾಶ್ರಮಕ್ಕೆ ನಟ್ಟಿರುಳು ಏನುಕಾರಣ ಬಂದೆ ನೀನು ?" ಎಂದು ಆ ತಳೋದರಿಯನ್ನು ಕೇಳಲು ಆಕೆಯು ಯಥಾಕಥನವನ್ನು ಬಿನ್ನವಿಸಿದಳು. ಅದನ್ನು ಕೇಳಿ ಹರಿಹರದೇವನು "ಶಿವಶಿವಾ! ಹೆಣ್ಣಿಗೆ ಹೆಣ್ಣು ಮೆಚ್ಚಿ ಕೂಡಿದುದುಂಟೇ ? ಎಲಗೇ ಪುಂಡರೀಕಾಕ್ಷಿ, ನಾನು ನೊಸಲಗಣ್ಣ ಶಿವನಿಗೆ ಗಂಡುದೊತ್ತಾಗಿರುವೆನು. ನೀನಿಂತು ಬಳಲಿ ಬರುವುದೇ ತಾಯಿ ? ಮರಳಿ ಹೋಗಬೇಕು. "ಎಂದು ನುಡಿಯಲು ಆ ಶಿವಭಕ್ತನ ಅಳವಿಗೆ ಮೆಚ್ಚಿ ಆ ಶಶಿಮುಖಿಯು ಭಕ್ತಿಯಿಂದ ಆತನಿಗೆರಗಿ "ಪಶುಪತಿಗೆ ನೀನು ಗಂಡುದೊತ್ತಾಗಿದ್ದರೆ ನಿನಗೆ ನಾನು ಹೊರಗುಂಡನಾಗಿರುವೆನು." ಎಂದು ಪ್ರಾರ್ಥಿಸಿ ಆತನ ಕರುಣೆಯನ್ನು ಪಡೆದು ಶಿವದೀಕ್ಷೆಯನ್ನು ಹೊಂದಿದಳು. ತನ್ನೊಡನೆ ಬಂದವರನ್ನೆಲ್ಲ ತಿರುಗಿ ಕಳುಹಿಸಿ ಹರವಿರೂಪಾಕ್ಷನನ್ನೂ ಗುರುರುಹರೀಶನನ್ನೂ ಆರಾಧಿಸುತ್ತ ಅಮಲ

ವಿರತಿಯನ್ನು ಅಂಗೀಕರಿಸಿ ಮೋಕ್ಷಲಕ್ಷ್ಮಿಯನ್ನು ತೊತ್ತುಗೆಯ್ದು ಆಳುವ ಬೆಡಗನ್ನು ಬೀರುತ್ತ ಆಕೆ ಸುಖದಿಂದಿದ್ದಳು. ಶಿವಶಿವಾ ಮಹಾತ್ಮರ ಸಂಗದಿಂದ ಏನಾಗದು !

ಹರೀಶ್ವರನ ಅಗ್ರಜೆಯ ಸುತನು ಕುಕವಿಹೃತ್‌ಕುಂತನು ಸುಕವಿವನವಸಂತನು ಉಭಯಕವಿಸಂತಾನಶರಭಭೇರುಂಡನು ಆದ ರಾಘವನು ತನ್ನ ಕಾವ್ಯದಲ್ಲಿ ನರನುತಿಯನ್ನು ಮಾಡಿರಲು ಹರೀಶ್ವರನು ಅದಕ್ಕೆ ಮುಳಿದು ಆತನ ಐದು ಹಲ್ಲುಗಳನ್ನು ಕಳೆದನು. ಬಳಿಕ ರಾಘವನಿಂದ ಶೈವಕೃತಿಪಂಚಕವನು ಸುರಿಸಿ ಆ ಐದೂ ಹಲ್ಲುಗಳನ್ನು ತಿರುಗಿಕೊಟ್ಟು ಆತನ ಕವಿತಾಮುಖದಿಂದ ಪರವಾದವನ್ನು ಗೆಲಿಸಿದನು.

ಆತನಿಗೆ ಓರ್ವ ಭಕ್ತನಿಂದ ಅಪರಾಧವಾಗಲು ನೊಂದು ಕೋಪೋಕ್ತಿಯಿಂದ ಹರಿಹರದೇವನು ಆ ಭಕ್ತನನ್ನು ಶಪಿಸಿದನು, ಆ ಭಕ್ತನು ಪಶ್ಚಾತ್ತಾಪಪಟ್ಟು ಪ್ರಾರ್ಥಿಸಲು ನಿನ್ನ ನಿಜಮುಕ್ತಿಗೂ ಮಹಿಮೆಗೂ ಈ ಶಾಪ ಅನುಕೂಲವು ಎಂದು ನುಡಿದನು.

ತದನಂತರ ಮೆಚ್ಚಿಬಂದ ಆ ಭಕ್ತೆಯ ಅತಿಶಯವಾದ ಭಕ್ತಿಗೆ ಒಲಿದು ಪಂಪಾವತಿಯ ಪೂಜೆಯನ್ನೆಸಗಿ ಆಕೆಯನ್ನು ಶಿವಪುರಕೆ ಕಳುಹಿಸಿದನು. ಭಕ್ತರು ಉಘೇ ಉಘೇ ಎಂದು ಜಯಘೋಷಮಾಡಿದರು. ಹೀಗೆ ಹರೀಶ್ವರನು ಶಿವಸುಖದಲ್ಲಿದ್ದನು.

ಇತ್ತ ನಮ್ಮ ಪದ್ಮಣಾತ್ಯಶೇಖರನು ಮತ್ತೊಂದು ದಿನ ಭೂಪಾಲನ ಸಭೆಗೆ ಉದಾತ್ತತೆಯಿಂದ ಹೋಗಿ ನೃಪನ ಉಪಚಾರವನ್ನು ಸ್ವೀಕರಿಸುತ್ತ ಹಿರಿಯ ಗದ್ದುಗೆಯಮೇಲೆ ಉತ್ತುಂಗವೃತ್ತಿಯಿಂದ ಮೂರ್ತಿಗೊಂಡು ಓಲಗವನ್ನು ನಡೆಸುತ್ತ ಘನ ತೇಜಸ್ಸಿನಿಂದ ಒಪ್ಪುತ್ತಿದ್ದನು. ಆಗ ವೇಲಾಪುರ (ಬೇಲೂರ) ದ ಅಧಿಕಾರಿಯು ಎದ್ದು ಹೀಗೆ ಬಿನ್ನವಿಸಿದನು: "ಎಲೈ ನೃಪಶಿರೋಮಣಿಯೇ ನಿನ್ನ ರಾಜ್ಯವು ಉಜ್ವಲವಾದ ದೇವಮಾತೃಕ ನದೀಮಾತೃಕಗಳಿಂದ ಸುಫಲವಾಗಿರುವುದು. ಎನ್ನ ಪುರವೊಂದಕ್ಕೆ ಮಾತ್ರ ನದಿಯ ಇಲ್ಲವೆ ಕೆರೆಯ ನೀರಿನ ಪೋಷಣೆಯಿಲ್ಲ ಕೆರೆಗೆ ಅನುಕೂಲವಾದ ಸ್ಥಳವುಂಟು ಅಲ್ಲಿ. ಪ್ರೇಮದಿಂದ ಒಂದು ಕೆರೆಯನ್ನು ರಚಿಸಿಕೊಟ್ಟರೆ ಬಹಳ ಹೇಳುವದೇನು ? ಆ ಊರನ್ನು ಸಿರಿವೆಣ್ಣೆ ನೆಲೆವನೆಯೆನಿಸುವೆನು." ಆತನ ನುಡಿಗೆ ಅರಸನು ತನ್ನ ಚಿತ್ತದಲ್ಲಿ ಒಡಂಬಟ್ಟು ಪದ್ಮರಸರ ಮುಖ

ಕಮಲವನ್ನು ಈಕ್ಷಿಸಲು ಅವರು ಆತನ ಇಂಗಿತವನ್ನರಿತು "ಭೂನಾಥನೇ, ಈತನು ಬಿನ್ನವಿಸಿದಂತೆ ಮಾಡುವುದು ಉಚಿತ" ಎಂದು ನುಡಿದರು. ನೃಪತಿಯು ಆನಂದ ಪಟ್ಟು "ನನ್ನ ಮಗನ ಹೆಸರಿನಿಂದ ನೀನೊಂದು ಕೆರೆಯನ್ನು ಕಟ್ಟಿಸಬೇಕು." ಎಂದು ಹೇಳಿ ಓಲಗವನ್ನು ಮುಗಿಸಿ ಅಂತಃಪುರಕ್ಕೆ ನಡೆದನು. ಆ ಮೇಲೆ ಪದ್ಮರಸ ಮಂತ್ರೀಶ್ವರನು ತನ್ನ ಸಚಿವವೃಂದದೊಡನೆ ಅಲ್ಲಿಂದ ಹೊರಟು ಕಂಗೊಳಿಸುವ ಭಂಡಾರದ ಮನೆಗೆ ಬಂದು ಕುಳಿತುಕೊಂಡು ಭಂಡಾರಿಗೆ ತಿಳಿಸಿ ಹನ್ನೆರಡುಸಾವಿರ ಹೊಳೆವ ಹೊಸಹೊನ್ನುಗಳನ್ನು ಹರ್ಷದಿಂದ ತರಿಸಿ ಕಡಿತ (ಜಮಾಖರ್ಚು) ದಲ್ಲಿ ಬರೆಯಿಸಿ ಕೆರೆಕಟ್ಟಿಸೆಂದು ಆ ಹಣವನ್ನು ವೇಲಾಪುರ (ಬೇಲೂರ) ದ ಅಧಿಕಾರಿಗೆ ಕೊಡುವ ಸಮಯದಲ್ಲಿ ಒಂದು ಸೋಜಿಗದ ಘಟನೆ ನಡೆಯಿತು. ಪರಮಾತ್ಮನು ಪದ್ಮರಸರನ್ನು ಮೆರೆಯಬೇಕೆಂದು ಪ್ರೇಮದಿಂದ ಪುಲಿದೊವಲನ್ನು ಅಂಬರವನ್ನಾಗಿ ಮಾಡಿಕೊಂಡು ದೇಹದ ಮೇಲೆ ಹೊದೆದು, ವಿಭೂತಿಯ ತಿಲಕದಿಂದ ಹಣೆಗಣ್ಣನ್ನು ಮುಚ್ಚಿಕೊಂಡು ಎಲುವಿನ ಮಾಲೆಯನ್ನು ರುದ್ರಾಕ್ಷಿಮಾಲೆಯನ್ನಾಗಿ ಮಾಡಿಕೊಂಡು ಕೊರಳ ಕಪ್ಪನ್ನು ತೆಗೆದು ಅಮೃತಸುರಿವಂತೆ ಮಾಡಿ ಆ ಕಪ್ಪನ್ನು ತುಟಿಯಲ್ಲಿ ಧರಿಸಿ ಸಿರಿಮುಡಿಯಲ್ಲಿರುವ ಚಂದ್ರನನ್ನು ತೆಗೆದು ಎದೆಯಲ್ಲಿ ಅಲಂಕರಿಸಿ ಒಂದುಮುಖ ಎರಡುತೋಳುಗಳುಳ್ಳ ವಿಟಜಂಗಮಾಕೃತಿಯನ್ನು ತಳೆದು ಪೊಸ ಠೀವಿಯಿಂದ ಚಮ್ಮಾವುಗೆ ರೇಶಿಮೆಬಟ್ಟೆ ಹೂವಿನಗುಚ್ಛೆ ಇವುಗಳಿಂದ ಶೃಂಗಾರಕ್ಕೆ ತಕ್ಕಂತೆ ಅಲಂಕೃತನಾಗಿ ಸೆಳ್ಳುಗುರ್ಗಳಿಂದ ಮುಂದಲೆಯಲ್ಲಿ ಅಲ್ಲಾಡುವ ಮುಂಗುರುಳುಗಳನ್ನು ತೀಡುತ್ತ ಕೆಂಪುಹಲ್ಲುಗಳು ಥಾಳವಾಗಿರಲು ನಸುನಗುತ್ತ ಎಂಟೂ ದಿಕ್ಕಿಗೆ ಮೈಗಂಪನ್ನು ಸೂಸುತ್ತ ತನ್ನನ್ನು ಇಸಿಸುಮಾತ್ರ ಕಂಡ ತರುಣಿಯರ ಮನಸವನ್ನು ಸೆಳೆಯುತ್ತ ಶರಣಪದ್ಮರಸರಿದ್ದೆಡೆಗೆ ಬರಲು ಅವರು ಕಂಡು ಭಯಭಕ್ತಿಯಿಂದ ಎದ್ದು ವಂದಿಸಿ "ದೇವಾ ಅಪ್ಪಣೆಯೇನೆಂ"ದು ಪ್ರಾರ್ಥಿಸಿದರು. ಆಗ ಜಂಗಮನು "ಎಲೇ ಭಕ್ತಸಂಕುಳಲಲಾಮಾ ಕೇಳು, ಎನ್ನ ಪ್ರಿಯೆತಮೆ ಎನಗೆ ಮುಳಿದಿರುವಳು. ಆ ಮುನಿಸನ್ನು ಕಳೆಯಬೇಕಾಗಿದೆ ಅದಕ್ಕಾಗಿ ಹೊಳೆಯುವ ಈ ಹೊನ್ನ ಜಾಳಿಗೆಯನ್ನೆಲ್ಲ ಕೊಡಬೇಕು." ಎಂದನು. ಶಿವಶಿವಾ! ಪದ್ಮರಸರು ಅದಕ್ಕೆ ಅಲಸಿದರೇ ? ಕೊಂಕಿದರೇ ? ಕೋಡಿದರೇ ? ಚಲಚಿತ್ತರಾದರೇ,ಹಿಮ್ಮೆಟ್ಟಿದರೇ, ಸಭಾಸ್ಥಲವೆಂದು ಅಂಜಿದರೇ ? ರಾಜಧನವೆಂದು ಊಹಿಸಿದರೇ ? ದುರ್ಜನರು ಬಾಯಿಗೆ ಬಂದಂತೆ ಉಲಿವರೆಂದು ಬಗೆದರೇ ? ವಿಕೃತವೇಷವೆಂದು ತಮ್ಮ ಭಕ್ತಿಯನುಡುಗಿದರೇ? ಆತನ ನಿಷ್ಠೆಯನ್ನು ಹೊಗಳುವುದೇನು, "ಇಹಃಪಗೆಯಾಂಡ ಸಿಂಧುಬಲ್ಲಾಳರನ್ನು ಸಲಹಿದ ಅಪ್ರತಿಮ ಮೋಹನರೂಪನೇ ವಿಲಸಿತ ಸುಲೀಲಾ ಕಲಾಪನೇ ತಥ್ಯವಾಸ್ತು ಈ ಧನವನ್ನು ಕೈಕೊಂಡು ಕರುಣಿಸುವುದು" ಎಂದು

ಪದ್ಮರಸರು ನುಡಿದರು. ಸ್ವಾಮೀ, ನೀವಿತ್ತ ಈ ಪರಿಯ ಸಿರಿಯನೊಲ್ಲೆನೆಂದು ಒಪ್ಪಿಸಿದನೋ, ಮುಕ್ತಿಭಾಮೆಯೆಂಬ ಗಣಿಕೆಗೆ ಒತ್ತೆಯನ್ನು ಕಳುಹಿದನೋ, ಎಂಬಂದದಿಂದ ವಿಟಜಂಗಮವೇಷದ ಈಶನಿಗೆ ಹೇಮಾದ್ರಿವಾಸನಿಗೆ ಆ ಧನವನ್ನಿತ್ತು ಪದ್ಮರಸರು ಭಕ್ತಿಯಿಂದ ನಮಸ್ಕರಿಸಿ ಆತನನ್ನು ಬೀಳ್ಕೊಟ್ಟರು. ಆ ಸಮಯದಲ್ಲಿ ಓರ್ವ ಚರನು ಓಡುತ್ತಬಂದು ಪದ್ಮರಸಸಚಿವಾಧಿಪತಿಗೆ "ಎಲೆ ದೇವಾ, ಅನುಪಮರಾದ ಅನೇಕ ಭಕ್ತರು ದೂರದಿಂದ ಬಂದಿರುವರು" ಎಂದು ಬಿನ್ನವಿಸಿದನು. ಆ ನುಡಿಯನ್ನು ಕೇಳಿ ಸಂಭ್ರಮಿಸುತ್ತ ಅರಸುಗೆಲಸಗಳನ್ನೆಲ್ಲ ಮರೆತು ಘಳಿಲನೆ ಎದ್ದು ಹೊರಡಲು ಅವರೊಡನೆಯೇ ಬೇಲೂರವನೂ ಹೊರಟನು. "ಈಗ ಸಮಯವಲ್ಲ" ನಡೆ ಎಂದು ಆತನನ್ನು ಗದ್ದರಿಸಿ ಕಳುಹಿಸಲು ಕರಣಿಕರ ಸಮೂಹವೆಲ್ಲ ಅತ್ಯಂತಸೋಜಿಗದಿಂದ ಮೂಗಿನಮೇಲೆ ಬೆರಳಿಟ್ಟುಕೊಂಡು ಎಂದೆಂದಿಗೂ ಇಂತಹವನ್ನು ಕಂಡು ಕೇಳ್ದುದಿಲ್ಲವೆಂದು ಗಜಬಜಿಸಿದರು. ಕೆಲವರು ಪದ್ಮರಸ ಹೀಗೆ ಮಾಡಬಹುದೇ ಎನ್ನುವರು. ಮತ್ತೆ ಕೆಲವರು ಮಾಡಿದರೆ ಮಾಡಲಿ, ಇದು ಸ್ಥಳವೇ ಎನ್ನುವರು. ಇನ್ನು ಕೆಲವರು ಅದೇನು ತನ್ನ ಒಡವೆಯೇ ಎನ್ನುವರು. ತನ್ನೊಡವೆಯಾದರೂ ಸೂಳೆಗನಿಗೆ ಅಷ್ಟಾಂಗದಿಂದ ನಮಿಸಿ ಕೊಡುವುದು ಇದು ರೀತಿಯೇ ಎಂದು ಕೆಲವರೆನ್ನುವರು. ಕೊಟ್ಟರೂ ಕಾರ್ಯದ ವಿಷಯವಾಗಿ ಏನಾದರೂ ಒಂದು ಮಾತು ಹೇಳಿ ನೀನು ಕೆರೆಯನ್ನು ಕಟ್ಟಿಸು ಎಂದು ಕಳಿಸದೆ ಆತನನ್ನು ಸುಮ್ಮನೆ ಇದು ಸಮಯವಲ್ಲವೆಂದು ಬೆದರಿಸಿ ಜಂಗಮಾವಳಿ ಬಂದಿರುವುದೆಂದು ತಾನು ಓಡಿಹೋಗುವುದು ಮಂತ್ರಿಶ್ರೇಷ್ಠನ ಗುಣವೇ ಎಂದು ಹಲವರಾಡುವರು. ಅಜ್ಞಾನಿಗಳು ಹೀಗೆ ಹಲವು ರೀತಿಯಾಗಿ ಊಹಿಸಿ ನೃಪತಿಗೆ ಈ ವಿಷಯವನ್ನು ಈಗ ತಿಳಿಸದೆ ಹೋದರೆ ನಮಗೆ ರಾಜದ್ರೋಹ ಪ್ರಾಪ್ತವಾಗದೆಇರದು ಹೀಗೆ ಕರಣಿಕರೆಲ್ಲರೂ ನಿಶ್ಚಯಿಸುತ್ತಿರಲು ಅವರಲ್ಲಿಯೇ ಒಬ್ಬ ವಿವೇಕಿಯಾದವನು ಹೀಗೆ ನುಡಿದನು: "ಶರಣರಿಗೆ ಇದೇನು ದೊಡ್ಡದೇ ? ಹರಭಕ್ತರಿರವನ್ನು ಅವರೇ ಬಲ್ಲರು, ಉಳಿದವರರಿಯರು. ಬಂದದೆಸೆ ಹೋದದೆಸೆಯನ್ನು ಯಾರಿಗೂ ತಿಳಿಯಗೊಡದಂತೆ ಕಾವಲಿದ್ದ ಹಲವು ದ್ವಾರಪಾಲಕರ ಕಣ್ಣುತಪ್ಪಿಸಿ ಒಳಗೆ ಬಿಜ್ಜಳನ ಅರಮನೆಯೊಳಗೆ ಬಂದು ಅಲ್ಲಿದ್ದ ಬಸವಣ್ಣನಿಗೆ ಧನವನ್ನೆಲ್ಲ ಬೇಡಲು ಅದನ್ನು ಕೊಟ್ಟು ಪವಾಡಂಗೆಯ್ದ ಪರಿಯು ಶರಣರಿಗಲ್ಲದೆ ಉಳಿದವರಿಗೆ ಸಾಧ್ಯವೇ ? ಕುಷ್ಠರೋಗದಿಂದ ಬಣ್ಣಗೆಟ್ಟ ಜಂಗಮನನ್ನು ಪದ್ಮರಸರು ನೃಪನಿದುರಿನಲ್ಲಿಯೇ ಉಜ್ವಲಾಂಗನನ್ನಾಗಿ ಮಾಡಿದುದನ್ನು ಮರೆತಿರೇ ? ಮೊನ್ನೆ ಹರಿಯಣ್ಣನು ಆಸ್ಥಾನಮಧ್ಯದಲ್ಲಿ ತನ್ನ ಕೈಗಳನ್ನೊರಸಿ ದೃಷ್ಟಾಂತತೋರಿಸಿದುದನ್ನು ನೀವು ಕಾಣಿರೇ ? ಆದುದರಿಂದ ಶಿವಸಮಯದಲ್ಲಿ ಕರ್ಕಶತನವು ಸಲ್ಲದು, ವಿಚಾರಿಸಿನೋಡಲು ಪದ್ಮರಸರೇನು

ಸಾಮಾನ್ಯರೇ ? ಅವರು ನಮ್ಮ ದೊರೆಯ ಭಾಗ್ಯಲಕ್ಷ್ಮಿಯಿದ್ದಂತೆ ! ಆದುದರಿಂದ ಈಗಲೇ ದೊರೆಗೆ ತಿಳಿಸುವುದನ್ನು ಕೆಲವುದಿನ ತಡೆದು ಕಾರ್ಯವನ್ನು ತಿಳಿದು ದೊರೆಯ ವಿಚಾರವನ್ನು ಅರಿದು ಆ ಮೇಲೆ ಹೇಳುವುದು ಸೂಕ್ತವು" ಎಂದೆನಲು ಅದಕ್ಕವರು ಒಡಂಬಟ್ಟು ತಂತಮ್ಮ ಮನೆಗಳಿಗೆ ಹೋದರು.

ಇತ್ತ ಪದ್ಮರಸರು ಶಿವಭಕ್ತರೆಡೆಗೆ ಹೋಗಿ ಸಾಷ್ಟಾಂಗದಿಂದ ನಮಸ್ಕರಿಸಿ ಉಬ್ಬಿ ಕೊಬ್ಬುತ್ತ ಆ ಗಣಸಮೂಹವನ್ನೆಲ್ಲ ಮನೆಗೆ ಕರೆತಂದು ಅವರ ಪಾದೋದಕವನ್ನು ಧರಿಸಿ ಅವರನ್ನು ಪೂಜಿಸಿದರು. ಅವರಿಗೆ ದಿವ್ಯಾನ್ನ ಪಾಯಸ ಶ್ರೇಷ್ಠವಾದ ಶಾಕಪಾಕ ಉಪ್ಪಿನಕಾಯಿ ಕಮ್ಮನೆಯ ತುಪ್ಪ ಚಿಲುಪಾಲು ಕೆನೆಮೊಸರಕರಣೆ ಇವೇ ಮೊದಲಾದ ಷಡ್ರಸಾನ್ನಗಳನ್ನು ಉಣಬಡಿಸಿ ತಾಂಬೂಲವನ್ನು ಕೊಟ್ಟರು. ಪದ್ಮರಸರನ್ನು ಆ ಮಂಗಲಾತ್ಮರು ನೋಡಿ ಜಂಗಮಸ್ನೇಹಿ, ಜಂಗಮಾರಾಧನೋತ್ಸುಕ, ಜಂಗಮಪ್ರಾಣಿ, ಜಂಗಮಕಲ್ಪವೃಕ್ಷ, ಶರಣಮಾನಸಶಯ್ಯ, ಈ ಮಹೀಪಾಲನಿಗೆ ಒಗೆದ ಶಿವನಲ್ಲದೆ ನೀನು ಜಗದ್ವ್ಯಾಪಾರಿಗಳೊಳಗೆ ಒಬ್ಬನೇ ? ನಿನ್ನ ನೋಟ ಅಘದ ಓಟ ಎಂದು ಮುಂತಾಗಿ ಸ್ತುತಿಸುತ್ತಿರಲು ಪದ್ಮರಸರು ತನ್ನ ಕಿವಿಗಳನ್ನು ಮುಚ್ಚಿಕೊಂಡು ನಾನು ನಿಮ್ಮ ಡಿಂಗರಿಗನು. ಇನಿತು ಹೊಗಳುವುದೇಕೆ ? ಎಂದು ಭಯ ಭಕ್ತಿಯಿಂದ ಅವರ ಪಾದಕಮಲಗಳಿಗೆ ನಮಿಸಿ ಆ ಭಕ್ತ ಸಂಕುಲದ ಕರುಣೆಯನ್ನು ಪಡೆದು ಶಿವರಹಸ್ಯಾನುಭವಜಲಧಿಯಲ್ಲಿ ತಾನೂ ಅವರೂ ಕೂಡಿ ಮುಳುಗಾಡಿದರು. ನಿರ್ಮಳ ಚಿದಾನಂದಾತ್ಮರಾಗಿ ಪದ್ಮರಸರು ಹೀಗೆ ಶೋಭಿಸಿದರು.

ಆರನೆಯ ಸಂಧಿ

ಪದ್ಮರಸರು ಕೆರೆ ನಿರ್ಮಿಸಿದುದು

ಪರಮಶಿವಭಕ್ತರಾದ ಪದ್ಮರಸದಂಡೇಶರು ಹೀಗೆ ಕೆಲದಿನವಿದ್ದು ಒಂದು ದಿನ ನೃಪಸಭೆಯಕಾರ್ಯವನ್ನು ಮುಗಿಸಿ ರಾತ್ರಿ ಮನೆಗೆ ಬಂದು ಈಶಾನುಭವ ಯೋಗದಿಂದಿರುತ್ತಿರಲು ಪಾತಕರಾದ ಕೆಲವುಜನ ಚಾಡಿಕೋರರು ನೆರೆದು ಆಪ್ತಾಲೋಚನೆಮಾಡಿ ಗುಜುಗುಟ್ಟುತ್ತ "ಪದುಮಿದೇವನು ಭಂಡಾರದ ಧನವನ್ನು ವಿಟ ಜಂಗಮನಿಗೆ ಇತ್ತು ಧನಕೊಂಡುದಕ್ಕೆ ಏನನ್ನೂ ಮಾಡದೆ ಉದ್ದಂಡವೃತ್ತಿಯಿಂದಿದ್ದು ನೃಪತಿಯನ್ನು ಲೆಕ್ಕಕ್ಕೆ ತಾರದೆ ಗಂಡುಗೆಲೆಯುತ್ತಿರುವನು. ಅದನ್ನು ನಾಳೆ ಭೂಮಂಡಲೇಶ್ವರನಿಗೆ ಹೇಳಿ ಆಸ್ಥಾನದಲ್ಲಿ ಅವನನ್ನು ಅವಮಾನಗೊಳಿಸಬೇಕು. ನಮ್ಮನ್ನು ಆತನು ಹೇಗೆ ಮೋಸಮಾಡಬಲ್ಲನು, ತಾನೇ ಬಲೆಯಲ್ಲಿ ಸಿಲುಕಿರುವನು" ಎಂದು ಉಬ್ಬುತ್ತ ಕೊಬ್ಬುತ್ತ ಕಾಡಗಿಚ್ಚನ್ನು ಕೆಡಿಸಲೆಂದು ಹವಣಿಸುವ ತರಗೆಲೆಗಳಂತೆ, ವಜ್ರಾಯುಧದ ಉಕ್ಕನ್ನು ನಿಲಿಸಲೆಂದು ಊಹಿಸುವ ಪರ್ವತಸಮೂಹದಂತೆ, ಭಾಸ್ಕರನ ಬೆಳಕನ್ನು ಕಂದಿಸಲು ಬಗೆದ ಅಂಧಕಾರಾಳಿಯಂತೆ ಈಶ್ವರಾನಂದದಲ್ಲಿ ವಿಕ್ರಮವನ್ನು ಪಡೆದ ಪದ್ಮರಸರನ್ನು ಉಡುಗಿಪೆವೆಂದು ಪಾಪಾತ್ಮರು ನೆನೆದರು. ಹೀಗೆ ನೆನೆದು ತಮ್ಮ ತಮ್ಮ ಮನೆಗಳಿಗೆ ಹೋದರು. ಅವರ ವೈಭವಕ್ಕೆ ಮೃತ್ಯು ಮೂಡಿತೆಂಬಂತೆ ಹೊತ್ತುಮೂಡಿ ಮೆರೆಯತೊಡಗಿತು. ಭ್ರಾಂತರಾದ ಆ ಕುಜನರು ತಮ್ಮ ನಿತ್ಯಕರ್ಮಗಳನ್ನು ಹೇಗೋ ಮುಗಿಸಿ ಒಬ್ಬೊಬ್ಬರಾಗಿ ಭೂಕಾಂತನ ಓಲಗಕ್ಕೆ ಹೋಗಿ ಅರಸನನ್ನು ಕಂಡು ಕುಳಿತುಕೊಂಡು ಸಂತೋಷದಿಂದ ಕೆಲವು ಸಮಯವನ್ನು ಅಂತಿಂತು ಮಾತನಾಡಿ ಕಳೆದು ಬಳಿಕ ನೃಪತಿಗಿಂತೆಂದರು : "ಎಲೆ ಭೂಪಾಲ, ಬೇಲೂರಲ್ಲಿ ನೀನು ಕಟ್ಟಿಸಲು ಹೇಳಿದ ಕೆರೆ ಸಿದ್ಧವಾಗಿದೆಯೇ" ಎಂದು ಕೇಳಿದರು. ಆತನು ಒಮ್ಮೆಲೆ ತಿರುಗಿ "ಇದುವರೆಗೂ ಆಗದಿರುವುದೇ?" ಎಂದು ಆ ಸಚಿವರನ್ನು ನೋಡಿ ಬೆಸಗೊಳ್ಳಲು ಅವರು ಹೀಗೆ ಬಿನ್ನವಿಸಿದರು : "ನೃಪತಿಯೇ ಚಿತ್ತಯಿಸಬೇಕು. ಪದ್ಮರಸಮಂತ್ರಿ ಕೆರೆಗೆಂದು ಹೇಳಿ ಹನ್ನೆರಡುಸಾವಿರ ಹೊನ್ನುಗಳನ್ನು ತರಿಸಿ ಬೇಲೂರವನಿಗೆ ಕೊಡುವ ಸಮಯದಲ್ಲಿ ಒಬ್ಬ ವೇಶ್ಯಾಲೋಲಜಂಗಮನು ಬಂದು ತನ್ನ ಸೂಳೆಯನ್ನು

ರವಿಸುವದಕ್ಕಾಗಿ ಅದನ್ನು ಬೇಡಿದನು. ಒಡನೆಯೇ ಪದ್ಮರಸರು ಅವನಿಗೆ ಆ ಧನವನ್ನು ಕೊಟ್ಟು ಶರಣರ ಸಮೂಹವು ಬಂದಿದೆಯೆಂಬ ವಾರ್ತೆಯನ್ನು ಕೇಳಿ ಅಲ್ಲಿಗೆ ಹೋಗುತ್ತಿರಲು ಬೇಲೂರವನೂ ಅವರ ಬೆನ್ನು ಹತ್ತಿದನು. ಆಗ ಅವನಿಗೆ "ಈಗ ಸಮಯವಲ್ಲ ನಡೆ ಹೋಗು" ಎಂದು ಬೆದರಿಸಿ ಕಳಿಸಿದರು. ತಮ್ಮ ಅಂಕಿತಹಾಕಿ ಹಣ ತೆಗೆದುಕೊಂಡಿರುವದರಿಂದ ಅದರ ಬಗೆಗೆ ಬೇರೆ ಯಾವ ಹಾದಿ ಹುಡುಕುವರೋ ಎನುತ್ತ ಅಂಜಿ ನಿಮಗೆ ಈ ಸಂಗತಿಯನ್ನು ನಾವು ತಿಳಿಸಲಿಲ್ಲ. ಇದಾದಮೇಲೆ ಏನಾಯಿತೆಂಬುದನ್ನು ನಾವು ಅರಿಯೆವು." ಎಂದು ಕರಣಿಕರು ನುಡಿಯಲು ವಾದಿಗಳು "ನೃಪತಿಯೇ ಚಿತ್ತಯಿಸಬೇಕು. ಪದ್ಮರಸಮಂತ್ರಿಗಳ ಮನಸ್ಸಿನಲ್ಲಿ ಎಳ್ಳಷ್ಟಾದರೂ ಭೀತಿ ಇರುವುದೇ ? ಹಲವು ಮಾತಂತಿರಲಿ ಒಡೆಯನೆಂದು ನಿಮ್ಮನ್ನು ಒಮ್ಮೆಯಾದರೂ ಲೆಕ್ಕಿಸುವನೇ ? ಸ್ವಾಮಿ ಭೃತ್ಯಸಂಬಂಧವಿದ್ದರೆ ಮಹಾಕೋಶದ ಅರ್ಥವನ್ನು ತೆಗೆದು ಕಾಮುಕನು ಬೇಡಲು ಹೀಗೆ ಕೊಡುವುದೇ ? ಕೊಟ್ಟರೂ ಕೊಡಲಿ ದೊರೆಯೇ, ಬೇರೊಂದು ರೀತಿಯಿಂದ ಕೆರೆಕಟ್ಟಿಸದೆ ಸುಮ್ಮನಿರುವುದೇ ಈ ಅಪಕೀರ್ತಿಯು ಬಳ್ಳಿ ಚತುಃಸಮುದ್ರದವರೆಗೆ ಹಬ್ಬದೇ ?" ಎಂದರು. ಆ ದುರ್ಜನರ ಪುರುಡಿನ ಮಾತನ್ನು ಕೇಳಿ ಕೋಪವೇ ರೂಪಾದಂತೆ ನಾಸಿಕದಲ್ಲಿ ಉತ್ಕಟವಾದ ಉಚ್ಛ್ವಾಸವು ಹೊರಹೊಮ್ಮಲು ಕಡೆಗಂಣು ಕೆಂಪಾಗಿ ಚಲಿಸತೊಡಗಲು ಹುಬ್ಬುಗಂಟಿಕ್ಕಿ ತುಟಿಕಡಿಯುತ್ತ ಹೂಂಕಾರಗೆಯ್ಯುತ್ತ ಮೀಸೆಯನ್ನು ಕುಣಿಸುತ್ತ ಭಕ್ತಾಪರಾಧಕ್ಕೆ ಹೆದರದೆ ನೃಪತಿಯು ಉದ್ರೇಕದಿಂದ ಒಬ್ಬ ಚರನಿಗೆ "ಪದ್ಮರಸರನ್ನು ಬೇಗನೆ ಕರೆದುತಾ" ಎಂದು ಅಪ್ಪಣೆಯನಿತ್ತನು. ಚರನು ಛೋಂಕನೆ ಪದ್ಮರಸರ ಬಾಗಿಲಿಗೆ ಬಂದು ಆ ವಾರ್ತೆಯನ್ನು ಶಿವಸ್ವರೂಪರಾದ ಪದ್ಮರಸರಿಗೆ ನಿವೇದಿಸಲು ಶರಣಜನ ವಿಯೋಗದವ್ಯಥೆಗೆ ಹಂಬಲಿಸಿ "ಹರಹರಾ ವಿಶ್ವನಾಥಾ ! ಈ ತೆರಹದ ಮಣಿಹಕೆ ನಾನು ಸಮರ್ಥನೇ ? ಇದನ್ನು ತೊಲಗಿಸಯ್ಯ ಕರುಣಾಬ್ಧಿಯೇ" ಎಂದು ಪ್ರಾರ್ಥಿಸಿ ಈಶಭಕ್ತರಿಗೆ ನಮಸ್ಕರಿಸಿ ಬೀಳ್ಕೊಂಡು ಮನೆಯಿಂದ ಹೊರಟರು. ರುದ್ರಾವತಾರದ ಪದ್ಮರಸರು ಯಾರನ್ನೂ ಲೆಕ್ಕಿಸದೆ ಭವನ ಭದ್ರಗಜದಂತೆ ಬಂದು ಆಸ್ಥಾನವನ್ನು ಹೊಕ್ಕು ತಮ್ಮ ಆಸನದಲ್ಲಿ ಕುಳಿತುಕೊಂಡರು. ನೃಪತಿಯು ರೌದ್ರಮುಖದಿಂದ "ಎಲೆಲೇ ಪದ್ಮರಸಾ, ನಿನಗೆ ಇನಿತು ಉದ್ರೇಕವೇಕೆ ? ಕಟ್ಟೊಡೆಯನು ನಾನಿರಲು ಕ್ಷುದ್ರವೃತ್ತಿಯಿಂದ ಎನ್ನ ಕೋಶಧನವನ್ನು ಸೂಳೆಗನಿಗೆ ಕೊಡುವ ಪರಿಯೆಂತೋ ? ನೀನು ಈಶ್ವರಭಕ್ತನು ಸುವಿನೀತನು ಉನ್ನತವಿವೇಕಿಯು ಅತ್ಯಮಲಗುಣಿಯು ನನ್ನಿಯುಳ್ಳವನು ಪರರೊಡವೆಗೆ ಅಳುಪದಿರ್ದ ಅತಿಶುದ್ಧನು ಎಂದು ಸರ್ವಸ್ವವನ್ನೂ ನಿನಗೆ ಒಪ್ಪುಗೊಟ್ಟ ಎನಗೆ ಚೆನ್ನಾಗಿ ಕೈತೋರಿಸಿದೆ." ಎಂದು

ನುಡಿದ ಬಲ್ಲಾಳನನ್ನು ಪದ್ಮರಾಜಾಂಕನು ನಿರೀಕ್ಷಿಸಿ ಇದಿರೆದ್ದು ವಾದಿಗಳ ಎದೆಯೊಡೆಯುವಂತೆ ಹೀಗೆ ನುಡಿದನು : "ದುರ್ಜನರ ದುರ್ವಿದಗ್ಧರ ದುರಾತ್ಮರ ಧರ್ಮವರ್ಜಿತರ ಮಾತು ಕೇಳಿ ಇಂತು ದೂಷಿಸಿ ಗಳಿಸಿದ ಪುಣ್ಯವನ್ನು ಕೆಡಿಸಿಕೊಳ್ಳುವರೇ ? ಶರಣರು ಇಂದ್ರಭೋಗಂಗಳನ್ನೂ ತೃಣಕ್ಕೆ ಸಮನೆಣಿಸುವರು. ನಿನ್ನೊಡವೆಗೆ ಅವರು ಎಳಸುವರೇ ? ಷಡ್ಗುಣೈಶ್ವರ್ಯಸಂಪನ್ನನ ಅಣುಗರಾದ ಅವರಿಗೆ ಅದಾವುದು ಹಿರಿದು ! ಶ್ರೀಗಂಧವನ್ನು ಲೇಪಿಸಿಕೊಂಡು ರಂಜಿಸುವ ರಸಿಕನು ಉಳಿದ ಕಿಸುಕುಳಕ್ಕೆ ಆಶಿಸುವನೇ ? ದಿವ್ಯಕಾಂತೆಯೊಡನೆ ರಮಿಸುವವನು ಹಡಿಕೆದೊಳ್ತನ್ನು ರಮಿಸುವನೇ ? ಪರಮಾನ್ನವನ್ನು ಸೇವಿಸುವ ಭೋಗಿ ಕಲಗಂಜಿಗೆ ಮೋಹಿಸುವನೇ ? ಸಿಂಹಶಿಶುವು ನಾಯಮೊಲೆಯುಂಬುದೇ ? ಭೂವರ, ಸಂದೇಹವನ್ನು ಬಿಡು. ಶರಣರು ಅನ್ಯಧನಕ್ಕೆ ಇಚ್ಛಿಸುವರೇ ? ಪೊಡವಿ ಬಾಯ್ಬಿಟ್ಟು ನರರನ್ನು ತಿಂದರೂ ಅಡಕಲಾಗಿರ್ದ ಬ್ರಹ್ಮಾಂಡಗಳು ಒಂದೊಂದಾಗಿ ನಡುನೆತ್ತಿಯ ಮೇಲೆ ಬಿದ್ದರೂ ತಾಯ ಮೊಲೆಯಹಾಲು ವಿಷವಾದರೂ ಮುಡಿದ ಹೂಮಾಲೆ ಘಟಸರ್ಪವಾದರೂ ಕೊನೆಗೆ ಸಸಿ ಮಸಿಯಾದರೂ ಮಲಯಮಾರುತನು ಸುಡುವ ಕಿಚ್ಚಾದರೂ ಧಾತ್ರೀಧವಾ, ಶಿವಭಕ್ತರು ಇತರ ಧನಕೆಳಸುವವರಲ್ಲ. ಹಲವು ಮಾತೇನು, ಮುಳಿದರೆ ಬ್ರಹ್ಮನನ್ನೂ ಸಹ ತೃಣಕ್ಕಿಂತ ಕೀಳುಮಾಡುವರು. ಒಲಿದೊಡೆ ಆ ತೃಣವನ್ನೂ ಬ್ರಹ್ಮಂಗೆ ಅಧಿಕವೆನಿಸುವರು. ಅದೆಂತೆಂದೊಡೆ : ನಮ್ಮ ದುರ್ವಾಸಮುನಿಯು ವಿಷ್ಣುವಿಗೆ ಮುಳಿದು ಅವನ ಸಿರಿಯನ್ನು ಸಮುದ್ರದಲ್ಲಿ ಬಿಸುಡಲಿಲ್ಲವೇ? ಉಪಮನ್ಯುವು ಶಿವನನೊಲಿಸಿ ಪಡೆದ ಅಮೃತಾಬ್ಧಿಯನ್ನು ಹರಿಗೆ ಕರುಣಿಸಿ ಕೊಡಲಿಲ್ಲವೇ ? ಶಿವೈಕ್ಯರ್ಗೆ ಇದು ಹಿರಿದೇ ? ಕಾಮಧೇನು ಕಲ್ಪವೃಕ್ಷ ಮೊದಲಾದ ನವನಿಧಿಗಳು ಮೇರು ಪರುಷ ಚಿಂತಾಮಣಿಗಳು ಮಾಹೇಶ್ವರರ ಕಣ್ಸನ್ನೆಯಿಂದೊಗೆವುವು ಹಾಗು ಅಳಿವವು ಎಂದೆನಲು ಆ ಮಹಿಮರ ಪಾದ ಸೇವಕನಾದ ನಾನು ನಿನ್ನ ವಿತ್ತದೊಳಗೆ ಇನಿತನಾದರೂ ಮುಟ್ಟುವೆನೇ ? ಅದನ್ನು ಮುಟ್ಟಿದೊಡೆ ಶಿವಭಕ್ತರು ಒಲಿವರೇ ? ಅವರ ವಿತ್ತವನ್ನು ಅವರಿಗೊಪ್ಪಿಸಿದೆನು." ಎಂದು ನುಡಿದ ಪದ್ಮರಸರ ದೃಢೋಕ್ತಿಯನ್ನು ಭೂಪಾಲನು ಆಲಿಸುತ್ತ "ಅಹುದಹುದು ಇಂತಹ ಪಾಪಭೀತರು ಸತ್ಯರು ಸಮರ್ಥರು ಈ ಧರೆಯೊಳು ಉಂಟೇ? ನೀವು ಬೀಳುಗಳೆವವರೇ ಕಾಪುರುಷರು, ಅವರ ನುಡಿ ಸತ್ಯವೇ ? ನಿನ್ನ ಸಲ್ಲಾಪವೇ ಸತ್ಯವಾದುದು. ಹಾಗಾದರೆ ನಮ್ಮ ಕೆರೆ ಹೇಗೆ ಇರುವದು ಹೇಳು" ಎಂದು ಅಣಕವಾತಿನಿಂದ ಬೆಸಗೊಂಡನು. ಅರಿಮರುಳರಾದ ವಾದಿಗಳು ನಡುವೆ ಬಾಯಿಹಾಕಿ ಹೀಗೆಂದರು : "ಎಲೆ ಭೂಪ ಕೆರೆಯಮಾತೇನು ? ಗದ್ದೆಗಳು ಬೆಳೆಯಂಕುರಿಸಿ ಮಿರುಗುತ್ತಿವೆ. ತೋಟಗಳಲ್ಲಿ ಅನೇಕ ವೃಕ್ಷಗಳೆಸೆಯುತ್ತಿವೆ. ಮುಚ್ಚು

ಮರೆಯೇಕೆ ಆ ವೈಭವವನ್ನು ನೋಡಲು ನೀವು ತಪ್ಪದೆ ಆಗಮಿಸಬೇಕು." ಎಂಬ ಕುರಿವಾನಿಸರ ಕುಯುಕ್ತಿಗೆ ನಸುನಗುತ್ತ ಧೀರರೆರೆಯರಾದ ಪದ್ಮರಸರು ಮತ್ತಿಂತೆಂದರು : "ಮೂದಲಿಸಿದಾಕ್ಷಣವೇ ತೋರದಿರುವುದು ಶಿವಭಕ್ತರ ಪದ್ಧತಿಯೇ ? ಹುಸಿದರೆ ಮಹದೇವನ ಅಣುಗರು ಎನ್ನನ್ನು ತಮ್ಮ ಡಿಂಗರಿಗನೆಂಬರೇ ? ಶಂಕಿಸಿದರೆ ದೊರೆಯೇ ಗುರುಕುಲಜವೆನಿಪೆನೇ ? ಏಳೇಳು ಕೆರೆಯನ್ನು ನೋಡಲು" ಎಂದು ಉರವಣಿಸಿ ನುಡಿದರು. ಅಂತುಸುರಿದ ಪದ್ಮರಸರ ನಿಶ್ಚಲೋಕ್ತಿಯನ್ನು ಕೇಳಿ ಮಹೀಕಾಂತನು ಅಜ್ಞಾನದಿಂದ ದುರ್ಜನರ ಕುತಂತ್ರಕ್ಕೊಳಗಾಗಿ ಯುಕ್ತಿಗೆಟ್ಟು ಧಾರೆಧಾರೆಯಾಗಿ ಸುರಿಯುವ ಮಳೆಯ ಹನಿಗಳನ್ನು ಎಣಿಸುವೆನೆಂಬ ಅಜ್ಞನಂತೆ ಇದನ್ನು ಪರೀಕ್ಷಿಸುವೆನೆಂದು ಎದ್ದನು. ಅಕಟ ದುರ್ಬೋಧನೆಯು ಏನು ಮಾಡಲು ಅಸಮರ್ಥವಾಗುವುದು !

ಪ್ರಯಾಣಭೇರಿಯನ್ನು ಹೊಡಿಸಿ ಭೂಪನು ಎಸೆವ ಬಲದಿಂದೊಡಗೂಡಿ ಕುದುರೆಯನ್ನೇರಿ ನಡೆದನು. ಪದ್ಮಣಾಮಾತ್ಯರೂ ಜಾತ್ಯಶ್ವವನ್ನೇರಿ ಬಲ್ಲಾಳ ರಾಜನ ಸಮೀಪದಲ್ಲಿಯೇ ಶಿವವಿಕ್ರಮಾಡಂಬರದಲ್ಲಿ ಯಾರನ್ನೂ ಗಣಿಸದೆ ಬರುತ್ತಿದ್ದರು. ಶಿವಭಕ್ತರು ಈ ವಾರ್ತೆಗೇಳಿ ಅಖಿಲನಿಷ್ಠಾಹೃದಯರಾಗಿ ಕೃತಕೃತ್ಯತೆಯಿಂದ ಒಡನೆಯೇ ಪದ್ಮರಸನೊಡನೆ ನಡೆದರು. ಸಮಯಪಕ್ಷವಿನಿತಿಲ್ಲದವರು ಶಿವಭಕ್ತರೇ ? ದಂಡನಾಯಕರು ಮಂಡಲಾಧಿಪರು ಸಚಿವರು ಮುಕುಟವರ್ಧನರು ರಾಜಪುತ್ರರು ರಾವುತರು ನಿಯೋಗಿಗಳು ಕವಿ ಗಮಕಿ ವಾದಿ ವಾಗ್ಮಿಗಳು ರಸಿಕರು ಭರತಶಾಸ್ತ್ರಕೋವಿದರು ಷಡ್ದರ್ಶನಸ್ಥರು ಕಲಾವಿದರು ಇವರೇ ಮೊದಲಾದ ಇಪ್ಪತ್ತೆರಡು ನಿಯೋಗದವರ ಕುಲವು ನೃಪನೊಡನೆ ನಡೆದುದು. ಕಾಲಗಿರಿಗಳಂತಹ ಕರಿಘಟೆಗಳು ಸಂವರ್ತಾಂಭುದಿಯ ತೆರೆಗಳಂತಹ ಕುದುರೆಗಳು ನೀರ್ವಟ್ಟೆಯಲ್ಲಿ ಚಲಿಸುವ ಹಡಗುಗಳಂತಹ ತೇರುಗಳು ಕಾಲಭೈರವನ ಬಹುರೂಪದಂತಿದ್ದ ಕಾಲಾಳುಗಳು ಹೀಗೆ ಚತುರಂಗಬಲವು ನೃಪನೊಡನೆ ನಡೆಯಿತು. ಬಲ್ಲಾಳರಾಯನು ಹೀಗೆ ಪರಮವೈಭವದೊಡನೆ ಬೇಲೂರಿಗೆ ನಡೆದಿರಲು ಪರಿಜನರು ಪುರಜನರು ಮಹೀಶ್ವರನನ್ನೂ ಕುಜನರನ್ನೂ ಪದ್ಮರಸರನ್ನೂ ನೋಡುತ್ತ ಒಬ್ಬೊಬ್ಬರು ಅನುಮಾನಿಸಿ ಶಿವಶಿವಾ, ಕರುಣಾಳು ಪದ್ಮಣಾಂಕರಿಗೆ ಏನು ಅಪಾಯವಾಗುವದೋ ಎಂಬ ನಿರೋಧದಿಂದ ಕೆಲವರು ಮರುಗುವರು. ಆತನು ನಿತ್ಯ ಭಜಿಸುವ ಇಷ್ಟದೈವವಿಲ್ಲವೇ ಎಂಬರು ಕೆಲವರು. ತನ್ನ ಚೇತೋನಿಷ್ಠೆಯನ್ನು ತಾನರಿಯದೆ ಪ್ರಬಲಸೈನ್ಯದಿಂದೊಡಗೂಡಿದ ಈ ನೃಪತಿಯನ್ನು ಕರೆತರುವನೇ ? ಎಂದೆನ್ನುವರು ಕೆಲವರು. ಇಂದಿವನ ಮೇಲೆ ಚಾಡಿಹೇಳಿದವರು ನಿಜವಾಗಿಯೂ

ಬನ್ನಬಡುವರು, ಇದು ಸತ್ಯ. ಕುಷ್ಠರೋಗಿಯಾದ ಆ ಜಂಗಮನನ್ನು ವಿಮಲಾಂಗನನ್ನಾಗಿ ಮಾಡಿ, ಸೆಣಸಿದ ಆ ಭೂಸುರರಿಗೆ ಆ ರೋಗವನ್ನಿತ್ತು ಕೂಡಲೆ ಪಶ್ಚಾತ್ತಾಪದಿಂದ ಅವರು ಕಾಲ್ಗೆರಗಲು ಪುನಃ ಅವರನ್ನು ಉದ್ಧರಿಸಿದುದನ್ನು ಆಗ ಕಂಡೆವು. ಈಗ ಕೆರೆ ನಿರ್ಮಿಸುವುದು ಅವರಿಗೆ ಅರಿದಲ್ಲವೆಂದು ಕೆಲವರು ಅನ್ನುವರು. ಈ ಚಾಡಿಖೋರರು ಏನುಹೇಳಿದರೂ ಕೇಳುವ ನಮ್ಮ ಭೂಪನು ಎಷ್ಟು ಅಜ್ಞನು ? ಹಿಂದೆ ಪದ್ಮರಸರನ್ನು ಪರೀಕ್ಷಿಸಿ ಅವರ ಸಾಮರ್ಥ್ಯವನ್ನು ಆತನು ಅರಿಯನೇ ಎನ್ನುವರು ಕೆಲವರು. ದಾರಿಯಲ್ಲಿ ಹೀಗೆ ಮಾತನಾಡುತ್ತ ಬರುವಷ್ಟರಲ್ಲಿ ಬಲ್ಲಾಳಭೂಮಿಪನು ಸಮಸ್ತಸೇನಾಪರಿವೃತನಾಗಿ ಬಿಟ್ಟಿರಾಯನೆಂಬ ಮಗನೊಡನೆ ಬೇಲೂರ ಸಮೀಪಕ್ಕೆ ಬಂದನು. ಆತನು ತನ್ನ ಬಲಗಡೆಗೆ ಬರುತ್ತಿರುವ ಪದ್ಮರಸರನ್ನು ನಿರೀಕ್ಷಿಸಿ "ಕೆರೆ ಎಲ್ಲಿಹುದು ?" ಎಂದು ಕೇಳಲು ಆ ಕೆರೆಯನ್ನು ನಿರ್ಮಿಸಬೇಕೆಂದಿದ್ದ ಸ್ಥಳಕ್ಕೆ ಆತನನ್ನು ಕರೆದುಕೊಂಡು ಹೋಗಿ ಇಲ್ಲಿ ಕೆರೆ ತೋರಿಸುವೆನೆಂದು ಓಂ ನಮೋ ವಿಶ್ವನಾಥಾಯ ಎನ್ನುತ್ತ ನಿಶ್ಚಲಾತ್ಮರಾದ ಪದ್ಮರಸರು ಕುದುರೆಯಿಂದ ಇಳಿಯಲು ಎಲ್ಲರೂ ತಂತಮ್ಮ ವಾಹನಗಳನ್ನಿಳಿದರು. ನೃಪಪ್ರಮುಖರು ನಮಗಿನ್ನು ಪಶ್ಚಿಮಮುಖ (ಇಳಿಗಾಲ) ವೆಂದು ತೋರಿಸುವಂತೆ ಅಲ್ಲಿ ಪಶ್ಚಿಮಮುಖವಾಗಿ ನಿಂತುಕೊಂಡರು. ನಾನಿನ್ನು ಅರ್ಧಬಲನಾದೆ ಎಲೇ ಕೃಪಾವಾರ್ಧಿಯೇ ನೋಡೆಂದು ಪದ್ಮರಸರಿಗೆ ತೋರಿಸುವಂತೆ ನರಪತಿಯು ತನ್ನ ಸೈನ್ಯವನ್ನು ಅರ್ಧವರ್ತುಳಾಕಾರದಲ್ಲಿ ನಿಲಿಸಿದನು. ಶಿವಸಮಯವಿನ್ನು ಉತ್ತರೋತ್ತರವಾಗಿ ಬೆಳೆವುದು ಎಂಬುದನ್ನು ವಾದಿಗಳಿಗೆ ಸೂಚಿಸುವಂತೆ ಪದ್ಮರಸರು ಶರಣಸಭೆಯನ್ನು ಉತ್ತರಾಭಿಮುಖವಾಗಿ ನಿಲ್ಲಿಸಿದರು. ಉಭಯ ಸಭೆಯ ಮಧ್ಯದಲ್ಲಿ ಶಿವಾದ್ವೈತವನ್ನು ಪ್ರತಿಷ್ಠಾಪಿಸಲು ಬದ್ಧಕಂಕಣರಾದವರೂ ಶಿವಕಥಾ ಮೃತರಸಾಯನಪೂರ್ಣಕುಂಡವೈಭವಕರ್ಣರೂ ಉಭಯಲಿಂಗವಿಧಾನವೀಕ್ಷಣೋತ್ಸವವಿಶಾಲಾಕ್ಷರೂ ಭೂತಿ ತ್ರಿಪುಂಡ್ರ ರುದ್ರಾಕ್ಷಮಾಲಾಮಂಡಿತರೂ ಆದ ಪದ್ಮರಸರು ನಿಂತುಕೊಂಡು ನೆರೆದ ಸಭೆಯನ್ನುದ್ದೇಶಿಸಿ ಎನ್ನ ಭಾಷೆಗಳನ್ನು ಕೇಳಬೇಕು ಎಂದು ಹೀಗೆ ನುಡಿದರು. "ಇಲ್ಲಿ ಉತ್ತಮ ಕೆರೆ ನಿರ್ಮಾಣವಾಗದಿದ್ದರೆ" ಅದಕ್ಕೆ ಉತ್ತಾನ ಸೋಪಾನಗಳು ಅಲ್ಲಲ್ಲಿಗೆ ಏರ್ಪಡದಿದ್ದರೆ, ಗದ್ದೆಯ ಮಡಿಗಳು ನೋಡುವರ ಕಣ್ಗೆ ಬೆಡಗನೀಯದಿದ್ದರೆ, ಅಲ್ಲಿಯ ಸಸಿಗಳು ಒಂದಿನಿತು ಕೊಂಕನಾಂತಿದ್ದರೆ, ತೋಟಗಳು ಅತಿಸಮೃದ್ಧವಾಗಿ ಶೋಭಿಸದಿದ್ದರೆ, ಮೊದಲು ಕೆರೆಗಾಗಿ ತೆಗೆದಿಟ್ಟ ಹಣವು ಇಲ್ಲಿ ನಡೆದ ಕೆಲಸಕ್ಕೆ ಎಷ್ಟುಮಾತ್ರಕ್ಕೂ ಸಾಲಲಾರದು ಎಂದು ನೀವೆಲ್ಲರೂ ಹೊಗಳುವಂತಾಗದಿದ್ದರೆ ಮಹಾದೇವನೊಬ್ಬನೇ ದೇವನೆಂದೆನಬಹುದೇ ಹರಶರಣರೇ ಕುಲಜರೆಂದೆನಬಹುದೇ ? ನಾನು 'ಮಹೇಶ್ವರಭಕ್ತನೆಂದು ನುಡಿಯ

ಬಹುದೇ? ಶಿವಾರ್ಚಕರಿಗೆ ಪರಧನ ಪರವಸ್ತು ಅಭಕ್ಷವೆಂದೆನಬಹುದೇ? ಹೆಚ್ಚು ಹೇಳುವದೇನು, ನೀವೆಂದ ದೂಷಣಕ್ಕೆಲ್ಲ ನಾನು ಯೋಗ್ಯನಾಗುವೆನು" ಎಂಬ ಈ ಪ್ರತಿಜ್ಞೆಯನ್ನು ಕೈಗಳನ್ನು ಮೇಲಕ್ಕೆತ್ತಿ ದೊಡ್ಡ ಧ್ವನಿಯಿಂದ ಘೋಷಿಸಿ ಹಸನ್ಮುಖಿಯಾಗಿ ಗಂಗಾಧರನ ಶರಣರಿಗೆ ಸಾಷ್ಟಾಂಗಪ್ರಣಾಮವನೆಸಗಿ ಪ್ರದಕ್ಷಿಣೆ ಹಾಕಿದನು. ಅವರು ಶುಭಾಶೀರ್ವಾದ ಪೂರ್ವಕವಾಗಿ ಕೊಟ್ಟ ವಿಭೂತಿಯನ್ನು ಕೈಯಲ್ಲಿ ತೆಗೆದುಕೊಂಡು ನಿಂತು ಗುರುವಿಶ್ವನಾಥನನ್ನು ಅನನ್ಯಭಕ್ತಿಭಾವದಿಂದ ಸ್ತುತಿಸಿದನು. ತನ್ನ ಎಡಗೈಯೊಳಿಟ್ಟ ವಿಭೂತಿಯನ್ನು ಬಲಗೈ ಅಂಗುಷ್ಠ ಹಾಗೂ ತರ್ಜನಿ ಬೆರಳುಗಳಿಂದ ಹಿಡಿದು ಪಂಚಾಕ್ಷರಿ ಮಂತ್ರವನ್ನು ಜಪಿಸುತ್ತ ಉತ್ತರಾಭಿಮುಖವಾಗಿ ನಡೆದು ಕೆರೆಯಾಕಾರ (ಕೆರೆಯ ಸುತ್ತಲೂ ಬರುವ ಒಡ್ಡಿನಾಕಾರ) ದಲ್ಲಿ ಒಂದು ರೇಖೆಯನ್ನು (ಭಸ್ಮದಿಂದ) ರಚಿಸಿದನು. ಆ ರೇಖೆಯು ಈ ಭಾಗವು (ಭೂತಿ ರೇಖೆಯಿಂದ ಸುತ್ತಲ್ಪಟ್ಟ ಭಾಗವು) ಕಾಶಿಗೆಣೆಯೆನಿಸುವುದು, ಎಂದು ಇಳೆಗೆ ಸಾರುವ ಸೀಮಾರೇಖೆಯಂತೆ ರಂಜಿಸಿತು. ಭೂ ಯುವತಿಯನ್ನು ಅನುಗ್ರಹಿಸಲೆಂದು ಆಕೆಯ ಹಣೆಗಿಡುವ ಭಸ್ಮರೇಖೆಯಂತೆ ಬೆಳಗಿತು. ವೇಗವಾಗಿ ಗಂಗೆಯು ಬರುವಾಗ ಇಲ್ಲಿ ಕಟ್ಟಿಲ್ಲದಿದ್ದರೆ ಭುವನ ಪ್ರಳಯವಾಗುವುದೆಂದು ಬಗೆದು ಅವಳಿಗೆ ಅಷ್ಟರಲ್ಲಿಯೇ ವಿಹರಿಸೆಂದು ಕಲ್ಪಿಸುವ ನಿಯಮದ ರೇಖೆಯ ಪಾಂಗನ್ನು ಪಡೆಯಿತು. ಆ ರೇಖೆಯನ್ನು ರಚಿಸುವಷ್ಟರಲ್ಲಿ ವಿಶ್ವಪತಿಯಾಜ್ಞೆಯಿಂದ ಭೂಮಿಯೊಳಗೆ ಅಂತರ್ಮಾರ್ಗವಾಗಿ ಗಂಗೆಯು ಹರಿಯುತ್ತ ಆ ಸ್ಥಳದ ಹತ್ತಿರ ಬಂದು ಎಲೆ ಶರಣ ಬಂದೆ ಬಂದೆ ಎಂದುಲಿವಂತೆ ಘುಳುಘುಳಿಸುತ್ತ ಪುಟಿಯಹತ್ತಿದಳು. ಆ ಸ್ಥಳದಲ್ಲಿ ಅಲ್ಲಲ್ಲಿಗೆ (ಹಲವು ಕಡೆಗೆ) ಜಲವುಕ್ಕಿ ಗಂಗಾದೇವಿ ಹಲವು ಮುಖವಾಂತು ಪದ್ಮರಸರನ್ನು ಈಕ್ಷಿಸಲೆಂದು ತಲೆದೋರಿದಂತಾಯಿತು. ಜಲವುಕ್ಕಿ ಭೂದೇವಿಯು ಮುಡಿದ ಬೆಳ್ದಾವರೆಯ ಪುಷ್ಪಪರಿಕರವೋ ಎಂಬಂತೆ ಸೊಗಸುದೋರಿತು. ಅದೋ ಉಬ್ಬುತ್ತಿದೆ, ಒಡೆಯುತ್ತಿದೆ, ಹೊಳೆಯುತ್ತಿದೆ, ಸುಳಿಯುತ್ತಿದೆ, ಸೂಸುತ್ತಿದೆ, ಹಬ್ಬುತ್ತಿದೆ, ಹರಿಯುತ್ತಿದೆ ಎಂದು ನೆರೆದ ಸಭೆ ಭೀತಿಯಾವರಿಸಿ ಗಡಬಡಿಸುತ್ತ ಉಲಿಯತೊಡಗಿತು. ಶರಣಸಂಕುಲವು ಆನಂದದಿಂದ ಮೈಯುಬ್ಬಿ ಕೈಯೆತ್ತಿ ಹರಹರ ಮಹಾದೇವ ಪುರಹರ ದುರಿತಾರಿ, ಕಾಮಾರಿ ಕಾಲಾರಿ ಎಂದು ಪರಮಾತ್ಮನ ಬಿರುದುಗಳನ್ನೆತ್ತಿ ಉತ್ಕಟವಾದ ಸ್ವರದಿಂದ ಜಯಘೋಷಮಾಡುತ್ತಿರಲು ಪಾತ್ರವೆಲ್ಲ ಪೂರ್ಣತುಂಬಿತು. ಅಷ್ಟರಲ್ಲಿ ಗುರುಕುಲಾಗ್ರಣಿಯೊಡನೆ ಈ ನರಕಿಗಳು ಸೆಣಸುವರೆಂದು ಕೋಪದಿಂದೆ ಪಲ್ಮೊರೆದು ಹೂಂಕರಿಸಿ ಭೂಕಾಂತೆ ಜಡಿದುರ್ಘುಂಕಿಸುತ್ತ ಘುಡುಘುಡು ಧ್ವನಿಗೈಯುತ್ತ ಕಲ್ಪಾಂತಕಾಲದ ಸಿಡಿಲಗರ್ಜನೆಯನ್ನು ತಾಳ್ದು ಆರ್ಭಟಿಸುತ್ತ ಏರಿ

ಬಂದಳೆಂಬಂತೆ ಸೀಮಾರೇಖೆಗುಂಟ ಬಂಧುರವಾದ ಏರಿನಿರ್ಮಾಣವಾಯಿತು. ಅದರ ಘರ್ಜನೆಗೆ ಹಮ್ಮೈಸಿ ಹವ್ವನೆ ಹಾರಿ ಜನರೆಲ್ಲ ಮೂರ್ಛೆವೋದರು. ನರಪತಿ ಮೊದಲಾದ ಅಖಿಲರು ಹೀಗೆ ಮೂರ್ಛಿತರಾಗಿ ಬಿದ್ದಿರಲು ಅತ್ತ ಶಿವಭಕ್ತರು ಸಂತೋಷದಿಂದ ಗುರುತಿಲಕನನ್ನು ಕೊಂಡಾಡುತ್ತ ತೂಗುತ್ತ ತೊನೆಯುತ್ತ ಬಾಗುತ್ತ ;ಬಳುಕುತ್ತ ನಲಿವುತ್ತ ಮಲೆವುತ್ತ ಕೆಲೆವುತ್ತ ಉಬ್ಬಿ ಬೊಬ್ಬೆಯನ್ನಿಟ್ಟರು. ಮಾಹೇಶ್ವರರು ಅತ್ಯಂತ ಸಂತೋಷದಿಂದ ಅನೇಕ ಪ್ರಕಾರದ ನಾಟಕಗಳನ್ನಾಡಿದರು. ಕೆಲವರು ಶರಭೇಶ್ವರನು ನರಸಿಂಹನನ್ನು ಮರ್ದನಮಾಡಿದ ಲೀಲೆಯನ್ನು ಮತ್ತೆ ಕೆಲವರು ಶಿವನು ಅಂಧಕಾಸುರನೊಳಾಡಿದ ಆಟವನ್ನು ಬೇರೆ ಕೆಲವರು ಶಿವನು ಗಜಾಸುರನನ್ನು ಸಂಹರಿಸಿ ಆತನ ಚರ್ಮಧಾರಣ ಮಾಡಿದ ಹದನವನ್ನು ಆಡಿ ತೋರಿಸಿದರು. ದಕ್ಷಾಧ್ವರಧ್ವಂಸ, ಜಲಂಧರವಧೆ, ತ್ರಿಪುರಸಂಹಾರ, ಭಿಕ್ಷಾಟನ, ಶಿವತಾಂಡವ ಹೀಗೆ ಅನೇಕತರದ ಲೀಲೆಗಳನ್ನು ರಚಿಸಿ ತೋರಿಸುತ್ತ ಕುಕಿಲಿರಿದು ಕುಣಿದಾಡಿ ಮೂಡಿ ಮುಳುಗಾಡುತ್ತಿದ್ದರು.

ಮೂರ್ಛಿತರಾಗಿ ಬಿದ್ದಿದ್ದ ನೃಪಾದ್ಯರನ್ನು ಕಂಡು ನಗುತ್ತ ಪದ್ಮರಸಗುರುವನ್ನು ನಿರೀಕ್ಷಿಸುತ್ತ "ಜಯಕುಜನಭಂಗ ಜಯ ಶರಣಸಂಗ ಜಯಮಂಗಲಾಂಗ ಜಯ ದಯಾಪಾಂಗ ಜಯ ಭಕ್ತಿಪಕ್ಷ ಜಯ ಗಣಾಧ್ಯಕ್ಷ ಜಯವಿನತಕಲ್ಪವೃಕ್ಷ ಭಕ್ತಿತ್ರಯವಿಹಾರ ನಿಜಲಿಂಗಶೃಂಗಾರ ನಿರ್ಧೂತಸಂಸಾರ ಸಕಲಜನೋಪಕಾರ ಶಿವಮಾರ್ಗವಿಸ್ತಾರ ಪದ್ಮರಸಗುರುವೇ ಕರ್ಮಹೇತುಗಳಾದ ಈ ನರರಿಗೆ ದಯೆದೋರಬೇಕು" ಎಂದು ಮಾಹೇಶ್ವರರು ಪ್ರಾರ್ಥಿಸಲು ಪದ್ಮರಸರು ನೃಪಾದಿಗಳ ನೀಕ್ಷಿಸಿ ಕೆರೆಯ ನೀರನ್ನು ತರಿಸಿ ಗಂಗಾಜೀವನವೇ ಕರುಣದಿಂದ ಇವರಿಗೆ ಜೀವನವನ್ನೀಸಗು ಎಂದು ಅವರ ಮೇಲೆ ಆ ನೀರನ್ನು ತಳಿದರು. ಗಾಢನಿದ್ರೆಯಲ್ಲಿ ಮಲಗಿದವರನ್ನು ಒಮ್ಮೆಲೆ ಎಬ್ಬಿಸಿದರೆ ಅವರು ಬೆಚ್ಚಿ ಬೆದರಿ ಏಳುವಂತೆ ಅವರೆಲ್ಲರೂ ಗಾಬರಿಯಿಂದ ಮೇಲಕ್ಕೆದ್ದರು. ಭೂದೇವಿಯ ಆನಂದಾಶ್ರುಪೂರ್ಣಲೋಚನದಂತೆ ನೀರ್ದುಂಬಿ ಮೆರೆವ ಕೆರೆಯನ್ನೂ ಗುರುರಾಜನನ್ನೂ ನೋಡಿ ನಾಚಿ ತಲೆ ಕೆಳಗೆಮಾಡಿ ತಮಗಾದ ಅಪಮಾನವನ್ನು ಧರೆಗೆ ಬರೆದುತೋರಿಸುವಂತೆ ಪಾದಾಂಗುಷ್ಠದಿಂದ ನೆಲವನ್ನು ಗೀರುತ್ತ ಭೂಪಾದಿಗಳು ಬಾಯಳಿದಿದ್ದರು. "ಜನಪಾದಿಗಳಿರಾ, ಕೆರೆಯಾಯಿತೇ ? ಇನ್ನು ಅದರ ತುಂಬು, ತೊಟ್ಟೆ, ಗದ್ದೆ, ತೋಟ ಇವನ್ನು ನೋಡಬೇಕು ಬನ್ನಿರಿ" ಎನ್ನುತ್ತ ಅವರೊಡನೆ ಹೊರಟು ಅಲ್ಲಲ್ಲಿಗೆ ಶಿವಮಂತ್ರವನ್ನು ಜಪಿಸುತ್ತ ದೇಶಿಕಚಕ್ರವರ್ತಿ ಪದ್ಮರಸರು ಸಂಕಲ್ಪಿಸುತ್ತ ಭಸಿತವನ್ನು ತಳಿಯಲು ಅಷ್ಟರಲ್ಲಿಯೇ ಅವೆಲ್ಲ ಶೋಭಾಯಮಾನವಾಗಿ ಕಂಗೊಳಿಸಿದುವು.

ತುಂಬು, ಕೈಲಾಸದ ಮಹಾದ್ವಾರವೋ ಗಂಗಾಪ್ರವೇಶಕ್ಕೆ ಭೂದೇವಿಯು ಪಳುಕಿನಿಂದ ನಿರ್ಮಿಸಿದ ತೋರಣವೋ, ಪುಣ್ಯಸ್ನಾನಕ್ಕೆ ಇಳಿಯಲೆಂದು ಖೇಚರರು ಇಟ್ಟ ನಿಚ್ಚಣಿಕೆಯೋ ಜಲದೇವತೆಯರು ಆಡಲೆಂದು ನಿಲಿಸಿದ ಉಯ್ಯಾಲೆಯ ಕಂಬವೋ ಎಂಬಂತೆ ಕಂಗೊಳಿಸಿತು. ಶಿವನು ಚಂದ್ರಕಾಂತಕರಂಡದಲ್ಲಿ ಸಿದ್ಧರಸವನ್ನು ತುಂಬಿ ಭೂದೇವಿಯ ಕರದಲ್ಲಿಟ್ಟು ಆಚಾರ್ಯತಿಲಕನಿಗೆ ಕಳಿಸಿದಂತೆ ತೊಟ್ಟಿಗಳು ಕಣ್ಗೆಸೆದುವು. ಆದಿಪುರುಷಪದ್ಮರಸರ ಕೃಪಾಪಾಂಗದ ಸೋಂಕಿನಿಂದ ಭೂದೇವಿಯ ಸಾತ್ವಿಕತನುವಿನಲ್ಲಿ ಬೆವರ್ವನಿಗಳು ಹೊರಹೊಮ್ಮಿ ರೋಮಾಂಚನವೆದ್ದು ರಾರಾಜಿಸುವವೋ ಎನ್ನುವಂತೆ ನೀರ್ವರಸಿದ ಅಗಿಗಳುಳ್ಳ ಗದ್ದೆಗಳು ಒಪ್ಪಿದುವು. ಆ ದೇಶಿಕನ ಕೃಪಾರಸದ ಹೊನಲು ಹರಿಯುವಂತೆ ಆ ಗದ್ದೆಗಳ ನೆರೆಯಲ್ಲಿ ಕಾಲುವೆಗಳು ತುಂಬಿ ಹರಿಯುತ್ತಿದ್ದುವು.ದೇಶಿಕಕುಲೋತ್ತಮನ ಸಂಭ್ರಮಕ್ಕೆ ವನಲಕ್ಷ್ಮಿ ಮೆಚ್ಚಿ ಕರವೆತ್ತಿದಳೋ, ಮಹೇಶನೇ ದೈವ ಆತನ ಭಕ್ತರೇ ಕುಲಜರು ಅವರಿಗೆ ಸರಿಯಿಲ್ಲೆಂದು ಭೂದೇವಿ ಹಲವು ಕೈಗಳನ್ನು ಉರ್ಧ್ವಕ್ಕೆ ಮೇಲೆತ್ತಿರುವಳೋ ಎಂಬಂತೆ ಅಡಕೆ, ತೆಂಗು ಮೊದಲಾದ ವೃಕ್ಷಗಳ ಸಸಿಗಳಿಂದ ತೋಟಗಳು ಮಾಟವಾಗಿದ್ದುವು. ಎನ್ನ ನೀರೊಂದನ್ನು ಬಿಟ್ಟು ಉಳಿದ ಜಲವೆಲ್ಲ ವಿಷವೆಂದು ಬಾಯ್ದೆರೆಯುತ್ತ ಉಲಿವುತ್ತ ತೆರೆಗೈಯನೆತ್ತಿ ತಡೆವೊಯ್ಲಿನಿಂದ ಡಂಗುರವನ್ನು ಸಾರುತ್ತ, ತುಂತುರಹನಿಗಳಿಂದ ಕುಣಿಯುತ್ತ ಉತ್ಕರಪೇನದಿಂದ ನಗುತ್ತ ಬೊಬ್ಬುಳಿಕೆಯಿಂದ ಉಬ್ಬುತ್ತ ಆ ಕೆರೆ ಅದೆಂತು ಮೆರೆಯಿತೋ ! ಇಂತು ಶೋಭಿಸುವ ಕೆರೆ, ಗದ್ದೆ, ತೋಟ ಮೊದಲಾದವುಗಳ ಅನಂತವಿಭವವನ್ನು ನೋಡಿ ನಲಿದು ಶಿವಶರಣರು ಆನಂದತುಂದಿಲರಾಗಿ ಬಂದು ಗುರುಪದ್ಮರಸರನ್ನು ಅಮರ್ದಪ್ಪಿ ಮುಂಡಾಡಿ ಕೊಂಡಾಡಿದರು. "ಚೊಕ್ಕನಾಯ್ನಾರು ಹನ್ನೆರಡುಸಾವಿರ ನರಿಗಳನ್ನು ಹಿಡತರಿಸಿ ಅವನ್ನು ಕುದುರೆಗಳನ್ನು ಮಾಡಿ ಪಾಂಡ್ಯನೃಪನಿಗೆ ಕೊಟ್ಟರು. ಇಳೆಹಾಳ ಬೊಮ್ಮಿದೇವರು ಬೀಜದ ಕಡಲೆ ಗೋದಿಗಳನ್ನು ಜಂಗಮರಿಗೆ ಕೊಟ್ಟು ಬಿತ್ತದೆ ಬೆಳೆದರು. ಕುರಿಯ ನೆವದಿಂದಾದ ವಾದಕ್ಕೆ ಕಿನ್ನರಿಬ್ರಹ್ಮಯ್ಯನು ತ್ರಿಪುರಾಂತಕನನ್ನು ನುಡಿಸಿ ಬಿಜ್ಜಳ ಮೊದಲಾದವರಿಗೆ ಪ್ರಾಣವಿತ್ತನು. ಇವೆಲ್ಲ ಕಥೆಗಳನ್ನು ಕೇಳಿ ತಿಳಿದಿದ್ದೆವು. ಇಂದು ನಮ್ಮ ಪದ್ಮಣಾರ್ಯರು ಬಟ್ಟಬಯಲೊಳಗೆ ಕೆರೆ ನಿರ್ಮಿಸಿ ತೋಟ ಗದ್ದೆ ಮೊದಲಾದವುಗಳನ್ನುಂಟುಮಾಡಿ ಮೂರ್ಛೆವೋದ ನೃಪ ಮೊದಲಾದವರಿಗೆ ಪ್ರಾಣವಿತ್ತುದನ್ನು ಪ್ರತ್ಯಕ್ಷ ಕಂಡೆವು." ಎಂದು ಆ ಭಕ್ತವೃಂದವು ನುಡಿಯಿತು. "ಶಿವಸಮಯಪ್ರತಿಷ್ಠಾಪನಾಚಾರ್ಯ ಖಂಡಿತಸಬಲಬಲ್ಲಾಳನೃಪಕಾರ್ಯ ಭಲರೇ ಪದ್ಮರಸಗುರುವೇ, ಭಕ್ತಿಯ ಕರುವೇ" ಎಂದು ಆ ಭಕ್ತರು ಸ್ತುತಿಸಿದರು. ಶರಣರು ಏನು ಬೇಡಿದರೂ ಕೊಡುವೆನೆಂಬ ದುರ್ಧರ

ಭಾಷೆಯನ್ನು ಧರಿಸುವುದು ಸಾಧ್ಯವೇ ? ಅದನ್ನು ಧರಿಸಿ ಅರಸನು ಕೆರೆಗಿತ್ತ ದ್ರವ ವನ್ನು ಕಾರಣಿಕ ಜಂಗಮನಿಗೆ ಕೊಡಲಕ್ಕುಮೇ ? ಅರಸನು ಸಿಟ್ಟಿಗೇಳಲು ಇಂತು ನೆಗಳಲಕ್ಕುಮೇ ? ಭಾಪು ಗುರುಕುಲಾಂಬರಭಾನುವೇ ! ಭಾವಿಸುವವರಾರು ? ಭಾವಿಸಿದೊಡೆ ಅದನ್ನು ನೆನೆವ ಅವಿಚಲಾವಲಂಬಿಗಳದಾರು ? ನೆನೆದೊಡೆ ನಿಶ್ಚ ಯಿಸುವ ಧೀವರರಾರು ? ನಿಶ್ಚಯಿಸಿದೊಡೆ ನುಡಿವ ಸುವಚೋವಿಭವರಾರು ? ನುಡಿದಂತೆ ನಡೆದು ತೋರುವರಾರು?ನಡೆದರೂ ಭೂವರಾದ್ಯಖಿಲರೀಕ್ಷಿಸಲು ನಿನ್ನಂತೆ ಮಹಿಮೆಯನ್ನು ತೋರಿಸುವರಾರು ಎಂದಿತು ಜನವು. ನೋಳ್ಪರ ದಿಟ್ಟಿಜೊನ್ನವಕ್ಕಿಗೆ ಮೂಡಿದಚಂದ್ರನೋ, ಶರಣರಿಗೆ ಸರಿಯಿಲ್ಲೆಂದು ಕಟ್ಟಿದ ಒರೆಯೋ, ಗಣವಿತತಿ ಪದ್ಮರಸರಿಗೆ ಕಳುಹಿದ ಉಡುಗೊರೆಯೋ, ದೇಶಿಕನ ಆಜ್ಞೆಗೆ ಅಳ್ಕಿ ಚಲಿಸದೆ ನಿಂದ ದೇವಗಂಗೆಯೋ, ಗಂಗಾಧರನ ಪರಮಪ್ರಭಾವದ ಜಾಜ್ವಲ್ಯವೋ ಎಂಬಂತೆ ಭಸಿತದಿಂದೆದ್ದ ಕೆರೆಯ ಅತುಳ ಜಲವು ಕಂಗೊಳಿಸಿತು. ನಿಷ್ಠಾನಿಧಿಗೆ ತ್ರಿಟ್ಟವಾಗಿಟ್ಟ ಬಟ್ಟೆಯೋ ಎಂಬಂತೆ ಭಸಿತಪ್ರಭಾವದಿಂದುಬ್ಬಿದ ಏರಿ ಮೆರೆಯಿತು. ಮೃಡರೂಪ ಪದ್ಮರಸರ ಉತ್ಸವಕ್ಕೆ ಜಯಲಕ್ಷ್ಮಿ ಹಿಡಿದ ಕನ್ನಡಿಯಂತೆ ಚೆಲ್ವಾದ ಗದ್ದೆಗಳು ಶೋಭಿಸಿದುವು. ನೋಡುವವರ ಕಣ್ಣ ಪುಣ್ಯದ ಸತ್ಫಲಂಗಳೋ, ಈಕ್ಷಿಸುವ ವನ ದೇವತೆಯವರ ವದನಗಳೋ ಎಂಬಂತೆ ತೋಟಗಳು ಸುಂದರವಾಗಿದ್ದುವು. ಇವನ್ನೆಲ್ಲ ನೋಡಿ ಶಿವಭಕ್ತರು ಆನಂದಬಡುತ್ತಿರಲು ಬಲ್ಲಾಳನು ತನ್ನ ಅಖಿಲಬಲಸಹಿತ ಗುರು ವಿಗೆ ಅಷ್ಟಾಂಗವೆರಗಿ“ದೇಶಿಕಚಕ್ರವರ್ತಿಯೇ ಅಭಯುವನ್ನೀವುದು. ಉರು ಯಶಸ್ಫೂ ರ್ತಿಯೇಅಭಯವನ್ನೀವುದು. ಇಂದುಶೇಖರಸಾಮ್ಯವರ್ತಿಯೇ ಅಭಯವನೀವುದು. ಕಾಯಯ್ಯ ಕರುಣಸಿಂಧು ಭಕ್ತರಬಂಧು ಲೋಕೈಕಗುರುವೇ” ಎಂದು ಪದ್ಮರಸ ರನ್ನು ಪ್ರಾರ್ಥಿಸಿದನು. “ಗರ್ವಿತರು ಅರಿಮುರುಳರು ಕ್ರೂರಚಿತ್ತರು ಸರ್ವಾಪ ರಾಧಿಗಳು ಆದ ನಮ್ಮನ್ನು ಪದ್ಮರಸಗುರುವೇ ನೀನು ಉದ್ಧರಿಸಬೇಕು. ನಿನ್ನ ಮಹತ್ವವನ್ನು ಪೊಗಳಲು ಎಮ್ಮಳವೇ ? ನಿನ್ನಾಜ್ಞೆಯಿಂದ ಭೂಮಿ, ಗಂಗೆ, ಸಸಿ ಇವೆಲ್ಲವೂ ಇಲ್ಲಿ ನಿಂದು ಮೆರೆದುವು. ಸರ್ವ ಬಲವೂ ಅಳಿದು ನಿನ್ನ ಕೃಪೆಯಿಂದ ಉಳಿದುದು. ಇದು ಸಾಮಾನ್ಯವಾದುದೇ ? ಎಮಗೆ ಸ್ಥಿತಿ ಗತಿ ಲಯ ನೀನೇ. ನೀನೇ ಮತಿಯೆಮಗೆ. ನೀನೆ ದೈವ, ನೀನೆ ಗುರು. ನೀವು ಕೈಬಿಟ್ಟರೆ ನಮ್ಮನ್ನು ಪೊರೆವರಾರು ?” ಎಂದು ಬಿನ್ನವಿಸಿ ನಮಸ್ಕರಿಸಿದನು. ಪದ್ಮರಸರು ಆ ಜನಪ ನನ್ನು ನೋಡಿ ನಸುನಗುತ್ತ ಎತ್ತಿ ಅವನನ್ನು ಸಂತಯಿಸಿದನು. ಗುರುವರನ ಮಹಿಮೆಯನ್ನು ದಿಗ್ವಿಸರಕ್ಕೆ ಬೀರುವಂತೆ ವಾದ್ಯಗಳು ಮೊಳಗಿದುವು ಶರಣರು ಹರಸಿದರು. ವಿಬುಧರು ಜಯಘೋಷಮಾಡಿದರು. ಪರಿಜನ ಪುರಜನರು ಕೊಂಡಾಡಿದರು. ಪಾಠಕರು ವಿಧವಿಧವಾಗಿ ಸ್ತುತಿಸಿದರು. ಮಹೇಶ್ವರನ

ಪುರದಲ್ಲಿ ಗಣಶ್ರೇಣಿ ಗುಡಿಗಟ್ಟಿತ್ತು. ಆಗ ಪದ್ಮಣಾರ್ಯರು ನೃಪಾದ್ಯರನ್ನು ಕೆಲಕೆ ತೊಲಗಿಸಿ ತಾವು ಆ ಕೆರೆಯಲ್ಲಿಯೇ ಲಿಂಗಾರ್ಚನೆ ಮಾಡಿಕೊಂಡರು. ಬಳಿಕ ಅರಸನೂ ತನ್ನ ಬಲದೊಡನೆ ಆ ಕೆರೆಯಲ್ಲಿಯೇ ಸ್ನಾನಪಾನಾದಿಗಳನ್ನು ಮುಗಿಸಿದನು. "ಶಿವನ ಬಿಟ್ಟಿಯಿಂದ ಈ ಕೆರೆ ಹುಟ್ಟಿತು. ಆದುದರಿಂದ ಇದಕೆ ಬಿಟ್ಟಿ ಸಮುದ್ರವೆಂಬ ಹೆಸರು, ಇದನ್ನೆಸಗಿದ ಮಹಿಮ ಪದ್ಮರಸರಿಗೆ ಕೆರೆಯಪದ್ಮ ರಸರೆಂಬ ಹೆಸರು ಇನ್ನು ಶೋಭಿಸುವವು." ಎಂದು ಹೇಳಿ "ಈ ಕೆರೆ ಅರಬರ ಗಳೆನ್ನದೆ ಚಿರಂತನವಾಗಿ ಮೆರೆಯಲಿ" ಎಂದು ಶರಣರು ಘೋಷಿಸಲು ಅರಸನು ಅದಕ್ಕೆ ಆನಂದಪಟ್ಟು ಪದ್ಮರಸರನ್ನು ಭದ್ರಗಜದ ಮೇಲೆ ಕುಳ್ಳಿರಿಸಿ ಸಕಲಜನ ಸಮೇತ ವಿವಿಧವೈಭವಗಳಿಂದ ಗುರುವರನನ್ನು ಓಲಯಿಸುತ್ತ ಪುರಕ್ಕೈತಂದನು. ಅಷ್ಟರಲ್ಲಿ ಸೂರ್ಯನು ಪಶ್ಚಿಮಸಮುದ್ರವನ್ನು ಪ್ರವೇಶಿಸಿದನು. ಈ ಸಂತಸ ವನ್ನು ಕಂಡು ಇರುಳೆಂಬ ಪೆಣ್ಣ ಮೈಯೊಳಗೆ ಉಂಟಾದ ಬೆಮರ್ವನಿಗಳೆಂಬಂತೆ ನಕ್ಷತ್ರಗಳು ಮೂಡಿದುವು. ಚಂದ್ರೋದಯವಾಗಿ ಪದ್ಮಣಾಂಕನ ಒಳ್ಜಸದಂತೆ ಬೆಳ್ದಿಂಗಳು ಪಸರಿಸಿತು. ಧರಾಂಗನೆಯು ಜಗದ್ಗುರುವಿನ ಉತ್ಸವಕ್ಕೆ ಕುಂಕು ಮದ ಓಕಳಿಯನ್ನು ಎಸಗಿದಂತೆ ಕೆಂಧೂಳು ಎದ್ದಿತು. ಪುರಜನರೆಲ್ಲ ಇಂತಹ ದನ್ನು ಕಂಡುದಿಲ್ಲ, ಕೇಳಿದುದಿಲ್ಲ ಎಂದು ಉಲಿವುತ್ತಿರಲು ಪದ್ಮರಸರು ತಮ್ಮ ಗೃಹದವರೆಗೆ ಬಂದರು. ಆಗ ಅವರು ನೃಪತಿಯನ್ನು ನೋಡಿ ಇಂತೆಂದರು: "ಎಲೈ ನರಪಾಲನೇ, ಇಂದಿನಿಂದ ನಮಗೆ ಮಹೇಶ್ವರಸೇವೆಯಲ್ಲದೆ ಉಳಿದವರ ಸೇವೆ ಅಗ್ರಾಹ್ಯ. ಇದು ನನ್ನ ಭಾಷೆ" ಎಂದು ತಮ್ಮೊಡವೆಯನ್ನುಳಿದು ಅರಸನಿಗೆ ಸಲ್ಲುವ ಧನ, ಕನಕ, ರತ್ನ ಭೂಷಾಂಬರಾದಿಗಳನ್ನೂ ಕಿರೀಟ ದಂಡ ಮುದ್ರೆ ಗಳನ್ನೂ ಉಳಿದೆಲ್ಲ ನಿಯೋಗವನ್ನೂ ತರಿಸಿ ಅರಸನಿಗೆ ಒಪ್ಪಿಸಲನುವಾದರು. ಅದನ್ನೆಲ್ಲ ಕಂಡು ಬಲ್ಲಾಳನು ಅತಿ ಚಿಂತಾನಿಮಗ್ನಮಾನಸನಾಗಿ ಸಾಷ್ಟಾಂಗ ದಿಂದ ನಮಸ್ಕರಿಸಿ "ಮಹಾಮಹಿಮ, ನೀವಿಂತು ನುಡಿವರೇ ? ಈ ಭುವನ ಉಳಿ ವುದು ಅಳಿವುದು ನಿಮ್ಮ ಆಜ್ಞೆಯಿಂದ ಎನಲು, ಇದುವರೆಗೆ ಎನ್ನನು, ಅಂಗೀಕರಿಸಿ ಪೊರೆದು ಈಗ ನೂಂಕಿದರೆ ನಾನು ಉಳಿವುದೆಂತು ?" ಎಂದು ಹಲವು ಬಗೆಯಾಗಿ ನೃಪತಿಯು ಪ್ರಾರ್ಥಿಸಿದರೂ ಪದ್ಮರಸಗುರುವು ಒಪ್ಪದಾದರು. ಭೂಪತಿಯು "ಎಲೈ ಗುರುವರನೇ, ಮತ್ಸ್ಯ ಕೂರ್ಮ ಖಗಂಗಳು ತಮ್ಮ ತಮ್ಮ ಶಿಶುಗಳನ್ನು ಸಂರಕ್ಷಿಸುವುದಿಲ್ಲವೇ ? ಅಂತಾದರೂ ನನ್ನನ್ನು ರಕ್ಷಿಸು. ಈ ಸಕಲ ವಿತ್ತವನ್ನು ನೀನೇ ಸ್ವೀಕರಿಸಿ ನನಗೆ ಕರುಣಿಸು" ಎಂದು ಅಡಿಗೆರಗಿ ಮರುಗುವ ನೃಪಾಲನನ್ನು ನೋಡುತ್ತ ನಿನ್ನ ಚಿತ್ತವೊಲಿದಂತೆ ಮಾಡುವೆವು. ಏಳು ಎನ್ನುತ್ತ ಅವನನ್ನೆತ್ತಿ ಮನ್ನಿಸುತ್ತ "ಇಂದು ಮೊದಲಾಗಿ ಶಿವಭಕ್ತರಲ್ಲಿ ಅವಗುಣವನ್ನೆಸಗದೆ ಸತ್ಯನಾಗಿರು.

ಶಿವನು ರಕ್ಷಿಸುವನು.” ಎಂದು ವಿನಯೋಕ್ತಿಯಿಂದ ಬೀಳ್ಕೊಡಲು ಪದ್ಮಣಾರ್ಯರಿಗೆ ಮತ್ತೆ ನಮಸ್ಕರಿಸಿ ಜನಪಾಲನು ಅಖಿಲಸೇನಾಸಮೇತನಾಗಿ ತನ್ನರಮನೆಯತ್ತ ನಡೆದನು. ಘನಗುರುವರನು ಶರಣಸಭೆಯೊಡನೆ ತನ್ನ ಮನೆಗೆ ಹೋಗಿ ಭಕ್ತರನ್ನುಪಚರಿಸಿ ಲಿಂಗಾರ್ಚನೆಯನೆಸಗಿ ಭಕ್ತಿರಸದಲ್ಲಿ ಮುಳುಗಿದರು. ಎಂತಹ ನಿರಾಶಾಭರಿತರು ! ಎಲ್ಲ ಭಕ್ತರಿಗೆ ಅರಸನಿತ್ತ ಎಲ್ಲ ವಸ್ತುಚಯುವನ್ನೂ ಸಮರ್ಪಿಸಿ ಅವರ ಕರುಣಾಮೃತಾಬ್ಧಿಯಲ್ಲಿ ತಾನು ನಲಿದು ಮೂಡಿ ಮುಳುಗಾಡಿ ಆ ಮಹಿಮರನ್ನು ಬೀಳ್ಕೊಟ್ಟು ಪದ್ಮರಸರು ತಮ್ಮ ಸತಿಸುತ ಮೊದಲಾದವರ ಸೇವೆಯನ್ನು ಸ್ವೀಕರಿಸುತ್ತ ಶಿವಸುಖದಲ್ಲಿದ್ದರು.

ಏಳನೆಯ ಸಂಧಿ

ಪದ್ಮರಸರ ಶಿವಪೂಜಾಸಂಭ್ರಮ

ಪದ್ಮರಸರು ಧನಕನಕ ವಸ್ತು ವಾಹನಾದಿ ತಮ್ಮ ಸರ್ವಸಂಪತ್ತನ್ನೂ ಈಶ ಭಕ್ತರಿಗಿತ್ತು ವೈರಾಗ್ಯಾನಂದದಲ್ಲಿರುವಾಗಲೇ ಬೆಳಗಿನ ಸೂಚನೆಯಾಯಿತು. ಅರುಣೋದಯವಾಗಿ ತಂಗಾಳಿ ಬೀಸತೊಡಗಿತು. ಭ್ರಮರಗಳ ಇಂಚರನಿನಾದವು ಹೊರಹೊಮ್ಮಿತು. ಬಿಸಿಲ್ವಕ್ಕಿಗಳು ಒಂದಾದುವು. ಕಮಲಗಳು ಬಾಡಿದುವು. ಚಂದ್ರಕಾಂತಿ ಮಸುಳಿಸಿತು. ಹೇಳುವದೇನು? ದೀಪಗಳ ಬೆಳಕು ಮಕಾಳಾಯಿತು. ಪಕ್ಷಿಗಳ ಕಲಕಲನಿನಾದವು ಆರಂಭವಾಯಿತು. ಅಷ್ಟರಲ್ಲಿಯೇ "ಲೋಕವನ್ನಾಶ್ರಯಿಸಿದ ಈ ಬಾಹ್ಯಕತ್ತಲೆಯನ್ನು ನಾಶಮಾಡಲು ಮಾತ್ರ ನಾನು ಶಕ್ತನು, ಅದರ ಅಂತರಂಗದ ತಮ (ಕತ್ತಲೆಯನ್ನು) ವನ್ನು ಕಳೆಯಲು ನಾನು ಸಮರ್ಥನೇ ? ಅದನ್ನು ಪರಿಹರಿಸಬಲ್ಲ ಗುರುವನ್ನು ತೋರಿಸುವೆನೆ"ಂದು ಬಗೆದು ಬಂದ ಪರಿಯಂತೆ ಸೂರ್ಯನು ಉದಯನಾದನು. ಲೋಕದ ಹಿತಚಿಂತಕನಾದುದರಿಂದಲೇ ರವಿಯು ಲೋಕಬಾಂಧವನೆಂದು ಹೆಸರು ಪಡೆದಿರುವನಲ್ಲವೇ !

ಪದ್ಮರಸರು ನಿತ್ಯದಂತೆ ಈ ಸೂರ್ಯೋದಕ್ಕೆ ಮೊದಲೇ ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಶೌಚಾಂತರಮನೆಸಗಿ ಮಂತ್ರಿತಲಿಂಗೋದಕದಿಂದ ಮಜ್ಜನಗೈದು ತಮ್ಮ ಪದಕಮಲಗಳ ಸೇವೆಯ ಆತುರತೆಯಿಂದ ಬಂದ ಮರೆಯಂಚೆಗಳೋ ಎಂಬಂತಿದ್ದ ಸ್ಫಟಿಕದ ಆವುಗೆಗಳನ್ನು ಮೆಟ್ಟಿ ' ಸರ್ವದ ' ಎನ್ನುತ್ತ ಮನೆಯೊಳಗೆ ಹೋಗಿ ಪರಮಮನುವನ್ನು ಜಪಿಸುತ್ತ ಸಿಂಗರಿಸಿದ ದಿವ್ಯಪೀಠದಲ್ಲಿ ಪದ್ಮಾಸನಸ್ಥರಾಗಿ ಕುಳಿತರು. ಉಭಯ ಶುದ್ಧಿಯನ್ನು ರಚಿಸಿ ಕೆಲಕಾಲ ಮೌನದಿಂದಿದ್ದು ಬಳಿಕ ಅಗ್ನಿಯೋಕ್ತಿಯಿಂದ ಭಸ್ಮವನ್ನು ಸಂಕಲ್ಪಿಸಿ ' ಅಗ್ನಿರಿತಿ ' ಮಂತ್ರವನ್ನುಚ್ಚರಿಸುತ್ತ ಮಧ್ಯಮ ಅನಾಮಿಕ ಅಂಗುಷ್ಠಗಳಿಂದ ಭಸ್ಮವನ್ನು ಹಿಡಿದು ತೆಗೆದು ನಮಿಸಿ ಅಗ್ನಿರಿತಿ, ಅಗ್ನಿರಸ್ಮಿ ಮಂತ್ರಂಗಳಿಂದ ಅದನ್ನು ಸರ್ವಾವಯವಗಳಿಗೆ ಸ್ಪರ್ಶಿಸಿ ' ಓಂ ಹ್ರೋಂ ' ಎಂದು ಆರಂಭವಾಗುವ ಈಶಮಂತ್ರವನ್ನು ಪಠಿಸುತ್ತ ಆ ಭಸ್ಮಘಟ್ಟಿಯನ್ನು ವಾಮಕರತಳದಲ್ಲಿಟ್ಟುಕೊಂಡರು. ಶುಭಕರವಾದ ಮೂಲಮಂತ್ರ

ದಿಂದ ಅದನ್ನು ರುದ್ರಗಣನಾವಾರ ಅಭಿಮಂತ್ರಿಸಿ ಕ್ರಮದಿಂದ ಈಶಾನಾದಿ ಪಂಚ ಮಂತ್ರಗಳಿಂದ ಶಿರ, ಮುಖ, ಹೃದಯ, ನಾಭಿ, ಪದ ಎಂಬ ಐದು ಸ್ಥಳಗಳಲ್ಲಿ ಭೂತಿನ್ಯಾಸಮಾಡಿ ಪಂಚಾರ್ಣಮನುವನುಚ್ಚರಿಸುತ್ತ ಸಂಹಿತಾಮನುಗಳಿಂದ ಭಸ್ಮಮುಷ್ಟಿಯನ್ನು ತೆಗೆದು ಮಾನಸ್ತೋಕದಿಂದ ಮಂತ್ರಿಸಿ ಈಶಮನುವಿನಿಂದ ಶಿರವನ್ನು, ಪುರುಷಮಂತ್ರದಿಂದ ಮುಖವನ್ನು ಅಘೋರಮಂತ್ರದಿಂದ ಹೃದಯವನ್ನು ವಾಮದೇವಮಂತ್ರದಿಂದ ನಾಭಿಯನ್ನು ಸದ್ಯಾಖ್ಯ ಮಂತ್ರಗಳಿಂದ ಪಾದಗಳನ್ನು ಸದ್ಯೋಹೃದಯಮನುಗಳಿಂದ ಸರ್ವಾಂಗವನ್ನು ಕ್ರಮದಿಂದ ಉದ್ಧೂಳಿಸಿದರು. ಬಳಿಕ ' ಬ್ರಹ್ಮಮನುಗಳಿಂದ ಭಸ್ಮವನ್ನು ತೆಗೆದುಕೊಂಡು ' ಅಗ್ನಿರಿತಿ ' ಎಂಬ ಮಂತ್ರದಿಂದ ಮಂತ್ರಿಸುತ್ತ ' ಓಂ ಮಾಪ ಇತಿ ' ಮಂತ್ರದಿಂದ ಮಂತ್ರಿತವಾದ ಜಲದಲ್ಲಿ ಪಂಚಾಕ್ಷರಿಮಂತ್ರೋಚ್ಚಾರದೊಡನೆ ಅದನ್ನು ಕಲಸಿ, ತ್ರಿಯಾಯುಷ ಮುಖ ತ್ರಿಯಂಬಕ ಮಂತ್ರಗಳಿಂದ ಮೂವತ್ತೆರಡು ತಾಣಗಳಲ್ಲಿ ತ್ರಿಪುಂಡ್ರಧಾರಣ ಮಾಡಿದರು. ಬಳಿಕ ಪ್ರಾಣಗಳನ್ನು ಸಮಾಯಾಮಿಸುತ್ತ ಆಲಾಪಿಸುತ್ತ "ಸಮಸ್ತ' ಎಂಬ ಮಂತ್ರದಿಂದ ಸಂಕಲ್ಪಮಾಡಿ ' ರುದ್ರಾಕ್ಷವೃಕ್ಷ ' ಎಂದೆನುತ್ತ ನಮಸ್ಕರಿಸಿ ಪೆಟ್ಟಿಗೆಯೊಳಗಣ ರುದ್ರಾಕ್ಷಿಯನ್ನು ಶಿವಮಂತ್ರವನ್ನುಚ್ಚರಿಸುತ್ತಲೇ ಕರದಿಂದೆತ್ತಿ ತೆಗೆದುಕೊಂಡು ಓಂ ಹ್ರೂಮಾದಿ ಸವ್ಯಷ್ಟಿಮಂತ್ರಕ್ರಮದಿಂದ ಸದಾಶಿವಯೆನುತ್ತ ಶಿಖಿಯೊಳಗೆ ಒಂದು, ವಹ್ನಿಯೆನುತ್ತ ನೆತ್ತಿಯಲ್ಲಿ ಮೂರು, ಷಟ್ತ್ರಿಂಶದೆನುತ್ತ ಶಿರದಲ್ಲಿ ಮೂವತ್ತಾರು, ಸೋಮಾಯಯೆನುತ್ತ ಕರ್ಣದ್ವಯಗಳಲ್ಲಿ ಒಂದೊಂದು, ತ್ರಿಯಂಬಕಯೆನುತ್ತ ಕಂಠದಲ್ಲಿ ಮೂವತ್ತೆರಡು, ಶ್ರೀಕಂಠಯೆನುತ್ತ ಉರದಲ್ಲಿ ಐವತ್ತು, ಸುಖಾಸನಾಯೆನುತ ಬಲತೋಳಲ್ಲಿ ಹದಿನಾರು, ಶ್ರೀಸೋಮಯೆನುತ ಎಡದ ತೋಳಿನಲ್ಲಿ ಹದಿನಾರು, ದ್ವಾದಶಾದಿತ್ಯಯೆನುತ ಬಲದ ಮಣಿಬಂಧದಲ್ಲಿ ಹನ್ನೆರಡು ಕೇಶವಾದಿಯೆನುತ್ತ ಎಡದ ಮಣಿಬಂಧದಲ್ಲಿ ಹನ್ನೆರಡು, ಶತರುದ್ರ ರುದ್ರಾ ಯೆನುತ್ತೆ ಯಜ್ಞೋಪವೀತಾಕಾರವಾಗಿ ನೂರಾಯೆಂಟು ರುದ್ರಾಕ್ಷಿಗಳನ್ನೂ ಮೂಲಮಂತ್ರವನ್ನುಚ್ಚರಿಸುತ್ತ ಉಳಿದ ಮಾಲಿಕೆಗಳನ್ನು ಒಪ್ಪುವಂತೆ ಅಲಂಕರಿಸಿಕೊಂಡರು. ಆ ಮೇಲೆ ಶಂಕರನ ಸಾಕಾರವನ್ನು ಜಾನಿಸುತ್ತ ' ಓಂ ಅಯಂ ಮೇ' ಎಂದೆನುತ ಲಿಂಗವನ್ನು ಸೆಜ್ಜೆಯಿಂದ ತೆಗೆದು ಕರಸ್ಥಳದಲ್ಲಿಟ್ಟುಕೊಂಡು ಆ ಲಿಂಗದ ತಲೆಯ ಮೇಲೆ ಕುಸುಮವೊಂದನ್ನಿಟ್ಟು ನಮಸ್ಕರಿಸಿ ಸದ್ಯಾಣುವಿನ ಮೊದಲ ಷಟ್ಕಲೆಗಳಿಂದ ಪಾದ್ಯ ಅರ್ಘ್ಯ ಆಚಮನಗಳನ್ನು ಶೂಲಿಗರ್ಪಿಸಿ ಬ್ರಹ್ಮಾಂಗ ರುದ್ರಾದ್ಯಣುಗಳಿಂದ ಪಂಚಗವ್ಯ ಪಂಚಾಮೃತ ಪಂಚೋದಕಗಳನ್ನು ಶಮತಾಂಬು ಸಹಿತ ಸಾಂಗವಾಗಿ ಶಿವಲಿಂಗಕ್ಕಭಿಷೇಕಿಸಿ ತತ್ಪುರುಷಮಂತ್ರದಿಂದ ಭಸ್ಮವನ್ನು ಧರಿಸಿದನು. ಆ ಮೇಲೆ ಪರಿಪೂರ್ಣಭಾವವಸ್ತ್ರಂಗೂಡಿ ವಾಮದೇವಾದಿ

ಕಲೆಯಿಂದ ನಿರ್ಮಲವಸ್ತ್ರವನ್ನೂ, ಎರಡನೆಯ ಕಲೆಯಿಂದ ಶಕ್ತಿತ್ರಯಗುಣ ದಿಂದೊಡಗೂಡಿದ ಸೂತ್ರದೊಡನೆ ಯಜ್ಞಸೂತ್ರವನ್ನೂ, ನಾಲ್ಕನೆಯ ಕಲೆಯಿಂದ ಸದ್ವಾಸನೆಯ ಶ್ರೇಷ್ಠಗಂಧದೊಡನೆ ದಿವ್ಯಗಂಧವನ್ನೂ, ಐದನೆಯ ಕಲೆಯಿಂದ ಅಕ್ಷತಗುಣಾಕ್ಷತೆಗಳೊಡನೆ ಶುಭ್ರಕಲಮಾಕ್ಷತೆ, ಪಂಚವರ್ಣರಂಜಿತ ತಿಲಾಕ್ಷತೆ ಗಳನ್ನೂ, ಆರನೆಯ ಕಲೆಯಿಂದ ಸುಶಬ್ದ ಮೊದಲಾದ ಕುಸುಮಗಳೊಡನೆ ಕುಸುಮವಿಸರವನ್ನೂ ಅರ್ಪಿಸಿ ಲಿಂಗವನ್ನು ಅಲಂಕರಿಸಿ ತಣಿಯದ ತವಕದಿಂದ ಎವೆಯಿಡದೆ ನೋಡಿದರು, ಓವಿದರು. ಆ ಮೇಲೆ ಏಳನೆಯ ಕಲೆಯಿಂದ ಕರಣ ಗುಣಗಳನ್ನು ಮೂಲಾಗ್ನಿಯಿಂದ ದಹಿಸಿದ ಧೂಪದೊಡನೆ ಧೂಪಧೂಮವನ್ನೂ, ಎಂಟನೆಯ ಕಲೆಯಿಂದ ನಿರ್ಮಲಚಿತ್‌ಪ್ರಕಾಶಪ್ರದೀಪದೊಡನೆ ಸ್ಫುರಿಸುವ ದೀಪ, ಆರತಿಗಳನ್ನೂ ಅರ್ಪಿಸಿದರು. ಆ ಮೇಲೆ ಒಂಬತ್ತನೆಯ ಕಲೆಯಿಂದ ಸುಖಾಸುಖಮನಳಿದ ಆತ್ಮನೆಂಬ ಉರುತರ ಸದುಪಹಾರದೊಡನೆ ಸದ್ರಸದಿಂದೊಡ ಗೂಡಿದ ನೈವೇದ್ಯವನ್ನರ್ಪಿಸಿದರು. ಬಳಿಕ ಸ್ವಾಹಾಂತಪಂಚಾರ್ಣದಿಂದ ಪಾನೀಯ ವನ್ನಿತ್ತು ಹೃದಯಮಂತ್ರದಿಂದ ಏಳುಸಾರಿ ಶಂಭುವಿಗೆ ಅಚಮನವನ್ನು ವ್ಯಾಹಾರಿ ಸುತ್ತ ಅರ್ಪಿಸಿದರು. ಪುನಃ ಸ್ವಾಹಾಂತ ಸತ್ಪ್ರಣವದಿಂದ ಮುಖವಾಸವನ್ನೂ ಗುಣವ್ಯೂಹಾಖ್ಯ ತಾಂಬೂಲದೊಡನೆ ಹತ್ತನೆಯ ಕಲೆಯಿಂದ ತಾಂಬೂಲವನ್ನೂ ಅರ್ಪಿಸಿದರು. ಬಳಿಕ ನೀರಾಜನವನ್ನು ಬೆಳಗಿ ತೇಜಃಪುಂಜವಾದ ರತ್ನಖಚಿತ ಸುವರ್ಣಾಭರಣವನ್ನು ಸುಮನುವಿನ ಮೂರನೆಯ ಕಲೆಯಿಂದರ್ಪಿಸಿ ಛತ್ರ ಚಾಮರ ವ್ಯಜನ ದರ್ಪಣ ಗೀತ ವಾದ್ಯ ನರ್ತನ ಮೊದಲಾದ ಉಪಚಾರಗಳನ್ನು ಪ್ರಣವ ಪಂಚಾರ್ಣದಿಂದ ಸ್ವಾಹಾಂತಮಾಗುಚ್ಚರಿಸುತ್ತ ಆರಾಧಿಸಿದರು. ಬಳಿಕ ಭವ, ಶರ್ವ, ಈಶಾನ ಪಶುಪತಿ ರುದ್ರ ಉಗ್ರ ಭೀಮ ಮಹತ್ ಇವುಗಳಿಗೆ ಚತುರ್ಥಿ ಯನ್ನು ಸೇರಿಸಿ ಬೇರೆ ಬೇರೆಯಾಗಿ 'ದೇವ ಓಂ ನಮೋ' ಎಂದೆಂದು ಅಷ್ಟ ಮನುವಿನಿಂದ ಮದನತಿಮಿರರವಿಶಿವಂಗೆ ಅಹಿಂಸಾದ್ಯಷ್ಟಪುಷ್ಪದೊಡನೆ ಅಷ್ಟಪುಷ್ಪ ಗಳನರ್ಪಿಸಿ ತ್ರಿಯಂಬಕಮನುವಿನಿಂದ ಮಂತ್ರಪುಷ್ಪವನ್ನರ್ಪಿಸಿದರು. ಆ ಮೇಲೆ ಅಖಿಲದ ನಮಸ್ಕಾರಕ್ಕೊಡೆಯನಾದ ಚಿನ್ನಿಧಿಶಂಭುವಿಗೆ ಪ್ರಾಣಾರ್ಪಣಾಂತರ ನಮಸ್ಕಾರದೊಡನೆ ಕೂಡಿ ಶತರುದ್ರೀಯದಿಂದ ಐದುಸಾರೆ ನಮಸ್ಕರಿಸಿ ಓಂಕಾರ ತ್ರಯವನುಚ್ಚರಿಸುತ್ತ ಮೂರುಸಾರೆ ಶಾಂತಿಪುಷ್ಪಾಂಜಲಿಯಿಂದ ಕೂಡಿದ ಪುಷ್ಪಾಂಜಲಿಯನ್ನು ಮಾಡಿದರು. ಇಷ್ಟಾದ ಮೇಲೆ ನಟ್ಟದಿಟ್ಟಿ, ಇನಿಸೂ ಚಲನ ವಿಲ್ಲದ ಅಕ್ಷಿಗಳು, ಶಿವಮಂತ್ರೋಚ್ಚರಣದ ಮಿಡುಕಿನಿಂದ ಶೋಭಿಸುವ ಕೆಂಬಲ್ಲೆ ಳಗು ಪಸರಿಸಿ ಶೋಭಿಸುವ ವದನ, ಶಿವಧ್ಯಾನದಿಂದ ತುಂಬಿದ ಮನ ಈ ಚತು ರಂಗದಿಂದ ಕೂಡಿ ನಯನದಿಂದ ಮೂರುಸಾರೆ ಪ್ರದಕ್ಷಿಣೆಯನ್ನೆಸಗಿದರು.

ಆಮೇಲೆ ವಿಧ್ಯುಕ್ತವಾಗಿ ರಚಿಸಿದ ಜಪಮಾಲೆಯನ್ನು ಮಧ್ಯಮ ಅನಾಮಿಕ ಅಂಗುಷ್ಠ ಗಳಿಂದ ತೆಗೆದುಕೊಂಡು ಮೂರುಸಾರೆ ಪ್ರಾಣಾಯಾಮಮಾಡಿ ಮನಃಪವನರನ್ನು ಏಕೀಕರಿಸಿ ಆ ಮನಸ್ಸರೋವರದ ಮಧ್ಯದ ಅಖಿಲ ತೇಜೋಬೀಜವಾದ ಚಿನ್ಮಯ ಶಿವಾಕೃತಿಯನ್ನು ಜಾನಿಸುತ್ತ ಸೂರ್ಯಚಂದ್ರರ ನಡುವೆ ಸ್ವತನುಚಿಂತನಂಗೈದು ಶಕ್ತ್ಯುದಯಮರಿದು ಆ ಶಕ್ತಿಯಲ್ಲಿ ಮನುವಂ ಸಗರ್ಭಂಗೆಯ್ದು ಪೂರಕ ಕುಂಭಕ ರೇಚಕದಿ ಮನುವನೆಸಗುತ್ತ ವಾಚ್ಯ ವಾಚಕಾಂತರವರಿದು ವರ್ಣದಿಂದ ವರ್ಣ ವನ್ನೂ ಪದದಿಂದ ಪದವನ್ನೂ ತಿಳಿಸುತ್ತ ಶಬ್ದಾರ್ಥವನ್ನು ಸೂಚಿಸುತ್ತ ಗಮಾ ಗಮದ್ವಯಯೋಗದಿಂದ ಮೂಲಮಂತ್ರವನ್ನು ಸ್ಮರಿಸುತ್ತ ಶೀಘ್ರವಾಗದೆ ಸಾವ ಕಾಶವಾಗದೆ ಬುದ್ಧಿಭ್ರಮಿಸದೆ ಒಂದೊಂದು ಮಣಿಗೆ ಒಮ್ಮೊಮ್ಮೆ ಪಂಚಾಕ್ಷರಿಯನ್ನು ಚ್ಚರಿಸಿ ಜಪವನ್ನರ್ಪಿಸಿ ಅಘೋರಾದ್ಯಣುತ್ರಯದಿಂದ ಸ್ತುತಿಸಿದರು. ಆ ಮೇಲೆ 'ಶ್ರೀರಮಾಕರ ನಾಕಕೋಟಿ ತೃಣತಾಯಮಾತ್ವಾ ಚಕ್ರುಧಾಮ' ಮೊದಲಾದ ಋಕ್ಕು ಅಥರ್ವ ಯಜುಸ್ಸುಗಳಲ್ಲಿ ನಿರ್ದೇಶಿಸಿದ ಸ್ತೋತ್ರಗಳನ್ನು ಉಚ್ಚರಿಸುತ್ತ ಗದ್ಗದಾಲಾಪದೊಡನೆ ಪಶುಪತಿಗೆ ಘನಸ್ತುತಿಯನ್ನರ್ಪಿಸಿದರು. ಕಣ್ಣುಗಳಲ್ಲಿ ಆನಂದಾಶ್ರುಗಳು ದಳದಳನೆ ಸುರಿದುವು. ಕುತ್ತಿಗೆನರಗಳು ಬಿಗಿದುವು. ಪುಳಕಗಳೆ ದ್ದುವು. ಬೆಮರ್ವನಿಗಳಿಂದ ಶರೀರವು ತೊಪ್ಪನೆ ತೊಯ್ದಿತು. ಮೈಯಲ್ಲಿ ನಡುಕು ಉಂಟಾಯಿತು. ಈ ಪ್ರಕಾರ ಗುರುವರರು ಶಿವಾವೇಶದಿಂದ ಸಾತ್ವಿಕತೆಯು ಹೊರಹೊಮ್ಮುವಂತೆ ಪೂಜಿಸಿದರು. ಬಳಿಕ "ನಾನು ಅಹರ್ನಿಶವೂ ಮಾಡುವ ಅಪರಾಧಸಹಸ್ರಗಳನ್ನು ಭಕ್ತವತ್ಸಲನೇ ಕ್ಷಮಿಸು" ಎಂದು ಜನಾರ್ದನನುತಂಗೆ ವಿಜ್ಞಾಪನಂಗೈದು ಸಂತೋಷದಿಂದ ಲಿಂಗದಂಗದ ಚೆಲ್ವನ್ನು ನೋಡಿ ನೋಡಿ, ತಣಿ ಯದೆ, ಕಣ್ಗಳಮರ್ದಪ್ಪುತ, ಅರೆಮುಚ್ಚುತ, ಮೂರ್ಛಿಸುತ, ಎಚ್ಚರುತ, ಆಳುತ, ಏಳುತ, ನಿಮಿರುತ, ಇದಿರ್ಗೊಳುತ, ಗಂಟಿಕ್ಕುತ, ಅಡರುತ, ಚುಂಬಿಸುತ್ತ, ಅದಿ ರುತ್ತೆ, ಪೊಂಗುತ್ತೆ, ಪೊಣ್ಮುತ್ತೆ ಈ ತೆರದಿ ಆನಂದಾತಿರೇಕದಲ್ಲಿ ಮೈಮರೆದು ಲಲ್ಲೆ ಗೆಯ್ಯುತ್ತ, ದೈನ್ಯಂದೋರಿ ಕರೆಯುತ್ತ, ಬಣ್ಣಿಸುತ್ತ, ಚಂದ್ರಕಾಂತದ ಪುತ್ಥಳಿಯಂತೆ ಕರಗುತ್ತ, ಅಲರ್ವಕ್ಕಿಮರಿಯಂತೆ ಜಿನುಗುತ್ತ ಜೋಲುತ್ತ, ಓರೆನೋಟದಿಂದ ನೋಡಿ ಸಂತೋಷದಿಂದ ಉಬ್ಬಿ ಕೊಬ್ಬಿ, ಮೊಗದಲ್ಲಿ ಮೊಗವಿಟ್ಟು ಮುಂಡಾಡಿ ಮುದ್ದಿಸುತ್ತೆ ಪರಮೋಲ್ಲಾಸದ ಕ್ಷೀರಸಾಗರದಲ್ಲಿ ರಾಜಹಂಸನಂತೆ ಆಂದೋಲ ಕ್ರೀಡೆಯನ್ನೆಸಗುತ್ತ ಆ ಬಾಂದೊರೆದಲೆಯನ ಮುಖಕ್ಕೆ ಒಂದರಲು ಮರೆಯಾಗಲು ಕಂದಿ ಕುಂದುತ್ತ ಕೂಡೆ ಎಚ್ಚರಕ್ಕೆ ಬಂದು ನಸುನಗುತ್ತ ಹೆಂದದಾನಂದದಿಂದ "ಎನ್ನಯ್ಯ ಎನಗೆ ಸಂತೋಷವನ್ನು ಸಲಿಸಿ ಪೊರೆವತಂದೆ ಸೌಂದರ್ಯನಿಧಿಯೇ" ಎಂದು ಸಂಬೋಧಿಸುತ್ತ ಮೇಲಿಂದ ಮೇಲೆ ತೊದಲಿಸುತ್ತ"ಅನಾಥನಾದ ನಿನ್ನಣುಗ

ನನ್ನು ಕೈಬಿಡದಿರಯ್ಯೋ ಕೃಪಾಕ್ಷೀರಸಮುದ್ರನೇ" ಎಂದೊರಲುತ್ತ ಗುರುವರನು ಹೀಗೆ ಪಾವನಶಿವನನ್ನು ಪೂಜಿಸುತ್ತಿರಲು ಅವನ ಭಕ್ತಿಗೆ ಮೆಚ್ಚಿ ಅನಂತಕೋಟಿ ಸೂರ್ಯರ ತೇಜೋರಾಶಿಯನ್ನು ಹಳಿದು ನಳನಳಿಸುವ ಶುಭ್ರಾಂಗದಿಂದ, ಅತುಲ ವಾದ ಮೋಹನವೇ ಮುದ್ದುಮೊಗವಂ ತಾಳ್ದಂತೆ ಮೆರೆಯುವ ಐದುಮುಖಗಳಿಂದ, ಕಾಂತಿ ಸಮೂಹವೇ ಕಣ್ಬಡೆದಂತೆ ಥಳಥಳಿಸುವ ಮೂರು ಕಣ್ಣುಗಳಿಂದ, ಲಾವಣ್ಯ ಕಲ್ಪವಲ್ಲರಿಯ ಶಾಖೆಗಳಂತೊಪ್ಪುವ ದಶಭುಜಗಳಿಂದ, ಶೃಂಗಾರರಸಸರೋವರ ದಲ್ಲಿ ಹುಟ್ಟಿದ ಕೆಂಪು ಕಮಲದಂತೆ ಹೊಳೆಯುವ ಪಾದದ್ವಯಗಳಿಂದ, ಸಿರಿಮುಡಿ ಯಲ್ಲಿರಿಸಿದ ಚಂದ್ರ,ಗಂಗೆಯರ ಚೆಲ್ವಿನಿಂದ, ಕಿವಿಗಳಲ್ಲಿ ಧರಿಸಿದ ರತ್ನಮಂಡಿತ ಹಾವುಗಳ ಹಾಡಿನಿಂದ, ವಿಷಕಂಠದಿಂದ, ಹೆಣ್ಣನಪ್ಪಿದ ವಾಮಾಂಗದಿಂದ ಪುಲಿ ದೊವಲಿನಿಂದ ಶೋಭಿಸುವ ಕಟಿಪ್ರದೇಶದಿಂದ, ಗಜಚರ್ಮದ ಮೇಲ್ವೊದಕೆ ಯಿಂದ ಈ ಬಗೆಯಾಗಿ ವರ್ಣಿಸಲಸದಳವಾದ ಮೋಹದರೂಪದಿಂದ ಬಿಡುಗಣ್ಣ ರಿರೆಯ ವಿಶ್ವನಾಥನು ಲಿಂಗಗರ್ಭದೊಳಗೆ ಪ್ರಸನ್ನನಾದನು. ಭಕ್ತರು ಉಘೇ ಉಘೇ ಎಂದು ಜಯ ಜಯಕಾರಮಾಡಿದರು.

ದೇಶಿಕೋತ್ತಮನ ನವಭಕ್ತಿರತಿಯ ವಿಲಾಸವನ್ನು ಬಣ್ಣಿಸಲ್ಬಾರದು. ಹರು ಷವೇ ಪುರುಷನಾಕಾರವಾಯಿತೋ, ಬಹುವಿಧಸ್ತುತಿಯೇ ಬಾಯ್ದೆರೆಯಾಯಿತೋ, ಅವಿಚಲದನುವೇ ಮನವಾಯಿತೋ, ಘನಕಾತರವೇ ಕಣ್ಗಳಾದುವೋ, ಸಾತ್ವಿಕ ತೆಯೇ ದೀಪಿಸುವ ತೊಡಿಗೆಯಾಯಿತೋ ಎನ್ನುವಂತೆ ಗುರುವರನು ಪರವಶೀಭೂತ ನಾಗಿ ಮೇಲಿಂದಮೇಲೆ ಪೊಂಗುವನು, ಪೊರೆಯೇರುವನು, ಕರಗುವನು. ಕೊರ ಗುವನು. ಗಾಡಿಯಿಂದೆ ಉಬ್ಬುವನು. ಕೊಬ್ಬುವನು. ಹಬ್ಬುವನು. ಕುಕಿಲಿರಿ ವನು. ಕೂಗುವನು. ತೂಗುವನು. ತೊನೆದಾಡುವನು. ಉಲಿವನು. ಕೆಲೆವನು. ಮಲೆವನು. ಮಂಗಲಕರ ವಿಶ್ವನಾಥನನ್ನು ನೋಡಿ ನೋಡಿ ಆನಂದದಿಂದ ಬೆಚ್ಚಂತೆ ಬಾಗಿ ನಲಿನಲಿದಾಡುವನು. ಪ್ರತಿಯಿಲ್ಲದ ನಿರಾಭರಣವಸ್ತುವು ಇದೇ ! ಯತಿಗಳ ಆನಂದಪ್ರಕರದ ಮೂಲವು ಇದೇ ! ಮತಿಗೆ ಅಗೋಚರವಾದ ಅಖಂಡ ಪರಿಪೂರ್ಣ ಅದ್ವಿತೀಯ ಚಿನ್ಮಯ ನಿಜವು ಇದೇ ! ಶ್ರುತಿತತಿಯ ನುತಿಗೆ ನಿಲುಕದ ಮಹಬ್ರಹ್ಮವು ಇದೇ ! ಪರಂಜ್ಯೋತಿ ಇದೇ ! ವಿಷ್ಣು ಮೊದಲಾದ ಅಮರಕುಲಕ್ಕೆ ಸ್ವಾಮಿ ಇದೇ ! ಎನ್ನುತ್ತ ಲಿಂಗದ ಮೇಲೆ ಬಿದ್ದು ಎನ್ನ ಭವವೆಂಬ ಕತ್ತಲೆಯನ್ನೋಡಿಸುವ ಭಾಸ್ಕರನೇ, ಕಾಮಧೇನುವೇ, ಎನ್ನನಾಳುಗೊಂಡ ಗುರುವೇ, ಶರಣರಿಗೆ ಕಲ್ಪವೃಕ್ಷವೇ, ಎನ್ನ ಕಾರುಣ್ಯರಸವರ್ಷವೇ, ದಿವ್ಯ ಪುರು ಷನೇ, ಎನ್ನ ನಿಧಿಯೆ, ಸುಧೆಯೇ, ಎನ್ನ ಚಿತ್ತಿನ ತಿರುಳೇ, ಪುಣ್ಯದ ಹುರುಳೇ,

ಮುಕ್ತಿಯ ನಿಲವೇ, ಭಕ್ತಿಯ ಬಲವೇ, ಎನ್ನ ನನ್ನಿಯೇ, ಎನ್ನ ಚೆನ್ನಿಗನೇ, ಗತಿಯೇ, ಮತಿಯೇ, ಧೃತಿಯೇ, ಪತಿಯೇ, ಮನ್ಮಥಮದಹರನೇ ವಿಷ್ಣುನಯನ ಪದಕಮಳನೇ, ಭವರೋಗದೂರನೇ, ಚಂದ್ರಸೂರ್ಯಾಗ್ನಿ ನೇತ್ರನೇ, ಸನಕಾದಿ ನತನೇ, ಮದಾಂಧಯಮನಮದಾಪಹಾರನೇ, ಭವಶಮನನೇ, ಭಯಶಮನನೇ, ವಿಷಕಂಠನೇ, ನವಿಲ್ದೇರತಾತನೇ, ಚಂದ್ರಧರನೇ, ಮೇರುಗಿರಿವಾಸನೇ, ಗಣ ವರನೇ, ಭಕ್ತವತ್ಸಲನೇ, ದಾನಿಗಳ ತಲೆವಣಿಯೇ ಶಿವಧೋ ! ಶಿವಧೋ ! ಇಂತೆಂದು ಮಣಿಮಣಿದು ಕೀರ್ತಿಸುವನು. ಈ ಗುಣಮಣಿಯ ಭಾವಕೆ ಮೆಚ್ಚಿ ಗುರು ಕಾಶೀ ವಿಶ್ವನಾಥನು ಫಣಿಕಂಕಣಗಳಿಂದ ಶೋಭಿಸುವ ಕರವನ್ನು ನೀಡಿ, ಹಣೆಹಿಡಿದೆತ್ತಿ, ಗಾಢಾಲಿಂಗನಂಗೈದು "ತಣಿದೆನೆಲೆಮಗನೇ ನಿನ್ನೇಕನಿಷ್ಠೆಗೆ. ಬೇಡು ಬೇಡು ನಿನ್ನಭೀಷ್ಟಮಂ" ಎಂದು ನುಡಿದನು. ಆಗ ದೇಶಿಕರು ಕರುಣಾ ಳುವೇ, ನಿಧಿಯಿರಲು ಅಲೆದಾಡಿ ಬಿಕ್ಕೆಬೇಡಿ ಬದುಕಬೇಕೆ ? ನೀನಿಂತು ಎನ್ನೊಳಿ ಡಿದು ಅಡಸಿ ತೋರುತ್ತಿರಲು ಉಳಿದ ಭೋಗಾಕಾಂಕ್ಷೆಯೇಕೆ ? ಬೇರೊಂದು ನಾನೊಲ್ಲೆ. ಲಿಂಗನಿಜೈಕ್ಯರನೇ ತೋರಿಸಾ ಶಿವನೇ, ನಿನ್ನಯ ಧರ್ಮವು. ನಾನ ವರ್ಗಳಿಗೆ ಮಾರುವೋದಪೆಂ ಎಂದು ಐದು ಗೀತಗಳಿಂದ ಈಶನನ್ನು ಪ್ರಾರ್ಥಿಸಿ ದರು. ಪನ್ನಗಾಭರಣನು ಆತನ ಭಕ್ತಿಯ ಯೋಗವನ್ನು ನೋಡಿ ತಲೆದೂಗಿ ಮುಂಡಾಡಿ ಎನ್ನಣ್ಣ, ಎನ್ನ ತೆತ್ತಿಗ, ಎನ್ನ ಭದ್ರಗಜವೇ, ನೀನು ಇನ್ನೂ ಕೆಲಕಾಲ ನನಗೋಸುಗ ಈ ಲೋಕದಲ್ಲಿರಬೇಕು. ನಿನ್ನ ಚರಾರ್ಚನಕೆ ಇಂದಿ ನಿಂದ ಹನ್ನೆರಡು ಹೊನ್ನುಗಳನ್ನು ಪ್ರತಿದಿನವೂ ತಪ್ಪದೇ ಈ ತೀರ್ಥಪಾತ್ರೆಯಲ್ಲಿ ರಿಸುವೆನು. ನೀನು ಅದನ್ನು ಕೈಕೊಳ್ಳಬೇಕೆಂದೊರೆದು ನಿರುಪಮವಾದ ಸ್ನೇಹ ವನ್ನು ಬೀರಿ ಪರಶಿವನು ಕರದ ಲಿಂಗದಲ್ಲಿ ಅಡಗಲು ಶಿವನ ಕೃಪೆಗೆ ಗುರುವರನು ಅಚ್ಚರಿವಟ್ಟು ಲಿಂಗವನ್ನು ಕಣ್ಗೊತ್ತಿ, ಎದೆಗೊತ್ತಿ ವಂದಿಸಿ, ಸೆಜ್ಜೆಯಲ್ಲಿಟ್ಟು ಮಹೇಶ್ವರಪಾದೋದಕವನ್ನು ನಿರ್ಮಲವಾದ ಶಂಖದಲ್ಲಿ ತುಂಬಿ, ಶಂಬುಜ್ಞಾನ ಯುಕ್ತನಾಗಿ ಗಂಧ, ಪುಷ್ಪ, ಅಕ್ಷತಾದಿಗಳನರ್ಪಿಸಿ ಸುಚರುವ ನಿವೇದಿಸಿ ‘ ಇಮಂ ಮೇ ’ ಎನಿಪ ಮನುವನೊರೆವುತ್ತ ಮಂತ್ರಿಸಿ ಬಳಿಕ ಮಾತ್ವಾರುದ್ರ, ಕದ್ರುದ್ರ ಎಂಬ ಮಂತ್ರಗಳಿಂದ ಸಮ್ಮಾರ್ಜನಂಗೈದು ಸರ್ವೋವೈ, ಸತ್ಯಮ್ ಎನಿಪೆರಡರಿಂದ ಅದನ್ನು ಪ್ರಾಶಿಸಿ ಶಿವಾಣುಸ್ಮರಣಮಾಡುತ್ತ ಶಿವೋಚ್ಛಿಷ್ಟವನ್ನು ಸೇವಿಸಿ ಭಯಭಕ್ತಿ ಪೂರ್ವಕ ಶರಣಸಭೆಗೆರಗಲು ಅವರು ಅತ್ಯಂತ ಪ್ರೇಮದಿಂದ ನೋಡಿ ಮಹಾಪುರುಷ, ನಿನ್ನ ದರ್ಶನ ಪ್ರಭಾವದಿಂದ ಅಪ್ರಮೇಯನೂ ಚಿತ್‌ಪ್ರಭಾಮಯಕಾಯನೂ ಆದ ಪರಶಿವನನ್ನು ಎಲ್ಲರೂ ಕಂಡೆವು. ವಿಚಾರಿಸಿದರೆ ವಿಶ್ವಪತಿಯಲ್ಲದೆ ನೀನು ಸಾಮಾನ್ಯನೇ ? ಜಯವಾಗಲಿ ! ಜಯವಾಗಲಿ ! ಎಂದು ಹರಸಿದರು. ಗುರುವು

ತನ್ನ ನುತಿಗೆ ಅಳುಕಿ ಆ ಭಕ್ತರ ಕರುಣವನ್ನು ಪಡೆದು ಬಳಿಕ ಆ ತೀರ್ಥಾಂಬು ಪಾತ್ರೆಯಲ್ಲಿ ಕೈಯಿಡಲು ಶಿವನಿತ್ತ ಹನ್ನೆರಡು ಹೊನ್ನುಗಳು ಸಿಕ್ಕವು. ಆ ವಿತ್ತ ದಿಂದ ಸಕಲ ವಸ್ತುಗಳನ್ನು ತರಿಸಿ ಉಜ್ವಲವಾದ ಬಹು ವಿಧಾನ್ನವನ್ನು ಸಿದ್ಧ ಗೊಳಿಸಿ ಗಣಾವಳಿಯೊಡನೆ ಲಿಂಗಾರ್ಪಿತಗೆಯ್ದರು. ಅಲ್ಲದೆ, ಆ ದ್ರವ್ಯದಲ್ಲಿಯೇ ಭಕ್ತರಿಗೆ ಬೇಡಿದಷ್ಟನ್ನೂ ಕೊಡುತ್ತಿರಲು ನೋಡಿ ಸೌಂದರಗಣಾಧೀಶ್ವರನು ಹಾಡಿ ಪಡಿಹೊನ್ನಗಳನ್ನು, ದಾಸಿಮಯ್ಯನು ಅಂಬರವನಿತ್ತು ಬೇಡಿ ತವನಿಧಿಯನ್ನು, ಚೋಳನು ಬಹುಪ್ರಕಾರದಿಂದ ಭಜಿಸಿ ಹೊನ್ನಮಳೆಯನ್ನು ಹಿಂದೆ ಶಿವನಿಂದ ಪಡೆ ದುದನ್ನು ಕೇಳ್ದುದುಂಟು. ಇಂದು ಪದ್ಮರಸರು ಘನವಿರತಿಯಿಂದ ಧನವನ್ನು ಪಡೆದು ಚರಸೇವೆಗೆ ಒಂದಿಸಿದರು. ಇದು ಆಚ್ಚರಿಯು" ಎಂದು ಗಣಸಮೂಹವು ಹೊಗಳುತ್ತಿರಲು ಪದ್ಮಣಾರ್ಯರು ಶೋಭಿಸಿದರು.

ಎಂಟನೆಯ ಸಂಧಿ

ವನವಿಹಾರ

ಗುರುಕುಲಾಗ್ರಣಿಪದ್ಮರಸರು ಹೀಗೆ ಪರಮಹರುಷದಿಂದಿರುತ್ತಿರಲು ಹಿಮವು ಮೆಲ್ಲನೆ ಸರಿಯಿತು. ಹೊಸಬಿಸಿಲು ಹೊಳೆಯತೊಡಗಿತು. ಬಿರುವುಗಳು ಅಡಗಿ ವೈಗಳು ಹೊಳೆಯತೊಡಗಿದುವು. ಬಿರುಗಾಳಿಯು ಹಿಮ್ಮೆಟ್ಟಿ ತಂಗಾಳಿಯು ಸುಳಿಯಲಾರಂಭಿಸಿತು. ತುಂಬಿ ಮೊರೆಯತೊಡಗಿತು. ಮಾಗಿಗೆ ಅಪಜಯವಾಗಿ ಮಧುಮಾಸಕ್ಕೆ ಜಯವಾಯಿತು. ಮಾವು ಸೊಗಸೇರಿತು. ಚಂದ್ರನಿಗೆ ಕಳೆ ಹೆಚ್ಚಾಯಿತು. ಕೋಗಿಲೆ ಕುಕಿಲಿರಿಯಹತ್ತಿತು. ವಸಂತಮಾಸ ಕಣ್ದೆರೆಯಿತು. ಚಳಿಗಾಲದ ಉಪಟಳವು ಹಿಂಗಿತೆಂದು ಮಾಹೇಶ್ವರರು ಹರ್ಷದಿಂದ ಕೆರೆಯ ಪದ್ಮಣಾರ್ಯರಿಡೆಗೆಯ್ತಂದು "ವಸಂತಕಾಲ ಸೊಗಸಾಗಿದೆ. ಇದರ ಸುಖವನ್ನು ಶಿವಾರ್ಪಣಗೆಯ್ಯಬೇಕು" ಎಂದು ನುಡಿಯಲು ಸಜ್ಜನಸ್ನೇಹಿಗಳಾದ ಪದ್ಮರಸರು ಅವರ ಬಯಕೆಯನ್ನು ಸಲಿಸಲು ಮೇಲಕ್ಕೆದ್ದರು. ತಮ್ಮ ಧರ್ಮಪತ್ನಿ ಮಗ ವಿಲಾಸಿನಿಯರು ಆಪ್ತರು ಶಿಷ್ಯರು ಆಶ್ರಿತರು ಶಿವಭಕ್ತರು ಇವರೇ ಮೊದಲಾದವರೊಡನೆ ವಾದ್ಯಗಳು ಮೊಳಗುತ್ತಿರಲು ಪದ್ಮರಸರು ಕನಕದಂಡಣವನೇರಿ ಛತ್ರ ಚಾಮರಗಳ ಸಂಭ್ರಮದಲ್ಲಿ ನಡೆತಂದರು. ಹಡಪ, ಹೊನ್ನಗಿಂಡಿ, ಮೊಗದುಗುಲ, ಕನ್ನಡಿ, ಡವಕೆ, ವೀಣೆ, ಮೂಡಾಯಿ, ಪಡಲಿಗೆ, ಸುವರ್ಣದ ಆವುಗೆ, ಹೊತ್ತಿಗೆ, ಆಲವಟ್ಟ, ಪನಿನೀರ್ಗುಪ್ಪಿಗೆ, ಪುಡಿಗಸ್ತೂರಿಯ ತಟ್ಟೆ, ಸಾದಿನ ಭರಣಿ, ಕುಂಕುಮ, ಜವಾದಿಯವಂಕಿ, ಗಂಧದ ಶಿಂಪು, ಕರ್ಪುರದ ನಾಳಿ ಇವುಗಳನ್ನು ಹಿಡಿದುಕೊಂಡು ಅವರೊಡನೆ ಪರಿವಾರದವರು ನಡೆದರು. ಈ ವೈಭವದಿಂದ ಸ್ವಲ್ಪದೂರ ನಡೆದು ಪಟ್ಟಣದ ಹೊರಭಾಗಕ್ಕೆ ಬರುತ್ತಿರಲು ಅಲ್ಲಿ ಲಾಮಂಚದ ನೆರಕೆ, ಗರಿವೂಗಳ ಹೊದಕೆ, ಪಚ್ಚಗಪ್ಪುರವಾಳೆಗಳ ಕಂಬ, ಮುಡಿವಾಳದ ಕಟ್ಟು, ಕಬ್ಬಿನ ಜಂತೆ, ಅಶೋಕದ ತಳಿರ ಹಾಸಿಗೆ ಇವೆಲ್ಲ ಶೋಭಿಸಲು ಪನಿನೀರು ತಿಳಿನೀರು ತುಂಬಿದ ಚಂದ್ರಕಾಂತಶಿಲೆಯ ಭಾಂಡಂಗಳಿಂದ ಅರವಟ್ಟಿಗೆಗಳು ಶೋಭಿಸಿದುವು. ಮೊಸರೋಗರ, ಅಳಿಯುಂಬಲಿ ಇವುಗಳನ್ನು ಅಲ್ಲಲ್ಲಿ ಇಟ್ಟು ಕರ್ಪೂರವೀಳೆಯವನ್ನು ಸಜ್ಜುಗೊಳಿಸಿ ತಮ್ಮ ಕಡೆಗಣ್ಣಕುಡಿವೆಳ

ಗೆಂಬ ಉರುಳ್ಗಣ್ಣಿಯಲ್ಲಿ ಪಥಿಕಮನೋಮೃಗವನ್ನು ಸೆರೆಹಿಡಿಯುವ ವ್ಯಾಧವಧು ಗಳಂತೆ ಪ್ರಪಾವಧುಗಳು ಶೋಭಿಸಿದರು. ಭೋಂಕನೆ ಒಬ್ಬನು ಬಿಸಿಲುಹತ್ತಿ ಬಂದು "ಎಲೆ ನಾರಿ, ವಾರಿಯನು ತಾ" ಯೆನ್ನಲು ಅಲ್ಲಿಯ ಪ್ರಪಾವಧು ಬರಿಯ ಚಂದ್ರ ಕಾಂತ ಶಿಲೆಯ ದೊಡ್ಡ ಕೊಡವನ್ನು ಅಣಕದಿಂದ ತಂದಿತ್ತು ನೋಡುತ್ತಿರಲು ತನ್ನ ಮುಖಚಂದ್ರಮನ ಸಾನ್ನಿಧ್ಯದಿಂದ ಅದು ಕಟ್ಟನೆ ಕರಗಿನೀರೊಡೆಯಿತು. ಪಾಂಥನು ಆ ಜಲವನ್ನು ಕುಡಿದು ತನ್ನ ಶ್ರಮವಾರಿಸಿಕೊಂಡನು. ಇವನು ದಾರಿಕಾರನೋ ಮಾಯಿಕಾರನೋ ಎಂದು ಅಂಜಿದ ಮುಗ್ಧೆ ಅಲ್ಲಿಯ ಎಲ್ಲರನ್ನೂ ನಗಿಸಿದಳು. ಲೀಲೆಯಿಂದ ಅರವಟ್ಟಿಗೆಗಳ ಬೆಡಗನ್ನು ಈಕ್ಷಿಸುತ್ತ ಪದ್ಮರಸರು ಸಾವಕಾಶವಾಗಿ ಮುಂದೆ ಬರುತ್ತಿರಲು ಹಾಲ್ದುಂಬಿ ಪೊಂಬೆಳಸಾಗಿ ಹಲವು ಪರಿಯಿಂದ ಶೋಭಿ ಸುವ ನೆಲ್ಲಗದ್ದೆಗಳನ್ನು ಕಂಡರು. ವನಶ್ರೀಯು ಪದ್ಮಣಾರ್ಯರ ಪಾದಕಮಲ ಗಳಿಗೆ ಪರಮೋಲ್ಲಾಸದಿಂದ ನಿವಾಳಿಯನಿಟ್ಟ ಬಹುವರ್ಣದ ಅಂಬರಗಳೆಂಬಂತೆ ಆ ಗದ್ದೆಗಳು ಒಪ್ಪಿದುವು. ಆ ಶಾಲಿಯ ವನ ಸತ್ಕವಿಯ ಕಾವ್ಯಬಂಧದಂತೆ ರಸ ಭರಿತವಾಗಿದ್ದಿತು. ಸುಕೃತಾತ್ಮನಂತೆ ಸಮಸ್ತಫಲಪೂರ್ಣಮಾಗಿದ್ದಿತು. ಫಲ ಸಂಪದವೊದಗಿದಾಗ ಸಜ್ಜನರು ತಲೆವಾಗಿರಬೇಕು. (ವಿನಯಶೀಲರಾಗಿರಬೇಕು) ಎಂಬುದನ್ನು ತೋರಿಸುವಂತೆ, ಹೆತ್ತತಾಯಿಯನ್ನು ಮೋಹದಿಂದ ಎರಗಿ ನೋಡು ವಂತೆ, ಪರಮಗುರುವನ್ನು ಕಂಡು ವಂದಿಸುವಂತೆ ಬತ್ತದಗದ್ದೆಗಳು ಅಲ್ಲಲ್ಲಿ ಶೋಭಿ ಸಿದುವು. ಆ ಕ್ಷೇತ್ರದ ಮುಂದಿನ ಕಾಲುವೆಗಳ ನೆರೆಯಲ್ಲಿ ಮಂಜುಲಚ್ಛಾಯೆ ಯಿಂದ ಶೋಭಿಸುವ ಮಾಮರದಡಿಯಲ್ಲಿ ಏರುಂಜವ್ವನೆಯರಾದ ಗೋಪಿಯರು ಚಂದ್ರಕಾಂತ ಶಿಲೆಯ ಮೇಲೆ ಹಾಲ್ದೆನೆಗಳನ್ನು ಪಳುಕಿನ ಕಲ್ಲಿನಿಂದ ಕುಟ್ಟಿ, ಕುಟ್ಟಕ್ಕಿಯನ್ನು ಮಾಡಿ ದಾರಿಗರ ಸ್ಥಿತಿ ರೀತಿಯನ್ನರಿತು ಕೊಡುತ್ತ ಅವರಿಗೆ ಡಗೆ ಯನ್ನು ಹುಟ್ಟಿಸುತ್ತ ವಿನೋದಿಸುತ್ತಿದ್ದರು. ಹಾಲು ತುಂಬಿ ಹೊಳೆಯುವ ಹೊಸ ಬತ್ತದ ತೆನೆಗಳನ್ನು ಹಿಡಿದು ಒಬ್ಬ ಪಾಮರಿ ಅತ್ತಿತ್ತ ಚಲಿಸುತ್ತ ಆ ವನಕ್ಕೆ ನಾಲ್ಕೂ ನಿಟ್ಟಿನಿಂದ ಬಂದು ಎರಗುವ ಗಿಳಿಗಳ ಹಿಂಡನ್ನು ಕೈಯೆತ್ತಿ ರಯ್ಯಮಾಗಿ ಬಲ್ದನಿ ಯಿಂದ ಹಾರಿಸಲು ಅದನ್ನು ಕಂಡು ಒಂದು ಗಿಳಿ ಹಾರಿಬಂದು ಅವಳ ಕೈಯ ತೆನೆಗೆ ಎರಗಿತು. ಅದಕ್ಕೆ ಆವಳ ಮನವರಳಿ ಅದನ್ನು ಗಕ್ಕನೆಹಿಡಿದು ಗುಟುಕ ನೀವುತ್ತ ಆಕೆ ವಿನೋದಿಸುತ್ತಿದ್ದಳು.ಇನ್ನೊಂದೆಡೆಗೆ ಕಾವನು ತಾನುಮುಂದೆ ಪರ ಮೇಶ್ವರನೊಡನೆ ಕಾದುವನಿರುವೆನು. ಆ ಯುದ್ಧವನ್ನು ಜಯಿಸಲು ಒಂದು ಬಿಲ್ಲು ಸಾಲದು ಎಂದು ಹಲವು ಬಿಲ್ಲುಗಳನ್ನು ಬಿತ್ತಿರುವನೆಂಬಂತೆ ಕಬ್ಬಿನತೋಟಗಳು ಕರಮೆಸೆದುವು. ವೇಗದಿಂದ ದಾರಿಕಾರನೊಬ್ಬನು ಬಂದು ಕಬ್ಬಿನತೋಟದಲ್ಲಿ ಶೋಭಿಸುವ ಗೋಪಿಕೆಯೊರ್ವಳನ್ನು ಕಂಡು ಎರಡು ಮೂರು ಸಾರೆ ಮಾತ ನಾಡಿಸಿ ಮನವೊಲಿಸಿಕೊಂಡು ಅವಳೊಡನೆ ಸರಸವಾಡಿ ಬೆರೆದು ಹೋಗಲು ನಿನ್ನ

ತುಟಿಗೇನಾಗಿದೆ ಎಂದು ಕೇಳಿದ ಗೆಳತಿಗೆ ಆಕೆ "ತೊಂಡೆಯ ಹಣ್ಣೆಂದು ಬಗೆದು ಗಿಳಿಯೊಂದು ಕುಕ್ಕಿದೆ"ಯೆಂದು ನುಡಿದಳು. ಪೆಂಡಿರಲ್ಲಿ ಸತ್ಯವೆಂಬುದುಂಟೇ! ಈ ದೇಶಿಯ ಬೆಡಗು ಸಲ್ಲುವಂತೆ ಅಲಂಕರಿಸಿಕೊಂಡು ಹೂಮಾಲೆಯನ್ನು ಧರಿಸಿ ಮೇಲ್ಮುಸುಗನ್ನು ಹಾಕಿಕೊಂಡು ಭ್ರಮರಗಳು ಬೆನ್ನುಹತ್ತಿ ಬರುತ್ತಿರಲು ಹೂದೋಟವೊಂದರಲ್ಲಿ ವಿಲಾಸದಿಂದ ಪದ್ಮರಾಜಾಂಕಮಾಲೆಯನ್ನು ನುಡಿಸುತ್ತ ಓರ್ವ ಕಾಂತೆ ಶೋಭಿಸಿದಳು. ಇಂತು ಶೋಭಿಸುವ ಪಾಮರಿಯನ್ನು ನೋಡುತ್ತ ಉಪವನದ ಹತ್ತಿರ ಬರಲು ವನಲಕ್ಷ್ಮಿ ಕಹಳಾರವದಿಂದ ಇವರ ಬರವನ್ನರಿದು ಆರ್ಯನನ್ನು ನೀನಿಲ್ಲಿಗೆ ತಪ್ಪದೆ ಕರೆದುತರಬೇಕೆಂದು ಗಂಧವಾಹನನನ್ನು ಕಳುಹಲು ಪದ್ಮರಾಜರೆಡೆಗೆ ಅವನು ಬಂದಂತೆ ಉದ್ಯಾನದಿಂದ ಮಂದಮಾರುತನು ಬೀಸ ತೊಡಗಿದನು. ತಮ್ಮೊಡನೆಬಂದ ಬಲವನ್ನು ಅಲ್ಲಿ ನಿಲ್ಲಿಸಿ ತಾವು ಪಲ್ಲಕ್ಕಿಯಿಂದಿಳಿದು ಆ ಕಾಲಕ್ಕೆ ಅವಶ್ಯಕರಾದ ಕೆಲವರನ್ನು ಮಾತ್ರ ಕರೆದುಕೊಂಡು ಗುರು ಉದ್ಯಾನವನ್ನು ಪ್ರವೇಶಿಸಿದರು. ಆ ಬನಕ್ಕೆ ಕೇದಗೆಯೇ ಬೇಲಿಯಾಗಿದ್ದಿತು. ಅದನ್ನು ನೋಡಿ ಇದಕ್ಕೆ ಸುಂದರವಾದ ವರ್ಣವಿದೆ, ಉಲ್ಲಾಸಕರವಾದ ಗಂಧವಿದೆ, ಆದರೂ ಕಂಟಕಿಗಳು ಎಲ್ಲೆಲ್ಲಿಯೂ ಬಹಿಷ್ಕೃತರೆಂಬುದನ್ನು ಇದು ಪ್ರತ್ಯಕ್ಷ ಮಾಡಿ ತೋರಿಸುತ್ತಿದೆಯೆಂದು ಉದ್ಗಾರತೆಗೆದರು. ಪೊಂಬಾಳೆಗಳ ಚವುರ, ಹೂತು ಕಂಪನ್ನು ಬೀರುವ ವೃಕ್ಷಾವಳಿಯ ಧ್ವಜ, ಮರಗಳನ್ನೇರಿದ ಎಳಲತೆಗಳ ತೋರಣ, ನವಿಲುಗಳ ಸೀಗುರಿ, ತೆಂಗುಗಳ ಸತ್ತಿಗೆ, ಕೋಗಿಲೆಗಳ ಕಹಳೆ, ಪಕ್ಷಿಗಳ ವಾದ್ಯ ಇವುಗಳಿಂದ ವನಲಕ್ಷ್ಮಿ ಗುರುವರನನ್ನು ಇದಿರ್ಗೊಳ್ಳುವಂತೆ ವನವು ಶೋಭಿಸಿತು. ಅಲ್ಲಿ ಹಲಸಿನಹಣ್ಣಿನ ಮೃದಂಗ, ಕರ್ಣಿಕಾರಹೂವಿನ ತಾಳ, ಭ್ರಮರಗಳ ಇಂಚರದ ಮೃದುಗೀತ, ಅರಗಿಳಿಗಳ ಉಗ್ಗಡಣೆ, ಗಂಡುಗೋಗಿಲೆಗಳ ಸಭಾಯೋಗ್ಯತೆ, ತಂಬೆಲರು ಆಡಿಸುವ ನಟ, ಮಾಧವಿ ನರ್ತಕಿ ಈ ಚದುರಿನಿಂದ ಉಪವನವು ವಸಂತನ ನಾಟಕ ಶಾಲೆಯಂತೆ ಒಪ್ಪಿತು. ಮಾಲತೀಮಾಧವಗಳ ನಾಟಕ, ಕುಸುಮಾಂಜಲಿ, ತರ್ಕ, ಇಂದ್ರಚಂದ್ರಾಂಕ, ವ್ಯಾಕರಣ, ಧ್ವನಿಗಳ ಅಲಂಕಾರ, ಚಂಪಕೋತ್ಪಲಗಳ ಛಂದಸ್ಸು ಇವೇ ಮೊದಲಾದವುಗಳ ಶ್ರೀಹರ್ಷದಿಂದ ಆ ಉಪವನವು ಕಾವ್ಯವನ್ನು ಹೋಲುತ್ತಿತ್ತು. ಸೂರ್ಯನ ಕಿರಣಗಳಿಗೆ ಎಳ್ಳಷ್ಟೂ ಪ್ರವೇಶವನ್ನು ಕೊಡದಂತೆ ದಟ್ಟವಾದ ತಮಾಲವೃಕ್ಷಗಳ ತಣ್ಣೆಳಲಲ್ಲಿ ಎಳೆವಾಳೆಯ ಎಲೆಗಳನ್ನು ಹಾಸಿ ತಳಿರನ್ನು ಹರಹಿ ಮುಗಮುಗಿಸುವ ಹೂಗಳನ್ನು ಮುಡಿದು ಶ್ರೀಗಂಧವನ್ನು ಲೇಪಿಸಿಕೊಂಡು ರೇಶಿಮೆವಸ್ತ್ರಗಳನ್ನು ಧರಿಸಿ ಪಕ್ವಾನ್ನಗಳನ್ನುಂಡು ಸವಿದಾಂಬೂಲವನ್ನು ಸ್ವೀಕರಿಸಿ ಸೊಗಸುಗಾರ್ತಿಯರೊಡನೆ ಬೇಸಗೆಯನ್ನು ಕಳೆಯುವ ಭೋಗಿಜನರು ಆ

ಉಪವನದಲ್ಲಿ ಶೋಭಿಸಿದರು. ಪಲ್ಲವಗಳೇ ದೋತ್ರ, ಕೋಗಿಲಧ್ವನಿಯೇ ವೇದಸ್ವರ, ಗಿಳಿಗಳ ಒಳ್ನುಡಿಯೇ ಪುರಾಣಪಠನ, ಅಲೆದಾಡುವ ಭ್ರಮರಗಳ ಝೇಂಕಾರವೇ ಮಂಗಲಾಶೀರ್ವಾದಮಂತ್ರ. ಕೆಳಗೆಬಿದ್ದ ಪುಪ್ಪುಡಿಯೇ (ಹೂಪರಾಗ) ಅಕ್ಷತೆಗಳಾಗಿರಲು ಒಂದು ಅಶೋಕವೃಕ್ಷವು ಮಧುವಿನ ಪುರೋಹಿತನೆಂಬಂತೆ ಕಾಣಿಸಿತು. ಮೊದಲಿಂದ ತುದಿವರೆಗೆ ಬೇರೆಬಗೆಯಾಗದೆ ಒಂದೆ ಚಂದದ ಸಫಲಗುಣಗಳನ್ನು ಪಡೆದು ತಮ್ಮ ಹೃದಯದ ಆಂತರ್ಯವನ್ನು ಹೊರಗೆ ಕಾಣಿಸದೆ ಸದ್ವಾಸನೆಯನ್ನೇ ಬೀರುತ್ತ ಕೊಯ್ದರೂ ಕೊರೆದರೂ ಹಿಂಡಿನೋಡಿದರೂ ಅಮೃತವನ್ನೇ ತೋರುತ್ತ ಹಲಸುಗಳು ಸಜ್ಜನರಂತೆ ಶೋಭಿಸಿದುವು. ಮಹಾಫಲಾಂಕರಿಗೆ ಇದು ನೈಜವಾದುದು. ಹಣ್ಣಿನ ರಸವೇ ಮದಧಾರೆ, ಸಂಚಲಿಸುವ ತಳಿರಗೊಂಚಲೇ ಕಿವಿ, ಪುಷ್ಪಮಂಜರಿಯೇ ದಂತ, ಬಂದೆರಗುವ ಅಳಿಮಾಲೆಯೇ ಸೊಂಡಿಲು, ಅವುಗಳ ಝೇಂಕಾರವೇ ಬೃಂಹಿತನಾದ ಗಿಳಿಗಳ ಸಮೂಹವೇ ಪಚ್ಚೆಯ ಜೂಲ, ಕೋಕಿಲನಾದವೇ ಮುಂದೆ ಧ್ವನಿಗೊಡುವ ಡೌಡೆಯಾಗಲು ಮಧುಯೋಧನು ಮನ್ಮಥನಿಗೆ ಪ್ರೀತಿಯಿಂದ ಹಿಡಿದ ಮದಗಜದಂತೆ ಮಾಮರವು ಶೋಭಿಸಿತು. ತಳಿರಗೊಂಚಲು ಕೆಂಜೆಡೆಯ ಬಿಂಕವನ್ನು ಬೀರಿತು. ಹೊಳೆವ ಕೆಂಪುಕಾಯ್ ಹಣೆಗಣ್ಣದೇಸಿಯನ್ನು ಸೂಸಿತು. ತನಿವಣ್ಣು ಕೊರಳಗರಳದ ತೇಜವನ್ನು ಪಡೆಯಿತು. ಹೂವಿನ ಪರಾಗ ಭಸಿತದ ಸೊಗಸನ್ನು ತಾಳಿತು. ಭ್ರಮರಗಳ ಝೇಂಕಾರ ಕರ್ಣಾಭರಣವಾಗಿದ್ದ ಹಾವುಗಳ ಸಂಗೀತವನ್ನು ಅನುಕರಿಸಿತು. ಅದೇನು ಸಂಭ್ರಮವೋ ನೀರಲಗಿಡವು ಎಂತು ಶಿವಚಿಹ್ನವಾಂತಂತಿದೆ! ಕೆಂಪು ಎಸಳಿನಿಂದ ರಜೋಗುಣದ ಬ್ರಹ್ಮನನ್ನು ಬಿಳಿಗೂಡಿದ ಕೇಸರದಿಂದ ಸತ್ವಗುಣಸಂಪನ್ನನಾದ ವಿಷ್ಣುವನ್ನು ಕಪ್ಪುತೊಟ್ಟಿಯಿಂದ ತಮೋಗುಣದ ರುದ್ರನನ್ನು ಪ್ರಕಟಿಸುವದರಿಂದ ಒಂದೇ ಪುಷ್ಪದಲ್ಲಿ ತ್ರಿಗುಣಾತ್ಮರಾದ ತ್ರಿಮೂರ್ತಿಗಳನ್ನು ಧಾರಣಮಾಡಿದ ಪೆಂಪನ್ನು ಮುತ್ತಲವೃಕ್ಷವು ಪಡೆಯಿತು. ಫಲ ಪದಂಗಳನ್ನು ತ್ಯಾಗಮಾಡಿದ ಮುಕ್ತಕಾವಳಿಗೆ ಇದು ಆಶ್ಚರ್ಯವೇ ? ಒಮ್ಮೆ ದೇವಲೋಕದ ಅಮೃತಕ್ಕೆ ನರಲೋಕದ ಸಿಹಿಯು ಸರಿಯಲ್ಲವೆಂದು ನಿಂದಿಸದೆ ಒಮ್ಮೆ ಅವನ್ನು ಪರೀಕ್ಷಿಸಬೇಕೆಂದು ಅಮೃತದ ಕಲಶಗಳನ್ನು ಹಲವು ಕೈಗಳಲ್ಲಿ ಹಿಡಿದು ಮೇಲಕ್ಕೆತ್ತಿ ಭೂದೇವಿ ದೇವತೆಗಳಿಗೆ ಅದನ್ನು ಕೊಡಲು ಅನುವಾಗಿರುವಳೆಂಬಂತೆ, ಸ್ವಲ್ಪ ಉಪಕಾರ ಮಾಡಿದವರಿಗೂ ಸಜ್ಜನರು ಅತಿ ಹೆಚ್ಚಿನ ಉಪಕಾರಮಾಡುವರೆಂದು ತಿಳಿದು ನೀರು ಹಾಕಿದವರಿಗೆ ಪರಮಾಮೃತವನ್ನು ನೀಡುವವೋ ಎಂಬಂತೆ ತೆಂಗಿನ ಮರಗಳು ಶೋಭಿಸಿದುವು. ಮಕರಂದದಿಂದ ಅಭಿಷೇಕಮಾಡಿಸಿ ಉದುರಿದ ಕುಸುಮಗಳಿಂದ ಅಲಂಕರಿಸಿ ಕಳಿತ ಹಣ್ಣುಗಳಿಂದ ನೈವೇದ್ಯವನ್ನರ್ಪಿಸಿ

ತಂಗಾಳಿಗೆ ಬೀಸುವ ಎಲೆಯಿಂದ ಗಾಳಿಯನ್ನು ಹಾಕಿ ಜನನಿಯಾದ ಭೂದೇವಿಯನ್ನು ಮನವಾರೆ ಪೂಜಿಸಿ ತಲೆವಾಗಿ ನಿಂದುವೋ ಎಂಬಂತೆ ಬಾಳೆಗಳು ಶೋಭಿಸಿದುವು. ಹೂವಿನ ಪರಾಗದ ತಿಲಕದಿಂದ, ಎಳಸಿ ಬಂದೆರಗಿದ ಭ್ರಮರಗಳೆಂಬ ಮುಂಗುರುಳುಗಳಿಂದ, ಆ ಭ್ರಮರಗಳ ಝೇಂಕಾರವೆಂಬ ಸವಿಮಾತಿನಿಂದ, ದೊಡ್ಡವಾದ ಡೋರೆಗಾಯ್ಗಳೆಂಬ ಸ್ತನಗಳಿಂದ ಒಪ್ಪುತ್ತೆ ಪಕ್ವವಾದ ಹಣ್ಣು ಬಿರಿಯಲು ಬಾಯ್ದೆರೆ (ತುಟಿ) ಯೊಳ್ ಒಂದಿದ ಬೀಜಗಳೆಂಬ ಹೊಳೆಯುವ ಹಲ್ಲುಗಳ ಕಾಂತಿಯಿಂದ ದಾಳಿಂಬವೃಕ್ಷವೆಂಬ ಸ್ತ್ರೀ ಗಿಳಿಯ ಮನವನ್ನು ಸೆಳೆದುಕೊಂಡಳು. ಸುದತಿಯರು ಯಾರಮನವನ್ನು ಸ್ವೀಕರಿಸರು ? ಈಳೆ, ಕಿತ್ತೀಳೆ, ತೆಂಗು, ಕೌಂಗು, ತಮಾಲ, ಜಂಬೀರ, ಜಂಬು, ಪನಸ, ಪಾಟಲ, ಮಾವು, ಸಾಲ, ಲವಂಗ, ಅರ್ಜುನ, ಬಕುಳ, ಇವೇ ಮೊದಲಾದ ಗಿಡಗಳನ್ನೂ ಮಾಧವಿ, ಮಲ್ಲಿಕಾ, ಮಾಲತಿ, ದ್ರಾಕ್ಷಿ, ಯಾಲಕ್ಕಿ ಇವೇ ಮೊದಲಾದ ಬಳ್ಳಿಗಳನ್ನೂ ಭೂಲೋಕಪಾವನರಾದ ಪದ್ಮರಸರು ನೋಡುತ್ತ ಕೊಂಡಾಡುತ್ತ ಉಪವನದ ಮಧ್ಯಕ್ಕೆ ಬಂದರು. ಅಲ್ಲಿ ಕಂಪನ್ನು ಬೀರುವ, ಮೋಹಿಸುವ ಕಣಗಿಲೆಯ ಹೂ, ಸೊಗಸನ್ನು ಬೀರುವ ಕಮಲ,ಹೊಳೆಯುವ ನೈದಿಲು ಇವುಗಳಿಂದ ತುಂಬಿದ ನೆಯ್ದಿಲ್ಗೊಳ, ತಾವರೆಗೊಳ, ತಂಗೊಳಗಳು ಭೂದೇವಿಯು ವನದ ಸಿರಿಯನ್ನು ನೋಡಬೇಕೆಂದು ಇಚ್ಛಿಸಿ ಹಲವು ನೇತ್ರಪುಷ್ಪಗಳನ್ನು ಪಡೆದು ಸಿರೀಕ್ಷಿಸುವಳೋ ಎಂಬಂತೆ ಶೋಭಾಯಮಾನವಾದುವು. ಹೂಗಳ ಬಂಡನ್ನು ಸೇವಿಸಿ, ಕೊಬ್ಬಿ ಸೊಕ್ಕೇರಿ ಕಲಕಂಠದಿಂದ ಮೆಲ್ಲುಲಿಮೃದುನಾದವನ್ನು ಗೆಯ್ಯುತ್ತಿರುವ ಅಲರ್ವಕ್ಕಿಗಳಿಂದ, ಕಮಲದಕ್ಕಿಗಳನ್ನು ಸಂತೋಷದಿಂದ ತಮ್ಮ ವಧುಗೂಡಿ ಸೇವಿಸುವ ಬಿಸಿಲ್ವಕ್ಕಿಗಳಿಂದ,ಕಮಲದೆಲೆಯಲ್ಲಿ ಮರಿಗಳನ್ನಿರಿಸಿ ಅದರ ಒಲೆದಾಟಕ್ಕೆ ಉಬ್ಬಿ ಸಂಚರಿಸುವ ರಾಜಹಂಸಗಳಿಂದ ಸರೋವರಗಳು ಶೋಭಿಸಿದುವು. ಸರೋವರಗಳೆಂಬ ಸ್ತ್ರೀಯರು ಮಹಾಗುರು ಪದ್ಮರಸರನ್ನು ಕಂಡು ಸಾತ್ವಿಕಭಾವದಿಂದ ಕಟ್ಟನೆ ಕರಗಿ ಜಲಮಯ ದೇಹಿಗಳಾದರೋ ಎಂಬಂತೆ ಕಣ್ಗೊಪ್ಪಿದುವು. ಅಲ್ಲಿ ತಂಪಾದ ಸರೋವರಗಳಲ್ಲಿ ಸ್ನಾನಮಾಡಿ ಕಮಲದ ಪರಾಗವೆಂಬ ಭಸಿತವನ್ನು ಧರಿಸಿಕೊಂಡು ಭ್ರಮರದ ಹಾಡುಗೂಡಿ ನೀರ್ವೂಗಳ ಕೈಗಾಣಿಕೆಯನ್ನು ಹಿಡಿದುಕೊಂಡು ಎಳಗಾಳಿ ಬಂದು ನಮಸ್ಕರಿಸಿ ಗುಣಾಗ್ರಹಿ ಪದ್ಮರಸರ ಹೃದಯಕ್ಕೆ ಆನಂದವನ್ನುಂಟುಮಾಡಿತು. ಜಗತ್ಪ್ರಾಣರ ಇರವು ಯಾವಾಗಲೂ ಹೃದ್ಯವಾಗಿರುವುದಲ್ಲವೇ ? ಆ ಸರೋವರದ ಮಾರುತನನ್ನು ಮನ್ನಿಸಿ, ಜಲಕೇಳಿಗೆ ಈ ಸರೋವರಗಳನ್ನು ಅಣಿಗೊಳಿಸಬೇಕೆಂದು ಅಪ್ಪಣೆ ಕೊಡಲು ಅವರು ಪನ್ನೀರು ಗಂಧ ಕುಸುಮ ಪತ್ರ ಇವೆಲ್ಲವುಗಳಿಂದ ಸರೋವರದ ನೀರನ್ನು ಅಲಂಕರಿಸಿ ತೋರಿಸಲು ಪದ್ಮರಸರು ಮಗನನ್ನೂ ಭಕ್ತ

ರನ್ನೂ ಆಯಾ ಸರೋವರಗಳಿಗೆ ಕಳುಹಿಸಿದರು. ಸರೋವರದಲ್ಲಿ ತೀರ್ಥೋದಕ ವನ್ನು ಬೆರಸಿ ತಮ್ಮ ಧರ್ಮಪತ್ನಿ ಕೆಳದಿಯರೊಂದಿಗೆ ಪದ್ಮರಸರು ಒಂದು ಕೊಳ ವನ್ನು ಪೊಕ್ಕು ರನ್ನದಂಡೆ ಚೀಕರ್ಳವೆಗಳನ್ನು ಅವರಿಗೆ ನೀರಾಟವಾಡಲು ಕೊಟ್ಟರು. ಆ ಚೆನ್ನೆಯರು ಕಾಮನ ತುಳಿಲಾಳ್ಗಳಂತೆ ನೀರಾಟವಾಡಿದರು. ಆಗ ಮುಡಿ ಸಡಿಲಾಗಿ ಕೂದಲು ಹರವಲು ಚಕ್ರವಾಕ ಪಕ್ಷಿಗಳು ರಾತ್ರಿಯಾ ಯ್ತೆಂದು ಸಿಡಿಮಿಡಿಗೊಂಡವು. ಸುಂದರವಾದ ಅವಳ ಮುಖವನ್ನು ಕಂಡು ಚಂದ್ರೋದಯವಾಯಿತೆಂದು ತಾವರೆಗಳು ಮುಚ್ಚತೊಡಗಿದುವು. ಕಡೆಗಣ್ಣ ಕಾಂತಿ ಯನ್ನು ಕಂಡು ಬೆಳ್ದಿಂಗಳು ಬಂದಿತೆಂದು ಚಕೋರಪಕ್ಷಿಗಳು ಬಾಯ್ತೆರೆದುವು. ಇದನ್ನು ನೋಡಿ ಮತ್ತೊಬ್ಬಳು ಅವಳಿಗೆ ನೀರನ್ನು ಉಗ್ಗಿ ಅವುಗಳ ಸಂಶಯವನ್ನು ನಿವಾರಿಸಿದಳು. ಅವಳು ಎಂತಹ ಜಾಣೆಯೋ ! ಮತ್ತೊಬ್ಬಳು ನೀರಾಟದಲ್ಲಿ ಇನ್ನೊರ್ವಳನ್ನು ತನ್ನ ಬೊಗಸೆಗಣ್ಮುರಿದು ನೋಡಲು ಆ ಬಳ್ಳಿವೆಳಗು ಬರುತ್ತಿ ರಲು ಬೆಳ್ಳಿಯ ಚೀಕರ್ಳವೆಯಿಂದ ಬಿಟ್ಟ ನೀರೆಂದು ಅದನ್ನು ಹಿಡಿಯಲು ತನ್ನ ಕೆಂದಳವನ್ನು ಅಡ್ಡ ಒಡ್ಡಿದಳು. ನಾನು ಕೇವಲ ನೋಡಿದ ಮಾತ್ರವೇ ಕೆಂಪು ಕಮಲಗಳುಳ್ಳ ಬಳ್ಳಿಗಳಿಂದ ಈಕೆಯು ಹೊಡೆಯಲನುವಾಗಿರುವಳು ನೋಡಿರಿ ಎಂದು ಗುರೂತ್ತಮರಿಗೆ ಅರುಹಲು ಅವರ ಬಗೆಗೆ ನಗುತ್ತ ಆತನು ಅವರನ್ನು ಮನ್ನಿಸಿದನು. ಹೀಗೆ ಕೆಳದಿಯರು ಕೊಳದೊಳಗೆ ವನವಾಡುವಂತೆ ಶೋಭಿಸಲು ಗುರು ಅದನ್ನು ನೋಡುತ್ತ ವಿನೋದಿಸುತ್ತ ಒಪ್ಪಿದನು. ಅವರೊಡನೆ ತಾನೂ ಜಳಕೇಳಿಯನ್ನಾಡಿ ಕೊಳದಿಂದ ಪೊರಮಟ್ಟನು.

ಸಂತೋಷದಿಂದ ಮುಂದೆ ಸಿಂಗರಿಸಿದ್ದ ಲತಾಗ್ರಹವನ್ನು ಹೊಕ್ಕು ತಳಿರ ಹಾಸಿಗೆಯ ಮೇಲೆ ಶಿವಭಕ್ತರೊಡನೆ ಕುಳಿತುಕೊಂಡು ವಸ್ತ್ರಧಾರಣಮಾಡಿ ಶಿವಪೂಜೆಗೆ ಸಿದ್ಧರಾದರು. ಆತನ ಶಿವಪೂಜೆಗೆ ಕೆಳದಿಯರು ಪುಷ್ಪಗಳನ್ನು ತಿರಿಯಲನುವಾದರು. ಗಣಿಕಾನಾಮದೋಷವು ಅಳಿವುದು, ಶಿವನಿಗೆ ನಾವು ಸಲ್ವೆವು, ಎಂದು ಬಹುಮುಖವಾಗಿ (ಆನಂದದಿಂದ) ಅರಳಿದಂತಿರುವ ಸೇವಂತಿಗೆ ಯನ್ನು, ದೇಶಿಕಶಿಖಾಮಣಿಯು ಮುಡಿವ ಭಾಗ್ಯವಾಯ್ತೆಂದು ಸಂತೋಷದಿಂದ ನಗುವ ಭಾವವುಳ್ಳ ಬಿರಿದ ಮಲ್ಲಿಗೆಯನ್ನು, ವನಶ್ರೀ ಮೀಸಲಿಟ್ಟಂತಿದ್ದ ಸಂಪಗೆ ಯನ್ನು, ಗುರುವಿನ ಮುಡಿಯ ಕಾಣುವೆವೆಂದು ಉಬ್ಬಿ ಪುಳಕಿಸುವಂತಿದ್ದ ಇರ ವಂತಿಯನ್ನು, ಲಿಂಗಧಾರಣಮಾಡಿದ ಭಕ್ತರಂತೆ ಕಂಗೊಳಿಸುವ ಕರವೀರಪುಷ್ಪ ಗಳನ್ನು, ತುಂಬಿಗುರುಳೆಯರು ಎಮ್ಮೆಡೆಗೆ ಬೇಗನೇ ಏಕೆ ಬಾರರು ಎಂದು ಬಾಯ್ಬಿಟ್ಟುಕೊಂಡಂತಿರ್ದ ತಾವರೆಗಳನ್ನು, ನಮ್ಮನ್ನು ಗುರುವಿನೆಡೆಗೆ ಕೊಂಡೊ

ಯ್ಯಬೇಕೆಂದು ಕೈಮುಗಿದಂತಿದ್ದ ಉತ್ಪಲಗಳನ್ನು ಇವೇಮೊದಲಾದ ಹೂಗಳನ್ನು ತಿರಿದುತಂದು ದೇವಾ, ನಿನ್ನಸಾಮರ್ಥ್ಯದ ಮುಂದೆ ನಿಲ್ಲಲಾರದೆ ಮನ್ಮಥನು ಅಂಜಿ ಅಡಗಿಕೊಂಡು ತನ್ನ ಬಾಣಾವಳಿಯನ್ನೇ ನಿನ್ನ ಪೂಜೆಗೆ ಅರ್ಪಿಸಿರುವನು. ನೋಡಿ. ಎಂದು ಆ ವನಿತೆಯರು ಬೇರೆ ಬೇರೆ ಪುಷ್ಪಗಳನ್ನು ಮುಂದಿರಿಸಿದರು. ಆ ಹೂಗಳನ್ನೆಲ್ಲ ನೋಡಿ ಗುರುವರನು ನಸುನಗುತ್ತ ಭಕ್ತರಿಗೂ ಇತ್ತು. ಶಿವನ ಸಿರಿಮುಡಿಗೆ ಅಲಂಕರಿಸಿ ರಸಿಕಚಕ್ರೇಶನಾದ ತಾನೂ ಮುಡಿದುಕೊಂಡನು. ಇಂತು ಶಿವಪೂಜೆಯನ್ನು ಮುಗಿಸಿ ರಸಾನ್ನ, ಪಾನ, ನಾನಾಬಗೆಯ ಫಲಗಳನ್ನು ಶಿವಾರ್ಪಿತಮಾಡಿ ತಾವೂ ಸೇವಿಸಿದರು. ಆಮೇಲೆ ಬಾಲೆಯರು ತಾಳ ಲಯ ಕಾಲಮಾನ ಸ್ಥಾನವಿಧಿಯೊದವೆ ರಸವೊಸರ್ವಂತೆ ವೀಣೆಯನ್ನು ಬಾರಿಸಿದರು. ಜೇನಹನಿಯಂತೆ ಮಧುರವಾದ ಗಾನರಸದಿಂದ ತಣಿದು ಪದ್ಮರಸರು ಪರಿವಾರ ಸಮೇತ ಅಶ್ವಾರೂಢರಾಗಿ ಪುರಕ್ಕೆ ಬರುವಷ್ಟರಲ್ಲಿ ಸಂಜೆಯಾಯಿತು. ಪರಮೇಷ್ಠಿ ಯೆಂಬ ಅಳತೆಗಾರನು ದಿವಸವನ್ನು ಅಳತೆಮಾಡಿ ಪಶ್ಚಿಮಗಿರಿಯ ಮೇಲೆ ಇಟ್ಟ ಕೆಂಪು ಕಲ್ಲೋ, ಪದ್ಮಣಾರಾಧ್ಯರು ಇಳೆಗೆ ಪರಮ ಗುರುಗಳು ಅವರ ಪಾದ ಗಳನ್ನು ಪೂಜಿಸಿ ಎಲ್ಲರೂ ಬದುಕಬೇಕು.ಎಂದು ವರುಣನು ಎಲ್ಲರೂ ನೋಡುವಂತೆ ಪಶ್ಚಿಮಗಿರಿಯ ಶಿಖರವನ್ನೇರಿ ಹೊಡೆಯುವ ಮಾಣಿಕದ ಡಂಗುರವೋ ಎಂಬಂತೆ ಸಂಧ್ಯಾಕಾಲದ ಸೂರ್ಯಬಿಂಬವು ಶೋಭಿಸಿತು. ಅಧಿಕಪ್ರಭಾವದಿಂದ ಬಾಳುವ ವನು ಒಂದು ಕಾಲದಲ್ಲಿ ದುಃಖವನ್ನು ಅನುಭವಿಸದೆ ಇರನು. ಇದಕ್ಕೆ ನಾನೇ ದೃಷ್ಟಾಂತ ಎಂದು ಇಳೆಗೆ ಸಾರಿ ಸೂರ್ಯನು ಅಪರಾಬ್ಧಿಗಿಳಿದನು. ಇನ್ನು ಚಂದ್ರನು ಬರುವನು ಎಂದು ಉಬ್ಬಿ ರಾತ್ರಿಯೆಂಬ ರಾಣಿ ತನ್ನ ಸ್ಥಳಕ್ಕೆ ಕಸ್ತೂರಿಯ ಸಾರಣೆಯನ್ನು ರಚಿಸಿ ಹೂಗಳನ್ನು ಹರಹಿ ಶೃಂಗಾರಮಾಡಿಕೊಂಡಿರುವಳೋ, ಇಲ್ಲವೆ ಆತನು ಬರುವುದಕ್ಕೆ ಸ್ವಲ್ಪ ತಡವಾಗಲು ನೀಲಾಂಬರವನ್ನು ಮುಸುಕಿಟ್ಟು ಕೊರಳ ಸರವನ್ನು ಹರಿದು ಚೆಲ್ಲಿ ಮಲಗಿದಳೋಎಂಬಂತೆ ಮಬ್ಬು ಹಬ್ಬಿ ತಾರೆಗಳು ಶೋಭಿಸಿದುವು. ಅಷ್ಟರಲ್ಲಿ ತನ್ನಿನಿಯಳಾದ ಕಮಲಿನಿಯ ಅವಸ್ಥೆಯೇನಾಯಿ ತೆಂಬದನ್ನು ಅರಿಯಲು ಸೂರ್ಯನು ತನ್ನ ಸಹಸ್ರಕರಗಳನ್ನು ಕಳುಹಲು ಅವು ಚಂದ್ರನು ಮುನಿವನೆಂದು ಅಂಜಿ ಭುವನೈಕ ಗುರು ಪದ್ಮರಾಜರನ್ನು ಸುತ್ತುಮುತ್ತಿ ಕೊಂಡು ವಿಹರಿಸುತ್ತಿರುವವೆಂಬಂತೆ ಹಲವು ಕೈದೀವಿಗೆಗಳೊಪ್ಪಲು ಪದ್ಮರಸರು ಆ ಬೆಳಕಿನಲ್ಲಿಯೇ ಮುಂದೆ ನಡೆದರು. ಆ ಪುರವು ಕಣ್ಗೆ ಮಂಗಳವಾಗಿ ಶೋಭಿ ಸುವದು. ಘನಲಕ್ಷ್ಮಿ ತನ್ನ ಮನೆ ನಿತ್ಯವೂ ಕಡು ಜಿನುಗುವ ಮಧುಪಗೋಷ್ಠಿಗೆ ಈಡಾಗಿದೆ. ಕೈಹಿಡಿದ ಪತಿಯೋ ಎನ್ನ ಬಿಟ್ಟು ಅಧಮ ಗೋಪಾಲಸ್ತ್ರೀಯರನ್ನು ಮೆಚ್ಚಿದನು. ಸ್ವಲ್ಪ ಹೊತ್ತಾದರೂ ಸುಖವಾಗಿ ಮಲಗಬೇಕೆಂದರೆ ಉಗ್ರಫಣಿಯ

ಹಾಸಿಗೆ ಎಂದು ಅವನ್ನು ಬಿಟ್ಟು ಈ ಪುರವನ್ನು ಆಶ್ರಯಿಸಿ ಮತ್ತೆಲ್ಲಿಯೂ ಚಲಿಸದಿರುವಳು. ಆ ನಗರವನ್ನು ಹೊಕ್ಕು ಅದರ ಸಿರಿಗೆ ತಲೆದೂಗುತ್ತ ಆನಂದದಿಂದ ಪದ್ಮರಸರು ರಾಜಬೀದಿಯಲ್ಲಿ ಬರುತ್ತಿರಲು ಅವರನ್ನು ನೋಡಬೇಕೆಂಬ ಕುತೂಹಲದಿಂದ ಪುರಸ್ತ್ರೀಯರು ಧಾವಿಸಿದರು. ಅವರಲ್ಲಿ ಒಬ್ಬ ಜಾರೆ ಈ ನೆವದಲ್ಲಿಯೇ ವಿಟನನ್ನು ಕೂಡುವೆನೆಂದು ಬಂದು ಗುರುವರನನ್ನು ನೋಡಲು ಬಂದ ಸತಿಯರ ಗೋಷ್ಠಿಯಲ್ಲಿ ಅದನ್ನು ಮರೆತುಬಿಟ್ಟಳು. ಉತ್ತಮರ ಸಂಗದಿಂದ ಅಧಮರ ಪಾಪ ಪರಿಹಾರವಾಗದೇ ? ಗುರು ಬರುವದನ್ನು ನೋಡಿದರೆ ಕಣ್ಣ ಪಾಪ ಹರಿಯುವದು ಬಾರೆಲಗೆ ಎಂದು ಸತಿಯರಿಗೆ ಓರ್ವ ಸತಿ ಹೀಗೆ ನುಡಿದಳು : ಅತ್ತೆಗೆ ಕಣ್ಣಬೇನೆ ಹೆಚ್ಚಾಗಿದೆ. ಪತಿಯು ಊರೊಳಗಿಲ್ಲ ತೊತ್ತು ಕಳ್ಳೆ, ಇರುಳು. ಆದುದರಿಂದ ನನಗೆ ಬರುವದಾಗದು ಎಂಬ ಮಾತಿನಿಂದ ಮರೆಯಲ್ಲಿದ್ದ ಜಾರನನ್ನು ಕರೆದಳು. ಅನ್ಯಾಯಪರರು ಅಲ್ಪಸುಖವನ್ನು ನೋಡುವರಲ್ಲದೆ ಮುಂದಿನ ಪುಣ್ಯವನ್ನು ನೋಡಲಾರರು. ತನ್ನಲ್ಲಿ ಮುನಿದು ಬಾರದ ಉಪವರನನ್ನು ಸತ್ಕರಿಸಲೆಂದು ಬಂದು ಬೀದಿಯಲ್ಲಿ ಬರುವ ಗುರುವರನನ್ನು ಕಂಡು ಮರೆತು ನೋಡುತ್ತ ನಿಂತಿರಲು ಆಕೆಯನ್ನು ನೋಡಿ ಜಾರನು ತಡಬಡಿಸುತ್ತ ಬಂದು ಒಂದು ನೆವದಿಂದ ಮೈಸೋಂಕಿ ಕಾತರಿಸಲು ಗುರುಸಮ್ಮುಖಭಯದಲ್ಲಿ ಆಕೆಯು ಯಾವದನ್ನೂ ಬಗೆಯಲಿಲ್ಲ. ಪರಮಪುರುಷರ ದರ್ಶನದಲ್ಲಿ ಇದ್ದಷ್ಟು ಕಾಲ ದುರ್ವ್ಯಸನಗುಣವು ಒಗೆಯಬಲ್ಲುದೇ ? ಕಸ್ತೂರಿಯನ್ನು ಲೇಪಿಸಿಕೊಂಡು ನೀಲಿಯ ಬಟ್ಟೆಯನ್ನು ಒತ್ತಿ ಬಿಗಿದುಟ್ಟುಕೊಂಡು ಕರಿಯಕಮಲದ ಹೂವನ್ನು ಮುಡಿದುಕೊಂಡು ಮತ್ತೊಬ್ಬಳು ಉಪಪತಿಗೆ ಹೇಳಿದ ಸಂಕೇತಕ್ಕೆ ಹೋಗುತ್ತಿರುವಾಗ ಗುರುವರನ ಸಂಭ್ರಮಕ್ಕೆ ಸುತ್ತಲೂ ಕವಿದ ಕೈದೀವಿಗೆಗಳ ಬೆಳಗು ಹಗಲನ್ನು ಬಿತ್ತರಿಸಲು ಇನ್ನು ಹೋಗುವುದಾಗದೆಂದು ಮರಳಿದಳು. ಉತ್ತಮಪುರುಷನ ತೇಜೋಮಧ್ಯದಲ್ಲಿ ಕೆಟ್ಟಆಚರಣೆ ನಡೆಯಬಲ್ಲುದೇ ? ದೇವೇಂದ್ರನು ಈಶನೊಬ್ಬನೇ ಪತಿ ಎಂದು ಮೇದಿನಿಗೆ ತಿಳುಹಲು ಚೊಕ್ಕಬೆಳ್ಳಿಯಲ್ಲಿ ಬರೆದು ಆಕಾಶದಲ್ಲಿ ಹತ್ತಿಸಿದನೋ ಎಂಬಂತೆ ಅರ್ಧಚಂದ್ರೋದಯವಾಯಿತು. ಆಕಾಶಗಂಗೆಯ ಮಹಾಪ್ರವಾಹವು ಮೇರೆದಪ್ಪಿ ಭೂಮಿಯನ್ನು ಆವರಿಸಿತೋ, ಲೋಕದಲ್ಲಿ ಪುಷ್ಪವನ್ನು ಬಾಣಮಾಡಿಕೊಂಡ ಮನ್ಮಥನೊಬ್ಬನೇ ಶೂರನು ಎಂದು ದೇವತೆಗಳು ಸಂತೋಷದಿಂದ ಅವನಿಗೆ ಪಟ್ಟಾಭಿಷೇಕ ಮಾಡುವ ಸಮಯದೊಳಗಣ ಅಮೃತರಸದ ಧಾರಸಾರವೋ ಎಂಬಂತೆ ಬೆಳುದಿಂಗಳು ಎಲ್ಲದಿಕ್ಕನ್ನೂ ವ್ಯಾಪಿಸಿತು. ವಿರಹಿಗಳ ನಿಟ್ಟುಸುರಿನ ಕಿಚ್ಚು ತನ್ನ ಎದೆಗೆ ಹತ್ತಿ ಹೊತ್ತಿದಪರೆಯೋ, ಆ ಪುರಸ್ತ್ರೀಯರ ಮುಖದ ಸಿರಿ ಕಂಡು ಮಚ್ಚರಿಸಿ ಕರಿಗಂದಿದನೋ

ಎನ್ನುವಂತೆ ಚಂದ್ರನಲ್ಲಿರುವ ಕಲಂಕವು ಒಪ್ಪಿತ್ತು. ಗುರುವರನು ಅದನ್ನು ನೋಡುತ್ತ ನಡೆದರು. ಆ ಪಟ್ಟಣದ ಪೇಟೆಯಲ್ಲಿ ಪರದರು ರತ್ನಗಳನ್ನು ಮಾರುವ ಘಟ್ಟಿಸೆಟ್ಟಿಗಳು ಶೋಭಿಸುತ್ತಿದ್ದರು. ಅಲ್ಲಿ ಬೇರೊಂದೆಡೆಗೆ ಘಟ್ಟಿವಳ್ತಿಯರು ಮೇಲ್ವಸ್ತ್ರವು ಕೆಳಗೆ ಸುರಿಯಲು ನಡು ಬಳುಕುತ್ತಿರಲು ಕಂಕಣ ಉಲಿಯುತ್ತಿರಲು ಬೊಗಸೆಗಣ್ ಹೊಳೆಯುತ್ತಿರಲು ಯಕ್ಷಕರ್ದಮಾದಿಗಳನ್ನು ಅಣಿಗೊಳಿಸಿದರು. ಮಗುದೊಂದೆಡೆಗೆ ಮಾಲೆಗಾರ್ತಿಯೋರ್ವಳು ಚೆಂದಳಿರು ಚೆಂಪಕದಳ ಬಂದುಗೆ ಮಲ್ಲಿಗೆ ಸಂಪಗೆಯ ಮುಗುಳ್ ನೈದಿಲು ಅಬ್ಜ ಇವುಗಳಿಂದ ಮಾಲೆಯನ್ನು ರಚಿಸಿ ಇವು ಎನ್ನ ಪದಕೆ, ಅವಯವಕ್ಕೆ ಬಾಯಿಗೆ, ಹಲ್ಲಿಗೆ ನಾಸಿಕಕೆ ಅಕ್ಷಿಗೆ ಮತ್ತು ಮುಖಕ್ಕೆ ಸರಿಯೆಂದು ತೋರಿಸುವಂತೆ ಮಾಲೆಯನ್ನೆತ್ತಿ ಮಾರುತ್ತಿದ್ದಳು. ಇಂತಿವೇ ಮೊದಲಾದ ನಾನಾವಸ್ತುಗಳನ್ನು ನೋಡಿ ಮುಂದೆ ಬರುತ್ತಿರಲು ನವಿಲಉಯ್ಯಾಲ ಮಕರತೋರಣ ಮೀನಧ್ವಜ ಸಂಜ್ಞಾಘಂಟೆ ಇವುಗಳಿಂದ ಶೋಭಿಸುವ ಮೊಗಸಾಲೆ ಪೊಂಗಳಸಗಳುಳ್ಳ ಉಪ್ಪರಿಗೆಯ ಸಾಲು ಸಾಲುಗಳುಳ್ಳ ವೇಶ್ಯಾವಾಟವು ಮನ ಮೋಹಕವಾಗಿದ್ದಿತು. ಆ ವೇಶ್ಯಾವಾಟವು ಪುರುಡಿನ ಗರುಡಿ, ಸೊಕ್ಕಿನ ಇಕ್ಕೆ, ಮುಳಿಸಿನ ಬೆಳಸು, ಚೆದುರಿನ ಚಾವಡಿ, ಚಥಾಳದ ಓಳಿ, ಪೇಟದ ದಾಟಿ, ಸಿಂಗರದ ರಂಗಭೂಮಿ, ಅಲರಂಬನ ಅಂಗಡಿ, ರತಿಯ ರಾಗದೋವರಿ, ಕುಪರಿಯ ಉಪರಿ ಎಂದೆನಿಸಿತ್ತು. ಅಲ್ಲಿ ಮದನಾಗಮವನ್ನು ಕೇಳುವ, ಭರತನಾಟ್ಯವನ್ನು ಪರೀಕ್ಷಿಸುವ, ಸಂಗೀತವನ್ನು ಕಲಿಯುವ, ವೀಣೆಗಳನ್ನು ಬಾರಿಸುವ, ಸೂಳೆವಿನ್ನಣದ ಪಡಿವಾತು ಗಳನ್ನು ಕಲಿಯುವ, ಶೃಂಗಾರಕಾವ್ಯಗಳನ್ನು ಓದಿಸುವ, ನಾಟಕದ ರಸವನ್ನು ಅನು ಭವಿಸುವ, ಕವಿತೆಯನ್ನು ಸವಿವ ಪ್ರೌಢೆಯರು ಮೆರೆದರು. ನೆತ್ತ ಪಗಡೆ, ಚದುರಂಗ ಮೊದಲಾದ ಆಟಗಳನ್ನು ಆಡುತ್ತ ಹಾಸ್ಯ ಗ್ರಾಮ್ಯೋಕ್ತಿಗಳಿಂದ ವಿನೋದಪಡುವ ವಿಲಾಸೀ ಜನರು ಕಾಣುತ್ತಿದ್ದರು. ಅಚ್ಯುತ, ಬ್ರಹ್ಮ, ಇಂದ್ರ, ಸುರ, ನರ, ಉರಗರೆಲ್ಲಾ ಮನಸಿಜನ ಮಾರೊಕ್ಕಲಾಗಿರುವರು. ಎಮ್ಮೊಡೆಯನೊಡನೆ ಸೆಣಸಿ ಜೀವಿಸುವರಾರು ? ಆತನನ್ನು ಗೆಲ್ದ ಶಿವನ ಸಾಮರ್ಥ್ಯವನ್ನು ಈ ವೇಶ್ಯಾವಾಟ ದೊಳ್ ಸುಳಿದೊಡೆ ನೋಡುವೆವು ಎಂದುಲಿದು ಕೆಲೆದು ವೇಶ್ಯಾಸ್ತ್ರೀಯರು ಅಲ್ಲಿ ಮಾತನಾಡುವರು. ಕಾಮಿಗಳು ಕಣ್ಮಾಣರೆಂಬ ನಾಡಗಾದೆ ಹುಸಿಯೇ ? ಮುಗು ಳ್ಗಣೆಯ ಮುದ್ರೆಯಿಲ್ಲದವರು, ಮುನಿದು ಜೀವಿಸದವರು ಮದನನಾಜ್ಞೆಗೆ ಅಂಜ ದವರು ಮೋಹಿಗಳ ಕುಲಕ್ಕೆ ಹೊರಗು ಎಂದು ಅಲ್ಲಿಯ ಅಂಗನೆಯರು ನೂಪುರ ನಿನಾದ ಮಾಡುವರು. ಇನ್ನೊಂದೆಡೆಗೆ ಚಂದ್ರಕಾಂತಶಿಲೆಯ ಹಾಸಿಗೆಯಮೇಲೆ ಎಳವಾಳೆಯ ಎಲೆಗಳನ್ನು ಹಾಸಿ ಪಚ್ಚಕರ್ಪುರದ ಧೂಳವನ್ನು ಹರಹಿ ಪನ್ನೀರ ಸಿಂಪಡಿಸಿ ತನ್ನಿನಿಯನಿಗಾಗಿ ಕಾತರಿಸುವ ಕಾಂತೆಯನ್ನು ಮಲಗಿಸಿ ಅವಳ ದೇಹಕ್ಕೆ

ಶ್ರೀಗಂಧವನ್ನು ಪೂಸಿ ಸೇವಕಿಯರು ಓಂ ನಮೋ ರತೀಶಾಯ ಎನುತ್ತ ಹೂವಿನ ಬೀಸಣಿಕೆಯಿಂದ ತಂಗಾಳಿಯನ್ನು ಬೀಸುತ್ತಿದ್ದರು. ಇನ್ನೊಬ್ಬ ಕಾಂತೆ ಲೀಲೆಯಿಂದ ನೋಡಿದರೆ ಕರಿಯಮಲ್ಲಿಗೆಯ ಮಾಲೆ ಹುಟ್ಟುತ್ತದೆ. ನಸುನಗುತ್ತ ಮುಖವೆತ್ತಿದರೆ, ಹಾಲಂತೆ ಬೆಳದಿಂಗಳನ್ನು ಸೂಸುತ್ತಿದೆ ಪೂರ್ಣಚಂದ್ರನು. ಭ್ರಮರಗಳ ಕೋಲಾಹಲಕ್ಕೆ ಮುಡಿಯನಲುಗಿದರೆ ಮೊಳಗಮರಿ ಕಾಲಮೇಘ ತೋರುವದು ಇವಳೇನು ಇಂದ್ರಜಾಲಕಾರಿಯೋ, ರೂಪಶೀಲಕಾರಿಯೋ ಎಂದೆನಿಸಿದಳು. ವೀಣೆಯನ್ನು ದೊಡ್ಡವಾದ ಮೊಲೆಯಮೇಲೆ ಇಟ್ಟುಕೊಂಡು, ಓದುವ ಗಿಳಿಯನ್ನು ಮುಂಗೈಯಲ್ಲಿ ಇರಿಸಿ, ಕಟ್ಟಾಣಿಮುತ್ತಿನ ಕಂಠಮಾಲೆಯನ್ನು ಧರಿಸಿ ಶ್ರೀಗಂಧವನ್ನು ಲೇಪಿಸಿ, ಹೊಂಬಟ್ಟೆಯುಟ್ಟು ಕೈಯಲ್ಲಿ ಕರೀಕಮಲವನ್ನು ಹಿಡಿದುಕೊಂಡು ಒಬ್ಬಳು ವಾಣಿಯೋ ಇಲ್ಲವೆ ಲಕ್ಷ್ಮಿಯೋ ಎಂಬ ಸಂದೇಹವನ್ನು ಹುಟ್ಟಿಸಿದಳು. ಇನ್ನೊಬ್ಬಳು ಸ್ವಸ್ಥವಾಗಿ ಒಂದೆಡೆ ನಿಲ್ಲದೆ ಸಂದೇಹಿಗಳ ಚಿತ್ತದಂತೆ ಉಯ್ಯಾಲೆಯಲ್ಲಿ ನಿಂತು ಅಲೆದಾಡುತ್ತ ಹಾರುವ ಹಂಸೆಯ ಅಂದವನ್ನು ಪ್ರಕಟಿಸಿದಳು. ಎಷ್ಟು ಊರ್ಧ್ವಮುಖವಾಗಿ ನಡೆವವರನ್ನಾದರೂ ಕಾಮಿನಿಯರು ಅಧೋಮುಖಿಗಳನ್ನಾಗಿ ಮಾಡಬಲ್ಲರು. ಎಂಬುದನ್ನು ಸೂಚಿಸುವಂತೆ ಮೇಲೆ ಹಾರುವ ಚೆಂಡನ್ನು ಒಬ್ಬಳು ಕೆಳಗೆ ಹೊಡೆದಳು. ಅದು ಕುವಿಟಜನದಂತೆ ಉಬ್ಬಿ ಪುನಃ ಪುಟಿಯಿತು. ಅಚೇತನವಾದ ಚೆಂಡಿಗೆ ಕಾಂತೆಯರಲ್ಲಿ ಇಷ್ಟು ಚೇಷ್ಟೆ. ಜೀವಿಗಳ ಪಾಡೇನು ? ಹೀಗೆ ವೇಶ್ಯಾವಾಟದಲ್ಲಿ ಜೀವವುಳ್ಳ ಹೂಬಾಣಗಳಂತೆ ಗಣಿಕೆಯರು ಎಸೆದರು. ಅಖಿಲಭಕ್ತರನ್ನು ಕೂಡಿಕೊಂಡು ಜಿತಪುಷ್ಪಚಾಪ ಪದ್ಮರಸರು ಪುರವಿಲಾಸವನ್ನು ನೋಡುತ್ತ ತನ್ನನ್ನು ಕಂಡವರಿಗೆ ಆನಂದವನ್ನುಂಟುಮಾಡುತ್ತ ಮನೆಗೆ ಬಂದು ಶಿವಸುಖದಲ್ಲಿದ್ದರು.

ಒಂಭತ್ತನೆಯ ಸಂಧಿ

ವಾದಕ್ಕೆ ನೃಪಸಭೆಗೆ ಪೋದುದು

ಪದ್ಮರಸರು ಶಿವಪೂಜೆಯನ್ನೆಸಗಿ ಶರಣಸಂಗದಲ್ಲಿ ಸುಖದಿಂದಿರುತ್ತಿದ್ದರು. ಪರದೇವತಾಪೂಜೆ, ಪರವಧುವಿನ ಬೇಟ, ನತರಲ್ಲಿ ಆಸುರೀವೃತ್ತಿ ಇವು ಪದ್ಮರಸರಲ್ಲಿ ಎಳ್ಳಷ್ಟೂ ಇಲ್ಲ. ನರರಸಂಗದಲ್ಲಿ ಅಬದ್ಧತೆ ಅಪ್ರಮಾಣಿಕತನ ಜೀವಹಿಂಸೆ ಕೆರೆಯ ಪದ್ಮರಸರಲ್ಲಿ ಇಲ್ಲವೇ ಇಲ್ಲ. ಆತನು ಎಂತಹ ಒಳ್ಳಿದನೋ ಎಂದು ಕೀರ್ತಿಸತಿ ಧರೆಯಲ್ಲಿ ದೂರತೊಡಗಿದಳು. ಹೀಗೆ ಕೀರ್ತಿವೆತ್ತ ಗುರುವರನ ವಾರ್ತೆ ದಿಗಂತದಲ್ಲಿ ವ್ಯಾಪಿಸಿತು. ಇತ್ತ ವೈಷ್ಣವದರ್ಶನದಲ್ಲಿ ಶ್ರೇಷ್ಠನೂ ಆಂಧ್ರನಿವಾಸಿಯೂ ಆದ ತ್ರಿಭುವನತಾತನೆಂಬೋರ್ವನು ಎಲ್ಲ ಸಮಯಿಗಳನ್ನೂ ವಾದದಲ್ಲಿ ಸೋಲಿಸಿ ವೈಷ್ಣವಸಮಯವನ್ನು ಸ್ಥಾಪನಮಾಡಿ ಅನೇಕರನ್ನು ಶಿಷ್ಯರನ್ನಾಗಿ ಮಾಡಿಕೊಂಡು ಗರ್ವದಿಂದಿದ್ದನು. ಆತನು ಮೃಡಮೂರ್ತಿ ಪದ್ಮರಸರ ಸಾಮರ್ಥ್ಯವನ್ನು ಎಳ್ಳಷ್ಟೂ ವಿಚಾರಿಸದೆ ಘುಡು ಘುಡಿಸುತ್ತಾ ಹೀಗೆಂದನು : ಕಡಲುಡಿಗೆಯಾದ ಈ ಪೊಡವಿಯಲ್ಲಿ ಉಳಿದ ಸಮಯಿಗಳ ಮಾತಂತಿರಲಿ ಸಮಸ್ತ ವಿದ್ವತ್ಸಭಾಮಧ್ಯದಲ್ಲಿ ನನ್ನ ಆಣೆ ಘೋಷಣೆಗಳು ಸಲ್ಲುವಂತೆ ನಾನು ವೈಭವದಿಂದ ನಡೆಯುವಾಗ ನನ್ನ ಮುಂದೆ ಯಾವ ವಾದಿಗೀದಿಯ ಸುದ್ದಿಯೂ ಬರಲಾರದು. ಗುರುವಂಶದಲ್ಲಿ ಜನಿಸಿರುವನಂತೆ, ಸಮಸ್ತ ಭೂಸುರರೊಡನೆ ವಾದಿಸಿ ನರಸಿಂಹಬಲ್ಲಾಳನ ಸಭೆಯಲ್ಲಿ ದೃಷ್ಟಾಂತವನ್ನು ತೋರಿ ಶಿವಮತವನ್ನು ಸ್ಥಾಪಿಸಿರುವನಂತೆ ! ದೊರೆಯು ಕೆರೆಗಾಗಿ ಕೊಟ್ಟ ದುಡ್ಡನ್ನು ಹರವೇಷದಿಂದ ಬಂದ ಸೂಳೆಗನಿಗೆ ಕೊಟ್ಟು ಹಾಳುನೆಲದಲ್ಲಿ ಭಸ್ಮವನ್ನು ತಳಿದು ಕೆರೆ ಗದ್ದೆ ತೋಟ ಮೊದಲಾದವುಗಳನ್ನು ನಿರ್ಮಿಸಿದನಂತೆ ಶಿವನನ್ನು ಒಲಿಸಿ ದಿನಕೆ ಹನ್ನೆರಡು ಪಡಿಹೊಂಗಳನ್ನು ಪಡೆದು ಆ ಧನದಲ್ಲಿ ಎಷ್ಟು ಜನ ಭಕ್ತರು ಬಂದು ಬೇಡಿದರೂ ಇಲ್ಲೆನ್ನದೆ ಕೊಡುವನಂತೆ ! ವೇದಾದಿ ಅಖಿಲ ಶಾಸ್ತ್ರಗಳ ಜ್ಞಾನದಲ್ಲಿ ತನಗೆ ಯಾರೂ ಸರಿಯಿಲ್ಲವೆಂದು ಡಂಗುರ ಹೊಯ್ಸಿ ಭೂಜನವಂದ್ಯನಾಗಿ ಷಡ್ದರ್ಶನಾದಿಗಳನ್ನು ಅಂಡಲೆದು ವರ್ತಿಸುವನಂತೆ ! ಶಾಪಾನುಗ್ರಹಶಕ್ತನಂತೆ ! ಶಾಂತಿ ದಾಂತ್ಯಾದಿಗುಣಗಳಲ್ಲಿ ಒಂದಿನಿತೂ ಕುಂದುಬಾರದಂತೆ ಆಚರಿಸುವನಂತೆ ! ಶಿವಸಮಯದೊಳಗೆ ಇಂತಹರು ಹುಟ್ಟು

ವದು ವಿಚಿತ್ರ. ಈ ರೀತಿಯ ಶೈವನನ್ನು ನಾನು ವಾದಮುಖದಿಂದ ಪರಾಭವಗೊಳಿಸದೆ ಬಿಡಲಾರೆನು ಎಂದು ಸಿಡಿಮಿಡಿಗೊಂಡು ಉದ್ರೇಕದಿಂದ ಗಳಪಿದನು. ಆಮೇಲೆ ಒಂದು ಆನೆಯ ಮೇಲೆ ಸಕಲಶಾಸ್ತ್ರಗಳ ಪುಸ್ತಕಸಮೂಹವನ್ನು ಹೇರಿಕೊಂಡು ವಾದ್ಯಗಳುಲಿಯಲು ಖಲರು ಭಾಪು ಜಯ ಜೀಯ ಎಂದು ಕೈವಾರಿಸುತ್ತಿರಲು ತಾನು ಹೊನ್ನ ಅಂದಣವನ್ನೇರಿ ರಾಜವೈಭವದಿಂದ ನಡೆದನು. ಹೀಗೆ ನಡೆಗೊಂಡು ದಾರಿ ದಾರಿಯಲ್ಲಿ ಊರೂರ ದೊರೆಗಳ ಕಾಣಿಕೆಗಳನ್ನು ಸ್ವೀಕರಿಸುತ್ತ ಅವರಿಂದ ನಮಸ್ಕರಿಸಿಕೊಳ್ಳುತ್ತ ಮದದಿಂಡ ಸಮುದ್ರವು ವಡವಾನಲದ ಮೇಲೆ ಏರಿಬರುವಂತೆ ಕಾಳೋರಗವು ಗರುಡನೊಂದಿಗೆ ಸೆಣಸುವಂತೆ ಕ್ರೂರನಾದ ತ್ರಿಭುವನತಾತನು ಗುರುವರನೊಡನೆ ವಾದಮಾಡುವೆನೆಂದು ಉರವಣಿಸಿ ಬಂದನು. ವಾದಿಶರಭ ಭೇರುಂಡನು ಬಂದನು" ಎಂದು ಕಹಳೆಗಳು ಅರ್ಭಟಿಸಿ ಕೂಗಿದವು. ಶಿಷ್ಯಾವಳಿಯು ಎಡಬಲದಲ್ಲಿದ್ದು ಈತನ ಬಿರುದಾವಳಿಗಳನ್ನು ಉಗ್ಘಡಿಸಿದರು. ಹೀಗೆ ಒಳ್ಳೆಯ ಸಂಭ್ರಮದಿಂದ ನರಪತಿ ಬಲ್ಲಾಳನ ಅರಮನೆಯ ಹೆಬ್ಬಾಗಿಲಿಗೆ ಬಂದು ಪಲ್ಲಕ್ಕಿಯಿಂದಿಳಿದು ನಿಂತನು. ಕೇಶವನಿಂದ ಅಧಿಕವಾದ ಪರದೈವವಿಲ್ಲ. ವೈಷ್ಣವವೇ ಶಾಶ್ವತವು. ಇದು ಸತ್ಯ ಸತ್ಯ ಸತ್ಯ ಇದಕ್ಕೆ ಸಂದೇಹವೇ ಇಲ್ಲ. ಇದು ವ್ಯಾಸಮುನಿ ಮತವು. ಇದಕ್ಕೆ ಸೆಣಸುವ ವಾದಿಗೆ ಈ ಪತ್ರ ಎಂದು ಒಂದು ಪತ್ರವನ್ನು ಬರೆದು ಆ ಬಾಗಿಲಲ್ಲಿ ಕಟ್ಟಿ ನಲಿದಾಡಿದನು. ಪಾಪಕ್ಕೆ ಹೇಸದ ಆ ದಾಸನು ನರಸಿಂಹಬಲ್ಲಾಳನಲ್ಲಿಗೆ ಹೋಗುವ ಜನರೊಡನೆ ತಾನು ಬಂದ ಸುದ್ದಿಯನ್ನು ಬರೆದು ತಿಳಿಸಿ ದೊರೆಯ ಅಪ್ಪಣೆಯನ್ನು ಪಡೆದು ಆತನನ್ನು ಕಂಡನು. ಬಲ್ಲಾಳರಾಯನು ಆತನಿಗೆ ಸತ್ಕಾರಗಳನ್ನು ಮಾಡಿ ಸಭಾಪೂಜ್ಯನಾಗಿರುವ ಸಮಯದಲ್ಲಿ ಆ ವಾದಿ ಭೂಪನಿಗೆ ಹೀಗೆ ನುಡಿದನು. "ಇಲ್ಲಿ ಓರ್ವ ಶೈವನಿರುವನಂತೆ, ಅತಿ ಗರ್ವದಿಂದ ಶಿವನೇ ದೈವ, ಶಿವಸಮಯವೇ ಮುಕ್ತಿಗೆ ಕಾರಣ, ಶೈವಶಾಸ್ತ್ರವೇ ಶುಭವಾದುದು ಎಂದು ಉಲಿದು ಅಜ್ಞರಾದ ಕೆಲವರನ್ನು ಕಲೆಹಾಕಿಕೊಂಡು ತಾನು ಹಿರಿಯನೆಂದು ಅಹಂಕರಿಸಿಕೊಂಡಿರ್ಪನಂತೆ. ಅದನ್ನು ಪರಿಹರಿಸಿ ವಿಷ್ಣುವೇ ದೈವ, ವೈಷ್ಣವವೇ ಶಾಶ್ವತವಾದುದು ಎಂದು ಪಂಡಿತರು ಒಪ್ಪುವಂತೆ ಆತನನ್ನು ಪರಾಭವಗೊಳಿಸುವೆನು. ಭೂಪಾಲನೇ ಕೇಳು, ಲೋಕಾಯತಿಕ, ಅರ್ಹಂತಿಕ, ಬೌದ್ಧ, ವೈಭಾಷಿಕ, ಸೌತ್ರಾಂತಿಕ, ಯೋಗಾಚಾರ್ಯ, ಮಾಧ್ಯಮಿಕ, ಮೀಮಾಂಸಕ, ವೈಶೇಷಿಕ, ನೈಯಾಯಿಕ, ಸಾಂಖ್ಯ, ಪಾತಂಜಲ, ವೇದಾಂತಿ, ಭಾಸ್ಕರೀಯ, ಬ್ರಹ್ಮವಾದಿ, ಶಬ್ದಬ್ರಹ್ಮವಾದಿ, ಮಾಯಾಬ್ರಹ್ಮವಾದಿ, ಕಾಪಾಲವಾದಿ, ತ್ರಿಮೂರ್ತಿವಾದಿ, ಅಷ್ಟಮೂರ್ತಿವಾದಿ, ಕಾಲವಾದಿ, ಕರ್ಮವಾದಿ, ಆಂತರಾಳಿಕವಾದಿ, ಶಾಕ್ತವಾದಿ, ಕೌಳ, ಯಾಮಳ,

ವೈಖಾನಸ, ನೀಲಪಟ, ನಿರೀಶ್ವರವಾದಿ, ಅನೇಕೇಶ್ವರವಾದಿ, ಪೌರಾಣಿಕ, ಪ್ರತ್ಯಭಿಜ್ಞ ಇವೇ ಮೊದಲಾದ ಎಲ್ಲ ಸಮಯಿಗಳೂ ನನ್ನೊಡನೆ ಸೆಣಸಿ ಸೋತು ನನ್ನನ್ನು ಓಲಯಿಸುತ್ತಿರುವರು. ಆದುದರಿಂದ ಈ ಲಿಂಗಧಾರಿಪದ್ಮರಸ ವಾದದಲ್ಲಿ ನನ್ನನ್ನು ಗೆದ್ದು ಓಡಿಸಿದರೆ ಆತನು ಎಲ್ಲರನ್ನೂ ಗೆದ್ದಂತೆ. ಆತನ ಇಂದ್ರಜಾಲದ ಮಹಿಮೆ ಗಿಹಿಮೆ ನೋಡುವೆನು. ನಿನ್ನ ರಾಜ್ಯದಲ್ಲಿರುವ ಎಲ್ಲ ಪಂಡಿತರನ್ನೂ ಜನ ಸಮೂಹವನ್ನೂ ಕರೆಸಬೇಕು." ಎಂದು ನುಡಿಯಲು ಅರಸನು ಆ ದುರಾಚಾರಿಯ ಅನ್ಯಾಯದ ಮಾತಿಗೆ ಮರುಳಾಗಿ ಎಲ್ಲರನ್ನೂ ಕರೆಯಿಸಿದನು. ಋಕ್ ಯಜುಸ್ ಸಾಮ ಅಥರ್ವವೇದಜ್ಞರು, ಶಿಕ್ಷಾ, ವ್ಯಾಕರಣ, ಕಲ್ಪ, ಜ್ಯೋತಿಷ್ಯ ನಿರುಕ್ತ ಛಂದಸ್ಸು ವೇದದ ಈ ಷಡಂಗಗಳಲ್ಲಿ ಪಾರಂಗತರಾದವರು, ಮೀಮಾಂಸ, ಪುರಾಣ, ಸ್ಮೃತಿ, ನ್ಯಾಯಗಳಲ್ಲಿ ನಿಪುಣರಾದವರು, ಧನುರ್ವೇದ, ಅಥರ್ವವೇದ, ಗಾಂಧರ್ವವೇದ, ಆಯುರ್ವೇದ ಇವೇ ಮೊದಲಾದ ಉಪವೇದಗಳಲ್ಲಿ ಪಾರಂಗತ ರಾದವರು, ಕವಿ, ಗಮಕಿ ವಾದಿ ವಾಗ್ಮಿಪ್ರಕರ, ಕಲಾನಿವಹಪ್ರಗಲ್ಭರು, ಎಲ್ಲ ಸಮಯಿಗಳೊಡನೆ ಒಪ್ಪುವ ಪುರೋಹಿತರು, ಮಾನ್ಯರು, ಷಡ್ದರ್ಶನಾಭಿಜ್ಞರು, ಕಾಮಿಕಾದಿ ಅಷ್ಟವಿಂಶತಿಗಣನೆಯಿಂದೊಪ್ಪುವ ತಂತ್ರಕೋವಿದರು, ಮಾಂತ್ರಿಕರು, ವಿವಿಧ ಭಾವಕರು, ದಂಡನಾಥ ಮಾಂಡಳಿಕ ಸಾಮಂತರು, ರಾಜಪುತ್ರರು, ಅಥ ಟಿನ ರಾಯರಾಹುತರು, ನಾಯಕರು, ಗಾಯಕರು, ಸುಭಟರು, ನಟರು, ವಣಿಗ್ವ ರರು, ಗಣಿಕೆಯರು, ಹಾಸ್ಯಮುಖರು ಇವರೇ ಮೊದಲಾದ ಜನಸಮಾಜದವರ ನ್ನೆಲ್ಲ ಕರೆಯಲು ಎಲ್ಲರೂ ಬೇಗನೆ ಬಂದು ನೃಪಸಭೆಯಲ್ಲಿ ಮಂಡಿಸಿದರು. ಹೀಗೆ ನೆರೆಯುವ ಸಭಾಮಧ್ಯದಲ್ಲಿ ನರಸಿಂಹಬಲ್ಲಾಳನು ಕುಮಾರಕುಲಚಿಂತಾಮಣಿ ಯೆನಿಪ್ಪ ಬಿಟ್ಟಿಭೂಪನೊಡನೆ ಸಿಂಹಾಸನಸ್ಥನಾಗಿದ್ದನು. ಈ ವಾರ್ತೆಯನ್ನು ಓರ್ವ ಸಭ್ಯನೊಡನೆ ಪದ್ಮರಸರಿಗೆ ತಿಳಿಸಿದರು. ಅದನ್ನು ಕೇಳಿ ಪದ್ಮರಸರು "ಶಿವ ಶಿವ ಮಹಾದೇವಾ. ಆ ಪಾಪಿ ಕೆಟ್ಟನು ! ಇನ್ನು ಸಂದೇಹವೇಕೆ ? ಈ ರೀತಿಯಾಗಿ ಪತ್ರವನ್ನು ತೂಗ ಹಾಕಿದನೇ ? ಮೊದಲು ಹೀಗೆ ಮಾಡಿದ ವ್ಯಾಸನ ಗತಿ ಏನಾಯಿ ತೆಂಬುದನ್ನು ಈತನು ಕೇಳಲಿಲ್ಲವೇ ? ಆ ಹಾರುವನ ಸೊಕ್ಕನ್ನು ಮುರಿಯುವೆ ನೆ"ಂದು ನುಡಿದು ಪರಶಿವನನ್ನು ವಿಧಿಪೂರ್ವಕವಾಗಿ ಪೂಜಿಸಿ ಪದ್ಮರಸರು ನೃಪನ ಸಭೆಗೆ ಹೊರಡಲು ಅನುವಾದರು. ಆ ಸಮಯದಲ್ಲಿ ಅವರ ಶಿಷ್ಯರೆಲ್ಲಾ ಎದ್ದು ಭಯಭಕ್ತಿಪೂರ್ವಕವಾಗಿ ನಮಸ್ಕರಿಸಿ,"ಮಹಾಮಹಿಮರೇ ಅವಧಾರಿಸಬೇಕು. ಆ ದುರ್ವಾದಿಯನ್ನು ಸೋಲಿಸಲು ತಮ್ಮಂಥಹರೇಕೆ ? ನಿಮ್ಮಡಿಯ ನೆನೆವ ನಾವೇ ಕೊಬ್ಬಿದ ಅರಿವಾದಿಗಳ ಮೂಗನ್ನು ಕತ್ತರಿಸಿ ಅವರ ಗರ್ವವನ್ನು ಮುರಿದು ಬಾಯಿ ಕಟ್ಟಿ ಶಿವಮತಶಕ್ತಿಯನ್ನು ತೋರಿಸುವೆವು. ನಮಗೆ ಅಪ್ಪಣೆ ಕೊಡಿರಿ. ಆ ವಾದಿ

ಯನ್ನು ತಂದು ನಿಮ್ಮ ಪಾದಕಮಲಗಳಿಗೆ ಎರಗಿಸುವೆವು” ಎಂದು ನುಡಿವ ಅಖಿಲ
ಶಾಸ್ತ್ರಸಂಪನ್ನರಾದ ಶಿಷ್ಯರನ್ನು ನೋಡಿ ಪುಳಕಿಸುತ್ತ “ಈ ಅಲ್ಪಕಾರ್ಯಕ್ಕೆ ಪರ
ಶಿವನ ಪಟ್ಟದಾನೆಗಳಾದ ನೀವೆಲ್ಲ ನಾನಿರಲು ಬಳಲುವದೇಕೆ ?” ಎಂದು ಅವರನ್ನು
ಉಚಿತೋಕ್ತಿಯಿಂದ ಮನ್ನಿಸಿ ಮುಂದೆ ಹೊರಡುವ ಸಮಯದಲ್ಲಿ ಪ್ರತಿಮತಾಂಧ
ಕಾರಪ್ರಚಂಡಭಾಸ್ಕರನಾದ ಸುಕುಮಾರಪದ್ಮರಸರು ಸಾಷ್ಟಾಂಗದಿಂ ನಮಿಸಿ
ಕೈಮುಗಿದು ನಿಂದು, “ಸ್ವಮತವಿಸ್ತಾರಕ, ಕುಸಮಯಸಂಹಾರಕ, ವಿಷಮ
ವಿಷಯ ವಿದೂರಕ, ಕೃಪಾಧಾರಕ, ಪರಮ ಚಿತ್‌ಪ್ರಪೂರಕ, ಆಚಾರ್ಯಕುಲಚಕ್ರ
ವರ್ತಿ, ಅಭಿನವದಕ್ಷಿಣಾಮೂರ್ತಿ, ವಾಚಸ್ಪತಿಪ್ರಣುತ ವಾಗ್ವಿಲಾಸಸ್ಫೂರ್ತಿ,
ಶಮಿತಸಂಸಾರ ಜೂರ್ತಿ ನಿಮ್ಮ ಕಟಾಕ್ಷಪ್ರಭಾವದಿಂದ ಆ ವಾದಿಯನ್ನು ಪಂಡಿ
ತರು ಹೊಗಳುವಂತೆ ಗೆದ್ದು ಬರುವೆನು. ನನ್ನನ್ನು ಆದರದಿಂದ ಅಲ್ಲಿಗೆ ಕಳುಹ
ಬೇಕು.” ಎಂದು ಪ್ರಾರ್ಥಿಸಲು ನಸುನಗುತ್ತ “ಯಾವದೊಂದು ಎಡೆಯಲ್ಲಿ ವಾದ
ಉದ್ಭವಿಸಿದರೆ ಅಲ್ಲಿಗೆ ಹೋಗದೆ ಇತರ ಕಾರ್ಯಗಳಲ್ಲಿ ತೊಡಗಿರುವುದು ಮಾಹೇ
ಶ್ವರರಿಗೆ ಉಚಿತವಾದ ಮಾರ್ಗವಲ್ಲ. ಆದ ಕಾರಣ ಸಂತೋಷದಿಂದ ಅಲ್ಲಿಗೆ
ಬಂದು ನೋಡುವೆನು; ನೀನು ಅವನೊಡನೆ ವಾದಮಾಡು.” ಎನ್ನುತ್ತ. ಅಖಿಲ
ಭಕ್ತರ ಪಾದಕಮಲಗಳನ್ನು ನೆನೆಯುತ್ತ, ಶಿವಮಂತ್ರವನ್ನು ಉಚ್ಚರಿಸುತ್ತ ಮುಂದೆ
ನಡೆದರು. ಸಕಲಜನಸೇವ್ಯನಾದ ದೋರಸಮುದ್ರದ ರಾಮಣ್ಣ, ಅಕಲಂಕನೂ
ಉಭಯಕವಿ ಶರಭಭೇರುಂಡನೂ ಎನಿಸಿದ ಕವೀಂದ್ರ ರಾಘವ, ಹುಲಿಗೆರೆಯ
ಮಾಯಿದೇವ ಪುರಾಣಭಟ್ಟರು, ಗುರುಭಕ್ತ ಕಾಮಣ್ಣ, ಅಭಿಯಾತಿತಿಮಿರಕುಲ
ಸಪ್ತಾಶ್ವವಿಶ್ವಣ್ಣ, ಉದ್ಧತ ಶಾಸ್ತ್ರಿನಿಕರಭಂಜನನಾಗನಾಥಾರ್ಯ, ಅತಿರಸಿಕ
ಕರ್ಣಾಭರಣ ಬುಧವರನೂ ಪರಮ ಪದ ವಾಕ್ಯ ಪ್ರಮಾಣಜ್ಞನೂ ಆದ ದೇವರಸ
ಪಂಡಿತ, ಅನೇಕಕಲಾವಿದನಾದ ಹಂಪೆಯ ರಾಮಿತಂದೆ, ಜಗದಾರಾಧ್ಯನಾದ ನಾಗಿ
ದೇವ, ಅಷ್ಟ ಭಾಷಾಕವೀಶ್ವರನಾದ ಶಿವದಾಸ, ಇಂತಹ ಶೈವವಿದ್ವಜ್ಜನರು ಉದಾ
ತ್ತಾನುದಾತ್ತ ಸ್ವರಗಳಿಂದ ವೇದವನ್ನು ಓದುತ್ತ ಮೂವತ್ತೆರಡು ಉಪನಿಷತ್ತು
ಗಳನ್ನು ಅರ್ಥಯಿಸುತ್ತ ವೇದಗಳಿಗೆ ಭಾಷ್ಯವನ್ನು ಮಾಡುತ್ತ ಪುರಾಣಗಳನ್ನು
ಹೇಳುತ್ತ, ಆಗಮಮತಪ್ರಶಂಸೆಯನ್ನು ಮಾಡುತ್ತ, ಶಾಸ್ತ್ರಗಳನ್ನು ಹೇಳುತ್ತ,
ಯೋಗ ವ್ಯಾಕರಗಳನ್ನು ಪಠಿಸುತ್ತ, ತರ್ಕವನ್ನು ವಿಸ್ತರಿಸುತ್ತ, ನವರಸಗಳ
ವ್ಯಾಪಾರವನ್ನು ಭಾವಸಂಚಯುವನ್ನು ಅವಿಕಲಾರ್ಥವಿಭೇದವನ್ನು ದಶಪ್ರಾಣ
ಗಳನ್ನು ಅಲಂಕೃತಿಯನ್ನು ಉಚ್ಚರಿಸುತ್ತ ನಾಂದಿ, ಆರ್ಯ, ಸಖ ಸಖಿ ನಾಯಕ
ನಾಯಕಿ ಈ ಪ್ರಪಂಚದಿಂದ ಕೂಡಿದ ನಾಟಕವನ್ನು ಹೇಳುತ್ತ ಅಷ್ಟಾದಶವರ್ಣನ
ಸಹಿತವಾದ ಕಾವ್ಯವನ್ನು ಉಸುರುತ್ತ ರಾಗ, ತಾಳ, ಲಯ, ನೃತ್ಯಾದಿ ರೀತಿಗಳ

ಲಕ್ಷ್ಯ ಲಕ್ಷಣವನ್ನು ವಿವರಿಸುವಂತೆ ಭರತನಾಟ್ಯವನ್ನೋದುತ್ತ, ಇನ್ನುಳಿದ ಕಲೆಗಳ ನೆಲೆಯನ್ನರಿದು ವಿವರಿಸುತ್ತ ನಡೆದರು. ಶ್ರೀರುದ್ರ ವ್ಯಾಸಾಷ್ಟಕ ಶಿವಸಹಸ್ರ ನಾಮಾವಳಿ ಬ್ರಹ್ಮಾಷ್ಟಕ ಮಹಿಮ್ನ ಉದ್ಭಟಸ್ತುತಿ, ಬಸವೇಶ್ವರಾದಿಗಳ ಗೀತ, ಹರೀಶಾದ್ಯಖಿಲ ಶಿವೈಕ್ಯರ ಗದ್ಯಪದ್ಯ ಪ್ರಬಂಧ ಇವನ್ನೆಲ್ಲ ಅರಿದೋದುತ್ತ ಶಿಷ್ಯರೂ ಭಕ್ತರೂ ಬರಲು ಹಿರಿಯುರು ಹರಸಿದರು. ಪರಿಜನ ಪುರಜನರು "ಉಘೇ ಚಾಂಗು ಜಯ ಜೀಯ" ಎಂದು ಘೋಷಿಸಿದರು. ತಾಳ ಲಯ ಸಂಗೀತ ವಾದ್ಯಯತಿಗಳ ಗತಿಗೆ ತಪ್ಪದೆ ನರ್ತನಮಾಡುವವರು, ವ್ಯಾಸಹಸ್ತ ವೃಷಭಧ್ವಜಗಳನ್ನು ಹಿಡಿದವರು, ವೀರಗಣಂಗಳು, ಛತ್ರಚಾಮರ ಶಂಖ ಘಂಟೆ ಕಹಳೆ ಡಿಂಡಿಮ ಮೊದಲಾದ ವಾದ್ಯಪ್ರಕರ ಇವೆಲ್ಲವುಗಳಿಂದ ಆ ಮೆರೆವಣಿಗೆ ಶೋಭಿಸುತ್ತಿತ್ತು. ಇಂತಹ ಮೆರೆವಣಿಗೆಯಿಂದ ಪರಿವೃತನಾಗಿ ಪೌರಭಕ್ತಕುಲಾಂಗನೆಯರಿತ್ತುವ ಆರತಿಗಳನ್ನು ಕೈಕೊಳುತ್ತ ಒಳ್ಳೆಯ ವೈಭವದಿಂದ ಗುರುಕುಲಾಗ್ರಣಿ ಪದ್ಮಣಾರ್ಯನು ಸುತನೊಡನೆ ಅರಮನೆಯ ಬಾಗಿಲವನ್ನು ಪ್ರವೇಶಮಾಡುವ ಸಮಯದಲ್ಲಿ ಮುಂಗುಡಿಯವರು "ದೇವಾ, ಇಲ್ಲಿ ವಾದಿ ಕಟ್ಟಿದ ಪತ್ರವಿರುವದು" ಎಂದು ಪ್ರಾರ್ಥಿಸಲು ಕಲ್ಪಾಂತಕಾಲದ ಹರನ ಹಣೆಗಣ್ಣಂತೆ ಉರಿದೆದ್ದು "ಅದನ್ನು ಕಿತ್ತುಬಿಸುಡಿರಿ" ಎಂದೆನಲು ಅವರು ಪರವಾದಿಯ ನಾಲಗೆಯನ್ನು ಕೀಳುವಂತೆ ಆ ಓಲೆಯನ್ನು ಕಿತ್ತು ಬಿಸುಟರು. ಕೂಡಲೆ ಆ ವಾದಿ ಬಂದು ನಿಂತು "ನಾನು ಕಟ್ಟಿದ ಈ ಮಹಾಲೇಖವನ್ನು ನನ್ನನ್ನು ಕೇಳದೆ ಏಕೆ ಕಿತ್ತೆ ಹೇಳು. ಎಲೆಲೆ ಭಸ್ಮಧಾರಿ" ಎಂದೆನ್ನಲು, "ನೀನು ವ್ಯಾಸಭೃತ್ಯ ನಾನು ನಂದೀಶನ ಕಿಂಕರ. ನಮ್ಮನ್ನು ನೀನು ಅರಿತಿಲ್ಲವೇ ? ನಿನ್ನ ದೈವವು ಅದಾರ್ಗೆ ತೊತ್ತಾಗಿ ಬೆಸಕೆಯ್ವುದೋ ಅಂಥ ಶಂಕರನ ಘನತೆಯನ್ನು ಎಲ್ಲರೂ ಮೆಚ್ಚುವಂತೆ ನೃಪಸಭೆಯಲ್ಲಿ ಹೇಳುವೆನು ನಡೆ" ಎನುತ್ತ ಆನಂದದಿಂದ ಬರುತ್ತಿರಲು ನೃಪತಿಯು ಇದಿರ್ವಂದು ವಂದನೆ ಮೊದಲಾದ ಸತ್ಕಾರಗಳನ್ನು ಮಾಡಿ ಉನ್ನತಾಸನವನ್ನು ಕೊಟ್ಟನು. ಶಿವಗಣ, ತನ್ನ ಸುತ ಇವರೊಡನೆ ಗುರುವರನು ಮೂರ್ತಿಗೊಂಡನು. ತನ್ನ ನಿಯೋಗದೊಡನೆ ಅರಸನು ಸಿಂಹಪೀಠದಲ್ಲಿ ಒಪ್ಪಿದನು. ವಾದಿಕುಲಾನ್ವಿತದಾಸನು ಅವರ ಸಮ್ಮುಖದಲ್ಲಿದ್ದನು.

ಹತ್ತನೆಯ ಸಂಧಿ

ತ್ರಿಭುವನತಾತನ ಪರಾಜಯ

ನೃಪನ ಸಭೆ ಕಿಕ್ಕಿರಿದು ತುಂಬಿದ್ದಿತು. ಕಟ್ಟಿಗೆಕಾರರು ಎಲ್ಲರ ಸದ್ದನ್ನು ಪ್ರತಿಬಂಧಿಸಲು ಅದು ತೆರೆಗಳಿಲ್ಲದ ಸಮುದ್ರದಂತೆ ಶೋಭಿಸುತ್ತಿತ್ತು. ಆ ಸಮಯದಲ್ಲಿ ವಾದಿಯಾದ ತ್ರಿಭುವನತಾತನು ಎದ್ದು "ಹರಿಯು ಪರವಸ್ತುವೆಂದು ನಾನು ಬರೆದು ಕಟ್ಟಿಸಿದ ಓಲೆಯನ್ನು ಈತನು ಪರೀಕ್ಷಿಸದೆ ಬಿಡಿಸಿದನು ಹೆಬ್ಬಾಗಿಲಲ್ಲಿ ತಡೆದರೆ ಸಭಾಮಧ್ಯದಲ್ಲಿ ವಿವರಿಸುವೆನೆಂದು ಬಂದಿರುವನು. ಆತನ ಗರ್ವವೆಷ್ಟೆಂಬುದನ್ನು ಅರಿಯುವೆನು. ವಾದದಲ್ಲಿ ಸೋತವನು ಸೊಕ್ಕನ್ನುಡುಗಿ ತನ್ನ ಮತವನ್ನು ಬಿಟ್ಟು ಗೆದ್ದವನಿಗೆ ಶಿಷ್ಯನಾಗುವಂತೆ, ಉಭಯರ ಒಪ್ಪಿಗೆಯಿಂದ ಈ ಭಾಷೆಯನ್ನು ಬರೆಯಿಸಬೇಕು" ಎಂದು ನುಡಿದನು. ಅರಸನು ಅದಕ್ಕೆ ಒಡಂಬಟ್ಟು ಕೆರೆಯ ಪದ್ಮರಸಾರ್ಯರ ಮುಖವನ್ನು ಈಕ್ಷಿಸಿದನು. ಪದ್ಮರಸರು ಅದಕ್ಕೊಡಂಬಟ್ಟೆವೆನ್ನಲು ಆ ಭಾಷೆಗಳನ್ನು ಓಲೆಯಲ್ಲಿ ಬರೆಯಿಸಿದರು. ಆ ಮೇಲೆ ಪದ್ಮರಸರು ತಾವು ಹರಿಸಿದ ವಾದಿಯ ಓಲೆಯನ್ನು ಕೊಡಿಸಿದರು. ಭೂಕಾಂತನು ಅದನ್ನು ಓದಿಸಲು ಸತ್ಯಂ ಸತ್ಯಂ ಸತ್ಯಂ 'ನ ದೇವಃ ಕೇಶವಾತ್ ಪರಃ' ಇದು ವ್ಯಾಸಮತವು. ಇದನಲ್ಲೆಂಬವಗೆ ಈ ಓಲೆಯನ್ನು ಕಟ್ಟಿದೆ ಎಂದಿತ್ತು ಅದರಲ್ಲಿ. ಇಷ್ಟು ಓದಿದಮೇಲೆ ಆ ವಾದಿ ಎದ್ದು ಮತ್ತಿಂತೆಂದನು "ವೇದ ಪುರಾಣ ಶಾಸ್ತ್ರಗಳನ್ನು ಪರೀಕ್ಷಿಸಲು ವಿಷ್ಣುವೇ ಮೋಕ್ಷದಾತನು, ಜ್ಞಾನದಾತನು, ಸರ್ವಜನಕನು, ಸುಕರನು, ಅಯೋನಿಜನು, ಅಚ್ಯುತನು, ವೇದವೇದ್ಯನು. ಆತನ ಚರಣದಲ್ಲಿ ಗಂಗೆ ಹುಟ್ಟಿರುವಳು. ಆತನು ಭಂಗರಹಿತನು, ಸ್ವತಂತ್ರಚರಿತನು. ಆತನೇ ಧ್ಯೇಯ, ಆತನೇ ಜ್ಞೇಯ. ಆದುದರಿಂದ ಹರಿಯೇ ಪರತತ್ವವು." ಎಂದು ನುಡಿಯಲು ಕೇಳಿ ಶಿವಶಿವಾಯೆನ್ನುತ್ತ ಗುರುವರನು ಆ ವಾದಿಗೆ ಉತ್ತರ ಕೊಡಲು ಉಜ್ಜುಗಿಸುವ ಸಮಯದಲ್ಲಿ ಸ್ವಾಮಿಪರ್ಯಂತವೇಕೆ ಈ ವಾದ ? ಎಂದು ಘರ್ಜಿಸಿ ಸುಕುಮಾರ ಪದ್ಮರಸರು ತಾವೇ ಎದ್ದು ದಾಮೋದರನ ದಾಸನನ್ನು ನೋಡಿ "ನಿನ್ನ ಎಲ್ಲ ಪ್ರಶ್ನೆಗಳಿಗೂ ಕ್ರಮದಿಂದ ನೆರೆದ ಎಲ್ಲ ಸಾಮಾಜಿಕರೂ ಹೌದೆನ್ನುವಂತೆ ಉತ್ತರಕೊಡುವೆನು" ಎಂದು ಹೇಳಿ ಉತ್ತರಕೊಡಲಾರಂಭಿಸಿದರು.

೧. ಹರಿಯೇ ಪರತತ್ವವೆಂಬುದನ್ನು ಖಂಡಿಸಿ ಶಿವಪಾರಮ್ಯವನ್ನು ಪ್ರತಿಷ್ಠಾಪಿಸಿದುದು

ಆದಿಪುರಾಣವಾದ ಸ್ಕಾಂದದಲ್ಲಿ ಉತ್ಪಾದಿತವಾದ ಕಾಳಿಕಾಖಂಡದಲ್ಲಿ ತೃಣಬಿಂದುವೆಂಬ ಮುನಿಯು ಅನಿಲಾದ ಋಷಿಯಲ್ಲಿಗೆ ಬಂದು "ಭಗವಾನೆನಿಪ ಸರ್ವವಿತ್ತುವೇ, ಅಜ ಹರಿ ಈಶ್ವರರಲ್ಲಿ ಸಕಲಗುಣೋತ್ಕರ್ಷನಾರು, ಭೋಗಮೋಕ್ಷಗಳನ್ನು ಕೊಡುವವನಾರು ತಿಳಿಸಿ ಹೇಳು" ಎಂದು ಕೇಳಲು, ಒಳ್ಳೇದು ನೀನು ಕೇಳಿದ ಈ ಪ್ರಶ್ನೆಗೆ ವಿವರವಾಗಿ ಉತ್ತರಿಸಲು ಬ್ರಹಸ್ಪತಿಗೂ ಅಸಾಧ್ಯ. ಆದರೂ ನಿಶ್ಚಯಿಸಿ ಹೇಳುವೆನು.

ಒಮ್ಮೆ ನೈಮಿಷಾರಣ್ಯದಲ್ಲಿ ವ್ಯಾಸಮುನಿಯು ಮದಾಂಧನಾಗಿ ವಿಷ್ಣುವಿಗಿಂತ ಅಧಿಕವಾದ ದೈವವಿಲ್ಲೆಂದು ನುಡಿಯಲು ಶಿವಭಕ್ತರು ಕೆಂಗಣ್ಣಿಳಿಂದ ಈ ಮಾತನ್ನು ಕಾಶಿಗೆ ಬಂದು ನುಡಿ ಎಂದರು. ಆತನು ಕಾಶಿಗೆ ಬಂದು ಶಿವನ ಮುಂದೆ ನಿಂದು ಮೇಲಕ್ಕೆ ತೋಳೆತ್ತಿ ಗೋವಿಂದನನ್ನು ನುತಿಸುತ್ತ ವಿಷ್ಣುವಿನಿಂದ ಅಧಿಕ ದೈವವಿಲ್ಲೆಂದು ನುಡಿಯಲು ನಂದಿಯು ಆ ಭುಜದ್ವಯವನ್ನು ಅಲ್ಲಿಯೇ ನಿಲ್ಲಿಸಿಬಿಟ್ಟನು. ಆಗ ಮುನಿಯು ಚಿಂತಾಕ್ರಾಂತನಾಗಿ ವಿಷ್ಣುವನ್ನು ಮೊರೆಹೊಗಲು ವಿಷ್ಣುವು ಆತನಿಗೆ ಇಂತೆಂದನು : "ಎಲೈ ದುರ್ಮತಿಯುತ ವ್ಯಾಸನೇ, ಅಜ್ಞಾನಬಲದಿಂದ ನೀನು ಹೀಗೆ ನುಡಿಯತಕ್ಕುದೇ ? ಎನಗೆ ಗುರುಸ್ವಾಮಿಯಾದ ಶಿವನನ್ನು ನಿಂದೆಗೆಯ್ದು ನನ್ನನ್ನು ಸ್ತುತಿಸುವರೇ ? ಅಖಿಲಭೂತಕುಲಕೆ ಶಿವನೇ ಗತಿ ಮತಿ. ಯಜ್ಞಕ್ಕೆ ಕರ್ತೃ ಇಂದ್ರ; ವೇದಕರ್ತೃ ಬ್ರಹ್ಮ; ಜಗತ್ಕರ್ತೃ ನಾನು; ಎನಗೆ ಆ ಮಹೇಶ್ವರನೇ ಕರ್ತೃ. ಆ ದೇವದೇವನಿಗೆ ಕರ್ತೃವಿಲ್ಲ, ದೇವಕುಲಕೆ ನಾನು ದೇವ; ಮಹಾದೇವನು ನನಗೆ ದೇವನು. ಶಿವನ ಲಿಂಗವನ್ನು ದೇವ ದನುಜರು ಪೂಜಿಸಿರುವರು; ಆ ಶಿವನಿಂದ ಪೂಜ್ಯರಾದವರು ಇನ್ನಾರೂ ಇಲ್ಲ. ಕಾಶಿಯಲ್ಲಿ ಇಷ್ಟಸಿದ್ಧ್ಯರ್ಥವಾಗಿ ನನ್ನ ಮತ್ತು ಬ್ರಹ್ಮನ ಹೆಸರಿನಿಂದ ಸ್ಥಾಪಿಸಿದ ಕೃಷ್ಣೇಶ್ವರ ಮೊದಲಾದ ಲಿಂಗಗಳುಂಟು. ಹೀಗಿರಲು ಶಿವನಿಗೆ ಅಧಿಕವುಂಟೆಂಬುದು ವಿವೇಕವಲ್ಲ

ಎಲೋ ವ್ಯಾಸ, ಇನ್ನೂ ಹೇಳುವೆನು ಕೇಳು : ನಾನು 'ಓಂ ನಮೋವಾಸುದೇವಾಯ ಶಿವಶಾಸ್ತ್ರಾವತಾರಿಣೇ ಶಿವಲಿಂಗಾರ್ಚನವ್ಯಗ್ರಚೇತಸೇ ಶಿವಜನ್ಮನೇ' ಎಂದು ಪ್ರಾರ್ಥಿಸುವವರಿಗೆ ಸುಲಭನಾಗುವೆನು. ಹೀಗೆ ಶಿವಭಕ್ತನೆಂದಲ್ಲದೆ ಬೇರೆ ಯಾವ ರೀತಿಯಿಂದ ನುತಿಸಿದರೂ ನಾನು ಹೊರಳಿಸಹ ನೋಡೆನು. ಆದುದರಿಂದ ನನಗೆ ನೀನು ಶ್ರೇಯಸ್ಸನ್ನು ಕೋರುವದಾದರೆ ಮೊದಲು ಆ ಶಂಭುವನ್ನು ಮೊರೆ

ಹೊಗು." ಎಂದು ನುಡಿದು ವಿಷ್ಣು ಅದೃಶ್ಯನಾದನು. ವ್ಯಾಸನು ಭೀತಿಯನು ತಾಳಿ ಬ್ರಹ್ಮ ವಿಷ್ಣು ಮೊದಲಾದ ದೇವತೆಗಳನ್ನು ಬಿಟ್ಟು ಶಿವಭಕ್ತನಾಗಿ ಅಷ್ಟಕದಿಂದ (ವ್ಯಾಸಾಷ್ಟಕವೆಂದು ಪ್ರಸಿದ್ಧವಿದೆ.) ಶಿವನನ್ನು ಭಕ್ತಿಪುರಸ್ಸರವಾಗಿ ಸ್ತುತಿಸಿದನು. ತತ್‌ಕ್ಷಣದಲ್ಲಿಯೇ ಶಿವನು ಪ್ರತ್ಯಕ್ಷನಾಗಿ "ಎಲೈ ಮುನಿಯೇ, ಇಂದು ಮೊದಲಾಗಿ ಇಂಥ ಹುಡುಗಾಟಕ್ಕೆ ಕೈಹಾಕಬೇಡ. ಸೃಷ್ಟಿ ಸ್ಥಿತಿ ಸಂಹಾರಕರ್ತನು, ಸರ್ವ ಪ್ರಾಣಿಗಳಿಗೆ ಮೋಕ್ಷವನ್ನು ಕೊಡುವವನು, ಸರ್ವಪತಿ ಸರ್ವಶಕ್ತನು, ನಾನೇ. ಹಲವೇನು ? ನನ್ನ ದೇಹದ ಬೆವರಹನಿಯಲ್ಲಿ ಬ್ರಹ್ಮ ವಿಷ್ಣು ಮೊದಲಾದ ದೇವತೆಗಳೊಗೆದಿರುವರು. ನನ್ನ ಕೊರಳೊಳಗಿನ ರುಂಡಮಾಲೆ ಕರ ಹಾಗೂ ಕಟಿಗಳಲ್ಲಿ ಅಚ್ಯುತನು ಯುಗಯುಗಗಳಲ್ಲಿ ಪಡೆದ ತನುಗಳಿವೆ. ನೀನು ದೇವನೆಂಬವನ ಪರಿಭವದ ಪರಿಯಿದು ! ಹರ್ಯಜ ಮೊದಲಾದ ಚರಾಚರಸೃಷ್ಟಿಯೆಲ್ಲಾ ಈ ನನ್ನ ಲಿಂಗದಿಂದಲೇ ಉದ್ಭವಿಸಿದೆ." ಎಂದು ಹೇಳಿ ನಂದೀಶನಿಂದ ಆತನ ಭುಜದ್ವಯಗಳನ್ನು ಬಿಡಿಸಿದನು. ವ್ಯಾಸಮುನಿಯು ಅತಿ ಭಕ್ತಿಯಿಂದ ಕಾಶಿಯಲ್ಲಿ ವ್ಯಾಸೇಶ್ವರಲಿಂಗವನ್ನು ಪ್ರತಿಷ್ಠಾಪಿಸಿ ತಾನು ರಚಿಸಿದ ಅಷ್ಟಕಗಳಿಂದ ಪ್ರಾರ್ಥಿಸಿ ಕೃತಾರ್ಥತೆಯನ್ನು ಪಡೆದನು. ಪ್ರಸಿದ್ಧವಾದ ಈ ವ್ಯಾಸಾಷ್ಟಕವನ್ನು ಪಠಿಸುವವನು ಶಿವಪುರವನೆಯ್ದಿ ಸುಖದಿಂದಿರುವನು. ಆದುದರಿಂದ ಸತ್ಯಮಿದು ಸತ್ಯಮಿದು ಸತ್ಯಮಿದು ಮೃತ್ಯುಂಜಯಂಗಧಿಕ ದೈವವಿಲ್ಲೆಂಬುದು. ಎಂದು ಅನಿಲಾದ ಋಷಿಯು ತೃಣಬಿಂದುವಿಗೆ ಶಿವಪಾರಮ್ಯವನ್ನು ಮನಗಾಣಿಸಿಕೊಟ್ಟನು. ಎಂಬ ಕಥೆಯನ್ನು ವಿವರಿಸಿದನು.

ಬಳಿಕ ಕುಮಾರಪದ್ಮರಸರು

ವಿಷ್ಣ್ವಾದಿ ದೇವತೆಗಳು ಅಧಿಕವೆಂದು ನುಡಿವವರು ತಲೆ ಕೆಳಗೆ ಕಾಲು ಮೇಲಾಗಿ ನರಕಾಂಬುಧಿಯನ್ನು ಹೊಗುವರು. (ಸೂತಸಂಹಿತೆ).

ಶಿವನಿಗೆ ಇತರ ದೈವವು ಸಮವೆಂದು ನುಡಿವವನು ಅಂತ್ಯಜನಿಗಿಂತಲೂ ಅಂತ್ಯಜ (ಶಿವರಹಸ್ಯ).

ಬ್ರಹ್ಮ ವಿಷ್ಣುಗಳು ಶಿವನಿಗೆ ಸಮಾನರೆಂದು ನುಡಿವವರು ದುರಾತ್ಮರು. ಅಂಥವರ ಮನೆಯಲ್ಲಿ ಜ್ಯೇಷ್ಠೇ ನೀನು ಸದಾ ವಾಸವಾಗಿರು ಎಂದು ವಿಷ್ಣು ಹೇಳಿದುದುಂಟು (ಲೈಂಗ್ಯಪುರಾಣ).

ಗುಥವು ವದನಕ್ಕೆ ಹೇಗೆ ಸಾಮ್ಯನಲ್ಲವೋ ಅಂತೆ ಶಿವನಿಗೆ ಉಳಿದ ದೇವತೆಗಳು ಸಮವಲ್ಲ. ಎಲ್ಲ ದೇವತೆಗಳು ಒಟ್ಟುಗೂಡಿದರೂ ಶಿವನಿಗೆ ಸಮಾನರಲ್ಲ (ಸೂತಗೀತೆ).

ಶಿವನಿಗೆ ಬ್ರಹ್ಮಾದಿ ದೇವತೆಗಳು ಶಿವವಿದ್ಯೆಗೆ ವೇದಾದಿಗಳು ಸಮವೆಂದು ಭಾವಿಸುವವನು ಶ್ವಪಚನಿಗಿಂತಲೂ ಅಧಮ (ಸ್ಕಾಂದ ಪುರಾಣ).

ಚತುರ್ವೇದಗಳನ್ನು ಬಲ್ಲವನಾದರೂ ಶಿವಭಕ್ತಿಯಿಲ್ಲದವನು ವೇದಭಾರವನ್ನು ಹೊತ್ತ ಕತ್ತೆಯೇ ಹೊರತು ಬ್ರಾಹ್ಮಣನಲ್ಲ (ಸ್ಕಾಂದ ಪುರಾಣ).

ಶಿವನು ಸಕಲಕ್ಕೂ ರಾಜಾಧಿರಾಜ. ಅಚ್ಯುತ ಮೊದಲಾದ ಇತರ ದೇವತೆಗಳು ಆತನ ಸೇವಕರು (ಪಾರಾಶರ).

ಯುಗಾಂತ ಕಾಲದಲ್ಲಿ ರುದ್ರನೊಬ್ಬನೇ ತೊಳತೊಳಗುತ್ತಿದ್ದನು. ಆಗ ವಿಷ್ಣು ಬ್ರಹ್ಮ ಸೂರ್ಯ ಅಗ್ನಿ ತಾರಿಕೆ ಯಾವವೂ ಇರಲಿಲ್ಲ (ಯಜುರ್ವೇದ).

ರುದ್ರನು ವಿಷ್ಣುವಿಗಿಂತ ಅಧಿಕ (ಋಗ್ವೇದ).

ಪೂರ್ವಜನ್ಮದ ಪಾಪದ ಫಲದಿಂದ ಹರಿ ಅಧಿಕನೆಂಬುವ ದುರ್ಬುದ್ಧಿ ಹುಟ್ಟುವುದು. ಆ ಬುದ್ಧಿಯುಳ್ಳವರು ನರಕಕ್ಕಿಳಿಯುವರು (ಸೂತಸಂಹಿತೆ).

ರುದ್ರನು ವಿಶ್ವಕ್ಕೆ ಅಧಿಕನು, ಸರ್ವಸಾಕ್ಷಿಕನು, ಬ್ರಹ್ಮಾದಿಗಳ ಜನಕನು, ವಿಷ್ಣು ಬ್ರಹ್ಮ ಮೊದಲಾದ ದೇವತೆಗಳು ಅವನನ್ನು ಅರ್ಚಿಸುವರು (ಮಾನವ ಪುರಾಣ, ಸೂತಸಂಹಿತೆ).

ಬ್ರಹ್ಮ ವಿಷ್ಣು ಇಂದ್ರಾದಿಗಳನ್ನು ಸೃಜಿಸಿದ ಪ್ರಭುವು ಅವ್ಯಯನು. ಅವನಿಗೆ ಬ್ರಹ್ಮಾದಿ ಪಿಶಾಚಾಂತ್ಯ ಎಲ್ಲರೂ ಸೇವಕರು (ವಾಯವೀಯ ಸೌರಪುರಾಣ).

ಬ್ರಹ್ಮ ವಿಷ್ಣು ಇಂದ್ರಾದಿಗಳನ್ನು ಹುಟ್ಟಿಸಿದವನು, ಪೊರೆವವನು, ಮಹಾದೇವನು. ದೇವತೆಗಳು ಅವನಲ್ಲಿ ಆಶ್ರಿತರಾಗಿ ಬಾಳುವರು. ಆ ದೇವನೇ ಸಚರಾಚರ ವ್ಯಕ್ತ ತೇಜನು, ದೇವತತಿಗೆ ಏಕೈಕದೇವನು; ಈ ಅಖಿಳವೂ ಅವನನ್ನು ಸೇವಿಸುವುದು. (ಶ್ವೇತಾಶ್ವತರ, ಯಜುಸ್ಸು, ವಾಯವೀಯಸೌರ, ವಾಜಸನೀಯ).

ಹೀಗೆ ಹಲವು ಶ್ರುತಿ ಸ್ಮೃತಿ ಶಾಸ್ತ್ರ ಪುರಾಣಗಳ ಆಧಾರಗಳನ್ನು ತೋರಿಸಿ ಶಿವನೇ ಪರಮನೆಂಬುದನ್ನು ಪಮ್ಮರಸರು ಪ್ರತಿಷ್ಠಾಪಿಸಿದರು.

"ವ್ಯಾಸನಮತವು ನನ್ನದು ಎಂದು ಅಹಂಕರಿಸಿ ಬಂದು ಪತ್ರ ಕಟ್ಟಿದೆ. ವಿಷ್ಣುವೇ ಪರಮನೆಂದ ದೋಷಕ್ಕೆ ಅವನ ತೋಳು ನಂದಿಯಿಂದ ಮೋಟಾದುದನ್ನೂ ವಿಷ್ಣುವು ಅವನಿಗೆ ಹೇಳಿದುದನ್ನೂ ಅವನು ಹೇಸಿ ಆ ಹರಿಯನ್ನು ಬಿಟ್ಟು ಶಿವನನ್ನು ಭಜಿಸಿ ಬದುಕಿದುದನ್ನೂ ಅಲಕ್ಷಿಸಬೇಡ. ಪರವು ಪರವೆಂದು ಹೇಳುವ ಸತ್ಯರಿಗೆ ಸೋಲೇ ? ತಾನೆ ಪರವಾದವನು ತನಗೆ ಮಹೇಶನು ಗುರುವೆಂದು ಹೇಳುವನೇ ? ಪರವಾದುದನ್ನು ಶ್ರುತಿ ಸ್ಮೃತಿ ಪುರಾಣಾದಿಗಳು ಶಿವನಿಗೆ ಸರಿಯಲ್ಲವೆಂದು ಹೇಳಬಲ್ಲುವೇ ? ನಿನ್ನ ಮೂಢತೆಯನ್ನೇನು ಹೇಳಲಿ, ವಿಷ್ಣುವು ಪರನೆಂಬ ಮಾತು ಸಲ್ಲದು. ಅದನ್ನು ಬಿಟ್ಟು ಬಿಡು" ಎಂದು ವಾದಿಗೆ ಹೇಳಿದರು.

೨. ವಿಷ್ಣುವು ಮೋಕ್ಷದಾತನೆಂಬುದನ್ನು ಖಂಡಿಸಿ ಶಿವನೇ ಮೋಕ್ಷಪ್ರದನೆಂಬುದನ್ನು ಪ್ರತಿಷ್ಠಾಪಿಸಿದುದು.

ಎಲೇ ವಾದಿಯೇ, ಹರಿಯೇ ಮೋಕ್ಷದಾತನೆಂಬ ನಿನ್ನುಕ್ತಿಗೆ ಉತ್ತರವನ್ನು ಕೇಳು. ಪೂರ್ವದಲ್ಲಿ ಸತ್ಯಸಂಧನೆಂಬ ಒಬ್ಬ ದ್ವಿಜನು ಪ್ರತಿದಿನ ವಿಷ್ಣುವನ್ನು ಅತ್ಯಂತ ಭಕ್ತಿಯಿಂದ ಪೂಜಿಸುತ್ತಿದ್ದನು. ಹೀಗಿರುವಾಗ ಒಂದು ದಿನ ವಿಷ್ಣುವು ಅವನಿಗೆ ಪ್ರತ್ಯಕ್ಷನಾದನು. ಸತ್ಯಸಂಧನು ಕೃತಕೃತ್ಯನಾದೆನೆಂದೆನುತ್ತ ಭಕ್ತಿಯಿಂದೆರಗಿ ತನಗೆ ಮೋಕ್ಷವನ್ನು ಕೊಡಬೇಕೆಂದು ಬೇಡಿದನು. ಆಗ ವಿಷ್ಣುವು ಸತ್ಯೋಕ್ತಿಯಿಂದ " ಮೋಕ್ಷವನ್ನು ಕೊಡುವವನು ಪರಶಿವನು; ನಾನಲ್ಲ. ಸಕಲ ಜೀವಿಗಳಿಗೆ ಭೋಗ ಮೋಕ್ಷಾನಂದ ಮಾಡುವವನು ಈಶನು. ಅವನ ಆಜ್ಞೆಯಿಂದಲೇ ನನಗೂ ಬ್ರಹ್ಮಾದಿಗಳಿಗೂ ಭುಕ್ತಿ ಮುಕ್ತಿಗಳು ಲಭಿಸುವವು ನಾಮದಿಂದಲೂ ಅರ್ಥದಿಂದಲೂ ಅವನೇ ಮಹಾದೇವನು. ಅವನನ್ನುಳಿದು ನಾವೆಲ್ಲ ಬರಿ ಹೆಸರ ದೇವತೆಗಳು ಈ ಮಾತು ಸತ್ಯ. ಆದುದರಿಂದ ಶಿವನನ್ನು ಭಜಿಸು. ಆತನು ಮೋಕ್ಷವನ್ನು ಕೊಡುವನು" ಎಂದು ನುಡಿದು ವಿಷ್ಣು ಅಂತರ್ಧಾನನಾದನು. ಸತ್ಯಸಂಧನು ಅದರಂತೆ ಶಿವನನ್ನು ಪೂಜಿಸಿ ಮೆಚ್ಚಿಸಿ ಮೋಕ್ಷವನ್ನು ಪಡೆದನು. (ಯಜ್ಞವೈಭವ ಖಂಡದಲ್ಲಿ ಸೂತನು ಶೌನಕಾದಿಗಳಿಗೆ ಹೇಳಿದುದು).

ಕಾಂಚಿಯ ದೊರೆ ಪ್ರಭಾಕರನೆಂಬುವನು ಅತ್ಯಂತ ಭಕ್ತಿಯಿಂದ ವಿಷ್ಣುವನ್ನು ಪೂಜಿಸುತ್ತಿದ್ದನು. ಒಮ್ಮೆ ಮಾಧವನು ಆತನಿಗೆ ಪ್ರತ್ಯಕ್ಷನಾಗಿ ನಿನ್ನಿಷ್ಟ

ವೇನೆಂದು ಕೇಳಲು ನೃಪತಿಯು ತನಗೆ ಮೋಕ್ಷವನ್ನು ದಯಪಾಲಿಸಬೇಕೆಂದು ಕೇಳಿದನು. ಆಗ ವಿಷ್ಣುವು "ಇದು ನನ್ನಿಂದ ಸಾಧ್ಯವಿಲ್ಲ. ಮೋಕ್ಷವು ಶೈವವ್ರತದಿಂದ ಪ್ರಾಪ್ತವಾಗುವುದು, ಇಲ್ಲವೆ ಕಾಶಿಯಲ್ಲಿ ಮರಣಹೊಂದಿದರೆ ದೊರೆಯುವುದು" ಎಂದು ನುಡಿದು ಮರೆಯಾದನು. ಆ ನರಪತಿಯು ನಾಚಿ ಹರಿಯನ್ನು ಬಿಟ್ಟು ಶಿವನನ್ನು ಪೂಜಿಸಿ ಮುಕ್ತಿಯನ್ನು ಪಡೆದನು (ಕಾಶೀಖಂಡ).

ಶಿವಪ್ರಸಾದದಿಂದಲೇ ಪುಷ್ಟಿ ಘನಮುಕ್ತಿಗಳು ದೊರೆಯುವವು. ಅದರ ಹೊರತು ಭುಕ್ತಿ ಮುಕ್ತಿಗಳು ದೊರೆಯುವುದಿಲ್ಲ (ಜ್ಞಾನಯೋಗಖಂಡ).

ಶಿವಪ್ರಸಾದದ ಕಣದ ಒಂದಂಶದಿಂದ ಹರಿಯೇ, ನಿನಗೆ ವಿಷ್ಣುಪದವಿ ಪ್ರಾಪ್ತವಾಯಿತು (ಯಜ್ಞವೈಭವಖಂಡ).

ಮಹೇಶ್ವರನನ್ನು ಬಿಟ್ಟು ಉಳಿದ ದೇವತೆಗಳನ್ನು ಅರ್ಚಿಸುವವರು ಅಜ್ಞಾನಿಗಳಾಗಿ ಭವದಲ್ಲಿ ಬೀಳುವರು. ಶಿವನಿಂದಲ್ಲದೆ ಪರಮಮುಕ್ತಿ ವಿಷ್ಣ್ವಾದಿ ದೇವತೆಗಳಿಂದ ಸಾಧ್ಯವಿಲ್ಲ. ತಿಳಿಯದೆ ಅವರನ್ನು ಆಶ್ರಯಿಸುವ ನರರು ಅಧಮರು. ಅವರಿಗೆ ಗತಿಯಿಲ್ಲ. (ಪಾರಾಶರ).

ಅನೂನ ಮೋಕ್ಷವು ಶಿವೈಕ್ಯರಿಗಲ್ಲದೆ ಉಳಿದ ದೇವತೆಗಳನ್ನು ಪೂಜಿಸುವವರಿಗಿಲ್ಲ (ಸೌರಸಂಹಿತೆ).

ಹರಿಗೆ ಪರವಾದ ಮಹಾ ಆದಿಪುರುಷ ಶಿವನನ್ನರಿಯದೆ ಮುಕ್ತಿಯಿಲ್ಲ. (ವಾಜಸನೀಯ).

ಆಕಾಶವನ್ನು ತಟ್ಟಿದರೂ ಸುತ್ತಿ ಮುಷ್ಟಿಗೈದರೂ ಶಿವನಲ್ಲದೆ ಅನ್ಯರಿಂದ ಮೋಕ್ಷವಿಲ್ಲ. (ಶ್ವೇತಾಶ್ವರ, ಸೂತಗೀತೆ).

ವಿಷ್ಣುಭಕ್ತಿಯಿಂದ ಮುಕ್ತಿಯಿಲ್ಲ. ಅದು ಶಿವಭಕ್ತಿಯಿಂದಲೇ ಸಾಧ್ಯ (ಬ್ರಹ್ಮಗೀತೆ).

ಶಿವನಲ್ಲದೆ ಉಳಿದ ದೇವತೆಗಳು ಮುಕ್ತಿ ಪ್ರದರಲ್ಲ (ಕಾಳಿಕಾಖಂಡ).

ಹೀಗೆ ಅನೇಕ ಆಧಾರಗಳಿಂದ ವಿಷ್ಣುವು ಮೋಕ್ಷದಾತನಲ್ಲ ಶಿವನೇ ಮೋಕ್ಷದಾತನೆಂಬುದನ್ನು ಪ್ರತಿಷ್ಠಾಪಿಸಿದರು.

೩. ವಿಷ್ಣುವು ಜ್ಞಾನದಾತನೆಂಬುದನ್ನು ಖಂಡಿಸಿ, ಶಿವನೇ, ಜ್ಞಾನಮಯಿ ಅವನೇ ಜ್ಞಾನವನ್ನು ಕೊಡುವವನು ಎಂಬುದನ್ನು ಪ್ರತಿಷ್ಠಾಪಿಸಿದುದು.

ಶಿವನು ಒಂದು ಕಾರಣದಿಂದ ಹರಿ ಬ್ರಹ್ಮಾದಿಗಳ ವಿಜ್ಞಾನವನ್ನು ಬಯಲು ಮಾಡಲು ಅವರು ಮರುಳರಾಗಿ ತಮ್ಮ ಮುಂದೆ ಇರುವ, ತಮ್ಮನ್ನೆಲ್ಲ ಸೃಷ್ಟಿಸಿರುವ ರುದ್ರನನ್ನು ಗುರುತಿಸದೆ ಭವಾನ್ ತಾವು ಯಾರು? ಎಂದು ಕೇಳಿದರು. ಆಗ ರುದ್ರನು ಮೊದಲಿಗೆ ಇದ್ದವನು ನಾನೇ ಒಬ್ಬ, ನಾನೇ ಸನಾರಾಯಣ, ಸೇಂದ್ರ, ಸಮುನಯ ಎಂಬುದಾಗಿ ಹೇಳಿ ಜ್ಞಾನವನ್ನೀಯಲು ದೇವತೆಗಳೆಲ್ಲ ಕೈಯೆತ್ತಿ ಸ್ತುತಿಸಿದರು (ಅಥರ್ವಶಿರ, ಲೈಂಗ್ಯ).

ಮಹಾದೇವನು ಅರುಹಿಸಲು ಅರಿದು, ಮರಹಿಸಲು ಮರೆಯುವ ವಿಷ್ಣುವಿಗೆ ಸ್ವತಃ ಜ್ಞಾನವಿಲ್ಲ. ಪರಶಿವನೇ ಜ್ಞಾನ, ಆತನೇ ಜ್ಞಾನಮಯನು (ಲೈಂಗ್ಯ).

ಜ್ಞಾನಪ್ರದತ್ತವೆಂಬುದು ಮಹೇಶಂಗಲ್ಲದೆ ವಿಷ್ಣು ಬ್ರಹ್ಮಾದಿಗಳಿಗೆ ಇಲ್ಲ. (ಜ್ಞಾನಯೋಗಖಂಡ).

ಮುಕ್ತಿಹೇತುವಾದ ಸುಜ್ಞಾನವು ಈಶಪ್ರಸಾದದಿಂದಲ್ಲದೆ ವಿಷ್ಣು ಮೊದಲಾದ ದೇವತೆಗಳ ಪ್ರಸಾದದಿಂದ ಸಾಧ್ಯವಿಲ್ಲ (ಪಾರಾಶರ).

ರುದ್ರನ ಪ್ರಸಾದದಿಂದಲೇ ಜ್ಞಾನಪ್ರಾಪ್ತಿ,ಉಳಿದರಿನಾಗದು (ಲೈಂಗ್ಯಪುರಾಣ).

ಜ್ಞಾನಮಯನಾದ ಈಶ್ವರನು ಮೊದಲು ಬ್ರಹ್ಮನನ್ನು ಹುಟ್ಟಿಸಿ, ಅಗ್ರಜನಾದ ಆತನಿಗೆ ಜ್ಞಾನವನ್ನರುಹಿದನು (ಅಥರ್ವ, ಲೈಂಗ್ಯ).

ಜ್ಞಾನವೇ ಮೋಕ್ಷಕ್ಕೆ ಕಾರಣ. ಅದು ಶಿವಕೃಪೆಯಿಂದಲ್ಲದೆ ವೇದಾದಿ ಶಾಸ್ತ್ರಾಭ್ಯಾಸಗಳಿಂದ ದೊರೆಯುವದಿಲ್ಲ (ಸೂತಗೀತೆ).

ರುದ್ರನನ್ನುಳಿದು ಮಿಕ್ಕ ದೇವತೆಗಳಿಂದ ದೊರೆಯುವುದು ಅಜ್ಞಾನ; ಜ್ಞಾನವಲ್ಲ. ಆದುದರಿಂದ ಅವರನ್ನು ಅರ್ಚಿಸುವವನು ಪಶು (ಬ್ರಹ್ಮಗೀತೆ).

ಜ್ಞಾನ ಮತ್ತು ಮುಕ್ತಿಗಳು ಶಿವನ ಪ್ರಸಾದದಿಂದಲ್ಲದೆ ಉಳಿದ ದೇವತೆಗಳ ಪ್ರಸಾದದಿಂದ ದೊರೆಯುವುದಿಲ್ಲ ಹಾಗೆ ಎಳಸುವದು ಮೂಗಿಲ್ಲದೆ ಗಂಧವನ್ನರಿಯಲೆಳಸಿದಂತೆ (ಬ್ರಹ್ಮಗೀತೆ).

ಹರಿ ಬ್ರಹ್ಮ ಮೊದಲಾದ ದೇವತೆಗಳಿಗೆ ಶಿವನು ಕೊಟ್ಟರೆ ಜ್ಞಾನ, ಇಲ್ಲದಿದ್ದರೆ ಅವರು ಮರುಳರಾಗುವರು. ಹೀಗೆ ನಾನಾ ಪ್ರಮಾಣಗಳ ಆಧಾರದಿಂದ ವಿಷ್ಣು ಜ್ಞಾನಪ್ರದನಲ್ಲ ಶಿವನೇ ಜ್ಞಾನದಾತನು ಎಂಬುದನ್ನು ಪ್ರತಿಷ್ಠಾಪಿಸಿದರು.

೪. ವಿಷ್ಣುವು ಸರ್ವಜನಕನೆಂಬುದನ್ನು ಖಂಡಿಸಿ, ಶಿವನೇ ಸರ್ವಜನಕನು ಎಂಬುದನ್ನು ಪ್ರತಿಷ್ಠಾಪಿಸಿದುದು.

ಉಮೇಶನೇ ಗಗನ, ಭೂಮಿ, ರವಿ, ಚಂದ್ರ, ವಿಷ್ಣು ಮೊದಲಾದ ಸರ್ವ ಸೃಷ್ಟಿಗೆ ಪಿತೃ (ಋಗ್ವೇದ).

ರುದ್ರರೂಪನಾದ ಪರಶಿವನಿಂದಲೇ ಬ್ರಹ್ಮ, ವಿಷ್ಣು, ಅಗ್ನಿ ವಾಯುಗಳು ಜನಿಸಿದುವು (ಶಿವಸಂಕಲ್ಪೋಪನಿಷತ್ತು).

ಪರಾತ್ಪರನಾದ ನಿತ್ಯ ಶಿವನೇ ಬ್ರಹ್ಮ, ವಿಷ್ಣು, ಅಗ್ನಿ ವಾಯುಗಳಿಗೆ ಜನಕನು (ರವಿಪುರಾಣ).

ಸೋಮಾಖ್ಯನೇ ಗಗನ, ಭೂಮಿ, ರವಿ, ಇಂದ್ರ ಪುರುಷೋತ್ತಮ ಮೊದಲಾದವರಿಗೆ ಜನಕನು. ಉಪೇಂದ್ರ ಮೊದಲಾದವರಿಗೆ ಆತನೇ ಕಾರಣನು; ಅನ್ಯರಲ್ಲ (ಕಾಶೀಖಂಡ).

ಭೂಮಿ, ಆಕಾಶ, ಇಂದ್ರ, ಅಗ್ನಿ, ಯಮ, ವರುಣ, ಚಂದ್ರ ಮೊದಲಾದವರು ಪರಮೇಶ್ವರನಿಂದಲೇ ಹುಟ್ಟಿದರು (ಕಾಳಿಕಾಖಂಡ).

ಬ್ರಹ್ಮ, ವಿಷ್ಣು, ರವಿ, ಇಂದ್ರ, ಅಗ್ನಿ, ಯಮ, ವರುಣಾದಿ ಎಲ್ಲ ದೇವತೆಗಳು, ಸುರಾಸುರರು, ಈಶನಿಂದಲೇ ಜನಿಸಿದರು (ಸ್ಕಾಂದಪುರಾಣ).

ಈ ಅಖಿಲ ಸೃಷ್ಟಿಯು ಶಿವನ ಅಷ್ಟಮೂರ್ತಿಮಯವು. ಗಗನ, ಭೂಮಿ, ಮಾರುತ, ಅನಲ, ಜಲ, ರವಿ, ಶಶಿ ಇವುಗಳಿಲ್ಲದೆ ಲೋಕವಿಲ್ಲ. ಆದುದರಿಂದ ಈ ಸೃಷ್ಟಿಯೆಲ್ಲ ಶಿವನ ಶಿಶು (ಲೈಂಗ್ಯಪುರಾಣ).

ಸ್ತ್ರೀಲಿಂಗಮಯವಾದುದೆಲ್ಲ ಪರಶಿವನ ದೇಹದಿಂದ ಹುಟ್ಟಿದ ಪ್ರಕೃತಿ, ಪುಲ್ಲಿಂಗಮಯವಾದುದೆಲ್ಲ ಆತನ ಶರೀರದಿಂದೊಗೆದ ಪುರುಷ; ಇವೆರಡರಿಂದ ಜಗತ್ ಸೃಷ್ಟಿ (ಲೈಂಗ್ಯಪುರಾಣ).

ಈ ಪ್ರಕಾರ ಹಲವು ಆಧಾರಗಳನ್ನು ತೋರಿಸಿ ಸರ್ವಜನಕನು ಶಿವನು; ವಿಷ್ಣುವಲ್ಲ ಎಂಬುದನ್ನು ಪ್ರತಿಷ್ಠಾಪಿಸಿದರು.

೫. ವಿಷ್ಣುವು ಸುಕರನೆಂಬುದನ್ನು ಖಂಡಿಸಿದುದು.

ಶಿಶು ಒಂಬತ್ತನೆಯ ಮಾಸದಲ್ಲಿ ಗರ್ಭದಲ್ಲಿ ಸರ್ವಲಕ್ಷಣಸಂಪನ್ನನಾಗಿರುವನು. ಆಗ ಅವನಿಗೆ ಪೂರ್ವಜಾತಿಸ್ಮರಣೆಯಿರುತ್ತಿದೆ. ಕೃತ್ಯಾಕೃತ್ಯಕರ್ಮಗಳು ಆತನಿಗೆ ತಿಳಿಯುತ್ತವೆ. ಶುಭಾಶುಭವ್ಯಾಪಾರಗಳ ಅರಿವೂ ಇರುತ್ತದೆ. "ಸಕಲ ಯೋನಿಗಳಲ್ಲಿ ಅಲ್ಲಲ್ಲಿ ದೊರೆಯುವ ಆಹಾರವ ಸೇವಿಸಿದೆನು, ಹಲತೆರದ ಮೊಲೆಗಳನ್ನು ಉಂಡೆನು. ಇನ್ನು ಗರ್ಭದಿಂದ ಹೊರಹೊಮ್ಮಿ ಶಿವನನಾಶ್ರಯಿಸಿ ಸನ್ಮಾರ್ಗಿಯಾಗಿ ಬಾಳುವೆನೆ"ಂದು ಚಿಂತಿಸುತ್ತಿರುವಾಗ ಹರಿಯು ವಾಯು ರೂಪದಿಂದ ಗರ್ಭಪ್ರವೇಶಮಾಡಿ ಆ ಶಿಶುವಿನ ತಲೆ ಕೆಳಗುಮಾಡಿ ಅವನ ಜ್ಞಾನವನ್ನು ಅಳಿಸಿ ಅಜ್ಞಾನವನ್ನುಂಟುಮಾಡಿ ಭವಕ್ಕೆ ಬರಿಸಿದನು (ಗರ್ಭೋಪನಿಷತ್ತು).

ನವಮಾಸದಲ್ಲಿ ಶಿವಜ್ಞಾನವು ಸ್ಫುರಿಸಲು ಗರ್ಭಸ್ಥ ಶಿಶುವು ಶುಭಾಶುಭವ್ಯಾಪಾರ, ಕೃತ್ಯಾಕೃತ್ಯಕರ್ಮ, ಪೂರ್ವಜಾತಿಸ್ಮರಣೆ ಇವೆಲ್ಲವನ್ನು ಅರಿತು ಆ ಗರ್ಭದಿಂದ ಎಂತಾದರೂ ಹೊರಬಂದು ಮಹೇಶನನ್ನು ಕೂಡುವೆನು ಭಸ್ಮಗೃಹೀತನಾಗಿ ಆತ್ಮವಿದ್ಯೆಯಿಂದ ಘೋರವಾದ ಸಂಸಾರಸಾಗರವನ್ನು ದಾಟುವೆನು. ಎಂದು ಚಿಂತಿಸುವಷ್ಟರಲ್ಲಿ ವಿಷ್ಣುವು ವಾಯುರೂಪದಿಂದ ಉದರವನ್ನು ಪ್ರವೇಶಮಾಡಿ ಶಿಶುವಿನ ಸುಜ್ಞಾನವನ್ನು ಮುಸುಳಿಸಿ ಅವಿದ್ಯೆಯನ್ನು ತುಂಬಿ ಅಸಹ್ಯಯೋನಿಪೀಡೆಯನ್ನು ಕೊಟ್ಟು ಭವಾಂತರಕ್ಕೆ ಬರಿಸುವನು (ಸೂತಸಂಹಿತೆ).

ಹೀಗೆ ಸುಜ್ಞಾನಸಂತೋಷವನ್ನು ಕೆಡಿಸಿ ಜೀವಿಗಳನ್ನು ದುಃಖಸಂತಾನಬೀಜವಾದ ಭವಕ್ಕೆ ಈಡುಮಾಡುವ ಅಜ್ಞಾನವನ್ನು ಕೊಟ್ಟ ವಿಷ್ಣು ಗರ್ಭಶತ್ರುವು; ಶುಭಕರನಲ್ಲ ಎಂದು ಹೇಳಿ ವಿಷ್ಣು ಸುಕರನೆಂಬುದನ್ನು ಖಂಡಿಸಿದರು.

೬. ವಿಷ್ಣುವು ಅಯೋನಿಜನೆಂಬ ಉಕ್ತಿಯನ್ನು ಖಂಡಿಸಿದುದು.

ವಿಷ್ಣುವು ಕಸ್ಯಪನ ಸುದತಿಯಾದ ಅದಿತಿಯ ಗರ್ಭದಲ್ಲಿ ಜನಿಸಿದಾಗ ಅವನಿಗೆ ಇಂದ್ರಾವರಜನೆಂದು ಹೆಸರಿತ್ತು. (ಸ್ಕಾಂದಪುರಾಣ).

ಅತ್ರಿಯ ಅಂಗನೆಯಾದ ಅನಸೂಯೆಯು ಭಕ್ತಿಯಿಂದ ಪೂಜಿಸಲು ಬ್ರಹ್ಮ ವಿಷ್ಣು ಈಶ್ವರರು ಪ್ರಸನ್ನರಾಗಿ ಅವಳ ಇಷ್ಟವನ್ನು ಕೇಳಿದರು. ಅದಕ್ಕವಳು

“ನೀವು ನನಗೆ ತನಯರಾಗಿ ಜನಿಸಬೇಕೆ”ಂದು ಬೇಡಿಕೊಂಡಳು. ಆಗ ಬ್ರಹ್ಮ ವಿಷ್ಣು ಗಳು ಅನಸೂಯೆಯ ಗರ್ಭದಲ್ಲಿ ಹುಟ್ಟಿದರು. ಅಭವನು ತಾನು ಹಾಗೆ ಗರ್ಭ ದಿಂದುದಿಸಲಾರೆನೆಂದು ಹೇಳಿ, ಅತ್ರಿಋಷಿಯು ಪುತ್ರಕಾಮಿಯಾಗಿ ಯಜ್ಞಮಾಡಿ ಆಗ ತನಗೆ ಕೊಡುವ ಪುಷ್ಪಾಂಜಲಿಯಲ್ಲಿ ತನ್ನದೊಂದಂಶವನ್ನು ಸೃಜಿಸಲು ಅದು ಶಿವಾರ್ಚನೆಯ ಕುಸುಮದಲ್ಲಿ ಶಿಶುವಾಗಿ ಜನಿಸಿತು. ಗರ್ಭವಾಸವು ಅತಿ ದುರ್ವಾಸವೆಂದು ಹೀಗೆ ಜನಿಸಿದುದರಿಂದ ಆ ಶಿಶುವಿಗೆ ದುರ್ವಾಸನೆಂಬ ಹೆಸರು ಬಂದಿತು (ಕಾಶೀಖಂಡ).

ಶಿಲಾದಮುನಿಯು ಮಗನನ್ನು ಬಯಸಿ ತಪಸ್ಸನ್ನಾಚರಿಸಲು ದೇವೇಂದ್ರನು ಪ್ರತ್ಯಕ್ಷನಾಗಿ ಅಧಿಕಜ್ಞಾನದಿಂದ ಆತನಿಗೆ ಇಂತೆಂದನು : “ನಾನೂ ಬ್ರಹ್ಮ ವಿಷ್ಣು ಮೊದಲಾದವರೂ ಹುಟ್ಟುವೆವು ಸಾಯುವೆವು. ನಾವು ಕೊಟ್ಟ ಮಕ್ಕಳೂ ಅಂತೆಯೇ. ಅಯೋನಿಜನಾದ ಹಾಗು ಮೃತ್ಯುರಹಿತನಾದ ಮಗನನ್ನು ಕೊಡಲು ಪರಶಿವ ನೊಬ್ಬನೇ ಶಕ್ತನು.” ಎನಲು ಶಿಲಾದಮುನಿಯು ಶಿವನನ್ನು ಭಜಿಸಿ ಯಜ್ಞ ಭೂಮಿಯ ನೇಗಿಲಸಾಲಿನಲ್ಲಿ ನಂದಿಯನ್ನು ಮಗನನ್ನಾಗಿ ಪಡೆದನು. (ಲೈಂಗ್ಯ ಪುರಾಣ).

ಭೃಗುಪತ್ನಿಯಾದ ವಿದ್ಯಾದೇವಿಯನ್ನು ಹೆಂಗೊಲೆಗೆ ಹೇಸದೆ ಹರಿಯು ತನ್ನ ಕಪಟದಿಂದ ಕೊಲ್ಲಿಸಲು ಭೃಗುಮುನಿಯು ಸುಜ್ಞಾನದಿಂದ ಅದನ್ನರಿದು ಹರಿಯ ಎದೆಗೆ ಒದೆದು ಸಿಟ್ಟಿನಿಂದ “ಎಲೆ ದೋಷಿ, ಸುಮ್ಮನೆ ಹೆಣ್ಣನ್ನು ಕೊಂದೆ. ಆದುದ ರಿಂದ ನೀನು ಮತ್ಸ, ಕೂರ್ಮ, ವರಾಹ, ನಾರಸಿಂಹ ಮೊದಲಾದ ಕುತ್ಸಿತರೂಪ ಗಳಿಂದ ದಶಯೋನಿಗಳಲ್ಲಿ ಜನಿಸು, ಅವುಗಳ ಆಹಾರವನ್ನೇ ಸೇವಿಸು.” ಎಂದು ಶಪಿಸಿದನು.ಅದರಂತೆ ವಿಷ್ಣುವು ದಶಯೋನಿಗಳಲ್ಲಿ ಹುಟ್ಟಿಬಂದನು (ಕಾಳಿಕಾಖಂಡ).

ಇದೇ ಕಥೆಯನ್ನು ಕಪಟಭೂಸುರನಾಗಿ ಬಂದ ಪರಮಾತ್ಮನಿಗೆ ಪಾರ್ವತಿಯು ದೃಷ್ಟಾಂತವಾಗಿ ಹೇಳಿರುವಳು (ಪದ್ಮಪುರಾಣ).

ವಿಷ್ಣುವು ರೇಣುಕೆಯ ಹೊಟ್ಟೆಯಲ್ಲಿ ಹುಟ್ಟಿ ಪರಶುರಾಮನೆನಿಸಿದನು. ಕೌಸಲೆಯ ಹೊಟ್ಟೆಯಲ್ಲಿ ಹುಟ್ಟಿ ರಾಮಚಂದ್ರನೆನಿಸಿಕೊಂಡನು. ಮತ್ಸ್ಯಗಂಧಿಯ ಗರ್ಭದಲ್ಲಿ ಒಗೆದು ಬಾದರಾಯಣನಾದನು (ಮಹಾಭಾರತ).

ಮುಕುಂದನು ಪಿತಾಮಹನ ಅಧೋದ್ವಾರದಿಂದ ಹುಟ್ಟಿ ಅಧೋಕ್ಷನೆಜನಿಸಿ ದನು. (ಶಿವರಹಸ್ಯ).

ಕೃಷ್ಣನು ವಸುದೇವ ದೇವಕಿಯರ ಮಗನೆಂದು (ಅಮರಸಿಂಹ) ಈಗಲೂ ವೈಷ್ಣವರು ವರುಷ ವರುಷ ವಿಷ್ಣುಹುಟ್ಟಿದ ದಿನವೆಂದು ಆತನ ಜಯಂತಿಯನ್ನು ಮಾಡುತ್ತಿರುವರು. ಆದುದರಿಂದ ಅವನು ಅಯೋನಿಜನಲ್ಲ.

ಹೀಗೆ ಬೇರೆ ಬೇರೆ ಕಾಲಗಳಲ್ಲಿ ವಿವಿಧ ಯೋನಿಗಳಲ್ಲಿ ಹುಟ್ಟಿಬಂದ ವಿಷ್ಣುವು ಅಯೋನಿಜನೆನ್ನುವುದು ಹೇಗೆ ? ಎಂಬುದಾಗಿ ಅನೇಕ ಆಧಾರಗಳನ್ನು ಕೊಟ್ಟು ಸಿದ್ಧಮಾಡಿ ತೋರಿಸಿ ಎಷ್ಣುವು ಅಯೋನಿಜನೆಂಬುದನ್ನು ಖಂಡಿಸಿದರು.

೭. ವಿಷ್ಣುವು ಅಚ್ಯುತನೆಂಬುದನ್ನು ಖಂಡಿಸಿದುದು.

ಕೈಯಲ್ಲಿ ಬ್ರಹ್ಮನಕಪಾಲ ಹೆಗಲಮೇಲೆ ವಿಷ್ಣುವಿನ ದೇಹ ಎಂದುಮುಂತಾಗಿ ಪರಮೇಶ್ವರನ ವೇಷವರ್ಣನೆ (ಬೋಧಾಯನ ಕೃತ ಮಹಾನಾಟಕ ನಾಂದಿ). ವಿಷ್ಣುವು ಅಚ್ಯುತನಾಗಿದ್ದರೆ ಅವನದೇಹ ಪರಮೇಶ್ವರನ ಹೆಗಲಮೇಲೆ ಏಕೆ ?

ವಿಷ್ಣುವಿನ ಅಸ್ತಿ ರಜ್ಜುಗಳೇ ಹಗ್ಗ, ನರಸಿಂಹನ ಉಗುರೇ ಕೊಂಕಿದ ಕೋಲು ಮಾಡಿಕೊಂಡಿದ್ದನು (ಪ್ರಳಯಕಾಲದ ಮೀನುಗಾರ ಪರಮೇಶ್ವರನ ವರ್ಣನೆ). ಅಚ್ಯುತನಾಗಿದ್ದರೆ ವಿಷ್ಣುವಿನ ಅಸ್ತಿ ಮೊದಲಾದುವು ಇನ್ನೊಬ್ಬರ ಕೈಯಲ್ಲಿ ಹೇಗೆ ಬಂದುವು ?

ಬ್ರಹ್ಮ ಇಂದ್ರ ವಿಷ್ಣು ಮತ್ತು ಎಲ್ಲ ಸುರಾಸುರರನ್ನು ಪರಮೇಶನು ನಿಗ್ರಹಿಸಿದುದರಿಂದ ಅವನನ್ನು ಹರನೆಂದು ಕರೆಯುತ್ತಾರೆ (ಸ್ಕಾಂದಪುರಾಣ). ಅಚ್ಯುತನು ಇನ್ನೊಬ್ಬನಿಂದ ಅಳಿವನೇ ?

ಕೂರ್ಮನೆನಿಸಿದ ವಿಷ್ಣುವಿನ ಕಪಾಲವು ಶಿವನ ಹಾರದಲ್ಲಿದೆ (ಸ್ಕಾಂದ ದೊಳಗಿನ ಶರಭೋಕ್ತಿ).

ಹರಿಯು ಮತ್ಸ್ಯನಾಗಿ ಚರಿಸುತ್ತಿರುವಾಗ ಬಕ ರೂಪದ ರುದ್ರನು ತನ್ನ ಕೊಕ್ಕಿನಿಂದ ಅದರ ಕೊರಲನ್ನು ಕತ್ತರಿಸಿದನು (ಅಥರ್ವ) ಅಚ್ಯುತಂ ಅಳಿವಂ ಗಡಾ !

ವರಾಹರೂಪದ ಹರಿಯ ಒಂದು ದಾಡೆಯನ್ನು ಉಮಾಕಾಂತನು ಸಿಟ್ಟಿಗೆದ್ದು ಕಿತ್ತುದುದರಿಂದ ವರಾಹಕ್ಕೆ ಒಂದೇ ದಾಡೆಯಾಯಿತು (ಸ್ಕಾಂದ, ಲೈಂಗ್ಯ).

ಹರಿಯು ವರಾಹರೂಪವನ್ನು ತಾಳಿ ಪುತ್ರ ಪೌತ್ರ ಸಮೇತವಾಗಿ ಗಂಗಾ ತೀರದಲ್ಲಿರುತ್ತಿರಲು ಷಣ್ಮುಖನು ಅವನನ್ನು ಕೊಂದನು. ಅದರ ಕುರುಹಾಗಿ 'ಸೂಕರಾರೋಹ' ಎಂಬ ತೀರ್ಥವು ಗಂಗಾನದಿಯ ದಂಡೆಯ ಮೇಲೆ ಈಗಲೂ ಇರುವುದು. (ಕಾಳಿಕಾಖಂಡ) ಅಳಿವವನು ಅಚ್ಯುತನೇ ?

ವಿಷ್ಣು ಹಿರಣ್ಯಕಶಿಪುವನ್ನು ನರಸಿಂಹರೂಪದಿಂದ ಕೊಂದು, ಅವನ ರಕ್ತ ಪಾನದಿಂದ ಸೊಕ್ಕಿ ಜಗತ್ತಿಗೆ ಉಪದ್ರವ ಕೊಡುತ್ತಿರಲು ಪರಶಿವನು ಶರಭರೂಪ ದಿಂದ ಅವನನ್ನು ಕೊಂದನು (ಸ್ಕಾಂದ, ಲೈಂಗ್ಯ, ಯಜುರ್ವೇದ). ಹರಿ ಎಂತಚ್ಯುತಂ ?

ಹರನು ತ್ರಿವಿಕ್ರಮನನ್ನು ಮೆಟ್ಟಿ ಮುರಿದನು (ಸ್ಕಾಂದ).

ಹರಿಯು ಭೃಗುವಿನ ಶಾಪದಿಂದ ಹುಟ್ಟಿದನು, ನಾರದನ ಶಾಪದಿಂದ ಸೀತೆ ಯನ್ನಗಲಿದನು, ದುರ್ವಾಸರ ಶಾಪದಿಂದ ಹೊಳೆಯಲ್ಲಿ ಬಿದ್ದು ಸತ್ತನು. (ಸ್ಕಾಂದಪುರಾಣ). ಈ ಕ್ರಮದಿಂದ ಅಳಿವವನು ಅಚ್ಯುತನೇ ?

ಕೃಷ್ಣ ಬಲರಾಮರು ಒಂದು ದಿನ ಜಾಂಬುವತಿಯಮಗನಾದ ಸಾಂಬನಿಗೆ ಸ್ತ್ರೀವೇಷಹಾಕಿ, ವಿಶ್ವಾಮಿತ್ರ ಕಣ್ವ ದೂರ್ವಾಸ ಮೊದಲಾದ ಮುನಿಗಳು ತಪಸ್ಸು ಮಾಡುತ್ತಿದ್ದ ಪಿಂಡಾರಕತೀರ್ಥಕ್ಕೆ ಹೋಗಿ " ಇವಳು ಏನು ಹಡೆಯುವಳೆ"ಂದು ಅಣಕಪ್ರಶ್ನೆಮಾಡಿದರು. " ಈಕೆಯು ಒಂದು ಒನಿಕೆಯನ್ನು ಹಡೆಯುವಳು ಆ ಒನಕೆಯಿಂದ ವಿಷ್ಣುವಿನ ವಂಶನಾಶವಾಗುವುದು " ಎಂದರು. ಅವರ ಹೇಳಿಕೆ ಯಂತೆ ಸಾಂಬನಿಂದ ಒನಕೆ ಹುಟ್ಟಿತು.ಯಾದವರು ತಮ್ಮ ವಂಶವನ್ನುಳಿಸಿಕೊಳ್ಳಲು ಆ ಒನಕೆಯನ್ನು ತೇದು ಗಂಧವನ್ನೂ ಕೊನೆಗುಳಿದ ಅತಿ ಸೂಕ್ಷ್ಮ ತುಣುಕನ್ನೂ ಸಮುದ್ರದಲ್ಲಿ ಎಸೆದರು. ಗಂಧವು ದಂಡೆಗೆ ಒಟ್ಟಾಗಿ ದಟ್ಟಾದ ಜೇಕಾಗಿ ಬೆಳೆ ಯಿತು. ಒನಕೆಯ ಸೂಕ್ಷ್ಮತುಣುಕನ್ನು ಒಂದು ಮೀನು ನುಂಗಿತು. ಆ ಮೀನನ್ನು ಜರಕನೆಂಬ ಮೀನುಗಾರನು ಹಿಡಿದು ಅದರ ಹೊಟ್ಟೆಯನ್ನು ಸೀಳಲು ಅಲ್ಲಿ ಒನಕೆಯ ಅಂಶವೊಂದು ಕಂಡಿತು. ಅದರಿಂದ ಅವನು ಒಂದು ಬಾಣವನ್ನು ಮಾಡಿಸಿದನು. ಒಮ್ಮೆ ಸೆರೆಕುಡಿದು ಅದರ ಮಬ್ಬಿನಲ್ಲಿ ಯಾದವರೊಳಗೆ ಜಗಳ ಹುಟ್ಟಿ ತಮ್ಮ ತಮ್ಮೊಳಗೆ ಬಡಿದಾಡಿದರು. ಜೇಕಿನಿಂದ ಹೊಡೆದಾಡಿ ಎಲ್ಲರೂ ಸತ್ತರು. ಕೃಷ್ಣನು ಬೇಸತ್ತು ಅಡವಿಸೇರಿದನು. ಒಂದು ಗಿಡದ ಬುಡದ ನೆರಳಲ್ಲಿ ಕಾಲಮೇಲೆ ಕಾಲುಹಾಕಿ ಮಲಗಿರುವಾಗ ಜರಕನು ಅದು ಚಿಗರೆಯೆಂದು ತನ್ನ ಹೊಸ ಬಾಣದಿಂದ ಹೊಡೆದನು. ಅದು ಕೃಷ್ಣನ ಕಾಲಿಗೆ ತಾಕಿ ಅವನು ಸತ್ತನು.

ಪಿಂಡಕೊಡಲು ಯಾರೂ ಇಲ್ಲ. ಅರ್ಜುನನೇ ಸಪಿಂಡಕ ಶ್ರಾದ್ಧಮಾಡಿದನು. ಪಿಂಡಕ್ಕೆ ಧನವಿಲ್ಲದ್ದರಿಂದ ಕಂದಮೂಲಾದಿಗಳನ್ನು ತಂದು ಪಿಂಡಕೊಟ್ಟನು. (ವಿಷ್ಣುಪುರಾಣ, ಸ್ಕಾಂದ, ಲೈಂಗ್ಯ, ಕೌರ್ಮಪುರಾಣಗಳು). ಹೀಗೆ ಅಳಿವವನು ಅಚ್ಯುತನೇ ?

ಅಸಂಖ್ಯಾತ ವಿಷ್ಣುಗಳು, ಅಗಣಿತಬ್ರಹ್ಮರು, ಅನೇಕ ಇಂದ್ರಪ್ರಮುಖರು ಅಳಿದರು; ಈಶನೊಬ್ಬನೇ ನಿತ್ಯ. (ಸ್ಕಾಂದ, ಲೈಂಗ್ಯ) .

ಹೀಗೆ ಹಲವು ಆಧಾರಗಳನ್ನು ಕೊಟ್ಟು, ವಿಷ್ಣುವು ಅಚ್ಯುತನಲ್ಲ. ಅಚ್ಯುತವಾದುದು ಆಕಾಶ, ಆಕಾಶಕ್ಕೆ 'ಹರಿ' ಎಂಬ ಬೇರೊಂದು ಹೆಸರಿದ್ದು, ಆ ಹರಿಹೆಸರಿನಿಂದ ವಿಷ್ಣುವೀ ಹರೀಶನೆಂದು ಇವನನ್ನು ಕರೆದಿರುವರು. ಇದು ಕವಿಪ್ರಯೋಗ.

ಹೀಗೆ ಪದ್ಮರಸರು ಹಲವು ಉದಾಹರಣೆಗಳನ್ನು ಕೊಟ್ಟು ವಿಷ್ಣುವು ಅಚ್ಯುತನಲ್ಲ ಎಂದು ಹೇಳಿ, ಅವನಅಚ್ಯುತತ್ವವನ್ನು ಖಂಡಿಸಿದರು.

೮. ವಿಷ್ಣುವು ವೇದವೇದ್ಯನೆಂಬುದನ್ನು ಖಂಡಿಸಿದುದು.

ವೇದವು ಮಹೇಶನ ಸೊತ್ತೆನಿಸಿತೆಂದು ವಿಷ್ಣುವು ಬೌದ್ಧಾವತಾರವನ್ನು ತಾಳಿ, ವೇದಗಳ, ವೇದಾಚರಣೆಗಳ ವಿರುದ್ಧ ಅಪಪ್ರಚಾರಮಾಡಿದನು. ಲಕ್ಷಗಟ್ಲೆ ಬೌದ್ಧ ಗ್ರಂಥಗಳನ್ನು ರಚಿಸಿ ಬೋಧಿಸಿದನು. ಅದರಿಂದ ವೇದದ ಮಹತ್ವ ಕುಗ್ಗಿ ಬೌದ್ಧವು ಉಂಟಾಯಿತು (ಲೈಂಗ್ಯ). ವೇದದೂಷಕನು ಅದೆಂತು ವೇದವೇದ್ಯನು?

ವಿದ್ಯಾಚೋರ, ಗುರುದ್ರೋಹಿ, ವೇದ ಈಶ್ವರದೂಷಕ ಇವರು ಅತಿ ಪಾಪಾತ್ಮರು; ಇವರು ದಂಡ್ಯರು (ವಾಯವೀಯ). ಹರಿಯು ವೇದದೂಷಕನಾದುದರಿಂದ ವೇದನುತನು ಹೇಗಾಗುವನು?

ಹರಿಯು ವೇದದ್ರೋಹಿ (ಪಾರಾಶರ).

ಬುದ್ಧರೂಪೀ ಹರಿಯ ಬೋಧೆಯನ್ನು ತಳೆದ ಬೌದ್ಧರು ವೈಷ್ಣವಾಂತರ್ಭೇದವು. ಬೌದ್ಧರು ವೈಷ್ಣವರೇ. ಅವರು ಅವೈದಿಕರು (ಸೌರಪುರಾಣ). ಆದುದರಿಂದ ಹರಿಯು ವೇದದ್ರೋಹಿಯೇ ಹೊರತು ವೇದವೇದ್ಯನಲ್ಲ.

ದೇವತೆಗಳನ್ನು ಗೆದ್ದ ದನುಜರು ವೈದಿಕಾಚಾರದಿಂದ ಯಜ್ಞವನ್ನು ಮಾಡಿ ದೇವತೆಗಳಿಗೆ ಯಜ್ಞಾಂಶವನ್ನು ಕೊಡದಿರಲು, ವಿಷ್ಣುವು ಅರ್ಹಂತರ ರೂಪದಿಂದ

ಅಲ್ಲಿಗೆ ಹೋಗಿ ಅವರಿಗೆ ವೇದಬಾಹಿರಮಾರ್ಗವನ್ನು ಉಪದೇಶಿಸಿದನು. ಅವರು ವೇದವಿರೋಧಿಗಳಾಗಿ ಅರ್ಹತರಾದರು (ವಿಷ್ಣುಪುರಾಣ). ವೇದನಿಂದಕನು ವೇದವೇದ್ಯನೇ ?

ಶಾಂಡಿಲ್ಯನೆಂಬ ಬ್ರಾಹ್ಮಣನು ಪಾಂಚರಾತ್ರಾಚಾರವನ್ನು ಆಚರಿಸಿ, ವೇದ ಮಾರ್ಗವನ್ನು ಖಂಡಿಸಿ, ಶಾಂಡಿಲ್ಯಸಂಹಿತೆಯನ್ನು ರಚಿಸಿದನು (ವಾಶಿಷ್ಟ, ಲೈಂಗ್ಯ).

ಸಂಗಿರನೆಂಬ ಬ್ರಾಹ್ಮಣನು ವಿಷ್ಣುವಿನ ದುರ್ಬೋಧದಿಂದ ವೇದಮಾರ್ಗ ವನ್ನು ಬಿಟ್ಟು, ಪಾಷಂಡದೀಕ್ಷೆಯನ್ನು ಪಡೆದನು (ಯಜ್ಞವೈಭವಖಂಡ).

ಪಾಂಚರಾತ್ರದಲ್ಲಿ ವೇದಾರ್ಥವಿಪ್ಲಾವನ ಕಲತ್ರಸಮಾನತೆ ಜಾತಿಭೇದ ಪಾದೋದಕವು ಉಚ್ಛಿಷ್ಟವೆನ್ನುವುದು ಶಿವನಿಂದೆ ಈ ಐದು ಮುಖ್ಯವ್ರತಂಗಳು (ವಿಷ್ಣುಪುರಾಣ). ಇವನ್ನು ಹೇಳುವ ಅಸುರಾರಿಯು ವೇದವೇದ್ಯನೆಂತಾಗುವನು?

'ನಮೋ ವಿಷ್ಣವೆಯ' ಮಂತ್ರವು ವೇದಮಂತ್ರಗಳಲ್ಲಿಲ್ಲ. ಆದುದರಿಂದ ವೇದವು ವೈಷ್ಣವರದಲ್ಲ. ಪಾಂಚರಾತ್ರ ಮೊದಲಾದವುಗಳು ಪ್ರಮಾಣಗಳಲ್ಲ (ಪಾರಾಶರ).

ಪಾಂಚರಾತ್ರಂಗಳು ವೇದಮೂಲಗಳಲ್ಲ; ಅವು ಸ್ವತಂತ್ರವಾದವುಗಳು. ಅವುಗಳ ಹೆಸರು ತೆಗೆದುಕೊಳ್ಳುವುದೇ ಭ್ರಾಂತಿ (ಮುಕ್ತಿಖಂಡ). ಆದುದರಿಂದ ಹರಿಯು ವೇದವೇದ್ಯನೆಂತು ?

ವಿಚಾರಿಸಿದರೆ ಅವೈದಿಕರು ಪಾಷಂಡರು. ಅವರ ಮುಖ ನೋಡಲಾಗದು. ಶತಧನುರಾಜನು ಸತಿಸಹಿತ ಕಾಶಿಯಲ್ಲಿ ಸ್ನಾನಮಾಡಿ ವೇದೋಕ್ತಆಚರಣೆಯಲ್ಲಿರು ವಾಗ ಒಬ್ಬ ಪಾಷಂಡಿ ಬರಲು ಅವನನ್ನು ಕಂಡರು. ರಾಜನಸತಿಯು ಸೂರ್ಯ ನನ್ನುನೋಡಿ ಆ ದೋಷವನ್ನು ಕಳಕೊಂಡಳು. ರಾಜನು ಆತನು ಬ್ರಾಹ್ಮಣನೆಂದು ತಿಳಿದುದಕ್ಕೆ ಬೆಟ್ಟವನ್ನೇರಿ, ಉರುಳಿ ಶಾರ್ಙೀಲಿಯಾಗಿ, ತೋಳನಾಗಿ, ಹದ್ದಾಗಿ, ಕಾಗೆ ನವಿಲುಗಳ ಜನ್ಮವೆತ್ತಿ, ಕಡೆಗೆ ಜನಕನ ಯಜ್ಞದ ಅವಭೃಥದಲ್ಲಿ ಮುಳುಗಿ, ಅವನಿಗೆ ಮಗನಾಗಿ ಹುಟ್ಟಿ, ಯುದ್ಧದಲ್ಲಿ ಮಡಿದು ಆ ದೋಷವನ್ನು ಕಳೆದು ಕೊಂಡನು (ವಿಷ್ಣುಪೌರಾಣ).

ಸ್ವರ್ಗಕ್ಕೆ ಹೋಗುತ್ತ ಮರ್ತ್ಯಕ್ಕೆ ಬರುತ್ತ ಸುಖದಿಂದ ಇದ್ದ ಸುಧನ್ವತಿಯ ಪತಿ ವಿಶ್ವರೂಪನು ದುರ್ಬೋಧದಿಂದ ಅವೈದಿಕಾಚರಣನಾಗಲು, ಅವನೊಮ್ಮೆ

ಎಂದಿನಂತೆ ಸ್ವರ್ಗಕ್ಕೆ ಹೋದಾಗ, ಇಂದ್ರನಿಂದ ತಿರಸ್ಕೃತನಾದನು. ಆಗ ಅವನು ಭೂಮಿಗೆ ಬಂದು, ಕಾಶಿಯಲ್ಲಿ ಅಭಿಚಾರಿಕಾಧ್ವರವನ್ನು ಮಾಡಲು, ಅವನ ಧ್ವನಿಯೇ ಹೋಯಿತು. ಇಂದ್ರನು ಆ ಪಾಷಂಡಯತಿ ಮುಟ್ಟಿಗರನ್ನು ಕೊಂದನು (ಸೌರಸಂಹಿತೆ). ಆದುದರಿಂದ ಅವೈದಿಕ ಹರಿ ದಂಡ್ಯನು.

ವೇದಬಾಹಿರಮಾರ್ಗದಲ್ಲಿರುವ ನರಸುರಾದಿಗಳೂ, ಅವರ ಸಹವಾಸಿಗಳೂ ಪಾಷಂಡರು (ಸೌರಸಂಹಿತೆ). ಆದ್ದರಿಂದ ಹರಿ, ವೈಷ್ಣವರು, ಪಾಷಂಡರು. ಅಂದ ಬಳಿಕ ಹರಿ ವೇದವೇದ್ಯನಲ್ಲ.

ಈ ಮೇರೆಗೆ ಉದಾಹರಣಗಳನ್ನು ತೋರಿ, ವಿಷ್ಣು ವೇದವೇದ್ಯನೆಂಬುದನ್ನು ಗುರುವು ಖಂಡಿಸುತ್ತಿರಲು, ವಾದಿಯು ಎದ್ದು "ನಾರಾಯಣಂ ಪರಬ್ರಹ್ಮ ತತ್ವಂ, ನಾರಾಯಣಃ ಪರಂಜ್ಯೋತಿಃ, ಆತ್ಮನಾರಾಯಣಃ ಪರಃ, ನಾರಾಯಣನೇ ಬ್ರಹ್ಮ, ನಾರಾಯಣನೇ ಇಂದ್ರ, ನಾರಾಯಣನೇ ಶಿವ. ಜಗತ್ತಿನ ತುಂಬೆಲ್ಲ ಒಳಗೂ ಹೊರಗೂ ಸರ್ವದರಲ್ಲಿಯೂ ನಾರಾಯಣನೇ ಇರುವನು. ಅಂತಹ ವಿಷ್ಣುವಿಗೆ ನಮಸ್ಕಾರವು ಎಂದು ಮೊದಲಾಗಿ ನಾರಾಯಣೋಪನಿಷತ್ತು ಯಜುರ್ವೇದಾದಿಗಳು ಸಾರುತ್ತಿರುವಾಗ ವಿಷ್ಣು ವೇದವೇದ್ಯನಲ್ಲೆಂಬುದು ಹೇಗೆ ? ಹೇಳು"ಯೆನಲು ಪದ್ಮರಸರು ನಗುತ್ತ "ವಾದಿಯೇ, ನಿನಗೆ ವೇದಾರ್ಥವೇನೂ ತಿಳಿದಂತೆ ಕಾಣುವುದಿಲ್ಲ.ನಾರಾಯಣನೆಂಬುದೊಂದು ಶಿವನ ಗೌಣನಾಮ. ನಾರ ಎಂದರೆ ಜನಸಮೂಹ, ಅಣ ಎಂದರೆ ವರ್ತಿಸುವವ; ಇಂತಹ ವರ್ತನ ಶಂಭುವಿಗಲ್ಲದೆ ವಿಷ್ಣುವಿಗಲ್ಲ ಆದುದರಿಂದ ನಾರಾಯಣ ಶಬ್ದಕ್ಕೆ ಅರ್ಥ ಅಂತರಾತ್ಮ. ಅಂತರಾತ್ಮಸ್ವರೂಪನಾದ ಶಿವನೇ ನಾರಾಯಣನು. ಈ ಪರಿಯಲ್ಲಿ ವರ್ತಿಸುವ ಅಂತರಾತ್ಮ (ಈಶ್ವರ) ನೇ, ನಾರಾಯಣನು, ಅವನೇ ಪರಬ್ರಹ್ಮ ಪರತತ್ವ ಪರಂಜ್ಯೋತಿ ಪರಮಾತ್ಮ ಸುರಜ್ಯೇಷ್ಠ ಅವನೇ ಶಿವ; ಅನ್ಯರಲ್ಲ. ವಿಶ್ವದ ಒಳಹೊರಗೆ ಪರಿಪೂರ್ಣನಾಗಿರ್ಪನೆಂದು ನುಡಿಯುವ ಮಂತ್ರದ ಅಂತಸ್ಥವು ಆ ಮಹೇಶ್ವರನೇ ಎಂದು ಶಿವರಹಸ್ಯದಲ್ಲಿದೆ. ಈಶಾನಃ ಸಶಿವಃ ಕೃಷ್ಣಃ ವಿಷ್ಣುಃ ನಾರಾಯಣಃ ಎಂದು ಸ್ಕಾಂದದಲ್ಲಿಯೂ, ಅಜಃ ವಿಷ್ಣುಃ ಪಿತಾಮಹಃ ಕೇಶವಂ ಕೇಶಿಹಂತಾ ಎಂದು ರವಿಪುರಾಣದಲ್ಲಿಯೂ ಇರುವ ವಿಷ್ಣುನುತಿಯು ಮುಕುಂದಃ ವಿಗತಜ್ವರಃ ನಾರಾಯಣಾಯ ಶರ್ವಾಯ ಎಂಬ ನಾರಾಯಣನಾಮಕ ಶಿವನದೇ ಎಂದು ಲೈಂಗ್ಯಪುರಾಣದಲ್ಲಿದೆ. ಇದೇ ಮೇರೆಗೆ ನಮೋ ಪ್ರಕೃತಯೇ, ನಮೋ ನಾರಾಯಣಾಯ, ನಮೋ ಬ್ರಹ್ಮಣೇ, ನಮೋಸ್ತ್ವಗ್ನಯೇ, ನಮಃಪೃಥಿವ್ಯೈ, ಓಷಧೀಭ್ಯೋನಮೋ, ವಾಚೇನಮೋ ಇವೇಮೊದಲಾಗಿ ಅನೇಕ ಪರಿಯಲ್ಲಿ ಅನೇಕಪದಗಳಿಂದ ಆ ಅಂತರಾತ್ಮನನ್ನು ವಂದಿಸಿ ಕರೆ

ದುದುಂಟು. ಅವೆಲ್ಲವು ಶಿವನಾಮಗಳೇ. ಆ ಕಾರಣದಿಂದ ನಾರಾಯಣಾಯ ಶರ್ವಾಯ ಎಂಬ ವೇದವಾಕ್ಯವು ಶಿವನನ್ನೇ ಹೇಳುವದು. ನಮೋ ವಿಷ್ಣವೇ ಎಂಬ ಮಂತ್ರವೂ ವಿಷ್ಣುವನ್ನು ಕುರಿತುದಲ್ಲ. ಏಕೆಂದರೆ ಆ ಮಂತ್ರ ಭಾಗವತ ಪಾಂಚರಾತ್ರಗಳಲ್ಲಿಲ್ಲ. ಶಂಭುವಿಗೆ ವಿಷಲ್ ವ್ಯಾಪ್ತೌ ಎಂಬ ಧಾತುವಿನಿಂದ ವಿಷ್ಣು ಎಂಬ ಹೆಸರಿದ್ದು ನಮೋ ವಿಷ್ಣವೇ ಎಂಬ ಆ ಮನುವು ಶಿವನನ್ನು ಕುರಿತದ್ದು. ಇಷ್ಟೇ ಏಕೆ ವೇದಗಳು ಶಿವನಲ್ಲದೆ ಅನ್ಯದೇವತೆಗಳಿಗೆ ಮಂತ್ರಸಾಮ್ಯವನ್ನೀಯವು. ಅಭವಂಗಲ್ಲದೆ ಉಳಿದ ದೇವತೆಗಳಿಗೆ ವಂದನೆಯನ್ನೆಸಗದ ದೃಢ ಭಾಷೆ ಅವಕ್ಕಿದೆ. ಒಂದುವೇಳೆ ವಂದನೆಯನ್ನೆಸಗಿದ್ದಲ್ಲಿ ಹಿಂದೆ ವಿವರಿಸಿದಂತೆ (ನಮೋ ವಿಷ್ಣವೇ, ನಮೋ ನಾರಾಯಣಾಯ ಮುಂ.) ಧಾತುಯೌಗಿಕ ನಾಮದ ಈಶ್ವರನಿಗೇ ಹೊರತು ಅನ್ಯದೇವತೆಗಳಿಗಲ್ಲ. ಪುರಾಣ ಪಂಚಮ ವೇದಗಳೆಂದು ಹೇಳಿಸಿಕೊಂಡಿದ್ದು ಅವೂ ಇತಿಹಾಸಗಳೂ ಶಿವನೇ ವೇದನುತನೆಂದು ಹೇಳುವವು.

ಈ ರೀತಿಯಾಗಿ ಹಲವು ರೀತಿಯಲ್ಲಿ ಹಲವು ಉದಾಹರಣಗಳ ಮುಖಾಂತರವಾಗಿ ವಿವರಿಸಿ ವಿಷ್ಣುವು ವೇದಬಾಹಿರನೇ ಹೊರತು, ವೇದವೇದ್ಯನಲ್ಲವೆಂಬುದನ್ನು ಪದ್ಮರಸರು ಪ್ರತಿಷ್ಠಿಸಿದರು.

೯. ಗಂಗೆ ಹರಿಚರಣದಲ್ಲಿ ಹುಟ್ಟಿದಳೆಂಬುದನ್ನು ಖಂಡಿಸಿದುದು.

ಬ್ರಹ್ಮ, ವಿಷ್ಣು, ಶಿವ ಇವರು ಕ್ರಮದಿಂದ ಪೃಥ್ವಿ ಜಲ ಅಗ್ನಿಗಳನ್ನು ಅಧಿಕರಿಸಿಕೊಂಡಿರುವರು. ಬ್ರಹ್ಮಾತ್ಮಕಪೃಥ್ವಿಯು ವಿಶ್ವಜನನಕ್ರಿಯಾತ್ಮಕವಾದುದರಿಂದ ಬ್ರಹ್ಮನು ಸೃಷ್ಟಿಕರ್ತನೆನಿಸಿರುವನು. ವಿಷ್ಣ್ವಾತ್ಮಕಜಲವು ಇವೆಲ್ಲವನ್ನು ಸ್ಥಾಪಿಸುವುದರಿಂದ ವಿಷ್ಣು ಸ್ಥಿತಿಕರ್ತನೆನಿಸುವನು. ರುದ್ರಾತ್ಮಕ ಅಗ್ನಿಯು ಎಲ್ಲವನ್ನೂ ಸಂಹರಿಸುವುದರಿಂದ ರುದ್ರನು ಸಂಹಾರಕರ್ತೃವೆನಿಸುವನು. ಪೃಥ್ವಿ ಜಲ ಇವೆರಡೂ ಸ್ಥೂಲಗಳು. ಮೇಲೆ ಹೋಗಲಾರವು ಆಶ್ರಯ ಸಿಗುವವರೆಗೆ ಕೆಳಗೇ ಇಳಿಯತಕ್ಕುವು. ಇದರಂತೆಯೇ ಬ್ರಹ್ಮ ವಿಷ್ಣುಗಳು. ಅಗ್ನಿಯು ಊರ್ಧ್ವವಿಜೃಂಭಿಯೂ ರುದ್ರನ ತಾಂಡವವಿಲಾಸಾಡಂಬರಿಯೂ ಆಗಿರುವುದು. ವಾಯು ಆಕಾಶಗಳು ಅವನ ವಶವರ್ತಿಗಳು. ವಾಯು ಅಗ್ನಿಯನ್ನು ಹೆಚ್ಚಿಸುತ್ತಿದ್ದರೆ, ಆಕಾಶವು ಅವಕಾಶವನ್ನು ಕೊಡುವುದು. ಪ್ರಳಯಕಾಲದಲ್ಲಿ ಬ್ರಹ್ಮನು ಹರಿಯಲ್ಲಿ, ಪೃಥ್ವಿಯು ನೀರಲ್ಲಿ, ಹರಿಯು ರುದ್ರನಲ್ಲಿ ನೀರು ಅಗ್ನಿಯಲ್ಲಿ ಅಡಗಲು ರುದ್ರಾತ್ಮಕವಾದ ಅಗ್ನಿಯು ಸ್ವೈರವೃತ್ತಿಯಿಂದ ಮಹೇಶಾತ್ಮಕ ಪಾವಕನಿಂದ ಹೆಚ್ಚಿ ಸರ್ವವನ್ನೂ ಸಂಹರಿಸಲು ರುದ್ರನು ಮಹಾ ಸಂಸಾರತಾಂಡವೋತ್ಸುಕನಾಗಿ ಪಂಚ

ಮುಖ ದಶಬುಜಗಳುಳ್ಳವನಾಗಿ ನೋಟಕ್ಕೆ ಅದ್ಭುತವಾದ ಆಕಾರವನ್ನು ಧರಿಸಿ ನಟಿಸುವನು. ಆ ಸಮಯದಲ್ಲಿ, ಆತನ ಆತ್ಮಶಕ್ತಿಯ ಪರಮಾನಂದರಸವು ಹೊರ ಹೊಣ್ಮಿ, ಗಂಗೆಯೆನಿಸಿದಳು. ಶಂಕರನು ಆನಂದಿತನಾಗಿ ಆ ಗಂಗೆಯನ್ನು ತನ್ನ ಶಿರದಲ್ಲಿ ಧರಿಸಿಕೊಂಡನು.

ಗ ಎಂದರೆ ಗಗನ, ಗಾ ಎನಲು ಗಮನ. ಆಕಾಶದಲ್ಲಿ ಗಮನಮಾಡುವುದ ರಿಂದ ಪರಮಾತ್ಮನ ಆತ್ಮಶಕ್ತಿಯ ಆ ಪರಮಾನಂದರಸಕ್ಕೆ ಗಂಗೆಯೆಂಬ ಹೆಸ ರುಂಟಾಯಿತು. ಪ್ರಳಯಕಾಲದಲ್ಲಿ ಅವಳು ಸರ್ವವನ್ನೂ ಸಂಹರಿಸಿ ನರ್ತಿಸುವ ಶಿವನ ಕೇಶಜ್ವಾಲೆಯುರಿಯನ್ನು ಅತ್ತಲಿತ್ತ ಚಲಿಸಲಾರದೆ, ಶಿವನ ಜಡೆಯಲ್ಲಿ ಅಡಗಿ ದಳು. ಅದರಿಂದಲೇ ಶಿವನಿಗೆ ಗಂಗಾಧರನೆಂಬ ಹೆಸರುಂಟಾಯಿತು.

ಈ ಪ್ರಕಾರ ಸ್ಫುರಿಸುವ ಮಹಾಗಂಗೆ ಒಮ್ಮೆ ಜಟಾಪಟಲದ ರಂಧ್ರಗಳಿಂದ ಬಹುಮುಖವಾಗಿ ಹೊರಬಿದ್ದು ತನ್ನ ಧಾರೆಗಳಿಂದ ಶಿವನನ್ನು ಅಭಿಷೇಕಿಸಿ ಯಜಿಸಿ ಆನಂದದಿಂದ ಅವನ ಮುಂದೆ ನಿಲ್ಲಲು ಶಿವನು ಕಂಡು "ನೀನು ನನ್ನ ಎಲ್ಲ ಶಕ್ತಿ ಗಳಿಗೂ ಆನಂದದಾಯಿಯು. ನಿನ್ನ ಸಾಮರ್ಥ್ಯದ ಕೋಟ್ಯಾನುಕೋಟಿ ಅಂಶದ ಶಕ್ತಿಯನ್ನು ಈಗ ನೀನು ನದೀರೂಪದಿಂದ ಬೀಳ್ಕೊಡು" ಎಂದು ಹೇಳಿ ಸಂತವಿಸಿ ದನು. ಆ ಪ್ರಕಾರ ಮಹಾಗಂಗೆಯು ಸೃಷ್ಟಿ ಕಾಲದಲ್ಲಿ ಆಕಾಶಗಂಗೆ ನಾಮದಿಂದ ಬ್ರಹ್ಮಲೋಕದಲ್ಲಿ ಹರಿಯುವಳು, ಸಂಹಾರಕಾಲದಲ್ಲಿ ಶಿವನಲ್ಲಿ ಅಡಗುವಳು. ಮಹಾಗಂಗೆಯಪುತ್ರಿ ಆಕಾಶಗಂಗೆಯು ಬ್ರಹ್ಮಲೋಕದಲ್ಲಿ ಸುರರು ಅಸುರರು ಮುನಿಗಳಿಂದ ಪೂಜ್ಯಳಾಗಿ ಹರಿಯುತ್ತಿರಲು ಇಂದ್ರನ ಐರಾವತವು ಅಲ್ಲಿಗೆ ಬಂದು ದಾಡೆಯಿಂದ ದಂಡೆಯನ್ನು ಕಿತ್ತು, ಸೊಂಡಿಯಿಂದ ಕ್ಷೋಭೆಯನ್ನುಂಟುಮಾಡಿತು. ಗಂಗೆಯು ಕುಪಿತಳಾಗಿ ಘುಳುಘುಳಿಸುತ್ತ ಮೇರೆದಪ್ಪಿದಳು. ಕಾಂಡಪ್ರಳಯವಾಗ ತೊಡಗಿತು.ಬ್ರಹ್ಮ, ವಿಷ್ಣು, ಇಂದ್ರಾದಿಗಳು ಅಂಜಿ ಶಿವನಲ್ಲಿಗೆ ಬಂದು ನುತಿಸಿ ಈ ಪ್ರಳಯವನ್ನು ತಡೆಯುವಂತೆ ಕರುಣಿಸಬೇಕೆಂದು ಬೇಡಿಕೊಂಡರು. ಶಿವನು ನಸು ನಗುತ್ತ ಆ ಗಂಗೆಯನ್ನು ಒಂದು ಬಿಂದು ವಿನೋದಾದಿಯಲ್ಲಿ ಜಡೆಯಲ್ಲಿ ಧರಿಸಿದನು.

ಕೆಲವು ದಿನಗಳ ಮೇಲೆ ಶಿವನು ಲೋಕಶುದ್ಧಿಗಾಗಿ ತನ್ನ ಜಡೆಯೊಳಗಿನ ಆ ಮಹಾಗಂಗೆಯನ್ನು ಹಿಮಾಚಲದ ಉತ್ತುಂಗಶಿಖರದಲ್ಲಿ ಬೀಳ್ಕೊಡಲು ಆಕೆಯು ಕೋಟಿಮುಖವಾಗಿ ಸಮನೆಲ, ತಗ್ಗು, ದಿನ್ನೆ, ಗಿರಿ, ಗಂಹರ, ಪುಣ್ಯಭೂಮಿ, ವನ ಮೊದಲಾಗಿ ಸರ್ವವನ್ನೂ ವ್ಯಾಪಿಸಿ ಎಲ್ಲೆಲ್ಲಿಯೂ ತುಂಬಿ ಹರಿಯಹತ್ತಲು ಶಿವನು ಆಕೆಗೆ "ಎಲೇ ಜಗತ್ಪಾವನೀಪುತ್ರೀ, ಇಂದಿನಿಂದ ನೀನು ಸೌಮ್ಯಾಕಾರತಾಳಿ, ಭೂ ಗಗನ ಪಾತಾಳವೆಂಬೀ ತ್ರಿಪಥಗಾಮಿಯಾಗು; ಈ ರೀತಿಯನ್ನುಡುಗು" ಎಂದು

ಆಜ್ಞಾಪಿಸಿದನು. ಆ ಮೇರೆಗೆ ಅವಳು ತ್ರಿಪಥಗಾಮಿಯಾಗಿ ಹರಿಯತೊಡಗಿದಳು. ಅಂದಿನಿಂದ ಗಂಗೆಗೆ ತ್ರಿಪಥಗಾಮಿನಿಯೆಂಬ ಹೆಸರು ಪ್ರಾಪ್ತವಾಯಿತು.

ಮಂದಾಕಿನೀ ನಾಮ ಭೂಗಂಗೆ ಸುರಲೋಕದಿಂದ ಸಹಸ್ರಮುಖಿಯಾಗಿ ಬಂದು ಹರಜಟಾಗ್ರದ ಭಸ್ಮದಲ್ಲಿ ಇಂಗಿಹೋಗಲು ಭಗೀರಥನು ಶಂಕರರನನ್ನು ಭಜಿಸಿ ಆ ಗಂಗೆಯನ್ನು ಕಳುಹುವಂತೆ ಬೇಡಿಕೊಂಡನು. ಆಗ ಶಂಕರನು ತನ್ನ ಎರಡು ಬೆರಳುಗಳಿಂದ ಒರಿಸಲು ಅವನ ಆ ಬೆರಳ ನಖಗಳಿಂದ, ಆ ಭಸ್ಮದ ವರ್ಣ, ಪರಿಮಳಗಳೊಡನೆ ಕೂಡಿ,ಗಂಗೆಯು ಶಿವನ ಜಡೆಯಿಂದಿಳಿದು ಬಂದು, ಇಳೆಯನ್ನು ಪೊರೆದಳು. ಇಲ್ಲಿ ಕಾಶಿಗೆ ಬಂದು ಪರಮಪಾವನೆಯೆನಿಸಿರುವಳು.

ಈ ಪ್ರಕಾರ ಗಂಗೆಯ ಮೂಲಸೃಷ್ಟಿ, ಶಂಭು ಆಕೆಯನ್ನು ಧರಿಸಿದುದು, ಅದಕ್ಕೆ ಹೆಸರು ಬಂದುದು ಮೊದಲಾದ ಅದರ ಸರ್ವವೃತ್ತಾಂತವೆಲ್ಲವನ್ನೂ ಸೂತ ಮುನಿಯು ಶೌನಕಾದಿ ಋಷಿಗಳಿಗೆ ವಿವರಿಸಿದುದೆಂಬ ಕಾಶೀಖಂಡದೊಳಗಿನ ಕಥೆಯ ಮೂಲಕ ವಿವರಿಸಿದರು.

ಇನ್ನು "ಆಕಾಶಕ್ಕೆ ವಿಷ್ಣುಪದವೆಂಬ ಪರ್ಯಾಯನಾಮವುಂಟು. ಆಕಾಶ ಗಂಗೆಯು ಅಲ್ಲಿ ಹರಿಯುವದರಿಂದ, ಅದಕ್ಕೆ ವಿಷ್ಣುಪದಿಯೆಂಬ ಹೆಸರು ಬಂದಿರುವುದೇ ಹೊರತು, ಗಂಗೆಯು ವಿಷ್ಣುವಿನ ಪಾದದಲ್ಲಿ ಹುಟ್ಟಿದಳೆಂಬ ಉಕ್ತಿ ಅಬದ್ಧವೆಂದು ಸರ್ವಪುರಾಣಗಳೂ ಸಾರುತ್ತಿವೆ.ಆದುದರಿಂದ ವಾದಿಯೇ, ಈ ಮೂಢತನವನ್ನು ಬಿಡು" ಎಂದು ಹೇಳಿ, ಗಂಗೆಯು 'ವಿಷ್ಣುಪದೋದ್ಭೂತೆ' ಎಂಬ ಅವನ ಉಕ್ತಿಯನ್ನು ಖಂಡಿಸಿದರು.

೧೦. ವಿಷ್ಣು ಭಂಗರಹಿತನೆಂಬುಕ್ತಿಯನ್ನು ಖಂಡಿಸಿದುದು.

ದೇವತೆಗಳಿಗೆ ತಾರಕಾಸುರನ ಬಾಧೆ ಬಲವಾಗಿತ್ತು; ಶಿವನ ಔರಸಪುತ್ರನಿಂದಲ್ಲದೆ ಅವನ ಸಂಹಾರವಾಗುವಂತಿರಲಿಲ್ಲ. ಲೋಕಕಲ್ಯಾಣಕ್ಕಾಗಿ ಶಿವನು ಉಮೆಯೊಡನೆ ಮಂದರಪರ್ವತದಲ್ಲಿ ಕ್ರೀಡಿಸಿದನು. ಅವನ ಊರ್ಧ್ವರೇತಸ್ಸು ಹೊರಹೊಮ್ಮಿತು. ಅದು ಅಲ್ಲಿಯೇ ಕೆಲದಿನ ಉಳಿಯಲು ಉತ್ಪಾತಗಳಾಗತೊಡಗಿದುವು. ಈ ಸಂಗತಿ ನಾರದನಿಂದ ದೇವತೆಗಳಿಗೆ ತಿಳಿಯಿತು. ಆ ರೇತಸ್ಸನ್ನು ಯಾರಾದರೂ ಧರಿಸಲೇಬೇಕಾಗಿತ್ತು. ಅದನ್ನು ಗಿರಿಜೆ ಧರಿಸಿದರೆ, ಆಕೆಯಿಂದ ಹುಟ್ಟುವ ಮಗನು ತಮ್ಮೆಲ್ಲರಿಗೆ ದುಃಸ್ಸಹನಾಗುವನೆಂದೂ ಅದನ್ನು ತಮ್ಮಲ್ಲಿಯೇ ಯಾರಾದರೂ ಧರಿಸಬೇಕೆಂದೂ ಹರಿಬ್ರಹ್ಮಾದಿಗಳು ನಿಶ್ಚೈಸಿದರು. ಒಲ್ಲೆನೆಂದರೂ ಅಗ್ನಿ

ಯನ್ನು ಒಡಂಬಡಿಸಿದರು. ಅಗ್ನಿಯು ಶಿವನನ್ನು ಕಾಣಲಿಕ್ಕಾಗಿ ಹೋಗಿ, ಅದು ಆಗದೆ ಅಂಜಿ ತಿರುಗಿಬಂದನು; ಬಳಿಕ ದೇವತೆಗಳೆಲ್ಲರೂ ಮಂದರಾಚಲಕ್ಕೆ ಹೋಗಿ ಶಿವನನ್ನು ನುತಿಸಿದರು. ಆ ರೇತಸ್ಸನ್ನು ತಮಗೆ ಕೊಡಲು ಕೇಳಿಕೊಂಡರು. ಅದು ದುರ್ಧರವಾದುದೆಂದು ಹೇಳಿ, ನೀವು ಇಚ್ಛಿಸಿದರೆ ಕೊಡುವೆನೆಂದು ಶಿವನ್ನು ಹೇಳಿದನು. ಅಂಜುತ್ತ ಅಗ್ನಿಯು ಸುರರು ಕುಡಿಯುವರೂಪದಲ್ಲಿ ಅದನ್ನು ಕೊಡ ಬೇಕಾಗಿ ಕೈಯೊಡ್ಡಿದನು. ಭಾಸ್ಕರ ಪ್ರಭೆಯಿಂದ ಪ್ರಜ್ವಲಿಸುವ ಆ ರೇತಸ್ಸನ್ನು ಶಿವನು ಅಗ್ನಿಗೆ ಸುರಿದನು. ಅವನ ಮುಖಾಂತರ ಹರಿಬ್ರಹ್ಮಾದಿಗಳೆಲ್ಲರೂ ಅದನ್ನು ಅಮೃತವೆಂಬ ಭಾವನೆಯಿಂದ ಕುಡಿದರು; ಅದರ ದಾಹವನ್ನು ತಡೆಯ ಲಿಕ್ಕಾಗದೆ ಪಾತಾಳಕ್ಕಿಳಿದರು. ಆಗ ಶಿವನು ಪಾರ್ವತಿಗೆ ಈ ಸಂಗತಿಯನು ತಿಳಿಸಿದನು. ಪಾರ್ವತಿಯು ಸಿಟ್ಟಿನಿಂದ ಹರಿಮುಖ್ಯರಿಗೆ ಮಕ್ಕಳಾಗದಿರಲೆಂದು ಶಾಪಕೊಟ್ಟಳು. ಪಾತಾಳಕ್ಕಿಳಿದ ಹರಿಮುಖ್ಯರು ತಡೆಯಲಾರದೆ ಶರವಣನದಿಗೆ ಹೋಗಿ, ಗರ್ಭಸ್ಥರೇತಸ್ಸಿನ ಕೆಲವಂಶವನ್ನು, ಅದರಲ್ಲಿ ಬಿಟ್ಟರು. ಉಳಿದುದು ಅವರ ಗರ್ಭದಲ್ಲಿ ಐವತ್ತೆಂಟುಸಾವಿರವರುಷಗಳವರೆಗೂ ಉಳಿಯಿತು. ಅದರಿಂದ ಅವರಿಗೆ ಸ್ತ್ರೀರೂಪ ಬಂದಿತು, ಗರ್ಭಚಿಹ್ನವಂಕುರಿಸಿತು. ಆಗ ಲಜ್ಜಿತರಾಗಿ ಬಹುವಿಧ ದಿಂದ ಶಿವನನ್ನು ನುತಿಸಿ ಅವನನ್ನು ಪ್ರತ್ಯಕ್ಷ ಮಾಡಿಕೊಂಡರು. ಶಿವನು ಅವರ ಮೂರ್ಖತನಕ್ಕೆ ಛೀಹಾಕಿ ಶರವಣನದಿಯಲ್ಲಿ ಗರ್ಭವನ್ನು ತೊಳೆದುಕೊಳ್ಳಿರೆಂದು ಹೇಳಲು, ಅದರಂತೆ ಮಾಡಿ ಬದುಕಿ, ಅಜರಾಮರರೆನಿಸಿದರು. ಇತ್ತ ಶರವಣನದಿ ಯಲ್ಲಿ ಅವರು ಬಿಟ್ಟ ರೇತಸ್ಸು ಅಲ್ಲಿಗೆ ಸ್ನಾನಕ್ಕಾಗಿ ಬಂದ ಕೃತ್ತಿಕಾದಿ ಆರು ಕನ್ಯೆ ಯರ ಗರ್ಭವನ್ನು ಸೇರಿತು. ಅವರು ಅದನ್ನು ಧರಿಸಲಾರದೆ ಶಿವನ ಮೊರೆಹೊಕ್ಕು ಅದೇನದಿಯಲ್ಲಿ ಅವನ ಅಪ್ಪಣೆಯಂತೆ ಬಿಟ್ಟು ಬಿಟ್ಟರು. ಅದು ಅಲ್ಲಿ ಆರು ಮುಖದ ದಿವ್ಯಮೂರ್ತಿಯಾಗಿ ಬೆಳೆದು ಷಣ್ಮುಖನೆಂಬ ನಾಮದಿಂದ ಪ್ರಸಿದ್ಧ ನಾದನು. ತಾರಕಾಸುರನನ್ನು ಸಂಹರಿಸಿ ಲೋಕಕ್ಕೆ ಕ್ಷೇಮವನ್ನು ಮಾಡಿದನು. (ಸ್ಕಾಂದ, ಲೈಂಗ್ಯ, ರವಿ ಮೊದಲಾದ ಪುರಾಣಗಳಲ್ಲಿ). ಶಿವನ ವೀರ್ಯವನ್ನು ಕುಡಿದು, ಸ್ತ್ರೀಯಾಗಿ, ಬಸಿರಾಗಿ, ತಿರುಗಿ ಅವನನ್ನೇ ಭಜಿಸಿ ಬದುಕಿದ ವಿಷ್ಣುವು ಭಂಗರಹಿತನು ಹೇಗೆ ?

ಒಮ್ಮೆ ಬ್ರಹ್ಮವಿಷ್ಣುಗಳಿಬ್ಬರೂ ನಾ ಹೆಚ್ಚು ತಾ ಹೆಚ್ಚು ಎಂದು ಬಡಿದಾಡು ತ್ತಿರುವಾಗ ಶಿವನು ಆದ್ಯಂತಗಳು ತೋರದಂತೆ ಪರಂಜ್ಯೋತಿರಾಕಾರದಲ್ಲಿ ಅವರ ನಡುವೆ ನಿಂತನು. ಆ ಲಿಂಗದ ಆದಿ ಚರಮಂಗಳನ್ನು ಕಾಣಲು ವಿಷ್ಣು ಸೂಕರನಾಗಿ ಭೂಮಿಯಲ್ಲಿ,ಬ್ರಹ್ಮನು ಹದ್ದಾಗಿ ಆಕಾಶದಲ್ಲಿ ಎಷ್ಟೋ ವರ್ಷ ಹುಡುಕಿದರೂ

ಕಾಣದೆ ಭಂಗಪಟ್ಟು ಶಿವನನ್ನು ನುತಿಸಿ ಬದುಕಿದರು (ಧರ್ಮಸಂಹಿತೆ). ದೇವತ್ವವನ್ನು ಬಿಟ್ಟು ಸೂಕರನಾಗಿ ಅಧೋದ್ವಾರಕ್ಕಿಳಿದು ಹುಡುಕಿದರೂ ಶಿವನನ್ನು ಕಾಣದೆ ಭಂಗಪಟ್ಟು ಕಡೆಗೆ ಶಿವನನ್ನೇ ಮೊರೆಹೊಕ್ಕ ಹರಿಯು ಭಂಗರಹಿತನೇ?

ಮತ್ತೊಮ್ಮೆ ಬ್ರಹ್ಮವಿಷ್ಣುಗಳಿಬ್ಬರೂ ತಾನೇ ಅಧಿಕದೈವವೆಂದು ಬಡಿದಾಡು ತ್ತಿರುವಾಗ ಚತುರ್ವೇದಗಳು ಸಾಕಾರವಾಗಿ ಬಂದು, ಹಲವು ರೀತಿಯಲ್ಲಿ, ಶಿವನೇ ಅಧಿಕದೈವವೆಂದು ಬೋಧಿಸಲು, ಹರಿಯು ತೆಪ್ಪಗಾದನು.

ಇನ್ನೊಮ್ಮೆ ಶಿವನು ಭಿಕ್ಷಾಟನಲೀಲೆಯಲ್ಲಿ ಬ್ರಹ್ಮಕಪಾಲವನ್ನು ಹಿಡಿದು ಕೊಂಡು ರಕ್ತ ಭಿಕ್ಷೆಗಾಗಿ ಹರಿಯ ಮನೆಗೆ ಬರಲು, ವಿಷ್ವಕ್ಸೇನನೆಂಬ ಹರಿಯಂಶ ನೊಬ್ಬನು ಬಾಗಿಲಲ್ಲಿ ತಡೆದನು. ಶಿವನು ಅವನನ್ನು ಶೂಲದಿಂದ ತಿವಿದು ಕೊಂದು ಒಳಗೆಹೋದನು. ಹರಿಯು ಹರನ ಬಗೆಯನ್ನರಿತು ತನ್ನ ಹಣೆಯನ್ನು ಸೀಳಿ ಪುಟಿಯುವ ರಕ್ತವನ್ನು ಎಷ್ಟೋ ವರ್ಷ ನೀಡಿದರೂ ಅವನ ಕಪಾಲವು ತುಂಬಲಿಲ್ಲ. ಹರಿಯು ಶಕ್ತಿಗೆಟ್ಟು ಬಿದ್ದುಬಿಡಲು ಶಿವನು ಕರುಣಿಸಿದನು (ಬ್ರಹ್ಮಾಂಡಮುಖ್ಯ ಪೌರಾಣಗಳು). ಈ ವ್ಯವಸ್ಥೆಗೀಡಾದ ಹರಿಯು ಅಭಂಗನೇ ?

ದಕ್ಷನ ಯಜ್ಞದಲ್ಲಿ, ಶಿವನನ್ನು ಬಿಟ್ಟು ತಾವೇ ಯಜ್ಞಸಾಂಗಗೊಳಿಸಿದ್ದಕ್ಕಾಗಿ, ಶಿವನು ಕೋಪಿಸಿ ವೀರಭದ್ರನನ್ನು ಕಳುಹಿದನು. ಅವನು ಬಂದು, ಅಲ್ಲಿ ಕೂಡಿದ ಋಷಿಗಳು ದೇವತೆಗಳು ಎಲ್ಲರನ್ನೂ ವಿವಿಧರೀತಿಯಿಂದ ಭಂಗಗೊಳಿಸುತ್ತಿರಲು ಹರಿಯು ಯಜ್ಞದ ಬೂದಿಯಲ್ಲಿ ಅಡಗಿದನು. ವೀರೇಶನು ಅವನನ್ನು ಜುಟ್ಟ ಹಿಡಿದು ತೆಗೆದು,ತಲೆಯನ್ನು ಕತ್ತರಿಸುವ ಸಮಯದಲ್ಲಿ "ಭಸ್ಮಲೇಪಿತನಾದ ನನ್ನನ್ನು ಕಾಯಬೇಡವೇ ದೇವಾ" ಎಂದು ಬೇಡಿಕೊಳ್ಳಲು,ವೀರೇಶನು ಉಳಿಸಿದನು(ಋಕ್ಕು, ಯಜುಸ್ಸು, ಸ್ಕಾಂದ, ಲೈಂಗ್ಯ, ವಾಯವೀಯ). ಮಾಯಾವಿ ಹರಿ ಭಂಗರಹತನೇ?

ಕ್ಷುಪನಿಮಿತ್ತ, ಹರಿಯು ದಧೀಚಿಯ ಮೇಲೆ ಚಕ್ರವನ್ನೆಸೆಯಲು, ಅದನ್ನವನು ಮುರಿದನು. ಹರಿಯು ಕೋಪಿಸಿ ವಿಶ್ವರೂಪ ತೋರಿಸಲು, ಋಷಿಯು ಕಾಲ್ಬೆರಳಿ ನಿಂದ ತೋರಿಸಿ ಅವನ ಎದೆಗೆ ಒದೆದನು. ಆಗ ಹರಿಯು ನೊಂದು ದುಃಖಿತನಾಗಿ ಋಷಿಗೆ ನಮಿಸಿ, ಬದುಕಿದನು (ಲೈಂಗ್ಯಪುರಾಣ). ಋಷಿಯಿಂದ ಹೀಗೆ ಭಂಗ ಪಟ್ಟವನು ಅಭಂಗನೇ ?

ಜಲಂಧರನೊಡನೆ ನೂರುವರ್ಷ ಕಾದಿದರೂ ಗೆಲ್ಲಲಿಕ್ಕಾಗದೆ ಸೋತು ಬಂದು ಶಿವನ ಮೊರೆಹೊಗಲು ಶಿವನು ಜಲಂಧರನನ್ನು ಕೊಂದು ಹರಿಯನುಳಿಸಿದನು (ಶೈವಪುರಾಣ).

ಹರಿಯು ಜರಾಸಂಧನಿಗೆ ಅಂಜಿ ಎಂಬತ್ತುನಾಲ್ಕು ದುರ್ಗಗಳನ್ನು ರಚಿಸಿ ಅಡಗಿಕೊಂಡನು (ಭಾರತ). ಇವನೆಂತಹ ಅಭಂಗನು ?

ಹರಿಯು ತಾರಕಾಸುರನೊಡನೆ ೨೦ ಸಾವಿರ ವರ್ಷ ಕಾದಿ, ಸೋತು, ಓಡಿ ಸಮುದ್ರವನ್ನು ಹೊಕ್ಕು ಅಡಗಿ, ಹೊರಬರಲು ಅಂಜಿ, ಶಿವನನ್ನು ಸ್ತುತಿಸಿ, ಅವನ ಮಗನಿಂದ ತಾರಕನನ್ನು ಸಂಹಾರಮಾಡಿಸಿ ಬದುಕಿದನು (ರವಿಪುರಾಣ).

ರಾವಣನು ಸೀತೆಯನ್ನೊಯ್ಯಲು, ಶೋಕಿಸಿ, ಶಿವನನ್ನು ಭಜಿಸಿ, ಸೇತುವೆ ಕಟ್ಟಿ, ರಾಮನು ಸತಿಯನ್ನು ಪಡೆದನು (ರಾಮಾಯಣ).

ಈ ಪ್ರಕಾರ ವಿಷ್ಣುವು ಭಂಗಪಟ್ಟ ಅನೇಕ ಉದಾಹರಣಗಳನ್ನು ತೋರಿಸಿ, ವಿಷ್ಣುವು ಭಂಗರಹಿತನೆಂಬುಕ್ತಿಯನ್ನು ಖಂಡಿಸಿದರು.

೧೧. ವಿಷ್ಣುವು ಸ್ವತಂತ್ರಚರಿತನೆಂಬುಕ್ತಿಯನ್ನು ಖಂಡಿಸಿದುದು.

ಶಿವನ ಆಜ್ಞಾಬಲದಿಂದ ಬ್ರಹ್ಮವಿಷ್ಣ್ವಾದಿಗಳು ಹುಟ್ಟುವರು, ಸಾಯುವರು. ಒಂಟಿ ಕತ್ತೆಗಳಹಾಗೆ ಅವರ ಬಾಳು ಕರಕಷ್ಟವಾದುದು (ಸೂತಗೀತೆ).

ಈಶ್ವರನ ಆಜ್ಞೆಯ ಮೇರೆಗೆ ಬ್ರಹ್ಮನು ಸೃಷ್ಟಿಯನ್ನು ರಚಿಸುವನು. ವಿಷ್ಣುವು ರಕ್ಷಿಸುವನು. ಈ ಜಗತ್ತಿನಲ್ಲಿ ಕಾಣುವ, ಕೇಳುವ, ಎಲ್ಲವೂ ಶಿವನಿಂದಲೇ ನಿರ್ಮಿತವಾದುವು (ವಾಯವೀಯ).

ಪೂರ್ವದಲ್ಲಿ ಇಂದ್ರಾದಿ ಸಕಲ ದೇವತೆಗಳೂ ಕೂಡಿ, ದನುಜರನ್ನು ಗೆದ್ದು, ಆ ಜಯವು ತನ್ನದು ತನ್ನದು ಎಂದು, ಅಭಿಮಾನದಿಂದ ಜಗಳಾಡುತ್ತಿರಲು, ಶಿವನು ಯಕ್ಷರೂಪದಿಂದ ಅಲ್ಲಿಗೆ ಬಂದು ನಿಂತುಕೊಂಡು "ನಿಮಗೇಕೆ ಈ ಒಣಜಗಳ ನಾನಿಟ್ಟ ಹುಲ್ಲುಕಡ್ಡಿಯನ್ನು ಯಾರು ಎತ್ತುವರೋ ಅವರೇ ದನುಜರನ್ನು ಗೆದ್ದವರು" ಎಂದು ಹೇಳಿ, ಒಂದು ಹುಲ್ಲುಕಡ್ಡಿಯನ್ನಿಟ್ಟನು. ಆ ಮಾತಿಗೆ ಎಲ್ಲರೂ ಒಪ್ಪಿ, ಅದನ್ನೆತ್ತಹೋಗಿ, ಎತ್ತಲಾಗದೆ, ಅನೇಕರೀತಿಯಿಂದ ಎಲ್ಲರೂ ಬನ್ನಬಟ್ಟರು. ಆಗ ಇಂದ್ರನು "ನಮಗೆ ಈಪ್ರಕಾರ ಸೆಣಸಾಟಕ್ಕೆ ಹಚ್ಚಿದ ಆ ಪ್ರೌಢನಾರು" ಎನ್ನುವಷ್ಟರಲ್ಲಿಯೇ,ಶಿವನು ಅಲ್ಲಿ ಅದೃಶ್ಯನಾಗಿ,ಪಾರ್ವತಿಯಲ್ಲಿ ಕಾಣಿಸಿಕೊಂಡನು. ಸುರರೆಲ್ಲರೂ"ಈತನಾರು ತಾಯೇ"ಎಂದು ಕೇಳಲು, ಪಾರ್ವತಿಯು "ಆತನು ನಿಮಗೆ ಅಭೇದ್ಯನು. ಜಗತ್ತಿನ ಉತ್ಪತ್ತಿ ಸ್ಥಿತಿ ಸಂಹಾರಗಳು ಆತನಿಂದಲೇ ನಡೆಯುವವು. ಆತನು ಸ್ವತಂತ್ರನು. ಆತನ ಆಜ್ಞೆಯಿಂದ ಸರ್ವವೂ ನಡೆಯುವುದು" ಎಂದು

ಹೇಳಿ ಪಾರ್ವತಿಯು ಅದೃಶ್ಯಳಾದಳು ಹರಿ ಮುಖ್ಯದೇವರುಗಳು ನಾಚಿ, ಈಶನನ್ನು ಸ್ತುತಿಸಿ ಬದುಕಿದರು (ಶೈವಪುರಾಣ). ಶಿವನಿಟ್ಟ ಹುಲ್ಲಿಗಿಂತಲೂ ಕಡೆಯಾದ ಹರಿಯು ಸ್ವತಂತ್ರ ಚರಿತನು ಹೇಗೆ ?

ಆ ಪರಮಾತ್ಮನ ಆಜ್ಞೆಯ ಹೊರತು ಹುಲ್ಲುಕಡ್ಡಿಯೂ ಚಲಿಸುವುದಿಲ್ಲ (ಉಪನಿಷತ್ತು, ಲೈಂಗ್ಯ).

ಆ ಯಕ್ಷನಿಕ್ಕಿದ ಕಡ್ಡಿಯನ್ನು ಇಂದ್ರನು ವಜ್ರಾಯುಧದಿಂದಲೂ ನಾಶ ಗೊಳಿಸಲು ಸಮರ್ಥನಾಗಲಿಲ್ಲ. ವಾಯುವಿಗೆ ಅಲ್ಲಾಡಿಸಲಾಗಲಿಲ್ಲ ವಿಷ್ಣು ಬ್ರಹ್ಮರು ಸುಮ್ಮನೆ ಶಕ್ತಿಗೆಟ್ಟರಲ್ಲದೆ ಎತ್ತಲಿಕ್ಕಾಗಲಿಲ್ಲ. ಈ ಮಾಯೆಯು ಶಿವನದೇ ಎಂಬುದನ್ನು ಸಹ ತಿಳಿಯಲಿಕ್ಕಾಗದೆ ಪಾರ್ವತಿಯಿಂದ ಅದನ್ನು ತಿಳಿದು ಶಿವನ ಮೊರೆವೊಕ್ಕರು (ಬ್ರಹ್ಮಗೀತೆ). ಶಿವನ ಆಜ್ಞಾವರ್ತಿ ಹರಿಯು ಸ್ವತಂತ ಚರಿತನೆಂತು ?

ಶಿವನ ಉತ್ತಮ ಆಜ್ಞೆಗೆ ವಾಯು, ಸೂರ್ಯ, ಅಗ್ನಿ, ಇಂದ್ರ, ಯಮ, ಅಖಿಲ ಜಗತ್ತು ಭೀತಿಯಿಂದ ಕುಂದದೆ ಪೆರ್ಚದೆ ಆರೈದು ನಡೆವರು. ಸಾಕ್ಷಾತ್ ಶಿವನಿಗೆ ಈ ಸರ್ವ ಜಗತ್ತೂ ನಡುಗುವುದು (ಶೈವಪುರಾಣ).

ಈ ರೀತಿ ದೃಷ್ಟಾಂತಗಳನ್ನು ತೋರಿಸಿ, ವಿಷ್ಣುವು ಶಿವನ ಆಜ್ಞೆಯ ಮೇರೆಗೆ ನಡೆಯಬೇಕಾದವನೇ ಹೊರತು, ಸ್ವತಂತ್ರಚರಿತನಲ್ಲವೆಂಬುದನ್ನೂ ಶಿವನೇ ಸ್ವತಂತ್ರ ಚರಿತನೆಂಬುದನ್ನೂ ಪ್ರತಿಷ್ಠಾಪಿಸಿದರು.

೧೨. ವಿಷ್ಣುವು ಜ್ಞೇಯನೆಂಬ ಉಕ್ತಿಯನ್ನು ಖಂಡಿಸಿದುದು.

ಮುರಾರಿಯು ಉರುಲಿಂಗವನ್ನು 'ಶಿವರೂಪಿಯಾದ ಇವನು ದುರ್ಜಯನು ವಿಜ್ಞೇಯನು' ಎಂದು ಸ್ತುತಿಸುವನು (ಶೈವಪುರಾಣ). ಅಂದ ಮೇಲೆ ವಿಷ್ಣುವು ಜ್ಞೇಯನು ಹೇಗೆ ?

ಶಿವನೇ ಜಗತ್ತಿಗೆ ಏಕೈಕವಂದ್ಯನು, ವಿಶ್ವಕ್ಕೆ ಉಪರಿಪದಸ್ಥನು, ಎಲ್ಲರಿಗೂ ಆತನೇ ಜ್ಞೇಯನು (ಕಾಳಿಕಾಖಂಡದಲ್ಲಿ ಗಜಾಸುರೋಕ್ತಿ).

ಹಲವು ಶಾಖೆಗಳುಳ್ಳ ಅನಂತವಾದ ವೇದವು ಆತ್ಮರೂಪನಾದ ಶಂಭುವನ್ನು ಏಕೈಕವೇದ್ಯನೆಂದು ಉಲಿವುದು (ಶಿವರಹಸ್ಯ).

ಸಾಂಖ್ಯ ಯೋಗ ಪಾಂಚರಾತ್ರ ವೇದ ಪಾಶುಪತ ಇವೈದು ಜ್ಞಾನಮಯಿಗಳು. ಇವೆಲ್ಲವುಗಳಲ್ಲಿಯೂ ಶಂಕರನೊಬ್ಬನೇ ಜ್ಞೇಯನು (ಸ್ಕಾಂದ).

ಸಾಕಾರನೂ, ನಿರಾಕಾರನೂ, ಮಹಾತ್ಮನಾದ ಉಮೇಶನೊಬ್ಬನೇ. ಆತನಿಗಿಂತಲೂ ಅಧಿಕವಾದ ಜ್ಞಾನವಾಗಲಿ, ಜ್ಞೇಯನಾಗಲಿ ಇಲ್ಲ (ಸ್ಕಾಂದ).

ಜ್ಞಾನಪ್ರಸಾದಾರ್ಥವಾಗಿ ಸನಾತನ ಶಿವನನ್ನು ಉಪಾಸಿಸತಕ್ಕದ್ದು (ಸೂತಸಂಹಿತೆ). ಆದುದರಿಂದ ಶಂಭುವೇ ಜ್ಞೇಯನೆಂಬುದು ಸಿದ್ಧ. ವಿಷ್ಣುವೆಂತು ಜ್ಞೇಯಂ ?

ಚತುರ್ವೇದಗಳು ಒಮ್ಮೆಯಾದರೂ ಶಿವನುಳಿದ ದೇವತೆಗಳನ್ನು ಜ್ಞೇಯರು, ಧ್ಯೇಯರು ಎಂದು ಹೇಳಿದುದಿಲ್ಲ (ಪಾರಾಶರ).

ಈ ಪ್ರಕಾರ ಹಲವು ಆಧಾರಗಳಿಂದ, ಶಿವನೇ ಜ್ಞೇಯನಲ್ಲದೆ ವಿಷ್ಣು ಜ್ಞೇಯನಲ್ಲವೆಂಬುದನ್ನು ಸಿದ್ಧಮಾಡಿ,ವಿಷ್ಣು ಜ್ಞೇಯನೆಂಬುಕ್ತಿಯನ್ನು ಖಂಡಿಡಸಿರು.

೧೩. ವಿಷ್ಣುವು ಧ್ಯೇಯನೆಂಬುಕ್ತಿಯುನ್ನು ಖಂಡಿಸಿದುದು.

ಜಗತ್ತಿಗೆ (ಕಲ್ಯಾಣವನ್ನುಂಟುಮಾಡುವವನು) ದೇವನು ಏಕೈಕಶಿವನು. ಆದುದರಿಂದ ಅವನೇ ಧ್ಯೇಯವೆಂದು ತಿಳಿಯಬೇಕು; ಉಳಿದವರನ್ನು ಬಿಡಬೇಕು. (ಅಥರ್ವ). ಅಂದಮೇಲೆ ವಿಷ್ಣುವು ಧ್ಯೇಯನು ಹೇಗೆ ?

ಶಿವನೊಬ್ಬನೇ ಕಲ್ಯಾಣಕರನು; ಉಳಿದವರಲ್ಲ.ಆದುದರಿಂದ ಅವನೇ ಧ್ಯೇಯನೆಂದು ಅಥರ್ವಣಿ ಹಾಗು ಶ್ರುತಿಗಳು ಹೇಳುತ್ತವೆ (ಪಾರಾಶರ).

ಅಥರ್ವವೇ ಗಿಡ, ಅದಕ್ಕೆ ತಾರವೆ ಕಾಂಡವು. ಶಕ್ತಿಯೇ ಜಾತಿ, ವೇದತ್ರಯಗಳೇ ಎಲೆಗಳು. ಸ್ಮೃತಿಪುರಾಣಂಗಳಂಗಷಟ್ಕವೇ ಲಲಿತಶಾಖೆಗಳು, ಅಖಿಲ ತರ್ಕಂಗಳೇ ರಕ್ಷಾಪತ್ರ, ಶಿವಜ್ಞಾನವೇ ಪುಷ್ಪ, ಮುಕ್ತಿಯೆ ಸುಫಲ ಎಂದಿರುವುದರಿಂದ ಶಿವನೇ ಧ್ಯೇಯ. ಭುಕ್ತಿ ಮುಕ್ತಿಗಳನ್ನು ಬಯಸುವವರು ಉಳಿದ ದೇವರುಗಳನ್ನು ಬಿಟ್ಟು ಈಶ್ವರನನ್ನೇ ಜಾನಿಸಬೇಕು (ಸೂತಗೀತೆ).

ಶರ್ವನೇ ಸದಮಲ ಪರಾತ್ಪರ ಉರುಪಡನು. ಆತನೇ ಹೃನ್ಮಧ್ಯದಲ್ಲಿ ನಿಂದು ಧ್ಯೇಯನಾಗಿರುವನು. ಅವನ ಧ್ಯಾನದಿಂದಲೇ ಜ್ಞಾನ ದೊರೆವುದು.

ಧ್ಯಾನವಿಲ್ಲದೆ ಶಿವಜ್ಞಾನವಿಲ್ಲ. ಆ ಶಿವಜ್ಞಾನವನ್ನು ಬಿಟ್ಟು ಭುಕ್ತಿ ಮುಕ್ತಿಗಳು ದೊರೆಯಲಾರವು. ಸರ್ವೇಶನಾದ ಪರಮಾತ್ಮನೇ ಮನೋಮಂದಿರದಲ್ಲಿ ಪರ ತತ್ವದ ನೀತಿಯಿಂದ ಧ್ಯೇಯನಾಗಿರುವನು. ಅವನ ಹೊರತು ವಿಷ್ಣು ಬ್ರಹ್ಮ ಮೊದಲಾದವರು ಧ್ಯೇಯರಲ್ಲ. ಮರೆತು ಒಮ್ಮೆಯಾದರೂ ಸ್ವಪ್ರಧಾನತೆಯಿಂದ ಅವರು ಧ್ಯೇಯರಾಗರು. ಆದುದರಿಂದ ಶಿವನಲ್ಲದೆ ಉಳಿದವರನ್ನು ಬಿಡಬೇಕು. ಹೀಗೆ ಅಥರ್ವೋಕ್ತಿ ಹೇಳುವುದು (ಮಾನವಪುರಾಣ).

ಧ್ಯಾನವು ಉತ್ತಮ ಅಧಮ ಎಂದು ಎರಡು ಪ್ರಕಾರವಾಗಿದೆ. ಶಿವಧ್ಯಾನವು ಉತ್ತಮವಾದುದು. ಉಳಿದ ದೇವತೆಗಳ ಧ್ಯಾನವು ಅಧಮವು. ಮುಮುಕ್ಷು ಗಳು ಶಿವನೊಬ್ಬನನ್ನೇ ಧ್ಯೇಯವಾಗಿಟ್ಟುಕೊಳ್ಳಬೇಕು. ಉಳಿದ ದೇವತೆಗಳನ್ನು ಬಿಡಬೇಕು ಎಂದು ಅಥರ್ವ ಹೇಳುವುದು (ಸೂತಸಂಹಿತೆ). ಕೃಷ್ಣಂ ಅದೆಂತು ಧ್ಯೇಯಂ ?

ವಿವಿಧ ವೇದಗಳು ವಿಷ್ಣುಗೀತಿ ಪಾರಾಶರಗಳಲ್ಲಿ ಶಿವನೇ ಧ್ಯೇಯನೆಂದುದಿದೆ. 'ಧ್ಯೇಯಾಯ ಪಂಚವಕ್ತ್ರಾಯ' ಎಂದು ಶಿವಪುರಾಣದಲ್ಲಿದೆ. ಯಜನುತಿ, ವಿಷ್ಣು ನುತಿ, ಸ್ಕಾಂದ ಹೇಳಲೇನು ಅಖಿಲಮುಂಟು. ಉತ್ತಮ ಶಿವನೇ ಧ್ಯೇಯ. ಅಚ್ಯು ತನು ಧ್ಯೇಯನಲ್ಲ ಈ ಪ್ರಕಾರ ಬೋಧಿಸಿ, ವಿಷ್ಣು ಧ್ಯೇಯನಲ್ಲವೆಂಬುದನ್ನು ಖಂಡಿಸಿದರು.

೧೪. ವಿಷ್ಣುವು ಪರತತ್ವವೆಂಬುಕ್ತಿಯನ್ನು ಖಂಡಿಸಿದುದು.

ಆದಿಶಿವನನ್ನು ಬಿಟ್ಟು ಸಕಲವೇದಗಳೂ ವಿಷ್ಣ್ವಾದಿಗಳೇ ಪರತತ್ವಂಗಳೆಂದು ಹೇಳುತ್ತವೆಂದು ಕೆಲವರು ಮೂಢರು ಒದರುವರು. ಇದು ಅವರ ಭ್ರಾಂತಿ, ಶಿವನನ್ನುಳಿದು ಬ್ರಹ್ಮ, ವಿಷ್ಣು ಮೊದಲಾದ ಯಾವದೇವತೆಗಳೂ ಪರತತ್ವವಲ್ಲೆಂದು ವೇದ, ಶಾಸ್ತ್ರ, ಪುರಾಣಗಳೆಲ್ಲವೂ ಸಾರುತ್ತಿವೆ. (ಪಾರಾಶರ). ಈ ನಿಮಿತ್ತವಾಗಿ ಕೃಷ್ಣನು ಪರತತ್ವವಲ್ಲ.

ವಿಷ್ಣುವಿನ ಹೆಸರುಗಳು ಎಲ್ಲಿಯೂ ಪರತತ್ವವೆನಿಸಿಲ್ಲ. ಇದು ಸತ್ಯ. ಎಲ್ಲಿ ಯಾದರೂ ಅನಿಸಿದರೆ ಅದು ಬಹು ಪ್ರಯಾಸಪಟ್ಟು ಯೋಗವೃತ್ತಿಯಿಂದ ಮಾಡಿ ಕೊಂಡ ಅರ್ಥವು ಇದು ಎಂದು ಅರಿಯದೆ ಅದೇ ಮುಖ್ಯವಾದ ಅರ್ಥವೆಂದು ತಿಳಿಯುವವನು ನಾರಕಿ (ಪಾರಾಶರ, ಮನೂಕ್ತಿ).

ಪರತತ್ವವಾದಿ ಸಂಜ್ಞನು ಈಶ. ವಿಷ್ಣು ಮತ್ತು ಅವನ ಹೆಸರುಗಳು ಪರ ತತ್ವವಲ್ಲ. ಇದು ಸತ್ಯ. ಈ ಅರಿವು ಮಹಾಪುಣ್ಯದಿಂದ ಪ್ರಾಪ್ತವಾಗುವುದು (ಮನುಸೂಕ್ತಿ-ಸಾಂಬ).

ದೇವತಾ ಸಮೂಹದಲ್ಲಿ ಯಾವನು ಜನನರಹಿತನೆಂದೂ ಪರಮೇಶ್ವರನೆಂದೂ ಸ್ತುತಿಸಲ್ಪಟ್ಟಿರುವನೋ ಅಂತಹ ಕಾಯರಹಿತನೂ ನಿರ್ಮಲಾತ್ಮನೂ ಆದವನೇ ನನ್ನ ಮನಕ್ಕೆ ಶಿವಸಂಕಲ್ಪವನ್ನುಂಟುಮಾಡಲಿ (ಶಿವಸಂಕಲ್ಪೋಪನಿಷತ್ತು).

ವಿಷ್ಣುವಿಗಿಂತಲೂ ಅಧಿಕತರವಾದ ಪದವು ಈಶನದು (ಋಗ್ವೇದ).

ಯಾವಾಗಲೂ ಶಿವನೇ ಪರತತ್ವವು; ಉಳಿದವರಾರೂ ಅಲ್ಲ. ಈ ಮಾತು ಸತ್ಯ, ಸ್ಥಿರ, ಸಿದ್ಧಾಂತ. ಎಲ್ಲ ವೇದಾಂತವೂ ಇದನ್ನೇ ಹೇಳುತ್ತಿದೆ. ಇದಕ್ಕೆ ಪ್ರಮಾಣವಾಗಿ ಕಾಯ್ದ ಕಬ್ಬಿಣದ ಕೊಡಲಿಯನ್ನು ಹಿಡಿಯುವೆನು. ಎಷ್ಟೂ ಸಂಶಯವಿಲ್ಲ ಎಂದು ಅಜನು ದೇವತೆಗಳಿಗೆ ಹೇಳಿದಮಾತು (ಬ್ರಹ್ಮಗೀತೆ).

ಈಶನೇ ಪರತತ್ವ. ಸಕಲ ವೇದಾರ್ಥಗಳು ಇದನ್ನೇ ಸಾರುತ್ತಿವೆ. ಇದಕ್ಕೆ ನಾನು ಮೂರು ಸಲ ಪ್ರತಿಜ್ಞೆ ಮಾಡುವೆನು. ಶಿವಪದವೇ ದಿವ್ಯವಾದುದು. ನಾನು ಹುಸಿದರೆ ನನ್ನ ತಲೆ ಹರಿದು ಬೀಳಲಿ (ಬ್ರಹ್ಮಗೀತೆ).

ಈ ಪ್ರಕಾರದ ಅವತರಣಿಕೆಗಳನ್ನುದಾಹರಿಸಿ; ಪದ್ಮರಸರು, ವಿಷ್ಣುವು ಪರ ತತ್ವವೆಂಬುಕ್ತಿಯನ್ನು ಖಂಡಿಸಿ, ಶಿವನೇ ಪರತತ್ವವೆಂಬುದನ್ನು ಪ್ರತಿಷ್ಠಾಪಿಸಿದರು.

ಹೀಗೆ ಗುರುವರನು ವಾದಿಯ ಪ್ರಶ್ನೆಗಳಿಗೆ, ಮೊದಲಿಂದವೂ ಉತ್ತರಗಳನ್ನು ಕೊಟ್ಟು ಖಂಡಿಸಲು, ಬುದ್ಧಿಶೂನ್ಯನಾಗಿ, ಮುಂದೇನು ಮಾಡಬೇಕೆಂಬುದು ತಿಳಿಯದೆ,ವಾದಿಯು ಅಪ್ರಾಸಂಗಿಕವಾದ ಅದ್ವೈತಾವಲಂಬನದಿಂದ ಮರಸಿ ನುಡಿದು, ಒಂದು ಉಪಾಯವನ್ನು ಹುಡುಕಿ "ನೀನು ಪರತತ್ವವೆಂದು ಹೇಳುವ ಬೊಮ್ಮವೇ ಗುಣೋಪಾದಿಯಿಂದ ಮೂರು ರೂಪವನ್ನು ತಾಳಿ ಹಲವಾಯಿತು; ಅವರಲ್ಲಿ ಮೇಲು ಕೀಳುಗಳೇಕೆ ? ಹೇಗೆ ವಿಚಾರಿಸಿದರೂ ಬ್ರಹ್ಮ ವಿಷ್ಣು ರುದ್ರ ಈ ತ್ರಿಮೂರ್ತಿಗಳು ಸಾಮ್ಯರು." ಎಂದು ನುಡಿದ ಪಾಪಿಗೆ ಗುರುವರ ಪದ್ಮರಸರು ಹೀಗೆಂದರು : "ಎಲೇ ದೋಷಿಯೇ ನೀನು ಹೀಗೆ ಕೆಡೆನುಡಿದು ನರಕಕ್ಕಿಳಿಯುವರೆ ? ಔಪಚಾರಿಕ ಸತ್ವಗುಣಯುಕ್ತರುದ್ರನಿಗೆ ತಮೋರಜಗುಣಯುಕ್ತ ವಿಷ್ಣು ಬ್ರಹ್ಮರು ಎಂತು ಸಾಮ್ಯರು ? ಇದು ಅಬದ್ಧವಾದ ಭಾಷೆ. ಈಗ ಆ ಮತದ

ಚರ್ಚೆಯೇಕೆ ? ವೇದಾಂತಕ್ಕೂ ವೈಷ್ಣವಪ್ರಸ್ತಾನಕ್ಕೂ ಅತ್ಯಂತ ಭೇದವಿದೆ. ಅವುಗಳಲ್ಲಿ ವೈಷ್ಣವ ಪ್ರಸ್ತಾನಾವಲಂಬಿಯಾಗಿ ಇಲ್ಲಿಯವರೆಗೆ ವಾದಿಸಿ ಈಗ ಅದನ್ನು ಬಿಟ್ಟು ಅದಕ್ಕೆ ತೀರ ವಿರುದ್ಧವಾದ ವೇದಾಂತವನ್ನು ಹಿಡಿದು ವಾದಿಸುವ ನಿನಗೆ ವಾದದ ಉಪಸಿದ್ಧಾಂತವೆಂಬ ನಿಗ್ರಹಹೇತುವಾದ ಜಲ್ಪಕ್ಕೆ ನೀನು ಗುರಿಯಾದೆ. ಹೀಗೆ ಕಥಾಭೇದವನುಂಟುಮಾಡಿದ್ದರಿಂದ ನನಗೆ ಜಯವಾಗಿ ನಿನಗೆ ಅಪಜಯವಾಯಿತು. ರಾಜಾ, ಸಭ್ಯರೇ, ನೋಡಿದಿರಾ." ಎಂದು ಗುರುವರನು ನುಡಿಯಲು ಅದಕ್ಕೆ ಅವರು ಒಡಂಬಟ್ಟು ಜಯಘೋಷ ಮಾಡಿದರು. ತ್ರಿಭುವನ ತಾತನಿಗೆ ಬುದ್ಧಿಭ್ರಮೆಯಾಗಿ ತಲೆ ಕೆಳಗೆ ಹಾಕಿದನು. ಬಳಿಕ ಗುರುವರನು "ಎಲೆಲೆ ಕುಮತಿ, ನೀನು ಸೋತಿದ್ದರೂ, ವಾದಕ್ಕೆ ಒಂದು ತರದ ಅನವಸ್ಥೆ ಉಂಟಾಗುತ್ತಿದ್ದರೂ, ನಿನ್ನ ಸಂಶಯವನ್ನು ಪರಿಹರಿಸಲೇಬೇಕು; ಪರಿಹರಿಸುವೆನು." ಎಂದು ನುಡಿದರು.

ಹನ್ನೊಂದನೆಯ ಸಂಧಿ

ಶೈವಾಧಿಕ್ಯ

ಸಭಾಜನರು ಗುರುವನ್ನು ನೋಡಿ ಧರೆಯೊಳಗೆ ವಾದಮಾಡಿದವರನ್ನು ಹಲವರನ್ನು ಬಲ್ಲೆವು. ಅವರು ನಿಗ್ರಹಸ್ಥಾನವನ್ನು ಹೇಳಿ ವಾದಿಯನ್ನು ಸೋಲಿಸಿ ಸಭೆಯನ್ನು ಮೆಚ್ಚಿಸಿ ಬಲ್ಲಿದರೆನಿಸಿದರು. ಆದರೆ, ವಾದಿಯಲ್ಲಿ ಹುಟ್ಟಿದ ಸಂಶಯವನ್ನು ಪರಿಹರಿಸುವೆನೆಂದು ಸಿದ್ಧರಾಗುವವರು ಆದಾರು? ಎಂದು ಹೊಗಳುತ್ತಿರಲು ಗುರುವರನು ಹೀಗೆ ನುಡಿದನು. " ಎಲೈ ಹರಿದಾಸನೇ ಕೇಳು. ಶಿವನಿಗೆ ಬಾಹ್ಯತಮ ಅಂತಃಸತ್ವ, ವಿಷ್ಣುವಿಗೆ ಬಹಿಃಸತ್ವ ಅಂತಸ್ತಮ, ಬ್ರಹ್ಮನಿಗೆ ಬಾಹ್ಯಾಂತರವೆರಡೂ ರಜೋಗುಣಗಳು, ಈ ತರ ತಮ ಭಾವನೆಯಿಂದ ನೋಡಿದರೆ ಹರನು ಅಧಿಕನೆಂದು ಸ್ಪಷ್ಟವಾಗುವದಿಲ್ಲವೇ ? ಅಜ, ಹರಿ, ಈಶ್ವರರು ಅನುಕ್ರಮವಾಗಿ ತಾರಕದ ಅಕ್ಷರತ್ರಯಕ್ಕೆ ಅಧಿದೇವರು. ಅವರ ವರ್ಣ ಕ್ರಮವಾಗಿ ಕೆಂಪು, ಕಪ್ಪು, ಬೆಳ್ಪು ಹೀಗೆಂದು ಅಥರ್ವಸೂತೋಕ್ತಿ ಮನುಸಾಂಬಗಳು ಹೇಳುತ್ತಿವೆ. ಸ್ಥೈರ್ಯ, ಧೈರ್ಯ, ದಾಕ್ಷಿಣ್ಯ, ಸರಳತೆ, ಜಡತೆ, ಸಂತೋಷ, ಮೃದುತ್ವ ಶೌಚ, ಸತತೋದ್ಯೋಗ, ಸುಹಿತ, ಔತ್ಸುಕ್ಯ ಕ್ಷಾಂತಿ, ದಾಂತಿ, ದಯೆ ಇವು ಸತ್ವಗುಣದ ವೃತ್ತಿಗಳು, ಕ್ರೌರ್ಯ, ಶೌರ್ಯ, ಮಹೋತ್ಸವ, ಅಭಿಮಾನ, ದಾರ್ಢ್ಯ, ನಿರ್ಭಯೆ, ಭೋಗದಂಭ, ಇವು ರಜೋವೃತ್ತಿಗಳು. ಅರತಿ, ಮಂದತಿ, ದೈನ, ಪೈಶೂನ್ಯ, ಅತಿನಿದ್ರೆ, ಮದ, ಆಲಸ್ಯ. ನಿರೋಧತೆ, ಮೂಢತೆ ಇವು ತಮೋಗುಣದ ವೃತ್ತಿಗಳು ಎಂದು ಆಗಮಗಳು ಹೇಳುತ್ತಿವೆ. ಸತ್ವಗುಣಪೂರ್ಣನಾದ ರುದ್ರನಿಗೆ ರಜಸ್ತಮೋವೃತ್ತಿಯ ಅಜಹರಿಗಳು ಸರಿಯೆನಿಸಲಾರರು. ಮಾಯಾಬಲದಿಂದ ಈಶ್ವರನಿಗೆ ವಿಷ್ಣು ಸರಿಯೆಂದು ಅಜ್ಞಾನಿಗಳಾದ ಹಲವರು ನುಡಿಯುವರು. ಇನ್ನು ಕೆಲವರು ಅಜ್ಞಾನ ಪರವಶರಾಗಿ ಶಿವನಿಗೆ ಬ್ರಹ್ಮನು ಸರಿಯೆಂಬರು ಶಿವನ ಮಾಯಿಕವನ್ನು ಮೀರಲು ಸಾಧ್ಯವೇ ? ಎಂದು ಬ್ರಹ್ಮಗೀತೆ, ಸ್ಕಾಂದಗಳು ಸಾರುತ್ತಿವೆ. ಶಂಭುವಿಗೆ ಅಜಹರಿಗಳು ಸಮನೆಂದು ಅವಿದ್ಯೆಯಿಂದ ನುಡಿವವನು ಅಸ್ಪೃಶ್ಯನು. ಎಂದು ಆದಿತ್ಯಪುರಾಣವು ಸಾರುತ್ತಿದೆ. ನಿರುಪಾಧಿಕನೂ ಸರ್ವಸೃಷ್ಟಿಯ ಸ್ಫುರಣಕ್ಕೆ ಕಾರಣಕರ್ತನೂ ಆದ ರುದ್ರನಿಗೆ ಗುಣೋಪಾದಿಭಿನ್ನರಾದ

ಅಜಹರಿಗಳು ಎಣೆಯೆಂದು, ಭ್ರಮೆಯಿಂದ, ಅದ್ವೈತವನ್ನು ಹೇಳುವವರ ವಂಶಕ್ಕೆ ಸಾಂಕರ್ಯವುಂಟು. ಹಾಗೆ ನುಡಿಯದವರು ಶ್ರೇಷ್ಠವಂಶಜರು. ತ್ರಿಮೂರ್ತಿಗಳು ಒಂದೇ ಎಂಬುವವರನ್ನು ಸಂಹರಿಸಬೇಕು. ಅವಿಚಾರದಿಂದ ಸಂಹರಿಸಿದರೆ ಪಾಪವಿಲ್ಲ. ಎಂದು ಸಾಂಬಪುರಾಣದಲ್ಲಿ ಹೇಳಿದೆ. ಬಿಡಾಲವ್ರತದ ಮಾನವರು ಈ ದುರದ್ವೈತವನ್ನು ನಂಬಿ, ಶಿವನಿಗೆ ಉಳಿದವರು ಸರಿಯೆಂದು ನುಡಿಯುವರು. ಅವರು ಅತಿ ಅಜ್ಞರು ಎಂದು ಸೂತಗೀತೆಯಲ್ಲಿದೆ. ಕಲಿಯುಗದಲ್ಲಿ ನುಡಿಯ ಬಾರದ ಅದ್ವೈತವನ್ನು ನುಡಿದು ಶಿಶ್ನೋದರರಕ್ಷಕರಾದ ಮನುಜಾಧಮರು ಶಿವ ದ್ರೋಹಿಗಳಾಗುವರು. ಎಂದು ವಿಷ್ಣುಪುರಾಣದಲ್ಲಿ ಹೇಳಿದೆ. ಕಲಿಯುಗದಲ್ಲಿ ಹರಿಯನ್ನು ಆಶ್ರಯಿಸಿ ಹರನನ್ನು ಹಳಿಯುವ ನರಕಿವಿಪ್ರರು ಜನಿಸುವರು. ಅವ ರನ್ನು ಆ ಹರಿ ಪೊರೆಯನು. ಎಂದು ಸೌರಪುರಾಣಸಾರುತ್ತಿದೆ. ಕಲಿಯುಗದಲ್ಲಿ ಶಿವನನ್ನು ನಿಂದಿಸುವ ದ್ವಿಜರರು ಅಧಮರಾಗಿ ಜನಿಸುವರು. ಎಂದು ರವಿಪುರಾಣ ದಲ್ಲಿ ಹರಿಗೆ ಹೇಳಿದ ಮಾತಿದೆ. ಗೌತಮ ದಧೀಚಿ ಭೃಗು ದುರ್ವಾಸ ಕಣ್ವ ಮೊದಲಾದ ಮುನಿಗಳು ನಿಮ್ಮ ವಂಶ ಪೂರ್ವಜರ ದುರ್ವಿನೀತವೃತ್ತಿಗೆ ಸೈರಿಸದೆ ಕುಪಿತರಾಗಿ ಶಿವನಲ್ಲಿ ಶಿವಭಕ್ತಿಯಲ್ಲಿ ಶಿವದೀಕ್ಷೆ ಶಿವಾರ್ಚನೆ, ಶಿವತೀರ್ಥ ಶಿವಶೇಷ ಶಿವವಿಜ್ಞಾನ ಶಿವನಾಮ ಶಿವಗೃಹ ಶಿವಕ್ಷೇತ್ರ ಶಿವಮಂತ್ರ ಶಿವಸೂತಿ ತ್ರಿಪುಂಡ್ರ ರುದ್ರಾಕ್ಷಿ ಶಿವಕರ್ಮ ಇವುಗಳಲ್ಲಿ ವಿಮುಖರಾಗಿ ಅವನ್ನು ನಿಂದಿಸುತ್ತ ವೇದಬಹಿಷ್ಕೃತ ದುರಾಚಾರಗಳಿಂದೊಡಗೂಡಿ ಹರಿ ಶಿವನಿಗೆ ಸಮ, ಅಧಿಕ ಎಂದು ಗಳ ಹುತ್ತಹೋಗಿರೀ ಎಂದು ಶಪಿಸಿದರು. ಹೀಗೆಂದು ಸ್ಕಾಂದಪುರಾಣದಲ್ಲಿದೆ. ನೀನು ಅವರ ವಂಶದಲ್ಲಿ ಹುಟ್ಟಿರುವೆಯಾಗಿ ಆ ಶಾಪದಿಂದ ನಿನಗೆ ಶಿವನಿಂದೆ ಪ್ರಾಪ್ತ ವಾಗಿದೆ. ಇದು ವೇದಶಾಸ್ತ್ರ ವಿಹಿತೋಕ್ತಿಯಲ್ಲ ನುಡಿದೊಡೆ ಆಲಿಸಿದೊಡೆ ಅತಿ ದೋಷ" ಎಂದೆನ್ನಲು ವಾದಿಯು ಮತ್ತೆ ಬಿಡದೆ "ಪರಬ್ರಹ್ಮವು ರುದ್ರನಾಕಾರಮಾಗಿ ವೃಷಭನನ್ನೇರಿ ತೊವಲುಟ್ಟು ಮೃಗಶಸ್ತ್ರ ಫಣಿ ಭೂತ ಶಿಖಿ ಡಮರುಗಳನ್ನು ಯೋಗ್ಯವಾಗಿ ಅಲಂಕರಿಸಿಕೊಂಡು ಎಲವು ಬೂದಿಗಳನ್ನು ಧಾರಣಮಾಡಿ ಮಸಣ ದಲ್ಲಿ ಸಂಚರಿಸುವನು ಇಂತಹನು ಬ್ರಹ್ಮನೆಂತು ?" ಎಂದು ನುಡಿದನು. ಆಗ ಗುರುವರನೆಂದನು. "ದೋಷಿ ಕೆಡೆನುಡಿಯಬೇಡಾ, ಶಿವನು ಇವನ್ನು ಧರಿಸಿದರೆ ನಿಂದ್ಯನೇ ? ಆತನು ಅವನ್ನು ತಳೆದ ರೀತಿಯನ್ನು ಕೇಳು.

ಅಖಿಲವನ್ನೂ ಸಂಹರಿಸಿ ಶಿವನು ಪಾರ್ವತಿಯೊಡನೆ ವಿನೋದಪಡುತ್ತ ಅಂತರ್ಮುಖಿಯಾದ ಸಮಯದಲ್ಲಿ ಅವನ ನಿಜಧರ್ಮ ವೃಷಭಾಕಾರವನ್ನು ತಾಳಿ ತನ್ನನ್ನು ಉದ್ಧರಿಸಬೇಕೆಂದು ಪ್ರಾರ್ಥಿಸಿತು. ನನಗೆ ನೀನಲ್ಲದೆ ವಾಹನವಿನ್ನಾರು

ಎಂದು ಆತನನ್ನು ತನ್ನ ವಾಹನವನ್ನಾಗಿ ಮಾಡಿಕೊಂಡನು. ಮತ್ತು ಕಾಶಿಯಲ್ಲಿ ಅನೇಕಜನರನ್ನು ಪೀಡಿಸುತ್ತಿದ್ದ ಗಜಾಸುರನನ್ನು ಕೊಂದು ಆತನ ಚರ್ಮವನ್ನು ಶಿವನು ಧಾರಣಮಾಡಿದನು.

ಒಮ್ಮೆ ದೇವದಾರು ವನದಲ್ಲಿ ೪೮ ಸಾವಿರ ಮುನಿಗಳು ಘೋರತಪವನ್ನಾಚರಿಸುತ್ತಿರುವಾಗ,ಅವರು ಮದದಿಂದ,ಶಿವನ ವಿಷಯದಲ್ಲಿ ಒಂದು ನಿಂದೆಯಾಡಿದರು. ಅವರನ್ನು ಪರೀಕ್ಷಿಸಲು, ಶಿವನು ಮೋಹನಾಕಾರವನ್ನು ತಾಳಿ, ಭಿಕ್ಷುಕನಾಗಿ ಬಂದನು. ಆ ಮುನಿಸ್ತ್ರೀಯರು ಅವನನ್ನು ನೋಡಿ ಮೋಹಿತರಾಗಿ, ಅವನನ್ನು ಹಿಂಬಾಲಿಸಿದರು. ಋಷಿಗಳು ಈತನು ಶಿವನೆಂದರಿಯದೆ, ಇವನನ್ನು ಕೊಲ್ಲುವೆವೆಂದು, ನಾನಾ ಯುಕ್ತಿಗಳಿಂದ ಉದ್ಯೋಗಿಸುತ್ತಿರಲು, ಆ ಮುನಿಗಳ ಆತ್ಮಸ್ಥ ಕೋಪವೇ ರೂಪಾದಂತೆ ಹುಲಿಯೊಂದು ಉದ್ಭವಿಸಿತು. ಪರಶಿವನು ಅದನ್ನು ಕೊಂದು, ಅದರ ಚರ್ಮವನ್ನು ಧರಿಸಿದನು. ಅದರಂತೆ ಅವರ ಕೋಪಾನಲಜ್ವಾಲೆಗಳಂತೆ ಪಂಚಫಣಿಗಳುದ್ಭವಿಸಿದುವು; ಶಿವನು ಅವನ್ನೂ ಧರಿಸಿಕೊಂಡನು. ಪಿಶಾಚಿಗಳಾಗಿ ಬರಲು, ಅವನ್ನು ತನ್ನ ಸಹಚರರನನ್ನಾಗಿ ಮಾಡಿಕೊಂಡನು. ಅವರ ಮಂತ್ರವು ಡಮರುಗರೂಪತಾಳಿ ಶಿವನಿಗೆ ನಮಸ್ಕರಿಸುತ್ತ ಬರಲು, ಅದನ್ನೂ ಶಿವನು ಧರಿಸಿಕೊಂಡನು. ಹೀಗೆ ತಮ್ಮ ಯುಕ್ತಿಗಳೆಲ್ಲವೂ ಶೂನ್ಯವಾಗಲು ಮುನಿಗಳು ಭಯಭೀತರಾಗಿ ಪರಮಾತ್ಮನನ್ನು ಸ್ತುತಿಸತೊಡಗಿದರು. ಆತನು ನಿಜರೂಪು ದೋರಿ, ಮೋಕ್ಷವನ್ನು ಕೊಟ್ಟು,ಅವರನ್ನು ಪೊರೆದನು. ಪ್ರಳಯಕಾಲದಲ್ಲಿ, ಬ್ರಹ್ಮ ವಿಷ್ಣು ಮೊದಲಾದವರನ್ನು ಸುಟ್ಟು, ಅವರ ಅಸ್ಥಿ ಕಪಾಲಗಳನ್ನು ಧರಿಸಿ, ಆ ಭೂತಿಯಿದ್ದ ಸ್ಮಶಾನದಲ್ಲಿ,ಅವರ ಅನಿತ್ಯತೆಯನ್ನು ಅರುಹುತ್ತ, ವಾಸಮಾಡಿರುವನು (ಸ್ಕಾಂದ).

" ಏಕ ಏವೋ ರುದ್ರೋ ನ ದ್ವಿತೀಯಾಯ, ಏಕಮೇವ ಅದ್ವಿತೀಯಂ ಬ್ರಹ್ಮ" ಎಂದು ಶ್ರುತಿಯು ಪರಸ್ಪರ ವಿರುದ್ಧವಾದ ಉಕ್ತಿಗಳನ್ನು ಸಾರುವುದೇಕೆ? ಎಂದು ವಾದಿ ಕೇಳಲು,ಅದಕ್ಕೆ ಗುರು, ಪುಬ್ರಹ್ಮೋಪನಿಷತ್ತಿನ ಆಧಾರದಿಂದ,ಬ್ರಹ್ಮ ಎಂಬುದು ರುದ್ರನ ಘನನಾಮವೆಂದು ಸಿದ್ಧಮಾಡಿತೋರಿಸಿದರು. ತತ್ ತತ್ವವು ಪರಮಾತ್ಮನಾದ ಶೂಲಿಯ ರೂಪವು. ವಿಶ್ವವೆನ್ನುವುದು ಆತನಿಂದಲೇ ವ್ಯಾಪ್ತವಾಗಿದೆ, ಇತರರಿಂದಲ್ಲ. ಎಂದು ಶ್ರುತಿಸಾರುತ್ತಿದೆ (ರವಿಪುರಾಣ).

ದೇವನೊಬ್ಬನೇ; ಆತನು ವಿಶ್ವತಃಚಕ್ಷುವು, ವಿಶ್ವತೋಮುಖನು, ವಿಶ್ವತೋಬಾಹುವು,ಅವನಿಂದಲೇ ಭೂವ್ಯೋಮಾಕಾಶಗಳು ಜನಿಸಿವೆ (ಶ್ವೇತಾಶ್ವತರೋಪನಿಷತ್ತು).

ಅವ್ಯಕ್ತವಾಗಿ ಎಲ್ಲಕ್ಕೂ ನಾನೇ ಕಾರಣ. ನಾನೇ ಆನಂದ. ನಾನೇ ಜ್ಯೋತಿ. ಅಕ್ಷರ, ಪರಬ್ರಹ್ಮ ನಾನೇ. ಬೇರೆ ಯಾರೂ ಇಲ್ಲ. ನಾನೇ ಪರಬ್ರಹ್ಮ ನಾನೇ ಪರಮಾತ್ಮ ನಾನೇ ಸನಾತನ (ಈಶ್ವರಗೀತೆ).

ಯಾವನು ರುದ್ರನೋ ಅಂತಹ ಭಗವಾನ್ ವಿಶ್ವೇಶ್ವರನಿಗೆ ಸಮಸ್ಕಾರಗಳು (ಅಥರ್ವ).

ಅನಂತನೂ ಅವ್ಯಕ್ತನೂ ಅಚಿಂತ್ಯರೂಪನೂ ಆದ ಶಿವನು, ಬ್ರಹ್ಮ ಯೋನಿಯು. ಆತನು ಆದಿಮಧ್ಯಾಂತರಹಿತನು. ಏಕನು. ವಿಭುವು. ಚಿದಾ ನಂದನು. ಅಮೃತರೂಪನು. ಉಮಾಸಹಾಯನು. ಪರಮೇಶ್ವರನು. ತ್ರಿಲೋ ಚನನು. ನೀಲಕಂಠನು. ಪ್ರಶಾಂತನು. ಆತನ ಧ್ಯಾನದಿಂದ, ಮುನಿಗಳು ತಮ ವನ್ನು ದಾಟಿ, ಬೆಳಗಿನತ್ತ ಸಾಗುವರು (ಕೈವಲ್ಯೋಪನಿಷತ್ತು).

ಬ್ರಹ್ಮವಿತ್ ಆಪ್ನೋತಿ (ವೇದಾಂತ).

ಯಾವನಿಂದ ಸಮಸ್ತಸೃಷ್ಟಿಯು ಹುಟ್ಟುತ್ತಿದೆಯೋ, ಜೀವಿಸುತ್ತಿದೆಯೋ ಅಂತಹ ಪರಬ್ರಹ್ಮನ ಸಾಕಾರಮೂರ್ತಿಯೆ ಸಾಂಬ, ಚಂದ್ರಶೇಖರ, ನೀಲಗ್ರೀವ, ತ್ರಿಣೇತ್ರ ಇಂತಹ ಪರಮೂರ್ತಿಯನ್ನು ಪಡೆದವನೇ ಪರಬ್ರಹ್ಮನು, ಅವನೇ ಶಿವ; ಬೇರೆ ಯಾರೂ ಅಲ್ಲ. ಪರಬ್ರಹ್ಮನೇ ಈಶ, ಏಕೋರುದ್ರ. ಆತನೇ ಮಹೇಶ್ವರನು, ಸಂಶಯವಿಲ್ಲ. ಆತನ ಹೃದಯದಲ್ಲಿಯೇ ಸಮಸ್ತ ಸೃಷ್ಟಿ. ಆತ ನಿಂದಲೇ ಜಗತ್ಯಾಂಜಗತ್ತು. ಬ್ರಹ್ಮನೆಂದು ಯಾವನನ್ನು ವೇದಗಳು ಕರೆಯು ತ್ತಿವೆಯೋ ಅಂತಹ ರುದ್ರನಿಗೆ ಶರಣಾಗುತ್ತೇನೆ (ಸೂರ್ಯಪುರಾಣ).

ನಿತ್ಯನೂ ಪರಬ್ರಹ್ಮನೂ ಆದ ಏಕೋರುದ್ರನು ಅವನೇ ಭಗವಂತನು, ಮಹೇಶ್ವರನು, ಮಹಾದೇವನು (ಅಥರ್ವ).

ಸರ್ವಭೂತಗಳಲ್ಲಿ ದೇವನಾಗಿ, ಅವುಗಳ ಅಂತರಾತ್ಮನಾಗಿ, ಸರ್ವವ್ಯಾಪಿ ಯಾಗಿ ಇರುವ ಶಿವನೇ ಸರ್ವಜ್ಞನು; ಈಶ್ವರನು. ಬೇರೆ ಯಾವ ದೇವತೆಗಳೂ ಅಲ್ಲ (ಬ್ರಹ್ಮೋಪನಿಷತ್ತು).

ಸತ್ಯಸ್ವರೂಪನೂ ಪರಬ್ರಹ್ಮಪುರುಷನೂ ಆದ ವಿರೂಪಾಕ್ಷನೇ ವಿಶ್ವರೂಪನು. ಅವನಿಗೆ ನಮಿಸುವೆನು (ಯಜುರ್ವೇದ, ಲೈಂಗ್ಯ).

ಏಕಪುರುಷನು, ರುದ್ರನು, ಗಗನಗಹ್ವರಾಂತಸ್ಥನು, ಓಂಕಾರಸ್ವರೂಪನು ಆದ ಪರಮೇಶ್ವರನೇ ಮಹಾದೇವನು (ಲೈಂಗ್ಯ).

ಪರಬ್ರಹ್ಮಪುರುಷನೂ ಕೃಷ್ಣಪಿಂಗಳನೂ ಊರ್ಧ್ವರೇತನೂ ಆದ ಈಶ್ವರನು ನನ್ನ ಮನದಲ್ಲಿ ನಿಲ್ಲಲಿ (ಶಿವಸಂಕಲ್ಪೋಪನಿಷತ್ತು).

ಪರಬ್ರಹ್ಮಪುರುಷನೇ ಸೋಮನು, ಈಶ್ವರನು, ಸಮಸ್ತಸೃಷ್ಟಿಯ ಉತ್ಪತ್ತಿ, ಸ್ಥಿತಿ ಲಯಕ್ಕೆ ಕಾರಣನು. ವಿಶ್ವರೂಪನು. ವಿರೂಪಾಕ್ಷನು. ಚಂದ್ರಮೌಳಿಯು. ಹಿರಣ್ಯಪತಿಯು. ಅಂಬಿಕಾಪತಿಯು. ಉಮಾಪತಿಯು. ಅವನೇ ಪರತತ್ವ (ಮಾನವ ಪುರಾಣ).

ಪರಮಾತ್ಮನೂ ಆನಂದಸ್ವರೂಪನೂ ಪರಮಾಕಾಶನೂ ಆದ ಈಶ್ವರನೇ ಸತ್ಯ, ಪರಬ್ರಹ್ಮ, ಸಾಂಬ, ವಿರೂಪಾಕ್ಷ, ವಿಶ್ವರೂಪ, ಮಹೇಶ್ವರ (ಸೂತ ಸಂಹಿತೆ). ಆ ಪುರುಷನಿಂದಲೇ ಸರ್ವವೆಲ್ಲವೂ ಪೂರ್ಣವಾಗಿವೆ (ಉಪನಿಷತ್ತು).

ಎಲ್ಲವೂ ಬ್ರಹ್ಮಮಯ. ಎಲ್ಲವೂ ರುದ್ರ. ಎಲ್ಲವೂ ಈಶ್ವರಮಯ. ಆ ಪುರುಷನೇ ಮಹಾದೇವ. ಮಹೇಶ್ವರ. ಪರಶಿವನು (ಲೈಂಗ್ಯ).

ಪರಮಪದಕ್ಕೆ ರೂಢಿಯಲ್ಲಿ ಶಿವನೆಂಬ ಹೆಸರಿದೆ (ಗೌರಸಂಹಿತೆ).

ಶಿವ, ಶಂಭು ಪರಬ್ರಹ್ಮ ಸತ್ಯ ಈಶಾನ ಈಶ್ವರಃ ಇವೇ ಮೊದಲಾದ ಹೆಸರುಗಳಿಂದ ಪರಮಾತ್ಮನನ್ನು ಕರೆಯುವ ರೂಢಿಯಿದೆ (ಪಾರಾಶರ).

ಹೀಗೆ ಪದ್ಮರಸರು ರುದ್ರ ಶಿವ ಪರಬ್ರಹ್ಮ ಇವೆಲ್ಲ ಒಂದೇ ಎಂಬ ತತ್ವವನ್ನು ಪ್ರತಿಷ್ಠಿಸಲು ವಿಬುಧವೃಂದವೆಲ್ಲವೂ ಆತನನ್ನು ಕೊಂಡಾಡಿದರು.

ಪದ್ಮರಸರು ಮತ್ತೂ ಇಂತೆಂದರು : ಶಿವನ ರೀತಿಯನ್ನರಿಯಲು ಯಾರಿಗೆ ಸಾಧ್ಯ ? ಮಾತು, ಮನದಿಂದ ಆತನು ಅತ್ತತ್ತ ದೂರ, ಎಂದು ಶ್ರುತಿಯು ಸಾರುತ್ತದೆ. ಹೀಗಿರುವಾಗ ಆತನನ್ನು ವರ್ಣಿಸಲು ನೆನೆಯಲು ಅಂತಿಂತಹರಿಗೆ ಸಾಧ್ಯವಿಲ್ಲ. ಬ್ರಹ್ಮ ವಿಷ್ಣು ಇಂದ್ರ ಚಂದ್ರ ಮೊದಲಾದ ದೇವತೆಗಳು ಅವನ ಕಿಂಕರರು. ಅವನ ಪ್ರಸಾದದಿಂದಲೇ ಜೀವಿಸುವವರು. ಆ ದೇವನೇ ಪಾರ್ವತೀಪತಿಯು. ಬ್ರಹ್ಮ ಮೊದಲಾದ ದೇವತೆಗಳು ಯಾವ ಪರಬ್ರಹ್ಮನ ಪರಸ್ವರೂಪವನ್ನು ಅರಿತಿಲ್ಲವೋ ಅಂತಹ ದೇವನೇ ತ್ರಿಪುರಾಂತಕನು. ಆತನು

ವಿಶ್ವತೋ ಚಕ್ಷು, ವಿಶ್ವತೋ ಮುಖನು. ಎಲ್ಲ ಪ್ರಾಣಿಗಳಿಗೂ ಜನಕನು. ಆತನೇ ಮಹೇಶ್ವರನು. ಕೂರ್ಮನ ಬೆನ್ನಮೇಲೆ ರೋಮ, ಮನುಜರ ಮಸ್ತಕದ ಮೇಲೆ ಕೋಡು ಹೇಗೆ ಇಲ್ಲವೋ, ಪುಷ್ಪವು ಆಕಾಶದಲ್ಲಿ ಹೇಗೆ ಅರಳಲಾರದೋ ಹಾಗೆ ಹರನಿಂದ ಅಧಿಕವಾದುದು ಇಲ್ಲ. ರುದ್ರನೆನಿಸುವ ಮಹಾದೇವನಿಗೆ ಅಧಿಕ ದೈವವಿಲ್ಲ (ಆದಿತ್ಯಪುರಾಣ).

ವೇದಾದಿಗಳೊಳಗಿನ ಸ್ವರದ ಅಂತಸ್ಥದಲ್ಲಿ ಪ್ರತಿಷ್ಠಿತವಾದ ಪ್ರಣವದ ಅಂತಸ್ಥವೇ ಈಶ. ಬ್ರಹ್ಮವಿಷ್ಣುಗಳಿಗೆ ಇದು ಸಲ್ಲದು (ತೈತ್ತಿರೀಯ).

ಯಾವನು ಅಂತರ್ಯಾಮಿರೂಪದಿಂದ ನಮ್ಮ ಬುದ್ಧಿ ಮೊದಲಾದುವು ಗಳನ್ನು ಭೇದಿಸುವನೋ ಅಂತಹ ಮಹಾದೇವನ ತೇಜಸ್ಸು ಅಜ್ಞಾತವಾದುದು. ಆತನು ಪರಮಕಾರಣನು. ನಾವು ಆತನನ್ನು ಸೇವಿಸುತ್ತಿರುವೆವು. ಎಂದು ವೇದ ಗಳುಲಿಯುವವು (ಸ್ಕಾಂದ).

ಉಮಾವರನು ಗಾಯತ್ರಿಯಿಂದ ಸೇವ್ಯನಲ್ಲದೆ, ಬ್ರಹ್ಮ ವಿಷ್ಣುಗಳಲ್ಲ. ಸರ್ವ ಅಕ್ಷರಾಳಿಗೆ ಈಶ್ವರನೇ ಒಡೆಯ (ಯಜುರ್ವೇದ).

ಸರ್ವ ವಿದ್ಯಾಳಿಗೆ ಪಾರ್ವತೀಪತಿಯೆ ಒಡೆಯ, ಬ್ರಹ್ಮ ವಿಷ್ಣುಗಳು ಈತನಿಗೆ ಸರಿಯಾಗಲಾರರು. ಪರಮಾತ್ಮನ ಅರ್ಧಾಂಗಿಯಾದ ಉಮೆಯು ಪರಂಜ್ಯೋತಿ, ಶರ್ವಧರ್ಮಿಣಿ, ಲಿಂಗಮೂರ್ತಿ, ಸುಜ್ಞಾನಾದಿ ಸರ್ವರೂಪಿಣಿ, ಶಿವಸ್ವಾಭಾವಿಕ ಸುಶಕ್ತಿ ಎಂದು ವೇದಗಳಲ್ಲಿ ಇದೆ. ಈ ವಿಶ್ವವನ್ನು ಸೃಷ್ಟಿಸು ವಾಗ, ವಿಷ್ಣುವು ಶಂಭುವಿನ ಲೀಲಾಡಂಬರದ ಹೊರಗುಂಡನಾಗಿರುವುದರಿಂದ, ಅವನಿಗೆ ಕಲತ್ರ ಎಂಬ ಹೆಸರು ಬಂದಿತು. ಶಿವನ ಬೀಜವೇ ಅಲ್ಲಿ ಪ್ರವರ್ತಿಸುವು ದರಿಂದ, ಕ್ಷೇತ್ರವೆಂಬ ಹೆಸರಾಯಿತು. ಶಿವನ ವೀರ್ಯವನ್ನು ವಿಷ್ಣು ತಳೆದುದ ರಿಂದ, ಅವನಿಗೆ ಪ್ರಕೃತಿಯೆಂಬ ಹೆಸರಾಯಿತು. ಆ ವಿಭುವಿನ ಘನ ತೇಜದಿಂದ, ವಿಷ್ಣು ಪ್ರಪಂಚವನ್ನು ಹಡೆಯಲು, ಯೋನಿಯೆಂಬ ಹೆಸರಾಯಿತು. ಗರ್ಭಾ ಷ್ಟಕದಲ್ಲಿ ಆತ್ಮರಿಗಿರುವ ಶಿವಜ್ಞಾನವನ್ನು ಅಳಿಯುವದರಿಂದ, ಆತನಿಗೆ ಮಾಯೆಯೆಂಬ ಹೆಸರಾಯಿತು. ಹರನು ಉಂಟುಮಾಡುವ ಸೃಷ್ಟ್ಯಾದಿಯ ಹಿರಣ್ಮಯಾಂಡದಲ್ಲಿ ಆಕರವಾರಿಯಾದುದರಿಂದ, ಜಲಾಖ್ಯನೆಂದಾಯಿತು. ಹೀಗೆ ಶ್ರುತಿ ಪುರಾಣಗಳು ಸಾರುತ್ತಿರುವಾಗ ಹರಿ ದೈವವೆಂತಾಗುವನು ?

ದಾಮೋದರನ ವಿಧಿಯನ್ನೇನು ಹೇಳಲಿ! “ನಿನ್ನ ಹೆಂಡಿರಾದ ಭೂಮಿ ಗೋಪಿನಿಯರು ನರರೊಡನೆ ಬಾಳುವರು. ನಿನ್ನ ಭಕ್ತರಕ್ಷಣೆಗೆ ಸಾಮರ್ಥ್ಯವೊಧ ವದಿರಲಿ. ಕ್ಷೀರಾಬ್ಧಿ ಸುರೆಯಾಗಲಿ” ಎಂದು ದುರ್ವಾಸನು ಹರಿಗೆ ಶಾಪಕೊಟ್ಟನು. ಹರಿಯು ಕಾಶಿಗೆ ಬಂದು, ವಿಶ್ವಪತಿಯನ್ನು ಪೂಜಿಸಿ, ಕ್ಷೀರಸಾಗರವನ್ನು ಪುನಃ ಪಡೆದನು.

ಉಪಮನ್ಯುವು ಶಿವನನೊಲಿಸಿ, ಕ್ಷೀರಸಮುದ್ರವನ್ನು ವರವಾಗಿ ಪಡೆದು, ಅದನ್ನು ಕುಡಿಯುವಾಗ, ಹರಿಯು ಅವನ ಗಂಟಲಲ್ಲಿ ಸಿಕ್ಕನು. ಇದೇನು ಕಸ ವೆಂದು ಮುನಿಯು ಉಗುಳಲು, ಹರಿಯು ಆತನ ಕಾಲಮೇಲೆ ಬಿದ್ದು, ಅವನನ್ನು ಒಲಿಸಿ, ಅವನಿಂದ ಕ್ಷೀರಸಮುದ್ರವನ್ನು ಪಡೆದನು.

ಚೌತಿಚಂದ್ರದರ್ಶನದಿಂದ ಬರುವ, ನಿಂದೆಯನ್ನು ಕಳೆಯಲೋಸುಗ, ಸತ್ಯ ಭಾಮೆಯು ತಂದ ಸ್ಯಮಂತಕ ಮಣಿಯನ್ನು, ಧರಿಸಲು ಸ್ತ್ರೀಲಂಪಟನಾದ ತಾನು ಅಸಮರ್ಥನೆಂದು ಹರಿಯು ಹೇಳಿದ್ದರಿಂದ ಜನರು ಅವನನ್ನು ಅಶುಚಿ,ಕಾಮಿ,ಎಂದು ಜರಿದರು.

ಗೋಪಗೋಪಿಯರೊಡನೆ ಕೂಡಿ, ಬಲರಾಮನು ಕದಂಬಸ್ಥಮದ್ಯವನ್ನು ಕುಡಿದು ಮದೋನ್ಮತ್ತನಾದನು. ಇದು ಯಾದವರ ಕುಲಪದ್ಧತಿಯಾಗಿದೆ. ದೇವ ನಾದವನು ಮದ್ಯಪಾನಮಾಡುವನೇ ?

ಅಂಬರೀಷರಾಜನ ಮಗಳ ನಿಮಿತ್ತದಿಂದ ಹರಿಯು, ಪರ್ವತ, ನಾರದರ ಶಾಪಕ್ಕೆ ಗುರಿಯಾದನು.

ಅಮೃತಮಥನ ಕಾಲದಲ್ಲಿ ಹೊರಟ ವಿಷಾಗ್ನಿಯಿಂದ, ಹರಿಯ ತನು, ಕರಿ ಗೊರಡಾಗಲು ಶಿವನು ಉಳಿಸಿದನು.

ತ್ರಿಪುರದಹನಕಾಲದಲ್ಲಿ, ಹರಿಯು ಕೋಟಿವಾರ ರುದ್ರಜಪಮಾಡಿ, ಶಿವನ ಕೃಪೆವಡೆದನು.

ಈಶ್ವರನು ಪೃಥ್ವಿಯನ್ನು ತಳಕ್ಕೊತ್ತಿ,ಅದನ್ನು ಕಾಲ್ಬೆರಳಿನಿಂದ ಹರಿಗೆ ತೋರಿ ಸಲು, ಹರಿಯು ಅದನ್ನು ತಲೆಯ ಮೇಲೆ ಹೊತ್ತು ಮೇಲೆ ತಂದನು.

ತಾರಕಾಸುರ ಸಂಹಾರಕಾಲಕ್ಕೆ, ಶಿವನ ಊರ್ಧ್ವರೇತಸ್ಸಿಗೆ ಅಂಜಿ, ಸುಡು ತ್ತಿರುವ ಮಗನನ್ನು ಬಿಟ್ಟು ಹರಿಯು ಓಡಿಬಂದನು.

ಪ್ರಳಯಕಾಲದ ತರುವಾಯ ಸೃಷ್ಟಿಯಾಗುವಾಗ, ಅಜ್ಞಾನದಿಂದ ಬ್ರಹ್ಮಾಚ್ಯುತರು ಈಶ್ವರನನ್ನರಿಯದೆ, ಲಯಾಬ್ಧಿಯಲ್ಲಿ ಮುಳುಗುತ್ತ ಏಳುತ್ತ ದುಃಖಿಸುತ್ತಿರಲು, ಶಿವನು ಅವರಿಗೆ ಜ್ಞಾನವನ್ನು ಕೊಟ್ಟು ಕಾಯ್ದನು.

ವಿಷ್ಣು, ಭಕ್ತಿಯಿಂದ ಶಿವನನ್ನು ಪ್ರಾರ್ಥಿಸಲು, ಅವನು ಪ್ರತ್ಯಕ್ಷನಾಗಿ, ಅವನ ಬೇಡಿಕೆಯಂತೆ, ಶತಾವತಾರದಲ್ಲಿ ದನುಜರನ್ನು ಸಂಹರಿಸಲು, ಆಯುಧಗಳನ್ನು ಕೊಟ್ಟನು. ವಿಷ್ಣುವಿನ ಗದೆ, ಶಂಖ, ಚಕ್ರ ಇವೆಲ್ಲವೂ ಶಿವನಲ್ಲಿಯೇ ಸಂಜನಿತವಾಗಿ ವಿಷ್ಣುವಿಗೆ ದೊರೆತುವು.

ಶಿವನು ಪಾರ್ವತಿಯಿಂದ ಎರಡು ತೋಳುಗಳನ್ನು ಕೊಡಿಸಿದಾಗ ವಿಷ್ಣುವು ಚತುರ್ಭುಜನಾದನು. ಹೀಗೆ ಈವೊಡೆ ಕಾಯ್ವೊಡೆ ಕರ್ತೃ ಶಿವನು. ಅವಿವೇಕಿಯಾದ ಹರಿಗೆ ದೈವತ್ವವೆಲ್ಲಿ ? (ಸ್ಕಾಂದಪುರಾಣ).

ಕೃತಯುಗದ ಆದಿಯಲ್ಲಿ, ಸುರರು ಅಸುರರ ಬಾಧೆಗೊಳಗಾಗಿ, ಕ್ಷೀರಸಾಗರಕ್ಕೆ ಹೋಗಿ ವಿಷ್ಣುವಿನ ಮೊರೆವೊಕ್ಕರು. ಆಗ ವಿಷ್ಣುವು ಅಹಂಕಾರದಿಂದ, ನಾನು ಕೊಲ್ವೆನೆಂದು ಚಕ್ರಕ್ಕೆ ಕೈಹಾಕಲು, ಅದು ಚಲಿಸದಾಯಿತು. ಹರನ ಮರೆದುದರ ಭಾಗ್ಯವಿದು! ಮುಂದೆ ವಿಷ್ಣು ಭಕ್ತಿಯಿಂದ ಶಿವನನ್ನು ಪೂಜಿಸಿ, ತನ್ನ ನೇತ್ರವನ್ನೇ ಶಿವನ ಪಾದಕ್ಕೆ ಅರ್ಪಿಸಿ, ತಾನು ಕಮಲನೇತ್ರನಾಗಿ ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಶಿವನಲ್ಲಿ ಪ್ರಾರ್ಥಿಸಿದನು. ಶಿವನು ಅವನ ಅಪರಾಧಗಳನ್ನೆಲ್ಲ ಕ್ಷಮಿಸಿ ಅವನ ಹೃದಯದ ತಮವನ್ನು ಕಳೆಯುವದಕ್ಕಾಗಿ ಕೊಂಡೊಯ್ದ ಚಕ್ರವನ್ನು ಮರಳಿಕೊಟ್ಟನು. ಇಷ್ಟಲ್ಲದೆ, ವಿಷ್ಣುವಿಗೆ ಇಷ್ಟವಾದ ಖಡ್ಗ, ನಿಷಂಗ, ಹಲ, ಮುಸಲ, ಚಾಪ, ಶರ, ಕಿರೀಟ, ಸುಪರ್ಣ, ಸುದರ್ಶನಚಕ್ರ ಇವೇ ಮೊದಲಾದವುಗಳನ್ನು ಕೊಟ್ಟು, ಮತ್ತೆ ನಿನಗೆ ಬೇಕಾದುದನ್ನು ಬೇಡು ಎಂದು ಶಿವನು ಕೇಳಲು ವಿಷ್ಣುವು ಎನಗೆ ಎಂದೆಂದಿಗೂ ನಿನ್ನ ದಾಸ್ಯವೊಂದನ್ನು ಮಾತ್ರ ಕರುಣಿಸಬೇಕು ಎಂದು ಪ್ರಾರ್ಥಿಸಿದನು. ಶಿವನು ವಿಷ್ಣುವಿಗೆ ದಾಸ್ಯವೃತ್ತಿಯನ್ನು ದಯಪಾಲಿಸಿದನು. ವಿಷ್ಣುವು ಮೇಘರೂಪನಾಗಿ ಶಿವನನ್ನು ಧಾರಣಮಾಡಿದ್ದರಿಂದ, ಶಿವನು ಮೇಘವಾಹನನಾದನು. ವೃಷರೂಪದಿಂದ ಶಿವನನ್ನು ಹೊತ್ತದ್ದರಿಂದ, ಶಿವನು ವೃಷಧ್ವಜಾಖ್ಯನಾದನು.

ದ್ವಾರಾವತಿಯಲ್ಲಿ ಕೃಷ್ಣನು ಜಾಂಬುವತಿಯೊಡನೆ ಸುಖದಿಂದಿರುತ್ತಿರಲು ಮಕ್ಕಳಿಲ್ಲವೆಂಬ ಕೊರಗುಂಟಾಯಿತು. ಆಗ ಆತನು ಬದರಿಕಾಶ್ರಮಕ್ಕೆ ಹೋಗಿ

ಉಪಮನ್ಯುಮುನಿಯ ಉಪದೇಶದ ಮೇರೆಗೆ ತಪಸ್ಸನ್ನಾಚರಿಸಿದನು. ಆತನ ತಪಸ್ಸಿಗೆ ಮೆಚ್ಚಿ ಶಿವನು ಆತನಿಗೆ ಅಭಯವನಿತ್ತು ಮಕ್ಕಳನ್ನು ಹರಸಿದನು (ಶಿವರಹಸ್ಯ).

ರುದ್ರನು ಬ್ರಾಹ್ಮಣನು. ಕಮಲಾಕ್ಷ ಮೊದಲಾದವರು ಕ್ಷತ್ರಿಯರು. ದ್ವಿಜೋತ್ತಮನಾದ ರುದ್ರನಿಗೆ ಅಧಃಕುಲಜನಾದ ವಿಷ್ಣು ಹೇಗೆ ಸರಿಯಾಗಬಲ್ಲನು ? ಮುಮುಕ್ಷುಗಳು ಹರಿಯನ್ನು ಭಜಿಸಲಾಗದು.

ತ್ರಯೋದಶಿಯ ರಾತ್ರಿ, ಮರೆತಾದರೂ ಹರಿಯನ್ನು ನೋಡಿದರೆ ೧೨ ವರ್ಷ ಸಂಪಾದಿಸಿದ ಪುಣ್ಯ ಬತ್ತಿಹೋಗುತ್ತದೆ. ಆಯುಷ್ಯ ಮತಿ ಬಲ ಕಡಿಮೆಯಾಗುತ್ತವೆ.

ಜನನ ಮೃತಿ ಕಪಟ ಕಾಮಾಸಕ್ತಿ ಮಾನಿನೀಹನನ ಸಾರಥ್ಯ ಬಲಿಬಂಧನಗಳೆಲ್ಲ ವಿಷ್ಣುವಿಗುಂಟು. ಇಂಥ ಅವಸ್ಥೆಗಳನ್ನು ಪಡೆದು ಸಾವವನು ದೈವವೆಂತು ?

ಮೃತ್ಯುವಶನಾದ ವಿಷ್ಣು ಮೃತ್ಯುಂಜಯನಿಗೆ ಸರಿಯಾಗಲಾರನು.

ಸೂರ್ಯನಿಗೆ ಚಿಕ್ಕೆ ಸಮನಾದರೆ, ಕಲ್ಪವೃಕ್ಷಕ್ಕೆ ಕಟ್ಟಿಗೆ ಸಮನಾದರೆ, ಜ್ಞಾನಕ್ಕೆ ಅಜ್ಞಾನವು ಸಮನಾದರೆ, ಆಗ ವಿಷ್ಣುವು ಶಿವನಿಗೆ ಸಮಾನನೆಂದು ಹೇಳಬಹುದು.

ಕಾಲ ಕಾಮ ದುರ್ವ್ಯಸನ ಮಾಯೆ ದನುಜರು ಮುನಿಶಾಪ ಇವೆಲ್ಲವುಗಳಿಂದ ಮುಂದುಗೆಟ್ಟು ಅಳಿವ ಮುರವೈರಿಯು, ಇವು ಯಾವೂ ಹೊದ್ದದ ಉಮಾವರನಿಗೆ ಸರಿಯೆಂತಾಗುವನು ? ಆದ್ದರಿಂದಲೇ ವೇದಾದಿಗಳು ಶಿವನೇ ಕರ್ತೃ, ಹರಿ ಭೃತ್ಯ ಎಂದು ಒರೆದುವು.

ಊರ್ಧ್ವಪುಂಡ್ರ, ತ್ರಿಶೂಲ, ಅರ್ಧಚಂದ್ರ, ವರ್ತುಲ, ಎಂಬಿವು ಅಶ್ರೌತ. ಇವನ್ನು ಧಾರಣಮಾಡಿದರೆ, ಯಮನು ಆ ಆಯುಧಗಳಿಂದಲೇ ಅವರನ್ನು ಬಾಧಿಸುವನು. ಭಸಿತಧಾರಣಮಾಡಿ, ಶಿವನನ್ನು ಸ್ಮರಿಸುವುದರಿಂದಲೇ ಪಾಪ ಪಲ್ಲಟವಾಗುವುದು. ಶಂಖ ಚಕ್ರ ಮುದ್ರೆಗಳುಳ್ಳ ದ್ವಿಜರು ಅಧಮರು; ಅದರ್ಶನೀಯರು.

ಬ್ರಹ್ಮ ವಿಷ್ಣು ಮೊದಲಾದವರು ಅಳಿವವರು; ಅವರನ್ನು ಭಜಿಸುವವರು ಉಳಿಯಲಾರರು.

ಹೀಗೆ ನಾನಾ ಪ್ರಮಾಣಗಳಿಂದ ಹರಿ, ಆತನಿಗೆ ಸಂಬಂಧ ಪಟ್ಟ ಶಾಸ್ತ್ರ, ಅವನ ಆಚಾರ, ಅವನ ಭಕ್ತರು ಇವರೆಲ್ಲ ನಿಂದ್ಯವೆಂದು, ವೇದ ಸ್ಮೃತಿ ಪುರಾಣ ಗಳ ಉಕ್ತಿಗಳನ್ನು ಆಧರಿಸಿ, ಪಂಡಿತರು ಮೆಚ್ಚುವಂತೆ ಗುರುವರನು ತೋರಿಸಿ ಕೊಟ್ಟನು.

ಹೀಗೆ ಶಿವನೇ ಪರದೈವವೆಂದು ತೋರಿಸಿಕೊಟ್ಟಮೇಲೆ ಶೈವಾಧಿಕ್ಯವನ್ನು ಪ್ರಕಟಿಸಲು ಉದ್ಯುಕ್ತರಾದರು.

ನಗುರೋರಧಿಕವೆಂದೆನುತಿದೆ ಯಾಗ. ಗುರುದೇವ ಶಿವ ಎನುತಿದೆ ಸ್ಕಾಂದ. ಗುರುವಿಗಿಂತಲೂ ಜ್ಞಾನವಧಿಕವೆನ್ನುತ್ತಿದೆ ವಾಯುತಂತ್ರ. ಗುರುವೇ ಸರ್ವಸ್ವವೆಂದು ಸೂತಗೀತಿ ಹೇಳುತ್ತಿದೆ.

ಗುರುವೇ ಸೇವ್ಯನು. ಬ್ರಹ್ಮ ವಿಷ್ಣು ಇಂದ್ರ ಮೊದಲಾದ ದೇವತೆಗಳ್ಳ ಲಿಂಗವನ್ನು ಪೂಜಿಸಿ, ವಾಣಿ ಇಂದಿರಾ ಶಚಿಯರನ್ನು ಪಡೆದರು.

ಲಿಂಗದೀಕ್ಷಿತರು ಪಾಪರಹಿತರು. ಅವರಲ್ಲಿ,ಶಿವನು ಬೆಳಗುವನು.

ದೀಕ್ಷಾರಹಿತರು, ಲಿಂಗವಿಲ್ಲದ ಮೂಲಕ, ಅಂಗವುಳ್ಳವರಾಗಿರುವರು. ದೀಕ್ಷಿತರು, ಲಿಂಗದೀಕ್ಷೆಯನ್ನು ಹೊಂದಿ, ಶಿವನಾಗಿರುವರು.

ಲಿಂಗವನ್ನು ಧರಿಸುವುದು ಧ್ಯಾನಿಸುವುದು ಪೂಜಿಸುವುದು ಉತ್ತರ ಪಥವು. ಈ ಲಿಂಗದಿಂದಲೇ ದೇವ ಮುನಿ ಪಿತೃಗಳಿಗೆ ಮುಕ್ತಿ ದೊರೆಯಿತು (ಅಥರ್ವಣ). ಆದುದರಿಂದ ಎಲ್ಲರೂ ಲಿಂಗವನ್ನು ಧರಿಸಬೇಕೆಂಬುದು ಪುರಾಣಸಿದ್ಧವಾಗಿದೆ.

ಲಿಂಗಸ್ಮರಣದಿಂದ ಸಮಸ್ತ ಪಾಪಕ್ಷಯವಾಗುವುದು. ಲಿಂಗನಾಮೋಚ್ಚ ರಣದಿಂದ ಸತ್ಫಲ ಉದಯವಾಗುವುದು. ಲಿಂಗ ಧರಿಸುವುದರಿಂದ ಸಕಲ ಸುಖ ಪ್ರಾಪ್ತಿಯಾಗುವುದು. ಲಿಂಗಸ್ಪರ್ಶನದಿಂದ ಮಂಗಳಮುಕ್ತಿಲಾಭವಾಗುವುದು. ಆದುದರಿಂದ ಅಜ ಹರಿ ಸುರಾದಿಗಳು ಲಿಂಗವನ್ನು ಪೂಜಿಸುವರು.

ಶಿವಭಕ್ತರೇ ಕುಲಜರು, ಅವರೇ ಪವಿತ್ರರು, ಅವರೇ ಸತ್ಪಾತ್ರರು. ಅವ ರಿದ್ದ ದೇಶವೇ ಕಾಶಿ. ಅವರ ನೋಟವೇ ಪಾಪದ ಓಟ. ಅವರ ತೃಪ್ತಿಯೇ ಶಿವತೃಪ್ತಿ. ಅವರ ವೃತ್ತಿಯೇ ಶಿವವೃತ್ತಿ. ಅವರಿಗಿತ್ತ ದಾನವೇ ವಿಮಲ ದಾನ.

ಅವರಿಗೆ ಭಕ್ತಿಯಿಂದ ಅಖಿಳ ವಸ್ತುಗಳನರ್ಪಿಸುವವನು ಶಿವನಲ್ಲಿ ಬೆರೆದು ಅಸಮಸುಖವನ್ನನುಭವಿಸುವನು.

ಶಿವಭಕ್ತನನ್ನು ಒಮ್ಮೆ ಹಳಿದವನು ಕ್ರಿಮಿಕೀಟಕಾದಿಗಳಾಗಿ ಹುಟ್ಟಿ ಯಾತನೆಪಡುವನು.

ವಿಧ್ಯುಕ್ತವಾಗಿ ವಿಭೂತಿ ಧಾರಣಮಾಡುವವನ ಪುಣ್ಯಕ್ಕೆ ಯಾವದೂ ಸರಿಯಿಲ್ಲ. ಆತನು ತನ್ನ ಇಪ್ಪತ್ತೊಂದು ಕುಲವನ್ನು ಉದ್ಧರಿಸಿ, ಅಶೇಷ ತೀರ್ಥಸ್ನಾನ ಮಾಡಿ, ಸಮಸ್ತಕರ್ಮಂಗಳಲ್ಲಿ ಯೋಗ್ಯನಾಗಿ, ಕಡೆಗೆ ಶಿವನನ್ನು ಕೂಡಿ, ಭವರಹಿತನಾದನು (ಜಾಬಾಲೋಪನಿಷತ್ತು).

ಸ ಏವ ಭಸ್ಮಜ್ಯೋತಿಃ (ಜಾಬಾಲ).

ವಿಭೂತಿಯಿಂದ ಪ್ರಮುದಿತರಾಗಬೇಕು (ಯಜುರ್ವೇದ).

ಜ್ಯೋತಿರಹಂ (ನಾರಾಯಣೋಪನಿಷತ್ತು).

ಭಸ್ಮವೇ ತ್ರಿಯಾಯುಷಂ (ಶ್ವೇತಾಶ್ವತರ).

ಅಗ್ನಿರಿತಿ ಭಸ್ಮ (ಅಥರ್ವ ಶಿರಸ್ಸು).

ಆದುದರಿಂದ ಒಣಗಿದ ಗೋಮಯವನ್ನು ತಂದು, ಸುಟ್ಟು ಶುದ್ಧಗೊಳಿಸಿದ ಭಸ್ಮವನ್ನು ಗೋಮೂತ್ರದಿಂದ ಕಲಸಿ, ಉಂಡಿಗಟ್ಟಿ, ಅದನ್ನು ಧಾರಣಮಾಡಬೇಕು.

ಪರಶಿವನು ತ್ರಿಪುರವನ್ನು ದಹಿಸಲೆಂದು ಉನ್ಮೀಲಿತಾಕ್ಷನಾಗಿ ನಿಂತಾಗ ಅವನ ಕಣ್ಣಿಂದ ಉದುರಿದ ಹನಿಗಳೇ ರುದ್ರಾಕ್ಷಿಗಳಾದುವು.

ಭೂತಿಸ್ನಾತನಾಗಿ, ತ್ರಿಪುಂಡ್ರವನ್ನು ಧರಿಸಿ, ಶಿಖಾದಿ ಉರುತರ ಸ್ಥಾನಂಗಳಲ್ಲಿ ರುದ್ರಾಕ್ಷಿಗಳನ್ನು ಯಥಾಸಂಖ್ಯೆ ಧಾರಣ ಮಾಡಲು, ಅವನಿಗೆ ಅಶ್ವಮೇಧಯಜ್ಞಫಲ ಪ್ರಾಪ್ತವಾಗುವದು (ಕಾತ್ಯಾಯನೀಸ್ಮೃತಿ). ಆದುದರಿಂದ ಅಖಿಲರೂ ರುದ್ರಾಕ್ಷ ಧಾರಣ ಮಾಡಬೇಕು.

ಪಂಚಾಕ್ಷರೀಮಂತ್ರವು ಗೌಪ್ಯವಾದುದು, ಶಿವಮುಖದಿಂದಲೇ ಉದಿತವಾದುದು; ಎಲ್ಲ ಮಂತ್ರಗಳಿಗಿಂತಲೂ ಅಧಿಕವಾದುದು. ಅಣುತತಿಗೆ ಆನಂದ

ವನ್ನುಂಟುಮಾಡುವುದು, ಅದು ಅಲ್ಪಾಕ್ಷರವುಳ್ಳುದು; ಮಹಾರ್ಥವನ್ನು ಕೊಡುವುದು. ಮಹಾದೇವನ ಇಷ್ಟಸ್ಥಲವೇ ಆಗಿ, ಪವಿತ್ರವಾದ ಮಹತ್ತಿನ ಆದಿಯನ್ನು ತೋರಿಸುವ ಸಿದ್ಧಾಂಜನವಾಗಿರುವುದು. ಅದು ಜ್ಞಾನಬೀಜ. ಭೋಗಮೋಕ್ಷಗಳನ್ನು ಕೊಡುವುದು; ಪಾಪವನ್ನು ಪಲ್ಲಟಗೊಳಿಸುವುದು. ಪರಮಪದ ಆಯುರಾರೋಗ್ಯಗಳನ್ನು ಕೊಡುವಂತಹದು.

ಮಹಾದೇವನನ್ನು ಅಭಿಷೇಕಿಸಿ ಆತನ ಪಾದಜಲವನ್ನು ಸ್ವೀಕರಿಸಿದವನು ಭವಸಾಗರವನ್ನು ದಾಟುವನು (ಜಾಬಾಲಶಾಖೆ).

ಕುರುಕ್ಷೇತ್ರ, ನೈಮಿಷಾರಣ್ಯದೊಳಗಿನ ಯಾವ ಪುಣ್ಯತೀರ್ಥಗಳೂ ಶಿವನ ಪಾದೋದಕದ ಷೋಡಶಾಂಶಕ್ಕೆ ಸರಿಯಾಗಲಾರವು. ಅಪಮೃತ್ಯು, ರೋಗ, ಪಾಪಾಂತರ, ಸೂತಕ, ದುಃಖಸಂತತಿ ಇವೆಲ್ಲ ಪಾದೋದಕದಿಂದ ಅಳಿದು ಇಚ್ಛಿತ ಫಲಪ್ರಾಪ್ತಿಯಾಗುವುದು.

ಹರ, ಗುರುಗಳನ್ನು ಸತ್ಕರಿಸಿ, ಅವರ ಪಾದಕಮಲಗಳನ್ನು ತೊಳೆದು, ಆ ಪಾದೋದಕವನ್ನು ತನ್ನ ಮಸ್ತಕದಲ್ಲಿ ತಳಿಯಬೇಕು (ಆದಿತ್ಯಪುರಾಣ).

ಹರಿಬ್ರಹ್ಮಾದಿಗಳು, ಪ್ರಮಥಗಣವರ್ಯರು, ಮನುಮುನಿಸಿದ್ಧರು ಶಿವನ ಪಾದೋದಕವನ್ನು ಸ್ವೀಕರಿಸಿದರು (ರಾಮಾಯಣ).

ನಿರ್ಮಲವಾದ ಶಿವನ ಪಾದೋದಕವು ನಿರ್ಮಲರಾದವರಿಗೇ ಸಲ್ಲುವುದು.

ಪರಶಿವನ ಪ್ರಸಾದವನ್ನು ಸ್ವೀಕರಿಸುವವನ ದುಷ್ಕರ್ಮವು ಅಳಿಯುತ್ತದೆ (ವೇದಾಂತ).

ಶಿವಾರ್ಪಿತಮಾಡದೆ ಉಂಡವನು ಕಿಲ್ಬಿಷ, ಮಲ, ಕ್ಷುಲ್ಲಕಕ್ರಿಮಿ, ಶ್ವಾನಗಳನ್ನು ತಿಂದು, ಘೋರವಾದ ನರಕಕ್ಕಿಳಿಯುವನು (ಕಠಶಾಖೆ).

ಶಿವನನ್ನು ಪೂಜಿಸಿ, ರುಚಿಯನ್ನು ಅವನಿಗೆ ಅರ್ಪಿಸಿ, ಶಿವಾವಧಾನದಿಂದ ಸ್ವೀಕರಿಸಿದುದು ಅಮೃತ; ಉಳಿದುದೆಲ್ಲ ಪುರೀಷ (ಋಕ್ಕು).

ಪರಶಿವನ ಪ್ರಸಾದವನ್ನು ಸೇವಿಸಬೇಕು (ಜಾಬಾಲ).

ಹರಿ, ಬ್ರಹ್ಮ, ಸುರಾಸುರ, ಮನು, ಮುನಿಗಳು ಶಿವಪ್ರಸಾದವನ್ನು ಕೊಂಡು ಬದುಕಿದರು.

ಈ ಗುರು ಲಿಂಗ ಮೊದಲಾದವುಗಳ ಮಹಿಮೆಯನ್ನು ವರ್ಣಿಸಲು ನಮ್ಮಂತಹರ ಹವಣಲ್ಲ. ಸಮುದ್ರದೊಳಗಿನ ಒಂದು ಹನಿಯನ್ನು ಎತ್ತಿದಂತೆ ಇದನ್ನು ವಿವರಿಸಿದ್ದೇನೆ. ಎಂದು ತಿಳಿಸಿ, ಗುರುವರನು ಶಿವನ ಕಾರುಣ್ಯವನ್ನು ಬಣ್ಣಿಸತೊಡಗಿದನು :

ಕೃತಯುಗದಲ್ಲಿ ಪಂಚಾಕ್ಷ ಅನಸೂಯೆಯೆಂಬ ದಂಪತಿಗಳಿದ್ದರು. ಒಂದು ದಿವಸ ಶಿವಪೂಜೆಗೆಂದು ಪುಷ್ಪಗಳನ್ನು ಕೊಯ್ಯುವುದಕ್ಕಾಗಿ ಪಂಚಾಕ್ಷಭೂಸುರನು ತನ್ನ ಶಿಷ್ಯರೊಡನೆ ಹೋದನು. ಶಿವನು ಅವರ ಮನಸ್ಸನ್ನು ಪರೀಕ್ಷಿಸಲೋಸುಗ ಒಬ್ಬ ಗಣವರನನ್ನು ಅವರ ಮನೆಗೆ ಕಳಿಸಿದನು. ಆತನು ಅಂತ್ಯಜನ ವೇಷವನ್ನು ತಾಳಿ ಅಲ್ಲಿಗೆ ಬರಲು, ಭಸ್ಮಧಾರಿಯಾದ ಆತನನ್ನು, ಅನಸೂಯೆ ಶಿವನೆಂದೇ ನಂಬಿ, ವಂದಿಸಿ,ಉಪಚರಿಸಿ, ಒಳಗೆ ಬರಬೇಕೆಂದು ಪ್ರಾರ್ಥಿಸಿದಳು. ತಾಯೀ, ಚಂಡಾಲರು ಒಳಗೆ ಬರಬಹುದೇ ? ಭಿಕ್ಷೆಯಿದ್ದರೆ ಇಲ್ಲಿಯೇ ನೀಡಬೇಕೆಂದು ನುಡಿಯುವನು. ಶಿವಶಿವಾ ! ಯಾರಾದರೇನು ಶಿವಭಕ್ತರಲ್ಲಿ ಕುಲವನ್ನು ವಿಚಾರಿಸುವರೇ? ಕರುಣಿಸಬೇಕೆಂದು ಒಳಗೆ ಕರೆದೊಯ್ದು ಸತ್ಕಾರಮಾಡುತ್ತಿರುವಷ್ಟರಲ್ಲಿಯೆ ಆಕೆಯ ಪತಿಯು ಅಲ್ಲಿಗೆ ಬಂದು ಅವರಿಗೆ ನಮಿಸಿ ಭಕ್ತಿಯಿಂದ ಸ್ತುತಿಸಿದನು. ಅವರ ಧೀರಭಕ್ತಿಗೆ ಮೆಚ್ಚಿ ಪರಶಿವನು ಅವರನ್ನು ಬಳಗದೊಡನೆ ಪರಶಿವನೆಡೆಗೆ ಒಯ್ದನು (ಸ್ಕಾಂದ).

ಹಿಂದೊಮ್ಮೆ ಒಬ್ಬನು ಚೋರರಿಂದ ಪೀಡಿತನಾಗಿ, ಪ್ರಾಣವನ್ನು ಬಿಡುವ ಸಮಯದಲ್ಲಿ, ಬೇಡರ ನಾಯಿಯೊಂದು ಸ್ಮಶಾನದ ಬೂದಿಯೊಳಗೆ ಉರುಳಾಡಿ ಬಂದು ಅವನ ಹಣೆ ಮೆಟ್ಟಿ,ಮುಂದೆ ಹೋಗಲು,ಆತನನ್ನು ಶಿವಗಣರು ಯಮನಿಗೆ ಕೊಡದೆ ಶಿವಪುರಕ್ಕೆ ಕೊಂಡೊಯ್ದರು (ಶಿವರಹಸ್ಯ).

ಹಿಂದಕ್ಕೆ ವಿಪ್ರಸುತನಾದ ಒಬ್ಬ ತರುಣನು ತನ್ನ ಸುಂದರಿಯೊಡನೆ ಸುಖದಿಂದಿದ್ದನು. ಅವನು ಬಂಧುವೈರದಿಂದ ತಪಸ್ಸನ್ನಾಚರಿಸಲು ಬಂದು, ಶಿವಾರ್ಪಿತಕ್ಕೆಂದಿದ್ದ ಜಂಭೀರಫಲವನ್ನು ವಾಸಿಸುವನು. ಶಿವಭಕ್ತರು ನೊಂದು, ನೊಣವಾಗೆಂದು ಶಾಪಕೊಡುವರು. ಅದನ್ನು ಅವನು ತನ್ನ ಹೆಂಡತಿಗೆ ತಿಳಿಸಲು ಆಕೆಯು ವಿಭೂತಿಯನ್ನು ಧರಿಸಿ ಆ ಶಾಪವನ್ನು ಕಳೆದಳು.

ಗೌತಮನ ವಿವಾಹಕಾಲದಲ್ಲಿ, ಅಹಲ್ಯೆ ಅಸುರರ ಮೊತ್ತವನ್ನು ಈಕ್ಷಿಸಿ ಕಾಮಕಾತರಳಾದಳು.ಮರಹು ಆಕೆಯನ್ನು ಎತ್ತೆತ್ತಲೂ ಮುಸುಕಿರಲು ದುರ್ವಾಸ

ರಲ್ಲಿಗೆ ಬಂದು ತನ್ನನ್ನುದ್ಧರಿಸಬೇಕೆಂದು ಪ್ರಾರ್ಥಿಸಿದಳು. ದುರ್ವಾಸರು ಭಸವಿತ್ತು ಅವಳನ್ನುದ್ಧರಿಸಿದರು.

ಶಿವನು ಪ್ರಣವಪಂಚಾಕ್ಷರಿ ಗಾಯತ್ರಿ ಮಂತ್ರಗಳನ್ನುಸುರಿ,ಹರಿಯ ಶರೀರದ ಮೇಲೆ ಭಸ್ಮವನ್ನು ತಳಿಯಲು, ಹರಿಗೆ ದೀಪವನ್ನು ಕಂಡಂತಾಯಿತಂತೆ. ಆ ಭಸ್ಮವನ್ನೇ ಸ್ವೀಕರಿಸಿ ಆತನು ಧವಲಾಂಗನಾದನು (ಜಾಬಾಲ).

ಹಿಂದೆ ಒಬ್ಬ ಚಂಡಾಲನು ಸಹಸ್ರಬ್ರಾಹ್ಮಣರನ್ನು ಕೊಂದು ಅವರ ಧನವನ್ನು ಅಪಹರಿಸಿ, ಗೋಗಳನ್ನು ಸಂಹರಿಸಿ ಹೀಗೆ ಅನೇಕ ಪಾಪಗಳನ್ನು ಮಾಡಿ, ಒಮ್ಮೆ ವಿನೋದಕ್ಕಾಗಿ ರುದ್ರಾಕ್ಷಿಯನ್ನು ಧರಿಸಲು, ಆತನು ಆ ಪುಣ್ಯದ ಬಲದಿಂದ ಶಿವಪುರಕ್ಕೆ ನಡೆದನು (ವಾಸಿಷ್ಠ್ಯ, ಲೈಂಗ್ಯ).

ಒಮ್ಮೆ ಒಬ್ಬ ಬೇಡನು ಒಂದು ನಾಯಿಯನ್ನು ತೆಗೆದುಕೊಂಡು ಬೇಟೆಗೆ ಹೊರಟನು. ಬಿಸಿಲಲ್ಲಿ ಒಂದು ರುದ್ರಾಕ್ಷಿಯ ಗಿಡದ ಕೆಳಗೆ ಕುಳಿತು, ಲೀಲೆಯಿಂದ ಗಿಡದೊಳಗಿನ ಒಂದು ರುದ್ರಾಕ್ಷಿಯನ್ನು ತೆಗೆದುಕೊಂಡು ನಾಯಿಯ ಕೊರಳಿಗೆ ಕಟ್ಟಿದನು. ಆ ನಾಯಿ ಒಂದು ಹಂದಿಯೊಡನೆ ಕಾದಿ ಸಾಯಲು, ಅದಕ್ಕೆ ರುದ್ರಪದವಿ ಪ್ರಾಪ್ತವಾಯಿತು (ಶಿವವಾಕ್ಯ).

ಪೂರ್ವದಲ್ಲಿ ಸಾನಂದಋಷಿಯು ಶಿವಧರ್ಮವನ್ನು ಬೋಧಿಸುತ್ತಿದ್ದಾಗ ನರಕಿಗಳ ಯಾತನೆಯನ್ನು ಕೇಳಿ ಮನಕರಗಿ ಪಂಚಾಕ್ಷರಿಮಂತ್ರದ ಮಹಿಮೆಯಿಂದ ಅವರೆಲ್ಲರನ್ನು ಉದ್ಧರಿಸಿದನು (ಸ್ಕಾಂದ).

ತ್ರೈತಾಯುಗದಲ್ಲಿ ವಿದಳನೆಂಬ ಅರಸನು, ಸೊಕ್ಕಿ ದುರ್ನೀತಿಯಲ್ಲಿ ನಡೆದು ಶತ್ರುವಿಗೆ ಅಂಜಿ, ಅಡವಿಯನ್ನು ಸೇರಿ, ಅಂಗನೆ ತುರಗ ನರ ಪಶುಗಳನ್ನು ತಿಂದು, ಸಾಯುವ ಸಮಯದಲ್ಲಿ, ಆತನು ಸುಗಾಪನೆಂಬ ಸಚಿವನಿಗೆ ಹರಪ್ರಹರ ಎಂದು ಹೇಳಲು ಆ ಮಾತನ್ನು ಕೇಳಿ, ಶಿವಗಣರು ಬಂದು ಮೃತ್ಯುದೂತರನ್ನು ಜಡಿದು ಆತನನ್ನು ಶಿವನೆಡೆಗೆ ಒಯ್ದರು (ಪದ್ಮಪುರಾಣ).

ಹಿಂದೆ ನರವರ್ಮನ ಹೆಂಡಿತಿ ವಸುದೇವಿಯೆಂಬವಳು ನಿತ್ಯ ಶಿವಾಲಯಕ್ಕೆ ಹೋಗಿ ಅದನ್ನು ಸಾರಿಸುತ್ತಿದ್ದಳು. ಇದನ್ನೇಕೆ ಮಾಡುವೆ ಎಂದು ಗಾಲವನು ಕೇಳಲು ಆಕೆಯು ಹೀಗೆ ನುಡಿದಳು. "ಕಿಷ್ಕಿಂಧಪರ್ವತದಲ್ಲಿ ಒಬ್ಬನು ಲಿಂಗಕ್ಕೆ ನೈವೇದ್ಯವನ್ನರ್ಪಿಸಿದ್ದನು. ಹಕ್ಕಿಯಾಗಿದ್ದ ನಾನು ಅಲ್ಲಿಗೆರಗಿ ಪಕ್ಕದಿಂದ ಧೂಳಿಯನ್ನು

ಅಲೆದುದರ ಫಲವಾಗಿ, ನಾನು ಭೂಮಿಯಲ್ಲಿ ಹುಟ್ಟಿ, ಅರಸನಿಗೆ ಪಟ್ಟದರಾಣಿ ಯಾದೆನು. ಇದನ್ನು ಕೇಳಿ ಗಾಲವನು ಶಿವಕೃಪೆಯನ್ನು ಹೊಗಳಿದನು (ಸ್ಕಾಂದ).

ಹಿಂದಕ್ಕೆ ಚಿತ್ರರಥನೆಂಬವನು ಶಿವಾಲಯಕ್ಕೆ ಹೋಗಿ ಅಲ್ಲಿ ವಿನೋದಕ್ಕಾಗಿ ಒಂದು ಶಿವನ ಚಿತ್ರವನ್ನು ಬರೆಯಲು ಶಿವನು ಆತನಿಗೆ ಸಾಯುಜ್ಯಪದವಿ ಯನ್ನಿತ್ತನು (ಪುರಾಣ).

ಸೂರ್ಯಪಾನದ ಹಣ್ಣೆಲೆಯಿಂದ ವ್ಯಾಸನು ಶಿವನಿಗೆ ಅರ್ಘ್ಯವನ್ನು ಕೊಟ್ಟು ಅವನಿಂದ ಸರ್ವಗುಣಸಂಪನ್ನತೆ, ಮುನೀಂದ್ರತೆ, ಸುಮತಿಗಳನ್ನು ಪಡೆದನು (ಧರ್ಮಸಂಹಿತೆ).

ಯಕ್ಷಪೂರ್ಣಬದ್ಧನ ಸುತ ಪಿಂಗಳನು ಅಹರ್ನಿಶ ಶಿವನಿಗೆ ಧೂಪವನ್ನರ್ಪಿ ಸುವ ನಿಯಮದಿಂದಿದ್ದನು. ಅದನ್ನು ಅವನ ತಂದೆ ನಿಂದಿಸಲು ಆತನನ್ನು ತ್ಯಜಿಸಿ, ಕಾಶಿಗೆ ಬಂದು, ಶಿವನನ್ನು ಪೂಜಿಸಿ, ಅವನಿಂದ ಗಣಪತಿತ್ವನ್ನು ಪಡೆದನು (ಶೈವಧರ್ಮಸಂಹಿತೆ).

ಶಿವನಿಗೆ ಗಂಟೆಯನ್ನು ಬಾರಿಸಿದುದಕ್ಕಾಗಿ ಶಿವನು ಘಂಟಾಕರ್ಣನೆಂಬವನಿಗೆ ಘಂಟಾಕರ್ಣ ಗಣಾಧಿಪತ್ಯವನ್ನು ಕೊಟ್ಟನು. ದಧೀಚಿಯು ಶಿವನಿಗೆ ನೀರಾಜನ ವನೆತ್ತಿ ನಿಗ್ರಹಾನುಗ್ರಹಶಕ್ತಿಯನ್ನು ಪಡೆದನು (ಶಿವಪುರಾಣ).

ಒಬ್ಬ ಕಳ್ಳನು ಶಿವಾಲಯವನ್ನು ಹೊಕ್ಕು ಅಲ್ಲಿಯ ಧನವನ್ನು ಕದಿಯಲು ಹುಡುಕುತ್ತಿರುವಾಗ, ದೇವರ ಮುಂದಿನ ದೀವಿಗೆಯು ಆರತೊಡಗಿತು. ಕಳ್ಳನು ತನಗಾಗಿ ಆ ದೀಪವನ್ನು ಎತ್ತಲು ಲಿಂಗವು ಪ್ರಕಾಶಿಸಿತು. ಈ ಕಾರಣದಿಂದ ಶಿವನು ಆ ಕಳ್ಳನಿಗೆ ಮೋಕ್ಷವನ್ನೂ ಧನಾಧಿಪತ್ಯವನ್ನೂ ಯಕ್ಷಪತಿತ್ವವನ್ನೂ ದಿಕ್ಪಾಲತ್ವವನ್ನೂಕೊಟ್ಟನು. ಕುಬೇರನೆಂದು ಅವನಿಗೆ ಹೆಸರಾಯಿತು (ಶಿವರಹಸ್ಯ).

ಶತಶಲಾಕದ್ವಿಜನ ಮಗ ಜೈನಿಷಮುನಿಯು ನೃತ್ಯಗೀತಗಳಿಂದ ಶಿವನನ್ನು ಸೇವಿಸಲು, ಶಿವನು ಅವನಿಗೆ ಅತುಳ ಭಕ್ತಿ ಜ್ಞಾನ ವಿರತಿಗಳನ್ನು ಕೊಟ್ಟನು (ಶೈವಪುರಾಣ).

ಭಕ್ತಿಯಿಂದ ಶಿವನನ್ನರ್ಚಿಸಲು ಶಿವನು ಸಾವಿತ್ರಿಗೆ ಅಖಿಲ ವಿಭವವನ್ನೂ ದಿತಿ, ಅದಿತಿ, ಶಚಿ ವಿನತಾದಿಗಳಿಗೆ ಮಕ್ಕಳನ್ನೂ ಕೊಟ್ಟನು (ಇನಪುರಾಣ).

ಪೂರ್ವದಲ್ಲಿ ಒಂದು ಸರ್ಪವು ಹಸಿದು ಬಾಯ್ಬಿಡುತ್ತಿರುವಾಗ, ಶಿವಪಾದೋದಕದ ಮೇಲಿನಿಂದ ಬೀಸಿದ ಗಾಳಿಯು ಅದರತ್ತ ಬೀಸಲು ಆ ಗಾಳಿಯ ಸ್ವೀಕಾರದಿಂದ ಆ ಹಾವಿಗೆ ಶಿವನು ಭೂಭಾರವನ್ನು ಹೊರುವ ಯೋಗ್ಯತೆ, ಅಹಿಪತಿತ್ವ ಸರ್ವಜ್ಞತೆಗಳನ್ನು ಕೊಟ್ಟುದಲ್ಲದೆ ಅದನ್ನು ತನ್ನ ಭೂಷಣವನ್ನಾಗಿ ಮಾಡಿಕೊಂಡನು. ಎಂದು ಇಂದ್ರನಿಗೆ ನಾರದನು ಹೇಳಿದನು (ಹರಿವಂಶ).

ಶ್ವೇತನೆಂಬ ರಾಜರ್ಷಿಯು ಶಿವಾರ್ಚನೆಯಲ್ಲಿರುವಾಗ, ಯಮನು ವೇಗವಾಗಿ ಬಂದು ಅವನನ್ನೊಯ್ಯಬೇಕೆಂದು ಕೆಡೆನುಡಿದು ಗರ್ಜಿಸಿದನು. ಅವನು ಶಿವಮಂತ್ರವನ್ನು ಜಪಿಸಲು ಶಿವನು ಪ್ರತ್ಯಕ್ಷನಾಗಿ ಕಾಲನನ್ನು ಸುಟ್ಟು ಶ್ವೇತರಾಜನಿಗೆ ಗಣಪದವಿಯನ್ನು ಕೊಟ್ಟನು (ಸ್ಕಾಂದ).

ಮೃಕಂಡುಋಷಿಗಳು ಪುತ್ರಾಪೇಕ್ಷೆಯಿಂದ ತಪಸ್ಸುಮಾಡಿ ಶಿವನನ್ನೊಲಿಸಲು ಹದಿನಾರು ವರುಷ ಆಯುಷ್ಯದ ಉತ್ತಮಮಗನು ಬೇಕೋ, ನೂರುವರುಷ ಆಯುಷ್ಯವುಳ್ಳ ಅಧಮಮಗನು ಬೇಕೋ ಎಂದು ಶಿವನು ಆ ಋಷಿಯನ್ನು ಕೇಳಿದನು. ಋಷಿಯು ಹದಿನಾರೇವರುಷದ ಆಯುಷಿಯಾದರೂ ಉತ್ತಮಮಗನು ಬೇಕೆಂದು ಪ್ರಾರ್ಥಿಸಿ ಆ ಶಿವನ ಅನುಗ್ರಹದಿಂದ ಮಾರ್ಕಂಡೇಯನೆಂಬ ಮಗನನ್ನು ಹಡೆದು ಸುಖದಿಂದಿದ್ದರು. ಆಯುಷ್ಯಾವಧಿ ಸಮೀಪಿ ದುಃಖಿಸತೊಡಗಲು ಮಾರ್ಕಂಡೇಯನು ತಪಸ್ಸಿನಿಂದ ಶಿವನನ್ನೊಲಿಸಿ ಸ್ಥಿರಂಜೀವತ್ವವನ್ನು ಪಡೆದು ತಂದೆ ತಾಯಿಗಳನ್ನುದ್ಧರಿಸಿದನು (ಮಾರ್ಕಂಡೇಯಪುರಾಣ).

ಶ್ವೇತನೆಂಬವನೊಬ್ಬನು ನೆನೆಯಬಾರದ ಅನೇಕಪಾಪಕರ್ಮಗಳನ್ನು ಮಾಡಿದ್ದನು. ಒಮ್ಮೆ ಅವನು ಶಿವನಿಯೆಂಬ ತನ್ನ ಸೂಳೆಗೆಂದು ಕಮ್ಮಲರ್ಗಳನ್ನೊಯ್ಯುವಾಗ ಅದರಲ್ಲಿ ಒಂದು ಕೆಳಗೆ ಬಿದ್ದಿತು. ಅದನ್ನು ತೆಗೆದುಕೊಳ್ಳಲು ಸಾಧ್ಯವಾಗದಿರಲು ಶಿವನಿಗೆ ಮುಟ್ಟಲೆಂದೆಂದನು. ಈ ಕಾರಣದಿಂದ ಅವನಿಗೆ ರಂಭೆಯೊಡನೆ ಒಂದು ದಿನದ ಭೋಗ ದೊರೆಯಿತು. ಅಲ್ಲಿದ್ದಾಗ ರಂಭೆಯ ಉಪದೇಶದಿಂದ ಶಿವನನ್ನು ಭಜಿಸಿದನು. ಅವನು ಮರುದಿನ ಸತ್ತನು. ಯಮನು ಅವನನ್ನು ಒಯ್ಯಲುದ್ಯೋಗಿಸಲು ಶಿವನು ಅವನನ್ನು ಸುಟ್ಟು ಶ್ವೇತನಿಗೆ ಗಣಪದವಿಯನ್ನು ಕೊಟ್ಟನು.

ಸುಕುಮಾರನೆಂಬ ಬ್ರಾಹ್ಮಣನು ಅತಿ ಜಾರನಾಗಿ ಪರವಧುಗಳೊಡನೆ ಬೆರೆಯಲು ಅರಸನು ಅವನನ್ನು ಆ ರಾಜ್ಯದಿಂದ ಹೊರಹಾಕಿದನು. ಅವನು ಪರದೇಶದಲ್ಲಿದ್ದು ಅಲ್ಲಿ ರಜಸ್ವಲೆಯಾಗಿ ಸ್ನಾನಕ್ಕೆಂದು ಕೆರೆಗೆ ಬಂದ ಒಬ್ಬ ಕುಲಹೀನೆ

ಯನ್ನು ರಮಿಸಿ, ಅವಳೊಡನೆ ಮಧುಮಾಂಸಾದಿಗಳನ್ನು ತಿಂದು ಜೀವಿಸುತ್ತಿದ್ದು ಐವರು ಗಂಡು ಇಬ್ಬರು ಹೆಣ್ಣುಮಕ್ಕಳನ್ನು ಹಡೆದನು. ಮುಂದೆ ಆಕೆಯು ಸಾಯಲು ಸುತೆಯರೊಡನೆಯೇ ನೆರೆದನು. ನೂರಾರು ಬ್ರಾಹ್ಮಣರಕೊಲೆ ಮೊದಲಾದ ಅನೇಕ ಪಾಪಕರ್ಮಗಳನ್ನು ಮಾಡಲು ಅಲ್ಲಿಯ ರಾಜನು ಇವನನ್ನು ಕೊಲ್ಲಲು ಭಟರನ್ನು ಕಳಿಸಿದನು. ಇದನ್ನು ತಿಳಿದು ಸುಕುಮಾರನು ಓಡಿಹೋಗಿ ಕಿರಾತದೇಶದ ವಣಿಕ್ಪಥಪುರದಲ್ಲಿದ್ದನು. ಅಲ್ಲಿ ಮಾಘಕೃಷ್ಣ ಚತುರ್ದಶಿದಿವಸ ಬಹಿರ್ವಾಸಿನಾಗೇಶದೇವರ ಪೂಜೆ ನಡೆದಿತ್ತು. ಈತನು ತನ್ನ ಸ್ತ್ರೀಗೆ ಹೂವನ್ನು ತರಲೆಂದು ಹೋಗಿ ಪೂಜೆಯನ್ನು ನೋಡಿದನು. ಆಶ್ಚರ್ಯಬಟ್ಟನು. ಮುಂದೆ ತನ್ನ ೭೦ ನೆಯ ವಯಸ್ಸಿಗೆ ಸಾಯಲು ಯಮದೂತರು ಅವನನ್ನು ಒಯ್ಯಹತ್ತಿದರು. ಶಿವದೂತರು ಅವರನ್ನು ತಡೆದು ಅವನನ್ನು ಶಿವನೆಡೆಗೊಯ್ದರು ಶಿವಪೂಜೆಯನ್ನು ನೋಡಿ ನಲಿದ ಫಲವಾಗಿ ಶಿವನು ಅವನಿಗೆ ಗಣಪದವಿಯನ್ನು ಕೊಟ್ಟು ಕೈಲಾಸಕ್ಕೊಯ್ದನು. ಅಲ್ಲಿ ಒಂದು ಕಲ್ಪಕಾಲ ಇದ್ದು ಮುಂದೆ ದಧೀಚಿಯೆಂಬ ಋಷಿಯಾಗಿ ಭೂಮಿಯಲ್ಲಿ ಹುಟ್ಟಿ ಹರಿಯನ್ನು ಭಂಗಿಸಿ ಶಿವನಲ್ಲಿ ಬೆರೆದನು (ಸ್ಕಾಂದ).

ಹಿರಣ್ಯಾಕ್ಷನ ಮಗನಾದ ಅಂಧಕಾಸುರನು ಗರ್ವದಿಂದ ಮಂದರಾಚಲಕ್ಕೆ ಹೋಗಿ ತೊಂದರೆ ಕೊಟ್ಟನು. ಶಿವನು ಅವನನ್ನು ತ್ರಿಶೂಲದಿಂದಿರಿದೆತ್ತಲು ಅವನ ಅಜ್ಞಾನವಳಿದು ಶಿವಜ್ಞಾನೋದಯವಾಗಿ ಶಿವನನ್ನು ನುತಿಸಿದನು. ಶಂಕರನು ಅವನಿಗೆ ಭೃಂಗಿರಿಟಿಯೆಂಬ ಹೆಸರುಕೊಟ್ಟು ಗಣಪದಕೊಟ್ಟನು (ಲೈಂಗ್ಯ).

ಬಲವಾದ ನಾಯಿಯು ಬೆನ್ನುಹತ್ತಿ ಬರುವುದನ್ನು ಕಂಡು ಅಂಜಿ ಅವಸರದಿಂದ ಓಡಿಹೋಗುವಾಗ ಕಾಣದೆ ಶಿವತೀರ್ಥದಲ್ಲಿ ಬಿದ್ದು ಸತ್ತ ಹಂದಿಗೆ ಶಿವನು ಗಣಪದವಿತ್ತನು (ಲೈಂಗ್ಯ).

ವ್ಯಾಧನೊಬ್ಬನು ಮೃಗಧ್ಯಾನದಿಂದ ಬಿಲ್ವವೃಕ್ಷವನ್ನೇರಿ ಕುಳಿತು ಅಲ್ಲಾಡಿ ಕಣ್ಮರೆಮಾಡುವ ಎಸಳುಗಳನ್ನು ಹರಿದು ಬಿಸುಡಲು ಅವು ಅಡಿಯಲ್ಲಿದ್ದ ಶಿವಲಿಂಗದಮೇಲೆ ಬಿದ್ದವು. ಅಂದು ಶಿವರಾತ್ರಿಯಿದ್ದುದರಿಂದ ಆ ವ್ಯಾಧನಿಗೆ ಮುಕ್ತಿಯಾಯಿತು (ಮುಕ್ತಿಖಂಡ).

ಧನದಾಸೆಯಿಂದ ಮೂರುಸಾವಿರ ಬ್ರಾಹ್ಮಣರನ್ನು ಕೊಂದ ಪುಲಾಲವಧವೊಬ್ಬಳು ಕಾಳಹಸ್ತಿಯಲ್ಲಿ ಒಬ್ಬ ಶೈವನಿಗೆ ಪ್ರಿಯೆಯಾಗಿ ಶಿವನಲ್ಲಿ ಬೆರೆದಳು (ಸ್ಕಾಂದ).

ಚಂಡನೆಂಬವನು ಮಳಲಲಿಂಗವಮಾಡಿ, ಶಿವನೆಂದು ತಿಳಿದು, ಅದರಮೇಲೆ ಆಕಳ ಹಾಲನ್ನು ಕರೆಯುತ್ತಿದ್ದನು. ತಂದೆ ಅದನ್ನು ಕಂಡು ಆ ಲಿಂಗವನ್ನು ಕೆಡಿಸಲು ತಂದೆಯನ್ನು ಕೊಂದು ಮೆರೆದ ಚಂಡೇಶನಿಗೆ ಶಿವನೊಲಿದನು.

ಇದರಂತೆಯೇ ಹರಿಬ್ರಹ್ಮಾದಿದೇವತೆಗಳು ದನುಜರು ನರ ಫಣಿ ಮನು ಮುನಿ ವಿಹಂಗಪಾದಿ ಎಲ್ಲರೂ ಶಿವಕಾರುಣ್ಯದಿಂದಲೇ ಬಾಳಿದರೆಂದು ಸಕಲ ಶಾಸ್ತ್ರ ಪುರಾಣಗಳೂ ಹೇಳುತ್ತವೆ. ನೀವೇ ಹರಿಗೆ ಇಲ್ಲದ್ದೊಂದು ಮಹತ್ವವನ್ನು ಕೊಟ್ಟು ಆತನು ಪರದೈವವೆಂದು ಹೇಳುವಿರೇ ಹೊರತು ಅವನು ಶ್ರೇಷ್ಠಭಕ್ತನು. ಹೇಗಂದರೆ : ಅವನ ಅಂಗವೆಲ್ಲ ಭಸ್ಮಮಯ. ಹಣೆಯಲ್ಲಿ ತ್ರಿಪುಂಡ್ರವುಂಟು. ರುದ್ರಾಕ್ಷಿಭೂಷವಿದೆ ಜಡೆಯಿದೆ ಇಂದ್ರನೀಲಮಯಲಿಂಗವನ್ನು ಪೂಜಿಸುವನು. (ಸೌವರ್ಣಿಕಾಖ್ಯಸಂಹಿತೆಯಾದಿ ಸಕಲ ಶಾಸ್ತ್ರಾವಳಿ).

ಹರಿಯು ಶಿವನನ್ನು ಪೂಜಿಸಿರುವನೆಂಬುದನ್ನು ಆಯಾಯ ಹೆಸರಿನಿಂದಿರುವ ಲಿಂಗಗಳೇ ಹೇಳುತ್ತವೆ, ಎಂದು ಪ್ರಣವವೇದ ಗಾಯತ್ರಿಗಳು ವ್ಯಾಸನು, ಪಂಡಿತರು, ತಪಸ್ವಿಗಳು ಮುಂತಾಗಿ ಎಲ್ಲರೂ, ಸಾರಿರುವರು.

ಶಿವನ ಶುದ್ಧತೆಯಲ್ಲಿ ನಿಮಿತ್ತವಿಲ್ಲ; ಅದು ನೈಜ. ಉಳಿದ ದೇವರುಗಳ ವಿಶುದ್ಧಿಯಲ್ಲಿ, ಹೇತುವಿಲ್ಲ; ಅದು ಅನೈಜ. ಈ ಪ್ರಕಾರ ವಿಚಾರಿಸಲು ಶಿವನಿಂದ ಶುದ್ಧನಾದ ಹರಿಯು ಆದಿಶುದ್ಧನಾದ ಶಿವನಿಗೆ ಎಂದೂ ಸರಿಯಾಗನು. ಸಕಲ ಪ್ರಮಾಣಸಿದ್ಧನಾದ ಶಿವನನ್ನು ಸಿದ್ಧಿಸಹೋಗುವುದು ಅತಾರ್ಕಿಕವು. ಅಲ್ಲಿ ಸಿದ್ಧ ಸಾಧನವೆಂಬ ದೋಷಬರುವುದು ಆದುದರಿಂದ ಶಿವನೇ ಪತಿ; ಹರಿಮುಖ್ಯರು ಭೃತ್ಯರು. ಎಂದು ಪದ್ಮರಸರು, ವಾದಿಜನರು ಮೆಚ್ಚುವಂತೆ ಇಪ್ಪತ್ತೆಂಟು ದಿವಸಗಳ ವರೆಗೆ, ಶ್ರುತದಿಂದ ಅನುಮಾನಗಳಿಂದ ವಿವರಿಸಿದನು. ತ್ರಿಭುವನತಾತನು ನುಡಿಯುಡುಗಿ ಇದಕ್ಕೆ ದೃಷ್ಟಾಂತವುಂಟೇ ಎಂದು ಕೇಳಲು ಗುರುವು ಹೀಗೆಂದನು :

ಸಮುದ್ರಮಧ್ಯದಲ್ಲಿ ಮತ್ಸ್ಯಕೇಶ್ವರನ ಎದುರು ಹನುಮಂತನು ಒಂದು ಜಯಸ್ತಂಭವನ್ನು ನಿಲ್ಲಿಸಿ,ಅದರಮೇಲೆ ರಾಮನ ಆಧಿಕ್ಯವನ್ನು ಬರೆಯುತ್ತಿರಲು, ವಾಯು ಬಂದು, ಆತನಿಗೆ ಹರಿಯ ಕುತ್ಸಿತತನವನ್ನು ತಿಳಿಸಿದನು. ಆಗ ಹನುಮಂತನು ಅದನ್ನು ಬಿಟ್ಟು ಶಿವನ ಹೆಸರನ್ನು ಅಲ್ಲಿ ಬರೆದನು; ಇದೇ ದೃಷ್ಟಾಂತ. ಆಗ ತ್ರಿಭುವನತಾತನು ಇದನ್ನು ಪ್ರತ್ಯಕ್ಷ ತೋರಿಸಿದರೆ, ನಾನು ಸೋತೆನೆಂದು ನುಡಿದನು. ಆಗ ಗುರುವರನು ಸಮುದ್ರನಾಥನಿಗೆ ಆಶೀರ್ವಾದಪೂರ್ವಕವಾಗಿ ಹೀಗೆ ಪತ್ರ ಬರೆದನು. ಮತ್ಸ್ಯಕೇಶನಿದಿರಲ್ಲಿ ಹನುಮಂತನು ಬರೆದ ಜಯಸ್ತಂಭದೊಳಗಿನ

ಲೇಖವನ್ನು ಕಳಿಸಿಕೊಡಬೇಕು. ಬಲ್ಲಾಳನ ಮುದ್ರಿಕಾರರು, ಉಭಯ, ಪಕ್ಷದವರು, ಸಮುದ್ರನಾಥನಲ್ಲಿಗೆ ಹೊರಟರು. ಆಗ ಅನೇಕ ಜನರು, ಸಮುದ್ರನಾಥನೇನು ಸಾಮಾನ್ಯ ಮನುಷ್ಯನೇ, ಅವನೆಡೆಗೆ ಹೋಗುವದೆಂತು? ಎಂದು ಸಂಶಯಗ್ರಸ್ತರಾಗಿರಲು ಪದ್ಮರಸರು, ಹೀಗೆ ಹೇಳಿದರು. "ನೀವೆಲ್ಲ ಸಮುದ್ರತೀರಕ್ಕೆ ಹೋಗುವಷ್ಟರಲ್ಲಿ, ಪ್ರಸನ್ನವದನನಾದ ಶೈವನೊಬ್ಬನು ಪಶ್ಚಿಮದಿಕ್ಕಿನಿಂದ ಬರುವನು. ಆತನು ನಿಮ್ಮ ಇಂಗಿತವನ್ನು ತಿಳಿದುಕೊಂಡು, ಒಂದು ಹಡಗದಲ್ಲಿ ನಿಮ್ಮನ್ನು ಕುಳ್ಳಿರಿಸಿಕೊಂಡು, ಪಟವಿಲ್ಲದೆ ಅದನ್ನು ನಡೆಸುವನು. ಆ ಹಡಗು ನಿಂತುದೇ ಜಯಸ್ತಂಭವಿರುವ ತಾಣ. ಅಲ್ಲಿ ಶಿವನಾಮವನ್ನುಚ್ಚರಿಸಿ, ನಮ್ಮ ಹೆಸರನ್ನು ಹೇಳಿ, ಈ ಲೇಖವನ್ನಿರಿಸಿದರೆ ಆ ಜಯ ಸ್ತಂಭದದರ್ಶನವಾಗುವುದು. ಆ ಶೈವನೇ, ನಿಮ್ಮನ್ನೂ ಆ ಜಯಸ್ತಂಭದೊಳಗಿನ ಲಿಪಿಯ ಮುದ್ರೆಯನ್ನೂ ತೆಗೆದುಕೊಂಡು ಬಂದು, ದಂಡೆಗೆ ಮುಟ್ಟಿಸುವನು." ನಿರೂಪಣೆಯಂತೆ ಅವರು ಸಮುದ್ರದ ತಡೆಗೆ ಬಂದರು. ಗುರುವಿನ ಹೇಳಿಕೆಯಂತೆ ಎಲ್ಲವೂ ಪ್ರತ್ಯಕ್ಷವಾಯಿತು. ಹೋದವರು ಲಿಪಿಯ ಮುದ್ರೆಯನ್ನು ತಂದು ಅರಸನ ಕೈಯಲ್ಲಿ ಕೊಟ್ಟರು. ಅರಸನು ಎಲ್ಲರಿಗೂ ಗೊತ್ತಾಗುವಂತೆ ಅದನ್ನು ಸಭೆಯಲ್ಲಿ ಓದಿಸಿದನು. ಅದರಲ್ಲಿ, ಮಹಾದೇವನಿಗೆ ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳು ಸಮವಾಗಲಾರರು. ಆದುದರಿಂದ, ಈಶನೇ ಪತಿ. ಹೀಗೆ ಬರೆದಿತ್ತು. ಲಿಪಿಯನ್ನು ನೋಡಿ ಎಲ್ಲರೂ ಆನಂದಭರಿತರಾಗಿ ಜಯಘೋಷಮಾಡಿದರು. ಪದ್ಮರಸರ ಮಹಿಮೆಯನ್ನು ಎಲ್ಲರೂ ಕೊಂಡಾಡಿದರು. ಆಗ ಪದ್ಮರಸರು ಮುಂದಿರ್ಪ ಪರವಾದಿಗಳನ್ನು ನೋಡಿ "ವೇದದಲ್ಲಿ ಪುರುಷಾರ್ಥವಿಲ್ಲೆಂಬ ಪಾಂಚರಾತ್ರನೇ; ನೀನು ಮಾತಾಡಬೇಡ, ಕೆಡುವ ಈ ಪ್ರಪಂಚವು ನಿತ್ಯವೆಂದು ನಂಬಿದ ಮೀಮಾಂಸಕನೇ,ಸುಮ್ಮನಾಗು." ಎಂದು ಭಿನ್ನವಾದದವರ ಬಾಯಿಮುಚ್ಚಿಸಿದರು. ಆಗ ವಾದಿಗಳು ತಮ್ಮ ಸೋಲನ್ನೊಪ್ಪಿ, ಪದ್ಮರಸರಿಗೆ ನಮಸ್ಕಾರಮಾಡಿ ಹೀಗೆ ಪ್ರಾರ್ಥಿಸಿದರು : "ಸೂರ್ಯನಿಗೆ ಕತ್ತಲೆಯು ಎದುರಾಗಬಲ್ಲುದೇ? ನಿನ್ನೊಡನೆ ವಾದ ಮಾಡಲು ನಾವು ಸಮರ್ಥರೇ?" ಎಂದು ಹೊಗಳಿ, ಆತನನ್ನು ಸತ್ಕರಿಸಿದರು.

ಹನ್ನೆರಡನೆಯ ಸಂಧಿ

ಶಿವದೀಕ್ಷೆ

ಆರ್ಯವರ್ಯರಾದ ಪದ್ಮರಸರಿಗೆ ತ್ರಿಭುವನತಾತನು ವಾದದಲ್ಲಿ ಸೋತನಷ್ಟೇ? ಅವರೊಡನೆ ಸಂಭಾಷಿಸಿದ ಪುಣ್ಯದಿಂದ ಅವನಲ್ಲಿ ಶಿವಜ್ಞಾನಶಕ್ತಿ ಸ್ಫುರಿಸಿ, ತನ್ನ ಭವಿತ್ವಕ್ಕೆ ಅವನಿಗೆ ಹೇಸಿಕೆಯಾಯಿತು; ಶಿವದೀಕ್ಷೆಯನ್ನು ತಕ್ಕೊಂಡು ಪೂರ್ವದುಷ್ಕೃತಧ್ವಾಂತವನ್ನು ಓಡಿಸುವೆನೆಂದು ನಿಶ್ಚೈಸಿದನು. ಕೂಡಲೆ ತನ್ನ ಕುಟುಂಬದವರನ್ನು ಆ ದೋರಸಮುದ್ರಕ್ಕೆ ಕರೆಸಿಕೊಂಡು ಅಲ್ಲಿಯೇ ವಾಸ ಮಾಡಿದನು.

ಗುರುಕೃಪೆಯನ್ನು ಪಡೆಯಬೇಕೆಂದು, ಆತ್ಮಮಲಿನವನ್ನು ತೊಳೆಯುವಂತೆ ಬಿಳೀಮಟ್ಟಿ (ಗೋಪಿ)ಯನ್ನು ತೊಳೆದು ಭಸ್ಮಧರಿಸಿದನು. ಭವಪಾಶವನ್ನು ಹರಿಯುವಂತೆ ಕಂಠದಲ್ಲಿಯ ತುಳಸೀಮಾಲೆಯನ್ನು ಹರಿದು, ರುದ್ರಾಕ್ಷಿಮಾಲೆಯನ್ನು ಧರಿಸಿದನು. ಮುಕ್ತಿಯ ಇಚ್ಛೆ, ಶಿವಭಕ್ತರಲ್ಲಿ ಭಕ್ತಿ, ಶಿವಶಾಸ್ತ್ರಗಳಲ್ಲಿ ಶ್ರದ್ಧೆ, ಶಿವಾರ್ಚನಾಪೇಕ್ಷೆ ಉಂಟಾದುವು ಭಕ್ತ್ಯಾವೇಶದಿಂದ ಪದ್ಮರಸರ ಸಭಾಸ್ಥಲಕ್ಕೆ ಬಂದನು. ಶರಣಗೋಷ್ಠಿಯಲ್ಲಿದ್ದ ಗುರುವನ್ನು ಕಂಡು, ಸಾತ್ವಿಕತೆಯಿಂದ ದಂಡಪ್ರಣಾಮವಾಡಿ, ಕೈಮುಗಿದುನಿಂದು, ಭಯಭಕ್ತಿಯಿಂದ, "ಗುರುವೆ, ನತಜನ ಕಲ್ಪತರುವೆ, ಭಕ್ತಿಯ ಶಿಶುವೆ, ಭಜಕರ ಭಾಗ್ಯದಿರವೆ, ಶಿವಚಿತ್ಸುಖಾಕರವೆ, ಕಾರುಣ್ಯ ಸಾಗರವೆ, ಸಾಕ್ಷಾತ್ ಪರಾತ್ಪರವೆ, ನರಕಿ, ದುರ್ಮಾರ್ಗಿ, ಶಿವದ್ರೋಹಿ, ಹರಿ ದೈವವೆಂದು ಕೆಡೆನುಡಿದ ಅಜ್ಞಾನಿ, ಭಯಾತುರಂ ಆದ ನನ್ನಲ್ಲಿ ಗುಣಗಳನ್ನರಸದೆ ಉಳುಹು" ಎಂದು ದೈನ್ಯದಿಂದ ಪ್ರಾರ್ಥಿಸಿ ಪುನಃ ಪಾದಗಳಿಗೆರಗಿದನು. ಗುರುವು ನಗುತ್ತ "ಏಳೇಳು ಇದಕ್ಕೇಕೆ ಇಷ್ಟು ವ್ಯಥೆಪಡುವೆ? ಸಾವಿರ ಜನ್ಮಗಳಲ್ಲಿ ಪುಣ್ಯಮಾಡಿದಲ್ಲದೆ ಶಿವಜ್ಞಾನ ಉಂಟಾಗಲಾರದು. ಏನು ಮಾಡುವದು?" ಎನ್ನಲು ಅವನು ಗುರುಕೃಪೆಗೆ ಆನಂದಿತನಾಗಿ "ತಮ್ಮ ಪಾದದ ಮೊರೆ ಹೊಕ್ಕೆನು; ಶಿವದೀಕ್ಷೆಯನ್ನು ಕೊಟ್ಟು ರಕ್ಷಿಸಬೇಕು. ಅನಾಥನಾದ ನನ್ನನ್ನು ಕಾಡಬಾರದು". ಎಂದು ಪ್ರಾರ್ಥಿಸಿ ಪುನಃ ನಮಸ್ಕರಿಸಿದನು.

ನಾಳೆ ನಾಡದು ಎಂದು ಹೇಳುತ್ತ ಗುರುವು ಒಂದು ವರುಷದವರೆಗೂ ಅವನ ಭಕ್ತಿಯನ್ನು ಪರೀಕ್ಷಿಸಿನೋಡಿ, ಕಡೆಗೆ ಒಂದು ಶುಭದಿನ, ನಿನಗೆ ಅನುಗ್ರಹ ಮಾಡುವೆನೆಂದು ಹೇಳಿದರು. ತ್ರಿಭುವನತಾತನು ಉಬ್ಬಿ, ಗುರ್ವಾಜ್ಞೆಯಂತೆ ಸ್ನಾನಮಾಡಿ, ಧೌತಾಂಬರ ತ್ರಿಪುಂಡ್ರಾದಿಗಳಿಂದ ಅಲಂಕರಿಸಿಕೊಂಡು, ಗುರುವಿನ ಬಳಿಗೆ ಬಂದು ನಮಸ್ಕರಿಸಿ, ಸುವರ್ಣ ಮೊದಲಾದ ವಸ್ತುಗಳನ್ನು ಭಕ್ತಿಯಿಂದ ಗುರುವಿಗೆ ಅರ್ಪಿಸಿದನು. ಗುರುವಿನ ಹೇಳಿಕೆಯಂತೆ ಅರ್ಚಕರನ್ನು ಪೂಜಿಸಿದನು. ಶಿವಶರಣರಿಗೆ ಕಾಣ್ಕೆಸಹಿತ ಭಸ್ಮತಾಂಬೂಲಗಳನ್ನು ಕೊಟ್ಟನು. ಬಳಿಕ ಸಭಾಪ್ರದಕ್ಷಿಣೆ ಮಾಡಿದನು.

ಮಂಟಪದ ಮಧ್ಯದಲ್ಲಿ, ಚತುಷ್ಕೋನಗಳಲ್ಲಿ ನಾಲ್ಕು, ಮಧ್ಯದಲ್ಲಿ, ಒಂದು, ಹೀಗೆ ಸ್ವರ್ಣಾದಿ ಪಂಚಕಲಶಗಳನ್ನು ಸ್ಥಾಪಿಸಿದ್ದರು. ಅವುಗಳಲ್ಲಿ ಹೇಮ ರತ್ನಾದಿಗಳನ್ನು ಹಾಕಿ ಹೊಸ ವಸ್ತ್ರಗಳಿಂದ ಅವನ್ನು ಮುಚ್ಚಿದ್ದರು. ಐದೆಳೆಗಳ ಸೂತ್ರದಿಂದ ಅವನ್ನು ಸುತ್ತಿದ್ದರು. ಪದ್ಮರಸರು ಮಧ್ಯಕಲಶವನ್ನು ತಾವು ಪೂಜಿಸಿ, ಉಳಿದ ನಾಲ್ಕನ್ನು ಅರ್ಚಕರಿಂದ ಪೂಜೆಮಾಡಿಸಿದರು. ಬಳಿಕ ತೀರ್ಥಾಂಬುಗಳಿಂದ ತುಂಬಿದ ಆ ಕಲಶಗಳನ್ನು ಮಾವಿನ ಚಿಗುರು, ಕರಿಕೆ, ವೀಳೆಯದೆಲೆ ಇವುಗಳಿಂದ ಪೂರ್ಣಾಂಗವಾಗುವಂತೆ ಮಾಡಿ, ಮೂಲಮಂತ್ರದಿಂದ ಕಲಶಜಲವನ್ನು ಅಭಿಮಂತ್ರಿಸಿ, ಸದುಕ್ತಾಸನಸ್ಥರಾದರು. ತೂರ್ಯತ್ರಯಗಳ ಧ್ವನಿ ಹೊರಹೊಮ್ಮಲು, ಸ್ವಸ್ತಿಕಾರೋಹಣವನ್ನೆಸಗಿ, ಅವನಿಗೆ ಕ್ಷೌರ ಕ್ರಿಯೆಯನ್ನು ಒದಗಿಸಿದರು. ಶಿವಮಂತ್ರಸಹಿತವಾಗಿ ಮೂರ್ಧಾಭಿಷೇಕವನ್ನೆಸಗಿ ಹಸ್ತ, ಶಿರ ಇವುಗಳನ್ನು ರುದ್ರ ತೇಜೋಮಯವಾಗುವಂತೆ ಮಾಡಿದರು. ಹೀಗೆ ಯಥಾವಿಧಿಯಿಂದ ಮನದಲ್ಲಿ ಪರಮಾತ್ಮನನ್ನು ಧ್ಯಾನಿಸಿ, ದೇವಾ, ನೀನು ಯಾವಾಗಲೂ ಇಲ್ಲಿಂದ ತೊಲಗದಿರು ಎಂದು ವಿಜ್ಞಾಪಿಸಿ ಶಿಷ್ಯನ ಕರ್ಣದಲ್ಲಿ ಮಹೇಶನ ಘನವಾದ ಮಂತ್ರವನ್ನು ಉಪದೇಶಮಾಡಿದರು. ಆ ಶಿಷ್ಯನು ಸಮುದಿತಹೃದಯನಾಗಿ ಕೈಮುಗಿದು, ಮನದಲ್ಲಿ ಮಂತ್ರವನ್ನು ಧ್ಯಾನಿಸುತ್ತಿರಲು, ಸದ್ಗುರುವಿನ ಅಪ್ಪಣೆಯ ಮೇರೆಗೆ ಆತನ ಪಾಶಚ್ಛಿತ್ತಿಗೆಯ್ದು ಶುದ್ಧೀಕರಿಸಿ, ಆತನಿಗೆ ಘನಲಿಂಗವೊಂದನ್ನು ತೋರಿಸಿ ಕರಕಮಲದಲ್ಲಿರಿಸಿ "ನಿನಗೆ ಇದು ಪ್ರಾಣಲಿಂಗ. ಇದನ್ನೊಮ್ಮೆಯೂ ಬಿಟ್ಟಗಲದೆ ಅರ್ಚಿಸಬೇಕು" ಎಂದು ಶಿವಪೂಜೆಯ ವಿಧಾನವನ್ನು ತಿಳಿಸಿ, ಹೀಗೆ ಉಪದೇಶವಿತ್ತರು. "ಈ ಲಿಂಗವನ್ನು ತಲೆ ಮೊದಲಾದ ಸ್ಥಾನಗಳಲ್ಲಿ ಧಾರಣ ಮಾಡು. ಹೊಕ್ಕುಳದಿಂದ ಕೆಳಗೆ ಧರಿಸಬೇಡ. ಇದು ನಿನ್ನ ಚಿತ್ತಿನ ಒಳ್ಪಿರುಳು. ವಿಮುಕ್ತ್ಯಂಗನೆಯ ನೆತ್ತಿಯಲ್ಲಿ ಹೊಳೆಯುವ ಪರಂಜ್ಯೋತಿ. ದಿವ್ಯಾನುಭವರಹಸ್ಯಾ

ಶ್ರಯವು. ಇದನ್ನು ಹರಿ ಮೊದಲಾದವರು ಧಾರಣಮಾಡಿದರು. ಈ ಲಿಂಗ ಧಾರಣಮಾಡಿದವರಿಗೆ ಭಯವಿಲ್ಲ. ಈ ತೇಜೋಮೂರ್ತಿಯನ್ನು ನಿತ್ಯವೂ ಧ್ಯಾನಿಸು ಕ್ರೋಧಗುಣವನ್ನು ತ್ಯಜಿಸು. ಗುರುಸೇವೆ, ಮಿತಾಹಾರ, ಕ್ಷಮೆ, ದಮೆ, ದಾನ ಈ ಮೊದಲಾದ ಶೀಲಗಳು, ಗೌರವ, ಲೈಂಗಿಕ, ಚಾರ ಪ್ರಸಾದ, ಪದವಾರಿ, ಭಾಕ್ತಿಕ, ಈ ಆರುವ್ರತಗಳು ಉಳ್ಳವನಾಗು. ಅಕೃಪಣತೆ, ಶಾಂತಿ, ದಯೆ, ಅನಸೂಯೆ ಇವೇ ಮೊದಲಾದ ಗುಣಗಳನ್ನು ಪ್ರಯತ್ನಪೂರ್ವಕವಾಗಿ ಸಂಪಾದಿಸು. ಮಂತ್ರ ಜಪ ಶಿವಪೂಜೆಗಳನ್ನು ತ್ರಿಕಾಲ ಆಚರಿಸಿ, ಶಂಭುವನ್ನು ಸಂತುಷ್ಟಗೊಳಿಸು. ಹರಣ ವಳಿದರೂ ಶಿರವನ್ನು ಕತ್ತರಿಸಿದರೂ ಶಿವನನ್ನು ಪೂಜಿಸದೆ ಉಣ್ಣಬೇಡ. ಅದರಿಂದ ನರಕವಾಗುವದು. ಶಿವನಿಂದಕರನ್ನು ಇರಿ; ಆಗದಿದ್ದರೆ ಮಡಿ. ಅದು ಆಗದಿದ್ದರೆ ಆ ಸ್ಥಳಬಿಟ್ಟು ಹೋಗು. ಶಿವಾಲಯ, ಶಿವೋಪವನ, ಶಿವದ್ರವ್ಯ, ಶಿವಪುರಗಳನ್ನು ಕಾಪಾಡು; ಇವನ್ನು ಅಪಹರಿಸಿದವನನ್ನು ಕೊಲ್ಲು. ಅಂಥವನಿಗೆ ಮುಕ್ತಿಸಿಗುವುದು. ಲಿಂಗಮುದ್ರೆಯುಳ್ಳ ಬಸವಗಳು, ಶಿವಗಣರು ಇವರಿಗೆ ಅನ್ಯಾಯಮಾಡಬೇಡ; ಹಾಗೆ ಮಾಡಿದವರನ್ನು ದಯೆತೋರಿಸದೆ ಸಂಹರಿಸು. ಶಿವಭಕ್ತರಿಗಾಗಿ, ಶಿವಾ ಗಮಗಳಿಗಾಗಿ, ಶಿವಾಚಾರಕ್ಕಾಗಿ ಪ್ರಾಣತೆತ್ತವನು; ಗಣಪದವನ್ನು ಹೊಂದುವನು. ಶಿವಾರ್ಚಕರನ್ನು ಯಥಾಶಕ್ತಿ ಸತ್ಕರಿಸು. ಪರಧನ ಪರಸ್ತ್ರೀಯರಿಗೆ ಆಶಿಸಬೇಡ. ಯಾವಾಗಲೂ ಹರನ ಭೃತ್ಯನೆಂಬ ಭಾವ ಮನದಲ್ಲಿ ಬಲವಾಗಿರಲಿ. ಜಾತಿ ವಿದ್ಯಾ ಧನಾದಿಗಳ ಅಭಿಮಾನವನ್ನು ತೊರೆದು, ಭಯಭಕ್ತಿಯಿಂದ ಗುರುವಿಗೆರಗು. ಗುರು ವಾಕ್ಯವನ್ನು ಮೀರಬೇಡ. ತಂದೆ ತಾಯಿ ಮೊದಲಾದ ಬಳಗವೆಲ್ಲವನ್ನೂ ಗುರು ವೆಂದು ತಿಳಿ. ತನಗಿದ್ದ ವಸ್ತುಗಳೆಲ್ಲವನ್ನೂ ಗುರುವಿನ ಅನುವಿಗೆ ನಿರ್ವಂಚನೆ ಯಿಂದ ಅರ್ಪಿಸಿ, ಗುರುವನ್ನು ಶಿವನೆಂದೂ, ಗುರುಸತಿಯನ್ನು ಗಿರಿಜೆಯೆಂದೂ ತಿಳಿದು, ಗುರುವಿನ ಅಣ್ಣ ತಮ್ಮಂದಿರು, ಮಕ್ಕಳನ್ನು ಗುರುಸಮಾನರೆಂದು ತಿಳಿದು, ಹಿರಿಯರನ್ನು ಗುರುವಿನಂತೆ ಕಿರಿಯರನ್ನು ತನ್ನಂತೆ ಭಾವಿಸಿ, ತನುಮನ ಧನಗಳನ್ನು ಗುರುಚರಣಕ್ಕರ್ಪಿಸಿ, ಪಂಚಸೂತಕ ಹಾಗು ಇತರ ಪಾಪಗಳನ್ನು ಮಾಡದೆ ಶಿವ ಗೋಷ್ಠಿಯಲ್ಲಿ ಮನವನ್ನು ನಿಲ್ಲಿಸಿ, ಭಸ್ಮ ರುದ್ರಾಕ್ಷಾದಿ ಸತ್ಕ್ರಿಯೆಗಳಿಂದ ಕೂಡಿದವ ನಾಗಿ ಇರುವವನೇ ನರಾಕೃತಿಯ ರುದ್ರನು. ಅವನಿಗೆ ಪುನರ್ಜನ್ಮವಿಲ್ಲ. ಇಷ್ಟ ಲ್ಲದೆ, ಆತನಿಗೆ ಸಮಸ್ತಭೋಗಗಳು, ಆಯುರಾರೋಗ್ಯ, ಸತ್ಕೀರ್ತಿ ಪ್ರಾಪ್ತವಾಗು ವವು; ನಿರ್ಮಲಿನ ಅನವದ್ಯ ವಿದ್ಯಾಬುದ್ಧಿಗಳು ಪ್ರಕಾಶಿಸುವವು. ಪೂರ್ವದ ರೋಗಾದಿಗಳೂ ಪಾಪವೂ ನಾಶವಾಗಿ, ಸಕಲಭೋಗವನ್ನು ಅನುಭೋಗಿಸಿ ಮುಕ್ತ ನಾಗುವನು. ಹೆಚ್ಚೇನು, ಇವು ದೀಕ್ಷಾಬದ್ಧರಾದವರು ಆಚರಿಸಬೇಕಾದ ಮುಖ್ಯ ಕರ್ಮಗಳು. ಇವುಗಳಲ್ಲಿ ವಿಶ್ವಾಸಿಯಾಗಿ, ಯಥಾಶಕ್ತಿ ಆಚರಿಸು" ಎಂದು ಗುರು

ಉಪದೇಶ ಮುಗಿಸಲು, ಅವರಿಗೆ ವಂದಿಸಿ, ಗುರುದಕ್ಷಿಣೆಕೊಟ್ಟು, ತನ್ನ ಕುಟುಂಬದವರಿಗೂ ಗುರುವಿನಿಂದ ಅನುಗ್ರಹಮಾಡಿಸಿ, ಗಣಪರ್ವಮಾಡಿ ವಾದಿಯು ಸುಖದಿಂದಿದ್ದನು.

ಗುರುವಿನ ಉಪದೇಶದಂತೆ ಅಲ್ಲಿ ಕೆಲಕಾಲ ಇದ್ದು, ಒಂದು ದಿವಸ ಆ ಪರಮ ಶಿಷ್ಯನು ಆಚಾರ್ಯಕುಲತಿಲಕನ ಪಾದಕಮಲಕ್ಕೆ ನಮಸ್ಕರಿಸಿ, "ಗುರುವೇ, ನನ್ನನ್ನು ಘೋರ ಭವಜಲಧಿಯಿಂದ ಮೇಲಕ್ಕೆತ್ತಿ, ಶೈವಾಚಾರದ ನೆಲೆಯನ್ನು ತಿಳಿಸಿ, ಕೃತಾರ್ಥನನ್ನಾಗಿ ಮಾಡಿರುವಿರಿ. ಈಗ ಒಂದು ಸಂಶಯ ನನಗೆ ಉಂಟಾಗಿದೆ. ಅದಾವುದೆಂದರೆ : " ಲಿಂಗಕರ್ಪಿಸದೆ ಭೋಗಿಸಿದ್ದೆಲ್ಲ ಕಿಲ್ಬಿಷವಾಗುವುದೆಂದು ಹೇಳಿದಿರಿ. ರೂಪಾದಿಗಳನ್ನು ಇಷ್ಟಲಿಂಗಕ್ಕೆ ಅರ್ಪಿಸಬಹುದು, ಆದರೆ, ರುಚಿಯನ್ನು ಅರ್ಪಿಸುವ ಬಗೆ ಹೇಗೆ? ಅಲ್ಲದೆ, ಇಂದ್ರಿಯಮುಖವಾಗಿ ಬರುವ ಸುಖವೆಲ್ಲ ರೂಪರಹಿತವಾದುದು. ಅದನ್ನು ಈಶಾರ್ಪಿತಗೆಯ್ಯುವ ಬಗೆ ಹೇಗೆ ? ಇದನ್ನು ತಿಳಿಸುವ ಕೃಪೆಯಾಗಬೇಕು." ಎಂದನು. ಗುರುವರನು ಆತನ ಬಗೆಗೆ ಮೆಚ್ಚಿ, ಸಂತೋಷದಿಂದ ಹೀಗೆಂದನು:"ಎಲೇ ಮಗನೆ ನಿನ್ನ ಮನದ ಅಳಲು ಪ್ರಾಣಲಿಂಗದ ನೆಲೆಯನ್ನು ಅರಿಯದೆ ಅಳಿಯುವಂತಿಲ್ಲ" ಎಂದರು. ಆಗ ಆ ಶಿಷ್ಯನು "ಗುರುವರೇಣ್ಯ, ದೀಕ್ಷಾಸಮಯದಲ್ಲಿ ಇದೇ ಪ್ರಾಣಲಿಂಗವೆಂದು ಉಸುರಿದಿರಿ. ಈಗ ಮತ್ತೆ ತಿಳಿಯುವ ಪ್ರಾಣಲಿಂಗವಾವುದು " ಎಂದು ಬಿನ್ನವಿಸಿದನು. ಗುರುವರನು ನಸುನಗುತ್ತ "ಷಟ್‌ಸ್ಥಲಜ್ಞಾನನಿಷ್ಠನಾಗಿ ಲಿಂಗಾಂಗಸಂಯೋಗಸಂಪನ್ನನಾದ ಮಹಿಮನಿಗಲ್ಲದೆ ಈ ರಹಸ್ಯ ವೇದ್ಯವಾಗದು. ಅದನ್ನೀಗ ನಿನಗೆ ತಿಳಿಸಿಕೊಡುವೆನು : ಪರಾತ್ಪರವೆನಿಪ್ಪ ಶಿವತತ್ವವು, ಚರಾಚರಸೃಷ್ಟಿಯ ಲಯ ಗಮನಕ್ಕೆ ಸ್ಥಾನವಾಗಿ ಲಿಂಗವೆನಿಸಿದೆ. ಅದು ಮಹತ್‌ತತ್ವದಿಂದ ಕೂಡಿರುವುದರಿಂದ ಮಹಾಲಿಂಗವಾಯಿತು. ಅದರಿಂದ ಲಿಂಗಷಟ್ಕಗಳು ಜನಿಸಿದುವು. ಅವು ಆಚಾರಾದಿಯಾಗಿ ಪ್ರಾಣಸ್ವರೂಪವಾಗಿರುವವು. ಇದು ಲಿಂಗಷಟ್‌ಸ್ಥಳದ ನಿರ್ಣಯ. ಅಂಗವೆನಿಸಿದ ಭಕ್ತಾದಿ ಐಕ್ಯದವರೆಗಿನ ಸ್ಥಲಗಳು ಅಂಗಷಟ್‌ಸ್ಥಲವೆನಿಸುವವು. ಈ ಲಿಂಗಗಳ ವೃತ್ತಿ ವಿಧಾನವೆಂತೆಂದರೆ : ಸದಾಚಾರ ನಿರತನಾಗಿ ಶಿವಭಕ್ತಿಯಿಂದೊಡಗೂಡಿ ಗುರುಲಿಂಗ ಜಂಗಮದಲ್ಲಿ ಎರವುಗಾಣದೆ ಲಾಂಛನವನ್ನು ಪರೀಕ್ಷಿಸದವನು ಭಕ್ತನೆನಿಸುವನು. ಪರಧನ, ಪರಸ್ತ್ರೀ ರಹಿತನಾಗಿ ಸದ್ಭಾವದಿಂದ ಲಿಂಗನಿಷ್ಠೆ ಬಲಿದಿರುವವನು ಮಾಹೇಶನೆನಿಸುವನು. ಶಿವಲಿಂಗದ ಪ್ರಸಾದದ ಹೊರತು ಮಿಕ್ಕುದನ್ನು ಸ್ವೀಕರಿಸದೆ ಲಿಂಗಭರಿತನಾಗಿರುವವನು ಪ್ರಸಾದಿಯೆನಿಸುವನು. ಪ್ರಾಣಗುಣವನ್ನು ಲಿಂಗದಲ್ಲಿ ನಿಲಿಸಿ ಲಿಂಗವೇ ಪ್ರಾಣವಾಗಿ ಸುಖಾಸುಖಗಳನ್ನು ಅರಿಯದವನು ಪ್ರಾಣಲಿಂಗಿಯೆನಿಸುವನು. ಲಿಂಗ ಪತಿ ತಾನು ಸತಿಯೆಂದು, ಈ ಪ್ರಪಂಚದ ಸುಖವನ್ನು ಕಾಣದವನು ಶರಣನು. ಷಡೂರ್ಮಿ, ಷಡ್ವರ್ಗಂಗಳ ಆಜ್ಞಪ್ತಿಯನ್ನು ಅಲೆದು ಪೂಜಾಭ್ರಾಂತಿ

ಗೆಟ್ಟು ನಿರ್ವಾಣಭಾವದಲ್ಲಿ, ಉರಿಯನ್ನಪ್ಪಿದ ಕರ್ಪೂರದಂತೆ ಎಸೆವವನು ಐಕ್ಯನು. ಇವು ಭಕ್ತಾಂಗ ಷಟ್ಕಗಳು. ವಿಚಾರಿಸಿದರೆ ಇವು ಏಕವಾಗಿರುವವು. ಲಿಂಗಷಟ್ಸ್ಥಳದಲ್ಲಿ ಇವು ಒಂದೊಂದರೊಳಗೊಂದೊಂದು ಹೊಂದಿಕೊಂಡು ಸಂಸ್ಕೃತಿಯನ್ನು ಅಳಿದರೆ ಸ್ಥಲವೆನಿಸುವದು. ಇವುಗಳ ಅಂತಸ್ಥವಾದ ಅಂಗಹಸ್ತಗಳನ್ನೂ ಭಕ್ತಿಗಳನ್ನೂ ಲಿಂಗಮುಖಗಳನ್ನೂ ಹೀಗೆ ವಿವರಿಸಬಹುದು. ಧರೆ, ಅಂಬು, ಶಿಖಿ, ವಾಯು, ನಭ, ಆತ್ಮ ಇವು ಭಕ್ತಾದಿಗಳಿಗೆ ಅಂಗಗಳು. ಸುಚಿತ್ತ, ಸುಬುದ್ಧಿ, ನಿರಹಂಕೃತಿ, ಮನಸ್ಸು, ಜ್ಞಾನ, ಭಾವ, ಇವು ಹಸ್ತಗಳು. ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ, ಆನಂದ, ಸಮರಸ ಇವು ಭಕ್ತಿಗಳು, ನಾಸಿಕೇಂದ್ರಿಯದಲ್ಲಿ ಆಚಾರಲಿಂಗವದೆ. ಆ ಲಿಂಗಕ್ಕೆ ಪೃಥ್ವಿಮುಖಾಂತರವಾಗಿ ಗಂಧವನ್ನು ಅರ್ಪಿಸಬೇಕು. ನಾಲಗೆಯಲ್ಲಿ ಗುರುಲಿಂಗವದೆ. ಅದಕ್ಕೆ ಜಲದ ಮುಖಾಂತರ ರಸವನ್ನು ಅರ್ಪಿಸಬೇಕು. ನೇತ್ರೇಂದ್ರಿಯದಲ್ಲಿರುವ ಶಿವಲಿಂಗಕ್ಕೆ ಅಗ್ನಿಮುಖಾಂತರ ರೂಪವನ್ನರ್ಪಿಸಬೇಕು. ತ್ವಕ್ಕಿನಲ್ಲಿರುವ ಚರಲಿಂಗಕ್ಕೆ ವಾಯುಮುಖಾಂತರ ಸ್ಪರ್ಶವನ್ನೂ, ಶ್ರೋತ್ರೇಂದಿಯಲ್ಲಿರುವ ಪ್ರಸಾದಲಿಂಗಕ್ಕೆ ಗಗನಮುಖಾಂತರ ಶಬ್ದವನ್ನೂ, ಮನದಲ್ಲಿರುವ ಮಹಾಲಿಂಗಕ್ಕೆ ಆತ್ಮಮುಖದಿಂದ ಈ ದ್ರವ್ಯ ಪರಿಣಾಮವನ್ನೂ ಇತ್ತು, ಆ ಪ್ರಸಾದಸಾಗರದಲ್ಲಿ ನಿಮುಗ್ನನಾಗಬೇಕು. ಇಂತಹ ತನುವಿನಲ್ಲಿ ಲಿಂಗವು ನೆಲೆಸಿರುವುದರಿಂದ ಅದನ್ನು ಮುಟ್ಟಿದ ಸುಖಾದಿಗಳೆಲ್ಲವೂ ಪ್ರಸಾದವಾಗುವವು. ಈ ರೀತಿಯಾಗಿ ಅರ್ಪಿಸಿದರೆ ಅನರ್ಪಿತದೋಷವಳಿದು ಎಲ್ಲವೂ ಪ್ರಸಾದವಾಗುವವು. ಆದುದರಿಂದ ಸಕಲ ಭೋಗವನ್ನೂ ವಂಚನೆಯಿಲ್ಲದೆ ಈಶ್ವರಾರ್ಪಣಬುದ್ಧಿಯಿಂದ, ಒಂದೊಂದು ಇಂದ್ರಿಯಸುಖವನ್ನು ಒಂದೊಂದು ಮುಖಕ್ಕೆ ಇತ್ತರೆ, ಎರವಿನ ಆಭರಣವನ್ನು ಧರಿಸಿದಂತಾಗುವುದು. ಆದುದರಿಂದ ಬಹು ಎಚ್ಚರಿಕೆಯಿಂದ ವಿಷಯಸುಖವನ್ನು ಆಯಾ ಮುಖಕ್ಕಿಟ್ಟು ಸ್ವೀಕರಿಸಬೇಕು." ಎಂದು ಗುರುನುಡಿದ ಮಾತಿಗೆ ಶಿಷ್ಯನು ಹೀಗೆ ಕೇಳಿದನು : " ಎಲೆ ದೇವಾ, ಹೇಯಗಳು ಈ ತನುವನ್ನು ಮುಟ್ಟಲು, ಪ್ರಸಾದವಾಗುವ ವಿಧಿಯಾವುದು ? ಈ ತನುವು ಲಿಂಗಮಯವಾದುದರಿಂದ ಇದರ ಸೋಂಕೆಲ್ಲವೂ ಪ್ರಸಾದವೆಂದಿರಿ. ಅದರ ಬಗೆ ಯಾವುದು ? " ಎಂದು ಕೇಳಲು " ಆತ್ಮಹಿತವಾದುದು ಅನಘಲಿಂಗಾರ್ಪಿತಕ್ಕೆ ಸಲ್ಲುವದು. ತನ್ನ ಮನವೊಪ್ಪದದು ಅದಕ್ಕೆ ಸಲ್ಲದು. " ಎಂದು ನುಡಿಯಲು, ಅವನು " ಇದನ್ನು ತಿಳಿಯಲು ಅಸಾಧ್ಯ. ವಿವರಿಸಬೇಕು. " ಎಂದು ನಮಸ್ಕರಿಸಿದನು. " ಹೊರಗು ಒಳಗು ಎಂಬ ಸಂದಳಿದು ಲಿಂಗಮಯವಾಗದೆ ಈ ಲಿಂಗಪ್ರಾಣಸರಣಿ ಅಳವಡದು. " ಎಂದು ಗುರು ಹೇಳಲು " ಲಿಂಗವು ಪ್ರಾಣವಾಗದಿದ್ದರೆ, ಈ ಅಂಗ

ವನ್ನು ಮುಟ್ಟಿದುವು ಹೇಗೆ ಇರುವವು." ಎಂದು ಪ್ರಾರ್ಥಿಸಲು "ಮರುಳ, ಕೊಡುತ್ತ ಕೊಳ್ಳುತ್ತ ಆ ಪ್ರಾಣವೇ ಲಿಂಗವೆಂಬ ಭಾವನೆಯಿಂದ ಪ್ರಾಣಮುಖವಾಗಿ ಅರಿಯುವವರು ಪ್ರಾಣಲಿಂಗಿಗಳೆನಿಸುವರು. ಕೊಡುವ ಕೊಳ್ಳುವ ಎರಡನ್ನೂ ಅರಿಯದೆ, ಲಿಂಗಮುಖವಾಗಿ ನಡೆದು, ಲಿಂಗವೇ ಪ್ರಾಣವಾಗಿ, ಅದನ್ನೇ ಒಡಲ ಉಸಿರಿನಲ್ಲಿ ಒಳಕೊಂಡವರು ಲಿಂಗ ಪ್ರಾಣಿಗಳೆನಿಸುವರು. ಅವರ ಅಡವು ಲಿಂಗದ ಅಡವು. ಅವರ ಚರಿತ ಗರ ಹೊಡೆದವರಂತೆ ತೋರುವುದು. ಅವರು ಅರ್ಪಿತಾನರ್ಪಿತದಲ್ಲಿ ಎಡಹರು. ಇಷ್ಟಾನಿಷ್ಟವನ್ನು ಅರಿಯರು. ಏಕೆಂದರೆ : ಅವರ ಅಖಿಲಾಂಗವೆಲ್ಲ ಲಿಂಗವೇ"ಎಂದು ಗುರು ವಿವರಿಸಲು"ಗುರುವೇ, ನೀವು ಅವರ ಸರ್ವಾಂಗವೆಲ್ಲ ಲಿಂಗವೆಂದೊರೆದಿರಿ, ಅಂಗಗತವಾದ ಈ ಲಿಂಗವು ಒಳಗನ್ನು ಭೇದಿಸುವ ಪರಿಯಾವುದು ?" ಎಂದು ಶಿಷ್ಯನು ಕೇಳಲು, "ಉದಕ ಘಟ ಇವುಗಳ ಹೊರಗೆ ಇಟ್ಟ ಅಗ್ನಿ ಒಳಗನ್ನು ಭೇದಿಸಿ, ಬಿಸಿಮಾಡಿ, ಬರಿ ಉಷ್ಣವೇ ಏಳುವಂತೆ ಮಾಡುವುದು. ಹೀಗೆ ಆ ಲಿಂಗವೇ ಪ್ರಾಣವೆನಿಸುವುದು." ಹೀಗೆ ಅನೇಕ ದೃಷ್ಟಾಂತಗಳಿಂದ ಶಿಷ್ಯನ ಸಂಶಯಗಳನ್ನು ನಿವಾರಣೆಮಾಡಲು ಆತನು "ಎಲ್ಲವೂ ಲಿಂಗವಾದ ಮೇಲೆ ಭಕ್ತನೆಲ್ಲಿರುವನು ?" ಎಂದು ಕೇಳಿದನು. "ಲಿಂಗದ ಎಲ್ಲ ಅವಯವಗಳಲ್ಲಿ ಹೊಂದಿಕೊಂಡು ಅಯಾ ವಿಧದಲ್ಲಿಯೇ ಅವನು ಚೇಷ್ಟಿಸುತ್ತಿರುವನು. ಲಿಂಗವೂ ಆ ಶರಣನ ಚೇಷ್ಟೆಗೂಡಿ ಅವಿನಾಭಾವದಿಂದ ತೊಳಗುವುದು. ಅಬ್ಧಿಯಲ್ಲಿ ಬಿದ್ದ ಆಲಿಕಲ್ಲಂತೆ ಆತನು ಅಲ್ಲಿ ಬೆರಸಿ ಬೇರಿಲ್ಲದಂತಿಪ್ಪನು." ಎಂದು ಗುರು ತಿಳಿಸಿದನು. "ಸತ್‌ಕ್ರಿಯಾಮುಖದಿಂದ ಭಕ್ತಾಂಗವೆಲ್ಲ ಲಿಂಗವಾದರೆ ಪ್ರಸಾದವೆಲ್ಲಿ ? ಉಭಯವಳಿದ ಬಳಿಕ ಅದರ ಸಿದ್ಧಿಯೆಂತು ?" ಆತನು ಕೇಳಿದ ಮಾತಿಗೆ ಗುರುಮೆಚ್ಚಿ "ತನು ಮನೋ ಭೇದದಿಂದ ಪ್ರಸಾದವು ಸವ್ಯಕ್ತ ಮತ್ತು ಅವ್ಯಕ್ತ ಎಂದು ಆಗಿದೆ. ಅದು ಕ್ರಮವಾಗಿ ಖಂಡಿತ ಮತ್ತು ಅಖಂಡಿತವೆನಿಸುವುದು. ಮಹತ್ವಾದ ಖಂಡಿತ ಸುಪ್ರಸಾದವು ಮನಸ್ಸನ್ನು ಮುಟ್ಟಲಾರದು. ಶಿವನಿಗೆ ಅರ್ಪಿಸಿ ಉಭಯ ಸೀಮೆಯುಳ್ಳ ಅನುಪಮನಿಗೆ ಆ ಶಿವನ ಕಲೆ ಸರ್ವಗತವಾಗುವುದು. ಪ್ರೇಮದಿಂದ ಮುಟ್ಟಿದ ಪದಾರ್ಥವನ್ನು ಆ ಮೇಲೆ ಅರ್ಪಿಸುವವನಿಗೆ ಸಿದ್ಧಿ ಸಾಧ್ಯವಿಲ್ಲ, ಶಿವಾರ್ಪಿತ ಭಾವನೆಯಿಂದ ಸ್ವೀಕರಿಸುವವರು ಭೂಮಿಯಲ್ಲಿ ಅಗೋಚರರು, ಅವರ ಸಿದ್ಧಿ ಬ್ರಹ್ಮ ವಿಷ್ಣು ಮೊದಲಾದವರಿಗೂ ಸಾಧ್ಯವಿಲ್ಲ." ಎಂದು ಗುರು ಹೇಳಿದನು. "ಎಲೈ ಕೃಪಾಂಬುಧಿಯೇ ಆ ಕಲೆ ಅಖಿಲದಲ್ಲಿ ಬೆರೆಸಿರುವ ಅನುವಾವುದು?" ಎಂದು ಶಿಷ್ಯನು ಕೇಳಿದನು. "ಕಾರ್ಮುಗಿಲಿನಲ್ಲಿ ಮಿಂಚಿನ ಗೊಂಚಲು ಇರುವಂತೆ ಚಿತ್ಕಲೆಯಿರುವುದು. ಅದಕ್ಕೆ ಭಕ್ತಿಯಿಂದ ಎಲ್ಲವನ್ನೂ ಪ್ರಾಣಾರ್ಪಿತ

ಮಾಡಿ, ತಾನಿಲ್ಲದೆ ಇರಬೇಕು." ಎಂದು ಗುರು ವಿವರಿಸಿದನು. "ಗುರುವೇ, ಆ ಕಲೆಯನ್ನು ತಂದು, ಅದಕ್ಕೆ ನನ್ನ ಹರಣವನ್ನು ಅರ್ಪಿಸುವ ಬಗೆ ಹೇಗೆ? ಇಷ್ಟಲಿಂಗವೇ ಪರವೆಂದು ಮೊದಲು ಹೇಳಿದಿರಿ. ಈಗ ಬೇರೊಂದನ್ನೇಕೆ ಹೇಳುತ್ತಿರುವಿರಿ?" ಎಂದು ಕೇಳಲು ಗುರು ನಸುನಗುತ್ತ "ಅವೆರಡನ್ನೂ ಬೇರೆಯಾಗಿ ತಿಳಿಯದಿರು. ಶಿರದೊಳಗಿನ ಕಲೆಯೇ ಗುರುವಿನ ಕೃಪೆಯಿಂದ ಈ ಲಿಂಗದಲ್ಲಿ ಭರಿತವಾಗಿರುವುದು. ಇದು ನಿನ್ನಿರವನೇ ಒಳಕೊಂಡು ಸಮರಸ ರೂಪದಲ್ಲಿ ಅನ್ಯಅನನ್ಯತೆಯ ರೂಪದಿಂದ ಇರುವುದು. ಇದು ಸಕಲ ನಿಷ್ಕಲ ಎಂದು ಆಗುವುದು. ಜಗತ್‌ಸೃಷ್ಟಿ ಸ್ಥಿತಿ ಪ್ರಹೃತಿಯನ್ನು ಮಾಡುವುದು ಇದೇ. ಲಿಂಗದಲ್ಲಿ ಧ್ಯಾನ ಪೂಜೆಗಳನ್ನು ಕೈಕೊಳ್ಳುವದೂ ಇದೇ. ಇದೇ ಭುಕ್ತಿಮುಕ್ತಿಗೆ ಬೀಜ. ಇದು ಬ್ರಹ್ಮವಿಷ್ಣುಗಳಿಗೆ ನಿಲುಕದವಸ್ತು. ಇದು ವೇದ ಶಾಸ್ತ್ರಾಗಮ ಅಭೇದ್ಯ ಸಂವಿತ್ತು. ಇದು ನಾದ ಬಿಂದುವಾಗಿ ಸರ್ವರ ಶಿರದಲ್ಲಿ ಇರುವುದು. ಇದು ಪ್ರಾಣದೊಡನೆ ಹೋದರೆ, ಆ ಲಿಂಗವು ಏತಕ್ಕೂ ಬಾರದು. ಇದರ ಒಳಗನರಿಯದೆ ಎಲ್ಲರೂ ಕೆಡುವರು. ಇದು ನಿನಗೆ ಪುಣ್ಯದಬಲದಿಂದ ವ್ಯಕ್ತವಾಗಿರುವುದು. ಒಂದೇ ಲಿಂಗ, ತನುತ್ರಯದ ಭೇದದಿಂದ ಮೂರಾಯಿತು. ಇಂದ್ರಿಯಾವಗತವಾಗಿ ಆರಾಯಿತು. ಸ್ಥಲ ಸ್ಥಲಗಳ ವಿಭಜನೆಯಿಂದ ಮೂವತ್ತಾರಾಯಿತು. ಅವುಗಳ ಮಿಶ್ರಣದಿಂದ ಎರಡುನೂರಾ ಹದಿನಾರು ಆಯಿತು. ಹೀಗೆ ಭಕ್ತಾನುಗ್ರಹಾರ್ಥವಾಗಿ,ವಿವಿಧ ಬಗೆಯನ್ನಾಂತು, ಒಂದೇ ಆಗಿ ತೊಳಗುವ,ಪರಿಬ್ರಹ್ಮವನ್ನು ತಿಳಿಯುವವರಾರು? ಗುರುಕರುಣ ಆಯತಂಗಲ್ಲದೆ, ಉಳಿದವರಿಗೆ ಅದು ಸಾಧ್ಯವಿಲ್ಲ. ಆದುದರಿಂದ ಇದನ್ನು ಕ್ರಿಯಾ, ಚಿತ್ ಈ ದ್ವಯದಿಂದ ಪಡೆದು,ನಿರಂತರ ಶಿವಸುಖವನ್ನು ಅನುಭವಿಸು. ಇದನ್ನು ತಳೆದವನು ಜೀವಿಸುತ್ತಿದ್ದರೂ ಮುಕ್ತನಾದಂತೆ" ಹೀಗೆ ಶಿವತತ್ವಗೋಪ್ಯವನ್ನು ಸ್ಪಷ್ಟಪಡಿಸಲು, ಬೂದಿ ಮುಚ್ಚಿದ ಬೆಂಕಿ, ಮುಗಿಲು ಮುಸುಕಿದ ಚಂದ್ರ ಇವು, ಚಂಡಮಾರುತನ ಕ್ರೀಯಿಂದ ಚಂದ ಚಂದವಾಗಿ ಮಿನ್ನುಗುವಂತೆ,ಆರ್ಯರ ಬೋಧದಿಂದ,ಮರಹು ಅಳಿದು ನಿಜದ ಸಾಕ್ಷಾತ್ಕಾರವಾಯಿತು. ಅತಿ ಹರ್ಷದಿಂದ ಉಬ್ಬಿ ಕೊಬ್ಬಿ,ಆತನು ಗುರುವಿನ ಚರಣದಲ್ಲಿ ಬಿದ್ದು ಇಂತೆಂದನು: "ನನ್ನಂತೆ ಸುಜ್ಞಾನಹೀನರು ಧರೆಯಲ್ಲಿಲ್ಲ. ನಿನ್ನಂತೆ ತಿಳಿಸುವ ಸಮರ್ಥರೂ ಇಲ್ಲಿಲ್ಲ. ನಿನ್ನ ಕರುಣಾಔಷಧದಿಂದ ನನ್ನ ಭವವ್ಯಾಧಿಯಳಿವುದು. ಅನ್ಯಾಯದ ತವರಾದ ನನ್ನನ್ನು ತಂದು,ಶರಣಸನ್ನಹಿತನಾಗುವಂತೆ ಮಾಡಿದಿ.ನಿನ್ನ ಮಹಿಮೆಗೆ ಮಲೆವರಾರು? ನೀನುಳಿಯೆ ಕೊಲ್ಲುವ ಕಾಯುವ ಸಾಹಸಿಗಳುಂಟೇ" ಎಂದು ಬಗೆ ಬಗೆಯಾಗಿ ಬಣ್ಣಿಸುವ ಶಿಷ್ಯನನ್ನು ದಯಾಪಾಂಗದಿಂದ ನೋಡಿ, ಪುಳಕಿತನಾಗಿ "ತಂದೆ ಬಾ, ಎನ್ನಣ್ಣ ಬಾ, ಎನ್ನ ಉದ್ಧರಿಸುವ ಕಂದ ಬಾ, ನಿನ್ನಲ್ಲಿ ಕುಂದಿಲ್ಲ. ವಿಶ್ವನಾಥನ

ಸಕಲಸಾಮ್ರಾಜ್ಯವನ್ನಾಳುವ ಭಾಗ್ಯ ನಿನ್ನ ವಶವಾಯಿತು" ಎಂದು ನುಡಿಯುವ ಸ್ತುತಿಗೆ ಶಿಷ್ಯನು ಅಂಜಿ, ಕಂದಿ ಕುಂದಿದನು. ಆತನನ್ನು ತೆಗೆದೆತ್ತಿ ಗುರು ಸಂತಯಿಸಿದನು, ಕೃಪಾಪೂರಿತನಾದ ಶಿಷ್ಯನಿಗೆ ಅಗಣಿತವಾದ ಆನಂದಾಶ್ರು ಸೂಸಿತು, ಪುಳಕಶ್ರೇಣಿಯೊಗೆಯಿತು. ಗದ್ಗದ ಹುಟ್ಟಿತು. ಗುರುವಿನ ಸ್ತೋತ್ರಮಾಡಿ ಆತನ ಸೇವಾನಿಮಗ್ನನಾಗಿ ಚಿತ್ಸುಖದಿಂದ ಆತನು ಇದ್ದನು. ಆ ಸೊಗಸನ್ನು ನೋಡಿ, ಹೊಳೆವ ದೀವಿಗೆಯಲ್ಲಿ, ಒಂದು ದೀವಿಗೆಯನ್ನು ಹೊತ್ತಿಸಿದಂತೆ ಆತನಲ್ಲಿ, ಸಮಕಳೆ ಘಟಿಸಿತು. ಹೀಗೆ ತಿಳಿಸುವ ಸಮರ್ಥರುಂಟೇ ?

"ಭಾಪು ದೇಶಿಕ ಶಿರೋರತ್ನಾ, ಧರೆಯನ್ನು ಪೊರೆಯಲೆಂದು ನಿಮಿತ್ತಮಾತ್ರವಾದ ದೇಹಧಾರಣಮಾಡಿಬಂದ ಗುರುರೂಪ ವಿಶ್ವೇಶ್ವರನಲ್ಲದೆ ನೀನು ಬೇರೆ ಯಾರೂ ಅಲ್ಲ." ಎಂದು ಭಕ್ತರು ಉಲಿದರು. ಶಿಷ್ಯನಿಗೆ ಬೋಧಿಸಿದ ರೀತಿಯಲ್ಲಿಯೇ ರಘಟಾಪದ್ಧತಿಯೊಳಗೆ ಸಸಾಕ್ಷಿಕವಾಗಿ ದೀಕ್ಷಾಬೋಧವೆಂಬ ಕಥೆಯನ್ನು ಗುರುವರನು ರಚಿಸಿದನು. ಆ ಮೇಲೆ ಸಮಯಸ್ಥಾಪನಾರ್ಥವಾಗಿ, ಶ್ರುತಿ ಸ್ಮೃತಿ ಪುರಾಣ ಆಗಮ ಉಪನಿಷತ್ತು ಇವೇ ಮೊದಲಾದ ಶಾಸ್ತ್ರಗಳ ಸಾರವನ್ನು ತೆಗೆದು, ದೃಷ್ಟಾಂತವನ್ನು ಬರೆದು, ಸರ್ವರೂ ಅರಿಯುವಂತೆ ಕರ್ನಾಟಕಭಾಷೆಯಲ್ಲಿ ಸಾನಂದಚರಿತೆ ಎಂಬ ಗ್ರಂಥವನ್ನು ಕುಮಾರಪದ್ಮರಸರಿಂದ ಬರೆಯಿಸಿ ಸುಖದಿಂದಿದ್ದರು.

ಹದಿಮೂರನೆಯ ಸಂಧಿ

ಕೆರೆಯ ಪದ್ಮರಸರು ವಿಶ್ವನಾಥನಲ್ಲಿ ಐಕ್ಯವಾದುದು.

ಹೀಗೆ ಕೆರೆಯ ಪದ್ಮರಸರು ಅಖಿಳಜನರನ್ನು ಉದ್ಧರಿಸುತ್ತ, ಶಿವಾದ್ವೈತವನ್ನು ಪ್ರತಿಷ್ಠಾಪಿಸಿ, ಶಿವಸಿತ್ತ ಪಡಿಹೊನ್ನುಗಳನ್ನು ತೀರ್ಥಭಾಜನದಿಂದ ತೆಗೆದು, ಉಚಿತವಸ್ತುಗಳನ್ನು ಸಂಗ್ರಹಿಸಲು ಆ ಹೊನ್ನುಗಳನ್ನು ಕೊಡುತ್ತಿರುವಾಗ, ನೆರೆ ಮನೆಯಲ್ಲಿ ಅಳುವ ಧ್ವನಿಯನ್ನು ಕೇಳಿದರು. ಶಿವಧೋ ಎಂದು ಅಳುತ್ತಿರಲು ಶಿವಭಕ್ತರ ರೋದನವನ್ನು ಕೇಳಿ ಹೃದಯ ಕರಗಿ,ಶಿಷ್ಯರನ್ನು ಕಳುಹಿಸಿ ಅಳುತ್ತಿರುವ ಹೆಣ್ಣುಮಗಳನ್ನು ಬರಮಾಡಿಕೊಂಡರು. ಮಗನೊಡನೆ ಒಬ್ಬ ತಾಯಿ ಬಂದು ಗುರುಚರಣದಲ್ಲಿ ಬಿದ್ದು ಮರುಗುತ್ತಿರಲು, ಗುರುವರರು, ಅವಳನ್ನು ಸಂತಯಿಸಿ ಅಳುವಿನ ಕಾರಣವನ್ನು ವಿಚಾರಿಸಿದರು. ಆಕೆಯು ಕಣ್ಣೀರು ತೊಡೆಯುತ್ತ "ಗುರುವರನೇ, ಕಿರಿಯಂದಿನಲ್ಲಿಯೇ ಪತಿದೇವರನ್ನು ಕಳೆದುಕೊಂಡಿರುವೆನು. ಜೋಕೆ ಮಾಡುವವರಿಲ್ಲದ ಕಾರಣ, ಕೊಟ್ಟಣವನ್ನು ಕುಟ್ಟಿ, ನೀರು ಹೊತ್ತು, ಒಪ್ಪೊತ್ತು ಉಪವಾಸ ಒಪ್ಪೊತ್ತು ಊಟ ಮಾಡುತ್ತ, ಈ ಮಗನನ್ನು ಸಲಹುತ್ತಿರಲು,ಹನ್ನೆರಡು ಹೊನ್ನುಗಳನ್ನು ಉಳಿಸಿ, ಯಾರೂ ಅರಿಯದಂತೆ ಅಕ್ಕಿಯ ಪಾತ್ರೆಯಲ್ಲಿಟ್ಟು,ಬಾಯಿ ಮುಚ್ಚಿದ್ದೆನು. ಆ ದ್ರವ್ಯದಿಂದ ಈ ಮಗನಿಗೆ ಬಡತನದ ರೀತಿಯಲ್ಲಿ ಮದುವೆ ಮಾಡುವೆನೆಂಬ ಆಶೆಯಲ್ಲಿದ್ದೆನು. ಇಂದು ಉಲ್ಲಾಸದಿಂದ ಅದನ್ನು ನೋಡಬೇಕೆಂದು ಬಾಯಿತೆರೆಯಲು, ಮುಚ್ಚಳವಿಳುಹದೆ, ಬಾಯಿ ತೆರೆಯದೆ, ಇದ್ದಕ್ಕಿದ್ದಂತೆಯೇ ಯಾವನೋಕಳ್ಳಸು ಅವನ್ನುಅಪಹರಿಸಿದುದು ಗೊತ್ತಾಯಿತು. ಇನ್ನೇನು ಮಾಡಲಿ. ಎಲ್ಲವೂ ಕೆಟ್ಟು ಹೋಯಿತು." ಎಂದು ಒರಲುತ್ತ ಮಗನೊಡನೆ ಗುರುವಿನ ಪಾದಕ್ಕೆ ನಮಸ್ಕರಿಸಿದಳು. "ತಂಗೀ, ಚಿಂತೆಯೇಕೆ ಏಳೇಳು " ಎಂದು ದಯಾದೃಷ್ಟಿಯಿಂದ ನೋಡಿ, ತನ್ನ ಕೈಯೊಳಗಿರ್ದ ಪಡಿಹೊಂಗಳನ್ನು ತೋರಿಸಿ "ಇವು ನಿನ್ನವಹುದೋ ಅಂಜದೆ ಹೇಳು" ಎನಲು ಆ ಅಬಲೆಯು ತನ್ನ ಹೊನ್ನುಗಳನ್ನು ಕಂಡು ಆನಂದಭರಿತಳಾಗಿ, ಹೌದೆಂದು ನುಡಿಯಲು ಹಿಂಜರಿಯುತ್ತಿರಲು, ಆಕೆಯ ಇಂಗಿತವನ್ನರಿತು, ಗುರುವರನು ಆ ಹಣವನ್ನು ಕೊಟ್ಟುಬಿಟ್ಟನು. ಭೂಹಿತ ಚರಿತ್ರರಿಗೆ ಇದು ಸಹಜವಲ್ಲವೇ ? ಆ ವಿಧವೆಯು ಸಂತೋಷಪಟ್ಟು ಮನೆಗೆ

ಹೋದಳು. ಪದ್ಮರಸರು ಆ ಮೇಲೆ ಶಿವನ ಮೇಲೆ ಸಿಟ್ಟಾಗಿ "ಕುಬೇರನ ಗೆಳೆಯನೂ ಮೇರು ಪರ್ವತದಲ್ಲಿ ವಾಸಿಸುವವನೂ ಆದ ಶಿವನು ನನಗಾಗಿ ಚೌರ್ಯ ಮಾಡಿದನೇ ? ಬೇಕಾದರೆ ಗಣಪತಿನೃಪಾಲನ ಅರಮನೆಯ ಧನವನ್ನು ತೆಗೆದು ಕೊಳ್ಳಲಿ, ಬಡವೆಯ ಬಾಯತುತ್ತನ್ನು ಏಕೆ ಅಪಹರಿಸಿದನು ? ಠಕ್ಕಿಸುವ ತನ್ನ ಗುಣವನ್ನು ಬಿಡಲೊಲ್ಲನೇಕೆ? ಇಂದು ಗತಿಗೆಟ್ಟು, ಹಿಂದೆ ತಿರುನೀಲಕಂಠ, ಅಮರ ನೀತಿ, ನಂಬಿ, ಶಂಕರದೇವ, ಪಿಟ್ಟಾಂಬೆ ಅವರನ್ನು ಪೊರೆದಂತೆ ನನ್ನನ್ನೂ ಪೊರೆಯ ಬೇಕೆಂದು, ವಿಧವೆಯ ಹಣವನ್ನು ಕದ್ದುತಂದು ನನಗೆ ಕೊಟ್ಟನು. ಹಣದವರು ಬೆನ್ನು ಹತ್ತಿ ಬಂದು ತಾನು ನನ್ನ ಮೊರೆಹೊಕ್ಕರೆ, ಅವನನ್ನು ಉಳಿಸಲು ನಾನೇನು ಗುಂಡಬೊಮ್ಮಯ್ಯನೇ ? ಒಳ್ಳೆಯದಾಯಿತು. ತಾನಿಂದು ಮಾಡಿದುದನ್ನು ಆಡು ವುದೇನು? ವಿಶ್ವಕುಟುಂಬಿ ತಾನು ದಿನವೂ ಕೊಡುವ ಪಡಿ ಹೊನ್ನಗಳನ್ನು ಇಂದಿನಿಂದ ಬಿಟ್ಟುಬಿಟ್ಟೆನು. ತನ್ನನ್ನೂ ನನ್ನನ್ನೂ ಉಂಟುಮಾಡುವ ಶಕ್ತಿಯುಳ್ಳ ಶಿವಶರಣರ ಕರುಣೆಯು ಎನಗುಂಟು; ಅವನಿಗೇಕೆ ಕಷ್ಟ ?" ಎಂದು ನುಡಿದು ಗುರುವರನು ಮಣಿಮಂಚದಲ್ಲಿ ಮಲಗಿರಲು, ಗುರು ವಿಶ್ವಪತಿಯು ಮೊದಲಿನ ಆಕಾರದಿಂದ ಬಂದು, ಅವರ ತಲೆಯಕಡೆಯ ಉನ್ನತಾಸನದಲ್ಲಿ ಕುಳಿತು, ಮುಸುಕನ್ನು ತೆರೆದರು. ಆತನನ್ನು ನೋಡಿ ಸ್ವಲ್ಪ ಭಯ, ಸ್ವಲ್ಪ ಭಕ್ತಿ, ನಸುಗೋಪ, ಇನಿಸು ಮುದ್ದು ಇನಿಸು ಗದ್ಗದ ಇವೆಲ್ಲವುಗಳಿಂದ ಒಡಗೂಡಿ, ಗುರುವರನು ಸ್ವಾಮಿಗೆ ನಮಸ್ಕರಿಸಿದನು. ಆತನು ಪದ್ಮರಸರನ್ನು ತೆಗೆದು ಬಿಗಿಯಪ್ಪಿ "ಶಿವನೊಡನೆ ಏಕೆ ಇಷ್ಟು ಸಿಟ್ಟು" ಎಂದು ಕೇಳಿದನು. "ನೀನರಿಯದ ಅನುವೇ ? ಸ್ವತಂತ್ರಚರಿತ, ನುಡಿದು ತೋರಲೇನು, ನಿನ್ನಲ್ಲಿ ಪ್ರಮಾಣವುಂಟೇ ? ಹಾಲೆರೆದವರನ್ನು ನಿರಾಕಾರದಲ್ಲಿರಿಸಿದೆ, ಮಹಾ ಲಯದ ವಿಷವನ್ನು ಇಕ್ಕಿದವರನ್ನು ಸಲಹಿದೆ, ಲೋಕಬಾಂಧವನ ಹಲ್ಲು ಕಳೆದೆ, ನಡುದಲೆಯ ಮೇಲೆ ಕಲ್ಲೆತ್ತಿಹಾಕಿದವನನ್ನು ಮನ್ನಿಸಿದೆ. ಭಲರೇ ಲೇಸು ಲೇಸು ವಿಶ್ವಾಧಿಪ ! ಪ್ರಭುಗಳು ಏನುಮಾಡಿದರೂ ಮೆರೆಯದೇ ?" ಹೀಗೆಂದು ವ್ಯಾಜೋಕ್ತಿಗಳಿಂದ ಗುರುವರನು ಗುರುವೇಷದ ಈಶ್ವರನೊಡನೆ ಮಾತನಾಡಿದನು. ಆಗ ಆ ಯತಿಯು ಹೀಗೆಂದನು. "ಮಗನೇ, ಧನನಿಮಿತ್ತವಾಗಿ ಹೀಗೆ ಮಾಡ ಲಿಲ್ಲ. ನೀನು ಈ ಮರ್ತ್ಯದಲ್ಲಿ ಬಂದು, ಪರವಾದಿಗಳಿಗೆ ದೃಷ್ಟಾಂತವನ್ನು ತೋರಿಸಿ, ಶಿವನೇ ದೈವ, ಶಿವಸಮಯವೇ ಶ್ರೇಷ್ಠ ಎಂದು ಪ್ರತಿಷ್ಠಾಪಿಸಿದೆ. ಸ್ಥಿರಬೋಧವೆಂಬ ಮಳೆಗರೆದೆ. ಸುಜನರ ಅಂತರಂಗವೆಂಬ ಸುಕ್ಷೇತ್ರವನ್ನು ಶುದ್ಧಿಗೈದು, ಸತ್ಕ್ರಿಯೆಗಳೆಂಬ ಬೀಜವನ್ನು ಬಿತ್ತಿ, ಮರಹೆಂಬ ಕಳೆ ತೆಗೆದು, ನಿಯಮವೆಂಬ ಕಾಪಿಟ್ಟು, ಮುಕ್ತಿಯೆಂಬ ಫಲವನ್ನು ಪಡೆದು, ಭಕ್ತಿಯ ಭರವನ್ನು ಅಲೆದು, ಸುಖವನ್ನುಂಟುಮಾಡಿ ಲೋಕವನ್ನು ಪೊರೆದೆ. ನೀನು ಬಂದ ಕಾರ್ಯವನ್ನು

ಸರಿಯಾಗಿ ನೆರವೇರಿಸಿರುವೆ. ಶಿವನು ಮೆಚ್ಚಿ ನಿನ್ನನ್ನು ನಿಜದಲ್ಲಿ ನಿಲಿಸುವೆನೆಂದು ಹೀಗೆ ಮಾಡಿರುವನು. ನಂಬಿ ನೀನು ಈ ಮುನಿಸನ್ನು ಬಿಟ್ಟುಬಿಡು. ನಿನ್ನ ಮಗನೇನು ಸಾಮಾನ್ಯನಲ್ಲ. ಆತನು ಕಾರಣಪುರುಷನು. ಅವನಿಂದ ಕೆಲವು ಶೈವ ಕರ್ಮಗಳು ಬಣ್ಣವೇರುವವು. ಆದುದರಿಂದ ಆತನಿಗೆ ಆಚಾರ್ಯಪಟ್ಟವನ್ನು ಕಟ್ಟಿ, ನೀನು ಕಾಶಿಗೆ ಬರಬೇಕು. ಅಲ್ಲಿ ವಿಶ್ವೇಶ್ವರನ ಕಾರುಣ್ಯವನ್ನು ತೋರಿಸುವೆನು."

ಯತಿಯು ಈ ಮಾತುಗಳನ್ನು ಕೇಳಿ, ಗುರುವರನು ಮುದವೆತ್ತು, ವೇಷವನ್ನು ಬದಲಾಯಿಸಿ ಬಂದ ಕಾರಣ ಹೀಗೆ ಎರಡಿಟ್ಟು ನುಡಿವ ಅಂದ ಅಲ್ಲದೆ, ಬೇರೆ ಹರನಾರು ನಿನ್ನನ್ನು ಬಿಟ್ಟು " ಎಂದು ನುಡಿವುತ್ತ ಆತನ ಚರಣಕ್ಕೆ ಎರಗಿದನು. ಕೂಡಲೆ ಯತಿಯು ಅಂತರ್ಧಾನನಾದನು. ಗುರುರೂಪನನ್ನು ಕಾಣದೆ ಗುರುವರನು ವ್ಯಥೆಪಟ್ಟು, ಎನ್ನ ಮೇಗಣ ಕೃಪೆಯಿಂದ ಇಲ್ಲಿಗೆ ಬಂದು ನಂಬಿಸಿ ಹಂಬಲಿಕ್ಕಿ ಆ ವಿಕಟಚರಿತನು ಹೋದನೇ? ಇಲ್ಲಿ ತಾನೇನು ಭಿನ್ನನಾದವನೇ ? ಆದರೂ ಅವನ ಮಾತನ್ನು ಮನ್ನಿಸುವೆನೆಂದು ನಿಶ್ಚಯಿಸಿ ಪರಮೋಲ್ಲಾಸದಿಂದ ಸಕಲ ಭಕ್ತರನ್ನು ಬರಿಸಿ, ಕಾಲೋಚಿತ ಕ್ರಿಯೆಯನ್ನೆಸಗಿ, ನಡೆದ ಸಂಗತಿಯನ್ನು ತಿಳಿಸಿದರು. ಆ ಗಣಸಮೂಹದೊಡನೆ ಶಿವಾರ್ಚನೆಯನ್ನೆಸಗಿ, ಪ್ರಸಾದತುಷ್ಟರಾಗಿ ಅವರ ಒಪ್ಪಿಗೆಯಂತೆ, ವಿಧ್ಯುಕ್ತಮಾಗಿ ಸುಕುಮಾರ ಪದ್ಮರಸರಿಗೆ ಆಚಾರ್ಯಪಟ್ಟವನ್ನು ಕಟ್ಟಿದರು. ಪ್ರೀತಿಯಿಂದ ಶರಣಸಭೆಗೆ ಸಾಷ್ಟಾಂಗನಮಸ್ಕಾರಮಾಡಿ, ಕೈಮುಗಿದು ನಿಂತು, ಹೀಗೆ ಪ್ರಾರ್ಥಿಸಿದರು. " ಎನ್ನನ್ನು ಇದು ವರೆಗೆ ಪ್ರೇಮದಿಂದ ಆರೈದು ಮನ್ನಿಸಿ, ಮಹಾನುಭಾವದ ಸುಧೆಯನ್ನು ಎರೆದು ರಕ್ಷಿಸಿದಿರಿ. ಇನ್ನು ಶಿವಪ್ರಸಾದ ಕಲ್ಪವೃಕ್ಷವು ನಿಮ್ಮ ಕರುಣಾಜಲದಿಂದಲ್ಲದೆ ಚೆನ್ನಾಗಿ ಫಲಿಸದು. ಆದುದರಿಂದ ಅದನ್ನು ಮರೆಯದೆ ಎನಗೆ ನೀಡಬೇಕೆಂ"ದು ಎರಗಿ ಬೀಳ್ಕೊಳ್ಳಲು, ಶರಣಕುಲವು ಖಿನ್ನವಾಗಿ " ಅಕಟಾ ಪುರಾರಿಯು ಇಂದು ಮಾಹೇಶ್ವರರ ಸುಖವನ್ನು ಅಳಿದನೇ ? ಕುಲಹೀನನೂ ಕುಷ್ಠನೂ ಆದವನನ್ನು ಉದ್ಧರಿಸಿ ಆತನಿಗೆ ಶ್ರೇಷ್ಠವಾದ ತನುವನ್ನು ಕೊಟ್ಟುದರಿಂದ ಅವರು ಮಹಾಸತ್ವಶಾಲಿಗಳು. ಅವಿಚಲನಾದ ವಾದಿ ಬರಲು ಅವನನ್ನು ಗೆದ್ದುದರಿಂದ ಅತಿ ಗಭೀರರು. ವಿಧವೆಯನ್ನು ಪೊರೆದುದರಿಂದ ಅವರು ಕೃಪಾಳುಗಳು. ತಮ್ಮ ಸ್ತುತಿಗೆ ಅಳುಕುವದರಿಂದ ಅವಿಕತ್ಥರು. ಆದುದರಿಂದ ಪದ್ಮಣಾರ್ಯರು ಧೀರೋದಾತ್ತನಾಯಕರಿಗೆ ಆರ್ಯರು. ಶಿವಶರಣರಲ್ಲಿ ಕುಲ, ಗುಣಗಳನ್ನು ಆರಯ್ಯದೆ, ಅವರ ಮುದ್ದನ್ನು ಸಲಿಸಿ, ಹೀಗೆ ಸಂತಯಿಸುವವರು ಈ ಭೂಮಿಯಲ್ಲಿ ಬೇರೆ ಯಾರುಂಟು?

ಎಂದು ಕರಗುತ್ತಿರಲು, ಮಗನಿಗೆ ಸಮಾಧಾನ ಹೇಳಿ ಪ್ರಯಾಣವನ್ನು ಬೆಸಗೊಳ್ಳಲು, ಆತನು ಕಡುನೊಂದು "ಆಗಾಧ್ಯಕುಲಚಕ್ರವರ್ತಿ ನೀವಿಂದು ಅಗಲಿದರೆ, ಈ ಶರೀರವನ್ನು ಧರಿಸಿ ನಾನಿರಬಲ್ಲೆನೇ ? ನಿಮ್ಮ ಪಾದಸೇವೆಯನ್ನುಳಿದರೆ ಎನಗೆ ಈ ಸಂಸೃತಿಯ ವ್ಯಾಪಾರವೇಕೆ ? ಪರಮಾನಂದಸಾಗರನೇ, ಗುರುರೂಪಶಶಿಧರನೇ" ಎಂದು ವ್ಯಥೆಯಿಂದ ಆತನ ಅಡಿಯಲ್ಲಿ ಬಿದ್ದು ಮರುಗುತ್ತಿರಲು ಆತನನ್ನುತೆಗೆದಪ್ಪಿ ಗುರುವರರು "ನೀನು ಶಿವಜ್ಞಾನಿ, ನಿನಗೇಕೆ ಈ ತನುಗುಣವಾದ ಗ್ಲಾನಿ ? ವಿಚಾರಿಸಿದರೆ, ನಿನಗೂ ಎನಗೂ ವಿಯೋಗವುಂಟೇ ?" ಎಂದು ಬೋಧೆಯನ್ನಿತ್ತು "ನಿನ್ನಿಂದ ಇನ್ನೂ ಶಿವಕಾರ್ಯವಾಗಬೇಕಾಗಿದೆ. ನಿನ್ನ ಹೊಟ್ಟೆಯಲ್ಲಿ ಒಬ್ಬ ಸತ್ಪುತ್ರನು ಹುಟ್ಟುವನು ಅವನಿಂದ ನಮ್ಮ ಸಮಯವು ಸಫಲವಾಗುವುದು. ಆದುದರಿಂದ ವೈರಾಗ್ಯಭಾವನೆಯನ್ನು ಬಿಟ್ಟುಬಿಡಬೇಕು." ಎಂದು ಆರ್ಯತಿಲಕನು ಆತನನ್ನು ಒಡಂಬಡಿಸಿ,ಉಳಿದ ಬಂಧುಗಳನ್ನು ಸಂತಯಿಸಿ, ಅವರಿಂದ ಬೀಳ್ಕೊಂಡನು. ಶಿಷ್ಯವೃಂದವನ್ನು ನೋಡಿ "ನೀವೆಲ್ಲ ಕುಮಾರಪದ್ಮರಸರಿಂದ ಕೃತಾರ್ಥರಾಗಬೇಕು." ಎಂದು ತಿಳಿಸಿ, ಮಂಗಳವಾದ್ಯಗಳು ಮೊಳಗಲು ಸ್ವಗೃಹದಿಂದ ಪೊರಮಟ್ಟರು. ಹೋಗಿರೆಂದರೂ ಕೇಳದೆ ಒಡನೆಯೇ ಬರುವ ಕೆಲವು ಶಿಷ್ಯರು ಹಾಗು ಭಕ್ತರು ಇವರನ್ನೊಳಗೊಂಡು ಒಳ್ಳೆಯ ವೈಭವದಿಂದ ಗುರುವರ್ಯರು ಅವಿಮುಕ್ತಕ್ಷೇತ್ರಕ್ಕೆ ನಡೆದರು. ದಾರಿಯಲ್ಲಿ, ಇದಿರ್ವಂದು ತಮ್ಮ ಊರುಗಳಿಗೆ ಕೊಂಡೊಯ್ದು, ಮನ್ನಿಸುವ ಭಕ್ತರ ಸತ್ಕಾರಗಳನ್ನು ಸ್ವೀಕರಿಸುತ್ತ, ಪಂಪಾಪುರಕ್ಕೆ ಬರಲು ಹರೀಶ್ವರನು ಅವರ ಬರವನ್ನು ಲಿಂಗದಲ್ಲಿ ಕಂಡನು. ಅನೇಕ ಭಕ್ತರಿಂದೊಡಗೂಡಿ ಅವರನ್ನು ಇದಿರ್ಗೊಂಡು ಪಂಪಾವಿರೂಪಾಕ್ಷನ ಆಲಯಕ್ಕೆ ಕರೆತಂದರು. ದೇವಕುಲ ಸಾರ್ವಭೌಮರಾದ ಕೆರೆಯ ಪದ್ಮರಸರು ಹರಿಹರದೇವನೊಡನೆ ನಾಲ್ಕೆಂಟು ದಿವಸ ಶಿವಾನುಭವಸುಖದಿಂದಿದ್ದು, ಪಂಪಾಪುರದಿಂದ ಮುಂದೆ ಹೊರಡುವಾಗ ಹರಿಹರದೇವನ್ನು ಹತ್ತಿರಕ್ಕೆ ಕರೆದು "ಉಮಾವರನು ನಿಮ್ಮನ್ನು ಇಂದಿಗೆ ಎಂಟನೆಯ ದಿನಕ್ಕೆ ತನ್ನಲ್ಲಿ ಬೆರೆಯಿಸಿಕೊಳ್ಳಲಿರುವನು. ಆದುದರಿಂದ, ನೀವೀಗ ಕೈಕೊಂಡ ಮಹಾಕಾವ್ಯವನ್ನು ಬೇಗನೇ ಮುಕ್ತಾಯಗೊಳಿಸಬೇಕು" ಎಂದು ತಿಳಿಸಿ ಅವರಿಂದೆ ಬೀಳ್ಕೊಂಡು, ಕಾಶೀಪುರಾಭಿಮುಖವಾಗಿ ನಡೆದರು. ಶಿವಪುರ, ಶಿವಕ್ಷೇತ್ರ, ಪುಣ್ಯವನ, ಪುಣ್ಯನದಿಗಳನ್ನು ನೋಡುತ್ತ, ಅಲ್ಲಲ್ಲಿ ಭಕ್ತರು ಮಾಡುವ ಉಪಚಾರಗಳನ್ನು ಸ್ವೀಕರಿಸುತ್ತ,ಪರಮಾನುರಾಗದಿಂದ,ಕೆರೆಯ ಪದ್ಮರಸರು ವಾರಣಾಸಿಯ ಕಡೆಗೆ ನಡೆದರು. ಇತ್ತ ಹರಿಹರದೇವನು ಒಂದುದಿನ ತನ್ನಳಿಯ ರಾಘವಾಂಕನು ದಾರಿಯಲ್ಲಿ ವಿಮುಕ್ತಾಂಗನಾದುದನ್ನು ಕೇಳಿ, ಆತನ ಮಹಿಮೆಯನ್ನು ಬ್ರಾಹ್ಮಣರಿಗೆ ತೋರಿಸಿಕೊಟ್ಟು, ಆತನನ್ನು ಶಿವಪುರಕ್ಕೆಯ್ದಿಸಿದನು.

ಸಿದನು. ಆ ಮೇಲೆ ಎಂಟನೆಯ ದಿವಸ ವಿರೂಪಾಕ್ಷನನ್ನು ಪೂಜಿಸಿ ಸಮುಚಿತವಾದ ಸ್ತೋತ್ರವನ್ನು ಮಾಡಲು, ಪಂಪಾವಿರೂಪಾಕ್ಷನು ಮೆಚ್ಚಿ, ಕರುಣದಿಂದ ತನ್ನುದರವನ್ನು ತೆರೆದು, ಆತನನ್ನು ತನ್ನಲ್ಲಿ ಅಡಗಿಸಿಕೊಂಡನು. ಸರ್ವರೂ ಆಶ್ಚರ್ಯಪಟ್ಟು "ಉಘೇ ಉಘೇ" ಎಂದರು. ಹರೀಶ್ವರನು ಲಿಂಗದಲ್ಲಿ ಬೆರೆತು ಮುಕ್ತಿ ಸತಿಯನ್ನು ವರಿಸಿ ಸುಖದಿಂದಿದ್ದನು.

ಇತ್ತ ಕೆರೆಯ ಪದ್ಮರಸರು ಕೆಲವು ದಿವಸಗಳ ಮೇಲೆ ಕಾಶಿಗೆ ಬಂದರು. ಭಾಗೀರಥಿನದಿಯು ಮುಂದೆ ಶೋಭಾಯಮಾನವಾಗಿ ಕಂಗೊಳಿಸಿತು. ಎಲ್ಲರ ಪಾಪವನ್ನು ತೊಳೆಯಲೆಂದು ಶಂಕರನ ಸಮ್ಯಜ್ಞಾನರಸವೇ ಜಲರೂಪವಾಗಿ ಹರಿದುದೋ, ವಿಶ್ವಪತಿಯು ತನ್ನ ನಿವಾಸಸ್ಥಾನವಾದ ಕಾಶಿಗೆ, ಬಂದ ಭಕ್ತರು ತೊಂದರೆಯಿಲ್ಲದೆ ಬದುಕಲೆಂದು ಸರಿದ ಕರುಣಾಮೃತವೋ, ಭಗೀರಥನ ಉಗ್ರ ತಪಸ್ಸಿಗೆ ಮೆಚ್ಚಿ ಶಿವನ ಎದೆ ಕರಗಿ ಹರಿದ ಪ್ರವಾಹವೋ ಎನ್ನುವಂತೆ ಗಂಗೆ ಕಂಗೊಳಿಸಿದಳು. ಆ ನದಿಯ ದಂಡೆಯಲ್ಲಿ ಜಪ, ಶಿವಧ್ಯಾನ, ಶಿವಪೂಜೆಗಳನ್ನು ಮಾಡುವ, ವೇದಗಳನ್ನು ಪಠಿಸುವ, ವಿವಿಧ ಅಧ್ವರಂಗಳನ್ನು ರಚಿಸುವ, ಯೋಗಾಭ್ಯಾಸವನ್ನು ಮಾಡುವ, ಮಂತ್ರಸಿದ್ಧಿಯನ್ನು ಮಾಡಿಕೊಳ್ಳುವ ಸುಜ್ಞಾನಿಗಳು, ಮೌನಿಗಳು, ತಾಪಸರು ಅಲ್ಲಿ ಶಾಂತಿರಸವನ್ನು ಸೂಸುತ್ತ ಮೆರೆದರು. ಹೀಗೆ ಎರಡೂ ದಂಡೆಯಲ್ಲಿ ನಿತ್ಯನೇಮವನ್ನು ಆಚರಿಸುವ ಸಂತರನ್ನು ತನ್ನ ತೆರೆಗೈಗಳಿಂದ ಸಂತೈಸುತ್ತ ಅವರ ಬಯಕೆಯನ್ನೀವೆನೆಂದು ಭೋರ್ಗರೆವ ರವದಿಂದ ಉಲಿಯುತ್ತ, ಕಂತು ಕಾಲ ಇವರ ಭಯವು ಇಲ್ಲಿ ವಾಸಿಸುವರ್ಗಿಲ್ಲ ಎಂದು ಆವರ್ತವೆಂಬ ಬಾಯ್ದೆರೆದು ಅರಿಪುತ್ತ, ಫೇನದಿಂದ ಪ್ರಳಯವನ್ನು ಹೀಗಳೆಯುತ್ತ ಶೋಭಿಸುವ ಗಂಗೆಯನ್ನು ನೋಡಿ ನಲಿದಾಡಿದನು. ಈ ವಿಮಲ ಗಂಗಾಜಲವನ್ನು ಸ್ವಲ್ಪ ಸೋಂಕಿ ಸುಳಿಯುವ ಗಾಳಿ ಯಾರ ಮೇಲೆ ತೀಡುವುದೋ ಅವರು ಪಾವನರಾಗುವರು. ಅಂದಮೇಲೆ ಅದರ ತೀರದಲ್ಲಿ ವಾಸಿಸುವವರ ಸುಕೃತದ ಸುಗ್ಗಿಯನ್ನು ಬಣ್ಣಿಸುವುದೇನು ? ಈ ಜಾಹ್ನವಿಯ ಸ್ಮರಣವೇ ಮುಕ್ತಿಯನ್ನು ಒಲಿಸುವುದು. ಎಂದು ಭಾವಿಸುತ್ತ ಗಂಗಾಮತಿಯನ್ನು ಹೀಗೆ ಸ್ತುತಿಸಿದನು : "ಜಯ ಸಕಲ ಜನನಿ, ಜಯ ಲೋಕೈಕಪಾವನೆ, ಜಯ ಮಂಗಲಾಂಗಿ, ಜಯ ದರ್ಶನಾತ್ ಮುಕ್ತಿದೆ, ಜಯ ಜಗದ್ಧರಜಟಾಜಾಲಮಧ್ಯಾಲಯೆ, ಜಯ ನಿರ್ವಿಕಾರಾಮೃತೇ, ಜಯ ಲಸತ್ ತ್ರಿಪಥಗೆ, ಜಯ ಜಹ್ನುಪುತ್ರಿ, ಜಯ ಜಯ ದಿವ್ಯಗಂಗೆ" ಹೀಗೆ ಸ್ತುತಿಸುತ್ತ ಗಂಗೆಯ ಮಹತ್ವವನ್ನು ಶರಣರಿಗೆ ತಿಳಿಸುತ್ತ, ಅದನ್ನು ದಾಟಿ ಕಾಶಿಗೆ ಬಂದು ನಿಂತನು. ಅಷ್ಟರಲ್ಲಿ ವಿಶ್ವನಾಥನು ಆ ಪುರದವರ

ಕನಸಿನಲ್ಲಿ ಹೋಗಿ "ನಮ್ಮ ಕಂದ ಕೆರೆಯ ಪದ್ಮಣಾರ್ಯನು ಬರುತ್ತಿರುವನು. ಆತನನ್ನು ದಿವ್ಯ ಸಂಭ್ರಮದಿಂದ ನೀವು ಇದಿರ್ಗೊಂಡು, ಈ ಮಹಾಕ್ಷೇತ್ರದ ಸುತ್ತನ್ನೆಲ್ಲಾ ತೋರಿಸಿ, ಇಲ್ಲಿಗೆ ಕರೆದು ತರಬೇಕು." ಎಂದು ತಿಳಿಸಿದನು. ಆ ಭಕ್ತರು ಆನಂದಭರಿತರಾಗಿ ಆತನನ್ನು ಇದಿರ್ಗೊಂಡು, "ಶಿವನಿಂದ ಮನ್ನಿಸಿಕೊಳ್ಳುವವರು ನಿನ್ನಂತೆ ಬೇರೆ ಉಂಟೇ ?" ಎಂದು ಆತನನ್ನು ಹೊಗಳುತ್ತ ಮುಂದೆ ಮುಂದೆ ಕರೆದೊಯ್ಯುತ್ತಿರಲು, ಆಯಾ ಸ್ಥಾನಗಳ ಮಹತಿಯನ್ನು ಬಣ್ಣಿಸುತ್ತ ಮುಂದೆ ನಡೆದನು. "ಅಮರಾವತಿ, ಕೃಷ್ಣಾವತಿ, ಶುದ್ಧವತಿ, ಗಂಧವತಿ ಮೊದಲಾದ ಪಟ್ಟಣಗಳು ಈ ಕಾಶಿಗೆ ಎಣೆಯೇ ? ಇಲ್ಲಿ ವಿಹರಿಸುವ ಅಂತ್ಯಜನಿಗೆ ಸ್ವರ್ಗದೊಳಗಿನ ಅಗ್ರಜನು ಸರಿಯಾಗಲಾರನು. ಇಲ್ಲಿಯ ಒಡಕುಗಲ್ಲಿಗೆ ದಿವದಲ್ಲಿಯ ಪರುಷ, ಇಲ್ಲಿ ಹುಟ್ಟಿದ ಶಾಲ್ಮಲಿಗೆ ಸ್ವರ್ಗದ ಕಲ್ಪವೃಕ್ಷ, ಇಲ್ಲಿಯ ಬಂಜೆಹಸುವಿಗೆ ಸ್ವರ್ಗದೊಳಗಿನ ಕಾಮಧೇನು, ಇಲ್ಲಿಯ ಜಲಕ್ಕೆ ದೇವಲೋಕದ ಅಮೃತ ಸರಿಯಾಗಬಲ್ಲುವೇ ? ಹಲವು ಮಾತೇನು ? ಇದೇ ಬ್ರಹ್ಮದೇವನ ಸದನ. ಈ ಕ್ಷೇತ್ರವಾಸಿ ಸುಮ್ಮನೇ ವಿಹರಿಸಿದುದೇ ಸತ್ಪ್ರದಕ್ಷಿಣ. ಆತನು ನುಡಿದುದೆಲ್ಲ ಮಂತ್ರ, ಹಿಡಿದುದೆಲ್ಲ ಸೇವೆ, ಅವನ ಮೈಸೋಂಕೆಲ್ಲ ಘನವಾದ ಒಡನಾಟ, ಅವನ ಇರವೇ ಯೋಗ, ಆತನ ಮೌನವೇ ಧ್ಯಾನ, ಎಂದು ವಿಶ್ವೇಶ್ವರನು ಅವರಿಗೆ ಮುಕ್ತಿಯನ್ನು ಕೊಡುವನು. ಇದೆಂತಹ ಮಹಿಮೆಯೊ ! ಇದು ಬ್ರಹ್ಮ, ವಿಷ್ಣು, ಎಲ್ಲ ದೇವತೆಗಳು, ದಾನವರು, ಮಾನವರು, ಗುಹ್ಯಕರು, ಸಿದ್ಧರು, ಸಾಧ್ಯರು, ಮನು ಮುನಿ ಯತಿಗಳು, ಉರಗರು, ಗರುಡ, ಗಂಧರ್ವ, ಭೂತ ಪಿಶಾಚಿ, ಕಿನ್ನರ ಕಿಂಪುರುಷ, ಭೈರವ, ಯಕ್ಷ ವಿಧ್ಯಾಧರರು, ಅಪ್ಸರೆಯರು, ಮಂತ್ರಸಿದ್ಧಿ, ನದೀನದ ಪರ್ವತ, ಔಷದ, ಷಡಂಗವೇದ, ಆಗಮ ಶಾಸ್ತ್ರ ಇವುಗಳ ಲೀಲಾಸ್ಥಳವು. ಇದನ್ನು ಭಾವಿಸಿದವನಿಗೆ ಪುನರ್ಜನ್ಮವಿಲ್ಲ. ಭಾವಿಸಿ ನೆನೆದವನಿಗೆ ಸ್ವರ್ಗದೊಡೆತನವೇನು ಹಿರಿದಲ್ಲ. ನೆನೆದು ಒಮ್ಮೆ ಅವುಗಳ ಬಗೆಗೆ ಮಾತನಾಡಿದವನು, ಬ್ರಹ್ಮ ವಿಷ್ಣು ಪದವನ್ನು ಹುಲ್ಲಿಗಿಂತ ಕೀಳಾಗಿ ಕಾಣುವನು. ಆ ಬಗೆಗೆ ಮಾತನಾಡಿ ಇಲ್ಲಿಗೆ ಏಳಡಿ ಇಟ್ಟವನು, ವಿಮಲ ಮುಕ್ತಿಯ ಗಡಿಯನ್ನು ಮುಟ್ಟುವನು. ಇದನ್ನು ಹೊಕ್ಕವನು ವಿಶ್ವಪತಿಯ ಗರ್ಭವನ್ನು ಹೊಕ್ಕವನು. ಆವನನ್ನು ಬಣ್ಣಿಸುವುದು ಅಸಾಧ್ಯ. ಇಲ್ಲಿ ಆವನೊಬ್ಬನು ಪ್ರಾಣಬಿಡುತ್ತಿರುವ ಸಮಯದಲ್ಲಿ ಪಾರ್ವತಿಯು ತನ್ನ ಮೇಲ್ವಸ್ತ್ರದಿಂದ ಗಾಳಿ ಬೀಸುವಳು. ಗಣೇಶನು ತನ್ನ ಕೈಯಿಂದ ಗಂಗಾಂಬುವನ್ನು ತಂದು ಬಾಯಲ್ಲಿ ಬಿಡುವನು. ಗಂಗಾದೇವಿ ಮೈಮೇಲೆ ಕೈಯಾಡಿಸುವಳು. ಭೃಂಗಿ ಭಸ್ಮಧರಿಸುವನು. ನಂದೀಶ್ವರನು ತೊಡೆಯಮೇಲೆ ಒರಗಿಸಿಕೊಳ್ಳುವನು. ಶಿವನು ತಾರಕಬ್ರಹ್ಮವನ್ನು ಬಲಗಿವಿ

ಯಲ್ಲಿ ಹೇಳುವನು. ಅದರ ಘನತೆಯನ್ನು ಹಾಗೆ ಹೀಗೆ ಎಂದು ಬಣ್ಣಿಸುವುದು ಎಂತು ? ವೇದ ವೇದಾಂತ ಶಾಸ್ತ್ರ ಪುರಾಣಗಳು ಆ ಕ್ಷೇತ್ರದ ಅರ್ಥಾಂತರಕ್ಕೆ ಬರೆದ ಟೀಕೆಗಳೆನಿಸುವವು. ಇಲ್ಲಿ ಭಕ್ತಾಭಕ್ತರೆಂದೆನ್ನದೆ, ಪುಣ್ಯಾತ್ಮ ಪಾಪಾತ್ಮ ರೆಂದೆನ್ನದೆ ಪರಮಾತ್ಮನು ಎಲ್ಲರಿಗೂ ಮುಕ್ತಿಯನ್ನೀಯುವನು." ಎಂದು ಮುಂತಾದುದನ್ನು ಪದ್ಮರಸರು ತಿಳಿಸಿದರು. ಇದೆಲ್ಲವೂ ಶಿವಜ್ಞಾನಪ್ರಾಪ್ತಿಯ ಫಲವೇ.

ಸೂರ್ಯನು ಸುಕೇಶವಪುರದ ಮಾಹೇಶ್ವರನನ್ನು ನೋಯಿಸುವ ಸಮಯ ದಲ್ಲಿ,ನಂದಿ ಕೋಪದಿಂದ ಆತನನ್ನು ನೋಡಲು, ಕೆಳಗೆಬಿದ್ದು, ಭೂಮಿಯಲ್ಲಿ ಆರ್ತ ನಾಗಿ ಉರುಳುತ್ತ ಬಂದು, ನಿಜಪದವನ್ನು ಪಡೆಯುವ ಉದ್ದೇಶದಿಂದ, ಪೂಜಿಸಿದ ಬಾಲಾರ್ಕೇಶಲಿಂಗವಿದು. ಶಿವನಿಲ್ಲದ ದಕ್ಷಯಾಗಕ್ಕೆ ಹೋದ ದೋಷವನ್ನು ಕಳೆದು ಕೊಳ್ಳುವದಕ್ಕಾಗಿ,ಸೋಮನು ಬಂದು ಪೂಜಿಸಿದ ಸೋಮೇಶಲಿಂಗವಿದು. ಅಂದು ಮಗಳಿಗೆ ಆಶಿಸಿದ ಪಾಪವನ್ನು ಕಳೆಯುವದಕ್ಕಾಗಿ, ಬ್ರಹ್ಮನು ಪೂಜಿಸಿದ ಬ್ರಹ್ಮೇಶ ಲಿಂಗವಿದು. ಮುನಿಪತ್ನಿಯೊಡನೆ ಕೂಡಿದ ಪಾಪವನ್ನು ಕಳೆಯಲು, ಇಂದ್ರನು ಪೂಜಿಸಿದ ಇಂದ್ರೇಶಲಿಂಗವಿದು. ಸರ್ವೇಷ್ಟಸಿದ್ಧಿಗಾಗಿ, ಕೃಷ್ಣನು ಪೂಜಿಸಿದ ಕೃಷ್ಣೇಶಲಿಂಗವಿದು. ಬಂದ ಭಕ್ತರ ಅಪರಾಧವನ್ನು ಕಳೆಯುವದಕ್ಕಾಗಿ, ಕಾಲನು ಅರ್ಚಿಸಿದ ಕಾಲೇಶ್ವರಲಿಂಗವಿದು. ಅನ್ಯಾಯಕ್ಕಳುಕದೆ ಸನ್ಯಾಸಿಯಾದ ಕೌಂಡಿ ನಿಯು ಅತಿಕಾಮಿಯಾಗಿ, ಹನ್ನೆರಡು ವರುಷ ಅನ್ಯವಧುವನ್ನು ಕೂಡಿ, ಆಕೆಯ ಸುರಾಭಾಂಡದಲ್ಲಿ ಅಳಿದು ಲಿಂಗವಾಗಿ ಹುಟ್ಟಿ,ಸುರಾಭಾಂಡೇಶನೆನಿಸಿ,ಬಹುಮಾನ್ಯತೆ ಯನ್ನು ಪಡೆದ ಲಿಂಗವಿದು. ಹೀಗೆ ಅನೇಕ ಸುರನರೋರಗರು ತಂತಮ್ಮ ಹೆಸರು ಗಳಿಂದ ಸ್ಥಾಪಿಸಿದ ಲಿಂಗಂಗಳನ್ನು ನೋಡುತ್ತ ಕೊಂಡಾಡುತ್ತ .ಇಲ್ಲಿರುವ ಮಣ್ಣೆಲ್ಲ ಸಕಲ್ಪಿಕ ವಿಭೂತಿ, ಕಲ್ಲೆಲ್ಲ ಲಿಂಗ, ಉದಕವೆಲ್ಲ ತೀರ್ಥ, ಜನರೆಲ್ಲ ರುದ್ರರು. ಇದನ್ನು ನಂಬದವರು ಶಿವದ್ರೋಹಿಗಳು ಎನ್ನುತ್ತ, ಕಾಶೀಕ್ಷೇತ್ರದ ಮಹಿಮೆಯನ್ನು ನಿರೀಕ್ಷಿಸುತ್ತ. ಹೃದಯದಲ್ಲಿ ಶಿವಧ್ಯಾನ, ಮನದಲ್ಲಿ ಶಿವಮಂತ್ರಯುತನಾಗಿ ಪುಳಕಿ ಸುತ್ತ, ಮುಂಚೆ ಶಿವಲೆಂಕಪಂಡಿತರಿಗೆ ದಾನವಾರಿಯು ಎರಗಿದುದನ್ನೂ ಶಾರದಾ ಪೀಠವನ್ನೂ ತಧ್ವಜದಲ್ಲಿ ಒಪ್ಪುವ ವ್ಯಾಸಭುಜವನ್ನೂ ನೋಡುತ್ತ ಮುಂದೆ ನಡೆದರು. ಅತ್ಯಂತ ಸಂಭ್ರಮದಿಂದ ಪದ್ಮರಸರು ವಿಶ್ವೇಶ್ವರ ದೇವಾಲಯವನ್ನು ಪ್ರವೇಶಿಸಿ ನಯನಾನಂದಕರ ಪರಂಜ್ಯೋತಿರಾಕಾರನನ್ನು ಕಂಡು, ಭಯಭಕ್ತಿಯಿಂದ "ವರದ ವಾಚಾಮಗೋಚರ, ನಿರುಪಮ, ನಿಜಾನಂದ ಚರರೂಪ, ನಿಷ್ಪ್ರಪಂಚ, ಸಕಲಕಲಾ ಪ್ರೇರಕ, ಅಖಿಲತತ್ವಪರಿಕರಣಶೀಲ, ಸಂವಿನ್ಮಾತ್ರ, ನಿರ್ವಿಕಲ್ಪಕಶಕ್ತಿಭರಿತ, ದೇಶಿ ಕಾಕಾರ, ಕೈವಲ್ಯದ, ವೇದಾತೀತ, ನಾದಬಿಂದುಕಲಾತೀತ, ಶರಣವತ್ಸಲ, ಗುರು

ರೂಪ ವಿಶ್ವೇಶ್ವರನೆ ಪ್ರಸನ್ನನಾಗು. ದೇವ ದಾನವ ಮಾನವರಿಂದ ನಮಸ್ಕೃತನಾಗಿ ಆದಿ ಮಧ್ಯಾಂತರಹಿತನಾದ ಗುರು ವಿಶ್ವನಾಥನೇ ನನಗೆ ಪ್ರಸನ್ನನಾಗು"ಎಂದು ನುತಿಸಲು ಶಿವನು ತುಷ್ಟನಾಗಿ ಗುರುರೂಪದಿಂದ ಹೊರಹೊಮ್ಮುವೆನೆಂದು ಲಿಂಗ ಗರ್ಭದಿಂದ ಮೇಲಕ್ಕೇಳಲು ಜ್ವಾಜ್ವಲ್ಯಮಾನವಾದ ಒಂದು ಬೆಳಗು ಸುತ್ತೆಲ್ಲ ಪಸರಿಸಿತು. ಆ ಬೆಳಗು ಮುಂದುವರಿದು ಪದ್ಮರಸರನ್ನು ಅಪ್ಪಿತು. ಇವರ ಚಿತ್‌ಸತಿ ಶಿವನನ್ನು ಅವಗ್ರಹಿಸಿ ತರುವ ಅನುವೋ ಎನಿಸಿತು. ಆ ಬೆಳಗಿನಲ್ಲಿ ನಂದೀಶ ಭೃಂಗೀಶ ವೀರೇಶಾದಿ ಅಖಿಳ ಗಣಾವಳಿ ಕಂಗೊಳಿಸಿತು. ಪ್ರಣವಘೋಷ ಮೊಳಗಿತು. ಪಾರ್ವತಿ ಬೆಂಬಳಿಯೊಳಿದ್ದಳು. ಭೂಕಾಂತೆ ಪದತಳಕೆ ತಳಿರ್ಗೈಯ್ಯ ಹಾಸಿಗೆಯನ್ನು ಕೊಡುತ್ತಿದ್ದಳು. ಹೀಗೆ ನಿರ್ಮಳಮೂರ್ತಿ ಗುರುರೂಪ ವಿಶ್ವಪತಿಯು,ಲಿಂಗದಿಂದ ಉದ್ಭವಿಸಲು,ಆತನನ್ನು ಕಂಡು ನಲಿದು ಕರುವಿಟ್ಟಂತೆ ಮರವಡುತ್ತೆ, ಇಂದ್ರಿಯಚೇಷ್ಟೆಯುಡುಗುತ್ತ, ಮೈ ನವಿರೇರುತ್ತ, ಆಲಿಕಲ್ಲಂತೆ ಕರಗುತ್ತ, ಸಂಧ್ಯಾರ್ಕನಂತೆ ವಿವರ್ಣಿಸುತ್ತ, ಲತೆಯಂತೆ ಕಂಪಿಸುತ್ತ, ಮೇಘದಂತೆ ಕಣ್ಣೀರು ಸುರಿಸುತ್ತ, ಮದಾಳಿಯಂತೆ ವಿಸ್ವರವನ್ನು ತೋರುತ್ತ, ಅಮಲ ಸಾತ್ವಿಕವೇ ಸಾಕಾರವಾದಂತೆ ಬಂದು, ಆ ತೀವ್ರಸುಖದ ಸೊಕ್ಕಿನಿಂದ ಮೂರ್ಛೆಸಿ ಬಿದ್ದಂತೆ, ಪರಮಾತ್ಮನ ಅಂಘ್ರಿಯಲ್ಲಿ ಬಿದ್ದು, ತೊದಲಿಸಿ ಮುದ್ದು ಮಾತುಗಳಿಂದ ಬಣ್ಣಿಸುವ ಮಹಿಮನನ್ನು ನೋಡಿ, ಕರುಣಾಮೃತದಲ್ಲಿ ಓಲಾಡಿಸಿ, ಆತುರದಿಂದ ತೆಗೆದು ಅಪ್ಪಿ, ಮುಂಡಾಡಿ, ದಿವ್ಯಪ್ರಸಾದ ತಾಂಬೂಲಗಳನ್ನಿತ್ತು, ಮೈದಡವಿ, ಇವನು ಎಮ್ಮನುದ್ಧರಿಸಿದವನೆಂದು ಗಣಕುಲಕ್ಕೆ ತಿಳಿಸಿದನು. ಎರಡು ಬೆಳಗು ಒಂದಕ್ಕೊಂದು ಅಪ್ಪಳಿಸಿ ಒಂದಾದಂತೆ ಲಿಂಗದ ಅಂಗದ ಬೆಳಗುಗಳೆರಡೂ ಒಂದರಲ್ಲೊಂದು ಬೆರೆತವು. ಸರ್ವಮಂಗಲೇಶನು ಮಂಗಲಾತ್ಮಕನಾದ ಕೆರೆಯ ಪದ್ಮರಸರನ್ನು ಹೀಗೆ ತನ್ನಲ್ಲಿ ಅಡಗಿಸಿಕೊಂಡನು. ಗಣಪುಂಗವರು ಪೂಮಳೆಗರೆದರು. ಭೃಂಗಿ ಗೀತವನ್ನು ಹಾಡಿದನು. ದೇವದುಂದುಭಿಯೊಡನೆ ದೇವತೆಗಳು ನರ್ತನವನ್ನೆಸಗಿದರು. ಹೀಗೆ ಎಲ್ಲರಿಗೂ ಸೌಮನಸ್ಯವನ್ನಿತ್ತು ಕೆರೆಯಪದ್ಮರಸರು ಐಕ್ಯರಾಗಿ ನಿರ್ವಿಕಲ್ಪಾನಂದಸಾಗರದಲ್ಲಿ ಅಖಂಡಲಕ್ಷ್ಯಾನುಪಮಸುಖದಿಂದೊಪ್ಪುತ್ತಿದ್ದರು. ಅಲ್ಲಿದ್ದ ಶಿವಶರಣರು ಆನಂದದಿಂದ ಗುರುವರನನ್ನು ಸ್ತುತಿಸುತ್ತ ಗಣಪರ್ವವನ್ನು ಮಾಡಿ ತಮ್ಮ ತಮ್ಮ ತಾಣಗಳಿಗೆ ಹೋದರು. ಈ ವಾರ್ತೆಯನ್ನು ಕೇಳಿ ಕುಮಾರ ಪದ್ಮರಸರು ಚಿತ್ತದಲ್ಲಿ ಆನಂದವನ್ನು ತಾಳಿ, ಶಿವಭಕ್ತರಿಗೆ ಉತ್ಸವಗಳನ್ನು ರಚಿಸಿ, ಶಿವಸುಖದಲ್ಲಿ ಇಳೆಯನ್ನು ಪೊರೆದರು.

ಈ ಕೆರೆಯ ಪದ್ಮರಾಜಚರಿತವನ್ನು, ಶಿವಭಕ್ತರ ಪಾದರಕ್ಷೆಯನ್ನು ಎನ್ನ ಶಿರದಲ್ಲಿ ಧಾರಣಮಾಡಿ, ಆ ಶಕ್ತಿಯಿಂದ ಅರಿದನಿತನು ಒರೆದೆನು. ಇದು ಶೈವಕೃತಿ

ಈತನು ಎಮಗೆ ಎಂತಾದರೂ ಸೇವಕನು, ಎಂಬ ಪಕ್ಷದಿಂದ ಶಿವಭಕ್ತರುನನ್ನ ರಚನಾ ಪ್ರಯೋಗದ ಒಳಗನ್ನು ತಿಳಿದು, ಈ ಕಾವ್ಯವನ್ನು ಎನ್ನನ್ನು ಆರೈದು ನಡೆಸಬೇಕು. ಈ ಕಾವ್ಯವು ಕಾಲ, ಕಾಮ, ಮಾಯೆ ಇವುಗಳ ಭಯವೆಂಬ ಕತ್ತಲೆಗೆ ರವಿ, ಸಕಲ ದುಷ್ಟರೋಗವೆಂಬ ಅಡವಿಗೆ ದಾವಾಗ್ನಿ, ಫಣಿ, ಗ್ರಹ, ಚೋರ, ನೃಪ, ವಿಷ, ಅಗ್ನಿ ವಿಪತ್ತು ಇವೇ ಮೊದಲಾದ ಬಾಧಾವೋಡಗಳಿಗೆ ಬಿರುಗಾಳಿ, ಸಮಸ್ತ ಪಾಪಗಳನ್ನು ಕತ್ತರಿಸುವ ಹದನವಾದ ಖಡ್ಗ, ಶರಣರಿಗೆ ಅಭೀಷ್ಟಫಲದಾಯಕವು, ಮುಮುಕ್ಷುಗಳ ಚಿದ್ಘುಟಿಕೆಯು, ಪವಿತ್ರನಾದುದು,ಆದುದರಿಂದ ಎಲ್ಲರಿಗೂ ಪಠನ ಯೋಗ್ಯವಾದುದು. ಶಿವಸಮಯವು ಅತ್ಯಧಿಕವಾಗಿ ಬಾಳಲಿ. ಗುರುವಂಶವು ಪ್ರಬಲವಾಗಿ ಬೆಳೆಯಲಿ. ಗುರುವಿಶ್ವಪತಿಯು ನಮಗೆ ಪರಮಸೌಖ್ಯವನ್ನೀಯಲಿ. ನಮಗೆಲ್ಲ ಮೋಕ್ಷವನ್ನಿತ್ತು ಪೊರೆಯಲಿ. ಧರೆ ಸಕಲ ಸಸ್ಯಾಳಿಗಳಿಂದ ಸಮೃದ್ಧಿಯನ್ನು ಪಡೆಯಲಿ. ಅರಸರು ಪ್ರಜೆಗಳ ಹಿತವನ್ನು ಅನುಲಕ್ಷಿಸಿ ನಡೆಯಲಿ. ಪಂಡಿತರ ಬುದ್ಧಿಗೆ ಸರಸ್ವತಿ ಮೆರುಗನ್ನೀಯಲಿ ಶಾಂತಿ ಓಂ ಶಾಂತಿಃ

ಲಿಂಗತ್ರಯವನ್ನು ಸ್ಫುರಿಸಿ, ಕ್ರಿಯಾಜ್ಞಾನಗಳನ್ನು ಚೋಡಿಸಿ, ವಿಧಿಯ ನೊರೆದು, ಆಗಮದ ಹೃದಯವನ್ನು ತಿಳಿಸಿ, ಪ್ರಕೃತಿ ಪುರುಷವೃತ್ತಿಯನ್ನು ತೋರಿಸಿ ಸುಸೂತ್ರದಿಂ ಚರಿಸುವ ಶಾಬ್ದಿಕರ ಗುರುವೆನಿಪ ಕೆರೆಯಪದ್ಮರಸರು ಈ ಭೂಮಿಯನ್ನು ಸಂರಕ್ಷಿಸಲಿ. ಕಾಮಿತ ಜನಕೆ ಕಾಮಧೇನುವೇ, ಭಕ್ತೌಘಚಿಂತಾಮಣಿಯೇ ಭಜಕರ ಕಲ್ಪವೃಕ್ಷವೇ, ನತಜನರ ಮೇರುವೇ, ಭಾವಿಪರ ಸಿರಿಯೇ, ನೆನೆವವರ ನಿಧಿಯೇ, ಕರುಣಾಜಲಧಿಯೇ ಸ್ವಾಮಿ ಎನ್ನ ಕೆರೆಯ ಪದ್ಮರಸಾಂಕಗುರುವೇ ನಿಮ್ಮ ಈ ಮಹಾಕೃತಿಯನ್ನು ಹೇಳಿದ ನಮಗೆ ಒಲಿದು ನಿರ್ವಿಘ್ನತ್ವವನ್ನೂ ಅನಾಮಯತ್ವವನ್ನೂ ಅಮೃತವಾಣಿಯನ್ನೂ ಅಮಲಮತಿಯನ್ನೂ ಅತಿ ಸುಖವನ್ನೂ ಇತ್ತು ಕಾಪಾಡು.

ಮದಗಿರಿಯನ್ನು ಭೇದಿಸುವಲ್ಲಿ ಬಲ್ಲಿದನಾದ, ಶಿವಭಕ್ತರ ಪಾದಕಮಲಮಕರಂದ ಲೀಲೋನ್ಮತ್ತ ಮಧುಕರನಂತೆ ಪರವಶನಾದ ಪದ್ಮಣಾಂಕನಿಂದ ರಚಿತವಾದ ಅಖಿಲ ಶಾಸ್ತ್ರಸಾರವೆಂದೆನಿಸುವ ಪದ್ಮರಾಜಪುರಾಣಕ್ಕೆ ಶಿವಮಸ್ತು.

ಪರಶಿವನ ಅಪರಾವತಾರನೂ ಪಂಡಿತರ ಸ್ತುತಿಗೆ ಪಾತ್ರನಾದವನೂ ಭವಪಾಶವನ್ನು ನಾಶಮಾಡುವವನೂ ಶಿವಾದ್ವೈತಸಾಕಾರಸಿದ್ಧಾಂತಪ್ರತಿಷ್ಠಾಪನಾ

ಚಾರ್ಯನೂ ಆದ ಕೆರೆಯಪದ್ಮರಸರ ಈ ಶುದ್ಧ ಚಾರಿತ್ರವನ್ನು ತಿಳಿಸಿದವರಿಗೆ ಓದಿದವರಿಗೆ ಭಕ್ತಿಯಿಂದ ಕೇಳಿದವರಿಗೆ ಗುರುರೂಪವಿಶ್ವನಾಥನು ಮಹಾಶುಭಂಗಳನ್ನು ಆಯುವನ್ನೂ ಭುಕ್ತಿಮುಕ್ತಿಗಳನ್ನೂ ಕೊಟ್ಟು ಕಾಪಾಡುವನು.

ಪದ್ಮರಾಜಪುರಾಣದ ಕಥಾಸಾರ ಸಮಾಪ್ತಿ

ಶ್ರೀ



ಶ್ರೀ ಕಾಶೀ ವಿಶ್ವೇಶ್ವರಲಿಂಗ

(ಪುಟ ೩೪೪ ರ ಎದುರು)

ಕಾಶೀ ಕ್ಷೇತ್ರದೊಳಗಣ ಗಂಗಾನದಿಯ ಒಂದು ನೋಟ
(ಪುಟ ೩೪೦ ರ ಎದುರು)

ಸುಕ್ಷೇತ್ರ ವಾರಣಾಸಿಯ ಒಂದು ದೃಶ್ಯ

ಶ್ರೀಗುರುಬಸವಲಿಂಗಾಯ ನಮಃ

ಪದ್ಮರಾಜಪುರಾಣ

ಮೊದಲನೆಯ ಸಂಧಿ

ಸೂಚನೆ : ಶ್ರೀಮದಾಚಾರ್ಯಕುಲಚಕ್ರವರ್ತಿಯ ಮುಕ್ತಿ
ಕಾಮಿನೀಪ್ರಿಯಭುಜಂಗನ ಕೆಱೆಯ ಪದ್ಮರಸ
೧ನೀ೧ ಮಹಾಚರಿತದೊಳ್ ಪೀಠಿಕೆಯನೊರೆವೆನಾಕರ್ಣಿ
ಪುದು ಭಕ್ತನಿಕರಂ

ಶ್ರೀವಿಗ್ರಹಸ್ಥಹಸ್ತ್ಯಜಿನಂ ಘನಂ ಶ್ರುತಿಪು
ಟಾವಬದ್ಧಾಹೀಂದ್ರಗೀತಘೋಷಂ ಘನಾ
ರಾವಂ ಕಲಾಸಿರುಚಿಚಪಲಂ ಸುರಸ್ತ್ರೀಚಲಿತಚಾಮರೋತ್ಪಾದಿತ
ಪಾವನಜಟಾಗ್ರಗಂಗಾಜಲೋತ್ಥಿತಶೀಕ
ರಾವಲಿಗಳೇ ವೃಷ್ಟಿಯಾಗೆ ಮಳೆಗಾಲದಂ
ತಾವಗಮೆಸೆವ ವಿಶ್ವಪತಿ ಶರಣಸಸ್ಯಮಂ ಪಲಹುಗೆ ಜಗದ್ಧಿತಾರ್ಥಂ ೧

---

೧ ರೀ (ಬ) ನಾ (ಕ)

ದೇವಗಣವಿವಿಧಪೂಜಾಗ್ರಹಣಪದದಿಂ ಮು
ಹಾ ವಿಶ್ವತಃಪಾದನೆನಿಪ ತತ್ಸುರಕುಲಕೃ
ಪಾವೀಕ್ಷಣದೆ ವಿಶ್ವತಶ್ಚಕ್ಷುವೆನಿಪ ತಂತ್ರತ್ರಯೀಮುಖಬೋಧದಿಂ
ಶ್ರೀವಿಶದವಿಶ್ವತೋಮುಖನೆನಿಪ ಭುಕ್ತಿಮು
ಕ್ತ್ಯಾವಲಿಪ್ರದಕರದೆ ವಿಶ್ವತೋಬಾಹುವೆನಿ
ಪಾ ವಿಷ್ಣುಗುಪರಿಪದದಿಂ ವಿಶ್ವಪತಿಯೆನಿಪನಾವನಾತಂಗೆಱಗುವೆಂ ೨

ಧಾನುಷ್ಕನೊಂದು ಗುಱಿಯೆಸೆ ತಪ್ಪಿದೊಡೆ ಶರಕೆ
ಹೀನವೋ ಎಚ್ಚಂಗೆ ಹೀನವೋ ವೀಣೆಯಂ
[೧]ಗಾ[೧]ನಿ ಬಾಜಿಸೆ ಸುತಾನಂ [೨]ತಾನತಾನ[೨]ವಾಗುಣ್ಮದೊಡೆ ಬಂದ ಕೊಱತೆ
ಗಾನಿಗೋ ವೀಣೆಗೋ ನೀನಾಡಿಸುವ ಹಾಹೆ
ಯಾನಾದ ಕತದಿನಿಂತೀ ಕೃತಿಯೊಳಗೆ ನೆಗಳ್ದ
ಹಾನಿವೃದ್ಧಿಗಳೆನಗೊ ನಿನಗೊ ನೀನಿದನಱಿದು ನಡೆಸಯ್ಯ ವಿಶ್ವಪತಿಯೇ ೩

ಪಾತಕಸಮೂಲಕೋತ್ಖಾತೆ ವಿನತಾಮರೀ
ಶಿವಾಶ್ರಿತೆ ನಿಜಭಜಕ[೪]ಸಂ[೪]ಪ್ರೀತೆ ಸಚ್ಚಿದ್ಲಸ
ನ್ಮಾತೆ ಲೋಕೈಕಪ್ರಸೂತೆ ಕಾರುಣ್ಯಾಭಿಜಾತೆ ವಿಲಸದ್ವಿನೀತೆ
ಆತತಾನಾರತಪುನೀತೆ ಸೌಭಾಗ್ಯಸಂ
ಭೂತೆ ವೇದೌಘವಿಖ್ಯಾತೆ ಸುಜ್ಞಾನಪ್ರ
ಣೀತೆ ವಿಶ್ವೇಶ್ವರಸಮೇತೆ ಹಿಮಗಿರಿತನೂಜಾತೆ ರಕ್ಷಿಪ್ಪುದೆಮ್ಮಂ ೪

ಐರಾವಣಮರಾಳವಾರುತಾಹಾರವರ
ಶಾರದಾಮರ್ತ್ಯಧುಘನಾರದಸ್ಫಟಿಕ ಕುಂ
ದೋರು ಮಂದಾಕಿನೀಕ್ಷೀರವಾರಾಕರಪಟೀರಶಾರದನೀರದ
ಹಾರನೀಹಾರಕರ್ಪೂರಡಿಂಡೀರಮಂ
ದಾರಶಶಿತಾರಸುಸ್ಮೇರನವಹೀರಸ
ತ್ತಾರಾದಿಗೌರಧಿಕ್ಕಾರಕೀರ್ತಿಪ್ರಭಾಪೂರ ಮಾಂ ತ್ರಾಹಿ ಬಸವಾ ೫

೧ ನಾ (ಕ) ೨ ತೇನ ತೇನ (ಅ,ಬ,ಕ) ೩ ಶಾ (ಬ) ೪ ಸು (ಬ) ೫ ದ್ರ (ಅ,ಬ,ಕ)

ರಮಣೀಜನಾನಂದಸಿಂಧುಚಂದ್ರಾನನೆಯ
ರಮಣೀಯಸದ್ಗುಣಗಣಾಲಂಕೃತೆಯ ಶಿವಾ
ರಮಣಶರಣಾಂಘ್ರಿಸರಸಿಜಪರಾಗಲಲಾಮ[೧]ಫಾ[೧]ಲೆಯ ವಿಪುಲಶೀಲೆಯ
ರಮಣಾನುಕೂಲೆಯ ಬಸವಗಣೇಶನ ಮನೋ
ರಮಣಿ ಗಂಗಾಂಬಿಕೆಯ ವಿಮಲಪದಕಮಲಮಂ
ಭ್ರಮರನಂತಾನೊಂದಿ ನುಡಿಯಲೆನಗಿಂಚರಂ ಸಮನಿಸುವುದಾಶ್ಚರ್ಯಮೇ ೬

ಬಭ್ರುಸದ್ವೃಷ್ಟ ಚಿತ್ತಭ್ರಾಂತಿಕೃಲ್ಲುಠತ್
ಪ್ರಭ್ರಾಜಿತೋದ್ಯತ್ ಕಕುಬ್ ಭ್ರಮಿತ ಘೃಣಿಚಯಾ
ದಭ್ರಸ್ಫುಲಿಂಗವಮಿವಿಭ್ರಮವಿಭೃತ್ ಖಡ್ಗ ಶುಭ್ರದಕ್ಷಕರಕ್ಷತಾ
ಬಭ್ರುವರ್ಣಜಟೋತ್ಕಟಾಭ್ರೇಷತತ್ಪರಾ
ತ್ತಭ್ರಮುರಸಾಂದ್ರಸಾಂಭೋಭ್ರನಿಭಗಳಭವ
ಶ್ವಭ್ರಗಂ ದಕ್ಷಾಧ್ವರಭ್ರಂಶ ಕಾವ ಮಾಂ ಬಭ್ರುನುತವೀರಭದ್ರಾ ೭

ಸರ್ವಮನ್ಯತ್ ಪರಿತ್ಯಜ್ಯ ಎಂದಿರದುಲಿವ
ಥರ್ವವೇದೋಪಾಂತಸೂಕ್ತ್ಯರ್ಥದಿಂ ಧ್ಯೇಯ
ನೊರ್ವಂ ಶಿವಂ ಶಿವಂಕರನೆಂಬುದಂ ಪ್ರಮಾಣಿಸಿ ತನ್ನಿಗಮಭಕ್ತಿಯಂ
ಉರ್ವಿಯೊಳ್ ಪ್ರಕಟೀಕರಿಪೆನೆಂದು ಮನದಂದ
ಖರ್ವೈಕಲಿಂಗನಿಷ್ಠೆಯನಹೋ ದೃಷ್ಟಾಂತ
ಪೂರ್ವಕಂ ಪಾರ್ವತೀವ್ಯಾಜದಿಂ ಸ್ಥಾಪಿಸಿದ ಭೃಂಗಿಗಾಂ ಳೆಂಗಿಯಪ್ಪೆಂ ೮

ಖಂಡೇಂದುಧರನೈಮೊಗದೊಳೈಮೊಗವನಿಟ್ಟು
ಮುಂಡಾಡೆ ಸುತವೋಹದಿಂದುಳಿದುದೊಂದು ಮುಖ
ಮಂಡಲಂ ದೈನ್ಯರಸಮಂ ಸೂಸುತಿರೆಯದಂ ಪುಂಡರೀಕಾಕ್ಷಿ ಗಿರಿಜೆ
ಕಂಡು ಗಣಪಂಗೆ ಕಣ್ಸನ್ನೆಯಿಂ ತೋಱಿಸುತ
ಖಂಡಹರ್ಷದಿನೆತ್ತಿ ತಳ್ಕೈಸಿ ಮೊಲೆಯೂಡೆ
ಉಂಡು ಮುದದಿಂ ನಲಿವ ಷಣ್ಮುಖನೆಮಗೆ [೨]ಕು[೨]ಡುಗೆ ತತ್ಪ್ರಸಾದಸ್ತನ್ಯಮಂ ೯

೧ ಭಾ (ಬ, ಕ) ೨ ಕೊ (ಬ)

ವಿಲಸತ್ಪ್ರಮಥಗಣಂಗಳ್ಗೆ ರುದ್ರಗಣಾಳಿ
ಗಲಘುತರ ವೃಷಭಯೋಗಾಚಾರ್ಯಕುಲಕೆ ನಿ
ರ್ಮಲಿನರಾದಱುವತ್ತುಮೂವರ್ಗೆ ಷೋಡಶಗಣಂಗಳ್ಗೆ ತೇರಸರ್ಗೆ
ಸುಲಭರೆನಿಸಿದ ದಶಗಣಂಗಳ್ಗಮರಗಣಾ
ವಳಿಗುಳಿದಸಂಖ್ಯಾತ ಭಕ್ತರ್ಗೆ ಮನ್ಮನದ
ಚಲನಮಂ ತೊಲಗಿಸಿ ಶಿವಾಂಘ್ರಿಯೊಳ್ಬೆಚ್ಚಂತೆ ನಿಲಿಸುಗೆಂದಾಂ ವಂದಿಪೆಂ ೧೦

ಶ್ರೀವಿಶುದ್ಧಪ್ರಕರಣಂಗಳನೆಸಗಿ ವೇದ
ಶೈವತಂತ್ರಾವಳಿಗೆ ಭಾಷ್ಯಮಂ ದೀಪಿಕೆಯು
ಸಾ ವೃತ್ತಿಯಂ ವ್ಯಾಖ್ಯೆಯಂ ಬರೆದ ಬೋಧಾಯನಾಯನುರು ಶಂಕರಾರ್ಯನಂ
ವ್ಯೋವೊ ಹರದತ್ತರ್ ತ್ರಿಲೋಚನಾಘೋರ ಶಿವ
ದೇವಗುಣನಿಲಯ ಸರ್ವಾತ್ಮಶಂಭುಗಳಾನ
ತಾವನರ್ ಭೂತಿಕಂಠಾದಿ ಪೂರ್ವಾಚಾರ್ಯರೀವುದೆಮಗಮಲ ಮತಿಯಂ ೧೧

ವೀರಮಾಹೇಶ್ವರಾಚಾರಸಂಗ್ರಹಶಾಸ್ತ್ರ
ಕಾರನೆನಿಸಿದ ನೀಲಕಂಠನಾಗಾರ್ಯನಂಗೆ
ಸಾರತರ ಬಸವರಾಜೀಯಮಂ ನೆಗಳ್ದ ಪಾಲ್ಕುಱಿಕೆಸೋಮೇಶ್ವರಂಗೆ
ಚಾರು ಸಾರೋದ್ಧಾರಮಂ ಪಡೆದ ಲಕ್ಷ್ಮೀಧ
ರಾರಾಧ್ಯಪತಿಗುರು ಶಿವಜ್ಞಾನದೀಪಿಕೆಯ
ನೋರಂತೆ ರಚಿಸಿದನುಪಮ ಮಲ್ಲಿಕಾರ್ಜುನಾಚಾರ್ಯನಂಗೆ ವಂದಿಸಿದಪೆಂ ೧೨

ಖಂಡಿತಪ್ರತಿಪಕ್ಷ ಶಿವಲೆಂಕಮಂಚಣ್ಣ
ಪಂಡಿತರ ಭರ್ಗವೇತಂಡಭೂತೋಧ್ರ್ವಾಕ್ಷ
ಪಂಡಿತರ ಪರವಾದಿತುಂಡಪದ್ಮಾಬ್ಜಪ್ರಚಂಡವಿಭವಶ್ರೀಪತಿ
ಪಂಡಿತರ ಹರನ ದೋರ್ದಂಡಬಲರೆನಿಪಖಿಲ
ಪಂಡಿತರ ವಿಮಲ ಚರಣಾಬ್ಜಂಗಳೆಮ್ಮ ಹೃತ್
ಪುಂಡರೀಕಾಕರದೊಳಿರ್ಕೆ ಸತ್ಕವಿಹಂಸಮಂಡಲಂ ವಿಹರಿಪಂತೆ ೧೩

ಪದೆದು ಬುಧರಾಶ್ರಯಿಪ ಬಾಣಂಗಸಿತಕಂಠ
ಪದಭಕ್ತನುದ್ಭಟಂಗತುಳಕವಿ ರಾಘವಂ
ಗುದಿತ ಕುಕವಿಮುಖೇಂದುರಾಹು ಭೋಜಂಗೆ ಮಂಗಳಮಯ ಹರೀಶ್ವರಂಗೆ
ಸದಧೀಶದೇವಾರ್ಯಭೀಮಂಗೆ ಗುರುಗಣಾ
ಸ್ಪದಮಯೂರಂಗೆ ಜಿತಝಷಕೇತುರೂಪನೆನಿ
ಸಿದ ಮಲ್ಹಣಂಗೆ ಲೋಕಾಪ್ತ ಭಾರವಿಗೆಱಗುವೆಂ ನವಗ್ರಹಬಲಾರ್ಥಂ ೧೪

ವರ ಭೂತಕಾಲದೊಳ್ ಭೂತಿರುದ್ರಾಕ್ಷಶಂ
ಕರಮಂತ್ರ ವಿಮಲಲಿಂಗಂದಾಳ್ದು ಮೆಱೆದ ಸತ್
ಪುರುಷಚಯಕೀ ಭವತ್ಕಾಲದೊಳಚಲ ಶಂಭುವಂ ಭಜಿಸಿ ಮೆಱೆವುತಿರ್ಪ
ಶರಣಾವಳಿಗೆ ಭವಿಷ್ಯತ್‌ಕಾಲದೊಳ್ ಶಿವಾ
ವರನನರ್ಚಿಸಿ ಮೆಱೆವ ಭಕ್ತತತಿಗಾಂ ನಮ
ಸ್ಕರಿಸುವೆಂ ಮತ್‌ಕೃತಿಗೆ ಸರಸೋಕ್ತಿಗಳನಿತ್ತು ನೆರವಾಗಿ [1]ನಡೆ[1]ಸುಗೆಂದು ೧೫

ಶ್ರೀಮದಾನಂದರೂಪಂ ವಿಗತತಾಪಂ ಪ್ರ
ಭಾಮೂಲಭಸ್ಮಲೇಪಂ ಸ್ಮಯವಿಲೋಪಂ ಪ
ರಾವೃತಕಲಾಕಲಾಪಂ ತೃಣೀಕೃತಪುಷ್ಪಚಾಪಂ ಗತಾಘಲೇಪಂ
ಆ ಮಹೇಶಸುಖಾಬ್ಧಿಚಂದ್ರಂ ಯತೀಂದ್ರಂ ವ
ರಾಮಲಪ್ರಬಲಸಾಂದ್ರಂ ಶಾಂತಿರುಂದ್ರನೆ
ನ್ನೀ ಮತಿಸರೋಜಕೆ ದಿನೇಂದ್ರ[2]ನಕ್ಕೊ[2]ಲ್ದು ಶಿವಯೋಗಿಮಲ್ಲರಸರನಿಶಂ ೧೬

ಪರಮ ಶಿವಸಾಮರ್ಥ್ಯರೂಪಶಿವಯೋಗಿಮ
ಲ್ಲರಸಾರ್ಯಶೇಖರನ ಸೂನು ವಿತತಾನತಾ
ಮರಧೇನು ಭಕ್ತಲಪನಾಂಭೋಜಭಾನು ಸತ್ಪ್ರಣುತಜನರತ್ನಸಾನು
ನಿರುಪಮಶಿವೈಕ್ಯನಕ್ಷರಚಿದೌತ್ಸುಕ್ಯನುರು
ತರಸತ್ಯವಾಕ್ಯನಂತಕಬಲಾಶಕ್ಯನೆನ
ಲರರೆ ಮೆಱೆದಭಿನವಮಹೇಶ ಸಕಳೇಶಮಾದರಸರೆಮಗೀಗೆ ಸುಖಮಂ ೧೭

---

೧. ಡ (ಅ) ೨ ನಂಲೋಕಕೊ (ಬ)

ಆ ಶಿವಸುಖಾಬ್ಧಿಮಗ್ನಸ್ವಾಂತನಾದ ಸಕ
ಲೇಶಮಾದರಸರಾತ್ಮೋದ್ಭವಂ ವಿಚ್ಛೇದಿ
ತಾಶಾಸಮೂಹನಾಶಾಸಮೂಹಭ್ರಮಿತಕೀರ್ತಿವೈಮಲ್ಯಮೂರ್ತಿ
ಪಾಶಪಶುಪತಿ ಪದಾರ್ಥತ್ರಯಜ್ಞಾನಸಂ
ಕಾಶನಘನಾಶನೆನಿಸಿದ ಮಾಯಿದೇವಾರ್ಯ
ದೇಶಿಕೋದ್ಭಾನು ಮನ್ಮುಖಾಂಭುಜಮಂ ವಿಕಾಸಿಸುಗೆ ನಿಜ ತೇಜದಿಂ ೧೮

ಅಲಘುಬಲಮಾಯಿದೇವಾರ್ಯೋದರೇಂದ್ರದಿ
ಕ್ಫಲಿತಮಾರ್ತಂಡಂ ಶಿವಜ್ಞಾನಪಿಂಡಂ ಪ್ರ
ಬಲಭಕ್ತಿಷಂಡಂ ಸುಗುಣಮಣಿಕರಂಡಂ ಭವಾಂಬುಧಿತರಣತರಂಡಂ
ಮಲಿನಾನ್ಯವಾದ ಜಯಶೌಂಡಂ ಸಕಲಶರಣ
ಕುಲಸುವೇತಂಡಂ ವಿಲೂನಯಮದಂಡಂ ವಿ
ಮಲಲಪಿತತುಂಡಂ ಕೆಱೆಯ ಪದ್ಮಣಾರ್ಯರೆಮಗೊಲವಿನಿಂದೀಗೆ ಮತಿಯಂ ೧೯

ಆ ಕೆಱೆಯ ಪದ್ಮಣಾರ್ಯೋದರಾರ್ಣವನವಸು
ಧಾಕರಂ ಪರವಾದಿಭೀಕರಂ ವಿಲಸತ್ಕೃ
ಪಾಕರಂ ಜ್ಞಾನರತ್ನಾಕರಂ ನತವಿಪದ್ಭೇಕೌಘದರ್ವೀಕರಂ
ಶ್ರೀಕರಂ ಚಾ[೧]ರು[೧]ಗೌರವಲ್ಯೈಂಗ್ಯಭಕ್ತಿಪ್ರ
ಭಾಕರಂ ವಿಮಲಮಹಿಮಾಕರನೆನಿಸಿ ಶಿವನೊ
ಳೇಕೀಕರಿಸಿದ ಸುಕುಮಾರಪದ್ಮರಸಾರ್ಯರೀ ಕೃತಿಯನೋವುಗನಿಶಂ ೨೦

ನಿರುಪಮಕುಮಾರಪದ್ಮರಸಾರ್ಯರಾತ್ಮಜಂ
ಪರಮತಧ್ವಾಂತಪ್ರಚಂಡಭಾಸ್ಕರನೀಶ
ಶರಣಚರಣಾಬ್ಜಚಂಚಚ್ಚಂಚರೀಕಂ ನಮಸ್ಕೃತಸಮಸ್ತಲೋಕಂ
ಕರದ ಲಿಂಗದೊಳೆ ಸದ್ಯಃಪ್ರಸನ್ನತೆವಡೆದು
ನಿರತಿಶಯಸಂವಿತ್ಸುಖಮನೆಯ್ದಿದಾರ್ಯಪ್ರ
ಸರಚಕ್ರವರ್ತಿವಿಶ್ವಾರಾಧ್ಯರೆಮ್ಮ ಜಿಹ್ವಾಗ್ರದೊಳ್ ನಿಲ್ಕೆ ಸತತಂ ೨೧

---

೧ ರ (ಅ, ಬ, ಕ)

ಆ ಮಹಾಮಹಿಮವಿಶ್ವಾರಾಧ್ಯರುದರಾಬ್ಧಿ
ಸೋಮಂ ಶಿವಕ್ರಿಯೋದ್ದಾಮಂ ವಿಮಲಪುಣ್ಯ
ನಾಮಂ ವಿವೇಕವಿಶ್ರಾಮಂ ಪ್ರಣುತಬುಧಸ್ತೋಮಂ ಗುಣಾಭಿರಾಮಂ
ಕಾಮಾದಿಷಡರಿನಿಸ್ಸೀಮಂ ಸಪತ್ನಕುಲ
ಭೀಮಂ ಶರಣಸಾರ್ವಭೌಮಂ ಲಸದ್ಗುಣಲ
ಲಾಮನೆನೆ ಸಂದ ದೇವಾರಾಧ್ಯರೆಮ್ಮ ಹೃತ್ತಾಮರಸದೊಳ್ ನೆಲಸುಗೆ ೧೧

ಕೆಱೆಯ ಪದ್ಮರಸರ ಚರಿತ್ರಮಂ ಪೇಳ್ವೆಡೆಯೊ
ಳಱಿವರುಳರಾದ ವಾದಿಗಳೆಂದರೇಂ ಪುಸಿಯೊ
ಬಱಿಯ ನೆಲನೇರಿಯಾಕೃತಿಯಾಗಿ ನೀರ್ದುಂಬಿ ಮೆಱೆದುದುಂಟೇ ಅಂತದಂ
ಅಱಿವೆವೆಂದೀಯನಾವೃಷ್ಟಿಯೊಳ್ ಬತ್ತಿದೀ
ಕೆಱೆದುಂಬಿಸಿದೊಡೆನೆ ವಿಯನ್ನದೀಜೂಟನಂ
ಕುಱಿತು ನುತಿಗೆಯ್ದು ಮಳೆವಡೆದು ಕೆಱೆದುಂಬಿಸಿದ ಮಹಿಮ •
ದೇವಾರ್ಯಶರಣು ೧೨

ಅನುಪಮಾಚರಣನ ಶಿವಾಗಮಾಭರಣನ ಭು
ವನಹಿತನ ದೇವಾರ್ಯಪುಂಗವನ ಪುತ್ರಂ ವೃ
ಜಿನತಿಮಿರಮಿತ್ರಂ ಸಮಸ್ತಪರಸಮಯಜೈತ್ರಂ ಲಸಿತಭಸಿತಗಾತ್ರಂ
ಘನಗುಣಾಮತ್ರಂ ಚಿದುದ್ಭವಕ್ಷೇತ್ರಂ ಸು
ಜನನುತಚರಿತ್ರಂ ಭವಾಂಬುಧಿವಹಿತ್ರನೆಂ
ದೆನಿಪ ಗೌರಾರ್ಯಚಿಚ್ಚಂದ್ರಮಂ ತಳ್ಕೈಸುಗೆಮ್ಮ ಮತ್ಯುತ್ಪಲಿನಿಯಂ ೧೩

ಒಂದು ದಿವಸಕ್ಕೆ ನೂಱೊಂದು ಕುಸುಮಂಗಳಿಂ
ದಿಂದುಧರನಂ ಪೂಜಿಸುವ ನಿಯಮದಿಂದಿರು
ತ್ತೊಂದುದಿನಮೆಂತುವುಂ ಕುಸುಮವೊದವದಿರೆ ಶಿವನಿತ್ತಪನೆನುತೆ ನಿಷ್ಠೆಯಿಂ
ಒಂದಿ ನೂಱೊಂದು ಪಾದಂಗಳಿಂ ಗದ್ಯಮನ
ದೊಂದನುಸಿರ್ದೀಶನಂ ನುತಿಸಿ ಕುಸುಮಂ ಪಾದ
ಕೊಂದೊಂದು ಬರೆ ಶಿವನನರ್ಚಿಸಿ ಮೆಱೆದ ಗೌರಣಾರ್ಯರೆಮ್ಮಂ ಸಲಹುಗೆ ೧೪

ಆರಾಧ್ಯಕುಲಶಿರೋರತ್ನಗೌರಾಚಾರ್ಯ
ರಾ ರಮ್ಯಗರ್ಭೋದ್ಭವಂ ದಿವ್ಯಮೂರ್ತಿಯಘ
ವೈರಾನುವರ್ತಿ ಸುಜ್ಞಾನವಿಸ್ಫೂರ್ತಿಯಪಗತಪುನರ್ಜನನಜೂರ್ತಿ
ಚಾರು ದೇಶಿಕಚಕ್ರವರ್ತಿ ಪರಿಹೃತನತಾ
ಪಾರಾರ್ತಿ ಭವತಮೋದೀಪಿಕಾವರ್ತಿ ದಿಕ್
ಪೂರಿತೋಜ್ವಲಕೀರ್ತಿ ದೇವಾರ್ಯರೆಮಗೀಗೆ ಸಾರವಾಕ್ಚಾತುರ್ಯಮಂ ೨೬

ಆ ಗುರುವರೇಣ್ಯ ದೇವರಸರ ಸುತಂ ಸಮ
ಸ್ತಾಗಮಾಚಾರ್ಯಮುಖಮುಕುರಂ ಶಿವಾನುಭವ
ಸಾಗರನಿಮಗ್ನಚಿತ್ತನುದಾತ್ತವೃತ್ತನುತ್ತಮುಚಿದಾಯತ್ತನಚಲಂ
ಶ್ರೀಗಿರಿಶಪೂಜಾನುರಕ್ತಂ ವಿಮಲಭಕ್ತ
ಯೋಗಸಕ್ತಂ ಪ್ರಾಕೃತತ್ಯಕ್ತನೆನಿಸಿ ಮೆಱೆ
ವಾ ಗರುವ ವೀರಣಾಚಾರ್ಯರಡಿದಾವರೆಗಳೀಗೆಮಗೆ ನಿರ್ವಿಘ್ನಮಂ ೨೭

ಆ ಭುವನನುತ ವೀರಣಾರ್ಯಂಗೆ ಜನಿಸಿದರ್
ಶೋಭಾಕರರ್ ತನುಜರೆಂತೆನಲ್ ಶಿವನ ದಾ
ನಾಭಯದ ಕರಯುಗಳದಂತೆ ವೃಷಭೇಂದ್ರನ ವಿಷಾಣದ್ವಯಂಗಳಂತೆ
ಶ್ರೀ ಭಾಸ್ವದಭವಭಕ್ತನ ಚಿತ್ಕ್ರಿಯೆಗಳಂತೆ
ಭೂ ಭಾಗದೊಳ್ ಪದ್ಮಣಾರ್ಯಚಾಮುಂಡಾರ್ಯ
ರೀ ಭಜ[೧]ಕ[೧]ಭಾಗ್ಯರೆನೆ ನೆಗಳ್ವರವರೆಮಗೆ ವಾಗ್ವೈಭವಮನೀಗೆ ಸತತಂ ೨೮

ಅವರೀರ್ವರೊಳಗಗ್ರಜಾತನಾದುರುಗುಣಾ
ರ್ಣವ ಪದ್ಮಣಾ[೨]ರ್ಯನ ಸು[೨]ತಂ ವಿಶ್ವನಾಥಾಂಘ್ರಿ
ಭುವನೇಜಗಂಧಲುಬ್ಧಭ್ರಮದ್ಭ್ರಮರಂ ಕಲಾಭಿಜ್ಞನಾಗಮಜ್ಞಂ
ಶಿವಮಂತ್ರಸಂಸಕ್ತಮಾನಸಂ ಲಸದುಭಯ
ಕವಿತಾವಧೂವಶೀಕೃತನಮಲಶಂಭುಭ
ಕ್ತವಿತಾನಭೃತ್ಯನೆನಿಸುವ ಪದ್ಮಣಾಂಕನಿದನೊರೆದನೆನಲಾರ್ ಮೆಚ್ಚರೋ ೨೯

---

೧ ನ ೨ ರ್ಯಾತ್ಮಜಂ (ಬ, ಕ)

ರಸದಾಳಿಯೆಸೆವ ಪಾಲ್ಗೊನಲೊ ಸೊಗಯಿಪ ಪೊಚ್ಚ
ಪೊಸ ಜೇನಸೋನೆಯೋ ಹು[೧]ಣ್ಣಿ[೧]ಮೆಯ ಸಸಿಯ ಬ
ಟ್ಟೊಸರ್ದುರ್ ಪರಿತರ್ಪ ದಿವ್ಯಾಮೃತದ ತೊಱೆಯೊ ಪಾಲ್ಗಡಲುರ್ವಿ ಮೇರೆದಪ್ಪಿ
ಒಸೆದು ದಾಂಗುಡಿಯಿಟ್ಟು ಪಸರಿಸಿತೊ ಈ ಕೃತಿಯ
ರಸವೊ ಪೇಳೆಂದೆಲ್ಲ ರಸಿಕರಾನಂದಿಪಂ
ತೆಸಗುವುದು ತದ್ವಿಧಿಯೊಳೆಸಗದಿರ್ದೊಡೆ ಬಯ್ವರೇ ಬಡಿವರೇ ಜಡಿವರೇ ೩೦

ನುಡಿ ಬೆಡಂಗಂ ಬೀಱೆ ರೀತಿ ವಿಖ್ಯಾತಿಯು೧
ಮಡಲಿಡೆ ಚಮತ್ಕಾರ[೨]ವ[೨]ಮುಮ ಸತ್ಕಾರಮಂ
ಸಡಗರಿಸೆ ಮೋಹನಂ ಮೋಹರಿಸೆ ಗಾಡಿ ಪರಿದಾಡೆ ಪೊಸ ದೇಶಿ ಸೂಸೆ
ಕಡುಜಾಣ್ಮೆ ಕಯ್ಗಣ್ಮೆ ಮೃದುಪದಂ ಸಂಪದಮ
ನಡರೆ ಭಾವಂ ಸತ್ಪ್ರಭಾವಮುಂ ಕಯ್ಗೆಯ್ಯೆ
ಪಡೆದು ಕೃತಿಯಂ ಶಿವಾರ್ಪಿತವನೆಸಗುವ ನಿನ್ನ ಸೈಪಿಂಗೆ ಸಾಟಿಯುಂಟೇ ೩೧

ಕುಳಿರ್ವೆಟ್ಟುಮುಗಳ ತನುಕಾಂತಿಜಲದೊಳ್ಮಿಂದು
ಬಳಿಕವಳ ಕರುಣಾಮೃತವನೀಂಟಿಯಾ ಸದು
ಜ್ವಳ ಮೃದೂಕ್ತಿಗಳನೋಲಗಿಸಿಯಾಕೆಯ ಕಟಾಕ್ಷವಿಲಾಸದೊಡನೆ ನಟಿಸಿ
ಒಳೆದಿಂತು ಸವಿಯಾದವಕ್ಕುಂ ನಿಜೋಕ್ತಿಗಳ
ತುಳ ಪದ್ಮಣಾಂಕ ಪೇಳಲ್ಲದಂದೀ ವಿನಿ
ರ್ಮಳವೀ ಮಧುರವೀ ಸುಬದ್ಧವೀ ಸನ್ಮೋಹನಂ ಸಾರ್ಗುಮೇ ಶಿವಶಿವಾ ೩೨

ಎಂದು ಸಕಲಕಲಾಪ್ರವೀಣರಾದಖಿಳ ಬುಧ
ವೃಂದಂ ಪೊಗಳೆ ಪರಮ ಶಿವಭಕ್ತತತಿ ತಮ್ಮ
ಕಂದನ ತೊದಲ್ನುಡಿಗಳೆಂದು ಮೆಯ್ಯುರ್ವಿ ಪುಳಕಂದಾಳ್ದು ಲಾಲಿಸುತಿರೆ
ಒಂದಿ ಪದ್ಮರಸಾರ್ಯರಂಘ್ರಿಯಂ ವಾಕ್ಪುಷ್ಪ
ದಿಂದರ್ಚಿಸುವೆನಿದಂ ತಾಳಲಾಱದೆ ಬಾಯ್ಗೆ
ಬಂದಂತೆ ಗೆಡೆವ ಕುಜನರ್ ಸುಖದೊಳಿರ್ಕವರ್ಗದೆಂದುವುಂ ಸಾಜಮಲ್ತೆ ೩೩

---

೧ ಣ್ಣ (ಬ, ಕ) ೨ ಸ (ಬ)

ಸರ್ಪನಾಶ್ರಯಿಪುದೆನುತಳ್ಕಿ ಮನೆಯಂ ಮಾಡ
ದಿರ್ಪರೇ ಮುಳ್ಳುಱಿಗುಮೆಂದು ಪಯಣಂಬೋಗ
ದಿರ್ಪರೇ ಶ್ವಾನಂಗಳಂಟುವವೆನುತೆ ರಾಜವೀಧಿಯೊಳಗೇಂ ನಡೆಯರೇ
ದರ್ಪದಿಂ ಮುಂದುಗಾಣದ ಗಾಂಪರೆನಿ
[೧]ಬ[೧]ರ್ ಪಳಿವರೆಂದು ಸಮ್ಯಕ್ ಕಾವ್ಯಮಂ ರಚಿಸ
ದಿರ್ಪರೇ ದಿವ್ಯಮಂತ್ರಂ ಕೆರ್ಪು ಯಷ್ಟಿ ವಾಗ್ಬಂಧನಂಗಳ್ ತಮಗಿರೆ ೩೪

ಪರಿಕಿಸಲುಭಯಪಕ್ಷಶುದ್ಧನನಿಮಿಷಭೋಗ
ಪರಿಪುಷ್ಟತನುವೇಕಪಾದಸ್ಥವೃತ್ತನುರು
ತರ ಮಿತ್ರ ಸಹಚಾರಿಯುಪಗತತಮೋಭೀತನಕಲುಷೋದರನನೂನಂ
ನಿರುತವಾನೆನಗೆ ಕುಮುದಾಪ್ತನೆಣೆಯೇ ಎಂದು
ಕರಮೆ ಬಕನಿಂದುವಂ ಜಱಿವವೋಲ್ ಜಡಸ್ಥಲದೊ
ಳರರೆ ಅಜ್ಞರ್ ಕಲಾನಿಧಿಗಳಂ ಜಱಿವರ್ ದುರಭಿಮಾನವೇಗೆಯ್ಯದೋ ೩೫

ಮುಂ ನೆಗಳ್ದ ಕವಿಗಳೊಳ್ ಕೆಲರಕಟ ದುರ್ಜನಂ
ಗಂ ನಮಿಪೆವೆಂದು ತಮ್ಮಯ ಕೃತಿಮುಖದೊಳಿಟ್ಟ
ರೇಂ ನಿರುಕ್ತಿಯುನಱಿದರೋ ಅದಿರ್ಕಜ್ಞಂಗೆ ತಜ್ಞನೆಱಗುವುದುಚಿತಮೇ
ತನ್ನಿಂದ ತಾನೆ ವಂದಿಪನದೆಂತೆನೆ ಸಭೆಯೊ
ಳುನ್ನತರ್ ಮೆಚ್ಚಿ ಬಣ್ಣಿಸೆ ಕಂಡು ತಲೆವಾಗಿ
ಸನ್ನಿಧಿಯೊಳಿರ್ಪುದದು ಲಜ್ಜೆಯೆಂಬೊಂದು ನೆವದಿಂದೆಱಗಿದಂದಮಲ್ತೇ ೩೬

ವಿಲುಳಿತ ಸಮಸ್ತಾಸಮಸ್ತ ಮಾಸಿತ ಸಕೋ
ಮಳ ಸರಳ ದುಸ್ತರ ನಿರೋಷ್ಠ ಪ್ರಘಟ್ಟಕೋ
ಜ್ವಳ ರಸವ್ಯಂಗ್ಯಸುರಸಸ್ನಿಗ್ಧ ತಾತ್ಕಾಲಿಕಪ್ರಭೃತಿ ವಿವಿಧ ಪದದಿಂ
ಸಲೆ ಮೆಱೆವ ಸತ್ಕಾವ್ಯಮಂ ತಜ್ಞರಱಿವಂತೆ
ಮಲಿನಾತ್ಮರಾದ ದುಷ್ಕವಿಗಳೇನಱಿವರೇ
ವಿಲಸನ್ಮದಾಳಿಯಱಿವೋಲ್ ಬಂಭರಾಳಿಯಱಿದಪುದೆ ಪುಷ್ಪಾಮೋದಮಂ ೩೭

೧ ಪ (ಬ, ಕ)

ಅರಿಸಮಾಸಂ ರಸಾಭಾಸವಚಮತ್ಕಾರ
ವರತಿ ದುಸ್ಸಂಧಿಯಪಶಬ್ದವಧವೋಪಮೆ ಸು
ಕರ ಕರ್ತೃ ಕರ್ಮ ಕ್ರಿಯಾಪದಾಸಂಬಂಧವಪಗತ ವಿಭಕ್ತಿ ವಿಯುತಿ
ಸ್ಫುರಿತ ಶಾಸ್ತ್ರವಿರೋಧವಂತೆ ಛಂದೋಭಂಗ
ಮುರು ಪಾದಪೂರಣಂ ಮೊದಲಾದ ದೋಷಪ್ರ
ಕರವನಱಿಯದೆ ಬಾಯ್ಗೆ ಬಂದಂತೆ ಸಮೆದ ಕೃತಿ ವಿದ್ವತ್ಸಭಾಯೋಗ್ಯಮೇ ೩೮

ಸತಿಸಪ್ತಮಿಯ ಭೇದಮಂ ರಳಕುಳಕ್ಷಳಮ
ನತಿಶಯದ ಗಮಕಕ್ರಿಯಾಸಮಾಸಂಗಳಂ
ಶ್ರುತಿಸಹ್ಯಸಂಧಿಯಂ ತದ್ಧಿತಪದಮನಪಭ್ರಂಶದೇಶೀಯಂಗಳಂ
ನುತಮಾಗೆ ಯೋಗಿಪ ಸಮಾಸಮಂ ಸುಸಮಸಂ
ಸ್ಕೃತಮಂ ವಿರಹಿತಾವ್ಯಯೋರುಸಂಸ್ಕೃತಲಿಂಗ
ತತಿ ಶಿಥಿಲಪದಮುಖಾದ್ಯುಕ್ತಲಕ್ಷಣಮಱಿವ ಚತುರರೀಕೃತಿಗೊಲಿಯರೇ ೩೯

ಸರಸತ್ವದಿಂ ಸಲಕ್ಷಣದಿಂ ಬೆಡಂಗಿನಿಂ
ಪರಮಸೌಂದರ್ಯದಿಂ ಜಾತಿಯಿಂ ಗುಣದಿನು
ತ್ಕರವೃತ್ತಿಯಿಂದಲಂಕಾರದಿಂ ಮೋಹನದೆ ಭಾವದಿಂ ನಿರ್ದೋಷದಿಂ
ನಿರುಪಮ ಮೃದೂಕ್ತಿಯಿಂ ಪ್ರೌಢಿಯಿಂ ರೀತಿಯಿಂ
ವರ ಗಮಕದೆಸಕದಿಂದೊಳ್ಪಿಂ ಸಕಲ ಕಲಾ
ಸ್ಫುರಣದಿಂದೊಪ್ಪುವೀ ಕೃತಿಯುವತಿ ಕೋವಿದರನೇಂ ಸೋಲಿಸದೆ ಬಿಡುವಳೇ ೪೦

ಕಣ್ಮಲರ್ಗೆ ಕಡು ರಯ್ಯಮಾಗಿ ನಱುಗಂಪು ನೆಱೆ
ಪೊಣ್ಮಲರೆವಿರಿದ ಪೊಂದಾವರೆಯ ಬಂಡನುಂ
ಡುಣ್ಮುವಾನಂದದಿಂ ಮೈಮಱೆದು ಜಿನುಗುವಾಱಡಿವರಿಯ ಲೀಲೆಯಂತೆ
ಜಾಣ್ಮೆಱೆ ತೋಱುವೇಱುಂಜವ್ವನದ ಚೆಲ್ವ
ಪೆಣ್ಮಣಿಯ ಸುಸಿಲಮುಸಕದೊಳಿಂಪನುಗುತೊಗೆವ
ನುಣ್ಪಾತುಗಳ ರೀತಿಯಂತೆ ರಸಿಕರ ಮನವನಿದು ಜಕ್ಕುಲಿಸದಿರ್ಪುದೇ ೪೧

ಕರಣೇಂದ್ರಿಯವ್ಯವಹೃತಿಗಳೆಲ್ಲವುಂ ಲಿಂಗ
ಕರಣೇಂದ್ರಿಯವ್ಯವಹೃತಿಗಳಾಗಿ ನಾಡೆ ತ
ನ್ನಿರವೆಲ್ಲವುಂ ಲಿಂಗದಿರವಾಗಿ ಲಿಂಗದಿರವೆಲ್ಲವುಂ ತನ್ನದಾಗಿ
ಪರಿಕಿಸಲ್ ಕುಸುಮಗಂಧದ ತೆರದಿನನ್ಯೋನ್ಯ
ಪರಿಗತಿಯಿನಮಿತ ಲಿಂಗಾಂಗಸಂಯೋಗಿಯಾ
ದುರು ಸುಖಿಯ ಬೋಧದಂತುಟು ವಿವೇಕಿಗಳ ಚಿತ್ತವನಿದು ವಶೀಕರಿಸದೇ ೪೨

ಏನಾನುಮೊಂದೆರಡು ತಾಣದೊಳಗೊಂದಿದ ರ
ಸಾನಂದದಿಂ ಮರವೆಯಿಂ ಜಾಡ್ಯಭಾವದಿಂ
ದೀ ನವ್ಯ ದಿವ್ಯ ಕೃತಿಯೊಳ್ ದೋಷಮಿರ್ದೊಡಂ ಪರರ್ಗೆಡೆಗುಡದ ಪಾಂಗಿನಿಂ
ಮಾನಿತೋಭಯ ಲಸದ್ಭಾಷಾಪ್ರವೀಣರ್ ಶಿ
ವಾನುಭಾವಿಗಳಮತ್ಸರರೆನಿಪ ಭಕ್ತಪ್ರ
ತಾನಮಿದನೊಲ್ದು ತಿರ್ದುಗೆ ತಿರ್ದುವಂತೆ ಕಾವಂ ತನ್ನ ಪೂವಿನಂಬಂ ೪೩

ಕೇಳ್ವವರ ಕರ್ಣಾಭರಣವಮಲರಸಜಲದೊ
ಳಾಳ್ವವರ ಕಾಯ[1]ಸಂ[1]ಸಿದ್ಧಿಯನುಭವಸುಖದೆ
ಬಾಳ್ವವರ ಭಾಗ್ಯದೇವತೆ ಕಲಾವಿದರ ಚಿಂತಾರತ್ನವಮರ್ದ ಸೊಗಸಂ
ತಳ್ವದೊರೆವವರ ಜಿಹ್ವಾಮೃತಂ ಮನವೊಲ್ದು
ತಾಳ್ವವರ ಹೃದಯಕಮಲಾನಂದವೆನಲಿದಂ
ಪೇಳ್ವೆನಾಲಿಪುದೆಲ್ಲ ಶಿವಭಕ್ತರೇಕೆಂದೊಡಾಂ ನಿಮ್ಮ ಭೃತ್ಯನದಱಿಂ ೪೪

ಆಶೀರ್ನಮಸ್ಕ್ರಿಯಾವಸ್ತು ನಿರ್ದೇಶಂಗ
ಳಾ ಶುದ್ಧ ಕವಿಕುಲಸ್ತುತಿಯಾತ್ಮಶಕ್ತಿ ಸ
ಕ್ಲೇಶ ಕವಿಖಂಡನಮೆನಿಪ್ಪಿವಂ ಕೃತಿಮುಖದೊಳುಚಿತದಿಂದಿಡುವುದೆಂಬ
ಈ ಶಾಸ್ತ್ರಮಾರ್ಗಮಂ ಮನ್ನಿಸಿದೆನಲ್ಲದೆ ಮ
ಹೇಶಭಕ್ತರ ಸಭೆಯೊಳಾತ್ಮಸ್ತುತಿಗೆ ಮನದೊ
ಳಾಶಿಸುವೆನೇ[2] ಅಕಟ ತನ್ಮಹಾಭಾರ[3]ಮಂ[3] ಕೋರುತ್ತ ಮೂರ್ಖಾಕಿವೆಕಿನೆ ೪೫

---

೧ ಸರಧಿ (ಬ) ೨ ತಂ (ಅ, ಬ, ಕ) ೩ ದೆ (ಅ, ಬ)

ಆದ್ಯಕೃತಿಗಳ್ ಪಲವುಮುಂಟವಿರ್ದಂತಿದೇಂ
ಹೃದ್ಯಮೇ ನೂತನ ಕವಿತ್ವಮೆನ್ನದಿರಿದುವೆ
ಹೃದ್ಯಮೆಂತೆನೆ ಭೋಗಿಸಲ್ ಬಲ್ಲ ರಸಿಕಂಗೆ ಪಳೆದುಪ್ಪವೆನಿತಿರ್ದೊಡಂ
ಸದ್ಯೋಘೃತಂ ಸೊಗಸನೀಯದೇ ಪ್ರೌಢ್ಯದನ
ವದ್ಯವಿದ್ಯಾವಿಲಾಸಮದಿರ್ದ ಬಳಿಕೆ ವಿ
ದ್ವದ್ಯೋಗ್ಯಮಾಗದೇ ಅಂದಿನವರಿಂದಿನವರೆಂಬ ದುರ್ಭ್ರಾಂತಿಯೇಕೆ ೪೬

ನುಡಿಯಲೇನಕಟಶುದ್ಧದ ಮಡಲೆನಿಪ್ಪ ಕೆ
ಟ್ಟೊಡಲಾಂತು ಕರ್ಮಭೋಗಂಗೆಯ್ದು ಕುತ್ತದಿಂ
ಮಡಿವ ಪುಲ್ಮಾನಿಸರುಮಂ ಕ್ಷುದ್ರದೈವಮಂ ಪೊಗಳ್ದು ಮುನ್ನುಳ್ಳ ಮತಿಯಂ
ಕೆಡಿಸಿಕೊಳ್ವಧಮಕವಿಗಳ ಮಾತವೇಕಿಲ್ಲಿ
ಬಿಡು ಬಿಡು ಸಮಸ್ತಲೋಕಾರಾಧ್ಯನೆನಿಸುವೆ
ನ್ನೊಡೆಯ ಪದ್ಮರಸದೇಶಿಕಶಿರೋಮಣಿಗೆ ಮಾಱಿದೆನೆನ್ನ ಮತಿಯನನಿತಂ ೪೭

ಮತ್ಪ್ರತಿಜ್ಞಾವಚನಮಂ ಕೇಳ್ವುದಿಳೆಯೊಳು
ದ್ಯತ್ಪ್ರೌಢರಾದ ಮಾಹೇಶ್ವರವ್ರಾತಂ ಜ
ಗತ್ಪ್ರಭುವೆನಿಪ ವಿಶ್ವನಾಥನಂ ಬ್ರಹ್ಮಾಚ್ಯುತೇಂದ್ರಾದಿ ವಿಬುಧನುತನಂ
ತತ್ಪ್ರಮಥರೊಳಗಾದರಂ ಪೊಗಳ್ವೆನಲ್ಲದೆಯ
ಸತ್ಪ್ರಕೃತಿಯೊಳಗನ್ಯರಂ ಬಣ್ಣಿಸಿದೊಡೆ ಯು
ಷ್ಮತ್ಪ್ರಸಾದಕ್ಕೆ ನೀಡುಂದೂರವಪ್ಪೆನೀ ಭಾಷೆಯಂ [1]ಪಾಲಿಸುವುದು[1] ೪೮

ನಾಸ್ತಿತತ್ವಂ ಗುರೋಃ ಪರಮೆನುತೆ ಮತ್ತಂ ಪ್ರ
ಶಸ್ತದಿಂ ವಾಙ್ಮನೋತೀತಮೆನುತಿಂತುಟು ಸ
ಮಸ್ತ ಸೂಕ್ತಿಗಳಿರಲ್ ತತ್ಪರಾತ್ಪರಮುಗುರುವಂ ತಾಂ ನುತಿಸುವಂ ಗಡಾ
ಪ್ರಸ್ತುತಮಿದಲ್ತೆನ್ನದಿರಿ ನೀಮಿದಂ ಮಾಣ್ದೊಡೇ
ನಸ್ತಮವದೇತಱಿಂ ಪರೆವುದದಱಿಂದೀ ಗು
ರುಸ್ತುತಿಯನೆನ್ನ ಪಾಪಕ್ಷಯಾರ್ಥಂ ಭಕ್ತಿಯಿಂ ಬಲ್ಲವೋಲ್ ವಿರಚಿಪೆಂ ೪೯

---

೧ ಪಾಲಿಸೂದು (ಬ, ಕ)

ಆದಿಕರ್ತಾ ಕವಿಃಸಾಕ್ಷಾದೆನುತೆ ಮೇಣ್ಪ್ರ
ಮೋದದಿಂ ಶೂಲಪಾಣಿರಿತಿ ಶ್ರುತಿರೆನುತ್ತು
ಮೊದಲ್ ಪುರಾಣಮಷ್ಟಾದಶ ಸುವಿದ್ಯಾಧಿಪತಿ ಮಹಾಕವಿ ಶಂಭುವಂ
ವೇದವಿಧಿ ವಿಧು ಸುರಪ ಫಣಿಪಗೀಷ್ಪತಿ ದೇವ
ತಾದಿಗಳ್ ಪೊಗಳ್ದು ಕಡೆಗಾಣರೆನೆ ಕಿಂಚಿಜ್ಞ
ನಾದೆನಗೆ ಶಕ್ಯಮೇ ಮದ್ವಚಶ್ಶುದ್ಧ್ಯರ್ಥಮಾಗಿ ಬಣ್ಣಿಪೆನಳ್ತಿಯಿಂ ೫೦

ಭಕ್ತಜನನೇತ್ರಜೀವಂ ಜೀವಚಂದ್ರಮನ
ಭಕ್ತಜನನಿರ್ಮಲಸ್ವಾಂತಶಯ್ಯಾಗೃಹನ
ಭಕ್ತಜನವಿಪದಿಂಧನಪ್ರಬಲವೀತಿಹೋತ್ರನ ಜಗದ್ಧಿತಗಾತ್ರನ
ಭಕ್ತಬಾಂಧವನ ಭಕ್ತೇಪ್ಸಿತಾರ್ಥಪ್ರದನ
ಭಕ್ತರಕ್ಷಾಮಣಿಯ ಭಕ್ತೈಕವಲ್ಲಭನ
ಭಕ್ತವತ್ಸಲನ ಪದ್ಮರಸನೀ ಕೃತಿಗೆ ಮೊದಲಾವುದೆನೆ ಮುಂದೆ ಪೇಳ್ವೆಂ ೫೧

ಮದಕುಧರವಿದಳನಭಿದುರಪರಮಶಿವಭಕ್ತ
ಪದಶತದಳಾದಭ್ರಮಕರಂದಲೀಲಾಪ್ರ
ಮದಪರವಶೀಭೂತಮಧುಕರೋಪಮಪದ್ಮಣಾಂಕಪ್ರಣೀತಮಾಗಿ
ಸದಮಳಾಖಿಳಶಾಸ್ತ್ರಸಾರಮೆಂದೆನಿಸುವ
ಭ್ಯುದಯಕರ ಪದ್ಮರಾಜಪುರಾಣಕಥೆಯೊಳಿಂ
ತಿದು ಪೀಠಿಕಾಸಂಧಿ ಸಕಲ ವಿಬುಧರ್ಗೆ ಸನ್ಮುದ[೧]ಪೀಠಿಕಾನುಸಂಧಿ ೫೨

ಈಶಾಪರಾವತಾರನ ವಿಬುಧನುತನ ಭವ
ಪಾಶನಾಶನ ಕೆಱಿಯ ಪದ್ಮಣಾರ್ಯನ ಲಸತ್
ಶ್ರೀ ಶಿವಾದ್ವೈತಸಾಕಾರಸಿದ್ಧಾಂತಪ್ರತಿಷ್ಠಾಪನಾಚಾರ್ಯನ
ಈ ಶುದ್ಧ ಚರಿತಮಂ ತಿಳಿಪಿದರ್ಗೋದಿದ
ರ್ಗಾಶೆಯಿಂ ಕೇಳ್ದರ್ಗೆ ಭುಕ್ತಿಮುಕ್ತಿಗಳಂ ಮ
ಹಾ ಶುಭಂಗಳನಾಯುಮಂ ಕೊಟ್ಟು ಗುರುರೂಪವಿಶ್ವನಾಥಂ ರಕ್ಷಿಪಂ ೫೩

---

೧ ಪೀ (ಬ, ಕ)

ಅಂತು ಸಂಧಿ ೧ ಕ್ಕಂ ಪದಂಗಳು ೫೩ ಕ್ಕಂ

ಮಂಗಳಮಗಮತ್

ಶ್ರೀ

ಎರಡನೆಯ ಸಂಧಿ

ಸೂಚನೆ : ಗುರುಕುಲೋತ್ತಮನ ಸದ್ವಂಶಾವತಾರಮನ
ವರ ಚರಿತಮಂ ಸೂಚನೆಯಿನುಸುರ್ದು ಪದ್ಮಣಾ
ರ್ಯರ ಜನನಮಂ ಶೈಶವಮನಮಲವೃತ್ತಿಯಂ ಪೇಳ್ವೆಂ ಬುಧರ್ ಪುಳಕಿಸೆ

ಧ್ವಸ್ತದುರಸುರಸುರಶಿರಸ್ತಟೋಪರಿಪರಿ
ನ್ಯಸ್ತಪದ ಪದನಖಗಭಸ್ತಿವೃತಲೋಕ ಲೋ
ಕಸ್ತೋಮವರವರದಹಸ್ತಹಸ್ತಸ್ಥಿತಸಮಸ್ತಶುಭ ಶುಭದಾಯಕ
ಅಸ್ತಮಿತದುಷ್ಕೃತಕೃತಸ್ತವ ಸುಭೋಗದ ಗ
ದಸ್ತೋಭಹರ ಹರನಿರಸ್ತಯಮ ಯಮಯುತ ಮ
ನಸ್ತತತತಪ್ರೀತಶಸ್ತ ಮೃತ್ಯುಂಜಯ ಜಯಾಸ್ತೋಕ ವಿಶ್ವನಾಥಾ ೧

ಪರಮಗುರು ಶಿವಯೋಗಿ ಮಲ್ಲಿಕಾರ್ಜುನ ಪಂಡಿ
ತರ ತದಾತ್ಮೋದ್ಭವನೆನಿಪ್ಪ ಸಕಲೇಶಮಾ
ದರಸರ ತದುದರಭವನಾದ ದೇಶಿಕಶಿಖಾಮಣಿ ಮಾಯಿದೇವಾರ್ಯನ
ಚರಿತಮಂ ಬಣ್ಣಿಪೊಡೆ ವಿಶ್ವಪತಿಗಲ್ಲದುಳಿ
ದರ ಪವಣೆ ಬಲ್ಲನಿತನೊರೆವೊಡಂ ಪದಭಾರ
ಕಿರದಳ್ಕಿ ಸಂಕ್ಷೇಪದಿಂ ಪೇಳ್ವೆನಜೀವರಾನಂದಿಪವೊಲೆಂತೆಂದೆನೆ ೨

ಪಾವಕಾಂಬಕನೆ ಪತಿಯಾಮೆಲ್ಲರುಂ ಪಶುಗ
ಳೀ ವಾಕ್ಯಮಂ ಪ್ರತಿಷ್ಠಿಪೆವೆಂದು ವಿಷ್ಣ್ವಾದಿ
ದೇವಕುಲಮೆಲ್ಲಂ ನೆರೆದು ಮಿಸುನಿಯಿಂ ಸಮೆದು ನಿಲಿಸಿದ ಜಯಸ್ತಂಭವೋ
ವೋವೊ ದೀಪಾರಾಧನೆಯೆ ಮಹಾಫಲವೆಂದು
ಭೂವನಿತೆ ಭರ್ಗಂಗೆ ನೆತ್ತಿಯೊಳ್ ಪೊತ್ತ ಸೊಡ
ರೋ ವಿಚಾರಿಪೊಡೆನಿಸಿ ಪೊಂಬೆಟ್ಟೆಸೆವುದದಱ ತೆಂಕಲುಱೆ ಬಿಂಕವಾಗಿ ೩

ಕರ್ಣಾಟದೇಶವೊಪ್ಪುವುದದಱ ಮಧ್ಯದೊಳ
ಗರ್ಣವಂ ಕೊರಲ ಹಾರವೆನಿಪ್ಪ ಭೂಸತಿಯ
ಪೂರ್ಣೇಂದುವದನವೋಯೆನಿಪ ಚೆಲ್ವಿಂ ಕಲ್ಲಕುಱಿಕೆಯೆಂಬನುಪಮ ಪುರಂ
ಸ್ವರ್ಣನಿರ್ಮಿತ ಹರ್ಮ್ಯಕುಲದಿಂ ಸುರಥ್ಯಾವಿ
ಕೀರ್ಣತೆಯಿನಶ್ವಗಜಶಾಲಾವಿಶಾಲದಿಂ
ವರ್ಣನೆಗಳುಂಬವಾದಖಿಲ ವಿಭವಂಗಳಿಂದೆಸೆವುದಾ ನಗರಿಯಲ್ಲಿ ೪

ಶ್ರೀ ಪರಂಜ್ಯೋತಿಸ್ವರೂಪನ ಲಸತ್ಕೃಪಾ
ಕೂಪಾರ ವಿಶ್ವನಾಥನ ಸರ್ವಸಾಮರ್ಥ್ಯ
ವೇ ಪಶೂದ್ಧರಣಾರ್ಥವಾಗಿಯುಪಚಾರದಿಂ ಜನಿಸಿ ದಿನದಿನಕೆ ಬಳೆದು
ಭಾಪುರೇ ಗುರುಮಲ್ಲಿಕಾರ್ಜುನಪ್ರಭುವೆಂಬ
ಪಾಪಕ್ಷಯಾಖ್ಯದಿಂ ನೆಗಳ್ದು ಶಿವತೇಜಃಕ
ಲಾಪದಿಂ ಶೈವಸಾಮ್ರಾಜ್ಯಮಂ ಪಾಲಿಸುತೆ ಭೂಪಾಲವೃತ್ತಿಯಿಂದೆ ೫

ಕಲ್ಲಕುಱಿಕೆಯೆ ರಾಜಧಾನಿಯಾಗೆಸೆಯೆ ಜನ
ರೆಲ್ಲರಂ ಲಿಂಗೈಕ್ಯರಂ ಮಾಡಿ ಭಕ್ತಿಲತೆ
ಪಲ್ಲವಿಸಿ ಪರ್ವಿ ಮಡಲಿಡೆ ಕಡಲುಡಿಗೆಯಾದ ಪೊಡವಿಯೊಳ್ ಬಿಡದೆ ನಿಲಿಸಿ
ಉಲ್ಲಾಸದಿಂ ಕೆಲವು ಬರಿಸವಿರ್ದಾ ಸುಖಮ
ನೊಲ್ಲದುಱೆ ಮಾಯಾಂಶ್ವವದ್ರಹೇದೆಂದುಸಿರ್ವ
ಸಲ್ಲಲಿತ ಸೂಕ್ತಿಯಿಂ ನಾಯ್ಗೆ ಸರಿಗಂಡು ಮಾಯಾರಚನೆಯಂ ವರ್ಜಿಸಿ ೬

ವೈರಾಗ್ಯದಿಂ ಶ್ರೀಗಿರಿಯನೆಯ್ದಿ ತದಚಲಾ
ಗಾರನಂ ಮಲ್ಲೇಶನಂ ಸ್ಮರಿಸೆ ದೇಶಿಕಾ
ಕಾರದಿಂ ಬಂದು ಸಂತವಿಸಿ ತನ್ನಗದ ಮಹಿಮೆಯನೆಲ್ಲವಂ ತೋಱಿಸಿ
ಚಾರು ಚಿದನುಗ್ರಹಂಗೆಯ್ಯುತುಂ ಯತಿಕುಲ
ಕ್ಕಾರಾಧ್ಯನಾಗಿ ಮತ್ಸಾಮರ್ಥ್ಯರೂಪನೀ
ನೀ ರಮ್ಯ ಬಿಲ್ವವನದಲ್ಲಿ ಶಿವಯೋಗಿಮಲ್ಲರಸರೀ ಸರಸರೆನಿಸಿ ೭

ಆನೆನ್ನೆವರಮೀ ಗಿರಿಯೊಳಿರ್ಪೆನನ್ನೆವರ
ಮೀ ನವ್ಯ ದಿವ್ಯ ಪುಣ್ಯಕ್ಷೇತ್ರದೊಳಗಾನೆ
ನೀನಾಗಿ ವಿಹರಿಸೆಂದಾಜ್ಞಾಪಿಸುತೆ ಶಿವಂ ತನ್ನ ಹೃದಯದೊಳಡಂಗೆ
ಆ ನಿರತಿಶಯ ಸುಖಸುಧಾಂಬುಧಿಯೊಳೋಲಾಡು
ತಾನತಸುರದ್ರುಮಂ ಶಿವಯೋಗಿಮಲ್ಲರಸ
ನೇನೆಂದು ಬಣ್ಣಿಪೆನದೃಶ್ಯಾಕೃತಿಯಿನೀಶಸಾಮ್ಯವೃತ್ತಿಯೊಳೊಪ್ಪಿದಂ ೮

ಆ ಮಲ್ಲಿಕಾರ್ಜುನಾಚಾರ್ಯಪುತ್ರನ ಮುಕ್ತಿ
ಕಾಮಿನೀಮುಖಲಲಾಮನ ಶಿಷ್ಯಕುಲ
ಸಾರ್ವಭೌಮನ ಚರಿತ್ರವೆಂತೆನೆ ಪೂರ್ವದಲ್ಲಿ ರುದ್ರಗಣಂಗಳೊಳ್ ತೊಳಗುವ
ಶ್ರೀ ಮಹಾ ಸಹನೇಶಗಗನೇಶರೀರ್ವರೊಳ
ಗೇಮಾತೊ ಗಗನೇಶನೆಂಬವಂ ಚಿದ್ವಿಲಾ
ಸಾಮೋದದಿಂ ಕ್ರಿಯಾನಿಷ್ಠರಂ[೧] ನೋಡಿ ಕಿಂಚಿತ್ಪ್ರಹಸಿತಾಸ್ಯನಾಗೆ ೯

ಸಹನೇಶನಾ ಮಿತ್ರನಂ ಕಟಾಕ್ಷಿಸಿ ಕೋಪ
ಸಹಿತನಾಗುತ್ತೆಂದನೆಲೆ ಚಿತ್ಕ್ರಿಯಾದ್ವಯದೊ
ಳಹಹ ನೀಂ ಚಿದ್ವಿಶ್ರಮಣನಾಗಿ ಸತ್ಕ್ರಿಯಾನಿರಸನಂಗೆಯ್ದಯದಱಿಂ
ಮಹಿಯೊಳುದ್ಭವಿಸಿ ಯೆರಡೇಳ್ನೂಱು ಬರಿಸಮುಂ
ಮಹಿತಕ್ರಿಯಾಜ್ಞಾನವಿಹಿತವೃತ್ತಿಯೊಳೆ ನಿ
ರ್ವಹಿಸಿ ತದ್ಯುಗಮಂ ಪ್ರತಿಷ್ಠಿಸಾ ಸುಪ್ರತಿಷ್ಠೆಯೆಯೆಮ್ಮ ಶರಣಮಾರ್ಗಂ ೧೦

---

೧ ನಂ (ಅ)

ವರ ಚಿದನ್ವಿತನಾದೊಡಂ ನಿಷ್ಕ್ರಿಯನನೀಶ
ಶರಣರೊಪ್ಪರದೆಂತೆನಲ್ ತರುಣಿ ತನ್ನ ನಿಜ
ದಿರವಿನಿಂ ಮೋಹಿಸುವ ರೂಪವತಿಯಾದೊಡಂ ವಸ್ತ್ರಭೂಷಣಸುಮಾಲ್ಯ
ಪರಿಮಳಾದಿಗಳಿಂದಲಂಕರಿಸಿಕೊಳ್ಳದೊಡೆ
ಪುರುಷರೆಂತೊಪ್ಪರಂತದಱಿಂದೆ ತಚ್ಛ್ರೀಗ
ಸ್ಫುರಣಮಂ ಮಾಡು ನಿನಗಿದು ಜಗದ್ಧಿತಕಾರ್ಯಮೆನೆಯದಂ ಮನದೆಗೊಂಡು ೧೧

ಗುರು ಮಲ್ಲಿಕಾರ್ಜುನಪ್ರಭುಗೊಗೆದು ಬಳಿಕವಂ
ಪರಮವೈರಾಗ್ಯಸ್ಥನಾಗೆಯಾತನ ರಾಜ್ಯ
ದುರುಭಾರಮಂ ಧರಿಸಿ ಚಿರಕಾಲಮಧಿಕಪ್ರತಾಪದಿಂದರಸುಗೆಯ್ದು
ಹರಭಕ್ತಿಯಂ ಪ್ರತಿಷ್ಠಿಸಿ ದಿವ್ಯಹರ್ಷದಿಂ
ದಿರುತೊಂದು ಪಗಲಲ್ಲಿ ತಮ್ಮಯ್ಯನಾದ ಮ
ಲ್ಲರಸರ ವಿರತಿಗೇಳ್ದು ಸಾಮ್ರಾಜ್ಯಭೋಗಮಂ ಪರಿಹರಿಸಿ ಚಿಚ್ಛಕ್ತಿಯಿಂ ೧೨

ವೈರಕ್ತ್ಯವೃತ್ತಿಯಿಂ ಪೊಱಮಡಲೊಡಂ ತನ್ನ
ನಾರಿ ಪುತ್ರಂ ಸೊಸೆ ಕೆಲವುಬ[೧]ಕು[೧]ತರೊಡವರಲ್
ಮಾರಾರಿಯಾಂ ಬಿಟ್ಟೊಡಂ ನಿನ್ನ ಮಾಯೆ ಬಿಡದೆನುತೆ ಬರೆವರೆ ಮುಂದಣ
ದಾರಿಯೊಳ್ ಭಕ್ತಿಕಾಂತೆಯ ಸವಿಸ್ತಾರ ರ
ಮ್ಯೋರಸ್ಥಲವೊ ಭಾವಿಸುವೊಡೆನಿಸಿ ಅಂಬೆಯೆಂ
ಬೂರೆಸೆದುದಲ್ಲಿರ್ದ ಭಕ್ತರಿವರೆಯ್ತುರ್ಪ ವಾರ್ತೆಯಂ ಕೇಳ್ದು ನಲಿದು ೧೩

ಸರ್ವ ಸಂಭ್ರಮಸಹಿತರಾಗಿ ಬಂದಿದಿರ್ಗೊಂಡ
ಖರ್ವ ಸುಶ್ರದ್ಧಾಪುರಸ್ಸರಮಿವರನತ್ಯ
ಪೂರ್ವೋಪಚಾರಂಗಳಿಂದೆ ಮನ್ನಿಸಿ ತಮ್ಮ ಭಕ್ತಿ [೨]ನಿ[೨]ರ್ಮಲಪಾಶದಿಂ
ಪರ್ವತಕ್ಕಡಿಯನಿಡಲೀಯದೆ ತಡೆಯಲೊಡಂ
ಸರ್ವಜ್ಞ ಸಕಲೇಶ್ವರನ ತಂತ್ರವಿಂತಿದಂ
ನಿರ್ವಹಿಸಲೇವೇಳ್ಕುಮೆಂದಖಿಲ ಶಿವವೈಭವಂಗಳಂ ಸಂಗ್ರಹಿಸುತೆ ೧೪

---

೧ ಕ (ಅ, ಬ, ಕ) ೨ ನೈ (ಬ)

ಪನ್ನೆರಡು ಪೊನ್ನಿಂ ಸಮಸ್ತ ಪೂಜಾದ್ರವ್ಯ
ಮಂ ನಿಚ್ಚವೊದವಿಸೆ ಶಿವಾರ್ಚನಮನತಿಸಾಂಗ
ದಿಂ ನಿರ್ವಿರ್ಚಿಯನಂತರಂ ಬಳಸಿ ಮೆಱೆವ ಮೂವತ್ತೆರಳ್ಬೀಣೆಯೊಳಗೆ
ಪನ್ನಗಧರಂಗಿಷ್ಟಮಾದುದುಲಿದೊಡೆ ತೆಗೆದ
ದಂ ನಾಡೆ ಶಂಕರಂ ತಲೆದೂಗೆ ಬಾಜಿಸು
ತ್ತುಂ ನಾದವಿದ್ಯಾಪ್ರವೀಣನಿಳೆಯುಂ ಶಿಷ್ಯರಂ ಮಾಡಿ ಮಹಿಮೆವೆತ್ತು ೧೫

*ಸರಳವೃತ್ತಂ ಕಲಾಸ್ಫೂರ್ತಿ ಲೇಖಸ್ತುತಂ
ಶರಣನಿಧಿಮಾನ್ಯಂ ದಳಿತಕಲ್ಪನಂ ರಮಾ
ಕರವಿಗ್ರಹಂ ಸರಸವಿಸರಸರಸಂ ರಂಜಿತಾಂತರಂಗಂ ಪವಿತ್ರಂ
ದುರಿತಾರಿಮಿತರಹಿತ ಸುಮಹಿಮಂ ದೇಹಗುಣ
ನಿರಸನಂ ವಂದಿತಾಖಿಲಜನಂ ಭಕ್ತಸುರ
ತರು ಜಿತಾಕ್ಷಂ ಸಿದ್ಧಿದಂ ದಂಭವೈರಿ ಮಾದರಸರೊಪ್ಪಿದರೆಂತೆನೆ ೧೬

ಸರ್ವಜನದಾಯುಷ್ಯಕಲ್ಪನಾರ್ಥಂ ಶತಾ
ಯುರ್ವೈಯೆನುತ್ತೆ ಪುರುಷೋಯೆಂದೆನುತ್ತಿರ್ಪ
ಖರ್ವ ವೇದದ ಹಾದಿಯೊಳ್ ಮುಳ್ಳನೆಳೆದು ಲೋಕವನಗಿವ ಕಾಲನೆಂಬ
ದರ್ವೀಕರನ ದಾಡೆಯುಂ ಕಿಳ್ತವಧಿವಿಧಿಗ
ಳಿರ್ವರ್ಗೆ ತೊಗಳ್ತುಗೆಲಸವನಿತ್ತು ರೋಗಂಗ
ಳುರ್ವಿನಂಕುರಮಂ ಚಿವುಂಟಿ ಕರ್ಮದ ಸಸಿಯ ಬೇರ್ಗೆ ಬಿಸುನೀರನೆಱೆದು ೧೭

ಅರರೆ ಸಾವಿರದ ಮುನ್ನೂಱ ಮೂವತ್ತೆಂಟು
ಬರಿಸಮುಂದಿಂಗೆ ಸಲಲೊಂದು ದೆವಸಂ ಬಡವ
ನುರುಶಿಷ್ಯನಾ ದೇಶಿಕಾರಾಧನಕೆ ಧನಂ ದೊರಕದಿರೆ ಧೃತಿಗುಂದದೆ
ವರ ಸುತೆಯನೊತ್ತೆಯಿಟ್ಟಾ ಪನ್ನೆರಡು ಪೊನ್ನ
ನಿರದೆ ಗುರುವಿಂಗರ್ಪಿಸಲ್ಕಿತ್ತ ಮಾದಾಂಬೆ
ಸರಿದಪಳೆನುತೊತ್ತೆಗೊಂಡವನವಳ ಕಾಲ್ಗೆ ಹಟ್ಟಳೆವೊಲಿದುಕೊಂಡಿರೆ ೧೮

---

* (ಈ ಪದ್ಯದ ಪ್ರತ್ಯೇಕಪದಂಗಳ ಮೊದಲಕ್ಷರಂಗಳ ಕೂಡಿಯೋದಿದೊಡೆ 'ಸಕಲೇಶ ಮಾದರಸರಂ ಪದುಮಿದೇವಂ ಭಜಿಸಿದ'ನೆಂದಿರ್ಕುಮಿದೊಂದು ಪ್ರಬಂಧಂ)(ಅ)
೧ ತ್ತು (ಕ)

ಇತ್ತ ಗುರು ಲಿಂಗಾರ್ಚನಂಗೆಯ್ಯುತಾರತಿಯ
ನೆತ್ತುತಿರೆಯಾ ರಮ್ಯಗರ್ಭದೊಳ್ ತೊಳತೊಳಗಿ
ತತ್ತರುಣಿ [೧]ಹ[೧]ಟ್ಟಳೆವೆರಸಿ ತೋಱೆ ಸಾಶ್ಚರ್ಯಮನನಾಗಿ ತಚ್ಛಿಷ್ಯನಿಂ
ವೃತ್ತಾಂತವೆಲ್ಲವನಱಿದು ಕೊರಗಿಯಾ ಮಗಳ
ನೊತ್ತೆಗೊಂಡಿರ್ದನಿಂ ಬಿಡಿಸಿ ಭಕ್ತರ್ಗೀ ವಿ
ಪತ್ತಿಮ್ಮ ಕತದಿನಾಯ್ತು ಕಟಿನುತ್ತವನನುದ್ಧರಿಸಿ [೨]ಸತಿಯಂ[೨] ಭಾವಿಸಿ ೧೯

ವರಪುತ್ರ ಮಾಯಿದೇವಾರ್ಯರಂ ಕರೆದು ನೀ
ನಿರು ನಿನ್ನ ಗರ್ಭದೊಳ್ ಜನಿಸುವಂ ತರುಣೇಂದು
ಧರಸಮಾನಂ ಕಾರಣಿಕನೊರ್ವನಾ ಮಹಾಪುರುಷನಿಂದೀಶಕೃತ್ಯಂ
ಪರಿಪೂರ್ಣಪಪ್ಪುದೆಂದಾ ಭವಿಷ್ಯತ್ಕಾರ್ಯ
ದಿರವನಮಲಜ್ಞಾನನೇತ್ರದಿಂ ಕಂಡು ಪೇ
ಳ್ದಿರಿಸಿ ಶಿಷ್ಯವ್ರಾತಮಂ ಕಳಿಪಿ ವೈರಾಗ್ಯದಿಂದೆ ಪರ್ವತವನೆಯ್ದಿ ೨೦

ಮಲ್ಲಿಕಾರ್ಜುನಯತೀಂದ್ರನನಱಿಸಿ ಪೋಪ ಪಥ
ದಲ್ಲಿಯಡ್ಡಂಗಟ್ಟಿ ಭಸ್ಮಾದ್ರಿವೊಲ್ ಕುರುಪ
ನೆಲ್ಲಿಯುಂ ಕಾಣಿಸದೆ ತದ್ಯೋಗಿಪಟ್ಟಿರೆ ಮುಡಿಯ ದೆಸೆಗೆ ಮೂಱು ಬರಿಸಂ
ಸಲ್ಲಲಿತನಱಿಸಿ ಕಾಣದೆ ಬಳಲ್ದಡಿಯತ್ತ
ತಲ್ಲಣಿಸುತೆಂಟು ಬರಿಸಂ ನಡೆದು ಭಕ್ತಿಲತೆ
ಪಲ್ಲವಿಸಿ ಪರ್ವವೊಲ್ ನುತಿಸೆ ತದ್ಭೀಕರಾಕೃತಿಯನುಳಿದಾ ಮಹಾತ್ಮಂ ೨೧

ತನ್ನ ಮುನ್ನಿನ ಚೆನ್ನರೂಹುದೋಱಿಸಿ ಶರಣ
ನಂ ನೇಹದಿಂದಪ್ಪಿಯಾಶ್ರಮಕೆ ಕೊಂಡೊಯ್ದು
ಮನ್ನಿಸಿ ಶಿವಾನುಭವದಲ್ಲಿನಿಸು ಪೊಳ್ತಿರಿಸಿಕೊಂಡಿರ್ದು ಮಗನೆ ನಿನಗೆ
ಇನ್ನುಂ ಧರಣಿಯೊಳ್ಳೈವತ್ತು ಬರಿಸದ ವರ್ತ
ನಂ ನೆಱೆವುದದನೆಮ್ಮ ಬಸವಾದಿಗಳ್ ಭಕ್ತಿ
ಯಂ ನಿಲಿಸಲೆಂದು ಕಲ್ಯಾಣದೊಳ್ ಬಂದಿರ್ಪರವರೊಡನೆ ಕಳೆಯೆಂದೆನೆ ೨೨

---

೧ ಪ (ಕ) ೨ ಪತಿಯಾ (ಬ)

ಗುರುವೆ ನಿಮ್ಮಂಘ್ರಿಯಂ ಬಿಡಲಾಱೆನೆಂದೊಱಲು
ತಿರಿಯಂತೆಗೆಯ್ಯೆಂದು ತಂದೊಂದು ಬರ್ಬೂರ
ಧರಣೀಜದಡಿಯೊಳಗಿರಿಸಿ ತತ್ತಪೋವಿಧಿಯನಱುಪಿ ಮಱುದೆವಸದಲ್ಲಿ
[1]ಒರೆವೆನೀತನ ಮನವನೆಂದು ಗೋಪಾಕೃತಿಯೊ
ಳಿರದೆಯ್ದಿ ಕಡುನೋಯಿಸಲ್ಕವಂ ಕಿನಿಸೆ ನಗು
ತುರುನಿಜಾಕಾರಮುಂ ತೋಱಿ ನಾಣ್ಚಿಸಿ [2]ಶಾಂತಿದಾಂತಿಯನುವಂ ಬೋಧಿಸಿ ೨೩

ಇಂದಿಂಗೆ ಸಾವಿರದನಾನೂಱು ಬರಿಸಕ್ಕೆ
ಕುಂದಾದುದೈವತ್ತು ಬರಿಸಮದು ನೆಱೆಯೆ ನಿ
ನ್ನಂ ದಿವ್ಯಸಹಜ ಸಮ್ಯಕ್ಸಂವಿದಮಲಸಂಯೋಗಸೌಖ್ಯದೊಳೊಂದಿಪೆಂ
ಕಂದ ಬೇಡಿಷ್ಟವೇನೆನೆ ಪರಸ್ತ್ರೀ ಲಕ್ಷ್ಮಿ
ಹೆಂದದಾಯುಮೆ ಮಾಯೆಗೀಡು ಸುರಪದವಚಿರ
ನಿಂದುಧರಪದವಿ ಕೈಲಾಸವಾನಂತಱಿಂದೆರೆಯೆನವನೆನ್ನ ಮನವಂ ೨೪

ಹರಣದೆಱೆಯನೆ ನೀನೆ ಬಲ್ಲೆಯೆಂದೀ ತೆಱದೊ
ಳೊರೆದೊಂದು ಗೀತಮಂ ಸಾಷ್ಟಾಂಗದಿಂದೆಱಗೆ
ಗುರುವರಂ ಕಲ್ಯಾಣಪುರದ ಬಸವಣನ ಮುಂದಿಳಿಪೆಯಾತಂ ತನ್ನಯಾ
ಕರದ ಸಂಗಮನಾಥನೊಳ್ ಕಂಡು ನಲಿದುಬಂ
ದಿರದೆ ದಂಡಪ್ರಣಾಮಂಗೆಯ್ದು ಸತ್ಕರಿಸಿ
ಪರಮಾನುಭವಗೋಷ್ಠಿಯಿಂದಿರುತಿರಲ್ ಚಿಕ್ಕಮಾದಣ್ಣನೆಂಬ ಶಿಷ್ಯಂ ೨೫

ಮನೆಯೊಳಿರ್ದಂತಿರ್ದು ಲಿಂಗೈಕ್ಯನಾಗೆ ತತ್
ತನಯನಾ ಸ್ಥಿತಿಯನಱುಹಿಸೆ ಕೇಳ್ದು ಸಕಲೇಶ್ವ
ರನ ನಿರೂಪವಿದೆಂದು ಬಂದವಂಗಸುವಿತ್ತು ಬಸವಾದ್ಯಸಂಖ್ಯಾತರಂ
ವಿನುತ ಮುಕ್ತಿಗೆ ಸಲಿಸಿ ಐವತ್ತುಬರಿಸವಂ
ದಿನ ದಿನಕ್ಕಾಗೆಯಲ್ಲಿಂ ತಳರ್ದು ದಾರಿಯೊಳ
ಗನಘಶರಣಂ ಗೊಪೆಯ ಶಿವದೇವನೆಂಬ ವೀರವ್ರತಿಯ ಪುರಮಸೆದಿರೆ ೨೬

೧ ಓರ್ಬುವೆ (ಬ) ೨ ದಾಂತದೆಱೆಯನುವಂ (ಬ)

ತನಗೆ ಸೀಮೋಲಂಘನವ್ರತಮೆಸೆಯೆ ನಿಜ ಸ
ದನದಲ್ಲಿಯೊಂದು ಗೊಪೆಯಂ ತೋಡಿಕೊಂಡು ತ
ನ್ನನುವಿಂಗೆ ಕೊರತೆ ಬರೆಯಸುಗಳಿವೆನೆಂಬ ನಿಷ್ಠೆಯನಾಂತು ವಿಜಯಿಯಾಗಿ
ಅನಘ ಸಕಲೇಶಮಾದರಸರಡಿದಾವರೆಯೊ
ಳನುದಿನಂ ನಿಜಮನೋಮಧುಕರನನಾಡಿಸುತೆ
ವಿನುತನಾದಸಮಶಿವದೇವನ ಪುರಂಬೊಕ್ಕು ತದ್ಗೃಹಾಂತರಮನೆಯ್ದಿ ೨೭

ಕಾಣುತಷ್ಟಾಂಗದಿಂ ನಮಿಸಿ ನುತಿಸುತ್ತೆ ಮತ್
ಪ್ರಾಣೇಶ ಭವನಾಶ ಧನ್ಯನಾದೆನೆನುತ್ತೆ
ಜಾಣೆಸೆಯೆ ಸತ್ಕರಿಸಿ ಬಸವಾದ್ಯರೈಕ್ಯಮಂ ಕೇಳ್ದೆನಗೆ ಗುರುದರ್ಶನಂ
ಪ್ರಾಣದಂತೊದವಿತ್ತಿದೇ ಕಾಲಮೆನುತೆ ತತ್
ಪ್ರಾಣಲಿಂಗದೊಳಾರ್ಯನಡಿವಿಡಿದಡಂಗೆಯ
ಕ್ಷೀಣ ಶಿವದೇವನಂ ಮೆಱೆದಾತನಂ ಪೊಗಳುತಲ್ಲಿಂದೆ ನಡೆತರುತಿರೆ ೨೮

ಮುಂದೊಂದು ನಗರಿಯೊಳ್ ಪರಮ ಶಿವಭಕ್ತನ
ರ್ಧೇಂದುಧರಶರಣಪೂಜಾಸಕ್ತನಮಲಗುಣ
ವೃಂದಯುಕ್ತಂ ಗುರೋರಾಜ್ಞಾಂ ನಲಂಘಯೇದೆಂಬ ತಚ್ಛ್ರುತಿಗೆ ಚಿತ್ತಂ
ಸಂದು ಗುರ್ವಾಜ್ಞೆಯಂ ಮೀಱದತಿ[೧] ಗುರುನಿಷ್ಠೆ
ಯಿಂದೆ ಮಹಲಿಂಗರಾಮನ ವೀರನೆಂಬ ಶಿ
ಷ್ಯಂ ದಿವ್ಯಸುಖದಿನಿರೆಯಾತನೂರ್ಗೆಯ್ದಿ ತನ್ನಿವಾಸಕ್ಕೆ ಗಮಿಸೇ ೨೯

ತನ್ನ ಗುರುವಂ ಕಂಡು ವಿನುತಿಸುತೆ ಸಾಷ್ಟಾಂಗ
ದಿಂ ನಮಿಸಿ ನಿರ್ವಂಚಕತ್ವದೆ ಭಜಿಸಿ ಗುರುವಿ
ಸನ್ನುತ ಶಿವೈಕ್ಯಸಮಯವನಱಿದು ಮುಕ್ತಿದ ಗುರುವೆಯೆನಗೆ ಮರ್ತ್ಯದಲ್ಲಿ
ಇನ್ನಿರ್ಪುದಾಗದೆಂದಡಿಗೆಱಗೆ ಶಿವಮಂತ್ರ
ವಂ ನೆನೆವುತವನ ನೆತ್ತಿಗೆ ಕರಮನಿಡೆಯಿದಾಂ
ಮುನ್ನೊಗೆದ ಪಥವೆನುತಡಂಗೆಯುವನಂ ಮೆಱೆದು ಪರ್ವತಾಶ್ರಮುವನೆಯ್ದಿ ೩೦

---

೧ ದಾ (ಬ, ಕ)

ಅಮಿತಮಲ್ಲರಸರಂ ಕಂಡು ಶಿವಲಿಂಗದ
ಲ್ಲಮೃತವಮೃತದೊಳಂಬುವಂಬುವ್ರೊಳ್ ಬೆರಸಿದಂ
ತಮಳ್ಳೈಕ್ಯನಾಗಿ ಸಕಲೇಶಮಾದರಸನುತ್ತಮ ಸರಸನಿತರವಿರಸಂ
ಸುಮಹದ ವಿಕಲ್ಪ ನಿಜ ನಿತ್ಯ ನಿರತಿಶಯೈಕ
ರಮಣೀಯ ಸತತೋದಿತಾಖಂಡಿತೋರು ನಿ
ರ್ಭ್ರಮ ನಿರಾವರಣ ನಿರುಪಾಧಿಕ ಚಿದಂಬುಧಿಯೊಳೋಲಾಡುತೊಪ್ಪುತಿರ್ದಂ ೩೧

ಅಮಮ ಬಣ್ಣಿಪೆನೇನನಿತ್ತಲಿಸೆವಂಬೆಯೆಂ
ಬ ಮಹಾನಗರಿಯಲ್ಲಿ ನಿರುಪಮಚರಿತ್ರನು
ತ್ತಮ ಕೃಪಾಪಾತ್ರನಧಿಕ ಜ್ಞಾನನೇತ್ರನಘವಲ್ಲೀಲವಿತ್ರನೆಸಿಪ
ಅಮಲಿನಾಚಾರ್ಯಚೂಡಾರತ್ನ ಮಾಯಿದೇ
ವ ಮಹಾತ್ಮನಖಿಲ ಭಕ್ತಪ್ರಾರ್ಥನೆಗಳಿಂದ
ಸಮಸುಖಂಬೆತ್ತು ಭಕ್ತಿತ್ರಯಸ್ಥಾಪನಂಗೆಯ್ಯುತುಂ ವರ್ತಿಸುತ್ತೆ ೩೨

ವೇದ ವೇದ ಶಿರಃ ಪುರಾಣಸ್ಮೃತೀತಿಹಾ
ಸಾದಿ ಶಾಸ್ತ್ರಾಗಮಾಖಿಲ ಶಬ್ದತರ್ಕ ಸಂ
ಪಾದನಂಗೆಯ್ದು ದೃಷ್ಟಾಂತಪೂರ್ವಕಮಾಗಿ ವಾದಿಗಳನಿರದೆ ಜಯಿಸಿ
ಮಾದೇವನೇ ದೇವನಾ ದೇವನಂ ಭಜಿಪ
ರೇ ದಿಟಂ ಕುಲಜರೆಂ[೧]ಬಿ[೧]ದನುಂಟುಮಾಡಿ ಸತಿ
ಯಾದ ಮಂಗಳೆದೇವಿಯುಂ ತಾನುಮನ್ಯೋನ್ಯರಾಗದಿಂದಿಂಪುವೆತ್ತು ೩೩

ಏನಚ್ಚರಿಯೊ ವಿಬುಧಗಣಸೇವ್ಯಪಾದನಾ
ಗೀ ನರವಿಯೋಗದೊಳಹಿತನಲ್ತು ಭಾವೋದ್ಭ
ವಾನವದ್ಯಾನುಭವಶರಧಿಯೊಳ್ ಮೂಡಿಮುಳುಗಿರ್ದುವುಂ ಕಾಮಿಯಲ್ತು
ನಾನಾ ಜಗತ್ಪ್ರಾಣನಾಗಿಯುಂ ಕುಂಡಲೀ
ಶಾನುಭವವಸ್ತುವಲ್ತಾ ಶುದ್ಧ ಹಂಸನೇ
ತಾನಾಗಿ ಕುವಲಯಾರಿಯುಮಲ್ತೆನಿಸಿ ಮಾಯಿದೇವಾರ್ಯನೊಪ್ಪುತಿರ್ದಂ ೩೪

---

೧ ಬು (ಬ)

ಆತನ ಮನೋರಮಣಿಯಾದ ಮಂಗಳದೇವಿ
ಯಾತತಗುಣಾತಿಶಯಮಂ ಪೇಳ್ವೊಡಿಂ ಪಲವು
ಮಾತೇಂ ಸಹಸ್ರಮುಖದಿಂದಶೇಷಮನೊರೆವ ಶೇಷಂಗೆ ತಾಂ ತೀರ್ಗುಮೇ
ಭೂತೇಶಭಕ್ತಿ ಗುರುಭಕ್ತಿ ಜಂಗಮಭಕ್ತಿ
ಯೋತ ಪತಿಭಕ್ತಿ ಸದ್ಯುಕ್ತಿಗಳಿವಾ ಘನಪು
ನೀತಿಯೊಳಗೊಗೆದವೆಂಬಿನಿತನಱಿವೆಂ ಮೇಲಱಿಯೆನವಳ ಸಚ್ಚರಿತಮಂ ೧೫

ಪ್ರಣುತಿವೆತ್ತೆಸೆವ ಮಂಗಳದೇವಿಯರ ಮಹಾ
ಗುಣದಿಂ ಶಿವಾರ್ಚಾಭಿರತಿಯಿನತ್ಯನುಪಮೋ
ಲ್ಬಣ ವಿನಿರ್ಮಲತೆಯಿಂದಮಮ ಮಾಣಿಕಕೆ ಮರಕತಕೆ ಮೌಕ್ತಿಕಕೆ ಮಿಱಿವಾ
ಗುಣರತಿ ವಿನಿರ್ಮಲತೆಯಾದುವಲ್ಲದೆ ಜಗದೊ
ಳೆನಿಸಲಾ ಪಾಷಾಣಜಾತಿಯೊಳಿವುಂಟೆಯಿಂ
ದಣಿಯರದಿನುತ್ತಮರ್ಮಣಿವರೆನಲಾ ಸತೀಮಣಿಯ ಪೆಂಪಿನ್ನೆಂತುಟೋ ೧೬

ಇಂತು ಸಲ್ಲಕ್ಷಣಾನ್ವಿತೆಯೆನಿಸಿ ಮೆಱೆವ ಸೀ
ಮಂತಿನೀಸೀಮಂತಮಣಿ ಮಂಗಳಾದೇವಿ
ಯುಂ ತಾನುಮತಿಹರ್ಷದಿಂ ಮಾಯಿದೇವಾರ್ಯನಿರೆ ಶಂಕರಾಜ್ಞೆಯಿಂದೆ
ಶಾಂತಿರೂಪಂ ಕಾರಣಿಕನಾದಿಪುರುಷನ
ಶ್ರಾಂತಸುಖಿ ಶಂಭು ಸಾಮರ್ಥ್ಯರೂಪಂ ಮಹಾ
ತ್ಮಂ ತಾಂ ಜಗದ್ರಕ್ಷಣಾರ್ಥಮಾ ಮಾನಿನಿಯ ಗರ್ಭಪ್ರವೇಶಿಯಾಗೆ ೧೭

ಕಣ್ಗಳ ಸಿರಿಗೆ ಪಿಂಗದಲರ್ವಕ್ಕಿಗಳ ಪಳಿವ
ನುಣ್ಗುರುಳ ನೀಱಿಗೆ ಬೆಡಂಗಮರ್ದೆಸೆವ ತುಂಬು
ತಣ್ಗದಿರನಂದದ ಮೊಗದ ಚೆಲ್ವಿಗಮಮ ಕಮ್ಮಂಗಣೆಯನಧಿದೇವಿಗೆ
ಜಾಣ್‍ಗಾಡಿ ಪೆರ್ಮೆ ಸೈಪಿನ ನಡೆಸೊಗಸು ಚಲ್ಲ
ನಾಣ್ಗಳೆಂಬಿವಱ ಸುಗ್ಗಿಯ ಸೂಱೆಗಮ್ಮಮ್ಮ
ಪೆಣ್ಗಳರಸಿಗೆ ಗರ್ಭಚಿಹ್ನವಂಕುರಿಸಿದುದದಂ ಪೊಗಳ್ವ ಕವಿಯಾವನೋ ೧೮

ವಿವಿಧ ಶಾಸ್ತ್ರಂಗಳನಱಿವ ಬಯಕೆ ಶಿವನುಮಂ
ಶಿವಭಕ್ತರಂ ತಣಿವೊಲರ್ಚಿಸುವ ಬಯಕೆ ಶಿವ
ನವರೇನನಿಚ್ಛೈಸಿದೊಡಮೀವ ಬಯಕೆ ಶಿವಮಹಿಮೆಯಂ ನೆಗಳ್ವ ಬಯಕೆ
ಶಿವವಿರೋಧಿಗಳನೆಱಗಿಪ ಬಯಕೆ ಬಯಕೆಯಾರ್ತರಂ
ತನೆ ಪೊರೆವ ಬಯಕೆ ಶಿವನಲ್ಲಿ ಯೋಗಿಪ ಬಯಕೆ
ಯವಳೊಳೆಸೆದುವು ಸುತಚರಿತ್ರಾರ್ಥವಿಸ್ತರದ ಮೂಲ ಸೂತ್ರಂಗಳಂತೆ ೩೯

ವರ ನಿತ ತೃಪ್ತಂ ಪೊಡೆಯೊಳಿರ್ಪನಾಗಿ ವಾ
ರಿರುಹಲೋಚನೆಗಶನದಿಚ್ಛೆ ತಪ್ಪಿದುದು ಸುರು
ಚಿರ ಚಿತ್‌ಸುಧಾರುಚಿಜ್ಞಂ ಗರ್ಭದೊಳಗಿರ್ಪನಾಗಿ ಪೆಣ್ದಿರನ್ನೆಗೆ
ಅರರೆ ವಸ್ತುಗಳ ರುಚಿಯರುಚಿಯಾದುವು ಶಿರ
ಸ್ಸರಸಿಜಾಂತಃಕಲಾಕಾಂತಿಲೋಲಂ ಬಸಿಱೊ
ಳಿರುತಿರ್ಪನಾಗಿಯಾ ಬೆಳಗು ಪೊಱಪೊಣ್ಮೆ ಕೋಮಲೆಯ ತನು ಬೆಳ್ಪಾದುದು ೪೦

ತರುಣಂ ಶಿವಾನರ್ಪಿತಕ್ಕೊಗಡಿಪಂದವೀ
ಪರಿಯೆಂಬವೋಲಾಕೆಗೋಕರಿಕೆಯಾದುದವ
ನಿರದೆ ಲಿಂಗಪ್ರಸಾದಕ್ಕೆ ಬಾಯಂ ಬಿಡುವನಿಂತೆಂದು ತೋರ್ಪಂದದಿಂ
ಹರಿಣಾಕ್ಷಿಗಾಗುಳಿಕೆಯಾದುದೀಶಾನುಭವ
ಪರವಶದೊಳಾ ಸುತಂ ಮೂರ್ಛೆಸುವನಿಂತೆಂದು
ಧರಿಗೇಷ್ಯದರ್ಥಮಂ ನಟಿಸಿ ತೋರ್ಪಂತೆ ಚಂದ್ರಾನನೆಗೆ ನಿದ್ರೆಯಾಯ್ತು ೪೧

ಹರಭಕ್ತಿಲತೆ ಕವಲ್ವರಿವುದೀತನಿನೆಂದು
ಮರರೆ ದೃಷ್ಟಂದೋರ್ಪವೊಲ್ ಕವಲ್ತವು ಸ್ತ್ರ‍ೀ[^1]
ಚುರವಾಗಿ ಕುರುಳೋಳಿ ಮುಂದೆ ಪರವಾದಿಗಳ ವದನಂಗಳೀ ಮಾಳ್ಕೆಯಿಂ
ಅರರೆ ಕಂದುವವೆಂದು ಕಾಣಿಪಂತಮುಮ ಪೀ
ವರ ಕುಚಾಗ್ರಂ ಕರ್ಪುದಳೆದವೀತನೆ ಜಗಕೆ
ಗುರುವಪ್ಪನೆಂದು ತೋರ್ಪಂತೆ ಗೌರವವಾಗಿ ಮೆಱೆದುದುದರಂ ತನ್ವಿಯಾ ೪೨

---

೧ ತ (ಅ)

ತಾಪತ್ರಯಂಗಳೀ ತನಯನಿಂದಳಿವವೆಂ
ದಾ ಪರಿಯಱಿಪುವಂತೆ ವಳಿಯಡಂಗಿದುವು ಬಳಿ
ಕೀ ಪುತ್ರನೊಗೆಯಲಿಳಿಕೆಯ್ದಿರ್ದ ಶಿವಸಮಯಮುನತಮೆನ್ನಿಪ್ಪುದೆಂದು
ಭಾಪುರೇ ಧರೆಗೆ ತೋರ್ಪಂತೆ ನಾಭೀವಲಯ
ಮಾ ಪವಿತ್ರಾಂಗಿಗುರ್ಬಿದುದಮಲನೊಳಗಿರ್ಪ
ಸೈಪಿಂಗೆ ಪೆರ್ಚಿ ಪೊಡೆ ರೋಮಾಂಚವಾಂತಂತೆ ರೋಮಲತೆ ಕಾಣಿಸಿದುದು ೪೩

ಮಲಹರಾಗಮಚತುಷ್ಪಾದಂಗಳೊಳ್ ಕ್ರಮಂ
ಫಲಿಸೆ ಮೆಲ್ಲನೆ ಶಿಷ್ಯರಂ ನಡೆಯಿಪಂದವೀ
ಕುಲತಿಲಕ ಶಿಶುಗಪ್ಪುದೆಂದದಂ ನಟಿಸಿತೋರ್ಪಂತೆ ನಡೆ ಮೆಲ್ಲನಾಯ್ತು
ವಿಲಸದಲಸಾಪಾಂಗಮಾ ಪಾಂಡುಗಂಡಮು
ಜ್ವಲಿಸುವಾ ನೀಲ ಚೂಚುಕಮಲಘುಜಠರಮೊ
ಪ್ಪೆ ಲತಾಂಗಿಯುದರದೊಳ್ ದಿನದಿನಕೆ ಬಳೆದನಾಗುತಿರೆ ನವಮಾಸವಂದು ೪೪

ಪಲ್ಲವಾಧರೆಯಿಂತೆಸೆಯಲವಳುದರ ಮಧ್ಯ
ದಲ್ಲಿ ಬಿನದಿಸಲಿಚ್ಛೈವಟ್ಟಾತ್ಮಶುದ್ಧಿಯಂ
ಸಲ್ಲಲಿತ ಯಮನಿಯಮಮಾರ್ಗದಿಂ ಮಾಡಿ ಪದ್ಮಾಸನಾಸೀನನಾಗಿ
ಮೆಲ್ಲನಿಡೆಯಿಂ ಪ್ರಾಣವಾಯುವಂ ಪೂರಿಸುತೆ
ಸಲ್ಲೀಲೆಯಿಂದದಂ ರೇಚಿಸುತೆ ಪಿಂಗಲೆಯಿ
ನುಲ್ಲಾಸದಿಂದೆ ತತ್‌ಸೂರ್ಯನಿಂ ಪೂರಿಸುತ್ತಾ ಚಂದ್ರನಿಂದೆ ಮತ್ತಂ ೪೫

ರೇಚಕಮನೆಸಗುತಲ್ಲಲ್ಲಿ ಸೋಹಂಭಾವ
ದಾಚರಣಮಂ ಬಿಡದೆ ಮೇಲೆ ತತ್‌ಪ್ರಾಣದ ಮ
ಹಾಚಾರಮಂ ಕುಂಭಿಸುತೆ ಚತುಃಪೀಠದೊಳ್ ಪ್ರಣವಮಂ ನಿಲಿಸುತೊಲವಿಂ
ಆ ಚಾರು ಕುಂಭಕಾಷ್ಟಕದೊಳಾ ಕೇವಲಮ
ನಾಚರಿಸುತುಂ ಮೂಲಬಂಧಮಂ ಬಲಿದು ತತ್
ಪ್ರಾಚುರ್ಯದಿಂದಪಾನ ಪ್ರಾಣಯೋಗಮಾಗಲ್ಕೆ ಜಠರಾಗ್ನಿಯುಣ್ಮೆ ೪೬

ವರನಾಭಿಚಕ್ರದೇಶಸ್ಥಕುಂಡಲಿಯನತಿ
ಭರದಿನೆಳ್ಚಿಸಿಯೂರ್ಧ್ವಮುಖದಿಂದಮದು ಚಾರು
ತರ ಸುಷುಮ್ನಾಮುಖದಿನೆಯ್ದುತುಂ ಗ್ರಂಥಿತ್ರಯಪ್ರಭೇದಮನೆಸಗೆ
ಪರಮ ಹರ್ಷದಿನಲ್ಲಿ ವಾಯುವಂ ಪೂರಿಸುತೆ
ಕರಮೆ ಕುಂಭಿಸುತಿಂತು ತದ್ದ್ವಾರಶುದ್ಧಿಯಂ
ವಿರಚಿಸಿಯನಂತರಮಧೋಮುಖಾಂಬುಜಗಣಮನೂರ್ಧ್ವಮುಖವಾಗಿ ಮಾಡಿ ೪೭

ವಿವಿಧ ವಿಷಯಂಗಳೊಳ್ ಬಾಹ್ಯೇಂದ್ರಿಯಂಗೂಡಿ
ತವೆ ಚರಿಪ ಚಿತ್ತಮಂ ಪ್ರತ್ಯಾಹರಿಸಿ ಮತ್ತ
ಮವಿಚಲಿತ ಬಿಂದು ನಾದ ವ್ಯೋಮಮಂತ್ರಸದ್ಭುವನ ವಿಗ್ರಹರೂಪದಿಂ
ಸುವಿಲಸಿತವಾದ ಷಡ್ವಸ್ತುವಂ ಷಟ್‌ಚಕ್ರ
ಭುವನೇಜಮಧ್ಯದೊಳ್ ಧ್ಯಾನಿಸಿ ಪದಾದಿ ಮೌ
ಲ್ಯವಸಾನವಾದ ಪಂಚಸ್ಥಲಂಗಳೊಳೀಶರೂಪಮಂ ಸ್ಮರಿಸಿ ಧರಿಸಿ ೪೮

ಅಮಿತತ್ರಿಕೂಟಪ್ರವೇಶದೊಳ್ ಪಂಚಭೂ
ತ ಮಹಾಪ್ರಕಾಶಮಧ್ಯದ ಮಂಡಲತ್ರಯದೊ
ಳಮರ್ದೆಸೆವ ಬಿಂದು ನಾದಾಕಾರ ಲಿಂಗಮಂ ಖೇಚರಿಯಿನೆಯ್ದೆ ಕಂಡು
ಅಮಲ ನಾದಶ್ರವಣಸೌಖ್ಯದಿನಧೋಮುಖ
ತ್ವಮನೆಯ್ದಿದಾ ಶಿರಃಕಮಲಸ್ರವಚ್ಛಿದಮೃ
ತಮನುಂಡ ಲಹರಿಯಿಂದೇನುಮನಱಿಯದೆ ತಲ್ಲಕ್ಷ್ಯದೊಳ್ ಮನವಡಂಗಿ ೪೯

ಪರವಶೀಭೂತನಾಗುತ್ತಮಲ ಶಿಶು ತಾಯು
ದರದೊಳನುಪಮ ಸುಖದೊಳಿರಲಿತ್ತ ಮಾಯಿದೇ
ವರಸರೊಂದಾನುವೊಂದಿರುಳೀಶಯೋಗನಿದ್ರಾಮುದ್ರೆಯಿಂದಿರಲ್ಕೆ
ಕರಮೆಸೆವ ನಸುಗಾವಿ ಮಿಸುಪ ದೋತ್ರಂ ಸಮಂ
ತಿರದೆ ರಂಜಿಪ ಬಹಿರ್ವಾಸಮುದ್ಧೂಳಿಸಿದ
ವರ ಲಸಿತ ಭಸಿತಪ್ರಭಾಂಗಂ ಸಮಸ್ತಸ್ಥಲಸ್ಥಸ್ಫುರತ್ರಿಪುಂಡ್ರಂ ೫೦

ಲಲಿತವಿದ್ರುಮಲತಾವಿಭ್ರಮೋಪಮಜಟಾ
ವಲಿ ಹೊಗರನುಗುಳ್ವ ರುದ್ರಾಕ್ಷಮಾಲಾಜಾಲ
ವಲಘುಮುಕ್ತಾಕ್ಷೇಪಣ ಸ್ವರ್ಣನಿರ್ಮಿತ ಬ್ರಹ್ಮಸೂತ್ರಂ ಕಕ್ಷದ
ಜ್ವಲಿತ ಭಸ್ಮಾಧಾರಘಂಟಿಕೆ ಭುಜಗವೇತ್ರ
ಕಲಿತ ಹಸ್ತಂ ಯೋಗಪಟ್ಟಿಕಾನ್ವಿತಭುಜಂ
ಸುಲಭಪ್ರಸನ್ನವದನಂ ಜಗನ್ಮೋಹನಾಕಾರಂ ಕರದ ಪುಸ್ತಕಂ ೫೧

ತನಗಮರ್ದು ಮೆಱೆಯೆ ನಿರ್ಮಲ ಯತೀಂದ್ರಸ್ವಾಂತ
ವನಜವನಸಂಚರಣಚರರಾಜಹಂಸನೆಂ
ದೆಸಿಪ ಕಾಶೀಪುರಾಧೀಶ್ವರಂ ಋತಿವೇಷಮಂ ಧರಿಸಿ ಕಾರುಣ್ಯದಿಂ
ಮಿಸು ಮಿನುಪ ಪಳುಕಿನೊಳ್ಪಾವುಗೆಗಳಂ ಮೆಟ್ಟಿ
ಯನುಪಮಗತಿಯಿನೆಯ್ದಿ ಮಾಯಿದೇವಾರ್ಯನೊ
ತ್ತಿನೊಳೊಲ್ದು ಕುಳ್ಳಿರ್ದು ವೇತ್ರದಿಂ ಪೊಡದೆಲೆಲೆ ಮಗನೆ ಏಳೇಳೆನಲ್ಕೆ ೫೨

ಆ ಪ್ರವೀಣಂ ಕಣ್ದೆರೆದು ನೋಡಿ ಪೊರೆಯೊಳಿ
ರ್ದಪ್ರತಿಮ ಯೋಗಿಯಂ ಕಂಡು ಪುಳಕಿಸುತೆ ದಂ
ಡಪ್ರಣಾಮಂಗೆಯ್ದು ಭಯಭಕ್ತಿಯಿಂ ನುತಿಸುತಿರೆ ನೋಡಿ ದಂತಕಾಂತಿ
ಸುಪ್ರಸನ್ನಾನನಾಂಬುಜದೊಳ್ ತುಳುಂಕೆ ಮಧು
ರಪ್ರೋಕ್ತಿಗಳಿನೆಂದನೆಲೆ ಮಗನೆ ಕೇಳ ನಿನ
ಗೀ ಪ್ರಹರವೆರಡಱಿಂ ಮೇಲೆ ಕಾರಣಿಕನೊರ್ವಂ ತನಯನುದ್ಭವಿಸುವಂ ೫೩

ಆತನಿಂದೆಮ್ಮ ಶಿವಸಮಯಂ ಪ್ರಬಲಮಪ್ಪು
ದಾತನಿಂ ಸಾಫಲ್ಯಮಪ್ಪುದೀಶ್ವರಕೃತ್ಯ
ವಾತನೆಮ್ಮಾತ್ಮಜನವಂಗೀ ಮಹಾ ದಿವ್ಯಲಿಂಗಮಂ ಧರಿಸೆನುತ್ತೆ
ಓತೊಂದು ಲಿಂಗಮಂ ಮಾಯಿದೇವರ ಕರಾ
ಬ್ಜಾತದಲ್ಲಿತ್ತಿವಂ ಸಕಲರಂತಸ್ತಮೋ
ವ್ರಾತಮಂ ಪರಿಹರಿಪನಂತದಱಿನವಂಗೆ ಕುಡುವುದು ಪದ್ಮರಾಜಾಖ್ಯೆಯಂ ೫೪

ಈ ತೆಱನನಱಿಪಲಿಲ್ಲಿಗೆ ಬಂದೆವಿಂ ಪೋಪೆ
ವೇ ತಮ್ಮ ಯೆಮ್ಮಾಶ್ರಮಕ್ಕೆನೆ ಯತೀಶ ನಿ
ಮ್ಮಾತತಾಶ್ರಮವಾವುದೇನೆಂದು ದೇವರಭಿಧಾನಮೆನೆ ನಸುನಗುತ್ತೆ
ಮಾತೇಂ ಪರಕ್ಷೇತ್ರಕೃತಮಘಂ ಪುಣ್ಯಸ್ಥ
ಲಾತಿಶಯದಿಂ ಕೆಡುಗುಮಲ್ಲಿ ನೆಗಳ್ದಘಮೆ ಕಾ
ಶೀತಟದೊಳಳಿಗುಮೆಂಬುಕ್ತಿ ನುತಕಾಶೀಪುರಂ ನೆನೆವರಘಕುಲಹರಂ ೫೫

ಹರಜಟಾಗ್ರದ ಗಂಗೆಯಲ್ಲಿ ಭಾಗೀರಥೀ
ವರ ನಾಮದಿಂ ಪರಿದಳೊಂದು ಕತದಿಂದದಂ
ಪರಿಕಿಸುವೊಡುರಗಪತಿ ಹರಿಗಿರಿಗಳೆಂಬವರ ಬಾಯ ಪವಣೇ
ಹರಹರಾ ವಿಶ್ವಪತಿಯೇ ಬಲ್ಲನದಱ ಸುಂ
ದರ ಮಹತ್ವಮನಲ್ಲಿ ವಾಸವೆಮಗೆಮ್ಮ ಪೆಸ
ರುರು ವಿಶ್ವನಾಥಯೋಗಿಗಳೆಂದು ನಿನ್ನನೀಕ್ಷಿಸುವೊಡೆಯ್ತಂದೆವೆನುತೆ ೫೬

ತಮ್ಮ ನಿಮ್ಮಯ ಪಿತೃಪಿತಾಮಹರ್ ವಿರತಿಯಿಂ
ತಮ್ಮ ಸುತರಿನಿಸು ಬಳೆವುದುಮಖಿಲ ಸಾಮ್ರಾಜ್ಯ
ಮಮ್ಮಶಕಕೆಣೆಗಂಡು ಬಿಟ್ಟಮಲವೃತ್ತಿಯಿಂ ಶಿವನೊಳೊಡೆವೆರೆದರೆಂದು
ಎಮ್ಮ ಕಡೆ ಸುದ್ದಿಯಾಗಿರ್ಪುದೀಕ್ಷಿಪೊಡೆ ನೀ
ನುಮ್ಮಗನೆ ಜಾವಳನೆ ನಿಜಸುತಂ ನೆಱೆಯಲೊಡ
ನೆಮ್ಮೊರ್ಗೆ ಬಾ ಸುಖದೊಳಿರು ಪೋಪೆವಿನ್ನೆನುತದೃಶ್ಯನಾದಂ ಯತೀಂದ್ರಂ ೫೭

ಅನಿತಱೊಳ್ ಮಾಯಿದೇವಾರ್ಯನೆಣ್ದೆಸೆಯೆನೆ
ಯ್ದೆ ನಿರೀಕ್ಷಿಸುತ್ತೆಲ್ಲಿಯುಂ ಕಾಣದಸಮಾನ
ಮುನಿವರನನಖಿಲ ಮುನಿವರರ ನಿರ್ಮಲಹೃದಯವನಜವನಕಲಹಂಸನಂ
ಮನದೊಳಚ್ಚರಿವಡುತ್ತೆಮ್ಮ ಮೇಗಣ ಕೃಪೆಯಿ
ನನಘ ಕಾಶೀಪುರಾಧೀಶನೆಯ್ತಂದನೆಂ
ದೆನತೆ ಪುಳಕಂಬೆತ್ತು ಕಣ್ಮುಚ್ಚಿ ಪಂಚಾಕ್ಷರೀಪ್ರಸಿತಹೃದಯನಾಗಿ ೫೮

ಆ ಪರಮಮಂತ್ರಪ್ರಭಾಯೋಗದಲ್ಲಿ ಗುರು
ರೂಪದಿಂ ಬಂದು [೧]ಮೈದೋಱಿ[೧] ಬೋಧಿಸಿದ ತದ್
ರೂಪಮಂ ಕಂಡು ಸಂತಸಗಡಲೊಳಾಳ್ದೀ ಜಗದ್ವ್ಯಾಪಕನನೇಕನಂ
ಓಪನನಗಲ್ದಿರ್ಪ ತಾಣವುಂಟೇಯೆನು
ತ್ತೀ ಪರಿಯೊಳಾ ವಿಯೋಗವ್ಯಥೆಯ[೨]ನು[೨]ಳಿದು ಗುರು
ರೂಪ ವಿಶ್ವೇಶನೆಂದೀಶಂಗೆ ಪೆಸರಿತ್ತು ಪಾಡುತಾಡುತ್ತೆ ಮುದದಿಂ ೫೯

ಸಕಲ ಶಿವಭಕ್ತರಂ ಬಱಿಸಿ ಮೂರುತಿಗೊಳಿಸಿ
ಯಕುಟಿಲಂ ಕಾಲೋಚಿತೋದ್ಘಸತ್ಕಾರಮಂ
ಪ್ರಕಟಿಸಿ ಯಥಾನುವೃತ್ತಾಂತಮಂ ಬಿನ್ನವಿಸೆ ಕೇಳ್ದು ತದ್ಭಕ್ತನಿಕರಂ
ವಿಕಸಿತಹೃದಯಕಮಲರಾಗಿಯಾನಂದಿಸುತೆ
ಸುಕೃತಾತ್ಮ ನಿನಗದಾರ್ ಸರಿಯೆಂದು ನುತಿಸುತೀ
ಶಕಥಾಪ್ರಸಂಗದಿಂದಿರಲಿತ್ತ ಮಂಗಲಾಂಬಿಕೆಯಮಲ ಗರ್ಭದಲ್ಲಿ ೬೦

ಶಿವಯೋಗಸುಖಸುಧಾಬ್ಧಿಯೊಳಾಳುತೇಳುತೊ
ಪ್ಪುವ ಸುಖಿಯನೀಶ್ವರಾಜ್ಞಾಶಕ್ತಿ ತಳ್ಕೈಸೆ
ಭುವನೋದ್ಧರಣಶೀಲನಾಗಿ ಮೃಡನಿಂ ಬೀಳ್ಕೊಳುತ್ತೆ ತತ್ಸುಖದ ಸೊರ್ಕಿಂ
ದಿವಿಜಕುಜಮಡಿಯಿಡುವ ತೆಱದಿನಲ್ಲಿಂ ತಳರ್ದು
ಯುವತಿಮಣಿಗಿನಿಸಾದೊಡಂ ನೋವು ತಲೆದೋಱ
ದ ವಿಧಾನದಿಂದೊಗೆದನಯ್ಯಯ್ಯ ಲೋಕೋಪಕಾರಿಗಿದು ನೈಜಮಲ್ತೇ ೬೧

ಕುಮತ ಕೌಶಿಕಕುಲಂ ಕಣ್ಮುಚ್ಚೆ ಭಕ್ತಹೃತ್
ಕಮಲಂ ವಿಕಾಸಿಸೆ ಸಮಸ್ತ ದುರ್ಜನರಹೃ
ತ್ಕುಮುದಂ ಮುಗಿಯೆ ಸುಜನಚಕ್ರಂಗಳೊಡಗೂಡೆ ದುರ್ಭವರಸಂ ಶೋಷಿಸೆ
ಅಮಲ ಸಂವಿತ್ಪ್ರಭೆ ಮುಸುಂಕೆ ಮಂಗಲೆಯ ಗ
ರ್ಭಮಹಾನಭಸ್ಥಲದಿನೀಶಸನ್ನಿಭಶಿಶೂ
ತ್ತಮಸುಚಿದ್ಭಾನು ಉದ್ಭವಿಸಿದನವಿದ್ಯಾತಮೋಜಾಲಮಂ ಸಮಱುತೇ ೬೨

---

೧ ಮೆಯ್ದೋಱಿ (ಬ, ಕ)   ೨ ನ (ಬ, ಕ)

ತರುಣನರ್ಘೋದಯಸಮಯದಲ್ಲಿ ಮಾಯಿದೇ
ವರಸಾರ್ಯನಸಮಸಂತೋಷದಿಂ ತನ್ನ ಹೃತ್
ಸರಸಿರುಹಮಧ್ಯದೊಳ್ ಗುರುರೂಪವಿಶ್ವಪತಿಯುಂ ಸ್ಮರಿಸಿ ಲಿಂಗಶಿಶುಗೆ
ಧರಿಸಿ ಗಳದಲ್ಲಿ ತಲ್ಲಿಂಗಮಂ ಶರಣರ್ಗೆ
ವರ ಭಸಿತ ತಾಂಬೂಲವಸ್ತುಗಳನಿತ್ತು ಸ
ತ್ಕರಿಸುವನಿತರ್ಕೆ ತದ್ಬಾಲಕನ ಬೆಳಕಿನಂಕುರದಂತೆ ಬೆಳಗಾದುದು ೬೩

ಮೂಡುವೆಳೆನೇಸಱಿಂದುಱೆ ನಮಿಸಿಕೊಳ್ವ ಮೆ
ಯ್ಗಾಡಿವಣ್ಣದಿನೇಳ್ಗೆವೆತ್ತು ಥಳಥಳಿಪ ಶಿಶು
ಚೂಡಾಮಣಿಯನೀಕ್ಷಿಸುತ್ತೆ ತಾಯುಂ ತಂದೆಯುಂ ಪರಮ ಸಂತೋಷದಿಂ
ನಾಡೆ ಶಿವಶರಣಚರಣಾಂಬುವಿಂ ಮೆಯ್ದೊಳೆದು
ಕೂಡೆ ತದ್ಭಕ್ತಹಸ್ತಾರ್ಪಿತ ವಿಭೂತಿಯಂ
ಪಾಡುತುಂ ಪಂಚಾಕ್ಷರಿಯಿನಳಿಕಕಿಟ್ಟು ಸರ್ವಾಂಗದೊಳ್ ಸೊಗಸೆ ತಳಿದು ೬೪

ಪರಿದು ದೆಸೆದೆಸೆಯನಳ್ಳಿಱಿಯೆ ಬಹು ವಾದ್ಯರವ
ವರರೆ ಶಿವಭಕ್ತರೆಲ್ಲರ್ ಪರಸೆ ಪರಿಜನಂ
ಪುರಜನಂ ಜಯ ಜಯಯೆನುತ್ತಿರೆ ಸಕಲ ಶರಣಸಂತತಿಯನಾರಾಧಿಸಿ
ಗುರುರೂಪ ವಿಶ್ವಪತಿ ಪೇಳ್ದು ಪೋದಂದದಿಂ
ಪರಮಪಾವನ ತನೂಜಂಗೆ ವಿಮಲಾಂಗಂಗೆ
ಹರಿಸದಿಂ ಪದ್ಮರಸರೆಂದು ಪೆಸರಿಟ್ಟು ಗಣಸಂತತಿಗೆ ತಂದೆಱಗಿಸಿ ೬೫

ನೆರೆದ ಭಕ್ತಾವಳಿಗೆ ನಮಿಸಿ ಬೀಳ್ಕೊಂಡು ತತ್
ಪರಿಜನವನುಚಿತದಿಂದುಪಚರಿಸಿ ಕಳಿಪಿ ಶಂ
ಕರಶಿಶುಗೆ ಪರಮಪ್ರಸಾದದಿಂ ಬಾಯ್ವೆಣ್ಣೆಯಿಟ್ಟು ಮೊಲೆಗೊಟ್ಟಳ್ಕಱಿಂ
ಹರಭಕ್ತಿವಲ್ಲರೀಕಂದನಂ ಕಂದನಂ
ಚಿರದಯಾಸರಸದುಕ್ಕಂದನಂ ಕಂದನಂ
ನಿರುಪಮಜ್ಞಾನಫಲಭರಿತಮಾಕಂಪನಂ ಕಂದನಂ ರಕ್ಷಿಸುತ್ತೆ ೬೬

ನೋಡಿ ನಲಿಯುತ್ತೆ ಮುಂಡಾಡಿ ಪುಳಕಿಸುತೆ ಕೊಂ
ಡಾಡಿ ಪೆರ್ಚುತ್ತೆ ಪಿತೃಮಾತೃಗಳ್ ಪುತ್ರನೊಡ
ಗೂಡಿ ಸುಖಮಿರೆಯಾ ಸುತಂ ಶೈಶವಮನಾಂತು ಮೆಱೆದನದನೇಂ ವರ್ಣಿಪೆಂ
ನಾಡೆ ತಾಂ ತಿಮಿರರಿಪು ಗಡ ತನ್ನ ಕುಡಿಯೊಳೊಡ
ಗೂಡಿದೀ ಕಲುಷಂಗಳೆಯಲಾಱದೆಂದದಱ
ಗಾಡಿಯಂ ನಗುವಂತೆ ಸೊಡರ್ವೆಳಗನೀಕ್ಷಿಸಿ ನಗುವನಮಲ ಚಿತ್ಪ್ರಕಾಶಂ ೬೭

ಅಸಮ ಶಿವಯೋಗಿಯೆನಿಸುವ ಬಾಲಕಂ ತನ್ನೊ
ಳೊಸೆದು ಘೋಷಿಪ ದಿವ್ಯನಾದಮಂ ಕೇಳ್ದು ಸಂ
ತಸದೆ ಮೆಯ್ಮಱೆದನೋ ಎಂಬಂತೆ ಮೊಲೆಯುಣುತ್ತಿರ್ದಂತೆ ಸುಮ್ಮನಿರ್ಪಂ
ಎಸೆವ ತಾಯುದರದಲ್ಲಿರ್ದಂದು ಶಂಭುಯೋ
ಗಸುಖಾಮೃತವನೆಯ್ದೆ ಮೊಗೆಮೊಗೆದು ಪೀರ್ದು ಲೋ
ಭಿಸಿ ಪತ್ತಿದಿನಿದನಾಸ್ವಾದಿಪಿರವಿಂತೆಂಬವೊಲ್ ಬೆರಲನಿರದೆ ಪೀರ್ವಂ ೬೮

ಕುಡುಮಿಂಚುರನ್ನಸಸಿಬಿಸುಗದಿರಪೇರುರಿಗ
ಳೊಡನಾಟದೊಳ್ವಣ್ಣದಂತೆ ಕಣ್ಗೊನೆಯೊಳಿಡಿ
ದಡಸಿ ಪಜ್ಜಳಿಪಮಲ ರುಚಿಗಂಡು ಬೆಱಗಾದವೊಲ್ ಬೆಱಗುವಟ್ಟು ಮೆಱೆವಂ
ಮೃಡಭಕ್ತರರ್ಚನದೊಳಾಂ ನಲಿವೆನಿಂತೆಂದು
ಪೊಡವಿಗಱಿಪುವ ತೆಱದೆ ನಲಿದಾಡುತಿರ್ಪನವ
ರೊಡನೆ ಸೆಣಸುವರನಿಂತೊದೆವೆನೆಂಬಂತೆ ಪದಯುಗವನಾಡಿಸುತುಮಿರ್ಪಂ ೬೯

ಶರಣರಂ ಕಂಡು ಭಯದಿಂದ ಕಂಪಿಸುವೆನೀ
ಪರಿಯೊಳೆಂಬಂತುಟೋರೋರ್ಮೆ ಬೆರ್ಚುವನವರ
ಪರಮಾನುಭವಸುಖದೊಳೊಗೆವವಿಂತುಟು ಸುಖಾಶ್ರುಗಳೆಂದು ತೋರ್ಪಂದದಿಂ
ಇರದೆ ಕಣ್ಬನಿಗಳುಗಲಳ್ವನಾದ್ಯರ ಗೀತ
ದೊರೆಯನಾಲಿಸುವಂತೆ ಜೋಗುಳವನಾಲಿಸುವ
ನರರೆ ದಂಡಪ್ರಣಾಮುವನಭಿನಯಿಸಿ ಬೋಧಿಪಂತೆ ಪೊಡೆಮುಗುಳ್ದುಬೀಳ್ವಂ ೭೦

ಭವಬಾಧೆಗಲಸಿಬಂದಡಿಗೆಱಗಿ ಪೊಗಳ್ವ ಮಾ
ನವರನೀಕ್ಷಿಸಿ ಕರುಣದಿಂದೆ ತಲೆವಿಡಿದೆತ್ತು
ವವೊಲೆಯ್ದೆ ತಲೆಯನೆತ್ತುವನೀಶ್ವರಾರ್ಚನಕೆ ಕುಳಿತಿರ್ಪ ರೀತಿಗಲ್ವ
ನೆವದೆ ಕುಳ್ಳಿರ್ಪನೆಮ್ಮವರ್ಗಾ ಚತುರ್ವಿಧಪ
ದವಿಗಳಡಿಯಾಗಿರ್ಪವೆಂದವಂ ಮೆಟ್ಟಿ ಚರಿ
ಸುವ ಚೆಂದದಂತಂಬೞಕ್ಕಿಯಾಡುವನಮಮ ಜಗದನುಗ್ರಹವಿಗ್ರಹಂ ೭೧

ಹರಸಮಯಮಂ ನಿಲಿಸದಿರೆನಿಂತುಟೆಂದು ತೋ
ರ್ಪಿರವಿನಿಂ ನಿಲ್ವನತ್ಯಮಲ ಷಟ್‌ಸ್ಥಲಮಾರ್ಗ
ದುರುತರಸುವೃತ್ತಿತಪ್ಪದವೊಲಡಿಯಿಡುವೆನಿಂತೆಂದು ದಟ್ಟಡಿಯನಿಡುವಂ
ಪುರಹರಾರ್ಚನದೊಳುಣ್ಮುವ ಗದ್ಗದಸ್ತುತಿಯ
ಪರಿಯಱಿಪುವಂತೆ ತೊದಲಿಸಿನುಡಿವನೀಶಭ
ಕ್ತರಭರಂಗೇಳ್ದವರ ಪೊರೆಗೆ ಪರಿಪರಿದೆಯ್ದುವಂತೆ ಪರಿಪರಿದಾಡುವಂ ೭೨

ಇಂತು ಬಾಲ್ಯಾವಸ್ಥೆಯಂ ಶಿವಾವಸ್ಥೆಯ
ರ್ಥಾಂತರವಿದೆನೆ ನಟಿಸುತಾ ಶೈಶವದ ಲೀಲೆ
ಯಂ ತಡೆಯದೀಶಪೂಜಾಲೀಲೆಯಿಂ ಚರಿಸುತಿನಿಸಿನಿಸು ಬುದ್ಧಿದೋಱೆ
ಕಂತುಹರಶರಣರೊಡನಾಡುತುಂ ಮತಿ ವಿಶಾ
ಲಂ ತನಗೊದವೆ ಶಿವಾನುಭವಲಂಪಟನಾಗು
ತುಂ ತವೆ ಮೆಱೆದನಂತುಟಲ್ತೆ ಹರೆಯದ ಮೇಲೆ ಬರ್ಪುದೇ ಸದ್ವಿವೇಕಂ ೭೩

ಸಲೆ ಲೆಕ್ಕಮುಂ ಬರೆಪಮುಂ ವಾಚಕೌಚಿತ್ಯ
ಕುಲಮುಂ ಷಡಂಗವೇದೌಘ ಮೀಮಾಂಸಾತಿ
ಲಲಿತನೈಯ್ಯಾಯಿಕಪುರಾಣಸದ್ಧರ್ಮಶಾಸ್ತ್ರಂಗಳುಂ ಗಾಂಧರ್ವಮುಂ
ಬಲವದಾಯುರ್ವೇದಮುಂ ಧನುರ್ವೇದಮುಂ
ಸುಲಭಾರ್ಥಶಾಸ್ತ್ರಮುಮಮಲ ಶಿವರಹಸ್ಯಾದಿ
ಕಲೆಗಳೆಲ್ಲಂ ಮುಖೋದ್ಗತವಾದವಾ ಶಿವಪ್ರತಿಮಂಗದೇಂ ಗಹನಮೇ ೭೪

ಅವಿಸರ್ಜನೀಯೋರು ವೃತ್ತನಾಗಖಿಲವ
ರ್ಣವಿತಾನದೊಳ್ ಲೋಪಕೃತ್ಯಮಂ ನೆಗಳದೊ
ಪ್ಪುವನೂಷ್ಮ ತಾನು ಬೋಧಕನಾಗಿ ಶೂನ್ಯಶಬ್ದವನೊರ್ಮೆಯುಂ ನುಡಿಯದೆ
ಅವಿಕಲ್ಪನಾಗಿ ಮೇಣ್‌ಪ್ರತ್ಯಾಹರಿಸದನನು
ಭವಿತ ವಿಗ್ರಹನಾಗೆಸೆವ ಪದ್ಮಣಾರ್ಯಪುಂ
ಗವನನಾ ಪ್ರಥಮ ಶಾಬ್ದಿಕನೆಂದು ವಿದ್ವಜ್ಜನಂ ಪೊಗಳ್ವುದೇಂ ಚಿತ್ರವೋ ೭೫

ಶಿವಶಿವಾ ಬಣ್ಣಿಸುವೆನೇನನಾತನ ಸುಚಿ
ದ್ವ್ಯವಹಾರಮಂ ಮನದೊಳಿನಿಸಾದೊಡಂ ತಂದೆ
ಯಿವನಿವಳ್ ತಾಯೆಯೆಂಬೀ ಪ್ರಬಲ ಮಾಯಾಮಯಾಂಕುರಂ ತಲೆದೋಱದೆ
ಶಿವಶಿವಾ ಭಾವವಿಶ್ವಾಸದಿಂ ಸಂಧ್ಯಾತ್ರ
ಯವಿನುತಿ ನಮಸ್ಕಾರ ಪೂಜನಾದಿಗಳಿಂದೆ
ತವೆ ತುಷ್ಟಿವಡಿಸುತ್ತವರ ಸೇವೆಯೇ ಜೀವಮಾಗಿ ವರ್ತಿಸುವನನಿಶಂ ೭೬

ನಡೆವಲ್ಲಿ ನುಡಿವಲ್ಲಿಯುಡುವಲ್ಲಿಯುಣ್ಬಲ್ಲಿ
ಪೊಡರ್ವ ನಿದ್ರಾವಸ್ಥೆಯಲ್ಲಿ ದರ್ಶನದಲ್ಲಿ
ಪಿಡಿವಲ್ಲಿ ಬಿಡುವಲ್ಲಿ ಕೊಡುವಲ್ಲಿ ಕೊಳ್ವಲ್ಲಿಯಡಸಿದುದ್ಯೋಗದಲ್ಲಿ
ತೊಡುವಲ್ಲಿ ಪೊದೆವಲ್ಲಿ ಸಡಗರದ ಸಮಯದ
ಲ್ಲೊಡನೆ ಕುಳ್ಳಿರ್ಪಲ್ಲಿಯೇಳ್ವಲ್ಲುಳಿದ ಕೃತ್ಯ
ದೆಡೆಯಲ್ಲಿ ಮೃಡಮಂತ್ರವವನನಿಡಿದಡಸಿ ಬಿಡದಿರ್ಪುದೇಂ ವಶಮಾದುದೋ ೭೭

ಶಿವನಿಷ್ಠೆ ಶಿವಪೂಜನಂ ಶಿವೈಕ್ಯರ ಸೇವೆ
ಶಿವವೃತ್ತಿ ಶಿವವೀಕ್ಷಣಂ ಶಿವಕಥಾಪ್ರಸಂ
ಗ ವಿನೋದಗೋಷ್ಠಿ ಶಿವನಿಜಗುಣಸ್ತೋತ್ರಾನುಭಾಷಣಂ ಶಿವವೈಭವಂ
ಶಿವತತ್ವನಿರ್ಣಯವಿಚಾರಂ ಶಿವೋತ್ಸವಂ
ಶಿವಕಥಾವೇಶಂ ಶಿವಾವಧಾನಾದಿಗಳಿ
ವವನೊಳಂಕುರಿಸಿ ಪಲ್ಲವಿಸಿ ಕುಸುಮಿತಮಾಗಿ ಫಲಿಸಿದುವದೇಂ ಶಾಂತಿಯೋ ೭೮

ಪರಮ ಭಕ್ತಿಗೆ ಶಿರವೊದವಿತೊ ಶಾಂತಿಗೆ ಮುಖಂ
ಸ್ಫುರಿಸಿತೋ ಶಿವನ ದಾನಾಭಯದ ಗುಣಯುಗಕೆ
ಕರಮುಮರ್ದುವೋ ಚಿದ್ವಿಲಾಸಕೆರ್ದೆ ರಾಜಿಸಿತೊ ಸುಚರಿತಕೆ ಕಾಲ್ ಬಂದುವೋ
ಇರದಖಿಳ ಲೋಕವನನುಗ್ರಹಿಪ ಶಿವಶಕ್ತಿ
ಗರರೆ ಬೆನ್ನುಂ ಬಸಿರುವೊಗೆದುವೋ ಕಡೆಗಿದೇಂ
ಗಿರಿಶನಿಪ್ಪತ್ತಾಱನೆಯ ಲೀಲೆಯೋ ಎಂದು ವಿಬುಧರ್ ಬಗೆಯಲೊಪ್ಪಿದಂ ೭೯

ಮದಕುಧರವಿದಳನಭಿದುರಪರಮಶಿವಭಕ್ತ
ಪದಶತದಳಾದಭ್ರಮಕರಂದಲೀಲಾಪ್ರ
ಮದಪರವಶೀಭೂತಮಧುಕರೋಪಮಪದ್ಮಣಾಂಕಪ್ರಣೀತಮಾಗಿ
ಸದಮಲಾಖಿಲಶಾಸ್ತ್ರಸಾರವೆಂದೆನಿಸುವ
ಭ್ಯುದಯಕರ ಪದ್ಮರಾಜಪುರಾಣಕಥೆಯೊಳಿಂ
ತಿದು ಗುರುಪರಂಪರಾಚರಿತಂ ಗುರೂದ್ಭವಂ ರಂಜಿಪೆರಡನೆಯ ಸಂಧಿ ೮೦

ಈಶಾಪರಾವತಾರನ ವಿಬುಧನುತನ ಭವ
ಪಾಶನಾಶನ ಕೆಱೆಯ ಪದ್ಮಣಾರ್ಯನ ಲಸತ್
ಶ್ರೀ ಶಿವಾದ್ವೈತ ಸಾಕಾರ ಸಿದ್ಧಾಂತಪ್ರತಿಷ್ಠಾಪನಾಚಾರ್ಯನ
ಈ ಶುದ್ಧಚರಿತಮಂ ತಿಳಿಪಿದರ್ಗೋದಿದ
ರ್ಗಾಶೆಯಿಂ ಕೇಳ್ದರ್ಗೆ ಭುಕ್ತಿಮುಕ್ತಿಗಳಂ ಮ
ಹಾ ಶುಭಂಗಳನಾಯುಮಂ ಕೊಟ್ಟು ಗುರುರೂಪವಿಶ್ವನಾಥಂ ರಕ್ಷಿಪಂ ೮೧

ಅಂತು ಸಂಧಿ ೨ ಕ್ಕಂ ಪದಂಗಳು ೧೩೪ ಕ್ಕಂ
ಮಂಗಳಮಗಮತ್

ಶ್ರೀ

ಮೂರನೆಯ ಸಂಧಿ

ಸೂಚನೆ : ಇರದೆ ಕಾಶಿಗೆ ಮಾಯಿದೇವಾರ್ಯರೆಯ್ದಿ ಪುರ
ಹರನೊಳ್ ಬೆರಸಿ ದೋರ್[೧]ಸರಧಿ[೧]ಯುಂ ಪೊಕ್ಕು ಪ
ದ್ಮರಸನಾ ಗೌರಪದಣಾಯಕರ ಸುತೆಯುಂ ವಿವಾಹವಾಗೊಪ್ಪುತಿರ್ದಂ

ಸುಮಹದ್ವಿರೋಚನ ವಿರೋಚನ ವಿರೋಚನಾ
ಕ್ಷಮನೋಜಸಂಹನನ ಸಂಹನನ ಸಂಹನನ
ರಮಣೀಯ ತೇಜೋಜಿತಾರ್ಕಾತಿ ಬಲ ಬಲ ಬಲಾಹಕಾಪನಯವಾತಾ
ಹಿಮಗಿರಿಸುತಾಸನಾಥಾನಾಥನಾಥ ಸಂ
ಯಮಿ ರಾಜರಾಜರಾಜಪ್ರಿಯ ವಿರಿಂಚೀಂದ್ರ
ಕಮಲಾಂಬಕಾಂಬಕಾಂಬಕ ಹರ್ಷಕರ ದಿವ್ಯರೂಪ ಜಯ ವಿಶ್ವನಾಥಾ ೧

ಈ ತೆಱದೊಳಖಿಲ ಭಕ್ತರ್ ಬಣ್ಣಿಪಂತೆ ಸುವಿ
ನೀತಿಯಿಂ ವೀರಮಾಹೇಶ್ವರಾಚಾರವಿ
ಖ್ಯಾತನಾಗಿರ್ಪ ಸುಕುಮಾರಚೂಡಾಮಣಿಗೆ ಶೈಶವಂ ಕ್ರಮದೆ ಜಾಱಿ
ಓತೆಸೆವ ಕೋಮಲಾಂಗದ ನಳನಳಿಕೆ ಲಲ್ಲೆ
ವಾತಿನ ಸೊಗಸು ನೋಟದಿಂಪು ನಗೆಮೊಗದ ರಸ
ವಾತುರಿಪ ಮನದ ಬರ್ದುಗಳವನ ಪೊಸಜವ್ವನಮನದೇಂ ಸೂಚಿಸಿದುವೋ ೨

---

೧ ಶರಧಿ (ಅ)

ಕುಂತಳದ ಕಾಂತಿ ನೇತ್ರಾಂತರದ ಕಾಂತಿ ಸ
ದ್ದಂತಪಂಙ್ತಿಯ ಕಾಂತಿ ವದನಾಂಬುಜದ ದಿವ್ಯ
ಕಾಂತಿ ನವ ಕಂಬುಕಂಠದ ಕಾಂತಿ ನು೧ಣ್ದೋ೧ಳ ಕಾಂತಿ ಕರತಳದ ಕಾಂತಿ
ತಾಂ ತೊಳಪುರಸ್ಥಲದ ಕಾಂತಿ ವೃತ್ತೋರುಗಳ
ಕಾಂತಿ ಜಂಘಾಕಾಂತಿ ಬೆಳರ್ಗೆಂಪಿನುಗುರ್ವೆರಲ
ಕಾಂತಿಗಳ್ ತಿಂತಿಣಿಸಿ ಘನಕಾಂತಿಮಯವಾಗಿ ಕಣ್ಗೆಂ ಬೆಡಂಗಾದನೋ ೩

ಈ ಪರಿಯೊಳೆಸೆವ ಪೊಸ ಜವ್ವನಿಗನಾದ ಕುಲ
ದೀಪಕನನಮಲಚಿದ್ರೂಪಕನನೊಲ್ದು ಕರು
ಣಾಪಾಂಗದಿಂ ನಿರೀಕ್ಷಿಸಿ ಸಮುದಿತಾಂತಃಕರಣನಾಗಿ ಮಾಯಿದೇವಂ
ಬಾ ಪರಮಪುರುಷ ನಿನಗಿನ್ನಿತ್ತೆ ಶಂಭುವ ನಿ
ರೂಪದಿಂ ಕೆಲವು ಭೋಗಂಗಳೊದಗುವುವವಂ
ನೈಪಿಂಗೆ ವಿಘ್ನಮೆಂದುಳಿಯದಂಗೀಕರಿಸೆನುತ್ತೆ ಪದ್ಮರಸಾರ್ಯರಂ ೪

ಮತ್ತಮಿಂತೆಂದು ಬೋಧಿಸಿದನೆಲೆ ಮಗನೆ ಕೇ
ಳುತ್ತಮ ಶಿವಜ್ಞಾನಿ ಪಿಡಿದಡೇನವು ಶಿವನಿ
ಮಿತ್ತಮಲ್ಲದೆ ಮಾಯಿಕಂಗಳೆನಿಪವೇ ಹೇಮವಂ ಭಾಮೆಯುಂ ಭೂಮಿಯುಂ
ಪೊತ್ತಲ್ಲದೆಂತು ದಾಸೋಹಮುತ್ಕರ್ಷಿಪುದು
ದಾತ್ತ ಬಸವೇಶ್ವರಾದಿಗಳವಂ ಗ್ರಹಿಸಿ ತದ್
ವೃತ್ತಿಯಿಂ ವೀರಶೈವಪ್ರತಿಷ್ಠಾಚಾರ್ಯರೆನಿಸಿ ಶಿವನೊಳ್ ಬೆರೆಯರೇ ೫

ಕಾಮಿ ನಿಷ್ಕಾಮಿ ದುರ್ವ್ಯಸನಿ ಸದ್ವ್ಯಸನಿ ದಲ್
ಸೀಮಂ ವಿಗತಸೀಮನುರು ರತಂ ವಿರತನೆಂ
ಬೀ ಮಾತಿನವನೆ ಶಿವಮುಖಕಿತ್ತು ಭೋಗಿಸಲ್ಬಲ್ಲ ಸುಖಿ ಗಿರಿಜಾವರಂ
ಶ್ರೀ ಮಲ್ಹಣನನುಳಿದು ಮೂರ್ಖನೈನಾರನಲೆ
ದಾ ಮಹಾಚೋಳನಂ ಜಱಿದು ಕನ್ನದ ಬೊಮ್ಮ
ಧೀಮಣಿಯನೊಲ್ಲದುಳಿದರನೊಲ್ದನೆಯವರ್ ಸಿಲ್ಕಿಯುಂ ಸಿಲ್ಕಿದವರೇ ೬

೧ ಳ್ದೋ (ಬ, ಕ)

ತಾಳ ಲಯ ಸಂಗೀತವಾದ್ಯಾದಿಯಾಗೆಸೆವ
ಮೇಳದನುಗುಣಕೆ ನರ್ತಿಸುತಿರ್ದುವುಂ ಸುನಟಿ
ಮೌಳಿಸ್ಥಕುಂಭಪರಿರಕ್ಷಣಂಗೆಯ್ವಳೆಂತಂತೆ ನಿಶ್ಚಲಶಿವೈಕ್ಯಂ
ಪೇಳಲೇಂ ಸಂಸಾರವೈಷಯಿಕ ಘನರಸದ
ಕೇಳಿಯೊಳಗಿರ್ದುವುಂ ಶಿವಯೋಗಚೇತೋವಿ
ಶಾಲತೆಯನುಳಿಯದೊಂದಿರ್ದೊಲೇಂ ಕಮಲದಳಗತಜಲದವೊಲ್ ತೊಳಗುವಂ ೭

ಅಂತಱಿಂದೆಮ್ಮ ಶರಣರ್ಗೆ ಸಂಸಾರಸಂ
ಗಂ ತಿಳಿಯೆ ಬಂಧವಲ್ತಲ್ತು ಕೇಳನಘ ನೀ
ನುಂ ತಡೆಯುದೊದವಿದೇಷ್ಯ[೧]ದ್ಭೋ[೧]ಗಮಂ ಗ್ರಹಿಸಿ ಶಿವನವರನಾರಾಧಿಸಿ
ಕಂತುಹರವೇಷಸ್ಥರಂ ಹರನೆನುತೆ ನಂಬಿ
ಸಂತತಮವರ ಗೋಷ್ಠಿಯಂ ಬಿಡದೆ ಪರವಾದ
ಮಂ ತಿರಸ್ಕರಿಸುತೆ ಶಿವಾಧಿಕ್ಯಮಂ ಪ್ರತಿಷ್ಠಿಸುತೆ ನಿಶ್ಚಲಚಿತ್ತದಿಂ ೮

ಕಾಡುವಂ ಶಿವನಂತದರ್ಕೆ ತೆಕ್ಕದೆ ಭಕ್ತ
ರಾಡಿದುಕ್ತಿಯನೆ ಮನ್ನಿಸುತೆ ಭಕ್ತಿಯೆನಿಪ್ಪ
ಜೋಡುದೊಟ್ಟಸಮಕ್ರಿಯಾಫಲಕಮಂ ಪಿಡಿದು ಸುಜ್ಞಾನಖಡ್ಗದಿಂದೆ
ಪಾಡೆಸೆಯೆ ವಿಷಮಮಾಯಾಸಮರಮಂ ಗೆಲ್ವ
ಗಾಡಿಯಂ ಬಿಡದಿರ್ ಮೃಡಂ ಕರುಣಿಪಂ ಪಲವ
ನಾಡಲೇಂ ನಿನಗಿದು ಜಗದ್ಧಿತಾರ್ಥವ್ಯಕ್ತಿಯಲ್ಲದೇಂ ಕರ್ಮತನುವೇ ೯

ಎಂದಿಂತು ಭಾವಿಕಾರ್ಯಮನಮಲ ಚಿದ್‌ದೃಷ್ಟಿ
ಯಿಂದಱಿದು ತಿಳಿದು ಮುಂಡಾಡಿ ಕೊಂಡಾಡಿ ಕೇಳ್
ಕಂದ ನಿನ್ನುದಯಸಮಯದೊಳೆಮ್ಮ ಗುರುರೂಪವಿಶ್ವಪತಿ ಯತಿವೇಷದಿಂ
ಬಂದು ನಿನಗೀ ದಿವ್ಯಲಿಂಗಮಂ ಕೊಟ್ಟೆಮ್ಮ
ವಂ ದಿಟಂ ನೀಂ ನೆಱೆಯೆ ತನ್ನೆಡೆಗೆ ಬರ್ಪುದೆಂ
ದಂದು ನಿರವಿಸಿದನದಱಿಂದೆಮಗೆ ಕಾಶೀಪ್ರಯಾಣಮಾವಶ್ಯಕಮೆನೆ ೧೦

---

೧ ಯೋ

ಕೇಳ್ದು ತದ್ಬೋಧಮಂ ಮನದಲ್ಲಿ ದೃಢಮಾಗಿ
ತಾಳ್ದು ಬಳಿಕಾ ವಿಯೋಗವ್ಯಥೆಗಳಲ್ಕಡಲೊ
ಳಾಳ್ದು ಹಾ! ಹಾ! ದೇಶಿಕೇಂದ್ರ ದೇಶಿಕಕುಲೋತ್ತಮ ದೇಶಿಕಾಗ್ರಗಣ್ಯ
ಆಳ್ದವನೆ ಕಣ್ಗೆ ಗತಿಯೇ ಮತಿಯೆ ನೀವಿಂತು
ಪೇಳ್ದಗಲಲಾನೆಂತುಳಿವೆನೆಂದು ಚರಣದೊಳ್
ಬೀಳ್ದೊರಲ್ವಾತ್ಮಜನುಮಂ ಪತ್ನಿಯಂ ಸಕಲ ಭಕ್ತರಂ ತೆಗೆದೆತ್ತುತೆ ೧೧

ಸತ್ಕರಿಸಿ ಮೆಯ್ದಡವಿ ಕಣ್ಣೀರ್ಗಳಂ ತೊಡೆದು
ಚಿತ್ಕಾಯಮಾಯಿದೇವಾರ್ಯನೀಶ್ವರನ ಸಾ
ಕ್ಷಾತ್ಕಾರಯೋಗಮಂ ತಿಳಿಪಿ ಪರಮಾನಂದಸೌಖ್ಯಮಂ ಕಾಣಿಸುತ್ತೆ
ಹೃತ್ಕಂಪಮಂ ಪರಿಹರಿಸಿ ಸುತಾದ್ಯರ್ಗೆ ಸುಮ
ಹತ್ಕರುಣಮಂ ಬೀಱಿ ಬೀಳ್ಕೊಟ್ಟು ಮನದೊಳ್ ಜ
ಗತ್ಕರ್ತೃಶಂಭುವಂ ಜಾನಿಸುತೆ ಕಾಶೀಪುರಾಭಿಮುಖಮಾಗಿ ತಳರ್ದು ೧೨

ಕತಿಪಯದಿನಂಗಳಿಂ ಮೇಲೆ ಕಾಶೀಪುರಮ
ನತಿಹರ್ಷದಿಂದೆಯ್ದಿ ಪರಮಸದ್ಗುರುವಿಶ್ವ
ಪತಿಯಾಲಯಂಬೊಕ್ಕು ಕೈಗಳಂ ಮುಗಿದು ನುತಿಸುತಿರೆ ತದ್ಯತಿವೇಷದಿಂ
ಶಿತಿಗಳಂ ಲಿಂಗದಿಂದಿದಿರ್ವಂದು ಬಾ ಸುತಯೆ
ನುತೆ ತೆಗೆದು ಬಿಗಿಯಪ್ಪಿ ತೆಱೆಯೆ ತನ್ನುದರಮಂ
ಕ್ಷಿತಿಜನಮುಘೇಯುಘೇಯೆನೆ ಪೊಕ್ಕು ಮಾಯಿದೇವಂ ಮುಕ್ತಿಸುಖದೊಳೆಸೆದಂ ೧೩

ಇತ್ತ ನಿಜ ಮಾತೃಸಹಿತಂ ಪದ್ಮರಸದೇಶಿ
ಕೋತ್ತಮಂ ಸಕಲಭಕ್ತರ್ವೆರಸಿ ಪೋಗಿ ಸಮು
ದಾತ್ತ ಶಿವತತ್ವ ಸಾಕ್ಷಾತ್ ಸಚ್ಚಿದಮಲ ದಿವ್ಯಾನುಭವಸೌಖ್ಯದಿಂದೆ
ಚಿತ್ತದೊಳ್ ಗುರುಕುಲಾಗ್ರಣಿಯ ವಿರಹಾವಸ್ಥೆ
ಯತ್ತಣಿಂದಾದ ನಿರ್ಮಾಯಿಕಕ್ಷತಮನುಳಿ
ದುತ್ತುಂಗ ವೃತ್ತಿಯಿಂದಿರಲಿತ್ತ ಹೊಯಿಸಳ ವಿಷಯಮೆಸೆವುದೆಂತೆಂದೆನೆ ೧೪

ಸಳನೆಂಬ ಯದುಕುಲಜನೊರ್ವಂ ತನಗೆ ಭಾಗ್ಯ
ಮಿಳಿಕೆಯ್ಯೆ ದೇಶಾಂತರಪ್ರಾಪ್ತನಾಗಿ ಬರು
ತಳವಿನಿಂ ತಜ್ಜನಪದದ ಕೋಪಣಪುರದ ದುರ್ಗಾಂಬಿಕೆಯ ವರಭವನಮಂ
ಜಳಜಸಖನಸ್ತಾದ್ರಿಗೆಯ್ದುತಿರೆ ಕಂಡು ಬಂ
ದೊಳಪುಗುತ್ತಲ್ಲಿಯೋರ್ವಂ ಯತೀಂದ್ರಂ ವಿನಿ
ಶ್ಚಳತಪದೊಳಿರೆ ನೋಡಿ ನಮಿಸಿ ನೀನಾರೆನೆ ಪೆಸರನುಸುರ್ದು ಕುಳ್ಳಿರ್ದಿರೆ ೧೫

ಬಳಸಿಯಾ ಸ್ಥಳದ ನಾಲ್ಕೈದು ಗಾವುದದಳತೆ
ಯೊಳಗಾರುಮಂ ಪೊರ್ದಲೀಯದಱೆಯಟ್ಟಿ ತಿಂ
ದಳವುಮಿಕ್ಕಿರ್ದು ದುಷ್ಟವ್ಯಾಘ್ರನುಗ್ರದಿಂ ಘೂರ್ಮಿಸುತ್ತಲ್ಲಿಗೆಯ್ದಿ
ನಿಳಯಮಂ ಪೊಕ್ಕಿವರನಡಸಲವ್ವಳಿಸಲೊಡ
ನಳವಿಯೊಳ್ ಕಂಡು ಯತಿ ಕಯ್ಯ ಸೆಳೆಗೊಟ್ಟು ಹೊಯ್
ಸಳ ಯೆನೆ ಧರಣಿಯದಿರಲಾರ್ದು ಪೊಯ್ದಾ ಪುಲಿಯ ಕೊಂದನಿನ್ನೇಂ ಧೀರನೋ ೧೬

ಅಸಮಬಳಸಳನ ಧೈರ್ಯಕೆ ಮೆಚ್ಚಿ ಯತಿಯಿವನಿ
ನೊಸೆದೀ ಧರೆಯನಾಳಿಸುವೆನೆಂದು ಬಗೆದು ತ
ನ್ನಸಿತಾಳಪತ್ರಮಂ ಕೊಟ್ಟಿದು ಸಕಲ ಸಿದ್ಧಿಕರಮೆಂದದಱ ಮಂತ್ರಮಂ
ಬೆಸಸಿ ಕರುಣಂಗೆಯ್ದು ಕಳಿಪೆಯಾತಂ ಬಂದು
ಮಸಕದಿಂ ದಿಗ್ವಿಜಯಿಯಾಗಿ ನಿಜ ಸಾಮರ್ಥ್ಯ
ವೆಸೆಯಲದನಾಳ್ದನಾ ಕತದಿನಂದಿಂದೆ ಹೊಯ್ಸಳದೇಶಮೆನಿಸಿ ಮೆಱೆಗುಂ ೧೭

ಪಲವೇಂ ಸಕಲಜನಾನಂದನಂ ನಂದನಂ
ಜಲಜಸೌಗಂಧಿಕಕುಮುದಸಂಕುಳಂ ಕೊಳಂ
ವಿಲಸಿತ ಚರದ್ಯೋಗಿಪಾವನಂ ವನವಂಚೆವಿಂಡುಗಳ ಬಿನದಂ ನದಂ
ಸಲೆ ಸಿರಿಯ ಹೊಯ್ಕಯ್ವಲಂ ಕೆಯ್ವೊಲಂ ರತ್ನ
ಕಲಿತ ಲುಲಿತಸಗೋಪುರಂ ಪುರಮನಾಕುಲೋ
ಜ್ವಲಭಾಗ್ಯಸಂಗ್ರಹಂ ಗೃಹಮಖಿಲಸುಖಭಾಜನಂ ಜನಂ ತದ್ದೇಶದ ೧೮

ಆರುಮುಱಿಯದ ತೆಱದಿನೆಚ್ಚು ನೋಯಿಪ ಮಾರ
ಚೋರನಟ್ಟುಳಿಯಲ್ಲದಟ್ಟುಳಿಗಳಿಲ್ಲಘದೊ
ಛೋರಂತೆ ಭೀತಿಯಲ್ಲದೆ ಭೀತಿಯಿಲ್ಲ ತಟಿನೀ ಮಹಾಪೂರದಲ್ಲಿ
ಮೇರೆದಪ್ಪುವುದದಲ್ಲದೆ ಮೇರೆದಪ್ಪುವಾ
ಚಾರವಿಲ್ಲಬಲೆಯರ ಮಧ್ಯದೊಳ್ ಮಿಥ್ಯಾವಿ
ಹಾರವಲ್ಲದೆ ವಲಂ ಮಿಥ್ಯಾವಿಹಾರವಿಲ್ಲೆನಲದಱ ಪೆಂಪೆಂತುಟೋ ೧೯

ಆ ದೇಶಮಧ್ಯಪ್ರದೇಶದೊಳ್ ಭಾವಿಪೊಡೆ
ಭೂದೇವತೆಯ ಶಿರೋರತ್ನಮೋ ಬ್ರಹ್ಮನೀ
ಮೇದಿನಿಯೊಳಖಿಳ ಪುರಮೆಸಗೆ ದಿವದಿಂ ತಂದ ವರ ಮಾತೃಕಾನಗರಮೋ
ಶ್ರೀ ದಿವ್ಯಲಕ್ಷ್ಮೀವಿಲಾಸಲೀಲಾಭವನ
ಮೋ ದಿಟಕೆ ಚೆಲ್ವಿನ ಕರಂಡಮೋಯೆನೆ ಸುಪ್ರ
ಮೋದದಿನೆಸೆವುದು ದೋರಸಮುದ್ರವೆಂಬುರುಪುರಂ ಪೊರ್ದಿದರ ಕಡವರಂ ೨೦

ಎತ್ತುಗಲ್ ಪಿರಿಯಡೆಂಕಣಿ ಸೂಸುಡೆಂಕಣಿ ಸ
ಮುತ್ತುಂಗ ಲಸಿತ ವಿಕಟಾಟ್ಟಾಲವಮರ್ದ ಕೈ
ಗತ್ತರಿಯುರುಳ್ಗಣ್ಣಿ ಬಲ್ಗುಂಡು ೧ಪೆರ್ದೊಲೆ ಕೊರಡು ಕಾಯ್ದ ಮಣಲರಾಸಿ
ಮತ್ತೆ ಬಂಡಿಯ ಗಾಲಿಪೆಟಲುಪ್ಪುಗುಂಡುದಸಿ
ಬಿತ್ತರಿಸಲೇಂ ಮರುಳ ಕಯ್ಯುವಣೆ ಇಡುಗಲ್ಲ
ಮೊತ್ತವಾ ಪುರದೊಳಿಲ್ಲೀ ನುಡಿಯೆ ಪೇಳದೇ ತನ್ನೃಪನ ಸಾಮರ್ಥ್ಯಮಂ ೨೧

ಕವಿಗಳ ಮಹಾ ಗಮಕಿಗಳ ವಾದಿಗಳ ವಾಗ್ಮಿ
ನಿವಹದ ಕಲಾವಿದರ ಸಚಿವರ ವಿವೇಕಿಗಳ
ಸವಿನಯಸ್ಥರ ಪುರೋಹಿತರ ತಾಂತ್ರಿಕರ ಮಾಂತ್ರಿಕರ ಬಹು ಶಾಸ್ತ್ರಜ್ಞರ
ತವೆ ದಂಡನಾಥ ಮಂಡಳಿಕ ಸಾಮಂತರಾ
ಜ ವಣಿಗ್ವರಾಖಿಲ ನಿಯೋಗಾಶ್ವಗಜವಾಹ
ಕ ವಿಶಿಷ್ಟ ಧನಿಕಭಟಗಣಿಕಾದಿಗಳ ಗೃಹಂಗಳಿನದೇಂ ಪುರಮೆಸೆದುದೋ ೨೨

---

೧ ಪೆ: (ಅ)

ಆ ಪುರಸ್ತ್ರೀಯ ಮುಖಕಿಟ್ಟ[೧]ಬೊಟ್ಟೋ ಯೆನಿಸಿ
ಭೂಪಾಲಗೇಹಂ ವಿರಾಜಿಸುವುದದಱೊಳರಿ
ಭೂಪಾಲದರ್ಪಶೂರ್ಪಕದರ್ಪ ಕಂದರ್ಪಕೋಪಮಾಪೂರ್ವರೂಪಂ
ರೂಪಿಸುವೊಡಱಿದೆನಿಸುವಮಲತರ ಕೀರ್ತಿ ಕೀ
ರ್ತ್ಯಾಪಗಾಪೂರ್ಣಜಲವಿಲಸದಾಂದೋಲಕೇ
ಲೀ ಪರಮರಾಜಹಂಸಂ ರಾಜಹಂಸಂ ನೃಸಿಂಹಬಲ್ಲಾಳರಾಯಂ ೨೩

ಶ್ರೀ ವಿಪುಳ ನರಸಿಂಹಬಲ್ಲಾಳ ಭೂಮಿಪಂ
ಕೋವಿದಂ ಯುವರಾಜಪಟ್ಟಾನ್ವಿತಂ ಬಿಟ್ಟಿ
ದೇವರಾಯನೆನಿಪ್ಪ ಪುತ್ರಸಹಿತಂ ಯಾದವಾನ್ವಯೋದ್ಧರಣನಾದ
ಆ ವೀರಸಳನೃಪಪರಂಪರಾಸಿಂಹಾಸ
ನಾವಲಂಬಂ ಚತುಶ್ಶರಧಿಮುದ್ರಾಮುದ್ರಿ
ತಾವನಿತಳಾವೃತಪ್ರಬಲಪ್ರತಾಪಪ್ರಭಾವಿಭವದಿಂದೊಪ್ಪಿದಂ ೨೪

ಆ ನರಾಧಿಪಶೇಖರಂಗೆ ದಕ್ಷಿಣಭುಜ
ಸ್ಥಾನನೆನೆ ನೆಗಳ್ದ ಗೌರಪದಣಾಯಕನೆಂಬ
ನೂನಮಂತ್ರೀಶ್ವರಂ ಕಮ್ಮೆಕುಲವಲ್ಲಭಂ ಶಿವಭಕ್ತಿಪಾರಂಗತಂ
ನಾನಾ ಕಲಾವಿದಂ ನರಸಿಂಹಬಲ್ಲಾಳ
ಭೂನಾಯಕನ ರಾಜ್ಯಭಾರವೆಲ್ಲವನಾಂತು
ತಾನಿಳಾತಳವನುದ್ಧರಿಸುತುಂ ನಿಷ್ಕಂಟಕತ್ವದಿಂ ಸುಖಮಿರುತಿರೆ ೨೫

ಅಂತೆಸೆವ ಪರಮಶಿವಭಕ್ತನುದರದೊಳುಮಾ
ಕಾಂತನ ನಿರೂಪದಿಂದಂಬಿಕಾಸಾಮರ್ಥ್ಯ
ಸಂತಾನವಂಗನಾರೂಪದಿಂದೊಗೆದು ಮಾದೇವಿಯರೆನಿಪ್ಪ ಪೆಸರಂ
ಆಂತು ಬಾಲ್ಯಾವಸ್ಥೆಯಂ ಕಳೆದು ಪೊಸಜವ್ವ
ನಂ ತನಗೆ ಸಾರೆ ನಳನಳಿಸಿ ಬಳೆವುತ್ತಿರ್ದ
ಳಂತವಳ ರೂಪ ಲಾವಣ್ಯಾತಿಶಯಮನಾನಿಂತೆಂದದೆಂತು ಪೊಗಳ್ವೆಂ ೨೬

---

೧ ಬ (ಅ)

ಅಡಿದಳದ ಬಲ್ಸೊಂಪು ಕೆಂದಳಿರ ಪೆಂಪನವ
ಗಡಿಸಿ ಮರನೇಱಿಸೆ ಪೊದಳ್ದುಗುರ್ ಶುಕ್ತಿಜದ
ಬೆಡಗಿಂಗೆ ಭಂಗಮಂ ಸಂ೧ಗೊ೧ಳಿಸೆ ಪಾದಾಗ್ರವಾಮೆಚೆಲ್ವಿಂದಾಮೆಯಂ
ಜಡಿದು ನೀರೊಳ್ನಿರಪೆ ಜಂಘೆಯಲರ್ಗಣೆಯಮರ್ದ
ನಿಡುಡೊಣೆಯನೆಯ್ದೆ ಮೆಯ್ಕೆಟ್ಟವನ ಬೆಂಬಳಿಗೆ
ಕೆಡಪೆ ನುಣ್ದೊಡೆ ಬಾಳೆಯೋಳಿಯಂ ತಲೆವಾಗಿಸಲ್ ಸೊಗಸನೇ ವಣ್ಣಿಪೆಂ ೨೭

ಬೆಟ್ಟಂಗೆ ಬೆಟ್ಟಿತ್ತನೆಸಗೆ ಪೃಥುಲಶ್ರೋಣಿ
ತೊಟ್ಟನೆ ತೊಳಲ್ವಂತೆ ಮಾಡೆ ಪೊರ್ಕುಳ್ ಸುಳಿಯ
ನಟ್ಟಹಾಸಂಗೆಯ್ಯೆ ಕಿಱುದೆರೆಯ ಮುಱುಕಮಂ ತ್ರಿವಳಿ ಸಂದೇಹಮಧ್ಯಂ
ನೆಟ್ಟನೊರ್ಪಿಡಿಯೆಂಬ ನುಡಿಗೆ ಪಿಡಿವಗೆಯಾಗೆ
ದಿಟ್ಟಿ ತಾಗುಗುಮೆಂದು ಕತ್ತುರಿಯ ಗೆರೆಯನಱೆ
ಯಟ್ಟಿ ಪೊಸ ಬಾಸೆ ಪೊಂಗಳಸಕ್ಕೆ ವಿಳಸಮಂ ಬರೆಯೆ ನೆಲೆಮೊಲೆಗಳಿಂದಂ ೨೮

ಲಲಿತಕರತಲವೊಂದಿ ಮೆಱೆವ ನಳಿತೋಳರುಣ
ಜಲಜವಾಂತೆಸೆವ ಬಿಸವಲ್ಲಿಯಂ ನೀರ್ವೊಗಿಸೆ
ಸಲೆ ಕೊರಲ್ ಜಡಜಾತಶಂಖಮಂ ಝುಂಕಿಸೆ ಸುವಿದ್ರುಮುವನಮೃತಾಧರಂ
ತಲೆಯೆತ್ತದಂತೆಸಗೆ ಶತಕೋಟಿ ತಾನೆನು
ತ್ತಲೆಯೆ ಸುಲಿಪಲ್ ವಜ್ರಮಂ ಕದಪು ಕೈಪಿಡಿಯ
ನೆಲೆ ನೀರಸಂಗೆಯ್ಯೆ ನಾಸಿಕಂ ಚಂಪಕಮನಾಶ್ರಿತಧ್ವಂಸಿಯೆನಿಸೆ ೨೯

ಚಂಚಲಾಕ್ಷಿಗಳ ಡಾಳಂ ಬಳ್ಳಿಮಿಂಚಂ ಪ
ಳಂಚಲೆಯೆ ಕಿವಿಗಳಾ ಶ್ರೀಕಾರದಾಕಾರ
ಮಂ ಚುನ್ನವಾಡೆ ಕುಡುಪುರ್ವು ಕರ್ವಿನ ಬಿಲ್ಲ ಬಿಂಕಮಂ ಕೊಂಕುಗೆಯ್ಯೆ
ಮಿಂಚುನೊಸಲೊಳ್ ತೊಳಗುವೆಳೆವೆಱೆಯ ಮೋಹನಕೆ
ಪಂಚತ್ವಮಂ ಸಾರ್ಚೆ ನಗೆಮೊಗಂ ಪೂರ್ಣೇಂದು
ವಿಂ ಚೆಲ್ವುದೋಱೆ ಕಾರ್ಮುಗಿಲ ಪೆರ್ಮೆಗೆ ನೂರ್ಮಡಿಸೆ ಮುಡಿಯದೇಂ
ಮೆಱೆದಳೋ ೩೦

೧ ಗ (ಅ)

ಬಗಸೆಗಣ್ ಕುಡಿನೋಟವಮುಮ ಪೊಸ ಗಾಡಿಯಂ
ತೆಗೆಯೆ ಲಾವಣ್ಯರಸಮಂ ಬೀಱೆ ಮುದ್ದುವೊಗ
ಮುಗುಳೆ ಹೊಗರಂ ತೋಳವೊದಲಪ್ಪುಗೆಯ್ಯೆ ಲಲ್ಲೆಯ ಚಲ್ಲಮಂ ಸವಿನುಡಿ
ಝುಗಝುಗಿಪ ಪೊಂಬಣ್ಣದಿಂ ತಿಣ್ಣಮಾಗಿ ಕಡು
ಸೊಗಸೆ ತನುಕಾಂತಿ ನಡೆ ನಟನೆಯಂ ಸೆಱೆಗೆಯ್ಯೆ
ಮಗಮಗಿಪ ಮೈಗಂಪು ಪೞಮೆವಿಂಡಂ ಸಾಲಿಡಿಸೆ ದಿಟ್ಟಿಗೇನೆಸೆದಳೋ ೩೧

ಅರಗಿಳಿ ಕರ್ದುಂಕದಿಮ್ಮಾವಿನೊಳ್ವಣ್ಣೊ ಮಧು
ಕರನ ಝುಂಕಾರಕೋಲಾಹಲಕ್ಕಿಂಬಾಗಿ
ಪರಿಮಳಂದೆಱದೆ ಮೀಸಲ್ದೆಗೆದ ಕಮ್ಮಲರೊ ಗಂಡುಗೋಗಿಲೆಯ ಕೊರಲ
ಸರಮುಸೊಯ್ಯಾರಿಸದ ಚೆಂದಳಿರೊ ಗರಿಯೊಂದ
ದರಲಸರಲನ ಮಸೆದ ಮುಮ್ಮೊನೆಯ ಬೋಳೆಯೋ
ಪರಿಕಿಪೊಡೆ ನಾಭಿಗಳೆಯದ ಪೊಚ್ಚಪೊಸಮುತ್ತೊಯೆನಿಸಿ ಕಣ್ಗೆಡ್ಡಮಾಗೆ ೩೨

ಇಂತು ಥಳಥಳಿಸುವೇಱುಂಜವ್ವನೆಯನಖಿಳ
ಕಾಂತಾಧಿದೇವತೆಯನೀಕ್ಷಿಪರ ಕಣ್ಣಪು
ಣ್ಯಂ ತಾನೆನಿಪಳನಮಲಾಂಗಿಯಂ ಮೋಹನಾಪಾಂಗಿಯಂ ತನ್ನ ಮಗಳಂ
ಸಂತಸದೆ ನೋಡಿ ಹರಹರ ಮಹಾದೇವಯೆನು
ತಂತೆ ಮನದೊಳ್ ತೂಪಿಱಿದು ಸಚಿವವರನೀ ಲ
ತಾಂತಗಂಧಿಗೆ ವರನದಾರೆಂದೆಣಿಸಿ ಕೂಡೆ ನೆನೆದನೇಂ ಸುಕೃತಫಲವೋ ೩೩

ಅಮ್ಮಮ್ಮ ಸಾಕ್ಷಾನ್ಮಹೇಶಾಪರಾವತಾ
ರಮ್ಮಲ್ಲಿಕಾರ್ಜುನಾಚಾರ್ಯನಾತನ ತನೂ
ಜಮ್ಮಹಿಮ ಸಕಲೇಶಮಾದರಸರಾತನಣುಗಂ ಮಾಯಿದೇವೋತ್ತಮಂ
ಎಮ್ಮಕ್ಕನಾತನರ್ಧಾಂಗಿಯುವರಂ ಪೊಗಳೆ
ಬೊಮ್ಮಂಗಳವೆಯುದಂತಿರ್ಕೆಯಾ ಮಾಯಿದೇ
ವಮ್ಮೊನ್ನೆ ಶಿವನ ಗರ್ಭಂಬೊಕ್ಕನೆಂದು ಕೇಳ್ದೆಂ ತಚ್ಛಿವಾನ್ವಯಸ್ಥಂ ೩೪

ಪರಮ ಕಾರುಣಿಕನಾಚಾರ್ಯಕುಲಶೇಖರಂ
ಶರಣನಿಧಿ ಸಚ್ಚರಿತನಖಿಲಾಗಮಜ್ಞನುರು
ತರ ಪದ್ಮಣಾರ್ಯನಂಬಾನಗರಿಯಲ್ಲಿರ್ಪನೆಂದು ಕೇಳ್ದಜೀವೆವಾತಂ
ಪರನಲ್ಲವೆಮಗೆ ಸೋದರದಳಿಯನಾ ಮಹಾ
ಪುರುಷನೇ ತಕ್ಕ ವರನೀ ತನ್ವಿಗೆನುತೆ ಸ
ಭ್ಯರನಿರದೆ ಬರಿಸಿ ತಾಂ ನೆನೆದ ಕಜ್ಜಂಬೇಳ್ದು ತದನುಮತಮಂ ಧರಿಸುತೆ ೩೫

ತ್ವರಿತದಿಂದವನನಿಲ್ಲಿಗೆ ತರ್ಪೆ ನಾನೆನುತೆ
ಪರಮ ವೈಭವದಿಂದೆ ಪೊಱಮಟ್ಟು ಪದ್ಮರಸ
ಗುರುವಿರ್ಪ ಪುರಕೆ ಬರುತಿರೆ ತದಾಗಮನವಂ ಕೇಳ್ದಾ ನಗರಿಯನಾಳ್ವ
ದೊರೆ ಸಕಲ ಸಂಭ್ರಮದಿನಿದಿರ್ಗೊಂಡು ಕಾಣ್ಕೆಗೊ
ಟ್ಟಿರದೋಲಗಿಸಿ ಬರುತ್ತಿರೆ ಪುರಂಬೊಕ್ಕು ಶಂ
ಕರಸದೃಕ್ಷನನುರುಕೃಪಾಕಟಾಕ್ಷನನೀಕ್ಷಿಪಳ್ಕಱಿಂ ಗೃಹಮನೆಯ್ದಿ ೩೬

ನಿರುಪಮ ಮಹಾಭಕ್ತಜನಸಭಾಮಧ್ಯದೊಳ್
ಪರಮ ಶಿವತತ್ವಗೋಷ್ಯಾನುಭವಗೋಷ್ಠಿಯಿಂ
ದೆರಡನೆಯ ತರುಣೇಂದುಧರನಂತೆ ತೊಳತೊಳಗುತಿರ್ಪ ಪದ್ಮರಸಾರ್ಯರಂ
ಹರಿಸದಿಂ ಕಂಡು ಮೆಯ್ಯಿಕ್ಕಿ ಶರಣಾವಳಿಗೆ
ಭರವಸದಿನೆಱಗಿ ತಮ್ಮಗ್ರಜೆಯ ಪಾದಪಂ
ಕರುಹಕಭಿನಮಿಸಿ ಕಾಲೋಚಿತೋಕ್ತಿಗಳಿನನ್ಯೋನ್ಯೋಪಚಾರವಾಂತು ೩೭

ಮೇಲೆ ಮಂತ್ರೀಶ್ವರಂ ಸದ್ವಿನಯ ಭಯಭಕ್ತಿ
ಕೀಲಿತ ವಚೋವಿಲಾಸಂಗಳಿಂದೆಲೆ ಭಕ್ತ
ಲೋಲ ಸುಗುಣಗಣಾಲವಾಲ ಮತ್ಪುತ್ರಿಯಂ ಪಂಕೇಜದಳನೇತ್ರೆಯಂ
ಬಾಲೇಂದುಧರಕೃಪಾಪಾತ್ರೆಯಂ ಕೈಕೊಂಡು
ಪಾಲಿಸೆನ್ನನೆನುತ್ತೆ ಪೊಱಮಟ್ಟು ಶರಣಾನು
ಕೂಲದಿಂ ಬಿನ್ನವಿಸೆ ಶಿವತಂತ್ರಮೆನುತದಂ ಗುರುವರಂ ಮನದೆಗೊಂಡು ೩೮

ಅಂಗೀಕರಿಸಿದೆವಂತೆಸಗೆನೆ ಮುದಂಬೆತ್ತು
ನೀಂ ಗಮಕದಿಂದೀ ಗುರೂತ್ತಮನನಿರದೆ ಬಿಜ
ಯಂಗೆಯ್ಸಿ ತರ್ಪುದೆಂದೋರ್ವ ಸಭ್ಯನನಖಿಲವಿನಿಯೋಗಸಹಿತಮಿರಿಸಿ
ಸಾಂಗದಿಂ ತಾಂ ತಿರುಗಿ ಬಂದು ದೋರಸಮುದ್ರ
ಮಂ ಗಾಡಿಯಿಂ ಪೊಕ್ಕು ಗೌರಪದಣಾಯಕಂ
ಮಂಗಲಾರ್ಥಂ ಪುರಮನಂತೆ ಚಪ್ಪರಮನುಱೆ ಸಿಂಗರಿಸಿಮೆನೆ ಚಾರರಂ ೩೯

ಸಾರಣೆಗಳಿಂ ರಂಗವಲ್ಲಿಯಿಂ ಕುಸುಕದಿಂ
ದೋರಂತೆಸೆವ ಕುರುಜಿನಿಂ ಪತಾಕಾಳಿಯಿಂ
ತೋರಣಗಣಂಗಳಿಂ ಗುಡಿಗಳಿಂ ಚಿತ್ರಪತ್ರಾದಿ ಕೌಶಲ್ಯಂಗಳಿಂ
ಭೋರನಮರ್ದಷ್ಟಶೋಭಾಭರಿತಮಾಗೆ ಪರಿ
ಚಾರರ್ ಪುರಮನಿರದೆ ಸಿಂಗರಿಸಿ ಚಪ್ಪರಮ
ನಾರಂತುಟಿಂತುಟೆಂದುಪಮಿಸಲ್ ನೆಱೆವರೆನಿಪಂದದಿಂ ರಚಿಸಿ ತೋಱೆ ೪೦

ನೋಡಿ ಮೆಚ್ಚಂ ಮನದೆ ಸೂಡಿಯವರ್ಗಿಷ್ಟಮಂ
ನೀಡಿ ಹರ್ಷಾಬ್ಧಿಯೊಳ್ಮೂಡಿ ಮುಳುಗುತ್ತೆ ಶಶಿ
ಚೂಡಭಕ್ತಸಿಕಾಯಮಂ ಸಕಲ ಪುಣ್ಯಪಣ್ಯಾಂಗನೆಯರಂ ಬರಿಸುತೆ
ಕೂಡೆ ಗಣಪರ್ವಮಂ ಮಾಡಿ ಭಯಭಕ್ತಿಯಿಂ
ಪಾಡಱಿದು ಭಜಿಸಿ ಸಚಿವಂ ನಿಜ ಕುಮಾರಿಯಂ
ಗಾಡಿಕಾರ್ತಿಯರನೀಕ್ಷಿಸಿ ಸಿಂಗರಿಪುದೆನೆ ಲತಾಂಗಿಯರ್ ನುಡಿದರಿಂತು ೪೧

ಸಿಂಗರದ ಸೀಮೆಗೆಳೆವೆಣ್ಗಳರಸಿಗೆ ಮೋಹ
ನಾಂಗಿಗೀ ಸಿಂಗರದ ಹಂಗುಂಟೆ ಮಂಗಲದ
ಸಾಂಗಕ್ಕೆ ಸಿಂಗರಿಪೆವೆನುತೆ ಬಹುವಾದ್ಯಮುಲಿಯಲ್ ಶೋಭನಮನುಸಿರುತೆ
ಪೊಂಗುತುಂ ಕಮ್ಮೆಣ್ಣೆಯಂ ತಂದು ಸತಿಯರ್ ಬೆ
ಡಂಗಿಂ ಬಳಲ್ಮುಡಿ ಸಡಿಲೆ ಕಣ್ಬೆಳಗು ಪೊಳೆಯೆ
ತುಂಗಸ್ತನಂ ಕದಕ್ಕದಿಸೆ ಬಡನಡು ಬಳ್ಕೆ ಗಾಡಿಯಿಂದೊತ್ತುವಲ್ಲಿ ೪೨

೧ ೦ (೮)

ಕೆಂದಾವರೆಗಳಿರದೆ ಬಂದು ಮಧುಕರವೃಂದ
ಮಂ ದಿಟಂ ಮುದ್ದಿಪಂತೊತ್ತುವಳ ಹಸ್ತಾರ
ವಿಂದಂ ವಿರಾಜಿಸಲ್ ಕೂಡೆ ಕಾರ್ಮುಗಿಲೊಳಗೆ ತೊಳಗುವೆಳೆಮಿಂಚಿನಂತೆ
ಕುಂದದಗುರಿಸೆಯುಗುರ್ವೆಳಗು ಸೊಗಸಿಂದೆಣ್ಣೆ
ಯಂ ದೇವಿಗೊತ್ತಿ ಕಟ್ಟಾಣಿಮುತ್ತಂ ತೊಳೆವ
ಚೆಂದದಂತಮಮ ಮಂಗಳಮಜ್ಜನಂಗೆಯ್ಸಿ ಪೊಚ್ಚ ಪೊಸದುಗುಲಮುಡಿಸಿ ೪೩

ಬಳಿಕೆ ಕರ್ಬರಲಬಣ್ಣಮನೇಳಿಸುವ ಕಚಾ
ವಳಿಗಳಂ ಬಗಿಬಗಿದು ಪುಡಿಗತ್ತುರಿಯನೆಯ್ದೆ
ತಳಿದೋರಣಂಗೊಳಿಸಿ ಕಮ್ಮಲರ್ಗಳಂ ಮುಡಿಸಿ ಬಲ್ದುಱುಂಬಂ ನಿಮಿರ್ಚಿ
ತಿಳಕಮಂ ಭಾಳಕಿಡೆ ಕಾರ್ಮುಗಿಲನುಱೆ ನೆಮ್ಮಿ
ತೊಳಗುವ ಸುಧಾಸೂತಿಬಿಂಬಮೋಯೆಂಬಂತಿ
ರಳವಡೆ ಮೊಗಂ ಯಕ್ಷಕರ್ದಮಾದಿಗಳನರೆದಾ ವನಿತೆಗನುಲೇಪಿಸಿ ೪೪

ವೀರಮುದ್ರಿಕೆಯನಿರದುಲಿವ ಕಾಲುಂಗುರವ
ನಾ ರಯ್ಯಪಿಲ್ಲಿ ಮಂಟಿಗೆ ಕಿಱುಯಪಿಲ್ಲಿಗಳ
ನಾ ರಮಣಿಗೊಲ್ದಲಂಕರಿಸಿ ನೇವುರಪಾಯವಟ್ಟಂಗಳಂ ವಿರಚಿಸಿ
ಚಾರುಹಂಸಕಮಂ ಸಮಂತಿಕ್ಕಿ ಝುಣಝುಣ
ತ್ಕಾರಮಂ ಮಾಳ್ಪ ಕಿಂಕಿಣಿಗಳಂ ಘಂಟೆಗಳ
ನೋರಂತೆ ತಾತಿ ಮೊದಲಾದವಂ ಕಟ್ಟಿ ಚಂಚತ್ ಕಾಂಚಿಯಂ ಬಂಧಿಸಿ ೪೫

ಮಿಸುನಿಯೊಳ್ಪಳೆಗಳಂ ಮಿಸುಪ ಭುಜಕೀರ್ತಿಯಂ
ಮಿಸುಪ ಕೇಯೂರಮಂ ತೋಳರಕ್ಕೆಯಮಣಿಯ
ನೆಸೆವ ಕಂಕಣಮನಾ ಪಾರಿಹಾರ್ಯಂಗಳಂ ಬೆರಲ ರತ್ನೋರ್ಮಿಕೆಗಳಂ
ಕುಸುರಿಗೆಲಸದ ಮಣಿಪದಕಮನೊಪ್ಪುವ ಮುತ್ತಿ
ನಸಮಹಾರಾವಳಿಯನುಜ್ವಲಿಪಲೇವಣಮ
ನುಸುರಲೇಂ ನಕ್ಷತ್ರಮಾಲೆಯಂ ಕಂಠಾಭರಣಮನಳವಡಲಮರ್ಚಿ ೪೬

ಮಿಳಿರ್ವ ಕೆಂಬರಲೋಲೆಯಂ ಕಿವಿಗೆ ಸಾರ್ಚಿ ತಳ
ತಳಿಪ ಪೊಸಕಟ್ಟಾಣಿಮುತ್ತಿಸೆವ ಮೂಕುತಿಯ
ನಳವಡಿಸಿ ನಾಸಿಕಕೆ ಬೊಟ್ಟಂ ನೊಸಲ್ಗಿಟ್ಟು ಬೈತಲೆಯನೊಡನಮರ್ಚಿ
ಪೊಳೆವ ಸೂಸಕಮನೊಪ್ಪಂಗೊಳಿಸಿ ಕೋಮಲೆಯ
ರಳಿಕುಳಾಳಕಿಗೆ ಸೀಮಂತಮಣಿಯಂ ಧರಿಸಿ
ಬಳಿಕ ಕರ್ಪೂರ ತಾಂಬೂಲಮಿತ್ತುಪ್ಪಾರತಿಯನೆತ್ತಿ ಕಡುಗಾಡಿಯಿಂ ೪೭

ತಂದು ಸಚಿವಾಗ್ರಣಿಗೆ ತೋಱೆ ಪುಳಕಂಬೆತ್ತು
ಮಂದಹಾಸಂ ಸೂಸೆ ಮಗಳನುಪಲಾಲಿಸುತೆ
ಹೆಂದದಾನಂದದಿಂದಿರಲಿತ್ತಲಖಿಲ ಮಾಹೇಶ್ವರರ ಚರಣಾಂಬುವಿಂ
ಒಂದಿದಮಲಾಂಬುವಂ ಮಿಂದು ಸಿತಭಸಿತದಿಂ
ದಂದಮಾಗಲ್ ತ್ರಿರೇಖೆಯನಿಟ್ಟು ರುದ್ರಾಕ್ಷ
ಮಂ ದೋಷದೂರಂ ಧರಿಸಿ ಶಿವಾರ್ಪಿತಕುಸುಮಮಂ ಸಿರಿಮುಡಿಗೆ ತುಱುಂಬಿ ೪೮

ಅಸಮ ದಿವ್ಯಾಂಬರಾಲಂಕಾರಿಯಾಗಿ ರಸ
ಮೊಸರ್ವ ಶಿವಶೇಷಕರ್ಪೂರತಾಂಬೂಲಮಂ
ಪೊಸಗಾಡಿಯಿಂ ಪರಿಗ್ರಹಿಸಿ ಶರಣಶ್ರೇಣಿಯಂ ಸತ್ಕರಿಸಿ ಹರ್ಷದಿಂ
ಒಸೆದು ಗಿರಿಜಾವರನ ಭಕ್ತಿಪ್ರವರ್ಧನ
ವ್ಯಸನಕ್ಕೆ ಸಂಚಕಾರಮಿದೆಂದು ಮನದೊಳಂ
ಕಿಸುತೆ ನಿಜ ಮಾತೃಸಹಿತಂ ಭಕ್ತತತಿವೆರಸು ಪೊಱಮಟ್ಟು ತನ್ನಗರಿಯಂ ೪೯

ಹರಿಸದಿಂ ಪೊನ್ನಂದಣವನೇಱೆ ತಾಂ ದೋರ
ಶರಧಿಯುದೆಯಿದೆಯೆಂಬವೊಲ್ ನಡೆಯೆ ಕೇಳ್ದು ಭ
ಕ್ತರ ದೇವನಾದ ಗೌರಪದಣಾಯಕನಖಿಲ ವೈಭವಂ ಶೋಭಿಸುತಿರೆ
ಹರಿದಂತದಂತಿಗಳ ಗೋಣೆಂದು ಕುಸಿಯದೇ
ನಿರಲಾರ್ಪವೇ ಯೆಂದು ನೋಟಕರ್ ಮೂಗಿಂಗೆ
ಬೆರಳಿಟ್ಟು ಸೋಜಿಗಂಬಡುತಿರೆ ಸಮಸ್ತಬಲಮಂ ನೆರಪಿ ಮನದ ಗೆಲವಿಂ ೫೦

ಸಕಲಸಂಭ್ರಮಸಹಿತನಾಗಿ ಬಂದಿದಿರ್ಗೊಂಡು
ಸುಕೃತಾತ್ಮನಂ ಭದ್ರಗಜಮನೇಱಿಸಿ ವಿಲಾ
ಸಕೆ ತಿಟ್ಟಮೆನೆ ಪುರಂಬೊಕ್ಕು ಬರ್ಪಾಗಳಿಕ್ಕುವ ಸೀಗುರಿಯ ಸಿರಿಗಳಿಂ
ಚಕಚಕಿತಮಾಗಿ ಡಾಳಿಪ ಚಾಮರಂಗಳಿಂ
ಪ್ರಕಟಪ್ರಭಾನ್ವಿತಸಿತಚ್ಛತ್ರತತಿಯಿಂ ನ
ಭಕೆ ನೆಗಪಿ ಪೊಳೆವ ಗುಡಿಯಿಂ ಪತಾಕಾಳಿಯಿಂ ಶೋಭಿಸುತೆ ತದ್ಗುರುವರಂ ೫೧

ತರದಿಂ ವಿಪಂಚಿ ವಲ್ಲಕಿ ಚಿತ್ರೆಯಾ ಜ್ಯೇಷ್ಠೆ
ವರ ಘೋಷವತಿ ವಿಜಯೆ ನಕುಲೋಷ್ಠಿ ಕೂರ್ಮಿ ತುಂ
ಬುರಿ ವಿಕುಬ್ಜಿಕೆ ಹಸ್ತಿಕಾಖ್ಯೆ ಶತತಂತ್ರಿ ಕಿನ್ನರಿ ಲಸತ್ ಪರಿವಾದಿನಿ
ಕರಮೆ ಸಾರಂಗಿ ತತ್ರಿಶರಿಯಾಲಾಪಿನಿ ವಿ
ಚರಿತರಾವಣಹಸ್ತೆ ಡಕ್ಕುಲಿ ಪ್ರಮುಖ ಬಂ
ಧುರತತಮನಂತೆ ಪಟಹಂ ಹುಡುಕ್ಕೆ ಕುಡುಕ್ಕೆ ಡಕ್ಕೆ ಪಟಹಂ ಮೃದಂಗಂ ೫೨

ಕರಡೆ ಡಕ್ಕುಲಿ ಮಂಡಿಡಕ್ಕೆ ಶಲ್ಲುಕೆ ಕುಡುವೆ
ಯುರುರುಂಜೆ ಸತ್ರಿವಳಿ ಡವಸೆ ನಿಸ್ಸಾಣಂ ಡ
ಮರುಕ ಭೇರೀಸ್ತಂಭಕೀಮುಖಾನದ್ಧಮಂ ತಾಳಂ ಸುಕಾಂಸ್ಯತಾಳಂ
ಮೊರೆವ ಜಯಘಂಟೆ ಪಟ್ಟಟಪಟ್ಟಶುಕ್ತಿ ಭಾ
ಸುರ ಕುಡುಕ ಕಮ್ರಾದಿ ಘನಮನಾ ಪಾಲಿಕೆ ಮು
ಹುರಿ ಶೃಂಗವಂಶ ಕಹಳಾ ಶಂಖಪಾವಪ್ರಭೃತಿ ಸುಷಿರ ವಾದ್ಯಚಯಮಂ ೫೩

ತಳಸಂಚು ಮಧ್ಯಸಂಚುಪ್ಪರದ ಸಂಚುಗಳ
ನಳವಡಿಸಿ ಸಂಯೋಗ ವಿಪ್ರಯೋಗಾಕ್ರಮೋ
ಜ್ವಳಸಕ್ರಮದಿನಸ್ವರಸ್ವರಜನಿತಮಾದ ವಿವಿಧವಿಧಪಾಠಂಗಳಂ
ತಳಪಾಟ ಹಸ್ತಪಾಟದ್ವಯದಿನಮರ್ದು . .
. . . . . ಹಸ್ತ ಹಸ್ತದ್ವಯಾಂ
ಗುಲಿ ಕೋಣ ಜಿಹ್ವಿಕೋಪಾಧಿಯಿಂ ಸ್ಫುರಿಸಿ ಕವಳೋಡ್ಡಳಿಯ ದೆಂಝೊಂಗಳಂ ೫೪

ತಿಳಿದು ತತ್ ಪಂಚವಿಂಶತಿ ವಿಧಮನಾರಯ್ದು
ಬಳಿಕಮೆಂಬತ್ತೆಂಟು ಪಾಠಭೇದಂಗಳಿಂ
ಮಿಳಿರ್ವ ಬಹು ವಾದ್ಯವರ್ಗಪ್ರಭೇದದ ಶುದ್ಧಕೂಟಖಂಡವ್ಯಾಪಕ
ಲಲಿತತರ ಕೋಮಲಾತ್ಯಂತ ಕೋಮಲಪಾಟ
ಕುಳವೊಂದಿ ತತ್ ಪ್ರಬಂಧಂ ಜ್ವಳಿಸೆ ತದ್ವರ್ಣ
ಮಿಳಿತ ವಿಧಿಯೊದವೆ ತಾಳಾನುಗತಮಾಗಿ ಬಾಜಿಸುತೆ ತತ್ ಕುಶಲಗತಿಯಿಂ ೫೫

ಕಂದಾವುಜಕೆ ವಿಜಯಮತ್ತಂ ಡಮರುಗಕ್ಕೆ
ಸಂದ ಸಾಳಗಮತ್ತಮಂತೆ ಹಸ್ತಾವುಜಕ
ಮಂದಪ್ರಥಮಮತ್ತಮಾರುಂಜೆಗೊಪ್ಪುವ ವಿಶಾಲತರ ಕೀಲಮತ್ತಂ
ಒಂದಿ ಚೌಡಿಕೆ ಗುರುಸರಸಮತ್ತಮುಱಿ ಕುಡು
ಕ್ಕಂದಲೆನಿಸುವ ವಾದ್ಯಕಸಮುಪಟುಮತ್ತಮತಿ
ಛಂದದಡ್ಡಾವುಜಕೆ ರವಿಮತ್ತವಾ ಭಾರಿವಾದ್ಯಕ್ಕೆ ಚಕ್ರಮತ್ತಂ ೫೬

ವರ ಕುಂಭವಾದ್ಯಕೆ ವಿರಾಮಮತ್ತಂ ವಿಮಲ
ಕರಠವಣೆಗಾ ಧನಂಜಯಮತ್ತಮತಿ ಶುಭಂ
ಕರ ಪಂಚಮುಖಕೆ ಸಚ್ಛ್ರೀಮತ್ತಮಂತೆ ತರ್ಪಟೆಗಹೋರಂಗಮತ್ತಂ
ಸ್ಥಿರಮಲಹರಿಗೆ ಜಯಪ್ರಿಯಮತ್ತಮಾ ಶುದ್ಧ
ಕರರೆಯೊಡ್ಡಿಯ ಮತ್ತವೋವೊ ಕುಡುಪಾವುಜಕೆ
ಪರಮನಿರ್ವಾಣಮತ್ತಂ ಡಕ್ಕುಲಿಗೆ ಸಲೆ ವಿಚಾರಮತ್ತಂ ಕಮ್ರುಗೆ ೫೭

ಮೂಲ ಕಲ್ಯಾಣಮತ್ತಂ ಮಂಡಿಡಕ್ಕೆಗೆ ಕ
ರಾಳಮತ್ತಂ ಕರಟೆಗೆ ವಿಲಾಸಮತ್ತಮಾ
ಲೋಲಕೂರ್ಪರಡಕ್ಕೆಗತುಳ ವಲ್ಲಭಮತ್ತಮಾ ಪಟ್ಟವಾದ್ಯಕೆಯ್ದೆ
ಶೀಲಘನಮತ್ತಂ ಕಲಾಪಮತ್ತಂ ಶಂಖ
ಕಾ ಲಲಿತಚಿತ್ರಮತ್ತಂ ಲೀರಕಾಹಳೆಗೆ
ಮೇಲೆ ಮುದ್ರಿತಮತ್ತಮಾ ಕಾಹಳೆಗೆ ವೀರಣಕ್ಕೆಯಾಲಾಪಮತ್ತಂ ೫೮

ಶೃಂಗಕ್ಕೆ ತಾರಾಪ್ರತಿಮಮಮರ್ತ್ಮಮಾ ತ್ರಿವಳಿ
ಗಂಗಮೆನೆ ವರ್ಣಮರ್ತ್ಮಂ ಸುನಿಃಸಾಣಕ್ಕೆ
ಮಂಗಲಗಭೀರಮರ್ತ್ಮಂ ಪೊಳೆವ ಕೌಸಾಳಕಮಲತರ ವಾಮಮರ್ತ್ಮಂ
ಸಾಂಗದಿಂ ಗಿಡಿಬಿಡಿಗೆ ಭಿನ್ನಮರ್ತ್ಮಂ ಮೇಣ್ ಕ
ಳಿಂಗಮರ್ತ್ಮಂ ಭೇರಿಗಮಮ ರಣಭೇರಿಗು
ತ್ತುಂಗಸಂಕೀರ್ಣಮರ್ತ್ಮಂ ಪೊಣ್ಮೆ ಕೇಳಿಸುವ ವಾದ್ಯಧರರಂ ಮೆಚ್ಚುತುಂ ೫೯

ಮೇಳಾಪಕಮನೊಡನೆ ದೇಶಾಖ್ಯಪದ್ಧತಿಯ
ನಾಳಾಪಚಾರಿಣಿಯನಾಕುರವ ವೈಖರಿಯ
ಲೀಲೆಯಂ ಬಳಿಕಲಾ ವಹಣಿಯಂ ಶ್ರಮವೈಖರಿಯನಾ ತೆಱದೊಳೊಪ್ಪುವ
ಲೋಲ ಕುರಚಾಲಿಕಸುಚಾಲಿಕಂಗಳನಮರ್ದ
ಲಾಲಿತವ್ಯಾಪ್ತಿಯಂ ಕೂಟಮಾನಮನೆಸೆವ
ಚಾಲಿಯಂ ಬೈಸಿಗೆಯನೆತ್ತಿ ಬಾಜಿಸುವ ಮದ್ದಳಿಗನಂ ಮನ್ನಿಸುತ್ತುಂ ೬೦

ಕಾಲಂದಿಳಿದು ಮಾರ್ಗಮಂ ನಿಱಿಸಿ ತತ್ಕ್ರಿಯಾ
ಜಾಲಮಂ ಸ್ಫುರಿಸಿಯುಚಿತಾಂಗಮಂ ಸಂಗಳಿಸಿ
ಲೋಲ ಗ್ರಹದ ನೆಲೆಯನಱಿದು ಜಾತಿಯಸಂಪ್ರಯೋಗಿಸಿ ಕಳೆಯ ಪತ್ತಿಸಿ
ಮೇಲೆ ಲಯಮಂ ನಿಯತಿಗೆಯ್ದು ಯತಿಯನಮರ್ಚಿ
ಲಾಲಿತಪ್ರಸ್ತಾರಜ ಪ್ರಯೋಗಜಮಾದ
ತಾಳಮಂ ಲಕ್ಷ್ಯಲಕ್ಷಣವಮರಲೆತ್ತಿ ಶಬ್ದಾದಿಗಳ ರಚಿಸಿ ಕೂಡೆ ೬೧

ಕ್ರಮದಿಂದವಾಯತವಿಚಿತ್ರಮಾಲಾಪಚಾ
ರಿ ಮನೋಜ್ಞಬಂಧನವ್ಯಾಪ್ತಿವಾದ್ಯಾಂಗಮು
ತ್ತಮ ಸುಪ್ರಬಂಧಮುರುಮಾರ್ಗಬಂಧಂ ತದಂತರಬಂಧಮನುವೃತ್ತಿಯಾ
ಸುಮಹದಿಚ್ಛಾಬಂಧನಮಂತೆ ಸೂಡಾದಿ ಸ
ದ್ರಮಣೀಯಮಾದತಿ ಚಮತ್ಕೃತಿಗಳಂ ತಜ್ಞ
ಸಮಿತಿಗತಿ ಕೌತೂಹಲಂದೋಱಿಯುಗ್ಘಡಿಪ ತಾಳಧರನಂ ಪೊಗಳುತುಂ ೬೨

ಸ್ಥಾಯಿಯಂ ಮಾಡಿ ಸಂಚಾರಿಸಿ ಯಥಾ ಸ್ವರ
ನ್ಯಾಯದಿಂ ಮಂದ್ರ ಮಧ್ಯ ಸುತಾರಶುದ್ಧಿಯಿಂ
ದಾಯತಮೆನಲ್ ಸ್ತ್ರೀಪುರುಷರಾಗಯೋಗಮನಮರ್ಚಿ ಮೋಹನಮುದಯಿಸೆ
ತಾಯನಿಯಮವ್ಯಾಪ್ತಿಗೆಯ್ದು ತಿರುಪಂ ಸ್ಫುರಿತ
ಮಾಯತ್ತ ಕಂಪಿತಂ ಲೀನಮಾಂದೋಲಿತಂ
ಶ್ರೀಯುತವಲಿತ್ರಿಭಿನ್ನಂ ಕುರುಳಮಾಹತಂ ಪ್ರೋಲ್ಲಾಸಿತಂ ಪ್ಲಾವಿತಂ ೬೩

ವರ ಹುಂಪಿತಂ ಮುದ್ರಿತಂ ನಾಮಿತಂ ಸಮು
ತ್ಕರ ಮಿಶ್ರಿತಮೆನಿಪ್ಪ ಗಮಕವನ್ನುರಲ್ಕುಪ
ಸ್ವರ ಶಿರಃಕಂಪಾಲ್ಪಕಂಠ ಮುಖವಿಕೃತಿ ನಾಸಾಸ್ವರಪ್ರಭೃತಿದೋಷ
ಸರಣಿಯನಲೆದು ಶುದ್ಧ ಸಂಕೀರ್ಣ ಸಾಳಗ
ಸ್ಫುರಣದೆ ಸುತಾನಮುಂ ಬೀಱೆ ರಸಲಹರಿಗಳ
ಪರಿರಚಿಸಿ ಮೂರ್ಛನೆಯನೆಸಗಿ ಪಾಡುವ ಜಾಣಗಾಣನಂ ಲಾಲಿಸುತ್ತುಂ ೬೪

ಚಾರುರೇಖಾಸ್ಥಾಪನೀಸು ಸೌಷ್ಠವಥಾಳ
ಸಾರತರತಾಳ ಸಂಧಿಜ್ಞತಾನಿಜವಣೋ
ದಾರ ಲಳಿಕೂರ್ಮಝುಂಕಾಂಕ ಕೋಮಲಿಕಾಂಕ ರಸವೃತ್ತಿ ಹಂಸಗಮನ
ಆರಾಜದೋಯಾರ ವೃಷಿಕಾಡಿಳ್ಳಾಯಿ
ಕಾರತಕಳಾಸಮುಖ ನೃತ್ಯಾಂಗವಮರೆ ಶೃಂ
ಗಾರಾದಿ ರಸಮನಭಿನಯಿಸಿ ಮೋಹಿಪ ನರ್ತಕಿಯನೊಲ್ದು ನೋಡುತೊಡನೆ ೬೫

ಉಲಿವ ಪಡಿಯಱರ ಗಡಬಡಿಪ ಕೈವಾರಿಗಳ
ಸಲೆ ಪೊಗಳ್ವ ವಂದಿಮಾಗಧರ ವೈತಾಳಿಕರ
ನೆಲೆಯಱಿದು ಮೇಳಮನಮರ್ಚಿ ನರ್ತಿಪ ನರ್ತಕರ ಶೋಭನದ ಸತಿಯರ
ನಲಿನಲಿದು ಗತಿಗತಿಗೆ ಕುಣಿಕುಣಿದು ಕುಕಿಲಿಱುವ
ಸುಲಭರ ದಿಗಂತಮಂ ವ್ಯಾಪಿಸಿ ಮೊರೆವ ವಾದ್ಯ
ಕುಲದ ಬಹುರಭಸದಿಂದವನಿ ಶಬ್ದಬ್ರಹ್ಮಮಯವಾಗೆ ಗಮಿಸುವಲ್ಲಿ ೬೬

ಸಕ್ಕರಿಸವಿಯತೊಂಡೆವಾಯ್ದೆಱೆಯ ಸೊಗಸನುಗು
ಳ್ವಕ್ಕಜದ ಮುದ್ದುವಾತಿನ ನಾಡೆ ಕಡು ಚೆಲ್ವು
ಮಿಕ್ಕು ಪೊಗರುಗುವ ಹೊಂಬಣ್ಣವೊಲೆಯಾಯತದ ಸೆಕ್ಕುಂದುಱುಂಬಿನ ಸುಖಂ
ಜಕ್ಕುಲಿಪ ಮನದ ನನೆಗಣೆಯನರಸಿಗೆ ನೋಡೆ
ಸಕ್ಕಸಮವೆನಿಪ ರೂಹಿನ ಮೋಹನಂ ಜನಿಪ
ಚಿಕ್ಕಹರೆಯದ ಬೆಚ್ಚಿದೆರಳೆಗಣ್ಮರಲಸೆಣ್ಮಕ್ಕಳೆಯ್ತಂದರೊಸೆದು ೬೭

ಬಾಣಾಸನಂ ಬಾಧೆಗೊಳಗಾಗಿಯೂರರ್ಗೆ
ಗಾಣದಲ್ಲಿಕ್ಕಿಯರೆಯಿಸಿಕೊಳುತ್ತಿದೆ ತನ್ನ
ಬಾಣಂಗಳಾ ಕಾಕಪುಷ್ಪಮಧುಪಾವಲಿಗ್ರಸ್ತಂಗಳಾದುವಕಟಾ
ಜಾಣಮರ್ದ ತಿರುವದಾಱಡಿಗೊಂಡು ತಿರುಗುತಿದೆ
ಮೇಣಾ ಧನುರ್ಧರಂ ಮೆಯ್ಗರೆದನೆಂದು ತತ್
ಪ್ರಾಣಕಾಂತರ ಸಹಾಯದಿನತನುವಂ ಜಱೆವ ಚೆದುರೆಯರ್ ನೆರೆದರೊಡನೆ ೬೮

ಕುಂದದುರು ಭೋಗಾಭಿಮುಖಿಯಾಗು ಸಜ್ಜನಾ
ಮಂದಗ[1]ಣದೊಳ್ಬೆರಸು ನಿಷ್ಕಪಟಮಂ ಬಿಡದೆ
ಚೆಂದದಿಂ ವ್ಯವಹರಿಸು ಕೂರ್ತು ಕೂಡಿದವರಂ ವಿಜಯಾಭಿರಾಮರೆನಿಸು
ಮಂದರಾಗವೆ ರೂಹುವಡೆದುದೆನೆ ಸಂಪ್ರೀತಿ
ಯಿಂದೊಂದಿ ಚಲಿಸದಿರು ಸನ್ಮಾರ್ಗವೃತ್ತಿಯೊಳಿ
ರೆಂದು ಚದುರಿಂ ಬುದ್ಧಿವೇಳ್ವ ತಾಯ್ಗಳ್ವೆರಸು ಗಣಿಕೆಯರ್ ಬಂದರೊಲವಿಂ ೬೯

ಪರೆದ ಮುರಿದುಂಬಿಗುರುಳಿನಿಸಿನಿಸಳಿದ ತಿಲಕ
ವಿರದೆ ಕೆಂಪಡರ್ದ ಕಡೆಗಣ್ಣೊ[2]ಗೆದ ಬೆಮರ್ವನಿಗ
ಳರರೆ ಕೊನೆವಲ್ಲಗಾಯಂಗೂಡಿ ತೊರೆದ ತುಟಿ ಬೇಱೊಂದು ರಸವನಾಂತ
ಸಿರಿಮೊಗಂ ಕುರುಗುರಹೊಯ್ಲುತೋಳ್ಬಿಗುಹಳಿದ
ಗುರುಕುಚಂ ಪದುಳಿಸದ ತನು ಪುದಿದ ಪುಳಕಾಳಿ
ವೆರಸಿ ಗುರುವಂ ನೋಳ್ಪ ತವಕದಿಂ ಸುರತಾಂತಕಾಂತೆಯರದೇಂ ಬಂದರೋ ೭೦

---

೧ ಗು (ಅ) ೨ ನೆ (ಬ, ಕ)

ಬಾಡಿದೆಳೆವಳ್ಳಿಮೆಯ್ ಬತ್ತಿದ ಕದಂಪು ರಸ
ನ್ನೋಡಿದಿಂದುಟಿ ಕೊರಗಿದಿಂದುವದನಂ ಕೂಡೆ
ಕೂಡೊಗೆವ ಬಿಸುಸುಯ್ ಬಳಲ್ವಕಣ್ ತಳ್ಳಂಕಿಪೆರ್ದೆದೈನ್ಯವಚನಮಿನಿತುಂ
ಕೂಡಿ ಬೇಱೊಂದು ಸೊಗಸಂ ಸೂಸೆ ಪೂಸರ
ಲ್ಗೀಡಾಗಿ ಶಿಶಿರೋಪಚಾರಕ್ಕೊಡಲ್ದೆತ್ತು
ಪಾಡಳಿವ ವಿರಹಿಣಿಯರೇಂ ಬಂದರೋ ಶಾಂತಿಮಯನನೀಕ್ಷಿಸುವಾಸೆಯಿಂ ೭೧

ಇಂತು ನಡೆತಂದು ಮೋಹನದೇಹನಂ ನೋಳ್ಪ
ಸಂತೋಷದಿಂದಾ ಪುರಾಂಗನೆಯರುಪ್ಪರಿಗೆ
ಯಂ ತೊಳಪಭಿತ್ತಿಯಂ ಚಪ್ಪರವನೆಸೆವ ಮಾಳಿಗೆಗಳಂ ವೇದಿಕೆಗಳಂ
ಕಂತುವಂ ಕಣ್ಸನ್ನೆಯಿಂ ಪುಟ್ಟಿಸುತ್ತಡರ್ದು
ತಂತಮ್ಮೊಳೋರ್ವರೋರ್ವರ್ಗೆ ತೋಱುತೆ ಬಾಯ
ತಿಂತೆ[1] ಪರಿವಂತೆ ಪೊಗಳುತೆ ನೇಹದಿಂ ನೋಡುತಿರ್ಪಾಗಳೇವಣ್ಣಿಪೆಂ ೭೨

ಅವರೊಳೋರ್ವಳ್ ತನ್ನ ಸುತೆಗನುಪಮನ ತೋಱಿ
ಶಿವಶಿವಾ ಎಮೆಯಿಡದೆ ನೋಳ್ಪ ನರಯುವತಿ ಸುರ
ಯುವತಿಯನ್ನೊಲಾಗೆ ಮತ್ತೋರ್ವಳಾತ್ಮಜೆಗೆ ತೋಱಿಸೆ ಸುಸಂಗತಿಕಾಮನಂ
ನವಭಕ್ತಿರತಿಯಂತುಟಾಗೆ ನಾನಾ ಸತೀ
ನಿವಹವೀ ತೆಱದೊಳೀಕ್ಷಿಸೆ ಬಂದು ಗಜವನಿಳಿ
ದು ವಿಲಾಸದಿಂ ಚಪ್ಪರಂಬೊಕ್ಕು ಸಕಲ ಶರಣರ್ಗೆಱಗಿ ಕುಳ್ಳಿರಲೊಡಂ ೭೩

ವಾರಮದು ಸೋಮವಾರಂ ತಿಥಿಯತಿಥಿಪೂಜೆ
ಚಾರುನಕ್ಷತ್ರವಾನತಘನಕ್ಷತ್ರವಂ
ತಾ ರಮ್ಯಯೋಗಮೀಶ್ವರಯೋಗಮುಜ್ವಲಿಪ ಕರಣಂ ಶಿವೋಪಕರಣಂ
ಸಾರಲಗ್ನಂ ಶರಣಚರಣಲಗ್ನಂ ಚಂದ್ರ
ತಾರಾಬಲಂ ದೃಕ್ಕ್ರಿಯಾಬಲಮೆನಿಸುವಸಮ
ವೀರಶೈವಾರ್ಯಂಗೆ ಕಾಲಮೆಲ್ಲಂ ಶುಭದ ಕಾಲಮೆನುತಾ ಮಂತ್ರಿಪಂ ೭೪

---

೧ ತಿ (ಬ, ಕ)

ಕನ್ನೆಯಂ ದುಷ್ಟಜನಕನ್ಯೆಯಂ ಲೋಕೈಕ
ಮಾನ್ಯೆಯಂ ಹೃತವಿನತದೈನ್ಯೆಯಂ ದುರಿತೌಘ
ಶೂನ್ಯೆಯಂ ಗತಶಮನಸೈನ್ಯೆಯಂ ವರ್ಜಿತಪುನರ್ಮಾತೃಕಾಸ್ತನ್ಯೆಯಂ
ಅನ್ಯಾಯವೊಂದದಂತಾಚರಿಪ ಪರಮಸೌ
ಜನ್ಯೆಯಂ ತನ್ನ ಸುತೆಯಂ ತಂದು ಶರಣತತಿ
ಗನ್ಯೂನ ಭಕ್ತಿಯಿಂದೆಱಗಿಸಿ ಶಿವಾಗಮವಿಧಾನಮುಜ್ವಲಿಸೆ ತಂದು ೭೫

ಎನ್ನ ಭಕ್ತಿಪ್ರಾರ್ಥನೆಗಳನುದ್ಧರಿಪುದೆಲೆ
ಚಿನ್ನಿದಾನಾಸ್ಪದಮಹಾಪುರುಷಯೆನುತೆಸೆವ
ಕನ್ನೆಯನುಮಾವರಾಭಂಗೆ ಕಯ್ಗೊಡಿಸಲೊಡಂ ನಮಸ್ಕೃತಿಪೂರ್ವಕಂ
ಚೆನ್ನೆಯರ್ ತಂದಾರತಿಯನೆತ್ತಿ ಪರಸೆ ವಾ
ದ್ಯೋನ್ನತಧ್ವನಿಯುಣ್ಮೆ ದಂಪತಿಗಳೇಳ್ದು ಭಯ
ದಿನ್ನಿಖಿಳಭಕ್ತರ್ಗೆ ನಮಿಸಿಯವರಾಶೀರ್ವಚನಮಂ ಧರಿಸಿ ಮೋದದಿಂ ೭೬

ಮತ್ತೆಯುಂ ಭಕ್ತಾವಳಿಯ ಚರಣದೊಳ್ಬೀಳ್ದು
ಮತ್ತಾತರಿರ ನಿಮ್ಮಯಾಜ್ಞೆಯಂ ನೆತ್ತಿಯೊಳ್
ಪೊತ್ತಾಚರಿಸುವ ಭೃತ್ಯನನೆನ್ನನಾರಯ್ವುತಿರಿಮೆಂದು ಬಿನ್ನವಿಸುತೆ
ವಿತ್ತಾಭರಣವಸ್ತ್ರಮಾಲ್ಯಾನುಲೇಪನಮ
ನಿತ್ತು ಪೊಡಮಟ್ಟು ಬೀಳ್ಕೊಂಡುಳಿದ ಜನರನುಚಿ
ತೋತ್ತುಂಗವೃತ್ತಿಯಿಂ ಮನ್ನಿಸಿ ಕಳಿಪಿಯಂತವುರಕೆಯ್ದಿ ಕಡುಗಾಡಿಯಿಂ ೭೭

ಶ್ರೀ ಮಹಾದೇವಿಸಹಿತಂ ಶಿವಾವಸರಮಂ
ಕ್ಷೇಮದಿಂ ರಚಿಸಿ ಪರಮಪ್ರಸಾದಾಮೃತಮ
ನಾಮೋದದಿಂ ಸವಿದು ತಚ್ಛೇಷಕರ್ಪೂರತಾಂಬೂಲಮಂ ಗ್ರಹಿಸುತೆ
ಏ ಮಾತೊ ಗೌರಪದಣಾಯಕರ ಭಕ್ತಿಯಿಂ
ದಾ ಮನೆಯೊಳಗೆ ಮನೆವಡೆದು ಶರಣತತಿಯೊಳು
ದ್ದಾಮನೆನೆ ರಾಜಿಸುತೆ ನಿಜ ಮಾತೃವೆರಸು ಶಿವಸೌಖ್ಯದಿಂದೊಪ್ಪುತ್ತಿರೆ ೭೮

ರತಿಗೆ ರತಿಯಂ ಪುಟ್ಟಿಸುವ ರೂಪು ವಾಣಿಗು
ನ್ನತವಾಣಿಯಂ ಶಿಕ್ಷಿಸುವ ವಾಗ್ವಿಲಾಸವಿನ
ಸತಿಗೆ ತೇಜಮನೋಜೆಗೆಯ್ವ ತನುರುಚಿ ಸಿರಿಗೆ ಸಿರಿಯನಾಗಿಪ ಮೆಯ್ಸಿರಿ
ಕ್ಷಿತಿಗೆ ಧೃತಿಯಂ ತೋರ್ಪ ಶ[೧]ಮತೆ ಗಂಗೆಗೆ ಪವಿ
ತ್ರತೆಯೊಳೆಣೆವಿುಗಿಲರುಂಧತಿಗೆ ಹೊಯ್ಕಯ್ ಪತಿ
ವ್ರತದೊಳೆಂದುತ್ತಮರ್ ನುತಿಪರೆರಡನೆಯುಮಾದೇವಿಯಂ ಮಾದೇವಿಯಂ ೭೯

ಅಡಿಯೊಳತಿರಾಗಂ ನಡುವಿನೊಳ್ ಮೃಷತ್ವವಾ
ಮುಡಿಯೊಳಗೆ ಕುಟಿಲಮಲರ್ಗಂಗಳೊಳ್ ಚಂಚಲತೆ
ಕಡು ಮೆಱೆವ ಪೀವರಕುಚಂಗಳೊಳ್ ಕರ್ಕಶತೆ ಪೊಡೆಯೊಳಪಗತಗಾರವಂ
ನಡೆಯೊಳಗೆ ಮಂದವೃತ್ತಿಯಿವಿರ್ದುವುಂ ಮತ್ತೆ
ಮಡದಿಯರ ತಲೆವಣಿಯೆನಿಸಿದಳ್ ಮಹಾದೇವಿ
ನುಡಿಯಲೇಂ ಜಗದನುಗ್ರಹಶೀಲರಲ್ಲಿರ್ದುವೆಲ್ಲಂ ಸ್ತುತ್ಯಮೆ‌ತ್ತಿ ೮೦

ಇಂತು ಸಚ್ಚರಿತಕ್ಕೆ ಮಾತೃಕೆಯೆನಿಸಿ ಮೆಱೆವ
ಕಾಂತಾಶಿರೋಮಣಿ ಮಹಾದೇವಿಯರ್ ಸಹಿತ
ಮಂತಕಾರಿಯ ಪದಾಂಭೋಜಮಂ ಪರಮಾನುರಾಗದಿಂದರ್ಚಿಸುತ್ತೆ
ಸಂತತಂ ಶರಣಸಂತತಿಯನಾರಾಧಿಸು
ತ್ತಂತವರ ದಿವ್ಯಾನುಭವಲಹರಿಯಿಂ ನಿಜ
ಸ್ವಾಂತವಲರಲ್ ಪರಮ ಹರ್ಷದಿಂದೊಪ್ಪುತಿರ್ದಂ ಪದ್ಮಣಾರ್ಯವರ್ಯಂ ೮೧

ಮದಕುಧರವಿದಳನಭಿದುರ ಪರಮಶಿವಭಕ್ತ
ಪದಶತದಳಾದಭ್ರಮಕರಂದಲೀಲಾಪ್ರ
ಮದಪರವಶೀಭೂತಮಧುಕರೋಪಮಪದ್ಮಣಾಂಕಪ್ರಣೀತಮಾಗಿ
ಸದಮಳಾಖಿಲಶಾಸ್ತ್ರಸಾರವೆಂದೆನಿಸುವ
ಭ್ಯುದಯಕರ ಪದ್ಮರಾಜಪುರಾಣಕಥೆಯೊಳಿಂ
ತಿದು ಗುರುಪಿತೃವಿನೈಕ್ಯಮಂ ಗುರುವಿವಾಹಮಂ ಮೆಱೆವ ಮೂಱನೆಯಸಂಧಿ ೮೨

೧ ಸ (ಬ, ಕ)

ಈಶಾಪರಾವತಾರನ ವಿಬುಧಸುತನ ಭವ
ಪಾಶನಾಶಕಕೆಱೆಯಪದ್ಮಣಾರ್ಯನ ಲಸತ್
ಶ್ರೀ ಶಿವಾದ್ವೈತಸಾಕಾರಸಿದ್ಧಾಂತಪ್ರತಿಷ್ಠಾಪನಾಚಾರ್ಯನ
ಈ ಶುದ್ಧಚರಿತಮಂ ತಿಳಿಪಿದರ್ಗೋದಿದ
ರ್ಗಾಶೆಯಿಂ ಕೇಳ್ದರ್ಗೆ ಭುಕ್ತಿಮುಕ್ತಿಗಳಂ ಮ
ಹಾ ಶುಭಂಗಳನಾಯುಮಂ ಕೊಟ್ಟು ಗುರುರೂಪ ವಿಶ್ವನಾಥಂ ರಕ್ಷಿಪಂ ೮೩

ಅಂತು ಸಂಧಿ ೩ ಕ್ಕಂ ಪದಂಗಳು ೨೧೭ ಕ್ಕಂ

ಮಂಗಳಮಗಮತ್

ಶ್ರೀ

ನಾಲ್ಕನೆಯ ಸಂಧಿ

ಸೂಚನೆ : **ಧರಣೀಶನಿಂ ದಂಡನಾಥಪಟ್ಟಂಬಡೆದು**
ಶರಣಪೂಜಾದಿಗಳಿನಮರ್ದು ಸುತಲಾಭದಿಂ
ಪರಿತುಷ್ಟನಾಗಿ ಚರಮಂ ಪಳಿಯೆ ದೃಷ್ಟಮಂ ತೋಱಿ ಪದ್ಮರಸನೆಸೆದಂ

ಮತ್ಸರರಹಿತ ಭಕ್ತವಾತ್ಸಲ್ಯವಿಭವಸಂ
ವಿತ್ಸಂಯಮೀಂದ್ರಚಿತ್ತೋತ್ಸವೋದ್ಯೋಗವಿಚಿ
ಕಿತ್ಸಾಹೃದವಶ ವಿಲಸತ್ಸಟಾಮಂಡಲೋದ್ಯತ್ ಸಾಮಗಾನಪ್ರಿಯಾ
ಉತ್ಸೇಕಸಂಹರ ವಿಯತ್ಸರಿನ್ಮಸ್ತಕ ವಿ
ಪತ್ಸಮುದ್ರವಹಿತ್ರ ಮತ್ಸಂಸೃತೀಂಧನಮು
ರುತ್ಸಖ ಭವಾಮಯಚಿಕಿತ್ಸಕೋಪಮ ಜಯ ಜಗತ್ಸೇವ್ಯ ವಿಶ್ವನಾಥಾ ೧

ಈ ಪರಿಯೊಳತಿಭಕ್ತಿಯಿಂ ನಿಜ ತನೂಜೆಯನು
ಮಾಸರೂಪಂಗೆ ಕೊಟ್ಟವರನೀಕ್ಷಿಸಿ ನಲಿವು
ತಾ ಪರಮಭಕ್ತಗೌತಪದಣಾಯಕನಿರುತೆ [೧]ಹರಿಸ[೧]ದಿಂ ಕೆಲವು ಬರಿಸಂ
ಓಪ ಮಗಳಂ ನಿಮ್ಮವಂಗಿತ್ತೆನೆಂದಿಕ್ಸ್ನಿ
ಚಾಪವೈರಿಪ್ರಮುಖ ಗಣಕುಲಕೆ ಪೇಳ್ವ ಭಾ
ವೋಪಚಯದಿಂದೆಯ್ದಿದನೊಯೆಂಬ ಬಗೆಯೊಳಾ ಮಂತ್ರಿ ಶಿವಪುರಮನೆಯ್ದೆ ೨

---

೧ ಹರುಷ (ಬ, ಕ)

ಬಲ್ಲಾಳರಾಯನಾ ಸುದ್ದಿಯಂ ಕೇಳ್ದು ಮನ
ದಲ್ಲಿ ಚಿಂತಾಂಗನೆಯನಾಲಿಂಗಿಸುತ್ತಾತ
ನೆಲ್ಲ ಬಂಧುಗಳನಾಪ್ತರನುಳ್ಳ ಬಳಗಮಂ ಬರಿಸಿಯವನನುಜ ತನುಜ
ಸಲ್ಲಲಿತ ಜಾಮಾತೃಮುಖ್ಯರೊಳಗೋರ್ವನೆ
ಮ್ಮುಲ್ಲಸಿತ ರಾಜ್ಯಭಾರವನಾಂತು ನಡೆಯಿಸಲ್
ಬಲ್ಲ ಬಲ್ಲಾಳುಂಟೆಯೆನೆ ನೃಪತಿಯುಂಟುಂಟು ಪೊಗಳ್ವನಾರವನ ಪೆಂಪಂ ೩

ಆ ಗೌರಸಾವಾತ್ಯನಾತ್ಮಜಾಧವನಿಳಾ
ಭಾಗದೊಳ್ ಜನಿಸಿದೆರಡನೆಯಶಿವನಖಿಳವೇ
ದಾಗಮಪುರಾಣಾದಿಗಳ ರಹಸ್ಯಾರ್ಥಮಱಿದವನೀಶನೊಳ್ ನೆಗಳ್ದವಂ
ಶ್ರೀಗುರುಪರಂಪರಾಸಂಭವಂ ಸಕಲ ಸುಕ
ಲಾಗಾರನಮಲದಾಕ್ಷಿಣ್ಯಲಲಿತಾಸ್ಯನೆ
ಲ್ಲಾ ಗುಣದೊಳೂಣೆಯುಂಬುಗದೆಸೆವನಾತನ ಪೆಸರ್ ಪದ್ಮರಸನೆಂದೆನೆ ೪

ಕೇಳ್ದು ನೃಪನಾಗಳೊದವಿದ ಮಹಾಚಿಂತೆಯಂ
ತೂಳ್ದು ತನ್ನಾತ್ಮರಂ ಕರೆದು ಹರ್ಷಾಂಬುಧಿಯೊ
ಳಾಳ್ದು ನೀವೀ ಮಿಸುನಿಯಂದಣಂಗೊಂಡೆಯ್ದಿ ಪದ್ಮರಸಮಂತ್ರಿಪಂಗೆ
ಪೇಳ್ದು ಕಾರ್ಯಾಂತರಮನೊಡಗೊಂಡು ಬರ್ಪುದೆನೆ
ತಾಳ್ದು ಶಿರದಿಂದಾ ನೃಪೋಕ್ತಿಯಂ ಧೀಯುತರ್
ಬಾಳ್ದಿವಾವೆನುತವರ ಗೃಹಕೆಯ್ದಿ ಪದ್ಮರಸರಂ ಕಂಡು ಚರಣಕೆಱಗಿ ೫

ಭಯಭಕ್ತಿಪೂರ್ವಕಂ ಬಿನ್ನಪಂಗೆಯ್ದರೆಲೆ
ನಯವಿದಮಹಾಪುರುಷ ಚಿತ್ತವಿಸು ನಿನಗಿಹೋ
ದಯ ಭೋಗಮುಂ ಸ್ವರ್ಗಮುಂ ಮೋಕ್ಷಮುಂ ಲಕ್ಷ್ಯಮೇ ಚಿತ್‌ಸುಖಾಸ್ವಾದಿಗೆ
ಪ್ರಿಯಮೆ ಮಾಯೀಯಸುಖದಿನಿದು ನೀಂ ಲೋಕರ
ಕ್ಷೆಯನಾಂತು ಜನಿಸಿದ ಕೃಪಾಳುವಂತದಱಿೊಳೆ
ಮ್ಮಯ ರಾಜನೇಂ ಪೊಱಗೆ ತನ್ನಿಮಿತ್ತಂ ಭೂಪನಿಷ್ಟಮಂ ಸಲಿಸೆನುತ್ತೆ ೬

ಪರಮಪ್ರಧಾನಪಟ್ಟಕ್ಕೆ ಭಂಡಾರಕ್ಕೆ
ಪರಿವಾರಕಾಪ್ತವರ್ಗಕ್ಕಶ್ವಗಜರಥೋ
ತ್ಕರದೊಡೆತನಕ್ಕೆ ಸರ್ವೋರ್ವರೆಯ ರಕ್ಷೆಗಾ ಶಿಕ್ಷೆಗುಳಿದೆಲ್ಲವರ್ಕೆ
ಪರಿಕಿಸಲ್ ನೀವಲ್ಲದಾರುಂಟು ಚಿತ್ತವಿಸಿ
ಪರಿರಕ್ಷಣಂಗೆಯ್ವುದವನಿಪನನೆಂಬ ಸ
ಭ್ಯರ ನುಡಿಯನಾಲಿಸುತ್ತಿದು ಮದ್ಗುರುವಿನಾಜ್ಞೆಯೆನುತದಂ ಮನದೆಗೊಂಡು ೭

ಅಂತೆಗೆಯ್ವೆವೆನುತ್ತೆ ಸರ್ವಮಾಹೇಶ್ವರರ
ತಿಂತಿಣಿಗೆ ಮೆಯ್ಯಿಕ್ಕಿ ಬೀಳ್ಕೊಂಡು ಬಂದು ಬಹು
ಕಾಂತಿಮಯವಾಗಿ ತಳತಳಿಪ ಪೊನ್ನಂದಣಮನೇಱಿ ತದ್ಬಲಸಮೂಹಂ
ಸಂತೋಷದಿಂದೋಲಗಿಸಿ ಬರೆ ಸಕಲವಿಭವ
ದಿಂ ತನ್ನೃಪಾಸ್ಥಾನಕೆಯ್ದುತಿರೆ ತದ್ಧರಾ
ಕಾಂತನೀ ವಾರ್ತೆಯಂ ಕೇಳ್ದು ಮೆಯ್ಯುರ್ವುತಿದಿರ್ವಂದು ಪರಮಾನಂದದಿಂ ೮

ಅನ್ಯೋನ್ಯಸಮುಚಿತ ವಿಧಾನದಿಂದೀಕ್ಷಿಸುತೆ
ಮಾನ್ಯನಂ ಬಳಿಕ ಭೂಪೋತ್ತಮಂ ಪರಮಸೌ
ಜನ್ಯದಿಂದುಪಚರಿಸುತಾ ಸಭಾಮಧ್ಯಕ್ಕೆ ಕೊಂಡೊಯ್ದು ತನ್ನ ಬಲದ
ಅನ್ಯೂನಪೀಠದೊಳ್ ಕುಳ್ಳಿರಿಸಿ ಸಕಲಧನ
ಧಾನ್ಯವಸ್ತ್ರಾಭರಣರಾಜ್ಯಾಶ್ವಹಸ್ತಿರಥ
ಸೈನ್ಯಾದಿ ಮದ್ವಿಭವಮೆಲ್ಲವುಂ ನಿನ್ನ ವಶವಾಂ ನಿನ್ನನುರೆ ನಂಬಿದೆಂ ೯

ಇಂತಿವೆಲ್ಲವನೆಯ್ದೆ ಪಾಲಿಸುತೆ ಮತ್ಕಾರ್ಯ
ಮಂ ತಡೆಯದುನ್ನತಂಗೆಯ್ಯುತೆ ಚತುಸ್ಸಮು
ದ್ರಾಂತವಾಗೆನಗೆ ಕೀರ್ತಿಪ್ರತಾಪಂಗಳಂ ನೆಗಳುತೀ ಘನಭಾರಮಂ
ಆಂತೆಮ್ಮನುಂಟುಮಾಡೆಂದು ವಿನಯೋಕ್ತಿಯಿಂ
ದಂತಾ ಮಹಾತ್ಮಂಗೆ ಬಲ್ಲಾಳಭೂಮಿಪನ
ನಂತವಿಧ್ಯುಕ್ತವಿಭವಂಗಳಿಂ ದಂಡೇಶಪಟ್ಟಮಂ ಕಟ್ಟಿ ಮುದದಿಂ ೧೦

ಚಾರುವಸ್ತ್ರಾಭರಣಲೇಪನಾದಿಗಳನೊ
ಲ್ದಾರಾಧನಂಗೆಯ್ದು ಸಂಪ್ರೀತಿ ಕೈವೀಱಿ
ಗೌರಪದಣಾಯಕರ ಸಕಲಸಂಪತ್ಸಂತತಿಯನಂತಿರೊಪ್ಪುಗೊಟ್ಟು
ಭೋರನವರಿವರೆನ್ನದೆಲ್ಲರುಂ ಕಾಣ್ಕೆಗೆ
ಯ್ವಾ ರೀತಿಯಂ ನೆಗಳ್ದು ಬಳಿಕೆ ಶಿವಸಮಯೋಪ
ಕಾರಿಯಂ ಪದ್ಮರಸರಂ ನೃಪತಿ ಗೃಹಕೆ ಬೀಳ್ಕೊಡುವಲ್ಲಿ ನುಡಿದರೊಂದಂ ೧೧

ಕೇಳಲೆ ನೃಪಾಲಾಗ್ರಣಿಯೆ ನೀನಾಗಳೆಮ್ಮನೊ
ಲ್ದಾಲೋಕನಂಗೆಯ್ದು ನಿನ್ನ ನಂಬಿದೆನೆನು
ತ್ತಾಳಾಪಿಸಿದೆ ಚತುರ್ದಶಭುವನಮಂ ರಕ್ಷಿಸುವ ಶಕ್ತನಾದ ಚಂದ್ರ
ಮೌಳಿಗಾಹಾ ನಿನ್ನನೋವುದಿಂದೊಂದಱಿದೆ
ಪೇಳಲೇನೀಶಭಕ್ತರ ದೆಶೆಗಕೃತ್ಯಮಂ
ತಾಳದಿರು ಸಪ್ತಾರ್ಣವಂಬರಂ ನಿನ್ನ ಜಸವೆಣ್ಣನೇಂ ತಡೆವರೊಳರೇ ೧೨

ಎಂದುಸಿರ್ದ ದಂಡಾಧಿನಾಥನುಚಿತೋಕ್ತಿಗೆ ಮ
ನಂದಣಿದು ಸಂತಸಂಬಟ್ಟು ಭದ್ರೇಭಮಂ
ತಂದು ಪಿಡಿಯಲ್ಕೇಱಿಸುತ್ತಖಿಲವೈಭವಂಬೆರಸು ಭೂಪಂ ಕಳುಹಿಸೆ
ಹೆಂದದಾನಂದದಿಂ ಬಂದು ತಮ್ಮರಮನೆಯ
ಮುಂದೆ ತದ್ಗಂಧಸಿಂಧುರವನಿಳಿದೊಡವಂದ
ಮಂದಿಯಂ ಬೀಳ್ಕೊಟ್ಟು ತನ್ನಂತವುರವನೆಯ್ದಿದನವನಿ ಪುಳಕಿಸುತಿರೆ ೧೩

ಮೇಲವನ ಭಕ್ತ್ಯತಿಶಯಂಬೇಳ್ವೊಡೊಂದೊಂದು
ನಾಲಗುಳ್ಳೆಮ್ಮಂದಿಗರ ಪವಣೆ ಬಳಿಕೆ ಬ
ಹ್ವಾಲಾಪಮೇಂ ನಾಲಗಿಚ್ಛಾರ್ಸಿರಮನುಳ್ಳ ಬಾಸುಗಿಗಳವೆ ಶಿವಶಿವಾ
ಕಾಲಕಂಠನೆ ಬಲ್ಲನನಿತಱೊಳ್ ಶಿವಭಕ್ತ
೧ಜಾಲಮಂ ಮುದದೆ ಬಿಜಯಂಗೆಯ್ಸಿ ಮೆಯ್ಯಿಕ್ಕಿ೧
ಲೀಲೆಯಿಂದಡಿದೊಳೆದು ಪಾದಾಂಬುವಂ ತಳೆದು ನಿಜ ಗೃಹಾಂತರಕೆ ತಂದು ೧೪

---

೧ ಜಾಲಮಂ ಬಿಜಯಂಗೆಯ್ಸಿ ತಱಿಸಿ ಮೆಯ್ಯಿಕ್ಕಿ (ಬ, ಕ)

ಮಂಜುಳವೆನಿಸುವುನ್ನತಾಸನದ ಮೇಲೆ ಮೃ
ತ್ಯುಂಜಯನ ಶರಣರಂ ಮೂರ್ತಿಗೊಳಿಸುತ್ತೆ ಸಾ
ಮಂಜಸ್ಯಮೆನೆ ಶಿವಾವಸರಮಂ ಸಲಿಸಿ ನವಘೃತಮನುತ್ತಮಭಕ್ಷ್ಯಮಂ
ರಂಜಿಸುವ ಶಾಕಪಾಕಾದಿ ದಿವ್ಯಾನ್ನಂಗ
ಳಂ ಜಯ ಜಯ ಸ್ವಾಮಿಯವಧಾರೆನುತೆ ಭಕ್ತಿ
ಯಿಂ ಜಂಗಮಪ್ರಾಣಿ ಬಡಿಸಿ ಸಾಷ್ಟಾಂಗದಿಂ ನಮಿಸೆ ತದ್ಭಕ್ತನಿಕರಂ ೧೫

ಪರಸಿ ಪರಮೇಶಾರ್ಪಿತಮನೆಸಗಿ ಷಡ್ರಸಾ
ದ್ಯುರುತರಾನ್ನವನರ್ಪಿತಾವಧಾನಂ ತಪ್ಪ
ದಿರವಿನಿಂ ಲಿಂಗಭೋಗೋಪಭೋಗಂಗೆಯ್ದು ಕರ್ಪೂರತಾಂಬೂಲಮಂ
ಧರಿಸಿ ಶೈವಾಂಬುಧಿಯ ತೆರೆಯಂತೆ ಸಂದಣಿಪ
ಹರಗಣಂಗಳ ತಿಂತಿಣಿಯನೀಕ್ಷಿಸುತ್ತೆ ಪ
ದ್ಮರಸರಾನಂದಿತಾಂತಃಕರಣರಾಗಿ ರೋಮಾಂಚಕಂಚುಕಿತಾಂಗದಿಂ ೧೬

ಕಾಮಿನಿಯರಂ ಹೇಮನಿವಹಮಂ ಭೂಮಿಗಳ
ನೇ ಮಾತೊ ದಿವ್ಯಾಂಬರಂಗಳಂ ಭೂಷಣ
ಸ್ತೋಮಮಮನಾಮೋದಕುಲಮನುದ್ಯದ್ವಾಹನಾದ್ಯಖಿಳವಸ್ತುಚಯಮಂ
ಆ ಮಲಹರನ ಭಕ್ತತತಿಗಿತ್ತು ನುತಿಸುತು
ದ್ದಾಮರಿರ ನಿಮ್ಮ ಬಾಗಿಲ್ಗಾಪಿನಾಳ್ ನಿಮ್ಮ
ಕೋಮಲಾಂಘ್ರಿಯ ಕೆರ್ಪುದಳೆವವಂ ನಿಮ್ಮ ಭೃತ್ಯರಭೃತ್ಯತತಿಯ ಭೃತ್ಯಂ ೧೭

ಎನ್ನನೀ ಮಾಳ್ಕೆಯಿಂ ನಿಚ್ಚಮುಂ ಪೊರೆವುದೆಲೆ
ಮನ್ನಾಥರಿರ ನಿಮ್ಮ ಸಮಯಮಂ ಪಡೆಯಲ್ಕ
ದೇಂ ನಾಡೆ ಶಕ್ತರೇ ಹರ್ಯರ್ಜೇಂದ್ರಾದ್ಯರಾನೇಂ ಸುಭಾಗ್ಯನೊಯೆನುತ್ತೆ
ಸನ್ನುತಿಗಳಿಂ ತುಷ್ಟಿವಡಿಸಿಯಾ ಭಕ್ತರ್ಗೆ
ತನ್ನ ಭಾಷೆಯನುಸಿರ್ದನೆಂತೆನಲ್ ಶಿವಸಮಯ
ಮಂ ನಿಲಿಸುವುದು ಭಾಷೆ ಶರಣರಿಚ್ಛೆಯಿಸಿದುದನಿಲ್ಲೆನ್ನದೀವ ಭಾಷೆ ೧೮

ಪರವಾದಿಗಳನೆಱಗಿಸುವ ಭಾಷೆ ಶಿವತಂತ್ರ
ದೊರೆಯನೂರ್ಜಿತಮನಾಗಿಪ ಭಾಷೆ ಶಿವಭಕ್ತ
ವರರನಾರಾಧಿಸುವ ಭಾಷೆ ಶಿವಪೂಜೆಯಂ ಸಾಂಗದಿಂ ರಚಿಪ ಭಾಷೆ
ಪರನಾರಿ ಗುರುನಾರಿಯೆಂದು ಚರಿಸುವ ಭಾಷೆ
ಯಿರದಾರ್ತರಂ ಪೋಷಿಸುವ ಭಾಷೆ ಮಾಹೇಶ್ವ
ರರ ಕುಲಮನಾರಯ್ಯದದು ಭಾಷೆ ಶಿವನಿಂದೆಯಂ ಕೇಳದಚಲಭಾಷೆ ೧೯

ಪಲವೇಂ ಶಿವಾನರ್ಪಿತಂಗೊಳ್ಳ[೧]ದುರು[೧]ಭಾಷೆ
ಯೊಲವಿನಿಂ ಭವಿಪಾಕಮಂ ಬೆರಸದತಿಭಾಷೆ
ಗೆಲವನಿತರರಗೀರ್ಯದೆಸೆವಸಮ ಭಾಷೆ ಭಕ್ತರ್ಗೆ ಗೆಲವೀವ ಭಾಷೆ
ಛಲದಿಂ ವ್ರತಭ್ರಷ್ಟರುಮನೀಕ್ಷಿಸದ ಭಾಷೆ
ನಲಿದು ಶಿವಭಕ್ತರಂ ಶಿವನೆಂಬಱಿವ ಭಾಷೆ
ಸಲೆ ಶಿವಾದ್ವೈತಸಾಕಾರಸಿದ್ಧಾಂತಪ್ರತಿಷ್ಠೆಯಂ ನೆಗಳ್ವ ಭಾಷೆ ೨೦

ನರರನಾಶ್ರಯಿಸದುತ್ಕಟಭಾಷೆಯನೃತಮಂ
ವಿರಚಿಸದ ಘನಭಾಷೆ ಕರಣೇಂದ್ರಿಯಾದಿಗಳ
ಪರಿದಾಟಮಂ ಬಿಡಿಸಿ ಲಿಂಗಾಂಗಸಂಯೋಗದೊಳ್ ನಿಲಿಸುವಸಮಭಾಷೆ
ಪರಿಕಿಸಲ್ಕೀ ಭಾಷೆಯೆಲ್ಲವಂ ನಿಮ್ಮಂಘ್ರಿ
ಸರಸಿಜಸಹಾಯದಿಂ ಪೊತ್ತು ನಡೆಸುವೆನೆಂದು
ಶರಣಸಭೆಯೊಳ್ ಧರಿಸಿ ತದ್ಗಣಶ್ರೇಣಿಗಷ್ಟಾಂಗದಿಂ ನಮಿಸಿ ಕಳಿಪಿ ೨೧

ಕಾಲಾನುಕೂಲ[೨]ವಾ[೨]ದೀಶಪೂಜೆಯನೆಸಗಿ
ಯಾಲೋಕಪಾಲನಾಂಗೀಕೃತಾಂಗಂ ಪ್ರಸಾ
ದಾಲೋಲನಾಗಿ ಮೇಣ್ ತನ್ನರಮನೆಯನಿರದೆ ಪೊಱಮಟ್ಟು ಸದ್ವಿಭವದಿಂ
ಭೂಲೋಲನೋಲಗಕ್ಕೆಯ್ದಿ ಬಲ್ಲಾಳನು
ತ್ತಾಳದಕ್ಷಿಣಪೀಠದೊಳ್ ಮೂರ್ತಿಗೊಂಡು ಪೇ
ರೋಲಗಂಗೊಟ್ಟು ಬಳಿಕೆಲ್ಲರಂ ಬೀಳ್ಕೊಳಿಸಿ ಪರಿಮಿತಂಗೆಯ್ದು ಮೇಲೆ ೨೨

---

೧ ದದು (ಅ) ೨ ನಾ (ಬ, ಕ)

ನರಪನಿಂ ಬೀಳ್ಕೊಂಡು ಬಂದು ಮುಂದೊಪ್ಪಿರ್ಪ
ಕರಣಶಾಲೆಯನೆಯ್ದಿ ಕರಣಿಕಾಕೃತಿಯ ಹರಿ
ಹರದೇವನಾದಿಯಾಗೆಸೆವ ಪದಿನಾಱು ಕರಣದವರಂ ಬರಿಸಿ ನಯದಿಂ
ನಿರುತವಾದಾಯಮೇಂ ವೆಚ್ಚಮೇಂ ಸಂದುದೇಂ
ಪರಿಕಿಸಲ್ ನಿಂದುದೇಂ ಸಂವರಣಮೇಂ ದಿನಕೆ
ಚರಿಪುದೇನೆಂದಿಂತೊಳಗುಮುಟ್ಟಿ ಕೇಳ್ದು ಪಿಂದಾದ ಲೆಕ್ಕದ ವಿವರಮುಂ ೨೩

ಅಂತವಱ ಪೋಗಾಗುಗಳನೊರೆದೊರೆದು ಸುಸೂ
ತ್ರಂ ತಪ್ಪದಂತೆ ಸೇರುವೆಗಿಕ್ಕಿ ಬರೆಯಿಸಿ ಸ
ಮಂತು ಭಂಡಾರಮಂ ಬೊಕ್ಕಸಮನುಗ್ರಾಣಮಂ ಕಣಜ ಕಾಮುವಟ್ಟ
ಮುಂತಾದವಂ ದಂತಿವಾಜಿಗಳ ಭೋಗಮುಂ
ಸಂತತನಿಯೋಗಮುಂ ಪೊಱವೆಚ್ಚವೊಳವೆಚ್ಚ
ಮಂತೆ ಸುಂಕಂ ತಳಾಱಿಕೆ ಚರಾದಾಯಮೆಂಬಿಂತೆಲ್ಲವಂ ಪರಿಕಿಸಿ ೨೪

ಅಲ್ಲಿಗಲ್ಲಿಗೆ ತಕ್ಕತಕ್ಕ ಬಗೆಬಗೆಗಳೊಳ
ವೆಲ್ಲರ್ಕೆ ಕಟ್ಟುಮೆಟ್ಟಂ ಮಾಡಿ ರಾಣುವೆಯೊ
ಳುಲ್ಲಸಿತ ಜನಪದದೊಳೆಲ್ಲಿಯುಂ ತನ್ನಾಣೆಘೋಷಣೆ ಮೆಱೆಯೆ ವರ್ತಿಸಿ
ಬಲ್ಲಾಳನೃಪತಿಗೆ ಬಹು ದ್ರವ್ಯಮಂ ಯಶಮ
ನುಲ್ಲಾಸಮಂ ಪ್ರತಾಪಮನೊಂದಿಸುತ್ತವನ
ಬುಲ್ಲವಿಪ ಬಲದ ಭಾಗದ ದೇವರೆನಿಸಿ ಬಲ್ಜಸವೆತ್ತು ಘನಶಕ್ತಿಯಿಂ ೨೫

ಅನ್ನೆಯಮಿನಿಸು ಪುಗದವೊಲ್ ಭೂಪವೃತ್ತಿ[೧]ಯಂ[೧]
ತಾಂ ನಡಸು[೨]ತುಂ ಗತಚ್ಛದ್ಮಂ[೨] ಸುಗುಣಸದ್ಮ
ನುನ್ನತೋತ್ಫುಲ್ಲಹೃತ್ಪದ್ಮಂ ಸಕಲ ಶರಣಮುಖಪದ್ಮಪದ್ಮಮಿತ್ರಂ
ಸನ್ನುತಾಖಿಳಸಚಿವಮುಸ್ತಕಪರಿನ್ಯಸ್ತ
ಪನ್ನಳಿನ ಪದ್ಮಣಾಮಾತ್ಯಶೇಖರನಿಂತ
ದೇಂ ನಟಸಿದನೊ ಶಿವನಿಮಿತ್ತವೊಂದಧಿಕಾರಮುಂ ಬುಧರ್ ಭಾಪೆಂದೆನೆ ೨೬

---

೧ ಯಿಂ (ಅ) ೨ ತುತ್ತುಂಗತಚ್ಛದ್ಮಂ (ಬ, ಕ)

ಒರೆಯಲೇನೀ ಪರಿಯೊಳಾ ರಾಜಕಾರ್ಯಮಂ
ಪರಿಪೂರ್ತಿಗೆಯ್ಯುತೆ ಸಮಸ್ತ ಮಾಹೇಶ್ವರರ
ಚರಣಾಬ್ಜಮಂ ಭಾವಶುದ್ಧಿಯಿಂ ಸೇವಿಸುತೆ ವೇದೋಕ್ತವೀರಶೈವ
ಸರಣಿಯಂ ದುಷ್ಕೃತ್ಯಮೆಂಬ ಗಿಡುಬಳ್ಳಿಪುಲ್
ಮರಪೊದಱುಕಲ್‌ಮುಳ್‌ಬೆದಡುಗಳೊಂದದವೋಲ್ ಸು[೧]
ಸರಮನಾಗಿಸುತೆ[೧] ಶರಣಾನುಭವಸೌಖ್ಯದಿಂದೊಪ್ಪುತಿರಲೇ ವಣ್ಣಿಪೆಂ ೨೭

ಮೃಡಭಕ್ತರಾನಂದವಂಕುರಿಸುವಂತೆ ಗಡ
ಬಡಿಪ ಪರವಾದಿಗಳ ಸಂಭ್ರಮಾಟವಿಗುಣ್ಮ
ವಡವಿಗಿಚ್ಚಿನ ಬೀಜದಂತೆ ಶಿವ ಶಿವ ಮಹಾದೇವಿಯರ ಗರ್ಭದಲ್ಲಿ
ಬಿಡು ಬಿಡಂತಿಂತೆಂದು ಪೊಡರ್ವ ನುಡಿಗಡಣಗಳ
ನೆಡೆವಾತದೇಂ ಷಟ್‌ಸ್ಥಲಸ್ಥಾಪನಾರ್ಥಮಾ
ಕಡುಮೆಯ್ಮೆವಡೆದ ಷಣ್ಮುಖನಖಿಳಶಕ್ತಿ ಬಂದೊಳಪೊಕ್ಕು ಶೋಭಿಸುತಿರೆ ೨೮

ನಡೆ ಮೆಲ್ಲನಾದುದು ವಳಿಯುಡಂಗಿದುವು ಬಾಸೆ
ಕಡುಪಾಯ್ತು ನಡು ಪೆರ್ಚಿದುದು ನಾಭಿ ಗುಣ್ಪಾಯ್ತು
ಪೊಡೆ ಪೊಣ್ಮಿದುದು ಕುಚಾಗ್ರಂ ನೀಲಮಾದುದೆಳೆವಳ್ಳಿಮೆಯ್‌ಬೆಳ್ಪಡರ್ದುದು
ಕುಡಿತೆಗಣ್ ಬಳಲಕಲ್ತುವು ಕವಲ್ತುವು ಬಳ
ಲ್ಕುಡಿಯುನವಿರಾಗುಳಿಕೆ ನಿದ್ರೆಯಲಸಿಕೆಯಶನ
ದೆಡೆಯೊಳಪ್ರಿಯಮೊದವಿದುವು ಗರ್ಭಚಿಹ್ನಮೆಸೆದುದು ಲತಾತನ್ವಿಗಂದು ೨೯

ಇಂತೆಸೆವ ಕೋಮಲೆಯ ಗರ್ಭದೊಳ್ ನವಮಾಸ
ಮಂ ತಿಸುಳಿ ಜೋಗಸೊಗ[೨]ದಿಂ[೨] ಕಳೆದು ಮೇಲೆಗುರು
ವಂ ತಡೆಯದೀಕ್ಷಿಸುವೆನೆಂಬಳ್ಕಱಿಂದೊಗೆದನೋಯೆಂಬ ಮಾಳ್ಕೆಯಿಂದೆ
ಎಂತೆಂಬೆನಮೃತಲತೆಯೊಳ್ ದಿವ್ಯಫಲಮುದಯಿ
ಪಂತೆ ಪಾಲ್ಗಡಲೊಳಗೆ ಕಲ್ಪಭೂಜಂ ಪುಟ್ಟು
ವಂತೆ ಮಾದೇವಿಯುದರದೊಳೊಗೆದನಮ್ಮಮ್ಮ ಸುಕುಮಾರಕುಲಶೇಖರಂ ೩೦

---

೧ ಸುಖರಸಮನಾಗಿಸುತೆ (ಬ) ೨ ಕ (ಬ, ಕ)

ಉದಯಸಮಯದೊಳಸಮಶಿಶುಗನಘಲಿಂಗಮಂ
ಸದಮಲಾತ್ಮಂ ಧರಿಸಿ ಸಕಲ ಮಾಹೇಶ್ವರರ
ಪದಸರೋಜಕ್ಷಾಲನೋದಕದೆ ಮೆಯ್ದೊಳೆದು ಶಿವಮಂತ್ರಮಂ ಸ್ಮರಿಸುತೆ
ಪದೆದು ಭಸಿತವನಿಟ್ಟು ಪಣೆಗೆ ಸರ್ವಾಂಗಕ್ಕೆ
ಪದುಳದಿಂ ತಳಿದು ಸುಕುಮಾರಪದ್ಮರಸರೆಂ
ಬಿದು ಪೂರ್ವಮಂ ಸೂಚಿಸುತ ಪರಮಂ ಪೇಳ್ವುದೆಂದು ತನ್ನಾಮವಿಟ್ಟು ೩೧

ಸಕಲ ವಾದ್ಯಂಗಳಾಘೋಷಿಸಲ್ ಶಿವಭಕ್ತ
ನಿಕರಮಂ ತಣಿವೊಲಾರಾಧನಂಗೆಯ್ದು ಸ
ರ್ವಕುಮಾರತಿಲಕ ಸುಕುಮಾರಪದ್ಮರಸರಂ ತದ್ಭಕ್ತಸಂದೋಹಕೆ
ಪ್ರಕಟಿತಪರಮಭಕ್ತಿಯಿಂದೆ ತಂದೆಱಗಿಸಿ ಬ
ಳಿಕಮವರ ಪರಕೆಯಂ ಕೊಡಿಸಿ ಶಿವಶೇಷಮಿ
ತ್ರಕುಟಿಲಾತ್ಮರ್ ದಂಪತಿಗಳೋವುತಿರೆ ಬಳೆವುತಿರ್ದನದನೇವಣ್ಣಿಪೆಂ ೩೨

ಪೃಡದೂಷಕರ ಬಾಯ್ಗಳಂ ಮುದ್ರಿಸುವ ಚೆಲ್ವ
ನುಡಿಯೊಡನೆ ನುಡಿಗಲ್ತು ಮಾಯಾಪ್ರಪಂಚಮಂ
ಕೆಡೆಮೆಟ್ಟಿ ನಡೆವ ನಡೆಯೊಡನೆ ನಡೆಗಲ್ತು ಶಶಿಧರಯೋಗಸೌಖ್ಯಸುಧೆಯಂ
ತಡೆಯದುಣ್ಬುದಱೊಡನುಣಲ್ ಕಲ್ತು ಶಿವಭಕ್ತ
ರಡಿಯನರ್ಚಿಪ ಬುದ್ಧಿಯೊಡನಮಮ ಬುದ್ಧಿಗ
ಲ್ತಿಡಚಜವಕಾವರಂ ಕೆಡಿಪಾಟದೊಡನಾಟಮಂ ಕಲ್ತದೇಂ ಮೆಱೆದನೋ ೩೩

ಒದವಿದ ಚತುಷ್ಷಷ್ಟಿಕಲೆಗಳೊಳಗಣ ತಿಳಿವು
ಪದಿನೆಂಟುತೆಱದ ವಿದ್ಯೆಗಳ ಕಣ್ದೆಱವು ಸ
ಕ್ಕದಮುಮರ್ದ ಕನ್ನಡಂ ಪಾಗದಂ ಮಾಗಧೀಯಂ ಸೌರಸೇನಿ ದೇಶಿ
ವಿದಿತಪೈಶಾಚಿಕವಪಭ್ರಂಶಚೂಳಿಕಾ
ಭ್ಯುದಿತಾಷ್ಟಭಾಷಾಕವಿತ್ವಮುಂ ಶಿವರಹ
ಸ್ಯದ ಹೃದಯಮುಂ ಮಹಾ ಸ್ಫುಟವಾದುವಾ ಶಿವಕುಮಾರಂಗದೇಂ
ಚೋದ್ಯಮೋ ೩೪

ವರ ಪುಣ್ಯಜನವಿರುದ್ಧಂ ಸುರಾಂಗೀಕೃತಾ
ಚರಣಂ ಬೃಹಸ್ಪತಿ ರಜೋಗುಣವಿಕಾರಿಯುರು
ತರ ಜಡಜಜನ್ಮನಾ ಬ್ರಹ್ಮಂ ವಿಷಾನ್ವಿತಮುಖಂ ಜಗತ್ಪ್ರಾಣಾಶನಂ
ಉರಗಪತಿಯೆಂದಿವರನುಳಿದು ಸುಕುಮಾರಪ
ದ್ಮರಸರಾಸ್ಯಾಬ್ಜಮಂ ವಾಣಿ ಭಯಭಕ್ತಿಯಿಂ
೧ಪ೧ರಿದೊಂದಿ ಶಿವಮಂತ್ರಮುಜ್ವಲಿಸುವೆಡೆಯೆಂದು ಬಿಡಳದೇಂ
ಕೃತಕೃತ್ಯೆಯೋ ೩೫

ಶಾಂತಿಯೇ ಸಾಕಾರಮಾದುದೋ ಶೈವತೇ
ಜಂ ತಾನೆ ನಡೆಗಲ್ತುದೋ ಶಿವಶಿವಾ ಪೊಗಳ್ವೆ
ನೆಂತೋ ಮೂಲಪ್ರಣಮವೇ ಸೊಗಸುವಾತನಾಡಲ್ತೊಡಗಿತೋ ರುದ್ರನಾ
ಅಂತಃಕರಣಶಕ್ತಿ ಮೆಯ್ವೆತ್ತು ಬಹುಶಾಸ್ತ್ರ
ಮಂ ತಿಳಿಯಲುದ್ಯೋಗಿಸಿತೊ ಶರಣರಾನಂದ
ಸಂತತಿಯ ಬಾಳ್ಮೆದಲೊಯೆನಿಸಿ ಸುಕುಮಾರಪದ್ಮರಸಾಂಕನೊಪ್ಪುತ್ತಿರೆ ೩೬

ಈ ಪರಿಯೊಳೆಸೆವ ಸುಕುಮಾರಕನ ವಿಮಲಚಿ
ದ್ವ್ಯಾಪಾರಮಂ ಭಕ್ತಿಕಾಂತಾವಶೀಕೃತಕ
ಲಾಪರಿಮಿಲಚ್ಛಿವಾರ್ಪಿತಯೌವನೋದಯಮ೨ನೌಜ್ವಲ್ಯಮಸಿತಾಂಗಮಂ೨
ಆ ಪದ್ಮರಾಜನೀಕ್ಷಿಸಿ ಮುದಂಬೆತ್ತು ಸಮ
ರೂಪ ಸಮವಿಭವ ಸಮಶೀಲ ಸಮಗುಣಗಣೋ
ದ್ದೀಪಿತಾಂಗಿಯನೋರ್ವಳಂ ಸುತಂಗುದ್ವಾಹಮಂ ಮಾಡಿ ಸುಖಮಿರುತ್ತಿ ೩೭

ದಂಡನಾಯಕತಿಲಕನೊಂದು ದಿನದೊಳ್ ಮಹೀ
ಮಂಡಲೇಶನ ಸಭೆಯನೆಯ್ದಿ ಕುಳ್ಳಿರ್ದು ಮುಂ
ಕೊಂಡಖಿಲಕಾರ್ಯಮಂ ಸಾಗಿಸುತೆ ಕೆಲವು ಪೊತ್ತಿರ್ದು ಮೇಲರಸುವೆರಸು
ಚಂಡಮತಿ ರಾಜವೀಥಿಗೆ ಬಂದು ಪೊಸತೇಜಿ
ವಿಂಡನೀಕ್ಷಿಸುವಲ್ಲಿ ತಮ್ಮರಮನೆಗೆ ನಾಗ
ಕುಂಡಲನ ಭಕ್ತರ್ ವಿಲಾಸದಿಂದಾರೋಗಣೆಗೆ ಗಮಿಸುತಿರೆ ಕಾಣುತೆ ೩೮

---

೧ ಪಿ (ಬ, ಕ) ೨ ಔಜ್ವಲ್ಯಾಂಗಮಂ (ಬ, ಕ)

ಪರಿದೆಯ್ದಿ ಸಾಷ್ಟಾಂಗದಿಂ ನಮಿಸಿ ಪದ್ಮರಸ
ರಿರದವರೊಡನೆ ಪೋಗುತಿರಲತ್ತ ಭೂಪತಿಗೆ
ಪರವಾದಿಗಳ್ ನುಡಿದರೀಕ್ಷಿಸಿದಿರೇ ದೇವ ನಿಮ್ಮ ಮಂತ್ರಿಯ ಚರಿತಮಂ
ಒರೆಯಲೇಂ ಕಟ್ಟೊಡೆಯನಾದನಿನ್ನುಮನಿನಿಸು
ಪರಿಕಿಸದೆ ನಿರ್ಭೀತಿಯಿಂ ಪೋಗಿ ಕಾಲ್ಗೆಱಗಿ
ವಿರಚಿಸುತ್ತಿರ್ದಪನದಂತಿರ್ಕೆ ಮೇಣ್ ಪೋಗುವೀ ಜಂಗಮಾಳಿಯಲ್ಲಿ ೩೯

ಕುಲಹೀನನೋರ್ವನಂ ಮೆಯ್ಕೆಟ್ಟು ಕೂಳ್ ಪುಟ್ಟ
ದಲೆವೆತ್ತು ಬಗುತಿಕೆಯನಾಂತಿರ್ಪನಾತನಂ
ನಿಲಯಕ್ಕೆ ತಂದು ಕಾಲ್ದೊಳೆದು ತಜ್ಜಲವೀಂಟಿಯುಣಲಿಕ್ಕಿ ಮಿಕ್ಕುದುಂಡು
ಪೊಲೆಗಲಸಿದಂ ಬ್ರಹ್ಮವಿನ್ನೆಲ್ಲಿತೆನೆ ನೃಪಂ
ಕಲುಷಾತ್ಮನಾಗಿ ಪದ್ಮರಸರಂ ಕರೆಯಿಸು
ತ್ತೆಲೆಲೆ ನೀವಿಂತಂತ್ಯಜನುಮಾದ ಮೆಯ್ಕೆಟ್ಟನೊಳ್ ಬೆರೆವುದುಚಿತವೇ ಯೆನೆ ೪೦

ಶಿವಶಿವಾಯೆನುತೆರಡು ಕೈಗಳಂ ನಿಜಕರ್ಣ
ವಿವರಕೊಂದಿಸುತೀ ಮಹಾಪಾತಕರ ಘೋರ
ಭವಜಲಧಿಮಗ್ನರ ವಿವೇಕನಗ್ನರ ಧರ್ಮಭಗ್ನರ ನರಕಲಗ್ನರ
ಕುವಚೋರಚನೆಗಿಂತು ನೀಂ ಭ್ರಾಂತನಪ್ಪರೇ
ಅವನೀಶ ಭಾವಿಸುವೊಡೆಸೆವ ವೇದಾಂತ್ಯಜಂ
ಸುವಿವೇಕಿಗಳ ನಿಶ್ಚಲಮನೋಂತ್ಯಜಂ ಸಂವಿದಂತ್ಯಜಂ ತಾನಲ್ಲದೆ ೪೧

ತಿಳಿವೊಡಾ ಅಯ್ಯನಂತ್ಯಜನಲ್ತದೆಂತೆನಲ್
ಕುಳನಗಗ್ರಾಮಾದಿಗಳಿನಿರದೆ ಬಂದ ನೀ
ರ್ಗಳವೆಯ್ದೆ ಗಂಗೆಯಂ ಪೊಕ್ಕು ತೀರ್ಥಾಂಬುವೆನಿಸವೆ ಕಾಗೆಗಳ್ ಮೇರುವಂ
ಬಳಿಕೊಂದಿ ಪೊಸಮಿಸುನಿವಣ್ಣದಿಂದೆಸೆಯವೆ ಸ
ಕಲವಿಧದ ಕಾಷ್ಠಂಗಳಗ್ನಿಯಂ ಸೋಂಕಿಯು
ಜ್ವಳಭಸ್ಮವಾಗವೇ ಅಂತೆ ನರಕ್ಕೆ ಗುರುವಂ ಮುಟ್ಟೆ ಗುರುವಾಗರೇ ೪೨

ಉದ್ಧತಕುಲಜರಿವರಧಮಕುಲಜರಿವರೆಂಬ
ಬುದ್ಧಿಯಂ ಬಿಡದೆಂತೆನಲ್ ತಾಮ್ರಮೆಯ್ದಿ ರಸ
ಸಿದ್ಧಿಯಿಂ ಹೇಮಮಾದುದು ಮತ್ತೆ ತಾಮ್ರವೇನಪ್ಪುದೇ ಕಾಯ್ದು ಬೆಣ್ಣೆ
ಶುದ್ಧಘೃತಮಾಗಿ ಮೇಣದು ಬೆಣ್ಣೆಯಪ್ಪುದೆ ಸ
ಮೃದ್ಧಶುಕ್ತಿಯನೆಯ್ದಿ ಮುತ್ತಾದ ನೀರ್ ಮಗುಳೆ
ಬದ್ಧಜಲವಪ್ಪುದೇ ಅಂತೆ ಶಿವದೀಕ್ಷಿತಂ ಬಳಿಕ ಪೂರ್ವದೊಲಿರ್ಪನೇ ೪೩

ಇಂತೆಂದು ವೇದವೇದಶಿರಃಪುರಾಣಾಗ
ಮಾಂತರಂಗಳ್ ಪಲವು ತೆಱದಿನುಲಿವುತಿರೆ ಭೂ
ಕಾಂತ ನೀನಜ್ಞಾನಿಗಳ ಮಾತ ಕೇಳ್ವರೇ ತಮಗೆ ಗುರುವೆನಿಸಿ ಮೆಱೆವಾ
ಶಾಂತಿರೂಪಂ ವ್ಯಾಸನಾ ವ್ಯಾಧಕನ್ಯೆಗೋ
ರಂತೊಗೆದಯೋಗ್ಯನಾದನೆ ಮತ್ತೆ ಮಾತಂಗಿ
ಗಂತೊಗೆದ ತನ್ಮತಂಗನಮಾನ್ಯನೇ ಶುನಕಿಗೊಗೆದ ಶೌನಕನಧಮನೇ ೪೪

ಊರ್ವಶಿಗೊಗೆದ ವಸಿಷ್ಠಂ ಹೀನನೇಯಿವರ
ಪೂರ್ವಶಾಂಭವದೀಕ್ಷೆಯಿಂದೀ ತ್ರಿಲೋಕಕ್ಕ
ಖರ್ವಪೂಜ್ಯತೆಯಿಂದೆ ಮೆಱೆದುದಿಲ್ಲಾ ಕೀಟನಕಟ ಮಧುಪಾಲಂಬದಿಂ
ಉರ್ವುತೇಂ ಮಧುಪನಾಗದೆ ಮಲಿನಜೀವರಾಂ
ತರ್ವರ್ತಿಯಾದ ರತ್ನಂ ನಿಂದ್ಯಮೇ ಶಿಲಾ
ಪೂರ್ವಮಳಿದೆಸೆವ ಲಿಂಗಂ ಶಿಲೆಯೆ ತದ್ವಿಧಿಯೊಳೀಶಾರ್ಚಕಂ ಮೆಱೆಯನೇ ೪೫

ಅರರೆ ದುರ್ಜಾತಿಸಂಭವನಾಗಿಯುಂ ಭಕ್ತ
ನುರು ಪೂತನೆಂತೆನಲ್ ಪಾಷಾಣದಲ್ಲಿ ಶುಭ
ಕರಹೇಮಮಾ ಕಾಷ್ಠದಲ್ಲಗ್ನಿ ಪಂಕದಲ್ಲುದ್ಭಪದ್ಮಂ ಜನಿಸಿಯುಂ
ಪರಮಸೇವ್ಯತೆಯಿಂದೆ ರಾರಾಜಿಪಂತೆ ಭೂ
ವರ ಮತ್ತೆ ಕೇಳ್ ಶರಣರೇ ಕುಲಜರಲ್ತೆಂಬ
ವರ ಬಾಯನೆಡದ ಕಾಲ್ಗೆರ್ಪಿನಿಂ ಮುಚ್ಚುತಿದೆ ವೇದಾಂತತತಿಯೆಂತೆನೆ ೪೬

ಒತ್ತಿಯಪಿವಾಯೋಯೆನುತ್ತೆ ಚಂಡಾಲೋಯೆ
ನುತ್ತದು ಶಿವೇತಿವಾಚಂ ವದೇತ್ತೇನಯೆನು
ತೆತ್ತಿ ಸಹಸಂ ವದೇತ್ತೇನ ಸಹಸಂ ವಿಶೇತ್ತೇನ ಸಹಸಂ ಯೆನುತ್ತೇ
ಮುತ್ತಂ ವಸೇತ್ತೇನ ಸಹಭುಂಜತೇಯೆಂಬಿ
ನಿತ್ತುಕ್ತಿಯಿಂ ಶ್ವಪಚನಾದೊಡಂ ಶಿವಯೆಂಬ
ನುತ್ತಮನವನ ಕೂಡೆ ನುಡಿವುದೊಡನೆಯೆ ನಡೆವುದೊಡನಿರ್ಪುದೊಡ
ನುಣ್ಬುದು* ೪೭

ಎಂದು ಜಾಬಾಲೋಪನಿಷದುಕ್ತಿ ಸಾಱುತಿರೆ
ಮಂದಮತಿಗಳ ನುಡಿಗೆ ಕಿವಿಗುಡುವರೇ ನೃಪಾ
ಚೆಂದದಿಂ ಶ್ವಪಚೋಪಿಯೆನುತೆ ತಚ್ಛ್ರುತಿ ಮುನಿಶ್ರೇಷ್ಠಾಯೆನುತೆ ಸತ್ಯಕೆ
ನಿಂದು ಶಿವಭಕ್ತ್ಯಾ ದ್ವಿಜಾಧಿಕೋಯೆನುತೆ ನಲ
ವಿಂದೆ ಶಿವಭಕ್ತಿಯೆನುತುಂ ವಿಹೀನಸ್ತುಯೆನು
ತೆಂದುಂ ದ್ವಿಜೋಪಿಯೆನುತದುವೆ ದಲ್ ಶ್ವಪಚಾಧಮೋಯೆನುತೆ
ವಿವಿಧವಿಧದಿಂ§ ೪೮

ಶಿವಭಕ್ತಿಯುಳ್ಳ ಚಂಡಾಲನೇ ಬ್ರಾಹ್ಮಣ
ಪ್ರವರನಾ ಭಕ್ತಿಯಿಲ್ಲದ ಭೂಸುರಂ ಶ್ವಪಚ
ನಿವಹಕ್ಕಧಮನೆಂದು ಶಿವರಹಸ್ಯಾದ್ಯಖಿಳಶಾಸ್ತ್ರಂಗಳುಲಿವುತ್ತಿರೇ
ಇವು ಸೇವ್ಯಮೋ ಮೂಢನರರುಕ್ತಿ ಸೇವ್ಯಮೋ
ಅವನೀಶ ವೃತ್ತಿಯುಂ ಬ್ರಹ್ಮಾ ಶಿವೋಯೆಂದು
ವಿವರಿಸಲ್ ಶ್ರುತಿ ವಲಂ ಬ್ರಹ್ಮಚಾರೀಯೆನುತ್ತುಂ ಬ್ರಾಹ್ಮಣೋಯೆನುತಿರೆ ೪೯

ಪರಮನೇ ಪರಬ್ರಹ್ಮನಾಮಾರ್ಹನೆನಿಪನಾ
ಪರಮ ಸದ್ಬ್ರಹ್ಮಾಚರಣಮುಳ್ಳರೇ ಬ್ರಾಹ್ಮ
ಣರೆನಿಪ್ಪರಿದು ತದಾಮ್ನಾಯಾರ್ಥಮದಱಿನಾ ಬ್ರಹ್ಮಾಚರಣಮಿಲ್ಲದಾ
ನರಕಿಗಳ್ಗುಂಟೆ ಕೇಳಾ ಬ್ರಹ್ಮವೆಮ್ಮ ಶಂ
ಕರನ ಶರಣರ್ಗಲ್ಲದಿದನುಳಿದು ಜಾತಿಯೇ
ಪರಮೆಂಬೊಡಂ ಜಾತಿಗೀತಿ ತಾಂ ಗಹನಮೇ ಭಕ್ತರ್ಗದೆಂತೆಂದೆನೇ ೫೦

* ಅಪಿವಾಯಶ್ಚಂಡಾಲಶ್ಶಿವೇತಿ । ವಾಚಂವದೇತ್ತೇನ ಸಹಸಂ ವದೇತ್ತೇನ ಸಹಸಂ ವಿಶೇತ್ತೇನ ಸಹಸಂ ವಸೇತ್ತೇನ ಸಹಭುಂಜತೇ ॥ (ಜಾಬಾಲೋಪನಿಷತ್)

§ ಶ್ವಪಚೋಪಿ ಮುನಿಶ್ರೇಷ್ಠಾ । ಶ್ಶಿವಭಕ್ತ್ಯಾದ್ವಿಜಾಧಿಕಃ । ಶಿವಭಕ್ತಿವಿಹೀನಸ್ತು ದ್ವಿಜೋಪಿ ಶ್ವಪಚಾಧಮಃ ॥ (ಶಿವರಹಸ್ಯ)

ಪರಮಶಿವನಿಷ್ಠಂ ವಸಿಷ್ಠನತಿಕರುಣದಿಂ
ದರರೆ ವಿಶ್ವಾಮಿತ್ರಭೂಪನಂ ಬ್ರಹ್ಮರ್ಷಿ
ವರನೆನಲ್ ನೆಗಳ್ದುದಿಲ್ಲಾ ಬಳಿಕ ಹರಿಯಂಬನಂ ಹತ್ತುಸೂಳ್ ಭವಕ್ಕೆ
ಬರಿಸಿದೀಶಾರ್ಚಕಂ ಭೃಗುವಿತ್ತ ಹವ್ಯಾಖ್ಯ
ನರಪತಿಗೆ ಕೂರ್ತು ಭೂಸುರವರ್ಯಪಟ್ಟಮಂ
ವಿರಚಿಸಿ ಪುನಃ ಪ್ರತಿಷ್ಠೆಯನೆಸಗನೇಯಿಂತು ಭಾರತಮುಲಿವುದಂತಱಿಂ ೫೧

ಶರಣರೊಲ್ದೊಡೆ ಫಲಿಸದಿರ್ಪ ಕಜ್ಜಗಳುಂಟೆ
ಧರಣೀಧವಾ ಬಿಡಾ ಮಾತದಂತಿರ್ಕೆ ನೀ
ನೊರೆದೆ ಮೆಯ್ಕೆಟ್ಟವನೆನುತ್ತಾಗಳಕ್ಕಕ್ಕುಮದು ಪುಸಿಯೆ ಜವನ ಗದೆಯ
ಪಿರಿಯ ಲಚ್ಚಣದ ಮೆಯ್ಕೆಟ್ಟವಂ ಪರಿಭವಕೆ
ತಿರಿತಿರಿಗಿ ಬರ್ಪ ಮೆಯ್ಕೆಟ್ಟವಂ ಮೆಯ್ಯಿರ್ದು
ಮರರೆ ಭಾವಿಪೊಡೆ ಮೆಯ್ಕೆಟ್ಟವಂ ತಾನಲ್ಲದೀ ಕುಷ್ಠರೋಗದಿಂದೆ ೫೨

ಬಳಿಕ ಮೆಯ್ಕೆಟ್ಟವನೆನಲ್ ಸಲ್ವುದೇ ವಿಪ್ರ
ಕುಲಕೆ ದೇವರೆನಿಪ್ಪ ತತ್ಸವಿತೃವಾರ್ಧರಾ
ವಳಯಪತಿಮಾರ್ತಾಂಡ ಭಾನೋರೆನುತ್ತೆ ಕುಷ್ಠಂ ಚ ಯೆನಲಾ ಪುರಾಣಂ
ಒಳವೆ ಮಾತುಗಳರ್ಕನೇ ಕುಷ್ಠನಲ್ತೆ ತ
ನ್ಮೊಳಗನಱಿಯದ ಮೂಢರುಕ್ತಿಗಳವೇಂ ಬಿಡು ವಿ
ಮಲಚಿದಂಬುಧಿಮಗ್ನರೇನಾನುಮೀ ತನುಸ್ಥಿತಿಯನೂಹಿಸಬಲ್ಲರೇ ೫೩

ತೊಱೆಯ ನಡುವೀಶಪೂಜಾಲೀಲೆಯಿಂದಿರ್ದು
ತೊಱೆ ಬಂದೊಡಱಿಯದೇಳ್ ಪಗಲಭವಸುಖದ ನಿ
ಬ್ಬೆಱಗಿಂ ಗಜೇಶಮಸಣಯ್ಯನಿರನೇ ಭೂಸುರಾಧಮರ್ ಶಿವದೇವನಾ
ಮಿಱುಗುವ ಶಿವಧ್ಯಾನಮಂ ಕೆಡಿಪೆವೆಂದು ಬಗೆ
ದಱುವುಳ್ಳವೊತ್ತವನ ಮೇಲಡಕಿ ಕಿಚ್ಚಿಡ
ಲ್ಕಱಿದನೇ ಗುರುಭಕ್ತನಂ ನದೀಮಧ್ಯದೊಳ್ ಪೋಪಲ್ಲಿ ತದ್ಗುರುವರಂ ೫೪

ನೀನಿಲ್ಲಿರಾಂ ಪೋಪೆನೆಂದು ದೇಶೀಯದಿನ
ನೂನಗುಣಿ ನುಡಿದೆಯ್ದೆ ಗುರ್ವಾಜ್ಞೆಯಲ್ಲಿ ಚೇ
ತೋನಿಷ್ಠನಾಗಿರ್ದು ತನುವೆಲ್ಲವುಂ ಜೀರ್ಣವಾಗಸ್ಥಿಮಾತ್ರಮುಳಿಯೆ
ತಾನದಂ ಬಗೆದನೆ ಶರೀರಮೆಂತಿರ್ದೊಡೇ
ನಾ ನಿರ್ಮಲರ್ ನೋಳ್ಪರೇ ಒಂದು ನೆವದೆ ಸುವಿ
ಧಾನಮಂ ಮಾಳ್ಪೆವೆಂದೀಕ್ಷಿಸಿದೊಡಾಕ್ಷಣದೊಳಾಗದೇ ಪೃಥ್ವೀಶ್ವರಾ ೫೫

ಓವೋ ಗುಡ್ಡವ್ವೆಯೆಂಬವಿಚಲಿತಭಕ್ತೆ ಶಿವ
ಭಾವಪ್ರಯುಕ್ತೆಯೊರ್ವಗಲೊಳ್ ವಿಲಾಸದಿಂ
ನಾವಂದಿಯೆಂಬಗ್ರಹಾರಮಂ ಪೊಕ್ಕು ನಡೆವೆಡೆಯೊಳಾ ವಿಪ್ರವಿಸರಂ
ತಾವೆಯ್ದೆ ಕಾಣುತಂತ್ಯಜೆ ಮೇಲೆ ಕುಷ್ಠರೋ
ಗಾವೃತಶರೀರೆಯೆಮ್ಮೊರ್ಗೆಂತು ಬರಲಕ್ಕು
ಮೋ ವಿಚಾರಿಸದೆ ಪೊಱಮಡಿಸಿಮೆನೆ ಕೇಳ್ದು ನಸುನಗುತನಘೆ
ನುಡಿದಳೊಂದಂ ೫೬

ಆಂ ಪೋಗಿ ಕರ್ಮಚಂಡಾಲರಿರ ಮೇಣ್ ನಿಮ್ಮ
ಪೆಂಪನಱಿದಪೆನೆನುತೆ ಸೌರಾಷ್ಟ್ರಪುರದತ್ತ
ಲಂಪಿಂದೆ ನೊಂದು ನಡೆದಾ ಸೋಮನಾಥನಿಂ ಪ್ರತ್ಯಕ್ಷಮಂ ಪಡೆವುತೆ
ತಾಂ ಪರಮ ದಿವ್ಯಾಂಗಿಯಾಗಿ ಭೂಸುರಪುರದೊ
ಳಿಂಪಮರ್ವವೊಲ್ ಭರ್ಗನಂ ನಿಲಿಸಿ ತದ್ವಿಪ್ರ
ರಂ ಪೇಳಲೇಂ ಕುಷ್ಠರಂ ಮಾಡಿ ಬಳಿಕೆ ಶರಣೆನೆ ಕಾಯಳೇ ನೃಪಾಲಾ ೫೭

ತರಣಿಯಿಂ ಪೋಗದಾಶ್ವಿತ್ರ ರುಜೆಯಂ ಶಿವ
ಸ್ಮರಣದಿಂದೇನಳಿಯನೇ ಮಯೂರಂ ವಿಷ್ಣು
ಪರಿಹರಿಸಲಾಱದುತ್ಕೃಷ್ಟ ಕುಷ್ಠಮನಹೋದಂಡಿ ಹರನಂ ಲಕ್ಷಿಸಿ
ಇರದನಾಮಯನುತಿಯನುಸಿರ್ದು ಕಳೆಯನೆ ಭಕ್ತಿ
ಭರದಿನರ್ಧೇಂದುಮೌಳಿಯನತಿ ವಿಶುದ್ಧನಂ
ಕರಮೆ ಬಣ್ಣಿಸಿ ಗುಮ್ಮಟಯ್ಯನಾರಿಂ ಕೆಡದೆ ದುರ್ವರ್ಣಮಂ ಕೆಡಿಸನೇ ೫೮

ಇವರೀಶನಿಂದೆ ಪಡೆದವರೆಲೆ ನೃಪತಿಯೆಮ್ಮ
ಶಿವಭಕ್ತರಳವನೇನೆಂದು ಪೇಳ್ವೆಂ ಕೃಪಾ
ರ್ಣವ ಮನೋಹರ ಗಣೇಶನ ಪದಾಂಬುವನೀಂಟಿ ರವಿ ತನ್ನ [೧]ದುಷ್ಕುಷ್ಠಮುಂ[೧]
ತವಿಸನೇ ಮತ್ತೆ ಮಾದರ ದೂಡಿದೇವನೆಂ
ಬವಿಚಲಿತ ಭಕ್ತನಿಧಿ ಮಿಂದಸೀರ್ಬಚ್ಚಲೊಳ್
ತವೆ ಕೆಸರ್ಮಸಗಿ ತುಂಬಿರೆ ವಿಪ್ರನೊರ್ವನತಿ ಕುಷ್ಠನಾ ವೀಧಿಯಲ್ಲಿ ೫೯

ಪುದಿದ ಕಳ್ತಲೆಯೊಳ್ ಪಶುವನಱಿಸಿಕೊಂಡೆಯ್ದು
ತೊದವಿದಾ ಬಚ್ಚಲೊಳ್ ಕಾಲಿಟ್ಟು ಪೇಸುತುಂ
ಸದನಕ್ಕೆ ಬಂದಡಿದೊಳೆದು ಮಲಗಿ ಬೆಳಗಾಗಲಾ ಕೆಸಱೊಳೊಂದಿದನಿತು
ಪದಮುತ್ತಮ ಸ್ವರ್ಣವರ್ಣದಿನೆಸೆಯೆ ಕಂಡು
ಮುದದಿನಲ್ಲಿಗೆ ಬಂದು ತನ್ಮಜ್ಜನಾಂಬುವೊಳ್
ಪದಪಿಂ ಮುಳುಂಗಿ ಕುಷ್ಠಂ ನೀಗಿ ದೂಡಯ್ಯಂಗೆಱಗಿ ಕರುಣಂಬಡೆಯನೇ ೬೦

ಆ ವಾರ್ತೆಗೇಳ್ದು ಬಂದಾ ಜಲದೊಳೊಂದಿ ಭೂ
ದೇವರೇಳ್ನೂರ್ ತಮ್ಮ ಮೆಯ್ಯ ಕುಷ್ಠಂಗಳೆಯ
ರೇ ವಸುಮತೀಶಯೆನೆ ತನ್ನೃಪತಿಯೆಂದನೀ ಗಾದೆಯಂ ಗಂಟನಿಕ್ಕೀ
ಕೋವಿದನೆನಿಪನೆಂದೊಡಕ್ಕುಮೇ ಕಥೆಗಿಥೆಗ
ಳೇವಾಳ್ತೆ ತೆಗೆಯವಂ ನನ್ನಿ ಮಾಳ್ಪೊಡೆ ನಿಮ್ಮ
ಶೈವನಂಗದ ಕುಷ್ಠಮುಪಹರಿಸಿ ವಿಪ್ರರೊಳ್ ತೋರ್ಪುದುಳ್ಪೊಡೆ ನುಡಿಯೆನೆ ೬೧

ಮೂದಲಿಸಿದುಪರಿಯೊಳ್ ತೋಱದಿರ್ಪುದು ಶಂಭು
ಪಾದಭಕ್ತರ ಚಾಳಿಯಲ್ತೆನುತೆ ಪದ್ಮರಸ
ರಾದರದೊಳವನೊಡಂಬಟ್ಟು ಪೊನ್ನಂದಣಂಗಳಿಪಿಯಾ ಅಯ್ಯಂಗಳಂ
ಮೇದಿನೀಶನ ಸಭೆಗೆ ಬರಿಸಿ ಪೇರ್ಗದ್ದುಗೆಯೊ
ಳಾದಿರುದ್ರಪ್ರತಿಮನಂ ಮೂರ್ತಿಗೊಳಿಸಿ ಪರ
ವಾದಿಗಳ್ ನೋಡುತಿರೆ ತಜ್ಜಂಗಮಂ ತೊಟ್ಟ ಕೂರ್ಪಾಸಮಂ ಪಿಡಿವುತೆ ೬೨

---

೧ ದುಷ್ಟಕುಷ್ಠಂ

ದೇವಯೆನಗೀ ಬೀಳುಡೆಯನೀವುದೆಂದೆನು
ತ್ತಾ ವಿಮಲಮತಿ ಪದ್ಮರಸರದಂ ತೆಗೆಯಲೊಡ
ನೇ ವಣ್ಣಿಪೆಂ ತರಣಿಯಂ ಮುಸುಂಕಿರ್ದ ಬೆಳ್ಮುಗಿಲನಾ ಮಂದಮರುತಂ
ಓವೊ ತೊಲಗಿಸೆ ತೊಳತೊಳಗುವಂತೆ ಪರಮ ತೇ
ಜೋವಿಲಾಸದೆ ಭಕ್ತನಮರ್ದುಜ್ವಲಿಸೆ ದೂಷ
ಕಾವನಿಸುರರ ದೇಹವಂ ಕುಷ್ಠರುಜೆಯಡರ್ದು ಹೇಸಿಕೆಯನೇಂ ಸೂಸಿತೋ ೬೩

ಮುಂತೆ ಥಳಥಳಿಪ ಭಕ್ತನನವನ ಪೊರೆಯೊಳ್ ಸ
ಮಂತು ರಂಜಿಸುವ ಪದ್ಮರಸರಂ ಮೆಯ್ಯೊಳೋ
ರಂತಮರ್ದ ಕುಷ್ಠಾಮಯದ ತಿಂತಿಯಂ ತುಱಿಸುತೆಱಗಿದ ತಲೆಯ ವಿಪ್ರರಂ
ತಾಂ ತವೆ ನಿರೀಕ್ಷಿಸುತ್ತರಸನತ್ಯದ್ಭುತ
ಸ್ವಾಂತನಾಗುತೆ ಬಂದು ಮೆಯ್ಯಿಕ್ಕಿ ನುತಿಸಲ್ಕ
ನಂತರದೊಳಾ ವಾದಿಗಳ್ ಬಂದು ಚರಣದೊಳ್ ಬೀಳ್ವ ದೈನ್ಯಂದೋಱುತೆ ೬೪

ಕಾಯಯ್ಯ ಕರುಣಾಂಬುರಾಶಿ ಪದ್ಮರಸಾಂಕ
ಮಾಯಾಂಧರಾದೆವ್ಮೊಳೀಕೆ ನಿನ್ನಯ ಬಿಂಕವೀ
ಯಧಮ ರುಜೆಯನಪಹರಿಸಿ ಸಲಹೆಂದೊಱಲುತಿರೆ ನೋಡಿ ನಸುನಗುತ್ತೆ
ಆ ಯತೀಂದ್ರನ ಕರದ ಭಸಿತಮಂ ತದ್ದ್ವಿಜರ
ಕಾಯದೊಳ್ ತಳಿದು ಸೌಮ್ಯಾಂಗರಂ ಮಾಡಿ ಜಯ
ಜೀಯ ದ್ವಿತೀಯಶಂಭೂಯೆಂದು ಪೊಗಳ್ವ ಸಭ್ಯರ ಕೀರ್ತನದೊಳೆಸೆದಿರೆ ೬೫

ಅನಿತಱಿಂ ಮೇಲೆ ಬಲ್ಲಾಳರಾಯಂ ಕನ
ತ್ಕನಕರತ್ನಾಭರಣ ಚೇಲಾನುಲೇಪನಾ
ದ್ಯನುಪಮ ಸುವಸ್ತುಗಳನಿತ್ತು ಮತ್ತಂ ಪ್ರಾರ್ಥನಾಪೂರ್ವಕಂ ವಂದಿಸಿ
ವಿನಯದಿಂ ಬೀಳ್ಕೊಡೆ ಮದೇಭಮಸ್ತಕದೊಳ
ತ್ಯನಘನಾದಾ ಅಯ್ಯನಂ ಮೆಱೆಯಿಸುತೆ ಬಂದು
ಘನ ನಿಜಗೃಹಂಬೊಕ್ಕು ಪದ್ಮರಸನೀಶಭಕ್ತಾರ್ಚನದೊಳೊಪ್ಪುತಿರ್ದಂ ೬೬

ಮದಕುಧರವಿದಳನಭಿದುರ ಪರಮಶಿವಭಕ್ತ
ಪದಶತದಳಾದಭ್ರಮಕರಂದಲೀಲಾಪ್ರ
ಮದ ಪರವಶೀಭೂತ ಮಧುಕರೋಪಮ ಪದ್ಮಣಾಂಕಪ್ರಣೀತಮಾಗಿ
ಸದಮಳಾಖಿಳಶಾಸ್ತ್ರಸಾರಮೆಂದೆನಿಸುವ
ಭ್ಯುದಯಕರ ಪದ್ಮರಾಜಪುರಾಣಕಥೆಯೊಳಿಂ
ತಿದು ಸಚಿವಪಟ್ಟ ಸುತವಿಭವ ಶಿವಮಹಿಮೆಗಳ್ ಮೆಱೆವ ನಾಲ್ಕನೆಯ ಸಂಧಿ ೬೭

ಈಶಾಪರಾವತಾರನ ವಿಬುಧನುತನ ಭವ
ಪಾಶನಾಶನ ಕೆಱೆಯಪದ್ಮಣಾರ್ಯನ ಲಸತ್
ಶ್ರೀ ಶಿವಾದ್ವೈತಸಾಕಾರಸಿದ್ಧಾಂತಪ್ರತಿಷ್ಠಾಪನಾಚಾರ್ಯನಾ
ಈ ಶುದ್ಧ ಚರಿತಮಂ ತಿಳಿಪಿದಗೊರೆದಿದ
ಗ್ಗಾರಶೆಯಿಂ ಕೇಳ್ದರ್ಗೆ ಭುಕ್ತಿಮುಕ್ತಿಗಳಂ ಮ
ಹಾ ಶುಭಂಗಳನಾಯುಮಂ ಕೊಟ್ಟು ಗುರುರೂಪವಿಶ್ವನಾಥಂ ರಕ್ಷಿಪಂ ೬೮

ಅಂತು ಸಂಧಿ ೪ ಕ್ಕಂ ಪದಂಗಳು ೨೮೫ ಕ್ಕಂ

ಮಂಗಳಮಗಮತ್

ಶ್ರೀ

ಐದನೆಯ ಸಂಧಿ

ಸೂಚನೆ : ಪೆಂಪೆಸೆಯುಲಿಒಂದು ಕಠದಿಂ ಹರೀಶ್ವರನಿರದೆ
ಪಂಪೆಗೆಯ್ದಲ್ ಬಳಿಕೆ ನೃಪತಿ ಕೆಱಿಗಿತ್ತರ್ಥ
ಮಂ ಪದ್ಮರಸನಸಮ ಚರಕಿತ್ತು ಭಕ್ತಸೇವಾಜೀವನಾಗೊಪ್ಪಿದಂ

ಹೇಲಾಜನಿತ ವರಕರಾಲಾ ಲಸತ್ಕಲಹ
ಜಾಲಾ ಲಲಿತ ಕುಮುದಶೀಲಾಯಮಾನ ನಯ
ನಾಲಾಲಸಾಮುಕುಲನೀಲಾಭ್ರನೀಲಿಮಾರಾಲಾಲಕಾಲೋಕಿ ನೀಂ
ಶೈಲಾತ್ಮಜಾಂ ವಿಶ್ವಪೋಲಾಲಯಿತ್ವಾತ
ತ್ರೋಲಾಲಸಾಲಸೋಬಾಲಾರ್ಜುನಾಂಶುರುಚಿ
ಮಾಲಾಂಕೃತೋನ್ನೀಯ ಲೋಲಾಯಿತೇಕ್ಷಣಾ ಮಾಲಾ ತು ಮೇಮನೀಷಾಂ ೧

ಮತ್ತೊಂದು ದೆವಸದೊಳ್ ಪದ್ಮರಸದಂಡನಾ
ಥೋತ್ತಮುಂ ನೃಪನೋಲಗಕ್ಕೆಯ್ದಿಯುವನ ಬಲ
ದುತ್ತುಂಗಪೀಠದೊಳ್ ಕುಳ್ಳಿರ್ದು ದಂಡನಾಥರ ಮಂಡಳಿಕವರ್ಗದ
ಬಿತ್ತರದ ಮಕುಟವರ್ಧನರ ಮಂತ್ರಿಗಳನು
ದ್ವೃತ್ತಸಾಮಂತರ ರವೀಂದುವಂಶಜರ ಸಮು
ದಾತ್ತಪದ ವಾಕ್ಯಪ್ರಮಾಣಪ್ರವೀಣರ ಕವೀಂದ್ರರ ಕಲಾಭಿಜ್ಞರಾ ೨

ನಾಯಕರ ಗಾಯಕರ ನರ್ತಕರ ಕೀರ್ತನಾ
ಜೀಯರ ಚತುರ್ವಿಧದ ಸಖರ ನಾನಾ ವಿಧದ
ನಾಯಿಕಾಜನದ ರಸಿಕರ ರಂಜಿಪಳ್ತಿಕಾಱರ ಮಹಾ ಹಾಸ್ಯಾಸ್ಯರ
ರಾಯ ರಾವುತರ ಲಟಕಟಿಪತುಳ ಪಟುಭಟನಿ
ಕಾಯಾದಿಯಾಗೆಸೆವ ವಿನಿಯೋಗವಿತತಿಯ ವಿ
ಡಾಯದ ವಿಳಾಸದ ವಿನೋದದ ವಿಭವದ ವಿಭ್ರಮದ ಪೆಂಪಿಂಪನೀಯೆ ೩

ಗೌಳ ಕೆಲಕಾಗು ಬಾ ತುರುಕ ಮೆಯ್ಯಿಕ್ಕು ಮಲೆ
ಯಾಳ ಕೂಗದಿರು ಕೊಂಕಣ ಕಳಕಳವನುಡುಗು
ಲಾಳ ಹೋ ಹೋ ನಗದಿ[೧]ರಾಂಧ್ರ[೧] ಬಿನ್ನವಿಸು ಚೋಳಾದಿಗಳ್ ನಿಲ್ಲಿಮೆನುತೆ
ಪಾಳಿಗೆಡದಿಂತು ಚೆಪ್ಪನ್ನದೇಶದ ಮಹೀ
ಪಾಳರಂ ಕಾಣಿಸುವ ಕಳುಹಿಸುವ ಪಡಿಯಱರ
ಕೋಳಾಹಳಂ ಪೊಣ್ಮೆ ಮೆಱೆವ ಮಹದಾಸ್ಥಾನ ಮಧ್ಯದೊಳತುಳ ತೇಜದಿಂ ೪

ಪರಿಕಿಸೆಲೆ ರಾಜೇಂದ್ರ ರಯ್ಯದೊಡವಿವು ಕರಿನಿ
ಕರಮಿವು ತುರಂಗಮಿವು ವಸ್ತ್ರಮಿವು ತರುಣಿಯರಿ
ವರನರ್ಘ್ಯರತ್ನಮಿವು ಪರಿಮಳಮಿದರ್ಥಮಿದುಳಿದ ವಸ್ತುತತಿಯಿದೆನುತೆ
ನರಪತಿಗೆ ಕಾಣ್ಕೆ ಕಪ್ಪಂ ಮೊದಲೆನಿಪ ಪಲವು
ಪರಿಯಿಂದೆ ಬಂದ ವಸ್ತ್ವಾಳಿಯಂ ತೋಱಿಸು
ತ್ತಿರದೆ ತೆಗೆಯಿಸುತೆ ಪದ್ಮರಸರೊಪ್ಪಿದರಿಂತೆಸೆವ ಸಭಾಮಧ್ಯದಲ್ಲಿ ೫

ಷೋಡಶಪ್ರತಿಯ ಕರಣಿಕರೊಳಗ್ರಣಿಯೆನಿಪ
ಗಾಡಿಕಾಱಿಂ ವಿರೂಪಾಕ್ಷನಿರವಂ ಮನ
ಶ್ಶೂಡಿಕಾಪಟದೊಳಂಕಿಸಿ ಬಳಿಕುಳಿದ ಬಾಹ್ಯವೃತ್ತಿಯಂ ಬಳಸುವಚಲಂ
ಆಡಲೇಂ ವಿಷಮ ಸಂಸಾರವಾರ್ಧಿಪ್ರಬಲ
ಬಾಡಬಂ ಗುರು ಲಿಂಗ ಜಂಗಮ ಸಪರ್ಯೆಯಂ
ಮಾಡಿ ತಣಿಯದ ತವಕದಿಂದುರ್ವಿ ಕೊರ್ವಿ ನಲಿದಾಡುವನುಪಮಚರಿತ್ರಂ ೬

೧ ಇಂದ್ರ (ಬ)

ಅರರೆ ಹಂಪೆಯ ಮಹಾದೇವರ ಜಠರ ಸುಧಾ
ಶರಧಿಸಂಭವಸುಧಾಕರನಖಿಲ ಶಿವಭಕ್ತ
ಕರುಣಾಕಟಾಕ್ಷಪ್ರಭಾಪುಂಜರಂಜಿತಾಂಗಂ ದೇಹಗುಣವಿಭಂಗಂ
ಸ್ಮರಕಾಲಮಾಯಾದಿಗಳ್ಗೆಡದ ಪದದೊಳ್ ತೊ
ಡರನಿಕ್ಕಿ ಡಂಗುರಂಬೊಯ್ಸಿ ವರ್ತಿಸುವವಂ
ಹರಮಂತ್ರಸಿದ್ಧಂ ಚಿದನುಬದ್ಧನಧಿಕಶುದ್ಧಂ ಸತ್ಕಲಾಪ್ರವೃದ್ಧಂ ೭

ಮಾತೇನೊ ಮೋಕ್ಷಲಕ್ಷ್ಮೀಧವನ ತುಂಗಭ
ದ್ರಾತಟೀಧಾಮನ ವಿರೂಪಾಕ್ಷನಂಘ್ರಿಕಂ
ಜಾತಸಂಜಾತಗಂಧಾಸ್ವಾದನಾನಂದಮದಮಧುಕರಾಯಮಾನಂ
ಓತು ಬಣ್ಣಿಪೊಡಹೀಶಂಗಱಿದೆನಿಪ ಸದ್ವಿ
ನೀತಂ ಕಲುಷಜಲದವಾತಂ ಪ್ರಣತ ಪಾರಿ
ಜಾತಂ ಲಸದ್ಗುಣೋಪೇತಂ ಶರಣಜನಪ್ರೀತಂ ಕೃಪಾಭಿಜಾತಂ ೮

ಚದುರಿಂಪು ನೋಂಪಲಂಕೃತಿ ಚಮತ್ಕೃತಿ ರೀತಿ
ಮೃದು ಮಧುರ ಸರಸೋಪಮಾದ್ಯಖಿಲ ಲಕ್ಷಣಾ
ಭ್ಯುದಿತ ವಸ್ತುಕ ವರ್ಣಕಂಗಳಿಂ ಶಿವನಂ ಶಿವೈಕ್ಯರಂ ನುತಿಸುತಿರ್ಪಾ
ಸದಮಳಿನ ಶಿವಕವೀಂದ್ರಂ ಲೆಕ್ಕಮೆಲ್ಲಮಂ
ಮದನಹರ ಪಂಪಾವಿರೂಪಾಕ್ಷಯೆಂದು ಬರೆ
ದದನವನಿಪಂ ಪರೀಕ್ಷಿಸಲೊಡಂ ನಿಷ್ಪ್ರಯಾಸದೆ ನಿರ್ವಹಿಸಿದ ಮಹಿಮಂ ೯

ಪಡೆದು ಗೋವಿಂದಪ್ರತಿಷ್ಠೆಯುಂ ನೃಪತಿ ರಾ
ಗದೊಳೆಸಗಿಯುದಱ ಗೃಹದೊಳಗಣ್ಗೆ ಕರೆಯೆ ಪೋ
ಗದೆಯುಮಂ ಕಿನಿಸುತೀ ಪೆರ್ಮಳೆಯೊಳಗೆ ನನೆಯದೆಯ್ದನೆ ನಗುತೆ ನನೆಯದೆ
ಸದನಕೆಯ್ದಿದನಿಚ್ಚಟಂ ಸಕಲ ಕುಧರಮ
ಧ್ಯದೊಳೆಸೆವ ಹೇಮಾದ್ರಿಯಂತೆ ಕರಣಿಕರ ಮ
ಧ್ಯದೊಳೆಸೆವುತೆಮ್ಮ ಹಂಪೆಯ ಹರೀಶ್ವರನಧಿಕ ತೇಜದಿಂದೋಜೆವೆತ್ತು ೧೦

ರಯ್ಯ ಮಾಗೋಲೆಯಂ ಬರೆವುತಿರ್ದುಳಿದೆರಡು
ಕೈಯ್ಯನುದ್ದಕೆ ನೆಗಪಿ ದುರ್ಭವದ ಮುಸಕಮಂ
ಕೈಯಾರೆಯೊರಸುವಂತೊರಸೆ ವಾದಿಗಳ ಸನ್ನೆಯಿನಱಿದು ನೃಪತಿ ನಗುತೆ
ಅಯ್ಯೋ ಇದೇಕೆ ಹರಿಯಣ್ಣಂಗೆ ಬಲ್ಮರುಳ್
ಮೆಯ್ಯನಾವರಿಸಿತೆನೆ ತದ್ದೂಷಕರ್ ಬೂತು
ಗೆಯ್ಯುತುಂ ಗಹಗಹಿಸುತಿರೆ ಪದ್ಮಣಾಮಾತ್ಯನೆಂದನತಿ ಕೋಪೋಕ್ತಿಯಿಂ ೧೧

ಶಾಪದಗ್ಧರ ಶಠರ ಕೂಳರ ಕುತರ್ಕಿಗಳ
ಪಾಪಾತ್ಮರಾದ ದೂಷಕರ ದುರ್ಬೋಧಕೆಲೆ
ಭೂಪಾಲ ನೀನಿಂತು ಮರುಳಪ್ಪರೇ ಲಿಂಗಸಂಗಸೌಖ್ಯಾವೇಶಿಯಾ
ಆ ಪರಿಯನಾ ಮಹೇಶನೆ ಬಲ್ಲನಲ್ಲದೀ
ವ್ಯಾಪಾರಿಗಳ್ಗೆ ಕಾಣಿಸುಗುಮೇ ಮೇಣಿವಂ
ಕಾಪುರುಷನೇ ವಿಚಾರಿಸೆ ವಿರೂಪಾಕ್ಷನಸದೃಕ್ಷನೆಂಬನಿತಱಿಲ್ಲಿ ೧೨

ದರಹಸಿತ ವದನನಾಗುತ್ತೆಮ್ಮ ಹರಿದೇವ
ನೊರೆದನಿಂತೆಂದು ನೃಪ ಕೇಳ ಪಂಪಾಪುರೀ
ಶ್ವರನೋಲಗದೊಳಾರತಿಯನೆತ್ತುತಿರಲದಱ ಸೆಕೆ ಪತ್ತಿ ಮೇಲ್ಕಟ್ಟಿನಾ
ಪರಮಾಂಬರಂ ಭುಗಿಲ್ಭುಗಿಲನುರಿವುತಿರೆ ಕಂ
ಡೆರಡು ಕೈಯಿಂದೊರಸಿ ಕಳೆದೆನಂತಲ್ಲದೀ
ಶ್ವರಭಕ್ತರನಿಮಿತ್ತಮಂ ದೇಹಮಳಿದೊಡಂ ನೆಗಳ್ವರೇಯೆನಲೊಡನದಂ ೧೩

ವಾದಿಗಳ್ ಕೇಳ್ದು ಕಟಕಿಯೊಳೆಂದರಕ್ಕಕ್ಕ
ಮಾ ದಿವ್ಯ ಪಂಪೆಯೊಳಗುರಿವ ಮೇಲ್ಕಟ್ಟನ
ತ್ಯಾದರದೊಳಿಲ್ಲಿರ್ದೊರಸುವಸಮ ಶಕ್ತಿಯಾರ್ಗುಂಟಹೋ ಭೂಪೋತ್ತಮಾ
ಈ ದುರ್ಘಟದ ಭಕ್ತಿಯಂ ನೋಡವೇಳ್ಕುಮೆನೆ
ಮೇದಿನೀಪತಿ ಚರರನಾ ಪಂಪೆಗಟ್ಟೆ ಸ
ವ್ಮೋದದಿಂದವರೆಯ್ದಿ ಗುರುವಿರೂಪಾಕ್ಷಾಲಯಮಂಬೊಕ್ಕು ಭಯಭಕ್ತಿಯಿಂ ೧೪

ವಂದನಂಗೆಯ್ದು ಬೆಂದಿರ್ದ ಮೇಲ್ಕಟ್ಟುಗಂ
ಡೆಂದರರ್ಚಕನನೀಕ್ಷಿಸುತಿದೇಂ ಕಾರಣಂ
ಬೆಂದು ಸರಿಯುಳಿದುದೆನೆ ಹೋದ ರವಿವಾರ ಮಧ್ಯಾಹ್ನದವಸರದೊಳೊಲವಿಂ
ಇಂದುಜೂಟಂಗಾರತಿಯನೆತ್ತುತಿರೆಯದಱ
ಹೆಂದದಾ ಜ್ವಾಲೆಯಾವರಿಸಿ ಬೇವಲ್ಲಿಯೋ
ರ್ವಂ ದಯಾರಸಭರಿತಲೋಚನಂ ದಾಕ್ಷಿಣ್ಯವಿಲಸಿತಮುಖಂ ಸುಶೀಲಂ ೧೫

ಲಸಿತ ಭಸಿತತ್ರಿಪುಂಡ್ರಾವಳೀಪ್ರಯುತಾಂಗ
ನಸಮರುದ್ರಾಕ್ಷಮಾಲಾರಂಜಿತಗ್ರೀವ
ನೆಸೆವ ದೋತ್ರದಿನುಜ್ವಲಿಪ ಕಟೀದೇಶನವದಾತವಸ್ತ್ರೋತ್ತರೀಯಂ
ಉಸಿರಲೇಂ ಸಾತ್ವಿಕೋದಯಶರೀರಂ ತನ್ನ
ಪೆಸರಂ ಬೆಸಗೊಳಲ್ಕೆ ಹರಿಗನೆನುತುಂ ಕರದ
ಮಿಸುಪೋಲೆಕಂತಮಂ ಬಿಸುಟದನೊರಸಿ ಪೋದನೀಯೆಲ್ಲರೀಕ್ಷಿಪಂತೆ ೧೬

ಎಂದುಸುರೆ ಕೇಳ್ದು ಚರರಾ ವಿತಾನಾಂಬರಮ
ನಿಂದೊಯ್ದು ರಾಯಂಗೆ ತೋಱಿಸಲ್ವೇಳ್ಕುಮೆನು
ತಿಂದುಧರ ಪಂಪಾಪುರೀಶನೂಳಿಗದವರ್ ಬೆರಸದಂ ಕೊಂಡು ಭರದಿಂ
ಬಂದು ಬಲ್ಲಾಳಂಗೆ ವಾದಿಗಳಿರ್ದೆಗಳಿಂತು
ಬೆಂದು ಬೇಕರಿವೋಗದಿರವೆಂದು ತೋರ್ಪಂತೆ
ತಂದಾ ವಿತಾನಾಂಬರಂದೋಱಿ ತತ್ ಕಥನಮೆಲ್ಲವಂ ವಿಜ್ಞಾಪಿಸೆ ೧೭

ಕಂಡು ಕೇಳ್ದಾ ಭೂಪನಾಶ್ಚರ್ಯವಾರ್ಧಿಗೆ ತ
ರಂಡಮಂ ಕಾಣದೆ ಮುಳುಂಗಿ ಭಯವಾವರಿಸೆ
ಖಂಡೇಂದುಧರನಲ್ಲದಮುಮ ಹರಿಯಣ್ಣನೇಂ ಜಾವಳನೆಯೆನುತೆ ನುತಿಸಿ
ಕೊಂಡೆಯರ ದುರ್ಮುಖಂಗಳ್ ಕೆರ್ಪಿನಿಂ ಪೊಯ್ದು
ದಂಡಿಯಂ ಧರಿಸುವೋಲ್ ಮೆಯ್ಯಿಕ್ಕೆ ಪದ್ಮರಸ
ದಂಡೇಶನಾನಂದಸಿಂಧು ಮೇಲ್ವರಿಯೆ ಮುಂಕೊಂಡಿಂತು ನುತಿಸುತಿರ್ದಂ ೧೮

ಭಾಪುರೆ ಹರೀಶಯೆಮ್ಮೀಶಸಂವಿತ್ಕೋಶ
ಭಾಪು ಹರಿದೇವ ಮದ್ದೇವ ಮಧುರಾರಾವ
ಭಾಪು ಹರಿಯಣ್ಣಯೆಮ್ಮಣ್ಣ ಕಲಿಯುಗದ ಮುಕ್ಕಣ್ಣ ಮಝುಭಾಪು ಭಲರೇ
ಆ ಪಂಪೆಯಲ್ಲುರಿವ ಮೇಲ್ಕಟ್ಟನಯ್ಯಯ್ಯ
ಭೂಪಾಲನೋಲಗದೊಳಿರ್ದುಱ ಕಂಡೊರಸುವಿಂ
ತೀ ಪೆಂಪು ನಿನಗಲ್ಲದಾರ್ಗುಂಟೆನುತ್ತೆ ಬಣ್ಣಿಸೆ ಭಕ್ತರುಘೆಯುಘೆಯೆನೆ ೧೯

ಅನಿತಱಿಂ ಮೇಲೆ ಹರಿದೇವನಿಂತೆಂದನೆಲೆ
ಮನುಜೇಶ ಕೇಳಿಂದುಮೊದಲಾಗಿ ಸಕಲ ದೇ
ವ ನಿಜೇಶಸೇವೆಯಲ್ಲದೆ ಮನುಜಸೇವೆಯಗ್ರಾಹ್ಯವಿದು ಭಾಷೆಯೆನುತೆ
ಎನಿತೊಡಂಬಡಿಸಿದೊಡಮೊಪ್ಪದಲ್ಲಿಂ ತಳರ್ದುಱ
ಮನೆಗೆಯ್ದಿ ನೃಪನೊಡವೆಯಾಗಿರ್ದುದಂ ಬಿಟ್ಟು
ತನಗೆ ಸಲ್ವೊಡವೆಯಂ ಭಕ್ತತತಿಗಾರಾಧನಂಗೆಯ್ದು ವೈರಾಗ್ಯದಿಂ ೨೦

ವರ ಪದ್ಮಣಾಮಾತ್ಯಪುಂಗವಾದ್ಯಖಿಲ ಶಿವ
ಶರಣಸಂತತಿಗೆ ಭಯಭಕ್ತಿಯಿಂ ಮೆಯ್ಯಿಕ್ಕಿ
ಕರುಣಮಂ ಪಡೆದು ಕಳುಹಿಸಿಕೊಂಡು ಪಂಪಾಪುರಾಭಿಮುಖನಾಗಿ ತಳರ್ದುಱ
ಬರೆವರೆ ಗುಹಾರಣ್ಯಮೆಂಬ ಪುಣ್ಯಕ್ಷೇತ್ರ
ಮಿರೆಯದಂ ಪೊಕ್ಕು ತತ್ಕ್ಷೇತ್ರಪತಿಯಾದ ಹರಿ
ಹರಲಿಂಗದಾಲಯಕ್ಕೆಯ್ದಿಯಾ ದೇಗುಲದ ಪಡಿ ಕೆತ್ತಿರಲ್ಕೀಕ್ಷಿಸಿ ೨೧

ಅಚ್ಚರಿವಡುತೆ ಪಗಲೊಳೀ ಶಿವಾಲಯದ ಪಡಿ
ಮುಚ್ಚಿರ್ಪಱ ಕತನಮೇನೆಂದೊಡಾಸ್ಥಾನದವ
ರಚ್ಚಿಗಂಬಡುತೆಂದರೀ ದೇಗುಲದೊಳೊಂದು ಬೊಮ್ಮರಕ್ಕಸಮಿರ್ಪುದು
ಒಚ್ಚತಮದಾರುಮಂ ಪುಗಲೀಯದೆನೆ ಕೇಳ್ದು
ನಿಚ್ಚಟನದಂ ಕೋಪಿಸುತೆ ಕರೆಯೆ ನಡುಗುತುಂ
ಪೊಚ್ಚ ಪೊಸ ಪಾರ್ವನಾಕಾರದಿಂ ಬಂದಂಘ್ರಿಗೆಱಗಿ ನಿಲೆ ನೋಡಿ ನಗುತೆ ೨೨

ಎಲಿಲೆ ನೀನೀ ಮಹಾಸ್ಥಾನಕ್ಕುಪದ್ರವಮ
ನಲಸದಾಗಿಪುದುಚಿತಮೇ ಪೋಗೆನಲ್ಕದು
ಜ್ವಲಹರೀಶನ ದರ್ಶನದಿನಾ ಗ್ರಹತ್ವಮಂ ಪಿಂಗಿ ವಂದಿಸಿ ನುತಿಸುತೆ
ಸಲೆ ಸಗ್ಗದತ್ತ ಗಮನಿಸಿತಿತ್ತಲೆಮ್ಮ ನಿ
ರ್ಮಲಚರಿತನೀಶಾಲಯಂಬೊಕ್ಕು ಭಜಿಸಿ ಶಿವ
ನೊಲವಂ ಪಡೆದು ಕೃತಾರ್ಥತೆಯನಾಂತಂ ಸರ್ವರಿದು
ಚೋದ್ಯಮೆಂದು ಪೊಗಳೆ ೨೩

ಅಲ್ಲಿಂದೆ ತಳರ್ದು ಪಂಪಾಪುರಕ್ಕೆಂದು ಬ
ರ್ಪಲ್ಲಿ ತತ್ಪಂಪಾಪುರೀಶನಾಸ್ಥಾನದವ
ರೆಲ್ಲರ ಕನಸಿನೊಳೆಮ್ಮಯ ಸುತಂ ಹರಿದೇವನೆಯ್ತರುತ್ತಿರ್ಪನವನಂ
ನಿಲ್ಲದಿದಿರ್ಗೊಂಬುದೆಂದೊರೆದು ತನ್ನಯ ಪೊಳೆವ
ಪಲ್ಲಕಿಯನಟ್ಟಲ್ಕದರ್ಕೆಱಗಿ ಪೊತ್ತುಕೊಂ
ಡುಲ್ಲಾಸದಿಂ ಬಂದು ಗುರುವಿರೂಪಾಕ್ಷನಂ ಕಾಣಲೊಡನೇವಣ್ಣಿಪೆಂ ೨೪

ಮಿಕ್ಕೊಗೆವ ರೋಮಾಂಚಕಂಚುಕಿತತನುವಿಂ ಜ
ಲಕ್ಕನಾದಾನಂದರಸಭರಿತನೇತ್ರದಿಂ
ತೆಕ್ಕತೆಕ್ಕನೆ ನೆಗೆವುತಿರ್ಪ ಬೆಮರ್ವನಿಗಳಿಂದಿರದೆ ಸೆರೆಬಿಗಿವ ಕೊರಲಿಂ
ಜಕ್ಕುಲಿಪ ನೇಮದಿಂ ಕರಗುವೆರ್ದೆಯಿಂದೊಕ್ಕ
ಲಿಕ್ಕಿ ಪೊಣ್ಮುವ ಗದ್ಗದಾಲಾಪದಿಂದೆ ಮೆ
ಯ್ಯಿಕ್ಕಿ ದೈನ್ಯಂದೋಱಿಸುತ ಮೋಹಮಂ ಬೀಱಿ ಶಿವಕೃಪೆಯುನಿರದೆ ಪಡೆದು ೨೫

ತುಂಗಭದ್ರಾಂಬುವಂ ಮಗಮಗಿಪ ನವ್ಯಕುಸು
ಮಂಗಳಂ ದಿವ್ಯ ಗಂಧಮನಕ್ಷತಮನುರು ದ
ಶಾಂಗಧೂಪಮನಖಿಳದೀಪಮಂ ಲಲಿತನೈವೇದ್ಯಮಂ ತಾಂಬೂಲಮಂ
ಪೊಂಗಿ ಪೊರೆಯೇಱುತುಂ ತಂದಾ ವಿರೂಪಾಕ್ಷ
ಲಿಂಗಮಂ ಪೂಜಿಸಿ ದಿನಕ್ಕಭವನಿತ್ತ ಪಡಿ
ಯಿಂ ಗಣಕುಲಾರ್ಚನಂಗೆಯ್ಯುತೆ ಶಿವಾನುಭವದಿಂ ಹರೀಶ್ವರನಿರುತಿರೆ ೨೬

ಆ ಹರೀಶನ ಸುಕವಿತಾರಸಮನಲ್ಲಿರ್ಪ
ಮೋಹನಮನೊಂದಿದ ಕಲಾಪ್ರೌಢಿಯಂ ಮಿನುಗು
ವೂಹೆಗಳನಾಲಿಸುತ್ತಾಂಧ್ರದೇಶದೊಳೋರ್ವಳತಿ ಚತುರೆಯಬಲಾಮಣಿ
ಆಹ ಗಣಿಕಾಗ್ರಣಿಯಪೂರ್ವರೂಪಿಣಿಯತಿ
ವ್ಯೂಹ ಧೈರ್ಯಾನೇಕ ಪೋರುಸ್ತಣಿ ಘನಸುಗುಣಿ
ನೇಹವಿರ್ಮಡಿಸಿ ಕಿವಿವೇಟವಗ್ಗಳಿಸಿ ವಿರಹಿಣಿಯಾಗಿ ತಾಪಿಸುತ್ತೆ ೨೭

ಆತನೊಡನಮರ್ದು ಮನ್ಮಥಸುಖಸುಧಾಂಬುಧಿಯೊ
ಳೋತು ಮುಳುಗುವೆನೆಂದು ನೆನೆದು ದೇವಪ್ರಾರ್ಥ
ನಾತುರವ್ಯಾಜದಿಂ ತಳರ್ದಂದಣವನೇಱಿ ಘನ ವಿಭವಸಹಿತೆಯಾಗಿ
ಮಾತೇಂ ಹರೀಶ್ವರಂಗತನು ತಂದೊಳ್ಗಪ್ಪ
ವೋ ತಾನಿದೆನೆ ಬಂದು ಪಂಪಾಪುರಂಬೊಕ್ಕು
ಕಾತರಂ ಕೈಮಿಕ್ಕು ಬೀಡಾರವೊಂದಂ ಪ್ರವೇಶಿಸಲ್ಕನಿತಱಲ್ಲಿ ೨೮

ರವಿ ಪಶ್ಚಿಮಾಂಬುಧಿಗಿಳಿಯೆ ವಿವಿಧ ವಿಭವದಿಂ
ದವಳಾ ವಿರೂಪಾಕ್ಷನಾಲಯಕ್ಕೆಯ್ದಿ ನಿ
ನ್ನವನಿರವನೆನಗೆ ತೋಱೆಂದೆಱಗಿ ಬೇಡಿಕೊಳ್ವಂತೆಱಗಿ ಕಾಣ್ಕೆಯಿತ್ತು
ನವ ಪೂಜೆಯಂ ರಚಿಸಿ ಮಗುಳೆ ಮನೆಗೆಯ್ತಂದು
ಯುವತಿಯಲ್ಲಿಂ ಮೇಲೆ ಹರಿದೇವನಂ ಕಾಣ್ಬ
ತವಕದಿಂ ಪ್ರಾಣಸಖಿಯೋರ್ವಳ್ವೆರಸು ತನ್ಮಹಾತ್ಮನಿರ್ಪೆಡೆಗೇಳುತೆ ೨೯

ನೆಱೆ ಶಿಥಿಲಕರ್ಮನಾಚಾರ್ಯನನಱಿಸಿ ಬರ್ಪ
ತೆಱದಿನಱಸುತೆ ಬಂದು ಶಿವಭವನದೊತ್ತಿನೊಳ್
ಮೆಱೆವಾಶ್ರಮದೊಳುರು ವಿಭೂತಿ ರುದ್ರಾಕ್ಷೋಜ್ಜ್ವಲಾಂಗದಿಂ ನಸುಗಾವಿಯಿಂ
ಮಿಱುಗುವುಷ್ಣೀಷಬೃಹತಿಕೆಗಳಿಂ ದೋತ್ರದಿಂ
ದುಱದೆ ದೃಢಪದ್ಮಾಸನಂಗೆಯ್ದು ಶಾಂತಿರಸ
ದೆಱಕದಿಂ ಸಮೆದ ಪುತ್ಥಳಿಯೆನಲ್ ಬೆಳಗುವಟ್ಟಂತಮರ್ಮುಖಾಕ್ಷಿಯುಗದಿಂ ೩೦

ತೊಳಗುವೆರ್ದೆದಾವರೆಯ ನಡುವೆ ಥಳಥಳಿಸಿ ಘುಳು
ಘುಳಿಸುವ ಪರಂಜ್ಯೋತಿರಾಕಾರಲಿಂಗಮಂ
ಬಳಸಿ ಬಿಗಿದೊಳಪೊಕ್ಕು ತಾನದೆಂಬುದನಱಿಯದನುಪಮಸುಖಾವೇಶದಿಂ
ಮಿಳಿರ್ವ ಶಿವಯೋಗಿಯಂ ಕಂಡು ಕಾವಂ ಬಿಲ್ಲ
ನಿಳುಪೆ ರತಿ ವಿರತಿಯಂ ಧರಿಸೆ ಸಸಿ [೧]ಮು[೧]ಸಿಯಾಗೆ
ಮಲಯಪವನಂ ವನಂಬುಗೆ ವಸಂತಂ ಭ್ರಾಂತನಾಗೆ ಮೇಲೇವಣ್ಣಿಪೆಂ ೩೧

ಕಾಂತೆಯೊಳ್ ನಿಮಿರ್ದ ಕಾಮಧ್ವಾಂತಮಂ ತವಿಸಿ
ಕಂತುಹರಭ[೨]ಕ್ತಿ[೨]ಯೊಳಹೊಱಗನಾವರಿಸೆ ವಿ
ಶ್ರಾಂತತೆಯನೆಯ್ದಿ ಹರಿದೇವಂಗೆ ಸಾಷ್ಟಾಂಗದಿಂ ನಮಿಸಿ ನುತಿಸುತ್ತಿರೆ
ಶಾಂತಿರೂಪಂ ಕಣ್ದೆಱೆದು ನೋಡಿಯೆಮ್ಮಾಶ್ರ
ಮಾಂತರಕೆ ನಟ್ಟಿರುಳೊಳೇಂ ಕಾರಣಂ ಬಂದೆ
ನೀಂ ತಳೋದರಿಯೆನೆ ಯಥಾಕಥನಮಂ ಪೇಳೆ ಕೇಳ್ದು ಹರಹರಯೆನುತ್ತೆ ೩೨

ಪೆಂಡಿರ್ಗೆ ಪೆಂಡಿರೋತೊಂದಿದವರುಂಟೆ[ಲೆಗೆ]
ಪುಂಡರೀಕಾಕ್ಷಿ ಪೇಳಾಂ ನೊಸಲಕಣ್ಣಂಗೆ
ಗಂಡುದೊಳ್ತಾಗಿರ್ಪೆನಿಂತು ಬರ್ಪರೆ ಬಳಲ್ದಾ ತಾಯೆ ಪೋ ಪೋಗೆನೆ
ಖಂಡಿತ ಸ್ಮರಭಕ್ತನಳವಿಂಗೆ ಮೆಚ್ಚಿ ಶಶಿ
ಮಂಡಲಾನನೆ ಭಕ್ತಿಯಿಂದೆಱಗಿ ಪಶುಪತಿಗೆ
ಗಂಡುದೊಳ್ತಾಗಿ ನೀನಿರ್ಪೊಡಾಂ ನಿನಗೆ ಪೊಱಗುಂಡನಾಗಿರ್ಪೆನೆನುತೆ ೩೩

ಕರುಣಮಂ ಪಡೆದು ಶಿವದೀಕ್ಷೆಯಂ ಕೈಕೊಂಡು
ಕರಮೆ ತನ್ನೊಡವಂದರೆಲ್ಲರಂ ಬೀಳ್ಕೊಟ್ಟು
ಹರ ವಿರೂಪಾಕ್ಷನಂ ಗುರು ಹರೀಶನುಮನಾರಾಧಿಸುತಮಲ ವಿರತಿಯಂ
ತರುಣಿಯಂಗೀಕರಿಸಿ ನಿಜ ಮೋಕ್ಷಲಕ್ಷ್ಮಿಯಂ
ತ್ವರಿತದಿಂ ತೊಳ್ತುಗೆಯ್ದಾಳ್ವ ಬಲ್ಗಾಡಿಯಿಂ
ಚರಿಸುತುಂ ಸುಖವಿರ್ದಳೆನೆ ಶಿವಶಿವಾ ಮಹಾತ್ಮರ ಸಂಗಮೇಗೆಯ್ಯದೋ ೩೪

---

೧ ಪು (ಬ, ಕ) ೨ ಕ (ಬ, ಕ)

ಅಂತಾಗೆ ತಮ್ಮಗ್ರಜೆಯ ಸುತಂ ಕುಕವಿ ಹೃತ್
ಕುಂತಂ ಸುಕವಿವನವಸಂತಂ ದಲುಭಯಕವಿ
ಸಂತಾನಶರಭಭೇರುಂಡ ರಾಘವನೊರೆದ ನರನುತಿಗೆ ಮುಳಿದು ಕಳೆದು
ದಂತವೈದಂ ಮಗುಳೆ ಶೈವಕೃತಿಪಂಚಕವ
ನಂತವನಿನುಸುರಿಸಿಯವಂ ಕೊಟ್ಟು ಪರವಾದ
ಮಂ ತಡೆಯದಾತನಿಂ ವಾದಮುಖದಿಂ ಗೆಲಿಸಿಯವನ ಕವಿತಾವ್ಯಾಜದಿಂ ೩೫

ಭಕ್ತಾಪರಾಧವಾತಂಗಾಗೆ ನೊಂದು ಕೋ
ಪೋಕ್ತಿಯಿಂ ಶಪಿಸಿಯಾತಂ ನುತಿಸೆ ನಿನ್ನ ನಿಜ
ಮುಕ್ತಿಗಂ ಮೆಯ್ಮೆಗಂ ತಚ್ಛಾಪಮನುಕೂಲಮೆಂದೊರೆದು ಕೂರ್ತು ಬಂದಾ
ಭಕ್ತೆಯತಿಶಯ ಭಕ್ತಿಗೊಲ್ದು ಪಂಪಾಪತಿಗೆ
ಸೂಕ್ತಿಪೂಜೆಯನೆಸಗಿಯಾಕೆಯಂ ಶಿವಪುರಕೆ
ಭಕ್ತರುಘೆಯುಘೆಯೆನೆ ಕಳಿಪಿ ಹರೀಶಂ ಶಿವಸುಖದಿನೀ ತೆಱದೊಳಿರುತ್ತಿರೆ ೩೬

ಇತ್ತಲೆಮ್ಮಯ ಪದ್ಮಣಾಮಾತ್ಯಶೇಖರಂ
ಮತ್ತೊಂದು ದಿನದಲ್ಲಿ ಭೂಪಾಲಸಭೆಗೆ ಸಮು
ದಾತ್ತತೆಯಿನೆಯ್ದಿ ನೃಪನುಪಚಾರಪೂರ್ವಕಂ ಪಿರಿಯ ಗದ್ದುಗೆಯ ಮೇಲೆ
ಉತ್ತುಂಗವೃತ್ತಿಯಿಂ ಮೂರ್ತಿಗೊಂಡೋಲಗಮ
ನಿತ್ತು ಘನ ತೇಜಸ್ಸಿನಿಂದೊಪ್ಪುತಿರೆಯಾಗ
ಳುತ್ತಮಂ ವೇಲಾಪುರಕ್ಕೆ ಸಲ್ವಧಿಕಾರಿಯೇಳ್ದಿಂತು ಬಿನ್ನವಿಸಿದಂ ೩೭

ಎಲೆ ನೃಪಶಿರೋಮಣಿಯೆ ನಿನ್ನ ರಾಜ್ಯಂ ಸಮು
ಜ್ವಲದೇವಮಾತೃಕನದೀಮಾತೃಕಂಗಳಿಂ
ಫಲಿಸಿರ್ಕುಮೆನ್ನ ಪುರವೊಂದೆ ನದ್ಯಂಬುಪಾಲಿತಮೆನಿಸದಾ ಕೃತ್ಯಕೆ
ಸ್ಥಲಮತ್ಯಪೂರ್ವಮೊಳವು ತಟಾಕವಿಲ್ಲದ
ಕೊರ್ಲವಿನಿಂದೊಂದು ಕೆಱೆಯಂ ರಚಿಸಿಕೊಟ್ಟೊಡಿಂ
ಪಲವು ಮಾತಂ ನುಡಿದು ಫಲಮದೇಂ ಸಿರಿವೆಣ್ಗೆ ನೆಲೆವನೆಯೆನಿಪೆನೆಂದೆನೆ ೩೮

ಆ ನುಡಿಗೆ ಚಿತ್ತದೊಳೊಡಂಬಟ್ಟು ಪದ್ಮರಸ
ರಾನನಾಬ್ಜಮನೀಕ್ಷಿಸಲ್ಕೆ ಪರಿಕಿಸುತದಂ
ಭೂನಾಥ ಕೇಳಿವಂ ಬಿನ್ನವಿಸಿದಂತೆ ಮಾಳ್ಪುದು ಕಜ್ಜಮೆನೆ ತನ್ನೃಪಂ
ಆನಂದಿಸುತ್ತೆ ಮತ್ಸುತನ ಪೆಸರಿಂದಮದುರ್
ನೀನೊಂದು ಕೆಱೆಯಂ ನೆಗಳ್ಚಿಸುವುದೆಂದುಸಿದುರ್
ತಾನಾಕ್ಷಣದೊಳೋಲಗಮನಿರದೆ ಪರೆಯವೇಳ್ದಂತಃಪುರಕೆ ಗಮನಿಸೆ ೩೯

ಬಳಿಕ ಪದ್ಮರಸಮಂತ್ರೀಶ್ವರಂ ಸಚಿವಸಂ
ಕುಳಸಹಿತನಾಗಿಯಲ್ಲಿಂ ತಳದುರ್ ಬಂದು ಕ
ಣ್ಗೊಳಿಪ ಭಂಡಾರದ ಮನೆಯನೆಯ್ದಿ ಕುಳ್ಳಿರ್ದುರ್ ತದ್ವಾರಿಕಂಗೆ ಪೇಳ್ದು
ಪೊಳೆವ ಪೊಸಪೊನ್ನನೀರಾಱುಸಾವಿರಮನು
ಜ್ವಳಹರ್ಷದಿಂ ತರಿಸಿ ಕಡಿತಕ್ಕೆ ಬರೆಯಿಸಿ ವಿ
ಮಳಚಿತ್ತನಾತಂಗೆ ಕೆಱೆಗಟ್ಟಿಸೆಂದೀವ ಸಮಯದೊಳಗೇವಣ್ಣಿಪೆಂ ೪೦

ಮಲಹರಂ ಪದ್ಮರಸರಂ ಮೆಱೆವೆನೆಂಬ ಮನ
ದೊಲವಿನಿಂ ಪುಲಿದೊವಲನಸಮಾಂಬರಂಗೆಯ್ದು
ಲಲಿತಾಂಗದೊಳ್ ಪೊದೆದು ಫಣಿಗಳ ಫಣಾಮಣಿಯ ಕಡುಕಂ ತಳೆದು ಭಸಿತದಾ
ತಿಲಕದಿಂ ನೊಸಲಕಣ್ಣಂ ಮಱಸಿಯಸ್ಥಿಯು
ಜ್ವಳಮಾಲೆಯಂ ತಾರಹಾರಮಾಗಿಸಿ ಧರಿಸಿ
ಸಲೆ ಮಿನುಪಕೊರಲಕರ್ಪಂ ತೆಗೆದಮದುರ್ಗಱೆವವೊಲ್ ಮಾಡಿ
ತುಟಿಯೊಳಾಂತು ೪೧

ಸಿರಿಮುಡಿಯೊಳೆಸೆವ ಪೆಱೆಯಂ ತೆಗೆದು ಪಲವುಗೆ
ಯ್ದುರಕಲಂಕರಿಸಿ ಮೊಗವೊಂದು ತೋಳೆರಡಱಿಂ
ಸ್ಫುರಿಸುತೀ ಪರಿಯಿಂದೆ ವಿಟಜಂಗಮಾಕೃತಿಯನಾಂತು ಪೊಸ ದೇಸಿ ರಚಿಸೆ
ಮೊರೆವ ಸಮ್ಮಾವುಗೆಯ ಮುಱುಕದಿಂ ತೆಗೆದುಟ್ಟ
ವರದುಕೂಲದ ಮುಂಜೆಱಂಗಿನಿಂ ತಳಿರ್ಗಯ್ಯೊ
ಳರರೆ ರಂಜಿಸುವ ಪೂಚೆಂಡಿನಿಂ ಸಿಂಗರಕ್ಕಿಟ್ಟ ತಿಟ್ಟಮೊಯಿದೆನಿಸಿ ೪೨

---

೧ ದರಮನೆ (ಬ)

ಅರರೆ ಸೆಳ್ಳುಗುರ್ಗಳಿಂ ಮುಂದಲೆಯನಲಿವ ನು
ಣ್ಗುರುಳನೊಯ್ಯಾರಿಸುತೆ ಕೆಂಬಲ್ಲ ಥಾಳವಾ
ವರಿಸೆ ನಸುನಗುತೆ ಮೆಯ್ಗಂಪನೆಣ್ದೆಸೆಗೆ ಸೂಸುತೆ ತನ್ನನಿನಿಸು ಕಂಡ
ತರುಣಿಯರ ಮನವನಾಹಾ ಸುಂಕಮಂ ಕೊಳುತೆ
ಶರಣ ಪದ್ಮರಸರಿರ್ದೆಡೆಗೆಯ್ದೆ ಕಂಡವರ್
ವರ ಸಭಯಭಕ್ತಿಭರದಿಂದೇಳ್ದು ಬಂದು ವಂದಿಸಿ ದೇವ ಬೆಸನೇನೆನೆ ೪೩

ಎಲೆ ಭಕ್ತಸಂಕುಲಲಲಾಮ ಕೇಳಿಮ್ಮ ಕಾ
ದಲೆಯೆವ್ಮೊಳಗೆ ಮುಳಿದಳಾ ಮುಳಿಸುಗಳೆವೊಡು
ಜ್ವಲಿಸುವೀಯೆಲ್ಲ ಜಾಳಿಗೆಯೊಳಿನಿಸುಂ ಕುಂದದೀಗಳೀಯೆನೆ ಶಿವಶಿವಾ
ಅಲಸಿದನೆ ಕೊಂಕಿದನೆ ಕೋಡಿದನೆ ಬಾಡಿದನೆ
ಚಲಚಿತ್ತನಾದನೆ ಪೆಡಂಮೆಟ್ಟಿದನೆ ಸಭಾ
ಸ್ಥಲಮಿದೆಂದಳ್ಕಿದನೆ ಛಲವನುಳಿದನೆ ರಾಜಧನಮಿದೆಂದೂಹಿಸಿದನೇ ೪೪

ಉಲಿವರೀ ದುರ್ಜನರ್ ಬಾಯ್ಗೆ ಬಂದಂತೆಂದು
ತಲೆಗುತ್ತಿದನೆ ವೇಷವಿದು ವಿಕೃತವೆಂದು ನಿಜ
ಬಲವದ್ವಿಶೇಷ ಭಕ್ತಿಯನುಡುಗಿದನೆ ಪೊಗಳ್ವೆನೇನನಾತನ ನಿಷ್ಠೆಯಂ
ನಲಿದಿಹಪ್ಪಗೆಯಾಂಡ ಸಿಂಧುಬಲ್ಲಾಳರಂ
ಸಲಹಿದಪ್ರತಿಮಮೋಹನರೂಪ ಗತಪಾಪ
ವಿಲಸಿತಸುಲೀಲಾಕಲಾಪನೆ ತಥ್ಯವಾಸ್ತು ಕೈಕೊಂಡು ಕರುಣಿಸೆನುತೆ ೪೫

ಸ್ವಾಮಿ ನೀವಿತ್ತೀಪರಿಯ ಸಿರಿಯನೊಲ್ಲೆನೆಸು
ತೇವಾತೊ ಪೊಱಗಟ್ಟಿಯೊಪ್ಪಿಸಿದನೋ ಮುಕ್ತಿ
ಭಾಮೆಯೆಂಬಮಲ ಗಣಿಕೆಗೆ ಕುಂದದೊತ್ತೆಯಂ ಕಳಿಪಿದನೊಯೆಂಬಂದದಿಂ
ಪ್ರೇಮದೆ ಭುಜಂಗಜಂಗಮವೇಷದೀಶಂಗೆ
ಹೇಮಾದ್ರಿವಾಸಂಗೆ ತದ್ಧನವನಿತ್ತು ಭ
ಕ್ತ್ಯಾಮೋದದಿಂದೆಱಗಿ ಬೀಳ್ಕೊಟ್ಟು ಕುಳ್ಳಿರ್ಪ ಸಮಯದೊಳಗೇವಣ್ಣಿಪೆಂ ೪೬

ಚರನೋರ್ವನತಿ ಶೀಘ್ರದಿಂ ಪರಿದುಬಂದು ಪ
ದ್ಮರಸಸಚಿವಾಧಿಪತಿಗೆಂದನೆಲೆ ದೇವ ಭ
ಕ್ತರನೇಕರನುಪಮರ್ ದೂರದಿಂ ಬಂದಿರ್ಪರೆನೆ ಕೇಳ್ದು ಸಂಭ್ರಮಿಸುತೆ
ಅರಸುಗೆಲಸವನೆಲ್ಲಮಂ ಮಱೆದು ಗಳಿಲನೇ
ಳ್ದಿರದೆಯ್ದಿಯೊಡನೊಡನೆ ಬೇಲೂರವಂ ಬರು
ತ್ತಿರೆ ಕಾಲವಲ್ಲವಿಂದಿಂಗೆ ನಡೆಯೆಂದಾತನಂ ಕಳಿಪಿ ಗಮಿಸಲಿತ್ತ ೪೭

ಕರಣಿಕರ ನಿಕರಮೆಲ್ಲಂ ಮಂತಣಂಗೊಂಡು
ಪಿರಿದು ಸೋಜಿಗದಿಂದೆ ತಂತಮ್ಮ ಮೂಗಿಂಗೆ
ಬೆರಲನೊಂದಿಸುತಿದೆಂದುಂ ಕಂಡು ಕೇಳ್ದಂದವಲ್ತೆಂದು ಗಜಬಜಿಸುತೆ
ಅರಿಬರಿಂತೆಸಗಲಕ್ಕುಮೆಯೆಂಬರಲ್ಲಿ ಮ
ತ್ತರಿಬರೆಸಗಿದೊಡಮೆಸಗುಗೆ ಪಾತ್ರಮೇಯೆಂಬ
ರರಿಬರಾದೊಡಮದೇಂ ತನ್ನೊಡವೆಯೇಯೆಂಬರರಿಬರದು ತಾನಾದೊಡಂ ೪೮

ಸೂಳೆಗಂಗಷ್ಟಾಂಗದಿಂ ನಮಿಸಿಕೊಡುವುದಿದು
ಪಾಳಿಯೇ ತನಗೆಂಬರರಿಬರಿತ್ತುಂ ಕಾರ್ಯ
ದಾಳಾಪಮಾಗೊಂದನುಸಿರ್ದು ನೀಂ ಕೆಱೆಗಟ್ಟಿಸೆಂದು ಕಳುಪದೆ ಸುಮ್ಮನೆ
ಕಾಲಮಲ್ತೆಂದಾತನಂ ತಗುಳ್ದು ತಾಂ ಜಂಗ
ಮಾಳಿ ಬಂದಿರ್ಪುದೆನೆ ಪರಿದುಪೋಪುದು ಮಂತ್ರಿ
ಮೌಳಿಮಣಿಗಳ ಗುಣವೆಯೆಂಬರಿಂತಜ್ಞಾನಿಗಳ್ ಪಲತೆಱದೊಳೂಹಿಸಿ ೪೯

ನರವರಂಗೀ ಹದನನೀಗಳಱಿಪದೊಡೆಮಗೆ
ಪರಮ ರಾಜದ್ರೋಹಮೊಂದದಿರದೆಂದೆಲ್ಲ
ಕರಣಿಕರ್ ಕೃತನಿಶ್ಚಯರೆನಿಪ್ಪೆಡೆಯೊಳವರೊಳೋರ್ವಂ ವಿವೇಕಿಸಚಿವಂ
ಒರೆದನಂತವರ್ಗಿದೇಂ ಬಲ್ಲತನವೇ ಪೆಂಪೆ
ಗರುವಿಕೆಯೆ ಗಂಭೀರವೃತ್ತಿಯೇ ನಿಷ್ಪಾಪ
ಚರಿತವೇ ಹರಭಕ್ತರಿರವನವರೇ ಬಲ್ಲರಲ್ಲದುಳಿದರ್ ಬಲ್ಲರೇ ೫೦

ಬಂದ ದೆಸೆಯಂ ಪೋದ ದೆಸೆಯನಾರುಂ ಕಾಣ
ದಂದದಿಂ ಪಲವು ಬಾಗಿಲ್ಗಾಪುಗಳನುಳಿದು
ಬಂದುದಾಸೀನದಿಂ ಬೇಡಿ ವಿತ್ತಂಗೊಂಡು ಪೋಪುದಿದು ಪರಿಭಾವಿಸೆ
ಸಂದಳ್ತಿಕಾಱಱೊಳಗುಂಟೆ ಮೇಣ್ ದುರ್ವರ್ಣ
ಮೊಂದಿದಯ್ಯನನುಜ್ವಲಾಂಗನಂ ಪದ್ಮರಸ
ರಂದು ನೃಪಮುಖ್ಯರೀಕ್ಷಿಸುತಿರಲ್ ಮಾಡಿದುದನೇಂ ಮಱೆದಿರೇ ಬಳಿಕ್ಕಂ ೫೧

ಮೊನ್ನೆ ಹರಿಯಣ್ಣನಧಿಕಾಸ್ಥಾನಮಧ್ಯದೊಳ್
ತನ್ನ ಕೈಗಳನೊರಸಿ ಕೂಡೆ ದೃಷ್ಟಂದೋಱಿ
ದಂ ನೀವೆ ಕಾಣಿರೇಯಂತಱಿಂ ಹರಸಮಯದೊಳ್ ಕರ್ಕಶಂ ಸಲ್ವುದೇ
ಇನ್ನೊರೆವುದೇನೊ ಕಾರ್ಯಾಂತರಮನಾರಯ್ದು
ತಾಂ ನೋಡೆ ಪದ್ಮರಸಮಂತ್ರಿ ಸಾಮಾನ್ಯನೇ
ಮನ್ನರೇಂದ್ರನ ಭಾಗ್ಯಲಕ್ಷ್ಮೀಯಲ್ತೇ ಆತನಳವದೇಂ ಪರಿಕಿಸಿದಿರೆ ೫೨

ಅಂತಱಿಂದೀಗಳುಸಿರ್ವುದನುಳಿದು ಕತಿಪಯ
ದಿನಾಂತರಂಗಳಿದು ಕಜ್ಜಗಳನಾರಯ್ದು ಭೂ
ಕಾಂತನ ವಿಚಾರವನಱಿದು ಮೇಲೆ ಪೇಳ್ವುದು ಸುಮಂತ್ರಮೆನೆ ಕರಣಿಕಚಯಂ
ಅಂತದನೊಡಂಬಟ್ಟು ಪರೆದರಿತ್ತಲ್ ಮಂತ್ರಿ
ಪಂ ತಿಸುಳಿಯಣುಗರೆಡೆಗೆಯ್ದಿ ತಾಂ ಸಾಷ್ಟಾಂಗ
ದಿಂ ತುಳಿಲ್ಗೆಯ್ದುಬರ್ಱತುಂ ಕೊಬರ್ಱತುಂ ತದ್ಗಣಾಳಿಯಂ ಗೃಹಕೆ ತಂದು ೫೩

ಪ್ರತ್ಯೇಕಮಾಗಿ ಚರಣಕ್ಷಾಲನಂಗೆಯ್ಸಿ
ಯತ್ಯಂತ ಮೋಹದಿಂ ಪಾದಾಂಬುವಂ ಧರಿಸಿ
ಮೃತ್ಯುಂಜಯಯನ ಭಕ್ತರಂ ನಿಜ ಗೃಹಾಂತರಕ್ಕೆಯ್ದಿಸಿ ಪರಮಹರ್ಷದಿಂ
ಸ್ತುತ್ಯಮಾದುಜ್ವಲಾಸನದಲ್ಲಿ ಕುಳ್ಳಿರಿಸಿ
ಭೀತ್ಯಾದಿ ಚಿಹ್ನಂ ತನಗೆ ತೊಡಿಗೆಯಾಗೆ ಕೃತ
ಕೃತ್ಯನಾದೆನೆನುತ್ತೆ ಪೊಂಗುತುಂ ಪೊರೆಯೇಱುತುಂ ನುತಿಸಿ ಶರಣತತಿಗೆ ೫೪

ಪರಮ ಸಾಂಗೋಪಾಂಗಮುಜ್ವಲಿಸೆ ಲಿಂಗಾವ
ಸರಮನಾಗಿಸುತೆ ದಿವ್ಯಾನ್ನಮಂ ಪಾಯಸಮ
ನುರು ಶಾಕಮಂ ಪಾಕಮಂ ಭಕ್ಷ್ಯಮಂ ಕಲಸಿದವನುಪ್ಪುಗಾ[೧]ಯ್ವ[೧]ಳಗಮಂ
ಕರಮೆಸೆವ ಕಮ್ಮನೆಯ ತುಪ್ಪಮಂ ಚಿಲುಪಾಲ
ನರರೆ ಕೆನೆವೊಸರ ಕರಣೆಯನಳಿಕಡೆಯೆನಿಪ್ಪ
ವರ ಷಡ್ರಸಾದಿಗಳನೊಲ್ದು ಬಡಿಸಲ್ಕವರ್ ಸ್ವಚ್ಛಂದವೃತ್ತಿಯಿಂದೆ ೫೫

ಲಿಂಗಭೋಗೋಪಭೋಗಿಗಳಾಗಿ ಸವಿಗಪ್ಪು
ರಂಗೂಡಿ ಮೆಱೆವ ತಾಂಬೂಲಮಂ ಗ್ರಹಿಸಿ ವಿಮ
ಲಾಂಗನಂ ಸತ್ಕೃಪಾಪಾಂಗನಂ ಪದ್ಮರಸನಂ ಶರಣಜನಸರಸನಂ
ಮಂಗಲಾತ್ಮರ್ ನೋಡಿ ನೋಡಿ ತಣಿಯದ ತವಕ
ದಿಂ ಗಾಡಿಯಿಂ ಪೊಗಳ್ದರೆಲೆ ಜಂಗಮಸ್ನೇಹಿ
ಜಂಗಮಾರಾಧನೋತ್ಸುಕ ಜಂಗಮಪ್ರಾಣಿ ಜಂಗಮಾಮರಭೂರುಹ ೫೬

ಭಾಪುರೇ ಶರಣಮಾನಸಶಯ್ಯ ನೀನೀ ಮ
ಹೀಪಾಲನಾರ್ಥವೊಗೆದಭವನಲ್ಲದೆ ಜಗ
ದ್ವ್ಯಾಪಾರಿಗಳೊಳೋರ್ವನೇ ನಿನ್ನ ನೋಟವಘದೋಟಮಲ್ತೇಯೆನುತ್ತೆ
ಈ ಪರಿಯೊಳಭಿನುತಿಸುತಿರೆ ಕೇಳ್ದು ಕರ್ಣಯುಗ
ಕಾ ಪರಮಪುರುಷನೊಂದಿಸುತೆ ಹಸ್ತಮನೆಲೆಲೆ
ಪಾಪದೂರರಿರ ನಿಮ್ಮಯೆ ಡಿಂಗರಿಗನೊಳಿನಿತೇಕೆನುತೆ ಭಯಭಕ್ತಿಯಂ ೫೭

ಬಳಿಕೆ ಚರಣಾಬ್ಜದೊಳ್ ಬೀಳ್ದು ತದ್ಭಕ್ತಸಂ
ಕುಳದ ಕರುಣಂಬಡೆದು ಶಿವರಹಸ್ಯಾನುಭವ
ಜಳಧಿಯೊಳ್ ತಾನುಮವರುಂ ಕೂಡಿ ಮೂಡಿ ಮುಳುಗಾಡಿ ಕಡು ಗಾಡಿವಡೆದು
ವಿಳಸದವಿಕಲ್ಪಪರಿಪೂರ್ಣಾದ್ವಿತೀಯ ನಿ
ರ್ಮಳ ಚಿದಾನಂದಾತ್ಮನಾಗಿ ಸಮ್ಯಕ್ಪ್ರಯೋ
ಜ್ವಳವೃತ್ತಿಯಂ ಪ್ರತಿಷ್ಠಿಸುತೆ ಪದ್ಮರಸಾರ್ಯನೀ ಪ್ರಕಾರದೊಳೊಪ್ಪಿರೆ ೫೮

---

೧ ಯ್ವು (ಬ)

ಮುದಕುಧರವಿದಳನಭಿದುರ ಪರಮಶಿವಭಕ್ತ
ಪದಶತದಳಾದಭ್ರಮುಕರಂದಲೀಲಾಪ್ರ
ಮುದ ಪರವಶೀಭೂತಮಧುಕರೋಪಮಪದ್ಮಣಾಂಕಪ್ರಣೀತಮಾಗಿ
ಸದಮಲಾಖಿಲಶಾಸ್ತ್ರಸಾರಮೆಂದೆನಿಸುವ
ಭ್ಯುದಯಕರ ಪದ್ಮರಾಜಪುರಾಣಕಥೆಯೊಳಿಂ
ತಿದು ಹರೀಶನ ಚರಿತಮುಂ ಚರಾರಾಧನಮುಮೊಪ್ಪುವೈದನೆಯ ಸಂಧಿ ೫೯

ಈಶಾಪರಾವತಾರನ ವಿಬುಧನುತನ ಭವ
ಪಾಶನಾಶಕ ಕೆಱೆಯ ಪದ್ಮಣಾರ್ಯನ ಲಸತ್
ಶ್ರೀ ಶಿವಾದ್ವೈತಸಾಕಾರ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯನ
ಈ ಶುದ್ಧಚರಿತಮುಂ ತಿಳಿಪಿದಗೊರ್ೕದಿದ
ಗರ್ಾಶೆಯಿಂ ಕೇಳ್ದರ್ಗೆ ಭಕ್ತಿ ಮುಕ್ತಿಗಳಂ ಮ
ಹಾ ಶುಭಂಗಳನಾಯುಮುಮಂ ಕೊಟ್ಟು ಗುರುರೂಪವಿಶ್ವನಾಥಂ ರಕ್ಷಿಪಂ ೬೦

ಅಂತು ಸಂಧಿ ೫ ಕ್ಕಂ ಪದಂಗಳು ೩೪೫ ಕ್ಕಂ

ಮಂಗಳಮಹಾಶ್ರೀ

ಶ್ರೀ

ಆರನೆಯ ಸಂಧಿ

ಸೂಚನೆ: ಕರ್ಣೇಜಪರ ದುರಾಲಾಪಮಂ ಭೂಪನಾ
ಕರ್ಣಿಸಿ ಕೆಱ್ಳಿಯನೀಗಳೆಮಗೆ ತೋಱಿನೆ ಭೂ
ಜನರ್ ನುತಿಸಲಾಕ್ಷಣಂ ಕೆಱ್ಳಿದೋಱಿ ಪದ್ಮಣಾರ್ಯಂ
ಸ್ವತಂತ್ರತೆಯೊಳೆಸೆದಂ

ಚಿನ್ಮೂರ್ತಿ ನಿರ್ಜರಸರಿನ್ಮಸ್ತಕತನೂನ
ಪಾನ್ಮಿಹಿರಶಶಿನೇತ್ರ ಮನ್ಮಥಾರಿ ಪುಲೋಮ
ಜಿನ್ಮೇನಘ ಸರಸಜ ಜನ್ಮಾದಿ ಸುರನುತ ವಿಯನ್ಮಣಿಸುತಸ್ಮಯಹರಾ
ಸನ್ಮುನಿನುತಾಂಹಃ ಸಮಿನ್ಮಾರುತಾಪ್ತ ಬಲ
ವನ್ಮದಗಜಾಸುರಕುಭೃನ್ಮಹಾಶನಿ ಸಮು
ದ್ಯನ್ಮುಕ್ತಿದಾಯಕ ವಿಪನ್ಮಿತ್ರ ಜಯ ಜಯ ಲಸನ್ಮಹಿಮ ವಿಶ್ವನಾಥಾ ೧

ಮಲಹರಪ್ರತಿಮ ಪದ್ಮರಸದಂಡೇಶ್ವರಂ
ಕೆಲವು ಪಗಲೀ ತೆಱದೊಳಿರ್ದೊಂದು ರಾತ್ರಿಯೊಳ
ತುಲವಿಭವದಿಂದೆ ನೃಪಸಭೆಗೆಯ್ದಿ ತತ್ಕೃತ್ಯಮಂ ತೀರ್ಚಿ ಗೃಹಕೆ ಬಂದು
ವಿಲಸದೀಶಾನುಭವಯೋಗದಿಂದಿರಲಿತ್ತ
ಪಲವು ಪಿಸುಣರ್ ಪಾತಕರ್ ನೆರೆದು ತಾವೆಲ್ಲ
ರೊಲವಿನಿಂ ಮಂತಣಂಗೊಳುತೆ ಗುಜುಗುಜುಗುಟ್ಟಿ ಕೃತನಿಶ್ಚಯಾರ್ಥರಾಗಿ ೨

---

೧ ಣ್ಣೆ (ಬ)

ಭಂಡಾರದರ್ಥಮಂ ಸೂಳೆಗಂಗಿತ್ತು ಮುಂ
ಕೊಂಡದಕೆರ್ೊಂದು ಬಗೆಯಂ ಬೇರೆ ನೆಗಳದು
ದ್ದಂಡವೃತ್ತಿಯೊಳಿಳಾಪತಿಯನಿನಿಸುಂ ಲೆಕ್ಕಕಿಕ್ಕದಾ ಪದುಮಿದೇವಂ
ಗಂಡುಗೆಲೆವುತ್ತಿರ್ಪನಂತದಂ ನಾಳೆ ಭೂ
ಮಂಡಲೇಶಂಗಱುಪಿ ತನ್ನನಾಸ್ಥಾನದೊಳ್
ಭಂಡಿಸಲ್ವೇಳ್ಕುಮಿದನೆಂತು ರಕ್ಕಿಪನೆಮ್ಮ ಮೂಲಿಗಹಹಾ ಸಿಲ್ಕಿದಂ ೩

ಎಂದುಬ್ಬಿತುಂ ಕೊಬ್ಬಿತುಂ ಕುಜನರಡವಿಗಿ
ಚ್ಚಂ ದಿಟಂ ಕೆಡಿಸಲೆಂದುಜ್ಜುಗಿಪ ತಱಗೆಲೆಗ
ಳಂದದಂತಶನಿಯುರ್ಕಂ ನಿಲಿಸಲೆಂದೂಹಿಸುವ ಕುಧರನಿಕರದಂತೆ
ಕುಂದದುದ್ಯದ್ಭಾಸ್ಕರಾಂಶುವಂ ನಂದಿಸಲ್
ಸಂದು ಬಗೆದಂಧಕಾರಾಳಿಯಂತೀಶ್ವರಾ
ನಂದ ವಿಕ್ರಮು ಪದ್ಮರಸರನುಡುಗಿಪೆವೆಂದು ನೆಸೆದರೇಂ ಪಾಪಾತ್ಮರೋ ೪

ಇಂತು ನೆನೆದಜ್ಞರ್ ನಿಧಾನಮುಂ ಪಡೆದಂತೆ
ಸಂತಸಂಗೊಳುತೆ ತಂತಮ್ಮ ಮನೆಗೆಯ್ದಿರ್ಪ
ನಂತರದೊಳವರ ವಿಭವಕೆ ಮಿಳ್ತು ಮೂಡಿತೋಯೆನೆ ಪೊಳ್ತು ಮೂಡಿ ಮೆಱೆಯೆ
ಭ್ರಾಂತರೇಳ್ದಿಂದುವುಂ ಮಾಳ್ಪ ಕರ್ಮಾಳಿಗಳ
ನಂತಂತೆ ನೆಗಳ್ದು ಬಳಿಕೋರ್ವೋರ್ವರಾಗಿ ಭೂ
ಕಾಂತನೋಲಗಕೆ ಗಮನಿಸಿ ತನ್ನೃಪಾಲನಂ ಕಂಡು ಕುಳ್ಳಿರ್ದು ಮುದದಿಂ ೫

ಒಂದಿನಿಸು ಪೊಳ್ತನಂತಿಂತು ಕಳೆದವನಿಪಂ
ಗೆಂದರ್ ದುರಾತ್ಮರೆಲೆ ಭೂಪಾಲ ಬೇಲೂರೊ
ಳಂದು ನೀಂ ಕಟ್ಟಿಸಲ್ವೇಳ್ದ ಕೆಱೆಯಾದುದೇಯೆನೆ ಭೋಂಕನಱಿದು ತಿರಿಗಿ
ಇಂದುವರಮಾಗದಿರ್ಪುದೆಯೆಂದು ತತ್ಸಚಿವ
ವೃಂದದಾಸ್ಯಂಗಳಂ ನೋಡಿ ಬೆಸಗೊಳಲೊಡಂ
ನಿಂದು ಬಿನ್ನವಿಸಿದರ್ ನೃಪತಿ ಕೇಳ್ ಪದ್ಮರಸಮಂತ್ರಿ ಕೆಱೆಗೆಂದು ನುಡಿದು ೬

ಮೇಲೆ ಪನ್ನೆರಡುಸಾಸಿರ ಪೊಂಗಳಂ ತರಿಸಿ
ಬೇಲೂರವಂಗೆ ಕೊಡುವವಸರದೊಳೋರ್ವ ವೇ
ಶ್ಯಾಲೋಲಜಂಗಮುಂ ಬಂದು ಬೇಡಲೊಡನಾ ಧನವಿತ್ತು ಕೂಡೆ ಶರಣ
ಜಾಲಮದು ಬಂದುದೆನೆ ಕೇಳ್ದಲ್ಲಿಗೆಯ್ದುತೀ
ಕಾಲಕ್ಕೆ ನಡೆಯೆಂದವಂಗುಸಿರ್ದು ಕಳಿಪಿದುದ
ನಾಲೋಕಿಸುತೆ ತಮ್ಮ ಹಸ್ತಾಂತರವನಿಕ್ಕಿ ಬರೆದುಕೊಂಡಂತದರ್ಕೆ ೭

ಮತ್ತೊಂದು ಬಗೆಗಾಣ್ಬನೋಯೆನುತ್ತಳ್ಕಿ ನಿ
ವೃತ್ತಲಱಿಹಿಸಿದುದಿಲ್ಲಿನಿತಱಿಂ ಮೇಲಾದ
ವೃತ್ತಾಂತವೇನೆಂದಱಿಯೆವೆಂದು ಕರಣಿಕರ್ ನುಡಿಯೆ ವಾದಿಗಳುಲಿವುತೆ
ಚಿತ್ತವಿಸು ನೃಪತಿ ಮಂತ್ರಿಪನ ಮೆಯ್ಯೊಳಗೆಳ್ಳ
ನಿತ್ತಾದೊಡಂ ಭೀತಿಯಿರ್ದಪುದೆ ಪಲವು ಪರಿ
ಯುತ್ತರವದಂತಿರ್ಕೆ ನಿನ್ನನೋವರ್ೊದಲೊಡೆಯನೆಂದು ಲೆಕ್ಕಿಸಬಲ್ಲನೇ ೮

ಸ್ವಾಮಿಭೃತ್ಯಾಚರಣಮುಳ್ಳೊಡಯ್ಯಯ್ಯ ನಿ
ಮ್ಮೀ ಮಹಾಕೋಶದರ್ಥಂದೆಗೆದು ತಂದಿಂತು
ಕಾಮುಕಂ ಬೇಡೆ ಕೊಡುವನೆ ಕೊಟ್ಟೊಡಂ ಕುಡುಗೆ ಬೇಱೊಂದು ರೀತಿಯಿಂದೆ
ಭೂಮೀಶ ಕೆಱಿಗಟ್ಟಿಸದೆ ಕೆಮ್ಮನಿರ್ಪನೆ ಬಿ
ಡಾ ಮಾತನೀಯಪಖ್ಯಾತಿಲತೆ ಚತುರಬ್ಧಿ
ಸೀಮಾವಸಾನಂಬರಂ ಪರ್ವಿ ಪರಕಲಿಸದೇ ನೀನೆ ಪೇಳೆಂದೆನೆ ೯

ಭೂಪನಾ ದುರ್ಜನರ ದುಷ್ಟೋಕ್ತಿಯಂ ಕೇಳ್ದು
ಕೋಪವೇ ರೂಪಾದವೋಲ್ ಛಿಟಿಲೆನುತ್ತೆ ನಾ
ಸಾಪುಟದೊಳತ್ಯುತ್ಕಟೋಚ್ಛ್ವಾಸಮುಣ್ಮೆ ಕಡೆಗಣ್ ಕೆಂಪನಾಂತು ಚಲಿಸೆ
ಆ ಪುರ್ವು ಗಂಟಿಕ್ಕೆ ದಷ್ಟೋಷ್ಠದಿಂ ಹೂಂಕೃ
ತೋಪಚಿತ ಕಂಠನಾಗುತೆ ಮೀಸೆ ಕುಣಿಯೆ ಭ
ಕ್ತಾಪರಾಧಕ್ಕಲಸದುದ್ರೇಕದಿಂದೋರ್ವ ಚರನನೀಕ್ಷಿಸುತೆ ಪೇಳ್ದಂ ೧೦

ನೀಂ ಬೇಗದಿಂದೆ ಪದ್ಮರಸರಂ ಕರೆದು ತಾ
ರೆಂಬುದುಮವಂ ಭೋಂಕನಿವರ ಬಾಗಿಲ್ಗೆಯ್ದಿ
ತಾಂ ಬಂದ ಹದನನೊಳಗಣ್ಗೆಯ್ದುವರೊಳೊರೆದು ಕಳಿಪೆಯವರಾ ವಾರ್ತೆಯಂ
ಶಂಬರಾರಿಪ್ರಹರರೂಪಂಗೆ ಪೇಳಲೊಡ
ನೇಂ ಬಣ್ಣಿಪೆಂ ಶರಣಜನವಿಯೋಗವ್ಯಥೆಗೆ
ಬೆಂಬೀಳ್ದು ಬೇಳಾಗಿ ಪಂಬಲಿಸಿ ಹರಹರಾ ವಿಶ್ವನಾಥಾಯೆನುತ್ತುಂ ೧೧

ಸ್ವಾತಂತ್ರ್ಯಚರಿತ ಭಕ್ತೇಪ್ಸಿತಾರ್ಥಪ್ರದಾ
ಈ ತೆಱದ ಮಣಿಹಕಾನಾರ್ಪೆನೇ ನಿಜ ಚಿತ್‌ಸು
ಧಾತಿಕ್ರಮಣಮಾಗಿ ಬರ್ಪ ಭಾಗ್ಯಂ ಶ್ಲಾಘ್ಯಮೇ ಯೋಗ್ಯರೇನೊಲ್ವರೇ
ಮಾತೇನಿದಂ ತೊಲಗಿಸಯ್ಯ ಕರುಣಾಬ್ಧಿಯೆಂ
ದೋತು ಭರ್ಗಂಗೊಡಂಬಡಿಕೆಯಂ ಪೇಳ್ದು ಭ
ಕ್ತ್ಯಾತುರದಿನೀತಭಕ್ತರ್ಗೆ ಮೆಯ್ಯಿಕ್ಕಿ ಬೀಳ್ಕೊಂಡು ಪೊಱಮಟ್ಟು ಗೃಹಮಂ ೧೨

ರುದ್ರಾವತಾರನಾರಂ ಲೆಕ್ಕಿಸದೆ ಭವನ
ಭದ್ರಗಜದಂತೆ ಬಂದಾಸ್ಥಾನಮಂ ಪೊಕ್ಕು
ಸದ್ರುಚಿರಮಾದ ತನ್ನೆಂದಿನಾಸನದಲ್ಲಿ ಕುಳ್ಳಿರೆ ನೃಪತಿಯೀಕ್ಷಿಸಿ
ರೌದ್ರಮುಖದಿಂದಾಗ್ರಹಿಸುತೆಂದನೆಲೆಲೆ ನಿನ
ಗುದ್ರೇಕವೇಕಿನಿತು ಕಟ್ಬೊಡೆಯನಾನಿರಲ್
ಛಿದ್ರವೃತ್ತಿಯೊಳೆನ್ನ ಕೋಶಧನಮುಂ ಸೂಳೆಗಿಂಗೀವ ಪರಿಯದೆಂತೋ ೧೩

ನಿನ್ನನೀಶ್ವರಭಕ್ತನೆಂದು ಸುವಿನೀತನೆಂ
ದುನ್ನತ ವಿವೇಕಿಯೆಂದತ್ಯಮಲ ಗುಣಿಯೆಂದು
ನನ್ನಿಯುಳ್ಳವನೆಂದು ಪರರೊಡವೆಗಳುಪದಿರ್ಪತಿಶುದ್ಧನೆಂದು ನಂಬಿ
ಎನ್ನ ಸ್ವರಮುಂ ನಿನಗೊಪ್ಪುಗೊಟ್ಟೆನಗೆ
ಚೆನ್ನಾಗಿ ಕಾಣಿಸಿದೆಯೆಂಬ ಬಲ್ಲಾಳನಂ
ತಾಂ ನಿರೀಕ್ಷಿಸಿ ಪದ್ಮರಾಜಾಂಕನಿದಿರೆರ್ದೆಗಳೊಡೆವಂತಿರಿಂತು ನುಡಿದಂ ೧೪

ದುರ್ಜನರ ದುರ್ವಿಧಗ್ಧರ ದುರಾತ್ಮರ ಧರ್ಮ
ವರ್ಜಿತರ ಮಾತುಗೇಳ್ದಿಂತು ದೂಷಿಸಿ ನೀನು
ಪಾರ್ಜಿಸಿದ ಪುಣ್ಯಮಂ ಕೆಡಿಸಿಕೊಳ್ವರೆ ಶಿವಸದರ್ಥರ್ ಶರಣರೂಹಿಸೆ
ನಿರ್ಜರೇಂದ್ರಾದಿ ಭೋಗಂಗಳಂ ತೃಣಕೆಣಿಸು
ವರ್ಜನಪ ನಿನ್ನೊಡವೆಗೆಳಸುವರೆ ನಿನಗಿದ
ತ್ಯೂರ್ಜಿತಮೆನಿಪ್ಪುದೈಸೆ ಷಡ್ಗುಣೈಶ್ವರ್ಯಸಂಪನ್ನನಣುಗರ್ಗೆ ಪಿರಿದೇಂ ೧೫

ಬಾವನ್ನಮಂ ಪೊರೆದು ರಂಜಿಸುವ ರಸಿಕನಿರ
ದೋವೊ ಕಿಸುಕುಳವನೇಂ ಪೊರೆವನೇ ದಿವ್ಯಕಾಂ
ತಾವಿನುತಸುರತಾನುಭವಿ ಹಡಿಕೆದೊಳ್ತಿಂಗೆ ರಮಿಸುವನೆ ಪರಮಾನ್ನಮಂ
ಸೇವಿಸುವ ಭೋಗಿ ಕಲಗರ್ಚಿಂಗೆ ಮೋಹಿಸುವ
ನೇ ವಿಪುಲ ಸಿಂಹಶಿಶು ನಾಯಮೊಲೆಯುಂಬುದೇ
ಭೂವರಾ ಬಿಡುಬಿಡಾ ಸಂದೇಹಮಂ ಶರಣರನ್ಯಧನಕಿಚ್ಛೈಪರೇ ೧೬

ಪೊಡವಿ ಬಾಯ್ಬಿಟ್ಟು ನರರಂ ತಿಂಬೊಡಂ ಮೇಗ
ಣಡಿಕಿಲಾಗಿರ್ದಜಾಂಡಂಗಳೊಂದೊಂದಾಗಿ
ನಡುನೆತ್ತಿಯೊಳ್ ಬೀಳ್ವೊಡಂ ಮಾತೃಕಾಕುಚಕ್ಷೀರಂ ಗರಳಮಾದೊಡಂ
ಮುಡಿದ ಪೂಮಾಲೆಯುಗ್ರವ್ಯಾಲನಾದೊಡಂ
ಕಡೆಗೆ [1]ಸ[1]ಶಿ ಮುಸಿಯಾದೊಡಂ ಮುಲಯಮಾರುತಂ
ಸುಡುವ ಕಿಚ್ಚಾದೊಡಂ ಶಿವಭಕ್ತರಿತರಧನಕೆಳಸುವರೆ ಧಾತ್ರೀಧವಾ ೧೭

ಪಲವು ಮಾತೇಂ ಮುಳಿದೊಡಾ ಬ್ರಹ್ಮನಂ ತೃಣ
ಕ್ಕೆಲೆಲೆ ಕೀಳ್ಮಾಳ್ಪರೊಲ್ದೊಡೆ ತತ್ತೃಣಮನೋವೊ
ವಿಲಸಿತಬ್ರಹ್ಮಂಗಧಿಪಮೆನಿಪರೆಂತೆಂದೊಡೆಮ್ಮ ದೂರ್ವಾಸಮುನಿಪಂ
ಬಲರಿಪುಗೆ ಮುಳಿದವನ ಸಿರಿದೆಗೆದು ಬಿಸುಡನೇ
ಜಲನಿಧಿಯೊಳುಪಮನ್ಯು ಹರಿಗೆ ಕರುಣಿಸಿ ಮೃಡನ
ನೊಲಿಸಿ ಪಡೆದಮೃತಾಬ್ಧಿಯಂ ಕುಡನೆಯದಱಿಂ ಶಿವೈಕ್ಯರ್ಗಿದೇಂ
ಲಕ್ಷ್ಯಮೇ ೧೮

---

೧ ಕ (ಅ)

ಲಲಿತನವನಿಧಿಕಾಮದುಘಕಲ್ಪಕುಜ ಸಮು
ಜ್ಜ್ವಲಮೇರುಪರುಷಚಿಂತಾಮಣಿಗಳೆಂಬಿವೆ
ಮ್ಮಲಘು ಮಾಹೇಶ್ವರರಕಣ್ಸನ್ನೆಯಿಂದೊಗೆವವಳಿವವೆನಲಾ ಮಹಿಮರಾ
ಸುಲಭಾಂಘ್ರಿಭೃತ್ಯನಾದಾಂ ನಿನ್ನ ವಿತ್ತದೊಳ್
ತಿಲದನಿತುವಂ ಮುಟ್ಟುವೆನೆಯದಂ ಮುಟ್ಟಿದೊಡೆ
ಮಲಹರನ ಭಕ್ತರೊಲ್ವರೆ ಯವರ ವಿತ್ತವನವರ್ಗೊಪ್ಪಿಸಿದೆನೆನುತ್ತೆ ೧೯

ಈ ಪಥದೊಳೊರೆದ ಪದ್ಮರಸರ ದೃಢೋಕ್ತಿಯಂ
ಭೂಪಾಲನಾಲಿಸುತ್ತಕ್ಕಕ್ಕುಮಿಂತಪ್ಪ
ಪಾಪಭೀತರ್ ಸಮರ್ಥರ್ ಸತ್ಯರೀ ಧರೆಯೊಳೊಳರೆ ನೀವಳಿಪುವವರೀ
ಕಾಪುರುಷರಿವರ ನುಡಿಗಳ್ ದಿಟಮೆ ನಿನ್ನ ಸ
ಲ್ಲಾಪವೇ ದಿಟಮುಪ್ಪವಂತಾದೊಡೆಮ್ಮ ಕೆಱೆ
ಯೀಪರಿಯೊಳಿರ್ಪುದುಸಿರೆಂದಣಕವಾತಿನಿಂ ಬೆಸಗೊಳ್ವನಿತಱಲ್ಲಿ ೨೦

ಅಱಿವರುಳರಾದ ವಾದಿಗಳೆಂದರಿಲೆ ಭೂಪ
ಕೆಱೆಯ ಮಾತೇಂ ಗರ್ದೆಗಳ್ ಬಿತ್ತಿಯಂಕುರಿಸಿ
ಮಿಱುಗುತವೆ ತೋಂಟದೊಳ್ ಕ್ರಮುಕಾದಿಗಳ ಸಸಿಗಳೆಸೆವುತವೆ ತದ್ವಿಭವಮಂ
ಮಱೆಯೇಕೆ ನೀಂ ನೋಡಲೆಯ್ದುವುದೆ ತಳ್ವೆಂಬ
ಕುಱಿವಾನಿಸರ ಕುಯುಕ್ತಿಗೆ ನಸುನಗುತೆ ಧೀರ
ರೆಱೆಯ ಪದ್ಮರಸಾಂಕನಾ ಮಹಾಸಭೆಯೊಳಿಂತೆಂದನದನೇವಣ್ಣಿಪೆಂ ೨೧

ಕಪಟನಾಟಕಸೂತ್ರಧಾರಿ ಗುರುರೂಪವಿ
ಶ್ವಪತಿಯಾಡಿಸಿದೊಡಾಡಿದರಲ್ಲದಕಟ ಪರಿ
ಕಿಪೊಡೀ ತೊವಲಬೊಂಬೆಗಳ್ ತಾಮೆಯಾಡಲ್ ಸ್ವತಂತ್ರಮೇ ಪಲವು ಮಾತೇಂ
ನೃಪತಿ ಕೇಳಿವರೆಂದವ್ರೋಲ್ ಗರ್ದೆ ಕೆಱೆ ತೋಂಟ
ವಪರಿಮಿತವಿಭವದಿಂದೆಸೆವುತವೆ ತೋ[1]ರ್ಪೆ[1]ನೇ
ಳುಪಮಾನವೇಕೆನುತೆ ಮತ್ತಮೊರೆದಂ ಪದ್ಮಣಾರ್ಯನೇನಕಲಂಕನೋ ೨೨

---

೧ ರ್ಪ (ಬ)

ಮೂದಲಿಸಿದಾಕ್ಷಣವೆ ತೋಱದಿರ್ದುದು ಭರ್ಗ
ಪಾದಾಂಬುಜಾರ್ಚಕರ ಪದ್ಧತಿಯೆ ಪುಸಿದೊಡೆ ಮ
ಹಾದೇವನಣುಗರೆನ್ನಂ ತಮ್ಮ ಡಿಂಗರಿಗನೆಂಬರೇ ಶಂಕಿಸಿದೊಡೆ
ಮೇದಿನೀಶಾ ಗುರುಕುಲಜನೆನಿಪೆನೇ ಬಿಡವ
ನೋದಲೇಂ ನೋಳ್ಪೊಡೇಳೇಳೆನುತ್ತುರವಣಿಸಿ
ಯಾದಿಪುರುಷಂ ನುಡಿದನಯ್ಯಯ್ಯ ಸದ್ಭಾವಶುದ್ಧಿಯಂತಾಗವೇಡ ೨೩

ಅಂತುಸಿರ್ದ ಪದ್ಮರಾಜಾರ್ಯವರ್ಯನ ಮುಕ್ತಿ
ಕಾಂತಾಧವನ ನಿಶ್ಚಲೋಕ್ತಿಗೇಳ್ದಂ ಮಹೀ
ಕಾಂತನಜ್ಞಾನದಿಂ ದುರ್ಜನರ ದುಸ್ತಂತ್ರಕೊಳಗಾಗಿ ಯುಕ್ತಿಗೆಟ್ಟು
ತಿಂತಿಣಿಸಿ ಸುರಿವ ಮೇಘಾಗಮದ ಮಳೆವನಿಗ
ಳಂ ತವೆ ಗಣಿತದಿಂ ಪರೀಕ್ಷಿಸುವೆನೆಂಬಜ್ಞ
ನಂತಿದಂ ಪರಿಕಿಸುವೆನೆಂದೇಳ್ದನಕಟಕಟ ದುರ್ಬೋಧಮೇಗೆಯ್ಯದೋ ೨೪

ಭರದಿಂ ಪ್ರಯಾಣಭೇರೀರವಂಗೆಯ್ಸಿ ಭೂ
ವರನೊಳಗಣಿಂದೆ ಪೊಱಮಡೆ ಶಿವಶಿವಾ ಕೂಡೆ
ನೆರೆದುದೇನೆಂಬೆನಿಳೆಯನಿತುಂ ಮನುಜರೂಪದಿಂ ವಿಕರಿಸಿತೊ ಗುರುವರಂ
ಅಱಿದೆನಿಸಿ ನೆಗಳ್ವ ಬಲ್ಗೆಱೆಯನಿದಿರ್ಗೊಳಲೆಂದು
ಪರಿಕರಿಸಿ ಮೊದಲೆ ನಡೆವಂದವೋಯೆನೆ ಬಹಳ
ತರದಿಂ ವಿಭವದಿಂದೆಸೆವಬಲಂಬೆರಸರಸು ವಾರುವನಡರ್ದು ನಡೆಯೆ ೨೫

ಜಾತ್ಯಶ್ವಮಂ ಜಾಣ್ಮೆ ಮಿಗಿಲೇಱಿ ಪದ್ಮಣಾ
ಮಾತ್ಯನುಂ ಬಲ್ಲಾಳರಾಯನ ಸಮೀಪದೊಳ
ಗತ್ಯಂತ ಶಿವವಿಕ್ರಮಾಡಂಬರದೊಳಾರುಮಂ ಗಣಿಸದೆಯ್ದುತ್ತಿರೆ
ಶ್ರುತ್ಯಭೇದ್ಯನ ಶರಣರೀ ವಾರ್ತೆಗೇಳ್ದು ತತ್
ಪ್ರತ್ಯೇಕರಚಲನಿಷ್ಠಾಹೃದಯರಾಗಿ ಕೃತ
ಕೃತ್ಯತೆಯಿನೊಡನೆ ನಡೆದರ್ ಸಮಯಪಕ್ಷವಿನಿತಿಲ್ಲದರ್ ಶಿವಭಕ್ತರೇ ೨೬

ವರ ದಂಡನಾಯಕರ ಮಂಡಲಾಧಿಪರ ಸಚಿ
ವರ ಮಕುಟವರ್ಧನರ ರಾಜಪುತ್ರರ ರಾವು
ತರ ನಿಯೋಗಿಗಳ ಕವಿಗಳ ಗಮಕಿಗಳ ವಾದಿಗಳ ವಾಗ್ಮಿಗಳ ರಸಿಕರ
ಭರತಾದಿಶಾಸ್ತ್ರಕೋವಿದರ ಷಡ್ದರ್ಶನ
ಸ್ಥರ ಕಲಾವಿದರ ಪಲವೇನಿವರ್ ಮೊದಲಾದ
ಕರವೊಪ್ಪುವೆಪ್ಪತ್ತೆರಡು ನಿಯೋಗದವರ ಕುಲಂ ನೃಪನೊಡನೆ ನಡೆದುದು ೨೭

ಕರಿಘಟೆಗಳೋ ಕಾಲಗಿರಿಗಳೋಳಿಗಳೊ ಗ
ರ್ಘರ ಝಣತ್ಕೃತಿ ಪೊಣ್ಮೆ ಕುಣಿವ ಕುದುರೆಗಳೊ ಭೋ
ರ್ಗರೆವ ಸಂವರ್ತಾಂಬುಧಿಯ ಪೆರ್ದೆರೆಗಳ ಸಂದಣಿಯೊ ನೂಂಕುವ ತೇರ್ಗಳೋ
ವುರುದಧೀನದೆ ಚಮತ್ಕರಿಸಿ ನೀರ್ವಟ್ಟೆಯೊಳ
ಗಿರದೆ ಚರಿಸುವ ಪಡಂಗುಗಳ ಗಡಣವೊ ನರರ
ಪರಿಕರವೊ ಕಾಲಭೈರವನ ಬಹುರೂಪವೋಯೆನೆ ಚತುರ್ಬಲವೆಯ್ದಿತು ೨೮

ಅಂತಾ ಬಲದ ಕೂಡೆ ಪರಿಜನಂ ಪುರಜನಂ
ತಿಂತಿಣಿಸುತೆಯ್ದಿತಾ ಬಲಭಾರಮಂ ದಲಾ
ನಂತಿಂತಸಿತ್ತಿನಿತ್ತೆಂದುಸಿರಲಱಿಯೆನೊಂದುಂಟದೆಂತೆನೆ ಭೂಮಿಯಂ
ಆಂತ ಕರಿಗಿರಿಫಣಿಪಕಮಠಸಂತತಿ ಮಹಾ
ಶ್ರಾಂತಿವೆತ್ತೀಶನ ನಿವೃತ್ತಿಕಲೆಯಂ ಸ್ಮರಿಸು
ತಂತಿರ್ದವೆಂಬಿನಿತನಱಿವೆನಿದಱಿಂ ಮೇಲೆ ಕಾಣ್ಬ ಯುಕ್ತಿಗಳವೆಂತೋ ೨೯

ಅರಿದೆನಿಸುವಾ ಮಹಾಸೇನಾಸಮುದ್ರಕ್ಕೆ
ವರುಣನಂತಮರ್ದು ಬಲ್ಲಾಳರಾಯಂ ಪರಿ
ಸ್ಫುರಿಸುತೆ ದಿಶಾತಟಮನಲೆದು ಘುಮಿಘುಮಿಪ ಬಹು ವಾದ್ಯಧ್ವನಿಗಳೆಸಕದಿಂ
ಪರಮವೈಭವಸಹಿತನಾಗಿ ಬೇಲೂರ್ಗೆಯ್ದು
ತಿರಲೊಡನೆ ನಡೆವ ಪರಿಜನ ಪುರಜನರ್ ಮಹೀ
ಶ್ವರನನಾ ಕುಜನರಂ ಪದ್ಮರಸರಂ ನೋಡುತೋರೋರ್ವರನುಮಾನಿಸಿ ೩೦

ಏನಪ್ಪುದೋ ಶಿವಶಿವಾ ಪದ್ಮಣಾಂಕಂಗ
ನೂನ ಕರುಣಾಳುಗಿಂದಿನ ದಿನದಪಾಯವೆನು
ತಾ ನಿರೋಧದೆ ಮಱುಗುವರ್ ಕೆಲರನಾರತಮುವಂ ಭಜಿಸುವಿಷ್ಟದೈವಂ
ತಾನಿಲ್ಲವೇಯೆಂಬವರ್ ಕೆಲರ್ ತನ್ನ ಚೇ
ತೋನಿಷ್ಠೆಯಂ ತಾನಱಿಯದೀ ಮಹಾಪ್ರಬಲ
ಸೇನಾನ್ವಿತಂ ನೃಪತಿಯಂ ಕೊಂಡು ಬರ್ಪನೇಯೆಂಬರ್ ಕೆಲಂಬರಲ್ಲಿ ೨೧

ಇಂದಿವನ ಮೇಲೆ ಪಿಸುಣಿಸಿದವರ್ ಬಲ್ಬನ್ನ
ಮಂ ದಿಟಂ ತಾಳ್ವರಲ್ಲದೆಯೀ ಮಹಿಪನಿನಿಸು
ಕುಂದನಾಂಪನೆಯೆಂಬವರ್ ಕೆಲರಿದುವೆ ಸತ್ಯಮಾ ಕುಷ್ಠನೆನಿಪಯ್ಯನಂ
ಪಿಂದೆ ವಿಮಲಾಂಗನಂ ಮಾಡಿ ಸೆಣಸಿದ ಮಹೀ
ವೃಂದಾರಕರ್ಗೆ ತದ್ರುಜೆಯನಿತ್ತೆಱಗೆ ಕಾ
ಯ್ದಂದಮಂ ಕಂಡೆವಾಗರಿದಲ್ತು ಕೆಱ್ದೋರ್ಪುದೆಂಬರ್ ಕೆಲಂಬರಲ್ಲಿ ೨೨

ಈ ಪಿಸುಣರೇನನಾದೊಡಮೊರೆಯೆ ಕೇಳ್ವಿಮ್ಮ
ಭೂಪನೆಂತಪ್ಪಜ್ಞನೋ ತಾನದೇನಱಿಯ
ನೇ ಪರೀಕ್ಷಿಸಿ ಪಿಂದೆ ಪದ್ಮರಸರಳವನೆಂಬರ್ ಕೆಲಬರೀ ಮಾಳ್ಕೆಯಿಂ
ಆ ಪಥದೊಳುಸಿರುತೊಡವರೆ ತತ್ಸಮಸ್ತ ಸೇ
ನಾಪರಿವೃತೌಜ್ವಲ್ಯದಿಂ ಬಿಟ್ಟಿರಾಯನೆಂ
ಬೋಪಕುವರಂಬೆರಸು ಬಲ್ಲಾಳಭೂಭುಜಂ ಬೇಲೂರ ಪೊಱಗೆ ನಡೆದು ೨೩

ತನ್ನ ಬಲವಕ್ಕದೊಳ್ ಮೆಱೆವ ಪದ್ಮರಸಾಂಕ
ನಂ ನಿರೀಕ್ಷಿಸುತೆ ಕೆಱೆಯೆಲ್ಲಿತೆನೆ ತತ್ತಟಾ
ಕೋನ್ನತಿಗೆ ಮುಂಕುಱಿತ ತಾಣಕೊಡಗೊಂಡೆಯ್ದಿತೋರ್ಪನೀಸ್ಥಲದೊಳೆಂದು
ಓಂ ನಮೋ ವಿಶ್ವನಾಥಾಯಯೆನುತಾ ತೇಜಿ
ಯಂ ನಿಶ್ಚಲಾತ್ಮನಿಳಿಯಲ್ಕಾ ನೃಪಪ್ರಮುಖ
ರಿನ್ನೆಮಗೆ ಪಡುವಮುಖವೆಂದದಂ ತೋರ್ಪಂತೆ ಪಡುವಮುಖವಾಗೆ ಬಳಿಕಂ ೨೪

೧ ಱ (ಅ)

ಅರ್ಧಬಲನಾದೆ ನಾನಿನಿತಱೊಳಗೆಲೆ ಕೃಪಾ
ವಾರ್ಧಿ ನೋಡೆಂದು ಪದ್ಮರಸರ್ಗೆ ತೋರ್ಪ೯ಂತಿ
ರರ್ಧಚಂದ್ರಾಕಾರದಿಂ ತನ್ನ ಬಲವಂ ನಿಲಿಸಿ ನೃಪತಿಯಿರಲೀಕ್ಷಿಸಿ
ಅರ್ಧಚಂದ್ರನನಿವರ್ ಪಡೆಯದಿರರೆನುತಿತ್ತ
ಲರ್ಧಚಂದ್ರಾಭರಣರೂಪನತಿಭಕ್ತಿಯಿಂ
ಸ್ವರ್ಧುನೀಧರಭಕ್ತತತಿಗೆ ಸಾಷ್ಟಾಂಗದಿಂ ನಮಿಸಿ ನಲವಿಂದೆ ತಂದು ೩೫

ಹರಸಮಯಮುತ್ತರೋತ್ತರಮಾಗಿ ನಿಲ್ವುದೀ
ಪರಿಯೊಳೆಂದದಱ ಸೂಚನಮನಾ ವಾದಿಗ
ಳ್ಗಿರದೆ ತೋರ್ಪಂತುತ್ತರಾಭಿಮುಖಮಾಗಿ ಶರಣಶ್ರೇಣಿಯಂ ನಿಲಿಸುತೆ
ನೆರೆದುಭಯಸಭೆಯ ಮಧ್ಯದೊಳೀಶ್ವರಜ್ಞಾನ
ಪರಿಮಳಸ್ಫುರಣಭಕ್ತ್ಯಂಬುಜಾಲಂಕೃತೋ
ತ್ಕರಮಸ್ತಕಂ ಶಿವಾದ್ವೈತ ಪ್ರತಿಷ್ಠಾರ್ಯಪಟ್ಟಬದ್ಧೋರುಭಾಳಂ ೩೬

ಶಿವಕಥಾಮೃತರಸಾಯನಪೂರ್ಣಕುಂಡವೈ
ಭವಕರ್ಣನುಭಯಲಿಂಗವಿಧಾನವೀಕ್ಷಣೋ
ತ್ಸವ ವಿಶಾಲಾಕ್ಷನೀಶಾನಂದ ಬಾಷ್ಪಾಂಬುಕಣಗಲಿತಗಂಡಸ್ಥಲಂ
ಭವಿಮನುಜಮಧುಕರಾಸ್ಪೃಶ್ಯಗಂಧೋಚ್ಛ್ವಾಸ
ಸುವಿಲಸತ್‌ಚಾಂಪೇಯ ಕೋಪಮಾಘ್ರಾಣನು
ತ್ಸವಕಾರಿ ಪಂಚಾಕ್ಷರೀವಧೂಲಾಸ್ಯರಂಗಸ್ಥಲೀಭೂತಜಿಹ್ವಂ ೩೭

ಇವನ ಮುಖದಿಂ ಶಿವಾನುಗ್ರಹಮೆಸೆವುದದಱಿ
ನಿವನ ಮುಖವಿದು ಶಿವನ ಕಣ್ಣೆನಿಪುದೆಂದೂಹಿ
ಸುವ ವಿವೇಕಿಗಳೂಹೆಯಂ ಗಭೀರಿಸಿ ತೊಳಗುವಕಲಂಕಚಂದ್ರಾನನಂ
ತವಕದಿಂ ಮುಕ್ತಿಕಾಂತಾಲಿಂಗನಂಗೆಯ್ವೊ
ಡಿವೆ ತಕ್ಕವೆನಿಸಿ ರಾಜಿಪ ಬಾಹುದಂಡನೀ
ಶವಿಪಕ್ಷವಾದಿಗಳ್ಗೆರ್ದೆಯೊಡ್ಡಿ ನಿಂದೋಡಿಸುವ ಸಧೈರ್ಯೋರಸ್ಥಲಂ ೩೮

ಪುದಿದ ಕೃತಿಚಿತ್‌ಪ್ರತಿಷ್ಠೆಗೆ ನೆಟ್ಟವೆರಡು ತೊಲ
ಗದ ಕಂಬದಂದದೂರುದ್ವಯಂ ದಶದಿಜ್ಝು
ಖದಿನೊಲ್ದು ಬಂದೊಂದಿ ವಂದಿಸಿದರಾ ಸ್ವಸ್ವರೂಪಂ ತೋಱಲಾರ್ಪಾ
ಪದನಖರನಿಕರಮುಕುರಂ [1]ಶಿಷ್ಯಜನದಚಲ[1]
ಹೃದಯಕಾಸಾರೋದ್ಭವಾಂಘ್ರಿಕಮಲಂ ಶುಭಾ
ಸ್ಪದ ವಿಮಲಿನಾಂಗಯಷ್ಟಿಪ್ರೋಜ್ವಲಂ ಶಿವಾರ್ಪಿತ ಧವಲವಸ್ತ್ರರಚನಂ ೩೯

ಭೂತಿತ್ರಿಪುಂಡ್ರರುದ್ರಾಕ್ಷಮಾಲಾಮುಂಡಿ
ತಾತತೌಜ್ವಲ್ಯಾವಯವನಿತರ ಮತತಮೋ
ದ್ಧೂತಭಾಸ್ವತ್‌ಪ್ರಭಾವದಿನಮರ್ದುನಿಂದಾ ನೃಪಾದಿಗಳನೀಕ್ಷಿಸುತ್ತೆ
ಓತು ಕೇಳ್ವುದು ನಾಡೆ ನೆರೆದೀ ಸಭಾಜನ
ವ್ರಾತವೆನ್ನಯ ಭಾಷೆಗಳನೆಂದು ಗುರುರಾಜ
ನೀ ತೆಱದೊಳೆಂದನಿದು ಕೆಱೆಯಂದಕಿನಿತು ಬಾರದೊಡಂ ಸ್ರವಿಸುತಿರ್ದೊಡಂ ೪೦

ಮೋಳೆಯೋಗುತ್ತಿರ್ದೊಡೇರಿ ಬಿರಿದಿರ್ದೊಡನು
ಕೂಲಬದ್ಧೋಪಲಂಗಳ್ ಸಡಿಲ್ದಿರ್ದೊಡು
ತ್ತಾಳಸೋಪಾನಮಲ್ಲಲ್ಲಿಗಳವಡದಿರ್ದೊಡಂಬು ತುಂಬಿರದಿರ್ದೊಡೆ
ಪೇಳಲೇಂ ತೂಬು ತೊಟ್ಟಿಗಳೆಸೆಯದಿರ್ದೊಡಾ
ಚಾಳಿಯೊಳ್ ಪರಿಕಾಲ್ಗಳೆಳ್ಗೆದಪ್ಪಿರ್ದೊಡವ
ಱೋಳಿಯಂಭೋವಾಟಮಾಪ್ಪೆಸರಮುಮುದಕಸೂತ್ರಕ್ಕೆ ಹರಿಯಾದೊಡೆ ೪೧

ಗರ್ದೆಯ ಮಡಿಗಳೀಕ್ಷಿಪರ ಕಣ್ಗೆನಿದನೀಯ
ದಿರ್ದೊಡಲ್ಲಿಯ ಸಸಿಗಳೊಂದಿನಿಸು ಕೊಂಕನಾಂ
ತಿರ್ದೊಡಾ ತೋಂಟವತಿಸಂಪನ್ನಿಕೆಯನಪ್ಪುಗೆಯ್ದು ರಂಜಿಸದಿರ್ದೊಡೆ
ಮಾರ್ದನಿಯದೇಂ ಮೊದಲ್ ಕೆಱೆಗೆ ಕುಜೀತರ್ಥವಿ
ಲ್ಲಿರ್ದ ಕೆಲಸಕೆ ನೆಱೆವುದೇಯೆಂದು ನೀವೆಲ್ಲ
ರಾರ್ದು ಪೊಗಳ್ವಿಂತಸಗದೊಡೆ ಮಹಾದೇವನೇ ದೇವನೆಂದೆನಲಕ್ಕುಮೇ ೪೨

---

೧ ಶಿಷ್ಯಕುಲಜನದಚಲ (ಬ, ಕ)

ಹರಶರಣರೇ ಕುಲಜರೆನಲಕ್ಕುಮೇ ಮಹೇ
ಶ್ವರಭಕ್ತ ನಾನೆಂದುಲಿಯಲಕ್ಕುಮೇ ಬಳಿಕೆ
ಪರಧನಾದಿಗಳಭಕ್ಷ್ಯದ್ರವ್ಯತತಿಗೆಣೆ ಶಿವಾರ್ಚಕರ್ಗೆನಲಕ್ಕುಮೇ
ಒರೆಯಲೇಂ ನೀವೆಂದ ದೂಷಣಕ್ಕೆಲ್ಲಕ್ಕೆ
ನಿರುತವಾಂ ತಕ್ಕಾತನೆಂಬೀ ಪ್ರತಿಜ್ಞೆಯಂ
ಕರಮನುದ್ಧಕೆ ನೆಗಪಿಯುನ್ನತಧ್ವಾನದಿಂದುಸಿರ್ದು ದರಹಸಿತಮುಖದಿಂ ೪೩

ಗಂಗಾಧರನ ಶರಣಸಭೆಗೆ ಸೈವರಿದು ಸಾ
ಷ್ಟಾಂಗದಂಡಪ್ರಣಾಮುವನೆಸಗಿ ಬಲವಂದು
ಪೊಂಗಿ ತತ್ಪದಕಮಲಭೃಂಗನಾಗುತ್ತವರ ಹಸ್ತಾರ್ಪಿತವಿಭೂತಿಯಂ
ಮಂಗಲಕರದೊಳಾಂತು ನಿಂದು ನಿಜ ಪರಮುವುಂ
ತ್ರಾಂಗನಂ ಪ್ರಾಣವಲ್ಲಭನನಾ ಪ್ರಾಣಪದ
ಸಂಗನಂ ಮಾಡಿ ನಿಶ್ಚಲನಿಷ್ಠನಾಗಿ ಭಕ್ತ್ಯತಿಶಯದಿನಿಂಪುವೆತ್ತು ೪೪

ಓಂ ನಮಃಪ್ರಪದಾಣುಹೃದ್ಯಾಯ ಶೋಭನಾ
ಯೋಂ ನಮಸ್ತ್ರ್ಯಂಬಕಾಣುವಿಶೇಷಿತಾಯ ಸ
ತ್ಯೋಂ ನಮೋ ರುದ್ರಯತ್ತ ಇತಿ ಮಂತ್ರಪ್ರಾರ್ಥಿತಾಯ ತೇ ಶೀಘ್ರ್ಯಾಯ ತೇ
ಓಂ ನಮಃ ಪರ್ಜನ್ಯಹೃತ್ಕಮಲಶೋಭಿತಾ
ಯೋಂ ನಮೋ ಜಲದೇವತಾರ್ಚಿತಪದಾಂಬುಜಾ
ಯೋಂ ನಮೋಪಾಂಪುಷ್ಪಧಾರಿಣೇ ಗಂಗಾಧರಾಯ ವಿಶ್ವೇಶ್ವರಾಯ ೪೫

ಓಂ ನಮೋ ಮೃತ್ಯುಂಜಯಾಣುವ್ಯವಸ್ಥಿತಾ
ಯೋಂ ನಮೋ ಗಾಯತ್ರ್ಯಣೋರ್ಮಧ್ಯದೀಪಿತಾ
ಯೋಂ ನಮಸ್ಸೋಭ್ಯಾಯ ಸುಪುರುಷಾಯೇತಿ ಸಾಮಾಮ್ನಾಯ ಕೀರ್ತಿತಾಯ
ಓಂ ನಮಸ್ತೇ ಷಡಂಗಾಣುಭಿಸ್ಸಂಸ್ಫುಟಾ
ಯೋಂ ನಮಃ ಪಂಚಾಕ್ಷರೀಮನುವ್ಯಾಪಕಾ
ಯೋಂ ನಮಃ ಪ್ರಣವಸ್ವರೂಪಿಣೇ ಗಂಗಾಧರಾಯ ವಿಶ್ವೇಶ್ವರಾಯ ೪೬

ಓಂ ನಮೋ ಭಕ್ತ್ಯಾಪವಿತ್ರಂತ ಇತಿನುತಾ
ಯೋಂ ನಮಸ್ತೇ ರುದ್ರಮನ್ಯವ ಇತೀಳಿತಾ
ಯೋಂ ನಮಸ್ತೇತಮೀಶಾನಂ ಪುರುಷಮಿತ್ಯಥರ್ವವೇದೋರ್ಜಿತಾಯ
ಓಂ ನಮೋ ನೇತ್ರಯೋರ್ಮೇಘ ಪುಷ್ಪಜನಕಾ
ಯೋಂ ನಮೋ ಗಂಗಾಪ್ರದಾಯ ಸಗರಾತ್ಮಜ
ಸ್ಯೋಂ ನಮಸ್ಸಪ್ತಲಾವದ್ದಿವ್ಯ ಗಂಗಾಧರಾಯ ವಿಶ್ವೇಶ್ವರಾಯ ೪೭

ಓಮಾಪ ಇತಿ ಮಂತ್ರ ಕಲ್ಪಿತಾರ್ಘ್ಯಾದಿಕಾ
ಯೋಮಯಂ ಮೇಹಸ್ತ ಇತಿ ಮನುಸ್ಪೃಶ್ಯಶೋ
ಭಾಮಯಾಂಗಾಯ ಸದ್ಯಾದಿಮಂತ್ರಾರ್ಚಿತಾಯೋಮರ್ಧವಿಗ್ರಹಾಯ
ಓಮವಸ್ವನ್ಯಾಯ ಸಂವೃಧ್ವನೇ ನಮ
ಸ್ಸೋಮಾಯ ಚೇತಿಯಜುರಾಘೋಷಿತಾಯ ರು
ದ್ರೋ ಮಹರ್ಷಿರಿತಿಸ್ತುತಾಯ ತೇ ಗಂಗಾಧರಾಯ ವಿಶ್ವೇಶ್ವರಾಯ ೪೮

ಅಂತರಿಚ್ಛಂತೀತಿ ಮಂತ್ರತಾತ್ಪರ್ಯೋದಿ
ತಾಂತರದ್ವಿವಿಧ ಪೂಜಾಫಲಪ್ರದ ಜಂತು
ಸಂತಾನಜೀವನಪ್ರಥಮಮೂರ್ತೇ ನಮಸ್ತುಭ್ಯಮುರ್ವರ್ಯಾಯ ತೇ
ಸಂತತಮಸೌಯೋವಸರ್ಪತೀತ್ಯಣುನಾಪಿ
ಚಿಂತಿತಾಯಾದಿತ್ಯಮಧ್ಯೇ ಸುವೃಷ್ಟ್ಯರ್ಥ
ಮಂತರಾತ್ಮಸ್ಥಿತಾಯೋಂ ನಮೋ ಗಂಗಾಧರಾಯ ವಿಶ್ವೇಶ್ವರಾಯ ೪೯

ಭಾನೋರ್ಮರೀಚಿವಚ್ಛಂಭೋರನನ್ಯಾತ್ಮ
ತಾನುಪಮ ವಿಭವಾನುಸಾರಿಣೀಂ ಪ್ರಾಣಿನಾ
ಮಾನಂದಕಾರಿಣೀಂ ಮಹಿಮಾವಿಹಾರಿಣೀಂ ವಿಪದರ್ಣವೋತ್ತಾರಿಣೀಂ
ಸ್ವಾನುಭೂತ್ಯುದ್ಧವಿಸ್ತಾರಿಣೀಮಾವೃತಿವಿ
ತಾನಾಪಹಾರಿಣೀಂ ಘನದಯಾಪೂರಿಣೀಂ
ಜ್ಞಾನಕ್ರಿಯಾನಂತ್ಯಚಾರಿಣೀಮೀಶದ್ವಿತೀಯಾಮಹಂ ನಮಾಮಿ ೫೦

ಶ್ರೀ ಮದ್ವೃಷೇಂದ್ರಾಯ ಶಿವಧರ್ಮರೂಪಾಯ
ವೈಮಲ್ಯಚರಿತಾಯ ಭೃಂಗೀಶ್ವರಾಯ ಕರು
ಣಾಮೃತಸಮುದ್ರಾಯ ವೀರಭದ್ರಾಯ ವಿಲಸತ್ ಪ್ರಮಥಸಮುದಯಾಯ
ಭೀಮಾತುಲಿತವಿಕ್ರಮಾಯ ರುದ್ರಕುಲಾಯ
ಕಾಮಿತಾರ್ಥಪ್ರದಗುಣಾಯ ಭಕ್ತಚಯಾಯ
ಭೂಮಿಸಂಸ್ತುತ್ಯಾಯ ಪುನರಪಿ ನಮೋ ನಮಸ್ತೇಭ್ಯೋ ಗಣೇಭ್ಯಸ್ಸದಾ ೫೧

ಭಸ್ಮೀಕೃತಾಂಜನಸಮೂಹಾಯ ವೈವಸ್ವ
ತಸ್ಮಯಹರಣಶಕ್ತಿದಾಯ ವಿನತೇಭ್ಯೋ ಘ
ನಸ್ಮೇರಲಪನಾಂಬುಜಾಯ ಕಾರುಣ್ಯರಸಭರಿತಾಂಬಕದ್ವಯಾಯ
ಅಸ್ಮದ್ಧಿತಾರ್ಥಮಂಗೀಕೃತಶರೀರಾಯ
ವಿಸ್ಮಯಾನುಪಮಸಂವಿತ್‌ಸುಖನಿಮಗ್ನಾಯ
ತಸ್ಮೈ ನಮೋ ದೇಶಿಕೇಂದ್ರಾಯ ಶಿವಸಮಯವಾರ್ಧಿಚಂದ್ರಾಯಾನಿಶಂ ೫೨

ಎಂದೀ ಪರಿಯೊಳುಜ್ವಲಸ್ತುತಿಯನೆಸಗಿ ಬಾ
ಲೇಂದುಧರನಮಳತೇಜೋರಾಶಿಯಂ ಶರಣ
ಸಂದೋಹಸೌಖ್ಯಪ್ರಕಾಶಿಯಂ ವಾಮಹಸ್ತಸ್ಥವಿಮಲವಿಭೂತಿಯಂ
[1]ಚ[1]ಂದದಿಂ ದಕ್ಷಿಣಕರಾಂಗುಷ್ಠ ತರ್ಜನಿಗ
ಳಿಂದೆ ಪಿಡಿದಾಪತ್ಸಮಯಬಂಧುವಂ ಮಂತ್ರ
ವೃಂದರಾಜನನಿಷ್ಟದಾತೃವಂ ಸಕಲಸಂಪದ್ವಶೀಕೃತಧರ್ಮಿಯಂ ೫೩

ನಿರುಪಮಜ್ಞಾನೈಕಹೇತುವಂ ಸದ್ಭಕ್ತಿ
ಪರರ ರಸನಾಮಣಿಕರಂಡಸ್ಥವಸ್ತುವಂ
ವರ ವಿಶ್ವದರಸಿನೊಳ್ ಸಂಧಾನಮಂ ನಿಜಸ್ಮರಣಮಾತ್ರದೊಳಾಗಿಪ
ಪರಮಸಾಮರ್ಥ್ಯನಿಧಿಯಂ ಸುಪಂಚಾಕ್ಷರಿಯ
[2]ನೆರೆದೆರೆದು[2] ಕರೆದು ಕರೆದುಬ್ಬುತುಂ ಕೊಬ್ಬುತುಂ
ಪರಿಪರಿಯ ಬಣ್ಣವಣ್ಣಿಗೆಗಳಿಂ ಜಪಿಸುತುತ್ತರದಿಙ್ಮುಖಕೆ ನಡೆವುತೆ ೫೪

---

೧ ಅಂ (ಕ) ೨ ನೊರೆದೊರೆದು (ಬ)

ಭಾಗೀರಥೀಜಲಂ ಬಂದು ನಿಲ್ವೆಡೆಯಿದೆಂ
ದೀಗಮಾ ಸ್ಥಲಶುದ್ಧಿಗೆಯ್ವನುವೊಯೆಂಬಂತೆ
ರಾಗದಿಂದೊಳಗಣ್ಗೆ ತದ್ಭಸಿತಮಂ ತಳಿವುತಂತದಂ ಪಿಡಿದು ಕೂಡೆ
ಶ್ರೀಗಂಗೆಯಾಗಮಕೆ ರಂಗವಲ್ಲಿಯನಿಕ್ಕು
ವಾ ಗಾಡಿಯೋ ಕಾಶಿಗೆಣೆಯೆನಿಪುದಿದರುಭಯ
ಭಾಗದೊಳಗಾಧನೆಲನೆಂದಿಳೆಗೆ ನೆಗಳ್ವ ಸೀಮಾರೇಖೆಯೋ ಬಳಿಕ್ಕಂ ೫೫

ತವೆ ತನ್ನನಾಶ್ರಯಿಸಿದವರೀಶಪುರಕೆ ಗವಿ
ಸುವೊಡೆ ಬಟ್ಟೆಯ ಹುಟ್ಟನುಱೆ ತೋರ್ಪ ಪರಿಯೊ ಭೂ
ಯುವತಿಯನನುಗ್ರಹಿಸಲೆಂದು ಪಣೆಗಿಡುವ ಭಸಿತವಿಲಾಸದೊಂದು ಗೆರೆಯೋ
ತವಕದಿಂ ಗಂಗೆ ಬರಲಿಲ್ಲಿ ಕಟ್ಟಿಲ್ಲದೊಡೆ
ಭುವನಪ್ರಳಯಮಪ್ಪುದೆಂದು ಬಗೆದಿಸಿತಱ
ಲ್ಲಿ ವಿಹಾರಿಸೆಂದು ಕಲ್ಪಿಸುವ ನಿಯಮದ ರೇಖೆಯೋಯೆಂಬ ಪಾಂಗಿನಿಂದೆ ೫೬

ಬೆರಲೆರಡಱಿಂ ಬಿಡುತ್ತೇರಿಯಾಕಾರದಿಂ
ದಿರದೊಂದು ರೇಖೆಯಂ ರಚಿಸುವನಿತಱೊಳಗಾ
ನೊರೆವೆನೆಂತುಟೊ ಶಿವಶಿವಾ ಪದ್ಮರಸರಳವನಾ ವಿಶ್ವಪತಿಯಾಜ್ಞೆಯಿಂ
ಧರಣಿಯಂತಃಪಥದೊಳಾ ತ್ರಿಪಥಗಾದೇವಿ
ಪರಿದುಬಂದಾ ಸ್ಥಲದ ಸಸಿನದೊಳ್ ನಿಂದೆಲೆಲೆ
ಶರಣ ಬರುತ್ತೈದೆನೆಂದುಲಿವಂತೆ ಘುಳುಘುಳಿಸುತೇಳ್ದಳದನೇವಣ್ಣಿಪೆಂ ೫೭

ಎಲೆಲೆ ಮುಟ್ಟಿದ ಮೋಹದಿಂದೆ ಗಂಗಾದೇವಿ
ಪಲವು ಮೊಗವಾಂತು ಗುರುವರನನೀಕ್ಷಿಸಲೆಂದು
ತಲೆದೋಱಿದಳೊಯೆಂಬ ಭಾವದಿಂದಾ ತಾಣದೊಳಗಲ್ಲಿಗಲ್ಲಿಗಮುರ್ದು
ಜಲವುರ್ಕೆ ಭೂದೇವಿ ಮುಡಿದ ಬೆಳ್ದಾವರೆಯ
ರಲ ಪರಿಕರವೊಯೆಂಬ ವೋಲ್ ಸೊಗಸುದೋಱಿಯು
ಜ್ವಲಿಸುವವಸರದೊಳಚ್ಚರಿಯೊಂದಿ ಘನ ಭೀತಿಯಾವರಿಸಿ ಗಡಬಡಿಸುತೇ ೫೮

ಅದೆಯುರ್ಬುತದೆಯೊಡೆವುತದೆ ತೋಱುತದೆ ಮೀಱು
ತದೆಯುಣ್ಮುತದೆ ಪೊಣ್ಮುತದೆ ಪೊಂಗುತದೆ ಪೊಳೆವು
ತದೆ ಸುಳಿವುತದೆ ಸೂಸುತದೆ ಪರ್ವುತದೆ ಪರಿವುತದೆ ಪರಕಲಿಸುತದರುತೇ
ಅದೆ ಹಿಗ್ಗುತದೆ ಪೆರ್ಚುತದೆ ಬುದ್ಬುಧಂದೋಱು
ತದೆ ನೊರೆಯುನೊದವಿಸುತ್ತದೆ ತೆರೆಯನಾಗಿಸು
ತ್ತದೆ ಭೋರ್ಗರೆವುತೆ ಬರುತದೆಯೆಂದು ನೆರೆದ ಸಭೆಯುಲಿವುತಿರಲಿತ್ತ ಕೂಡೆ ೫೯

ಪರಮನಾದಸ್ವರೂಪನ ಶರಣಸಂಕುಲಂ
ನಿರುಪಮಾನಂದದಿಂ ಮೆಯ್ಯುರ್ವಿ ಕೈಯೆತ್ತಿ
ಹರಹರ ಮಹಾದೇವ ಲೋಕಕ್ಷ್ಮಯೀಕರಾಮರಧುನೀಧರ ಪುರಹರಾ
ದುರಿತಾರಿ ಕಾಮಾರಿ ಕಾಲಾರಿಯೆಂದಿಂತು
ಬಿರುದಾಂಕಮಾಲೆಗಳನೆತ್ತಿಯತ್ಯುತ್ಕಟ
ಸ್ವರದಿನುಘೆಯುಘೆ ಚಾಂಗು ಭಲರೆ ಜಯ ಜಯುಯೆಂಬನಿತಱೊಳುದಕಂ
ಪೂರ್ಣಿಸೆ ೬೦

ಗುರುಕುಲಾಗ್ರಣಿಯೊಡನೆ ಸೆಣಸುವರ್ಗಡ ನರಕಿ
ನರರಿವರೆನುತೆ ಕೋಪದಿಂದೆ ಪಲ್ಮೊರೆದು ಹೂಂ
ಕರಿಸಿ ಝುಂಕಿಸುತುರ್ಬಿ ಬೆಳೆದಳೋ ಭೂಕಾಂತೆಯೆಂಬಂತೆ ಘುಡುಘುಡಿಸುತೆ
ಸ್ಫುರಿಪ ಕಲ್ಪಾಂತಕಾಲದ ಸಿಡಿಲಗರ್ಜನಮು
ನಿರದೆ ತಾಳ್ದಾರ್ಭಟಿಸುತೇರಿಯೊಗೆತರೆ ನೋಡು
ತರರೆ ತಧ್ವನಿಗೆ ಹವ್ಮ್ಯೈಸಿ ಹವ್ವನೆ ಹಾರಿ ಮೂರ್ಛೈಸಿದುದಾ ಜನಚಯಂ ೬೧

ಗರಲಶಕ್ತಿಪ್ರಬದ್ಧರವೊಲವಿಕಾರದಿಂ
ನರಪಾದ್ಯಖಿಳಜೀವಿಗಳ್ ಬಿ[1]ಳ್ದಿ[1]ರಲ್ಕಿತ್ತ
ಉರಗಕಂಕಣನಣುಗರೊಲ್ದು ಗುರುತಿಲಕನಂ ನೋಡುತುಂ ಕೊಂಡಾಡುತುಂ
ಹರಿಸದಿಂ ತೂಗುತುಂ ಬಾಗುತುಂ ತೊನೆಯುತುಂ
ಭರವಸದಿ ನಲಿವುತುಂ ಮಲೆವುತುಂ ಕೆಲೆವುತಂ
ತಿರದುರ್ಬಿ [2]ಬೊ[2]ಬ್ಬಿಡುತೆ ತಮ್ಮ ಹರೆ ತಮ್ಮ ಕೊಳಲೆಂಬಂತದೇಂ ನೆಗಳ್ದರೋ ೬೨

---

೧ ಬಿದ್ದಿ (ಬ, ಕ) ೨ ಕೊ (ಬ, ಕ)

ನಿರುಪಮೋಲ್ಲಾಸದಿಂ ನೆರೆದು ಮಾಹೇಶ್ವರವಿ
ಸರವನೇಕಪ್ರಕಾರದ ನಾಟಕಂಗಳಂ
ಪರುಠವಿಸಿ ಶರಭೇಶ್ವರಂ ನೃಸಿಂಹಪ್ರಮಥನಂ ಗೆಯ್ದ ಘನಲೀಲೆಯಂ
ತ್ವರಿತದಿಂ ತೋರ್ಪರ್ ಕೆಲರ್ ಭರ್ಗನಂಧಕಾ
ಸುರನುರದೊಳಾಡಿದಾಟವನಾಡುವರ್ ಕೆಲರ್
ಕರಿದೈತ್ಯನಂ ಹರಂ ಕೆಡಪಿ ತೊವಲುಟ್ಟುದಂ ತೋರ್ಪರ್ ಕೆಲರ್ ಬಳಿಕ್ಕಂ ೬೩

ದಕ್ಷಾಧ್ವರಧ್ವಂಸಮುಂ ಜಲಂಧರವಧೆಯ
ನುಕ್ಷವಾಹತ್ವಮುಂ ತ್ರಿಪುರಪ್ರಹಾರವಂ
ಭಿಕ್ಷಾಟನಮುನಚ್ಯುತನನೀಶ್ವರಂ ಸಚ್ಯುತನನಾಗಿಸಿದ ಬಗೆಗಳಂ
ಅಕ್ಷಯಾವಸರದೊಳ್ ತಾಂಡವಾಡಂಬರವ
ನಕ್ಷಿತ್ರಯಂ ನೆಗಳ್ದುದಂ ತಚ್ಛಿವನ ತತ್ಸ
ದೃಕ್ಷಗಣವರರ ಪಲತೆರದ ಲೀಲಾಕಲಾಪಾನುಪಮ ವಿಭವಂಗಳಂ ೬೪

ಉಚಿತಕ್ಕೆ ತಕ್ಕಂದದಿಂ ಪಲವು ಬಗೆಗಳಂ
ರಚಿಸಿ ತೋಱಿಸುತೆ ಕುಕಿಲಿಱಿದು ಕುಣಿಕುಣಿದಾಡಿ
ರುಚಿರಾಭವಾನಂದಲೀಲೆಯೊಳ್ ಮೂಡಿಮುಳುಗಾಡುತಂತಿರ್ದು ಕೂಡೆ
ವಚಿಸಲೇಂ ಮೂರ್ಛಿತನೃಪಾದ್ಯರಂ ಕಂಡು ಗಣ
ನಿಚಯಮುವರಿರವಿಂಗೆ ಹಸಿತಮುಖದಿಂ ಕೃಪಾ
ರುಚಿವೃತಸ್ವಾಂತರಾಗುತ್ತೆಮ್ಮ ಪದ್ಮರಸಗುರುವಂ ನಿರೀಕ್ಷಿಸುತ್ತೆ ೬೫

ಜಯ ಕುಜನಭಂಗ ಜಯಜಯ ಶರಣಸಂಸಂಗ
ಜಯ ಮಂಗಲಾಂಗ ಜಯ ಜಯ ಜಿತಮದಾನಂಗ
ಜಯ ದಯಾಪಾಂಗ ಜಯ ಜಯ ಗುರುಕುಲೋತ್ತುಂಗ ಜಯ
ಜಯ ಭಕ್ತಿಪಕ್ಷ ಜಯಜಯ ಕಲ್ಮಷವಿಪಕ್ಷ [ವಾದಿಚಯಭುಜಂಗಾ
ಜಯ ಸುಭಗಲಕ್ಷ ಜಯಜಯ ವಿದಾರಿತರುಕ್ಷ
ಜಯ ಗಣಾಧ್ಯಕ್ಷ ಜಯಜಯ ಬೋಧಗುಣದಕ್ಷ ಜಯ ವಿನತಕಲ್ಪವೃಕ್ಷ ೬೬

ಸಾರಭಕ್ತಿತ್ರಯವಿಹಾರ ಸಮ್ಯಕ್‌ಚಿದಾ
ಕಾರ ನಿಜಲಿಂಗಶೃಂಗಾರ ನಿರ್ಧೂತಸಂ
ಸಾರ ನಿರ್ಜಿತತನುವಿಕಾರ ಗುಣಗಣರತ್ನಹಾರ ಸುಜನಾನುಸಾರ
ದೂರೀಕೃತೋರುನೀಹಾರ ಸಕಲ ಜನೋಪ
ಕಾರ ಶಿವಮಾರ್ಗವಿಸ್ತಾರ ಕರುಣಾಪೂರ
ವಾರಿತಾಹಂಕಾರ ಕರುಣಿಸಾ ಕರ್ಮಹೇತುಗಳನೆಲೆ ಪದ್ಮಣಾರ್ಯ ೬೭

ಎಂದು ಮಾಹೇಶ್ವರರ್ ಸುಪ್ರಸನ್ನಮುಖಾರ
ವಿಂದರಾಗುತೆ ಪದ್ಮಣಾರಾಧ್ಯಪುಂಗವಂ
ಗಂದೊರೆಯೆ ತದ್ವಾಕ್ಯಮಂ ಮನದೆಗೊಂಡಾ ನೃಪಾದಿಗಳನೀಕ್ಷಿಸುತ್ತೆ
ಮಂದಹಾಸಂಗೆಯ್ಯುತಾ ಕೆಱೆಯ ದಿವ್ಯಾಂಬು
ವಂ ದಿಟಂ ತರಿಸಿ ಗಂಗಾಜೀವನವೆ ಕರುಣ
ದಿಂದಿವರ್ಗೆ ಜೀವನವನೆಸಗೆಂದವರ ಮೇಲೆ ತಳಿಯಲೊಡನೇವಣ್ಣಿಪೆಂ ೬೮

ಅರರೆ ನಿದ್ರಿತರೆಬ್ಬಿಸಿದೊಡೆ ಬೆರ್ಚಿದವೊಲೇ
ೞ್ವಿರವಿನಿಂದೇೞ್ದು ಭೂಪತಿಯ ಸದ್ಭ್ರೂಲತೋ
ತ್ಕರಯುತಾನಂದಾಶ್ರುಪೂರ್ಣಲೋಚನದಂತೆ ನೀರ್ದುಂಬಿ ಮೆಱೆವ ಕೆಱೆಯಂ
ಗುರುರಾಜನಂ ನೋಡಿ ತಲೆಗುತ್ತಿ ಕಡು ನಾಣ್ಚಿ
ಧರೆಗೆ ತಮ್ಮಯ ಭಂಗಮಂ ಬರೆದುತೋರ್ಪಂತೆ
ಬರೆಯುತುಂ ನೆಲನನುಂಗುಟದೆ ಭೂಪಾದಿಗಳ್ ಬಾಯಳಿವುತಿರಲೀಕ್ಷಿಸಿ ೬೯

ಜನಪಾದಿಗಳಿರ ಕೆಱೆಯಾಯ್ತೆ ಬಳಿಕಿನ್ನಿತ್ತ
ಮಿನುಪತುಂಬಂ ತೊಟ್ಟಿಯಂ ಗರ್ದೆಯಂ ತೋಂಟ
ಬನುವನಾರಯ್ವುದೆನುತಲ್ಲಲ್ಲಿಗೀಶಮನುವಂ ಜಪಿಸುತಾ ಭಸಿತಮಂ
ಅನಘದೇಶಿಕಚಕ್ರವರ್ತಿ ತಳಿದನಿತಱೊಳ್
ಜನಿಸಿ ನಳನಳಿಸುತೊಪ್ಪಿ[೧]ದುವವಱ ಚೆಲ್ವನಾ
ನಿನಿತೆಂದು ಪೊಗಳಲಾರ್ಪೆನೆ ಶಿವಶಿವಾ ಬಲ್ಲವೊಲ್ ಭಕ್ತಿಯಿಂ ಬಣ್ಣಿಪೆಂ ೭೦

---

೧ ದವನದ (ಬ)

ಅಂಗಜಾತಂಕನೂರಪೆರ್ಬಾಗಿಲೋ ದಿವ್ಯ
ಗಂಗಾಪ್ರವೇಶಕ್ಕೆ ಭೂಕಾಂತೆ ಕೂರ್ತು ಪಳು
ಕಿಂ ಗಾಡಿಮಿಗೆ ಸಮೆದು ನೆಟ್ಟ ತೋರಣಮೊ ಪುಣ್ಯಸ್ನಾನಕಿಳಿಯಲೆಂದು
ಪೊಂಗಿ ಖೇಚರರಿಟ್ಟ ನಿಶ್ರೇಣಿಯೋ ಕಡು ಬೆ
ಡಂಗಿನಿಂ ಜಲದೇವತೆಯರಾಡಲೆಂದೊಲ್ದು
ಸಿಂಗರಿಸಿ ನಿಲಿಸಿದುಯ್ಯಲೆಯ ಕಂಬಂಗಳೋಯೆನಿಸಿ ತುಂಬೇಂ ಮೆಱೆದುದೋ ೭೧

ಭರದಿಂ ತ್ರಿಲೋಕೀನುತನ ನಿಷ್ಠೆಗಳ್ಕಿಯುಂ
ತಿರದೆ ಪಾತಾಳದಿಂದಾ ರಸಾಯನಕುಂಡ
ವರರೆ ಮೇಗಣ್ಗುರ್ಬಿತೋ ಶಂಕರಂ ಚಂದ್ರಕಾಂತದ ಕರಂಡದಲ್ಲಿ
ವರ ಕೃಪಾಸಿದ್ಧರಸಮುಂ ತೀವಿ ನೆಲವೆಣ್ಣ
ಕರದೊಳಾಚಾರ್ಯತಿಲಕಂಗೆ ಕಳುಪಿದನೊ ತ
ದ್ಧರಣೀಸತಿಯ ಕಾಂತಿರಸಭರಿತನಾಭಿಯೋಯೆನೆ ತೊಟ್ಟಿ ಕಣ್ಗೆಸೆದುದು ೭೨

ಆದಿಪುರುಷನ ದಿಟ್ಟಿಗೊನೆವೆಳಗಸೋಂಕಿನಿಂ
ಭೂದೇವತೆಗೆ ಸಾತ್ವಿಕಂ ತನುವಿನೊಳ್
ಸ್ವೇದಾಂಬುವುಣ್ಮೆ ಪುಳಕಂ ಪೊಣ್ಮೆ ರಾರಾಜಿಪಂದವೋಯೆಂಬ ಪಾಂಗಿಂ
ಮೋದದಿಂ ನೀರ್ವೆರಸುಶಾಲಿಗಳ ಸಸಿಗಳಿಂ
ದಾದವೊಪ್ಪಿದುವು ಗರ್ದೆಯ ಮುಡಿಗಳವಱಿಡೆಯೊ
ಳಾ ದೇಶಿಕನ ಕೃಪಾರಸದೊಳ್ ಪೊನಲ್ಗಳೋಯೆನೆ ಕಾಲ್ಗಳೊಪ್ಪಿರ್ದುವು ೭೩

ಅನಘ ದೇಶಿಕಕುಲೊತ್ತಮನ ಸಂಭ್ರಮಕೊಲ್ದು
ವನಲಕ್ಷ್ಮಿ ಪರಿಕರಿಸಿ ಗುಡಿಗಟ್ಟಿದಳೊ ಮಹೇ
ಶನೆ ದೈವವಾ ಭಕ್ತರೇ ಕುಲಜರವರ್ಗೆ ಸರಿಯಿಲ್ಲೆಂದು ಭೂಕಾಮಿನಿ
ಅನುನಯದೆ ಪಲಗಯ್ಗಳಾಂತುದ್ದಕೆತ್ತಿದೊಂ
ದನುವೊ ವಾದಿಪರೆರ್ದೆಗೆ ಬಸಿದಿಟ್ಟ ದಸಿಗಳೋ
ಯೆನಿಸಿ ಸುಳಿವಿಡಿದಡಕೆ ಮೊದಲಾದವಱ ಸಸಿಗಳಿಂ ತೋಂಟಗಳ್ ಮೆಱೆದುವು ೭೪

ಪರಿಕಿಸುವೊಡಮೃತಜೀವನಘನರಸಂಗಳಿಂ
ದೊರೆವ ನಾಮತ್ರಯಂ ಸಾರ್ಥಕಮಿವೆನ್ನನೀ
ರ್ಗಿರದುಳಿದ ನೀರ್ಗೆ ವಿಷನಾಮವೆಂದಾವರ್ತಮೆಂಬ ಬಾಯ್ದೆಱೆದುಲಿವುತೆ
ತೆರೆಗೈಯನೆತ್ತಿ ತಡಿವೊಯ್ಲಿಂದೆ ಡಂಗುರವ
ನರರೆ ಪೊಯ್ದೀಳ್ವ ಶೀಕರಕುಲದೆ ಕುಣಿವುತು
ತ್ಕರಫೇನದಿಂ ನಗುತೆ ಬೊಬ್ಬುಳಿಕೆಯಿಂದುಬ್ಬುತಾ ಕೆಱೆಯದೇಂ
ಮೆಱೆದುದೋ ೭೫

ಇಂತೆಸೆವ ಕೆಱೆ ಗರ್ದೆ ತೋಂಟವೊಳಗಾದವಱ
ನಂತ ವಿಭವಂಗಳಂ ನೋಡಿ ನಲಿದೀಶಗಣ
ಸಂತಾನವಾನಂದರಸವರ್ಷದಿಂ ನಾಂದು ನಾಂದು ಬಂದೆಮ್ಮ ಗುರುವಂ
ಸ್ವಾಂತಮಲರ್ದಪ್ಪಿ ಮುಂಡಾಡಿ ಮುದ್ದಿಸುತೆ ತತ್
ಸಂತೋಷದಿಂ ನೆಗಳ್ದ ಪುಳಕಾಂಬರಂದಳೆದ
ನಂತಱದೊಳಾದ ಪರಿಣಾಮಾಮೃತವನೀಶ್ವರಾರ್ಪಿತಂಗೆಯ್ದು ಸುಖಿಸಿ ೭೬

ಪನ್ನೆರಡುಸಾವಿರದ ನರಿಗಳಂ ಪಿಡಿತರಿಸಿ
ಸನ್ನುತಾಶ್ವಂಗಳಂ ಮಾಡಿ ಪಾಂಡ್ಯನೃಪಂಗೆ
ಮುನ್ನೆಮ್ಮ ಚೊಕ್ಕನಾಯ್ನಾರು ತೋಱದುದನೆಸೆವಿಳಹಾಳಬೊಮ್ಮದೇವಂ
ತನ್ನ ಬೀಜದ ಕಡಲೆ ಗೋದುವೆಗಳಂ ಚರ
ಕ್ಕುನ್ನತವಿಲಾಸದಿಂದಿತ್ತು ಬಿತ್ತದೆ ಬೆಳೆದು
ದಂ ನಲಿದು ಕುಱಿಯ ನೆವದಿಂದಾದ ವಾದಕ್ಕೆ ಕಟಕದೊಳ್ ತ್ರಿಪುರಾರಿಯಂ ೭೭

ಕಿನ್ನರಬ್ರಹ್ಮವಿಭು ನುಡಿಸಿಯಾ ಧ್ವನಿಗಳಿಂ
ತನ್ನರಪ ಬಿಜ್ಜಳಾದ್ಯಖಿಲರ್ಗಸುವನಿತ್ತು
ದನ್ನಾಡೆ ಕೇಳ್ದಱದೆವಿಂದೆಮ್ಮ ಪದ್ಮಣಾರ್ಯರ್ಗಂ ಬಟ್ಟಬಯಲೊಳಳವಿಂ
ಚೆನ್ನಾಗಿ ಕೆಱೆದೋಱ ಗರ್ದೆ ತೋಂಟಗಳಿನು
ತ್ಪನ್ನಮಂ ಮಾಡಿ ಕೆಡೆದೀ ನೃಪಪ್ರಮುಖಬಲ
ವನ್ನಗುತ್ತೆಬ್ಬಿಸಿದುದಂ ಕಂಡೆವೆಂದು ಪಲವಂದದಿಂ ಬಿತ್ತರಿಸುತೇ ೭೮

ಭಲರೆ ಶಿವಸಮಯಪ್ರತಿಷ್ಠಾಪನಾಚಾರ್ಯ
ಭಲರೆ ಪರಸಮಯಾಂಧಕಾರಪ್ರಹರಸೂರ್ಯ
ಭಲರೆ ನಿಜಮೇಧಾಜಿತಬ್ರಹ್ಮಚಾತುರ್ಯ ಭಲರೆ ನಿಶ್ಚಲಿತಧೈರ್ಯಾ
ಭಲರೆ ಮೃತ್ಯುಂಜಯಸದೃಕ್ಪ್ರಸೃತವೀರ್ಯ
ಭಲರೆ ಖಂಡಿತಸಬಲಬಲ್ಲಾಳನೃಪಶೌರ್ಯ
ಭಲರೆ ನಿರ್ಮಲ ಶಂಭುಭಕ್ತಜನತಾತ್ಪರ್ಯ ಭಲರೆ ಶಿವಕಾರ್ಯಧುರ್ಯಾ ೭೯

ಭಾಪುರೇ ಪದ್ಮರಸಗುರುವೆ ಭಕ್ತಿಯ ಕರುವೆ
ಭಾಪುರೇ ಪದ್ಮಣಾರಾಧ್ಯ ಕುಜನಾಸಾಧ್ಯ
ಭಾಪುರೇ ವರ ಪದ್ಮರಾಜಸಂವಿದ್ಬೀಜ ಘನ ತೇಜಗುಣಸಮಾಜಾ
ಭಾಪುರೇ ಮಹಿತ ಪದ್ಮರಸ ಸಜ್ಜನಸರಸ
ಭಾಪುರೇ ಸತ್ಪದ್ಮದೇವ ಜಂಗಮಜೀವ
ಭಾಪುರೇ ಮತ್ಪದ್ಮಣಾಂಕ ವಿಗತಕಲಂಕ ನಿಶ್ಶಂಕ ಭೂವೃಷಾಂಕ ೮೦

ಶರಣರೇನಂ ಬೇಡಿದೊಡಮೀವೆನೆಂಬ ದು
ರ್ಧರಭಾಷೆಯಂ ಧರಿಸಲಕ್ಕುಮೇ ಧರಿಸಿ ಭೂ
ವರನೊಲ್ದು ಕೊಟ್ಟಗಿತ್ತ ವಿತ್ತಮಂ ಕಾರಣಿಕಜಂಗಮಂ ಬಂದು ಬೇಡೆ
ಹರನೆಂದು ತಿಳಿದು ಕುಡಲಕ್ಕುಮೇ ಕೊಟ್ಟು ತ
ಚ್ಚರಣಸಂಗದೊಳೊಡನೆ ಸಲಲಕ್ಕುಮೇ ಸಂದು
ನರಪಂ ಕಿನಿಸಲಿಂತು ನೆಗಳಲಕ್ಕುಮೆ ಭಾಪು ಗುರುಕುಲಾಂಬರಭಾನುವೇ ೮೧

ಭಾವಿಸುವರಾರ್ ಭಾವಿಸಿದೊಡದಂ ನೆನೆವ ವಿಚ
ಲಾವಲಂಬಿಗಳದಾರ್ ನೆನೆದೊಡಂ ನಿಶ್ಚಯಿಪ
ಧೀವರರದಾರ್ ನಿಶ್ಚಯಿಸಿದೊಡಂ ನುಡಿವ ಸುವಚೋವಿಭವರಾರ್ ನುಡಿದೊಡಂ
ವೋವೊ ತೋಱುವೆನೆಂದು ನಡೆವರಾರ್ ನಡೆದೊಡಂ
ಭೂವರಾದ್ಯಖಿಲರೀಕ್ಷಿಸಲಿಂತು ತೋರ್ಪ ಮಹಿ
ಮಾವಕೀರ್ಣಾತ್ಮರಾರ್ ನಿನ್ನಂತೆ ಸೂನೃತಾರಾವ ಗುರು ಪದ್ಮದೇವಾ ೮೨

ಉರದೆ ನೋೞ್ಪರ ದಿಟ್ಟಿಜೊನ್ನವಕ್ಕಿಗೆ ನೆಗೞ್ದ
ಪೆಱಿಯೊ ಶರಣರ್ಗೆ ಸರಿಯಿಲ್ಲೆಂದಿದೇಂ ಕಟ್ಟಿ
ದೂಱಿಯೊ ಗುರುವರನ ಮಹಿಮಾಪ್ರಭಾವಕೆ ಶಿವಂ ಕೊಟ್ಟ
ಉಱುವ ಗಣವಿತತಿ ಪದ್ಮರಸರಿಗೆ ಕಳಿಪಿದುಡು [ಕಯ್ಸೆಱಿಯೊಯೆಮ್ಮಾ
ಗೊಱಿಯೊ ದೇಶಿಕನಾಜ್ಞೆಗಳ್ಕಿ ಚಲಿಸದೆ ನಿಂದು
ಮೆಱಿವ ಸಗ್ಗಿಗರ ಬಲ್ದೊಱಿಯೊ ಭೂತಿಯೊಳೊಗೆದ ಕೆಱಿಯೊ
ಪೇೞಿದು ಭಾವಿಸೆ ೮೩

ಮಲಹರನಶರಣಸಂತತಿಯ ಸಂಭ್ರಮಕಮರ್ದ
ಬಲವೊ ಗಂಗಾಧರನ ಪರಮಪ್ರಭಾವದು
ಜ್ವಲವೊ ಕುಜನರನಲೆದು ನಿಂದ ಗುರುವಲ್ಲಭನ ಛಲವೊ ನಿಜ ವಿಷಯಸ್ಥರಾ
ಅಲಘುತರಪೂರ್ವಜನ್ಮಕೃತಸಮ್ಯಕ್‌ತಪಃ
ಫಲವೊ ತಣಿಯದ ತವಕದಿಂದೂಹಿಪರ ಮನದ
ಗೆಲವೊ ಕಡೆಗಿದು ಭಸಿತದಿಂದೇೞ್ದ ಕೆಱಿಯತುಳಜಲವೊ ಬಣ್ಣಿಪೊಡಭೇದ್ಯಂ ೮೪

ಮಾರಾರಿದೂಷಕರ ದರ್ಪಮಂ ಮುಱಿವುಗ್ರ
ಮಾರಿಯೋ ಗುರುಮುಖೇಂದುಪ್ರಭೆಗೆ ಪೆರ್ಚಿದ ಚ
ಕೋರಿಯೋ ಶಿವಶರಣರವಸರಕ್ಕೊದವಿದುಪಕಾರಿಯೋ ಘನ ಗಂಗೆಯಾ
ಪೂರಮಂ ತಡೆಯಲೆಳಸಿರ್ದ ಗುರುವರನ ಸಹ
ಕಾರಿಯೋ ನಿಷ್ಠಾವಿಧಿಗೆ ತಿಟ್ಟಮಾಗಿಟ್ಟ
ದಾರಿಯೋ ಕಡೆಗೆ ಭಸಿತಪ್ರಭಾವದಿನುರ್ಬಿದೇರಿಯೋಯಿದು ಶಿವಶಿವಾ ೮೫

ಗೆಡೆವ ಪರವಾದಿಗಳ ಬಾಯ್ಗಳ್ಗೆ ಕೆತ್ತೆಸೆವ
ಪಡಿಗಳೋ ಪರಿಕಿಪರ ಮಾನಸೋಲ್ಲಾಸಕಿವು
ಗಡಿಗಳೋ ಗುರುವಿನೋೞ್ ಸೆಣಸುವರನೊದೆಯಲೆಂದಿಳೆ ತಳೆದ ಪಲವಡಿಗಳೋ
ಮೃಡರೂಪನುತ್ಸವಕೆ ಜಯಲಕ್ಷ್ಮಿ ಪಿಡಿದ ಕ
ನ್ನಡಿಗಳೋ ಕ್ಷಾರದಿಂ ನೆಗೞ್ದ ಗರ್ದೆಯ ಚೆಲ್ವ
ಮುಡಿಗಳೋ ಪೇಳೆನಿಸಿ ಪೊಗೞ್ವರ ಶತಾಯುವಿಂಗೆಡೆಗೊಟ್ಟವಿನ್ನೊರೆವುದೇಂ ೮೬

ಪಿಂಗದಾಲೋಕಿಪರ ಕಣ್ಣ ಪುಣ್ಯದ ಸತ್ಫ
ಲಂಗಳೋ ಸಾಗಿಪ ಜನರ ಕಯ್ಯ ಪೊಚ್ಚಪೊಸ
ಪೊಂಗಳೋ ವಾದಿಗಳ ಮುಖಕಮಲಕಿವು ಪಲವು ತಿಂಗಳೋ ಗುರುರಾಜನಾ
ಮಂಗಲವನೀಕ್ಷಿಸುವ ವನದೇವತೆಯರ ವದ
ನಂಗಳೋ ಸದಾರ್ಯನ ಮಹತ್ವವಸ್ತುವಿನ ಕೋ
ಶಂಗಳೋ ಬಳಿಕಸಮರಕ್ಷೆಯಿಂದಾದ ತೋಂಟಂಗಳೋ ಪೊಗಳ್ವುದೇನಂ ೮೭

ಎಂದಿಂತು ವಿವಿಧವಿಧದಿಂದೆಯ್ದೆ ಶಿವಭಕ್ತ
ವೃಂದವಂಕಿಸಿ ಪೊಗಳುತಿರಲೊಡನೆ ಬಲ್ಲಾಳ
ನಂದು ತನ್ನಖಿಲ ಬಲಸಹಿತವಷ್ಟಾಂಗದಿಂದೆಱಗಿ ದೈನ್ಯಂದೋಱುತೆ
ಸಂದ ದೇಶಿಕಚಕ್ರವರ್ತಿಯಭಯವನೀವು
ದಂದವೆತ್ತುರುಯಶಸ್ಫೂರ್ತಿಯಭಯವನೀವು
ದಿಂದುಶೇಖರಸಾಮ್ಯವರ್ತಿಯಭಯವನೀವುದೆಮಗೊಲ್ದು ಪದ್ಮಣಾಂಕಾ ೮೮

ಕಾಯಯ್ಯ ಕಾರುಣ್ಯಸಿಂಧು ಭಕ್ತರಬಂಧು
ಕಾಯಯ್ಯ ಲೋಕೈಕಗುರುವೆ ನತಸುರತರುವೆ
ಕಾಯಯ್ಯ ಸದ್ಭಕ್ತಿಗೋತ್ರ ಮಹಿಮಾಮತ್ರ ಸುಚರಿತ್ರ ಪುಣ್ಯಗಾತ್ರ
ಮಾಯಾಂಧರಂ ಮಹಿತ ಪಾಪಾತ್ಮರಂ ಮತ್ಸ
ರಾಯತ್ತರಂ ಮರ್ಕಟೋಪಮರನಧಮರನ
ಪಾಯಸ್ಥರಂ ಕಷ್ಟಚಿತ್ತರಂ ಸಜ್ಜನಾರಿಷ್ಟರಂ ದುಷ್ಟಗುಣರಂ ೮೯

ಗರ್ವಿತರನಱಿವರುಳರಂ ಕ್ರೂರಚಿತ್ತರಂ
ಸರ್ವಾಪರಾಧಿಗಳನೆಮ್ಮನುದ್ಧರಿಸೆಲೆಯ
ಖರ್ವಗುಣನಿಧಿಯೆ ನಿನ್ನ ಮಹತ್ವಮಂ ಪೊಗಳಲೆಮಗಳವೆ ನಿನ್ನಾಜ್ಞೆಯಂ
ಉರ್ವಿಯುಂ ಗಂಗೆಯುಂ ಸಸ್ಯಂಗಳುಂ ಮೀಱಿ
ದುರ್ವಿನಿಂ ಪೇಳ್ದನಿತಱೊಳ್ ನಿಂದು ಮೆಱೆದುವೀ
ಸರ್ವಬಲವಳಿದು ನಿನ್ನುರುಕೃಪೆಯಿನುಳಿದುದೆನಲಂತಿಂತುಟೆಂದೆಂಬುದೇಂ ೯೦

ಸರ್ಗಮುಂ ಸ್ಥಿತಿಯುಂ ಲಯಮುಮೆಲೆ ಪ್ರತ್ಯಕ್ಷ
ಭರ್ಗ ನಿನ್ನಾಧಾರವಲ್ಲದಿಲ್ಲಿನ್ನೆಮಗೆ
ಮಾರ್ಗಮುಂ ಮತಿಯುಮುಂಬೆಯುಮಯ್ಯನುಂ ದೈವಮುಂ ಗುರುವುಮಿನಿತೆಲ್ಲವುಂ
ವರ್ಗಿಸಲ್ ನೀವಲ್ಲದುಂಟೆ ನೀವ್ ಕೈಬಿಟ್ಟೊ
ಡಾರ್ಗಡ ಪೊರೆವರೆಂದು ಬಿನ್ನವಿಸಿ ಬಳಿಕೆಱಗೆ
ದುರ್ಗಾವರಾಭನಾ ಜನಪನಂ ನೋಡಿ ನಸುನಗುತೆತ್ತಿ ಸಂತೈಸಲೊಡನೆ ೯೧

ಗುರುವರಂ ನೆಗಳ್ದ ಮಹಿಮೆಯ ವಾರ್ತೆಯಂ ದಿಗ್ವಿ
ಸರಕಱಿಪಿಸಲ್ ನೆಗೆದುವೋಯೆನಿಸಿ ವಾದ್ಯಪ್ರ
ಕರರವಂ ಪೊಣ್ಮೆ ಶರಣರ್ ಪರಸೆ ವಿಬುಧತತಿ ಜಯ ಜಯಧ್ವನಿಯನೆಸಗೆ
ಪರಿಜನಂ ಪುರಜನಂ ಕೊಂಡಾಡೆ ಪಾಠಕಾ
ದ್ಯರನೇಕ ವಿಧದೆ ಕೈವಾರಿಸೆ ಮಹೇಶ್ವರನ
ಪುರದೊಳ್ ಗಣಶ್ರೇಣಿ ಗುಡಿಗಟ್ಟೆ ತದವಸರದಲ್ಲೆಮ್ಮ ಪದ್ಮಣಾರ್ಯಂ ೯೨

ನರಪಾದ್ಯರಂ ಕೆಲಕೆ ತೊಲಗಿಸಿ ಶಿವೈಕ್ಯಪ್ರ
ಕರಸಹಿತನಾಗಿ ಲಿಂಗಾರ್ಚನಮನಾ ಕೆಱೆಯೊ
ಳುರುತರಾನಂದದಿಂ ಯಾದೃಚ್ಛಿಕಂ ರಚಿಸಿ ಹರ್ಷದಿಂ ಬಂದು ನಿಂದು
ಅರಸಂಗೆ ಕೈವೀಸಲೊಡನವಂ ನಿಜಬಲಂ
ಬೆರಸಾ ತಟಾಕದೊಳ್ ಸ್ನಾನಪಾನಾದಿಗಳ
ನಿರದೆಸಗಿ ಕೌತುಕಂಬಡುತೆ ಗುರುಸನ್ನಿಧಿಗೆ ಬರೆ ಶರಣಸಭೆಯೀಕ್ಷಿಸಿ ೯೩

ಅಸಮಾಕ್ಷನಿಂದೆ ಬಿಟ್ಟಿಗೆ ಕಟ್ಟಿಸಿದ ಕತದಿ
ನೆಸೆವುದೀ ಕೆಱೆಗೆ ಬಿಟ್ಟಿಸಮುದ್ರವೆಂಬ ಪೆಸ
ರೆಸಗಿದೀ ಮಹಿಮಂಗೆ ಕೆಱೆಯ ಪದ್ಮರಸಾಖ್ಯಮೆಸೆವುದಿನ್ನಿತ್ತಲೆನುತೆ
ಉಸುರ್ದೀ ತಟಾಕವಱಬಱಗಳೆನ್ನದೆ ಸಮಂ
ಜಸವಾಗಿ ನಿರ್ವಿಘ್ನದಿಂದಿರ್ಕೆನುತ್ತೆ ಪ
ರಸಿ ಪೊಗಳುತಿರೆ ನೃಪನದಕ್ಕೆ ಹರ್ಷಿಸಿ ಪುರಕೆ ಚಿತ್ತವಿಪುದಿನ್ನೆನುತ್ತೆ ೯೪

ಅರ್ಥಾಧಿಪಾಪ್ತನಣುಗರ್ಗೆಱಗಿ ಭಕ್ತಿಯಿಂ
ಪ್ರಾರ್ಥಿಸಿ ಗಜಾಶ್ವಚಯಮಂ ತರಿಸಿಕೊಟ್ಟು ಪರ
ಮಾರ್ಥನಿಧಿಪದ್ಮರಸರಂ ಭದ್ರಗಜವನೇಱಿಸಿ ಸಕಲಜನಸಮೇತಂ
ತೀರ್ಥಯಾತ್ರೆಯನೆಸಗಿ ತಿರುಗುವ ಬೆಡಂಗಿಂ ಕೃ
ತಾರ್ಥತೆಯನೆಯ್ದಿ ಬಹುವಿಧದ ವಿಭವಂಗಳಿಂ
ವ್ಯರ್ಥವೃತ್ತಿಯನುಳಿದು ಗುರುವರನನೋಲಗಿಸುತುಂ ಪುರಕ್ಕೆಯ್ತರುತಿರೆ ೯೫

ಜಗದಾರ್ಯನೊಳ್ ವಿವಾದಿಸಿ ಕುವಲಯದಿನೆಯ್ದೆ
ನಗೆವೆತ್ತು ನಿಜತೇಜಮುಡುಗಿ ಗತಿಗೆಟ್ಟು ತೊ
ಟ್ಟಗೆ ನೃಪಾದಿಗಳಿಂತು ಲಜ್ಜಾಂಬುಧಿಯೊಳಾಳ್ದರೆಂದಿಳೆಗೆ ತೋರ್ಪಂದಮೋ
ಸೊಗಯಿಸುವ ದೇಶಿಕಾಗ್ರಣಿಯ ಮಹಿಮಾಪ್ರಭೆಯ
ಹೊಗರಿದಿರೊಳಿರಲಣ್ಮದಮಮ ಜಜ್ಜನೆ ಜರಿದು
ಬೆಗಡಿನಿಂ ನೀರ್ವೊಕ್ಕನೋಯೆಂಬವೋಲ್ ದಿವಾಕರನಪರಜಲಧಿಗಿಳಿದಂ ೯೬

ಪರವಾದಿಗಳ ಮನದ ಸಂಕೋಚಮಂ ತೋರ್ಪ
ಪರಿಯಂತೆ ಕಮಲಾಳಿ ಮುಗಿದುವೆಮ್ಮಲಘುಭ
ಕ್ತರ ಮತಿಯ ಸಮ್ಯಗ್ವಿಕಾಸಮಂ ಕಾಣಿಪಂತಿರೆ ಕುಮುದಕುಲಮಲರ್ದುವು
ಇರದೆ ದಶದಿಕ್ಕನಾ ಕುಜನರಪಕೀರ್ತಿಲತೆ
ಕರಮಡರ್ದವೋಲ್ ಮರ್ವು ಪರ್ವಿ ಭೀತಿಯೊಸಗೆಗಂ
ಡಿರುಳೆಂಬ ಪೆಣ್ಣ ಮೆಯ್ಯೊಳ್ ನೆಗೆದ ಬೆಮರ್ವನಿಗಳಂತೆ ಭಗಣಂ ನೆಗೆದುವು ೯೭

ಭಾವಜಾಂತಕವಿಮುಖಯಾಗಕ್ಕೆ ಪೋದ ದೋ
ಷಾವಳಿಯನಳಿಯಲಾಚಾರ್ಯನ ಕಟಾಕ್ಷದಿಂ
ದೋವೊ ಬಹುರೂಪನಾಂತಾ ಯಜ್ಞಪುರುಷನೆಯ್ತಂದನೋಯೆಂಬಂದದಿಂ
ಏವೇಳ್ದಪೆಂ ಪಲವು ಕೈದೀವಿಗೆಗಳೆಸೆದ
ವೀ ವೇಳೆಯೊಳ್ ಗುರುಪದಾಬ್ಜದೊಳ್ವೆಸರಾಂತು
ತೀವಿದೆರ್ದೆಯಕಳಂಕನಳಿವೆನೆಂದೊಗೆದನೋಯೆನಲಬ್ಜನುದಯವಾದಂ ೯೮

ಶರಣನಿಧಿಯೊಸಗೆಯಂ ನೋಳ್ಪ ಸಗ್ಗಿಗವೆಣ್ಗ
ಳುರು ಕಟಾಕ್ಷದ್ಯುತಿಯೊ ಕುಜನರನುವಿಂಗೆ ಖೇ
ಚರರಟ್ಟಹಾಸಮಂ ಮಾಡಿದನುವೋ ಪದ್ಮಣಾಂಕನೊಳ್ಜಸದ ಬೆಳಸೋ
ಒರೆಯಲಱಿದೆನಿಸಿ ತಿಳಿಜೊನ್ನಂ ಮುಸುಕೆ ತದವ
ಸರದೊಳೆಯ್ತರ್ಪಾಗಳೀ ಧರಾಂಗನೆ ಜಗ
ದ್ಗುರುವಿನುತ್ಸವಕೆ ಕುಂಕುಮದೋಕುಳಿಯನೆಸಗಿದಂತೆ ಕೆಂದೂಳಮರ್ದುದು ೯೯

ನೆಲನೊಗೆದ ದಿನದಿಂದಮಿಂತಪ್ಪ ವಿಭವಮು
ಜ್ವಲಿಸಿದುದನೊರ್ಮೆಯುಂ ಕೇಳ್ದಱಿಯೆವೆಮಗೆ ಪು
ಟ್ಟೊಲಿದಂದುಮೊದಲಿಂದುವರಮೊಂದುವುಂ ಕಂಡಱಿಯೆವಮಮ ಪೊಸತಿದೆನುತೆ
ಪಲವಂದದಿಂ ಸರ್ವಜನಮುಲಿವುತಿರಲಿಂತ
ತುಲಸಂಭ್ರಮದೆ ಪುರಂಬೊಕ್ಕು ತದ್ವೀಥಿಯೋಳ್
ನಲಿದೀಕ್ಷಿಪರ ದಿಟ್ಟಿಗಂ ಮನಕಮಾನಂದಮಂ ಬೀಱುತೆಯ್ದೆ ಬಂದು ೧೦೦

ಕೆಱೆಯ [1]ಪದ್ಮರಸರ ಗೃಹದ ಸಿರಿ[1]ದರಕ್ಕೆಯ್ದಿ
ಮೆಱೆವ ನಿಜಸೇನಾವೃತೋಜ್ವಲದಿನಮರ್ದು ನೆಲ
ದೆಱೆಯನೋಲಗಿಸುತಿರೆ ಗಜಮಸ್ತಕಮನೀಶಭಕ್ತತತಿಸಹಿತಮಿಳಿದು
ಪೆಱೆದಲೆಯನಚಲನಿಷ್ಠಾಜಯಸ್ತಂಭದಂ
ಕುಱೆ ನಿಂದು ಗುರುವರಂ ನೃಪತಿಯಂ ನೋಡಿ ಬಾ
ಯ್ದಱೆದನಿಂತಮಮ ಕೆಂಬಲ್ವೆಳಗು ಮೂಡುವೆಳೆನೇಸರ್ಗದಿರನಣಕಿಸೆ ೧೦೧

ನರಪಾಲ ಕೇಳಿಂದುಮೊದಲಾಗೆಮಗೆ ಮಹೇ
ಶ್ವರಸೇವೆಯಲ್ಲದುಳಿದರ ಸೇವೆಯಗ್ರಾಹ್ಯ
ಮೊರೆವುದೇನಿದೆ ಭಾಷೆಯೆಂದು ತಮ್ಮೊಡವೆಯನಿತುಮನುಳಿದವಂಗೆ ಸಲ್ವಾ
ವರ ಧನಕನಕರತ್ನಭೂಷಾಂಬರಾದಿಗಳ
ನಿರದೆಸೆವ ಸಿವುಡಿಯಂ ದಂಡಮುದ್ರೆಯುಮನುರು
ತರದ ಬೀಯಗಮನುದ್ಯನ್ನಿಯೋಗಮನೆಲ್ಲವಂ ತರಿಸಿಯೊಪ್ಪಿಸಲೊಡಂ ೧೦೨

---

೧ ಪದ್ಮರಸಗೃಹದಸೀಯು (ಬ, ಕ)

ಅಂತವೆಲ್ಲವನೀಕ್ಷಿಸುತ್ತೆ ಬಲ್ಲಾಳನತಿ
ಚಿಂತಾನಿಮುಗ್ನಮಾನಸನಾಗಿ ಸಾಷ್ಟಾಂಗ
ದಿಂ ತುಳಿಲ್ಗೆಯ್ದಲೆ ಮಹಾಮಹಿಮ ನೀವಿಂತು ನುಡಿವರೇ ಸಿಮ್ಮಾಜ್ಞೆಯಿಂ
ಇಂತೀ ಭುವನಮುಳಿವುದಳಿವುದೆನಲೆನಗೊಡೆತ
ನಂ ತೀರ್ವುದೇ ನಿಮ್ಮೊಳೀ ಜಗದ್ರಕ್ಷಣಾ
ರ್ಥಂ ತವೆ ಜನಿಸಿದ ನರರೂಪಹರನಲ್ಲದೀ ನಾಟಕಂ ನಿನಗೆ ನಿಜಮೇ ೧೦೩

ಇಂದುವರಮೆನ್ನನಂಗೀಕರಿಸಿ ಪೊರೆದೀಗ
ಳಂದವಲ್ತೆಂದು ನೂಂಕಿದೊಡಾನದೆಂತುಳಿವೆ
ನೆಂದು ಪಲತೆಱಗಳಿಂ ಬಿನ್ನವಿಸಿದೊಡವೊಪ್ಪದಿರೆಯದಂ ಬಿಟ್ಟು ಭೂಪಂ
ಕಂದುತೆಲೆಯಯ್ಯ ಕೇಳ್ ಮತ್ಸ್ಯ ಕೂರ್ಮ ಖಗಂಗ
ಳೊಂದಿದೀಕ್ಷಣಲಸದ್ಧ್ಯಾನ ಸಂಸ್ಪರ್ಶಂಗ
ಳಿಂದೆ ತಂತಮ್ಮ ಶಿಶುಗಳನೋವವೇ ಅಂತುಟಾದೊಡಂ ರಕ್ಷಿಸೆನುತೆ ೧೦೪

ಮತ್ತೆ ಗುರುತಿಲಕನಂ ಪ್ರಾರ್ಥಿಸುತ್ತೀ ಸಕಲ
ವಿತ್ತಮುಂ ಕೈಕೊಂಡು ಕರುಣಿಸೆನ್ನುವನೆನು
ತ್ತುತ್ತುಂಗವೃತ್ತಿಯಿಂದಡಿಗೆಱಗಿ ಮಱುಗುವ ನೃಪಾಲಕನನೀಕ್ಷಿಸುತ್ತೆ
ಚಿತ್ತಮೊಲ್ದಂತೆಗೆಯ್ದಪೆವೇಳೆನುತ್ತವನ
ನೆತ್ತಿ ಮನ್ನಿಸುತಿಂದುಮೊದಲಾಗಿ ಶಿವಭಕ್ತ
ರತ್ತಲವಗುಣವನೆಸಗದೆ ಸತ್ಯನಾಗಿರು ಮೃಡಂ ರಕ್ಷಿಸುವನೆನುತ್ತೆ ೧೦೫

ವಿನಯೋಕ್ತಿಯಿಂದೆ ಬೀಳ್ಕೊಡೆ ಪದ್ಮಣಾರ್ಯಂಗೆ
ಪುನರಪಿ ನಮಸ್ಕರಿಸಿ ತನ್ನ ಮೆಱೆವರಮನೆಗೆ
ಜನಪಾಲನಖಿಲಸೇನಾಸಹಿತನಾಗಿ ಗಮಿಸಿದನತ್ತಲಿತ್ತಲೆಮ್ಮ
ಘನ ಗುರುವರಂ ಶರಣಸಭೆವೆರಸು ನಿಜನಿಕೇ
ತನಕೆಯ್ದಿ [೧]ಸಂಪ್ರಾರ್ಥನಾಪೂರ್ವಕಂ ಭಕ್ತ
ಜನವನುಪಚರಿಸಿ ಲಿಂಗಾವಸರಮುಂ ಸಲಿಸಿ ಭಕ್ತಿರಸದೊಳ್ ಮುಳುಗಿಸಿ ೧೦೬

---

೧ ಸತ್ (ಬ, ಕ)

ಏಂ ನಿರಾಶಾಭರಿತನೋ ಸಕಲ ಭಕ್ತರ್ಗೆ
ತನ್ನರಪನಿತ್ತುದೊಳಗಾಗುಳ್ಳಖಿಲವಸ್ತು
ವನ್ನಿರ್ಮಲೋತ್ಸಾಹದಿಂ ಸಮರ್ಪಿಸಿಯವರ ಕರುಣಾಮೃತಾಬ್ಧಿಯಲ್ಲಿ
ತಾನ್ನಲಿದು ಮೂಡಿ ಮುಳುಗಾಡಿಯಂತಾ ಮಹಿಮ
ರಂ ನಾಡೆ ಬೀಳ್ಕೊಟ್ಟು ನಿಜಸತೀಸುತಮುಖ್ಯ
ರುನ್ನತಸಪರ್ಯೆಗಳನೊಪ್ಪುಗೊಳುತೀಶಸುಖದಿಂ ಪದ್ಮಣಾರ್ಯನೆಸೆದಂ ೧೦೭

ಮದಕುಧರವಿದಳನಭಿದುರ ಪರಮಶಿವಭಕ್ತ
ಪದಶತದಳಾದಭ್ರಮಕರಂದಲೀಲಾ ಪ್ರ
ಮದಪರಶೀಭೂತಮಧುಕರೋಪಮ ಪದ್ಮಣಾಂಕಪ್ರಣೀತಮಾಗಿ
ಸದಮಲಾಖಿಳ ಶಾಸ್ತ್ರಸಾರವೆಂದೆನಿಸುವ
ಭ್ಯುದಯಕರಪದ್ಮರಾಜಪುರಾಣಕಥೆಯೊಳಿಂ
ತಿದು ಗುರು ತಟಾಕಾದಿಗಳನೆಸಗಿ ಸಚಿವತೆಯನುಳಿದಾಜಿನೆಯ ಸುಸಂಧಿ ೧೦೮

ಈಶಾಪರಾವತಾರನ ವಿಬುಧನುತನ ಭವ
ಪಾಶನಾಶನ ಕೆಱೆಯ ಪದ್ಮಣಾರ್ಯನ ಲಸತ್
ಶ್ರೀ ಶಿವಾದ್ವೈತಸಾಕಾರಸಿದ್ಧಾಂತಪ್ರತಿಷ್ಠಾಪನಾಚಾರ್ಯನ
ಈ ಶುದ್ಧಚರಿತಮಂ ತಿಳಿಪಿದರ್ಗೋದಿದ
ರ್ಗಾಶೆಯಿಂ ಕೇಳ್ದರ್ಗೆ ಭುಕ್ತಿ ಮುಕ್ತಿಗಳಂ ಮ
ಹಾ ಶುಭಂಗಳನಾಯುವಂ ಕೊಟ್ಟು ಗುರುರೂಪ ವಿಶ್ವನಾಥಂ ರಕ್ಷಿಪಂ ೧೦೯

ಅಂತು ಸಂಧಿ ೬ ಕ್ಕಂ ಪದಂಗಳು ೪೫೪ ಕ್ಕಂ

ಮಂಗಳಮುಗಮುತ್

ಶ್ರೀ

ಏಳನೆಯ ಸಂಧಿ

ಸೂಚನೆ : ಲಿಂಗಾರ್ಚನಂಗೆಯ್ವ ತಲ್ಲಿಂಗದಂಗದೊಳ
ಸಂಗಾರಿಯುಚ್ಚರೂಹಂ ಕಂಡು ಪನ್ನೆರಡು
ಪೊಂಗಳಂ ನಿಚ್ಚಮುಂ ಪಡಿಯಾಗಿ ಪಡೆದು ಪದ್ಮರಸಾರ್ಯನೊಪ್ಪುತಿರ್ದಂ

ಧಿಷ್ಣ್ಯವರಧರ ವಿಗತತೃಷ್ಣಾಘ ರಜತಗಿರಿ
ಧಿಷ್ಣ್ಯಸ್ವಾಶ್ಚರ್ಯವರ್ತಿಷ್ಣುಭಕ್ತಸ್ವಾಂತ
ಧಿಷ್ಣ್ಯಸ್ಥ ಲೋಕೇಶಜಿಷ್ಣುನತಭವಪತ್ರಕೃಷ್ಣವತ್ಮಾ೯ಯಮಾನ
ಧಿಷ್ಣ್ಯಶಿಷ್ಯಾರಿನುತ ಕೃಷ್ಣಕಂಕಾಳ ಕರ
ಧಿಷ್ಣ್ಯನೇತ್ರಾಪತ್ರಪ್ರಿಷ್ಣು ದಕ್ಷ ಸಹಿಷ್ಣು
ಧಿಷ್ಣ್ಯ ಗಣಸೇವ್ಯೋನ್ಮದಿಷ್ಣು ದನುಜನಿರಾಕರಿಷ್ಣು ಜಯ ವಿಶ್ವನಾಥಾ ೧

ಅಂತು ಧನಮಂ ಕನಕಮಂ ಧಾನ್ಯಮಂ ದಿವ್ಯ
ಕಾಂತೆಯರನಾಭರಣಮಂ ವಸ್ತ್ರಮಂ ರತ್ನ
ಮಂ ತೊಳಗುವನುಲೇಪಮಂ ಪಶುಕುಲಂಗಳಂ ಪರ್ಯಂಕತಲ್ಪಂಗಳಂ
ಇಂತಂತುಟೆಂಬುದೇನುಳ್ಳ ಸರ್ವಸ್ವಮಂ
ತಾಂ ತಡೆಯದೀಶಭಕ್ತರ್ಗಿತ್ತು ವೈರಕ್ತ್ಯ
ಸಂತೋಷದಿಂ ಪದ್ಮಣಾರ್ಯನಿರ್ಪನಿತಱಿಕ್ಕೆ ಬೆಳಗಿನಂಕುರಮಾದುದು ೨

---

೧ ಐ (ಬ)

ಮೂಡಕೆಂಪೊತ್ತಿದುದು ಕಡು ತಣ್ಣನಾಗೆಲರ್
ತೀಡಿತಂಬುಜಗರ್ಭದಿಂದೆ ಪೊಱಮಡುವಳಿಯ
ಗಾಡಿಯಿಂಚರಮುಣ್ಮಿದುವು ಬಿಸಿಲ್ವಕ್ಕಿಗಳ್ ಜೋಡಾದುವೊಳ್ಸಸಿಲ್ಗೆ
ಬಾಡಿತುತ್ಪಲಿನಿಯ ಮೊಗಂ ಜೊನ್ನವಕ್ಕಿಗಳ್
ಪಾಡಳಿದವಿಂದುವಿನ ಕಾಂತಿ ವಿಭ್ರಾಂತಿಯಾ
ಯ್ತಾಡಲೇಂ ಸೊಡರ್ವೆಳಗು ಮಸುಳಿಸಿತು ವಿಹಗಕುಲದುಲಿಪಾದುದನಿತಱಲ್ಲಿ ೩

ನರರನಾಶ್ರಯಿಸಿದೀ ಬಾಹ್ಯತಮಮಂ ತಿರ
ಸ್ಕರಿಸಲಾನಾರ್ಪೆನಲ್ಲದೆಯಂತರಂಗದುರು
ತರತಮವನಲೆಯಲ್ ಸಮರ್ಥನೇ ಅಂತದಂ ಪರಿಹರಿಪ ಶಕ್ತನಾದಾ
ಗುರುವೈದನವನಂಘ್ರಿಯುಂ ತೋರ್ಪೆ ನಾನೆಂಬ
ಪರಿಯಂತೆ ದಿನಕರನೊಗೆದನಿಂತು ಲೋಕಕ್ಕೆ
ಪುರುಷಾರ್ಥಿಯಾದ ಕತದಿಂ ರವಿಗೆ ಲೋಕಬಾಂಧವನೆಂಬ ಪೆಸರಾದುದು ೪

ಇಂತಪ್ಪ ಸೂರ್ಯೋದಯಕ್ಕಿಂದೆ ಮುನ್ನಮೋ
ರಂತೆ ಸದ್ಬ್ರಾಹ್ಮೀಮುಹೂರ್ತದಲ್ಲೇಳ್ದು ಶೌ
ಚಾಂತರಮನೆಸಗಿ ಮಂತ್ರಿತಸುಲಿಂಗೋದಕದಿನಾಸ್ಯಮಂ ಪ್ರಕ್ಷಾಲಿಸಿ
ಸಂತಸದೆ ಪದಕಮಲಸೇವನಾಪೇಕ್ಷೆಯಿಂ
ದಂ ತಡೆಯದೆಯ್ತಂದ ಮಱಿಯಂಚೆಗಳೊಯಿವೆಂ
ಬಂತೆಸೆವ ಪಳುಕುವಾವುಗೆಗಳಂ ಮೆಟ್ಟಿ ಸರ್ವದಯೆನುತೆ ಗೃಹಮನೆಯ್ದಿ ೫

ಸುರುಚಿರಾಲಂಕೃತೋತ್ತಮದಿವ್ಯಪೀಠದೊಳ್
ಪರಮಮನುವಂ ಜಪಿಸುತಮಲಪದ್ಮಾಸನ
ಸ್ಥಿರತೆಯಿಂ ಪೂರ್ವಮುಖಮಾಗಿ ಕುಳ್ಳಿರ್ದುಭಯಶುದ್ಧಿಯುಂ ರಚಿಸಿ ಮೇಲೆ
ವರ ಕಾಷ್ಠಮೌನಮನೆಸಗಿ ಲಸಿತಭಸಿತಮಂ
ಭರದಿನಾಗ್ನೇಯೋಕ್ತಿಯಿಂದೆ ಸಂಕಲ್ಪಿಸು
ತ್ತಿರದಗ್ನಿರಿತಿ ಮಂತ್ರದಿಂ ಮಧ್ಯಮಾನಾಮಿಕಾಂಗುಷ್ಠದಿಂದೆ ತೆಗೆದು ೬

ಕರಮೆ ಭಸ್ಮಜ್ಯೋತಿರುಕ್ತಿಯಿಂ ನಮಿಸಿಯುಂ
ತಿರದಗ್ನಿರಿತ್ಯಗ್ನಿರಸ್ಮಿದ್ವಿಮನುಗಳಿಂ
ದುರುತರಾವಯವಸಂಸ್ಪರ್ಶನಮನೆಸಗಿಯೋಂಹ್ರೌಂಮೆನಿಪ್ಪುಪಸರ್ಗದಿಂ
ಸ್ಫುರಿಪೀಶಮನುವನೊರೆವುತೆ ಭಸ್ಮಮಂ ಬಳಿಕೆ
ಭರದಿಂ ಗ್ರಹಿಸಿ ವಾಮಕರತಲದೊಳಿಟ್ಟು ಶುಭ
ಕರಮೂಲಮಂತ್ರದಿಂ ರುದ್ರಗಣನಾವಾರಮಭಿಮಂತ್ರಿಸುತೆ ಪಾಳಿಯಿಂ ೭

ಪಂಚಪ್ರಣವಸಬಿಂದುಕ ಪಂಚಬೀಜಪೂ
ರ್ವಾಂಚಿತೇಶಾನಾದಿ ಪಂಚಮಂತ್ರಂಗಳಿಂ
ಚಂಚಚ್ಛಿರೋ ಮುಖ ಹೃದಯ ನಾಭಿಪದವೆಂಬ ಪಂಚಸ್ಥಲಂಗಳಲ್ಲಿ
ತಾಂ ಚದುರಿಸೆಯೆ ಸಭೂತಿನ್ಯಾಸಮಂ ಮಾಡಿ
ಪಂಚಾರ್ಣಮನುವನೊರೆವುತೆ ಸಂಹಿತಾಮನುಗ
ಳಿಂ ಚಾರುಮಂತ್ರಿತಮೆನಿಪ ಭಸ್ಮಮುಷ್ಟಿಯಂ ತೆಗೆದು ಮಾನಸ್ತೋಕದಿಂ ೮

ನೆಱೆಯಲಭಿಮಂತ್ರಿಸುತ್ತೀಶಮನುವಿಂದೈದು
ತೆಱದಿಂ ಶಿರವನಾ ಪುರುಷಮಂತ್ರದಿಂ ನಾಲ್ಕು
ತೆಱದಿಂ ಮುಖವನಘೋರಾಣುವಿಂದೆಂಟು ತೆಱದಿಂ ಹೃದಯಮಂ ಯತ್ನದಿಂ
ಉಱೆ ವಾಮದೇವಾಖ್ಯಮಂತ್ರದಿಂ ಪದಿಮೂಱು
ತೆಱದೆ ನಾಭಿಯನಂತೆ ಸದ್ಯಾಖ್ಯಮಂತ್ರದಿಂ
ಮೆಱೆವ ಪಾದವನೆಂಟು ತೆಱದೆ ಸರ್ವಾಂಗಮಂ ಸದ್ಯೋಹೃದಯಮನುಗಳಿಂ ೯

ಕ್ರಮದಿನುದ್ಧೂಳಿಸಿ ಕನದ್ಬ್ರಹ್ಮಮನುಗಳಿಂ
ದೆ ಮಗುಳೆ ವಿಭೂತಿಯಂ ತೆಗೆದಗ್ನಿರಿತಿಯೆಂಬ
ಸುಮಹದಣುವಿಂ ಮಂತ್ರಿಸುತ್ತುಮೋಮಾಪ ಇತಿ ಮಂತ್ರಮಂತ್ರಿತವಾರಿಯಿಂ
ವಿಮಲಪಂಚಾಕ್ಷರೀಮನುವನೊರೆವುತೆ ಕಲಸಿ
ಯಮಿತತ್ರಿಯಾಯುಷಮುಖ ತ್ರಿಯಂಬಕಮನುಗ
ಳಮರಲ್ ಜಪಿಸುತುಂ ತ್ರಿಪುಂಡ್ರಮಂ ಮೂವತ್ತೆರಳ್ ತಾಣದಲ್ಲಿ ಧರಿಸಿ ೧೦

ಲೀಲೆಯಿಂ ಪ್ರಾಣಂಗಳಂ ಸಮಾಯಾಮಿಸು
ತ್ತಾಲಾಪಿಸುತೆ ಸಮಸ್ತಯೆನಿಪ್ಪ ಸೂಕ್ತಿಯಿಂ
ಲೋಲಮತಿ ಸಂಕಲ್ಪಮಂ ಮಾಡಿ ರುದ್ರಾಕ್ಷವೃಕ್ಷಯೆಂದೆನುತೆ ನಮಿಸಿ
ಲಾಲಿತ ಸುಪೇಟಿಕಾಂತಸ್ಥರುದ್ರಾಕ್ಷಮಂ
ಶೂಲಿಮಂತ್ರವನೋದುತುಂ ಪಿಡಿದು ನಿಜಕರದ
ಮೇಲಿಟ್ಟುಕೊಳುತುಮೋಂ ಹ್ರಾಮಾದಿ ಸದ್ಯಷ್ಟಿಮಂತ್ರಕ್ರಮದೆ ಧರಿಸುತೆ ೧೧

ನನ್ನಿಯಿಂ ಶ್ರೀ ಸದಾಶಿವಯೆನುತೆ ಶಿಖಿಯೊಳೊಂ
ದಂ ನೆತ್ತಿಯೊಳ್ ವಹ್ನಿಯೆನುತೆ ಮೂಱಂ ಶಿರದೊ
ಳುನ್ನತಂ ಷಟ್ತ್ರಿಂಶದೆನುತೆ ಷಟ್ತ್ರಿಂಶತ್ತನುಱೆ ಕರ್ಣಯುಗಳದಲ್ಲಿ
ಚೆನ್ನಮರೆ ಸೋಮಾಯಯೆನುತುಮೊಂದೊಂದಂ ಕ
ರಂ ನಲ್ಮೆಯಿಂ ತ್ರಿಯಂಬಕಯೆನುತೆ ಕಂಠದೊಳ್
ತಾಂ ನೆಗಳ್ದ ಮೂವತ್ತೆರಡನಹೋ ಶ್ರೀಕಂಠಯೆನುತುರದೊಳೈವತ್ತುಮಂ ೧೨

ಬಲದ ತೋಳೊಳ್ ಸುಖಾಸನಯೆನುತೆ ಪದಿನಾಱ
ನೊಲವಿನಿಂ ಶ್ರೀಸೋಮಯೆನುತೆಡದ ತೋಳೊಳಂ
ತೆಲೆಲೆ ಪದಿನಾಱನಾ ಬಲದ ಮಣಿಬಂಧದೊಳ್ ದ್ವಾದಶಾದಿತ್ಯಯೆನುತೆ
ಸಲೆ ಪನ್ನೆರಡನಂತೆ ಕೇಶವಾದಿಯೆನುತ್ತೆ
ನಲಿದೆಡದ ಮಣಿಬಂಧದೊಳ್ ಪನ್ನೆರಡನೋತು
ಲಲಿತ ಯಜ್ಞೋಪವೀತಾಕಾರಮಾಗಿ ಶತರುದ್ರವಿದ್ಯಾಯೆನುತ್ತೆ ೧೩

ವಿಲಸದಷ್ಟೋತ್ತರಶತಂಗಳಂ ಧರಿಸಿ ಮು
ತ್ತುಳಿದಕ್ಷಮಾಲೆಗಳನಾ ಮೂಲಮಂತ್ರದಿಂ
ದೆಳವಡಲ್ಗಲಂಕರಿಸಿ ಮೇಲೆ ಶಂಕರನ ಸಾಕಾರಮಂ ನೆಱೆ ಜಾನಿಸಿ
ಅಲಘುಮತಿಯೋಮಯಂ ಮೇಯೆಂದೆನುತ್ತೆ ನಿ
ರ್ಮಳಲಿಂಗಮಂ ಸೆಜ್ಜೆಯಿಂ ತೆಗೆದು ನಿಜಕರ
ಸ್ಥಳದೊಳಿಟ್ಟು ಲಿಂಗಮೂರ್ಧದೊಳ್ ಕುಸುಮವನಿರಿಸಿ ನಮಸ್ಕರಿಸಿ
ಮುದದಿಂ ೧೪

ಮೇಲೆ ಪಾದ್ಯಾರ್ಘ್ಯಾಚಮಾನಂಗಳಂ ಕಲಾ
ಶಾಲಿ ಸದ್ಯಾಣುವಿನ ಮೊದಲ ಷಟ್ಕಲೆಗಳಿಂ
ಶೂಲಿಗರ್ಪಿಸಿ ಪಂಚಗವ್ಯ ಪಂಚಾಮೃತ ಸುಪಂಚೋದಕಾದಿಗಳುಮಂ
ಲೀಲೆಯಿಂ ಬ್ರಹ್ಮಾಂಗರುದ್ರಾದ್ಯಣುಗಳಿಂ ವಿ
ಶಾಲಶಮತಾಂಬುಸಹಿತಂ ಸಾಂಗವಾಗಿ ಕರು
ಣಾಳುಗಭಿಷೇಕಿಸಿ ವಿಶದಭಸಿತಮಂ ತತ್ಪುರುಷಮಂತ್ರದಿಂದೆ ಧರಿಸಿ ೧೫

ಪರಿಪೂರ್ಣಭಾವವಸ್ತ್ರಂಗೂಡಿ ನಿರ್ಮಲೋ
ತ್ಕರವಸ್ತ್ರಮಂ ವಾಮದೇವಾದಿಕಲೆಯಿನಿ
ತ್ತುರುಯಜ್ಞಸೂತ್ರಮಂ ಶಕ್ತಿತ್ರಯೋರುಗುಣಯುತಸೂತ್ರದೊಡನೆ ಕೂಡಿ
ನಿರುತವಾಯೆರಡನೆಯ ಕಲೆಯಿಂದಲಿತ್ತು ವಿ
ಸ್ಫುರಿತ ಸದ್ವಾಸನೋತ್ಕರಗಂಧದೊಡನೆ ಶುಭ
ಕರದಿವ್ಯಗಂಧಮಂ ಚಿದ್ಘನಂಗಾ ನಾಲ್ಕನೆಯ ಕಲೆಯಿನನುಲೇಪಿಸಿ ೧೬

ಅಕ್ಷತಗುಣಾಕ್ಷತೆಗಳೊಡನೆ ಸಿತ ದಿವ್ಯಕಲ
ಮಾಕ್ಷತಮುಮಂ ಪಂಚವರ್ಣಕಲಿತೋತ್ತಮ ತಿ
ಲಾಕ್ಷತಮುಮಂ ದಲಾಯೈದನೆಯ ಕಲೆಯಿನರ್ಪಿಸಿ ಸುಶಬ್ದಾದಿಯಾಗಿ
ಲಕ್ಷಿಪ ಕುಸುಮದೊಡನೆ ಕುಸುಮವಿಸರಂಗಳಂ
ತ್ರ್ಯಕ್ಷಂಗೆ ಷಷ್ಠೋರುಕಲೆಯಿಂದಲಂಕರಿಸಿ
ಸುಕ್ಷೇಮದಿಂ ನೋಡಿ ನೋಡಿ ತಣಿಯದ ತವಕದಿಂದೋವಿಯೋವಿ ಮತ್ತೆ ೧೭

ಕರಣಗುಣಗಣಮನಾ ಮೂಲಾಗ್ನಿಯಿಂ ದಹಿಸಿ
ದುರುಧೂಪದೊಡನೆ ಪಟುತರಧೂಪಧೂಪಮಂ
ಪರಮಸಪ್ತಮಕಲೆಯಿನಿತ್ತು ನಿರ್ಮಲಚಿತ್ಪ್ರಕಾಶಪ್ರದೀಪದೊಡನೆ
ಸ್ಫುರಿಪದೀಪಮನಾರತಿಗಳನಷ್ಟಮಕಲೆಯ
ನೊರೆವುತರ್ಪಿಸಿ ಸುಖಾಸುಖಮನಳಿದಾತ್ಮನಂ
ಬುರುತರ ಸದುಪಹಾರದೊಡನೆ ಸದ್ರಸಮಿಳಿತಮಾಗೆಸೆವ ನೈವೇದ್ಯಮಂ ೧೮

ನೇಹದಿಂ ತನ್ನವಮಕಲೆಯಿನರ್ಪಿಸಿ ವಲಂ
ಸ್ವಾಹಾಂತ ಪಂಚಾರ್ಣದಿಂದೆ ಪಾನೀಯಮಂ
ಮೋಹಾರಿಗಿತ್ತಾಚಮನಮನೇೞ್ಸೂೞ್ ಅಮಲ ಶಂಭುಗೆ ಹೃದಯಮಂತ್ರದಿಂ
ವ್ಯಾಹಾರಿಸುತ್ತಿತ್ತು ಮುಖವಾಸಮಂ ಪುನ
ಸ್ಸ್ವಾಹಾಂತ ಸತ್ಪ್ರಣವದಿಂದಿತ್ತು ತದ್ಗುಣ
ವ್ಯೂಹಾಖ್ಯತಾಂಬೂಲದೊಡನೆ ತಂಬುಲಮಂ ನವಾಗ್ರದ್ವಿಕಲೆಯಿನಿತ್ತು ೧೯

ಮಣಿದು ನೀರಾಜನಮನವರಂತ್ಯದಾದ್ವಿಕಲೆ
ಯಣುವಿಂ ಬೆಳಗಿ ಲಸದ್ಘೃಣಿಯುತಾಖಿಲ ದಿವ್ಯ
ಮಣಿಖಚಿತ ಹೇಮಭೂಷಣವನಾ ಸುಮನುವಿನ ಮೂಱನೆಯ ಕಲೆಯಿಂನಿತ್ತು
ಭಣಿತಿಯಿಂ ಛತ್ರಚಾಮರ ತಾಲವೃಂತದ
ರ್ಪಣ ಗೀತವಾದ್ಯ ನೃತ್ಯ ಮುಖೋಪಚಾರಮಂ
ಪ್ರಣವಪಂಚಾರ್ಣದಿಂ ಸ್ವಾಹಾಂತಮಾದುಚ್ಚರಣಮೆಸಗುತಾರಾಧಿಸಿ ೨೦

ಭವ ಸುಶರ್ವೇಶಾನ ಪಶುಪತಿಯೆನಿಪ್ಪಿವ
ಕ್ಕೆ ವಿಶಿಷ್ಟ ರುದ್ರೋಗ್ರ ಭೀಮಮಹದೆಂಬಿವ
ಕ್ಕೆ ವಲಂ ಚತುರ್ಥಿಯನಿರಿಸಿ ದೇವ ಓಂ ನಮೋಯೆಂದೆಂದು ಬೇರೆ ಬೇರೆ
ತವೆ ಕೂಡಿದೀಯಷ್ಟಮನುವಿಂ ಮದನತಿಮಿರ
ರವಿಗಹಿಂಸಾದ್ಯಷ್ಟಪುಷ್ಪದೊಡನಷ್ಟಪು
ಷ್ಪವನಿತ್ತು ಮೇಣಾ ತ್ರಿಯಂಬಕಮನುವಿನಿಂದೆ ಮಂತ್ರಪುಷ್ಪವನರ್ಪಿಸಿ ೨೧

ಚಿನ್ನಿಧಿಗಖಿಲನಮಸ್ಕಾರಾಧಿಪತಿಗೆ ಸಂ
ಪನ್ನ ಶತರುದ್ರೀಯ ಮಧ್ಯಗತವಿದ್ಯೆಯಿಂ
ದಂ ನಲಿವುತೈದುಸೂೞ್ ಪ್ರಾಣಾರ್ಪಣಾಂತರನಮಸ್ಕಾರದೊಡನೆ ಕೂಡಿ
ಚೆನ್ನಿಂ ನಮಃಸ್ಕರಿಸಿ ಶಾಂತಿ ಪುಷ್ಪಾಂಜಲಿಯು
ತ್ತೋನ್ನತಸುಪುಷ್ಪಾಂಜಲಿಯನೊಲ್ದು ಮೂಱುಸೂೞ್
ಸನ್ನುತೋಂಕಾರತ್ರಯವನುಚ್ಚರಿಸುತಾಚರಿಸಿ ಪರಮ ಭಕ್ತಿಯಿಂದೆ ೨೨

ಅನುನಯದೆ ನೋಟದೊಡನಾ ನೋಟವಮರ್ದು ಸೊಗ
ಸೆನಿಸಿ ಬೆಂಬತ್ತಿಯತ್ತಿತ್ತಲೇನಾನುಮೊಂ
ದಿನಿಸುಂ ಚಲನಮಿಲ್ಲದಕ್ಷಿಗಳ್ ಸಿಲ್ಕೆ ಶಿವಮಂತ್ರೋಚ್ಚರಣದ ಮಿಡುಕಿಂ
ಮಿನುಪ ಕೆಂಬಲ್ವೆಳಗು ಪಸರಿಸಿ ವದನಮೆಸೆಯೆ
ಮನದ ಮಧ್ಯದೊಳಾ ಶಿವಧ್ಯಾನವೊಪ್ಪೆ ಮೇ
ಣ್ಣನಘನೀ ಚತುರಂಗದಿಂ ತ್ರಿವಾರಂ ನಯನದಿಂ ಪ್ರದಕ್ಷಿಣಮನೆಸಗಿ ೨೩

ವಿಧ್ಯುಕ್ತಮಾಗಿ ರಚಿಸಿರ್ದ ಜಪಮಾಲೆಯಂ
ಮಧ್ಯಮಾನಾಮಿಕಾಂಗುಷ್ಠದಿಂ ಗ್ರಹಿಸಿಯಾ
ರಾಧ್ಯತಿಲಕಂ ತ್ರಿವಾರಂ ಪ್ರಾಣಮಂ ಸಮಾಯಾಮಿಸಿ ಮನಃಪವನರಂ
ಸಾಧ್ಯತೆಯಿನೊಡಗೂಡಿ ತನ್ಮನಸ್ಸರಸಿರುಹ
ಮಧ್ಯದೊಳಗಖಿಲತೇಜೋಬೀಜಮಾದ ಸ
ನ್ಮೇಧ್ಯಚಿನ್ಮಯ ಶಿಖಾಕೃತಿಯನಱಿ ಜಾನಿಸುತುಭಯರವೀಂದುಗಳ ನಡುವೆ ೨೪

ಲಲಿತಸ್ವತನುಚಿಂತನಂಗೆಯ್ದಮೃತಮಯೋ
ಜ್ವಲನಾಗಿ ಶಕ್ತ್ಯುದಯಮಱಿದು ತಚ್ಛಕ್ತಿಯೊಳ್
ನಿಲಿಸಿ ಮನುವಂ ಸಗರ್ಭಂಗೆಯ್ದು ಮೇಣ್ ನಿಜಶ್ವಾಸಾವಸಾನಂಬರಂ
ಸಲೆ ತಾರಮಂ ಪೂರಕದಿನಮರ್ದು ತನ್ನ ಶ
ಕ್ತ್ಯಲಘುತೆಯಿನಾಚರಿಸಿ ಕುಂಭಕಮನಾ ದ್ವಯಂ
ಫಲಿಸೆ ರೇಚಕದಿನಾ ಮನುವನೆಸಗುತೆ ವಾಚ್ಯವಾಚಕಾಂತರಮನಱಿದು ೨೫

ಕ್ರಮದಿಂದೆ ವರ್ಣದಿಂ ವರ್ಣಮಂ ಪದದಿಂ ಪ
ದಮನಮರಿಸುತ್ತೆ ಶಬ್ದಾರ್ಥಮಂ ಚಿಂತಿಸು
ತ್ತಮಲಿನ ಗಮಾಗಮದ್ವಯಯೋಗದಿಂ ಮೂಲಮಂತ್ರಮಂ ಸ್ಮರಿಸುತೊಲವಿಂ
ಅಮಮ ಜವಮಾಗದೆ ವಿಲಂಬಿತಂಬುಗದೆ ವಿ
ಭ್ರಮಬುದ್ಧಿ ಪೊರ್ದದೊಂದೊಂದು ಮಣಿಗೊಮ್ಮೊಮ್ಮೆ
ಸ್ಮುಮನು ಪೂರಿಸೆ ಜಪವನರ್ಪಿಸಿಯಘೋರಾದ್ಯಣುತ್ರಯದೆ ನುತಿಸಿ ಮತ್ತಂ ೨೬

ಶ್ರೀರಮಾಕರನಾಕಕೋಟ್ಯಾತ್ಯಣತಾಯಮಾ
ಹ್ವಾರುದ್ರಚುಕ್ರಾಧಾಮೇತಿ ಋಕ್ಪ್ರಣುತಾಯ
ಗೌರೀಶ್ವರಾಯಾಗ್ನಿಮೀಳೇ ಪುರೋಹಿತಮಿತಿ ಸ್ತುತಾಯ ಮಹಾತ್ಮನೆ
ಚಾರು ಶಿವ ಏಕಃಪುನರ್ಧ್ಯೇಯ ಇತ್ಯಥ
ರ್ವಾರಾವ ವೇದಿತಾಯ ಬ್ರಹ್ಮಣೇನಮ ಇ
ತೀರಿತಾಯ ನಮಶ್ಶಿವಾಯೇತಿ ಯಜುಷಾಪ್ರಣಮಿತಾಯ ತಸ್ಮೈನಮೋ ೨೭

ಎಂದಿಂತು ಪಶುಪತಿಗೆ ಗದ್ಗದಾಲಾಪದೊಡ
ನೊಂದಿದುತ್ತಮ ಘನಸ್ತುತಿಯನರ್ಪಿಸಿ ನಿಜಾ
ನಂದಾಶ್ರು ಕಣ್ಗಳೊಳ್ ದಳದಳನೆ ಸುರಿಯೆ ನುಣ್ಗೊರಳ ಸೆರೆ ಬಿಗಿಯೆ ಪುಳಕಂ
ಪಂದಣಿಸಿ ತನುವಿನೊಳ್ ಗುಡಿಗಟ್ಟೆ ಬೆಮರ್ವನಿಗ
ಳಿಂದಂಗಯಷ್ಟಿ ತೊಪ್ಪನೆ ತೋಯೆ ನವಕಂಪ
ನಂದೋಱಲಿಂತುಟು ಶಿವಾವೇಶದಿಂ ಸಾತ್ವಿಕಂ ಪೊಣ್ಮೆ ಪೂಜಿಸುತ್ತೆ ೨೮

ಅಪರಾಧಯೆನುತುಂ ಸಹಸ್ರಾಣಿಯೆನುತೆ ಬಳಿ
ಕುಪಮೆಯಿಂದಂ ಕ್ರಿಯಂತೇಹರ್ನಿಶಮೆನುತ್ತೆ
ಸುಪರಿದಶಿದೆ ಮಯಾಯೆನುತೆ ದಾಸೋಹಮಿತಿ ಮಾಮೆನುತ್ತೆ ಮತ್ವಾಯೆನುತ್ತೆ
ಕೃಪಣೋಕ್ತಿಯಿಂ ಕ್ಷಮುಸ್ವಯೆನುತ್ತೆ ಕೂಡೆ ನಿ
ಷ್ಕಪಟದಿಂ ಭಕ್ತವತ್ಸಲಯೆನುತ್ತೀತೆಱದೆ
ಜಪಿಸುತೆ ಜಗದ್ಗುರು ಜನಾರ್ದನನುತಂಗೆ ವಿಜ್ಞಾಪನಂಗೆಯ್ದು ನಲವಿಂ ೨೯

ಪದಮುಲಾನುಪಮ ನಿಜಲಿಂಗದಂಗದ ಚೆಲ್ವ
ನೊದವಿದ ಮಹಾನಂದದಿಂ ನೋಡಿ ನೋಡಿ ತಣಿ
ಯದ ತವಕದಿಂ ಕಣ್ಗಳುಮರ್ದಪ್ಪುತಱಿಮುಚ್ಚುತೊಡನೆ ಮೂರ್ಛೆಸುತಳ್ಕುತೆ
ಪದುಳಿಸುತ್ತೆಚ್ಚರುತ್ತಾಳುತೇಳುತೆ ನಿಮಿರು
ತಿದಿರ್ಗೊಳುತೆ ಗಂಟಿಕ್ಕುತಡಱುತ್ತೆ ಚುಂಬಿಸು
ತ್ತದಿರುತ್ತೆ ಪೊಂಗುತ್ತೆ ಪೊಣ್ಮುತ್ತೆ ಪೊಳೆಯುತೆಮೆಯಿಡದೀ ತೆಱದೊಳೀಕ್ಷಿಸಿ ೩೦

---

೧ ಕೃ (ಅ) ೨ ಥ (ಬ)

ಲಲ್ಲಿಗೆಯ್ಯುತ್ತೆ ದೈನ್ಯಂದೋಱಿ ಕರೆಯುತ್ತೆ
ಚಲ್ಲವಾಡುತ್ತೆ ಚದುರೊದವೆ ಬಣ್ಣಿಸುತೆ ಕುಳಿ
ರ್ಗಲ್ಲ ಪುತ್ಥಳಿಯಂತೆ ಕರಗುತಲರ್ಕಕ್ಕಿವಱಿಯಂತೆ ಜಿನುಗುತೆ ಜೋಲುತೆ
ಕೆಲ್ಲೆನೋಟದೊಳೀಕ್ಷಿಸುತೆ ನೇಹಮುರ್ವಿ ಮೊಗ
ದಲ್ಲಿ ಮೊಗವಿಟ್ಟು ಮುಂಡಾಡಿ ಮುದ್ದಿಸುತೆ ಪರ
ಮೋಲ್ಲಾಸದಿಂಗಡಲೊಳರಸಂಚೆಯಂತಿರಾಂದೋಲಕೇಲಿಯನೆಸಗುತೆ ೩೧

ಬಾಂದೊಱಿದಲೆಯನ ಮೊಗಕೊಂದರಲ್ ಮಱಿಯಾಗೆ
ಕಂದಿ ಕುಂದುತ್ತೆ ಕೂಡೆಚ್ಚತ್ತುರ್ ನಸುನಗುತೆ
ಹೆಂದದಾನಂದದಿಂದೆನ್ನಯ್ಯಯೆನ್ನ ಮುದ್ದಂ ಸಲಿಸಿ ಪೊರೆವ ತಂದೆ
ಸೌಂದರ್ಯನಿಧಿಯೆಯೆಂದಂಕಿಸುತ್ತೊಡನೊಡನೆ
ಚಂದದಿಂ ತೊದಲಿಸುತನಾಥನಂ ನಿನ್ನಣುಗ
ಗಂದನಂ ಕೈಬಿಡದಿರಯ್ಯೋ ಕೃಪಾದುಗ್ಧಸಿಂಧುವೇಯೆಂದೊರಲುತೆ ೩೨

ಇಂತು ಗುರುವರನಮಲಶಿವನನರ್ಚಿಸುತುಮಿರೆ
ಎಂತವನ ಭಕ್ತಿಗೊಲ್ದಾ ಲಿಂಗಗರ್ಭದೊಳ
ನಂತಕೋಟ್ಯರ್ಕತೇಜೋರಾಶಿಯಂ ಪಳಿದು ನಳನಳಿಪ ಧವಳಾಂಗದಿಂ
ಎಂತೆಂಬೆನತುಳಮೋಹನಮೊಲ್ಪು ಮುದ್ದುಮೊಗ
ವಂ ತಾಳ್ದವೊಲ್ ಮೆಱೆವ ಮೊಗವೈದಱಿಂ ದಿವ್ಯ
ಕಾಂತಿಸಂತತಿ ಕರಂ ಕಣ್ಬೆತ್ತ ಮಾಳ್ಕೆಯಿಂ ಥಳಥಳಿಪ ಕಣ್ಮಿಱಿರಿಂ ೩೩

ಪೊಳೆವ ಲಾವಣ್ಯಕಲ್ಪೋರ್ವೀರುಹದ ಶಾಖೆ
ಗಳವೊಲೊಪ್ಪುವ ಪತ್ತು ನಳಿತೋಳ್ಗಳಿಂ ಸದು
ಜ್ವಳಮಹಾಶೃಂಗಾರರಸತರಂಗಿಣಿಯೊಳೊಗೆದರುಣಾಂಬುಜಗಳಂತೆ
ತೊಳಗುವ ಪದಾಬ್ಜದ್ವಯಂಗಳಿಂ ಸಿರಿಮುಡಿಯೊ
ಳಳವಟ್ಟ ಪೆಱೆ ಬಾಂದೊಱೆಗಳ ಚೆಲ್ವಿಂ ಕಿವಿಗ
ಳೊಳಗಮರ್ದ ಕೆಂಬರಲ ತಲೆಯ ಪಾವುಗಳ ಪಾಡಿಂ ಕೊರಲ ಪಸಿಯ ಬಿಸದಿಂ ೩೪

ಪೆಣ್ಣನಾಲಿಂಗಿಸಿದ ವಾಮಾಂಗದಿಂ ಪುಲಿಯ
ಬಣ್ಣದೊವಲುಟ್ಟು ರಂಜಿಪ ಕಟೀಭಾಗದಿಂ
ತಿಣ್ಣವಾದಾನೆಸಮ್ಮದಹೊದಕೆಯಿಂ ಸದಾನಾಭಯಾದಿಗಳ ಪಡಪಿಂ
ಕಣ್ಣ ಮಿನುಗಿಂ ತೊಳಗುವುಂಗುಟದ ಗಾಡಿಯಿಂ
ಬಣ್ಣಿಸಲ್ ಬಾರದೀ ಪರಿಯ ರೂಪಿಂದೆ ಬಿಡು
ಗಣ್ಣರೆಱೆಯಂ ವಿಶ್ವನಾಥಂ ಪ್ರಸನ್ನನಾದಂ ಭಕ್ತರುಘೆಯುಘೆಯೆನೆ ೩೫

ಶಿವಶಿವಾ ಪೊಗಳ್ವೆನೆಂತೋ ದೇಶಿಕೋತ್ತಮನ
ನವಭಕ್ತಿರತಿಯದೊಂದು ವಿಲಾಸಮುಂ ರಂಜಿ
ಸುವ ಹರ್ಷವೇ ಪುರುಷನಾದುದೊ ಬಹುವಿಧಸ್ತುತಿಯೆ ಬಾಯ್ದೆಱೆಯಾದುದೋ
ಅವಿಚಲನದನುವೆ ಮನವಾದುದೋ ಘನಕಾತ
ರವೆ ಕರಂ ಕಣ್ಗಳಾದುವೊ ಸಾತ್ವಿಕವೆ ದೀಪಿ
ಸುವ ತೊಡಿಗೆಯಾದುದೋಯೆನೆ ಪರವಶೀಭೂತನಾಗಿಯೊಡನೊಡನೆಱಗುತೇ ೩೬

ಪೊಂಗುತುಂ ಪೊರೆಯೇಱುತುಂ ಕರಗುತುಂ ಕೊರಗು
ತುಂ ಗಾಡಿಯಿಂದುರ್ಬುತುಂ ಕೊರ್ಬುತುಂ ಪರ್ಬು
ತುಂ ಗಮಕವಮರೆ ಕುಕಿಲಿರಿವುತುಂ ಕೂಗುತುಂ ತೂಗುತುಂ
ಸಿಂಗರದಿನುಲಿವುತುಂ ಕೆಲೆಯುತುಂ ಮಲೆಯುತುಂ [ತೊನೆದಾಡುತುಂ
ಮಂಗಲಾಕಾರನಂ ಮಿಗೆ ನೋಡಿ ನೋಡಿ ಪೆಱ
ಸಿಂಗದಾನಂದದಿಂ ಬೆಚ್ಚಂತಿರೊಚ್ಚತಂ ಬಾಗಿ ನಲಿನಲಿದಾಡುತೇ ೩೭

ಪ್ರತಿಯಿಲ್ಲದುಜ್ವಲ ನಿರಾವರಣವಸ್ತುವಿದೆ
ಯತಿಗಳಾನಂದಪ್ರಕರದಾದಿಮೂಲವಿದೆ
ಮತಿಗಗೋಚರವಾದಖಂಡಪರಿಪೂರ್ಣಾದ್ವಿತೀಯ ಚಿನ್ಮಯನಿಜವಿದೇ
ಶ್ರುತಿತತಿಯ ನುತಿಗೆ ಸಿಲ್ಕದ ಮಹಾಬ್ರಹ್ಮವಿದೆ
ನತ ಹೃತ್ಕಮಲವಿಸ್ಫುರಿತಪರಂಜ್ಯೋತಿಯಿದೆ
ಶತದಳಾಂಬಕಮುಖಾಮರಕುಲಸ್ವಾಮಿಯಿದೆಯೆನುತಡಿಯ ಮೇಲೆ ಬೀಳ್ವ ೩೮

---

೧ ೫೦ (ಬ)

ಎನ್ನ ಭವತಿಮಿರಭಾನುವೆ ಕಾಮಧೇನುವೇ
ಎನ್ನನಾಳ್ಗೊಂಡ ಗುರುವೇ ಶರಣಸುರತರುವೆ
ಎನ್ನ ಕಾರುಣ್ಯರಸವರ್ಷವೇ ದಿವ್ಯಪರುಷವೆಯೆನ್ನನಿಧಿಯೆ ಸುಧೆಯೇ
ಎನ್ನ ಚಿತ್ತಿನ ತಿರುಳೆಯೆನ್ನ ಪುಣ್ಯದ ಪುರುಳೆ
ಎನ್ನ ಮುಕ್ತಿಯ ನಿಲವೆಯೆನ್ನ ಭಕ್ತಿಯ ಬಲವೆ
ಎನ್ನ ನನ್ನಿಯೆಯೆನ್ನಚೆನ್ನಿಗನೆಯೆನ್ನ ಗತಿಯೇ ಮತಿಯೆ ಧೃತಿಯೆ ಪತಿಯೇ ೩೯

ಘನರಸಶಯನತನಯಮದಮಥನಧವಳ ಘನ
ಘನವರದ ಶತದಳನಯನ ನಯನ ಪದಕಮಳ
ವನದಗಮನಧವ ಶತದಳ ಪರತಪನದಹನನಯನ ಪರತರ ಗದಹರ
ಸನಕನತಸಮದಶಮನ ಶಮನ ಶಮನ ಭವಶ
ಮನ ಭಯಶಮನ ಗರಳಧರಗರಳಧರಪರಗ
ಮನ ತನಯ ಶಶಧರ ಧರಧರವರ ಭವನಕನದನಘ ಭವಹರಪರಮವ ೪೦

ಗಣವರನೆ ಭಕ್ತವತ್ಸಲನೆ ದಾನಿಗಳ ತಲೆ
ವಣಿಯೆ ಶಿವದೋ ಶಿವದೊ ರಕ್ಷಿಸೆಂದಿಂತು ಮಣಿ
ಮಣಿದು ಕೀರ್ತಿಸುವ ಗುಣಮಣಿಯ ಭಾವಕೆ ಮೆಚ್ಚಿ ಗುರುರೂಪ ವಿಶ್ವನಾಥಂ
ಫಣಿಕಂಕಣಾಲಂಕೃತೋರುಕರಮಂ ನೀಡಿ
ಪಣಿವಿಡಿದು ನೆಗಪಿ ಗಾಢಾಲಿಂಗನಂಗೆಯ್ದು
ತಣಿದೆನೆಲೆ ಮಗನೆ ನಿನ್ನೇಕನಿಷ್ಠೆಗೆ ಬೇಡುಬೇಡಭೀಷ್ಟವನೆಂದೆನೆ ೪೧

ನೀಱಿರರಸಾ ನಿಧಿಯಿರಲ್ ತಿರಿದುತಿರಿದು ಬಾ
ಯಾಱಿ ಬರ್ದುಕುವರೆ ನೀನಿಂತೆನ್ನೊಳಿಡಿದಡಸಿ
ತೋಱುತಿರಲುಳಿದ ಭೋಗಾಕಾಂಕ್ಷೆಯೇ ಕೇಳ್ವುದೆನ್ನ ಬಿನ್ನಪವನೊಂದಂ
ಬೇಱೊಂದನೊಲ್ಲೆನಾಂ ಲಿಂಗನೈಜೈಕ್ಯರನೆ
ತೋಱಿಸಾ ಶಿವನೆ ನಿಮ್ಮಯ ಧರ್ಮವಾನವರ್ಗೆ
ಮಾಱುವೋದಪೆನೆನುತ್ತೀ ತೆಱದೊಳೈದು ಗೀತದೊಳೀಶನಂ ಕೇಳಿಸೆ ೪೨

ಪನ್ನಗಾಭರಣನಾತನ ಭಕ್ತಿಯೋಗಮಂ
ತಾಂ ನೋಡಿ ತಲೆದೂಗಿ ಮುಂಡಾಡಿಯೆನ್ನಣ್ಣ
ಎನ್ನ ತೆತ್ತಿಗಯೆನ್ನ ಭದ್ರಗಜವೇ ನಿನಗೆ ಕೆಲವು ಪಗಲವನಿಯಲ್ಲಿ
ಮನ್ನಿಮಿತ್ತಂ ಪ್ರವರ್ತನಮುಂಟದಾಗಿ ನಿ
ನ್ನುನ್ನತ ಚರಾರ್ಚನಕೆ ಕೇಳಿಂದುಮೊದಲಾಗಿ
ಪನ್ನೆರಡು ಪೊಂಗಳಂ ಪ್ರತಿದಿನಂ ತಪ್ಪದೀ ತೀರ್ಥಪಾತ್ರದೊಳಿರಿಸುವೆಂ ೪೩

ಶರಣ ನೀನಂತದಂ ಕೈಕೊಳ್ಳುದೆಂದೊರೆದು
ನಿರುಪಮಸ್ನೇಹಮಂ ಬೀಱಿ ಮನ್ನಿಸಿ ಶಿವಂ
ಕರದ ಲಿಂಗದೊಳಗಡಂಗಲ್ಕಭವಕೃಪೆಗೆ ಚೋದ್ಯಂಬಡುತೆ ತಲ್ಲಿಂಗಮಂ
ಅರರೆ ಕಣ್ಗೊತ್ತಿಯುರಕೊತ್ತಿ ವಂದಿಸಿ ಸೆಜ್ಜೆ
ಯರಮನೆಗೆ ಬಿಜಯಂಗೆಯಿಸಿ ಬಳಿಕವಾ ಮಹೇ
ಶ್ವರ ಪದಾಂಬುವನಮಲ ಶಂಕದೊಳ್ ತೀವಿ ಶಂಭುಧ್ಯಾನಯುಕ್ತನಾಗಿ ೪೪

ವರ ಗಂಧಪುಷ್ಪಾಕ್ಷತಾದಿಗಳನರ್ಪಿಸಿ ಸು
ಚರುವಂ ನಿವೇದಿಸಿ ಇಮಂ ಮೇ ಯೆನಿಪ ಮನುವ
ನೊರೆವುತಭಿಮುಂತ್ರಿಸಿ ಬಳಿಕ್ಕೆ ಮೂತ್ವಾರುದ್ರಯೆಂಬ ಕದ್ರುದ್ರಯೆಂಬಾ
ಪರಮ ಮಂತ್ರಂಗಳಿಂ ಸಮ್ಮಾರ್ಜನಂಗೆಯ್ದು
ಕರಮೆ ಸರ್ವೋವೈಯೆನಿಪರುತಂ ಸತ್ಯಮೆನಿ
ಪೆರಡಱಿಂ ಪ್ರಾಶಿಸಿ ಶಿವೋಚ್ಛಿಷ್ಟಮಂ ಶಿವಾಣುಸ್ಮರಣದಿಂ ಸೇವಿಸಿ ೪೫

ಭಯಭಕ್ತಿಪೂರ್ವಕಂ ಶರಣಸಭೆಗೆಱಗೆ ಸತ್
ಪ್ರಿಯದಿನವರೀಕ್ಷಿಸುತ್ತಿಲೆ ಮಹಾಪುರುಷ ನಿ
ನ್ನಯ ದರ್ಶನಪ್ರಭಾವದಿನಪ್ರಮೇಯನಂ ಚಿತ್‌ಪ್ರಭಾಮಯಕಾಯನಂ
ನಿಯತಮೆಲ್ಲರ್ ಕಂಡೆವೀಕ್ಷಿಪೊಡೆ ನೀನೆರಡ
ನೆಯ ವಿಶ್ವಪತಿಯಲ್ಲದೇಂ ಜಾವಳನೆ ಜಯತು
ಜಯತೆಂದು ಪರಸೆ ನಿಜ ನುತಿಗಳ್ಗಿ ತದ್ಭಕ್ತತತಿಯ ಕರುಣಂಬಡೆವುತೇ ೪೬

ಬಳಿಕಭವಪಾದಾಂಬುಪಾತ್ರದೊಳ್ ಗುರುವರಂ
ತಳಿರ್ಗಯ್ಯನಿಟ್ಟು ಶಿವನಿತ್ತ ಪನ್ನೆರಡು ಪೊಂ
ಗಳ ಪೊಟ್ಟಳಂದೆಗೆದದಱ ವಿತ್ತದಿಂ ಸಕಲ ವಸ್ತುವಂ ತರಿಸಿ ಮುದದಿಂ
ವಿಳಸಿತೋಜ್ವಳಬಹುವಿಧಾನ್ನಮಂ ಸಮೆಯಿಸಿ ವಿ
ಮಳಗಣಾವಳಿಗೂಡಿ ಲಿಂಗಾರ್ಪಿತಂಗೆಯ್ದು
ಚಳನಿಷ್ಠೆಯೆಂತೊ ತದ್ರವ್ಯದೊಳೆ ಭಕ್ತರೆಱೆದನಿತನೀವುತಿರೆ ನೋಡಿ ೪೭

ಸೌಂದರಗಣಾಧೀಶ್ವರಂ ಪಾಡಿ ಪಡಿವೊಂಗ
ಳಂ ದಾಸಿಮಯ್ಯನಂಬರವಿತ್ತು ಬೇಡಿ ಭರ
ದಿಂದೆ ತವನಿಧಿಯನಾ ಚೋಳಂ ಬಹು ಪ್ರಕಾರದೆ ಭಜಿಸಿ ಪೊನ್ನಮಳೆಯಂ
ಪಿಂತೆ ಶಿವನಿಂ ಪಡೆದುದಂ ಕೇಳ್ದೆವೀ ಮಹಿಮ
ನಿಂದು ಧನಮಂ ವಿರತಿಯಂ ಪಡೆದು ಚರಸೇವೆ
ಗೊಂದಿಸಿದುದಂ ಕಂಡೆವೆಂದು ಗಣತತಿ ಪೊಗಳುತಿರೆ ಪದ್ಮಣಾರ್ಯನೆಸೆದಂ ೪೮

ಮದ ಕುಧರ ವಿದಳನಭಿದುರ ಪರಮ ಶಿವಭಕ್ತ
ಪದಶತದಳಾದಭ್ರಮುಕರಂದಲೀಲಾ ಪ್ರ
ಮದ ಪರವಶೀಭೂತ ಮಧುಕರೋಪಮ ಪದ್ಮಣಾಂಕಪ್ರಣೀತವಾಗಿ
ಸದಮಳಾಖಿಲಶಾಸ್ತ್ರಸಾರಮೆಂದೆನಿಸುವ
ಭ್ಯುದಯಕರ ಪದ್ಮರಾಜಪುರಾಣಕಥೆಯೊಳಿಂ
ತಿದು ಗುರು ಶಿವಾರ್ಚನಂಗೆಯ್ದು ಪಡಿವೊಂಗಳಂ ಪಡೆದೇಳನೆಯ ಸಂಧಿ ೪೯

ಈಶಾಪರಾವತಾರನ ವಿಬುಧನುತನ ಭ
ವಾಶನಾಶನ ಕೆಱೆಯ ಪದ್ಮಣಾರ್ಯನ ಲಸತ್
ಶ್ರೀ ಶಿವಾದ್ವೈತಸಾಕಾರಸಿದ್ಧಾಂತಪ್ರತಿಷ್ಠಾಪನಾಚಾರ್ಯನ
ಈ ಶುದ್ಧಚರಿತಮಂ ತಿಳಿಪಿದರ್ಗೋದಿದ
ರ್ಗಾಶೆಯಿಂ ಕೇಳ್ದರ್ಗೆ ಭುಕ್ತಿಮುಕ್ತಿಗಳಂ ಮ
ಹಾ ಶುಭಂಗಳನಾಯುವಂ ಕೊಟ್ಟು ಗುರುರೂಪ ವಿಶ್ವನಾಥಂ ರಕ್ಷಿಪಂ ೫೦

ಅಂತು ಸಂಧಿ ೭ ಕ್ಕಂ ಪದಂಗಳು ೫೦೯ ಕ್ಕಂ

ಮಂಗಳಮಹಾ ಶ್ರೀ

ಮಂಗಳಮಗಮತ್

ಶ್ರೀ

ಎಂಟನೆಯ ಸಂಧಿ

ಸೂಚನೆ : ಶಿವಭಕ್ತರೊಡಗೂಡಿ ಗುರುಕುಲಲಲಾಮನುಚಿ
ತವಿನೋದದಿಂ ಮಧುಸಮಯದಲ್ಲಿ ವನವಿಹಾ
ರವನಾಚರಿಸಿ ತಿರಿಗಿ ಪುರಶೋಭೆಯಂ ನೋಡುತೆಯ್ತಂದು ಸುಖದೊಳೆಸೆದಂ

ಆಗ್ರಹಪ್ರಗ್ರಹೋರುಗ್ರಂಥಿದಗ್ರಹ ಗ
ದಾಗ್ರಜಾದ್ಯಗ್ರೇಸರಾಗ್ರಾಮ್ಯವಾಗ್ರಮಾ
ವಿಗ್ರತ್ವದೋಗ್ರ ಮಾಯಾಗ್ರಹಾವಗ್ರಹವ್ಯಗ್ರತಾ ನಿಗ್ರಹಕರ
ನಿಗ್ರಾಹ್ಯ ನಿಗ್ರಹಾನುಗ್ರಾಹ್ಯವಿಗ್ರಹ್ಯ
ನುಗ್ರಹೋಪದಗ್ರಭಯದಾಗ್ರಿಯ ವಿಷಗ್ರಾಹಿ
ಸುಗ್ರೀವ ವಿಗ್ರಹಾರ್ದ್ರಗ್ರದಿತ ವಿಗ್ರಹೋಮೋಗ್ರ ಜಯ ವಿಶ್ವನಾಥಾ ೧

ಪರಮ ಹರ್ಷದಿನಿಂತು ಗುರುಕುಲಾಗ್ರಣಿಯಿರು
ತ್ತಿರಿ ಮೆಲ್ಲಮೆಲ್ಲನೆ ಹಿಮಂ ಸರಿಯೆ ಪೊಸವಿಸಿಲ್
ಪೊರೆಯೇಱೆ ಮೆಯ್ಯ ಬಿಱುಬುಗಳಡಂಗಿ ಲಸತ್ಪ್ರಸನ್ನತೆಯನಪ್ಪುಗೆಯ್ಯೆ
ಕೊರಗಿದಂಬುಜವನಂ ಸೊಂಪೇಱೆ ಬಲ್ಗಾಳಿ
ಸರಿದು ತಂಬೆಲರ ಕಾಲಾಟವಗ್ಗಳಿಸೆ ನಸು
ಮೊರೆಯುತುಂ ತುಂಬಿ ಸುಳಿದಾಡೆ ಮೆಱೆದುದು ಮಾಗಿಯಪಜಯಂ
ಮಧುವಿನ ಜಯಂ ೨

ಪಱಿಯೆ ಮದಮಂ ಮಾಗಿ ಕಱಿಯೆ ಸೊಗಸಂ ಮಾವು
ನೆಱಿಯೆ ಕಳೆ ಪೆರ್ಚೆ ಸಸಿ ಮೆಱಿಯೆ ಮಾಧವಿ ಪೂತು
ತೊಱಿಯೆ ಲಜ್ಜೆಯನವನಿ ಜಱಿಯೆ ತಪಮಂ ಯಮಿಗಳಿಱಿಯೆ ನನೆಗಣೆಯೋಪರಂ
ಮುಱಿಯೆ ವಿರಹಿಯ ಗುಟ್ಟು ಬೆಱಿಯೆ ಕುಸುಮೇಷು ಕುಕಿ
ಲಿಱಿಯೆ ಕೋಗಿಲೆ ದುಃಖವಱಿಯೆ ಸುಖಿಜನಕೆ ಕ
ಣ್ದೆಱಿದುದು ವಸಂತಮಾಸಂ ಭೋಗಿತತಿಮುಖವಿಕಾಸಂ ಸುಖೈಕವಾಸಂ ೩

ಅಸುಗೆ ನೇಱಿಲ್ ಮಾಮರಂ ಪಲಸು ಮೊದಲಾಗಿ
ಮಿಸುಪ ಮರಗಳ್ ಕನರ್ಗೊನರ್ ಚಿಗುರ್ ಚೆಂದಳಿರ್
ಪೊಸ ನನೆಗಳುಳ್ಳರಲ್ ಕಸುಗಾಯ್ ಕರಂದೋಱಿ ತನಿವಣ್ಗಳಾಂತು ಮೆಱಿಯೆ
ಒಸೆದವಱ ಸವಿಯನುಱಿ ಸವಿದು ಪಡಿಯುಱಿವಕ್ಕಿ
ಎಸೆವರಲ್ವಕ್ಕಿ ಕನ್ನಡವಕ್ಕಿ ಮೆಲ್ಲುಲಿಯ
ನೆಸಗೆ ಝೇಂಕೃತಿಗೆಯ್ಯೆ ಸವಿವಾತನಾಡೆ ಕಣ್ಗೆಸೆದುದು ವಸಂತಸಮಯಂ ೪

ಓಹೋ ಶಿಶಿರದುಪಟಳಂ ಪಿಂಗಿತೆಂದೆನುತೆ
ಮಾಹೇಶ್ವರರ್ ಪರಮ ಹರ್ಷದಿಂ ಘನ ದಿವ್ಯ
ದೇಹಿಯ ಕೆಱಿಯ ಪದ್ಮಣಾರ್ಯನೆಡೆಗೆಯ್ತಂದು ಸೊಗಸಿದೆ ವಸಂತಕಾಲಂ
ಆಹಾ ಇದಱ ಸುಖವನೀಶಾರ್ಪಣಂಗೆಯ್ಯೆ
ಬೇಹುದುಪವನದೊಳೆನೆ ನಸುನಗುತೆ ಸಜ್ಜನ
ಸ್ನೇಹಿಯವರಳ್ತಿಯ ಸಲಿಸಲೇಳ್ದನಂತಲ್ತೆ ಪುರುಷಾರ್ಥ ಪರರ ಚರಿತಂ ೫

ಮನದನ್ನೆಯೆನಿಸುವಂಗನೆ ತನೂಜಂ ವಿಲಾ
ಸಿನಿಯರಾಪ್ತರ್ ಶಿಷ್ಯರಾಶ್ರಿತರ್ ಶಿವಭಕ್ತ
ಜನರಿವರ್ ಮೊದಲಾದವರ್ಬೆರಸು ಘನವಾದ್ಯನಿನದದೊಳ್ ವಿನಯಾರ್ಣವಂ
ಜನಪನೀ ವಾರ್ತೆಗೇಳ್ದಟ್ಟಿದ ಬಲಂಗೂಡಿ
ಯನಿಬರ್ಗುಚಿತ ವಾಹನವನಿತ್ತು ತಾಂ ಕನತ್
ಕನಕದಂಡಣವೇಱಿಯುಭಯ ಚಾಮರ ಸಿತಚ್ಛತ್ರವಮರಲ್ ನಡೆತರೆ ೬

ಹಡಪ ಪೊಂಗಿಂಡಿ ತಣ್ಗರಗ ವೊಗದುಗುಲ ಕೈ
ಪಿಡಿ ಡವಕೆ ಬೀಣೆ ಮೂಡಾಯಿ ಗದ್ದುಗೆಯಲರ
ಪಡಲಿಗೆ ಮಿಸುನಿವಾವುಗೆಸೆವ ಪೊತ್ತಗೆಯಾಲವಟ್ಟ ಪನಿಸೀರ್ಗುಪ್ಪಿಗೆ
ಪುಡಿಗತ್ತುರಿಯ ತಟ್ಟೆ ಸಾದಿನ ಭರಣಿ ರಂಗು
ವಡೆದ ಕುಂಕುಮದ ಪೊಟ್ಟಳ ಜವಾದಿಯ ವಂಕಿ
ಪೊಡರ್ವ ಗಂಧದ ಸಿಪ್ಪು ಕರ್ಪುರದ ನಾಳಿಗಳ ಪಿಡಿದೊಡನೆ ನಡೆದರೊಲ[1]ದು[1] ೭

ಅಲಘುವಿಭವದಿನಿಂತು ತಳರ್ದಾ ಪುರದ ಬಹಿ
ರ್ವಳೆಯಕೆಯ್ತರೆ ಲಾಮಚದ ನೆರಕೆ ಗಱಿವೂವು
ಗಳ ಹೊದಕೆ ಪಚ್ಚೆಗಪ್ಪುರವಾಳೆಗಳ ಕಂಬವಮರ್ದ ಮುಡಿವಾಳಗಟ್ಟು
ಪೊಳೆವ ಕರ್ವಿನ ಜಂತೆ ದವನದೆಡೆವಱಿಯಸು[2]ಗೆ[2]
ದಳಿರ ಪಾಸಿಕೆಯೊಪ್ಪೆ ಪಾನಮುಂ ಪನಿನೀರ
ತಿಳಿನೀರ ತುಂಬಿದಿಂದೂಪಲದ ಭಾಂಡಂಗಳಿಂದಱವಟಿಗೆಗಳೆಸೆಗುಂ ೮

ಅಲ್ಲವಂ ಮೊಸರೋಗರವನಳೆಯನಂಬಲಿಯ
ನಲ್ಲಲ್ಲಿಡಂಬಡೆಯಲಿಟ್ಟು ಸೌಸವದಲರ
ನುಲ್ಲಸಿತ ಚಂದನವನೆಸೆವ ಕಪ್ಪುರವೀಳೆಯವನಿಂಬುಗೆಯ್ದು ತಮ್ಮಾ
ಚಲ್ಲಗಣ್ಗಡೆಯ ಕುಡಿವೆಳಗೆಂಬುರುಳ್ಗಣ್ಣಿ
ಯಲ್ಲಿ ಪಥಿಕಮನೋಮೃಗವನೆಯ್ದೆ ಬೀಱಿ ತಂ
ದಿಲ್ಲಿ ತಡೆವರಿವಳ್ದಿರೇಂ ವ್ಯಾಧವಧುಗಳೋ ಮೇಣ್ ಪ್ರಪಾವಧುಗಳೋಯೆನೆ ೯

ಭೋರನೊರ್ವಂ ಬಿಸಿಲಡಸಿ ಬಂದು ತಾರೆಲೆಲೆ
ನಾರಿ ವಾರಿಯನೆನೆಯುವಳ್ ಬಱಿಯ ಸಸಿಗಲ್ಲ
ತೋರ ಕರಗವನಣಕದಿಂದೆ ತಂದಿತ್ತು ನೋಡುತಿರೆ ತನ್ನ ಮುಖೇಂದುವಾ
ಸಾರಕದು ಕಟ್ಟನೆ ಕರಗೆ ತಜ್ಜಲವನೀಂಟಿ
ಭೂರಿಶ್ರಮವನಲೆದನದನಱಿಯದಿವನಿದೇಂ
ದಾರಿಕಾರನೊ ಮಾಯಕಾರನೋಯೆಂದಗಿವ ಮುಗ್ಧೆ ನಗಿಸಿದಳೆಲ್ಲರಂ ೧೦

---

೧ ಲವಿಂ (ಬ) ೨ ಕೆ (ಬ)

ಉಟ್ಟುಡಿಗೆ ಬಳಸಿದ ನೆರಕೆ ತೊಡೆಯೆ ಕಂಬವಳ
ವಟ್ಟು ಕಟ್ಟು ಸಡಿಲ್ಚಿ ಮೆಱೆವ ಮುಡಿ ಮೇಲ್ವೊದಕೆ
ಬಟ್ಟಮೊಲೆ ಕಲಶಂಗಳಾ ಕಾಂತಿರಸವೆ ತಿಳಿನೀರಾಗಲಲ್ಲಿ ಸುಳಿವಾ
ಬಟ್ಟೆಗರ ಬಗಸೆಗಣ್ಣಿಂ ಕರೆದು ಸವೆದಕ್ಕೆ
ಗಟ್ಟಿನೊಳ್ವಾಸಿಕೆಯೊಳಿಟ್ಟಧರಪಾನಮಂ
ಕೊಟ್ಟುಪಚರಿಪುವತನುವಱವಟ್ಟಿಗೆಯೊಯೆಂಬವೊಲ್ ಪ್ರಪಾಕಾಂತಾಜನಂ ೧೧

ಸಲ್ಲೀಲೆಯಿಂದಾ ಪ್ರಪಾಶ್ರೀಯನೀಕ್ಷಿಸುತೆ
ಮೆಲ್ಲನೆಯ್ತರೆ ಪಸುರಿಡಿದು ಕಣಿಶಮಂ ಕರ್ಚಿ
ಸೊಲ್ಲಲೇಂ ಪಾಲ್ದುಂಬಿ ಕಾಯ್ವಾಲಂಗೂಡಿ ಪೊಂಬೆಳಸಾಗಿ ಪಲವು ಪರಿಯಿಂ
ನೆಲ್ಲ ಗರ್ದೆಗಳೊಪ್ಪಿದುವು ಮುಂದದೆಂತೆನಲ್
ತಲ್ಲಕ್ಷ್ಮಿ ಪದ್ಮಣಾರ್ಯನ ಪದಾಂಬುಜಕೆ ಪರ
ಮೋಲ್ಲಾಸದಿಂ ನಿವಾಳಿಯನಿಟ್ಟ ಬಹುವರ್ಣದಂಬರಂಗಳೊಯೆಂಬಿನಂ ೧೨

ರಸಭರಿತಮಾಗಿ ಸತ್ಕವಿಕಾವ್ಯಬಂಧದಂ
ತೆ ಸಮಸ್ತ ಫಲಪೂರ್ಣಮಾಗಿ ಸುಕೃತಾತ್ಮನಂ
ತೆಸೆವ ಹರಿಸಂಯೋಗಿಯಾಗಿ ಲಕ್ಷ್ಮೀದೇವಿಯಂತೆ ಗೋಪಿಯರೊಳೊಂದಿ
ಬಿಸಜಾಕ್ಷನಂತೆ ತೆಮರಲರ್ಜುನಾಢ್ಯಮಾ
ಗಿ ಸುಭದ್ರೆಯಂತೆ ಸಸಿಯೊಡನೊಂದಿ ರೋಹಿಣಿಯ
ಮಸಕದಂತೆ ಸುವರ್ಣಯುತಮಾಗಿ ಪರದನಂತೊಪ್ಪುಗುಂ ಶಾಲಿಯವನಂ ೧೩

ಫಲಸಂಪದಂ ತಮಗೊದವಿದಲ್ಲಿ ಸಜ್ಜನರ್
ತಲೆವಾಗಿರಲ್ವೇಳ್ಕುಮಿಂತೆಂದು ತೋರ್ಪನುವೊ
ತಲೆವಾಗಿ ನಡೆವವರ್ಗೆ ತಲೆವಾಗುವರ್ ಸರ್ವರೆಂದಭಿನಯಿಸುವ ಬಗೆಯೋ
ಸಲೆ ಪೆತ್ತ ಧರೆಯ ಮೋಹದಿನೆಱಗಿ ನೋಳ್ಪಿರವೊ
ಸುಲಭಗುರುವಂ ಕಂಡು ವಂದಿಪಂದವೊಯೆನಲ್
ಕಳಮಾಳಿಯೆಸೆದುವಲ್ಲಲ್ಲಿ ಚೆಲ್ಲಂಗೆಯ್ವುತುಂ ಕಾಯ್ವ ವಲ್ಲ[೧]ವಿ[೧]ಯರಿಂ ೧೪

---

೧ ರಿ (ಬ)

ರಂಜಿಪಾ ಕ್ಷೇತ್ರದಗ್ರದ ಕಾಲ್ಗಳೊತ್ತಿನೊಳ್
ಮಂಜುಲಚ್ಛಾಯೆಯಿಂದೆಸೆವ ಮಾಮರದೊಳೇ
ಱಂಜವ್ವನೆಯರಾದ ಗೋಪಿಯರ್ ಕುಳಿರ್ಗಲ್ಲರೆಯ ಮೇಲೆ ಪಾಲ್ದೆನೆಗಳಂ
ಪುಂಜಿಸಿ ಪಳುಕುಗಲ್ವಿಡಿದು ಕುಟ್ಟಿ ಕುಟ್ಟಕ್ಕಿ
ಯಂ ಜಾಣಮರಿ ಸಮೆದು ಪಾಂಥರಿರವಱಿದೀಯು
ತುಂ ಜರಾಭೀರುವಂ ಕಾಣಿಸಿ ಕಳಿಪುತೆಸೆದರೇಂ ಜಾತಿಭಾವಕಿಯರೋ ೧೫

ಪಾಲ್ದುಂಬಿ ಮೆಱೆವ ಪೊಸ ಕಮ್ಮಂಗಳವೆದೆನೆಯ
ನೊಲ್ದು ಪಿಡಿದಲ್ಲಿ ಪಾಮರಿ ಚರಿಸುತಾ ವನಕೆ
ನಾಲ್ದೆಸೆಯಿನೊಸೆದು ಬಂದೆಱಪ ಗಿಳಿವಳಗಮಂ ಕಯ್ಯೆತ್ತಿ ರಯ್ಯಮಾಗಿ
ಬಲ್ದನಿವೆರಸು ಸೋವೆಯದನೊಂದು ಗಿಳಿ ಕಂಡೊ
ಱಲ್ದು ಬಂದಾ ಕಯ್ಯತೆನೆಗೆಱಗೆ ಮಾನಸವ
ರಲ್ದು ಕಳ್ಕನೆ ಪಿಡಿದು ಕುಟುಕನೀವುತೆ ಬಿನದಿಸುತ್ತೆಸೆದಳತಿಹರ್ಷದಿಂ ೧೬

ಪೊಳೆವವೊಗವೆರ್ದೆಪೊಡೆತೊಡೆಗಳಾದಿಯಾಗಿ ಕಂ
ಗೊಳಿಪವಯವಂಗಳೇ ಮಡಿಗಳಾ ಲಾವಣ್ಯ
ಲಲಿತರಸವೇ ಜಲಂ ನರ್ಮಗೋಷ್ಠೀಪ್ರಸಂಗಾನಂದದಿಂ ಪೊಣ್ಮುವಾ
ಪುಳಕಂಗಳೇ ಸಸಿಗಳಾಗೆ ರತಿಸುಖಮೆಂಬ
ಫಲಮಂ ವಿಲಾಸಿಯುವಜನಕಿತ್ತು ಮನ್ಮಥನ
ಕಳಮವನವೋಯೆನಲ್ ಕಳಮವನದೊಳ್ ಕಳಮವನಪಾಲಿಕೆಯರೊಪ್ಪುಗುಂ ೧೭

ಓವೊ ತತ್ಕೇದಾರವನದುಭಯ ಪಕ್ಷದೊಳ್
ತೀವಿ ಕರ್ವಿನ ತೋಂಟ ಪೂದೋಂಟಗಳ್ ಮೆಱೆದು
ವಾ ವಿಭವಮೆಂತೆನಲ್ ವಿಶ್ವತೋಮುಖನೊಡನೆ ಬಲ್ವಗೆತನಂ ಬಂದುದು
ಆ ವಿಲಗಮಂ ಜಯಿಸಲೊಂದು ಬಿಲ್ಲೈದಂಬು
ತಾವೆಯ್ದುವವೆಯೆಂದು ಪಲವು ಬಿಲ್ಲಂಬುಗಳ
ಕಾವನೀ ತಾಣದೊಳ್ ಬಿತ್ತಿಯೊತ್ತಿನೊಳಗಿರ್ದೋವಿದಪನೋಯೆಂಬಿನಂ ೧೮

ಚಂಡವೇಗದಿನೊರ್ವ ಪಾಂಥನೆಯ್ತರುತೆ ಸರಿ
ವಿಂಡಿಯಾಗೆಸೆವ ಗೋಪಿಯನಿಕ್ಷುವಾಟಿಯೊಳ್
ಕಂಡೊಂದೆರಳ್ಮೂಱುಸೂಳ್ ನುಡಿಗಳಿಂದೊಲಿಸಿಕೊಂಡಲ್ಲಿಗೆಯ್ದಿ ನೆರೆದು
ಗಂಡಗಾಡಿಯನಾಚರಿಸಿ ಪೋಗೆ ತತ್ಕಲೆಯ
ಕಂಡಿದೇನಾಯ್ತು ತುಟಿ ಪೇಳೆಂಬ ಸಖಿಗೆ ಗಿಳಿ
ತೊಂಡೆವಣ್ಗೆತ್ತು ಕರ್ದುಕಿದುದೆಂದಳಿಪಿದಳೆನೆ ಪೆಂಡಿರೊಳ್ ಸತ್ಯಮುಂಟೇ ೧೯

ಸಲ್ವುದೀ ದೇಸಿಯೆಂಬಂತಲಂಕರಿಸಿಯಾ
ವಲ್ಹೂಗಳಿಂ ಸಮೆದ ಮಾಲೆಯಂ ಧರಿಸಿ ನಸು
ಜೋಲ್ವ ಮೇಲುದನಿನಿಸು ಮುಸುಕುತಲರ್ಗಣ್ಣ ಬಂಬಲ್ವೆಳಗುಗಳ ಸೂಸುತೆ
ನಲ್ವಣ್ಣದಿನ್ನಳಿಯನುಱಿ ಮೇಳಯಿಸಿಕೊಂಡ
ರಲ್ವಂದಯೊಳ್ ಕಾಂತೆಯೊರ್ವಳ್ ವಿಲಾಸದಿಂ
ಚೆಲ್ವಮರೆ ಪದ್ಮರಾಜಾಂಕಮಾಲೆಯ ಬಾಜಿಸುತ್ತೆಸೆದಳೇಂ ಸುಕೃತಿಯೋ ೨೦

ಇಂತೆಸೆವ ಶಾಲಿಪಾಲಿಕೆಯರಂ ನೋಡುತುಂ
ಮುಂತು ಪವನದ ಪೊರೆಯನೆಯ್ದೆ ವನಲಕ್ಷ್ಮಿ ಹರಿ
ದಂತದೊಳ್ ಪಸರಿಸಿದ ಕಹಳಾರವದಿನಿವರ ಬರವಱಿದು ಗಂಧವಹನಂ
ನೀಂ ತಳ್ವದಿಲ್ಲಿಗಾರ್ಯರ್ನ ಕರೆದುತಾರೆಂದು
ಸಂತಸದೆ ಕಳಿಪಿದಳೊಯೆನೆ ಬಂದುದುದ್ಯಾನ
ದಿಂ ತಂಬೆಲರ್ ಪದ್ಮರಾಜನೆಡೆಗತಿ ಸುರಭಿಭರದ ಕಾಣ್ಕೆಯ ನೀಯುತೆ ೨೧

ಅಲ್ಲಿ ತವ್ಮೊಡವಂದ ಬಲವನಿರವೇಳ್ದು ಪೊಂ
ಬಲ್ಲಕಿಯನಿಳಿದು ತತ್ಕಾಲೋಚಿತಕೆ ತಕ್ಕ
ರೆಲ್ಲರ್ವೆರಸಿಯಾರ್ಯರ್ನಾ ಬನಕೆ ಬೇಲಿಯಾಗಿರ್ದ ಕೇತಕಿಯ ನೋಡಿ
ಸಲ್ಲಲಿತ ವರ್ಣಸನ್ಮೋಹನಾಕಾರ ಚಿ
ತ್ತೋಲ್ಲಾಸಕರ ಗಂಧವಿರ್ದೊಡೇಂ ಕಂಟಕಿಗ
ಳೆಲ್ಲಿಡೆಯೊಳಂ ಬಹಿಷ್ಕೃತರೆಂಬುದರ್ಕಿವೇ ಸಾಕ್ಷಿಯೆಂದೆನುತೊಳಪುಗೆ ೨೨

ನೆಗಳ್ದ ಪೊಂಬಾಳೆಗಳ ಚವರದಿಂ ಪೂತು ಕಂ
ಪುಗುವ ವೃಕ್ಷಾವಳಿಯ ಗುಡಿಯಿಂ ಮರಂಗಳಂ
ಬಿಗಿದುಱಿ ತಳಿರ್ತೆಳೆಲತೆಯ ತೋರಣದಿನೆಸೆವ ಸೋಗೆಗಳ ಸೀಗುರಿಗಳಿಂ
ಮಿಗೆ ಮೆಱೆವ ತೆಂಗುಗಳ ಸತ್ತಿಗೆಗಳಿಂ ಕೋಗಿ
ಲೆಗಳ ಕಹಳೆಯಿನಖಿಳ ಪಕ್ಷಿರವವಾದ್ಯದಿಂ
ಸೊಗಸಿ ವನಲಕ್ಷ್ಮಿ ಗುರುವರನನಿದಿರ್ಗೊಂಡಪಳೊಯೆಂಬಂತೆ
ವನಮೆಸೆದುದು ೨೩

ಒದವಿದ ಪಲಸುವಣ್ ಮೃದಂಗವಾ ಕರ್ಣಿಕಾ
ರದ ಪೂವೆ ಪೊಂದಾಳವಾಱಡಿಗಳಿಂಚರಂ
ಮೃದುಗೀತವರಗಿಳಿಗಳುಗ್ಗಡಣೆ ಗಂಡುಗೋಗಿಲೆಗಳ ಸಭಾಯೋಗ್ಯತೆ
ಪುದಿದ ತಂಬೆಲರಾಡಿಸುವ ನಟಂ ಮಾಧವಿ ಸ
ಮುದಿತ ನರ್ತಕಿಯುದಱಿನುದಿರ್ವಲರ್ ಪೂವಲಿಯ
ಚದುರನಾಗಿಸೆ ವಸಂತಕನ ನಾಟಕಶಾಲೆಯಂತುಪವನಂ ಮೆಱೆದುದು ೨೪

ತುಂಬಿ ಸಾರ್ವರ್ತುಕಂ ಫಲಿಸಿ ಪಾವನಮಾಗ
ಳುಂಬಮೆಸೆವೆನ್ನ ಮುಂದುಳಿದ ಬನಗಿನಗಳಾ
ಡಂಬರಂ ನಿಲ್ವುದೇ ತೆಗೆ ಚಿಃ ಸುಡೆನುತೆ ತಳಿರ್ಗೊಂಬೆಂಬ ಕಯ್ಯನೆತ್ತಿ
ತುಂಬಿಗಳ ಪಲ್ಮೊರೆಪದಿಂ ಗಿಳಿಯತೊಂಡು ಬಂ
ಡಿಂ ಬೆಟ್ಟಿತಾದ ನುಡಿಯಿಂ ಗಂಡುಗೋಗಿಲೆಯ
ಮುಂಬರಿಯ ಕೂಗಾಟದಿಂ ಬಗ್ಗಿಸುತೆ ಮೆಱೆದುದಾವನಂ ಸುಖಜೀವನಂ ೨೫

ಮಾಲತೀಮಾಧವೀಯಾನ್ವಿತದೆ ನಾಟಕದ
ಲೀಲೆಯಂ ಯೋಗಿ ಕುಸುಮಾಂಜಲಿಯಿನಾ ತರ್ಕ
ಶೀಲತೆಯನಿಂದ್ರಚಂದ್ರಾಂಕದಿಂ ವ್ಯಾಕರಣಮಂ ವಿಲಸಿತಧ್ವನಿಗಳಿಂ
ಲಾಲಿತಾಲಂಕಾರಮಂ ಚಂಪಕೋತ್ಪಲ ವಿ
ಶಾಲತ್ವದಿಂ ಛಂದಮಂ ಮಹಾಶ್ರೀ ಹರ್ಷ
ದಾಲಂಬದಿಂ ಕಾವ್ಯಮಂ ಪೋಲ್ತು ರಂಜಿಸುವುದಾ ನಂದನಂ ನಂದನಂ ೨೬

ಪಗಲಬಲ್ಲಹನ ಕೆಂಗದಿರ್ದೊಂಗಲಿನಿಸು ಪುಗ
ದೆ ಗಭೀರಮಾಗಿ ಕಳ್ತಲಿಸಿದ ತಮಾಲದ ತ
ರುಗಳ ತಣ್ಣೆಳಲೊಳೆಳವಾಳೆಯೆಲೆಗಳ ಪಚ್ಚಡಿಸಿ ತಳಿರ ಹರಹಿಯಲ್ಲಿ
ಮುಗುಮುಗಿಪರಲ ಮುಡಿದು ಚಂದನಂಬೊರೆದು ಚೀ
ನಿಗಳ ಪೊದೆದಿನಿದುಂಡು ಸವಿದಂಬುಲಂಗೊಂಡು
ಸೊಗಸುಗಾರ್ತಿಯರೊಡನೆ ಬೇಸಗೆಗಳೆವ ಭೋಗಿಜನವಾ ವನವೊಳೆಸೆದುದು ೨೭

ನುತಪಲ್ಲವಮೆ ದೋತ್ರಮುಂ ಬಹಿರ್ವಾಸಮುಂ
ತತ ಪಿಕಸ್ವರಮೆ ವೇದಸ್ವರಂ ಮೆಱೆವ ಪಂ
ಡಿತವಕ್ಕಿಯೊಳ್ನುಡಿ ಪುರಾಣಪಠನಂ ಭ್ರಮದ್ಭ್ರಮರೀವಿಲಾಸವಿರುತೀ
ಹಿತವಾದ ಮಂಗಲಾಶೀರ್ವಾದಮಂತ್ರಂ ಪ
ತಿತಮುಪ್ಪ ಕುಸುಮಕೇಸರವೆ ಮಂತ್ರಾಕ್ಷತದ
ತತಿಯಾಗೆ ಮಧುವಿನ ಪುರೋಹಿತನೊಯೆನೆಯೊಂದಶೋಕವೃಕ್ಷಂ
ಮೆಱೆದುದು ೨೮

ಮೊದಲಿಂದೆ ತುದಿವರಂ ಬೇಱೊಂದು ರೀತಿಯಾ
ಗದೆಯೊಂದೆ ಚಂದದ ಸಫಲಗುಣವನಾಂತು ನಿಜ
ಹೃದಯದೊಳ್ಪಂ ಬಹಿಷ್ಕರಿಸಿ ಕಾಣಿಸದೆ ಸದ್ವಾಸನೆಯನೇ ಬೀಱುತೆ
ಒದವಿ ಕೊಯ್ದುಂ ಕೊಱೆದುವುಂ ಹಿಕ್ಕಿ ನೋಡಿದೊಡೆ
ಸದಮಲಾಮೃತವನೇ ಕಾಣಿಸುತೆ ಪಲಸುಗಳ್
ವಿದಿತಸಜ್ಜನರಂತೆ ಮೆಱೆದುವು ಮಹಾಫಲಾಂಕರ್ಗದೇಂ ನೈಜಮಲ್ತೆ ೨೯

ಫಳರಸವೆ ಮದಧಾರೆ ಚಳಿಪ ತಳಿರ್ಗೊಂಚಲು
ಜ್ವಳಕರ್ಣಮುಱೆ ನೀಳ್ದ ಕುಸುಮಮಂಜರಿ ದಂತ
ವಳವಟ್ಟದರ್ಕೆಱಗುವಳಿಮಾಲೆ ಬರಿಕಯ್ಯವಱ ಝುಂಕೃತಿಯೆ ಬೃಂಹಿತಂ
ಗಿಳಿಗಳಿಟ್ಟಳವೆ ಪಚ್ಚೆಯ ಪಕ್ಕರಕ್ಕೆ ಕೋ
ಕಿಳರವಂ ಮುಂದುಲಿವ ಡೌಡೆಯಾಗಲ್ಕತನು
ಗೆಳಸಿ ಮಧುಯೋಧನನಲಂಕರಿಸಿ ಪಿಡಿದ ಮದಗಜದಂತೆ ಚೂತಮೆಸೆಗುಂ ೩೦

ತಳಿರ ತೊಂಗಲ್ ಕೆಂಜೆಡೆಯ ಬಿಂಕಮಂ ಬೀಱಿ
ಪೊಳೆವ ಕೆಂಗಾಯ್ ನೊಸಲಕಣ್ಣ ದೇಸಿಯ ಸೂಸೆ
ಮಿಳಿರ್ವ ತನಿವಣ್ ಕೊರಲ ಬಿಸದ ತೇಜವನೋಜೆಗೆಯ್ಯೆ ಕಳಿದುಗುವಲರ್ವುಡಿ
ತಳೆದ ಭಸಿತದ ಸೊಗಸನುಗಿಸೆ ತುಂಬಿಗಳ ಸವಿ
ವೊಳೆವ ಝುಂಕೃತಿ ಕಿವಿದೊಡವು ವಾವುಗಳ ಪಾಡಿ
ನಳವಡಿಕೆ ದುಡುಕೆ ಶಿವಚಿಹ್ನವಾಂತಂತೆ ನೇಱಿಲ್ವರಂ ಚೆಲ್ವಾದುದು ೩೧

ಕೆಂಪುವಡೆದೆಸಳಿಂ ರಜೋಗುಣಯುತಬ್ರಹ್ಮ
ನಂ ಪೊಳೆವಬೆಳ್ಪಮರ್ದ ಕೇಸರದೆ ಸತ್ವಗುಣ
ಸಂಪನ್ನವಿಷ್ಣುವಂ ಕರ್ಪಿಡಿದ ತೊಟ್ಟಿಂ ತಮೋಗುಣಾನ್ವಿತರುದ್ರನಂ
ತಾಂ ಪೇಳ್ವುದಱಿನೊಂದೆ ಕುಸುಮದೊಳ್ ತ್ರಿಗುಣಾತ್ಮ
ಕಂ ಪುದಿದ ದೇವತೆಗಳಾಂತವೋಲ್ ಮುತ್ತಗಂ
ಪೆಂಪುವಡೆದುವು ಫಲಪದಂಗಳನಳಿದ ಮುಕ್ತಕಾವಳಿಗಿದೇಂ ಚೋದ್ಯಮೆ ೩೨

ಸುರಲೋಕಚಮೃತಕೀ ನರಲೋಕದಿನಿದುಗಳ್
ಸರಿಯಲ್ಲವೆಂದು [1]ಱಿ[1]ಕ್ಕಟಮೆ ನಿಂದಿಸದೊರ್ಮೆ
ಪರಿಕಿಸುವುದೆಂದಮರ್ದುಗಳಸಗಳ [2]ಪ[2]ಲಗಯ್ಯೊಳಾಂತುದ್ದಕೆತ್ತಿ ಭೂಮಿ
ಸುರರ್ಗೀವನುವೊ ಕಿಂಚಿದುಪಕಾರಿಗಧಿಕತರ
ಪುರುಷಾರ್ಥಮಂ ಮಾಡುವರ್ ಸುಜನರೆಂದು ತಿಳಿ
ದರರೆ ನೀರೆಱೆದಂಗೆ ಪರಮಾಮೃತಂಬೊತ್ತ ಪರಿಯೊಯೆನೆ ತೆಂಗೆಸೆದುವು ೩೩

ಮಿಗೆ ಪಸುರಿಡಿದ ಕಳಿಕೆ ತುಱುಗಿ ಕಾವನ ಕೂರ್ಗ
ಣೆಗಳ ಮೂಡಿಗೆಗಳಂತಿರೆ ಬಿಱಿದ ಪೊಂಬಾಳೆ
ನೆಗಪಿ ಸೇರುವೆಗೆಯ್ದ ಬಾಳ್ಗಳೇಳ್ಗೆಯ ಬೀಱಿ ನೀರ್ದುಂಬಿಱಿಯುಳ್ಳರಲ್ದು[3]
ಸೊಗಸಡಕೆವಿಡಿದ ನವಕುಹಳಿಯೊಱೆಯುಗಿದ ಸುರ
ಗಿಗಳ ಸುಗ್ಗಿಯ ಸೂಱೆದೋಱೆ ಪಂಚಾಯುಧಂ
ಬಗೆಯೆ ಪಂಚಾಯುಧಂ ತಾನಲ್ತು ಪಂಚಾಯುಧನೆಯೆನಿಸಿ ಕಾಂಗೆಸೆದುದು ೩೪

---

೧ ಅ (ಬ) ೨ ನಂ (ಬ) ೩ ಯುಜ್ವಳರಲ್ದು (ಬ, ಕ)

ಉಗುವ ಮಕರಂದರಸದಿಂದಭಿಷವಂ ಗೆಯಿಸಿ
ಮಿಗೆಯುದಿರ್ವ ಕುಸುಮವಿಸರಂಗಳಿನಲಂಕರಿಸಿ
ಜಗುಳ್ದು ತಾವೇ ಬೀಳ್ವ ಕಳಿವದದ ಪಣ್ಗಳಿಂ ನೈವೇದ್ಯಮಂ ವಿರಚಿಸಿ
ಸೊಗಸಿ [೧]ತ[೧]ಂಗಾಳಿಗೊಲಿವೆಲೆಯಿಂದೆ ಬಿಜ್ಜಣಮೆ
ಸಗಿ ನಿಜ ಜನನಿಯಾದ ಭೂದೇವಿಯಂ ಮನಂ
ಬುಗೆ ಪೂಜೆಗೆಯ್ದು ತಲೆವಾಗಿ ನಿಂದನುವೊಯೆನಿಸಿ ಬಾಳೆಗಳ್ ಮೆಱೆದುವು ೩೫

ಪೊಳೆವಲರಸಿಂಧೂರತಿಲಕದಿಂ ತತ್ಕುಸುಮ
ಕೆಳಸಿ ಬಂದೆಱಗಿದಳಿಗಳ ಕುಂತಳದಿನವಱ
ಕಳರುತಿಯ ಸವಿವಾತಿನಿಂ ತೋಱದೋಱೆಗಾಯ್ಗಳ ಕುಚಂಗಳಿನೊಪ್ಪುತೆ
ಕಳಿವಣ್ಬಿರಿಯ ಬಾಯ್ದೆಱೆಯೊಳೊಂದಿದೊಳ್ವಿತ್ತು
ಗಳ ಮಿಳಿರ್ವ ಕೆಂಬಲ್ಲ ಸೊಗಸಿನಿಂ ದಾಡಿಮೀ
ಲಲನೆ [೨]ಶುಕನು[೨]ಮನೊಲಿಸಿಕೊಂಡಳೆನೆ ಸುದತಿಯರದಾರಂ ವಶೀಕರಿಸರೋ ೩೬

ಈಳೆ ಕಿತ್ತೀಳೆ ಚೆಂದೆಂಗು ಕೌಂಗು ತಮಾಲ
ಜಾಲ ಜಂಬೀರ ಜಂಬೂ ಪನಸ ಪಾಟಲ ರ
ಸಾಲ ಸಾಲ ಲವಂಗ ತುಂಗಸರ್ಜಾರ್ಜುನ ತಿಲಕ ವಕುಳ ಮುಖ್ಯಭೂಜಾ
ಜಾಲವಂ ಮಾಧವೀ ಮಲ್ಲಿಕಾಯೂಥಿಕಾ
ಮಾಲತೀ ದ್ರಾಕ್ಷಾಸದೇಲಾದಿ ಲತೆಗಳಂ
ಭೂಲೋಕಪಾವನಂ ನೋಡುತುಂ ಕೊಂಡಾಡುತುಂ ವನದ ಮಧ್ಯಕೆಯ್ದೆ ೩೭

ನಲ್ಗಂಪುವೀಱೆ ಮೋಹಿಸುವ ಚೆಂಗಣಿಗಿಲೆಯ
ರಲ್ಗೊಳಂ ಸೊಗಸುವಾವಲ್ಗೊಳಂ ಪೊಳೆವ ನೆ
ಯ್ದಿಲ್ಗೊಳಂ ತಾವರೆಗೊಳಂ ತಣ್ಗೊಳಂ ಮೆಱೆದುವೆಂತೆನಲ್ ಭೂಮಿವನದ
ಬಲ್ಗಾಡಿಯಂ ನೋಡಲೆಂದೆಳಸಿ ಪಲಗಣ್ಮು
ರಲ್ಗಳಂ ಪಡೆದೀಕ್ಷಿಪನುವೊ ಬಳಿಕೆ ಕಮ್ಮ
ರಲ್ಗಯ್ದುಗಾಱನೆಂದೆಂಬ ಪಟುಭಟನ ಕಣೆಗಳ ಡೊಣೆಗಳೋಯೆಂಬಿನಂ ೩೮

---

೧ ತೆಂ (ಬ, ಕ) ೨ ಸುಖದಿನುಮ / ಸುಖಕನುವ } (ಬ)

ಅಲರ್ವಂಡನುಂಡು ಸೊರ್ಕೇಱಿಯೊಂದಿನಿಸು ಮೆ
ಲ್ಲುಲಿ ನುಣ್ಗೊರಲೊಳುಣ್ಮಲಿಂಚರಂಗೆಯ್ವುತಿ
ರ್ಪಲರ್ವಕ್ಕಿವಳಗದಿಂ ತಾಮರಸತಂಡುಲಂಗಳ ಜಕ್ಕುಲಿಸಿ ಕೊಕ್ಕಿನಿಂ
ನಲಿದು ವಧುಗೂಡಿ ಸೇವಿಪ ಬಿಸಿಲ್ವಕ್ಕಿಗಳಿ
ನೊಲವಿಂ ಶಿಶುವನಬ್ಜಪತ್ರದಲ್ಲಿರಿಸಿಯದ
ರೊಲೆದಾಟಕುರ್ವಿ ಸಂಚರಿಸುವರಸಂಚೆಗಳಿನಾ ಕೊಳಂಗಳ್ ಮೆಱೆದುವು ೪೯

ಕಮಲೋಲ್ಲಸಿತವಾಗಿ ಹರಿಯಂದ[1]ದಿಂ ಚಕ್ರ
ರಮಣೀಯಮಾಗಿ ತತ್ಕರದವೋಲಬ್ಜಯೋ
ನಿಮಹತ್ವದಿಂ ಚತುರ್ಮುಖನಂತೆ ಹಂಸದೀಪಿತಮಾಗಿ [2]ದಿವಸದಂತೆ[2]
ಅವಿತಾಳಿಶೋಭೆಯಿಂ ಗಣಿಕೆವೋಲ್ ಮಧುಸಂಗ
ತಮದಾಗಿ ಮಾಕ್ಷಿಕಪಟಲದಂತೆ ಕುವಲಯವ್ರ
ತಮುಮಾಗಿ ಶರಧಿಯಂತಮೃತಯೋಗದೆ ಕಾಮದುಘದಂತೆ ಸರಸಿಯೆಸೆಗುಂ ೫೦

ತಾವರೆಮೊಗದ ಕೈರವಾಂಬಕದ ಪದ್ಮಪ
ತ್ರಾವಲಿಹರಿದ್ವಸ್ತ್ರದುಡಿಗೆಯ ಸರೋಜವ
ಲ್ಲೀವಿಪುಲಬಾಹುಗಳ ಚಳದಳಿಕುಳಾಳಕದ ಜಳಪಕ್ಷಿಕುಳದುಲುಹಿನಾ
ರಾವದ ರಥಾಂಗಸ್ತನದ ರಸಹೃದಯದ ಸರ
ಸೀವಧುಗಳನಘುಗುರುವಂ ಕಂಡು ಸಾತ್ವಿಕದಿ
ನೋವೊ ಕಟ್ಟನೆ ಕರಗಿ ಜಲಮಯಾಂಗಿಯರಾದರೋಯೆನಿಸಿ ಕಣ್ಗೊಪ್ಪಿರೆ ೫೧

ಅಲ್ಲಿ ತಣ್ಗೊಳಗಳೊಳ್ ಮಿಂದು ಪೊಂದಾವರೆಗ
ಳೆಲ್ಲರ ಪರಾಗಮೆಂದೆಂಬ ಭಸಿತಂಬೊರೆದು
ನಲ್ಲದುಂಬಿಯ ಪಾಡುಗೂಡಿ ನೀರ್ವೂವುಗಳ ಸೌಸವದ ಕಯ್ಗಾಣ್ಕೆಯಂ
ಸಲ್ಲೀಲೆಯಿಂ ಪಿಡಿದುಕೊಂಡು ಶುಚಿವೃತ್ತಿಯಿಂ
ಮೆಲ್ಲನೊಂದೆಳಗಾಳಿ ಬಂದೆಱಗಿ ಗುಣಮಣಿಯ
ಮೆಲ್ಲ್ಲಿರ್ದಗೊಡಂಬಡಿಕೆಯಾದುದು ಜಗತ್ಪ್ರಾಣರಿರವದೇಂ ಹೃದ್ಯಮಲ್ತೇ ೫೨

---

೧ ದಿನಿಸುವೊಲ್ದಚಕ್ರ (ಕ) ೨ ದಿಶಾದದ (ಬ)

ಆ ಕೊಳದ ಮರುತನಂ ಮನ್ನಿಸುತೆ ಸೇವಕಾ
ನೀಕಮಂ ನೋಡಿ ಜಲಕೇಳಿಗೀ ಸರಸಿಗಳ
ಜೋಕೆಮಾಡುವುದೆನೆಯವರ್ ಪೋಗಿ ಪನಿನೀರನಖಿಳ ಗಂಧದ್ರವ್ಯಮಂ
ಶ್ರೀ ಕುಸುಮಪತ್ರಪಲ್ಲವಮನೊಡವೆರಸಿ ದಿ
ವ್ಯಾಕಾರಮಪ್ಪಂತಲಂಕರಿಸಿ ತೋಱಿಸೆ ಗು
ಣಾಕರಂ ಸುತನುಮಂ ಭಕ್ತರಂ ತತ್ತತ್ಸರೋವರಂಗಳ್ಗೆ ಕಳಿಪಿ ೪೩

ಚೆನ್ನಮರೆ ತೀರ್ಥೋದಕಂಗೆಯ್ದು ತನ್ನ ಮನ
ದನ್ನೆ ಕೆಳದಿಯರೊಡವೆರಸಿಯಾ ಕೊಳನ ಪೊಕ್ಕು
ರನ್ನದಂಡೆಗಳುಮಂ ಚೀರ್ಕೊಳವಿಗಳುಮನವರ್ಗಿತ್ತು ಪೊಯ್ದಾಡಿಮೆಂದು
ಚಿನ್ನಿಧಿಯೊರೆವುದುಂ ವೊಲೆಗಳಲುಗೆ ನಡು ಬಳ್ಕೆ
ಬೆನ್ನಂ ಮುಸುಂಕಿ ಮುಡಿಯಲೆಯೆ ಕಣ್ಬೆಳಗೊಲೆಯೆ
ಚೆನ್ನೆಯರ್ ಕಾವನ ಪೊಣರ್ಕೆಯಾಳ್ಗಳವೊಲಿಟ್ಟಾಡಿದರ್ ತಿಳಿನೀರ್ಗಳಿಂ ೪೪

ಮುಡಿ ಸಡಿಲ್ದಾವರಿಸೆ ರಾತ್ರಿಯಾಯ್ತೆಂದು ಸಿಡಿ
ಮಿಡಿಗೊಳ್ವ ಜಕ್ಕವಕ್ಕಿಗಳನಾ ಚೆಲ್ವಮೊಗ
ದಡವುಗಂಡಿಂದುಮಂಡಲಮುದಯವಾಯ್ತೆಂದು ನಸುಮುಗಿವ ಬಿಸಜಂಗಳಂ
ಕುಡಿತೆಗಣ್ ಬೆಳಗುಗಂಡಿದೆ ಜೊನ್ನಮೆಂದು ಬಾ
ಯ್ಬಿಡುವ ತಣ್ಗದಿರ್ವಕ್ಕಿಗಳನೀಕ್ಷಿಸುತೊರ್ವ
ಳೊಡನೆ ನೀರ್ವೊಗೆದವಳನಿಟ್ಟವರ ಸಂಶಯಮನುಡಿಗಿಸಿದಳೇಂ ಜಾಣೆಯೋ ೪೫

ಮುಗುಳೊರ್ವಳಾಟದೊಳ್ ಮತ್ತೊರ್ವಳಂ ತನ್ನ
ಬಗಸೆಗಣ್ಣಿಂ [೧]ಮುರಿದು[೧] ನೋಡೆಯಾ [೨]ಬಳ್ಳಿವೆಳ
ಗೊಗೆದು[೨] ಬರೆ ಬೆಳ್ಳಿ ಚೀರ್ಕೊಳವಿಯಿಂದೆಚ್ಚ ನೀರೆಂದು ಕೆಂದಳವನೊಡ್ಡೆ
ಬಗೆಯದಿವಳಾಂ ನೋಡೆಯರುಣಾಬ್ಜವಾಂತ ವ
ಲ್ಲಿಗಳಿಂ ಬಱಿದೆ ಪೊಯ್ಯಲಿರ್ದಪಳ್ ನೋಡಿಮೆಂ
ದು ಗುರೂತ್ತಮಂಗಱಿಪೆ ತನ್ಮುಗ್ಧೆಯರ ಬಗೆಗೆ ನಗುತೆ ಮನ್ನಿಸಿದನಾರ್ಯಂ ೪೬

---

೧ ಮುಚ್ಚಿರಿದು (ಕ) ೨ ಬಳಿವೆಳ್ಳೊಗೆದು (ಕ), ಬಳಿವೆಳ್ದಗೊಗೆದು (ಬ)

ಕೊರಲುದ್ದವಾದ ನೀರೊಳ್ ನಿಂದಬಲೆಯೊರ್ವ
ಳಿರೆ ಮರುಳ್ದುಂಬಿಯೊಂದಲರ್ದ ಪೊಂದಾವರೆಯ
ಸಿರಿಗೆತ್ತು ಮೊಗಕೆಱಗೆ ಕಯ್ಯೆತ್ತಿಪೊಯ್ಯೆ ಕೆಂದಾವರೆಯರಲೆನುತ್ತದಂ
ಭರದಿಂ ಮುಸುಂಕೆ ಭಯದಿಂ ನೋಡೆ ಬಿಳಿಯ ತಾ
ವರೆಯೆಸಳಿದೆಂದು ಕಣ್ಗಮರೆ ಮುಖವಲಱಗೆ ನು
ಣ್ಗುರುಳೆಡೆಗೆ ಪಾಱಬೀಳ್ದುದು ಶಿವಶಿವಾ ಭ್ರಾಮಕರ ಬುದ್ಧಿಯೇಗೆಯ್ಯದೋ ೪೭

ಮಂದಗಾಮಿನಿಯರೀರ್ವರ್ ಕಂಠಗತಜಲದೊ
ಳೊಂದಿ ತಿಳಿನೀರವಿಟ್ಟಾಡುತಬ್ಜಕ್ಕಬ್ಜ
ಮೆಂದುಂ ವಿರುದ್ಧಮೆಂದೀ ಜಗಜ್ಜನಮುಲಿವುದಿಂದುಶೇಖರರೂಪನೇ
ಒಂದಾಗಿ ಪುಟ್ಟಿಯೊರ್ಪೆಸರಾಂತವಂ ಪಗೆಗ
ಳೆಂದೊರೆವವರ ಮಾತು ಪುಸಿ ನೋಡಿಮೆಂದು ಪೂ
ರ್ಣೇಂದುಮುಖಿಯುಂ ವಿಕಸಿತಾಬ್ಜಮುಖಿಯುಂ ನಗುತ್ತೊಂದೆಡೆಯೊಳೆಸೆದರಲ್ಲಿ ೪೮

ಎಳೆವಳ್ಳಿಮೆಯ್ಯ ರಂಬೋರುಗಳ ಕುಂದಕು
ಟ್ಮಲರದಾವಳಿಯ ಚಂಪಕನಾಸಿಕೆಯ ಸಮು
ಜ್ವಳಕೋಕಿಳಸ್ವರದ ಪೊಂಬಾಳೆಗಂಪಿನವಯವದ ತೆಂಗಾಯ್ಮೊಲೆಗಳ
ತಳಿರಡಿಯ ಬಿಂಬಾಧರದ ನವ ಶಿರೀಷಕೋ
ಮಲತೆಯ ಶುಕೀಮೃದೂಕ್ತಿಗಳ ಕೆಳದಿಯರಂದು
ಕೊಳದೊಳಗೆ ವನವಾಡುವಂತೆಸೆಯೆ ಗುರು ನೋಡುತುಂ ವಿನೋದಿಸುತ್ತೊಪ್ಪಿದಂ ೪೯

ನಳಿನಮಕರಂದದಿಂ ಮಜ್ಜನಂಗೆಯ್ಸಿ ತ
ಜ್ಜಳಜಧೂಳೀಗಂಧವಿಟ್ಟು ತತ್ತಂಡುಲಾ
ವಳಿಯಕ್ಷತಂದಳಿದು ತತ್ ಕುಸುಮಕುಲದಿಂದಲಂಕರಿಸಿ ತತ್ ಪತ್ರದಾ
ತಳೆವಿಡಿದು ತನ್ಮರುದ್ವ್ಯಜನವನೆಸಗಿ ತದು
ಜ್ವಳಸೌಖ್ಯನೈವೇದ್ಯವಿತ್ತು ತತ್ ಸುರಭಿಯುಂ
ಡಳಿನಿನದಮಂತ್ರದಿಂ ಕಮಲೆಯರ್ಚಿಸಿದಳೋಯೆನೆ ಕೊಳದೊಳಾರ್ಯನೆಸೆದಂ ೫೦

ಬಳಸಿ ಮಿಂದಾಡಿ ಬಂದಬಲೆಯರ ಕುಂತಳಾ
ವಳಿ ಮೇಘದಂತೆಯಾ ನವಿರ್ಗಳಿಂ ಬೀಳ್ವ ನೀ
ರ್ಗಳೆ ವೃಷ್ಟಿಯಂತೆ ಸರ್ವಾಂಗದ ಮಯೂಖಲೇಖೆ ಸುರೇಂದ್ರಚಾಪದಂತೆ
ಪೊಳೆವ ನೇತ್ರಾಂಚಲಂ ಕುಡುಮಿಂಚಿನಂತಾಗೆ
ಮಳೆಗಾಲದಂತೆಸೆವ ತತ್ಕಾಂತೆಯರ್ವೆರಸು
ಜಡಗೇಳಿಗೆಯ್ದು ಕೊಳದಿಂದೆ ಪೊಱಮಟ್ಟನುಜ್ಜ್ವಳತೆಯಿಂ ದೇಶಿಕೇಂದ್ರಂ ೫೧

ಕದಡಿದಕ್ಷಿಗಳಿಂ ಹಿಮಾನಿಲನಿನೇಳ್ದಪುಳ
ಕದಸಾಲ್ಗಳಿಂ ಬೆಳ್ಪುಮುಸುಕಿದಿಂದುಟಿಗಳಿನ
ಳಿದು ಮೆಱೆವ ಕೇಶಪಾಶಂಗಳಿಂ ದಿವ್ಯತನುಗಳಿಗಿಳಿವ ನೀರ್ವನಿಗಳಿಂ
ಪುದಿದಬ್ಜನಾಳಕಂಟಕತತಿಯಿನೊದವಿದಂ
ಗದ ಕಲೆಗಳಿಂ ಜಲಕ್ರೀಡೆಗೆಯ್ದಿಯ್ತರ್ಪ
ಸುದತಿಯರ್ ಸುರತಾಂತಸುದತಿಯರಿರವನಱಿಯಿಸುತೆ ನಡೆದರಾರ್ಯನೊಡನೆ ೫೨

ಅತಿ ಹರ್ಷದಿಂ ಬಂದು ಮುಂದೆ ಸಿಂಗರಿಸಿರ್ದ
ಲತೆವನೆಯ ಪೊಕ್ಕು ತಳಿರ್ವಾಸಿನೊಳ್ ಶಿವಭಕ್ತ
ತತಿಗೂಡಿ ಕುಳ್ಳಿರ್ದವರ್ಬೆರಸು ವಸ್ತ್ರಭೂಷಣ ಗಂಧಮಾಲ್ಯಂಗಳಂ
ಹಿತಮಾಗಲಂಕರಿಸಿಯಾ ಮಾಳ್ಕೆಯಿಂದೆ ನಿಜ
ಸುತಸತೀಪ್ರಮುಖರ್ಗೆ ಕೊಟ್ಟು ಶಿವಪೂಜೆಗು
ದ್ಯತನಾಗಿ ಕುಸುಮಾಳಿಯಂ ತಿರಿದುತನ್ನಿಮೆನೆ ಕೆಳದಿಯರ್ ಗಳಿಲನೆಯ್ದಿ ೫೩

ಓವೊ ಗಣಿಕಾನಾಮದೋಷವಳಿವುದು ಶಿವಂ
ಗಾವು ಸಲಲೆಂದು ಬಹುಮುಖದಿನಲರ್ದಂತಿರ್ಪ
ಸೇವಂತಿಯಂ ದೇಶಿಕಂ ಮುಡಿವ ಭಾಗ್ಯವಾಯ್ತೆಂದು ಸಂತಸದೆ ನಗುವಾ
ಭಾವದಿಂ ಬಿಱಿದ ಮಲ್ಲಿಗೆಯನಳಿಯಾಸೆ ಪುಗ
ದೀ ವನಶ್ರೀಯಿಟ್ಟ ಮೀಸಲೊಯೆನಿಪ ಚಂಪ
ಕಾವಳಿಯನುರುಜಾತಿಯಂಬುದಂ ಮೃದುವೆಂದಱಿಪುವಂತೆಸೆವ ಜಾತಿಯಂ ೫೪

ಸ್ಮರನಿಂ ಹರನ ಪದಮುಮಂ ಕಾಣದೆಮಗಿಂದು
ಗುರು ಮುಡಿಯ ಕಾಣಿಸುವನೆಂದುರ್ವಿ ಪುಳಕಿಸಿದ
ಪರಿಯಂತೆ ಪೂತು ಮೆಱೆವಿರವಂತಿಯಂ ಲಿಂಗಮಂ ತಾಳ್ದ ಭಕ್ತರಂತೆ
ಸ್ಫುರಿಪ ಕರವೀರಮಂ ನಾಮದಿಂದೇಂ ಗುಣವೆ
ವರವೆಂಬುದರ್ಕಾವೆ ಸಾಕ್ಷಿಯೆಂಬಂತೆಸೆವ
ಸುರಗಿಯಂ ಶಿವನ ಪೆಸರಾಂತವೋಲ್ ದೇವವಲ್ಲಭವೆನಿಪ ಸುರಹೊನ್ನೆಯಂ ೫೫

ಅಲಘುನಿಜಗುಣಮಂ ಮಱಸಿ ಹಿಕ್ಕಿದೊಡೆ ಮನಂ
ಗೊಳಿಸಿಯುತ್ತಮನಂತೆ ಮೆಱೆವ ಮುಡಿವಾಳಮಂ
ಸುಲಭಸುರಭಿಯ ಭವನವೆನಿಪ ದವನವನೀಶನಿಚ್ಛೆಯೆನಿಸುವ ಪಚ್ಚೆಯಂ
ಮೊಳೆಯೊಳೆ ಸುವಾಸನೆಯ ಬಿಡದೆ ಸುಕೃತಿಯವೊಲು
ಜ್ವಲಿಪ ಮರುಗವನಕಟ ಮೃಗನಾಭಿಯೆನಿಸದ ವಿ
ಮಳಸುಕಸ್ತೂರಿಕಾಗಂಧದಿಂದಂದಂ ಒಡೆದು ಮೆಱೆವ ಪೊಂಬಾಳೆಯಂ ೫೬

ತುಂಬಿಗುರುಳೆಯರೇಕೆ ಬಾರರೆಮ್ಮಂ ಬೇಗ
ವಂಬಿಕೇಶಂಗೊಯ್ವೊಡೆಂದಿದಂ ಬಯಸಿ ಬಾ
ಯಂ ಬಿಟ್ಟುಕೊಂಡಿರ್ಪವೋಲ್ ಬಿರಿದ ತಾವರೆಗಳಂ ರಾಜಮೌಲಿಯೆಡೆಗೆ
ಬಿಂಬಾಧರೆಯರಿರಾ ಕೊಂಡೊಯ್ವುದೆಂದವರ
ನೇಂ ಬೇಡಿಕೊಂಡು ಕೈಮುಗಿವನುವೊಯೆನೆ ಮುಗಿದ
ಳುಂಬಮಾದುತ್ಪಲಂಗಳನಿವು ಮೊದಲೆನಿಪ್ಪರಲ್ಗಳಂ ತಿಱಿದು ತಂದು ೫೭

ದೇವ ನಿನ್ನಧಿಕಸಾಮರ್ಥ್ಯಸರಣಿಯ ಮುಂದೆ
ಕಾವಂ ನಿಲಲ್ ಬೆರ್ಚಿ ಮೆಯ್ಗರೆದು ತನ್ನ ಬಾ
ಣಾವಳಿಯನೊಪ್ಪಿಸಿದನಿದೆ ನೋಡಿಮೆಂದು ತಂದೀವನುವೊಯೆಂಬಂದದಿಂ
ಆ ವನಿತೆಯರ್ ಬೇಱೆ ಬೇಱೆ ಮುಂದಿರಿಸೆಯಾ
ಪೂವೆಲ್ಲಮಂ ನೋಡಿ ನಗುತೆ ಭಕ್ತರ್ಗಿತ್ತು
ಮಾವರನ ಸಿರಿಮುಡಿಗಲಂಕರಿಸಿ ತಾಂ ಸೂಡಿದಂ ರಸಿಕಚಕ್ರೇಶ್ವರಂ ೫೮

ಮಲಹರಾರ್ಚನಮನಿಂತಿಂಪಮರೆ ರಚಿಸಿ ಕೋ
ಮಲೆಯರುಱೆ ಬಡಿಸಿದ ರಸಾನ್ನಮಂ ಪಾನಮಂ
ಲಲಿತರಂಭಾಪನಸಚೂತಜಂಬೂದಾಡಿಮೀದ್ರಾಕ್ಷಿಗಳ ಪಣ್ಗಳಂ
ಬೆಳಲಪಣ್ ಕಿತ್ತೀಳೆ ರಸದಾಳಿ ಚೆಂದೆಂಗಿ
ನೆಳೆನೀರ್ಮೊದಲೆನಿಪ್ಪವಂ ಶಿವಂಗಿತ್ತಾ ವಿ
ಮಳಭಕ್ತತತಿಗೂಡಿ ಸವಿದು ಸವಿದಂಬುಲಂಗೊಂಡಿರ್ಪ ಸಮಯದಲ್ಲಿ ೫೯

ಸದಶೋಕ ವಕುಲ ಕುರವಕ ತಿಲಕ ಕರ್ಣಿಕಾ
ರದ ಸಿಂಧುಕಾಮ್ರ ಚಾಂಪೇಯ ಮಂದಾರ ಪರು
ಷದ ಮರಗಳೆಡೆ[1]ಗೆಯ್ದಿದನೆ ಪೊದೆಯಿದಱೊಳುಗುಳಿದನೆ ಅಪ್ಪಿದನೆ ವೀಕ್ಷಿಸು
ಇದನೊಳ್ಳಿತಾಡುವುದಿದಂ ಮುದ್ದಿ[2]ಡನಿತರ್ಕೆ
ವದನರುಚಿಗುಡು ಬಿನದಿಸಿದಱೊಳ್ ನಗಿದನೆಂದು
ಸುದತಿಯೊರ್ವಳ್ ಕಾಡಿದುದನೊರೆವ ಮುಗ್ಧೆಯಂ ಗುರು ನಗುತೆ ಸಂತವಿಟ್ಟಂ ೬೦

ಮೇಲಿಂಪು ಸೊಂಪು ಬಣಿತೆ ಬೆಡಂಗು ಜೋಕೆ ಗತಿ
ಚಾಲನಂ ಗಮಕ ಮೊದಪೊಯ್ಯಾರವಂಗಂ ಸ್ವ
ರಾಳಿ ಕಳೆ ರಂಗು ನೇವಣೆ ಬಜಾವಣೆ ರೀತಿಜಾತಿಗ್ರಹಾದಿಗಳಿವು
ಮೇಳಯಿಸಿ ಜಾಣ್ದೇಸಿ ಮೃದುಮೋಹನಂ ನಿಮಿರೆ
ತಾಳ ಲಯ ಕಾಲಮಾನ ಸ್ಥಾನ ವಿಧಿಯೊದವೆ
ಬಾಲೆಯರ್ ಕೇಳಿಸಿದರಾರ್ಯನಂ ರಸಮೊಸರ್ವಪೋಲ್ಕೊರಲ್ಬೆರಲೆರಡಱಿಂ ೬೧

ಜೇನೆಯ್ಯಸೀಯೆನಿಪ್ಪಾ ಗೇಯರಸದಿಂಪ
ನೇನೆಂಬೆನಾಗಮನಿಗಮಪುರಾಣಪ್ರಸಂ
ಗಾನುಭವದೊಳ್ಪನೀಶೈಕ್ಯರ್ವೆರಸು ಸುಖಿಸುತಿಂತಿರ್ದು ಬಳಿಕಮವರುಂ
ಮಾನಿನೀ ಸುತಮುಖರುಮೊಡನೆ ಬರೆ ಬನದಿಂದ
ನೂನಗುಣಿ ತಳರ್ದಡ್ಡಮಾಡಿದಶ್ವವನೇಱಿ
ತಾನವರ್ಗೆ ತಕ್ಕ ವಾಹನವಿತ್ತು ತದ್ಬಲಸಮೇತಂ ಪುರಕೆ ಬರುತಿರೆ ೬೨

---

೧ ಗೋ (ಬ, ಕ) ೨ ಟ್ಟಿದನಿತರ್ಕೆ (ಕ, ಬ)

ಪರಮೇಷ್ಠಿಯೆಂಬಳತೆಗಾಱಿಂ ದಿವಸಮೆಂಬ
ವರರಾಶಿಯಂ ತಪ್ಪದಳೆದಸ್ತಪರ್ವತದ
ಶಿರದ ಮೇಲಿಂಬಿಟ್ಟ ಕೆಂಬರಲ ಕೊಳಗವೋ ಪದ್ಮಣಾರಾಧ್ಯನಿಳೆಗೆ
ಪರಮ ಗುರುವವನಡಿವಿಡಿದು ಬರ್ದುಕಿಮೆಂದೊಲ್ದು
ವರುಣನೆಲ್ಲರ್ ನೋಡಲೆಂದು ಪಶ್ಚಿಮಗಿರಿಶಿ
ಖರವೇಱಿ ಪೊಯ್ವ ಮಾಣಿಕದ ಡಂಗುರವೊಯೆನೆ ಸಂಧ್ಯಾರ್ಕಬಿಂಬಮೆಸೆಗುಂ ೬೩

ಆವನಧಿಕಪ್ರಭಾವಂಬೆತ್ತು ಬಾಳ್ವನವ
ನೋವೊ ದುಃಖವನೊಂದುಕಾಲಕನುಭವಿಸದಿರ
ನೀ ವಿಧಾನಕ್ಕಾನೆ ದೃಷ್ಟಾಂತಮೆಂದಿಳೆಗೆ ತೋರ್ಪಂದವೋ ಸರ್ವರಂ
ಓವಲುಜ್ವಲಿಪಂಗೆ ಕೈರವಚಕೋರ ದುಃ
ಖಾವಹತೆ ಯುಕ್ತಮೆಯವರ್ಕೆ ವಿಶ್ರಾಂತಿಯು
ಪ್ಪಾ ವಿಧಿಯೆಸಪೆನೆಂದು ಮೆಯ್ಗರಿದನೋಯೆನಲ್ ಸೂರ್ಯನಪರಾಬ್ಧಿಗಿಳಿದಂ ೬೪

ಹರಿಣಾಂಕನೆಯ್ತರ್ಪನೆಂದುರ್ಬಿ ರಾತ್ರಿಯೆಂ
ಬರಸಿ ತಾನಿರ್ಪೆಡೆಗೆ ಕತ್ತುರಿಯ ಸಾರಣೆಯ
ವಿರಚಿಸಿಯರಲ್ಗಳಂ ಹರಹಿ ಸಿಂಗರಿಸಿಕೊಂಡಿರ್ಪನುವೊ ಮೇಣಾತನ
ಬರವಿಸಿಸು ತಳ್ವಾಗೆ ಮುಳಿದು ನೀಲಾಂಬರವ
ನಿರದೆ ಮುಸುಕಿಟ್ಟು ನುಣ್ಗೊರಲಸರಮಂ ಪರಿದು
ಕರಮೆತ್ತಲುಂ ಚಲ್ಲಿಯೊಱಗಿದಳೊ ಯೆನೆ ಮರ್ವು ಪರ್ವಿ ತಾರೆಗಳೆಸೆದುವು ೬೫

ಅನಿತಱೊಳ್ ಭಾಸ್ಕರಂ ತನ್ನಿನಿಯಳಾದ ಕಮ
ಲಿನಿಯಾವವಸ್ಥೆಯೊಳಗಿರ್ಪಳೀಕ್ಷಿಸಿ ಬನ್ನಿ
ಮೆನುತೆ ನಿಜಕರಸಹಸ್ರವನಟ್ಟಿಯವು ಬಿಟ್ಟು ಸಂಚರಿಸಿದೊಡೆ ಚಂದ್ರಮಂ
ಮುನಿವನೆಂದಳ್ಕಿ ಭುವನೈಕಗುರು ಪದ್ಮರಾ
ಜನ ಬೆಂಬಿಡದೆ ಸುತ್ತಿಮುತ್ತಿಕೊಂಡುಱಿ ವಿಹರಿ
ಪನುವೋಯೆನಲ್ ಪಲವು ಕೈದೀವಿಗೆಗಳೊಪ್ಪೆಯಾ ಬೆಳಗಿನೊಳ್ ಬರ್ಪಿನಂ ೬೬

ಜಳಧಿಯಂತಗಳೆಸೆಯೆ ಮಂದರದವೋಲ್ ಕೋಟೆ
ಪೊಳೆಯೆ ತತ್ಕೋಟಾವಲಗ್ನಕಾದಂಬಿನಿಯೆ
ಬಳಸಿದಹಿಪನವೊಲಿರೆ ಭಟಧಾತೃಗಳೆ ಮಥಿಸುವಸುರಸುರರಂತಿರೆ ನೃಪಂ
ಬಳರಿಪುವೊಲಿರೆ ತತ್ಪ್ರತಾಪಂ ಯಶಂ ವಿಷಾ
ನಳಸುಧೆಗಳಂತಿರೆ ನಗರಶೋಭೆ ಲಕ್ಷ್ಮಿಯಂ
ತಳವಡೆಯಮೃತಮಥನಕಥೆಯನಭಿನಯಿಸುವಂತಾ ಪುರಂ ಕಣ್ಗೆಸೆದುದು ೬೭

ಮನೆಯೆಂಬೆನೇ ನಿಚ್ಚಮುಂ ಬಂದು ಪೊಕ್ಕು ಕಡು
ಜಿನುಗುವ ಮಧುಪಗೋಷ್ಠಿಗೀಡಾಯ್ತು ನಚ್ಚಿ ಪಿಡಿ
ದಿ[೧]ನಿಯನೆಂಬೆನೆ ಯೆನ್ನ ಬಿಟ್ಟಧಮಗೋಪಾಲಕಸ್ತ್ರೀಯರಂ ಮೆಚ್ಚಿದಂ
ಇನಿಸು ಪೊಳ್ತಾದೊಡಂ ಸುಖನಿದ್ರೆಗೆಯ್ವೆನೆಂ
ಬೆನೆ ಪಾಸದುಗ್ರಫಣಿಯೆಂದಿಂತಿವಂ ಬಿಟ್ಟು
ಘನಲಕ್ಷ್ಮಿ ತತ್ಪುರಮನಾಶ್ರಯಿಸಿ ಮತ್ತೆತ್ತಲುಂ ಚಲಿಸಳೇಂ ಪ್ರೌಢೆಯೋ ೬೮

ಆ ನಗರಿಯಂ ಪೊಕ್ಕದಱ ಸಿರಿಗೆ ತಲೆದೂಗು
ತಾನಂದದಿಂ ರಾಜವೀದಿಯೊಳ್ ಬರುತಿರೆ ಪು
ರೀನಾರಿಯರ್ ತದಾಲೋಕನೇಚ್ಛೆಯಿನೆಯ್ದುವಾಗಳೊರ್ವಳ್ ಪಾಂಸುಲೆ
ಈ ನೆವದೆ ಪಾಣ್ಬನ ನೆರೆವೆನೆಂದು ಬಂದುದಂ
ಭೂಸುತನ ನೋಳ್ಪ ಸತಿಯರ ಗೋಷ್ಠಿಯಿಂ ಮಱೆದ
ಳೇನೆಂಬೆನುತ್ತಮರ ಸಂಗವಧಮರ್ಗವಾ ಕಾಲದಘಮಂ ಕೆಡಿಸದೆ ೬೯

ಗುರು ಬರ್ಪುದಂ ನೋಡಿದೊಡೆ ಕಣ್ಣ ಪಾಪವದು
ಹರೆವುತದೆ ಬಾರೆಲಗೆಯೆಂಬ ಸತಿಯರ್ಗಸತಿ
ಯೊರೆದಳತ್ತೆಗೆ ಕಣ್ಣಬೇನೆ ಪಿರಿದಿನಿಯನೂರೊಳಗಿಲ್ಲ ತೊಳ್ತು ಕಳ್ಳೆ
ಇರುಳಾಲಯದೊಳದಱಿನೆನಗೆ ಬರತೀರದೆಂ
ಬೊರೆಯಿನವಿದಿರ್ದ ಜಾರನ ಕರೆದಳನ್ಯಾಯ
ಪರರಂದಿನಲ್ಪಸುಖಮಂ ನೋಳ್ಪರಲ್ಲದುಪರಿಯ ಪುಣ್ಯಮಂ ನೋಳ್ಪರೇ ೭೦

---

೧ ನೆ (ಬ, ಅ)

ಕರಮೆ ತನ್ನೊಳ್ ಮುನಿದು ಬಾರದುಪವರನ ಸ
ತ್ಕರಿಸಲೆಂದೆಯ್ತುರುತೆ ವೀದಿಯೊಳ್ ಬರ್ಪ ಗುರು
ವರನ ಕಂಡಲ್ಲಿ ಮರವಟ್ಟು ನೋಡುತಿರೆಯಾ ಗಾಡಿಯಂ ಕಂಡು ಜಾರಂ
ತರಹರಿಸದೆಯ್ತಂದು ನೆವದೆ ಮೆಯ್ಸೋಂಕಿ ಕಾ
ತರಿಸೆ ಗುರುಸಮ್ಮುಖಭಯದೆ ಬಗೆದುದಿಲ್ಲೆನಲ್
ಪರಮಪುರುಷರ ದರ್ಶನದೊಳಿರ್ದನಿತುಪೊಳ್ತು ದುರ್ವ್ಯಸನಗುಣವೊಗೆವುದೇ ೭೧

ಕತ್ತುರಿಯನಂಗದೊಳ್ ಪೊರೆದು ನೀಲಾಂಬರವ
ನೊತ್ತಿ ಬಿಗಿದುಟ್ಟು ಕನ್ನೆಯ್ದಿಲರಲಂ ಮುಡಿದು
ಮತ್ತೊರ್ವಳುಪಪತಿಗೆ ಪೇಳ್ದ ಸಂಕೇತಕೆಯ್ದುತ್ತೆ ಗುರುಸಂಭ್ರಮಕ್ಕೆ
ಎತ್ತಲುಂ ಕವಿದ ಕೈದೀವಿಗೆವೆಳಗು ಪಗಲ
ಬಿತ್ತರಿಸೆ ತಿರಿಗಿದಳ್ ಪೋಪುದು ಘಟಿಸದೆನು
ತ್ತುತ್ತಮಪುರುಷರ ತೇಜೋಮಧ್ಯದಲ್ಲಿ ಕೃಷ್ಣಾಚರಣಮೇಂ ಘಟಿಪುದೇ ೭೨

ಆ ದಧೀಚಿಯನಿಡೆ ಮುಱಿದ ಹರಿಯಚಕ್ರಾರ್ಧ
ವೋ ದಿವಿಜವರನೀಶನೋರ್ವನೇ ಪತಿಯೆಂದು
ಮೇದಿನಿಗಱಿಪೆ ಚೊಕ್ಕವೆಳ್ಳಿಯೊಳ್ ಸಮೆದು ನಭದಲ್ಲಿಯೊಂದಱ ಲೆಕ್ಕಮಂ
ಸಾದರದಿನಮರೆ ಪತ್ತಿಸಿದನೋ ಮದನನಕ
ಟಾ ದೇವವಧುಗಳಂ ಕಿವಿವರಂ ತೆಗೆದು ಸಂ
ಮೋದದಿಂದೆಸುವ ರಸದಾಳಿವಿಲ್ಲೋ ಯೆನಲ್ಕಾಗಳರೆವೆರೆಯೊಗೆದುದು ೭೩

ಸಸಿಯೆಂಬ ಕಾಮದುಘವಂ ಚಕೋರಂ ನೆರೆ ಭ
ಜಿಸೆ ತುಷ್ಟಿವಟ್ಟಮೃತವಂ ಕಱೆವ ತೆಱನೊ ಆ
ಗಸದೊಱೆ ಮಹಾ ಪ್ರವಾಹಿಸಿ ಮೇರೆದಪ್ಪಿ ಭೂಮಿಯನಾವರಿಸಿದಂದವೋ
ಕುಸುಮೇಷು ಲೋಕೈಕಧನ್ವಿಯೆಂದಮರಕುಲ
ಮೊಸೆದು ಪಟ್ಟಾಭಿಷೇಕಂಗೆಯ್ವ ತತ್ಸುಧಾ
ರಸದ ಧಾರಾಸಾರವೋಯೆನಲ್ ತಣ್ಬೆಸಿಲ್ ಮುಸುಕಿತೆಲ್ಲಾ ದೆಸೆಗಳಂ ೭೪

ಕರಹತ್ತಿಗಳಿಟ್ಟೆಡೆಗೆ ಕಡುಸಣ್ಣನಾಗಿ ಕಾ
ಯ್ವರ ಕಾಣದಲ್ಕಿ ತಿಮಿರಾಳಿಯೊಳಪೊಕ್ಕು ಬಾ
ಳ್ವಿರವೊ ವಿರಹಿಗಳ ಬಿಸುಸುಯ್ಯ ಕಿಚ್ಚಟ್ಟಿ ತನ್ನೆರ್ದೆ ಪೊತ್ತಿಪೊಗೆವ ಪರಿಯೋ
ಕರಮೆ ತತ್ಪುರನಾರಿಯರ ಬಟ್ಟವೊಗದ ಮೆಯ್
ಸಿರಿಗಂಡು ಕಱುಬಿ ಕಱ್ ಕಱ್ಗಂದಿದನೊಯೆನಲ್
ಹರಿಣಾಂಕನುದರದ ಕಲಂಕವೊಪ್ಪಿದುದದಂ ಗುರು ನೋಡುತುಂ ನಡೆತರೆ ೭೫

ತವೆ ಪಾರಿಯದಿನಿಂದ್ರಗೋಪದಿಂ ಶಿವನಾಂತ
ತೊವಲೆರಡನಣಕಿಸುತೆ ಪೊಂಬಟ್ಟೆಯಿಂದೆ ಮಾ
ಧವನಮುಳ್ಗಿಸುತೆ ದೇವಾಂಗದಿಂದಿಂದ್ರಾದಿ ದೇವತೆಗಳಂ ಕುಣಿಸುತೆ
ನವನೀಲವಸ್ತ್ರದಿಂ ಬಲನನೊಲಿಸುತ್ತೆ ರ
ಕ್ತವಸನದೆ ಶಮನನಂ ಭ್ರಮೆಗೊಳಿಸುತುಳಿದಂಬ
ರವಿತಾನದಿಂ ನರರ ಬರಿಸುತೊಪ್ಪಿದರಲ್ಲಿ ದೂಸಿಗರ್ ದೇಸಿವೆತ್ತು ೭೬

ಗಣಿತಕೊಳಗಾದುದು ಕುಬೇರನರ್ಥಂ ತ್ಯಾಗ
ಗುಣಭೋಗಗುಣಕೊದವದಾಯ್ತು ಹೇಮಾದ್ರಿ ದುಃ
ಫಣಿಭೂತಸಂವೇಷ್ಟಿತಮುದಾಯ್ತು ನಿಕ್ಷೇಪವೆಂದಪರಿಮಿತಸಂಖ್ಯೆಯಿಂ
ಎಣಿಸಲೇಂ ಸರ್ವ ವ್ಯಯಕ್ಕೊದವುವದಱಿನು
ಲ್ಬಣ ನಿರರ್ಗಳವೃತ್ತಿಯಿಂದೆಸೆವ ಪಣಗಣದಿ
ನಣಿಯರಮವಂ ನಗುತೆ ಪರದರೊಪ್ಪಿದರಾ ವಿಪಣಿಯೊಳುದ್ಧತ ತೇಜದಿಂ ೭೭

ರತ್ನಗರ್ಭಾಂಗನೆ ನಿಜೋದರಂದೆಱೆದುಳ್ಳ
ರತ್ನಾಳಿಯಂ ಕೇಣಿಗೊಟ್ಟೆಡೆಯೊ ಮುನಿಕುಡಿಯೆ
ರತ್ನಾಕರಂ ಪಿಂದೆ ತನ್ನೊಳಗುದೋಱಿದಿರವಿಂತಿರ್ಪುದೆಂದಱಿಪುವಾ
ಯತ್ನವೋಯೆನೆ ವಿವಿಧ ರತ್ನಗರ್ಭಿತವಾಗಿ
ರತ್ನಮುಂ ವಿಕ್ರಯಿಪ ಘಟ್ಟಿಸೆಟ್ಟಿಗಳವರ
ನೂತ್ನತರಮಾದಂಗಡಿಗಳೆಸೆವವಿಳೆಯೊಳ್ ಸಪತ್ನಿ ತಮುಗಿಲ್ಲೆಂಬಿನಂ ೭೮

ಮೃಗನಾಭಿಯಂ ಕುಂಕುಮವನಿಂಪುಗರ್ಪುರವ
ನಗುರುಮಂ ಸಾದಂ ಜವಾದಿಯಂ ಪುಣುಗುಮಂ
ಸೊಗಯಿಸುವ ಪನಿನೀರ್ಗಳಂ ದಶಾಂಗಮನಿಂಬುಗೆಯ್ದವರ ಯೋಗವಱಿದು
ಮಿಗೆ ಕೂಡಿ ಮುಡಿ [1]ಚೆನ್ನನಲೆಯೆ ಮೇಲುದು ಜೋಲೆ
ಬಗಸೆಗಣ್ ಪೊಳೆಯೆ ನಡು[2]ವಲೆಯೆ ಕಂಕಣಮುಲಿಯೆ
ಬಗೆದಟ್ಟಿಘಟ್ಟಿವಳ್ತಿಯರರೆದರಾ ಯಕ್ಷ ಕರ್ದಮಾದಿಗಳನೊಲವಿಂ ೭೯

ಕುಂದಣಗಳಸಮೊಲೆಗಳಿಂದೆ ಕುಂಕುಮದ ಕಂ
ಪಂ ದಿವ್ಯಕಚದೆ ಕತ್ತುರಿಗಂಪನಮಲ ಮುಖ
ದಿಂದೆ ತಾವರೆಗಂಪನೆಸೆವ ಬಾಯ್ದೆಱೆಯ ಸೊಗಸಿಂದೆ ಕರ್ಪುರದ ಕಂಪಂ
ಸಂದ ತೋಳ್ಮೊದಲಿಂ ಜವಾದಿಗಂಪಂ ಸುಯ್ಗ
ಳಿಂದೆ ಸಂಪಗೆಗಂಪನೊಡಲಿಂ ಬೆರಕೆಗಂಪ
ನೊಂದಿ ಪರಿಮಳದ ಪುತ್ತಳಿಗಳೋಯೆನೆ ಘಟ್ಟಿವಳ್ತಿಯರ್ ಮೆಱೆದರಲ್ಲಿ ೮೦

ದೇವವಲ್ಲಭಶೋಭೆಯಿಂ ಲಸದ್ದಿವ್ಯಗಣಿ
ಕಾವಲಿಗಳಿಂ ಪಾರಿಜಾತಪ್ರಭಾವದಿಂ
ಭಾವಿಸೆ ಯಥೇಷ್ಟಸುಖಮಂ ಕುಡುವ ಸುರಭಿಯಿಂ ಕುವಲಯೋಚ್ಛ್ರಯವಿಭವದಿಂ
ಓವೊ ಬರ್ಹಿಷ್ಮಕಾಂತಾವೇಶದಿಂದೆ ನಾ
ನಾವಿಧದ ಸುಮನೋವಿತಾನದಿಂದೀಕ್ಷಿಸಲ್
ಪೂವಿನಂಗಡಿಗಳಮರಾವತಿಯ ಮೆಯ್ಸಿರಿಯನಾಂತು ಕಣ್ಗೆಸೆದಿರ್ದುವು ೮೧

ಚೆಂದಳಿರ್ ಚಂಪಕದಳಾಳಿ ಬಂದುಗೆ ಕುಂದ
ಮೊಂದು ಸಂಪಗೆಮುಗುಳ್ ನೆಯ್ದಿಲಬ್ಜಂಗಳಿಂ
ದಂದಂ ಬಗೆಯಲೊಂದು ಮಾಲೆಯನ್ನೆಗಳ್ದಿನ್ನ ಪದಕವಯವಕ್ಕೆ ಬಾಯ್ಗೆ
ಸಂದ ರದನಕ್ಕೆ ನಾಸಿಕೆಗಕ್ಷಿಗಾಸ್ಯಕ್ಕಿ
ವೆಂದುಂ ಸರಿಯೆಂದು ತೋರ್ಪಂತೆ ಪಿಡಿದಬ್ಜ
ಜಂ ದಲಿವಱಿಂ ಸಮೆದ ಮಾಲೆಯೋಯೆನೆ ಮಾಲೆಗಾರ್ತಿಯೊರ್ವಳ್
ಸೊಗಯಿಕುಂ ೮೨

೧ ಚೆ (ಅ, ಕ) ೨ ನಳಿ (ಬ, ಕ)

ಜಾತಿಯೊಂದೇ ಭಿನ್ನಜಾತೀಯ ವಸ್ತುಗಳೊ
ಳೋತು ಬೆರೆದಿರದೆಂಬ ತಾರ್ಕಿಕರ ಗೆಲ್ವಿವೆಂ
ದಾತತವಕುಲ ವಿಚಕಿಲಾಬ್ಜಾದಿ ಭಿನ್ನ ಜಾತೀಯ ಪುಷ್ಪಂಗಳಲ್ಲಿ
ಜಾತಿಯೊಂದಂ ಬೆರಸಿ ರಚಿಸಿಯಾ ಮಾಲೆಯಂ
ನೀತಿಯುತ ಬುಧರ್ಗಿತ್ತು ಮಾಲೆಗಾರ್ತಿಯರತಿ
ಖ್ಯಾತಿಯಂ ಪಡೆದರೆನೆ ತತ್ಪುರೀನಾರಿಯರ ಚಾತುರ್ಯ್ಯಮಿನ್ನೆನ್ನದೋ ೮೩

ಇದೆ ಮಲ್ಲಿಗೆಯ ಮಾಲೆಯೆಂದು ನಿಜ ಸುತೆಯ ಕ
ಣ್ಣ ದಿಯೊಳೊಗೆದಂಶುಲೇಖೆಯು ತೋಱಿಸುತೆ ಮತ್ತ
ಮಿದೆ ಸಂಪಗೆಯ ಜೊಂಪಮೆಂದವಳ ಪೊಂಬಣ್ಣ ಮೆಯ್ಯರಶ್ಮಿಯ ತೋಱುತೆ
ಇದೆ ಚೆಂದಳಿರ ತೊಂಗಲೆಂದವಳ ನುಣ್ಗೆಂದ
ಳದ ಚೆಲ್ವುದೋಱುತಲರ್ಗೇಳ್ವರ್ಗವಳ ಮೋಹ
ನದ ಪೆಂಪನಱಿಪಿ ಮಾತಿನ ಮಾಲೆಗಾರ್ತಿ ತಳೆದಳ್ ಮಾಲೆಗಾರ್ತಿಯನುವಂ ೮೪

ಇಂತಿವುಮೊದಲ್ಗೊಂಡು ಮೆಱೆವ ನಾನಾವಸ್ತು
ಸಂತಾನದಾಪಣಂಗಳನೀಕ್ಷಿಸುತೆ ಬರಲ್
ಮುಂತೆ ನವಿಲುಯ್ಯಲ ಮಕರತೋರಣದ ಝಷಧ್ವಜದ ಸಂಜ್ಞಾಘಂಟೆಯಾ
ತಿಂತಿಣಿಯಿನೆಸೆವ ಮೊಗಸಾಲೆಗಳ ಪೊಂಗಳಸ
ವಾಂತ ಕರುಮಾಡಗಳ ಮಣಿವಂಕದಾರಗಳ
ಹಂತಿಯಿಂದೊಪ್ಪಿದುದು ಮೋಹನಂ ಸಂಚರಿಪ ದಾರಿಯಾ ಸೂಳೆಗೇರಿ ೮೫

ಪುರುಡಿನ ಗರುಡಿ ಸೊರ್ಕಿನಿರ್ಕೆ ಮುಳಿಸಿನ ಬೆಳಸು
ವೆರಗಿನ ವಿಪಂಚಿ ಪಡಪಿನ ಪಂಜರಂ ಬಲ್ಚ
ದುರಚಾವಡಿ ಚಢಾಳದೋಳಿ ಬೇಟದ ಧಾಟಿ ಸಿಂಗರದ ರಂಗಭೂಮಿ
ಅರಲಂಬನಂಗಡಿ ರತಿಯ ರಾಗದೋವರಿ ಪ
ದಿರ ಪಾಳೆಯಂ ಮೇಕಿನಾಕೆ ಗಾಡಿಯ ಗಡಿ ಕು
ಪರಿಯುಪರಿಯೆನಿಪುದಂಗಜನ ಘಾರಾಘಾರಿ ರಾಜಿಸುವ ಸೂಳೆಗೇರಿ ೮೬

ಮದನಾಗಮಂಗೇಳ್ವ ಭರತಮಂ ಪರಿಕಿಸುವ
ಚದುರನುಱಿ ಕಲ್ವ ಸಂಗೀತಮಂ ಸಂಗಳಿಪ
ಮೃದುವಮರೆ ವೀಣೆಗಳ ಬಾಜಿಸುವ ಸೂಳೆವಿನ್ನಣದ ಪಡಿಮಾತಾಡುವ
ಪದೆದು ಶೃಂಗಾರಕಾವ್ಯಮನೋದಿಸುವ ನಾಟ
ಕದ ರಸವನನುಭವಿಪ ಸದಲಂಕೃತಿಯ ಲಕ್ಷ
ಣದ ಸಾರವಱಿವ ಕವಿತ್ರೆಯ ಸವಿವ ಸುಪ್ರೌಢಸುದತಿಯರ್ ಮೆಱೆದರಲ್ಲಿ ೮೭

ನೆತ್ತದೊಳ್ ಬಿತ್ತರಂದೋಱುತೆ ಪಗಡೆಯಲ್ಲಿ
ಪತ್ತಿಸುತೆ ಸುಗುಡುತನಮಂ ಪುದಿದ ಚತುರಂಗ
ದತ್ತ ಚದುರಂ ಪೊದೆಯಿಸುತೆ ಕೊ[೧]ಯ್ಲ್[೧]ವಿಂಡರಂ ಪಣಿದದಿಂ ಮಣಿಯಿಸುತ್ತೆ
ಸುತ್ತೇನೊರಸವಕ್ತ್ರ ಹಾಸ್ಯ ಸಗ್ರಾಮ್ಯೋಕ್ತಿ
ವೃತ್ತಿಗಳನೆಸಪ ಸಖರಿರವಱಿದು ಮನ್ನಿಸುತೆ
ಮ[೨]ತ್ತ[೨]ಶುಕಕೇಕಿಹಂಸಾದಿಗಳೊಡನೆ ಬಿನದಿಸುತ್ತೆಸೆದುದಬಲಾಜನಂ ೮೮

ಮೊಗಸಾಲೆಯಲ್ಲಿ ಕುಳ್ಳಿರ್ದಾಳಿಯರಿನೆಯ್ದೆ
ಪೊಗೆಯಿಡಿಸುತಗುರುಮಂ ಕುಂಕುಮವನರೆಯಿಸುತೆ
ತಿಗರಗತ್ತುರಿಯ ಪುಡಿಗೆಯ್ಸುತೆ ಜವಾದಿಯಂ ತೊಳೆಯಿಸುತೆ ಕರ್ಪೂರಮಂ
ಸೊಗಸೆ ಕಾ[೩]ಲ್ಗ[೩]ಳೆಯಿಸುತೆ ಮೆದಿಸುತ್ತೆ ಸಾದಿನಿಂ
ಪೊಗೆಯ ಗಂಧವನುರ್ದಿಸುತೆ ಪೂವ ಪೊರೆಯಿಸುತೆ
ಬಗೆಗಾರ್ತಿಯೊರ್ವಳೆಸೆದಳ್ ಕೊನಬುಗಳ ಮನವನಲರ್ಗಣೆಗೆ ಗುರಿಮಾಡುತೆ ೮೯

ಶ್ರೀವತ್ಸನಚ್ಯುತಂ ವಾಙ್ಮುಖಂ ಬ್ರಹ್ಮಂ ಶ
ಚೀವರಂ ಮೆಯ್ಗಣ್ಣನುಳಿದುರಗ ನರ ಸುರರ್
ತಾವು ಮನಸಿಜನ ಮಾಱೊಕ್ಕಲಾಗಿರ್ಪರೆನಲೆಮ್ಮೊಡೆಯನೊಡನೆ ಸೆಣಸಿ
ಜೀವಿಪರದಾರಂದು ಗೆಲ್ದಹರನಳವಱಿವೆ
ವೀ ವಾಟದೊಳ್ ಸುಳಿದೊಡೆಂದುಲಿದು ಕೆಲೆದು ವೇ
ಶ್ಯಾವಲಿ ಬೆಸೆವುದಲ್ಲಿ ಕಾಮಿಗಳ್ ಕಣ್ಗಾಣರೆಂಬ ನಾಳ್ಗಾದೆ ಪುಸಿಯೆ ೯೦

---

೧ ಯ್ಗ ೨ ತ್ರೆ (ಅ, ಕ) ೩ ಲ್ಗಿ (ಬ)

ಸಲೆ ಪರವಶದೊಳಾದ ಕೂರುಗುರ ಕೊನೆವಲ್ಲ
ಕಲೆ ಮೆಯ್ಯೊಳಿಲ್ಲದರ್ ಮುಗುಳ್ಗಣೆಯ ಮುದ್ರೆಯು
ಜ್ವಲಿಸದರ್ ನೆಗಳ್ದ ರತಿಯುಂಡಿಗೆಯ ಕುಱುಹನುಱೆ ಧರಿಸದರ್ ನಿಜ ಮೋಹದಾ
ನೆಲೆಯಱಿದು ಸುಖಿಸದರ್ ಮುಸಿದು ಜೀವಿಸದವರ್
ಪಲವೇಂ ಮದನನಾಜ್ಞೆಗಳ್ಕದರ್ ಮೋಹಿಗಳ
ಕುಲಕೆ ಹೊಱಗೆಂದು ನೂಪುರರವದೆ ನಾದಮಂ ಪೊಯ್ವರಂಗನೆಯರಲ್ಲಿ ೯೧

ಪೊಳೆವ ತಣ್ಗದಿರ್ಗಲ್ಲ ಪಸೆಯೊಳೇಳೆಲೆವಾಳೆ
ಯೆಳೆಯೆಲೆಯ ಪಚ್ಚಡಿಸಿ ಸಿರಪಚ್ಚೆಗರ್ಪುರದ
ಹಳಿಯನೊಡೆದಾ ಧೂಳಿಯಂ ಹರಹಿ ಮೇಲೆ ಪನಿನೀರ್ದಳಿದು ತನ್ನಿನೆಯನಂ
ಕಳವಳಿಪ ಕಾಂತೆಯ ಮಲಂಗಿಸಿ ಕಳೇವರಕೆ
ಬಳಿದು ಚಂದನವನಲರ್ವಿಜ್ಜಣದೆ ತಣ್ಣೆಲರ
ಸುಳಿವನೊದವಿಸುತೋಂ ನಮೋ ರತೀಶಾಯಯೆನುತಳವಳಿದುದಾಳೀಜನಂ ೯೨

ಕಾವಂಗೆ ನಮಿಸಿ ಕಾಣ್ಕೆಯನಿರಿಸಿ ರತಿದೇವಿ
ಗೋವೊ ಪಣಮಂ ಪರಸಿಕೊಂಡು ಚೆಂದಿರಗೆಱಗಿ
ದೇವಾಂಗದೆಳೆದೆಗೆದು ಮಧುವನೊಲವಿಂದೆ ಮನ್ನಿಸಿ ಸುಳಿವ ತಣ್ಗಾಳಿಗೆ
ಪೂವಲಿಗೆದಱಿ ಕೋಗಿಲೆಗೆ ಕೊನರನಿಟ್ಟಳಿಗೆ
ಪೂವಿತ್ತು ಗಿಳಿಗೆ ಪಣ್ಗೊಟ್ಟುಳಿದ ತನುಬಲವ
ನೋವಿಯೋರ್ವಳ್ ವಿರಹದುರವಣೆಯನುಡುಗಿಸಿದಳೀವ ಗುಣಮೇಗೆಯ್ಯದೋ ೯೩

ಕೂರಿಸಿ ಮನಂ ಸೋಲ್ತು ಕಾಂತನಂ ಕಾತರದೆ
ಡಾರಿವರಿದೀಕ್ಷಿಸೆ ಛಡಾಳಿಸಿದ ರಾಗದಿಂ
ಭೋರನಮರ್ದಪ್ಪಿ ಚೆಂದುಟಿಯಿತ್ತು ಪುಳಕವಾಂತಾರಯ್ಕೆಯಿಲ್ಲದುಲಿದು
ಮೇರೆದಪ್ಪಿದ ಸೌಖ್ಯದಿಂ ವಿಧಿಪರಕ್ರಮದ
ದಾರಿಗೆಟ್ಟಿಚ್ಚೆವಂದಂತೊಂದಿಯೊರ್ಪಿದಳ್
ನಾರಿಯೊರ್ವಳ್ ನೈವ ಶಾಸ್ತ್ರಂ ನ ಚಕ್ರಮೋಯೆಂಬುಕ್ತಿಯಂ ಸ್ಥಾಪಿಸಿ ೯೪

ಲೀಲೆಯೊಳೊಲಿದು ನೋಡಿದೊಡೆ ಕರಿಯ ಮಲ್ಲಿಗೆಯ
ಮಾಲೆ ಪುಟ್ಟುತಿದೆ ನಸುನಗುತೆ ಮೊಗವೆತ್ತಿದೊಡೆ
ಹಾಲಂತೆ ತನಿವೆಳಗನುಗುಳುತೊಗೆವುತಿದೆ ನೆಱಿದಿಂಗಳಳಿಗಳ ಮೊರಹಿನಾ
ಕೋಲಾಹಲಕೆ ಮುಡಿಯನಲುಗಿದೊಡೆ ಮೊಳಗಮರ್ದ
ಕಾಲಮೇಘಂ ತೋಱುತಿದೆಯಿವಳಿದೇನಿಂದ್ರ
ಜಾಲಕಾರಿಯೊ ರೂಪ ಶೀಲಕಾರಿಯೊಯೆನಿಸಿದಳ್ ಕಾಂತೆಯೊರ್ವಳಲ್ಲಿ ೯೫

ವೀಣೆಯಂ ಬಲ್ಮೊಲೆಯ ಮೇಲೌಂಕಿಕೊಂಡೊಲ್ದು
ವಾಣದೋದುವ ಗಿಳಿಯ ಮುಂಗಯ್ಯೊಳಿಟ್ಟು ಕ
ಟ್ಟಾಣಿಮುತ್ತಿನ ಕಂಠಮಾಲೆಯಂ ಕಟ್ಟಿ ಮಲಯಜವನೊಲವಿಂ ಲೇಪಿಸಿ
ಜಾಣಮರೆ ಪೊಂಬಟ್ಟೆಯುಟ್ಟು ನೀಲಾಬ್ಜಮಂ
ಪಾಣಿಯೊಳ್ ಪಿಡಿದು ಪಡಪಿಂದೊರ್ವಳೊಪ್ಪಿದಳ್
ವಾಣಿಯೋ ಮೇಣಿವಳ್ ಲಕ್ಷ್ಮಿಯೋಯೆಂಬ ಸಂಶಯರಸಮನೊಸೆದೆಸಗುತೆ ೯೬

ಚಂದದಿಂ ಘಣಘಣಿಲ್ದನಿ ಮೊಳೆವ ಸಪುರ ಬಿಳಿ
ದಂ ದೇಶಿ ಮಿಗಲುಟ್ಟು ಮಿನುಪ ಕೆಂಬರಲೋಲೆ
ಯಿಂದೊಗೆವ ಕಾಂತಿ ಕಣ್ಮೊಗಗಳಂ ತೀವೆ ಕೇಸಡಿವೆಳಗು ಸೂಸಿಸುತ್ತುಂ
ಒಂದುಮುಖದೊಳ್ ಸ್ವಸ್ಥವಾಗಿ ನಿಲ್ಲದೆ ಕರಂ
ಸಂದೇಹಿಗಳ ಚಿತ್ತದಂತೆ ಮೆಱೆವುಯ್ಯಲೊಳ್
ನಿಂದೊರ್ವಳೊಲೆದಾಡುತಮುಮು ಹಾರುವ ಹಂಸೆಯಂದಮನದೇಂ ಪಡೆದಳೋ ೯೭

ಎನಿತೂರ್ಧ್ವಮುಖವಾಗಿ ನಡೆವರಂ ಕಾಮಿನಿಯ
ರನಿತದಃಕರಿಸದೆಬಿಡರ್ ತಮ್ಮ ಕೂಡಿನಿಸು
ಬಿನದಿಸಿದೊಡಂತದರ್ಕಿದೆ ಸಾಕ್ಷಿಯೆಂಬಂತೆ ಮೇಗಣ್ಗೆ ಪಾಯ್ವ ಸೆಂಡಂ
ವನಿತೆಯೊರ್ವಳ್ ಕೀಳ್ಪಡಿಸಿ ಪೊಯ್ಯೆ ತಾಂ ಕುವಿಟ
ಜನದಂತದರ್ಕುರ್ಬಿ ಪುಟವೇಱಿತೀಯಚೇ
ತನಕಂದುಕಕೆ ಕಾಂತೆಯರೊಳಿನಿತು ಚೇಷ್ಟೆ ಗಡ ಜೀವಿಗಳದೇ ಗೆಯ್ಯರೋ ೯೮

ಬಗಸೆಗಣ್ ಬಟ್ಟಬಲ್ಮೊಲೆಯ ನಳಿತೋಳ ಬಂ
ದುಗೆವಾಯ ತೆಳ್ಗದಂಪಿನ ನುಣ್ಗೊರಲ ಮುದ್ದು
ಮೊಗದ ಸುಲಿಪಲ್ಲ ಸುಳಿಗುರುಳ ಪೆಱೆನೊಸಲ ತೆಳ್ವಸುಱಿ ಸೊಕ್ಕಾನೆನಡೆಯಾ
ನೆಗಳ್ದ ಪೊಂಬಾಳೆದೊಡೆಗಳ ತೋರ ಪೊಱವಾಱ
ಸೊಗಯಿಸುವ ಸಣ್ಣ ಬಾಸೆಯ ಕಿರುವರೆಯದ ಸೆ
ಳ್ಳುಗುರ್ವೆರಲ ಗಣಿಕೆಯರೆಸೆದರಲ್ಲಿ ಜೀವಂಬಡೆದ ಪೂಗಣೆಗಳೋಯೆನೆ ೯೯

ಈ ಪರಿಯೊಳಖಿಳಭಕ್ತರ್ವೆರಸು ಜಿತಪುಷ್ಪ
ಚಾಪರೂಪಂ ಪುರವಿಲಾಸಮುಂ ನೋಡುತೆ ಸು
ಖೋಪಚಯಮುಂ ತನ್ನ ಕಂಡರ್ಗೆ ಕಾಣಿಸುತೆ ಬಂದಾತ್ಮಗೃಹದ ಮುಂದೆ
ಆ ಪವನವೇಗಿವಾಜಿಯನಿಳಿದು ಸದುಚಿತ
ವ್ಯಾಪಾರದಿಂದೆಲ್ಲರಂ ಕಳಿಪಿ ಶಿವಸಮಯ
ದೀಪಕಂ ನಿಜ ಕುಟುಂಬಂಗೂಡಿಯಂತವುರವೆಯ್ದಿ ಶಿವಸುಖದೊಳಿರ್ದಂ ೧೦೦

ಮದಕುಧರವಿದಳನಭಿದುರ ಪರಮ ಶಿವಭಕ್ತ
ಪದಶತದಳಾದಭ್ರಮಕರಂದಲೀಲಾಪ್ರ
ಮದ ಪರವಶೀಭೂತಮಧುಕರೋಪಮ ಪದ್ಮಣಾಂಕಪ್ರಣೀತವಾಗಿ
ಸದಮಳಾಖಿಲಶಾಸ್ತ್ರಸಾರಮೆಂದೆನಿಸುವ
ಭ್ಯುದಯಕರ ಪದ್ಮರಾಜಪುರಾಣಕಥೆಯೊಳಿಂ
ತಿದು ಗುರುಶರಣವಚನಪಾಲನಾರ್ಥಂ ವಿನೋದಿಸಿದೆಂಟನೆಯ ಸುಸಂಧೀ ೧೦೧

ಈಶಾಪರಾವತಾರನ ವಿಬುಧನುತನ ಭವ
ಪಾಶನಾಶಕ ಕೆಱೆಯ ಪದ್ಮಣಾರ್ಯನ ಲಸತ್
ಶ್ರೀ ಶಿವಾದ್ವೈತಸಾಕಾರಸಿದ್ಧಾಂತಪ್ರತಿಷ್ಠಾಪನಾಚಾರ್ಯನ
ಈ ಶುದ್ಧ ಚರಿತಮುಂ ತಿಳಿಪಿದರ್ಗೋದಿದ
ರ್ಗಾಶೆಯಿಂ ಕೇಳ್ದರ್ಗೆ ಭುಕ್ತಿಮುಕ್ತಿಗಳಂ ಮ
ಹಾ ಶುಭಂಗಳನಾಯುವಂ ಕೊಟ್ಟು ಗುರುರೂಪವಿಶ್ವನಾಥಂ ರಕ್ಷಿಪಂ ೧೦೨

ಅಂತು ಸಂಧಿ ೮ ಕ್ಕಂ ಪದಂಗಳ್ ೬೦೬ ಕ್ಕಂ
ಮಂಗಳಮಹಾಶ್ರೀ

ಶ್ರೀ

ಒಂಬತ್ತನೆಯ ಸಂಧಿ

ಸೂಚನೆ : ಇರದಂಧ್ರದೇಶದಿಂ ಬಂದು ವೈಷ್ಣವವಾದಿ
ಹರಿಯೆ ಪರವೆಂದು ಭೂವರಗೃಹದ್ವಾರದೊಳ್
ಬರೆದು ಪತ್ರಂಗಟ್ಟಿ ಕೇಳ್ದು ವಾದಕ್ಕೆ ನೃಪಸಭೆಗೆಯ್ದಿದಂ ಗುರುವರಂ

ಸ್ವಚ್ಛಂದಚರಿತ ಭಕ್ತಾಚ್ಛತರಚಿತ್ತರುಂ
ದ್ರೇಚ್ಛಾಪ್ರವರ್ತಕ ಲಸಚ್ಛಾಂತಿರಸಮುಖ ಕ
ನಚ್ಛೂಲಶೋಭಿತೋದ್ಯಚ್ಛುಭಂಕರ ಗರ್ಹಿತಚ್ಛದ್ಮಯುಕ್ತದೂರಾ
ಸಚ್ಛಂಖಸನ್ನಿಭತನುಚ್ಛಾಯಭರ್ಗ ಹಿಮ
ವಚ್ಛಿಖರಿಜಾಗುರುಕುಚಚ್ಛನ್ನಹಸ್ತಾಜಿ
ನಾಚ್ಛಾದನ ವಿನತಾಘಚ್ಛೇದಶಕ್ತಜಯ ಮಚ್ಛರಣ ವಿಶ್ವನಾಥಾ ೧

ಮುಂಗಾಣದಜ್ಞಾನಿವಾದಿ ಪತ್ರಾಲಂಬ
ನಂಗೆಯ್ಯೆ ಗುರುವವನ ಗರ್ವತಿಮಿರವನಲೆದು
ತುಂಗಾಭ್ಯುದಯನಾಗಿ ಸುಪಥವನಿಳೆಗೆ ತೋರ್ಪುದಂ ತಾಂ ಮೊದಲೆ ಸೂಚಿಪ
ಪಾಂಗಿಂ ತಿಮಿರವನಲೆದಭ್ಯುದಯವಾಗಿ ಸುಪ
ಥಂಗಳನಿಳೆಗೆ ತೋಱಿ ರವಿಯೆಸೆದನದಱಿಂದೆ
ಮುಂಗರುವರರಸನೀಶಾರ್ಚನನುಸಗಿ ಶರಣಸಂಗದೊಳ್ ಸುಖಮಿರುತಿರೆ ೨

ಪರದೇವತಾಪೂಜೆ ನೋಡುವೊಡೆ ಗೀರ್ವಾಣ
ದಿರವು ಪರವಧುವಿನೊಳ್ ಬೆಚ್ಚಬೇಟಂ ನತರೊ
ಳುರುತರಾಸುರವೃತ್ತಿ ಪರಿಕಿಸಲ್ ಮಾನಿಸಿಕೆ ಇನಿಸಾಸುವಿಲ್ಲ ಸಕಲ
ನರರ ಸಂಗದೊಳಬದ್ಧತೆಯಪ್ರಮಾಣಕದ
ಚರಿತಮೆಂದುಂ ಜೀವಹಿಂಸೆಯೀ ಕೆಱೆಯ ಪ
ದ್ಮರಸನೇನೊಳ್ಳಿದನೊಯೆಂದು ಧರೆಯೊಳ್ಕೀರ್ತಿಸತಿ ದೂಱಿದಳ್ ಪ್ರೌಢಿಯಿಂ ೩

ಇಂತು ಜಸವೆತ್ತೆಸೆವ ಗುರುವರನ ವಾರತೆ ದಿ
ಗಂತಂಗಳೊಳ್ ತೀವೆ ಕೇಳ್ದು ವೈಷ್ಣವ ದರ್ಶ
ನಾಂತರಶ್ರೇಷ್ಠನಂಧ್ರಪ್ರದೇಶಸ್ಥಂ ತ್ರಿಭುವನತಾತಾಖ್ಯನೊರ್ವಂ
ಸಂತತಂ ಸಕಲ ಸಮಯಿಗಳನೆಬ್ಬಟ್ಟಿ ನಿ
ಶ್ಚಿಂತೆಯಿಂ ಶೌರಿಸಮಯಸ್ಥಾಪನಂಗೆಯ್ದು
ನಂತ ದುರ್ಬೋಧದಿಂ ಸಕಲ ಜನರಂ ಶಿಷ್ಯರಂ ಮಾಡಿದತಿಗರ್ವದಿಂ ೪

ಮೃಡಮೂರ್ತಿಯಳವನಿನಿಸಾನುಂ ವಿಚಾರಿಸದೆ
ಘುಡುಘುಡಿಸುತಿಂತೆಂದನೀ ಕಡಲುಡಿಗೆಯಾದ
ಪೊಡವಿಯೊಳಗುಳಿದ ಸಮಯಿಗಳ ಮಾತಂತಿರ್ಕೆ ಕಡೆಗೆ ಪರಿಭಾವಿಸುವೊಡೆ
ಸಡಿಫಡ ಸಮಸ್ತ ವಿದ್ವತ್ಸಭಾಮಧ್ಯದ
ಲ್ಲುಡುಗದೆನ್ನಾಣೆ ಘೋಷಣೆ ಸಲ್ವ ವಿಭವದಿಂ
ನಡೆವೆನ್ನ ಮುಂದೊರ್ವ ವಾದಿಗೀದಿಯ ಸುದ್ದಿ ಬರ್ಪುದಿದು ಚೋದ್ಯಮಲ್ತೇ ೫

ಗುರುವಂಶದೊಳ್ ಜನಿಸಿದಂ ಗಡ ಸಮಸ್ತಭೂ
ಸುರರೊಡನೆ ವಾದಿಸಿ ನೃಸಿಂಹಬಲ್ಲಾಳಭೂ
ವರನ ಸಭೆಯೊಳ್ ದೃಷ್ಟಮಂ ತೋಱಿ ಹರಮತಸ್ಥಾಪನಂಗೆಯ್ದಂ ಗಡ
ನರಪಂ ತಟಾಕಕಿತ್ತರ್ಥಮಂ ಸೂಳೆಗಂ
ಹರವೇಷದಿಂ ಬಂದೆರೆಯೆ ಕೊಟ್ಟು ಪಾಳ್ನೆಲದೊ
ಳರರೆ ಭಸ್ಮಂದಳಿದು ಕೆಱೆ ಗರ್ದೆ ತೋಂಟವೊಳಗಾದವಂ ಪಡೆದಂ ಗಡ ೬

ಮನಸಿಜಾರಿಯನೊಲಿಸಿ ಪನ್ನೆರಡು ಪೊಂಗಳಂ
ದಿನದಿನಕೆ ಪಡಿಯಾಗಿ ಪಡೆದು ತದ್ದ್ರವ್ಯದೊಳ
ಗೆನಿತು ಬಗುತರ್ ಬಂದೆರೆದೊಡವರ್ ಬೇಡಿದುದನಿಲ್ಲೆನ್ನದೀವಂ ಗಡ
ವಿನುತವೇದಾದ್ಯಖಿಲಶಾಸ್ತ್ರಂಗಳಱಿಕೆಯೊಳ್
ತನಗೆ ಸರಿಯಾರುಮಿಲ್ಲೆಂದು ಡಂಗುರಿಸಿ ಭೂ
ಜನವಂದ್ಯನಾಗಿ ಷಡ್ದರ್ಶನಾದಿಗಳನಂಡಲೆದು ವರ್ತಿಸುವಂ ಗಡ ೭

ಅರರೆ ಶಾಪಾನುಗ್ರಹಾತಿಶಕ್ತಂ ಗಡ ಸು
ಕರ ಶಾಂತಿದಾಂತ್ಯಾದಿ ಗುಣಗಣಾವಳಿಗಳೊರೆ
ದೊರೆದು ನೋಡಿದೊಡೊಂದನಿಸು ಕುಂದು ಪೊರ್ದದಾಚರಿಪಂ ಗಡಿನಿತು ಮಹಿಮೆ
ಹರಸಮಯಿಯೊಳಗೊಗೆವುದೇಯಿದತಿಚಿತ್ರವಾ
ಪರಿಯಿಂ ಬೆಱೆವ ಶೈವನಂ ವಾದಮುಖದಿ ನಾಂ
ಪರಿಭವಂಬಡಿಸದೆ ಬಿಡೆಂ ಬಿಡೆನೆನುತ್ತೆ ಸಿಡಿಮಿಡಿಗೊಂಡು ಗಡಬಡಿಸುತೆ ೮

ಪಾಪಾತ್ಮನುದ್ರೇಕದಿಂದಿಂತು ಗಳಪಿಯಾ
ಕ್ಷೇಪಿಸುತ್ತೊಂದು ಘಟಿಯಾನೆಯೊಳ್ ಸಕಲ ಶಾ
ಸ್ತ್ರಾಪರಿಮಿತೋರು ಪು[೧]ಸ್ತ[೧]ಕನಿಚಯಮಂ ಹೇಱಿಕೊಂಡು ಬಹುವಾದ್ಯಮುಲಿಯೆ
ಚಾಪಲ್ಯರಾದ ಮುಯ್ವುಗಳ ಸೂಡಿನ ಖಲರ್
ಭಾಪು ಮಝು ಜಯ ಜೀಯಯೆಂದು ಕೈವಾರಿಸು
ತ್ತೀ ಪರಿಯೊಳೊಡನೆಯ್ದೆ ಹೊನ್ನಂದಣವನೇಱಿ ರಾಜವದ್ವಿಭವದಿಂದೆ ೯

ಚಾರುತರತೇಜಸ್ವಿನಿಂದಿಂತು ನಡೆಗೊಂಡು
ದಾರಿದಾರಿಗಳೊಳೆಸೆವೂರೂರ ದೊರೆದೊರೆಗ
ಳೋರಣದ ಕಾಣ್ಕೆಗಳನೊಪ್ಪುಗೊಳುತವರ್ಗಳಿಂ ಮನ್ನಿಸಿಕೊಳುತ್ತೆ ಮದದಿಂ
ವಾರಿಧಿ ವಡಬಶಿಖಿಯನಲೆಯಬರ್ಪಂತೆ ಕಾ
ಳೋರಗಂ ಗರುಡನೊಳ್ ಸೆಣಸಬರ್ಪಂತೆ ಸ
ಕ್ರೂರತ್ರಿಭುವನತಾತಂ ಗುರುವಿನೊಳ್ ಪೊಣರ್ವೆನೆಂದುರವಣಿಸುತೆ ಬಂದು ೧೦

---

೧ ಸ್ತ (ಬ)

ಭರದೆ ದೋರಸಮುದ್ರಮಂ ಪೊಕ್ಕು ಮತ್ಸರಿಪ
ಪರಸಮಯಕೋಲಾಹಲಂ ಬಂದನಿದೆ ವಾದಿ
ಶರಭಭೇರುಂಡನಿದೆ ಬಂದನೆಂದಾರ್ಭಟಿಸಿ ಕರೆವ ಕಹಳಾಧ್ವನಿಗಳಿಂ
ಬಿರುದಾವಳಿಯನೋದುತೆಡಬಲದೆ ಬರ್ಪ ಶಿ
ಷ್ಯರ ಗಡಣದಿಂದಧಿಕ ಸಂಭ್ರಮದಿನೆಯ್ತಂದು
ನರಪಬಲ್ಲಾಳನರಮನೆಯ ಪೆರ್ಬಾಗಿಲೊಳಗಂದಳವನಿಳಿದು ನಿಂದು ೧೧

ಎನತು ಸತ್ಯಂ ಸತ್ಯಮಿದು ಪುನಸ್ಸತ್ಯಮೆಂ
ದೆನೆ ನ ದೇವಃ ಕೇಶವಾತ್ಪರೋಯೆಂದೆನ
ಲ್ಕನುನಯಂ ಮಿಗೆ ಕೇಶವಂಗಧಿಕದೈವವಿಲ್ಲಾ ವೈಷ್ಣವವೆ ಶಾಶ್ವತಂ
ಇನಿತರ್ಕೆ ಸಂದೇಹವಿಲ್ಲಿಂತಿದಾ ವ್ಯಾಸ
ಮುನಿಮತವಿದರ್ಕೆ ಸೆಣಸುವ ವಾದಿಯಾವನಾ
ತನ ಮೇಲೆನುತ್ತೊಂದು ಪತ್ರಮಂ ಬರೆದು ತದ್ವಾರದೊಳ್ ಕಟ್ಟಿ ನಲಿದು ೧೨

ಪಾಪಕ್ಕೆ ಹೇಸದಾ ದಾಸನುರ್ವೀಶನ ಸ
ಮೀಪಕ್ಕೆ ಪೋಪ ಸಭ್ಯರ ಕೂಡೆ ತಾಂ ಗಮಿಸಿ
ದಾ ಪರಿಯನೊರೆದಟ್ಟಲೊಡನವರ್ ಬಂದುಸಿರೆ ಕೇಳ್ದು ಕಾಣಿಸಿಕೊಳುತ್ತುಂ
ಓಪ ಸತ್ಕಾರಂಗಳಂ ಮಾಡಿ ಸಮ್ಯಕ್ಸ
ಭಾಪೂಜ್ಯನಾಗಿರ್ಪ ಸಮಯದೊಳ್ ತದ್ವಾದಿ
ಭೂಪಂಗೆ ನುಡಿದನಿಲ್ಲಿರ್ದಪಂ ಗಡ ಶೈವನೊರ್ವನತಿ ಗರ್ವದಿಂದಂ ೧೩

ಪುರಹರನೆ ದೈವವಾ ಪುರಹರನ ಸಮಯವೇ
ವರ ಮುಕ್ತಿಕಾರಣಂ ತಚ್ಛಾಸ್ತ್ರವೇ ಶುಭಂ
ಕರವೆಂದುಲಿದು ಕೆಲೆದು ಬಜಿಯ ಗಡಬಡಗಳಿಂದಜ್ಞರಂ ಕೆಲರನಲೆದು
ಪಿರಿಯ ನಾನೆಂದಹಂಕರಿಸಿಕೊಂಡಿರ್ಪುದಂ
ಪರಿಹರಿಸಿ ವಿಷ್ಣುವೇ ದೈವವಾ ವೈಷ್ಣವವೆ
ಪರವೆಂದು ನಿಲಿಸುತವನಂ ಭಂಗಿಸುವೆನಖಿಲ ವಿಬುಧರ್ ಪುರೇಯೆಂಬಿನಂ ೧೪

ಜನಪಾಲ ಕೇಳ ಲೋಕಾಯತಿಕನಾರ್ಹತಂ
ವಿನುತಬೌದ್ಧೋರುವೈಭಾಷಿಕಂ ಸೌತ್ರಾಂತಿ
ಕನುಮಲ್ಲಿ ನೆಗಳ್ದ ಯೋಗಾಚಾರ್ಯನಾ ಮಾಧ್ಯಮಿಕನಂತೆ ಮೀಮಾಂಸಕಂ
ಅನತವೈಶೇಷಿಕಂ ನೈಯಾಯಿಕಂ ಭಾಟ್ಟ
ನನುಪಮಪ್ರಾಭಾಕರಂ ಸಾಂಖ್ಯ ಪಾತಂಜ
ಲನಿಯುಕ್ತವೇದಾಂತಿ ತನ್ಮತಾಂತರ್ಭೇದಿಭಾಸ್ಕರೀಯಂ ಬಳಿಕ್ಕಂ ೧೫

ವಿಲಸಿತಕ್ರೀಡಾನುಗಬ್ರಹ್ಮವಾದಿಯ
ತ್ಯಲಘುಶಬ್ದಬ್ರಹ್ಮವಾದಿ ವಾಗ್ಗುಂಫನದಿ
ನುಲಿವ ಮಾಯಾಬ್ರಹ್ಮವಾದಿ ಸುಮಹದ್ವೇದವಾದಿ ಪಾಶುಪತವಾದಿ
ಕಲಿಮಹಾವ್ರತವಾದಿ ಕಾಪಾಲವಾದಿಯವಿ
ಚಲಿತತ್ರಿಮೂರ್ತ್ಯಷ್ಟಮೂರ್ತ್ಯಧ್ವವಾದಿಗಳ್
ಸಲೆ ಕಾಲವಾದಿ ಕರ್ಮವಿವಾದಿಯಾಂತರಾಳಿಕವಾದಿ ಶಾಕ್ತವಾದಿ ೧೬

ಕೌಳನುಂ ಯಾಮಳನುಮೆಸೆವ ವೈಖಾನಸಂ
ನೀಲಪಟನುದ್ಯನ್ನಿರೀಶ್ವರಾನೇಕೇಶ್ವ
ರಾಲೋಲಪೌರಾಣಿಕಪ್ರಾತ್ಯಭಿಜ್ಞಾದ್ಯಶೇಷ ಸಮಯಗಳ ಗಡಣಂ
ಲೀಲೆಯಿಂದೆನ್ನೊಳ್ ಸೆಣಸಿ ನಿಗ್ರಹಂಬೊತ್ತು
ಸೋಲಮಂ ಪಡೆದೋಲಗಿಸುತಿರ್ಪರಂತಱಿಂ
ದೀ ಲಿಂಗಧಾರಿಯೆನ್ನಂ ವಾದದಿಂ ಗೆಲ್ದೋಡಿಸಿದರೆಲ್ಲರಂ ಗೆಲ್ದವಂ ೧೭

ತನ್ನಿಂದ್ರಜಾಲದ ಮಹಿಮೆಗಿಹಿಮೆಯಂ ನೋಡು
ವೆಂ ನಿನ್ನರಾಣುವೆಯೊಳುಳ್ಳೆಲ್ಲ ಬಲ್ಲವರ್ಗ
ಳಂ ನಿಖಿಳ ಜನನಿಚಯಮುಂ ಬರಿಸೆನಲ್ಕೆ ಭೂವರನಾ ದುರಾಚಾರಿಯಾ
ಅನ್ನೆಯದ ಮಾತಿಂಗೆ ಮರುಳಾಗಿ ಸೂಳಾಯ್ತು
ರಂ ನೋಡಿ ಸರ್ವರಂ ಕರೆಯಿಮೆನೆ ಪರಿದುಬಂ
ದುನ್ನತವಿವೇಕಿಗಳನತಿಕಜ್ಞರಂ ವಿಪುಳಸಾಮಾಜಿಕಪ್ರತತಿಯಂ ೧೮

ಓದಲೇಂ ಋಗ್ಯಜುಸ್ಸಾಮೋನ್ನತಾಥರ್ವ
ವೇದಜ್ಞರಂ ಸುಶಿಕ್ಷಾ ವ್ಯಾಕರಣ ಕಲ್ಪ
ಸಾದರಜ್ಯೋತಿರ್ನಿರುಕ್ತಸಚ್ಛಂದಷ್ಷಡಂಗಜ್ಞರಂ ರಂಜಿಪಾ
ಆದಿ ಮೀಮಾಂಸಾ ಪುರಾಣ ಸ್ಮೃತಿ ನ್ಯಾಯ
ವೇದಿತೋಪಾಂಗಜ್ಞರಂ ಧನುರ್ವೇದಾರ್ಥ
ವೇದಗಾಂಧರ್ವವೇದಾಯುರಭಿದಾನವೇದೋಪವೇದಾಭಿಜ್ಞರಂ ೧೯

ಕವಿಗಮಕಿವಾದಿವಾಗ್ಮಿಪ್ರಕರಮಂ ಕಲಾ
ನಿವಹಪ್ರಗಲ್ಭರಂ ಸಕಲ ಸಮಯಿಗಳನೊ
ಪ್ಪುವ ಪುರೋಹಿತರಂ ಸಮಸ್ತ ಮಾನ್ಯರ್ಕಳಂ ಷಡ್ದರ್ಶನಾಭಿಜ್ಞರಂ
ತವೆ ಕಾಮಿಕಾದ್ಯಷ್ಟವಿಂಶತಿಗಣನೆಯಿನೊ
ಪ್ಪುವ ತಂತ್ರಕೋವಿದರನಾ ಮಾಂತ್ರಿಕೌಘಮಂ
ವಿವಿಧಭಾವಕರನುದ್ಯದ್ದಂಡನಾಥಮಂಡಳಿಕಸಾಮಂತರ್ಕಳಂ ೨೦

ರಾಜಪುತ್ರರನಧಟರಾಯರಾವುತರಂ ವಿ
ರಾಜಿಸುವ ನಾಯಕರನಾ ಗಾಯಕರನಧಿಕ
ತೇಜಿಷ್ಠರಂ ಸುಭಟರಂ ನಟರನುರುವಣಿಗ್ವರರಂ ಗಣಿಕೆಯರ್ಕಳಂ
ಓಜೆಯಿಂ ನುಡಿವರಂ ಹಾಸ್ಯಮುಖರಂ ಶಸ್ತ
ನೈಜಜ್ಞರಂ ಮೇಣಿವರ್ ಮೊದಲೆನಿಪ ಜನಸ
ಮಾಜಮಂ ಕರೆಯಲೊಡನೆಲ್ಲರುಂ ಬಂದು ನೃಪನೋಲಗದೊಳಮರ್ದೊಪ್ಪಿರೆ ೨೧

ಇಂತು ಮೆಱೆವನುಪಮಸಭಾಮಧ್ಯದೊಳ್ ಸಭಾ
ಕಾಂತಂ ನೃಸಿಂಹಬಲ್ಲಾಳಂ ಕುಮಾರಕುಲ
ಚಿಂತಾಮಣಿಯೆನಿಪ್ಪ ಬಿಟ್ಟಿಭೂಪಂಬೆರಸು ಸಿಂಹಾಸನಸ್ಥನಾಗಿ
ಮುಂತಿರ್ಪ ಸಭ್ಯನೊರ್ವನ ಕೂಡೆ ತದ್ವಾರ್ತೆ
ಯಂ ತಡೆಯದೊರೆದು ಪದ್ಮರಸರ್ಗೆ ಪೇಳೆನ
ಲ್ಕಂತವಂ ಬಂದೆಱಗಿ ವಿಸ್ತರಿಸೆ ಕೇಳ್ದು ಶಿವ ಶಿವ ಮಹಾದೇವಯೆನುತೆ ೨೨

ಪಾಪಿ ಕೆಟ್ಟಂ ಕೆಟ್ಟನಿನ್ನೇಕೆ ಸಂದೇಹ
ವೀ ಪರಿಯೊಳಕಟ ಪತ್ರಾಲಂಬನಂಗೆಯ್ದನೇ
ಪೂರ್ವದೊಳ್ ನೆಗಳ್ದ ತದ್ವ್ಯಾಸನುಂಡ ದುಃಖವನದೇಂ ಕೇಳ್ದಱಿಯನೇ
ಆ ಪಾರ್ವನುರ್ಕಂ ಮುಱಿವೆನೆಂದು ನುಡಿದು ಗಿರಿ
ಚಾಪನಂ ವಿಧ್ಯುಕ್ತಮಾಗಿ ಪೂಜಿಸಿ ಪುಷ್ಪ
ಚಾಪಾರಿರೂಪಂ ನೃಪಾಸ್ಥಾನಕೆಯ್ದಲೆಂದುಜ್ಜುಗಿಪ ಸಮಯದಲ್ಲಿ ೨೩

ಸರ್ವ ಶಿಷ್ಯಪ್ರಕರಮಿರದೇಳ್ದು ಭಯಭಕ್ತಿ
ಪೂರ್ವಕದಿನೆಱಗಿಯವಧಾರೆಲೆ ಮಹಾಮಹಿಮ
ದುರ್ವಾದಿಯಂ ಸೋಲಿಸಲ್ ಸ್ವಾಮಿಪರ್ಯಂತವೇಕೆ ನಿಮ್ಮಡಿಯ ನೆನಹೆ
ಕೊರ್ವಿದರಿವಾದಿಗಳ ಮೂಗನರಿದವರ ವಾ
ಗ್ಗರ್ವಮಂ ಮುಱಿದು ಜಿಹ್ವಾಸ್ತಂಭನಂ ಗೆಯ್ದು
ಖರ್ವಮತಿಶಕ್ತಿಯಂ ಮಸುಳಿಸಿ ಹೃದಯಶಲ್ಯಮಾಗಿ ಬಾಗಿಸದೆ ತಲೆಯಂ ೨೪

ಎನ್ನ ಬಿಡು ತನ್ನ ಬಿಡು ತದ್ವಾದಿಯಂ ಗೆಲ್ದು
ನಿನ್ನ ಪದಯುಗಕೆ ತಂದವನನೆಱಗಿಸುವೆನೆಂ
ದುನ್ನತಧ್ವಾನದಿಂದುಲಿವಖಿಲಶಾಸ್ತ್ರಸಂಪನ್ನಶಿಷ್ಯವ್ರಾತಮಂ
ತಾನ್ನೋಡಿ ಪುಳಕಿಸುತ್ತೀಯಲ್ಪಕೃತ್ಯಕ್ಕೆ
ಪನ್ನಗಧರನ ಪಟ್ಟದಾನೆಗಳ್ ನೀವೆಲ್ಲ
ರುನ್ನಾಡೆ ಬಳಲಲೇಕಾನಿರಲ್ಕೆಂದವರನುಚಿತೋಕ್ತಿಯಿಂ ಮನ್ನಿಸಿ ೨೫

ಅಮಮ ಗಮನೋದ್ಯೋಗಮಂ ಮಾಳ್ಪ ಪದದೊಳ್ ಪ್ರ
ಶಮತಾಂಧಕಾರಪ್ರಚಂಡಪ್ರಭಾಕರಂ
ಸುಮತಿ ಸುಕುಮಾರಪದ್ಮರಸನಷ್ಟಾಂಗದಿಂ ನಮಿಸಿ ಕೈಮುಗಿದುನಿಂದು
ಸ್ವಮತವಿಸ್ತಾರಕ ಕುಸಮಯಸಂಹಾರಕ ವಿ
ಷಮವಿಷಯದೂರಕ ಸುಗಮಕೃಪಾಧಾರಕ ಪ
ರಮಚಿತ್ಪ್ರಪೂರಕ ನತಮನೋವಿಹಾರಕ ನಿಗಮಮಾರ್ಗವಿಸ್ತಾರಕ ೨೬

ಆಚಾರ್ಯಕುಲಚಕ್ರವರ್ತಿ ಸಜ್ಜನಮನ
ಶ್ಲಾಘ್ಯಚಕರವರ್ತಿಯಭಿನವದಕ್ಷಿಣಾಮೂರ್ತಿ
ವಾಚಸ್ಪತಿಪ್ರಣುತವಾಗ್ವಿಲಾಸಸ್ಫೂರ್ತಿ ಶಮಿತಸಂಸಾರಜೂರ್ತಿ
ಪ್ರಾಚುರ್ಯಸಮ್ಯಗ್ಧವಲಕೀರ್ತಿ ಯುಷ್ಮತ್ಪ್ರ
ಭಾ ಚಾರುತರ ಕಟಾಕ್ಷಪ್ರಭಾವದೆ ದಲಾ
ವಾಚಾಲವಾದಿಯಂ ಗೆಲ್ದು ಬರ್ಪೆಂ ಬುಧಸಭಾಚಕ್ರಮುಱಿ ಪೊಗಳ್ವಿನಂ ೨೭

ಸಾದರದೆ ಕಳಿಪೆನ್ನನಲ್ಲಿಗೆನೆ ನಸುನಗುತೆ
ವಾದವೊಂದೆಡೆಯೊಳೊಗೆಯಲ್ಕಲ್ಲಿಗೆಯ್ದುಳಿ
ದಾದ ಕರ್ಮದೊಳಿರ್ಪುದೆಮ್ಮ ಮಾಹೇಶ್ವರರ ಮಾರ್ಗವಲ್ತದುನಿಮಿತ್ತಂ
ಮೋದದಿಂದಾವು ನೋಡಿದಪೆವವನೊಳ್ ನೀಂ ವಿ
ವಾದಮಂ ಮಾಡುವ್ಯೆ ಬಾರೆನುತಖಿಲ ಭಕ್ತ
ಪಾದಾಬ್ಜಮಂ ಸ್ಮರಿಸುತುಂ ಶಿವಾಣುವನುಚ್ಚರಿಸುತೇಳ್ದು ನಡೆಯಲೊಡನೆ ೨೮

ಸಕಲಜನಸೇವ್ಯ ದೋರಾಂಬುಧಿಯ ರಾಮಣ್ಣ
ನಕಲಂಕನುಭಯಕವಿಶರಭಭೇರುಂಡನೆನಿ
ಪ ಕವೀಂದ್ರರಾಘವಂ ಹುಲಿಗೆಱೆಯ ಮಾಯಿದೇವ ಪುರಾಣಭಟ್ಟರಿಸೆವಾ
ಸುಕರ ಗುರುಭಕ್ತಕಾಮಣ್ಣನಭಿಯಾತಿತಿಮಿ
ರಕುಲಸಪ್ತಾಶ್ವವಿಶ್ವಣ್ಣನುದ್ಧತಶಾಸ್ತ್ರಿ
ನಿಕರಭಂಜನ ನಾಗನಾಥಾರ್ಯನತಿರಸಿಕಕರ್ಣಾಭರಣಬುಧವರಂ ೨೯

ಪರಮುಪದವಾಕ್ಯಪ್ರಮಾಣಜ್ಞನಾದ ದೇ
ವರಸ ಪಂಡಿತರನೇಕ ಕಲಾವಿದಂ ಹಂಪೆ
ಯುರುರಾಮಿತಂದೆ ಸನ್ಮೇಧ್ಯ ಜಗದಾರಾಧ್ಯನಾ ನಾಗಿದೇವೋತ್ತಮಂ
ಸ್ಫುರದಷ್ಟಭಾಷಾಕವೀಶ್ವರಂ ಶಿವದಾಸ
ರರರೆ ಶೈವವಿರುದ್ಧಮತದಾವದಾವದಾ
ವರ ಸರಿವರಾದಿಯಾದನುಪಮಿತ ಶೈವವಿದ್ವಜ್ಜನಂ ನಡೆದುದೊಲವಿಂ ೩೦

ಸಾರತರ ಲಸದುದಾತ್ತಪ್ರಭೃತಿ ಸುಸ್ವರೋ
ಚ್ಚಾರಣದಿ ನಾರಣಬ್ರಹ್ಮಣಾದ್ಯಖಿಲಪ್ರ
ಕಾರವೊಬವಲ್ ಪಾಳಿಪದ ಸತ್‌ಕ್ರಮಾದಿಗಳನೆತ್ತಿ ವೇದವನೋದುತುಂ
ಭೋರನಾ ದ್ವಾತ್ರಿಂಶದುಪನಿಷಲ್ಲಕ್ಷಣಮ
ನಾರೈದನುಷ್ಠಿಸುತ್ತುಂ ವೇದಭಾಷ್ಯವನು
ದಾರಮತಿಯಿಂದುಪನ್ಯಾಸಿಸುತ್ತುಂ ಪುರಾಣೋಕ್ತ್ಯರ್ಥಮಂ ಕಥಿಸುತುಂ ೩೧

ರಾಗದಿಂ ಶಂಕಾಸಮಾಧಾನಮಂ ಮಾಡು
ತಾಗಮಮತಪ್ರಶಂಸೆಯುನೆಸಗುತುಂ ಧರ್ಮ
ಭಾಗವನಱಿದು ಶಾಸ್ತ್ರಮಂ ವಚಿಸುತುಂ ಸಕಲ ಪದಸಿದ್ಧಿಗಳನಾಗಿಸಿ
ಯೋಗಮಾ ವ್ಯಾಕರಣಮಂ ಪಠಿಸುತುಂ ವಾಕ್ಯ
ಪೂಗಮಮರಲ್ ಪ್ರಮಾಣಾಧಿಕಪದಾರ್ಥಪ್ರ
ಯೋಗಾಖಿಲವ್ಯವಹೃತಿಗಳಿಂ ಸಮಸ್ತ ತರ್ಕಂಗಳಂ ವಿಸ್ತರಿಸುತುಂ ೩೨

ನವರಸವ್ಯಾಪಾರಮಂ ಭಾವಸಂಚಯಮ
ನವಿಕಲಾರ್ಥವಿಭೇದಮಂ ದಶಪ್ರಾಣಮಂ
ಸವಿಶಾಲರೀತ್ಯಾದಿ ಲಕ್ಷಣಸ್ಪರ್ಶದಿನಲಂಕೃತಿಯನುಚ್ಚರಿಸುತುಂ
ತವೆನಾಂದಿಯಾರ್ಯಾರ್ಯ ಮಿಶ್ರೋದ್ಧಸಖಸಖೀ
ವಿವಿಧ ನಾಯಕನಾಯಿಕಾಪ್ರಪಂಚದೆ ನಾಟ
ಕವನೊರೆವುತುಂ ಸದಷ್ಟಾದಶಾಂಗಾದಿ ವರ್ಣನದೆ ಕಾವ್ಯಮನುಸುರುತುಂ ೩೩

ಚೇತನಾಚೇತನಾ ಶೂನ್ಯಶೂನ್ಯಾಭೇದ
ಭೂತಭೇದಾದಿ ಮಾರ್ಗವನುಸಿರ್ವಶೇಷಮತ
ಜಾತಮುಮನನುವದಿಸುತುಂ ಸ್ವರಗತೋರು ರಾಗವಿವೇಕ ಸತ್‌ಪ್ರಕೀರ್ಣ
ವ್ರಾತ ಪ್ರಬಂಧ ತಾಳ ಸುವಾದ್ಯ ನೃತ್ಯಾದಿ
ರೀತಿಗಳ್ ಲಕ್ಷ್ಯ ಲಕ್ಷಣಮಮರ್ದು ಶೋಭಿಪಂ
ತೋತು ಭರತವನೋದುತುಂ ಮತ್ತುಳಿದ ಕಲಾಳಿಗಳ ನೆಲೆಯಱಿದುಸುರುತುಂ ೩೪

ಚಮಕಾನ್ವಿತಂ ಲಸಚ್ಛ್ರೀರುದ್ರಮಂ ಶಾರ
ಭ ಮಹಾನುತಿಯನಾ ಮಹಾನಾಟಕವನೊಪ್ಪು
ವಮಲಿನ ವ್ಯಾಸಾಷ್ಟಕಮನುಜ್ವಲಿತ ಶಿವಸಹಸ್ರನಾಮವನಳ್ತಿಯಿಂ
ಪ್ರಮುದಿತಸ್ತುತಿಸೂಕ್ತಿಮಾಲೆಯಂ ಬ್ರಹ್ಮಾಷ್ಟ
ಕಮನತ್ಯಧಿಕ ಮಹಿಮ್ನವನುಃದ್ಭಟಸ್ತುತಿ
ಪ್ರಮುಖ ಶೈವಸ್ತವಂಗಳನೆಮ್ಮ ಬಸವೇಶ್ವರಾದಿಗಳ ಗೀತಂಗಳಂ ೩೫

ವರನಿಜೋಕ್ತಿಗಳಂ ಹರೀಶಾದ್ಯಖಿಲಶಿವೈ
ಕ್ಯರ ಗದ್ಯಪದ್ಯಪದಸತ್ಪ್ರಬಂಧಾದಿಗಳ
ನುರು ಮಾನಿತ ಪದ ಪದಸಂಧಾನಮರ್ಥಪ್ರತೀತಿ ಕವಿಹೃದಯಮೆಂಬ
ಪರಿಯನಱಿದೋದುತುಂ ಶಿಷ್ಯರ್ಕಳುಂ ಭಕ್ತ
ವರರುಮೊಡನೊಡನೆಯ್ದಿ ಪಿರಿಯರ್ ಪರಕೆಯಂ ಕುಡುತೆ
ಬರಲುಘೇ ಚಾಂಗುಬಲ ಜಯಜೀಯಯೆನುತೆ ಪರಿಜನ ಪುರಜನಂ ನಡೆತರೆ ೩೬

ತಾಳಲಯಸಂಗೀತವಾದ್ಯಯತಿಗಳ ಗತಿಗೆ
ಪಾಳಿದಪ್ಪದೆ ನರ್ತನಂಗೆಯ್ದು ಕೇಳಿಸುವ
ಕೇಳಿಕೆಗಳಿಂ ವ್ಯಾಸಹಸ್ತ ವೃಷಭಧ್ವಜಂಗಳನಾಂತು ಬರ್ಪವರ್ಗಳಿಂ
ಓಳಿಯಿಂ ನಡೆವ ವೀರಗಣಂಗಳಿಂ ಛತ್ರ
ತಾಳವೃಂತೋದ್ಧಚಾಮರಮುಖಾನೇಕ ವಿಭ
ವಾಳಿಯಿಂ ಶಂಖ ಘಂಟಾ ಕಾಹಳೀ ಡಿಂಡಿಮಾದಿ ವಾದ್ಯಪ್ರಕರದಿಂ ೩೭

ಸಕಲ ಶಾಬ್ದಿಕಸಾರ್ವಭೌಮನುದ್ಧತವಾದಿ
ನಿಕರ ವೇಶ್ಯಾಭುಜಂಗಂ ಸಕಾರ್ಕಶ್ಯತಾ
ರ್ಕಿಕಚಕ್ರವರ್ತಿ ವಿಲಸದ್ ವೈಖರೀ ವಾಸುಕೀಂದ್ರನೆಂದೆನಿಪನೇಕಾ
ಪ್ರಕಟತರ ಬಿರುದಾಂಕಮಾಲಾವಿಶಾಲ ಜ
ಲ್ಪಕ ಪಾಠಕೌಘ ಪರಿವೃತನಾಗಿ ಪೌರಭ
ಕ್ತಕುಲಾಂಗನೆಯರೆತ್ತುವಾರತಿಗಳಂ ಕೈಕೊಳುತೆ ಬಂದು ಘನವಿಭವದಿಂ ೩೮

ಗುರುಕುಲಾಗ್ರಣಿ ಕೆಱೆಯ ಪದ್ಮಣಾರ್ಯರ್ಗಂ ಸುತಂ
ಬೆರಸರಮನೆಯ ಬಾಗಿಲಂ ಪುಗುವ ಸಮಯದ
ಲ್ಲಿರದೆ ಮುಂಗುಡಿಯವರ್ ದೇವಕೇಳ್ ವಾದಿ ಕಟ್ಟಿದ ಪತ್ರವಿರ್ದಪುದೆನೆ
ಹರನ ಕಲ್ಪಾಂತಕಾಲದ ಭಾಳನೇತ್ರದಂ
ತುರಿದೇಳ್ದದಂ ಕಿಳ್ತು ಬಿಸುಡಿಮೆನಲೊಡಮವರ್
ಪರವಾದಿಯುರುಜಿಹ್ವೆಯಂ ಕೀಳ್ವವೋಲ್ ಕೀಳಲೊಡನವಂ ಬಂದು ನಿಂದು ೩೯

ಆಂ ಕಟ್ಟಿದೀ ಮಹಾಲೇಖವನ್ನೆನ್ನನಿನಿಸುಂ ಕೇಳ
ದೇಕೆ ಬಿಡಿಸಿದೆಯುಸಿರುಸಿರ್ ನಿನ್ನ
ಬಿಂಕವನೆಲೆಲೆ ಭಸ್ಮಧಾರಿಯೆನೆ ಕೇಳ್ ವ್ಯಾಸಭೃತ್ಯ ನೀಂ ನಂದೀಶನಾ
ಕಿಂಕರರನೆಮ್ಮನಱಿಯಾ ನಿನ್ನನಾಳ್ವ ದೈ
ವಂ ಕರಮುದಾರ್ಗೆ ತೊತ್ತಾಗಿ ಬೆಸಗೆಯ್ವುದಾ
ಶಂಕರನ ಘನವನೆಲ್ಲರ್ ಮೆಚ್ಚೆ ನೃಪಸಭೆಯೊಳೊರೆದಪೆಂ ಬಾರೆನುತ್ತೆ ೪೦

ಸದಮಲಾನಂದದಿಂ ಬರ್ಪೆಡೆಯೊಳಾ ನೃಪತಿ
ಇದಿರ್ವಂದು ವಂದನಾದ್ಯುಚಿತ ಸತ್ಕಾರಮಂ
ಪದುಳದಿಂ ನೆಗಳ್ದು ಕೊಂಡೊಯ್ದುನ್ನತಾಸನಂಗುಡೆ ಶಿವಗಣಾಳಿಸಹಿತಂ
ವಿದಿತಾತ್ಮಜಂಗೂಡಿ ಗುರುವರಂ ಮೂರ್ತಿಗೊಳೆ
ಪದಪಿನಿಂ ನಿಜ ನಿಯೋಗಂ ಬೆರಸು ಸಿಂಹಪೀ
ಠದೊಳರಸನೊಪ್ಪೆ ವಾದಿಕುಲಾನ್ವಿತಂ ದಾಸನಾ ಸಮ್ಮುಖದೊಳಮರ್ದಿರೆ ೪೧

ಮದಕುಧರವಿದಳನಭಿದುರಪರಮಶಿವಭಕ್ತ
ಪದಶತದಳಾದಭ್ರಮಕರಂದಲೀಲಾಪ್ರ
ಮುದಪರವಶೀಭೂತಮಧುಕರೋಪಮಪದ್ಮಣಾಂಕಪ್ರಣೀತಮಾಗಿ
ಸದಮಳಾಖಿಲಶಾಸ್ತ್ರಸಾರಮೆಂದೆನಿಸುವ
ಭ್ಯುದಯಕರ ಪದ್ಮರಾಜಪುರಾಣಕಥೆಯೊಳಿಂ
ತಿದು ವಾದಖಂಡನಾರ್ಥಂ ಗುರು ನೃಪನಸಭೆಗೆ ಬಂದೊಂಬತ್ತನೆಯ ಸಂಧಿ ೪೨

ಈಶಾಪರಾವತಾರನ ವಿಬುಧನುತನ ಭವ
ಪಾಶನಾಶನ ಕೆಱೆಯ ಪದ್ಮಣಾರ್ಯನ ಲಸತ್
ಶ್ರೀ ಶಿವಾದ್ವೈತಸಾಕಾರಸಿದ್ಧಾಂತಪ್ರತಿಷ್ಠಾಪನಾಚಾರ್ಯನಾ
ಈ ಶುದ್ಧಚರಿತಮಂ ತಿಳಿಪಿದಗೊರ್ೀದಿದ
ಗರ್ಾಶೆಯಿಂ ಕೇಳ್ದರ್ಗೆ ಭುಕ್ತಿಮುಕ್ತಿಗಳಂ ಮ
ಹಾ ಶುಭಂಗಳನಾಯುವಂ ಕೊಟ್ಟು ಗುರುರೂಪ ವಿಶ್ವನಾಥಂ ರಕ್ಷಿಪಂ ೪೩

ಅಂತು ಸಂಧಿ ೯ ಕ್ಕಂ ಪದಂಗಳು ೬೪೯ ಕ್ಕಂ
ಮಂಗಳಮಗಮತ್
ಶ್ರೀ

ಹತ್ತನೆಯ ಸಂಧಿ

ವಚನ : ಈ ವಾದಪ್ರಕರಣದೊಳ್ ಸಕಲ ವೇದೋಪನಿಷತ್ಪುರಾಣ ಸ್ಮೃತೀತಿಹಾಸಾಗಮಾದಿಗಳೊಳೆಂತೊರೆದವಂತೆ ಪೇಳ್ದೆನಲ್ಲದೆಯೆನ್ನ ವಾಗ್ಬಲದಿಂದ ರ್ಥಾತಿರೇಕಮಂ ಪೇಳ್ದುದಿಲ್ಲವಱವಱ ಸಾಕ್ಷಿವಾಕ್ಯಂಗಳನಾ ಪದಂಗಳ ಮುಂದೆ ಮುಂದೆ ಬರೆದೊಡೆ ಗ್ರಂಥಭಾರಮಪ್ಪುದೆಂಬ ಭಯದಿಂ ಬಿಟ್ಟು, ಕಥಾಭಾಗವಾಗಿರ್ದ ಕೆಲವಂ ಗ್ರಂಥನಾಮವಂ ಸೂಚಿಸುತ್ತಂ, ಕೆಲವು ವಿಧಿವಾಕ್ಯಂಗಳಾಗಿರ್ದ ಗ್ರಂಥಂಗಳಂ ಸರ್ವಾಂಶಮಾಗಿಯುಂ ಶ್ರುತಿಪುಚ್ಛಮಂ ಕಾಣಿಸಿಯುಂ ವಾಕ್ಯ ವೇಷ್ಟನಮಂ ಮಾಡುತ್ತಂ, ಕೆಲವು ಪ್ರಾಸಂಗಿಕಂಗಳಾದ ಗ್ರಂಥಂಗಳಂ ತಾತ್ಪರ್ಯ ಮಾಗಿ ಸಂಗ್ರಹಿಸುತ್ತಂ, ಕೇಶವಾತ್ಪರಃ ಎನಲ್ ಎಂದಿಂತುಳ್ಳ ಸಂಧಿಗಳನೀ ಕೃತಿ ವರ್ಣಕಮಾದುದಱಿಂ ಸುಮುಖೋಚ್ಚಾರಣಾರ್ಥಂ ಕೇಶವಾತ್ ಪರೋಯೆನಲ್‌ಯೆಂದೀ ಪ್ರಕಾರದಿಂ ಪ್ರಯೋಗಿಸಿ ಬರೆಯುತ್ತಂ ಬಂದೆವದು ವಿಸರ್ಗಾಂತಮಾಗಿಯೋದಿದೊಡಂ ಬಂದಪುದಾಗಿ ದೋಷಮಲ್ತು. ಈ ಎಲ್ಲಾ ಲಕ್ಷಣಮಂ ಬುದ್ಧಿಮಂತರಾದ ಮಹಾತ್ಮರಾರೈದು ನೋಡಿಕೊಂಬುದು.

ಸೂಚನೆ : **ಶ್ರುತದಿಂದೆ ನಿಗ್ರಹಸ್ಥಾನದಿಂದೀಶ್ವರಂ**
ಗಿತರ ದೈವಂಗಳೆಣೆಯಲ್ಲೆಂಬುದಂ ನಿಲಿಸಿ
ಮತಿಗೆಡಿಸಿ ವಾದಿಗಪಜಯಮೊಸಗಿ ಸಭೆಯಮೆಚ್ಚಿಸಿಪದ್ಮಣಾರ್ಯನೆಸೆದಂ

॥ನಿರೋಷ್ಠ ಪದ॥ಶಕ್ರಾದಿ ನಿರ್ಜರಕಿರೀಟರತ್ನಾಳಿಘೃ
ಣ್ಯಾಕ್ರಾಂತಚರಣಸರಸಿಜ ಕನತ್ಕಾಲಗಲ
ಚಕ್ರೇಶಧರ ಲಸಚ್ಛೃಂಗಾಟಕಸ್ಥಲಾಂತಶ್ಚರನ್ನೈಜತೇಜಾ
ಚಕ್ರಕರತನಯ ಲಸಿತಶರೀರ ಗಹನದಹ
ನಕ್ರಿಯಾಜ್ಞಾನ ಘನಕಾಶೀಶ ಸಂಸಾರ
ನಕ್ರಾಸ್ಯಗತನನೆನ್ನಂ ರಕ್ಷಿಸಾನತಜನಾಕ್ರಂದನತಿರಸ್ಕರಾ ೧

ವಿಸ್ತರಿಪನಾವನಾಭೂಪಾಲಸಭೆಯನಾ
ಪ್ರಸ್ತುತದೊಳೊರ್ವರುಂ ಬಾಯ್ಮಿಡುಕದಂದದಿಂ
ಶಸ್ತತರಮಾಗಿ ಕಟ್ಟಿಗೆಕಾಱರೆಲ್ಲರುಲಿಪಂ ಮಾಣಿಸಲ್ಕಂತದು
ನಿಸ್ತರಂಗಾಯಮಾನಾಬ್ಧಿಯಂತೆಸೆಯೆ ತತ್
ಪ್ರಸ್ತಾವದೊಳ್ ವಾದಿಯೆಂದನೆಲೆ ನೃಪತಿ ಪರ
ವಸ್ತು ಹರಿಯೆಂದು ಬರೆದಾಂ ಕಟ್ಟಿದೋಲೆಯನಿವಂ ಪರಿಕಿಸದೆ ಬಿಡಿಸಿದಂ ೨

ಪೆರ್ವಾಗಿಲೊಳ್ ತಡೆದೊಡಂ ಸಭಾಮಧ್ಯದೊಳ್
ನಿರ್ವಹಿಪೆನೆಂದು ಬಂದಿರ್ದಪಂ ತನ್ನಧಿಕ
ಗರ್ವವನಱಿವೆನೀರ್ವರೊಳಗಾವನಾದೊಡಂ ವಾದಮುಖದಿಂ ಸೋಲ್ತವಂ
ಕೊರ್ವನುಳಿದಾತ್ಮಮತದಾಚರಣಮಂ ಬಿಸು
ಟ್ಟೊರ್ವಂಗೆ ಶಿಷ್ಯನಾಗದೆ ಪೋಗಬಾರದೀ
ದುರ್ವಹದ ಭಾಷೆಯಂ ಬರೆಯಿಸುಭಯಾನುಮತಪೂರ್ವಕದಿನೆನೆ ತನ್ನೃಪಂ ೩

ಅಂತದನೊಡಂಬಟ್ಟು ಕೆಱೆಯ ಪದ್ಮರಸಾರ್ಯ
ರಂ ತಡೆಯದೀಕ್ಷಿಸಲೊಡಂ ನಸುನಗುತ್ತಾತ
ನೆಂತೊರೆದನದನೊಡಂಬಟ್ಟೆವೆನೆ ತದ್ಭಾಷೆಗಳನೋಲೆಯೊಳ್ ಬರೆಯಿಸಿ
ಸಂತಮಿರ್ಪನಿತಱೊಳ್ ನಿಜ ಶಿಷ್ಯರಿಂದವೋ
ರಂತವಂ ಕಟ್ಟಿದಾ ಪತ್ರಮಂ ಕೊಡಿಸೆ ಭೂ
ಕಾಂತನದನೋದಿಸಲ್ಕಲ್ಲಿ ಸತ್ಯಂ ಸತ್ಯಮೆನೆ ಪುನಸ್ಸತ್ಯಮೆನುತುಂ ೪

ಸಲೆ ನ ದೇವಃ ಕೇಶವಾತ್ಪರೋಯೆಂದೆನಲ್
ಜಲಜಾಂಬಕಂಗಧಿಕದೈವವಿಲ್ಲಿಂತಿದು
ಜ್ವಲಿಸುವಾ ವ್ಯಾಸಮತವಲ್ತೆಂಬನಾವನಾತಂಗೆ ಕಟ್ಟಿದುದಿದೆಂದು
ಉಲಿಯಲ್ಕೆ ಕೂಡೆ ಮತ್ತಿಂತೆಂದನಾ ಪಾಪಿ
ಎಲೆ ಶೈವವಾದಿ ಕೇಳಿದು ಪತ್ರದರ್ಥವಿ
ನ್ನಲಘುತರ ವೇದ ವೇದಶಿರಃ ಪುರಾಣಾದಿ ಶಾಸ್ತ್ರಂಗಳೊಳ್ ಪರಿಕಿಸೆ ೫

ವರ ಮೋಕ್ಷದಂ ಜ್ಞಾನದಂ ಸರ್ವಜನಕಂ ಸು
ಕರನಯೋನಿಜನಚ್ಯುತಂ ವೇದವೇದ್ಯನುರು
ತರಚರಣದೊಳ್ ಗಂಗೆಯಂ ಪೆತ್ತವಂ ಭಂಗರಹಿತಂ ಸ್ವತಂತ್ರಚರಿತಂ
ಒರೆಯಲೇಂ ಧ್ಯೇಯಂ ವಲಂ ಜ್ಞೇಯನಂತಱಿಂ
ಹರಿಯೆ ಪರತತ್ವವೆನೆ ಕೇಳ್ದು ಹರಹರಯೆನುತೆ
ಗುರುವರಂ ತದ್ವಾದಿಗುತ್ತರಂಗುಡಲೆಂದು ಲಟಕಟಿಪ ಸಮಯದಲ್ಲಿ ೬

ಸ್ವಾಮಿಪರ್ಯಂತವೇಕೀ ವಾದಕೆನುತುಮು
ದ್ದಾಮಸುಕುಮಾರಪದ್ಮರಸಾರ್ಯನುರವಣಿಸಿ
ದಾಮೋದರನ ದಾಸನಂ ನೋಡಿ ಮೊದಲಿಂದುವುಂ ಭವತ್ಪ್ರಶ್ನೆಗಳ್ಗೆ
ಏಮಾತೊ ಕುಡುವೆಂ ಸದುತ್ತರವನೀ ನೆರೆದ
ಸಾಮಾಜಿಕರ್ ಪುರೇಯೆಂಬಿನಂ ಕೇಳೆನು
ತ್ತಾ ಮಹಿಮನೊರೆದನಾತಂಗೆ ಛಂದೋವತ್ಪುರಾಣಾನಿಯೆಂಬುಕ್ತಿಯಿಂ ೭

ವೇದದಂತೆ ಪುರಾಣತತಿಯರ್ಥವಂತವಱಿಂ
ಳಾದಿಮ ಪುರಾಣಮಾದಾ ಸ್ಕಾಂದದಲ್ಲಿಯು
ತ್ಪಾದಿತಮೆನಿಪ ಕಾಳಿಕಾಖಂಡದುಕ್ತಿಯಂ ಕೇಳ ತೃಣಬಿಂದುವೆಂಬಾ
ಶ್ರೀ ದಿವ್ಯ ಮುನಿಪನನಿಲಾದರ್ಷಿಗಿಂತೆಂದ
ನಾದರಿಸೆ ಭಗವಾನೆನಿಪ ಸರ್ವವಿತ್ತು ನೀಂ
ಮೋದದಿಂದೆನ್ನ ಸಂಶಯವನಪಹರಿಸಜಹರೀಶ್ವರರ ಮಧ್ಯದಲ್ಲಿ ೮

ಆವಂ ಸಕಲ ಗುಣೋತ್ಕರ್ಷಂ ಬಳಿಕ್ಕೆ ಭೋ
ಗಾವಳಿಗಳಂ ಮೋಕ್ಷವಂ ಕುಡುವನಾವನಿದ
ನೋವಿ ಪೇಳೆನೆ ಲೇಸು ಲೇಸು ನೀಂ ಕೇಳ್ದೀ ಮಹಾಪ್ರಶ್ನೆ ಶಕ್ರಗುರುಗಂ
ಓವೊ ತಿಳಿಪಲ್ ತೀರ್ಗುಮೇಯಂತುಟಾದೊಡಂ
ತೀವಿ ನಿಶ್ಚೈಸಿ ಪೇಳ್ವೆಂ ಸರ್ವ ಗುರುವೀಶ
ನೀ ವಿಷಯಮಾಗೊಂದು ಕಥೆಯೊಳವದೆಂತುಟೆನೆ ನೈಮಿಷಾರಣ್ಯದಲ್ಲಿ ೯

ಮುನಿಮುಖ್ಯರಗ್ರದೊಳ್ ಸಕಲ ಧರ್ಮಜ್ಞನಿಂ
ಪೆನಿಪ ನೀಲೋತ್ಪಲದಳಶ್ಯಾಮನಖಿಲಬುಧ
ವಿನುತಕಾರ್ಯಂ ಮಹಾಭಾರತಾಬ್ಧೀಂದುಪಾರಾಶರ್ಯನೊರ್ಮೆ ಮುದಿಸಿ
ವನಜನೇತ್ರಂಗಧಿಕದೈವವಿಲ್ಲೆಂದು ನುಡಿ
ವನಿತಱೊಳ್ ಕ್ರುದ್ಧಲೋಚನರಾಗಿ ಶಿವಭಕ್ತ
ಮುನಿಗಳೀ ವಾಕ್ಯಮಂ ಕಾಶಿಗೆಯ್ತಂದು ನುಡಿಯೆನೆ ಬಂದು ತತ್ಕಾಶಿಗೆ ೧೦

ಪಿಂದಣಜ್ಞಾನದಿಂದಾ ಮಹಾಮುನಿ ಶಿವನ
ಮುಂದೆ ನಿಂದುದ್ದಕ್ಕೆ ತೋಳೆತ್ತಿಕೂಗಿ ಗೋ
ವಿಂದನಂ ನುತಿಸುತುಂ ಕೇಳಿಮಖಿಲರ್ ಸುರರ್ ಮುನಿಗಳಿದಿರಕ್ಕೆ ಶಕ್ತಂ
ನಿಂದೆನಿದು ಸತ್ಯಮಿದು ಸತ್ಯಮಿದು ಸತ್ಯಮಿದು
ಮಂದರಧರಂಗೆ ಪರವಿಲ್ಲೆಂಬ ಮಾತ್ರದೊಳ್
ನಂದಿಯಿಂದಾತನ ಭುಜದ್ವಯಂ ಸ್ತಂಭಿಸಲಯುತ್ನಗತಿಯಂ ಕಾಣುತೆ ೧೧

ಏನಿದೆಂದುಱದೆ ಶಂಕಿಸಿಯಱಿಯದಧಿಕಚಿಂ
ತಾನಿಷ್ನನಾಗಿ ವಿಹಿತಧ್ಯಾನದಿಂದೆ ಲ
ಕ್ಷ್ಮೀನಾಥನಂ ಶಂಖಚಕ್ರೋರುತರಗದಾಪಾಣಿಯಂ ತಾರ್ಕ್ಷ್ಯಸ್ಥನಂ
ಏನೆಂದಪೆಂ ಪೀತವಾಸನಂ ಶಾಮನಂ
ದೀನನಂ ಘನಚತುರ್ಭುಜನನಾ ರುದ್ರಕೋ
ಪಾನಲೋದ್ಯತ್ತಾಪಿತನನಲ್ಲಿ ಕಾಣಲ್ಕವಂಗೆ ತದ್ವಿಷ್ಣುವೆಂದಂ ೧೨

ಎಲೆಲೆ ದುರ್ಮತಿಯುತವ್ಯಾಸ ಕೇಳಜ್ಞಾನ
ಬಲದಿಂ ಮಹಾದುರಾಲಾಪಂ ನಿನಗೆ ಪುಟ್ಟಿ
ತುಲಿವುದೇನೆನಗಂ ಗುರುಸ್ವಾಮಿಯಾದ ಶಿವನಂ ನಿಂದೆಗೆಯ್ದೆನ್ನನೇ
ಸಲೆ ವೆಗ್ಗಳಿಸಿ ನುಡಿವರೇ ಮೂಢ ಪರಮಾರ್ಥ
ವಿಲುಳಿತೋಕ್ತಿಯನೆನ್ನದಂ ಕೇಳಖಿಲ ಭೂತ
ಕುಲಕೆ ಶಿವನೇ ಗತಿಮತಿಯೆನಿಪ್ಪನಂತಲ್ಲದಧ್ವರಕೆ ಕರ್ತೃವಿಂದ್ರಂ ೧೩

ವೇದಕರ್ತೃವಿರಿಂಚಿಯಾನೇ ಜಗತ್‌ಕರ್ತೃ
ಓದಲೇನೆನಗಾ ಮಹೇಶ್ವರನೆ ಕರ್ತೃವಂ
ತಾ ದೇವದೇವಂಗೆ ಕರ್ತೃವೋರ್ವನುಮಿಲ್ಲ ದೇವಕುಲಕಾನೆ ದೇವಂ
ಮಾದೇವನೆನಗೆ ದೇವಂ ಶಿವನ ಲಿಂಗವೆ
ಲ್ಲಾ ದಿವಿಜದನುಜನರರಿಂ ಪೂಜಿಸಲ್ಪಟ್ಟು
ದಾದಿಶಿವನಿಂ ಪೂಜ್ಯರಾರುಳ್ಳೊಡೆನ್ನೊಡನೆ ನುಡಿಯನ್ಯವಾದಿನಿಕರಂ ೧೪

ಎನ್ನ ಪೆಸರಿಂದವುಂ ಪದ್ಮಜನ ಪೆಸರಿಂದ
ವುಂ ನಾಡೆ ಲಿಂಗವೊಂದೊಂದು ವಾರಣಾಸಿಯೊ
ಳುನ್ನತಸಮಸ್ತೇಷ್ಟಸಿದ್ಧ್ಯರ್ಥವಾಗಿ ಕೃಷ್ಣೇಶ್ವರನುಮೆಂದಿಂತುಟು
ಚೆನ್ನಿಂ ಸಕಲಸುರಾಸುರನರಾದಿಗಳಿಂದ
ಮುನ್ನಿಖಿಲಮನುಮುನಿಗಳಿಂ ಪ್ರತಿಷ್ಠಿತವಾಗಿ
ಮುನ್ನೆಗಳ್ದಿರಲ್ ಮತ್ತೆ ತಚ್ಛಿವಂಗಧಿಕಮುಂಟೆಂಬುದಿದು ಸುವಿವೇಕಮೇ ೧೫

ಒರೆವೆನಿನ್ನೊಂದನೆನ್ನಿಷ್ಟಮುಂ ಕೇಳ್ ವ್ಯಾಸ
ಭರದಿಂದ*ವೋಂ ನಮೋ ವಾಸುದೇವಾಯೆನು
ತರಿದೆನಿಪ ಸಾತ್ವಿಕದಿನೊಲ್ದು ಶಿವಶಾಸ್ತ್ರಾವತಾರಿಣೇ ಯೆಂದೆನುತ್ತುಂ
ಇರದೆ ಶಿವಲಿಂಗಾರ್ಚನವ್ಯಗ್ರಯೆನುತೊಡನೆ
ವರ ಮುದದೆ ಚೇತಸೇ ಶಿವಜನ್ಮನೇ ಯೆಂದು
ನಿರುತಮಾವಂ ನುತಿಪನೀ ಯಥಾರ್ಥೋಕ್ತಿಯಿಂದಾತಂಗೆ ಸುಲಭನಪ್ಪೆಂ ೧೬

ಇಂತು ಶಿವಭಕ್ತನೆಂದೆನ್ನನುಸಿರದೆ ಬೇಱ
ನಂತವಿಧದಿಂ ಶತಾಬ್ದಂಬರಂ ನುತಿಸೆಯುವ
ನಂ ತಿರುಗಿ ನೋಡೆನದಱಿಂದೆನಗೆ ನೀಂ ಬರ್ದುಕನಿಚ್ಛೈಪೊಡಾ ಶಂಭುವಂ
ಮುಂತೆ ಮಱೆವುಗೆನುತೊರೆದಚ್ಯುತನದೃಶ್ಯತ್ವ
ಮಂ ತಾಳೆ ಭೀತಿಯಿಂ ವ್ಯಾಸಂ ತೃಣದವೊಲು ಮು
ರಾಂತಕ ಬ್ರಹ್ಮಾದಿ ದೇವರಂ ಬಿಟ್ಟು ಶಿವನಂ ಪೊರ್ದಿ ಪೊಗಳ್ದನಿಂತು ೧೭

---

* ಓಂ ನಮೋ ವಾಸುದೇವಾಯ ಶಿವಶಾಸ್ತ್ರಾವತಾರಿಣೇ।
ಶಿವಲಿಂಗಾರ್ಚನವ್ಯಗ್ರಚೇತಸೇ ಶಿವಜನ್ಮನೇ ॥

ಆವ ದೇವತೆಗಳಿಂದೀಶ್ವರಂ ಪೂಜ್ಯನ
ಲ್ಲಾವನ್ಯೆ ಶಶಿಚೂಡನಿಂದೆ ಪೂಜಿಸಿಕೊಂಡ
ನೀ ವಿಷಯಕೆತ್ತುಗೆ ಬೆರಲನೆನ್ನಮುಂದು[1]ಸಿ[1]ರ್ಗೆ ಶಕ್ತಿಯಾವಂಗುಂಟವಂ
ಓವೊ ಹರ್ಯಜಸುರಾಸುರರದೇಂ ಕಂಡುದಿ
ಲ್ಲಾ ವಿಲಸದಮೃತಮಥನೋದ್ಭವವಿಷಮುವಿಷಮ
ನಾ ವಿಬುಧಕುಲದೊಳೀಶ್ವರನಲ್ಲದಾರ್ ಕಂಠದೊಳ್ ಧರಿಸಿದರ್ ಬಳಿಕ್ಕಂ ೧೮

ಆವನೊಂದಂಬಿಂ ತ್ರಿಪುರಮುರಿದುದಂಗಜನ
ದಾವನ ನೊಸಲಕಣ್ಣುರಿಯಿನುರಿದನಂಧಕನ
ದಾವನುರುಶೂಲದಿಂ ಭಿನ್ನಾಂಗನಾದನವನೊಡನೆ ಮತ್ಸರಿಪನಾವಂ
ಆವಂ ಜಲೌಘೋರ್ಮಿಕಲ್ಲೋಲತುಂಗಗಂ
ಗಾವಿಭವಮಂ ಜೆಡೆದುದಿಯೊಳಾಂತನಾವನಡಿ
ದಾವರೆಯ ಪೆರ್ಬೆರಲ ಪೀಡನದೆ ರಾವಣಂ ನಿರ್ನಾಮನಾಗಿ ಬೀಳ್ದಂ ೧೯

ನೆರೆದ ದೇವಾಸುರರ ಮುಂದೆ ದಕ್ಷನ ಯಾಗ
ಮುರರೆ ತತ್ಕ್ಷಣದೊಳ್ ಕ್ಷಯವನೆಯ್ದಿ ತಾ ದಕ್ಷ
ನಿರದೆಱಗಿ ಮೇಲಕ್ಷಯತ್ವಮಂ ಕ್ರತುಫಲವನಾ ಶಂಭುವಿಂದೆ ಪಡೆದಂ
ಶಿರಮೆ ಪೂಜಾರ್ಹಮೆಲ್ಲಗ್ಗ[2]ಲ್ಲಿ ಶಂಭುಗು
ತ್ಕರಲಿಂಗದೊಳ್ ಪೂಜೆ ಸಲ್ಗು ಮತಿಮೂಢರಿರ
ದೊರೆವೆತ್ತುದದೞಿನಾ ಪ್ರಭುನಾವುದೊಂದನಿಚ್ಛೈಪನದನೇ ಮಾಡುವಂ ೨೦

ಈ ಲಿಂಗದೊಳ್ ವಿಧಿ ವಿಧುಗಳೊಗೆದರಸುರಸುರ
ರೀ ಲಿಂಗಮಂ ಪೂಜಿಸಿದರಂತುಟಾಗಿರ್ದು
ಮಾಳೋಕಿಸರ್ ಮೂಢರಿಲ್ಲಿ ಭರ್ಗಂಗಧಿಕನಾವನೆಣೆ ತಾನದಾವಂ
ಈ ಲೋಕಮುರುವಜ್ರಚಕ್ರಾಂಬುಜಾಂಕಮು
ಲ್ಲಾಲಿಸಲ್ ಶಿವನ ಲಿಂಗಾಂಕಂ ಭಗಾಂಕ
ಮಿನ್ನಾಲಾಪಮೇಂ ಕಯ್ಯಕಂಕಣಕೆ ಕನ್ನಡಿಯನರಸುವರದೇನಜ್ಞರೋ ೨೧

---

೧ ಸು (ಬ) ೨ ಗ (ಬ)

ಇಂತೆಂದು ಭಕ್ತಿಯಿಂ ವ್ಯಾಸನೀಶ್ವರನನೋ
ರಂತೆ ನಿಶ್ಚೇಷ್ಟಕಾಷ್ಠೋಪಲಸಮಾನನಾ
ಗಂತರದೊಳಿರ್ಪಾತ್ಮಭುಜಯುಗವಿಮೋಕ್ಷಣಾರ್ಥಂ ಪೂತ ವೃತ್ತಂಗಳಿಂ
ತಾಂ ತುತಿಸಿದಂ ದಲೀ ವ್ಯಾಸಾಷ್ಟಕಮನಳ್ತಿ
ಯಿಂ ತಡೆಯದೀಶನಿದಿರಲ್ಲಿ ಪಠಿಸುವನಾವ
ನಂತವಂ ವಿಷ್ಣುಲೋಕಾದಿಗಳನುಳಿದು ಶಿವಪುರಮೆಯ್ದಿ ಸುಖದೊಳಿರ್ಪಂ ೨೨

ಎಂದು ತೃಣಬಿಂದುಗನಿಲಾದಂ ಬೆಸಸಿ ಮತ್ತ
ಮೆಂದನೆಲೆ ಮುನಿಪ ಕೇಳಿಂತು ನುತಿಸುವ ಶಿವಾ
ನಂದಾತ್ಮಕಂಗೆ ತದ್ವ್ಯಾಸಂಗೆ ತತ್‌ಕ್ಷಣದೊಳೀಶಂ ಪ್ರಸನ್ನನಾಗಿ
ನಿಂದು ಹರ್ಯಜ ಶಿವಾ ಗುಹಗಣಪ ಸೂರ್ಯೇಂದು
ವೃಂದಾರಕರ್ ಚಂಡಿ ನಂದಿ ಮಾಕಾಳನೋ
ರಂದದಿಂ ವೀರಭದ್ರಾದಿಗಳ್ ಬಳಸಿಯೋಲಗಿಸೆ ನುಡಿದಂ ಶಂಕರಂ ೨೩

ಅಕ್ಕಟಾ ಬ್ರಹ್ಮರ್ಷಿಯೇಯಿಂದುಮೊದಲಾಗಿ
ಮುಕ್ಕಳಾಟಿಕೆಯಿನಿಂತಪ್ಪ ಸಾಹಸಕೆ ಕ
ಯ್ಯಿಕ್ಕದಿರ್ ಮತ್‌ಕೃತ್ಯಮಂ ತಿಳಿಯದೆಯ್ದುವುದು ಪರಿಭವವನಿರದೆ ಲೋಕಂ
ಮೊಕ್ಕಳಂ ಸೃಷ್ಟಿ ಸ್ಥಿತಿ ಪ್ರಹೃತಿಗೆಯ್ವವಂ
ರಕ್ಕಸವಗೆಯನಾಳ್ವವಂ ಸರ್ವ ಜಂತುಸಂ
ಘಕ್ಕೆ ಮೋಕ್ಷವನೀವವಂ ಸರ್ವಪತಿ ಸರ್ವಶಕ್ತನಾಂ ಪರಿಭಾವಿಸೆ ೨೪

ಎನ್ನ ದೇಹದ ಬೆಮರ್ವನಿಯೊಳೊಗೆದರ್ ಪಾಲ
ಮುನ್ನೀರಮುಗಳೆಱೆಯ ಬೊಮ್ಮರಿವರೆನಗೆ ಸಂ
ಪನ್ನಭಕ್ತರ್ ಮತ್‌ಸಮೀಪಸ್ಥರಿನ್ನವರೊಳಧಿಕ ತಾತ್ಪರ್ಯರೆಂದುಂ
ನೀಂ ನೋಡ ಕಣ್ಣಾರೆ ನಿಯತಾತ್ಮನಾಗಿರ್ಪ
ನಿನ್ನಿಂ ಸದಾ ಸ್ತುತಿಸಿಕೊಳ್ವಾತನಿವನೆಂದು
ತನ್ನೆಡದೊಳೋಲೈಪ ವಿಷ್ಣುವಂ ತೋಱಿ ಮತ್ತಿಂತೆಂದನಧಿಕಕೃಪೆಯಿಂ ೨೫

ಪಲವೇಂ ಸಮಸ್ತಕಾರ್ಯಂಗಳಂ ಬಿಟ್ಟೆನ್ನ
ನೊಲವಿಂ ಭಜಿಸನೇಕ ಮುಂಡಕೋಟಿಗಳಿನು
ಜ್ವಲಿಪೀ ಶಿರೋಮಾಲೆಯುಂ ಸಂದ ಯುಗ ಯುಗದೊಳಳಿದಚ್ಯುತನ ತನುಗಳುಂ
ಜಲಜಜ ಕಪಾಲಂಗಳುಂ ಹರಿ ಹರಿಣನಾಗೆ
ಸಲೆ ಕೊಂದು ಸೀಳ್ದ ಚಾಮೂರಮಾಲೆಯುಮೆನ್ನ
ಗಳ ಕರ ಕಟಿಗಳೊಳಿವೆ ನೋಡ ನೀಂ ದೇವರೆಂಬವರ ಪರಿಭವದ ಪರಿಯಂ ೨೬

ನಿರುಪಮಾವ್ಯಕ್ತ ಮಲ್ಲಿಂಗದಿಂ ಹರ್ಯಜಾ
ಮರವರಾದಿ ಚರಾಚರಸ್ವರೂಪದಿನೆಸೆವ
ವರ ಜಗಜ್ಜಾಲಂ ಜನಿಸಿತಿನ್ನುಳಿದ ಮಹತ್ವವನುಱೆ ಸನತ್ಕುಮಾರಂ
ಪರಮುಮದ್ಭಕ್ತಂ ನಿನಗೆ ಬೇಱೆ ಪೇಳ್ವನೆಂ
ದೊರೆದು ನಂದೀಶನಿಂ ತದ್ಭುಜದ್ವಯಮನತಿ
ಕರುಣದಿಂ ಬಿಡಿಸಿ ನಿನಗಿತ್ತೆಂ ಮಹಾವರವನೆಯ್ದುವೆ ಸಕಲಸಿದ್ಧಿಯಂ ೨೭

ಎಂದು ವಿಶ್ವೇಶ್ವರಂ ವ್ಯಾಸಮುನಿಗುಸಿರ್ದು ಮುದ
ದಿಂದೆ ತದ್ಗಣಕುಲಸಮೇತಮಂತರ್ಧಾನ
ಮಂ ದಲೆಯ್ದಿದನಿತ್ತಲಾ ವ್ಯಾಸನತಿ ಭಕ್ತಿಯಿಂದೆ ತತ್ಕಾಶಿಯಲ್ಲಿ
ಚಂದದಿಂ ವ್ಯಾಸೇಶ್ವರಾಭಿಧಾನದೆ ಲಿಂಗ
ವೊಂದಂ ಪ್ರತಿಷ್ಠಿಸಿ ಕೃತಾರ್ಥತೆಯನಾಂತನದ
ಱಿಂದೆಲೆಲೆ ಮಗನೆ ತೃಣಬಿಂದು ಕೇಳ್ ಬೇಱೆ ಶಿವನಿಂದಧಿಕದೈವಮುಂಟೆ ೨೮

ಸತ್ಯಮಿದು ಸತ್ಯಮಿದು ಮತ್ತೆಯುಂ ಸತ್ಯಮಿದು
ಮೃತ್ಯುಂಜಯಂಗಧಿಕದೈವಮಿಲ್ಲಿದು ವಲಂ
ಶ್ರುತ್ಯುಕ್ತಿಯಂತಱಿಂ ಪರಪದವನಿಚ್ಛೈಪೊಡಾ ಶಿವನನೆಯ್ದು ಬಗೆಯೆ
ನಿತ್ಯಮುಕ್ತಿಯನುಳಿದ ದೇವತತಿ ತಂತಮ್ಮ
ಭೃತ್ಯಾಳಿಕೋಟಿಕಲ್ಪಾಂತರಂ ಪೊಗಳ್ದೊಡಂ
ಕಾತ್ಯಾಯನೀಶನಂ ಭಜಿಸಿಯಲ್ಲದೆ ತಾವೆ ಕುಡಲಱಿಯರಂತಲ್ಲದೆ ೨೯

ಗಣಯುತನ ದೇವದೇವನ ಪಾರ್ವತೀಶನ ಚ
ರಣವನೊತ್ತುವನಬ್ಜಭವನಂತೆ ಪಾಣಿಯಂ
ಫಣಿತಲ್ಪನೊತ್ತುವನಮರವರಂ ಛತ್ರಮಂ ಪಿಡಿವನನಿಲಂ ಮಾರ್ಗಮಂ
ಅಣಿಯರದೆ ಬೋಹರಿಪನುಳಿದ ಸಕಲ ಸುರಾಳಿ
ಭಣಿತೆಯಿಂ ಜಯ ಜಯ ಸ್ವಾಮಿಯವಧಾರೆಂಬು
ದೆಣಿಸಲೇನದಱಿನೀಶಂಗಜಹರಿಮುಖಾಖಿಲಂ ಮಕ್ಕಳಾಟದಂತೆ ೩೦

ಅಂತಱಿಂದಾ ಮಹೇಶಂಗಧಿಕನೋರ್ವನಿ
ಲ್ಲೆಂತುಂ ಸಮಂತಾಂ ದಲಿಲ್ಲೆಂದು ತೃಣಬಿಂದು
ವಂ ತಿಳಿಪಿದಂ ಸ್ಕಾಂದವೊರೆದಂತಿರನಿಲಾದನಿಂತಿರ್ದುವುಂ ಬಳಿಕ್ಕಂ
ಕಂತುತಾತನಿನಧಿಕವಿಲ್ಲೆಂದು ಮೂಢ ದುರ್
ಭ್ರಾಂತಿಯಿಂದುಲಿದು ನರಕಕ್ಕಿಳಿವರೇ ಸೂತ
ನಿಂತೆಂದನಲ್ತೆ ಕೇಳ್† ವಿಷ್ಣ್ವಾದಿ ದೇವತಾನಾಂ ವಾಯೆನುತ್ತೆ ಮತ್ತೆ ೩೧

ಮುಂದೆ ವಿಶ್ವಾಧಿಕ್ಯಮೆನುತುಂ ವದಂತಿಯೇ
ಯೆಂದೊಡನಧೋಮುಖೋರ್ಧ್ವಯೆನುತ್ತೆ ಸತ್ಯೋಕ್ತಿ
ಯಿಂದೆ ಪಾದಾಸ್ತೇಯೆನುತ್ತೆಯಾಸ್ಯಂತಿ ನರಕಾರ್ಣವಮೆನಲ್ಕೆ ಕೇಳ್ಕೆ
ಮಂದರಧರಾದಿಗಳ್ಗಾರ್ ವಿಶ್ವದೊಡೆತನವ
ನೊಂದಿಸಿ ನುಡಿವರವರಧೋಮುಖೋರ್ಧ್ವಾಂಘ್ರಿಯಿಂ
ಸಂದು ನರಕಾಂಬುಧಿಯನೆಯ್ದುವರ್ ಮತ್ತೆ ಕೇಳ್ಕೆ ಶಿವರಹಸ್ಯೋಕ್ತಿಯಂ ೩೨

*ಯೋ ಮಹಾದೇವಮನ್ಯೇನಯೆನುತುಂ ಘನ
ಪ್ರೇಮದಿಂ ಹೀನದೈವೇನ ದುರ್ಮತಿರೆನು
ತ್ತೇ ಮಾತೊ ಸಾಧಾರಣಂ ಸಕೃದ್ಭ್ರೂತೇಯೆನುತೆ ಸೋಂತ್ಯಜೋಯೆನುತ್ತೆ
ಆ ಮಾಳ್ಕೆಯಿಂ ನಾಂತ್ಯಜೋಂತ್ಯಜೋಯೆನಲೊರ್ಮೆ
ಯಾ ಮಹೇಶಂಗಿತರ ದೈವಮಂ ಸಮವೆಂದು
ನೇಮಿಸಿ ನುಡಿವನಾವನಾತಂ ಪೊಲೆಯನಂತುಟಲ್ತಾತನಿಂದಂತ್ಯಜಂ ೩೩

---

† ವಿಷ್ಣ್ವಾದಿ ದೇವತಾನಾಂ ವಾ ವಿಶ್ವಾಧಿಕ್ಯಂ ವದಂತಿ ಯೇ ।
ಅಧೋಮುಖೋರ್ಧ್ವಪಾದಾಸ್ತೇ ಯಾಸ್ಯಂತಿ ನರಕಾರ್ಣವಂ ॥

* ಯೋ ಮಹಾದೇವಮನ್ಯೇನ ಹೀನದೈವೇನ ದುರ್ಮತಿಃ ।
ಸಾಧಾರಣಂ ಸಕೃದ್ಭ್ರೂತೇ ಸೋಂತ್ಯಜೋನಾಂತ್ಯಜೋಂತ್ಯಜಃ ॥

ವಾದಿ ಮಾ ತ್ವಾರುದ್ರಚುಕ್ರುಧಾಮಯೆನುತ್ತೆ
ಮೋದದಿಂ ಮಾ ಸರ್ವೋಭಿರೆನುತ್ತು ಮಾ ತೆಱದೆ
ಮಾ ದುಷ್ಟುತಿರ್ವೃಷಭ ಮಾ ಸಹೂತಿಯೆನಲ್ಕೆ ರುದ್ರ ನಿನ್ನಂ ನತಿಗಳಿಂ
ಆ ದುಷ್ಟುತಿಯಿನಾ ಸಮಾಹ್ವಾನದಿಂದುಳಿದ
ಮಾದಯಿತಮುಖರೊಡನೆಣಿಸಿ ವರದ ನಿನಗೆ ಕೋ
ಪೋದಯಂಗೆಯ್ದುದಿಲ್ಲೆಂದು ಭಯಭಕ್ತಿಯಿಂದೋದುತಿದೆ ಋಕ್ಕೆನೆಯವಂ ೩೪

ಎಂತಿಲ್ಲಿ ಪೇಳ ಸೋಮಾ ರುದ್ರಯೆಂದೆನು
ತ್ತಂತುಟುಚರುಂ ನಿರ್ವ್ಯಪೇದೆನುತೆ ವೇದದೊಳ್
ಕಂತುವೈರಿಗೆ ಸೋಮನೊಡನಿದೆ ಸಮಾ[1]ಹ್ವಾ[1]ನಮೆನೆಯದಲ್ತದಱ ಹೃದಯಂ
ಪಿಂತೆ ನಿಕ್ಷಿಪ್ತ ನಿಜ ವಸುವಂ ಗ್ರಹಿಸಲಮರ
ಸಂತತಿಯನಲನಂ ಬಲಾತ್ಕರಿಸೆಯುಳ್ತು ರು
ದ್ರಂ ತಾನೆನಿಸಿದನವನಂ ಸಹೂತನನೊರೆದುದಲ್ಲದೀಶಂಗದುಂಟೇ ೩೫

ಏನೆಂದಪೆಂ* ವದಂತಿಯೆನುತ್ತೆ ಯೇ ದುರಾ
ತ್ಮಾನೋಯೆನಲ್ ಬ್ರಹ್ಮವಿಷ್ಣು ಸಮುಮೆಂದೆನು
ತ್ತಾ ನಿರ್ಣಯದೆ ಶಿವಮೆನುತ್ತೆ ವಸಭುಂಕ್ಷ್ವಯೆನುತುಂ ಗೃಹೇತೇಷಾಮೆನೆ
ಆನಂದದಿಂದಮಿಷ್ಟಾಪೂರ್ತಮೆಂದೆನು
ತ್ತಾ ನಿಶ್ಚಲೋಕ್ತಿಯಿನನನ್ಯಧೀರೆಂದೆನಲ್
ತಾನೆಯ್ದಿ ವಿಷ್ಣುವಂ ಜ್ಯೇಷ್ಠೆ ತನಗಿರಲೆಡೆಯನೆಱೆಯೆ ತದ್ವಿಷ್ಣುವೆಂದಂ ೩೬

ಮೃಡನೊಡನದಾರ್ ಬ್ರಹ್ಮ ವಿಷ್ಣುಗಳನೆಣೆಗೆಯ್ದು
ನುಡಿವರಂತಾ ದುರಾತ್ಮರ ಮನೆಗಳಲ್ಲಿ ನೀ
ನಡಸಿರು ಯಥೇಷ್ಟಮಾಗನುಭವಿಸು ಮತ್ತೊಂದು ಬುದ್ಧಿ ಬೇಡೆಂದು ಪೇಳ್ದಾ
ಪೊಡೆಯಲರನುಕ್ತಿಯಿದೆ ಲೈಂಗ್ಯಪೌರಾಣದೊಳ್
ಬಿಡು† ಯಥಾಸ್ಯಾಪಾನಯೋಃ ಸಾಮ್ಯಮೆಂದೆನು
ತ್ತಡಸಿ ಛಿದ್ರತ್ವೇಪಿಯೆನುತುಂ ನವಿದ್ಯತೇಯೆಂದೆನುತ್ತತಿ ಹಾಸ್ಯದಿಂ ೩೭

---

* ವದಂತಿ ಯೇ ದುರಾತ್ಮಾನೋ ಬ್ರಹ್ಮ ವಿಷ್ಣು ಸಮಂ ಶಿವಂ ।
ವಸಭುಂಕ್ಷ್ವ ಗೃಹೇತೇಷಾಮಿಷ್ಟಾಪೂರ್ತಮನನ್ಯಧೀಃ ॥ ಲೈಂಗ್ಯಪುರಾಣ

† ಯಥಾ ಸ್ಯಾಪಾನಯೋಸ್ಸಾಮ್ಯಂ ಛಿದ್ರತ್ವೇಪಿ ನವಿದ್ಯತೇ।
ಯಥೈಕತ್ವೇಪಿ ಸರ್ವೇಷಾಂ ರುದ್ರಸಾಮ್ಯಂ ನವಿದ್ಯತೇ ॥ ಸೂತಗೀತಾ

---

೧ ಷಾ (ಕ)

ಎಲೆ ಯಥೈಕತ್ವೇಪಿ ಯೆಂದೆನುತ್ತುಂ ಮತ್ತ
ಮುಲಿದು ಸರ್ವೇಷಾಮೆನುತೆ ರುದ್ರಸಾಮ್ಯಮೆಂ
ದೊಲವಿಂ ನವಿದ್ಯತೇ ಯೆಂದೆನಲ್ ಛಿದ್ರತ್ವದಲ್ಲಿ ಗುಧಕಂ ವದನಕಂ
ಸಲೆ ಸಾಮ್ಯವೆಂತುಟಲ್ಲಂತುಳಿದ ದೇವತಾ
ಕುಲವೇಕತೆಯೊಳೀಶ್ವರಂಗೆ ಸರಿಯಲ್ಲೆಂದು
ನಲಿದೊರೆವುತಿದೆ ಸೂತಗೀತಿ ಮತ್ತಂ * ಶಿವಂ ಬ್ರಹ್ಮಾದಿಭಿರೆನುತ್ತೆಯುಂ ೩೮

ಕ್ರಮದೆ ಸಾಮ್ಯಂ ಸ್ವಗುರುಮೆನುತದೇ ಪ್ರಾಕೃತ್ಯೆ
ಸ್ಸಮಮೆಂದೆನುತ್ತೆ ಶಿವ ವಿದ್ಯಾಂಚಯೆಂದೆನು
ತ್ತಮರ್ದು ವೇದಾದ್ಯೈರೆನುತ್ತೆ ಮನುತೇಯಸ್ತು ಮಾನವೋ ಯೆಂದೆನುತ್ತುಂ
ವಿಮಲೋಕ್ತಿಯಿಂ ಸಪಾಪೀ ದುರ್ಮದೋ ಯೆನು
ತ್ತಮಮ ಮೇಣ್ ಕ್ರೂರೋ ಯೆನುತ್ತೆ ತಾಂ ಶ್ವಪಚೋಯೆ
ನೆ ಮುದದಿಂ ಶ್ವಪಚಾಧಮೋಯೆನಲ್ ವಿಷ್ಣ್ವಾದಿ ದೇವತೆಗಳೊಡನೆ ಶಿವನಂ ೩೯

ಭ್ರಾಂತಿಯಿಂ ಪ್ರಾಕೃತರೊಡನೆ ತನ್ನ ಗುರುವಂ ಸ
ಮಂತು ವೇದಾದಿಗಳೊಡನೆ ಕರಂ ಶಿವವಿದ್ಯೆ
ಯಂ ತಾಂ ಸಮಾನವೆಂದೂಹಿಸುವನಾವನಾತಂ ಪಾತಕಂ ದುರ್ಮದಂ
ಸಂತತಂ ಕ್ರೂರಂ ಶ್ವಪಚನಾ ಶ್ವಪಚನಿಂದ
ಮುಂ ತಿಳಿಯಲಧಮನೆಂದಾ ಸ್ಕಾಂದಪೌರಾಣ
ಮಿಂತೊರೆವುತಿದೆ ಮತ್ತೆ † ರಾಜಾಧಿರಾಜೋ ಯೆನುತ್ತೆ ಸರ್ವೇಷಾಮೆನೆ ೪೦

ತ್ರ್ಯಂಬಕಸ್ತ್ರಿಪುರಾಂತಕೋಯೆನುತೆ ತಸ್ಯೈವ
ಯೆಂಬ ಪದದೊಳ್ ಸಂಧಿಗೂಡನುಚರಾಯೆನು
ತ್ತಿಂಬಿನಿಂ ಸರ್ವೇ ಯೆನುತ್ತೆ ಮೇಣ್ ಬ್ರಹ್ಮವಿಷ್ಣು ಪುರೋಗಮಾಯೆನಲ್ಕೆ
ತಾಂ ಬಗೆಯೆ ಸಕಲಕ್ಕೆ ರಾಜಾಧಿರಾಜನಾ
ತ್ರ್ಯಂಬಕಂ ತ್ರಿಪುರಾರಿಯಾತಂಗೆ ಡಿಂಗರಿಗ
ರಂಬುಜಭವಾಚ್ಯುತಾದ್ಯಖಿಲರೆಂದುಲಿವುತಿದೆ ಪಾರಾಶರಂ ಬಳಿಕ್ಕಂ ೪೧

---

* ಶಿವಂ ಬ್ರಹ್ಮಾದಿಭಿಸ್ಸಾಮ್ಯಂ ಸ್ವಗುರುಂ ಪ್ರಾಕೃತೈಸ್ಸಮಂ ।
ಶಿವವಿದ್ಯಾಂಚವೇದಾದ್ಯೈರ್ಮನುತೇ ಯುಸ್ತು ಮಾನವಃ ॥
ಸಪಾಪೀ ದುರ್ಮದಃ ಕ್ರೂರಶ್ಶ್ವಪಚ ಶ್ವಪಚಾಧಮಃ ॥ ಸ್ಕಾಂದಪುರಾಣಂ

† ರಾಜಾಧಿರಾಜಸ್ಸರ್ವೇಷಾಂ ತ್ರ್ಯಂಬಕ ಸ್ತ್ರಿಪುರಾಂತಕಃ ॥
ತಸ್ಯೈವಾನುಚರಾಸರ್ವೇ ಬ್ರಹ್ಮವಿಷ್ಣು ಪುರೋಗಮಾಃ ॥ ಪಾರಾಶರ

ಓದಲೇನೊ* ಋಚೋಽಹಯೋ ವೇದಯೆನುತುಂ ಸ
ವೇದ ದೇವಾಗ್ಂ ಯಜೂಂಷಿಯೆನುತಂತೆ ಯೋ
ವೇದಯೆನುತೆ ಸವೇದಯಜ್ಞಾನೆನುತ್ತೆ ಸಾಮಾನಿಯೋ ವೇದಯೆನುತುಂ
ಮೋದದೆ ಸವೇದ ಸರ್ವಮೆನೆ ಯೋ ಮಾನಸಂ
ವೇದಯೆನುತೆ ಸವೇದಯೆನುತದೆ ಬ್ರಹ್ಮಯೆನು
ತಾದರದಿನಿತಿಹಾಸಮುಲಿವುತಿದೆ ನೀಂ ಶ್ರುತಿಗಳರ್ಥಮನಱಿದವನಲ್ಲಂ ೪೨

ಆವನಾ ಋಕ್ ಶಾಖೆಗಳನಱಿವನಂತವಂ
ದೇವತತಿಯೊಳಗಱಿದವಂ ಯಜುಶ್ಶಾಖೆಗಳ
ನಾವನಱಿವನವಂ ಕ್ರತುಗಳೊಳಗನಱಿದವಂ ಸಾಮಶಾಖೆಗಳನಾವಂ
ತೀವಿಯಱಿವನವಂ ಸಮಸ್ತವನಱಿದವನೊ
ಲ್ದಾವನಾಥರ್ವಣ ಸುಶಾಖೆಗಳನಱಿವನವ
ನೇ ವಿಶ್ವಪತಿಯನಱಿದವನೆಂದುಮವನಱಿಯೆಯಾಗಿ ಕೇವಲ ಪಾಠಕಂ ೪೩

ವಿತತಂ§ಚತುರ್ವೇದಯೆನೆ ಧರೋ ವಿಪ್ರೋಯೆ
ನುತದು ಶಿವಭಕ್ತಿಯೆನುತೆ ವಿವರ್ಜಿತೋಯೆಂದೆ
ನುತೆ ವೇದಭಾರಯೆನುತುಂ ಭರಾಕ್ರಾಂತ ಸ್ಸವೈಬ್ರಾಹ್ಮಣಯೆನುತ್ತೆ ತಾಂ
ಅತಿ ಹಾಸ್ಯದಿಂ ಗರ್ದಭೋಯೆನಲ್ ಶ್ರುತಿನಾಲ್ಕ
ನತುಳವಿಭವದಿನೋದಿ ಶಿವಭಕ್ತಿಯಿಲ್ಲದಾ
ಕ್ಷಿತಿಸುರಂ ಶ್ರುತಿಯೆಂಬ ಪೊಱೆವೊತ್ತ ಕತ್ತೆಯೆಂದುಂ ಸ್ಕಾಂದಮವನೋದಿಯೇಂ ೪೪

---

* ಋಚೋಽಹಯೋ ವೇದ ಸವೇದ ದೇವಾಗ್ಂ ಯಜೂಂಷಿಯೋ ವೇದ ಸವೇದಯಜ್ಞಾನ್ ।
ಸಾಮಾನಿಯೋ ವೇದ ಸವೇದ ಸರ್ವಂ ಯೋ ಮಾನಸಂ ವೇದ ಸವೇದ ಬ್ರಹ್ಮ ॥

§ ಚತುರ್ವೇದಧರೋ ವಿಪ್ರಶ್ಶಿವಭಕ್ತಿವಿವರ್ಜಿತಃ ।
ವೇದಭಾರಭರಾಕ್ರಾಂತಸ್ಸವೈಬ್ರಾಹ್ಮಣಗರ್ದಭಃ ॥
—ಸ್ಕಾಂದ

†ನಲಿದು ಸೋಮೋಯೆನುತೆ ಪವತೇರೆನುತ್ತೆ ಋ
ಕ್ಕುಲಿವುತಿದೆಯಾವೋಯೆನುತ್ತೆಲೆ ರಾಜಾನಮೆನು
ತೊಲವಿಂ ಯಜುಸ್ಸಧ್ವರಸ್ಯಯೆನುತಿದೆ ದಲ್ ತ್ವಮೆನುತೆ ದೇವೇಷುಯೆನುತೆ
ಸಲೆ ಸಾಮವಿದೆ ಶಿವಯೆನುತ್ತುಮೇಕೋಯೆನು
ತ್ತೆಲೆ ಪುನರ್ಧ್ಯೇಯೋಯೆನುತ್ತಿದೆಯಥರ್ವವಿಂ
ಕೆಲೆಯದಿರ್ ದೇವ ಜನಕಂ ಯಜ್ಞಪತಿಯುತ್ತಮಂ ಧ್ಯೇಯನೊರ್ವನೆ ಶಿವಂ ೪೫

*ಸಂತತಂ ಪ್ರತ್ಯಂಜನಸ್ತಿಷ್ಠತಿಯೆನುತ್ತು
ಮಂತೆ ಸ ಯುಗಾಂತಕಾಲೇ ಏಕ ಏವಯೆನೆ
ಮುಂತೆ ರುದ್ರೋನದ್ವಿತೀಯಾಯತಸ್ಥೇಯೆನುತ್ತೆ ನಬ್ರಹ್ಮಾಯೆನೆ
ಚಿಂತೆಯಿಲ್ಲದೆ ನವಿಷ್ಣುರ್ನಸೂರ್ಯೋ ನಾಗ್ನಿ
ರಿಂತೆಂದೆನೆ ನ ಚಂದ್ರ ತಾರಕಾಯೆನೆ ಘನ
ಭ್ರಾಂತಿಯಿಂದೀ ಯಜುಶ್ರುತಿಯರ್ಥಮಂ ವಾದಿ ನೀಂ ವಿಚಾರಿಸಿದುದಿಲ್ಲಾ ೪೬

ಎಂತೆಂದಪೆಂ ನಿನ್ನದೊಂದಜ್ಞತೆಯನಾ ಯು
ಗಾಂತಕಾಲದೊಳೆರಡನೆಯ ವಸ್ತುವಿಲ್ಲದೋ
ರಂತೆ ನಳನಳಿಸಿ ತೊಳಗುತ್ತಿರ್ಪನೋರ್ವನೇ ರುದ್ರನಾ ಕಾಲದಲ್ಲಿ
ಅಂತಿಂತುಟೆಂದುಸಿರ್ವುದೇಂ ಬ್ರಹ್ಮನುಂ ವಿಷ್ಣು
ವುಂ ತರಣಿಯುಂ ಶಿಖಿಯುಮಿಂದುವುಂ ನಕ್ಷತ್ರ
ಸಂತತಿಯುಮಾರುಮಿಲ್ಲೆಂದು ತಚ್ಛ್ರುತಿಯುಲಿವುತಿದೆ ಮತ್ತೆ ದೇವರುಂಟೇ ೪೭

---

† ಸೋಮಃಪವತೇಃ-ಋಕ್ಕು. ಯಾವೋರಾಜಾನಂ-ಯಜುಸ್ಸು.
ಅಧ್ವರಸ್ಯತ್ವಂ ದೇವೆ ಷು-ಸಾಮ. ಶಿವ ಏಕೋ ಪುನರ್ಧ್ಯೇಯಃ
—ಅಥರ್ವ

* ಪ್ರತ್ಯಂಜನಸ್ತಿಷ್ಠತಿ ಸ ಯುಗಾಂತಕಾಲೇ ಏಕ ಏವರುದ್ರೋ ನದ್ವಿತೀಯಾಯತಸ್ಥೇ ।
ನ ಬ್ರಹ್ಮಾ ನ ವಿಷ್ಣುರ್ನ ಸೂರ್ಯೋ ನಾಗ್ನಿರ್ನಚಂದ್ರತಾರಕಾಃ ॥
—ಯಜುರ್ವೇದ

ತಾಂ ಸರಸದಿಂದೆ †ತದ್ವಿಷ್ಣೋಃ [೧]ಪರಮುಮೆನೆ[೧] ಪ
ದಂ ಸದಾ ಪಶ್ಯಂತಿ ಸೂರಯೋಃಯೆಂದೆನು
ತ್ತುಂ ಸಲೆ ದಿವಿವಯೆನೆ ಚಕ್ಷುರಾತತಮೆನೆ ಪರಾತ್ಪರ ಮಹಾರುದ್ರನಂ
ಕಂಸಾರಿಯಿಂ ಮೇಲೆ ಮೆಱೆವನೆಲೆಯೆಂದು ವಿ
ದ್ವಾಂಸರನಿಶಂ ನೋಳ್ಪರವರಕ್ಷಿ ಗಗನದೊಳ್
ಸಂಸರಿಪುದೆಂತು ವಿಸ್ತೃತದಿನಿಂತೆಂದು ಋಕ್ಕಿದೆ ಹರಿಯದೆಂತಧಿಕನೈ ೪೮

ಮತ್ತಂ* ಮಹಾಪಾಪಯೆನೆ ವತಾಂಪುಂಸಾಮೆ
ನುತ್ತೆ ತಾಂ ಪೂರ್ವಜನ್ಮಸುಸುವ್ರತಾಯೆಂದೆ
ನುತ್ತೆ ವಿಷ್ಣುರೆನುತ್ತೆ ಸರ್ವಾಧಿಕೋಃ ಭಾತಿ ನಾರಕಾಸ್ತೇನಯೆನುತುಂ
ಬಿತ್ತರಿಸಿ ಸಂಶಯೋಃಯೆನೆ ಸರ್ವ ಪೂರ್ವಜ
ನ್ಮಾತ್ತಪಾಪದ ಫಲದೆ ಹರಿಯಧಿಕನೆಂಬ ದು
ಶ್ಚಿತ್ತೊಗೆವುದದನುಳ್ಳವರ್ ನರಕಕಿಳಿವರೆನುತಿದೆ ಸೂತಸಂಹಿತೆ ವಲಂ ೪೯

ಸರಿಯದೆಂತೋ ಮಹಾ ಪತಿತ ಪೇಳ್ಕೈ ಭಕ್ತಿ
ಭರದೆ ವಿಶ್ವಾಧಿಕೋಃರುದ್ರೋಃಮಹರ್ಷಿರೆಂದಿರೆ ತೈ
ತ್ತಿರೀಯವಿಂತೀ ಯಜುರ್ಮತಕಾ ಮಹಾಭಾರತದೊಳೀಕ್ಷಿಸೆ
ಅರರೆ ವಿಷ್ಣುಸಹಸ್ರನಾಮುದಾದಿಯೊಳೆ ವಿ
ಸ್ಫುರಿಸುತದೆ ವಿಶ್ವಾಖ್ಯವಂತಱಿಂ ವಿಷ್ಣುವಿಂ
ಗುರುವಿಶ್ವನಾಮಂ ಪ್ರಸಿದ್ಧಮಾ ಕತದೆ ವಿಶ್ವಾಧಿಕಂ ರುದ್ರನೆನಿಪಂ ೫೦

---

† ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ ದಿವಿವಚಕ್ಷುರಾತತಂ
—ಋಗ್ವೇದ

* ಮಹಾ ಪಾಪವತಾಂ ಪುಂ ಸಾಂ ಪೂರ್ವಜನ್ಮಸುಸುವ್ರತಾಃ ।
ವಿಷ್ಣುಸ್ಸರ್ವಾಧಿಕೋಃ ಭಾತಿ ನಾರಕಾಸ್ತೇ ನ ಸಂಶಯಃ ॥
—ಸೂತಸಂಹಿತಾ

---

೧ ಪರನುಮೆನೆ (ಬ)

ಬಳಿಕೆ ವಿಶ್ವಾಧಿಕಂ ರುದ್ರಂ ಮಹರ್ಷಿಯ
ತ್ಯಲಘುತರ ಸರ್ವಸಾಕ್ಷಿಕನಜಸ್ರೋದಿತಂ
ವಿಲಸಿತ ಹಿರಣ್ಯಗರ್ಭಾಹ್ವಯದ ದೇವಂಗೆ ಜನಕನವನಂ ಪ್ರೀತಿಯಿಂ
ಜಲಜಭವ ಜಲಜಾಂಬಕಪ್ರಮುಖದೇವಸಂ
ಕುಳಮರ್ಚಿಸುವುದೆಂದು ಸೂತಸಂಹಿತೆಯುಮು
ಜ್ವಲ ಮಾನವಪುರಾಣಮುಂ ತಚ್ಛ್ರುತಿಯವೊಲುಲಿವುತಿವೆ ಶಿವನಾಧಿಕ್ಯಮಂ ೫೧

ಒದರಿ §ಯೋಯೆನುತೆ ದೇವಾನಾಮೆನುತ್ತೆ ಮೇಣ್
ಪದಪಿನಿಂ ಪ್ರಭವಶ್ಚಯೆನುತುದ್ಭವಶ್ಚಯೆನು
ತದೆಯೋಯೆನುತ್ತೆ ದೇವಾನಾಮೆನುತ್ತುಮಧಿಪೋಯೆನುತೆಯಸ್ಮಿನ್ನೆನೆ
ಪದುಳದಿಂ ದೇವಾ ಅಧಿಶ್ರಿತಾಯೆನುತುಂ ನ
ಲಿದುಯ ಈಶೇಯೆನುತ್ತಸ್ಯಯೆಂದೆನುತಂತಿ
ರೊದವಿ ದಲ್ ದ್ವಿಪದಶ್ಚತುಷ್ಪದಸ್ತಸ್ಮೈಯೆನುತ್ತೆ ದೇವಾಯೆನುತ್ತೆ ೫೨

ಇರದೆಹವಿಷಾವಿಧೇಮಯೆನೆ ತಚ್ಛ್ವೇತಾಶ್ವ
ತರವಾ ತೆಱದೆ ಯಜುಶ್ಶ್ರುತಿ *ಯೋಯೆನುತ್ತೆ ಚೆ
ಚ್ಚರದೆ ದೇವಾನಾಮೆನುತೆ ದೇವಏಕೋಯೆನುತ್ತೆಯಸ್ಮಿನ್ನೆನುತ್ತೆ
ಭರದೆ ದೇವಾ ಅಧಿಯೆನುತೆ ವಿಶ್ವಯೆನುತುಮಾ
ತುರದಿಂ ನಿಷೇದುಃಯೆನುತ್ತೆಯಸ್ತಮೆನುತ್ತೆ
ಹರಿಸದೆನವೇದಕಿಮೃಚಾಕರಿಷ್ಯತಿಯಈಶೇಯೆನುತ್ತಸ್ಯಯೆನುತುಂ ೫೩

---

§ ಯೋ ದೇವಾನಾಂ ಪ್ರಭವಶ್ಚೋದ್ಭವಶ್ಚ ಯೋ ದೇವಾನಾಮಧಿಪೋಯಸ್ಮಿನ್
ದೇವಾ ಅಧಿಶ್ರಿತಾಃ ।
ಯಈಶೇ ಅಸ್ಯ ದ್ವಿಪದಶ್ಚತುಷ್ಪದಸ್ತಸ್ಮೈದೇವಾಃಹವಿಷಾವಿಧೇಮ ॥
—ಶ್ವೇತಾಶ್ವತರ

* ಯೋ ದೇವಾನಾಂ ದೇವಏಕೋ ಯಸ್ಮಿನ್ದೇವಾ ಅಧಿ ವಿಶ್ವನಿಷೇದುಃ ಯಸ್ತಂ
ನವೇದಕಿಮೃಚಾಕರಿಷ್ಯತಿ।
ಯ ಈಶೇ ಅಸ್ಯದ್ವಿಪದಶ್ಚತುಷ್ಪದಸ್ತಸ್ಮೈ ಹವಿಷಾವಿಧೇಮ ॥
—ಯಜುರ್ವೇದ॥

ಮತ್ತೆಯುಂ ದ್ವಿಪದಶ್ಚತುಷ್ಪದಸ್ತಸ್ಮೈಯೆ
ನುತ್ತೆ ಹವಿಷಾವಿದೇಮಯೆನುತುಂ *ಬ್ರಹ್ಮಯೆನು
ತೆತ್ತಿ ವಿಷ್ಣುಯೆನುತ್ತುಮದು ಸುರೇಶಾನಾಮೆನುತ್ತೆ ಯಃಸ್ರಷ್ಟಾಯೆನೆ
ನುತ್ತೇಂ ಪ್ರಭುರೆನುತ್ತಮವ್ಯಯೋಯೆಂದು ಸಾ
ರುತ್ತೆ ಮೇಣ್ ಬ್ರಹ್ಮಾದಯಃ ಪಿಶಾಚಾಂತಾಯೆ
ನುತ್ತೆ ತಾಂ ಯಸ್ಯ ಕಿಂಕರವಾದಿನೋಯೆಂದುಸಿರೆ ವಾಯುವೀಯಸೌರಂ ೫೪

ಓವೊ ಬಣ್ಣಿಪೆನೇನನಜಹರೀಂದ್ರಸುರಾದಿ
ಜೀವಿಗಳನಾವಂ ಸೃಜಿಸಿ ಪೊರೆವನಾವನಮ
ರಾವಳಿಗಧೀಶನಾವನೊಳಾ ಸುರರ್ಕಳಾಶ್ರಿತರಾಗಿ ಬಾಳ್ವರೊಳ್ಪಿಂ
ಆವಂಗೆ ಸಚರಾಚರವ್ಯಾಪ್ತತೇಜವಾ
ದೇವತತಿಗಾವನೇಕಂ ದೇವನಾವನಂ
ಸೇವಿಸುವುದೀಯಖಿಳವಾ ಮಹಾದೇವನನಱಿಯದನುಷ್ಠಾನವಫಲಂ ೫೫

ಅಂತಱಿಂದವ್ಯಯಂಗಾ ಮಹಾ ಸಾಂಬಂಗೆ
ಸಂತಸಂ ಮಿಗೆ ಹವಿಯನಿತ್ತರ್ಚಿಸುವೆವೆಂದು
ಸಂತರೊಪ್ಪುವವೊಲಾ ಶ್ವೇತಾಶ್ವತರನಾಮದುಪನಿಷತ್ತುಂ ಯಜುಸ್ಸುಂ
ಕಾಂತಿ ರಂಜಿಪ ವಾಯುವೀಯಸೌರಂಗಳುಮ
ನಂತ ವಿಧದಿಂ ಶಿವನ ಘನವನೊರೆವುತಿರೆ ಮ
ತ್ತಿಂತಂತಮೆಯ್ದದೆ ಸಕಲ ಶಾಸ್ತ್ರಮುಂ ಸಾಱುತಿರೆ ನೀನವಂ ತಿಳಿಯದೇ ೫೬

ವ್ಯಾಸನ ಮತಂ ನಿನ್ನದೆಂದಹಂಕರಿಸಿ ಕ
ಟ್ಟಾಸೆಯಿಂ ಬಂದು ಪತ್ರಂಗಟ್ಟಿಯುಲಿದೆ ಕೇಳ್
ದಾಸ ನಿಶ್ಚಿತಮಾಗಿ ತದ್ದ್ವೇಷಕವನ ತೋಳ್ ನಂದಿಯಿಂ ಮೋಟಾದುದಂ
ಆ ಸರೋಜಾಕ್ಷನೊರೆದುದನಾ ಹರಿಯನವಂ
ಹೇಸಿ ಬಿಟ್ಟೀಶನಂ ಭಜಿಸಿ ಬರ್ದುಕಿದುದನಿ
ನ್ನೋಸರಿಸದಿರ್ ಪರವೆ ಪರವೆಂದು [೧]ನುಡಿದಸತ್ಯಂ[೧]ಪರಿಭವಂಬಡುವನೇ ೫೭

* ಬ್ರಹ್ಮವಿಷ್ಣು ಸುರೇಶಾನಾಂ ಯಸ್ಸ್ರಷ್ಟಾಪ್ರಭುರವ್ಯಯಃ ।
ಬ್ರಹ್ಮಾದಯಃ ಪಿಶಾಚಾಂತಾ ಯಸ್ಯ ಕಿಂಕರವಾದಿನಃ ॥
—ವಾಯುವೀಯ ಸೌರಪುರಾಣ

೧ ನುಡಿದ ಸಂತಂ (ಅ)

ತಾನೆ ಪರವಾದವಂ ತನಗೆ ಗುರುವಾ ಮಹೇ
ಶಾನನೆಂದೆಯ್ದೆ ಬೋಧಿಪನೆ ಪರವಾದುದಂ
ನಾನಾ ಶ್ರುತಿ ಸ್ಮೃತಿ ಪುರಾಣಾದಿಗಳ್ ಶಿವಂಗೆಣೆಯುಮುಲ್ತೆಂದೊರೆವವೇ
ಏನಂದಪೆಂ ನಿನ್ನ ಮೂಢತೆಯ ನೀನೆಱಿದ
ನೂನ ವಿದ್ವಜ್ಜನವದೇನಱಿಯದೇ ವಲಂ
ವೈನತೇಯಧ್ವಜಂ ಪರವೆಂಬ ಮಾತು ಸಲ್ಲದು ಬಿಡು ಬಿಡೇಂ ಸಂದೇಗಂ ೫೮

ಮತ್ತೆ ಕೇಳ್ ವಾದಿ ಹರಿ ವರಮೋಕ್ಷದಂ ದಲೆಂ
ಬುತ್ತರಕೆ ನಿರ್ವಾಹಮಂ ಪೂರ್ವದಲ್ಲಿ ಸ
ದ್ವೃತ್ತನೊರ್ವಂ ಸತ್ಯಸಂಧಾಖ್ಯನಖಿಲಲಕ್ಷಣಯುತಂ ಶ್ರುತಿಕೋವಿದಂ
ಉತ್ತಮದ್ವಿಜನವಂ ಪ್ರತಿದಿನಂ ವಿಷ್ಣುವನು
ದಾತ್ತಭಕ್ತಿಯಿನತುಳಸಾಂಗಮಾಗೊಲ್ದರ್ಚಿ
ಸುತ್ತುಮಿರೆಯೊಂದು ಪಗಲೊಳವಂಗೆ ತತ್ ಪಂಕಜಾಕ್ಷಂ ಪ್ರಸನ್ನನಾಗೆ ೫೯

ಸತ್ಯಸಂಧಂ ಪರಮಭಕ್ತಿಯಿಂದೆಱಗಿ ಕೃತ
ಕೃತ್ಯನಾದೆನೆನುತ್ತೆ ನುತಿಸಿ ಪಲತೆಱದಿನೆಲೆ
ದೈತ್ಯಾರಿ ಸಂಸಾರಬಂಧಕಳಸಿದೆನೀವುದೆನಗಮಲ ಮುಕ್ತಿಯನೆನೆ
ಸತ್ಯೋಕ್ತಿಯಿಂ ವಿಷ್ಣುವೆಂದನಾತಂಗೆ ಕೇಳ್
ಕಾತ್ಯಾಯನೀ ಕಾಂತನಲ್ಲದೇ ಸಂಸಾರ
ವೃತ್ಯನ್ವಿತರನೆತ್ತಲೆನ್ನಿಂದುಳಿದ ಕಮಲಜಾದ್ಯಮರರಿಂದಕ್ಕುಮೇ ೬೦

ನಾನಾವಿಧದ ಜೀವಿಗಳ್ಗಖಿಲ ಭೋಗ ಮೋ
ಕ್ಷಾನಂದಮಂ ಮಾಳ್ಪನೀಶನವನಾಜ್ಞೆಯಿಂ
ದೇನೆಂಬೆನಸ್ಮದಾದ್ಯಮರರ್ಗೆ ಭುಕ್ತಿ ಮುಕ್ತಿಗಳಕ್ಕುಮೀಕ್ಷಿಸಲವಂ
ಹಾನಿಯಿಲ್ಲದೆ ನಾಮದಿಂದರ್ಥದಿಂ ಮಹೇ
ಶಾನಂ ಮಹಾದೇವನೆನಿಪನವನಲ್ಲದುಳಿ
ದಾನುಮಜಮುಖ್ಯಸುರರುಂ ಬಱಿವೆಸರದೇವರೆನಿಪೆವಿಂ ಪಲವು ಮಾತೇಂ ೬೧

ಕಾಮಿತಾರ್ಥಂ ಶಿವನಿನಲ್ಲದೆಮ್ಮಿಂದಾಗ
ದೀ ಮಾತು ಸತ್ಯಮಂತಾ ಶಿವನನುಳಿದಾವ
ನಾಮೋದದಿಂದೆನ್ನನರ್ಚಿಪನವಂಗಖಿಲ ಭವಭವಂಗಳೊಳೊರ್ಮೆಯುಂ
ಶ್ರೀಮುಕ್ತಿ ಘಟಿಸದದಱಿಂದಿತರ ದೇವತಾ
ಸ್ತೋಮವಂ ಬಿಟ್ಟು ಶಿವನಂ ಸಾಂಬನಂ ಸದಾ
ಭೂಮಿಸುರವರ್ಯ ಭಜಿಸೆಂದೊರೆದು ವಿಷ್ಣುವಂತರ್ಧಾನನಾಗೆ ಕೂಡೆ ೬೨

ಹೇಸಿ ವಿಷ್ಣ್ವಾದಿಗಳನಾ ಸತ್ಯಸಂಧಾಖ್ಯ
ಭೂಸುರಂ ಬಿಟ್ಟು ತದ್ವಿಷ್ಣೂಪದೇಶದಿನು
ಮಾಸಹಾಯನನ[1]ಮ[1]ಳಭಕ್ತಿಯಿಂದೊಲಿಸಿ ವೇದಾಂತೋದಿತಜ್ಞಾನಮಂ
ಲೇಸೆನೆ ಪಡೆದು ವಿಮುಕ್ತಿಯನೆಯ್ದಿದಂ ನೀವು
ಮಾ ಸದಾಶಿವನನರ್ಚಿಸಿಮೆಂದು ಮುನಿಗಳ್ಗೆ
ಹೋ ಸೂತನೊರೆದನಿದು ಯಜ್ಞವೈಭವಖಂಡದೊಳ್ ಸವಿಸ್ತರದಿನೆಸೆಗುಂ ೬೩

ಅಂತದಂ ತಿಳಿದುದಿಲ್ಲಕಟಕಟ ವಾದಿ ನೀಂ
ಮುಂತೆ ಕೇಳ್ ಕಾಂಚಿಯುದ್ಘಪ್ರಭಾಕರನಾಮ
ದಿಂ ತೊಳಪ ನೃಪನಧೋಕ್ಷಜನಂ ತ್ರಿಕರಣಂಗಳಿಂ ನಂಬಿ ದೃಢಭಕ್ತಿಯಿಂ
ತಾಂ ತುತಿಸುತೊರ್ಪಗಲೊಳಗೆ ಬಂದು ಮಾಧವನ
ನಾಂತು ಹೃನ್ಮಧ್ಯದೊಳ್ ಧ್ಯಾನಿಸಲೊಡಂ ತನ್ಮ
ರಾಂತಕಂ ಪ್ರತ್ಯಕ್ಷನಾಗೆ ಭಯಭಕ್ತಿಯಿಂ ನಮಿಸಿ ಕೀರ್ತಿಸುತಿರ್ಪಿನಂ ೬೪

ಆವುದಿಷ್ಟಂ ನಿನಗೆ ಪೇಳೆನಲೊಡಂ ಹರಿಗೆ
ಭೂವರಂ ನುಡಿದನಿಂತೆನಗತುಲ ಮುಕ್ತಿಯಿ
ತ್ತೋವು ಲಕ್ಷ್ಮೀರಮಣ ಯೆನೆ ಭೂಪ ಸಹಜಮಂ ಕೇಳದೆನ್ನಿಂದಕ್ಕುಮೇ
ಏವೇಳ್ವೆನಖಿಳಶಾಸ್ತ್ರಂಗಳೊಳ್ ಬ್ರಹ್ಮಾಂಡ
ದಾವಾಸದಿಂ ಗಮಿಪುಪಾಯಮಿಲ್ಲಾ ಮುಕ್ತಿ
ಶೈವವ್ರತದಿನಕ್ಕುಮಲ್ಲದೊಡೆ ಕಾಶಿಯೊಳಳಿದೊಡಕ್ಕುಮಿನಿತಲ್ಲದೆ ೬೫

---

೧ ತು (ಬ, ಕ)

ಏಗೆಯ್ದೊಡಂ ಘಟಿಸದೆನೆ ನಾಣ್ಚಿ ಹರಿಯನುಳಿ
ದಾಗಳಾತಂ ಶಿವನನೊಲಿಸಿ ಭವಬಂಧಮಂ
ನೀಗನೇ ವಾದಿ ಕಾಶೀಖಂಡಮಿಂತೆಂದು ಸಾಱುತಿರೆ ಕೇಳ್ವುದಿಲ್ಲಾ
ಯೇಗಂ *ಶಿವಪ್ರಸಾದೇನ ಹಿ ಯೆನುತ್ತಮನು
ರಾಗದಿಂದಂ ಪುಷ್ಟಿರುತ್ತಮಾ ಯೆಂದೆನುತೆ
ಯೋಗಿಸಿ ಶಿವಪ್ರಸಾದೇನ ಹಿ ಯೆನುತೆ ಮುಕ್ತಿರುತ್ತಮಾ ಯೆನುತೆ ಕೂಡೆ ೬೬

ವಿನುತಿಸಿ ಶಿವಪ್ರಸಾದೇನ ಯೆನುತುಂ ವಿನಾ
ಯೆನುತುಂ ನಭುಕ್ತಯೋ ಯೆಂದೆನುತ್ತುಂ ಮತ್ತೆ
ವಿನಯದೆ ಶಿವಪ್ರಸಾದೇನ ಯೆನುತೆ ವಿನಾ ನಮುಕ್ತಯೋ ಯೆ[1]ನೆ[1] ಲಾಲಿಸೈ
ಅನುಪಮ ಶಿವಪ್ರಸಾದದಿನಧಿಕ ಪುಷ್ಟಿಯುಂ
ಘನ ಮುಕ್ತಿಯುಂ ಸಾರ್ಗುಮಲ್ಲದೊಡೆ ಭುಕ್ತಿಗಳು
ಮನವದ್ಯ ಮುಕ್ತಿಗಳುಮಾಗವೆಂದಾ ಜ್ಞಾನಯೋಗ[2]ಖ[2]ಂಡಮಿದೆ ಮತ್ತಂ ೬೭

ಒಂದಿ †ಯಸ್ಯಪ್ರಸಾದಾದೆನುತ್ತೀಶಸ್ಯ
ಯೆಂದು ಕಣಲೇಶಯೆನುತುಂ ಲವೇನಚ ಯೆನುತೆ
ಸಂದಿದಂ ವಿಷ್ಣುಪದಮೆನುತೆ ಲಬ್ಧಂ ತ್ವಯಾನಾನ್ಯೇನ ಯೆನೆ ಹೇತುನಾ
ಎಂದೆನೆ ಶಿವಪ್ರಸಾದದ ಕಣದ ಲೇಶದ
ಲ್ಲೊಂದಿನಿಸರಿಂ ವಿಷ್ಣುಪದವಿ ನಿನಗೊದವಿತುಳಿ
ದಂದದಿಂದಲ್ತೆಂದು ಯಜ್ಞವೈಭವಖಂಡದಲ್ಲಿ ಹರಿಗುಸಿರ್ದೊರೆಯಿದೆ ೬೮

---

* ಶಿವಪ್ರಸಾದೇನ ಹಿ ಪುಷ್ಟಿರುತ್ತಮಾ । ಶಿವಪ್ರಸಾದೇನ ಹಿ ಮುಕ್ತಿರುತ್ತಮಾ ।
ಶಿವಪ್ರಸಾದೇನವಿನಾ ನಭುಕ್ತಯಃ । ಶಿವಪ್ರಸಾದೇನವಿನಾ ನಮುಕ್ತಯಃ ॥
—ಜ್ಞಾನಯೋಗಖಂಡ

† ಯಸ್ಯ ಪ್ರಸಾದಾದೀಶಸ್ಯ ಕಣಲೇಶಲವೇನಚ ।
ಇದಂ ವಿಷ್ಣುಪದಂ ಲಬ್ಧಂ ತ್ವಯಾನಾನ್ಯೇನ ಹೇತುನಾ ॥
—ಯಜ್ಞವೈಭವಖಂಡ

---

೧ ನ (ಬ) ೨ ಷಾ (ಬ)

ಆಮೋದದೆ *ವಿಹಾಯ ಸಾಂಬಮೀಶಾನಮೆನು
ತೇ ಮಾತೊ ತಾಂ ಯಜಂತೇ ದೇವತಾಂತರಂ
ತೇ ಮಹಾ ಘೋರಸಂಸಾರೇ ಪತಂತಿ ಪರಿಮೋಹಿತಾಃ ಯೆಂದೆನುತ್ತುಂ
ಕ್ಷೇಮಮುಮರೆ ವಿಹಾಯ ಸಾಂಬಮೀಶಾನಮೆನು
ತಾ ಮೊಳ್ಕೆಯಿಂ ಯಜಂತೇ ಯೇ ವಿಮುಕ್ತಯೇ
ತೇ ಮಹಾತಮಸಾ ಯೆನುತ್ತುಮಾಕ್ರಾಂತಾನ ತೇಷಾಮೆನುತ್ತೆ ಕೂಡೆ ೬೯

ಪರಮಾ ಗತಿರೆನಲ್ಕೆ ಸಾಂಬನಾದಾ ಮಹೇ
ಶ್ವರನನುಳಿದಾರರ್ಚಿಸುವರಿತರ ದೇವತಾಂ
ತರಮಃನವರಜ್ಞಾನವಶರಾಗಿ ಘನಘೋರಭವದಲ್ಲಿ ಬೀಳ್ವರೆಂದು
ಹರನಿನಲ್ಲದೆ ಪರಮಮುಕ್ತಿ ವಿಷ್ಣ್ವಾದ್ಯಖಿಲ
ಸುರರಿನಾಗದಿದಂ ತಿಳಿಯದವರನಾಶ್ರಯಿಪ
ನರರಧಮರವರ್ಗೆ ಗತಿಯಿಲ್ಲೆಂದು ಪಾರಾಶರಂ ಸಾಱುತಿದೆ ಬಳಿಕ್ಕಂ ೭೦

ಏನೆಂದಪೆಂ †ದೇವತಾಂತರ ಯೆನುತ್ತೆ ಭ
ಕ್ತಾನಾಂ ನ ಸಾಕ್ಷಾದೆನೆ ಪರಮಾಗತಿರೆನು
ತ್ತಾನಂದದಿಂ ಮಹಾದೇವೈಕ ಯೆನುತೆ ಭಕ್ತಾನಾಮೆನುತ್ತೆ ಮತ್ತಂ
ತಾನೆ ಸಾಕ್ಷಾದೇವ ಯೆನೆ ಪರಾಗತಿರೆನಲ
ನೂನ ಮೋಕ್ಷಂ ಶಿವೈಕ್ಯರ್ಗಲ್ಲದುಳಿದ ದೇ
ವಾನೀಕಪೂಜಕರ್ಗಿಲ್ಲೆಂದು ಸೌರಸಂಹಿತೆಯುಲಿವುತಿದೆ ಸತ್ಯದಿಂ ೭೧

---

* ವಿಹಾಯ ಸಾಂಬಮೀಶಾನಂ ಯಜಂತೇ ದೇವತಾಂತರಂ।
ತೇ ಮಹಾ ಘೋರಸಂಸಾರೇ ಪತಂತಿ ಪರಿಮೋಹಿತಾಃ ॥
ವಿಹಾಯ ಸಾಂಬಮೀಶಾನಂ ಯಜಂತೇ ಯೇ ವಿಮುಕ್ತಯೇ।
ತೇಮಹಾತಮಸಾಕ್ರಾಂತಾನತೇಷಾಂ ಪರಮಾಗತಿಃ ॥
—ಪಾರಾಶರ

† ದೇವತಾಂತರ ಭಕ್ತಾನಾಂ ನಸಾಕ್ಷಾತ್ ಪರಮಾಗತಿಃ।
ಮಹಾದೇವೈಕಭಕ್ತಾನಾಂ ಸಾಕ್ಷಾದೇವ ಪರಾಗತಿಃ ॥
—ಸೌರಸಂಹಿತೆ

*ವೇದಾಹಮೇತಂ ಪುರುಷಮೆಂದೆನೆ ಮಹಾಂತ
ಮಾದಿತ್ಯವರ್ಣಮೆಂದೆನುತೆ ತಮಸಃಪರ
ಸ್ತಾದೆನೆ ತಮೇವಂ ವಿದಿತ್ವಾತಿಮೃತ್ಯುಮೇತಿ ಯೆನುತ್ತೆ ನಾನ್ಯೋಯೆನೆ
ವಾದಿ ಪಂಥಾ ವಿದ್ಯತೇಯನಾಯಯೆನಲ್ ಮ
ಹಾದಿಪುರುಷನನರ್ಕತೇಜನಂ ಹರಿಗೆ ಪರ
ವಾದನನಱಿಯದನ್ಯಪಥದಿಲ್ಲ ಮುಕ್ತಿ ಯೆನುತಿದೆ ಸುವಾಜಸನೀಯಮುಂ ೭೨

ದೃಷ್ಟದೆ †ಯದಾ ಚರ್ಮವದೆನೆಯಾಕಾಶಮೆನೆ
ವೇಷ್ಟಯಿಷ್ಯಂತಿ ಮಾನವಾಸ್ತದಾ ಶಿವಮೆನೆ
ಶಿಷ್ಟೋಕ್ತಿಯಿಂದವಿಜ್ಞಾಯ ದುಃಖಸ್ಯಯೆನುತಂತೋ ಭವಿಷ್ಯತಿಯೆನೆ
ಸ್ಪಷ್ಟಿವಲ್ಲದ ಗಗನಮಂ ತಟ್ಟಿವೋಲ್ ಸುತ್ತಿ
ಮುಷ್ಟಿಗೆಯ್ದಂದು ಶಿವನಲ್ಲದನ್ಯರಿನಕ್ಕು
ಮಿಷ್ಟಗತಿಯೆಂದುಲಿವುತಿದೆ ವಲಂ ಶ್ವೇತಾಶ್ವತರ ಸೂತಗೀತಿಯುಗಮುಂ ೭೩

ಮನವಾರೆ ‡ವಿಷ್ಣುಭಕ್ತ್ಯಾಚ ಮದ್ಭಕ್ತ್ಯಾಯೆ
ನೆ ನಯದಿಂ ನಾಸ್ತಿ ನಾಸ್ತಿ ಪರಾಗತಿಃ ಶಂಭು
ಯೆನುತೆ ಭಕ್ತ್ಯೈವ ಸರ್ವೇಷಾಮೆನುತ್ತೆ ಸತ್ಯಮೇವ ಯೆನುತೆ ಮಯೋದಿತಂ
ಯೆನೆ ವಿಷ್ಣುನಾ ಚ ಯೆನುತುಂ ಪರೇಣಾಪಿ ಯೆಂ
ದೆನೆ ಮಹಾದೇವಂ ಘೃಣಾನಿಧಿಮೆನುತೆ ವಿನಾ
ಯೆನುತೆ ಜಂತುಂ ಸಮುದ್ಧರ್ತುಮೆನೆ ಶಕ್ಯತೇನ ಹಿ ಸತ್ತಮಾ ಯೆನುತಿರೆ ೭೪

---

* ವೇದಾಹಮೇತಂ ಪುರುಷಂ ಮಹಾಂತಮಾದಿತ್ಯವರ್ಣಂ ತಮಸಃಪರಸ್ತಾತ್ ।
ತಮೇವಂ ವಿದಿತ್ವಾತಿಮೃತ್ಯುಮೇತಿ ನಾನ್ಯಃ ಪಂಥಾ ವಿದ್ಯತೇಯನಾಯ॥
—ವಾಜಸನೀಯ

† ಯದಾ ಚರ್ಮವದಾಕಾಶಂ ವೇಷ್ಟಯಿಷ್ಯಂತಿ ಮಾನವಾಃ ।
ತದಾ ಶಿವಮವಿಜ್ಞಾಯ ದುಃಖಸ್ಯಾಂತೋಭವಿಷ್ಯತಿ ॥ —ಶ್ವೇತಾಶ್ವತರ ಸೂತಗೀತಿ

‡ ವಿಷ್ಣುಭಕ್ತ್ಯಾಚ ಮದ್ಭಕ್ತ್ಯಾನಾಸ್ತಿ ನಾಸ್ತಿ ಪರಾಗತಿಃ ।
ಶಂಭುಭಕ್ತ್ಯೈವ ಸರ್ವೇಷಾಂ ಸತ್ಯಮೇವಮಯೋದಿತಂ ॥
ವಿಷ್ಣುನಾಚ ಪರೇಣಾಪಿ ಮಹಾದೇವಂ ಘೃಣಾನಿಧಿಂ ।
ವಿನಾ ಜಂತುಂ ಸಮುದ್ಧರ್ತುಂ ಶಕ್ಯತೇ ನಹಿಸತ್ತಮಾ: ॥ —ಬ್ರಹ್ಮಗೀತಾ

ಹರಿಭಕ್ತಿಯಿಂದೆನ್ನ ಭಕ್ತಿಯಿಂದಖಿಲರ್ಗೆ
ವರಮುಕ್ತಿಯಿಲ್ಲಿಲ್ಲ ತನ್ಮುಕ್ತಿ ಶಿವಭಕ್ತಿ
ಭರದಿಂದವೇಯಕ್ಕುಮಿದು ಮತ್ಪ್ರತಿಜ್ಞೆ ಮೇಣಾ ವಿಷ್ಣುವಿಂದಿತರರಿಂ
ಕರುಣಾಂಬುನಿಧಿಯಂ ಮಹಾದೇವನಂ ತೊಲಗಿ
ಯರರೆ ಜಂತುಗಳನುದ್ಧರಿಸಲ್ ಸಮರ್ಥತಾ
ಚರಣಮಿಲ್ಲೆಂದಜಂ ಬ್ರಹ್ಮಗೀತಿಯೊಳಖಿಲಮುನಿಗಳ್ಗೆ ಪೇಳ್ದೊರೆಯಿದೆ ೭೫

ಓವಿ *ನಾನ್ಯೇಯೆನುತೆ ಮುಕ್ತಿಪ್ರದಾಯೆನುತೆ
ದೇವಾಯೆನಲನಂತಕಲ್ಪಂಗಳಿಂ ತಮ್ಮ
ಸೇವಕರ್ಗೀಯಲಱಿಯದೆ ಮುಕ್ತಿಯಂ ಸುರರ್ ಶಂಕರನನೊಲಿಸಿ ಪಡೆದು
ಈವರೆನುತಿದೆ ಕಾಳಿಕಾಖಂಡವಿಂ ಪಲವ
ನೇವಣ್ಣಿಪೆಂ ವಿಮುಕ್ತಿದನಲ್ತು ಹರಿ ಬಿಡು ಬಿ
ಡಾ ವಾಕ್ಯಮಂ ಮುಂದೆ ಕೇಳ್ ಜ್ಞಾನದಂ ವಿಷ್ಣುವೆಂಬೊರೆಗೆ ನಿರ್ವಾಹಮಂ ೭೬

†ದೇವಾಹವೈ ಸ್ವರ್ಗಮೆನುತೆ ಲೋಕಮೆನುತ್ತು
ಮೋವಿಯಗಮುಂ ಸ್ತೇಯೆನುತ್ತುಮಾನಂದದಿಂ
ದೇವಾಯೆನುತೆ ರುದ್ರಮೆನುತಪೃಚ್ಛನ್ನೆನುತೆ ಕೋ ಭವಾನಿತಿಯೆನುತ್ತುಂ
ಆ ವಿಧದೆ ಸೋಬ್ರವೀದಹಮೆನುತ್ತುಂ ಮತ್ತ
ಮೋವೊ ಏಕಪ್ರಥಮಮಾಸಂಯೆನಲ್ಕೆ ತೇ
ದೇವಾಯೆನುತೆ ರುದ್ರಮೆನುತದೆ ಧ್ಯಾಯಂತಿಯೆನೆ ತತೋ ದೇವಾಯೆನೆ ೭೭

---

* ನಾನ್ಯೇ ಮುಕ್ತಿಪ್ರದಾ ದೇವಾ:
—ಕಾಳಿಕಾಖಂಡ

† ದೇವಾಹವೈಸ್ವರ್ಗಲೋಕಮಾಯಮಂ ಸ್ತೇ ।
ದೇವಾರುದ್ರಮಪೃಚ್ಛನ್ ಕೋ ಭವಾನಿತಿ ಸೋಬ್ರವೀತ್।
ಅಹಮೇಕ: ಪ್ರಥಮಮಾಸಂ ತೇ ದೇವಾರುದ್ರಂ ಧ್ಯಾಯಂತಿ.
ತತೋದೇವಾ ಊರ್ಧ್ವಬಾಹವೋರುದ್ರಂ ಸ್ತುನ್ವಂತಿ ॥
—ಅಥರ್ವಶಿರಂ

ಇರದೂರ್ಧ್ವಬಾಹವೋ ರುದ್ರಮೆನುತಾ ಶ್ರುತಿಯೆ
ಭರದೆ ವಲ್ ಸ್ತುನ್ವಂತಿಯೆನುತಿಂತಥರ್ವಶಿರ
ವಿರೆ †ಯಪಾಹರದೆನೆ ಚ ವೈಜ್ಞಾನಮೆನುತೆ ತೇಷಾಮೇವ ಯೆಂದೆನುತ್ತೆ
ಅರರೇ ಮಹೇಶ್ವರೋ ದೇವಾಹ್ಯ ಪ್ರಚ್ಛನ್ನೆ
ನೆ ರಭಸದೆ ತೇ ದೇವಮೆನೆ ಕೋ ಭವಾನಿತಿಯೆ
ನೆ ರಸೋಕ್ತಿಯಿಂ ಶಂಕರಂ ಸನಾರಾಯಣ ಯೆನುತ್ತೆ ಕಾದೇವಾ ಯೆನೆ ೭೮

ಘನದೆ ಸೇಂದ್ರಾಶ್ಚಮುನಯಸ್ತದಾ ತೇಚೋರ್ಧ್ವ
ಯೆನುತೆಯ್ದಿ ಬಾಹವೋ ದೇವಾಃ ಯೆನುತೆ ರುದ್ರ
ಮೆನುತದೇ ಸ್ತುನ್ವಂತಿ ಶಂಕರಮೆನುತ್ತೆ ಲೈಂಗ್ಯಮುಮಿಂತು ಬಹು ಪುರಾಣಂ
ಅನುವದಿಸುತಿವೆ ಕೇಳ್ ಶಿವನದೊಂದು ಕಾರಣಂ
ಬಿನದದಿಂ ಹರ್ಯಜೇಂದ್ರಾದಿಗಳ ವಿಜ್ಞಾನ
ವನಿತಂ ಬಯಲ್ಮಾಡೆ ಮರುಳರ್ಕಳಾಗಿ ತಮ್ಮಯೆ ಮುಂದೆ ರಂಜಿಸುವನಂ ೭೯

ದೇವನಂ ರುದ್ರನಂ ಶಂಕರನನಱಿಯದಾ
ಗೋವಿಂದಮುಖ ಸುರರದಾರೆನೆ ನುಡಿದನೊಂದ
ನೋವಿ ನಿಮ್ಮನಿಬರ್ಗೆ ಮೊದಲಾತನೇಕ ನಾನೆಂದಱಿಹಿಸಲ್ಕೆ ನಾಣ್ಚಿ
ಆ ವಿಷ್ಣುಮುಖರೀಶನಂ ಪರಮ ಕಾರಣನ
ನೋವಿ ತೋಳ್ ನೆಗಪಿ ನುತಿಸಿದನೆಂದಿರಲ್ ಮಹಾ
ದೇವನಱಿಹಿಸೆಯಱಿದು ಮಱಹಿಸೆ ಮಱೆವನೀ ವಿಷ್ಣುಗೇಂ ಸ್ವತೋಜ್ಞಾನ
ಮುಂಟೀ ೮೦

† ಅಪಾಹರಚ್ಚ ವೈಜ್ಞಾನಂ ತೇಷಾಮೇವ ಮಹೇಶ್ವರಃ ।
ದೇವಾಹ್ಯಪ್ರಚ್ಛನ್ ತೇದೇವಂ ಕೋ ಭವಾನಿತಿ ಶಂಕರಂ ॥
ಸನಾರಾಯಣಕಾದೇವಾಸ್ಸೇಂದ್ರಾಶ್ಚಮುನಯಸ್ತದಾ ।
ತೇಚೋರ್ಧ್ವಬಾಹವೋದೇವಾ ರುದ್ರಂ ಸ್ತುನ್ವಂತಿ ಶಂಕರಂ ॥
— ಲೈಂಗ್ಯಪುರಾಣ

ಒತ್ತಿ †ಯೋ ಬ್ರಹ್ಮಾಣಮೆನುತೆ ವಿದಧೇಯೆಂದೆ
ನುತ್ತೆ ಪುತ್ರಮೆನುತಗ್ರೇಜಾತಮೆನುತೆ ಚಯೆ
ನುತ್ತೆಯಃ ಪ್ರಹಿಣೋತಿ ಯೆನುತುಂ ಸ್ಮಯೆನುತೆ ತಸ್ಮೈತವಮಾತ್ಮಾನಮೆನುತೆ
ಮತ್ತೆಯುಂ ಯೇನುಪಶ್ಯಂತಿ ಧೀರಾ ಯೆಂದೆ
ನುತ್ತೆ ತೇಷಾಂ ಶಾಂತಿರಿನೆ ಶಾಶ್ವತೀಯೆಂದೆ
ನುತ್ತುಮದುನೇತರೇಷಾಮೆನಲಥರ್ವಣಂ *ಬ್ರಹ್ಮಾಣಮೆನುತೆ ಬಳಿಕಂ ೮೧

ವಿದಧೇ ಯೆನುತ್ತೆ ವೇದಾನೆನುತೆ ಸತ್ಯದಿಂ
ದದು ತಾನೆಯಗ್ರೇಯೆನುತ್ತೆ ಪುತ್ರೇಯೆನು
ತ್ತೊದವಿಂ ಚತುರ್ಮುಖೇ ಪ್ರಹಿಣೋತಿಯೆಂದೆನುತ್ತುಂ ನ ತಸ್ಮೈಚ ಯೆನುತುಂ
ಪದಪಿನಿಂ ಜ್ಞಾನಮೆನುತುಂ ಜ್ಞಾನಯೆಂದೆನು
ತ್ತದೆ ಮಯೋ ಪ್ರಭುರೆನುತೆನುತ ಲೈಂಗ್ಯಮಾರಯಲ್
ಮೊದಲೊಳಂಭೋಜಭವನಂ ಸೃಜಿಸಿಯಾ ಪೆಂಮ್ಮೆಗಂಗಱಿಪಿ ವೇದಂಗಳಂ ೮೨

ಪ್ರವಿಲಸಿತ ತಚ್ಛಿವಜ್ಞಾನವನಱಿಪದೊಪ್ಪು
ವವಿರಳ ಜ್ಞಾನಮಯ ಹರನಂ ಸ್ವಯಂ ಪ್ರಭುವ
ನವಿಚಲಿತ ಪರಮೇಷ್ಠಿಯಿಂ ಮಹಾ ಬ್ರಹ್ಮಪ್ರವೋದಿಯಂ ಸರ್ವೇಶನಂ
ತವೆ ಷಡ್ಗುಣೈಶ್ವರ್ಯಸಂಪನ್ನನಂ ಪ್ರಾಣಿ
ನಿವಹಗೂಢನನುರುತದಂತರಾತ್ಮನನಖಿಲ
ಭುವನ ಭವನವ್ಯಾಪಕನನೇಕನಂ ದೇವನಂ ಪುರುಷನಂ ರುದ್ರನಂ ೮೩

---

† ಯೋ ಬ್ರಹ್ಮಾಣಂ ವಿದಧೇ ಪುತ್ರಮಗ್ರೇಜಾತಂಚಯಃ ।
ಪ್ರಹಿಣೋತಿಸ್ಮ ತಸ್ಮೈ ತಮಾತ್ಮಾನಂ ಯೇನುಪಶ್ಯಂತಿಧೀರಾಸ್ತೇಷಾಂ
ಶಾಂತಿಶ್ಶಾಶ್ವತೀನೇತರೇಷಾಂ ॥
—ಅಥರ್ವಣ

* ಬ್ರಹ್ಮಾಣಂ ವಿದಧೇ ವೇದಾನಗ್ರೇ ಪುತ್ರೇ ಚತುರ್ಮುಖೇ ।
ಪ್ರಹಿಣೋತಿ ನ ತಸ್ಮೈಚ ಜ್ಞಾನಂ ಜ್ಞಾನಮಯಃ ಪ್ರಭುಃ ॥
—ಲೈಂಗ್ಯ

---

೧ ರ್ಮ (ಬ)

ಪುರುಹೂತನಂ ಪುರುಷ್ಟುತನನಾ ವಾಲಾಗ್ರ
ಪರಿಮಿತದೆ ಹೃನ್ಮಧ್ಯದೊಳ್ ವಹ್ನಿರೂಪದಿಂ
ಸ್ಫುರಿಸುವ ವರೇಣ್ಯನಂ ವಿಶ್ವಾಧಿಪನನಾರ್ ವಿವೇಕಿಗಳ್ ಕಾಣ್ಬರವರ್ಗೆ
ಪರಮ ಶಾಶ್ವತ ಶಾಂತಿಯಕ್ಕುಮಿತರ ಜನಕ್ಕೆ
ದೊರಕದೆಂದಾ ಶ್ರುತಿಯುಮಾ ಲೈಂಗ್ಯಮಿವೆಯಂತೆ
ವರ ಕೂರ್ಮಮುಂ ರವಿಪುರಾಣಮುಂ ಸಾಱುತಿವೆಯಂತುಮಲ್ಲದೆ ಪರಿಕಿಸೈ ೮೪

†ಜ್ಞಾನಪ್ರಸಾದಮೆನೆ ಕುರುತೇ ನ ವಿಷ್ಣುರಿನು
ತೇನೊ ನಪಿತಾಮಹೋಯೆನೆ ನ ಚಂದ್ರೋಯೆನುತೆ
ತಾನೆ ನ ಚ ತಿಗ್ಮಾಂಶುರೆನೆ ನಚೇಂದ್ರೋನಾನ್ಯದೇವತಾಃ ಎಂದುಲಿವುತೆ
ಜ್ಞಾನಯೋಗಾಖ್ಯಖಂಡಮಿದೆ ಹರ್ಯಜಸುರಪ
ಭಾನುಶಶಿಮುಖಸುರರ್ ಕುಡಲಱಿಯರದಱಿನಾ
ಜ್ಞಾನಪ್ರದತ್ವಮೆಂಬುದು ಶಂಭುವಿಂಗಲ್ಲದಾಗದಿದು ನನ್ನಿ ಕೇಳ್ವೈ ೮೫

ಏವೇಳ್ವೆನಾನಂದದಿಂ *ಮುಕ್ತಿಹೇತುರೆಂ
ದೋವುತೆ ಪರಿಜ್ಞಾನಮೆನೆ ತತ್ ಪ್ರಸಾದೇನ
ಕೇವಲಂ ನೈವ ವಿಷ್ಣ್ವಾದಿದೇವಾನಾಂ ಪ್ರಸಾದೇನ ಯೆನುತೆ ಮತ್ತಂ
ಭಾವದೆ ನ ಸಂಶಯೋಯೆನೆ ಮುಕ್ತಿಹೇತುವಾ
ದಾ ವಿಮಲ ಸುಜ್ಞಾನಮೀಶಪ್ರಸಾದದಿಂ
ತೀವಿಯಕ್ಕುಂ ವಿಷ್ಣುಮುಖಸುರರಿನಾಗದೆಂದುಲಿವುತಿದೆ ಪಾರಾಶರಂ ೮೬

---

† ಜ್ಞಾನಪ್ರಸಾದಂ ಕುರುತೇ ನವಿಷ್ಣುರ್ನ ಪಿತಾಮಹ: ।
ನ ಚಂದ್ರೋ ನ ಚ ತಿಗ್ಮಾಂಶುರ್ನಚೇಂದ್ರೋನಾನ್ಯದೇವತಾ: ॥
—ಜ್ಞಾನಯೋಗಖಂಡ

* ಮುಕ್ತಿಹೇತು: ಪರಿಜ್ಞಾನಂ ತತ್ ಪ್ರಸಾದೇನ ಕೇವಲಂ ।
ನೈವ ವಿಷ್ಣ್ವಾದಿದೇವಾನಾಂ ಪ್ರಸಾದೇನ ನಸಂಶಯಃ ॥
—ಪಾರಾಶರ

*ಮನವಾರಿ ಕೇಳ್ ಪ್ರಸಾದಾದೇವ ರುದ್ರಸ್ಯ
ಯೆನುತೆ ತಾಂ ಜ್ಞಾನಮೆನೆ ವೇದಾಂತವಾಕ್ಯಜಂ
ಯೆನುತೆ ಮೇಣ್ ಪ್ರತಿಬಂಧಯೆನೆ ವಿನಿರ್ಮುಕ್ತಂ ಭವೇತ್ತದ್ಧಿಯೆಂದೆನುತ್ತುಂ
ಅನುವಿಂ ವಿಮುಕ್ತಿದಂ ಶಿವ ಶಂಕರಯೆನುತ್ತೆ
ಘನದೆ ರುದ್ರಾಖ್ಯೋಯೆನುತ್ತೆ ಸಾಂಬೋಯೆನುತು
ಮನುನಯದೆ ಸತ್ಯಾದಿ ಲಕ್ಷಣೋಯೆನುತೆ ಪರಮಾತ್ಮಾ ಹಿ ಯೆಂದೆನುತ್ತುಂ ೮೭

ಭರದೆ ವಿಜ್ಞಾನ ಪ್ರಸಾದಮೆನುತದು ಕೂಡೆ
ಕುರುತೇ ಸದಾಯೆನೆ ವಿಮುಕ್ತಿದಮೆನಿಪ ಬಂಧ
ಹರಮಾದ ವೇದಾಂತವಾಕ್ಯಜಮೆನಿಪ ಶಿವಜ್ಞಾನಮಕ್ಕುಂ ರುದ್ರನಾ
ಪರಮಪ್ರಸಾದದಿನದಂ ಶಿವಂ ಶಂಕರಂ
ಪರಮಾತ್ಮನಮಲರುದ್ರಂ ಸಚ್ಚಿದಾನಂದ
ವರಘನಂ ಸಾಂಬನೇ ಮಾಳ್ಪನುಳಿದರಿನಾಗದೆಂದುಮಾ ಲೈಂಗ್ಯಮೊಲವಿಂ ೮೮

†ಜ್ಞಾನಮೇವ ಮಯಾ ಯೆನುತ್ತೆ ವಿಷ್ಣೋಯೆನುತ
ದೇ ನಯದೆ ಮೋಕ್ಷಸಾಧನಮುಚ್ಯತೇಯೆನಲ್
ಜ್ಞಾನಮೆನೆ ವೇದಯೆನುತೆ ಶಿರೋಯೆನುತೆ ಭೂತಮಿತಿ ಮೇಯೆನುತೆ ಬಳಿಕ್ಕಂ
ತಃನೆಯ್ದೆ ನಿಶ್ಚಿತಾಮತಿರೆನುತನೇಕ ಯೆನು
ತಾನಂದದಿಂದೆ ಮೇಣ್ ಜನ್ಮಯೆಂದೆನುತೆ ಸಿ
ದ್ಧಾನಾಮೆನಲ್ ಶ್ರೌತಯೆಂದೆನಲ್ ಸ್ಮಾರ್ತಾನುವರ್ತಿನಾಮೆಂದೆನುತ್ತುಂ ೮೯

---

* ಪ್ರಸಾದಾದೇವ ರುದ್ರಸ್ಯ ಜ್ಞಾನಂ ವೇದಾಂತವಾಕ್ಯಜಂ ।
ಪ್ರತಿಬಂಧ ವಿನಿರ್ಮುಕ್ತಂ ಭವೇತ್ತದ್ಧಿ ವಿಮುಕ್ತಿದಂ ॥
ಶಿವಶಂಕರರುದ್ರಾಖ್ಯಸ್ಸಾಂಬಸ್ಸತ್ಯಾದಿ ಲಕ್ಷಣಃ ।
ಪರಮಾತ್ಮಾ ಹಿ ವಿಜ್ಞಾನಪ್ರಸಾದಂ ಕುರುತೇ ಸದಾ ॥

† ಜ್ಞಾನಮೇವ ಮಯಾವಿಷ್ಣೋ ಮೋಕ್ಷಸಾಧನಮುಚ್ಯತೇ ।
ಜ್ಞಾನಂ ವೇದ ಶಿರೋಭೂತ ಮಿತಿ ಮೇ ನಿಶ್ಚಿತಾಮತಿಃ ॥
ಅನೇಕಜನ್ಮಸಿದ್ಧಾನಾಂ ಶ್ರೌತಸ್ಮಾರ್ತಾನುವರ್ತಿನಾಂ ।
ಜಾಯತೇ ತಚ್ಛಿವಜ್ಞಾನಂ ಪ್ರಸಾದಾದೇವ ಮೇ ಹರೇ ॥
ಚತುರ್ವೇದಧರೋ ವಿಪ್ರಸ್ಸರ್ವಶಾಸ್ತ್ರವಿಶಾರದಃ ।
ಶಿವಜ್ಞಾನಂ ನಜಾನಾತಿ ದರ್ವೀಪಾಕರಸಂ ಯಥಾ ॥

—ಸೂತಗೀತ

ಮತ್ತೆಯುಂ ಜಾಯತೇ ತಚ್ಛಿವಜ್ಞಾನಂ ಯೆ
ನುತ್ತುಂ ಪ್ರಸಾದಾದೆನುತಮೇವ ಮೇಯೆಂದೆ
ನುತ್ತುಂ ಹರೇ ಚತುರ್ವೇದಯೆನುತುಂ ಧರೋ ವಿಪ್ರೋಯೆನುತ್ತೆ ಬಳಿಕೆ
ಎತ್ತಿಯದು ಸರ್ವಶಾಸ್ತ್ರವಿಶಾರದಃ ಶಿವಯೆ
ನುತ್ತೆ ಮೇಣ್ ಜ್ಞಾನಂ ನಜಾನಾತಿದರ್ವೀಯೆ
ನುತ್ತೆ ಪಾಕರಸಂ ಯಥಾ ಯೆನಲಥರ್ವ ಶಿರವೊರೆದುದೇ ಜ್ಞಾನಂ ವಲಂ ೯೦

ಅದು ಮೋಕ್ಷಸಾಧನಮೆನಿಕುಮಖಿಲ ಪೂರ್ವಜ
ನ್ಮದ ಸುಕೃತದಿಂ ಸಿದ್ಧರಾದ ಸನ್ಮಾರ್ಗಿಗ
ಳ್ಗೊದವುಗುಂ ಮತ್ಕೃಪೆಯಿನಂತಲ್ಲದುಳಿದ ಶಾಸ್ತ್ರಾಮ್ನಾಯ ಪಾಠಂಗಳಿಂ
ಪುದಿದ ಭೂಸುರನಾದೊಡಂ ತಚ್ಛಿಜ್ಞಾನ
ಪದವನಱಿಯಂ ಪಾಕರಸನಿಷ್ಣದರ್ವಿಯವೊ
ಲಿದು ಸತ್ಯವೆಂದು ಹರಿಗೀಶನೊರೆದಂ ಸೂತಗೀತೆಯೊಗಂತಲ್ಲದೆ ೯೧

ಮುದದೆ * ಪರಮಾದ್ವೈತವಿಜ್ಞಾನನಿಷ್ಠಾಯೆ
ನೆ ದಲಂತೆ ಕಾಷ್ಠಾ ಸುದುರ್ಲಭಾಯೆನೆ ತದ್ವಿ
ಧದೆ ಶಿವಾದನ್ಯತ್ರಯೋ ಯೆಂದೆನುತ್ತೆ ತಾಂ ಭ್ರಾಂತ್ಯಾಯೆನುತ್ತೆ ಮತ್ತಂ
ಪದಪಿನಿಂ ಭ್ರಾಂತ್ಯಾಯೆನುತ್ತೆ ವಾವೇದಯೆನು
ತೊದವಿ ಚೇತ್ಪಶುರೆನೆ ಶಿವಾದಿನಾಮಯೆನುತ್ತು
ವೊದವಿ ಹೀನಸ್ಯ ಯೆನುತುಂ ಧ್ಯಾನಹೀನಸ್ಯಶೂಲಿನೋ ಯೆನುತೆ ಕೂಡೆ ೯೨

---

* ಪರಮಾದ್ವೈತವಿಜ್ಞಾನನಿಷ್ಠಾ: ಕಾಷ್ಠಾ ಸುದುರ್ಲಭಾಃ ।
ಶಿವಾದನ್ಯತ್ರ ಯೋ ಭ್ರಾಂತ್ಯಾಽಭ್ರಾಂತ್ಯಾವಾವೇದಚೇತ್ ಪಶುಃ ॥
ಶಿವಾದಿನಾಮಹೀನಸ್ಯ ಧ್ಯಾನಹೀನಸ ಶೂಲಿನಃ ।
—ಬ್ರಹ್ಮಗೀತಾ

ವಿನಯದಿಂ * ಶಿವಭಕ್ತಿಯೆನುತುಂ ವಿಹೀನಸ್ಯ
ಯೆನುತೆ ಮತ್ತಂ ತ್ರಿಪುಂಡ್ರೋದ್ಧೂಳನಾದಿಷು ಯೆ
ನೆ ನವೀನವಾಕ್ಯದಿಂ ಶ್ರದ್ಧಾಯೆನುತ್ತೆ ಹೀನಸ್ಯ ರುದ್ರಸ್ಯ ಯೆನುತುಂ
ಅನುವಿಂ ಪ್ರಸಾದಾದೆನುತೆ ಶುದ್ಧಯೆನುತೆ ವೇ
ದನಮೆನುತೆ ಸಾಕ್ಷಾದೆನುತ್ತೆ ಮುಕ್ತಿಶ್ಚ ಹೇ
ಯೆನುತೆ ದೇವಾನ್ನೈವ ಸಿದ್ಧತಿ ಯೆನುತೆ ದೇಹಿನಃ ಪ್ರಸಾದೇನ ಯೆನುತುಂ ೯೩

ವಿನುತಿಸಿ ವಿನಾ-ದೇವಮೆನುತೆ ಯೋ ಜಾನಂತಿ
ಯೆನುತುಂ ಸುರರ್ಷಭಾಃ ಯೆನುತೆ ತೇ ಜಾನಂತಿ
ಯೆನೆ ವಿನಾಘ್ರಾಣಮೆನೆ ಗಂಧಮೆನೆ ಹಸ್ತೇನ ಕೇವಲಮೆನಲ್ಕೆ ಕೇಳ್ವೈ
ಘನತರೋತ್ಕರ್ಷಸ್ಥಿತಿಯಿನೆಸೆವ ಪರಮ ಪಾ
ವನ ಸದದ್ವೈತವಿಜ್ಞಾನೈಕನಿಷ್ಠ ರು
ದ್ರನನುಳಿದು ದುರ್ಭ್ರಾಂತಿಯಿಂ ಲಭಿಸಿದಜ್ಞಾನದಿಂ ತಿಳಿಯೆ ಮೇಣ್ ಪಶುವವಂ
೯೪

ಶಿವನಾಮಮಂ ಸ್ಮರಿಸದಾ ಶಿವಧ್ಯಾನಮಂ
ತವೆ ಮಾಡದಮಲಸದ್ಭಕ್ತಿಯಿಲ್ಲದ ವಿಭೂ
ತಿ ವಿಹಿತೋದ್ಧೂಳನಾದಿಕ್ರಿಯೆಗಳೊಳ್ ಶ್ರದ್ಧೆಯಿಲ್ಲದಾತಂಗಭವನ
ನವಸುಪ್ರಸಾದದಿಂ ಜ್ಞಾನಮುಂ ಮುಕ್ತಿಯುಂ
ಬಿವು ಘಟಿಸವದನುಳಿದು ತಿಳಿದಱಿವು ಮೂಗಿಲ್ಲ
ದೆ ವಲಂ ಕರದೆ ಗಂಧವಱಿವಂದವೆಂದು ಸುರರ್ಗೊರೆದನಜನಾ ಗೀತಿಯಿಂ ೯೫

---

* ಶಿವಭಕ್ತಿವಿಹೀನಸ್ಯತ್ರಿಪುಂಡ್ರೋದ್ಧೂಳನಾದಿಷು ।
ಶ್ರದ್ಧಾಹೀನಸ್ಯ ರುದ್ರಸ್ಯ ಪ್ರಸಾದಾಚ್ಛುದ್ಧವೇದನಂ ॥
ಸಾಕ್ಷಾನ್ಮುಕ್ತಿಶ್ಚ ಹೇ ದೇವಾ ನೈವಸಿದ್ಧತಿ ದೇಹಿನಃ ।
ಪ್ರಸಾದೇನ ವಿನಾ ದೇವಂ ಯೋ ಜಾನಂತಿಸುರರ್ಷಭಾ: ॥
ತೇ ಜಾನಂತಿ ವಿನಾಘ್ರಾಣಂ ಗಂಧಂ ಹಸ್ತೇನ ಕೇವಲಂ

—ಬ್ರಹ್ಮಗೀತಾ

ಅಂತಱಿಂ ಹರ್ಯಜೇಂದ್ರಾದಿ ಸಕಲರ್ಗುಮಾ
ಕಾಂತನೊಲವಿಂ ಜ್ಞಾನಮಂ ಕೊಟ್ಟೊಡಱಿವರದ
ನಂತವಂ ಕುಡದೊಡೆ ಮರುಳರಪ್ಪರಿನ್ನೊರೆವುದೇಂ ಶಂಭುವೇ ಜ್ಞಾನದಂ
ಇಂತೆಂದು ನಾನಾ ಪ್ರಮಾಣಮುಂಟಾಗಿ ದನು
ಜಾಂತಕಂ ಜ್ಞಾನಪ್ರದಂ ದಲಲ್ತಲ್ತು ಬಿಡು
ಮುಂತೆ ಕೇಳ್ ಸರ್ವಜನಕಂ ವಿಷ್ಣುವೆಂಬ ನಿನ್ನುಕ್ತಿಗೆಲೆ ನಿರ್ವಾಹಮಂ ೯೬

ಘನದೆ *ಸೋಮೋಯೆನುತೆ ಪವತೇರೆನುತೆ ಮತ್ತೆ
ಜನಿತಾ ಮತೀನಾಮೆನುತ್ತೆ ಜನಿತಾದಿವೋ
ಜನಿತಾ ಪೃಥಿವ್ಯಾಯೆನುತ್ತೆ ಜನಿತಾಗ್ನೇರೆನುತ್ತೆ ತಾನಂತೆ ಜನಿತಾ
ಯೆನುತೆ ಸೂರ್ಯಸ್ಯ ಜನಿತೇಂದ್ರಸ್ಯ ಜನಿತಾಥ
ಯೆನುತೆ ವಿಷ್ಣೋರೆನಲುಮೇಶಂ ಪವನಮತಿಗ
ಗನಭೂಮಿ ಶುಚಿರವೀಂದ್ರಾಚ್ಯುತಾದ್ಯರ್ಗೆ ಪಿತೃವೆಂದು ಋಕ್ಕುಲಿವುತ್ತಿದೆ ೯೭

ಮತ್ತೆ †ಯಸ್ಯೇದಮೆನೆ ವೀರ್ಯಾದೆನುತೆ ಜಗದೆ
ನುತ್ತುದ್ಬಭೂವ ಯಸ್ಮಾದ್ಬ್ರಹ್ಮ ವಿಷ್ಣೂಯೆ
ನುತ್ತೆ ತಾಂ ಜಾತವೇದಾ ನಮಸ್ತಸ್ಮೈಯೆನುತೆ ರುದ್ರಯೆಂದೆನುತ್ತೆ
ಒತ್ತಿ ರೂಪಾಯ ತುಭ್ಯಮೆನೆ ತನ್ಮೇಯೆಂದೆ
ನುತ್ತುಂ ಮನಃಶ್ಶಿವಯೆನುತ್ತೆ ಸಂಕಲ್ಪಂ ಎ
ನುತ್ತಸ್ತುಯೆನಲಾವವನ ವೀರ್ಯದಿಂದೀ ಜಗತ್ತೊಗೆದುದಂತಲ್ಲದೆ ೯೮

---

* ಸೋಮಃ ಪವತೇರ್ಜನಿತಾ ಮತೀನಾಂ ಜನಿತಾ ಪೃಥಿವ್ಯಾ ಜನಿತಾ
ಸೂರ್ಯಸ್ಯ ಜನಿತೇಂದ್ರಸ್ಯ ಜನಿತಾಥ ವಿಷ್ಣೋಃ ॥
—ಋಕ್ಕು

† ಯಸ್ಯೇದಂ ವೀರ್ಯಾಜ್ಜಗದುದ್ಬಭೂವ । ಯಸ್ಮಾದ್ಬ್ರಹ್ಮ ವಿಷ್ಣೂ ಜಾತವೇದಾ ।
ನಮಸ್ತಸ್ಮೈರುದ್ರರೂಪಾಯ । ತುಭ್ಯಂ ತನ್ಮೇ ಮನಶ್ಶಿವಸಂಕಲ್ಪಮಸ್ತು ।
—ಶಿವಸಂಕಲ್ಪೋಪನಿಷತ್

ಆವನತ್ತಣಿನುದಯಿಸಿದರಬ್ಜಭವವಿಷ್ಣು
ಪಾವಕಾದಿಗಳಂತೆಸೆವ ರುದ್ರರೂಪನಾ
ದಾ ವಿಮಲ ಶಂಭುಗೆ ನಮಸ್ಕರಿಪೆನೆನ್ನ ಮನವೀಪ್ರಕಾರದೊಳೊಪ್ಪುವಾ
ಪಾವನಶಿವನ ನೆನಹನುಳ್ಳುದಕ್ಕೆಂದು ಸದ್
ಭಾವದಿಂದೊಲ್ದು ಶಿವಸಂಕಲ್ಪನಾಮದಿಂ
ದೋವೊ ರಂಜಿಸುವುಪನಿಷತ್ತು ಸಾಱುತಿದೆ ಸಾಂಬನೇ ಸರ್ವಜನಕನೆಂದು ೯೯

ಭರದಿಂ *ಪರಾತ್ಪರತರಂ ಚಾಹುರೆನೆ ಪರಾ
ತ್ಪರತರಂ ಧ್ರುವಮೆನಲ್ ಬ್ರಹ್ಮಣೋ ಜನಕಮೆನು
ತಿರದೆ ವಿಷ್ಣೋರೆನುತೆ ವಹ್ನೇರೆನುತ್ತೆ ವಾಯೋಸ್ಸದಾಶಿವಮೆನಲ್ಕೆ
ಪರಕೆ ಪರತರ ಪರಮನಂ ನಿತ್ಯನಂ ಶಿವನ
ನುರು ಸುರಜ್ಯೇಷ್ಠಂಗೆ ಹರಿಗಗ್ನಿಗನಿಲಂಗೆ
ವರ ಜನಕನೆಂದು ಪೇಳ್ವರ್ ವೇದವಿದರೆಂದು ಸಾಱುತಿದೆ ರವಿಪುರಾಣಂ ೧೦೦

ಅದು §ಮಯಾಸಹಿತೋಯೆನುತ್ತೆ ದೇವೋಯೆನೆ ಮು
ದದೆ ಸೋಮಯಿತ್ಯುಚ್ಯತೇ ಬುಧೈಸ್ಸಯೆನೆ ಛಂ
ದದಿನೇವ ಕಾರಣಂ ನಾನ್ಯೋಯೆನುತ್ತೆ ವಿಷ್ಣೋರಪಿ ಚ ವೈ ಶ್ರುತಿರೆನೆ
ಪದಪಿನಿಂದುಮೆಯೊಡನೆಸೆವ ದೇವನೆ ವಿಶಾ
ರದ ಚಯದೆ ಸೋಮನೆಂದಂಕಿಸಲ್ಪಟ್ಟನವ
ನೆ ದಲುಪೇಂದ್ರಂಗಮುಳಿದವರ್ಗೆ ಕಾರಣಮನ್ಯರಲ್ತೆಂದು ಮತ್ತಮೊರೆಗುಂ ೧೦೧

---

* ಪರಾತ್ಪರತರಂ ಚಾಹುಃ ಪರಾತ್ಪರತರಂ ಧ್ರುವಂ ।
ಬ್ರಹ್ಮಣೋ ಜನಕಂ ವಿಷ್ಣೋರ್ವಹ್ನೇರ್ವಾಯೋಸ್ಸದಾಶಿವಃ ॥

—ಆದಿತ್ಯಪುರಾಣ

§ ಉಮಯಾಸಹಿತೋದೇವ । ಸ್ಸೋಮಯಿತ್ಯುಚ್ಯತೇ ಬುಧೈಃ ॥
ಸ ಏವ ಕಾರಣಂ ನಾನ್ಯೋ । ವಿಷ್ಣೋರಪಿಚವೈಶ್ರುತಿಃ ॥
ಮತೀನಾಂ ಚ ದಿವಃ ಪೃಥ್ವ್ಯಾಃ । ವಹ್ನೇಸೂರ್ಯಸ್ಯವಜ್ರಿಣಃ ॥
ಸಾಕ್ಷಾದಪಿಚ ವಿಷ್ಣೋರ್ವೈ ಸೋಮೋ ಜನಯಿತೇಶ್ವರಃ ॥

—ಕಾಶೀಖಂಡ

ಮತ್ತಂ ಮತೀನಾಂ ಚ ಎನೆ ದಿವಃ ಪೃಥ್ವ್ಯಾಯೆ
ನುತ್ತೆ ವಹ್ನೇರೆಂದೆನುತ್ತೆ ಸೂರ್ಯಸ್ಯ ಯೆನು
ತೆತ್ತಿ ತಾಂ ವಜ್ರಿಣಃ ಸಾಕ್ಷಾದಪಿ ಚ ಯೆಂದೆನುತ್ತೆ ವಿಷ್ಣೋರ್ವೈ ಯೆನೆ
ನುತ್ತೇನೊಸೊಮೋ ಜನಯಿತೇಶ್ವರೋಯೆಂದೆ
ನುತ್ತಿರಲ್ ಮತಿ ಗಗನ ಭೂ ಶುಚಿ ರವೀಂದ್ರ ಪುರು
ಷೋತ್ತಮಜಯಕ್ಕುಮಾಪತಿ ಜನಕನೆಂದು ಕಾಶೀಖಂಡಮುಲಿವುತ್ತಿದೇ ೧೦೨

ಇರದೆ ಮೇಣ್ *ದ್ಯಾವಾ ಪೃಥಿವ್ಯೋರೆನುತ್ತೆ ಮ
ತ್ತರರೆ ಇಂದ್ರಾಗ್ನ್ಯೋರ್ಧಿಯಾಂ ತವ ಯಮಸ್ಯಯೆನು
ತಿರದದು ಚ ವರುಣಸ್ಯ ಯೆಂದೆನುತ್ತಂ ಶಶಾಂಕಸ್ಯ ಜನಿತಾಯೆನುತ್ತಂ
ಪರಮೇಶ್ವರೋಯೆನಲ್ ನಾಕಕ್ಷಿತೀಂದ್ರಾಗ್ನಿ
ವರ ಮತಿತತಿಗೆ ನಿನಗೆ ಯಮ ವರುಣ ಶಶಿಗಳ್ಗೆ
ಹರನೆ ಪಿತೃವೆಂದ ಶರಭೋಕ್ತಿ ನರಸಿಂಹಂಗೆ ಕಾಳಿಕಾಖಂಡದೊಳಿದೇ ೧೦೩

‡ಕೂರ್ಮೆಯಿಂ ಬ್ರಹ್ಮವಿಷ್ಣ್ವರ್ಕ ಶಕ್ರಾಗ್ನಿಜಲ
ಧರ್ಮ ಯೆನುತುಂ ತದುಪುರೋಗಮಾಃ ಎನುತೆ ತ
ನ್ನರ್ಮವೆತ್ತಿ ಸುರಾಸುರಾಃ ಸಂಪ್ರಸೂತಾ ಯೆನುತ್ತೆ ದಲ್ ತ್ವತ್ತೋಯೆನೆ
ಪೆರ್ಮೆಯಿಂ ಸರ್ವೇ ದಿವೌಕಸೋಯೆಂದೆನೆ ಚ
ತುರ್ಮುಖಾಚ್ಯುತ ರವೀಂದ್ರಾಗ್ನಿ ವರುಣಾಂತಕರಿ
ವರ್ ಮೊದಲೆನಿಪ ಸುರಾಸುರರೊಗೆದರೀಶ ನಿನ್ನಿಂದೆಂಗುಮಾ ಸ್ಕಾಂದಮುಂ ೧೦೪

---

* ದ್ಯಾವಾ ಪೃಥಿವ್ಯೋರಿಂದ್ರಾಗ್ನ್ಯೋರ್ಧಿಯಾಂ ತವ ಯಮಸ್ಯ ಚ ।
ವರುಣಸ್ಯ ಶಶಾಂಕಸ್ಯ ಜನಿತಾ ಪರಮೇಶ್ವರಃ ॥

—ಕಾಳಿಕಾಖಂಡ

‡ ಬ್ರಹ್ಮವಿಷ್ಣ್ವರ್ಕಶಕ್ರಾಗ್ನಿ । ಜಲಧರ್ಮಪುರೋಗಮಾ: ।
ಸುರಾಸುರಾಸ್ಸಂಪ್ರಸೂತಾಸ್ತ್ವತ್ತಸ್ಸರ್ವೇದಿವೌಕಸ: ॥

—ಸ್ಕಾಂದ

ವಿನಯದೆ *ವಿನಾಕಾಶಮೆನೆ ಜಗನ್ನೇಹಯೆಂ
ದೆನೆ ವಿನಾಕ್ಷ್ಮಾಂ ವಾಯುನಾ ವಿನಾ ತೇಜಸಾ
ಯೆನೆ ವಾರಿಣಾ ಚೈವಯೆನುತೆ ಯಜಮಾನೇನ ಭಾವಿನಾಯೆನೆ ಭಾನುನಾ
ಯೆನುತೆ ಶಶಿನಾಯೆನುತೆ ಲೋಕೋಯೆನುತೆ ತಸ್ಯ
ಯೆನುತು ಮೇತೇಯೆಂದೆನುತ್ತೆ ಶಿಶವಃಪ್ರಭೋಃ
ಯೆನೆ ಶಿವವ್ಯಾಪಾರದಿಂದಿಲ್ಲಿ ಸರ್ವಜಗಮುಂ ಪ್ರತಿಷ್ಠಿತಮೆನಿಕ್ಕುಂ ೧೦೫

ಏನನೊರೆದಪೆನಿಲ್ಲಿ ಶಿವನಷ್ಟಮೂರ್ತಿಮಯ
ವೀ ನಿಖಿಲ ಜಗಮೆಂತೆನಲ್ ಗಗನ ಭೂ ಮಾ
ರುತಾನಲಜಲಾತ್ಮರವಿಶಶಿಗಳಿಲ್ಲದೊಡೆ ಲೋಕಮದುಂಟೆಯದಱಿಂದಮುಂ
ಆ ನಿಜಪ್ರಭುವಿನ ಶಿಶುಗಳೆಂದು ಲೈಂಗ್ಯಮಿದೆ
ನೂನಮಂತಲ್ಲಿಯೇ †ಸ್ತ್ರೀಲಿಂಗಮಖಿಲಮೆನು
ತಾನಂದದಿಂ ಸರ್ವಮೆನುತುಂ ಪ್ರಕೃತಿರೆನುತೆ ಮಮ ದೇಹಜಾಯೆನುತ್ತುಂ ೧೦೬

ಪುಲ್ಲಿಂಗಮೆನುತೆ ಪುರುಷೋಯೆಂದೆನುತ್ತೆ ಮ
ತ್ತಲ್ಲಿ ವಿಪ್ರಾ ಮಮಯೆನುತ್ತೆ ದೇಹಯೆನುತ್ತೆ ಸ
ಲ್ಲೀಲೆಯಿಂದಂ ಸಮುದ್ಭವೋಯೆನುತುಭಾಭ್ಯಾಮೇವವೈಯೆನುತ್ತುಂ
ನಿಲ್ಲದದು ಸೃಷ್ಟಿರ್ಮಮಯೆನೆ ವಿಪ್ರಾಯೆನುತು
ಮುಲ್ಲಾಸದೆ ನಸಂಶಯೋಯೆನಲ್ ವಾದಿ ಕೇ
ಳಿಲ್ಲಿ ನಿಸ್ಸಂದೇಹವೆಂದು ಋಷಿಗಳ್ಗಖಿಲ ಜನಕ ಶಿವನೊರೆದ ಪರಿಯಂ ೧೦೭

---

* ವಿನಾಕಾಶಂ ಜಗನ್ನೇಹ । ವಿನಾಕ್ಷ್ಮಾಂ ವಾಯುನಾವಿನಾ ।
ತೇಜಸಾವಾರಿಣಾಚೈವ ಯಜಮಾನೇನ ಭಾವಿನಾ ॥
ಭಾನುನಾ ಶಶಿನಾ ಲೋಕೋ ತಸ್ಯೈ ತೇ ಶಿಶವಪ್ರಭೋಃ ॥

—ಲೈಂಗ್ಯ

† ಸ್ತ್ರೀಲಿಂಗಮಖಿಲಂ ಸರ್ವಂ । ಪ್ರಕೃತಿರ್ಮಮ ದೇಹಜಾ ॥
ಪುಲ್ಲಿಂಗಂ ಪುರುಷೋ ವಿಪ್ರಾ । ಮಮ ದೇಹಸಮುದ್ಭವಃ ॥
ಉಭಾಭ್ಯಾಮೇವ ವೈ ಸೃಷ್ಟಿರ್ಮಮ ವಿಪ್ರಾ ನ ಸಂಶಯಃ ॥

ನಿಯತಮೀ ಸ್ತ್ರೀಲಿಂಗಮಯವಾದುದೆಲ್ಲವೆ
ನ್ನಯೆ ದೇಹಜಪ್ರಕೃತಿಯಾ ತೆಱದೆ ಪುಲ್ಲಿಂಗ
ಮಯವಾದುವೆಲ್ಲವೆನ್ನಯ ಶರೀರೋದ್ಭವಪುರುಷನಕ್ಕುಮೀ ಯೆರಡಱಿಂ
ಪ್ರಯುತಂ ಜಗತ್ಸೃಷ್ಟಿಯೆಂದೆಂಗುಮದಱಿನಾ
ರಯೆ ವಿಷ್ಣು ಸರ್ವಜನಕಂ ದಲಲ್ತೀವಚನ
ಮಯಥಾರ್ಥವಿನ್ನಾಲಿಸೈ ಸುಕರನಬ್ಜಾಕ್ಷನೆಂದೊರೆಗೆ ನಿರ್ವಾಹಮಂ ೧೦೮

ಸತತ *ಮಥನವಮೇಯೆನುತ್ತೆ ಮಾಸೇಯೆಂದೆ
ನುತೆ ಸರ್ವಲಕ್ಷಣಯೆನುತ್ತೆ ಸಂಪೂರ್ಣೋಭ
ವತಿ ಪೂರ್ವಜಾತಿಂ ಸ್ಮರತಿ ಯೆನಲ್ ಬಳಿಕೆ ಕೃತ್ಯಾಕೃತ್ಯಮೆನೆ ಚ ಯೆನುತೇ
ಅತಿಶಯದೆ ಕರ್ಮ ಜಾನಾತಿ ಎಂದುಱಿದೆ ಸ
ಮ್ಮತಿಸುತೆ ಶುಭಾಶುಭಮೆನೆ ಚ ಕರ್ಮವಿಂದತಿಯೆ
ನುತದು ನಾನಾ ಯೋನಿಯೆನೆ ಸಹಸ್ರಾಣಿ ಗತ್ವಾ ಚೈವ ತು ಯೆನುತ್ತೆ ತಾಂ ೧೦೯

ಮತ್ತೆಯುಂ ಯನ್ಮಯಾಯೆನುತುಮಾಹಾರಾಯೆ
ನುತ್ತೆ ವಿವಿಧಾಯೆಂದೆನುತ್ತೆ ಭುಕ್ತಾಯೆಂದೆ
ನುತ್ತೆ ಪೀತಾಶ್ಚ ವಿವಿಧಾ ಸ್ತನಾ ಯದಿಯೆಂದೆನುತ್ತೆ ಯೋನ್ಯಾಃಯೆನುತ್ತೆ
ಸುತ್ತೇಂ ಪ್ರಮುಂಚಾಮಿತಂ ಪ್ರಪದ್ಯೇಯೆಂದೆ
ನುತ್ತುಂ ಮಹೇಶ್ವರಮೆನಲ್ ಬಳಿಕಮಾ ತೆಱದಿ
ನೆತ್ತಿಯದು ವಾಯುನಾ ವೈಷ್ಣವೇನಾಪಿ ಸಂಸ್ಪೃಷ್ಟೋಯೆನುತ್ತೆ ಕೂಡೆ ೧೧೦

---

* ಅಥ ನವಮೇ ಮಾಸೇ । ಸರ್ವಲಕ್ಷಣಸಂಪೂರ್ಣೋ ಭವತಿ ।
ಪೂರ್ವಜಾತಿಸ್ಮರತಿ । ಕೃತ್ಯಾಕೃತ್ಯಂ ಚ ಕರ್ಮ ಜಾನಾತಿ ।
ಶುಭಾಶುಭಂ ಕರ್ಮವಿಂದತಿ । ನಾನಾ ಯೋನಿ ಸಹಸ್ರಾಣಿ ಗತ್ವಾ ಚೈವ ತು ಯನ್ಮಯಾ ।
ಆಹಾರಾ ವಿವಿಧಾ ಭುಕ್ತಾಃ ಪೀತಾಶ್ಚ ವಿವಿಧಾಸ್ತನಾಃ ।
ಯದಿ ಯೋನ್ಯಾಃ ಪ್ರಮುಂಚಾಮಿತಂ ಪ್ರಪದ್ಯೇ ಮಹೇಶ್ವರಂ ।
ವಾಯುನಾ ವೈಷ್ಣವೇನಾಪಿ ಸಂಸ್ಪೃಷ್ಟೋ ಜಾಯತೇ ತದಾ ॥

— ಗರ್ಭೋಪನಿಷತ್

ಅದು ಜಾಯತೇ ತದಾ ಯೆನಲೊಂಬತನೆಯ ಮಾ
ಸದೊಳರ್ಭಕಂ ಗರ್ಭದೊಳ್ ಸರ್ವಲಕ್ಷಣಾ
ಭ್ಯುದಿತಾಂಗನಕ್ಕುಮಾ ಕಾಲದೊಳ್ ಪೂರ್ವಜಾತಿಸ್ಮೃರ್ತ್ಯವಕ್ಕುಮಲ್ಲಿ
ಪುದಿದ ಕೃತ್ಯಾಕೃತ್ಯ ಕರ್ಮಂಗಳಂ ತಿಳಿಗು
ಮೊದವಿದ ಶುಭಾಶುಭವ್ಯಾಪಾರಮುಮನಱಿಗು
ಮುದಯಿಸಿ ಸಕಲ ಯೋನಿಗಳೊಳಲ್ಲಿಗಲ್ಲಿಗೆಸೆವಾಹಾರವುಂಡೆನೆಂಗುಂ ೧೧೧

ಪಲತೆಱದ ವೊಲೆಗಳೆನ್ನಿಂದುಣಲ್ಪಟ್ಟವಾ
ನಲವೆತ್ತೆನೆತ್ತಾನುಮೀ ಹೀನ ಯೋನಿಮುಂ
ಡಲದಿಂದೆ ಪೊಱಮಡುವೆನೇಗಳಾ ಶಿವನನಾಶ್ರಯಿಸಿ ಸನ್ಮಾರ್ಗಿಯಾಗಿ
ಸಲೆ ಬಾಳ್ವೆನೆಂದು ಚಿಂತಿಸುತಿರ್ಪಿನಂ ಹರಿಯ
ನಿಲರೂಪದಿಂದೆ ತದ್ಗರ್ಭಮಂ ಪೊಕ್ಕದಂ
ತಲೆಕೆಳಗುಮಾಡಿ ತಜ್ಞಾನವಳಿದಜ್ಞಾನಮೆಸಗಿ ಭವಭವಕೆ ಬರಿಪಂ ೧೧೨

ಎಂದು ಗರ್ಭೋಪನಿಷದುಕ್ತಿಯಿದೆ ಮತ್ತಮಾ
ಚಂದದಿಂ ಕೇಳ *ಯದಿ ಯೋನ್ಯಾಃಪ್ರಮುಂಚಾಮಿ
ಯೆಂದೆನುತ್ತುಂ ತಂ ಪ್ರಪದ್ಯೇ ಮಹೇಶ್ವರಂ ವಿರಜಾನಲಜಮೆನುತ್ತುಂ
ಮುಂದೆ ಭಸ್ಮಯೆನುತ್ತೆ ಮೇಣ್ ಗೃಹೀತ್ವಾಚಯೆನೆ
ಸಂದಗ್ನಿಹೋತ್ರಜಮೆನುತ್ತುಂ ಸಮುದ್ಧೂಳ್ಯ
ಯೆಂದದುಸದಾಚಾರ್ಯಮೆನುತ್ತೆ ತಾಂ ಪ್ರಣಿಪತ್ಯಯೆನುತಾತ್ಮಯೆಂದೆನುತ್ತುಂ ೧೧೩

---

* ಯದಿ ಯೋನ್ಯಾಃ ಪ್ರಮುಂಚಾಮಿ । ತಂ ಪ್ರಪದ್ಯೇ ಮಹೇಶ್ವರಂ ।
ವಿರಜಾನಲಜಂ ಭಸ್ಮಗೃಹೀತ್ವಾಚಾಗ್ನಿಹೋತ್ರಜಂ ।
ಸಮುದ್ಧೂಲ್ಯ ಸದಾಚಾರ್ಯಂ ಪ್ರಣಿಪತ್ಯಾತ್ಮವಿದ್ಯಯಾ ।
ಸಂಸಾರಸಾಗರಂ ಘೋರಂ । ಲಂಘಯಾಮ್ಯಹಮಾತ್ಮನಃ ।
ಇತ್ಥಂ ಗರ್ಭಗಸ್ಸ್ಮೃತ್ವಾಯೋನಿಯಂತ್ರಪ್ರಪೀಡನಾತ್ ।
ಜಾಯತೇ ವಾಯುನಾ ಯಾತಿ ವಿಸ್ಮೃತಿಂ ವೈಷ್ಣವೇನ ಚ ॥

— ಸೂತಸಂಹಿತೆ

ಓರಂತೆ ವಿದ್ಯಯಾ ಸಂಸಾರಸಾಗರಂ
ಘೋರಮೆನೆ ಲಂಘಯಾಮ್ಯಹಮಾತ್ಮನೋಯೆನು
ತ್ತಾ ರೀತಿಯಿಂದಿತ್ಥಮೆನುತೆ ಗರ್ಭಗತೋಯೆನುತ್ತೆ ತಾಂ ಸ್ಮೃತ್ವಾಯೆನೆ
ಆರಯಲ್ ಯೋನಿಯಂತ್ರಪ್ರಯೆನೆ ಮತ್ತಂ ವಿ
ಚಾರದಿಂ ಪೀಡನಾಜ್ಜಾಯತೇಯೆಂದೆನುತ
ದೇ ರಭಸದಿಂ ವಾಯುನಾ ಯಾತಿ ವಿಸ್ಮೃತಿಮೆನುತೆ ವೈಷ್ಣವೇನಚಯೆನೆ ೧೧೪

ನವಮಾಸದೊಳ್ ಶಿವಜ್ಞಾನಂ ಸ್ಫುರಿಸೆ ಪಿಂದೆ
ವಿವರಿಸಿದವೋಲೆಲ್ಲವಱಿದು ಮೇಣಾಯೋನಿ
ವಿವರದಿಂದೆಂತಕ್ಕೆ ಪೊಱಮಡುವೆನಾಗಳಾ ಘನಮಹೇಶನನೆಯ್ದುವೆಂ
ತವದೆ ವಿರಜಾನಲಜ ಭಸಿತವಕ್ಕಗ್ನಿಹೋತ್ರಜಂ
ತ್ರವಿಹಿತಾಗ್ನಿಜಭಸಿತವಕ್ಕದಂ ಗ್ರಹಿಸಿಯವ
ಯವಕೆ ಲೇಪಿಸಿ ಸದಾಚಾರ್ಯಂಗೆ ನಮಿಸಿಯಾತ್ಮಜ್ಞಾನಸಾಮರ್ಥ್ಯದಿಂ ೧೧೫

ಘೋರಸಂಸಾರಾಬ್ಧಿಯಂ ದಾಂಟುವೆಂ ದಲೆಂ
ದೀ ರೀತಿಯಿಂ ಗರ್ಭಗತಜಂತುನೆನೆದವ
ಸ್ಥಾರಸದೊಳಾಳ್ವನಿತಱೋಳ್ವಿಷ್ಣು ವಾಯುಸ್ವರೂಪದಿಂ ಪೊಕ್ಕುದರಮಂ
ಭೋರನಾ ಯೋನಿಯಂತ್ರಪ್ರಪೀಡನದಿಂದೆ
ಸಾರ ಸುಜ್ಞಾನಮಂ ಮುಸುಳಿಸಿಯವಿದ್ಯೆಯಂ
ಪೂರಿಸಿ ಭವಾಂತರಕ್ಕೆಯ್ದಿಸುವನೆಂದೊರೆವುತಿದೆ ಸೂತಸಂಹಿತೆ ಕರಂ ೧೧೬

ಅಂತಱಿಂ ನೀನೆ ಪೇಳ್ವೈ ವಾದಿ ಸುಜ್ಞಾನ
ಸಂತೋಷಮಂ ಕೆಡಿಸಿ ಜೀವಿಸಂಘಕೆ ದುಃಖ
ಸಂತಾನಬೀಜಮಾದುರು ಭವಕ್ಕೀಡುಮಾಳ್ಪಜ್ಞಾನಮಂ ಪ್ರಕಟಿಸಿ
ಸಂತತಂ ಗರ್ಭಶತ್ರುವೆನಿಪ್ಪಧೋಕ್ಷಜನ
ದೆಂತು ಶುಭಕರನಾದನಲ್ತಲ್ತು ಬಿಡುಬಿಡಿಂ
ಮುಂತುಸಿರ್ದಪೆಂ ಕೇಳಯೋನಿಜಂ ವಿಷ್ಣುವೆಂಬುಕ್ತಿಗೆಲೆ ನಿರ್ವಾಹಮಂ ೧೧೭

ತೋಯಜಾಕ್ಷಂ ಕಶ್ಯಪನ ಸುದತಿಗದಿತಿಗೊಗೆ
ದಾಯವಸರದೊಳಗಿಂದ್ರಾವರಜನೆಂಬ ನಾ
ಮಾಯತ್ತನಾಗನೇ ಸ್ಕಾಂದದಲ್ಲಿದು ಸುಪ್ರಸಿದ್ಧ ಕಥೆ ಮತ್ತೆ †ದತ್ತಾ
ತ್ರೇಯಸ್ಯಯೆನುತೆ ಯಃ ಪತ್ನ್ಯಾಯೆನುತ್ತೆ ಮ
ತ್ತೊಯ್ಯಾರದಿಂದಂ ಸಮಾರಾಧಿತಯೆನುತ್ತು
ಮಾಯತದೆವಾನ್ಪುರಾ ಬ್ರಹ್ಮಾಚ ಭಗವಾನೆನುತ್ತೆ ವಿಷ್ಣುರೆನುತ್ತೆ ತಾಂ ೧೧೮

ಅನುವಿನಿಂ ಯಸ್ಯಾಯೆನುತ್ತೆ ಜಾತೌಸುತೌ
ಯೆನೆ ಪುರಾಯೆನುತ ಸೌದೇವಃಕ್ರಮಾತ್ಪುತ್ರ
ಯೆನೆ ಕಾರಣಪ್ರಾಪಿತೇತಯಾ ಪುಷ್ಪಾಂಜಲೌ ತದಾಯೆನುತೆ ಪೂತೆ
ಯೆನುತೆವಿಸಸರ್ಜಾಂಶಕಂ ಸ್ವಕಮೆನುತ್ತದೇ
ಮನವಾರೆಯಂತರಾಂಜಲಿಯೆನುತೆ ಪುಷ್ಪೇಷು
ಯೆನುತೆ ಮತ್ತಂ ಪ್ರವಿಶ್ಯಾಂತಃ ಪಿನಾಕಿನೋ ಗರ್ಭವಾಸೋತಿಯೆನುತುಂ ೧೧೯

ಉರ್ವುತದು ತಾನೆ ದುರ್ವಾಸೋಯೆನುತೆ ಮತ್ತೆ
ಸರ್ವವಾಸೇಪ್ಸಿತಿಯೆನುತ್ತೀರಯನ್ನೆನುತೆ
ದುರ್ವಾಸನಾಮಾಯೆನುತ್ತೆ ಪುತ್ರೋ ಭೂದ್ಧತಯೆನೆ ಸಂಸಾರಯೆನುತುಂ
ನಿರ್ವಹಿಸಿ ವಿಗ್ರಹೋಯೆನಲತ್ರಿಯಂಗನೆಯ
ಖರ್ವಭಕ್ತಿಯೊಳರ್ಚಿಸಲ್ಕಜಹರೀಶ್ವರರ
ವರ್ವರದರಾಗಿ ಬೇಡೆಲೆ ತಾಯೆ ನಿನಗಾವುದಿಷ್ಟವೆನೆ ನುಡಿದಳೊಂದಂ ೧೨೦

---

† ದತ್ತಾತ್ರೇಯುಸ್ಯಯಃಪತ್ನ್ಯಾ ಸಮಾರಾಧಿತವಾನ್ ಪುರಾ
ಬ್ರಹ್ಮಾಚ ಭಗವಾನ್ ವಿಷ್ಣುರ್ಯಸ್ಯಾಜಾತೌಸುತೌ ಪುರಾ ॥
ಅಸೌದೇವಃಕ್ರಮಾತ್ಪುತ್ರ ಕಾರಣಪ್ರಾಪಿತೇತಯಾ।
ಪುಷ್ಪಾಂಜಲೌ ತದಾಪೂತೇ ವಿಸಸರ್ಜಾಂಶಕಂ ಸ್ವಕಂ ॥
ಅಂತರಾಂಜಲಿ ಪುಷ್ಪೇಷು ಪ್ರವಿಶ್ಯಾಂತಃ ಪಿನಾಕಿನಃ ।
ಗರ್ಭವಾಸೋತಿ ದುರ್ವಾಸಸ್ಸರ್ವವಾಸೇಪ್ಸಿತೀರಯನ್।
ದುಃರ್ವಾಸನಾಮೋ ಪುತ್ರೋ। ಭೂದ್ಧತಸಂಸಾರವಿಗ್ರಹಃ ॥

—ಕಾಶೀಖಂಡ

ತನಯರಾಗೆನಗೆ ನೀವಿನಿಬರೊಗೆಯಲ್ವೇಳ್ಕು
ಮೆನೆಯಂತೆಗೆಯ್ವೆವೆಂದಜಹರಿಗಳೊಗೆದರಂ
ದನಸೂಯೆಗಭವನಾನಂತೊಗೆಯಲಱಿಯೆನೆಂದಾ ಪುತ್ರಕಾಮಿಯಾಗಿ
ಮುನಿಯತ್ರಿ ಯಜಿಸಿ ತನಗೀವ ಪುಷ್ಪಾಂಜಲಿಯೊ
ಳಿನಿಸು ತನ್ನಂಶಮಂ ಸೃಜಿಸಲ್ಕದಾ ಶಿವಾ
ರ್ಚನಕುಸುಮದಿಂದೊಗೆವುವೆಲ್ಲರ್ಕೆ ಗರ್ಭವಾಸವತಿ ದುರ್ವಾಸಮೆನುತೆ ೧೨೧

ಜನಿಸೆ ದುರ್ವಾಸಾಖ್ಯಮನ್ವರ್ಥಮಾಗೆ ಭವ
ವನಧಿವಾಡಬನೆನಿಸಿ ಮೆಱೆದನಿಂತೆಂದು ಬುಧ
ವಿನುತ ಕಾಶೀಖಂಡಮಿದೆ *ಮಯಾಚಯೆನುತ್ತೆ ವಿಷ್ಣುನಾ ಚೈವಯೆನುತೆ
ಅನುವಿನಿಂ ಬ್ರಹ್ಮಣಾಚ ಮಹಾತ್ಮನಾಯೆನುತೆ
ವಿನಯದಿನಯೋನಿಜಂ ಮೃತ್ಯುಹೀನಮೆನುತ್ತು
ಮನಿಶಂ ಸಾಮರ್ಥ್ಯಮೆನುತುಂ ನಿವೇದಿತುಮೆನುತ್ತೊರೆದು ಮತ್ತಲ್ಲಿಯೇ ೧೨೨

ಯಜ್ಞಾಂಕಣಂ ಚಕರ್ಷಾಥ ಪುತ್ರಾರ್ಥಮೆನೆ
ಯಜ್ಞಯೆನುತುಂ ವಿತ್ತಮಸ್ತತಃಯೆಂದೆನಲ್
ಪ್ರಜ್ಞೆಯಿಂದಂ ಕ್ಷಣಾದಹಮೆನುತೆ ಶಂಭೋರೆನೆ ತನುಜಸ್ತಸ್ಯಯೆನುತುಂ
ಚಾಜ್ಞಯಾಯೆನೆ ಪುತ್ರನಂ ಬಯಸಿ ತಪಮಿರ್ಪ
ತಜ್ಞಂಗೆ ತಚ್ಛಿಲಾದಂಗೆ ಶತಮನ್ಯುವಧಿ
ಕಜ್ಞಾನದಿಂದೊರೆದನಾನುಮಜಹರಿಮುಖರುಮುದಯಿಸುವೆವಳಿವೆವಱಿಂ ೧೨೩

---

* ಮಯಾಚ ವಿಷ್ಣುನಾ ಚೈವ ಬ್ರಹ್ಮಣಾಚ ಮಹಾತ್ಮನಾ ।
ಅಯೋನಿಜಂ ಮೃತ್ಯುಹೀನಂ ನಸಾಮರ್ಥ್ಯಂ ನಿವೇದಿತುಂ ॥
ಯಜ್ಞಾಂಕಣಂ ಚಕರ್ಷಾಥ ಪುತ್ರಾರ್ಥಂ ಯಜ್ಞವಿತ್ತಮಃ ।
ತತಃಕ್ಷಣಾದಹಂಶಂಭೋಸ್ತನುಜಸ್ತಸ್ಯಚಾಜ್ಞಯಾ ॥

—ಲೈಂಗ್ಯ

ನಿಜಮಿದಾವಿತ್ತಸುತರೆಮ್ಮವೊಲೊಗೆವರಯೋ
ನಿಜನಾಗಿ ಮೃತ್ಯುವಿರಹಿತನಪ್ಪ ಮಗನನಾ
ಭುಜಗಧರನಲ್ಲದೀಯಲ್ ಶಕ್ತರಿಲ್ಲೆನಲೊಡಂ ಶಿವನನಾ ಮುನೀಂದ್ರಂ
ಭಜಿಸುತುಂ ಭರ್ಗಪೂಜಾಗಾರಕುಟ್ಟಿಮ
ವ್ರಜವನುಳುವಾ ನೇಗಿಲೊಳ್ ನಂದಿಯೊಗೆದನಾ
ನಜಶಿರಃಕರತನುಜನವನಾಜ್ಞೆಯಿಂ ಬಂದನೆನುತಿಂತು ಲೈಂಗ್ಯಮುಲಿಗುಂ ೧೨೪

ಚಂದದಿಂ †ಮತ್ಸ್ಯಕಚ್ಛಪಯೆನುತೆ ರೂಪಸ್ತ್ವ
ಮೆಂದು ಮಾಂಸಾಸೃಗೆನೆ ಪೂಯ ಭುಗ್ಭವತಥಾ
ಯೆಂದು ಸೂಕರಯೆನುತೆ ರೂಪೇಣ ಜಗದೆನುತೆ ವಿಷ್ಠಾಕ್ಷಯಮೆನುತೆ ಕುರು
ಯೆಂದು ನರಸಿಂಹಾದಿಭಿರೆನೆ ದೇಹೈರೆನುತು
ನೊಂದಿ ತಾಂ ಕುತ್ಸಿತೈಸ್ತಾಮಸ್ಯೈರೆನೆ ತದಾ
ಯೆಂದನೇಕಯೆನೆ ದುಃಖಬಹುಳೈಯುರ್ಕ್ತೋಭವ ಚಿರಂ ಹರೇಯೆನುತ್ತುಂ ೧೨೫

ಸುಗತಿಯಿಂ ಯದ್ಯಹಂ ತ್ರ್ಯಂಬಕಾನ್ನಾನ್ಯಮೆನೆ
ಸೊಗಸಿ ದೇವಮೆನೆ ವೇದ್ಮಿ ಮಹೇಶ್ವರಾದೆನುತೆ
ಮಿಗೆ ತೇನ ಸತ್ಯೇನ ಗೋವಿಂದ ನರಕಾನ್ ದಶಯೆನೆ ಯಾಸ್ಯಸಿಯೆನಲ್ಕೆ
ಭೃಗುಪತ್ನಿಯಾದ ದಿವ್ಯಾದೇವಿಯಂ ಪೆಣ್ಗೊ
ಲೆಗೆ ಹೇಸದಕಟ ತಲೆಯರಿಯೆ ಹರಿ ಕೂಡೆ ತದ್
ಭೃಗು ಬಂದು ಕಂಡು ಸುಜ್ಞಾನದಿಂದಿದು ಹರಿಯ ಕಪಟವೆಂದಱಿದಾತನಂ ೧೨೬

---

† ಮತ್ಸ್ಯಕಚ್ಛಪರೂಪಸ್ತ್ವಂ ಮಾಂಸಾಸೃಕ್ಪೂಯಭುಗ್ಭವ।
ತಥಾಸೂಕರರೂಪೇಣ ಜಗದ್ವಿಷ್ಠಾಕ್ಷಯಂಕುರು ॥
ನರಸಿಂಹಾದಿಭಿರ್ದೇಹೈಃಕುತ್ಸಿತೈಸ್ತಾಮಸ್ಯೈಸ್ತದಾ।
ಅನೇಕದುಃಖ ಬಹುಳೈಯುರ್ಕ್ತೋ ಭವ ಚಿರಂ ಹರೇ ॥
ಯದ್ಯಹಂ ತ್ರ್ಯಂಬಕಾನ್ನಾನ್ಯಂ ದೇವಂ ವೇದ್ಮಿಮಹೇಶ್ವರಾತ್।
ತೇನ ಸತ್ಯೇನ ಗೋವಿಂದ ನರಕಾನ್‌ದಶಯಾಸ್ಯಸಿ ॥

—ಕಾಳಿಕಾಖಂಡ

ಸಮ್ಮುಖೀಕರಿಸಿಕೊಂಡೆರ್ದೆಯ ಮೇಲೊದೆದು ಮುಳಿ
ಸಿಂ ಮತ್ತಮೆಂದನೆಲೆ ದೋಷಿ ಪೆಣ್ಣಂ ಕೊಂದೆ
ಕೆಮ್ಮನದಱಿಂ ಮತ್ಸ್ಯ ಕೂರ್ಮಸೂಕರ ನೃಸಿಂಹಾದಿ ಕುತ್ಸಿತರೂಪದಿಂ
ನೀಂ ಮಗುಳೆ ಹೀನ ದಶಯೋನಿಗಳೊಳೊಗೆದವಱ
ಸೊಮ್ಮೆನಿಸುವಾಹಾರಮಂ ಕೊಂಡು ಜೀವಿಸೆಂ
ದಮ್ಮಮ್ಮ ಶಿವನಿಷ್ಠನಾದ ಭೃಗುಮುನಿ ವಿಷ್ಣುವಂ ಶಪಿಸಿ ಮತ್ತಮೆಂದಂ ೧೨೭

ಮನದೊಳಭವನನಲ್ಲದನಿಶವಾನಿತರರಂ
ನೆನೆದಱಿಯೆನಿದು ಸತ್ಯವಾದೊಡೆಲೆ ಗೋವಿಂದ
ನಿನಗೊದವುಗೀ ಶಾಪವೆನಗದಲ್ಲದೊಡೊದವುಗೆಂದು ಭೃಗು ಶಪಿಸೆ ನೊಂದು
ಘನಶಾಪಮಂ ಕಳೆಯೆ ತಾಂತ್ರಿಕೋಟ್ಯಬ್ದವೀ
ಶನನೆ ಲಕ್ಷಿಸಿ ತಪಂಗೆಯ್ದು ಹರಿಗಿತ್ತನುಮೆ
ಯಿನಿಯಂ ವರಮನಿವು ಜಗತ್ಪ್ರಸ್ತುತಂಗಳಾಗೊಪ್ಪುಗೆಂದಧಿಕಕೃಪೆಯಿಂ ೧೨೮

ಇಂತೆಂದು ಕಾಳಿಕಾಖಂಡಮಿದೆ ಮೇಣೀ ಕ
ಥಾಂತರಕೆ ಕಪಟಭೂಸುರನಾಗಿ ಬಂದಂಗ
ಜಾಂತಕಂಗಗಜೆ ದೃಷ್ಟಾಂತಮಾಗುಸಿರ್ದುಕ್ತಿ ಪದ್ಮಪೌರಾಣದೊಳದೆ
ಅಂತಱಿಂ ಮತ್ಸ್ಯಾದಿ ಯೋನಿಗಳೊಳುದ್ಭವಿಸಿ
ಮುಂದೆ ರೇಣುಕೆಗೆ ಜಮದಗ್ನಿಗೊಗೆಯನೆ ದಾನ
ವಾಂತಕಂ ಪರಶುರಾಮಾಖ್ಯದಿಂ ದಶರಥಂಗಾ ಕೌಸಲಾದೇವಿಗಂ ೧೨೯

ರಾಮಾಹ್ವಯದೆ ಜನಿಸನೇ ಮೇಣ್ ಪರಾಶರಂ
ಗಾ ಮತ್ಸ್ಯಗಂಧಿಗಂ ಬಾದರಾಯಣನೆಂಬ
ನಾಮದಿಂ ಪುಟ್ಟನೇ ಮಹಾಭಾರತೋಕ್ತಿಯಿದು ಬಳಿಕಧೋ *ದ್ವಾರಾದೆನೆ
ಆ ಮಾಳ್ಕೆಯಿಂ ವಿನಿಷ್ಕ್ರಾಂತೋ ಭವಾಮಿಯೆನು
ತೇ ಮಾತಹಮಧೋಕ್ಷಜೋಯೆನೆ ಶಿವರಹಸ್ಯ
ವಾ ಮುಕುಂದಂ ಪಿತಾಮಹನಧೊದ್ವಾರದಿಂದೊಗೆದಧೋಕ್ಷಜನೆನಿಸನೇ ೧೩೦

* ಅಧೋದ್ವಾರಾದ್ವಿನಿಷ್ಕ್ರಾಂತೋ। ಭವಾಮ್ಯಹಮಧೋಕ್ಷಜಃ ॥

—ಶಿವರಹಸ್ಯ

ದೇವಕೀನಂದನಶ್ಶೌರಿರಿನುತುಂ ಮತ್ತ
ವೋವೊ ವಸುದೇವೋಸ್ಯಜನಕೋಯೆನುತ್ತಿಂತು
ಟೀವೇಳ್ವಿನಮುರಸಿಂಹಾದಿಗಳಿರಲ್ಕೀಗಳುಂ ವರ್ಷವರ್ಷಕೊರ್ಮೆ
ಆ ವಿಷ್ಣುವೊಗೆದ ದಿನವೆಂದಾ ಜಯಂತಿಯಂ
ನೀವೆ ಮನ್ನಿಸುತಿರ್ದಯೋನಿಜಂ ಹರಿಯೆಂದು
ದಾವ ವಿವರಂ ಬಿಡಿನ್ನವನನಚ್ಯುತನೆಂಬ ನುಡಿಗೆ ಕೇಳ್ ನಿರ್ವಾಹಮುಂ ೧೩೧

ಮತಿಹೀನ †ಕೇಶವೋಯಂ ಚ್ಯುತೋಭವಿತುಮ
ರ್ಹತಿ ಜನನವತ್ವಾಜ್ಜನನವದ್ಯದೇವತ
ಚ್ಯುತಿಮತ್ಪಟೋ ಯಥಾಯಂ ತಥಾ ತಸ್ಮಾತ್ತಥೇತಿಸತ್ಪಂಚರೂಪ
ಯುತಮಾದ ಕತದೆ ಹೇತ್ವಾಭಾಸ ಪಂಚಕರ
ಹಿತವಾದ ವಿಮಲಾನುಮಾನಮಿರೆ ವಿಷ್ಣುವ
ಚ್ಯುತನೆ ಪೇಳಾದೊಡಂ ಪೇಳ್ವಿವಾಗಮಮುಖದೆ ಸಭೆ ಪರೀಕ್ಷಿಸುತಿರ್ಪಿನಂ ೧೩೨

ಭರದೆ *ಪಾಣೌಬ್ರಹ್ಮಯೆನೆ ಕಪಾಲಮೆನೆ ಕರ
ಸರಸಿಜದೊಳಜಶಿರಂ ಸ್ಕಂಧೇ ಮುರಾರೇರ್ವ
ಪುರೆನೆ ಪೆಗಲೊಳ್ ವಿಷ್ಣುವಿನ ಪೆಣಂ ದೇವಾಸ್ಥಿವೃಂದಸ್ರಜೋಯೆನಲ್ಕೆ
ಸುರರಸ್ಥಿಮಾಲೆಯಂಗದೊಳಹೋಪ್ರಳಯಾವ
ಸರದೊಳಿಂತೊಪ್ಪುವ ಶಿವಂ ಸಲಹುಗೆಂಬುಕ್ತಿ
ಹರನಿಷ್ಠ ಬೋಧಾಯನಾರ್ಯಕೃತ ತನ್ಮಹಾನಾಟಕದ ನಾಂದಿಯೊಳಿದೆ ೧೩೩

† ಕೇಶವೋಯಂ ಚ್ಯುತೋಭವಿತುಮರ್ಹತಿ-ಜನನವತ್ವಾ ಜ್ಜನನವದ್ಯದೇವತಚ್ಯುತಿ
ಮತ್ಪಟೋ ಯಥಾಯಂ ತಸ್ಮಾತ್ತಥೇತಿ ॥

* "ಪಾಣೌ ಬ್ರಹ್ಮಕಪಾಲಂ ಸ್ಕಂಧೇ ಮುರಾರೇರ್ವಪುಃ
ದೇವಾಸ್ಥಿವೃಂದಸ್ರಜಃ" ಬೋಧಾಯನಾರ್ಯಕೃತ ಮಹಾನಾಟಕದ ನಾಂದಿ ॥

ಮತ್ತೆ ಕಲ್ಪಾಂತೇ ಶಮಿತಯೆನುತ್ತೀ ಪರಿಯೊ
ಳೆತ್ತಿಗಾಳಂ ತ್ರಿವಿಕ್ರಮನಸ್ಥಿನೇಣಹಿಪ
ನುತ್ತುಂಗ ನರಹರಿಯುಗುರಿ ಕೊಂಕಿಯಾದಿಕೋಲನ ಮಾಂಸವೆರೆಯಾಗಿರೆ
ಸುತ್ತೇಂ ಪ್ರಳಯಕಾಲದೇಕಾರ್ಣವದೊಳು
ನ್ಮತ್ತಕಚ್ಛಪ ಮತ್ಸ್ಯಯುಗಮಂ ತೆಗೆದ ಧೀವ
ರೋತ್ತಂಸರೂಪಂ ಹರಂ ಸುಜನರಜ್ಞಾನಮಂ ಕೆಡಿಸುಗೆಂದುಮುಲಿಗುಂ ೧೩೪

ಅಂದದಿಂ *ಬ್ರಹ್ಮಾಣಮಿಂದ್ರಮೆನೆ ವಿಷ್ಣುಂ ಚ
ಯೆಂದುಯಮಮನ್ಯಾನ್ ಸುರಾಸುರನೆನೆ ಯತೋ
ಯೆಂದದುನಿಗೃಹ್ಯಹರಸಿಯೆನೆ ಹರ ಇತ್ಯುಚ್ಯಸೇ ತತೋಯೆನೆ ಬೊಮ್ಮನಂ
ಇಂದಿರನನಚ್ಯುತನನಂತಕನನುಳಿದಸುರ
ರಂ ದನುಜರಂ ಹರಿಸಿದದಱಿಂದೆ ಹರನೆನಿಪ
ನಿಂದುಧರನೆಂಗುಮಾ ಸ್ಕಾಂದಮೆಲೆ ವಾದಿಯಚ್ಯುತನೋರ್ವನಿಂದಳಿವನೇ ೧೩೫

ಘನಗುರುವರಂ ಮತ್ತಮಿಂತೆಂದೊರೆದನಚ್ಯು
ತನ ವಿಧಿಯ ಪರಿಯನ §ದ್ಯಾಪಿತವಪಶ್ಯತ್ವ
ಮೆನೆ ಕಪಾಲಂ ಕೂರ್ಮರೂಪಿಣೋ ಹರಹಾರಯೆನೆ ಲತಾಯೆನುತೆ ಮಧ್ಯೇ
ಯೆನೆ ಮುಗ್ಧಕಸ್ಮಾದ್ನಬುಧ್ಯಸಿಯೆನಲ್ಕೂರ್ಮ
ವೆನಿಸಿದಭವತ್ಕಪಾಲವನೀಶಹಾರದ
ಲ್ಲಿ ನೃಸಿಂಹಮೂಢನೋಡೇಂ ತಿಳಿಯೆಯೆಂಬ ಶರಭೋಕ್ತಿಯಾ ಸ್ಕಾಂದದೊಳಿದೆ
೧೩೬

---

* ಬ್ರಹ್ಮಾಣಮಿಂದ್ರಂ ವಿಷ್ಣುಂ ಚ ಯಮಮನ್ಯಾನ್ ಸುರಾಸುರಾನ್ ।
ಯತೋ ನಿಗೃಹ್ಯ ಹರಸಿ ಹರ ಇತ್ಯುಚ್ಯಸೇ ತತಃ ॥
—ಸ್ಕಾಂದ

§ ಅದ್ಯಾಪಿ ತವ ಪಶ್ಯತ್ವಂ ಕಪಾಲಂ ಕೂರ್ಮರೂಪಿಣಃ ।
ಹರಹಾರಲತಾಮಧ್ಯೇ ಮುಗ್ಧಕಸ್ಮಾನ್ನಬುಧ್ಯಸಿ ॥
—ಸ್ಕಾಂದದೊಳಗಿನ ಶರಭೋಕ್ತಿ

ಭರದಿಂ †ತ್ರಿಯಂಬಕೋಯೆನೆ ಬಕೋ ನಾಮಯೆನು
ತರರೆ ರುದ್ರೋಯೆನುತೆ ನಾರಾಯಣಯೆನುತ್ತು
ವಿರದದು ಶಿರಶ್ಚಂಚುನಾ ಚಕರ್ತಯೆನೆ ಕಲ್ಪಾಬ್ಧಿಯೊಳ್ ಮತ್ಸ್ಯನಾಗಿ
ಚರಿಪಾ ಹರಿಯ ಕೊರಲನೊತ್ತಿ ಕೊಕ್ಕಿಂದೆ ಕ
ತ್ತರಿಸಿದಂಬಕರುದ್ರನಾಗಿ ಹರನೇದಥ
ರ್ವರಸೋಕ್ತಿಯಿದೆಯಚ್ಯುತಂ ಗಡಳಿವಂ ಗಡಾ ಕೇಳ್ದಿವಲ್ಲಾ ಚೋದ್ಯಮಂ ೧೩೭

ಪ್ರಾಕಟದಿ *ಮತ್ಪಾಟ್ಯದಂಷ್ಟ್ರಾಮೆನುತ್ತೆ ತ
ಸ್ಯೈಕಾಂಡಧಾರೋರಸಿಯನೆ ಭೂಷಣಮೆನುತು
ಮೇಕಶೃಂಗೋ ವರಾಹೋ ಭೂತ್ತದಾಪ್ರಭೃತಿ ಮಾಧವೋಯೆನೆ ದಂಷ್ಟ್ರಿಯಾ
ಆಕೃತಿಯ ಹರಿಯಂ ಹರಿಸಿಯೊಂದು ದಾಡೆಯನು
ಮಾಕಾಂತನುರಿ ಕೀಳ್ತು ರೋ ಭೂಷಣಂಗೆಯ್ದ
ನಾ ಕಾಲದಿಂ ಪಂದಿಗಾಯ್ತೊಂದು ದಾಡೆಯೆಂಗುಂ ಸ್ಕಾಂದಮುಂ ಲೈಂಗ್ಯಮುಂ
೧೩೮

ಸಾಹಸದೆ §ಪುತ್ರಪೌತ್ರಾವೃತಂ ಸ್ಕಂದೋ ವ
ರಾಹಂ ವ್ಯವಧನೆಂದೆನುತ್ತುಂ ಬಲೀಯೆನು
ತ್ತಾಹತಾಮದ್ಯಾಪಿ ಸೂಕರಾರೋಹ ತೀರ್ಥಮೆನೆ ಗಂಗಾಯೆನುತುಂ
ನೇಹದೇ ತಟೇ ಸ್ಥಿತಮೆನುತೆ ವಲಂ ಸ್ಕಂಧ ಶ
ಕ್ತ್ಯಾಹತಂ ಯತ್ರಯೆಂದೆನೆ ವರಾಹಾಖ್ಯೋ ಮೃ
ತೋ ಹರಿರೆನಲ್ಕೆ ಹರಿ ಸೂಕರತ್ವವನಾಂತು ಪುತ್ರಪೌತ್ರಾಳಿಸಹಿತಂ ೧೩೯

---

† ತ್ರಿಯಂಬಕೋ ಬಕೋನಾಮ ರುದ್ರಃ ನಾರಾಯಣ ಶಿರಶ್ಚಂಚುನಾ ಚಕರ್ತ ॥
—ಅಥರ್ವ

* ಉತ್ಪಾಟ್ಯದಂಷ್ಟ್ರಾಂತಸ್ಯೈಕಾಂ ದಧಾರೋರಸಿ ಭೂಷಣಂ ।
ಏಕಶೃಂಗೋವರಾಹೋ ಭೂತ್ತದಾಪ್ರಭೃತಿ ಮಾಧವಃ ॥
—ಸ್ಕಾಂದಲೈಂಗ್ಯ

§ ಪುತ್ರಪೌತ್ರಾವೃತಂ ಸ್ಕಂಧೋ ವರಾಹಂ ವ್ಯವಧದ್ಬಲೀ ।
ಅದ್ಯಾಪಿ ಸೂಕರಾರೋಹತೀರ್ಥಂ ಗಂಗಾತಟೇಸ್ಥಿತಂ ।
ಸ್ಕಂಧಶಕ್ತ್ಯಾಹತೋ ಯತ್ರ ವರಾಹಾಖ್ಯೋ ಮೃತೋ ಹರಿಃ ॥
—ಕಾಳಿಕಾಖಂಡ

ಇರೆ ಗುಹಂ ಗಂಗಾತಟದೊಳೆ ತತ್ಕೋಲನಂ
ಹರಿಸಲದಱಿಂದಲ್ಲಿ ಸೂಕರಾರೋಹಮೆಂ
ಬುರುತೀರ್ಥಮಿಪ್ಪುದೀಗಳುಮೆಂದು ಕಾಳಿಕಾಖಂಡಮಿದೆಯೆಂತಚ್ಯುತಂ
ಭರದಿಂ †ಪುರಾ ಹಿರಣ್ಯಕಶಿಪುಂ ದೈತ್ಯಯೆಂ
ದೊರೆದು ರಾಜಂ ಮಹಾಬಲಮೆನುತೆ ಹತ್ವಾಯೆ
ನೆ ರಸೋಕ್ತಿಯಿಂ ತದೆಂದೆನುತೆ ರುಧಿರಾಪಾನಯೆನುತುಂ ಪ್ರಮತ್ತಮೆನುತೆ ೧೪೦

ವಿಮಲೋಕ್ತಿಯಿಂ ಯಾಚಿತಃ ಸುರೈರುದ್ರೋಯೆ
ನೆ ಮುದದಿಂ ಶರಭರೂಪೇಣಯೆಂದೆನೆ ನೃಸಿಂ
ಹಮೆನೆ ತಮಪೀಡಯದೆನಲ್ ಬೇಱಿ ತದ್ವಕ್ತ್ರಶೇಷಮೆಂದೆನುತೆ ಕೂಡೆ
ಅಮರ್ದು ತದ್ಗಾತ್ರಮೆನೆ ಧೃತ್ವಾ ಶರಭಯೆನು
ತ್ತಮುದು ನಲವಿಂ ವಿಗ್ರಹೋ ನೃಸಿಂಹಯೆನೆ ಸಂ
ಭ್ರಮಿಸುತುಂ ಕೃತ್ತಿವಸನಸ್ತದಾ ಪ್ರಭೃತಿಯೆನೆ ಶಂಕರೋಯೆನುತೆ ಬಳಿಕಂ ೧೪೧

ಭರದಿಂ ಹರಿಂ ಹರಂ ತಮನು ಯಾಂತಿಯೆನುತ್ತು
ಮರರೆ ದೇವಾಯೆನುತೆ ವಿಶ್ವಸ್ಯಯೆಂದೆನು
ತ್ತೊರೆವುತೀಶಾನಾಂ ವೃಷಭಮೆನೆ ಮತೀನಾಮೆನಲ್ಕೆ ಬಲವಂತನಾದಾ
ಸುರರಿಪುಶ್ರೇಷ್ಠಂ ಹಿರಣ್ಯಕಶಿಪುವನಹೋ
ನರಸಿಂಹನುಱಿ ಕೊಂದು ತದ್ರಕ್ತಪಾನದಿಂ
ಕರಮೆ ಸೊರ್ಕಿ ಜಗತ್ತನಿರಲೀಯದಿರೆ ಶಿವಂಗಮರರ್ ಮೊಱೆಯನಿಡಲೊಡಂ
೧೪೨

---

† ಪುರಾ ಹಿರಣ್ಯಕಶಿಪುಂ ದೈತ್ಯರಾಜಂ ಮಹಾಬಲಂ ।
ಹತ್ವಾ ತದ್ರುಧಿರಾಪಾನಪ್ರಮತ್ತಂ ಯಾಚಿತಸುರೈಃ ॥
ರುದ್ರಶ್ಶರಭರೂಪೇಣ ನೃಸಿಂಹಂ ತಮಪೀಡಯತ್ ।
ತದ್ವಕ್ತ್ರ ಶೇಷಂ ತದ್ಗಾತ್ರಂ ಧೃತ್ವಾಶರಭವಿಗ್ರಹಃ ॥
ನೃಸಿಂಹಕೃತ್ತಿವಸನಸ್ತದಾಪ್ರಭೃತಿಶಂಕರಃ ।
ಹರಿಂ ಹರ ತಮನು ಯಾಂತಿ ದೇವಾ ವಿಶ್ವಸ್ಯೇಶಾನಂ ವೃಷಭಂ ಮತೀನಾಂ ॥
—ಸ್ಕಾಂದ-ಲೈಂಗ್ಯ-ಯಜಸ್ಸು

ಶರಭರೂಪದೆ ತನ್ನೃಸಿಂಹನಂ ಕೊಂದಾತ
ನುರುಚರ್ಮಮಂ ಶಿರಸ್ಸಂ ಧರಿಸೆಯಂದಿಂದೆ
ನರಸಿಂಹಚರ್ಮಧರನಾದನಂತಪ್ಪ ಹರಿ ಹರನನಿಚ್ಛಾದಾತೃವಂ
ವರಮತಿಗೆ ವಿಶ್ವಕ್ಕಧೀಶನಂ ಜಯ ಜೀಯ
ಹರಹರ ನಮೋಯೆನುತ್ತೆಯ್ದಿ ನುತಿಸಿದರಖಿಲ
ಸುರರೆಂದು ತಾಂ ಸ್ಕಾಂದಮುಂ ಲೈಂಗ್ಯಮುಂ ಯಜುಸ್ಸುಮಿದೆ ಹರಿಯೆಂತಚ್ಯುತಂ ೧೪೩

ಚಕ್ರೇಶನಂ ಹರಿಯನಂದು ಬಂಧಿಸಿದಾ ತ್ರಿ
ವಿಕ್ರಮನನುಱಿ ಮೆಟ್ಟಿ ಮುಱಿಯನೆ ಹರಂ ಭೃಗುವಿ
ನಾ ಕ್ರೂರಶಾಪದಿಂ ಜನಿಸಿ ನಾರದನ ಶಾಪದೆ ಜಾನಕಿಯನಗಲ್ದು
ವಕ್ರತೆಯನೆಸಗಿ ದುರ್ವಾಸರಿಂ ಪಡೆದ ಶಾ
ಪಕ್ರಿಯೆಯಿನಿರದೆ ತೊಱಿಯೊಳ್ ಬೀಳನೇರಾಮ
ನೀ ಕ್ರಮದಿನಳಿವನಚ್ಯುತನೆ ಪೇಳಿಂತೆಂದು ಸಾಱುಗುಂ ಸ್ಕಾಂದಮೊಲವಿಂ ೧೪೪

ಏನನೆಂಬೆಂ ವಾದಿಯಚ್ಯುತಾಂಗದ ದುಃ
ಖಾನೀಕಮಂ ಯೌವನೋನ್ಮತ್ತಚಿತ್ತರ
ಜ್ಞಾನಿಗಳ್ ಯಾದವೇಶನ ಕುಮಾರರ್ ಕೊರ್ಬಿಯೊಂದು ಪಗಲೊಳ್ ಬಿನದದಿಂ
ಮಾನಿತೋಜ್ವಲ್ಯಪಿಂಡಾರಕ ಮಹಾತೀರ್ಥ
ದಾ ನಿಕಟಕೆಯ್ದಿ ತತ್ತೀರದೊಳ್ ತಪಮಿರ್ಪ
ನೂನವಿಶ್ವಾಮಿತ್ರ ಕಣ್ವ ದುರ್ವಾಸಪ್ರಮುಖ ಮುನಿಗಳಂ ಕಾಣುತೆ ೧೪೫

ಸಾಂಬನಂ ಜಾಂಬವತಿಯಣುಗನಂ ಸ್ತ್ರೀವೋಲ್ ತೆ
ಱಂಬೊಳೆಯೆ ಸಿಂಗರಿಸಿ ತನ್ಮುನಿಗಳೆಡೆಗೆ ತಂ
ದೇಂ ಬಣ್ಣಿಪೆಂ ನಮಿಸಿ ಭಾವಿಕಾರ್ಯಂಗೇಳ್ವೆವೆನುತೆ ಬಲ್ಗನ್ನದಿಂದೆ
ಡಂಬಕರ್ ಕೇಳ್ದರೀ ಪುತ್ರಕಾಮಿಯ ಬಭ್ರು
ವೆಂಬವನ ಪೆಂಡಿರಿವಳೇನಂ ಪೆಱುವಳೆಂಬು
ದಂ ಬೆಸಸಿದರ್ ಪೆಱುವಳೀಕೆಯೊನಕೆಯನದಱಿನಳಿವುದಚ್ಯುತನ ವಂಶಂ ೧೪೬

ಎಂದು ದುರ್ವಾಸಾದಿ ಮುನಿಮುಖ್ಯರತಿಕೋಪ
ದಿಂದೊರೆಯೆ ಕೇಳ್ದು ಗಹಗಹಿಸುತುಂ ದ್ವಾರವತಿ
ಗಂದೆಯ್ದುವುದುಮವನದೊಂದು ಪೇರೊನಕೆಯಂ ಪೆಱಿ ಹರಿಯೊಳಾಳೋಚಿಸಿ
ಇಂದಿದಂ ವಾರ್ಧಿಯೊಳ್ ತೇದು ಬಿಸುಟೊಡೆ ಮುನಿಗ
ಳಿಂದ ಮಾತೆಮ್ಮನೇಗೆಯ್ವುದೆಂದದನವರ್
ತಂದಬ್ಧಿಯೊಳ್ ತೇದದಱ ಶೇಷಮಿನಿತನಾ ನೀರ್ಗಿಟ್ಟು ಬಂದಿರ್ಪಿನಂ ೧೪೭

ಅಂತದಂ ಮೀನೊಂದು ನುಂಗಿ ವಿಹರಿಸುತಿರೆ ಸ
ಮಂತು ಜರಕಾಹ್ವಯಂ ಗಾಳವನಿಡಲ್ಕದೋ
ರಂತೆ ಸಿಲ್ಕಲೊಡಂ ತೆಗೆದು ಸೀಳ್ವೆಡೆಯೊಳದಱ ಪೊಡೆಯೊಳಾ ಮುಸಲಾಂಶಮಂ
ಮುಂತೆ ಕಂಡಿದು ಚಿತ್ರವೆಂದೊಂದು ಬಾಣವನ
ವಂ ತುರಿಪದಿಂ ಮಾಡಿಸಿದನದಂ ತೇದನೀ
ರುಂ ತಡೆವಿಡಿದು ಗೇಕೆನಿಸಿ ಪುಟ್ಟಿತಿಂತಿರುತಿರಲ್ಕಿತ್ತಲೊಂದು ದೆವಸಂ ೧೪೮

ವನಮಾಲಿ ಸಾಂಬ ಪ್ರದ್ಯುಮ್ನ ಕೃತವರ್ಮ
ರನಿರುದ್ಧ ಚಾರುವರ್ಮ ಕ್ರೂರವರ್ಮ ಯದು
ಜನಿತರೆಲ್ಲಂ ಮದ್ಯಮೀಂಟಿಯಾ ಸೊರ್ಕಿಂದೆ ಮೆಯ್ಮಱೆದು ತಂತಮ್ಮೊಳೆ
ಘನವೈರಮುಣ್ಮೆ ಪೊಯ್ದಾಡಿ ವಜ್ರಪ್ರಾಯ
ಮೆನಿಸಿರ್ದ ಗೇಕಿಂದಳಿಯೆ ಪುರಂ ಪಾಳಾಗೆ
ದನುಜರಿಪು ಭಾರ್ಯಾಗ್ರಜಾದಿಗಳ್ವೆರಸಬ್ಧಿಯಂ ದಾಂಟಿ ನೊಂದು [೧]ಬಂದು ೧೪೯

ಮುನಿಯಷ್ಟವಕ್ರನುಂ ಕೊಟ್ಟ ಶಾಪಂ ಬರ್ಪ
ದಿನವೊದವಲೊಂದಡವಿಯೊಳ್ ಬಳಲ್ದಚ್ಯುತಂ
ಮಿನುಪೆಡದ ಮೊಳಕಾಲಮೇಲೆ ದುರ್ವಾಸನುಂಡಿರಿಸಿದುದನಖಿಲಾಂಗಕೆ
ಮನವಾರೆ ಪೂಸಿ ಪೂಸದೆ ಬಿಟ್ಟ ಕಾಲ್ದಳವ
ನನುವಾಗಿ ತಾನಿಟ್ಟು ಪಟ್ಟಿರಲ್ಕದನೇಣ
ನೆನುತಾ ಜರಕನೆಸಲೊಡಂ ಕೃಷ್ಣನಳಿಯೆ ರಾಮುಂ ಸೆಣಸಿ ತಾನುಮಳಿದಂ ೧೫೦

---

೧ ಬಿಂ (ಬ)

ಅತಿ ಪರಾಕ್ರಮಿ ಪಾರ್ಥನುಂ ನೋಡುತಿರೆ ಹರಿಯ
ಸತಿಯರಂ ಪದಿನಾಱುಸಾವಿರಮನಾ ಶಬರ
ತತಿ ಕೊಂಡು ಪೋದುದಾ ಕಾಲದೊಳಗೊರ್ವ ದಾಸಂ ಕಾಯ್ದುದಿಲ್ಲಕ್ಕಟ
ವಿತತ ರಥಚಕ್ರ ಶಾರ್ಙಗದಾಸ್ತ್ರಶಂಖಂಗ
ಳತುಳಶಕ್ತಿಗಳೆತ್ತ ಸರಿದವು ಗರುತ್ಮನಾ
ಪ್ತತೆಯೆತ್ತ ಮಸುಳಿಸಿತು ನೀನೀಗಳೊರೆವಚ್ಯುತತ್ವವಾವೆಡೆಗೆ ಪೋಯ್ತು ೧೫೧

ಆ ಪರಬ್ರಹ್ಮವೆನಿಸುವ ಹರಿಯುನಸಮಮುನಿ
ಶಾಪವಂಡಲೆದಡವಿಯೊಳ್ಕೆಡಪಿತಾ ಪೆಣ
ಕ್ಕೋಪರಿಲ್ಲದೆ ಪಾರ್ಥನಱವುಳ್ಳವೊತ್ತ ಸಲೆಗೆಯ್ದು ತಲೆಗಿರಿದು ಹರಿಗೆ
ತಾಪಿಸುತೆ ತಲೆಗೊಳ್ಳಿಯಿರಿಯೆ ತದ್ರುಕ್ಮಿಣೀ
ಸ್ತ್ರೀಪೂರ್ವಮಾದಷ್ಟಮಹಿಷಿಯರ್ ಕೃಷ್ಣನೊಡ
ನೇವೇಳ್ದೆನಂದು ತೊಳ್ಗೈಗೊಟ್ಟರಂತೆ ಸಂದಳ್ ಬಲನೊಳಾ ರೇವತಿ ೧೫೨

*ಪ್ರೇತಕಾರ್ಯಂ ಹರೇಃ ಕೃತ್ವಾಯೆನುತ್ತೆ ಮ
ತ್ತೋತು ಪಾರ್ಥಃ ಪರಮ ವೀರ್ಯವಾನೆನುತೆ ಮೇ
ಣಾ ತೆಱದೆ ರಾಮಸ್ಯಚ ತಥಾಯೆನುತ್ತುಮನ್ಯೇಷಾಮೆನಲ್ಕೆ ಲೈಂಗ್ಯಂ
ಪ್ರೀತಿಯಿಂ ಮೇಲೆ ನರನಸ್ಥಿಸಂಧಾನಮುಮ
ನಾತತ ಶ್ರಾದ್ಧಮುಂ ತತ್ಸಪಿಂಡಕಮಾಗಿ
ಮಾತೇಂ ಯಥಾವಿಧಿಯಿನಚ್ಯುತಬಲಾಂಗನಾಳಿಗೆ ನೆಗಳ್ದನೇನಾಪ್ತನೋ ೧೫೩

ಅಂದು ಕೊಲೆಯಿಂ ಸತ್ತ ಹರಿಗೆ ಬಲಿಕಾರ್ಯಕೆ ಧ
ನಂ ದೊರಕದಿರೆ ಫಲ್ಗುನಂ ಕಂದಮೂಲಫಲ
ವೃಂದದಿಂ ಬಲಿಗೊಟ್ಟು ಸಗ್ಗಕೆಯ್ದಿದನಂತಱಿಂದೀಗಳುಂ ಕೈದುವಿಂ
ಹೊಂದಿದರ್ಗವನಿನಾರಾಯಣಬಲಿಯನೆಸಪು
ದೆಂದಿದೆಲ್ಲವನೆಯ್ದೆ ವಿಷ್ಣುಪೌರಾಣಮುಂ
ಸ್ಕಾಂದಮುಂ ಲೈಂಗ್ಯಮುಂ ಕೌರ್ಮಮುಂ ಸಾಱುತಿವೆಯಿಂತಳಿವನೆಂತಚ್ಯುತಂ
೧೫೪

---

* ಪ್ರೇತಕಾರ್ಯಂ ಹರೇಃ ಕೃತ್ವಾ ಪಾರ್ಥಃ ಪರಮ ವೀರ್ಯವಾನ್ ।
ರಾಮಸ್ಯ ಚ ತಥಾನ್ಯೇಷಾಂ ॥ —ಲೈಂಗ್ಯ

ವಿನಯದಿಂ *ವಿಷ್ಣುಸಂಜ್ಞಾಹ್ಯಸಂಖ್ಯಾತಾಹಿ
ಯೆನುತಸಂಖ್ಯಾತಾಃ ಪಿತಾಮಹಾಃಯೆಂದೆನುತೆ
ಘನದಸಂಖ್ಯಾತಾಃ ಸುರೇಂದ್ರಾಶ್ಚ ನಿತ್ಯ ಏಕೋಯೆನುತ್ತೆ ಮಹೇಶ್ವರೋ
ಎನಲಸಂಖ್ಯಾತ ವಿಷ್ಣುಗಳಗಣಿತಾಂಬುಜಾ
ಸನರನೇಕೇಂದ್ರಪ್ರಮುಖರಳಿದರೀಶನೊ
ರ್ವನೆ ನಿತ್ಯನೆಂಗುಮಾ ಸ್ಕಾಂದಮೀ ಪರಿಯೊಳೇ ಲೈಂಗ್ಯಪೌರಾಣದೊಳಿದೆ ೧೫೫

ಈನಿಮಿತ್ತಂ ವಿಷ್ಣುಗಚ್ಯುತತ್ವಂ ಸಲ್ಲ
ದೇನಾನುಮಚ್ಯುತಾಖ್ಯಮದುಳ್ಳೊಡಂ ನಭಕ
ನೂನಾಂಬರಾಖ್ಯಂ ಪ್ಲವಂಗೆ ಹರ್ಯಾಖ್ಯಂ ದ್ವಿಜಾಹ್ವಯಂ ಬಲಿಭುಜಂಗೆ
ಏನೆಂದಪೆಂ ಭೋಗಿನಾಮಂ ಫಣಿಗೆ ಶರ್ಕ
ರಾನಾಮವಾ ಕ್ಷುದ್ರಶಿಲೆಗೆ ಗಜಮದಜಲಕೆ
ದಾನನಾಮಂ ಬಂದವೋಲ್ ವ್ಯರ್ಥದುರುನಾಮವೆಂದು ಸುಕವಿಪ್ರಯೋಗಂ ೧೫೬

ಅಂತಱಿಂ ವಿಷ್ಣುವಚ್ಯುತನಲ್ತು ಬಿಡುಬಿಡಿಂ
ಮುಂತೆ ಮುರರಿಪು ವೇದವೇದ್ಯನೆಂಬುಕ್ತಿಗೋ
ರಂತೆ ನಿರ್ವಾಹಮಂ ಕೇಳ್ವಾದಿ †ಮಾಯೀಯೆನುತ್ತೆ ಮಾಯಾಮಯಮೆನೆ
ಅಂತೆ ಶಾಸ್ತ್ರಗ್ರಂಥಮೆನುತೆ ಷೋಡಶಲಕ್ಷ
ಕಂ ತಾನೆನಲ್ ಶ್ರೌತವಾರ್ತಾವಿರುದ್ಧಮೆನು
ತುಂ ತವೆ ಚವರ್ಣಾಶ್ರಮವಿವರ್ಜಿತಮಿಹೈವಯೆನುತದೇ ಸ್ವರ್ಗನರಕಂ ೧೫೭

---

* ವಿಷ್ಣುಸಂಜ್ಞಾಹ್ಯಸಂಖ್ಯಾತಾಹ್ಯಸಂಖ್ಯಾತಾಃ ಪಿತಾಮಹಾಃ ।
ಅಸಂಖ್ಯಾತಾಸ್ಸುರೇಂದ್ರಾಶ್ಚ ನಿತ್ಯ ಏಕೋ ಮಹೇಶ್ವರಃ ॥
—ಲೈಂಗ್ಯ

† ಮಾಯೀ ಮಾಯಾಮಯಂ ಶಾಸ್ತ್ರಗ್ರಂಥಂ ಷೋಡಶಲಕ್ಷಕಂ ।
ಶ್ರೌತವಾರ್ತಾವಿರುದ್ಧಂ ಚ ವರ್ಣಾಶ್ರಮವಿವರ್ಜಿತಂ ।
ಇಹೈವಸ್ವರ್ಗನರಕಂ ಪ್ರತ್ಯಯಂ ನಾನ್ಯಥಾಃಪುನಃ ॥
—ಲೈಂಗ್ಯ

ಎನುತದೆ ಪ್ರತ್ಯಯಂ ನಾನ್ಯಥಾ ಪುನರೆನಲ್
ಘನ ವೇದಮುಳ್ಳುದಂ ಲಕ್ಕಮಿನಿತುಂ ಮಹೇ
ಶನ ಸೊಮ್ಮೆ ನಿಸಿತೆಂಬಸೂಯೆಯಿಂ ತದ್ವೇದಮಂ ನಿಲಿಸಲೆಂದು ನೆವದಿಂ
ವನಮಾಲಿ ಪಾತಕನಬದ್ಧಬುದ್ಧಾಕೃತಿಯ
ನನುಕರಿಸಿ ನಿಂದು ವೇದವಬದ್ಧವಂತದಂ
ನೆಸೆಯಲಾಗದು ಬಿಡಿಂ ವರ್ಣಾಶ್ರಮಾಚಾರವೆಂಬವೆತ್ತಣವೆನುತ್ತುಂ ೧೫೮

ಇಲ್ಲಿಯೋ ಸ್ವರ್ಗನರಕಂಗಳ್ ಪ್ರಮಾಣವಿ
ನ್ನೆಲ್ಲಿಯದು ಬೇಱೆ ಮತ್ತೊಂದೆಡೆಯೊಳೆಂದಿಂತು
ತಲ್ಲಣಿಸಿದಕಟ ಷೋಡಶಲಕ್ಷಸಂಖ್ಯೆಯಿಂ ರಚಿಸಿ ಬೌದ್ಧಗ್ರಂಥಮಂ
ಉಲ್ಲಾಸದಿಂ ವೇದವೈರಮಾಗಾವೇಷ
ದಲ್ಲಿ ಬೋಧಿಸಿ ವೇದಮಂ ಕೆಡಿಸೆ ಬೌದ್ಧಮೊಗೆ
ದಿಲ್ಲಿ ವರ್ತಿಪುದೆಂದು ಲೈಂಗ್ಯಮಿದೆ ವೇದದೂಷಕನೆಂತು ವೇದವೇದ್ಯಂ ೧೫೯

ಸಾಹಸದೆ *ವಿದ್ಯಾಯೆನುತ್ತೆ ಚೋರೋ ಗುರು
ದ್ರೋಹೀಯೆನುತ್ತೆ ವೇದೇಶ್ವರಯೆನುತ್ತೆ ಸ
ದ್ವ್ಯಾಹಾರದೆ ವಿದೂಷಕಸ್ತ ಏವ ಬಹು ಪಾಪ್ಮಾನೋಯೆನುತ್ತೆ ಮತ್ತಂ
ಆಹ ಸದ್ಯೋಯೆನುತೆ ದಂಡ್ಯಾ ಇತಿಯೆನುತ್ತು
ಮೋಹೋ ಶ್ರುತಿರೆನೆ ವಿದ್ಯಾಚೋರನುಂ ಗುರು
ದ್ರೋಹಿಯುಂ ವೇದೇಶದೂಷಕರತೀವ ಪಾತಕರವರ್ ದಂಡ್ಯರೆಂದು ೧೬೦

---

* ವಿದ್ಯಾಚೋರೋ ಗುರುದ್ರೋಹೀ ವೇದೇಶ್ವರವಿದೂಷಕಃ
ತ ಏವ ಬಹು ಪಾಪ್ಮಾನಃ ಸದ್ಯೋ ದಂಡ್ಯಾ ಇತಿಶ್ರುತಿಃ

—ವಾಯವೀಸಂಹಿತಾ

ಶ್ರುತಿಯಿಂತುಟೆಂಗುಮೆಂದಾ ವಾಯುವೀಯ ಸಂ
ಹಿತೆಯುಲಿವುತಿದೆ ವೇದದೂಷಕಂ ಹರಿ ವೇದ
ನುತನದೆಂತಪ್ಪನೈ ಮತ್ತೆ ವೇದ*ದ್ರೋಹಯೆನೆ ಪರಸ್ಯಾನ್ಯಮೆನುತುಂ
ಅತುಳ ಪಾರಾಶರಮಿರಲ್ ಶ್ರುತಿದ್ರೋಹಸಂ
ಯುತರನ್ನವಂ ಕೊಂಡವಂ ಪತಿತನಪ್ಪನಾ
ಕತದಿಂ ಶ್ರುತಿದ್ರೋಹಿಯಚ್ಯುತನವಂ ವೇದವೇದ್ಯತೆಗದೇಂ ಸಲ್ವನೇ ೧೬೧

ಅಂತಾದ ಬುದ್ಧರೂಪಿಯಹರಿಯ ದುರ್ಬೋಧ
ದಿಂ ತಿಳಿದ ಬೌದ್ಧರುಂ ವೈಷ್ಣವಾಂತರ್ಭೇದ
ಮಂತಱಿನವೈದಿಕಂ ಮತ್ತಗಜೆಯೊಳ್ ಸೆಣಸಿ ಮಡಿಯೆ ರಕ್ತಾಸುರಬಲಂ
ಅಂತವರೊಳೋಡಿದರ್ ಕೆಲಬರರ್ಹವ್ರತವ
ನಾಂತು ತಲೆದಱಿದು ನಾಣ್ಗೆಟ್ಟು ವೇದಾಚಾರ
ಮಂ ತನ್ಮಹಾವೇದವೇದ್ಯ ಶಿವನಂ ಪಳಿವರಾ ಪೂರ್ವವೈರದಿಂದೆ ೧೬೨

ಇದುವೆ ಸೌರಾದಿಪೌರಾಣಂಗಳೊಳ್ ಸಿದ್ಧ
ಮದಱಿನಾ ಸವಣರುಂ ವೈಷ್ಣವದ ಭೇದವೆಂ
ದೊದರುವ ಪುರಾಣಮುಂಟಾಗಿಯುಂ †ಹಸ್ತಿನಾಹನ್ಯಮಾನೋಪಿಯೆನುತುಂ
ಪದೆದು ನವಿಶೇಚ್ಚಯೆನುತುಂ ಜಿನಾಲಯಮೆನಲ್
ಮದಗಜಂ ಸೀಳ್ದೊಡಂ ಜಿನಗೃಹಂಬುಗಲಾಗ
ದಿದು ದಿಟಂ ಸ್ಮೃತಿವಾಕ್ಯಮಾ ಹರಿಗದಿತಮಾದ ವೈದಿಕದೆ ನಡೆವ ಕತದಿಂ ೧೬೩

ಎಂತೆನಲ್ ದೇವತೆಗಳಂ ಗೆಲ್ದು ದನುಜರ್ ಪ್ರ
ಶಾಂತಮಾನಸರಾಗಿ ವೈದಿಕಾಚಾರಮುಮ
ನಾಂತೆಲ್ಲ ಯಜ್ಞಮಂ ನೆಗಳ್ದು ತದ್ಯಜ್ಞಾಂಶಮಂ ಸುರರ್ಗೆ ಕುಡದಿರುತಿರೆ
ಅಂತವರ್ ವಿಷ್ಣುವಿಂಗುಸಿರೆ ಮಾಯಾರೂಪ
ಮಂ ತಾಳ್ದು ಬರ್ಹಿಪಿಂಛಂಬಿಡಿದು ಲೋಚನಂಗೆ
ಯ್ದಂತೆ ನಗ್ನತೆಯಿನಸುರರ ಪೊರೆಗೆ ಗಮಿಸಿ ವೇದಾಚಾರಮಂ ದೂಷಿಸಿ ೧೬೪

---

* ವೇದದ್ರೋಹಪರಸ್ಯಾನ್ನಂ
—ಪಾರಾಶರ

† ಹಸ್ತಿನಾ ಹನ್ಯಮಾನೋಪಿ ನವಿಶೇಚ್ಚ ಜಿನಾಲಯಂ

ಶ್ರುತಿಬಹಿಷ್ಕೃತಮಾರ್ಗಮಂ ಬೋಧಿಸಲ್ಕವರ್
ಮತಿಗೆಟ್ಟು ತದ್ವೇದಸಿದ್ಧಪದ್ಧತಿಯನುಳಿ
ದತಿ ಪಾಪಿ ಹರಿಯಿದೇ ಅರ್ಹಮೆಂದುದಱಿನಾ ರೂಪನಧಿಕರಿಸಿಕೊಂಡು
ಕ್ಷಿತಿಯೊಳಾಚರಿಸಿಯರ್ಹತರಾದರೆಂದು ಸ
ನ್ನುತ ವಿಷ್ಣುಪೌರಾಣಮುಲಿವುದದಱಿಂ ವೇದ
ಮತವನಿಳಿಕೆಯ್ವವಂ ವೇದವೇದ್ಯನೆ ಮತ್ತವಂ ಪಾಂಚರಾತ್ರಮೆಸಗೆ ೧೬೫

ಶಾಂಡಿಲ್ಯನೆಂಬ ವಿಪ್ರಂ ವೇದಪದ್ಧತಿಯ
ನಂಡಲೆದು ವಿಷ್ಣೂಕ್ತ ಪಾಂಚರಾತ್ರಾಚಾರ
ಮಂಡಿತನೆನಿಸಿ ತದನುಸಾರದಿಂ ಶಾಂಡಿಲ್ಯಸಂಹಿತೆಯನೆಸಗಿದುದಱಿಂ
ದಂಡಧರನಾತ್ಮಕಿಂಕರರಿನವನಂ ತರಿಸಿ
ದಂಡಿಸಿ ನರಕದೊಳ್ ಕೆಡಪಿದನೆಂದುಲಿವುದು
ಚ್ಚಂಡ ವಾಸಿಷ್ಠ ಲೈಂಗ್ಯಂ ಮತ್ತೆ ಸಂಗಿರನೆನಿಪ್ಪನೊರ್ವಂ ಬ್ರಾಹ್ಮಣಂ ೧೬೬

ಶಿವಶಿವಾ ದುರ್ಬೋಧದಿಂ ವೇದವಿಹಿತಮಾ
ರ್ಗವನುಳಿದು ಪಾಷಂಡದೀಕ್ಷೆಯಂ ಪಡೆದಿರ
ಲ್ಕವನಂ ಯಮಂ ತನ್ನ ಭಟರಿನತಿಬಂಧನಂಬಡಿಸುತೆ ತರಿಸಿ ಶಿಕ್ಷಿಸಿ
ತವೆ ನರಕದೊಳ್ ಕೆಡಪೆಯೊಂದು ಕೋಟ್ಯಬ್ದವದ
ನವನುಂಡು ಮೇಣ್ ಶತಾನಂದರ ಕೃಪಾಕಟಾ
ಕ್ಷವಿಶೇಷದಿಂ ಬಾಳ್ದನೆಂಗುವಾ ಯಜ್ಞವೈಭವಖಂಡಮಂತಲ್ಲದೆ ೧೬೭

ಉಸಿರ್ವೆನಾ ಪಾಂಚರಾತ್ರಾಚಾರಮಂ ಕಲ
ತ್ರಸಮಾನತೆಯ ಜಾತಿಭೇದಮುಚ್ಚಿಷ್ಟಪಾ
ದಸಲಿಲ ಸ್ವೀಕೃತಿಸುವೇದಾರ್ಥವಿಪ್ಲಾವನಂ ಶಂಭುನಿಂದೆಯೆಂಬಾ
ಪೆಸರ್ವಡೆದ ಪಂಚವ್ರತಂಗಳಿವು ವೈಷ್ಣವ
ರ್ಗೆಸೆವವೆಂದಾ ಪುರಾಣೋಕ್ತಿಯಿರಲಿನಿತನೊರೆ
ದಸುರಾರಿ ವೇದವೇದ್ಯನೆ ಆತನಲ್ತೆನಲವನ ಭೃತ್ಯರೇನಪ್ಪರೈ ೧೬೮

ಓವೊ ಪೇಳ್ ವಾದಿ ನೀಂ ಶ್ರೌತಪರನಾದೊಡೆ ನ
ಮೋ ವಿಷ್ಣವೇಯೆನುತೆ ಮಹತೇ ಕರೋಮಿಯೆಂ
ಬೀ ವೈದಿಕಾಣುವೈಷ್ಣವತಂತ್ರಮಂತ್ರಮಾಲೆಯೊಳಗಿಲ್ಲಿದುನಿಮಿತ್ತಂ
ಭಾವಿಸಲ್ ವೇದವೇ ನಿಮತಲ್ಲಮುವಱಿಕೊಳಗ
ನೇವೇಳ್ದಪೆಂ *ಪಾಂಚರಾತ್ರಾದಯೋಯೆನು
ತ್ತೋವಿ ಸರ್ವೇನ ಪ್ರಮಾಣಮಿತಿಯೆನುತೆ ತಾಂ ಸ್ಥಿತಿರೆನಲ್ ಪಾರಾಶರಂ ೧೯೯

ಪಾಂಚರಾತ್ರಾದಿಗಳಹೋ ಪ್ರಮಾಣಮೆಯಲ್ತು
§ಪಾಂಚರಾತ್ರಾದಿಮಾರ್ಗಾಣಾಮೆನುತ್ತೆ ಮು
ತ್ತಂ ಚೆಲ್ವಮರಿ ವೇದಮೂಲತ್ವಮಾಸಿಕೇನ ಹಿಯೆನುತೆ ಸತ್ಯವಾಕ್ಯಂ
ಮುಂಚಲ್ ಸ್ವತಂತ್ರಾಯೆನುತ್ತೆ ತೇ ತೇನಯೆನು
ತುಂ ಚದುರರೊಪ್ಪುವೋಲ್ ಭ್ರಾಂತಿಮೂಲಾಯೆನು
ತ್ತುಂ ಚಮತ್ಕೃತಿಯಿಂ ನಿರೂಪಣೇಯೆನೆ ಪಾಂಚರಾತ್ರಮಾರ್ಗಂಗಳೆಂದು ೧೭೦

ವೇದಮೂಲಂಗಳಲ್ತದಱಿಂ ಸ್ವತಂತ್ರಂಗ
ಳಾದವಂತಱಿನವಂ ಪೆಸರ್ಗೊಂಬುದೇ ಭ್ರಾಂತಿ
ಗಾದಿಯೆಂದಾ ಮುಕ್ತಿಖಂಡಮಿದೆಯುವನೊರೆದ ಹರಿಯೆಂತೊ ವೇದವೇದ್ಯಂ
ವಾದಿ ಕೇಳಶ್ರೌತರಾರಯಲ್ ಪಾಷಂಡ
ರಾ ದುರಾಚಾರಿಗಳ ಮುಖವನೀಕ್ಷಿಸಲಾಗ
ದೋದಲೇಂ ಶತಧನುರ್ನೃಪತಿ ನಿಜಸತಿ ಶೈಂಬೆಸಹಿತಮಾ ಕಾಶಿಯಲ್ಲಿ ೧೭೧

---

* ಪಾಂಚರಾತ್ರಾದಯಸ್ಸರ್ವೇನ ಪ್ರಮಾಣಮಿತಿ ಸ್ಥಿತಿಃ
—ಪಾರಾಶರ

§ ಪಾಂಚರಾತ್ರಾದಿ ಮಾರ್ಗಾಣಾಂ ವೇದಮೂಲತ್ವಮಾಸ್ತಿಕೇ ।
ನಹಿ ಸ್ವತಂತ್ರಾ ತೇ ತೇನ ಭ್ರಾಂತಿಮೂಲಾ ನಿರೂಪಣೇ ॥
—ಮುಕ್ತಿಖಂಡ

ಸ್ನಾನಮನೊಡರ್ಚಿ ಕಾರ್ತಿಕಮಾಸದೊಳ್ ಶ್ರುತಿವಿ
ಧಾನತಾಚರಣನಾಗಿರೆಯೊರ್ವ ಪಾಷಂಡಿ
ಯಾ ನಿಶ್ಚಲಿತ ಕರ್ಮನಿಷ್ಠರಿಡೆಗೆಯ್ತರಲೊಡಂ ತದಂಗನೆಕಾಣುತೆ
ಭಾನುವಂ ನೋಡಿ ತದ್ದೋಷಮಂ ಕಳೆದಳಾ
ಭೂನಾಯಕಂ ವಿಪ್ರನೆಂದು ಮನ್ನಿಸಿ ತಿಳಿದ
ನೂನಪಾಪಂ ಸಂಭವಿಸಿತೆಂದು ಬೆಟ್ಟೇರಿ ಬೀಳ್ದು ಶಾರ್ಙ್ಗೀಲಿಯಾಗಿ ೧೭೨

ಅದನನುಭವಿಸಿ ತೋಳನಾಗಿ ಪದ್ದಾಗಿ ಮಾ
ಣದೆ ಕಾಗೆಯಾಗಿ ಮೇಣ್ ನವಿಲಾಗಿರಲ್ಕವನ
ಸುದತಿ ತತ್ತದ್ರೂಪದಿಂ ಪುಟ್ಟಿ ಜಾತಿಸ್ಮರಣದಿಂದೆ ಬೋಧಿಸುತ್ತೆ
ಪುದಿದು ಜನಕನ ಯಾಗದವಭೃಥದೊಳಗೆ ಮುಳುಗಿ
ಸಿದೊಡವನುದರದೊಳಾತಂ ಪುಟ್ಟಿ ಯುದ್ಧದಿನ
ಳಿದು ತದಘಮಂ ಕಳೆದನೆಂದುಲಿವುತಿದೆ ವಿಷ್ಣುಪೌರಾಣಮಂತಲ್ಲದೆ ೧೭೩

ಮತ್ತೆಯತ್ಇಂ*ದ್ರೋಯೆನುತೆ ದೇವತಾ ಪರಿಯೆ
ನುತ್ತುಂ ವ್ರಜಂ ವಿಶ್ವರೂಪಮೆಂದೆನುತೆ ತಾ
ನೆತ್ತಿ ಮೇಣ್ ತ್ವಷ್ಟ್ರಾಯೆನುತುಮಭ್ಯಮಂಸ್ತಯೆನೆ ವೃತ್ರಮಸ್ತ್ರಯತಿನ್ಯೆನೆ
ಸುತ್ತೇನೊ ಮುದದಿಂದೆ ಸಾಲಾ ವೃಕೇಭ್ಯೋಯೆ
ನುತ್ತೆ ದಲ್ ಪ್ರದದಾತಿ ದುರ್ಮಘಾನವಧೀದೆ
ನುತ್ತುಂ ಬೃಹಸ್ಪತೇಃಪ್ರತ್ಯವದದೆಂದೆನುತುಮಿಂದ್ರೋಯತಿನ್ಯೆನುತ್ತುಂ ೧೭೪

---

* ಇಂದ್ರೋ ದೇವತಾಪರಿವ್ರಜಂ ವಿಶ್ವರೂಪತ್ವಷ್ಟ್ರಾಭ್ಯಮಂಸ್ತ
ವೃತ್ರಮಸ್ತ್ರಯತಿನ್ ಸಾಲಾ
ವೃಕೇಭ್ಯೋ ಪ್ರದದಾತಿ ದುರ್ಮಘಾನಹಧೀತ್ ಬೃಹಸ್ಪತೇಃ ಪ್ರತ್ಯವದತ್
ಇಂದ್ರೋಯತಿನ್ ಸಾಲಾ
ವೃಕೇಭ್ಯೋ ಪ್ರಾಯಚ್ಛತ್ ವಿಜ್ಞಾನಸ್ಯಬಲೇನೈವ ಖಲು ಸಾಕ್ಷಾತ್ಪುರಂದರಃ
ಸಾಲಾ
ವೃಕೇಭ್ಯೋ ಪ್ರಾಯಚ್ಛತ್ ಯತಿನ್ ದೇಹಾಭಿಮಾನಿನೋತ್ವಷ್ಟು
ಪರಮೇಷ್ಠಿಜಂ ॥

ಘನದೆ ಸಾಲಾ ವೃಕೇಭ್ಯೋಯೆನಲ್ ಪ್ರಾಯಚ್ಛ
ದೆನುತೆ ವಿಜ್ಞಾನಸ್ಯಯೆನೆ ಬಲೇನೈವ ಖಲು
ಯೆನುತೊಲ್ದು ಸಾಕ್ಷಾತ್ಪುರಂದರ ಸಾಲಾ ವೃಕೇಭ್ಯೋಯೆನುತ್ತಂತದೇ
ವಿನಯದಿಂ ಪ್ರಾಯಚ್ಛದೆಂದೆನುತ್ತುಂ ಯತಿನ್
ಯೆನುತೆ ಸಲೆ ದೇಹಾಭಿಮಾನಿನೋಯೆಂದೆನಲ್
ಮನವಾರೆ ಕೇಳ್ ತ್ವಷ್ಟೃ ಪರಮೇಷ್ಠಿಜಂ ಸುಧನ್ವತಿಯ ಪತಿ ವಿಶ್ವರೂಪಂ ೧೭೫

ಸುರಲೋಕಕೆಯ್ದಿ ಮರ್ತ್ಯಕೆ ಬರುತೆ ಸುಖಮಿರ್ದು
ಕರಮೆ ದುರ್ಬೋಧದಿನವೈದಿಕಾಚಾರದಿಂ
ದಿರುತೊರ್ಮೆ ಸಗ್ಗಕೆಂದಿನವೋಲ್ ಗಮಿಸೆ ಕಂಡು ಸುರಪತಿಯವಜ್ಞೆಗೆಯ್ಯೆ
ತಿರಿಗಿ ಭೂಮಿಗೆ ಬಂದು ನೊಂದಾಭಿಚಾರಿಕಾ
ಧ್ವರಮನಾಕಾಶಿಯೊಳೆಸಗಿ ಬೇಳುತಿರಲೊಡಂ
ಸ್ವರಹೀನಮಾಗೆಯಾಗಳ್ ಶ್ರುತಿರಹಿತ ಯತಿಗಳಾದ ಮಟ್ಟಿಗರನಿಂದ್ರಂ ೧೭೬

ಕೊಂದು ಕೆನ್ನಾಯ್ಗಳಗಕಿಕ್ಕಿದಂ ಕೋಪದಿಂ
ದೆಂದು ಋಕ್ಕುಂ ಯಜುಸ್ಸುಂ ಸೌರಸಂಹಿತೆಯು
ಮಂದದಿಂ ಸಾಱುತಿವೆಯದಱಿಂದ ವೈದಿಕಂ ಹರಿ ದಂಡ್ಯನೇನಲ್ಲವೇ
ಚೆಂದದಿಂ *ವೇದಬಾಹ್ಯೇಷುಯೆನೆ ಮಾರ್ಗೇಷು
ಯೆಂದು ತಾಂ ಸಂಸ್ಥಿತಾಯೆನೆ ಯೇ ನರಾಸ್ಸುರಾಃ
ಎಂದೆನುತ್ತುಂ ತೇಹಿ ಪಾಷಂಡಿನೋಯೆನುತೆ ಸಾಕ್ಷಾತ್ತಥಾತ್ಯೈರೆನೆ ೧೭೭

---

* ವೇದಬಾಹ್ಯೇಷುಮಾರ್ಗೇಷು ಸಂಸ್ಥಿತಾ ಯೇ ನರಾಸ್ಸುರಾಃ ।
ತೇಹಿ ಪಾಷಂಡಿನಸ್ಸಾಕ್ಷಾತ್ತಥಾ ತೈ ಸಹವಾಸಿನಃ ॥

—ಸೂತಸಂಹಿತೆ

ತಾನೆ ಸಹವಾಸಿನೋಯೆನೆ ವೇದಬಾಹ್ಯಮಾ
ರ್ಗಾನುವರ್ತಕರಾದ ಮನುಜರ್ಕಳುಂ ದೇವ
ತಾನೀಕಮುಂ ಮತ್ತಮವರ ಸಹವಾಸಿಗಳ್ ಪಾಷಂಡರೆಂದುಲಿವುತೆ
ಮಾನಿತಂ ಸೂತಸಂಹಿತೆಯಿರಲ್ ಶ್ರುತಿಬಾಹ್ಯ
ತಾನಿಘ್ನನಾದ ಕತದಿಂ ದೇವಕುಲಮಾದೊ
ಡೇನೊ ಹರಿ ಪಾಷಂಡಿಯಾ ವೈಷ್ಣವರುಮಂತೆಯವನೆಂತೊ ವೇದವೇದ್ಯಂ ೧೭೮

ಇಂತೆನಲೊಡಂ ವಾದಿಯೆಂದನೆಲೆ ಶೈವ ಕೇಳ್
ಕಂತುತಾತಂ ವೇದವೇದ್ಯನಲ್ತೆಂಬುದನ
ದೆಂತೊಡಂಬಟ್ಟಪೆಂ †ನಾರಾಯಣಂ ಪರಂ ಬ್ರಹ್ಮತತ್ವಮೆನುತ್ತದು
ಮುಂತೆ ನಾರಾಯಣಃ ಪರಮೆನುತ್ತತಿಮಾತ್ರ
ದಿಂ ತವದೆ ನಾರಾಯಣಃ ಪರಂಜ್ಯೋತಿರೆನು
ತುಂ ತಾನೆ ಆತ್ಮಾಯೆನುತ್ತೆ ನಾರಾಯಣೋಯೆನುತುಂ ಪರೋಯೆನುತ್ತುಂ ೧೭೯

ಮತ್ತೆ ಸ ಬ್ರಹ್ಮಾಯೆನುತ್ತೆ ಸ ಶಿವೋಯೆಂದೆ
ನುತ್ತೆ ಸೇಂದ್ರಃ ಸೋಕ್ಷರೋಯೆನುತೆ ಪರಮೋಯೆ
ನುತ್ತುಂ ಸ್ವರಾಡೆನಲ್ ಬಳಿಕಮುಂ ಯಚ್ಚಕಿಂಚಿಜ್ಜಗತ್ತಸ್ಮಿನ್ನೆನೆ
ಬಿತ್ತರಿಸಿ ದೃಶ್ಯತೇ ಶ್ರೂಯತೇಪಿಯೆನುತ್ತ
ದೆತ್ತಿ ವಾಯೆನುತುಮಂತರ್ಬಹಿಶ್ಚಯೆನುತ್ತು
ಮೊತ್ತಿ ತತ್ಸರ್ವಮೆನುತುಂ ವ್ಯಾಪ್ಯನಾರಾಯಣಸ್ಥಿತೋಯೆಂದೆನುತ್ತುಂ ೧೮೦

---

† ನಾರಾಯಣಂ ಪರಂ ಬ್ರಹ್ಮತತ್ವಂ-ನಾರಾಯಣಃ ಪರಂಜ್ಯೋತಿಃ-
ಆತ್ಮಾನಾರಾಯಣಃ ಪರಃ
ಸ ಬ್ರಹ್ಮಾ ಸಶಿವಸ್ಸೇಂದ್ರಸ್ಸೋಽಕ್ಷರಃ ಪರಮಸ್ಸ್ವರಾಟ್ ।
ಯಚ್ಚಕಿಂಚಿಜ್ಜಗತ್ತಸ್ಮಿನ್‌ದೃಶ್ಯತೇಶ್ರೂಯತೇಪಿವಾ ।
ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಸ್ಥಿತಃ ॥ ನಮೋವಿಷ್ಣವೇ

ಸಲೆ ನವೋ ವಿಷ್ಣವೇಯೆನೆ ಪರಬ್ರಹ್ಮಮುಮ
ಮಲಿನ ಪರತತ್ವಮುಂ ಘನ ಪರಂಜ್ಯೋತಿಯುಂ
ಜ್ವಲಿಪ ಪರಮಾತ್ಮನುಂ ನಾರಾಯಣಂ ದಲವನೇ ಪರಬ್ರಹ್ಮನೀಶನಿಂದ್ರಂ
ವಲಮುಕ್ಷರಂ ಪರಮನುದ್ಯತ್ಸ್ವರಾಜನವ
ನಲಘುತೆಯನೀ ವಿಶ್ವದೊಳಹೊರಗನೆಯ್ದಿಯವಿ
ಚಲಿತನಾಗಿರ್ಪನಂತೊಪ್ಪುವ ಮಹಾವಿಷ್ಣುವಿಂಗೆ ವಂದಿಪೆನೆನುತ್ತುಂ ೧೮೧

ಅನುವದಿಸಿ ಪಲವಂದದಿಂದೆ ನಾರಾಯಣೋ
ಪನಿಷತ್ತುವುಂ ಯಜುರ್ವೇದಾದಿಗಳುಮಿಂತು
ವಿನುತಿಸುತ್ತಿರೆ ವಿಷ್ಣು ವೇದವೇದ್ಯಂ ದಲಲ್ತೆಂಬುದೆತ್ತಣ್ಣುಸಿರೆನೆ
ಘನ ಗುರುವರಂ ನಸುನಗುತ್ತೆಂದನೆಲೆ ವಾದಿ
ನಿನಗೆ ವೇದಾರ್ಥವಿನಿಸುಂ ಬಾರದೆಂತೆಂಬೊ
ಡನುಪಮಿತ ನಾರಾಯಣಾಹ್ವಯಂ ಶಿವನಾಮದೊಳಗೊಂದು ಗೌಣನಾಮಂ ೧೮೨

ಎಂತೆನಲ್ ನಾರಮೆನೆ ಜನಸಮೂಹಂ ದಲೋ
ರಂತಲ್ಲಿ ವರ್ತಿಪಂ ನಾರಾಯಣಂ ತಿಳಿವೊ
ಡಂತಪ್ಪ ವರ್ತನಂ ಶಂಭುವಿಂಗಲ್ಲದಾ ವಿಷ್ಣುಗಿಲ್ಲೆಂದು ಸಿದ್ಧಂ
ಅಂತಱಿಂ ನಾರಾಯಣಾಖ್ಯ ಶಬ್ದಕ್ಕರ್ಥ
ಮಂತರಾತ್ಮತ್ವವಾ ಪರಿಯಿನೆಸೆವೀಶ್ವರಂ
ಸಂತತಂ ನಾರಾಯಣಂ ಮೇಣವನೆ ಪರಬ್ರಹ್ಮಮುಂ ಪರತತ್ವಮುಂ ೧೮೩

ವರ ಪರಂಜ್ಯೋತಿ ಪರಮಾತ್ಮಂ ಸುರಜ್ಯೇಷ್ಠ
ನೊರೆಯಲೇನಾತನೇ ಶಿವನನ್ಯರಲ್ತು ವಿ
ಸ್ಫುರಿಪಿಂದ್ರನಕ್ಷರಂ ವರಮುಂ ಸ್ವರಾಜನವನೇ ವಿಶ್ವದೊಳಹೊಱಗೆಯುಂ
ಪರಿಪೂರ್ಣನಾಗಿರ್ಪನೆಂದು ಮುಱಿನುಡಿಯಿನು
ಚ್ಚರಿಸಿದಾಮ್ನಾಯದಂತಸ್ಥಮುಂ ತೆಱೆದುಡಂ
ಗುರಿಸಿ ದಲ್ ವ್ಯಾಪ್ತಯೆಂದೆನುತುಮಾಸ್ತೇ ಸೌ ಮಹೇಶ್ವರೋಯೆಂದೆನುತ್ತೆ ೧೮೪

ಸುತ್ತೇನೊ ಶಿವರಹಸ್ಯಮಿದೆ *ಈಶಾನೋಯೆ
ನುತ್ತೆ ಸಶಿವೋಯೆನುತೆ ಕೃಷ್ಣೋಯೆನುತೆ ಮುದಂ
ಬೆತ್ತು ವಿಷ್ಣುರೆನುತ್ತೆ ನಾರಾಯಣೋಹರಿರ್ಬ್ರಹ್ಮಾಯೆನಲ್ ಸ್ಕಾಂದಮೇ
ಮತ್ತಜೋ ವಿಷ್ಣುಃ ಪಿತಾಮಹೋಯೆಂದೆನು
ತೊತ್ತಂಬದಿಂ ಕೇಶವಃ ಕೇಶಿಹಂತಾಯೆ
ನುತ್ತಿದೆ ರವಿ ಪುರಾಣದೊಳ್ ವಿಷ್ಣುನುತಿ ಮುಕುಂದೋಯೆನುತೆ ವಿಗತಜ್ವರೋ ೧೮೫

ಎನುತಮಿದೆ ನಾರಾಯಣಾಯ ಶರ್ವಾಯಯೆಂ
ದನಘ ಲೈಂಗ್ಯದೊಳಿದೆ †ನಮಸ್ತುತೇ ಪ್ರಕೃತಯೇ
ಎನುತುಂ ವಲಂ ನಮೋ ನಾರಾಯಣಾಯಚಯೆನುತಿದೆ ಯಜನುತಿವೇದಮುಂ
ಘನದಿಂ ನಮೋಬ್ರಹ್ಮಣೇ ನಮೋಸ್ತ್ವಗ್ನಯೇ
ಯೆನುತುಂ ನಮಃ ಪೃಥಿವ್ಯೈ ನಮೋಯೆನುತೆ ಮ
ತ್ತನುವಿನಿಂದೋಷಧೀಭ್ಯೋ ನಮೋ ವಾಚೇ ನಮೋಯೆನುತೆ ವಾಚಃ ಎನೆ ೧೮೬

ಅದಱೊಡನೆ ಕೂಡಿ ಪತಯೇ ನಮೋಯೆಂದೆನು
ತ್ತದು ವಿಷ್ಣವೇ ನಮೋ ಮಹತೇ ಕರೋಮಿಯೆಂ
ದೊದಱುತ್ತೆ ಪರಿಪರಿಯೊಳಿರ್ಪವಂಗನ್ಯಱೊಳ್ವಂದನಮನೆಸಗಿ ವಿವಿಧ
ಪದದಿಂದೆ ನುತಿಸಿದುವನೇಕಮುಂಟದಱಿನ
ಭ್ಯುದಯಕರ ನಾರಾಯಣಾಹ್ವಯಂ ಪರಿಕಿಸಲ್
ಸದಮಲ ಶಿವನ ನಾಮುವಾ ಕತದೆ ಶಿವನನೇ ಪೇಳ್ದುದಾ ವೇದವಾಕ್ಯಂ ೧೮೭

---

* ಈಶಾನೋ ಸಶಿವೋ ಕೃಷ್ಣೋ ವಿಷ್ಣುರ್ನಾರಾಯಣೋ ಹರಿರ್ಬ್ರಹ್ಮಾ।
ಅಜೋ ವಿಷ್ಣುಃ ಪಿತಾಮಹಃ।
ಕೇಶವಂ ಕೇಶಿಹಂತಾಚ ಮುಕುಂದೋ ವಿಗತಜ್ವರಃ।
ನಾರಾಯಣಾಯ ಶರ್ವಾಯ ॥
—ಲೈಂಗ್ಯ

† ನಮಸ್ತುತೇ ಪ್ರಕೃತಯೇ ನಮೋ ನಾರಾಯಣಾಯಚ।
ನಮೋ ಬ್ರಹ್ಮಣೇ ನಮೋ ಸ್ತ್ವಗ್ನಯೇ ನಮಃ।
ಪೃಥಿವ್ಯೈನಮ ಓಷಧೀಭ್ಯೋ ನಮೋ ವಾಚೇ ನಮೋ ವಾಚಸ್ಪತಯೇ ನಮೋ
ವಿಷ ವೇ ಮಹತೇ ಕರೋಮಿ

ಸೂಕ್ತಿಯಿಂದಾ *ಪೋಯೆನುತ್ತೆ ನಾರಾಯಿತಿ
ಪ್ರೊಕ್ತಾಯೆನುತ್ತೆ ನಾರಾವೈ ನರಯೆನುತ್ತೆ
ಯುಕ್ತಿಯಿಂ ಸೂನವಸ್ತಾಯದಸ್ಯಾಯನಂ ತೇನಯೆನೆ ಸೂತೋಕ್ತಿಯೇ
ಪ್ರೊಕ್ತೋಯೆನುತ್ತೆ ನಾರಾಯಣಸ್ತ್ವಯಮೆನಲ್
ವ್ಯಕ್ತಮಾಗಂಬುಗಳ್ ಶಿವಶಿಶುಗಳಲ್ಲಿಯನು
ರಕ್ತಿಯಿನಿರಲ್ಕೆ ನಾರಾಯಣರವರ ತೆಱದೆ ಹರಿಗೆ ನಾರಾಯಣಾಖ್ಯಂ ೧೮೮

ವಿವರಿಸೆ ನಮೋ ವಿಷ್ಣವೇಯೆಂಬ ಸುಮನು ವೈ
ಷ್ಣವಮಲ್ತದೆಂತೆನಲ್ ವೇದಂಗಳನ್ಯದೇ
ವವಿಸರಕೆ ಮಂತ್ರಸಾಮ್ಯವನೀಯವಾಗಿ ವಂದನಮುನಭವಂಗಲ್ಲದೆ
ತವೆ ಮಾಡದುದ್ಯತ್ಪ್ರತಿಜ್ಞೆಯಥವಾ ಪ್ರಣಾ
ಮವನೆಸಗಿರಲ್ ಧಾತುಯೌಗಿಕಮನೀಶ್ವರಂ
ಗವು ವಂದಿಸಿದ ವಿಧಿಯದೇಕೆನೆ ನಮೋ ವಿಷ್ಣವೇಯೆಂಬ ಪಂಚಾಕ್ಷರಂ ೧೮೯

ಎಲೆಲೆ ವೈಷ್ಣವ ಕೇಶವೋರು ಭಾಗವತಸಂ
ಚಲ ಪಂಚರಾತ್ರ ತಂತ್ರಾಣುಮಾಲೆಗಳೊಳಿ
ಲ್ಲುಲಿಯಬೇಡೆಂದು ಮೊದಲೇ ಸಿದ್ಧಿಸಿದೆವೆಮ್ಮ ಶಂಭುಗಾ ವಿಷ್ಣುನಾಮಂ
ಸಲೆ ವಿಷಲ್ ವ್ಯಾಪ್ತೌಯೆನಿಪ ಧಾತುವಿಂದಾದ
ಬಲದೆ ಸದ್ವ್ಯಾಪಕ ಶಿವಂಗೆಱಗಿದರ್ಥವೀ
ಚಲವಿಡಿದಪುತ್ರಿಕಥನದವೊಲನ್ಯರ್ಗೆ ಸಲ್ಲದು ಮತ್ತಮೀ ಪರಿಯೊಳೇ ೧೯೦

---

* ಆಪೋ ನಾರಾ ಇತಿ ಪ್ರೋಕ್ತಾ ನಾರಾ ವೈ ನರಸೂನವಃ ।
ತಾಯದಸ್ಯಾಯನಂ ತೇನ ಪ್ರೋಕ್ತೋ ನಾರಾಯಣಸ್ತ್ವಯಂ

ತೈತ್ತಿರೀಯಮದು *ನಮ ಇಂದ್ರಾಯಯೆಂದೆನುತೆ
ಮತ್ತಂ ಮಖಘ್ನೇಯೆನಲ್ಕಿಂದ್ರನೇ ಮಖವ
ನೊತ್ತಿ ಸುಟ್ಟವನಿಂದಿಧಾತು ಪರಮೈಶ್ವರ್ಯದೊಳ್ ವರ್ತಿಸುವುದಂತಱಿಂ
ಕೃತ್ತಿವಾಸಂಗದು ನಮಿಸಿದುದಾ ಶ್ರುತಿಯಲ್ಲಿ
ಸುತ್ತೇಂ ನಮೋಯೆನುತೆ ಯಜ್ಞಾಯಯೆಂದು ವಚಿ
ಸುತ್ತುಂ ಮಖಘ್ನೇಯೆನುತೆ ನಮೋ ರುದ್ರಾಯಯೆನುತುಂ ಮಖಘ್ನೇಯೆನೆ ೧೯೧

ಇಂತುಮೇಶಂಗನ್ಯನಾಮದಿಂದೆಱಗಿದುವ
ನಂತವುಂಟೇ ತೆಱದಿನಱಿವುದಾವೀಗಳುಂ
ಪಿಂತೆಯುಂ ಪೇಳ್ದವನಿತರಸುರಾಳಿಗೆ ಮಂತ್ರಸಾಮ್ಯಮಿಲ್ಲ ವೃಥಾಹ್ವಯಂ
ಎಂತೆನಲ್ ಶ್ರುತಿ ಏಕ ಏವ ರುದ್ರೋಯೆಂದ
ನಂತರದೊಳುಳಿದರ್ಗೆ ತೆಱಹುಗುಡದಾ ಬಾಯೊ
ಳಂತೆ ನಾರಾಯಣನ ನಾಮಕಱುವತ್ತನಾಲ್ಕಬ್ಜ ಸಾಮ್ಯವನೀಯದು ೧೯೨

ಕ್ಷಿತಿಯೊಳಿತಿ †ಹಾಸಯೆನುತುಂ ಪುರಾಣಾಭ್ಯಾಮೆ
ನುತದು ವೇದಂ ಸಮುಪಭೃಂಹಯೇದೆನೆ ವೇದ
ತತಿಯರ್ಥಮಂ ಪುರಾಣೇತಿಹಾಸಂಗಳಿಂದಂ ಪೇಳ್ವುದೆಂದೊರೆವುತೇ
ಮತಿಸಿ ಛಂದೋವತ್ ಪುರಾಣಾನಿಯೆಂದುಮುಲಿ
ವುತೆ ‡ಪುರಾಣಮೆನುತ್ತೆ ಪಂಚಮೋ ವೇದೋಯೆ
ನುತೆ ಸಿದ್ಧಿಸಿದುವಾಗಿ ವೇದದೊಳಗಱಿದು ಶಿವನನೆ ಪೇಳ್ದುದಾ ಪುರಾಣಂ ೧೯೩

---

* ನಮ ಇಂದ್ರಾಯ ಮಖಘ್ನೇನಮೋ ಯಜ್ಞಾಯ ಮಖಘ್ನೇ ನಮೋ
ರುದ್ರಾಯ ಮಖಘ್ನೇ

† ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್

‡ ಪುರಾಣಂ ಪಂಚಮೋ ವೇದ:

ಆಯನಾದಿಯೊಳೆಮ್ಮ ಶಿವದತ್ತದಾನವಾ
ಮ್ನಾಯವೆಂತೆನೆ ವೇದದಾದಿಮಧ್ಯಾಂತದೊಳ
ಗಾಯತಂ ಲಿಂಗಮುದ್ರೆಯ ಶಾಸನಮುದಗ್ನಿ †ಮೀಡೇ ಪುರೋಹಿತಮೆನೆ
ನ್ಯಾಯದಿಂದೇಕ ಏವಯೆನೆ ರುದ್ರೋನದ್ವಿ
ತೀಯಾಯತಸ್ಥೇಯೆನೆ ಶಿವ ಏಕೋಯೆನಲ್
ಧ್ಯೇಯಶ್ಶಿವಂ ಕರಸ್ಸರ್ವಮನ್ಯತ್ ಪರಿತ್ಯಜ್ಯಯೆಂಬಿವನೀಕ್ಷಿಸಿ ೧೯೪

ಕರ್ಮಭಾಗವನುಳಿದು ತಜ್ಜ್ಞಾನಭಾಗಮಂ
ಮರ್ಮಜ್ಞನಾಗಿ ತಿಳಿಯೇಕೆನಲ್ ಶ್ರುತಿವಿಶ್ವ
ಕರ್ಮಾದ್ಯಖಿಲಮನೊರೆಯದೆ ವಾರ್ಧಿಯೊಳ್ ಜಲಚರಾದ್ಯಖಿಲಮಿರ್ದೊಡೇನೋ
ನಿರ್ಮಲಸುಮಣಿಗೆಣೆಯೆ ಯೀ ಶಿವಗೃಹಕ್ಷೇತ್ರ
ಧರ್ಮಿಯೆನಿಸುವ ವೇದತತಿ ಮಹೇಶನನಲ್ಲ
ದೊರ್ಮೆಯುಂ ನುತಿಸದುಳಿದವರನದಱಿಂ ವೇದವೇದ್ಯನಲ್ತಲ್ತು ಕೃಷ್ಣಂ ೧೯೫

ಮತ್ತೆ ಕೇಳ್ ವಾದಿ ಹರಿ ಚರಣದೊಳ್ ಗಂಗೆಯಂ
ಪೆತ್ತನೆಂದೆಂಬ ದುರ್ಭಾಷಿತಕೆ ನಿರ್ವಾಹ
ಕೋತ್ತರಮನೆಂತೆನಲ್ ಸಕಲ ಮುನಿಗಳ್ ಸೂತನೆಡೆಗೆಯ್ದಿ ನಮಿಸಿ ನಿಂದು
ಸುತ್ತೇನೊ ನೀನಱಿಯದಂಶಮಿಲ್ಲಾಮ್ನಾಯ
ವಿತ್ತಮನೆ ಗಂಗಾಜನನಮೆಂತದಂ ಶಿವಂ
ಪೊತ್ತಂದವೆಂತು ತನ್ನಾಮವೇನದಱಧಿಕ ವೃತ್ತಿಯೆಂತುಸಿರೆಂದೆನೆ ೧೯೬

ಘನಪುರಾಣಂ ಪೇಳ್ವುದಿಂತೆಂದು ಕೇಳ್ವುದೆಲೆ
ಮುನಿಗಳಿರ ಸೃಷ್ಟಿಸ್ಥಿತಿಪ್ರಹೃತಿಕಾರಿಗಳ್
ವನಜಭವ ಹರಿ ರುದ್ರರವರನಿಲಜಲ ಶಿಖಿತ್ರಯಮನಧಿಕರಿಸಿಕೊಂಡು
ಮಿನುಗುವರ್ ಬ್ರಹ್ಮಾತ್ಮಕಂ ಪೃಥ್ವಿಯಾ ವಿಶ್ವ
ಜನನಕ್ರಿಯಾನ್ವಿತಮುದಱಿನವಂ ಸೃಷ್ಟಿಗಧಿ
ಪನೆನಿಪಂ ವಿಷ್ಣ್ವಾತ್ಮಕಂ ಜಲಮದೆಲ್ಲರಂ ಸ್ಥಾಪಿಪುದದಱಿನಚ್ಯುತಂ ೧೯೭

---

† ಅಗ್ನಿಮೀಡೇ ಪುರೋಹಿತಂ ಏಕಏವರುದ್ರೋ ನ ದ್ವಿತೀಯಾಯತಸ್ಥೇ ।
ಶಿವ ಏಕೋ ಧ್ಯೇಯಶ್ಶಿವಂ ಕರಃ ಸರ್ವಮನ್ಯತ್ ಪರಿತ್ಯಜ್ಯ

ಸ್ಥಿತಿಕರ್ತೃವೆನಿಸುವಂ ರುದ್ರಾತ್ಮಕಂ ನಾಡೆ
ಹುತವಹನದೆಲ್ಲರಂ ಸಂಹರಿಪುದದಱಿಂ
ಪ್ರತಿಮ ರುದ್ರಂ ಬಗೆಯೆ ಸಂಹಾರಕರ್ತೃವೆನಿಸುವನಾ ಧರಾಂಬುಯುಗಳಂ
ಪ್ರತಿಯಿಡಲ್ ಸ್ಥೂಲಮವು ಮೇಣಧೋನ್ವಯಮಾದ
ಕತದಿನುತ್ಕ್ಷೇಪ ವಿಧಿಯಿಂದೂರ್ಧ್ವಕೆಯ್ದಿಯುಂ
ಪತಿತಮಾಗುವುವಾಶ್ರಯಾವಧಿಯೆನಿಸಿಯಂತುಟಪ್ಪರಾ ವಿಧಿ ವಿಧುಗಳು ೧೯೮

ಅನಲನೂರ್ಧ್ವ ವಿಜೃಂಭಿಯಂತೆಸೆವನಾ ಜ್ಞಾನ
ಘನ ರುದ್ರನುಲ್ಲಾಸ ಕೃತ ತಾಂಡವಾಡಂಬ
ರನೆನಿಸುತೆ ವಾಯು ಗಗನಂಗಳಗ್ನಿವಶಂಗಳಾಯುಗ್ನಿಯುಂ ಪೆರ್ಚಿಪಂ
ಅನಿಲನಾಕಾಶವವಕಾಶಮುಂ ಕುಡುವುದು ತ
ದನಘ ರುದ್ರಂ ವಾಯು ಗಗನ ವಿಗ್ರಹನಾತ
ನನಿಶಂ ವರರುಧಿರಾವರಣೇಯೆನಿಪ ಧಾತುವಿಂದಾವರಿಸಿ ಸಕಲಮುಂ ೧೯೯

ತಾನೆ ತಡೆದಿರ್ಪನದಱಿಂ ರುದ್ರನೆನಿಪನೆಂ
ತೀ ನಿರುಕ್ತಂ ಶಿವಂಗಾಯ್ತುರು ಪ್ರಳಯಾವ
ಸಾನದೊಳಜಂ ಹರಿಯೊಳಾ ಕ್ಷಿತಿಯುದಕದೊಳಾ ಹರಿ ರುದ್ರನೊಳ್ ತದುದಕಂ
ಏನೆಂಬೆನಗ್ನಿಯೊಳ್ ಕ್ರಮದಿಂದಡಂಗೆ ದಲ
ನೂನ ರುದ್ರಾತ್ಮಕಾಗ್ನಿ ನಿರರ್ಗಲಸ್ವೈರ
ತಾ ನಿಘ್ನವೃತ್ತಿಯಿಂದಂ ಮಹೇಶಾತ್ಮಕ ಪವನನಿಂದಮೆಯ್ದೆ ಪೆರ್ಚಿ ೨೦೦

ಸಕಲಮುಂ ಸಂಹರಿಸಿಯಾ ಸದೇಶಾತ್ಮಕ
ಪ್ರಕಟಿತ ಮಹಾ ಸ್ಮಶಾನೋಪಮ ಗಗನರಂಗ
ದ ಕನತ್ಪ್ರದೇಶದೊಳ್ ತದ್ಗಗನರೂಪನಾ ನಾಮತ್ರಯಾನ್ವಿತೈಕಂ
ಸುಕರಂ ಸದಾಶಿವಂ ನಿಜ ಪದಾಂಭೋಜ ಭ
ಕ್ತಕುಲಂ ಬೆರಸು ಮಹಾ ಸಂಸಾರತಾಂಡವೋ
ತ್ಸುಕನಾಗಿ ನಿರವಗ್ರಹತ್ವದಿಂ ಪಂಚಮುಖ ದಶಭುಜ ಭ್ರಾಜಿಯಾಗಿ ೨೦೧

ಕೋಟಿ ಕೋಟಿ ಶಿರೋವದನ ನೇತ್ರ ಪಾಣಿ ಪದ
ಪಾಟವನೆನಿಸಿಯನೇಕಾಯುಧಾಭರಣೋದ್ಧ
ಶಾಟೀವಿಲಾಸಿ ಪರಮಾನಂದಭರಿತಂ ಮಹಾನಾದನುರು ಮಹೇಶಂ
ನೋಟಕದ್ಭುತವಿಗ್ರಹಂ ಮಹಾದೇವನಾ
ಸ್ಫೋಟಿತ ಮಹಾಶಕ್ತಿ ದೀಪ್ತಿಮತಿ ಕೀರ್ತಿರಸ
ತಾಟಿತೊಲ್ಲಾಸಂ ಮಹಾಗ್ರಾಸನುದ್ಭಾಸಕಂ ಮಹಾ ಭೀಮಂ ಹರಂ ೨೦೨

ಭರದೆ ನಟಿಪೆಡೆಯೊಳಂತಸ್ಸ್ವೈರಸಂಪನ್ನ
ನುರು ಪರಮ ಗಗನಮಧ್ಯಸ್ಥಂ ಪರಾನಂದ
ತರಮೇದುರಂ ಮಹಾ ವಿಮಲಬೋಧಸುಧಾರಸಮಪಾರಮತುಲ ವಿಭವಂ
ಪರಮೈಂದವಕಲೋಪಮಂಗಾಂಗಮಾಗಿ ವಿ
ಸ್ಫುರಿತಾತ್ಮಶಕ್ತಿಯಮೃತಪ್ಲವಂ ಪೊಣ್ಮೆ ಶಂ
ಕರನದರ್ಕುಲ್ಲಾಸಿಸುತ್ತೆ ಶಿರದೊಳ್ ಧರಿಸಿ ತೋಱಿದಂ ಭಕ್ತಜನಕೆ ೨೦೩

ಗಮನೆ ಗಗನಂ ಗಾಯೆನಲ್ ಗಮಿಪುದೀಯುಭಯ
ಮಮರೆ ಗಗನದೊಳೆ ಗಮನಿಪುದಱಿಂ ಗಂಗಾಹ್ವ
ಯಮದಾದುದೆಂದು ಗಂಗಾಶಬ್ದಕೊರೆವುದು ನಿರುಕ್ತಿಯಂ ವಿದ್ವಚ್ಚಯಂ
ಸುಮಹದಾನಂದಾಮೃತೋರುಧಾರಾಪೂರೆ
ವಿಮಲೆಯೆನಿಪಾ ಗಂಗೆ ತನ್ಮಹಾಪ್ರಳಯದೊಳ್
ಸಮಸಂದು ಸರ್ವಮಂ ಸಂಹರಿಸಿ ನರ್ತಿಪ ಮಹಾಜ್ವಲನರೂಪಹರನಾ ೨೦೪

ಪರಮ ಪ್ರಭುವಿನಧಿಕ ಗಗನಕೇಶಜ್ವಾಲೆ
ಯುರಿಯನತ್ತಿತ್ತಲುಂ ಚಲಿಸಲಾಱದೆ ಜಟಾಂ
ತರದಲ್ಲಡಂಗಿದಳದಱಿನಾಯ್ತು ಗಂಗಾಧರಾಖ್ಯಮೀಶಂಗಿಂತುಟು
ಸ್ಫುರಿಸುವ ಮಹಾಗಂಗೆಯೊರ್ಮೆಯಾ ದೃಚ್ಛಿಕದಿ
ನುರು ವಿಭುವಿನಾ ಜಟಾಪಟಲರಂಧ್ರಾಂತರದಿ
ನಿರದೆ ಬಹುಮುಖಿಯಾಗಿ ತಳರ್ದು ನಿಜಧಾರೆಗಳಿನಾ ಶಿವನನಭಿಷೇಕಿಸಿ ೨೦೫

ನಮಿಸಿ ಮುಂಗಡೆ ನಿಂದನಂತ ವಿಧದಿಂ ಯಜಿಸಿ
ಯಮಿತ ಮುದವಾಂತಿರ್ಪ್ಪ ತದ್ದೇವಿಯಂ ನೋಡಿ
ಯುಮೆಯಾಣ್ಮನೆಂದನೆಲೆ ನೀನೆನ್ನಖಿಲ ಶಕ್ತಿಗಳ್ಗೆ ಪರಮಾನಂದಮಂ
ಕ್ರಮದಿನೀವಳ್ ನಿನ್ನ ಸಾಮರ್ಥ್ಯಕೋಟಿ ಕೋ
ಟಿ ಮಿತಾಂಶದಿಂ ಜನಿಸಿದೊಂದು ಶಕ್ತಿಯನೀಗ
ಳಮಲಾಂಗಿ ಪರಮ ಕಲ್ಯಾಣಿ ಬೀಳ್ಕೊಡು ನದೀರೂಪದಿಂ ವರ್ತಿಸುತ್ತ ೨೦೬

ವ್ಯೋಮಗಂಗಾನಾಮದಿಂ ಬ್ರಹ್ಮಲೋಕದೊಳ್
ಪ್ರೇಮದಿಂ ಪರಿವಂತುಟಿನೆ ಶಿವಂ ತದ್ಗಂಗೆ
ಯಾ ಮಾಳ್ಕೆಯಂ ಸೃಷ್ಟಿಕಾಲದೊಳೆಸಗಿ ಮಗುಳೆ ಸಂಹಾರಕಾಲದಲ್ಲಿ
ಶ್ರೀ ಮಹೇಶನ ತನುವಿನೊಳ್ ಲೀನವಪ್ಪಳಂ
ತಾ ಮಹಾಗಂಗೆಯಾತ್ಮಜೆ ಗಗನಗಂಗೆಯು
ದ್ದಾಮ ಕಲ್ಲೋಲ ಬುದ್ಬುದ ಫೇನ ಶೀಕರಂಗಳಿನೆತ್ತಲುಂ ಮುಸುಂಕಿ ೨೦೭

[೧]ಶರಧಿ[೧] ನದ ನದ್ಯಾದಿಗಳನದು ವಿವಿಧಮುಖದೆ
ಬೆರಸಿ ಮತ್ತಂತರ್ಬಹಿರ್ವ್ಯಾಪಿಯಾಗಿ ಕೆಡ
ದಿರವಿನಿಂ ಬ್ರಹ್ಮಲೋಕದೊಳಸುರ ಸುರಮುನಿಪ್ರಮುಖರಿಂ ಪೂಜ್ಯೆಯಾಗಿ
ಇರಲೊರ್ಮೆ ಸುರಪನೈರಾವತಾದಿಗಳಲ್ಲಿ
ಗುರುಮುದದಿನೆಯ್ತಂದು ತತ್ತೀರಮಂ ಸೀಳ್ದು
ವರ ಕರದೆ ಸಂಕ್ಷೋಭಮಂ ಮಾಡೆ ಘನಕುಪಿತೆಯಾಗಿ ಘುಳಿಘುಳಿಸುತುರ್ವಿ ೨೦೮

ಚಂಡೋರ್ಮಿತಾಂಡವವ್ಯೂಹಕಬಲೀಕೃತಾ
ಖಂಡ ದಿಙ್ಮುಖಶೋಭೆಯಾಗಿ ವಿಶ್ವಾಂಡೋರು
ಪಿಂಡಗ್ರಸನ ತತ್ಪರತ್ವದಿಂ ಮೆಱೆವ ತದ್ಗಂಗೆಯಂ ಕಂಡು ವಿಧಿಯುಂ
ಪುಂಡರೀಕಾಕ್ಷೇಂದ್ರಮುಖ್ಯಾಖಿಳರ್ ಭಯಂ
ಗೊಂಡು ವಿಶ್ವಾಂತರ್ಗೃಹನನಮಲಕೈಲಾಸ
ಮಂಡಿತನನುರು ಶಂಭುವಂ ಬಹುವಿಧಸ್ತುತಿಗಳಿಂ ತುಷ್ಟಿವಡಿಸಿ ನಮಿಸಿ ೨೦೯

---

೧ ಸರಧಿ (ಬ)

ಎಲೆ ಜಗನ್ನಾಥ ಚಿತ್ತವಿಸ ಕಾಂಡಪ್ರಳಯ
ವೊಲೆದುದೀ ವ್ಯೋಮಗಂಗಾಪ್ರವಾಹದಿನಿದಂ
ನಿಲಿಸೆನೆ ಶಿವಂ ನಸುನಗುತ್ತಗಜೆಯಂ ನೋಡಿ ನೆನೆಯಲೊಡನಾ ಗಂಗೆಯಾ
ಸಲಿಲವೀಶಂಗೊಂದು ಬಿಂದುವೊಲೆಸೆಯೆ ತೆಗೆದ
ತುಲಜಟಾಗ್ರದೊಳಾಂತು ಚಿರಕಾಲದಿಂ ಮೇಲೆ
ಮಲಹರಂ ಲೋಕಶುಧ್ಯರ್ಥಂ ಹಿಮಾಚಲೋತ್ತುಂಗ ಶಿಖರಾಗ್ರದಲ್ಲಿ ೨೧೦

ಆ ಗಗನಗಂಗಾಭವಾನಿಯಂ ನಿಜಜಟಾ
ಭಾಗದಿಂ ಬೀಳ್ಕೊಡಲೊಡಂ ಕೋಟಿಮುಖವಾಗಿ
ಬೇಗದಿಂ ಸಮ್ಯಗೂರ್ಧ್ವಾರ್ಧಃ ಸಮಂತಾತ್ ಪ್ರದೇಶಂಗಳೊಳ್ ಪರಿವುತೆ
ರಾಗದಿಂ ಮೇರು ಮಂದರ ಹರಾದ್ರಿಮುಖ ಗಿರಿ
ಪೂಗಂಗಳೊಳ್ ಪುಣ್ಯಭೂ ಪುಣ್ಯವನ ಸಪ್ತ
ಸಾಗರಂಗಳೊಳೆಲ್ಲಿಯುಂ ತೀವಿ ಭೋರ್ಗರೆವುತಿರೆಯದಂ ನೋಡಿಕೃಪೆಯಿಂ ೨೧೧

ತೆಗೆದುಕೊಂಡೆಲೆ ಜಗತ್ಪಾವನೀಪುತ್ರಿ ಭೂ
ಗಗನತಳನೆಂಬೀ ತ್ರಿಪಥಗಾಮಿಯಾಗಿದನು
ಡುಗು ಭೋಂಕನೆಂದಂಗಯಿಸಿ ಗಂಗೆಯನೀಕ್ಷಿಸುತ್ತಗಜೆಗೂಡಿ ಭರ್ಗಂ
ನಗಪತಿಗಳೊಳ್ ರಮಿಸುತಿರ್ದನಂದಿಂದೆ ಗಂ
ಗೆಗೆ ತತ್ ತ್ರಿಪಥಗಾಖ್ಯಮಾಯ್ತದಱ ಸನ್ನಿಧಿಯೊ
ಳಗೆ ಮೆಱೆವ ಉಪಗಂಗೆಗಳನುಪ್ರವಿಷ್ಟಂಗಳನುಗಂಗೆಗಳ್ ದಲೆನಿಕುಂ ೨೧೨

ಎಂದು ಗಂಗೆಯ ಮೂಲಸೃಷ್ಟಿಯಂ ಶಂಭುವದ
ನಂದು ತಳೆದುದನದಕ್ಕಾಖ್ಯೆಯಾದುದನದಱ
ಸಂದ ಸರ್ವತ್ರವೃತ್ತಿಯನಖಿಳ ಮುನಿಗಳ್ಗೆ ಸೂತಂ ಪುರಾಣೋಕ್ತಿಯಿಂ
ತಾಂ ದಲೊರೆದಂ ತನ್ನಿಮಿತ್ತದಿಂ ಗಂಗೆಯಂ
ಮಂದರಧರಾಂಘ್ರಿಭವೆಯೆಂಬುದಶ್ರಾವ್ಯವಾ
ಮಂದಾಕಿನೀನಾಮ ಗಂಗೆ ಸುರಲೋಕದೆ ಸಹಸ್ರಮುಖದಿಂದೆ ಬಂದು ೨೧೩

ಹರಜಟಾಗ್ರದ ಭಸಿತದಿಂದಿಂಗಿಪೋಗೆ ಶಂ
ಕರನಂ ಭಜಿಸಿ ಭಗೀರಥನದನೆರೆಯೆ ಶಿವಂ
ಬೆರಲೆರಡಱಿಂ ಪಿಡಿದೊರಸೆ ನಖಮುಖದೊಳಾ ಭಸಿತದಿನೊಗೆದಾವರ್ಣಮಂ
ಪರಿಮಳವನಾಂತೆಸೆವ ಗಂಗೆಯಂ ಮುನ್ನೆನ್ನ
ಶಿರದಿನೊಗೆದಿಳೆಯಂ ಪೊರೆದಳಿಂದು ಮೇಣ್ಕಾಶಿ
ಗಿರದೆಯ್ದಿ ಪರಮ ಪಾವನೆಯಾದಳೆಂದಗಜೆಗೀಶ್ವರಂ ಪೇಳ್ದನೆಂದು ೨೧೪

ಓತು ಕಾಶೀಖಂಡಮುಲಿವುತಿದೆ ಹರಿಪದೋ
ದ್ಭೂತೆಯಾ ಗಂಗೆಯೆಂಬುದಬದ್ಧವೆನೆ ಬಳಿ
ಕ್ಕಾತನೆಂದಂ ವಿಷ್ಣುಪದಿಯೆಂದದರ್ಕೆ ಪೆಸರಭಿಧಾನಶಾಸ್ತ್ರದಲ್ಲಿ
ಮಾತೇಂ ಪ್ರಸಿದ್ಧಮಿದನೆಂತು ಖಂಡಿಪೆಯೆಂಬ
ಪಾತಕಂಗುಸಿರ್ದರಿಲೆ ಮೂಢ ಕೇಳೀ ಬುಧ
ವ್ರಾತಮಱಿವೋಲ್ ನಭಕೆ ವಿಷ್ಣುಪದವೆಂಬ ಪರ್ಯಾಯಾಖ್ಯಮೆಸೆವುದಾಗಿ ೨೧೫

ಅದಱ ಸಂಬಂಧಿಯಾದದುನಿಮಿತ್ತಂ ವಿಷ್ಣು
ಪದಿಯೆಂದು ಗಗನಗಂಗೆಗೆ ನಾಮವಾದುದ
ಲ್ಲದೆ ವಿಷ್ಣುಪದದಿಂದೆ ಸಂಭವಿಸಿದುದಱಿನದು ವಿಷ್ಣುಪದಿಯಾದುದಲ್ತು
ಒದರುತಿವೆ ಇಂತೆಂದಖಿಲ ಪುರಾಣಂಗಳ್ ಬಿ
ಡದೆಯಂತಱಿಂ ಗಂಗೆ ಹರಿಪದೋದ್ಭೂತೆಯೆಂ
ಬ ದುರುಕ್ತಿಯಂ ಬಿಡಾ ಹಠಿ ಭಂಗರಹಿತನೆಂದೊರೆಗೆ ಕೇಳ್ ನಿರ್ವಾಹಮಂ ೨೧೬

ಪರಮನೌರಸಪುತ್ರನಿಂದಲ್ಲದಳಿಯದುರು
ವರಯುಕ್ತ ತಾರಕವಧಾರ್ಥಂ ಸುರರ್ ನುತಿಸೆ
ನಿರುತಮನ್ಯಾನನ್ಯೆಯುಮೆಯೊಡನೆ ಕಾಮಾರಿ ಕೈಲಾಸದೊಳ್ಕ್ರೀಡಿಸಿ
ಇರುತೂರ್ಧ್ವರೇತನದನುಳಿದು ಮಂದರದೊಳಾ
ಪರಿಯೊಳೆಯನೇಕ ವರ್ಷಮಿರೆಯುತ್ಪಾತಪ್ರ
ಕರಮೆಲ್ಲೆಡೆಯೊಳೊಗೆಯೆ ಹರ್ಯಜೇಂದ್ರಾದ್ಯರಚ್ಚರಿವಡುತ್ತಾಳೋಚಿಸಿ ೨೧೭

ನಾರದನಿನಱಿದು ವಿಮಲಂಗಹಿತಕಾಮಂಗ
ದಾರೊ ಕಾಮಾಸಕ್ತಿಯಂ ಪೇಳ್ವರಸ್ಮದುಪ
ಕಾರಾರ್ಥಮಾದ ಲೀಲೆಯದೆಂದು ಸುರಸಭೆಗೆ ಹರಿಯೊರೆದು ಮತ್ತಮೆಂದಂ
ಗೌರಿಗೊಗೆದೊಡೆ ದುಸ್ಸಹಂ ದಲವನಿನಿಬರ್ಗ
ಮಾ ರೀತಿಯಂ ಕೆಡಿಸಿಯಾಮೆಲ್ಲರುಂ ಶಿವನ
ಚಾರು ಕೃಪೆಯಂ ಪಡೆವುದೇ ಮಂತ್ರವೆಂದು ನಿಶ್ಚಯಿಸಿ ಪಲವಂದದಿಂದಂ ೨೧೮

ಅನಲನೊಪ್ಪದೊಡೆಯುಮೊಡಂಬಡಿಸಿ ಶಿವನೆಡೆಗೆ
ವಿನಯದಿಂ ಕಳಿಪೆಯಾತಂ ಬಂದು ನಂದಿಕೇ
ಶನನೀಕ್ಷಿಸುತ್ತಳ್ಕಿ ಹಂಸರೂಪಂ ತಾಳ್ದದರ್ಕಂಜಿ ಸೂಕ್ಷ್ಮರೂಪಂ
ಅನುಕರಿಸಿಯೊಳಪುಗುತುಮಾ ವಾಹನಂ ಮೃಗೇಂ
ದ್ರನಿರೆ ಕಂಡತಿ ಭೀತಿಯಿಂ ತಿರಿಗಿ ಮೇರುಶಿಖ
ರನಿವಾಸಿಗಳ್ಗೆ ವಿಷ್ಣ್ವಾದಿಗಳ್ಗೆ ಯಥಾ ಕಥನಮಂ ಪೇಳೆ ಕೇಳ್ದು ೨೧೯

ಮಂದರಕ್ಕೆಲ್ಲರುಂ ಬಂದು ವಿವಿಧ ಸ್ತುತಿಗ
ಳಿಂದೆ ವರದನನೆರೆಯೆ ಸಾನ್ನಿಧ್ಯಮಾಗಿ ಶಿವ
ನೆಂದ ನೀವೇಂ ಬೇಡಿಮಾವುದಿಷ್ಟಮೆನೆ ಸುತನಗಜೆಯೊಳೊಗೆಯದಂದದಿಂ
ಇಂದು ಕರುಣಿಪುದೆನೆ ಭವಂ ನಗುತ್ತೆಮ್ಮ ವೀ
ರ್ಯಂ ದಲಾಧಾರಮಿಲ್ಲದೊಡೆಲ್ಲ ಭುವನಂಗ
ಳಂ ದಹಿಪುದುಮೆಗೆ ನೀವೆಂದಂತೆ ಕುಡೆನದಂ ನೀವೀಂಟಿಮೆಂದೆನಲೊಡಂ ೨೨೦

ಹರಿಮುಖಸುರರ್ ಭೀತಿಯಿಂ ನುಡಿಯುಡುಗಿ ಧೂಮ
ಕರನನೀಕ್ಷಿಸೆ ಕೊರಗುತುಂ ವಹ್ನಿ ನಮಿಸಿ ತ
ನ್ನೆರಡು ಕಯ್ಯಂ ನೀಡಿ ಕುಡು ಭವ ಭವದ್ವೀರ್ಯಮಂ ಸುರರ್ ಕುಡಿವವೊಲೆನೆ
ಹರನಾತ್ಮಲಿಂಗದಿಂ ಕುಂದೇಂದುವರ್ಣಮಾ
ಗುರುಜಾತಿ ನೀಲೋತ್ಪಲಾಮೋದವಾಗೆಸೆವ
ವರ ವೀರ್ಯಮಂ ತೆಗೆದು ಕುಡೆ ಭಾಸ್ಕರಪ್ರಭೆಯಿನುಜ್ವಲಿಪ ತದ್ವೀರ್ಯಮಂ
೨೨೧

ವರ ಸುಧಾಭಾವನೆಯೊಳೀಂಟಲೊಡನಗ್ನಿಯಂ
ಹರಿ ಪುರೋಗಮರರ್ಚನಂಗೆಯ್ದು ತರ ತಮೋ
ತ್ಕರದಿನಾ ಶಿಖಿಮುಖದೊಳೆಯ್ದೆ ರೇತಃಪಾನವಂ ಮಾಡೆ ತದ್ದಾಹಕೆ
ತರಹರಿಸಲಾಱದನಲನಧೋಭುವನಕಿಳಿಯೆ
ಹರನನಿತಱೊಳದೃಶ್ಯನಾಗಿ ಶಿವೆಯೆಡೆಗೆಯ್ದಿ
ಸುರರಸೂಯದೆ ನಿನ್ನ ಗರ್ಭದೊಳ್ ಸುತನೊಗೆಯದಿರ್ಕೆಂದು ನುತಿಸಿಯೆಮ್ಮಂ ೨೨೨

ತಾವೆ ಸೇವಿಸುವೆವೆನೆ ಶುಕ್ಲಮಂ ಶಿಖಿಮುಖದೊ
ಳಾವು ಬೇಳಿದೆವದಂ ಹರಿಮುಖಸುರರ್ ಕೊಂಡ
ರಾ ವಹ್ನಿಯಾ ಜ್ವಾಲೆಗಳ್ಕಿ ಪಾತಾಳಕಿಳಿದಲ್ಲಿಯುಂ ನಿಲಲಾಱದೆ
ದೇವಿ ಶರದಾವವನ ನಾಮ ಗಂಗೆಯನೆಯ್ದಿ
ಯೋವೊ ಗರ್ಭಸ್ಥ ರೇತಃಶೇಷಮುಮನಲ್ಲಿ
ತೀವಿ ಬರಲಾ ನದಿಗೆ ಕೃತ್ತಿಕಾದಿಗಳುರುಸ್ನಾನಾರ್ಥಮಾಗಿ ಗಮಿಸೆ ೨೨೩

ಅವರ ಗರ್ಭವನಾ ಮಹಾವೀರ್ಯವೆಯ್ದೆ ತದ್
ಯುವತಿಯರದಂ ಧರಿಸಲಾಱದೆಮ್ಮಂ ಭಜಿಸೆ
ಯವರಱುವರಲ್ಲಿರ್ದುದಂ ಶರವಣದೊಳಿರಿಸಿಮನೆಯಂತೆ ಗೆಯ್ಯಲಲ್ಲಿ
ತವೆಯಾಱು ಮೊಗಮಾಗಿ ಕೋಟಿಸೂರ್ಯಪ್ರಕಾ
ಶವನೇಳಿಸುತೆ ಬಳೆವುತಿರ್ದಪಂ ನಿನ್ನಂಗ
ಭವನೆನೆ ಶಿವಂ ಗಿರಿಜೆ ಕೇಳ್ದೆನ್ನೊಳೊಗೆಯದಿರ್ಕೆಂದ ಹರಿಮುಖ್ಯರೆಲ್ಲಂ ೨೨೪

ಸುತಹೀನರಕ್ಕೆಂದು ಶಪಿಸಿ ಶಿವನೊಡನಗಜೆ
ಯತಿಸುಖದೊಳಿರಲಿತ್ತ ಹರಿಪುರೋಗಮರೀಶ
ನತುಳ ರೇತಸ್ಸನೈವತ್ತೆಂಟುಸಾಸಿರ ಬರಿಸವಾಂತು ಮೀಸೆಯುದಿರೆ
ಸತಿಯರಂದದೆ ಗರ್ಭಚಿಹ್ನವಂಕುರಿಸಿ ಲ
ಜ್ಜಿತರಾಗಿ ತದ್ಗರ್ಭಮಂ ಧರಿಸಲಾಱದ
ಪ್ರತಿಮ ಶಿವನಂ ದೈನ್ಯದಿಂ ಬಹುವಿಧದೆ ನುತಿಸೆ ಸಾನ್ನಿಧ್ಯನಾಗಿ ಶರ್ವಂ ೨೨೫

ನೋಡಿ ನಗುತಗಜೆಯೊಳೊಗೆಯಲೀಯದನಿಬರುಂ
ಕೂಡೆ ಧರಿಸುವೆವೆಂದೆರೆಯೆ ನೋಡಲೆಂದಿತ್ತೆ
ವಾಡಲೇನೆನ್ನತುಳ ವೀರ್ಯಮಂ ಮಚ್ಛಕ್ತಿಯಲ್ಲದಾರ್ ತಳೆವರೆನುತೆ
ಆಡಿ ಕರುಣಂಗೆಯ್ದು ಹರಿಮುಖಸುರಾಳಿಯುಂ
ನಾಡೆ ಸಂತವಿಸಿ ಶರವಣನದಿಯೊಳುದರವುಂ
ತೋಡೆ ಬಸಿರಿಳಿವುದೆನೆ ನವಿುಸಿ ಬೀಳ್ಕೊಂಡಲ್ಲಿಗೆಯ್ದಿ ಶಿವನೆಂದಂದದಿಂ ೨೨೬

ಬಸಿರಿಳಿದು ತದ್ದುಃಖಮಂ ನೀಗಿ ಜೀವಿಸಿದ
ರಸುರಾರಿಮುಖ್ಯಸುರರದಱಿನಜರಾಮರರೆ
ನಿಸಿದರಾ ಪಶು ಕಶ್ಮಲಂ ಸರ್ವಭಕ್ಷಕಂ ಪಾವಕನೆನಿಸಿದನನಲಂ
ಉಸಿರಲೇಂ ತದ್ವೀರ್ಯವೇಧೆಯಿಂ ಮೇರುವಿನೊ
ಳೆಸೆವಖಿಲ ವಸ್ತುಗಳ್ ಸ್ವರ್ಣವರ್ಣಂದಾಳ್ದ
ವಸಮ ತೇಜೋರಾಶಿ ಬಳೆದು ನಿಜರೂಪದಿಂ ಸಾರ್ಥಕಾಖ್ಯಂಗಳಾಂತು ೨೨೭

ಶಿವೆಯಿಂ ಶಿವನಿನಧಿಕಲಾಲನಂಬಡೆದು ಸುರ
ಧವನ ಭಂಗಿಸಿ ದೇವಸೇನಾಧವಂ ರಮಾ
ಧವಮುಖರ್ ನುತಿಸೆ ತಾರಕನಂ ವಧಿಸಿ ಜಗತ್ರಯಮನುರೆ ಕಾಯ್ದನೆಂದು
ತವೆಯಥರ್ವಂ ಸ್ಕಾಂದ ಲೈಂಗ್ಯ ರವಿ ಸೌರಾದಿ
ವಿವಿಧ ಪೌರಾಣಂಗಳುಲಿವುತಿರೆ ಶಿವನ ವೀ
ರ್ಯವನೀಂಟಿ ಬಸಿರಾಗಿ ಮೇಣ್ ಭಜಿಸಿ ಜೀವಿಸಿದ ಹರಿಯೆಂತಭಂಗನುಸಿರೈ ೨೨೮

ಮತ್ತೆ ಕೇಳ್ ಶಿವನಾಜ್ಞೆಯಿಂದಜಂ ಸೃಷ್ಟಿಯಂ
ಬಿತ್ತರಿಸಲೆಂದು ಸನಕಾದಿ ಸುತರಂ ಪಡೆದೊ
ಡುತ್ತಮ ಜ್ಞಾನದಿಂದವರ್ ತೊಲಗೆ ಮೇಣ್ ಮರೀಚಿಪ್ರಭೃತಿ ನವ ಪುತ್ರರಂ
ಪೆತ್ತು ತತ್ಸೃಷ್ಟಿಯನೊಡರ್ಚಿಸಿಯದಱ ಮದೋ
ನ್ಮತ್ತತೆಯಿನಾತ್ಮಸಭೆಯೊಳ್ ಜಗತ್ಕರ್ತೃವಾ
ನುತ್ತರವೆನಗೆ ದಲಿಲ್ಲೆನೆ ತದನೃತಾಲಾಪದೊಡನುರು ಪ್ರಳಯವಾಗೆ ೨೨೯

ಏಕಾರ್ಣವಂ ದಲಾಗಲ್ಕಲ್ಲಿ ಹರಿ ಮುಳಿದು
ಲೋಕೇಶನೊಡನೆಂದನೆಲೆ ನೀನೆ ಪರವೆಂದ
ದೇಕೆ ನುಡಿದೈ ಸಮಸ್ತಕ್ಕೆ ಪರವಾನಲ್ಲದುಂಟೆಯೆನೆ ವಿಧಿಕೋಪಿಸೆ
ಆ ಕಾಲದೊಳ್ ಪರಸ್ಪರ ವಿರೋಧಂ ಪುಟ್ಟಿ
ಜೋಕೆಯನುಳಿದು ಯುದ್ಧಮಂ ಮಾಡುತಿರೆ ಭವಾ
ನೀಕಾಂತನಾ ಹರ್ಯ್ಯಜರ ಮಧ್ಯದೊಳ್ ಪರಂಜ್ಯೋತಿರಾಕಾರವಾಗಿ ೨೩೦

ಆದಿಚರಮಂಗಳಂ ಕಾಣಿಸದೆ ಶಿವನತುಳ
ದೇದೀಪ್ಯಮಾನತೆಯಿನೆಸೆವುತಿರೆ ತಲ್ಲಿಂಗ
ದಾದಿ ಚರಮಂಗಳನಱಿವೆವೆಂದು ಹರಿಯಜರ್ ಪಂದಿ ಪರ್ದುಗಳಾಗುತೆ
ಮೇದಿನಿಗೆ ನಭಕೆ ಪಾಯ್ದಱಿಸಿ ಕಾಣದೆ ಬಳ
ಲ್ದಾದಿದೇವನ ಪೊರೆಗೆ ಬಂದು ಕೃಪಣೋಕ್ತಿಯಿನ
ನಾದಿ ಮಲ ಸಂಸಾರರೋಗವೈದ್ಯಾಯಯೆಂದೆತ್ತಿ ಬಹು ವಿಧದೆ ನುತಿಸಿ ೨೩೧

ಭೀತಿಯಿಂ ಪ್ರಹ್ವಾಪ್ರಣತಿಗೆಯ್ದು ಕೀರ್ತಿಪ
ಗೊರ್ಗೀತು ತಲ್ಲಿಂಗದೊಳ್ ಪ್ರತ್ಯಕ್ಷನಾಗುವಾ
ಪ್ರೀತನವರಿಷ್ಟವಮಂ ಕೊಟ್ಟು ಸಲಹಿದನೆಂದು ಧರ್ಮಸಂಹಿತೆಯಲ್ಲಿದೆ
ಮಾತೇನೊ *ಮಧ್ಯೇ ತಯೋರ್ದೃಶ್ಯತೇಯೆನುತೆ
ಜಾತವೇದಾಸ್ಥಾಣುರುದತಿಷ್ಠದೆಂದೆನು
ತ್ತಾ ತೆಱದೆ ಭುವನಸ್ಯ ಗೋಪ್ತಾಯೆನುತೆ ಯಜುಸ್ಸಿನ ಲಿಂಗಸೂಕ್ತದೊಳಿದೆ ೨೩೨

ದೇವತ್ವಮಂ ಪಿಂಗಿ ಸೂಕರತ್ವವನಾಂತ
ಧೋವಿಷ್ಟಪಕ್ಕೆಯ್ದಿಯಱಿಸಿ ಶಿವನಡಿಗಾಣ
ದಾ ವಿಭುವನೇ ಶರಣ್ಬೊಕ್ಕು ಕರುಣಂಬಡೆದ ಹರಿಯೆಂತಭಂಗನುಸಿರೈ
ಆ ವಿಧಿಯನೊರ್ಮೆ ಮೇರುವಿನೊಳ್ ಮುನಿಗಳಧಿಕ
ದೈವವಾವುದು ತಿಳಿಪೆನಲ್ಕೆನಗಧಿಕವಾದ
ದೈವಮುಂಟೇ ತಾನೆ ದೈವವೆಂದೆನಲಜನ ಪೊರೆಗೆ ಹರಿ ಬಂದು ನುಡಿದಂ ೨೩೩

---

* ಮಧ್ಯೇ ತಯೋರ್ದೃಶ್ಯತೇ ಜಾತವೇದಾಸ್ಥಾಣುರುದತಿಷ್ಠತ್ ಭುವನಸ್ಯ ಗೋಪ್ತಾ ॥
—ಲಿಂಗಸೂಕ್ತ

ಆನಿರಲ್ ನೀನಧಿಕದೈವವೆಂಬುದು ನೀತಿ
ಯೇ ನಿನಗೆ ಪೇಳ್ ಬ್ರಹ್ಮಯೆನೆ ಪರಸ್ಪರ ವಿರು
ದ್ಧಾನುಮತಿಯೊಗೆವುತಿರೆ ತದವಸರದೊಳ್ ಚತುರ್ವೇದಂಗಳಲ್ಲಿಗೆಯ್ದಿ
ನಾನಾ ವಿಧದೆ ಶಿವನೆ ಪರವೆಂದು ಬೋಧಿಸಿದ
ನೂನೋಕ್ತಿಯಂ ಕೇಳ್ದು ಕೆಮ್ಮನಿರ್ದಂ ವಿಷ್ಣು
ವಾ ನಳಿನಜನದರ್ಕೆ ನಗುತೆ ಮತ್ತೊಂದು ದುರ್ವಾಕ್ಯಮಂ ನುಡಿಯಲೊಡನೆ ೨೩೪

ಸಾಕಾರವಾಗಿ ಸತ್ಪ್ರಣಮುವೆಯ್ತಂದು ಕೇಳ್
ಕೋಕನದ ಗರ್ಭ ನಿರ್ಮಲೆಯಾತ್ಮಧರ್ಮಿಣಿ ಚಿ
ದಾಕೃತಿಯನಾಗಂತುಕಿಯೆನಿಪ್ಪ ದೇವಿಗೂಡಿರೆ ⁽¹⁾ಶಿವಂ ಸ್ತ್ರೀವಶ್ಯಕೇ⁽¹⁾
ಈ ಕುಯುಕ್ತಿಯನುಳಿವುದೆನೆ ಶಿವನ ಮಾಯೆಯಿಂ
ದಾ ಕಮಲಜಂ ತಿಳಿಯದಿರೆ ತೊಳತೊಳಗುತುಂ ಪಿ
ನಾಕಿ ಸನ್ನಿಧಿಯಾಗೆ ಕಂಡೆನ್ನ ಪಣೆಯಲ್ಲೊಗೆದನ ಮಱೆಯೊಕ್ಕುಳಿಯನೇ ೨೩೫

ಘನ ಕೋಪದಿಂ ಹರಂ ಕಾಲಭೈರವತನುವ
ನನುಕರಿಸಿ ಯುಗುರ್ಗೊನೆಯೊಳಾತನೈದನೆಯ ತಲೆ
ಯನೆ ಕತ್ತರಿಸೆ ತಚ್ಛಿರಃಸ್ರವದ್ರಕ್ತಪ್ಲವಂ ಪ್ರಳಯವಾಗಿಸುತಿರೆ
ಮಿನುಪಾತ್ಮಶಿಖಿನೇತ್ರದೊಂದು ಕಿಡಿಗಾಹುತಿಯಿ
ದೆನುತೆ ಬೆಸನೀಯೆ ತತ್ಕಾಲದೊಳಜಂ ವಿವಿಧ
ವಿನುತಿಯಿನೊಲಿಸಿ ವರದ ಶಿರಮುದಂ ಬಿಡದೆ ಧರಿಸೆನೆಯದಂ ಧರಿಸಿ ಕೂಡೆ ೨೩೬

ಆ ನೊಸಲಕಣ್ಗಿಡಿಯದಱ ರಕ್ತಮಾಂಸಮುಮ
ನೇನುಮುಳಿಯದೆ ತುತ್ತಿ ಭುಗಿಲೆನುತ್ತಿರೆ ತದ್ಘ
ನಾನಂದಲೀಲೆಯಿಂ ಭಿಕ್ಷಾಟನಚ್ಛಲದೆ ಗರ್ವಿತರ ತದ್ಗರ್ವಮಂ
ತಾನಪಹರಿಪೆನೆಂದು ದಿವ್ಯ ರೂಪಮನಾಂತು
ಮಾನಿಜೇಶಂ ಜಗಚ್ಚಯಮಂ ಚರಿಸಿ ಹರಿಯ
ನೂನ ಗೃಹಕೆಯ್ದುವೆಡೆಯಲ್ಲಿ ವಿಷ್ವಕ್ಸೇನನೆಂಬ ವಿಷ್ಣ್ವಂಶನೊರ್ವಂ ೨೩೭

---

(೧) ಶಿವನಂ ಸ್ತ್ರೀವಶ್ಯನೇ (ಬ)

ಪುಗದಿರೆಂದೆಡೆಗೋಲನಿಡೆ ಮೃಡನವನ ನೋಡಿ
ನಗುತೆ ಶೂಲದಿನಿಱಿದು ಪೊತ್ತುವೊಳಪುಗೆ ಹರನ
ಬಗೆಯಱಿದು ಹರಿ ನೊಸಲ ಸೀಳ್ದು ನೂರೈವತ್ತು ಗಾವುದದ ಪವಣಿನಿಂದೆ
ಉಗುವ ಸೃಗ್ಭಿಕ್ಷೆಯಂ ದಿವ್ಯವರ್ಷಸಹಸ್ರ
ಮಗಜಾವರನ ಕಪಾಲಕೆ ಕಱೆವುತಿರೆಯದಱೊ
ಳಗಣರ್ಥಮುಂ ತುಂಬದತಿ ಶಕ್ತಿಗೆಟ್ಟಿಳೆಗೆ ಬಿಳ್ದಸುಗಳೆವ ವಿಷ್ಣುವಂ ೨೩೮

ಕರುಣದಿಂ ಶಂಭು ತೆಗೆದೆತ್ತಿ ಸಲಹಿದನೆಂದು
ಸುರುಚಿರಬ್ರಹ್ಮಾಂಡಮುಖ್ಯಪೌರಾಣಪ್ರ
ಕರಮುಲಿವುತಿದೆಯಂತಱಿಂದೀ ವ್ಯವಸ್ಥೆಗೀಡಾದ ಹರಿಯೆಂತಭಂಗಂ
ಹರರಹಿತಯಜ್ಞಮುಂ ದಕ್ಷನೆಸಗಲ್ಕಲ್ಲಿ
ಗಿರದೆಯ್ದೆ ಸುರಪಾದಿ ದಿಕ್ಪಾಲರಂ ಸುರರ
ನರರೆ ಬಹು ವಿಧದೆ ಬಾಧಿಸಿಯದಿತಿವಾಣಿಯರ ಮೂಗನುಗುರ್ಗೊನೆಯೊಳಱಿದು
೨೩೯

ಅನಲನ ಭುಜಂದಱಿದು ಜಿಹ್ವೆಯಂ ಕೊಯ್ದು ಪೂ
ಷನ ಪಲ್ಗಳನುದಿರ್ಚಿ ಭಗನ ಕಣ್ಣಂ ಕಳೆದು
ಕನದಿಂದುವಂ ಪದಾಂಗುಷ್ಠದಿಂದೊರಸಿಯಜನ ಶಿರಮುಂ ಪಱಿಯಲೆಚ್ಚು
ಅನತದಕ್ಷನ ತಲೆಯರಿದು ತದಧ್ವರದೊಳಿ
ರ್ದನಿಬರಂ ನೋಯಿಸೆ ಹರಿಪ್ರಮುಖರಳ್ಕಿಯಾ
ಘನಮುಖದ ಬೂದಿಯೊಳವಿಯೆ ಕೂಡೆ ತಲೆವಿಡಿದು ತೆಗೆದು ವೀರೇಶನವರಂ ೨೪೦

ಒಯ್ಯಾರಮುಳಿದು ತಲೆಗಳನರಿವ ಸಮಯದೊಳ್
ತೋಯಜಾಕ್ಷಾದಿಗಳ್ ಭಸ್ಮದಿಗ್ಧಾಂಗರಂ
ಕಾಯವೇಡಾ ಯೆಮ್ಮನೆನೆವೀರಭದ್ರನಾ ಭೀತರಂ ಕಾಯ್ದನೆಂದು
ಈಯರ್ಥಮಂ ಋಗ್ಯಜುಸ್ಸಾಂದಲ್ಯೆಂಗ್ಯೋದ್ಘ
ವಾಯುವೀಯಂಗಳ್ ಸವಿ[೧]ಸ್ತರದಿ[೧]ನುಲಿವುತಿರೆ
ಮಾಯಾವಿ ಹರಿ ಭಂಗರಹಿತನೆಂದೆಂತು ನುಡಿದ್ಯೆ ನಿನ್ನ ನೀನಱಿಯದೆ ೨೪೧

---

೧ ಸ್ತುತದಿ

ಹರಿ ಚಕ್ರದಿಂ ಕ್ಷುಪನಿಮಿತ್ತಂ ದಧೀಚಿಯಂ
ಭರದಿನಿಡೆಯದನವಂ ಮುಱಿದು ತಚ್ಛಸ್ತ್ರಪ್ರ
ಕರಮಂ ಹರಿಸೆ ಬಲಂಗುಂದಿ ಹರಿ ವಿಶ್ವರೂಪಂದೋಱಿ ಮುನಿ ನಗುತದಂ
ಕರಮೆ ತನ್ನಂಗುಷ್ಠದಿಂ ತೋಱಿ ಮುಳಿದ ತ
ದ್ಧರಿಯುರವನೊದೆಯೆ ನೊಂದೆಱಗಿ ಬರ್ದುಕಿದನೆಂದು
ಪರಮ ಲೈಂಗ್ಯಪುರಾಣಮಿದೆಯಂತು ಭಂಗವಾಂತಚ್ಯುತನದೆಂತಭಂಗಂ ೨೪೨

ವಾದಿ ಶತವರ್ಷಮುಂ ಹರಿ ಜಲಂಧರನೊಡನೆ
ಕಾದಿ ಸೋಲ್ತೋಡಿ ಶಿವನಂ ಶರಣ್ಬುಗೆ ಶಿವಂ
ಪಾದದಿಂ ಬರೆದ ಚಕ್ರದಿನವನ ಹರಿಸಿ ಸಲಹಿದನೆಂದು ಶೈವದೊಳಿದೆ
ಓದಲೇಂ ಮೇಣ್ ಜರಾಸಂಧನುಪಹತಿಗಳ್ಕಿ
ಮೇದಿನಿಯೊಳೆಂಬತ್ತುನಾಲ್ಕು ದುರ್ಗಂಗಳಂ
ಭೇದದೆ ರಚಿಸಿಯಡಂಗಿದನೆಂದು ಭಾರತದೊಳಿದೆಯಾತನೆಂತಭಂಗಂ ೨೪೩

ತಾರಕನೊಡನೆ ವಿಂಶತಿಸಹಸ್ರವತ್ಸರಂ
ಘೋರಯುದ್ಧಂಗೆಯ್ದು ಸೋಲ್ತೋಡಿಯತಿಭರದೆ
ವಾರಿನಿಧಿಯಂ ಪೊಕ್ಕು ಸಂಭ್ರಾಂತಚೇತಸ್ಕನಾಗಿ ಹರಿಯಾ ಶಂಕೆಯಿಂ
ಓರಂತಡಂಗಿ ಪೊಱಮಡಲಣ್ಮದುಜ್ವಲಪು
ರಾರಿಯಂ ಬಹು ವಿಧದೆ ಭಜಿಸಿ ತಚ್ಛಿವಸುತನಿ
ನಾ ರಾಕ್ಷಸನನಪಹರಿಸಿದನೆಂದಿದೆ ರವಿಪುರಾಣವೆಂತವನಭಂಗಂ ೨೪೪

ಘನಗರ್ವದಿಂದೀಶನಂ ಧರಿಪೆನೆಂದು ವಿಧು
ಘನರೂಪವಾಗಿ ವರ್ಷಸಹಸ್ರವಾಂತಾರ
ದನಿತಱಿಯೊಳ್ ನಾಣ್ಚಿ ಶಂಭುವನೊಲಿಸಿ ತಪದಿನಿಷ್ಟಂಬಡೆದು ತಾಳ್ದನೆಂದು
ವಿನುತ ಲೈಂಗ್ಯಮಿದೆ ಸೀತೆಯನೊಯ್ಯೆ ರಾವಣಂ
ಮನಸಿಜಾರಿಯ ಭಜಿಸಿ ಸೇತುವಂ ಕಟ್ಟಿ ನಿಜ
ವನಿತೆಯಂ ಹರಿ ತಂದನೆಂದು ರಾಮಾಯಣದೊಳಿದೆ ವಿಷ್ಣುವೆಂತಭಂಗಂ ೨೪೫

ಎಲೆಲೆ ಕೃಷ್ಣನ ಭಂಗದೊಳಗನಾನೆಂದುವರ
ಮುಳಿದಪೆಂ ಬಿಡು ಬಿಡಾತನಭಂಗನಲ್ತಲ್ತು
ಪಲವೇಂ ಸ್ವತಂತ್ರಚರಿತಂ ವಿಷ್ಣುವೆಂಬನಿನ್ನೊರೆಗೆ ಕೇಳ್ ನಿರ್ವಾಹಮಂ
ಸಲೆ *ಶಿವಸ್ಯಾಜ್ಞಾಬಲಾದ್ವಿಷ್ಣುರಿಂದೆನುತೆ
ನಲವಿಂದೆ ಜಾಯತೇ ಮ್ರಿಯತೇಪಿಚಯೆನುತ್ತೆ
ವಲಮದೇ ಬ್ರಹ್ಮಾಯೆನುತ್ತೆ ಸರ್ವಯೆನೆ ಜಗತ್ಕರ್ತಾ ವಿರಾಡೆನುತ್ತುಂ ೨೪೬

ಅರರೆ ಸಮ್ರಾಟ್ ಸ್ವರಾಡಪಿಯೆನುತ್ತೆ ಖರೋಷ್ಟ್ರ
ತರವದೆನುತುಂ ವಲಂ ಕ್ಷುದ್ರಾಯೆನುತ್ತೆ ವಿ
ಸ್ತರಮಾಗಿ ಮೇಣ್ ಬ್ರಹ್ಮವಿಷ್ಣ್ವಾದಯೋ ಭವನ್ ಎನೆ ಶಿವಾಜ್ಞಾಶಕ್ತಿಯಿಂ
ಹರಿಯಜಾದಿಗಳೆನ್ನರಾದೊಡಮೊಗೆವರಳಿವ
ರಿರದವರ್ಕಳ್ತೆಯೊಟ್ಟೆಗಳವೋಲತಿ ಕಷ್ಟ
ತರಮೆಂದು ಸೂತಗೀತಿಯಿದೆ ಮತ್ತೆ †ಸೃಜತ್ಯಶೇಷಮೀಶಸ್ಯಯೆನುತೆ ೨೪೭

ಪಲವೇನೊ ಶಾಸನಾಚ್ಚತುರಾನನೋಯೆನುತೆ
ನಲಿದು ವಿಷ್ಣುರಿನೆ ಪಾಲಯತೇಯೆನುತೆ ಸಮು
ಜ್ವಲಿಸಿ ವಿಶ್ವಮೆನೆ ವಿಶ್ವೇಶ್ವರನಿಯೋಗತೋಯೆನೆ ಯಚ್ಚಕಿಂಚಿದೆನುತೆ
ಸಲೆ ಜಗತ್ಯಸ್ಮಿನ್ನೆನುತೆ ದೃಶ್ಯತೇಯೆನು
ತ್ತಲಘೂಕ್ತಿಯಿಂ ಶ್ರೂಯತೇಪಿ ವಾಯೆಂದೆನು
ತ್ತೆಲೆಲೆ ತತ್ಸರ್ವಮೆನೆ ಶಂಕರಸ್ಯಾಜ್ಞಾಬಲೇನ ಸಮಧಿಷ್ಠಿತಮೆನೆ ೨೪೮

---

* ಶಿವಸ್ಯಾಜ್ಞಾಬಲಾದ್ವಿಷ್ಣುರ್ಜಾಯತೇ ಮ್ರಿಯತೇ ಪಿ ಚ ।
ಬ್ರಹ್ಮಾ ಸರ್ವಜಗತ್ಕರ್ತಾ ವಿರಾಟ್‌ಸಮ್ರಾಡ್ಸ್ವರಾಡಪಿ ।
ಖರೋಷ್ಟ್ರತರವತ್‌ಕ್ಷುದ್ರಾಬ್ರಹ್ಮವಿಷ್ಣ್ವಾದಯೋ ಭವನ್ —ಸೂತಗೀತಾ

† ಸೃಜತ್ಯಶೇಷಮೀಶಸ್ಯಶಾಸನಾಚ್ಚತುರಾನನಃ ।
ವಿಷ್ಣುಃ ಪಾಲಯತೇ ವಿಶ್ವಂ ವಿಶ್ವೇಶ್ವರ ನಿಯೋಗತಃ ॥
ಯಚ್ಚಕಿಂಚಿಜ್ಜಗತ್ಯಸ್ಮಿನ್ ದೃಶ್ಯತೇಶ್ರೂಯತೇಪಿವಾ ।
ತತ್ಸರ್ವಂ ಶಂಕರಸ್ಯಾಜ್ಞಾಬಲೇನ ಸಮಧಿಷ್ಠಿತಂ ॥ —ವಾಯವೀಯ

ಎಸೆವಜಹರಿಗಳಖಿಲಮಂ ಶಿವನಿಯೋಗದೆ ಸೃ
ಜಿಸಿ ಪೊರೆವರೀ ಜಗದೊಳಾವುದಿನಿತುಂ ಕಾಣ್ಬು
ದು ಸಮಂತು ಕೇಳ್ವುದುಂಟಾಯೆಲ್ಲವುಂ ಶಿವಾಜ್ಞಾಶಕ್ತಿಯಿನಧಿಷ್ಠಿತಂ
ಉಸಿರಲೇನಿಂತೆಂದು ವಾಯುವೀಯಂ ಸಮಂ
ಜಸವಾಗಿ ಸಾಱುತಿದೆ ಪೂರ್ವದೊಳ್ ಪೂರ್ವಸುರ
ವಿಸರಮಂ ಸೇಂದ್ರಾಮರರ್ಜಯಿಸಿ ತಜ್ಜಯಮನೋರೋರ್ವರಭಿಮಾನಿಸಿ ೨೪೯

ಘನ ಕಲಹಮಂ ಮಾಳ್ಪಡೆಯೊಳೀಶ್ವರಂ ಯಕ್ಷ
ತನುವಂ ಧರಿಸಿ ನಿಂದು ನುಡಿದನಾ ಸುರರ್ಗೆ ನಿಮ
ಗಿನಿತು ವೈಷಮ್ಯವೇಕಾನಿಟ್ಟ ಪುಲ್ಲನೆತ್ತಿದನೆ ದನುಜರ ಗೆಲ್ದವಂ
ಎನುತೊಂದು ಪುಲ್ಲನಿಡೆ ಸುರಪನಾ ಮಾತಿಂಗೆ
ಕಿನಿಸಿಯದನೆತ್ತೆ ಮಿಸುಕದಿರೆ ನಿಜ ವಜ್ರದಿಂ
ದನುವಾಗಿ ಪೊಯ್ದು ಭಂಗಿತನಾಗಲೊಡನಗ್ನಿವಾಯುಗಳುಮುಳಿದ ಸುರರುಂ
೨೫೦

ಆ ಪ್ರಕಾರದಿನಾತ್ಮಶಕ್ತಿಗಳಿನೆತ್ತಿ ಮೇಣ್
ಕ್ಷಿಪ್ರದಿಂ ಬನ್ನಂಬಡಿದರಂತೆ ಹರಿಕಮಲ
ಜಪ್ರಮುಖರುಂ ಪೆಂಪುಗೆಟ್ಟರಾಗಳ್ ಶಕ್ರನೆಂದನೆಮಗಿಂತೆಸಗಿದಾ
ಸುಪ್ರೌಢನೀತನಾರೆಂಬುದಂ ಶಿವನದೃ
ಶ್ಯಪ್ರಾಪ್ತನಾಗಿ ಪಾರ್ವತಿಯಲ್ಲಿ ಕಾಣಿಸೆ ಘ
ನಪ್ರಹಸಿತಾಸ್ಯೆಯಾಗಿರೆ ನಮಿಸಿ ಸುರರೀತನಾರ್ ತಾಯೆ ಪೇಳೆನಲೊಡಂ ೨೫೧

ಆತಂ ನಿಮಗಭೇದ್ಯನಾತನಿಂದೀ ಜಗ
ದ್ವ್ರಾತದುತ್ಪತ್ತಿಸ್ಥಿತಿಪ್ರಹೃತಿಗಳ್ ನಡೆಗು
ಮಾತಂ ಸ್ವತಂತ್ರನವನಾಜ್ಞೆಯಿಂ ಸರ್ವಮುಂ ವರ್ತಿಸುವುದೆಂದೊರೆದುಮೆ
ಆ ತಾಣದೊಳಡಂಗೆ ಹರಿಮುಖರ್ ನಾಣ್ಚಿಯು
[೧]ಕ್ಷಾ[೧]ತದಂಗನನೀಶನಂ ನುತಿಸಿಯುಳಿದರೆಂ
ದೋತು ಶೈವಮಿದೆ ಶಿವನಿಟ್ಟ ಪುಲ್ಗಿಳಿದ ಹರಿಯೆಂತೈ ಸ್ವತಂತ್ರಚರಿತಂ ೨೫೨

---

೧ ಷ್ಯಾ (ಅ)

ಮತ್ತೆ ತೇನ ವಿನಾ ತೃಣಾಗ್ರಮಪಿ ನ ಚಲತಿಯೆ
ನುತ್ತುಪನಿಷತ್ತಿದೆ ಎಲಂ ಬ್ರಹ್ಮಹಯೆನುತ್ತೆ
ಬಿತ್ತರದೆಕ್ಕೈನೇಷಿಯಿರೆ ಬಳಿಕ್ಕಲ್ಲಿ ತಸ್ಮಿನ್ನೇವಯೆಂದೆನುತಿರೆ
ಒತ್ತಿ ತಾಂ ಶಕ್ರಮುಖ್ಯಾಃಯೆನುತೆ ಮೇಣದಱೊ
ಳೆತ್ತಿ ದೃಷ್ಟ್ವಾಯಕ್ಷಮೆನುತೆ ಲೈಂಗ್ಯಮಿರೆಯು
ರ್ಬುತ್ತೆ *ನಾಲಂ ಚಾಲಯಿತುಮೆಂದು ತಾಂ ಸ್ಕಾಂದದೊಳ್
ಭೃಂಗಿಯುರುನುತಿಯಿರೆ ೨೫೩

ಆ ಯಕ್ಷನಿಕ್ಕಿದಾಜ್ಞಾತೃಣವನಿಂದ್ರಂ ನಿ
ಜಾಯುಧದೆ ತಱಿಯಲ್ ನೆಱಿದುದಿಲ್ಲಕಟ ಕೇಳ
ವಾಯುವಲುಗಿಸಿದುದಿಲ್ಲನಲನುರಿಪಿದುದಿಲ್ಲುಳಿದ ಹರ್ಯಜಾದಿ ಸುರರುಂ
ಆಯತಿಕೆಗೆಟ್ಟರಲ್ಲದೆ ದಲೆತ್ತಿದುದಿಲ್ಲ
ಮಾಯೆಯಿದು ಶಿವನದೆಂದಱಿಯದಗಜೆಯಿನಱಿದ
ಜೇಯ ಶಿವನಂ ಮಱಿವುಗರೆ ತದಾಜ್ಞಾವರ್ತಿಗೆಂತೋ ಸ್ವತಂತ್ರಚರಿತಂ ೨೫೪

ಸಲೆ ತೃಣಾಗ್ರಮುಮೀಶನಾಜ್ಞೆಯಿಲ್ಲದೊಡಿನಿಸು
ಚಲಿಸದೆನೆ ಹರಿಯದೆಂತೈ ಸ್ವತಂತ್ರಚರಿತ್ರ
ನೆಲೆಲೆಯೀಯರ್ಥಮುಂ ಶಾಠ್ಯಾಯನಂ ಸವಿಸ್ತೃತಮಾಗಿ ಪೇಳ್ದುದಱಿಯಾ
ನಲಿದು §ಭೀಷಸ್ಮಾದೆನುತ್ತೆ ವಾತೋಯೆನು
ತ್ತುಲಿವುತುಂ ತಾನೆ ಪವತೇಯೆಂದೆನುತ್ತಿಂತು
ಟಲಘುಮತಿಯಿಂದೆ ಭೀಷೋದೇತಿ ಸೂರ್ಯೋಯೆನುತ್ತೆ ಭೀಷಸ್ಮಾದೆನೆ ೨೫೫

---

* ನಾಲಂ ಚಾಲಯಿತುಂ ತೃಣಂಚ ಪವನಶ್ಚಾಂಭೋತ್ವದಾಜ್ಞಾಂ ವಿನಾ
ದಗ್ಧುಂ ತನ್ನಸಮರ್ಥ ಏವ ದಹನಶ್ಛೇತ್ತುಂ ನ ವಜ್ರೇಣ ತತ್ ।
ಶಕ್ರೋ{}ಗೋತ್ರಭಿದಪ್ಯಹೋ ಜಗದಿದಂ ಸರ್ವಂ ತ್ವದಾಜ್ಞಾವಶಂ
ಕಾರುಣ್ಯಾಕರಭೋ ಪಿತಃ ಪಶುಪತೇ ದೋಷಾಕರಂ ಪಾಹಿಮಾಂ॥

§ ಭೀಷಸ್ಮಾದ್ವಾತಃ ಪವತೇ ಭೀಷೋದೇತಿ ಸೂರ್ಯಃ ।
ಭೀಷಸ್ಮಾದಗ್ನಿರಿಂದ್ರಶ್ಚ ಮೃತ್ಯುರ್ಧಾವತಿ ಪಂಚಮಃ ॥

—ಬ್ರಹ್ಮಗೀತಾ

ಮತ್ತಗ್ನಿರಿಂದ್ರಶ್ಚ ಮೃತ್ಯುರೆನೆ ಧಾವತಿಯೆ
ನುತ್ತೆ ಮೇಣ್ ಪಂಚಮೋಯೆಂಬ ಯಜುರರ್ಥಮುಮ
ನೆತ್ತಿಯಜಗೀತಿ ದಲಿದಂ *ಸರ್ವಮೆನೆ ಜಗತ್ಸಾಕ್ಷಾಚ್ಛಿವಾದೆನುತ್ತುಂ
ನುತ್ತೇನೊ ನಿಜದೆ ಕಂಪಯತೇ ಧ್ರುವಮೆನೆ ಶಿವ
ನುತ್ತಮಾಜ್ಞೆಗನಿಲಾರ್ಕಾಗ್ನೀಂದ್ರಮೃತ್ಯುಗಳು
ಮುತ್ತುಂಗಮಾಗುಳಿದಖಿಲಜಗತ್ತುಂ ಭೀತಿಯಿಂದೆ ಕುಂದದೆ ಪೆರ್ಚದೆ ೨೫೬

ಆರೈದು ನಡೆವರೆನೆ ವಿಷ್ಣುವೆಂತೈ ಸ್ವತಂ
ತ್ರೋರುಚರಿತಂ ಬಿಡು ಬಿಡಾ ಮಾತು ಸಲ್ಲದಿ
ನ್ನಾ ರಮೇಶಂ ಜ್ಞೇಯನೆಂದ ನಿನ್ನಯ ದುರುಕ್ತಿಗೆ ಕೇಳ ನಿರ್ವಾಹಮಂ
ಭೋರನದು †ದುರ್ಜಯಂ ಚೈವ ವಿಜ್ಞೇಯಮೆನು
ತೋರಂತಮೇಯಮೆನೆ ಶಿವರೂಪಿಣಮೆನುತೆ ಮು
ರಾರಿಯುರುಲಿಂಗಮಂ ನುತಿಸಿದುದು ಶೈವದೊಳಿರಲ್ ಜ್ಞೇಯನೆಂತೊ ಕೃಷ್ಣಂ
೨೫೭

ಭರದಿಂ §ತ್ವಮೇಕೋಯೆನುತ್ತೆ ಜಗತಾಮೆನು
ತ್ತರರೆ ವಂದ್ಯೋಯೆನುತೆ ವಿಶ್ವಸ್ಯಯೆಂದೆನುತು
ಪರಿಸಂಸ್ಥಿತೋಯೆನುತೆ ಕಾಲೇನ ಸರ್ವೈರೆನುತ್ತೆ ಮಂತವ್ಯೋಯೆನೆ
ಹರ ನೀನಖಿಲಜಗದ್ವಂದ್ಯನೇಕಂ ಹರಿಗು
ಪರಿಪದಸ್ಥ ಸುಕೃತಕಾಲದೊಳ್ ಜ್ಞೇಯನೆ
ಲ್ಲರಿನೆಂದು ಕಾಳಿಕಾಖಂಡದೊಳಿಭಾಸುರೋಕ್ತಂ ಜ್ಞೇಯನೆಂತಚ್ಯುತಂ ೨೫೮

---

* ಇದಂ ಸರ್ವಂ ಜಗತ್ಸಾಕ್ಷಾಚ್ಛಿವಾತ್ ಕಂಪಯತೇ ಧ್ರುವಂ ।

† ದುರ್ಜಯಂ ಚೈವ ವಿಜ್ಞೇಯ ಮಮೇಯಂ ಶಿವರೂಪಿಣಂ ।
—ಶೈವಪುರಾಣಂ

§ ತ್ವಮೇಕೋ ಜಗತಾಂ ವಂದ್ಯೋ ವಿಶ್ವಸ್ಯೋಪರಿ ಸಂಸ್ಥಿತಃ ।
ಕಾಲೇನ ಸರ್ವೈರ್ಮಂತವ್ಯಃ ॥
—ಕಾಳಿಕಾಖಂಡದಲ್ಲಿ ಗಜಾಸುರೋಕ್ತಿ

ಮುದದಿನೇ *ಕೋಯೆನುತೆ ವೇದೋ ಬಹುಯೆನುತ್ತು
ಮದುವೆ ಶಾಖೋಹ್ಯನಂತಸ್ತ್ವಾಮೆನುತ್ತೆ ಮೇ
ಕೊದವಿ ಯೇಕಮೆನುತ್ತೆ ಸಂಬೋಧಯತ್ಯಾತ್ಮರೂಪಮೆನೆ ವೇದ್ಯಮೆನುತೆ
ಪದಪಿನಿಂ ಯೇತ್ವಾಮೆನುತ್ತೆ ಶರಣಮೆನುತ್ತೆ
ಪದುಳದಿಂ ಸಂಪ್ರಪನ್ನಾಯೆನುತೆ ತೇಷಾಮೆ
ನೆ ದಲಂತೆ ತಾನೆ ಶಾಂತಿಃ ಶಾಶ್ವತೀನೇತರೇಷಾಮೆನುತಿರಲ್ಕೆ ೨೫೯

ಪಲವು ಶಾಖೆಗಳುಳ್ಳನಂತಮೆನಿಪಾ ಶ್ರುತಿಯೆ
ಸಲೆ ನಿನ್ನನಾತ್ಮರೂಪಂ ವೇದ್ಯನೇಕನೆಂ
ದುಲಿವುದಂತೆಸೆವ ಶಂಭುವೆ ನಿನ್ನನೋರ್ವನನೆಯೂರ್ ಶರಣ್ಬೊಗುವರವರ್ಗೆ
ಅಲಘು ಶಾಶ್ವತಶಾಂತಿ ಯುಳಿದರ್ಗದಿಲ್ಲೆಂದು
ಜಲಜಾಕ್ಷ[೧]ನುತಿ[೧] ಶಿವರಹಸ್ಯದಲ್ಲಿದೆಯದಱೆ
ನೆಲೆಲೆ ಕೃಷ್ಣಂ ಜ್ಞೇಯನಲ್ತು †ಸಾಂಖ್ಯಂ ಯೋಗಮೆನೆ ಪಾಂಚರಾತ್ರಮೆನುತುಂ
೨೬೦

ವೇದಾಃ ಎನುತ್ತೆ ಪಾಶುಪತಂ ತಥಾಯೆನುತು
ವೋದಲೇಂ ಜ್ಞಾನಾನಿಯೆನುತುಮೇತಾನಿಯೆನೆ
ಮೋದದಿಂ ಪಂಚೈವಯೆಂದೆನಲ್ ಜ್ಞೇಯಶ್ಚಯೆನುತುಮೇಕೋತ್ರಯೆನುತುಂ
ವಾದಿ ಕೇಳ್ ಶಂಕರೋಯೆನೆ ಸಾಂಖ್ಯಯೋಗಂಗ
ಳಾದರಿಸೆ ಪಾಂಚರಾತ್ರಂ ಶ್ರುತಿ ಸುಪಾಶುಪತ
ವೈದೆ ದಲ್ ಜ್ಞಾನಂಗಳಲ್ಲಿ ಶಿವನೇ ಜ್ಞೇಯನೆನೆ ಕೇಶವಂ ಜ್ಞೇಯನೇ ೨೬೧

---

* ಏಕೋ ವೇದೋ ಬಹು ಶಾಖೋಹ್ಯನಂತಸ್ತ್ವಾಮೇಕಂ
ಸಂಬೋಧಯತ್ಯಾತ್ಮರೂಪಂ
ವೇದ್ಯಯೇತ್ವಾಂ ಶರಣಂ ಸಂಪ್ರಪನ್ನಾಸ್ತೇಷಾಂ
ಶಾಂತಿಶ್ಶಾಶ್ವತೀನೇತರೇಷಾಂ ॥ —ಶಿವರಹಸ್ಯ

† ಸಾಂಖ್ಯಯೋಗಂ ಪಾಂಚರಾತ್ರಂ ವೇದಾಃ ಪಾಶುಪತಂ ತಥಾ ।
ಜ್ಞಾನಾನ್ಯೇತಾನಿ ಪಂಚೈವ ಜ್ಞೇಯಶ್ಚೈಕೋತ್ರಶಂಕರಃ ॥ —ಸ್ಕಾಂದ

---

೧ ನುತಿ (ಅ)

ಈ ರೀತಿಯಿಂ ಸ್ಕಾಂದವಿದೆ *ಸರ್ವಯೆನುತುಮಾ
ಕಾರೇಯೆನುತೆ ನಿರಾಕಾರೋಯೆನುತ್ತಂತಿ
ರೋರಂತೆ ತಾಂ ಮಹಾತ್ಮಾ ಪಾರ್ವತೀಪತಿಃ ಸಾಕ್ಷಾತ್ ಪರತರಮೆನುತ್ತೆ
ಭೋರನದು ನಾಸ್ತಿಯೆನುತುಂ ಜ್ಞಾನಮೆನುತುಂ ವಿ
ಚಾರದಿಂ ಜ್ಞೇಯಂ ಸದಾತನಾದೆನೆ ನಿರಾ
ಕಾರನಖಿಲಾಕಾರನುರು ಮಹಾತ್ಮನುಮೇಶನಾ ಸನಾತನನ ದೆಸೆಯಿಂ ೨೬೨

ಪರತರ ಜ್ಞಾನಮುಂ ಜ್ಞೇಯಮುಂ ತಾನಿಲ್ಲ
ನಿರುತವೆಂದಾ ಸ್ಕಾಂದವಿದೆಯದೆಂತೈ ಜ್ಞೇಯ
ನರರೆ ಹರಿ ಮೇಣತೋ §ಜ್ಞಾನಪ್ರಸಾದಾರ್ಥಮೆನೆ ಶಿವಃ ಸಾಂಬೋಯೆನೆ
ಭರದಿಂ ಸನಾತನ ಉಪಾಸಿತವ್ಯೋಯೆನು
ತ್ತಿರದೆ ಮಂತವ್ಯೋಯೆನಲ್ ಸೂತಸಂಹಿತೆಯೊ
ಳುರು ಶಂಭುವೇ ಜ್ಞೇಯನೆಂದು ಸಿದ್ಧಂ ವಿಷ್ಣುವೆಂತುಟೋ ಜ್ಞೇಯನೆನಿಪಂ ೨೬೩

†ಕ್ವಚಿದೆನೆ ಕದಾಚಿದೆನೆ ವೇದೇಷು ತದೆನುತ್ತೆ
ವಚಿಸಿಯನ್ಯಾಸ್ಸರ್ವ ದೇವತಾ ಜ್ಞೇಯಮೆಂ
ದು ಚದುರಿಂ ತ್ವೇನೈವಯೆನುತೆ ಚೋಚ್ಯಂತೇಯೆನುತ್ತೆ ಮೇಣ್ ಧ್ಯೇಯಯೆನುತುಂ
ಉಚಿತದಿಂ ತ್ವೇಪಿಯೆನುತೆ ತಥೈವಚಯೆನೆ ವೇ
ದಚತುಷ್ಕಮಾಪೆಡೆಯೊಳೊರ್ಮೆಯುಂ ಶಿವನಲ್ಲ
ದ ಚರಿತದಿನುಳಿದರಂ ಜ್ಞೇಯರುಂ ಧ್ಯೇಯರೆಂದುಸಿರದಿದು ಸತ್ಯಮೆಂದು ೨೬೪

---

* ಸರ್ವಾಕಾರೋ ನಿರಾಕಾರೋ ಮಹಾತ್ಮಾಪಾರ್ವತೀಪತಿಃ ।
ಸಾಕ್ಷಾತ್ ಪರತರಂ ನಾಸ್ತಿ ಜ್ಞಾನಂ ಜ್ಞೇಯಂ ಸದಾತನಾತ್ ॥ —ಸ್ಕಾಂದ

§ ಅತೋ ಜ್ಞಾನಪ್ರಸಾದಾರ್ಥಂ ಶಿವಸ್ಸಾಂಬೋ ಸನಾತನಃ ।
ಉಪಾಸಿತವ್ಯೋಮಂತವ್ಯಃ ॥ —ಸೂತಸಂಹಿತೆ

† ಕ್ವಚಿತ್ಕದಾಚಿದ್ವೇದೇಷು ತದನ್ಯಾಸ್ಸರ್ವದೇವತಾಃ ।
ಜ್ಞೇಯತ್ವೇನೈವ ಚೋಚ್ಯಂತೇ ಧ್ಯೇಯತ್ವೇಪಿ ತಥೈವಚ ॥ —ಪಾರಾಶರ

ಪಾರಾಶರಂ ಸಾಱುತಿದೆಯೀ ಪ್ರಕಾರದಿಂ
ಭೂರಿ ಶಾಸ್ತ್ರಂಗಳುಂಟಂತಱಿಂ ಜ್ಞೇಯಂ ಮು
ರಾರಿಯಲ್ಲಿನ್ನಚ್ಯುತಂ ಧ್ಯೇಯನೆಂಬ ನಿನ್ನೊರೆಗೆ ಕೇಳ್ ನಿರ್ವಾಹಮಂ
ಸಾರ ಮತಿಯಿಂದೆ ಶಿವ ಯೇಕೋಯೆನುತ್ತೆ ಮು
ತ್ತಾರಯಲ್ ಧ್ಯೇಯಶ್ಶಿವಂ ಕರೋಯೆಂದೆನು
ತ್ತೋರಂತೆ ಸರ್ವಮನ್ಯತ್ ಪರಿತ್ಯಜ್ಯಯೆನೆ ಶಿವಕರಂ ಶಿವನೊರ್ವನೇ ೨೬೫

ಧ್ಯೇಯಃನುಳಿದವರಂ ಬಿಡುವುದೆಂದಥರ್ವ ವೇ
ದಾಯತ್ತಸೂಕ್ತಿ ಮುದ್ರಿಸಿ ಸಮಾಪ್ತಿಯನೆಯ್ದಿ
ತೀಯರ್ಥದಿಂ *ಸರ್ವಮನ್ಯತ್ ಪರಿತ್ಯಜ್ಯಯೆನುತೆ ಶಿವ ಯೇಕೋಯೆನೆ
[೧]ಜ್ಞೇಯದಿ[೧] ಶಿವಂಕರೋ ಧ್ಯೇಯ ಯಿತ್ಯಾಹಪರ
ಮಾಯೆನಲ್ ಶ್ರುತಿರೆನಃತ್ತಾಥರ್ವಣೀಯೆನು
ತ್ತಾಯತದೆ ಖಲುಯೆನಲ್ ಪಾರಾಶರಂ ಧ್ಯೇಯನೆಂತುಟೈ ವಿಷ್ಣು ಬಳಿಕಂ ೨೬೬

ವಲಮಥರ್ವಂ ತರುವದರ್ಕೆ ತಾರಮೆ ಕಂದ
ವೆಲೆ ಶಕ್ತಿಯೇ ಜಾತಿಯಾ ಸ್ಕಂದ ಶಾಖೆಗಳ
ಮಲಿನವೇದತ್ರಯಂ ಪರ್ಣನಿವಹಂ ಸ್ಮೃತಿಪುರಾಣಂಗಳಂಗಷಟ್ಕಂ
ಲಲಿತ ಶಾಖಾವರಣಮಖಿಲತರ್ಕಂಗಳು
ಜ್ವಲರಕ್ಷಕಾಳಿ ಪುಷ್ಪಂ ಶಿವಜ್ಞಾನಂ ಸು
ಫಲಮೆ ಪರಮುಕ್ತಿಯಿಂತೆಸೆವುದಿಂ ಪಲವೇಂ ಶಿವಂ ಕರಂ ಧ್ಯೇಯಂ ಶಿವಂ ೨೬೭

---

* ಸರ್ವಮಃನ್ಯತ್ ಪರಿತ್ಯಜ್ಯ ಶಿವ ಯೇಕಶ್ಶಿವಂಕರಃ ।
ಧ್ಯೇಯ ಯಿತ್ಯಾಹ ಪರಮಾಶ್ರುತಿರಾಥವರ್ಣೀಃಖಲು ॥

—ಪಾರಾಶರ

---

೧ ನ್ಯಾಯದೆ (ಅ)

ಅದುಕಾರಣಂ ಭುಕ್ತಿಮುಕ್ತಿಗಳ ಬಯಸುವರು
ಳಿದ ದೇವರಂ ಬಿಟ್ಟು ಜಾನಿಸುವುದೀಶ್ವರನ
ಪದವನೆಂದುಱೆ ಸೂತಗೀತಿಯಿದೆ ಮೇಣಂತಱಿಂ ಸತತಮಾ ಶರ್ವನೇ
ಸದಮಲ ಪರಾತ್ಪರತರೋರುಪದವಾ ಶಿವಂ
ಪದೆದು ಮೂರ್ತಿದ್ವಾರದಿಂದೆ ಹೃನ್ಮಧ್ಯದ
ಲ್ಲಿ ದಿಟಂ ವಿಶೇಷದಿಂ ಧ್ಯೇಯನಾ ಧ್ಯಾನದಿಂ ಪಡೆವರಖಿಲರ್ ಜ್ಞಾನಮಂ ೨೬೮

ಧ್ಯಾನಮಿಲ್ಲದೊಡಾ ಶಿವಜ್ಞಾನಮೊಗೆಯದಾ
ಜ್ಞಾನಮಂ ತೊಲಗಿಯಾರ್ಗಂ ಮುಕ್ತಿಸಂಭವಿಸ
ದೀ ನಿಮಿತ್ತಮಖಿಲ ಮುಮುಕ್ಷುಗಳಿನಮಮ ಸರ್ವೇಶ್ವರಾಖ್ಯಂ ಸುಸಾಂಬಂ
ಮಾನಸದೊಳಧಿಕತೆಯಿನನಿಶಮುಂ ಪರತತ್ವ
ತಾ ನಿಯತಿಯಿಂ ಧ್ಯೇಯನವನಶೇಷತೆಯಿನಜ
ದಾನವಾರಾತಿದೇವರ್ ಧ್ಯೇಯರಂತಲ್ಲದೊರ್ಮೆಯುಂ ಮಱೆದಾದೊಡಂ ೨೬೯

ಸ್ವಪ್ರಧಾನತೆಯಿನಾಗರ್ ಧ್ಯೇಯರಂತಱಿಂ
ಕ್ಷಿಪ್ರದಿಂದುಳಿದಖಿಲರಂ ಬಿಡುವುದೆಂದಥ
ರ್ವಪ್ರೋಕ್ತಿ ಪೇಳ್ದುದೆಂದಿದೆ ಮಾನವಪುರಾಣಮುತ್ತಮಾಧಮಭೇದದಿಂ
ದ್ವಿಪ್ರಕಾರಂ ಧ್ಯಾನಮಲ್ಲಿ ಶಂಭುಧ್ಯಾನ
ಮಪ್ರತಿಮಮುತ್ತಮಂ ಮಿಕ್ಕ ವಿಷ್ಣ್ವಾದಿ ದೇ
ವ ಪ್ರಕರದಾ ಧ್ಯಾನಮಧಮಮುದಱಿಂ ಮುಮುಕ್ಷುಗಳಾದ ಸುಪ್ರೌಢಱಿಂ ೨೭೦

ಶಿವಕರಂ ಶಿವನೊರ್ವನೇ ಧ್ಯೇಯನುಳಿದ ದೇ
ವವಿಸರಮನುಱೆ ಬಿಡುವುದೀಯರ್ಥದಲ್ಲಥ
ರ್ವವೆ ಪೇಳ್ದು ಮುಗಿದುದೆಂದಿದೆ ಸೂತಸಂಹಿತೆಯದೆಂತು ಕೃಷ್ಣಂ ಧ್ಯೇಯನ್ನೈ
ವಿವಿಧ ವೇದಂಗಳಂತೆಯೆ ಪೇಳ್ದವೆಂದು ಮೇ
ಣವನ ಗೀತಿಯೊಳಮಾ ಪಾರಾಶರದೊಳಮಿದೆ
ಶಿವಪುರಾಣದೊಳಗಂ ಧ್ಯೇಯಾಯ ಪಂಚವಕ್ತ್ರಾಯಯೆಂದಿದೆ ಯಜನುತಿ ೨೭೧

ಮತ್ತಂ ಪ್ರಸಿದ್ಧಯೋಗಿ ಧ್ಯೇಯಯೆಂದೆನು
ತೆತ್ತಿಯಾದ್ಯಜ್ಞಾನರೂಪಯೆನುತುಂ ಮುದಂ
ಬೆತ್ತುದು ಮಹೇಶ್ವರಯೆನುತೆ ವಿಷ್ಣುನುತಿವೆರಂ ಸ್ಕಾಂದದಲ್ಲಿದೆಯಂತುಟು
ಬಿತ್ತರಿಸಲೇನಖಿಲಮುಂಟಂತಱಿಂ ಧ್ಯೇಯ
ನುತ್ತಮು ಶಿವಂ ಬಿಡು ಬಿಡಚ್ಯುತಂ ಧ್ಯೇಯನ
ಲ್ಲುತ್ತರವನಿತ್ತಪೆಂ ಕೇಳ್ ಮುಂದೆ ಹರಿಯೆ ಪರತತ್ವವೆಂದೊರೆಗೆಂತೆನೆ ೧೭೨

ಭರದಿಂ *ವಿಹಾಯಯೆನೆ ತಂ ಮಹಾಭ್ರಾಂತ್ಯಾಯೆ
ನೆ ರಸೋಕ್ತಿಯಿಂ ಬ್ರಹ್ಮ ವಿಷ್ಣ್ವಾದಿ ದೇವತಾಃ
ಪರತತ್ವಯೆನೆ ತಯಾ ವೇದಾ ವದಂತೀತಿಯೆನುತುಂ ಬ್ರುವಂತಿಚಯೆನೆ
ಒರೆ ವಿಷ್ಣು ನಾರಾಯಣಾದ್ಯೈಸ್ತುಯೆನೆ ನಾಮ
ಭಿರೆನೆ ಸಕಲೈರಪಿಯೆನಲ್ ಶ್ರುತಿ ಸ್ಮೃತಿಯೆನು
ತ್ತಿರೆ ಪುರಾಣಾದ್ಯೈರೆನುತೆ ನೋಚ್ಯತೇಯೆನುತೆ ಪರಮಂ ಪದಮೆನುತ್ತಿರೆ ೧೭೩

ಆದಿಶಿವನಂ ಬಿಟ್ಟು ದುರ್ಭ್ರಾಂತಿಯಿಂದೆ ವಿ
ಷ್ಣ್ವಾದಿಗಳ್ ಪರತತ್ವವೆಂದು ಪೇಳ್ವವು ಸಕಲ
ವೇದಂಗಳೆಂದೊಳ್ವರರೆಬರಜ್ಞರ್ ವಿಷ್ಣುಮುಖ್ಯಾಖಿಲಾಖ್ಯಂಗಳಿಂ
ಆದರಿಸಿ ಪರತತ್ವವೆಂದುಸಿರ್ದುದಿಲ್ಲ ತ
ದ್ವೇದಶಾಸ್ತ್ರಸ್ಮೃತಿಪುರಾಣಪ್ರಭೃತಿಗಳೆಂ
ದೋದುತಿದೆ ಪಾರಾಶರಂ ತನ್ನಿಮಿತ್ತದಿಂ ಪರತತ್ವವಲ್ತು ಕೃಷ್ಣಂ ೧೭೪

---

* ವಿಹಾಯತಂ ಮಹಾಭ್ರಾಂತ್ಯಾ ಬ್ರಹ್ಮವಿಷ್ಣ್ವಾದಿದೇವತಾಃ ।
ಪರತತ್ವತಯಾ ವೇದಾ ವದಂತೀತಿ ಬ್ರುವಂತಿಚ ।
ವಿಷ್ಣು ನಾರಾಯಣಾದ್ಯೈಸ್ತು ನಾಮಭಿಸ್ಸಕಲೈರಪಿ ।
ಶ್ರುತಿ ಸ್ಮೃತಿ ಪುರಾಣಾದ್ಯೈರ್ನೋಚ್ಯತೇ ಪರಮಂ ಪದಂ ॥

—ಪಾರಾಶರಂ

ಮನವಾರೆ *ನ್ನೈವ ನಾರಾಯಣೋ ವಿಷ್ಣುರೆಂ
ದೆನುತೆ ಕೇಶವಶ್ಶೌರಿರಚ್ಯುತ ಏವಮೆಂ
ದೆನುತುಮಾದೀನಿ ನಾಮಾನಿ ತಾನಿಯೆನುತ್ತೆ ವಿಷ್ಣೋ ಸ್ತ್ರೀಮೂರ್ತಿಷುಯೆನೆ
ಅನುನಯದೆ ತಾಂ ತಥಾಪ್ಯೇತಾನಿ ನಾಮಾನಿ
ಎನೆ ಯೋಗವೃತ್ತ್ಯಾಕಥಂಚಯೆನುತ್ತೆ ಮ
ತ್ತೆ ನಲವಿಂದಂತೆ ವರ್ತಂತೇ ಚಯೆಂದೆನುತ್ತುಂ ಶಿವೇತಾನಿಯೆನುತುಂ ೧೭೫

ಅನುವಿಂ ನಮುಖ್ಯಾನಿಯೆನೆ ಪರಸ್ಯ ಹಿಯೆನಲ್
ವನಜಾಕ್ಷನಾಮಂಗಳೆಲ್ಲಿಯುಂ ಪರತತ್ವ
ವೆನಿಸವಿದು ನನ್ನಿಯೇನಾನುಂ ಪ್ರಯಾಸದಿಂ ಬರೆ ಯೋಗವೃತ್ತಿಯಿಂದೆ
ಅನುವದಿಸಿದರ್ಥವೆಂದಱಿಯದವು ಮುಖ್ಯವೆಂ
ದು ನಿಬದ್ಧಿಪಂ ನರಕಿಯೆಂದು ಮನುವಾಕ್ಯಮುಂ
ವಿನುತ ಪಾರಾಶರಮುಮಿದೆಯಂತಱಿಂ ಹರಿಯದೆಂತು ಪರತತ್ವವೆನಿಪಂ ೧೭೬

ಎನಿತಜ್ಞನೋ ನೀಂ †ಯ ಏವ ಪರಮುಂ ತತ್ವ
ಮೆನುತೆಯಸ್ಮಾದನ್ಯದೆನುತುಂ ನತತ್ವತೋ
ಯೆನೆ ಸಶ್ಶಿವಸ್ಸಯೆನುತುಂ ಸದಾನಂದಸ್ತ್ವಯಾ ಖಲುಯೆನೆ ಸಪೂಜಿತೋ
ಯೆನೆ ಮತ್ತೆ ನಾರಾಯಣಾದಿ ನಾಮಾನಿಯೆಂ
ದೆನುತುಂ ನ ಸಾಕ್ಷಾದೆನುತ್ತೆ ಪರಮಾತ್ಮನೋ
ಯೆನುತೆ ನಾಮಾನೀತಿಯೆನೆ ಪರಿಜ್ಞಾನಮೆನೆ ನಾಲ್ಪಸ್ಯ ತಪಸಃ ಫಲಂ ೧೭೭

---

* ನ್ನೈವ ನಾರಾಯಣೋ ವಿಷ್ಣುಃ ಕೇಶವಶ್ಶೌರಿರಚ್ಯುತಃ ।
ಏವಮಾದೀನಿ ನಾಮಾನಿ ತಾನಿ ವಿಷ್ಣೋ ಸ್ತ್ರೀಮೂರ್ತಿಷು ॥
ತಥಾಪ್ಯೇತಾನಿ ನಾಮಾನಿ ಯೋಗವೃತ್ತ್ಯಾಕಥಂಚನ ।
ವರ್ತಂತೇಚ ಶಿವೇತಾನಿ ನಮುಖ್ಯಾನಿ ಪರಸ್ಯಹಿ —ಪಾರಾಶರ-ಮನು

† ಯ ಏವ ಪರಮುಂ ತತ್ವಂ ಯಸ್ಮಾದನ್ಯನ್ನ ತತ್ವತಃ ।
ಸಶಿವಸ್ಸ ಸದಾನಂದಸ್ತ್ವಯಾ ಖಲು ಸಪೂಜಿತಃ ॥
ನಾರಾಯಣಾದಿ ನಾಮಾನಿ ನ ಸಾಕ್ಷಾತ್ಪರಮಾತ್ಮನಃ ।
ನಾಮಾನೀತಿ ಪರಿಜ್ಞಾನಂ ನಾಲ್ಪಸ್ಯ ತಪಸಃ ಫಲಂ ॥
ಪರಾತ್ಪರತರಂ ತತ್ವಂ ಪರನಾಮ ಶಿವಂ ಖಲು ।
ನೇತರಃಸತ್ಯಮೇವೋಕ್ತಂ ನಹಿ ಸಂಶಯಕಾರಣಂ ॥ —ಮನುಸೂಕ್ತಿ

ಎನೆ ಪರಾತ್ಪರತರಂ ತತ್ವಮೆನೆ ಪರನಾಮ
ಯೆನೆಶಿವಃ ಖಲು ನೇತರಃ ಸತ್ಯಮೇವೋಕ್ತ
ಮೆನುತೆ ನಹಿಯೆನುತೆ ಸಂಶಯಕಾರಣವೆನೆ ಪರತತ್ವಾದಿ ಸಂಜ್ಞನೀಶಂ
ಅನಿಶಂ ಹರಿಯುಮುವನ ನಾಮಮುಂ ಪರತತ್ವ
ವೆನಿಸವಿದು ನನ್ನಿ ಸಂದೇಹವಿಲ್ಲೀಯಱಿವು
ಘನ ಸುಕೃತಿಗೊಗೆವುದೆಂದಿವೆ ಸಾಂಬ ಮನುಸೂಕ್ತಿಗಳ್ ವಿಚಾರಿಸಿದುದಿಲ್ಲಂ ೨೭೮

*ಯೋಸೌ ಸಸರ್ವವೇದೇಷುಯೆಂದೆನುತೆ ಮ
ತ್ತೋಸೆಯಿಂ ಪಠ್ಯತೇ ಹ್ಯಜೇಶ್ವರಃಯೆನು
ತ್ತಾಸೆಯಿನಕಾಯೋಯೆನುತೆ ವಲಂ ನಿರ್ಮಲೋ ಹ್ಯಾತ್ಮಾಯೆನುತ್ತೆ ಮುದದಿಂ
ಲೇಸಾಗಿ ತನ್ಮೇ ಮನಶ್ಶಿವಯೆನುತೆ ಮಹೋ
ಲ್ಲಾಸದಿಂ ಸಂಕಲ್ಪಮಸ್ತುಯೆನೆ ಕೇಳ್ ದೇವ
ತಾಸಮೂಹದೊಳಾ ವನಜನೀಶನತನುವಮಲಾತ್ಮನೆಂದೆನಿಸಿಕೊಳ್ವಂ ೨೭೯

ಒಂದಿಯಾ ಶಿವನ ನೆನಪುಳ್ಳುದಕ್ಕೆನ್ನ ಮನ
ಮೆಂದು ಶಿವಸಂಕಲ್ಪನಾಮದುಪನಿಷದುಕ್ತಿ
ತಾಂ ದಲುಲಿವುತಿದೆಯಿಂತಪ್ಪ ಘನತೆಯನುಳ್ಳ ಹರನೆ ಪರತತ್ವವಲ್ತೇ
ಸಂದು ತದ್ವಿಷ್ಣೋಃ ಪರಮಮೆನುತೆ ಪದಮೆನಲ್
ಮಂದರಧರಂಗೆ ಪರತರ ಪರಮಪದವೀಶ
ನೆಂದು ಋಗ್ವೇದವಿರೆ ಹರಿಯೆ ಪರತತ್ವವೆಂದೊಳ್ವರೇ ದುರ್ಬೋಧಕಾ ೨೮೦

---

* ಯೋ ಸೌ ಸರ್ವವೇದೇಷು ಪಠ್ಯತೇಹ್ಯಜೇಶ್ವರಃ ।
ನಕಾಯೋ ನಿರ್ಮಲೋಹ್ಯಾತ್ಮಾ ತನ್ಮೇ ಮನಃ ಶಿವಸಂಕಲ್ಪಮಸ್ತು ॥
—ಶಿವಸಂಕಲ್ಪೋಪನಿಷತ್

ಘನದೆ *ಶಿವ ಏವಾಸ್ತಿ ನೈವಾನ್ಯದಿತಿಯೆನುತೆ
ಮನವಾರೆಯೋ ನಿಶ್ಚಯಃ ಸ್ಥಿರೋಯೆಂದೆನು
ತ್ತನುವಿಂ ಸದಾಸಏವಯೆನೆ ಸಿದ್ಧಾಂತೋಯೆನುತೆ ಪೂರ್ವಪಕ್ಷಸ್ತಥಾ
ಯೆನೆ ಪರೇಯೆನುತುಮಯಮೇವ ಹಿಯೆನುತೆ ವೇದ
ಯೆನುತುಮರ್ಥೋ ನಾಪರೋಯೆನುತೆ ಪರಮಯೆಂ
ದೆನುತಾಸ್ತಿಕಾಃಯೆನುತೆ ಗೃಹ್ಣಾಮಿ ಪರಶುಮೆನೆ ತಪ್ತಮೆನೆ ಸತ್ಯಮೇವ ೨೮೧

ಎನುತುಂ ನ ಸಂಶಯೋಯೆನೆ ಶಿವನೆ ಪರತತ್ವ
ವನಿಶಮಲ್ತನ್ಯರ್ ನಿಜಂ ಸ್ಥಿರಂ ಸಿದ್ಧಾಂತ
ಮಿನಿತುಕ್ತಿ ಪೂರ್ವಪಕ್ಷಮಪರಂ ವೇದಾರ್ಥಮಿದು ಕೇಳ್ವುದಖಿಲ ಸುರರುಂ
ಇನಿತರ್ಕೆ ಕಾಯ್ದ ಕರ್ಬೊನ್ನಕೊಡಲಿಯ ಪಿಡಿವೆ
ನೆನತು ಸತ್ಯಂ ಸಂಶಯಂಗಳಿಲ್ಲೆಂದು ದೇ
ವನಿಕಾಯಕಜನೊರೆದುದಿದೆ ತನ್ನ ಗೀತೆಯೊಳ್ ಹರಿಯೆಂತು ಪರತತ್ವವೈ ೨೮೨

†ಅಯಮೇವ ಹಿಯೆನೆ ವೇದಾರ್ಥೋಯೆನುತ್ತೆ ಮ
ತ್ತೆಯದೆಯ್ದೆನಾ ಪರಃ ಪರಮಾಸ್ತಿಕಾಃಯೆನು
ತ್ತೆ ಯಥಾರ್ಥಮಾಗಿ ವಿಶ್ವಾಸಾರ್ಥಮೆನೆ ಶಿವಂ ಸ್ಪೃಷ್ಟ್ವಯೆನುತ್ತೆ ನಿಂದು
ನಿಯತಿಯಿಂ ತ್ರಿರ್ವಃ ಶಪಥಯಾಮ್ಯಹಮೆನುತೆ
ಭಯದನ್ಯಥಾ ಚೇತ್ಸುರಾಃ ಸತ್ಯಮೆನುತೆ ನಿ
ರ್ಣಯಿಸಿ ಮೂರ್ಧಾಮಮಪತಿಷ್ಯತಿಯೆನುತ್ತನ್ಯಥಾ ವೇದಯೆಂದೆನುತ್ತುಂ ೨೮೩

---

* ಶಿವ ಏವಾಸ್ತಿನೈವಾನ್ಯದಿತಿಯೋ ನಿಶ್ಚಯಃ ಸ್ಥಿರಃ ।
ಸದಾಸ ಏವ ಸಿದ್ಧಾಂತಃ ಪೂರ್ವಪಕ್ಷಸ್ತಥಾ ಪರೇ ॥
ಅಯಮೇವ ಹಿ ವೇದಾರ್ಥೋ ನಾಪರಃ ಪರಮಾಸ್ತಿಕಾಃ ।
ಗೃಹ್ಣಾಮಿ ಪರಶುಂ ತಪ್ತಂ ಸತ್ಯಮೇವ ನ ಸಂಶಯಃ ॥ —ಬ್ರಹ್ಮಗೀತಾ

† ಅಯಮೇವ ಹಿ ವೇದಾರ್ಥೋ ನಾಪರಃ ಪರಮಾಸ್ತಿಕಾಃ ।
ವಿಶ್ವಾಸಾರ್ಥಂ ಶಿವಂ ಸ್ಪೃಷ್ಟ್ವಾತ್ರಿರ್ವಃ ಶಪಥಯಾಮ್ಯಹಂ ॥
ಅನ್ಯಥಾ ಚೇತ್ಸುರಾಸ್ಸತ್ಯಂ ಮೂರ್ಧಾ ಮಮ ಪತಿಷ್ಯತಿ ।
ಅನ್ಯಥಾ ವೇದವಾಕ್ಯಾನಾಮರ್ಥಯಿತ್ಯಭಿಶಂಕಯಾ ॥
ನಿಶ್ಚಿತಾರ್ಥಾಸ್ತು ಚೇನ್ಮೂರ್ಧಾ ಯುಷ್ಮಾಕಂ ಚ ಪತಿಷ್ಯತಿ ।
ಸತ್ಯಮೇವ ಮಯಾ ಪ್ರೋಕ್ತಂ ಶಂಭೋಃ ಪಾದ್ಯಂ ಸ್ಪೃಶಾಮ್ಯಹಂ ॥ —ಅಜಗೀತಾ

ಹಿತದೆ ವಾಕ್ಯಾನಾಮೆನುತ್ತರ್ಥಯಿತ್ಯಭಿಯೆ
ನುತೆ ಶಂಕಯಾಯೆನುತೆ ನಿಶ್ಚಿತಾರ್ಥಾಶ್ಚೇದೆ
ನುತೆ ತು ಮೂರ್ಧಾಯೆನುತೆ ಯುಷ್ಮಾಕಮೆನುತೆ ಚಯೆನುತೆ ಪತಿಷ್ಯತಿಯೆನುತ್ತೆ
ಜಿತಮಾಗಿ ಸತ್ಯಮೇವ ಮಯಾಯೆನುತ್ತೆ ಬಳಿ
ಕತಿಮಾತ್ರದಿಂ ಪ್ರೋಕ್ತಮೆನುತೆ ಶಂಭೋರೆನುತೆ
ನುತಿಸಿ ಪಾದಂ ಸ್ಪೃಶಾಮ್ಯಹಮೆನಲ್ ಮೂರ್ಖ ಕೇಳ್
ಮೇಣಜನ ಗೀತಿ ಯೊರೆಯಂ ೨೮೪

ಪರತತ್ವವೀಶನಿದು ಸಕಲ ವೇದಾರ್ಥವೆಂ
ದೊರೆವೆನ್ನ ಮೂಱುಸೂಳಿದೆ ಶಪಥವೀ ನುಡಿಗೆ
ಹರಪಟವೆ ದಿವ್ಯವಾಂ ಪುಸಿದೆಂದೊಡೆನ್ನ ತಲೆ ಪಱಿದು ಬೀಳ್ಗಲ್ಲದಂದು
ಅರಿದು ಬೀಳ್ಗೀ ನಿಮ್ಮ ಶಿರಗಳೆಂದಜನಖಿಲ
ಸುರರ್ಗೆ ಸಾಕ್ಷಾದ್ದಿವ್ಯಮುಖದಿನಱಿಪಿದನಾಗಿ
ಪರತತ್ವಮಲ್ತಲ್ತು ಹರಿ ಬಿಡುಬಿಡಾತನಂ ದೈವವೆಂದೆಂತು ನುಡಿವೈ ೨೮೫

ಎಂದಿಂತು ಗುರುವವನ ತತ್ ಪ್ರಶ್ನೆಗಳ್ಗೆ ಮೊದ
ಲಿಂದುವುಂ ನಿರ್ವಾಹಮಂ ಪೇಳೆ ಮತಿಗೆಟ್ಟು
ಮುಂದುಗಾಣದೆ ವಾದಿ ಪೊಲ್ಲದದ್ವೈತಾವಲಂಬದಿಂ ಮಱಿಸಿ ನುಡಿದು
ಒಂದುಪಾಯಂಗಾಣ್ಬೆನೆಂದು ನೀಂ ಪರತತ್ವ
ವೆಂದೆಂಬ ಬೊಮ್ಮವೇ ಗುಣೋಪಾದಿಯಿಂದೆ ಮೂ
ಱಂದಮಂ ತಾಳ್ದು ಪಲವಾಯ್ತಲ್ಲಿ ಪರಿಕಿಪೊಡೆ ಪೂರ್ವೋತ್ತರಂಗಳುಂಟೇ ೨೮೬

ಏಪರಿ ವಿಚಾರಿಸಿದೊಡಂ ವಿಷ್ಣುವಿಧಿರುದ್ರ
ರೂಪರ್ ತ್ರಿಮೂರ್ತಿಗಳ್ ಸಾಮ್ಯರೆಂದಿರದುಲಿವ
ಪಾಪಿಗಿಂತೆಂದರೆಲೆ ದೋಷಿ ನೀನಿಂತು ಕಾಳ್ಗೆಡೆದು ನರಕಕ್ಕಿಳಿವರೇ
ಔಪಚಾರಿಕ ಸತ್ವಗುಣಯುಕ್ತ ರುದ್ರಂಗೆ
ಮಾಪ ವಾಣೀಶರ್ ತಮೋ ರಜೋಗುಣಬದ್ಧ
ರೂಪರೆಂತೈ ಸಾಮ್ಯವೀ ನುಡಿಯಸಂಭಾಷ್ಯವಾ ಮತದ ಚರ್ಚೆಯೇಕೈ ೨೮೭

ವೇದಾಂತ ವೈಷ್ಣವ ಪ್ರಸ್ಥಾನವತ್ಯಂತ
ಭೇದಮುವಱಿೊಳ್ ವೈಷ್ಣವಾವಲಂಬನದಿಂದೆ
ವಾದಿಸಿಯುದಂ ಬಿಟ್ಟು ತನ್ಮತವಿರುದ್ಧವೇದಾಂತಮಂ ಗ್ರಹಿಪ ನಿನಗೆ
ವಾದದುಪಸಿದ್ಧಾಂತವೆಂಬ ನಿಗ್ರಹಹೇತು
ವಾದವಿದು ಜಲ್ಪವಾದುದಱಿನಿಂತಿದು ಕಥಾ
ಭೇದವನೆಸಗಿ ತನ್ನನುದ್ಭಾವಿಪಂಗೆ ಜಯಮಂ ಮಾಳ್ಪುದದುನಿಮಿತ್ತಂ ೨೮೮

ಎಮಗೆ ಜಯಮುಪಜಯಮಿವಂಗೆ ಕಂಡಾ ಮಹೀ
ರಮಣ ಕಂಡಿರೆ ಸಭ್ಯರಿರಯೆಂದು ನುಡಿವುದುಂ
ವಿಮಲಸಭ್ಯರ ಸಭಾಪತಿ ನೋಡೆಯುವರದನೊಡಂಬಟ್ಟು ಪುರಿಯಿಡೆಯುವಂ
ಸ್ವಮತಿ ವಿಭ್ರಮಿಸಿ ತಲೆಗುತ್ತೆ ಗುರು ಬಳಿಕೆಲೆಲೆ
ಕುಮತಿ ನೀಂ ಸೋಲ್ತೊಡಂ ವಾದಾನವಸ್ಥೆ ತಾ
ನಮರ್ದೊಡಂ ನಿನ್ನ ಸಂಶಯಮನಲೆಯಲ್ವೇಳ್ಕುಮೆಂದುತ್ತರಂಗುಡಲಿರೆ ೨೮೯

ಮದಕುಧರವಿದಳನಭಿದುರ ಪರಮ ಶಿವಭಕ್ತ
ಪದಶತದಳಾದಭ್ರಮುಕರಂದಲೀಲಾ
ಪ್ರಮುದ ಪರವಶೀಭೂತ ಮಧುಕರೋಪಮ ಪದ್ಮಣಾಂಕಪ್ರಣೀತಮಾಗಿ
ಸದಮಲಾಖಿಲ ಶಾಸ್ತ್ರಸಾರಮೆಂದೆನಿಸುವ
ಭ್ಯುದಯಕರ ಪದ್ಮರಾಜಪುರಾಣಕಥೆಯೊಳಿಂ
ತಿದು ವಾದಿ ನೆಗಳ್ದ ಶಂಕೆಗಳ ಖಂಡಿಸಿ ಗುರು ಜಯಂಬಡೆದ ದಶಮಸಂಧಿ ೨೯೦

ಈಶಾಪರಾವತಾರನ ವಿಬುಧನುತನ ಭವ
ಪಾಶನಾಶನ ಕೆಱೆಯ ಪದ್ಮಣಾರ್ಯನ ಲಸ
ಚ್ಛ್ರೀ ಶಿವಾದ್ವೈತಸಾಕಾರಸಿದ್ಧಾಂತಪ್ರತಿಷ್ಠಾಪನಾಚಾರ್ಯನಾ
ಈ ಶುದ್ಧಚರಿತಮಂ ತಿಳಿಪಿದಗೋರ್ದಿದ
ಗಾರ್ಶಿಯಿಂ ಕೇಳ್ದರ್ಗೆ ಭುಕ್ತಿ ಮುಕ್ತಿಗಳಂ ಮ
ಹಾ ಶುಭಂಗಳನಾಯುಮಂ ಕೊಟ್ಟು ಗುರುರೂಪ ವಿಶ್ವನಾಥಂ ರಕ್ಷಿಪಂ ೨೯೧

ಅಂತು ಸಂಧಿ ೧೦ ಕ್ಕಂ ಪದಂಗಳು ೯೪೦ ಕ್ಕಂ

ಮಂಗಳಮಗಮತ್

ಶ್ರೀ

ಹನ್ನೊಂದನೆಯ ಸಂಧಿ

ಸೂಚನೆ : ಮುಂತೆ ಸಚ್ಛ್ರೀ ಶಿವಾದ್ವೈತಸಾಕಾರಸಿ
ದ್ಧಾಂತಪ್ರತಿಷ್ಠೆಯಂ ಮಾಡಿ ಬಹುವಿಧದೊಳೋ
ರಂತೊಡಂಬಡಿಸಿ ದೃಷ್ಟಾಂತಮಂ ತೋಱಿಗುರುವಾದಿಯುಂ ಗೆಲ್ದು ಮೆಱೆದಂ

ಶಾಶ್ವತಸ್ಸುಖದ ಷಡ್ಗುಣೈಶ್ವರ್ಯಯುಕ್ತ ಸ
ಪ್ತಾಶ್ವಸುತಸಂಹಾರನಶ್ವರವಪುಃ ಪ್ರಭಾ
ವಾಶ್ವಮೇಧಾದಿ ಫಲದಶ್ವಸನಮಿತ್ರನೇತ್ರಾಶ್ವಲಾಯನಮುಖನುತ
ವಿಶ್ವತೋಮುಖ ಸಕಲಪಶ್ವಧಿಪ ಲಸದಪ
ರ್ಣೇಶ್ವರ ಕೃಪಾಸಮುದ್ರ ಶ್ವೇತವಾಜಿಷ್ಟ
ದಾಶ್ವೀಕೃತ ಶೃತಿಕುಲೇಶ್ವರಾಖ್ಯೋತ್ಕೃಷ್ಟ ವಿಶ್ವನಾಥ ನಮಸ್ತುತೇ ೧

ಅಲ್ಲಿಯ ಸಭಾಜನಂ ಗುರುವನೀಕ್ಷಿಸಿ ಧರೆಯೊ
ಳೆಲ್ಲಿಯುಂ ವಾದಿಸಿದರಂ ಪಲಬರಂ ಕಂಡು
ಬಲ್ಲೆವಮಮಾ ನಿಗ್ರಹಸ್ಥಾನಮಂ ಪೇಳ್ದು ಸಭೆಯ ಮೆಚ್ಚಿಸಿ ಸೋಲಿಸಿ
ಬಲ್ಲಿದರೆನಿಸಿ ಪೋಪರಲ್ಲದೆ ಬಳಿಕೆ ವಾದಿ
ಯಲ್ಲೊಗೆವ ಸಂಶಯಮನಪಹರಿಪೆನೆಂದುಸಿರ್ವ
ಬಲ್ಲಹರದಾರೊ ಜಯ ಜಯಯೆಂದು ಪೊಗಳುತಿರೆ ನಸುನಗುತೆ ನುಡಿದರಿಂತು ೨

ಹರಿದಾಸ ಕೇಳ್ ಬಾಹ್ಯತಮವಾಂತರಂ ಸತ್ವ
ಮುರು ಶಿವಂಗಾ ಬಹಿಸ್ಸತ್ವಮಂತಸ್ತಮಂ
ಹರಿಗೆ ಪೊಱಗೊಳಗುಂ ರಜೋಗುಣಮಜಂಗಿವಱ ತರತಮವಶದಿನೀಕ್ಷಿಸೆ
ಹರನಧಿಕನಲ್ತೆ ತಾರಕದಕ್ಷರತ್ರಯಕೆ
ಪರಿವಿಡಿಯೊಳಧಿದೇವತೆಗಳಜಹರೀಶ್ವರರ
ವರ ವರ್ಣವಾ ಗುಣಂಗಳವೊಲದಱಿಂ ಕೆಂಪು ಕಪ್ಪು ಬೆಳ್ಪಾ ತ್ರ್ಯಕ್ಷರಂ ೭

ಇಂತೆಂದಥರ್ವಸೂತೋಕ್ತಿ ಮನು ಸಾಂಬಂಗ
ಳಂತಸ್ಥವಿರೆ ಶಿವಂಗುಳಿದರೆಣೆಯೇ ಸ್ಥೈರ್ಯ
ಮಂತೆ ಧೈರ್ಯಂದಾಕ್ಷಮಾರ್ಜವ ಜಡತೆ ಸಂತೋಷ ಮೃದು ಶೌಚಂಗಳುಂ
ಸಂತತೋದ್ಯೋಗಕ್ಷಮತೆ ಸುಹಿತಮುತ್ಸುಕಂ
ಕ್ಷಾಂತಿ ದಾಂತಿ ದಯಾಪರಸ್ಕೃತಿಗಳಿವು ಸತ್ವ
ದಿಂ ತೋರ್ಪ ವೃತ್ತಿಗಳ್ ಕ್ರೌರ್ಯ ಶೌರ್ಯ ಮಹೋತ್ಸವಾಭಿಮಾನಂ ಕಲ್ಕತೆ ೪

ಬಳಿಕೆ ದಾರ್ಢ್ಯಂ ನಿರ್ದಯಾ ಭೋಗದಂಭಮಿವು
ತಿಳಿ ರಜೋವೃತ್ತಿಗಳರತಿ ಮಂದತಾ ದೈನ್ಯ
ವಲಘು ಪೈಶೂನ್ಯಾತಿನಿದ್ರಾ ಮದಾಲಸ್ಯತತಿ ನಿರೋಧತೆ ಮೂಢತೆ
ಬಳಸೆನಿಸುವಾ ತಮೋಗುಣದ ವೃತ್ತಿಗಳಿದು ವಿ
ಮಳಿನಾಗಮೋಕ್ತಿಯಂತಪ್ಪ ಸತ್ವಗುಣೋದ್ಧ
ನಿಳಯರುದ್ರಂಗೀ ರಜಸ್ತಮೋಗುಣವೃತ್ತರಜಹರಿಗಳೆಂತು ಸರಿಯೈ ೫

ಮಾಯಾಬಲದಿನೀಶ್ವರಂಗೆ ಹರಿ ಸರಿಯೆಂಬ
ರೀಯಧಮ ಮನುಜರ್ ಕೆಲಂಬರಜ್ಞಾನದಿಂ
ದಾಯುಮೇಶಂಗೆನ್ನನೆಣೆಯೆಂಬರರೆಬರಕ್ಕಟ ಮೀಱಲಳವೆ ಶಿವನಾ
ಮಾಯಿಕ[೧]ವ[೧]ನೆಂದಜೋಕ್ತಿಯಿದೆ ಸುಸ್ಕಾಂದದೊಳ
ಮೇಯ ಶಂಭುಗೆ ಹರ್ಯಜಾದ್ಯರೆಣೆಯೆಂದವಿ
ದ್ಯಾಯತ್ತನಾಗುಲಿವನಾವನವನಸ್ಪೃಶ್ಯನೆಂದಿದೆ ತರಣಿ ಪುರಾಣಂ ೬

---

೧ ದ (ಬ)

ಒಂದಿ *ನಿರುಪಾಧಿಕಯೆನುತ್ತೆ ಚೇತಸ್ಥಸ್ಯ
ಯೆಂದೇವ ಸರ್ವಸ್ಯ ಸಾಕ್ಷಿಣೋಯೆನುತೆ ಪಲ
ವಂದದಿಂದೆತ್ತಿ ರುದ್ರಸ್ಯಯೆನುತುಂ ಬ್ರಹ್ಮಯೆನುತೆ ವಿಷ್ಣುಭ್ಯಾಮೆನೆ
ಸಂದುನಾಧಿಕ್ಯಂ ಪ್ರಯೆನುತುಂ ವದಂತಿಯೇ
ಯೆಂದು ಹನ್ಯಾತ್ತಾನೆನುತ್ತುಮ ವಿಚಾರೇಣ
ಯೆಂದು ಹಂತುರೆನುತ್ತೆ ದೋಷೋನಕಶ್ಚನಯೆನಲ್ ದುರ್ವಿದಗ್ಧ ಕೇಳ್ವೈ ೭

ನಿರುಪಾಧಿಕಾಂತರ್ಜ್ವಲತ್ಸರ್ವಸಾಕ್ಷಿಕ
ಸ್ಫುರಣರುದ್ರಂಗೀ ಗುಣೋಪಾದಿಭಿನ್ನರಜ
ಹರಿಗಳೆಣೆಯೆಂದದಾರದ್ವೈತವಿಭ್ರಮದೆ ನುಡಿವರವರನ್ವಯಕ್ಕೆ
ನಿರುತಮಿದು ಸಾಂಕರ್ಯಮುಂಟಂತೆ ನುಡಿಯದರ್
ವರ ವಂಶಜರ್ ತ್ರಿಮೂರ್ತಿಗಳೇಕವೆಂಬರಂ
ಹರಿಪುದವಿಚಾರದಿಂ ಹರಿಸೆಯಘವಿಲ್ಲೆಂದು ಸಾಂಬಪೌರಾಣಸಿದ್ಧಂ ೮

ನಾಡ ಮಾತೇಂ ‡ಕೇಚಿದದ್ವೈತಮಾಶ್ರಿತ್ಯ
ಬೈಡಾಲಯೆನುತೆ ದಲ್ ವ್ರತಿಕಾ ನರಾಃಯೆನುತೆ
ಕೂಡೆ ಸಾಮ್ಯಮೆನೆ ರುದ್ರೇಣ ಸರ್ವೇಷಾಂ ಪ್ರಯೆನುತುಂ ವದಂತಿಯೆನುತೆ
ರೂಢಿಸಿ ವಿಮೋಹಿತಾಯೆನೆ ಬಿಡಾಲವ್ರತದ
ಬಾಡಬರ್ಕಳ್ ದುರದ್ವೈತಮಂ ನೆರ್ವಿ ಸರಿ
ಮಾಡುವರ್ ಶಂಭುಗುಳಿದವರನವರತ್ಯಜ್ಞರೆಂಗುಮಾ ಸೂತಗೀತಿ ೯

---

* ನಿರುಪಾಧಿಕ ಚೇತಸ್ಥಸ್ಯೈವ ಸರ್ವಸ್ಯ ಸಾಕ್ಷಿಣಃ ।
ರುದ್ರಸ್ಯಬ್ರಹ್ಮವಿಷ್ಣುಭ್ಯಾಮಾಧಿಕ್ಯಂ ಪ್ರವದಂತಿಯೇ ॥
ಹನ್ಯಾತ್ತಾನ ವಿಚಾರೇಣ ಹಂತುರ್ದೋಷೋನಕಶ್ಚನ ॥ —ಸಾಂಬಪುರಾಣ

‡ ಕೇಚಿದದ್ವೈತಮಾಶ್ರಿತ್ಯ ಬೈಡಾಲವ್ರತಿಕಾನರಾಃ ।
ಸಾಮ್ಯಂ ರುದ್ರೇಣ ಸರ್ವೇಷಾಂ ಪ್ರವದಂತಿ ವಿಮೋಹಿತಾಃ ॥ —ಸೂತಗೀತಾ

ಮುನಿದು ‡ಸರ್ವೇ ಬ್ರಹ್ಮವದೆನುತಿಷ್ಯಂತಿಯೆಂ
ದೆನುತೆ ಸಂಪ್ರಾಪ್ತೇತುಯೆನುತುಂ ಕಲೌಯುಗೇ
ಎನೆ ನಾನುತಿಷ್ಠಂತಿ ಮೈತ್ರೇಯ ಶಿಶ್ನೋದರಪರಾಯಣಾಯೆನಲ್ಕೆ
ಅನುವಿನಿಂ ಕಲಿಪುಗೆ ನುಡಿಯಬಾರದದ್ವೈತ
ವನೆ ನುಡಿದು ಶಿಶ್ನೋದರರೋರುರಕ್ಷಕರಪ್ಪ
ಮನುಜಾಧಮರ್ ಶಿವದ್ರೋಹಿಗಳೊಗೆವರೆಂದು ವಿಷ್ಣುಪೌರಾಣಸಿದ್ಧಂ ೧೦

†ಪುರುಷೋತ್ತಮಮೆನುತ್ತು ಮಾಶ್ರಿತ್ಯಯೆಂದೆನು
ತ್ತರರೆ ಶಿವನಿಂದಾರತಾದ್ವಿಜಾಯೆಂದೆನು
ತ್ತಿರದದು ಕಲೌಯುಗೇಯೆನುತುಂ ಭವಿಷ್ಯಂತಿಯೆನುತೆ ಮೇಣ್ ತ್ರಾತಾಯೆನೆ
ಉರವಣಿಸಿ ತೇಷಾಂ ನ ಮಾಧವೋಯೆನೆ ಕಲಿಯ
ಬರವಿನೊಳ್ ಹರಿಯನಾಶ್ರಯಿಸಿ ಹರನಂ ಪಳಿವ
ನರಕಿವಿಪ್ರರ್ ಜನಿಪರವರನಾ ಹರಿ ಪೊರೆಯನೆಂದು ಸಾಱುತಿದೆ ಸೌರಂ ೧೧

ಘನದೆ *ಯೇ ನಿಂದಂತಿಯೆನುತುಂ ಮಹಾದೇವ
ಯೆನುತೆ ಸಂಸಾರಾದೆನುತೆ ಮೋಚಕಂ ಪರಂ
ಯೆನುತುಂ ತ್ವದೆನುತೆ ಭಕ್ತಾಶ್ಚಯೆನುತುಂ ದುರಾತ್ಮಾನೋಯೆನುತ್ತೆ ಮತ್ತಂ
ಅನುವಿನಿಂ ಬ್ರಾಹ್ಮಣಾಸ್ತೇ ಕಲೌಯೆನೆ ಯುಗೇ
ಯೆನೆ ಶಿವನನಾರ್ ಪಳಿವರಾತ್ವದಿಷ್ಟದ್ವಿಜರ್
ಜನಿಪರಧಮತೆಯಿಂ ಕಲಿಯೊಳೆಂದು ಹರಿಗೊರೆದುದಿದೆ ರವಿಪುರಾಣದಲ್ಲಿ ೧೨

---

‡ ಸರ್ವೇ ಬ್ರಹ್ಮವದಿಷ್ಯಂತಿ ಸಂಪ್ರಾಪ್ತೇತುಕಲೌಯುಗೇ ।
ನಾನುತಿಷ್ಠಂತಿ ಮೈತ್ರೇಯ ಶಿಶ್ನೋದರ ಪರಾಯಣಾಃ ॥ —ವಿಷ್ಣುಪುರಾಣ

† ಪುರುಷೋತ್ತಮಮಾಶ್ರಿತ್ಯಶಿವನಿಂದಾರತಾದ್ವಿಜಾಃ ।
ಕಲೌಯುಗೇಭವಿಷ್ಯಂತಿತ್ರಾತಾ ತೇಷಾಂ ನ ಮಾಧವಃ ॥ —ಸೌರಪುರಾಣ

* ಯೇ ನಿಂದಂತಿ ಮಹಾದೇವಂ ಸಂಸಾರಾನ್ಮೋಚಕಂ ಪರಂ ।
ತ್ವದ್ಭಕ್ತಾಶ್ಚದುರಾತ್ಮಾನೋ ಬ್ರಾಹ್ಮಣಾಸ್ತೇ ಕಲೌಯುಗೇ ॥ —ರವಿಪುರಾಣ

ಗೌತಮ ದಧೀಚಿ ಭೃಗು ದುರ್ವಾಸ ಕಣ್ವಾದಿ
ಪೂತ ಮುನಿಗಳ್ ನಿಮ್ಮ ವಂಶಾದಿಮರ ದುರ್ವಿ
ನೀತವೃತ್ತಿಗೆ ಸೈರಿಸದೆ ಕುಪಿತರಾಗಿ ಶಿವನಲ್ಲಿ ಶಿವಭಕ್ತರಲ್ಲಿ
ಖ್ಯಾತಶಿವಭಕ್ತಿ ಶಿವದೀಕ್ಷಾ ಶಿವಾರ್ಚನ
ಪ್ರೀತಿ ಶಿವತೀರ್ಥ ಶಿವಶೇಷ ಶಿವವಿಜ್ಞಾನ
ಜಾತ ಶಿವನಾಮ ಶಿವಗೃಹ ಶಿವಕ್ಷೇತ್ರ ಶಿವ^ಮ^ಂತ್ರ ಶಿವನುತಿಗಳಲ್ಲಿ ೧೩

ಬಳಿಕಂ ತ್ರಿಪುಂಡ್ರ ರುದ್ರಾಕ್ಷ ಶಿವಮಂತ್ರಾದಿ
ಗಳೊಳಂ ಪಲವದೇಕೆ ಶಾಂಕರೀಯಂಗಳಾ
ದಳಘುಕರ್ಮಂಗಳೇನೇನುಂಟವಱೊಳಂ ವಿಮುಖರಾಗಿ ನಿಂದಿಸುತ್ತುಂ
ವಿಳಸಿತ ನಿಗಮಬಹಿಷ್ಕೃತದುರಾಚಾರಂಗ
ಳೊಳಗೊಂದಿ ಹರಿ ಶಿವಂಗೆಣೆಯಧಿಕಮೆಂದಿಂತು
ಗಳಪುತೆ ಚರಿಸಿಮೆಂದು ಶಪಿಸಿದರಿದಾ ಸ್ಕಾಂದಮುಖ್ಯ ಪೌರಾಣಸಿದ್ಧಂ ೧೪

ಅವರ ವಂಶದೊಳೊಗೆದೆಯಾಗಿ ತಚ್ಛಾಪದಿಂ
ಶಿವನಿಂದೆ ನಿನಗೊದವಿತಲ್ಲದಿದು ವೇದಶಾ
ಸ್ತ್ರವಿಹಿತೋಕ್ತಿಯೆ ನುಡಿದೊಡಾಲಿಸಿದೊಡತಿ ದೋಷಮೆನೆ ವಾದಿ ಮತ್ತೆ ಬಿಡದೆ
ತವೆ ಪರಬ್ರಹ್ಮವದು ಬಯಲತ್ತಲಿತ್ತ ನೀಂ
ಹವಣಿಸಿದ ರುದ್ರನಾಕಾರನುಕ್ಷನನೇಱಿ
ತೊವಲುಟ್ಟಪಸ್ಮಾರ ಮೃಗ ಶಸ್ತ್ರ ಫಣಿ ಭೂತ ಶಿಖಿ ಡಮರುಗಳನುಚಿತದಿಂ ೧೫

ತೊಡವುಗೆಯ್ದೆಲುಬೂದಿಗಳನಾಂತು ಮಸಣದೊಳ್
ಬಿಡದೆ ಚರಿಪಂ ಬ್ರಹ್ಮವೆಂತಾತನೆನೆ ದೋಷಿ
ಗೆಡೆಯದಿರ್ ಶಿವನಿವಂ ಧರಿಸಿದೊಡೆ ನಿಂದ್ಯನೇ ಕೇಳವಂ ತಳೆದಂದಮಂ
ಅಡಸಿ ಮುನ್ನಖಿಲಮಂ ಸಂಹರಿಸಿಯಲ್ಲಿಯುಮೆ
ಯೊಡನೆ ಬಿನದಿಸುತೆಯಂತರ್ಮುಖೇಕ್ಷಣನಾಗ
ಲೊಡನವನ ನಿಜಧರ್ಮವಳ್ಕಿ ವೃಷಭಾಕೃತಿಯನಾಂತೆನ್ನನುದ್ಧರಿಸೆನೆ ೧೬

---

೧ ಶಂ (ಅ)

ಎನ್ನ ನೀನಲ್ಲದೆ ತಳೆವರಾರೆನುತ್ತದಂ
ಮನ್ನಿಸುತೆ ವಾಹನಂಗೆಯ್ದನಾ ಸಂಕಲ್ಪ
ದಿನ್ನಾಡೆ ಹರಿ ಪುರದಹನದೊಳಿಳಿದುರುರಥವನಾರೂಪಿನಿಂದೆತ್ತಿದಂ
ತನ್ನರಹರಿಯು ಚರ್ಮವಮಂ ಕಾಶಿಯೊಳ್ ಸಕಲ
ರನ್ನೋಯಿಪಿಭದೈತ್ಯಚರ್ಮವಮಂ ಧರಿಸಿದಂ
ಮುನ್ನಂ ಮುನೀಶ್ವರರ್ ನಾಲ್ವತ್ತುಮೇಲೆಂಟುಸಾಸಿರಂ ಘೋರ ತಪವಂ ೧೭

ವರ ದೇವದಾರುವನದೊಳ್ ಚರಿಸುತಿರೆಯವರ
ಪರಿಯಱಿಯೆ ಮಾರಾರಿ ಮೋಹನಾಕಾರವಮಂ
ಧರಿಸಿ ಭಿಕ್ಷುಕನಾಗಿ ಬರಲೊಡಂ ತನ್ಮುನಿಸ್ತ್ರೀಯರೀಶನನೀಕ್ಷಿಸಿ
ತ್ವರಿತದಿಂ ಸೋಲ್ತು ಬೆಂಬಳಿಯೊಳೆಯ್ದುತಿರೆ ಕಂ
ಡುರು ಕೋಪದಿಂದಭವನೆಂದಱಿಯದವರಧಿಕ
ತರದಾಭಿಚಾರಾಧ್ವರದಿನೀತನಂ ಕೊಲ್ವೆವೆಂದದನೊಡರ್ಚೆಯಲ್ಲಿ ೧೮

ಮುನಿಗಳಾತ್ಮಸ್ಥಕೋಪಂ ರೂಪನಾಂತುದೋ
ಯೆನಿಸಿ ಪುಲಿಯೊಗೆವುದುಮವರ್ಕಳಿಪೆ ಕೊಂದು ತದ
ಜಿನಮುಟ್ಟನವರಪಸ್ಮೃತಿಯಂತಪಸ್ಮಾರನೊಗೆದು ಬರೆ ಕೆಡಪಿ ಮೆಟ್ಟಿ
ಬಿನದಿಸಿದನೊಡನೆ ಮೃಗವೊಗೆದು ಸಂವಿಚ್ಛೂನ್ಯ
ರೆನಗೆ ಸರಿಯೆಂದು ಪೇಳ್ವಂತೆಯ್ದೆ ಪಿಡಿದದಂ
ಮನವಾರೆ ತಾಳ್ದನವರತಿ ದುರ್ಗುಣವನಂತಮುಖದೆ ಪೊಱಪೊಣ್ಮಿದಂತೆ ೧೯

ವಿವಿಧಾಸ್ತ್ರವಲ್ಲಿ ಸಂಭವಿಸಿ ಬರೆಯಾಗ್ರಹಿಸಿ
ತವೆ ತಾಳ್ದನಂತೆ ಪಂಚಫಣಾಹಿಗಳ್ ಜನಿಸಿ
ಯವರ ಕೋಪಾನಲಜ್ವಾಲೆವೋಲ್ ಬರೆ ಪಿಡಿದು ತಳೆದನಾ ಗರುಡಭಯದಿಂ
ಕವಿದು ಮೊಱೆವೊಕ್ಕವಂ ಧರಿಸಿದಂ ಮೇಣ್ ಭೂತ
ನಿವಹಾನ್ವಿತಂ ಪಿಶಾಚಂಗಳೊಗೆದಾ ಮುನಿಗ
ಳವಿನೀತ ಚಿತ್ತ ಪೈಶಾಚಮಂ ಪೇಳ್ವಂತೆ ಬರೆ ಸಹಚರತೆಯೆಸಗಿದಂ ೨೦

ಅಮಮ ಮೇಣ್ ಕುಂಡಾಗ್ನಿಯಾತ್ಮಾಪರಾಧಮಂ
ಕ್ಷಮಿಸೆಂದು ಬೇಡಿಕೊಳ್ವಂತೆ ಬರೆ ಲೀಲಾಕು
ಸುಮವನಾಂಪಂತಿರಾಂತಂ ತದಭಿಚಾರಮಂತ್ರಂ ಡಮರುವವನೆಯ್ದಿ ತಾ
ನಮಿಸುತೆಯ್ತರೆಯಂತೆ ಪಿಡಿದನೀಶ್ವರನನುಳಿ
ದಮಿತ ಕರ್ಮಾಳಿಯಿಂತುಟು ಶೂನ್ಯಮಪ್ಪುದೆಂ
ದು ಮಹೀಜನಕೆ ತೋರ್ಪವೋಲೆಲ್ಲವುಂ ಶೂನ್ಯಮಾಗೆ ಕಂಡಾ ಮುನಿಕುಲಂ ೨೧

ಭೀತಿಯಿಂ ನುತಿಸೆ ನಿಜರೂಪಮಂ ತೋಱಿ ಪರಿ
ಪೂತ ಸುಜ್ಞಾನಮಂ ಕೊಟ್ಟವರ ಪೊರೆದನಾ
ಭೂತೇಶನಾಕಾರಮುಂ ಜಗದ್ಧಿತಮಾ ಪ್ರಳಯದೊಳಜಹರಿಮುಖ್ಯರಂ
ಮಾತೇನುರುಪಿ ಕಪಾಲಾಸ್ಥಿಗಳನಾಂತು ತ
ದ್ಭೂತಿಯಿಟ್ಟಲ್ಲಿರ್ಪನವರನಿತ್ಯತೆಯಱಿಪು
ತೀ ತೆಱಿಂ ಸ್ಕಾಂದೋಕ್ತಮದಱಿಂ ಪವಿತ್ರನಾ ಬ್ರಹ್ಮವೆನೆ ರುದ್ರನಾಮಂ ೨೨

ಪರತತ್ವವತ್ತಲಗಜಾಧೀಶನೆತ್ತಲೆಂ
ದೆರಡಿಟ್ಟು ನುಡಿವುದೆಯಬದ್ಧವಂತೆಂಬ ಬೌ
ದ್ಧರ ಬಾಯನೆಡದ ಕಾಲ್ಗೆರ್ಪಿನಿಂ ಮುಚ್ಚಲೊರೆವುತಿವೆ ವೇದಂಗಳೆಂದುಂ
ಉರು ಸತ್ಯವಾಣಿಗಳವೊಂದನೆರಡೆಂದೆನ್ನ
ವೆರಡುಳ್ಳೊಡೊಂದೆನ್ನವೆಂತೆನೆ ಯಜುಸ್ಸಿನ
ಲ್ಲಿರದೇಕ ಏವ ರುದ್ರೋ ನ ದ್ವಿತೀಯಾಯತಸ್ಥೇಯೆನುತೆ ಮತ್ತೆಯುಂ ೨೩

ಏಕಮೇವಾದ್ವಿತೀಯಂಬ್ರಹ್ಮಯೆಂದೆರಡ
ಱೇಕತ್ವಮಂ ಕಾಣಿಸಿತು ದಲ್ ಸ್ವಯಂ ವಚನ
ಕೇಕೆ ವೈರುಧ್ಯಮಂ ಶ್ರುತಿ ಪೇಳ್ವುದದಱ ನುಡಿ ಪುಸಿಯೆ ಮೇಣ್ †ಬ್ರಹ್ಮಯೆನುತೆ
ಲೋಕಪದಯೆನುತುಮನ್ವೇಷೀಯೆನುತ್ತುಮ
ನ್ಸ್ತೋಕದಿಂ ರುದ್ರಯೆನುತಾರಾಧನಯೆನುತ್ತ
ದೇ ಕೂಡೆ ತತ್ಪರೋಯೆನೆ ಶಿವಪದಾಕಾಂಕ್ಷಕಂ ಶಿವನ ಭಜಿಪನೆಂದು ೨೪

---

† ಬ್ರಹ್ಮಲೋಕಪದಾನ್ವೇಷೀ ರುದ್ರಾರಾಧನ ತತ್ಪರಃ ॥

—ಬ್ರಹ್ಮಬಿಂದೂಪನಿಷತ್

ಎಲೆ ವಾದಿ ಕೇಳ್ ಬ್ರಹ್ಮಬಿಂದೂಪನಿಷದುಕ್ತಿ
ಯುಲಿವುತಿದೆಯಂತಱಿಂ ಬ್ರಹ್ಮವೆಂದೊಡೆ ರುದ್ರ
ನಲಘುನಾಮಂ ಮತ್ತೆಯುಂ ಕೇಳ *ತತ್ತತ್ವಮೆನೆ ಯದ್ಭಗವತೋಯೆನೆ
ಸಲೆ ರೂಪಮೀಶಸ್ಯ ಶೂಲಿನೋಯೆನೆ ಮತ್ತ
ಮೊಲವಿನಿಂ ವಿಶ್ವಮೆನೆ ತೇನಾಖಿಲಮೆನೆಯುವಿ
ಚಲನದಿಂ ವ್ಯಾಪ್ತಮೆಂದೆನುತೆ ನಾನ್ಯೇನೇತಿಯೆನುತಬ್ರವೀಚ್ಛ್ರುತಿರೆನೆ ೨೫

ಇನಪುರಾಣಂ ಮತ್ತೆ §ವಿಶ್ವತಶ್ಚಕ್ಷುರತ
ಯೆನೆ ವಿಶ್ವತೋ ಮುಖೋ ವಿಶ್ವತೋಬಾಹುರುತ
ಯೆನೆ ವಿಶ್ವತಃಪಾತ್ಸಮೆನುತೆ ಬಾಹುಭ್ಯಾಂ ಧಮತಿ ಸಂಪ್ರತತ್ರೈರೆನೆ
ಅನುವಿನಿಂ ದ್ಯಾವಾಯೆನುತ್ತೆ ಭೂಮೀಯೆನುತೆ
ಜನಯನ್ನೆನುತೆ ದೇವ ಏಕೋಯೆನುತ್ತುಮಿರೆ
ವಿನಯದಿಂ ಶ್ವೇತಾಶ್ವತರನಾಮದುಪಸಿಷತ್ತ †ವ್ಯಕ್ತಮೆನೆ ಕಾರಣಂ ೨೬

ಪ್ರಾಹುರಾನಂದಮೆನುತುಂ ಜ್ಯೋತಿರೆಂದೆನು
ತ್ತೂಹೆಯಿಂದಕ್ಷರಮಹಮೆನೆ ಏವ ಪರಮೆನು
ತಾಹ ಮೇಣ್ ಬ್ರಹ್ಮ ಮತ್ತೋ ಹ್ಯನ್ಯದೆನುತುಂ ನ ವಿದ್ಯತೇಯೆನುತಹಮೆನೆ
ಆಹರ್ಷದಿಂ ತತ್ಪರಮಮೆನಲ್ ಬ್ರಹ್ಮಯೆನೆ
ನೇಹದಿಂದೊಲ್ದು ಪರಮಾತ್ಮಾಯೆನುತ್ತೆ ಸ
ದ್ವ್ಯಾಹಾರದೆ ಸನಾತನೋಯೆನಲ್ ಕೂರ್ಮದೀಶ್ವರಗೀತಿಯಂತಲ್ಲದೆ ೨೭

---

* ತತ್ತತ್ವಂ ಯದ್ಭಗವತೋರೂಪಮೀಶಸ್ಯಶೂಲಿನಃ ।
ವಿಶ್ವಂತೇ ನಾಖಿಲಂ ವ್ಯಾಪ್ತಂ ನಾನ್ಯೇನೇತ್ಯಬ್ರವೀಚ್ಛ್ರುತಿಃ ॥ —ರವಿಪುರಾಣ

§ ವಿಶ್ವತಶ್ಚಕ್ಷುರುತ ವಿಶ್ವತೋಮುಖೋ ವಿಶ್ವತೋಬಾಹುರುತ ವಿಶ್ವತಃ ಪಾತ್ ।
ಸಂಬಾಹುಭ್ಯಾಂ ಧಮತಿ ಸಂಪ್ರತತ್ರೈರ್ದ್ಯಾವಾ ಭೂಮೀ ಜನಯನ್ ದೇವ ಏಕಃ ॥
—ಶ್ವೇತಾಶ್ವತರೋಪನಿಷತ್

† ಅವ್ಯಕ್ತಂ ಕಾರಣಂ ಪ್ರಾಹುರಾನಂದಂ ಜ್ಯೋತಿರಕ್ಷರಂ ।
ಅಹಮೇವ ಪರಂ ಬ್ರಹ್ಮಮತ್ತೋಹ್ಯನ್ಯನ್ನವಿದ್ಯತೇ ।
ಅಹಂ ತತ್ಪರಮಂ ಬ್ರಹ್ಮ ಪರಮಾತ್ಮಾ ಸನಾತನಃ ॥ —ಈಶ್ವರಗೀತಾ

ಮತ್ತೆ *ಯೋ ವೈಯೆನುತೆ ರುದ್ರಸ್ಸಭಗವಾನ್ನೆ
ನುತ್ತೆ ಯಶ್ಚಯೆನೆ ವಿಶ್ವೇಶ್ವರಸ್ತಸ್ಮೈಯೆ
ನುತ್ತಮು ನಮೋ ನಮೋ ಯೆನಲಥರ್ವಶಿರಮು †ತ್ಯಾಶ್ರಮಸ್ಥೋಽನುತ್ತುಂ
ಸುತ್ತೇನೊ ಸಕಲೇಂದ್ರಿಯಾಣಿಯೆನುತುರುಗುಣಾ[೧]
ಯತ್ತದೆ ನಿರುಧ್ಯಭಕ್ತ್ಯಾಸ್ವಗುರುಮೆಂದೆನು
ತ್ತೆತ್ತಿ ನಲವಿಂ ಪ್ರಣಮ್ಯಯೆನೆ ಹೃತ್ಪುಂಡರೀಕಂ ವಿರಜಮೆನೆ ವಿಶುದ್ಧಂ ೨೮

ಎನೆ ವಿಚಿಂತ್ಯಯೆನೆ ಮಧ್ಯೇ ವಿಶದಮೆನುತೆ ಬಳಿ
ಕನುವಿಂ ವಿಶುದ್ಧಮೆನುತುಮನಂತಮವ್ಯಕ್ತ
ಮೆನೆಯಚಿಂತ್ಯಯೆನೆ ರೂಪಂ ಶಿವಮೆನಲ್ ಪ್ರಶಾಂತಮಮೃತಂ ಬ್ರಹ್ಮಯೋನಿಂ
ಎನೆ ತದಾದಿಯೆನೆ ಮಧ್ಯಾಂತಯೆನುತೆ ವಿಹೀನ
ಮೆನುತೇಕಮೆನೆ ವಿಭುಮೆನುತೆ ಚಿದಾನಂದಮೆಂ
ದೆನೆಯರೂಪಮೆನೆಯದ್ಭುತಮೆನೆಯುಮಾಸಹಾಯಮೆನೆ ಪರಮೇಶ್ವರಮೆನೆ ೨೯

ಒಲವಿಂ ಪ್ರಭುಂ ತ್ರಿಲೋಚನಮೆನುತೆ ಕರತಲಾ
ಮಲಕಮಾಗಿಯೆ ನೀಲಕಂಠಂ ಪ್ರಶಾಂತಮೆಂ
ದುಲಿದು ತಾಂ ಧ್ಯಾತ್ವಾ ಮುನಿರಿನೆ ಗಚ್ಛತಿ ಭೂತಯೋನಿಂ ಸಮಸ್ತಮೆನುತೆ
ಸಲೆ ಸಾಕ್ಷಿಮೆನುತೆ ತಮಸಃ ಪರಸ್ತಾದೆನು
ತ್ತಲಘುಕೈವಲ್ಯೋಪನಿಷದುಕ್ತಿಯಿದೆಯಿದರೊ
ಳೆಲೆ ವಾದಿ ಕೇಳ್ ಪರಬ್ರಹ್ಮವತ್ತಲುಮೇಶನಿತ್ತಲೆಂದೊರೆದುದುಂಟೇ ೩೦

---

* ಯೋ ವೈ ರುದ್ರಸ್ಸ ಭಗವಾನ್ ಯಶ್ಚ ವಿಶ್ವೇಶ್ವರಸ್ತಸ್ಮೈ ನಮೋನಮಃ ॥
—ಅಥರ್ವಶಿರ

† ಅತ್ಯಾಶ್ರಮಸ್ಥಸ್ಸಕಲೇಂದ್ರಿಯಾಣಿ ನಿರುಧ್ಯ ಭಕ್ತ್ಯಾ ಸ್ವಗುರುಂ ಪ್ರಣಮ್ಯ
ಹೃತ್ಪುಂಡರೀಕಂ ವಿರಜಂ ವಿಶುದ್ಧಂ ವಿಚಿಂತ್ಯಮಧ್ಯೇ ವಿಶದಂ ವಿಶೋಕಂ ।
ಅನಂತಮವ್ಯಕ್ತಮಚಿಂತ್ಯರೂಪಂ ಶಿವಂ ಪ್ರಶಾಂತಮಮೃತಂ ಬ್ರಹ್ಮಯೋನಿಂ ।
ತದಾದಿ ಮಧ್ಯಾಂತವಿಹೀನಮೇಕಂ ವಿಭುಂ ಚಿದಾನಂದಮರೂಪಮದ್ಭುತಂ ।
ಉಮಾಸಹಾಯಂ ಪರಮೇಶ್ವರಂ ಪ್ರಭುಂ ತ್ರಿಲೋಚನಂ ನೀಲಕಂಠಂ ಪ್ರಶಾಂತಂ
ಧ್ಯಾತ್ವಾ ಮುನಿರ್ಗಚ್ಛತಿ ಭೂತಯೋನಿಂ ಸಮಸ್ತಸಾಕ್ಷಿಂ ತಮಸಃ ಪರಸ್ತಾತ್ ॥
—ಕೈವಲ್ಯೋಪನಿಷತ್

---

೧ ಣೀ (ಬ)

ಮತ್ತೆಯುಂ †ಬ್ರಹ್ಮವಿದೆನುತ್ತುಮಾಪ್ನೋತಿಯೆಂ
ದೆತ್ತಿ ವೇದಾಂತಮಿದೆ ಮನುಸೂಕ್ತಿ *ಯಸ್ಮಾದೆ
ನುತ್ತುಮಿಮಾನಿ ಭೂತಾನಿ ಜಾಯಂತೇಯೆನುತೆ ಯೇನತಾನಿ ಚಯೆನೆ
ಬಿತ್ತರದೆ ಜೀವಂತಿ ಯತ್ರ ಲೀಯಂತೇಯೆ
ನುತ್ತೆ ತದ್ಬ್ರಹ್ಮೇತಿಯೆನುತಾದರೇಣ ತುಯೆ
ನುತ್ತೆ ತಸ್ಯಯೆನುತ್ತ ಸಾಧಾರಣಾಮೂರ್ತಿರೆನುತೆ ಸಾಂಬಾಯೆನುತ್ತೆ ೩೧

ಅನುನಯದೆ ಚಂದ್ರಾರ್ಧಶೇಖರಾನೀಲಯೆಂ
ದೆನುತೆ ತಾಂ ಗ್ರೀವಾಯೆನುತ್ತುಂ ತ್ರಿಣೇತ್ರಾಚ
ಯೆನುತೆ ದಲ್ ಬ್ರಹ್ಮಸೂತ್ರಸಮನ್ವಿತಾಯೆನುತುಮೀದೃಶೀಯೆನುತೆ ಪರಮಾ
ಯೆನುತೆ ಮೂರ್ತಿರ್ಯಸ್ಯಯೆನುತೆ ಸಾಧಾರಣಾ
ಯೆನುತುಂ ಪರಾಯೆನೆ ತದೇವಯೆನುತುಂ ಪರಮ
ಮೆನುತೆ ಸಾಕ್ಷಾತ್ಪರಂ ನಾನ್ಯನ್ನಸಂಶಯೋಯೆನಲಲ್ಲಿ ಭೇದವೆಂತೈ ೩೨

ಮತ್ತಂ ಪರಬ್ರಹ್ಮಯೆನೆ ಸಈಶಾನೋಯೆ
ನುತ್ತುಮೇಕೋಯೆನುತೆ ರುದ್ರಃ ಸಏವ ಚಯೆ
ನುತ್ತುಂ ಭವಾನೆನೆ ಮಹೇಶ್ವರಃ ಸಾಕ್ಷಾದೆನುತೆ ಮಹಾದೇವೋಯೆನೆ
ಸುತ್ತೇಂ ನಸಂಶಯೋ ಯಸ್ಯ ಯೆಂದಿಂತುವಚಿ
ಸುತ್ತುಮಂತಸ್ಥಾನಿ ಭೂತಾನಿ ಯೇನಯೆನು
ತ್ತೆತ್ತಿ ವಲಮಿದಮೆನುತ್ತುಂ ಭ್ರಾಮ್ಯತೇ ಜಗದ್ಬ್ರಹ್ಮೇತಿಯಂಜಗುರೆನೆ ೩೩

---

† ಬ್ರಹ್ಮವಿದಾಪ್ನೋತಿ।

* ಯಸ್ಮಾದಿಮಾನಿ ಭೂತಾನಿ ಜಾಯಂತೇ ಯೇನತಾನಿಚ।
ಜೀವಂತಿ ಯತ್ರಲೀಯಂತೇ। ತದ್ಬ್ರಹ್ಮೇತ್ಯಾದರೇಣತು।
ತಸ್ಯಸಾಧಾರಣಾಮೂರ್ತಿಸ್ಸಾಂಬಾ ಚಂದ್ರಾರ್ಧಶೇಖರಾ।
ನೀಲಗ್ರೀವಾ ತ್ರಿಣೇತ್ರಾಚಬ್ರಹ್ಮಸೂತ್ರಸಮನ್ವಿತಾ॥
ಈದೃಶೀಪರಮಾಮೂರ್ತಿರ್ಯಸ್ಯ ಸಾಧಾರಣಾಪರಾ।
ತದೇವ ಪರಮಂ ಸಾಕ್ಷಾತ್ಪರಂ ನಾನ್ಯನ್ನಸಂಶಯಃ॥
ಪರಬ್ರಹ್ಮ ಸ ಈಶಾನೋ ಏಕೋ ರುದ್ರಸ್ಯ ಏವ ಚ।
ಭವಾನ್‌ಮಹೇಶ್ವರ ಸಾಕ್ಷಾನ್ಮಹಾದೇವೋ ನ ಸಂಶಯಃ॥
ಯಸ್ಮಾಂತಸ್ಥಾನಿ ಭೂತಾನಿ ಯೇನೇದಂ ಭ್ರಾಮ್ಯತೇ ಜಗತ್।
ಬ್ರಹ್ಮೇತಿ ಯಂ ಜಗುರ್ವೇದಾಸ್ತಂ ರುದ್ರಂ ಶರಣಂ ವ್ರಜ॥ —ಸೂರ್ಯಪುರಾಣ

ಒತ್ತಿ ವೇದಾಸ್ತಮೆನೆ ರುದ್ರಂ ಶರಣಮೆಂದೆ
ನುತ್ತುಂ ವ್ರಜಯೆನೆ ಸೂರ್ಯಪುರಾಣಮಂತೆ ತದೆ
ನುತ್ತೆ ನಿತ್ಯಂ ಪರಂ ಬ್ರಹ್ಮೇತಿಯೆನೆ ಸ ಏಕೋೀಯೆನುತೆ ರುದ್ರೋೀಯೆನೆ
ಬಿತ್ತರಿಸುತುಂ ಸ ಈಶಾನಃ ಸ ಭಗವಾನೆ
ನುತ್ತೆ ಸ ಮಹೇಶ್ವರೋೀಯೆಂದೆನುತ್ತೆ ಸಯ್ಯೆಂದೆ
ನುತ್ತುಮೇಗಂ ಮಹಾದೇವೋೀಯೆನೆ ಯಥರ್ವಮಂತೆ †ತತ್ಪರಮೆನುತ್ತೆ ೩೪

ಸಂತತಂ ಬ್ರಹ್ಮಯೆನುತ್ತೆ ವಿಭಾತಿನಯೆನುತ್ತು
ಮಂತೆ ತತ್ರಯೆನೆ ದೇವಾನರ್ಷಯೋೀಯೆನು
ತ್ತುಂ ತವೆ ನಪಿತರೋೀ ನ ಈಶ ತೇಪ್ರತಿಯೆನುತೆ ಬುಧ್ಯಸ್ವ ಸರ್ವಮೆನುತೆ
ಮುಂತೆ ಬುಧ್ವೇತಿ ಸ ಶಿವೋೀಯೆಂದೆನುತೆ ವಲಂ
ಸಂತಸದಿನೇಕೋೀಯೆನುತ್ತೆ ದೇವೋೀಯೆನು
ತ್ತಂತಿರದೆ ಸರ್ವಭೂತೇಷು ಗೂಢಸ್ಸರ್ವಯೆಂದದೇ ವ್ಯಾಪೀಯೆನೆ ೩೫

ಪ್ರೀತಿಯಿಂ ಸರ್ವಭೂತಾಂತರಾತ್ಮಯೆಃನು
ತ್ತೀ ತೆಱದಿನಿದೆ ವಲಂ ಬ್ರಹ್ಮೋಪನಿಷದುಕ್ತಿ
ಮಾತೇಂ *ಋತಂ ಸತ್ಯಮೆನೆ ಪರಬ್ರಹ್ಮಪುರುಷಂ ಕೃಷ್ಣಪಿಂಗಳಮೆನೆ
ರೀತಿಯಿಂದೂರ್ಧ್ವರೇತಂ ವಿರೂಪಾಕ್ಷಮೆನು§
ತೋತು ತಾಂ ವಿಶ್ವರೂಪಾಯವೈಯೆಂದೆನುತೆ
ಶಾತದಿಂದಂ ನಮೋೀಯೆನೆ ಯಜುರ್ವೇದಂ ಋತಂ ಸತ್ಯಮೆಂದೆನುತ್ತುಂ ೩೬

---

† ತತ್ಪರಂ ಬ್ರಹ್ಮವಿಭಾತಿನತತ್ರ ದೇವಾನರ್ಷಯೋ ನ ಪಿತರೋ ನ ಈಶತೇಪ್ರತಿಬುಧ್ಯಸ್ವ
ಸರ್ವಂ ಬುಧ್ವೇತಿಸಶಿವ ಏಕೋ ದೇವಸ್ಸರ್ವಭೂತೇಷು ಗೂಢಸ್ಸರ್ವವ್ಯಾಪೀ
ಸರ್ವಭೂತಾಂತರಾತ್ಮಾ ॥ —ಬ್ರಹ್ಮೋಪನಿಷತ್

* ಋತಂ ಸತ್ಯಂ ಪರಬ್ರಹ್ಮಪುರುಷಂ ಕೃಷ್ಣಪಿಂಗಳಂ ।
ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಾಯವೈನಮಃ ॥ —ಯಜುರ್ವೇದ

§ ತಮೇಕಂ ಪುರುಷಂ ರುದ್ರಂ ಪುರುಹೂತಂ ಪುರುಷ್ಟುತಂ ।
ಗಹ್ವರಂ ಗಗನಾಂತಸ್ಥಂ ರೇಖಾಯಾಶ್ಚೋರ್ಧ್ವತಸ್ಥಿತಂ ॥
ತತ್ರಾಪಿ ರಂಧ್ರಂ ಗಗನ ಮೋಂಕಾರಂ ಪರಮೇಶ್ವರಂ ॥
ವಾಲಾಗ್ರಮಾತ್ರಂ ತನ್ಮಧ್ಯೇ ಋತಂ ಪರಮಕಾರಣಂ ॥
ಸತ್ಯಂ ಬ್ರಹ್ಮ ಮಹಾದೇವಂ ಪುರುಷಂ ಕೃಷ್ಣಪಿಂಗಳಂ ॥
ಊರ್ಧ್ವರೇತಂ ತಮೀಶಾನಂ ವಿರೂಪಾಕ್ಷಮಜೋದ್ಭವಂ ॥ —ಲೈಂಗ್ಯ

ವಲಮುದೆ §ಪರಬ್ರಹ್ಮಪುರುಷಮೆನೆ ಕೃಷ್ಣಪಿಂ
ಗಲಮೆನುತುಮೂರ್ಧ್ವರೇತಂ ತಮೀಶಾನಮೆಂ
ದುಲಿವುತುಂ ತನ್ಮೇ ಮನಃಎಂದೆನುತ್ತೆ ಶಿವಸಂಕಲ್ಪಮಸ್ತುಯೆನುತೆ
ಎಳಲೆ ಶಿವಸಂಕಲ್ಪಮಿದೆ *ಋತಂ ಸತ್ಯಮೆನೆ
ಸಲೆ ಪರಬ್ರಹ್ಮಪುರುಷಂ ಸೋಮಮೆಂದೆನುತೆ
ನಲಿದೀಶ್ವರಮೆನುತ್ತುಮೂರ್ಧ್ವರೇತಸಮೆನುತು ಮುತ್ಪತ್ತಿಯೆಂದೆನುತ್ತುಂ ೩೭

ಸ್ಥಿತಿಯೆನುತೆ ಸಂಹಾರಕಾರಣಮೆನುತ್ತಮಲ
ಮತಿಯಿಂದೆ ವಿಶ್ವರೂಪಂ ವಿರೂಪಾಕ್ಷಮೆನು
ತತಿಶಯದೆ ಚಂದ್ರಮೌಲಿಂ ಘೃಣಾನಿಧಿಯೆನುತ್ತೆ ಹಿರಣ್ಯಬಾಹುಮೆನುತೆ
ಸತತಮದ್ವಂದ್ವಂ ಹಿರಣ್ಯಪತಿಮೀಶ್ವರಮೆ
ನುತುಮಂಬಿಕಾಯಾಃ ಪತಿಯೆನುತ್ತೆ ಸಾಕ್ಷಾದೆ
ನುತುಮುಮಾಯಾಃ ಪತಿಮೆನುತುಮಕ್ರಿಯಮೆನುತ್ತೆ ಪರತತ್ವಯೆಂದೆನುತ್ತುಂ ೩೮

---

§ ಋತಂ ಸತ್ಯಂ ಪರಬ್ರಹ್ಮಪುರುಷಂ ಕೃಷ್ಣಪಿಂಗಳಂ ।
ಊರ್ಧ್ವರೇತಂ ತಮೀಶಾನಂ ತನ್ಮೇ ಮನಶ್ಶಿವ ಸಂಕಲ್ಪಮಸ್ತು ॥

—ಶಿವಸಂಕಲ್ಪೋಪನಿಷತ್

* ಋತಂ ಸತ್ಯಂ ಪರಬ್ರಹ್ಮಪುರುಷಂ ಸೋಮಮೀಶ್ವರಂ ಊರ್ಧ್ವರೇತಸಮುತ್ಪತ್ತಿ
ಸ್ಥಿತಿ ಸಂಹಾರಕಾರಣಂ ವಿಶ್ವರೂಪಂ ವಿರೂಪಾಕ್ಷಂ ಚಂದ್ರಮೌಳಿಂ ಘೃಣಾನಿಧಿಂ ।
ಹಿರಣ ಬಾಹುಮದ್ವಂದ್ವಂ ಹಿರಣ್ಯಪತಿಮೀಶ್ವರಂ ಅಂಬಿಕಾಯಾಃ ಪತಿಂ
ಸಾಕ್ಷಾದುಮಾಯಾಃ ಪತಿಮಕ್ರಿಯಂ।
ಪರತತ್ವಸಮಾಖ್ಯಂ ಚ ಸಂಧ್ಯಾಯಂತಿ ಸಂತತಂ ।
ತೈತ್ತಿರೀಯಶ್ರುತಿಸ್ಸಾಧ್ವೀಪ್ರಾಹೈವಖಲುಸಾದರಂ ॥

—ಮಾನವಪುರಾಣಂ

ಅಂತುಟು ಸಮಾಖ್ಯಂಚ ಶಿವಮೆನಲ್ ಧ್ಯಾಯಂತಿ
ಸಂತತಂ ತೈತ್ತಿರೀಯಶ್ರುತಿಃ ಯೆಂದೆನು
ತ್ತುಂ ತೀವಿ ಸಾಧ್ವೀಯೆನುತ್ತೆ ತಾಂ ಪ್ರಾಹೈವ ಖಲು ಸಾದರಂ ದಲೆನುತೆ
ಇಂತು ಮಾನವಪುರಾಣಂ †ತಮೇಕಮೆನುತ್ತೆ
ಸಂತಸದೆ ಪುರುಷಮೆನುತುಂ ರುದ್ರಮೆಂದೆನು
ತ್ತುಂ ತತ್ವಮಾಗಿ ಪುರುಹೂತಂ ಪುರುಷ್ಟುತಂ ಗಹ್ವರಂ ಗಗನಯೆನುತುಂ ೪೯

ಅನುವಿನಿಂದಂತಸ್ಥಮೆನುತೆ ರೇಖಾಯಾಶ್ಚ
ಯೆನುತೂರ್ಧ್ವತಸ್ಥಿತಂ ತತ್ರಾಪಿ ರಂಧ್ರಂ ಗ
ಗನಮೆನುತುಮೋಂಕಾರಮೆನುತೆ ಪರಮೇಶ್ವರಂ ವಾಲಾಗ್ರಯೆನುತೆ ಮಾತ್ರಂ
ಎನುತೆ ತನ್ಮಧ್ಯೇ ಋತಂ ಪರಮಕಾರಣಂ
ಎನುತೆ ಸತ್ಯಂ ಬ್ರಹ್ಮಯೆನೆ ಮಹಾದೇವಮೆಂ
ದೆನೆ ಪುರುಷಮೆನೆ ಕೃಷ್ಣಪಿಂಗಳಮೆನುತುಮೂರ್ಧ್ವರೇತಂ ತಮೆಂದೆನುತ್ತುಂ ೫೦

ಅನಿಶಮೀಶಾನಮೆನುತುಂ ವಿರೂಪಾಕ್ಷಮೆಂ
ದೆನುತಜೋದ್ಭವಮೆನುತೆ ಲೈಂಗ್ಯಮೀ ತೆಱದೊಳಿದೆ
ಘನದೆ ಪರಮಾತ್ಮಾ*ನಮಾನಂದಮೆನುತೆ ಪರಮಾಕಾಶಮೆನುತೀಶ್ವರಂ
ಎನೆ ಋತಂ ಸತ್ಯಂ ಪರಬ್ರಹ್ಮ ಸಾಂಬಮೆಂ
ದೆನುತೆ ಸಂಸಾರಭೇಷಜಮೂರ್ಧ್ವರೇತಮೆಂ
ದೆನೆ ವಿರೂಪಾಕ್ಷಮೆನುತುಂ ವಿಶ್ವರೂಪಮೆನುತುಂ ಮಹೇಶ್ವರಮೆನುತಿದೇ ೫೧

---

† ತಮೇಕಂ ಪುರುಷಂ ರುದ್ರಂ ಪುರುಹೂತಂ ಪುರುಷ್ಟುತಂ ।
ಗಹ್ವರಂ ಗಗನಾಂತಸ್ಥಂ ರೇಖಾಯಾಶ್ಚೋರ್ಧ್ವತಸ್ಥಿತಂ ॥
ತತ್ರಾಪಿರಂಧ್ರಂ ಗಗನಮೋಂಕಾರಂ ಪರಮೇಶ್ವರಂ ।
ವಾಲಾಗ್ರಮಾತ್ರಂ ತನ್ಮಧ್ಯೇಋತಂ ಪರಮಕಾರಣಂ ।
ಸತ್ಯಂ ಬ್ರಹ್ಮಮಹಾದೇವಂ ಪುರುಷಂ ಕೃಷ್ಣಪಿಂಗಳಂ ।
ಊರ್ಧ್ವರೇತಂ ತಮೀಶಾನಂ ವಿರೂಪಾಕ್ಷಮಜೋದ್ಭವಂ ॥ —ಲೈಂಗ್ಯ

* ಪರಮಾತ್ಮಾನಮಾನಂದಂ ಪರಮಾಕಾಶಮೀಶ್ವರಂ ।
ಋತಂ ಸತ್ಯಂ ಪರಬ್ರಹ್ಮ ಸಾಂಬಂ ಸಂಸಾರಭೇಷಜಂ ।
ಊರ್ಧ್ವರೇತಂ ವಿರೂಪಾಕ್ಷಂ ವಿಶ್ವರೂಪಂ ಮಹೇಶ್ವರಂ ॥ —ಸೂತಸಂಹಿತಾ

ಸೂತಸಂಹಿತೆ ಬಳಿಕೆ §ತೇನೇದಮೆಂದೆನು
ತ್ತೋತು ಪೂರ್ಣಮೆನೆ ಪುರುಷೇಣ ಸರ್ವಮೆನುತ್ತು
ಮೀ ತೆಱದಿನುಪನಿಷತ್ತಿದೆ *ಪುರುಷ ಏವೇದಮೆನೆ ಸರ್ವಮೆನುತೆಯದೆನೆ
ಭೂತಮೆನೆ ಯಚ್ಚ್ಚಭವ್ಯಮೆನೆ ಪರಮ ಯಜುಸ್ಸು
ಪೂತತ್ವದಿಂದೆ †ಸರ್ವಂ ವೈ ಖಲುಯೆನುತ್ತೆ
ಮಾತೇನಿದಂ ಬ್ರಹ್ಮ ಸರ್ವೋಯೆನುತ್ತೆ ವೈ ರುದ್ರೋಯೆನುತ್ತೆ ಮತ್ತಂ ೪೨

ಏನೆಂಬೆನೀಶ್ವರಃ ಪುರುಷೋಯೆನುತ್ತೆ ಸು
ಜ್ಞಾನದಿಂ ವೈ ಮಹಾದೇವೋಯೆನುತೆ ಮಹೇ
ಶಾನಃ ಪರಶ್ಶಿವೋಯೆಂದೆನುತ್ತಂತಿರೇವಂ ವಿಧೋಯೆಂದೆನುತ್ತಂ
ಆನಂದದಿಂ ಮಹಾದೇವೋಯೆನುತೆ ಮಹೇ
ಶಾನಃ ಪರಶ್ಶಿವೋಯೆನೆ ಲೈಂಗ್ಯಮವಿರತಮ
ನೂನದಿಂ ‡ಬ್ರಹ್ಮರುದ್ರಸ್ತಥೇಶಾನ ಈಶೋ ಯೆನುತ್ತಾತ್ಮಾಯೆನೆ ೪೩

---

§ ತೇನೇದಂ ಪೂರ್ಣಂ ಪುರುಷೇಣ ಸರ್ವಂ ॥

—ಉಪನಿಷತ್

* ಪುರುಷ ಏ ವೇದಂ ಸರ್ವಂ ಯದ್ಭೂತಂ ಯಚ್ಚಭವ್ಯಂ ॥

—ಯಜುಸ್ಸು

† ಸರ್ವಂ ವೈಖಲ್ವಿದಂ ಬ್ರಹ್ಮಸರ್ವೋ ವೈರುದ್ರಈಶ್ವರಃ ।
ಪುರುಷೋ ವೈ ಮಹಾದೇವೋ ಮಹೇಶಾನಃ ಪರಶ್ಶಿವಃ ।
ಏವಂ ವಿಧೋ ಮಹಾದೇವೋ ಮಹೇಶಾನಃ ಪರಶ್ಶಿವಃ ॥

—ಲೈಂಗ್ಯ

‡ ಬ್ರಹ್ಮರುದ್ರಸ್ತಥೇಶಾನಈಶಆತ್ಮಾಹರೋಕ್ಷರಃ ।
ಏವಮಾದೀನಿನಾಮಾನಿ ತಸ್ಯಾ ಸಾಧಾರಣಾನಿ ವೈ ॥
ತಸ್ಯ ಸಾಧಾರಣಾನ್ಯೇವ ನೈವ ನಾಮಾನಿ ಕೇವಲಂ ।
ಶಿವಶ್ಶಂಕರಈಶಾನಶ್ಶರ್ವೋ ರುದ್ರಃ ಪರಂ ಪದಂ ॥
ತತ್ವಂ ಬ್ರಹ್ಮ ಮಹಾದೇವ ಈಶ್ವರಃ ಪರಮೇಶ್ವರಃ ।
ರೂಢ್ಯಾಶಿವಾದಿನಾಮಾನಿ ವರ್ತಂತೇ ಪರಮೇ ಪದೇ ॥

—ಸೌರಸಂಹಿತೆ

ಪ್ರೇಮದೆ ಹರೋಕ್ಷರೋಯೆನುತೇವಮಾದೀನಿ
ನಾಮಾನಿಯೆಂದೆನುತೆ ತಸ್ಯಯೆಂದೆನುತತಿ
ಕ್ಷೇಮದಿನಸಾಧಾರಣಾನಿ ವೈ ತಸ್ಯ ಸಾಧಾರಣಾನ್ಯೇವನ್ಯೈವ
ನಾಮಾನಿ ಕೇವಲಮೆನುತೆ ಶಿವೋಯೆಂದೆನುತೆ
ರಾಮಣೀಯದೆ ಶಂಕರೋಯೆಂದೆನುತೆ ಬಳಿ
ಕ್ಕೇ ಮಾತೊ ವಾದಿ ಈಶಾನೋಯೆನುತ್ತೆ ಶರ್ವೋಯೆನುತೆ ರುದ್ರೋಯೆನೆ ೪೪

ಅನಿಶಂ ಪರಂ ಪದಂ ತತ್ವಮೆನುತುಂ ಬ್ರಹ್ಮ
ಯೆನುತೆ ಸಂತಸದಿಂ ಮಹಾದೇವ ಈಶ್ವರೋ
ಯೆನುತೆ ಪರಮೇಶ್ವರೋ ರೂಢ್ಯಾ ಶಿವಾದಿ ನಾಮಾನಿಯೆಂದೆನುತೆ ಬಳಿಕಂ
ಘನದೆ ವರ್ತಂತೇಯೆನುತ್ತೆ ಪರಮೇ ಪದೇ
ಯೆನುತುಮಿದೆ ಸೌರಸಂಹಿತೆ *ಶಿವಶ್ಶಂಭುರೆಂ
ದೆನುತುಂ ಪರಬ್ರಹ್ಮಸತ್ಯಮೀಶಾನ ಯೆಂದೆನುತೀಶ್ವರೋಯೆನುತ್ತುಂ ೪೫

ಏವಮಾದೀನಿ ನಾಮಾನಿ ತಾನಿಯೆನುತ್ತು
ಮೋವೊ ತಾಂ ರೂಢ್ಯಾ ಪರಮಾತ್ಮನೋಯೆಂದು ಸ
ದ್ಭಾವದಿಂದೊರೆವುತಿದೆ ಪಾರಾಶರಪುರಾಣವಿಂತನಂತ ಶ್ರುತಿಗಳುಂ
ಪಾವನೋಪನಿಷತ್ ಪುರಾಣ ಸ್ಮೃತೀತಿಹಾ
ಸಾವಲಿಗಳುಂ ಪರಬ್ರಹ್ಮವೆನೆ ಬೇಱಿಲ್ಲ
ಭಾವಿಸೆ ಶಿವಾದಿನಾಮದೊಳೊಂದು ನಾಮವೆಂದುಲಿವುತಿವೆ ತನ್ನಿಮಿತ್ತಂ ೪೬

ಆ ಪರಬ್ರಹ್ಮಂ ನಿರಾಕಾರವೀ ಪಾರ್ವ
ತೀಪನಾಕಾರಂ ಪರಬ್ರಹ್ಮವಲ್ತೆಂದು
ಪಾಪಿ ನೀನಿಂತು ಕಾಳ್ಗೆಡೆಯದಿರ್ ಮುನ್ನಿಂತು ನುಡಿದಾ ಸನತ್ ಸುಜಾತಂ
ಶಾಪಂಬಡೆದು ದಿವ್ಯವತ್ಸರಸಹಸ್ರವನು
ತಾಪಿಸುತ್ತುಷ್ಟ್ರವಾಗಿರನೇ ಬಿಡಾ ಮಾತ
ನೇಪರಿಯೊಳಂ ಶ್ರೀ ಶಿವಾದ್ವೈತಸಾಕಾರಸಿದ್ಧಾಂತಮೇ ಪ್ರಮಾಣಂ ೪೭

---

* ಶಿವಶ್ಶಂಭುಃ ಪರಬ್ರಹ್ಮ ಸತ್ಯಮೀಶಾನ ಈಶ್ವರಃ ।
ಏವಮಾದೀನಿನಾಮಾನಿ ತಾನಿರೂಢ್ಯಾಪರಾತ್ಮನಃ ॥ —ಪಾರಾಶರಪುರಾಣ

ಎಂದಿಂತುಪದ್ಮಣಾರ್ಯರ್ ಪ್ರತಿಷ್ಠಿಸಿ ವಿಬುಧ
ವೃಂದಂ ಪೊಗಳೆಯಾ ಬಿರುದನಾಂತುಸಿರ್ದರೀಶ
ನಂದಮಾರ್ಗಱಿಯಲಕ್ಕುಂ †ಚಕಿತಮೆನುತುಮಭಿದತ್ತೇ ಶ್ರುತಿಯೆನೆ ಯತೋ
ಯೆಂದುವಾಚೋ ನಿವರ್ತಂತೇಯೆನುತ್ತೆ ಮುದ
ದಿಂದಮಪ್ರಾಪ್ಯಮನಸಾಸಹ ಯೆನಲ್ ಪಲವ
ರಿಂದಮೇಂ ಪೇಳಲುಂ ನುಡಿಯಲುಂ ನೆನೆಯಲುಂ ನಿನ್ನೆನ್ನ ತನ್ನ ಪವಣೇ ೪೮

ವಿನಯದಿಂ *ಬ್ರಹ್ಮಾಯೆನುತ್ತೆ ವಿಷ್ಣ್ವಿಂದ್ರಯೆಂ
ದೆನುತೆ ಚಂದ್ರಾದ್ಯಾಯೆನುತೆ ಯಸ್ಯ ದೇವಸ್ಯ
ಯೆನೆ ಕಿಂಕರಾ ಯಸ್ಯಯೆನುತುಂ ಪ್ರಸಾದಾದೆನುತ್ತೆ ಜೀವಂತಿಯೆನುತೆ
ಅನುವಿಂ ಸದೇವೋಯೆನುತೆ ಪಾರ್ವತೀಪತಿಃ
ಯೆನಲಜಹರೀಂದ್ರಚಂದ್ರಾದ್ಯರಾವಂಗೆ ಭೃ
ತ್ಯನಿಕಾಯಮಾವಾತನಾ ಪ್ರಸಾದದೆ ಬಾಳ್ವರಾ ದೇವನಗಜಾಧಿಪಂ ೪೯

ಅರರೇ §ನ ಜಾನಂತಿಯೆನೆ ಪರಂ ಭಾವಮೆನೆ
ಕರಮೆ ಯಸ್ಯಯೆನೆ ಮೇಣ್ ಬ್ರಹ್ಮಾದಯೋಯೆನುತೆ
ಭರದಿಂ ಸುರಾಃಯೆನುತ್ತದ್ಯಾಪಿ ನವಯುಮೆನೆ ವಿದ್ಮಃ ಸದೇವೋಯೆನೆ
ಹರಿಸದಿಂ ತ್ರಿಪುರಾಂತಕೋಯೆನಲಜಾದ್ಯಖಿಲ
ಸುರರಾವನುರು ಭಾವಮಂ ತಿಳಿಯರಾವುಮದ
ಱಿರವನೀಗಳುಮಱಿಯೆವಂತಪ್ಪ ದೇವಂ ಪುರತ್ರಯಾಂತಕನೆನಿಕ್ಕುಂ ೫೦

† ಚಕಿತಮಭಿಧತ್ತೇ ಶ್ರುತಿರ್ಯತೋ ವಾಚೋ ನಿವರ್ತಂತೇ ಅಪ್ರಾಪ್ಯಮನಸಾಸಹ ॥

* ಬ್ರಹ್ಮಾವಿಷ್ಣ್ವಿಂದ್ರಚಂದ್ರಾದ್ಯಾ ಯಸ್ಯ ದೇವಸ್ಯ ಕಿಂಕರಾಃ ।
ಯಸ್ಯ ಪ್ರಸಾದಾಜ್ಜೀವಂತಿ ಸ ದೇವಃ ಪಾರ್ವತೀಪತಿಃ ॥

§ ನ ಜಾನಂತಿ ಪರಂಭಾವಂ ಯಸ್ಯ ಬ್ರಹ್ಮಾದಯಸ್ಸುರಾಃ ।
ಅದ್ಯಾಪಿ ನವಯುಂ ವಿದ್ಮಸ್ಸದೇವಸ್ತ್ರಿಪುರಾಂತಕಃ ॥

ಸಲೆ *ವಿಶ್ವತಶ್ಚಕ್ಷುರೀಶೋಥಯೆಂದೆನು
ತ್ತೊಲವಿಂ ತ್ರಿಶೂಲೀಯೆನುತೆ ವಿಶ್ವತೋಯೆನು
ತ್ತೆಲೆ ಮುಖೋಯೆನುತೆ ಜನಕಃ ಸರ್ವಯೆನುತೆ ಭೂತಾನಾಮೆನುತೆ ಸಹಜದಿಂ
ಉಲಿದೇಕ ಏವಯೆನುತೆ ಮಹೇಶ್ವರೋಯೆನಲ
ಖಿಲನೇತ್ರನೀಶಂ ತ್ರಿಶೂಲಿಯಖಿಲ ಮುಖಂ ವಿ
ಮಲನಖಿಲ ಭೂತಜನಕಂ ಮಹೇಶ್ವರನೊರ್ವನೇ ದ್ವಿತೀಯಂ ದಲುಂಟೇ ೫೧

†ನ ಯಥಾಯೆನುತ್ತೆ ಕೂರ್ಮರೋಮಾಣಿಯೆಂದೆನುತೆ
ನಯದೆ ದಲ್ ಶೃಂಗಂ ನ ನರಮಸ್ತಕೇಯೆನುತೆ
ನ ಯಥಾಸ್ತಿಯೆನೆ ವಿಯತ್ಪುಷ್ಪಂ ನಯೆನೆ ತಥಾಸ್ತಿ ಹರಾತ್‌ಪರೋಯೆಂದೆನೆ
ನಿಯತಿಯಿದು ಕೂರ್ಮಂಗೆ ರೋಮವಿಲ್ಲೆಂತುಟಾ
ರಯೆ ಕೋಡು ಮನುಜಮಸ್ತಕದೊಳೆಂತಿಲ್ಲ ನಿ
ಶ್ಚಯಮಾಗರಲ್ ನ ಭದೊಳಿಲ್ಲೆಂತುಟಂತೆ ಹರನಿಂದಧಿಕಮಿಲ್ಲದು ನಿಜಂ ೫೨

ಮತ್ತೆ ಕೇಳ್ §ಶೃಣ್ವಂತು ದೇವತಾಃ ಸರ್ವಾಯೆ
ನುತ್ತೆಯ್ದೆ ಸತ್ಯಮಸ್ಮತ್ಪರಮೆನುತೆ ಭಾಷಿ
ಸುತ್ತುಂ ವಚಃಯೆನುತೆ ನಾಸ್ತಿ ರುದ್ರಾನ್ಮಹಾದೇವಾದಧಿಕಮೆನುತ್ತೇ
ಬಿತ್ತರಿಸಿ ದೇವತಾಂತರಮೆನಲಖಿಲ ಸುರರ
ಮೊತ್ತವಾಲಿಪುದೆಮ್ಮ ಘನ ಸತ್ಯವಾಕ್ಯಮಂ
ಸುತ್ತೇನೊ ರುದ್ರನೆನಿಸುವ ಮಹಾದೇವಂಗಧಿಕ ದೈವವಿಲ್ಲೆಲ್ಲಿಯುಂ ೫೩

---

* ವಿಶ್ವತಶ್ಚಕ್ಷುರೀಶೋಥತ್ರಿಶೂಲೀವಿಶ್ವತೋಮುಖಃ ।
ಜನಕಸ್ಸರ್ವಭೂತಾನಾಮೇಕ ಏವ ಮಹೇಶ್ವರಃ ॥

† ನಯಥಾಕೂರ್ಮರೋಮಾಣಿ ಶೃಂಗಂ ನ ನರಮಸ್ತಕೇ ।
ನ ಯಥಾಸ್ತಿ ವಿಯತ್‌ಪುಷ್ಪಂ ನ ತಥಾಸ್ತಿಹರಾತ್‌ಪರಃ ॥

§ ಶೃಣ್ವಂತು ದೇವತಾಸ್ಸರ್ವಾಸ್ಸತ್ಯಮಸ್ಮತ್‌ಪರಂ ವಚಃ ।
ನಾಸ್ತಿ ರುದ್ರಾನ್ಮಹಾದೇವಾದಧಿಕಂ ದೇವತಾಂತರಂ ॥
—ಆದಿತ್ಯಪುರಾಣ

ಇಂತು ವೇದಂಗಳ್ ಮಹೇಶನೇ ಪರವೆಂದ
ನಂತ ಪ್ರಕಾರದಿಂ ಬಣ್ಣಿಸಿದವೀ ಕಥನ
ಮಂ ತಿಳಿಪಿತಾದಿತ್ಯಪೌರಾಣವಿನ್ನೆನೆಯದಿರು ಹರಿಗಿರಿಯ ಸುದ್ದಿಯಂ
ಭ್ರಾಂತ ಕೇಳ್ ವೇದಾದಿಯೊಳ್ ಸ್ವರಮುದಾವುದದ
ಱಂತದೊಳ್ ಸುಪ್ರತಿಷ್ಠಿತಮಾವುದಾ ಪ್ರಣವ
ದಂತಸ್ಥನೀಶನಜಹರಿಗಳಲ್ಲಿಗೆ ಸಲ್ಲರಿದು ತೈತ್ತಿರೀಯ ಸಿದ್ಧಂ ೫೪

ಆವನಂತರ್ಯಾಮಿರೂಪದಿಂದೆಮ್ಮ ಬು
ದ್ಧ್ಯಾವಲಿಗಳಂ ಪ್ರೇರಿಸುವನಂತೆಸೆವ ಮಹಾ
ದೇವನುರು ತೇಜವಜ್ಞಾತಂ ರವಿಗೆ ರವಿವರೇಣ್ಯಂ ಪರಮಕಾರಣಂ
ಸೇವಿಸುತ್ತಿರ್ಪೆವಾವದನೆಂಬ ವೇದಮನ
ಹೋ ವಿಸ್ತರಿಸಿ ಸಾಱುಗುಂ ಸ್ಕಾಂದವಂತಱಿನು
ಮಾವರಂ ಗಾಯತ್ರಿಯಿಂ ಸೇವ್ಯನಲ್ಲದಜ ಹರಿಗಳದಱಿಂ ಸೇವ್ಯರೇ ೫೫

ಸರ್ವಾಕ್ಷರಾಳಿಗೀಶ್ವರನೊಡೆಯನೆಂದಿದೆ ಯ
ಜುರ್ವೇದವಾ ತೆಱದೆ ಸರ್ವ ವಿದ್ಯಾಳಿಗಂ
ಪಾರ್ವತೀಪತಿಯೆಂದದೇ ಪೇಳುತಿದೆ ಇವಱೊಳಜಹರಿಗಳೆಣಿಕೆಯುಂಟೇ
ಪಾರ್ವ ಕೇಳ್ಪರೆ ವಿತರ್ಕೆ ವಿಪುಲೆ ಪರಂಜ್ಯೋತಿ
ಶರ್ವಧರ್ಮಿಣಿ ಲಿಂಗಮೂರ್ತಿ ಸುಜ್ಞಾನಾದಿ
ಸರ್ವರೂಪಿಣಿ ಶಿವಸ್ವಾಭಾವಿಕ ಸುಶಕ್ತಿಯುಮೆಯೆಂದು ವೇದಸಿದ್ಧಂ ೫೬

ಈ ವಿಶ್ವವಂ ಸೃಜಿಸುವಲ್ಲಿ ಶಂಭುವಿನ ಲೀ
ಲಾವಿಡಂಬನದ ಹೊಱಗುಂಡನಾಗಿರ್ಪುದಱಿ
ನಾ ವಿಷ್ಣುಗಾದುದು ಕಲತ್ರಾಖ್ಯೆಯಾ ಶಿವನ ಬೀಜಂ ಪ್ರವರ್ಧಿಪುದಱಿಂ
ಭಾವಿಸಲ್ ಕ್ಷೇತ್ರಾಖ್ಯೆಯಾಯ್ತು ಶಿವವೀರ್ಯಮಂ
ಶ್ರೀವರಂ ತಾಳ್ದುದಱಿನಾಯ್ತು ಪ್ರಕೃತಿನಾಮ
ವಾ ವಿಭುವಿನುರು ತೇಜದಿಂ ತತ್ಪ್ರಪಂಚಮಂ ಪೆಱಲಾಯ್ತು ಯೋನಿನಾಮಂ ೫೭

ಅರರೆ ಗರ್ಭಾಷ್ಟಕದೊಳಾತ್ಮರ ಶಿವಜ್ಞಾನ
ದಿರವನಳಿವುದಱಿನಾ ಮಾಯಾಖ್ಯೆಯಾಯ್ತವರ
ನುರು ವಿಷಮಸಂಸೃತಿಯೊಳಗೆ ಕಟ್ಟಿಕೊಂಡಿರ್ಪುದಱಿನಾಯ್ತು ಪಾಶನಾಶಂ
ಹರನೆಸಪ ಸೃಷ್ಟ್ಯಾದಿಯ ಹಿರಣ್ಮಯಾಂಡ ಕಾ
ಕರವಾರಿಯಾದುದಱಿನಾದುದು ಜಲಾಖ್ಯವೀ
ಪರಿಯನಾ ಶ್ರುತಿ ಪುರಾಣಾದಿಗಳ್ ಸಾಱುತಿರೆ ಹರಿ ದೈವವೆಂತಾದನೈ ೫೮

ಅನುವದಿಸಿ *ತಚ್ಛೇಪಸೋಪಿ ಮಾಹಾತ್ಮ್ಯಮೆಂ
ದೆನೆ ಯುವಾಂದ್ರಷ್ಟುಂ ನಹಿ ಕ್ಷಮೌ ಸೂರಯೋ
ಯೆನೆ ಯತ್ ಪ್ರಪಶ್ಯಂತಿ ಯೆನಿಪತದ್ವಿಷ್ಣೋಃ ಪರಮಮೆನಿಪ ಪದಮೆನಿಪ್ಪಾ
ಮಿನುಪ ಪರಪುರುಷಲಿಂಗಂಬೊತ್ತು ತಮ್ಮ ತ
ಮ್ಮಿನಿಯರ್ಗೆ ವಾಣೀಂದಿರಾದಿಸತಿಯರ್ ಪ್ರಾಣ
ವನಿತೆಯರೆನಿಸಿ ಬಾಳ್ವರಲ್ಲಿ ಮತ್ಸರಿಪನಾವಂ ಸ್ಕಾಂದಮಿಂತೊರೆ[೧]ವು[೧]ದು ೫೯

ದಾಮೋದರನ ವಿಧಿಯೆನೇವೇಳ್ದಪೆಂ ವಾದಿ
ಭೂಮಿಗೋಮಿನಿಯರಿರ್ವರ್ ನಿನ್ನ ಭಾರ್ಯೆಯರ್
ಸಾಮಾನ್ಯದಿಂ ನರರ್ಗೆ ಪುದುವಾಳೆ ಹರಿ ನಿನ್ನ ಶರಣಪಾಲನಕಿನಿತುವುಂ
ಸಾಮರ್ಥ್ಯಮೊದವದಿರ್ಕೆಂದುಃ ದೂರ್ವಾಸನಧಿ
ಕಾಮರ್ಷದಿಂ ಶಪಿಸನೇ ಕ್ಷೀರಶರಧಿ ಮೇ
ಣಾ ಮುನಿಯ ಶಾಪದಿಂ ಸುರೆಯಾಗೆ ಕಾಶಿಗೆಯ್ತಂದು ಹರಿ ವಿಶ್ವಪತಿಯಂ ೬೦

---

* ತಚ್ಛೇಪಸೋಪಿ ಮಾಹಾತ್ಮ್ಯಂ ಯುವಾಂದ್ರಷ್ಟುಂ ನಹಿಕ್ಷಮೌ।
ಸೂರಯೋ ಯತ್ಪ್ರಪಶ್ಯಂತಿ ತದ್ವಿಷ್ಣೋಃ ಪರಮಂ ಪದಂ ॥
—ಸ್ಕಾಂದ

---

೧ ದು (ಬ)

ತನ್ನರುಣಜಲದಿಂ ವಿಶುದ್ಧಾಮೃತದೆ ಭಕ್ತಿ
ಯಿನ್ನೀಡುಮಭಿಷವಂಗೆಯ್ಸಿ ತದ್ವಾರ್ಧಿಯಂ
ಮುನ್ನಿನಂದದೆ ಪಡೆಯನೇ ಕೃಷ್ಣನೆರ್ದೆ ಕೃಷ್ಣಮಾಗದೇ ಮುನಿಪನೊದೆಯೆ
ಇನ್ನೊರೆವುದೇನೊ ಹರಿ ರುಕ್ಮಿಣಿಗಳಾ ಮುನಿಪ
ನನ್ನಿಜರಥದೊಳಿಟ್ಟು ಪೆಗಲೊಳ್ ನೊಗಂಬೊತ್ತು
ಚೆನ್ನಮರೆ ಮೆಱೆಯಿಸರೆ ಅವನುಂಡು ಮಿಕ್ಕುದನುನುಂಡು ಕರುಣಂಬಡೆಯರೇ ೬೧

ವರಮುನಿ ದಧೀಚಿಯೊದೆದೊಡೆ ಹರಿಯುರಂ ಲಕ್ಷ್ಮಿ
ಗಿರಲಾಸ್ಪದಂ ದಲಾಗದೆ ಹರನಿನುಪಮನ್ಯು
ತರತರದ ವರಮನಮೃತಾಬ್ಧಿಯಂ ಪಡೆದೀಂಟುತಿರೆ ಮುನಿಯ ಗಂಟಲಲ್ಲಿ
ಮುರವೈರಿ ಸಿಲ್ಕಲೆಲ್ಲಿಯ ಕಸನಿದೆಂದುಗುಳೆ
ಚರಣದೊಳ್ ಬಿಳ್ದು ನುತಿಗೆಯ್ದು ತನ್ಮುನಿಪಂಗೆ
ಸರಸಿಜಾಕ್ಷಂ ಶಿಷ್ಯನಾಗಿರಲ್ ಕ್ಷೀರಾಬ್ಧಿಯಂ ಪಡೆದದೇಂ ಬರ್ದುಕನೇ ೬೨

ವರ ಚತುರ್ಥಿಯ ಪೆಱೆಯನೀಕ್ಷಿಸಿ ನೆರೆದ ಪಳಿಗೆ
ವರ ರತ್ನಮಂ ಸ್ಯಮಂತಕವನಾಂ ತಂದೆನಿದು
ಕರಮಾತ್ಮಶುಧ್ಯರ್ಥಮೆನ್ನಿಂದೆ ಯದುಕುಲಕೆ ಕಾಣಿಸಿತು ಹರಿಗಮೆನಗಂ
ಸರಿಯಾದ ಪಿತೃಧನವಿದಂ ಬ್ರಹ್ಮಚರ್ಯಗುಣ
ನಿರತಂ ಸದಾ ಶೌಚಿ ಧರಿಸುಗುಂ ಮಿಕ್ಕವರ್
ಧರಿಸೆ ಕೊಲ್ಲುಮಿದಖಿಲ ರಾಷ್ಟ್ರೋಪಕಾರಿಧಾರ್ಯಂ ಸತ್ಯಭಾಮೆಯಿನಿದು ೬೩

ಎಲೆಲೆಯಕ್ರೂರ ಷೋಡಶಸಹಸ್ರಾಂಗನಾ
ಸ್ಖಲಿತಾತ್ಮನಾನಂತಱಿಂ ಪೊಱಲಶಕ್ತನೆಂ
ದುಲಿಯನೆ ಹರಿಯುದಱಿನವನಶುಚಿ ಕಾಮಿಕಡುಸಿತಗನೆಂದುಸಿರದೆ ಜನಂ
ಕುಲಧರ್ಮವಿದೆ ಗೋಪ ಗೋಪೀಜನಂಗೂಡಿ
ಹಲಿ ವರುಣನಟ್ಟಿದ ಕದಂಬಸ್ಥಮದ್ಯಮಂ
ಸಲೆ ಕುಡಿದು ಕೊರ್ಬನೆಯುವಂ ವಿಷ್ಣುವಲ್ತೆ ದೈವಂ ಸೀಧುವಂ ಗ್ರಹಿಪುದೇ ೬೪

ಅಂಬರೀಷಾವನಿಪಸುತೆಯ ಬಂಟಿಕೆಯ ಹರಿ
ಗಂಬರೀಷಂ ಮುಳಿಯನೆಯದಂ ಕಂಡು ಹರಿ
ಯಂ ಬಿಟ್ಟು ಪರ್ವತನುಮಾ ನಾರದನುಮಜ್ಞನಾಗಿ ಪೆಂಡಿರನಗಲ್ದು
ಪಂಬಲಿಸೆನುತೆ ವಿಷ್ಣುವಂ ಶಪಿಸೆ ಶಂಭುಪಾ
ದಂಬಿಡಿಯರೇ ಅಮೃತಮಥನಜನಿತವಿಷಾಗ್ನಿ
ಯಿಂ ಬೆಂದು ಹರಿಯಸಿತಮೂರ್ತಿ ಕರಿಗೊರಡಾಗೆ ನೀಲಗಳನುದ್ಧರಿಸನೇ ೬೫

ತ್ರಿಪುರದಹನಾರ್ಥಂ ತಪಂಗೆಯ್ದು ತದ್ರುದ್ರ
ಜಪಮಂ ಜಲಂಬೊಕ್ಕು ಕೋಟಿವಾರಂ ರಚಿಸಿ
ಕೃಪೆವಡೆಯನೇ ಮತ್ತೆ ಪಾದದೊಳ್ ನೆಗಳ್ದುದಂ ತಲೆಯಲ್ಲಿ ಪೊತ್ತು ಮಾಳ್ಪ
ವಿಪುಲ ಸದ್ಭೃತ್ಯನೆಂದಱಿಪುವೋಲ್ ಶಂಕರಂ
ಸ್ವಪದದಿಂದೊತ್ತಿ ತಳಕಿಳಿದ ಧರೆಯಂ ತೋಱಿ
ಯುಪರಿಗೆತ್ತನೇ ವೃಷಾಕೃತಿಯಾಂತು ಮೇಣಚ್ಯುತಂ ಶಂಭುಗಂ ಬಾಗನೇ ೬೬

ತಾರಕವಧಾರ್ಥಮಿಂದ್ರಾದಿಗಳ್ ಕೂಡಿ ಹರಿ
ಮಾರನಂ ಹರನನಿಸಲಟ್ಟೆ ನಂದಿಗೆ ಸೆಡೆದು
ಚಾರು ಮೃದು ಸೀತಾತ್ತ ವಾಯುರೂಪದೆ ತೆಂಕಣಿಂ ಬಂದುದಱಿನೀಗಳುಂ
ಸಾರಮಾದುದು ತೆಂಬೆಲರ್ ಶರಂದೊಟ್ಟು ತ
ನ್ಮಾರನಱುವತ್ತುಸಾವಿರವರ್ಷಮಿರ್ದು ಪುರ
ವೈರಿ ನೋಳ್ಪುದುಮೂರ್ಧ್ವರೇತನೆಂದಱಿದುರಿವ ಸುತನ ಹರಿ ಬಿಟ್ಟೋಡನೇ ೬೭

ಮುನ್ನಖಿಲಮಂ ಪ್ರಳಯಮೆಯ್ದಿಸಿಯದಂ ತಮ
ಶ್ಛನ್ನಂಗೆಯಿಸಿ ಶಂಭುವೊರ್ವನೆ ನಿಜದೊಳಿರುತೆ
ತನ್ನ ಶಕ್ತಿಕ್ಷೋಭಮಂ ಲೀಲೆಯಿಂ ಮಾಡಿಯಜ ಹರಿಗಳಂ ಪುಟ್ಟಿಸೆ
ತನ್ನಳಿನಜಾಚ್ಯುತರ್ ತಮದಿನೀಶನನಱಿಯ
ದುನ್ನತ ಲಯಾಬ್ಧಿಯೊಳ್ ಮುಳುಗುತೇಳುತೆ ಬೀಳು
ತುನ್ನಡುಗುತರ್ಭಕರವೋಲಳುತಿರಲ್ಕವರವಸ್ಥೆಯಂ ನೋಡಿ ಭರ್ಗಂ ೬೮

ತತ್ತ್ವಮವನಳಿದು ಕಿಂಚಿಜ್ಜ್ಞಾನಮಂ ಬಲವ
ನಿತ್ತು ಹತಭಯರನಾಗಿಸೆ ಕೊರ್ವಿ ತಂತಮ್ಮೊ
ಳುತ್ತರಾಧಃಪ್ರಸಂಗದೆ ಮಲ್ಲರೆನೆ ಸಹಸ್ರಾಬ್ದಮುಂ ಸೆಣಸಿ ಬಳ್ದು
ಸತ್ತು ಪೋಗುತಿರೆ ಜೀವವನಿತ್ತು ಮಧ್ಯದ
ಲ್ಲುತ್ತುಂಗ ದಿವ್ಯ ಲಿಂಗಾಕೃತಿಯಿನುದಿಸೆಯನಿ
ಮಿತ್ತಬಂಧುವ ನೋಡಿ ಬೆಱಗುವಟ್ಟೇನೆಂದಱಿಯದೆ ತತ್ಕೃಪೆಯಿನಱಿದು ೬೯

ಈ ಲಿಂಗದಿಂದೊಗೆದೆವೆಮಗೆ ಪತಿಯಿದು ತವೋ
ಜಾಲವನಿದಲೆದುದಸುವಿತ್ತುದಿದಱಿಂದೆ ಸಂ
ಜ್ಞಾಲಾಭ ಮೂರ್ಚ್ಛಾರ್ಥಬಲಜ್ಞಾನ ಯೋಗ ಯುದ್ಧ ಲಯಂಗಳೆಮಗೊದವ್ರಗುಂ
ಮೂಲವೆಮಗೆಮ್ಮಜ್ಞತೆಯನಪಹರಿಸಿ ಜನಿಸಿ
ತೀ ಲಿಂಗದಡಿಮುಡಿಗಳಂ ಕಾಣ್ಬೆವೆಂದಜಾ
ಮೇಲನಡರ್ದುಂ ಹರಿಯಧಸ್ಸಿಂಗಿಳಿದುಮಱಸಿ ಕಾಣದೆ ಸಹಸ್ರವರ್ಷಂ ೭೦

ಪ್ರಸ್ತುತಮಿದಲ್ತೆಂದು ತಿರುಗಿ ವಿಧಿ ವಿಧುಗಳ್ ನ
ಮೋಸ್ತು ಶಿವಲಿಂಗಾಯಯೆಂದೀ ತೆಱದೆ ಬಹುವಿ
ಧಸ್ತುತಿಯನೆಸಗಿಯೊಡನೊಡನೆಱಗೆ ತಲ್ಲಿಂಗದೊಳ್ ಶಿವಂ ದೃಶ್ಯನಾಗಿ
ಶಸ್ತಮಾಗೆಲ್ಲವನಱಿಪಿ ಸೃಷ್ಟಿಯಂ ಸ್ಥಿತಿಯ
ನಸ್ತಮಿತದಿಂ ಮಾಡಿಮಾಜನರ್ ನೀವೆ ಪರ
ವಸ್ತುವೆಂದುಲಿವನಿತು ಶಕ್ತಿಯಿತ್ತೆಂ ಪೋಗಿಮೆಂಬಲ್ಲಿ ವಿಷ್ಣುವೆಂದಂ ೭೧

ಗುರುವೆಯವತಾರಶತಮಂ ಧರಿಸಿ ದನುಜರಂ
ಹರಿಪೊಡಾಯುಧಮನೀಯೆನೆ ಶಿವಂ ತ್ರ್ಯಕ್ಷಮಂ
ಹರಿಸದಿಂ ಮುಚ್ಚಿ ಜಾನಿಸೆಯವಱಿನಾ ತ್ರಿರೂಪದಿನಖಿಲ ರವಿತೇಜದಿಂ
ಬರೆ ಚಕ್ರವಲ್ಲಿ ಮಣಿಮಯವಾಗಿ ಷಡ್ಧಾರೆ
ವೆರಸು ಗದೆ ಪೊಣ್ಮಲೊಡನುಮೆಯಾಸ್ಯದಿಂ ಶಶಿ
ಸ್ಫುರಣ ಶಂಖಂ ಜನಿಸೆ ತನ್ನೇತ್ರದಿಂ ಮಾಲಯಂ ಸುವರ್ಣಾಬ್ಜಮೊಗೆಯೆ ೭೨

ಅವನಭವನಸುರಾರಿಗೀವಲ್ಲಿರಡು ತೋಳೊ
ಳವು ನಾಲ್ಕನೆಂತಾಂ ಧರಿಸುವೆನೆನೆ ಶಂಕರಂ
ಶಿವೆಯಿಂದೆರಡು ತೋಳ್ಗಳಂ ಕೊಡಿಸೆ ಹರಿ ಚತುರ್ಭುಜನೆನಿಸನೇ ಮತ್ತವಂ
ತವೆ ತಾಳ್ದು ತತ್ತದಾಖ್ಯಂಬಡೆಯನೇ ಇಂತು
ಶಿವನೀವೊಡಂ ಕಾಯ್ವೊಡಂ ತೆಗೆವೊಡಂ ಕರ್ತೃ
ನವಿವೇಕಿ ಹರಿಗೆ ದೈವತ್ವವೆಲ್ಲಿಯದು ನೀಂ ಪರಿಕಿಸೈ ಸ್ಕಾಂದದೊಳಿದಂ ೭೩

ಬಳಿಕೆ ಕೃತಯುಗದಾದಿಯೊಳ್ ಸುರರಸುರಬಾಧೆ
ಗಳವಳಿದು ದುಗ್ಧಾಬ್ಧಿಗೆಯ್ದಿ ಮೊಱೆಯಿಡೆ ಕೇಳ್ದು
ನಳಿನಾಕ್ಷನಸುರರಂ ಕೊಲ್ವೆನಂಜದಿರಿಯೆಂದಮರರಂ ಕಳಿಪಿ ಕೊರ್ವಿ
ಜಳಜಜಶಿವರ್ ಕಾಯಲಾರ್ಪರೇ ಶೂಲಿಗಂ
ತಿಳಿಯಲಾಂ ಪರವೆಂದು ನೆನೆದೇಳ್ದು ಚಕ್ರಮಂ
ಕೊಳಲೆಳಸೆ ಗಿರಿವೊಲದು ಚಲಿಸದಿರೆ ಶಕ್ತಿಗೆಟ್ಟು ಬಿಳ್ದೀಕ್ಷಿಸುವಿನಂ ೭೪

ಹರನ ಮಱೆದವರ ಭಾಗ್ಯಂ ನೋಡ ನೋಡಲಿಂ
ತಿರದೆ ಬಯಲಪ್ಪುದೆಂದಭಿನಯಿಸಿ ತೋಱುವೋಲ್
ಭರದೆ ಚಕ್ರವದು ಬಯಲಾಗೆ ಪಂಬಲಿಸಿ ಗೋಳಿಟ್ಟು ಮೇಣ್ ತಾನೆ ತಿಳಿದು
ಪರಮಪತಿಯಂ ಜನಕನಂ ವರದನಂ ಮಱೆದೊ
ಡರಿದೆ ದುಸ್ಥಿತಿಯೊಗೆವುದಾ ಶಿವನನರ್ಚಿಸಿದೊ
ಡರರೆ ಚಕ್ರಾದ್ಯಖಿಲವಂ ಕೊಡುವನೆಂದು ನಿಶ್ಚಯಿಸಿ ಶುದ್ಧಾತ್ಮನಾಗಿ ೭೫

ಸಲೆ ಯಥಾವಿಧಿಯಿನೀಶಾಣುವಂ ಜಪಿಸುತೆ ವಿ
ಮಲಶಂಭುಗೆ ಸಹಸ್ರಕಮಲಮಂ ನಿಚ್ಚಮವಿ
ಚಲನಿಯಮದಿಂದರ್ಪಿಸುತಿರೆ[1] ತದ್ಭಕ್ತಿಯನಱಿಯಲೊಂದರಲ್ಗುಂದಿಸೆ
ಮಲಹರನ ಮಾಯೆಯಿದೆನುತೆ ಹರಿ ನಿಜಾಂಬಕಕ
ಮಲಮಂ ತೆಗೆದು ಸಮರ್ಪಿಸೆ ಮೆಚ್ಚಿ ಶಂಕರನ
ತುಲರೂಪಮಂ ತೋಱೆ ಭಯಭಕ್ತಿಸಾತ್ವಿಕಾದಿಗಳಿನೊಡನೆಱಗಿ ನಿಂದು ೭೬

---

೧ ರ್ಚಿ (ಅ)

ಭಗವಾನ್ನೆನಿಪ ಮಹೇಶ್ವರ ನೀಂ ಪ್ರಸನ್ನನಾ
ಗಗಣಿತಾಹಂಕೃತಿರತಾತ್ಮಂಗೆ ನಿನ್ನ ಮಱಿ
ದು ಗವಿಪಮನಂಗೆ ನಿರ್ವೀರ್ಯಂಗೆ ದುರ್ಮತಿಗೆ ಜನ್ಮ ಮರಣ ಜರಾಳಿಯಿಂ
ನೆಗಳ್ದಶೋಕೋರ್ಮಿಸಂಕುಲದಿಂ ವಿಶಿಷ್ಟಮಾ
ಟ ಗಭೀರಭವಸಿಂಧುಪತಿತಂಗೆ ಕಾಮಾದ್ಯ
ರಿಗಳೆಂಬ ದುರ್ಗ್ರಹಗ್ರಸ್ತಂಗೆನುತ್ತಿಂತು ದೈನ್ಯದಿಂ ನುತಿಸಿ ಮತ್ತಂ ೭೭

ಎನ್ನಜ್ಞತೆಯಿನೆಸಗಿದೆಲ್ಲವಂ ಕ್ಷಮಿಸಿ ಮೇ
ಣೆನ್ನಿತ್ತಲೆನ್ನಯ ಮನವನಹಂಕಾರಯುತ
ಮಂ ನೆಗಳ್ಚಿಸದೆ ಯುಷ್ಮತ್ ಪ್ರಸಾದದೆ ಸಮಸ್ತಾವಸ್ಥೆಗಳೊಳೀಗಳುಂ
ನಿನ್ನಂಘ್ರಿಯೊಳ್ ನಿಲಿಸಿ ಜನ್ಮ ಜನ್ಮಾಂತರದೊ
ಳುನ್ನತಕೃಪೆಯನೆಸಗಿ ಬಹು ವಿಧದೆ ಬಂದಘವ
ನಿನ್ನದೆಂದೂಹಿಸದಿವಂ ಭೃತ್ಯನೆಂದು ಪೊರೆಯೆಂಬ ಹರಿಗೀಶನೆಂದಂ ೭೮

ಕಮಲಾಕ್ಷ ನಿನ್ನೀ ಸಹಸ್ರಾಪರಾಧಮಂ
ಕ್ಷಮಿಸಿದೆಂ ನಿನ್ನೊಳಪರಾಧವಿನಿತಿಲ್ಲ ನಿ
ನ್ನಮಿತ ಸದ್ಭಕ್ತಿನಿಷ್ಠಾನುತಿಗಳಿಂ ತುಷ್ಟನಾದೆನೊಲವಿಂ ನಿನ್ನಯಾ
ತಮಮಂ ಹರಿಸೆ ಚಕ್ರಮೊಯ್ದಿಂ ಮುಳಿದುದಲ್ತು
ಸುಮಹದಾಪತ್ತಿನೊಳ್ ಭೃತ್ಯರಂ ಕಾಯದವ
ನಮಮ ಪತಿಯಾಗನದಱಿಂ ವರದನಾದೆನಿತ್ತೆಂ ನಿನಗೆ ತಚ್ಚಕ್ರಮಂ ೭೯

ಬಳಿಕೆ ನಿನಗಿಷ್ಟಮಾದಾಯುಧಮನುಳಿದವಂ
ತಿಳಿಪು ಮೆಚ್ಚಿದೆನೀವೆನೆನುತೆ ಕೃಪೆಯಿಂ ಶಿವಂ
ಜಲಜಾಪ್ತಮಯಖಡ್ಗಮಂ ಸಶುಭವರ್ಮಮಂ ಮೇಘರೂಪನಿಷಂಗಮಂ
ಲಲಿತ ಶಮ ದಮ ಯಮಾತ್ಮಕ ಹಲ ಮುಸಲಮನು
ಜ್ವಳ ಭೂತಗುಣರೂಪ ಚಾಪ ಶರಮಂ ಕಂಜ
ಕಲಿತ ಮಾಲೆಯನಹೋಜ್ಯೋತಿರ್ಮಯ ಕಿರೀಟಮಂ ಸ್ವತೇಜೋಜನಿತಮಂ ೮೦

ಛಂದೋಮಯ ಸುಪರ್ಣನಂ ಸುದರ್ಶನಚಕ್ರ
ಮಂ ದಿವ್ಯಕರತಳದೊಳಾಂತು ಹರಿಗಿತ್ತೆಲೆಲೆ
ಕಂದ ಬೇಡಿನ್ನುಮೆನೆ ಶಂಕರನ ಸತ್ಕೃಪೆಗೆ ಶೌರಿ ಸಂತುಷ್ಟನಾಗಿ
ಒಂದುವಂ ಬಯಸೆಂ ಮದೀಶ ನೀನೆನಗೊಲ್ದೊ
ಡೆಂದಿಂಗೆಯುಂ ನಿನ್ನ ದಾಸ್ಯಮಂ ಕರುಣಿಸದ
ಱಿಂದಧಿಕಮುಂಟೆಯದನುಳ್ಳಂತ್ಯಜಂ ದ್ವಿಜನದಿಲ್ಲದಾ ದ್ವಿಜನಂತ್ಯಜಂ ೮೧

ಅಂತಱಿಂ ತದ್ದಾಸ್ಯಮೇ ಸಾಲ್ಗುಮೆನೆ ಮಹೇ
ಶಂ ತುಷ್ಟನಾಗಿ ಮದ್ದಾಸ್ಯಮಂ ನಿನಗಿತ್ತೆ
ನೆಂತೆನಲ್ ನೀಂ ಮೇಘರೂಪದಿಂದೊರ್ಮೆ ವೃಷರೂಪದಿಂದೊರ್ಮೆಯೆಮ್ಮಂ
ಆಂತೊಡುರುಮೇಘವಾಹಾಖ್ಯಂ ವೃಷಧ್ವಜಾ
ಖ್ಯಂ ತಡೆಯದಕ್ಕುಮಿವಱಿಂದೆಮಗೆನುತೆ ಹರಿಯ
ನಂತೆ ಗೆಯ್ಸನೆಯಿದಾ ಸ್ಕಾಂದಸಿದ್ಧಂ ಶಿವನಿನಿಂತು ಜೀವಿಪನಧಿಕನೇ ೮೨

ಮತಿಹೀನ ಕೇಳ್ ಮತ್ತಮೊರ್ಮೆ ಕೃಷ್ಣಂ ದ್ವಾರ
ವತಿಯಲ್ಲಿ ಜಾಂಬವತಿಯೊಳ್ ಪ್ರಸಾದಿತನಾಗಿ
ಸುತರಂ ನಿಜಸ್ತ್ರೀಸಹಸ್ರದೊಳ್ ಪಡೆವೆನೆಂದು ಶಕುಂತವರನನೇಱಿ
ನುತ ಸಾಲಸರ್ಜಖರ್ಜೂರ ಭೂರ್ಜಾರ್ಜುನೋ
ರ್ಜಿತ ಕುಜಲತಾಶಾಂತ ಖಗ ಮೃಗ ಮುನೀಂದ್ರಶೋ
ಭಿತ ಗಂಧಮಾದನನಗಕ್ಕೆಯ್ದಿಯಲ್ಲಿಯ ಬದರಿಕಾಶ್ರಮದೊಳೊಪ್ಪುವಾ ೮೩

ಉಪಮನ್ಯುಮುನಿಪನಂ ಕಂಡು ವಂದಿಸಿ ನುತಿಸೆ
ಕೃಪೆಯಿನವರಬ್ಜಾಕ್ಷನಂ ನೋಡಿ ಸತ್ಕರಿಸಿ
ತಪಮನಿಲ್ಲೆಸಗು ನಿನ್ನಿಷ್ಟಮಂ ಶಿವನಿತ್ತಪಂ ಪಿಂದೆ ಯದುವಂಶಜಂ
ವಿಪುಲ ಶಶಬಿಂದು ತಾಂ ಪ್ರಯುತ ಸುತ ಸುತೆಯರಂ
ತ್ರಿಪುರಾರಿಯಿಂ ಪಡೆದನಿಲ್ಲಿ ಕಾಶಿಯೊಳಂತೆ
ನೃಪತಿಸಗರಂ ಹರನನೊಲಿಸಿ ಷಷ್ಟಿಸಹಸ್ರಪುತ್ರರಂ ಪಡೆದನಂದು ೮೪

ಅರರೆ ಮನುಮುಖ್ಯರೀಶನನಿಲ್ಲಿ ಭಜಿಸಿ ತ
ಮ್ಮುರುವಂಶಮುಮನುದ್ಧರಿಸಿದರ್ ಸನತ್ಸುತಮು
ಖರನೇಕಸಿದ್ಧಿಯಂ ಪಡೆದರಾ ವ್ಯಾಸಾದಿಗಳ್ ಗ್ರಂಥಕಾರರಾಗಿ
ಚರಿಸಿದರ್ ಕಶ್ಯಪಪ್ರಭೃತಿಗಳ್ ಸೃಷ್ಟಿಕ್ಷ
ಮರೆನಿಸಿದರಾವುಂ ತ್ರಿಕಾಲಜ್ಞರಾದೆವಂ
ತಿರುಳಿದ ದಿವಿಜ ದನುಜ ಮನುಜರಿಷ್ಟಾರ್ಥಮಂ ಪಡೆದಾಢ್ಯರಾದರೊಲವಿಂ ೮೫

ದಾರಿದ್ರ್ಯದುರ್ಭಗಾಪಗತಿ ತಾಪತ್ರಯಾ
ದ್ಯೋರು ಭೀತಿಗಳಂ ಕೆಡಿಸಿ ಕಾಮಿತವನೊಂದೆ
ಗೌರೀಶ್ವರಪ್ರಸಾದದಿನಲ್ಲದುಳಿದ ಯತ್ನದಿನಪ್ಪುದೇಯೆನೆ ಹರೀ
ಭೋರನುಪಮನ್ಯುಗೆ ಕೃತಾಂಜಲಿಪುಟನುಮಾಗಿ
ಯಾ ರುದ್ರಗಣನಿಂ ತಪೋದೀಕ್ಷೆಯಂ ಗ್ರಹಿಸಿ
ಯಾರಾಧಿಸಿದನಮಮ ವಿಧ್ಯುಕ್ತಮಾಗಿ ಸಾಂಬನನಿಂತು ಸದ್ಭಕ್ತಿಯಿಂ ೮೬

ಒಂದು ತಿಂಗಳ್ ಫಲಾಹಾರದಿನೆರಡು ತಿಂಗ
ಳೊಂದಿದ ಜಲಾಶನದಿನೈದು ತಿಂಗಳ್ವರಂ
ಮಂದಾನಿಲಾಹಾರದಿಂದವಱುದಿಂಗಳಲೊಂದಡಿಯೊಳೆಯ್ದೆ ನಿಂದು
ಒಂದು ಬರಿಸಂ ತಪಂಗೆಯ್ವಿನಂ ಶಂಭುಕೃಪೆ
ಯಿಂದೆ ನಿಜರೂಪಮಂ ತೋಱಿ ಮೆಚ್ಚಿದೆನಿತ್ತ
ಪೆಂ ದಾನವಾರಿ ಬೇಡಿಷ್ಟವೇನೆನೆ ಸುಖಾಶ್ರುಗಳುಗಲ್ ನೋಡಿ ನಮಿಸಿ ೮೭

ಸುಪ್ರಣವಪೂರ್ವಕ ಬ್ರಹ್ಮಮಯಸೂಕ್ತಿಗಳಿ
ನಪ್ರತಿಮಶಿವನಂ ಜಯಾಷ್ಟಮೂರ್ತೇಯೆನು
ತ್ತೀ ಪ್ರಕಾರದೆ ಬಹುವಿಧಸ್ತುತಿಗಳಿಂ ತುಷ್ಟಿವಡಿಸೆ ಹರಿಗೆಂದನೀಶಂ
ಭೂಪ್ರಚುರ ತೇಜೋಕ್ಷತಾ ಜರಾಮಳಿನಕೀ
ರ್ತಿಪ್ರಜ್ಞೆಗಳನಿತ್ತೆನೊಲ್ದು ನಿನಗಸುಖಾಮ
ಯಪ್ರಕರಮೊಂದದಿರ್ಕೆಂದು ನುಡಿದೆತ್ತಿ ಮುಂಡಾಡಿ ಮತ್ತಂ ಬೇಡೆನೆ ೮೮

ಎಲೆ ದೇವ ಧರ್ಮೇಚ್ಛೆಯಿಂ ರಿಪುಕ್ಷಯಮನು
ಜ್ವಲಭೋಗಮಂ ಬಲವನಿತ್ತು ಪುತ್ರರನೆನ್ನ
ಲಲನಾಸಹಸ್ರದಲ್ಲೊಗೆವಂತೆ ಗೆಯಿಸಿ ನಿನ್ನುರು ಭಕ್ತಿಯಿತ್ತುಳುಹೆನೆ
ಸಲೆಯನಿತುವಂ ಕೊಟ್ಟದೃಶ್ಯನಾದಂ ಭವನ
ತುಳಮುದದಿನುಪಮನ್ಯುವಿಂದೆ ಬೀಳ್ಕೊಂಡು ಬಂ
ದಲಘುಹರಿ ಸುಖಮಿರನೆಯಿದು ಶಿವರಹಸ್ಯೋಕ್ತಿ ಹರಿಗೆಲ್ಲಿತೋ ಪ್ರಭುತ್ವಂ ೮೯

ತ್ವಮೆನೆ ಮೇಣ್ ಕ್ಷತ್ರಿಯಃ ಪರಮೋ ಹರಿಃ ಎನ
ಲ್ಕಮಿತರುದ್ರಂ ಬ್ರಾಹ್ಮಣಂ ಕ್ಷತ್ರಿಯಾದಿಗಳ್
ಕಮಲಾಕ್ಷಮುಖರಾ ದ್ವಿಜೋತ್ತಮ ಶಿವಂಗುಳಿದಧಃಕುಲಜರೆಂತು ಸರಿಯೈ
ಕ್ರಮದೆ ನಾರಾಯಣಾದೀನಿ ನಾಮಾನಿಯೆನು
ತಮರ್ದದು ವಿಸೃಜ್ಯೈವಯೆನೆ ಹರಿಯ ಪೆಸರುಮಂ
ವಿಮಲ ಮೋಕ್ಷಾಕಾಂಕ್ಷಕಂ ಭಜಿಸಲಾಗದೆನೆ ನೀಂ ದೇವರೆಂಬೆಯೆಂತೈ ೯೦

ಮಱೆದಾದೊಡಂ ತ್ರಯೋದಶಿಯ ರಜನೀಮುಖದೊ
ಳುಱೆಹರಿಯನೀಕ್ಷಿಸಲ್ ದ್ವಾದಶಾಬ್ದದ ಸುಕೃತ
ವಱೆತುಪೋಪುದಿದಾ ಸ್ಮೃತಿಪ್ರೋಕ್ತಿ ಮತ್ತೆಯುಂ ಕೇಳ್ ಪ್ರದೋಷದೊಳೆಂದುವುಂ
ಮಱೆಯದಾ ಹರಿದರ್ಶನಂ ಪ್ರಮಾದದೆ ಘಟಿಸೆ
ಪಱೆಪಡುವವಾಯುರ್ಯಶೋಮತಿಬಲಂಗಳೆಂ
ದಱೆಪುತಿದೆ ಪೌರಾಣವೀಕ್ಷಿಸಲಶುಭಮಪ್ಪುದಂತೆ ಮೇಣ್ ದೈವವೆಂತೈ ೯೧

ಸಲೆ ಚಿತ್ಸುಖಾತ್ಮನೀಶ್ವರನಲ್ಲದುಳಿದ ಸುರ
ಕುಲಕೆ ಸುಖಮಿಲ್ಲದೆಂತೆನೆ ಕೇಳಯಜ್ಞಂಗೆ
ತಲೆಬೇನೆ ಕುಷ್ಮವರ್ಕಂಗೆ ಪಾಶಿಗೆ ಜಲೋದರವಂತೆ ದಂತವ್ಯಥೆ
ಅಲಘುಪೂಷಂಗೆ ತೋಳ್ಸುತ್ತಮಿಂದ್ರಂಗೆ ಶಶಿ
ಗೆಲೆ ಕೇಳ್ ಕ್ಷಯವ್ಯಾಧಿ ದಕ್ಷಂಗುರು ಜ್ವರಂ
ಜಲಜಜಂಗಾತ್ಮಪುತ್ರೀಗಮನವೆಂಬ ದುರ್ವ್ಯಸನ ದುಃಖಂ ಬಳಿಕ್ಕಂ ೯೨

ಜನನ ಮೃತಿ ಕಪಟಕಾಮಾಸಕ್ತಿ ಮಾನಿನೀ
ಹನನ ಸಾರಥ್ಯ ಬಲಿಬಂಧನಂಗಳೆನಿಪ್ಪ
ವೆನಸುಂ ಮುರಾರಿಗುಂಟೆಂದು ಶಿವಧರ್ಮೋತ್ತರಂ ಸಾಱುತಿದೆಯಂತಱಿಂ
ಇನಿತವಸ್ಥೆಗೆ ಸಂದು ಸಾವವಂ ದೈವವೆಂ
ದೆನಲಕ್ಕುಮೇ ಮೃತ್ಯುವಶರನಾ ಮೃತ್ಯುಂಜ
ಯನ ಸದೃಶರೆಂಬರೇ ಬ್ರಹ್ಮಾಂಡದಲ್ಲಿ ಮೃತ್ಯೂಕ್ತಿಯಂ ಕೇಳ್ದುದಿಲ್ಲಾ ೯೩

ಏನಾನುಮರ್ಕಂಗೆ ಖದ್ಯೋತವೆಣೆಯಾದೊ
ಡಾ ನೀಲಕಂಠಂಗೆ ವಿಷ್ಣುವೆಣೆಯಪ್ಪನೆ
ತ್ತಾನುಂ ಸುರದ್ರುಮಕೆ ಕಾಷ್ಠವೆಣೆಯಾದೊಡಾನೆಣೆಯಪ್ಪೆನೀಶ್ವರಂಗೆ
ಜ್ಞಾನವಜ್ಞಾನಕ್ಕೆ ಸರಿಯಾದ ಕಾಲಕ
ನ್ಯೂನ ಶಂಭುಗೆ ಸುರರ್ ಸರಿಯಪ್ಪರಚ್ಚರಿಯ
ನೇನೆಂಬೆನಿದು ಮೋಹದ ವಿಕಾರವೆಂದಜೋಕ್ತಿಯಿದೆ ದೊರೆಯಾರ್ ಶಿವಂಗೆ ೯೪

ಕಾಲನಿಂ ಕಾಮಾದಿದುರ್ವ್ಯಸನದಿಂ ರುಜಾ
ಜಾಲದಿಂ ಮಾಯೆಯಿಂ ದನುಜರಿಂ ಮುನಿಶಾಪ
ಕೋಲಾಹಲಾದ್ಯಖಿಳವಿಘ್ನಂಗಳಿಂ ಮುಂದುಗೆಟ್ಟಳಿವ ಮುರವೈರಿಯಂ
ಈ ಲಕ್ಷಣದ ಬಹುಭಯಂ ಪೊರ್ದದೆಸೆವುಮಾ
ಲೋಲಂಗನಿಂದ್ಯಂಗಗೋಚರಂಗನುಪಮಂ
ಗಾಲಂಬರಹಿತಂಗನಾದ್ಯಂಗನಂತಂಗೆ ನೀಂ ಸದೃಶಮೆಂತೆಂಬೆಯೈ ೯೫

ಏಪರಿಯೊಳಾರಯಲ್ ವೇದಶಾಸ್ತ್ರಾಳಿಯಗ
ಜಾಪತಿಯೆ ಕರ್ತೃ ಹರಿ ಭೃತ್ಯನೆಂದೊರೆದವಿ
ನ್ನಾಪದವನುಸಿರಲೇಂ ವಿಷ್ಣುವಧ್ರುವನೆನಲವನದಾದ ವೈಷ್ಣವಮತಂ
ರೂಪಿಸಲ್ ಶಾಶ್ವತಮೆ ದರ್ಶನಾದಪಿಯೆನುತೆ
ಪಾಪದಾಯೆನಲೇಕದಂಡಿ ತ್ರಿದಂಡ್ಯಾದಿ
ಕಾಪುರುಷರಾ ವಿಷ್ಣುಭಕ್ತರವರಂ ಕಾಣಲಘಮೆನೆಯವರ್ ಸೇವ್ಯರೇ ೯೬

ಗೋಪೀಮಲಿನಧಾರಿ ಶಿವನನಂಟಿದೊಡಧಿಕ
ಪಾಪಮೆಂದುಂ ವೃತ್ತಿಕಾದಿಗಳನಿಡಲಾಗ
ದಾ ಪಾಪಿಗಳ್ ದಾನಪಾತ್ರರೆಂದಿತ್ತಂ ಪತಿತನದಲ್ಲದೆ ಭೃಗುವಿನಾ
ಶಾಪೋಪಶಮನಾರ್ಥಮೇಕಾದಶೀವ್ರತಮ
ನೇಪೊತ್ತುಮನಿತು ರುದ್ರರ್ಗೆಸಗುತಱಿಯರೆಂ
ದೋಪ ಗಾರುಡಪುರಾಣಸ್ಕಾಂದಮುಂ ಸಾಱುತಿವೆಯುವರ್ ಶ್ಲಾಘ್ಯರೆಂತೈ ೯೭

ಎಲೆಯೂರ್ಧ್ವಪುಂಡ್ರ ತ್ರಿಶೂಲಾರ್ಧಚಂದ್ರವ
ರ್ತುಲಮೆಂಬಿವಶ್ರೌತವಿಡಲಾಗದಿಟ್ಟವರ್
ಮಲಿನಾತ್ಮರವರಂ ಯಮನ ದೂತರಾ ತೆಱದ ಶಸ್ತ್ರಂಗಳಿಂ ಭಾಳಮಂ
ಸಲೆ ಸೀಳ್ವರವರನೀಕ್ಷಿಸೆ ಭಸಿತಮುಂ ಧರಿಸಿ
ಮಲಹರಾಣುಸ್ಮರಣಮುಂ ನೆಗಳ್ದೊಡಲ್ಲದಾ
ಕಲುಷಂ ಪರೆಯದೆಂದಖಿಲ ಪುರಾಣಮಿದೆಯುವನಾಂತವರ್ ಮುಕ್ತರೆಂತೈ ೯೮

ಸುತ್ತದೇ *ಕಾಯುಧೈಃ ಶಂಖಚಕ್ರಾದ್ಯೈರೆ
ನುತ್ತೆ ನದಹೇಚ್ಚ ಯೆನುತಿದೆ ಮನುಪ್ರೋಕ್ತಿಯಾ
ವೃತ್ತಿಯಿಂ ನಾಂಕಯೆನ್ನದಹೇದೆನುತೆ ಗಾತ್ರಮೆನುತಿದೆ ಯಮಸ್ಮೃತಿವಲಂ
ಉತ್ತಪ್ತಲೋಹದಂಡೇನ ನಾಂಗಮೆನುತ್ತೆ
ಮತ್ತಂ ದಹೇದೆನುತ್ತಿದೆ ಗೌತಮಸ್ಮೃತಿಯು
ದಾತ್ತತೆಯಿನಂಗೇಷು ನಾಂಕಯೇದ್ವಿಪ್ರೋ ಯೆನುತ್ತಮಿದೆ ಪಾರಾಶರಂ ೯೯

---

* ೧. ಆಯುಧೈಶ್ಶಂಖಚಕ್ರಾದ್ಯೈರ್ನದಹೇಚ್ಚ —ಮನೂಕ್ತಿ
೨. ನಾಂಕಯೇನ್ನ ದಹೇದ್ಗಾತ್ರಂ —ಯಮಸ್ಮೃತಿ
೩. ಉತ್ತಪ್ತಲೋಹದಂಡೇನ ನಾಂಗಂ ದಹೇತ್ —ಗೌತಮಸ್ಮೃತಿ
೪. ಅಂಗೇಷು ನಾಂಕಯೇದ್ವಿಪ್ರಃ —ಪಾರಾಶರ
೫. ನಾಂಕಯೇನ್ನದಹೇದ್ದೇಹಂ —ಬೋಧಾಯನಸ್ಮೃತಿ
೬. ಯತ ಶ್ಚ್ಯದ್ಧೇನ ಚಾಂಕಯೇತ್ —ಪಾರಾಶರ
೭. ನಕುರ್ಯಾದಂಕನಂ ನರಃ —ಸೂತೋಕ್ತಿ

ನಾಂಕಯೋನ್ನದಹೇದೆನುತೆ ದೇಹಮೆನುತಿದೆ ಶು
ಭಾಂಕ ಬೋಧಾಯನಸ್ಮೃತಿಯತಃ ಶುದ್ಧೋನ
ಚಾಂಕಯೇದೆನುತುಮಿದೆ ಪಾರಾಶರಂ ನ ಕುರ್ಯಾದಂಕನನ್ನೆಸುತ್ತೆ
ಅಂಕಿಸುತ್ತಿದೆ ನರೋ ಯೆಂದು ಸೂತೋಕ್ತಿ ವೇ
ದಂ ಕೀರ್ತಿಸಿದವೊಲದಱಿಂ ಶಂಖಚಕ್ರಮು
ದ್ರಾಂಕಿತದ್ವಿಜರುಮಧಮರದರ್ಶನೀಯರೆನಲಾ ಸಮಯಿಗಳ್ ಶಿಷ್ಟರೇ ೧೦೦

ಓವೊ *ತದಸಚ್ಛಾಸ್ತ್ರಮಿತ್ಯಾಹುರೆನೆ ವೈಷ್ಣ
ವಾವಗತಶಾಸ್ತ್ರಮೀ ಶಿವರಹಸ್ಯೋಕ್ತಿಯಿಂ
ಭಾವಿಸೆ ಸುಶಾಸ್ತ್ರಮೇ †ನಶ್ಯಂತಿ ಯೆನುತೆ ತಾಂ ಬ್ರಹ್ಮವಿಷ್ಣ್ವಾದ್ಯಾ ಎನೆ
ಓವಿ ತದೆನುತ್ತೆ ಭಕ್ತಾನಾಂ ಹಿ ಎನುತೆ ಮೇಣ್
ಪಾವನ ಸ್ಕಾಂದೋಕ್ತಿಕಾ ಕಥಾ ಎನೆ ವಿಧಿರ
ಮಾವರಪ್ರಮುಖರಳಿವರ್ಗಡವರಂ ಭಜಿಪರುಳಿವರೆ ಬಿಡಾ ಸುದ್ದಿಯಂ ೧೦೧

ಇಂತೆಂದು ನಾನಾ ಪ್ರಮಾಣದಿಂ ಹರಿ ತನ್ಮ
ತಂ ತತ್ಪ್ರಸಿದ್ಧಶಾಸ್ತ್ರಂ ತದಾಚಾರವದ
ನಾಂತ ಭಕ್ತೌಘಮೆಲ್ಲಂ ನಿಂಗ್ಯವೆಂದು ವೇದ ಸ್ಮೃತಿಪುರಾಣೋಕ್ತಿಯಿಂ
ಸಂತರ್ ಕರಂ ಮೆಚ್ಚೆ ಗುರುವರಂ ತೋಱಿಸಿಯ
ನಂತರದೊಳೆಂದನೆಲೆ ವಾದಿ ಮೊದಲಂಬಿಕಾ
ಕಾಂತನೇ ಪರವೆಂದು ಕಾಣಿಸಿದೆವಾಗಿ ಕೇಳ್ ಮುಂದೆ ಶೈವಾಧಿಕ್ಯಮಂ ೧೦೨

ನಗುರೋರಧಿಕಮೆನುತ್ತಿದೆ ಯಾಗಮಂ ಬಳಿ
ಕ್ಕೆ ಗುರುರೇವ ಶಿವೋಯೆನುತ್ತುಮಾ ಸ್ಕಾಂದಮಿದೆ
ಸೊಗಸಿ ತಸ್ಮಾದಿಷ್ಟಮೆನುತೆ ನಗುರೋರೆನುತೆ ಕುರ್ಯಾದೆನುತಿದೆ ಲೈಂಗ್ಯಂ
ಮಿಗೆ ಗುರೋರಧಿಗತಂ ಜ್ಞಾನಂ ಯೆನುತಿದೆ ತೊ
ಟ್ಟುಗೆ ವಾಯುತಂತ್ರಂ ಸಏವ ಸರ್ವಯೆನುತ್ತೆ
ನೆಗಳ್ದ ಕಾರಣಮೆನುತ್ತಿದೆ ಸೂತಗೀತಿ ಪಲವೇಂ ಗುರುವೆ ಸೇವ್ಯನೆಂತುಂ ೧೦೩

---

* ತದಸಚ್ಛಾಸ್ತ್ರಮಿತ್ಯಾಹುಃ —ಶಿವರಹಸ್ಯೋಕ್ತಿ

† ನಶ್ಯಂತಿ ಬ್ರಹ್ಮವಿಷ್ಣ್ವಾದ್ಯಾಸ್ತದ್ಭಕ್ತಾನಾಂ ಹಿ ಕಾ ಕಥಾ —ಸ್ಕಾಂದ

ಶಿವಲಿಂಗಮಂ ವಿಧಿಹರಿಂದ್ರಾದ್ಯಮರರಾಂತು
ನವ ಪೂಜೆಗೆಯ್ದು ವಾಣೀಂದಿರೇಂದ್ರಾಣ್ಯಾದಿ
ಯುವತಿಯರುಮಂ ನಿಜ ಪದಂಗಳಂ ಪಡೆದರ್ ತವಶ್ರೀಯೆ ಯೆಂಬ ಮನುವಿಂ
ವಿವರಿಸಿತದಂ ಋಕ್ಕು ಪಾರಾಶರಮುಮಂತೆ
ತವೆ ಪೇಳ್ವುದಾ ಲಿಂಗದೀಕ್ಷಿತರಪಾಪರಂ
ತವರೊಳೆ ಶಿವಂ ತೊಳಪನಿದನೆ ಯಾತೇ ರುದ್ರಯೆಂದಾ ಯಜುಸ್ಸು ಪೇಳ್ಗುಂ ೧೦೪

ವರ ಲಿಂಗಮಂ ನಾಡೆ ಮುಟ್ಟಿದೀಯೆನ್ನ ಸ
ತ್ಕರಮೆ ಭಗವಾನ್ನಿದೇ ಭಗವತ್ತರಂ ನಿರಂ
ತರ ವಿಶ್ವಭೇಷಜಂ ತಾಯ್ತುಂದೆ ಜೀವನೌಷಧಮುಮಾಗೆಯ್ದಿತೆನಗೆ
ಪರಮಾಪ್ತಯೀ ನಿನ್ನ ಲಿಂಗವಿರ್ದಿಲ್ಲಿ ಬಂ
ದಿರು ತೊಲಗದಶ್ರಾಂತಮೆಂದು ಋಗ್ವೇದಮಾ
ತುರಭಕ್ತಿಯಿಂ ಬಿನ್ನವಿಸಿತೀಶ್ವರಂಗಯಂ ಮೇಯೆಂಬ ದಿವ್ಯಾಣುವಿಂ ೧೦೫

ಅನುವಿನಿಂ ಬ್ರಹ್ಮಣಸ್ಪತಿ ಪರಶಿವಂ ಬ್ರಹ್ಮ
ವೆನೆ ಲಿಂಗಮುದು ಪವಿತ್ರಂ ಪ್ರಸಿದ್ಧಂ ವಿಶ್ವ
ಕಿನವಂತಱಿಂ ಸ್ವಸಂಗದಿನಂಗಮಂ ಪಾವನಂಗೆಯ್ವುದಜ್ಞರಾದ
ವಿನುತ ದೀಕ್ಷಾರಹಿತರದನೆಯ್ದುರೆಯ್ದುವರ್
ಘನ ದೀಕ್ಷಿತರ್ ದಲದನೆಯ್ದಿದರ್ ಶಿವನಪ್ಪ
ರಿನಿತರ್ಥಮಂ ಪವಿತ್ರಂತೇ ಯೆನುತ್ತೆ ಋಕ್ಕುಂ ಸ್ಕಾಂದಮುಂ ಸಾಱುಗುಂ ೧೦೬

ಪರಮ ಶಿವನಂ ಧ್ಯಾನಿಸಿಯುಪಾಸಿಸುವುದೀ ಸು
ಕರ ಲಿಂಗಮನಿದಂ ನುಡಿವುದಿದಂ ಧರಿಪುದು
ತ್ತರಪಥವಿದೀ ಲಿಂಗದಿಂ ದೇವಮುನಿಪಿತೃಗಳೆಯ್ದಿದರ್ ಮುಕ್ತಿಯನಿದಂ
ಒರೆದುದು ತಮೀಶಾನಮೆಂದಥರ್ವಣಮದಂ
ಧರಿಸಿದವನೆಂತಿರ್ದೊಡಂ ಶುಚಿ ಯಮಾದಿಭಯ
ವಿರದವನೊಳದಱಿಂದೆ ಸರ್ವರುಂ ಧರಿಪುದೆಂದಾಗಮ ಪುರಾಣಸಿದ್ಧಂ ೧೦೭

ಲಿಂಗಸ್ಮರಣದಿಂ ಸಮಸ್ತ ಪಾಪಕ್ಷಯಂ
ಲಿಂಗನಾಮೋಚ್ಚಾರಣದೆ ಸತ್ಫಲೋದಯಂ
ಲಿಂಗದರ್ಶನದಿಂ ಸಕಲ ಸುಸೌಖ್ಯಪ್ರಾಪ್ತಿ ಲಿಂಗಸಂಸ್ಪರ್ಶದಿಂದಂ
ಮಾಂಗಲ್ಯಮುಕ್ತಿಲಾಭಂ ಲಿಂಗಪೂಜೆಯಿಂ
ಲಿಂಗಗರಿಮಾವಾಪ್ತಿಯಪ್ಪುದಿದು ವೇದಶಾ
ಸ್ತ್ರಂಗಳರ್ಥಂ ತನ್ನಿಮಿತ್ತಮಜಹರಿಸುರಾದಿಗಳರ್ಚಿಪರ್ ಲಿಂಗಮಂ ೧೦೮

ಮತಿಸಿ *ಯೇ ರುದ್ರಾ ಅಧಿ ಯೆನುತ್ತೆ ಭೂಮ್ಯಾಮೆ
ನುತಿದೆ ವೇದಾಣು ಶಿವಭಕ್ತಃ ಪ್ರಭುರ್ಮಮ ಯೆ
ನುತಿದೆ ಹರಿಸೂಕ್ತಿ ಶಿವಭಕ್ತಾನನಶ್ಯಂತಿ ಯೆನುತುಮಾ ಸ್ಕಾಂದಮುಮಿದೆ
ವಿತತಮಾಗುತ್ತಮಸ್ಸರ್ವಪಾತ್ರಾಣಾಮೆ
ನುತಿದೆ ಸೌರೋಕ್ತಿ ಪೂಜ್ಯೋ ಯೆನುತೆ ಸರ್ವೈರಿ
ನುತಿದೆ ಶಿವಧರ್ಮವಿಂ ಪಲವೇನೊ ದರ್ಶನೀಯಂ ಪೂಜ್ಯನೀಶಭಕ್ತಂ ೧೦೯

ಶಿವಭಕ್ತರೇ ಕುಲಜರವರೇ ಪವಿತ್ರರಂ
ತವರೆ ಸತ್ಪಾತ್ರರವರಿರ್ದ ದೇಶಮೆ ಕಾಶಿ
ಯವರ ನೋಟವೆ ಪಾಪದೋಟವವರುರುತೃಪ್ತಿ ಶಿವತೃಪ್ತಿಯವರ ವೃತ್ತಿ
ಶಿವವೃತ್ತಿಯವರ್ಗಿತ್ತ ದಾನವೆ ವಿಮಲದಾನ
ವವರ್ಗಾತ್ಮಶಕ್ತಿಯಿಂದಖಿಲವಸ್ತುಗಳ ನಿ
ತ್ತವನಸಮಸುಖವನನುಭವಿಸಿ ಶಿವನೊಳ್ ಬೆರೆವನಿದು ಸಕಲಶಾಸ್ತ್ರಸಿದ್ಧಂ ೧೧೦

---

* ೧. ಯೋ ರುದ್ರಾ ಅಧಿಭೂಮ್ಯಾಂ —ವೇದಮಂತ್ರ
೨. ಶಿವಭಕ್ತಃ ಪ್ರಭುರ್ಮಮ —ಹರಿಸೂಕ್ತಿ
೩. ಶಿವಭಕ್ತಾ ನನಶ್ಯಂತಿ —ಸ್ಕಾಂದ
೪. ಉತ್ತಮ ಸ್ಸರ್ವಪಾತ್ರಾಣಾಂ —ಸೌರೋಕ್ತಿ
೫. ಪೂಜ್ಯಸ್ಸರ್ವೈಃ —ಶಿವಧರ್ಮ

ಹರನ ಭಕ್ತನನೊರ್ಮೆ ಪಳಿದವಂ ಯುಗಕೋಟಿ
ವರಮಹೋವಿಷ್ಟಿಯೊಳ್ ಕ್ರಿಮಿಯಾಗಿ ಪುಟ್ಟಿ ಮೇಣ್
ಕಿರಿ ವೃಗ ಸೃಗಾಲಾಂಧಕುಬ್ಜ ಪಂಗೂರು ಪಾಷಂಡ ಘನ ಘೂಕಕಾಕ
ವರ ಗೃಧ್ರಫಣಿ ರಾಸಭಂಗಳಾಗೊಗೆದಲ್ಲಿ
ಪರಿವಿಡಿಯಿನಖಿಲ ಜನ್ಮಂಗಳಿದು ಮುಡಿವನಾ
ನರಕಿಗಿಲ್ಲಿಲ್ಲ ನಿಷ್ಕೃತಿಯೆಂದು ಶಿವರಹಸ್ಯಮಿದೆ ಭಕ್ತನೆಯನಿಂದ್ಯಂ ೧೧೧

ಶಿವ ಪಂಚಮುಖಜನಿತ ಪಂಚಭೂತೋತ್ಥ ಪಂ
ಚವಿಧಸುಕಲೋದ್ಭೂತ ಪಂಚವರ್ಣಾನ್ವಿತ ವಿ
ಭವ ಪಂಚಧೇನುಪ್ರಶಸ್ತಗೋಮಯವನುಕ್ತಪ್ರಕಾರದೊಳೊದವಿಸಿ
ನವ ಸೃಷ್ಟಿಮುಖಭೇದದಿಂ ಗ್ರಹಣಮುಖದೆ ತ
ತ್ವವಿಧಿಯಿಂ ಪಂಚಪ್ರಣವಬೀಜಮನುಗಳಿಂ
ಶಿವಶಿಖಿಯೊಳೆಸಗಿ ಭೂತ್ಯಾದಿಗಳನಾಮ್ರಾದಿ ಪಾತ್ರಂಗಳಲ್ಲಿ ತೀವಿ ೧೧೨

ತ್ರಿವಿಧಾಗ್ನಿವರ್ಣಗುಣಲೋಕಾತ್ಮಶಕ್ತಿ ವೇ
ದವರ ಸಂಧ್ಯಾಸವನ ದೈವಾತ್ಮಕ ತ್ರಿಪುಂ
ಡ್ರವನಾ ಭಸಿತದಿಂ ಸಮಂತ್ರಕದೆ ಭಾಳಾದಿಗಳೊಳಂಗುಲೀ ವಿವರದಿಂ
ತವೆ ಧರಿಪುದಗ್ನಿಹೋತ್ರ ವಿರಜವಿವಾಹ ಸು
ಪ್ರವಿದಿತೌಪಾಸನ ಸಮಿಚ್ಛ್ರೋತ್ರಿಯಾಗಾರ
ದವ ಭವ ಸಕಲದೇಶಪಿತೃವನ ಶಿವಾಲಯಸ್ಥಿತ ಭೂತಿಗಳನೋಳಿಯಿಂ ೧೧೩

ತ್ರೈವರ್ಣಿಕ ಗೃಹಸ್ಥ ಸದ್ಬ್ರಹ್ಮಚಾರಿ ಶೂ
ದ್ರಾ ವಿಶಿಷ್ಟಜನ ಯತಿವರ್ಯಾತಿವರ್ಣಾಶ್ರ
ಮಾವಲಂಬಿಗಳೆಲ್ಲರುಂ ಧರಿಪುದದನಾಂತವನ ಸುಕೃತಕಾವುದೆಣೆಯೈ
ಓವೊ ಪಾಪೋಪಪಾಪಂಗಳಂ ಗೆಲ್ದು ರು
ದ್ರಾವಗತ ಮನುಜಾಪಿಯಾದಖಿಲ ವೇದಶಾ
ಸ್ತ್ರಾವಲಿಯನೋದಿದಯುತ ಪ್ರಣವಮಂ ಸ್ಮರಿಸಿದಾ ಫಲಮನೆಯ್ದಿ ಬಳಿಕಂ ೧೧೪

ತನ್ನೇಕವಿಂಶತಿ ಕುಲವನುದ್ಧರಿಸಿ ಭೂಮಿ
ಯುನ್ನತಾಶೇಷತೀರ್ಥಸ್ನಾನಮಂ ಮಾಡಿ
ಧನ್ಯನಾಗಿ ಸಮಸ್ತ ಕರ್ಮಂಗಳೊಳ್ ಯೋಗ್ಯನಾಗಿ ದೇಹಾಂತದಲ್ಲಿ
ಪನ್ನಗಧರನನೆಯ್ದಿ ಭವರಹಿತನಾಗಿರ್ಪ
ನೆನ್ನನಾದೊಡಮೆಂದು ಕಾಲಾಗ್ನಿರುದ್ರನುಱೆ
ತನ್ನುಪನಿಷತ್ತಿನಿಂ ಜಾಬಾಲದಿಂ ಸನತ್ಸುತನ ತಿಳಿಪಿದನಂತಱಿಂ ೧೧೫

ಮುದದಿಂ ಸ ಏಷ ಭಸ್ಮಜ್ಯೋತಿರೆಂದೊದರು
ತಿದೆ ವಲಂ ಜಾಬಾಲವಂತೆ ಭೂತ್ಯೈನ ಪ್ರ
ಮದಿತವ್ಯಮೆನುತಿದೆ ಯಜುಸ್ಸು ಮೇಣ್ ತ್ರ್ಯಗುಣ್ಯಮೆಂದು ಶಾತಾತಪಮಿದೆ
ಪದಪಿನಿಂ ಜ್ಯೋತಿರಹಮೆಂದು ನಾರಾಯಣಾ
ಖ್ಯದುಪನಿಷದುಕ್ತಿಯಿದೆ ಕೇಳ್ ತ್ರಿಯ್ಯಾಯುಷಮೆನು
ತ್ತಿದೆ ಲಸಚ್ಛ್ವೇತಾಶ್ವತರಮಗ್ನಿರಿತಿ ಭಸ್ಮಯೆಂದಥರ್ವಶಿರಸ್ಸಿದೆ ೧೧೬

ಒಂದಿ ಕಲ್ಪಾನುಕಲ್ಪೋಪ ಕಲ್ಪಾಕಲ್ಪ
ವೆಂದು ನಾಲ್ದೆಱನಲ್ಲಿ ಪೂರ್ವೋಕ್ತಮದು ಕಲ್ಪ
ವಂದದಿಂ ವನಶುಷ್ಕಗೋಮಯವನೆಯ್ದೆ ಚೂರ್ಣಿಸಿ ದಹಿಸಲನುಕಲ್ಪಕಂ
ತಾಂ ದಹಿಸಿ ಶೋಧಿಸಿದ ಭಸಿತಮಂ ಗೋಮೂತ್ರ
ದಿಂದುಂಡೆಗೆಯ್ದು ಮೇಣ್ ದಹಿಸಿದುದದುಪಕಲ್ಪ
ಕಂ ದಲನ್ಯರಿನಾದುದೆಯಕಲ್ಪಮಿವಱೊಳೊಂದಂ ಗ್ರಹಿಪುದೆಂದಾಗಮಂ ೧೧೭

ಒಲವಿನಿಂ ಶ್ರಾದ್ಧೇಯೆನುತ್ತೆ ಲೋಕಾಕ್ಷಿಕೋ
ಜ್ವಲಸೂತ್ರಮಿದೆಯಭಾವೇಯೆನುತ್ತಾ ಗರುಡ
ನುಲಿದನಿದೆ ಬಳಿಕೆ ವರ್ಣೇ ವಾಯೆನುತ್ತೆ ಶಾಂಕರಸಂಹಿತೋಕ್ತಿಯುಮಿದೆ
ಸಲೆ ಶಿವೇನಯೆನುತ್ತೆ ವಿಷ್ಣುನಾ ಚೈವಯೆನು
ತಲಘುವಾಕ್ಯಂ ಸ್ಕಾಂದದಲ್ಲಿದಿದಮರ್ಥದಿನ
ಖಿಲವೇದಶಾಸ್ತ್ರಮಿವೆಯದಱಿನಜ ಹರಿ ಮುಖರಿನೀ ವಿಭೂತಿಯೆ ಸುಧಾರ್ಯಂ
೧೧೮

ತ್ರಿಪುರಮಂ ದಹಿಸಲೆಂದುನ್ಮೀಲಿತಾಕ್ಷನಾ
ಗಿ ಪುರಾರಿಯಿರೆಯವಱೆನಿಳೆಗುದಿರ್ದ ಕಣ್ಬನಿಗ
ಳಪರಿಮಿತ ರುದ್ರಾಕ್ಷಮಾದುವು ಜಗದ್ಧಿತಾರ್ಥಂ ತದಾಖ್ಯೋಚ್ಚರಣದಿಂ
ಉಪಮಿಸೆ ಸಹಸ್ರ ಗೋದಾನ ಫಲವಂತೆ ನೋ
ಡೆ ಪವಿತ್ರವೆಂದಂಟೆ ತದ್ವಿಗುಣಿತ ತ್ರಿಗುಣಿ
ತ ಪರಿಮಾಣ ಫಲವಿದಱಿಂ ಮೇಲೆ ನುಡಿಯಲ್ಕಶಕ್ಯಮದಱ ಮಹತ್ವಮಂ ೧೧೯

ಪರಮ ಭೂತಿಸ್ನಾತನಾಗಾ ತ್ರಿಪುಂಡ್ರಮಂ
ಧರಿಸಿ ಮುಖಭೇದದಿಂ ವ್ಯಷ್ಟಿಕ್ರಮದೆ ಶಿಖಾ
ದ್ಯುರುತರ ಸ್ಥಾನಂಗಳೊಳ್ ಸಸಂಖ್ಯೆಯಿನಣುಪುರಸ್ಸರಂ ಸಂಕಲ್ಪಿಸಿ
ಉರುಕೃತಿ ಬ್ರಹ್ಮಚಾರಿ ಗೃಹಸ್ಥ ವನವಾಸಿ
ವರ ಯತಿಗಳಾರಾದೊಡಂ ಧರಿಸೆ ಪದ ಪದ
ಕ್ಕಿರದಶ್ವಮೇಧಫಲಮಂ ಪಡೆವನೆಂದು ಕಾತ್ಯಾಯನಸ್ಮೃತಿ ಸಾಱುಗುಂ ೧೨೦

ಇದು ಗುಹಂಗೀಶನೊರೆದುಕ್ತಿ ರುದ್ರಾಕ್ಷಮೆನು
ತಿದೆ ವಲಂ ಧಾರಯೇದ್ವಿಪ್ರೋಯೆನುತೆ ಸೂಕ್ತಿ
ಪದೆದು ರುದ್ರಾಕ್ಷಾಣಿ ಯತ್ರ ಯೋ ವೇದಾಯೆನುತೆ ಧಾರಯಂತಿಯೆನುತೆ
ಒದಱುತಿದೆ ಜಾಬಾಲವಂತೆ ಖಾದನ್ನೆನು
ತ್ತಿದೆ ಲೈಂಗ್ಯಮಾಹಾ ಪ್ರಯಾಣಕಾಲೇಯೆನು
ತ್ತಿದೆ ಪಾದ್ಮವಾಲಿಪೊಡೆ ನಿನ್ನಳವೆ ರುದ್ರಾಕ್ಷಮೇ ಧಾರ್ಯವಖಿಲಱಿಂದಂ ೧೨೧

ಘನವದೆಂತೊ ನಮಶ್ಶಿವಾಯ ಚಯೆನುತೆ ಯಜು
ಸ್ಸಿನ ಸುಶತರುದ್ರೀಯದಲ್ಲಿದೆಯದಾಗಿ ಸೂ
ತನ ವಾಕ್ಯನೇನಸದೃಶಂ ಜಾಪ್ಯಮೆನುತೆ ನಾಸ್ತಿಯೆನುತ್ತೆ ನಾಸ್ತಿಯೆನುತೆ
ಅನುವಿಂ ಶ್ರುತೌಸ್ಮೃತೌಯೆನುತಿದೆ ಸನತ್ಕುಮಾ
ರನ ಸಂಹಿತೆಯೊಳೆ ನಾಸ್ತ್ಯಧಿಕೋಪಿ ವಾಯೆನು
ತ್ತನುವಾದಿಸುತಿದೆ ಜಪತೋವಾಪ್ನುಯಾಚ್ಛಿವಮೆನುತ್ತಾಗವೋಕ್ತಿಯುಮಿದೆ ೧೨೨

ಓದಲೀಂ ಶ್ರುತ್ಯಾಗಮಸ್ಥಗೋಪ್ಯಂ ಶಿವಮು
ಖೋದಿತಂ ಸರ್ವಮಂತ್ರಾಧಿಕಂ ಸಕಲ ಪ್ರ
ಮೋದಕರವಣುತತಿಗನಾದಿವಟಬೀಜದಂತಲ್ಪಾಕ್ಷರಂ ಮಹಾರ್ಥಂ
ಮಾದೇವನಿಷ್ಟಸ್ಥಲಂ ಪವಿತ್ರಂ ಸುಮಹ
ದಾದಿಯಂ ಕಾಣಿಸುವ ಸಿದ್ಧಾಂಜನಂ ನಿಖಿಲ
ವೇದಶಾಸ್ತ್ರಂ ಭಾಷ್ಯಮಾಗೆಸೆವ ಮೂಲಸೂತ್ರಂ ಪ್ರಣವಪೂರ್ವಕಾಢ್ಯಂ ೧೨೩

ಜ್ಞಾನಬೀಜಂ ಭೋಗಮೋಕ್ಷದಮಸಂದಿಗ್ಧ
ಮೇನೋಹರಂ ಪರಮಪದವಾಯುರಾರೋಗ್ಯ
ದಾನಿಯಾಜ್ಞಾಸಿದ್ಧಮಾಮ್ನಾಯಸಾರಮಖಿಲಾರ್ಥದಂ ಸರ್ವ ಸೇವ್ಯಂ
ನಾನಾ ವಿಪದ್ಭವಭಯಾಪಹವಮೇಯವೀ
ಶಾನಾತ್ತ ಪಂಚಾಕ್ಷರೀಮಂತ್ರವೆಂದು ಹರಿ
ಗೇನೆಂಬೆನುಪಮನ್ಯು ವಾಯವೀಯದಿನೊರೆದನದಱಿನೀ ಮನುವೆ ಜಪ್ಯಂ ೧೨೪

ಶ್ರೀರುದ್ರ ಸುಪವಿತ್ರ ಶತಧಾರಸಾಹಸ್ರ
ಧಾರಾದ್ಯಣುಗಳಿಂದ ಖಂಡಿತಾಮಿತ ವಿಘ್ನ
ದೂರಾಕ್ಷತಾಭೀಷ್ಟದಾಚ್ಯುತ ಪರಮಪೂತ ಭಗವನ್ಮಹಾದೇವನಂ
ಭೋರನಭಿಷೇಕಿಸಿ ತದಂಘ್ರಿಜಲಮಂ ವಿಧ್ಯು
ದಾರೋಕ್ತಿಯಿಂ ಕೊಂಡವಂ ಸ್ವಕುಲದಖಿಲರಂ
ಘೋರ ಭವವಾರ್ಧಿಯಿಂ ದಾಂಟಿಸುವನೆಂದು ಬೋಧಾಯನಸುಶಾಖೆಯುಲಿಗುಂ ೧೨೫

ಇಂತೆಂದು ಜಾಬಾಲಶಾಖೆಯುಂ ಸಾಱುಗುಮ
ನಂತರದೊಳಾ ಕುರುಕ್ಷೇತ್ರ ನೈಮಿಷಧರಾ
ಭ್ಯಂತರಸ್ಥ ಶುಭಸ್ಥಲಂಗಳ್ ಶಿವಾಂಘ್ರಿಸಲಿಲದ ಷೋಡಶಾಂಶದೊಡನೆ
ಎಂತುಂ ಸದೃಶಮಾಗವಪಮೃತ್ಯು ರೋಗ ಪಾ
ಪಾಂತರಾಯಗ್ರಹಾಶೌಚ ಸೂತಕ ದುಃಖ
ಸಂತತಿಯಳಿದಭೀಷ್ಟವಕ್ಕುಂ ಪದಾಂಬುಧಾರಣದಿನಿದು ಶಾಸ್ತ್ರಸಿದ್ಧಂ ೧೨೬

ಆದರಿಸಿ ಹರ ಗುರು [೧]ಚರಾಂಘ್ರಿ[೧]ಗಳ ತೊಳೆದು ತತ್
ಪಾದಜಲಮಂ ತಳಿವುದಾತ್ಮಮಸ್ತಕದೊಳೆಂ
ದಾದಿತ್ಯಪೌರಾಣದಲ್ಲಿಯತಿಥೇಶ್ಚಯೆನುತೆ ಗುರೋಸ್ತಥಾಯೆನುತ್ತೆ
ಆ ದನುಜರಿಪುಗೊರೆದುದಿದೆ ಗಣಂಗಳ್ ಹರ್ಯ
ಜಾದಿಗಳ್ ಸಿದ್ಧ ಮನುಮುನಿಗಳ್ ಧರಿಸಿದರೆಂ
ದೋದುತಿದೆ ರಾಮಾಯಣಂ ತನ್ನಿಮಿತ್ತಮೀಶಪದಾಂಬು ಪೇಯವೆಂತುಂ ೧೨೭

ನಿರ್ಮಲಂ ಶಿವನವನ ನಿರ್ಮಾಲ್ಯಮೀಕ್ಷಿಸಲ್
ನಿರ್ಮಲತ್ವವನುಳ್ಳುದಾಗನಿಂದಿತಮದುಂ
ನಿರ್ಮಲರ್ಗಲ್ಲದುಳಿದರ್ಗೆ ತೀರ್ಗುಮೆಯದಂ ದ್ವಿಜರುಣ್ಬುದಱಿಯದಾವಂ
ಒರ್ಮೆ ಪರದೈವಶೇಷಂಗೊಳ್ವನವನ ದು
ಷ್ಕರ್ಮಕಾ ಚಾಂದ್ರಾಯಣವ್ರತಮುಚಿತಮೆಂದು
ನಿರ್ಮಲತ್ವಾದೆನುತೆ ತಂತ್ರಮಿದೆ ಶಂಭೋರೆನುತ್ತೆ ವೇದಾಂತಮುಮಿದೆ ೧೨೮

ತ್ರ್ಯಕ್ಷಾರ್ಪಿತಂಗೆಯ್ಯದುಂಡವಂ ಕಿಲ್ಬಿಷಮು
ಲ ಕ್ಷ್ವಲ್ಲಕಕ್ರಿಮಿ ಶ್ವಾನಂಗಳಂ ತಿಂದು
ರೂಕ್ಷನರಕಕ್ಕಿಳಿವನೆಂದು ಕಠಶಾಖೆಯುಲಿಗುಂ ತ್ರಿಗುಘ್ನಾತಮೆನುತೆ
ಉಕ್ಷಗನ ಯಜಿಸಿಯರ್ಪಿಸಿ ತದ್ರುಚಿಯನೊಳಗೆ
ಲಕ್ಷಿಸಿ ಶಿವಾವಧಾನದೆ ಕೊಂಡುದಮೃತವೀ
ಕುಕ್ಷಿಂಭರರ್ ಕೊಂಡುದೆ ಪುರೀಷವಿದು ಋಕ್ಕಿನಂತರಿಚ್ಛಂತಿಯರ್ಥಂ ೧೨೯

ಕೃತಿಗಳಾದುದ್ಧಪ್ರಶಾಂತಮಾನಸರಾದ
ನುತವಿಪ್ರರಭವನುಂಡುದನೋತುಕೊಂಡುದಂ
ಹಿತದೆ ವಾಸಿಸಿದುದುಮನುಣುತುಂ ಕೊಳುತೆ ವಾಸಿಸುತದಂ ಗ್ರಹಿಪರಂತಱಿಂ
ಶಿತಿಕಂಠಶೇಷಮಂ ಸೇವಿಪುದು ಭುಂಜಿಪುದೆ
ನುತಿದೆ ಜಾಬಾಲವಜಹರಿ ಸುರಾಸುರ ಮನುಮು
ನಿ ತತಿ ಕೊಂಡುಳಿದರೆಂದಿನೆ ವೇದಶಾಸ್ತ್ರವದಱಿಂ ಭೋಗ್ಯಮೀಶಶೇಷಂ ೧೩೦

---

೧ ಚರಾಣ (ಬ)

ಇವಱ ಮಹಿಮೆಯನೊರೆಯಲಾಲಿಸಲೆನಗೆ ನಿನಗೆ
ಪವಣೆ ಜಲಧಿಯೊಳೊಂದು ಬಿಂದುವ ಬಳಸಿದಂತೆ
ವಿವರಿಸಿದೆನಿನ್ನದೇನೆಂತು ಪೊಗಳ್ವೆಂ ಶಿವನ ಕರುಣಾತಿಶಯಮನಮಮ
ಶಿವಭಕ್ತವರ್ಮಾದಸೂನು ಪಂಚಾಕ್ಷನೆಂ
ಬವನಿಸುರನಂದು ಕೃತಯುಗದೊಳನಸೂಯೆಯೆಂ
ಬವಳೊಡನೆ ಸುಖಮಿರುತ್ತುಂ ಶಿವಾರ್ಥಂ ಪುಷ್ಪಕೆಂದಡವಿಗೊಂದು ದಿವಸಂ ೧೩೧

ಭರದೆ ಶಿಷ್ಯರ್ವೆರಸು ಗಮಿಸಲಿತ್ತಲ್ ಶಿವನ
ವರ ಬಗೆಯಱಿಯಲಟ್ಟೆ ಶಿಖರಾಲಯಾಖ್ಯಗಣ
ವರನನವನಂತ್ಯಜಾಕೃತಿಯಾಂತು ಬರೆ ಕಾಣುತಾ ಸತಿ ಭಸಿತಧಾರಿಯೆ
ಹರನೆಂದು ನಂಬಿ ವಂದಿಸಿಯುಪಚರಿಸಿ ಗೃಹಕೆ
ಕರೆಯೆ ಚಂಡಾಲರ್ ದ್ವಿಜಾಲಯಕ್ಕೆಲೆ ತಾಯೆ
ಬರಲಕ್ಕುಮೇ ಭಿಕ್ಷೆಯುಳ್ಳೊಡಿಲ್ಲಿಕ್ಕುಮೆನೆ ಶಿವಶಿವಾಯೆನುತೆ ಕೊರಗಿ ೧೩೨

ಆರಾದೊಡಕ್ಕೆ ಶಿವಭಕ್ತರೊಳ್ ಕುಲಮಂ ವಿ
ಚಾರಿಸುವರೇ ಕರುಣಿಸೆಂದು ಸದನಕೆ ತಂದು
ಭೂರಿ ಸತ್ಕಾರಮಂ ಮಾಡುತಿರಲನಿತಱೊಳ್ ಪತಿ ಬಂದು ಕಂಡು ನಮಿಸಿ
ಚಾರು ಭಯಭಕ್ತಿಯಿಂ ನುತಿಸುತಿರೆ ತದುಭಯದ
ಧೀರಭಕ್ತಿಗೆ ಮೆಚ್ಚಿ ನಿಜರೂಪಮಂ ತೋಱೆ
ಮಾರಾರಿಯೆಡೆಗವರನಾ ಬಳಗವೆರಸೊಯ್ದನೆಂಗುಮಾ ಸ್ಕಾಂದಮೊಲವಿಂ ೧೩೩

ಮತ್ತೊರ್ವನಂ ಚೋರರಿಂದೆ ಸುಗೆವಡೆದಳಿವ
ನಿತ್ತಱೊಳ್ ಶಬರರಾ ಪಥದೊಳೆಯ್ದುತಿರೆ ಬೆಂ
ಬತ್ತುವ ಸೊಣಗನಾ ಸ್ಮಶಾನಭಸ್ಮದೊಳೊಂದಿಬಂದವನ ಪಣೆಯಮೆಟ್ಟೆ
ಅತ್ತಲೆಯ್ದಲ್ ಮೃತ್ಯುಭೃತ್ಯರ್ಗೆ ಕುಡದವನ
ನುತ್ತಮಭಸಿತಮಹಿಮೆಯಿಂ ಶಿವಗಣಾಳಿ ಸಮು
ದಾತ್ತ ಶಿವಪುರಕೆ ಕೊಂಡೊಯ್ದರೆಂದಿದೆ ಶಿವರಹಸ್ಯವದನೇವಣ್ಣಿಪೆಂ ೧೩೪

ಪಿಂದೊರ್ವ ವಿಪ್ರಸುತ ತರುಣಂ ಶುಚಿಸ್ಮಿತಾ
ಸುಂದರಿಸಹಿತಮಿರುತೆ ಬಂಧುವೈರದೆ ತಪಕೆ
ಬಂದು ಭವನಾಶಿಯಭವಾರ್ಪ್ಪಿತಕ್ಕಿರ್ದ ಜಂಭೀರಫಲಮಂ ವಾಸಿಸೆ
ನೊಂದು ನೊಣನಾಗೆಂದು ಭಕ್ತರ್ ಶಪಿಸೆ ಸತಿಗ
ದಂ ದಲೊರೆದಂತಾಗಿರುತೆ ತೈಲದೊಳ್ ಮಡಿಯೆ
ತಂದರುಂಧತಿಯ ಮುಂದಿಡೆ ಭೂತಿದಳಿದಸುವನಿತ್ತು ಶಾಪವನಲೆಯಳೆ ೧೩೫

ಮತ್ತೆ ಗೌತಮುವಿವಾಹದೊಳಹಲ್ಯೆಯಸುರರ
ವೊತ್ತನೀಕ್ಷಿಸಿ ಕಾಮಕಾತರತೆಯಿಂದೆ ಮಱ
ಹೆತ್ತಲುಂ ಮುಸುಕೆ ಮತಿಗೆಟ್ಟು ದುರ್ವಾಸನೆಡೆಗೆಯ್ದಿ ಬೆಸಗೊಳೆ ಮುನೀಶಂ
ಆತ್ತ ಶತರುದ್ರೀಯಮಂತ್ರಮಂತ್ರಿತ ಭಸ್ಮ
ವಿತ್ತವರ ಭಸ್ಮಧೂಳಿತರಾಗಿಮೆಂದೊರೆದ
ಚಿತ್ತನಲೆದಂ ಮೇಣ್ ಚಿದರ್ಥಂ ಶರಣ್ಬುಗೆ ನಿಜೋರಸ್ಥಭೂತಿದೆಗೆದು ೧೩೬

ಮಲಹರಂ ಪ್ರಣವ ಪಂಚಾಕ್ಷರೀ ಗಾಯತ್ರಿ
ಗಳಿನೊಲ್ದು ಮಂತ್ರಿಸಿ ಹರಿಯಶರೀರಚ ಮೇಲೆ
ತಳಿಯೆ ಜಾನಿಸಿ ದೀಪಮಂ ಕಂಡೆನೆಂದುಸಿರೆ ಭಸ್ಮಮಂ ಭಕ್ಷಿಸೆಂದು
ಬಳಿಕೆ ಕುಡೆ ಮೆಲ್ದು ಹರಿ ಪಕ್ವಬಿಂಬಾಭ ಶಿವ
ಕಲೆಯೊಳಮರ್ದಂದಿಂದೆ ಧವಲಾಂಗನಾದನಿದ
ತುಳ ಬೃಹಜ್ಜಾಬಾಲದೊಳ್ ಭ್ರುಶುಂಡಂಗೆ ಕಾಲಾಗ್ನಿರುದ್ರೋದಿತಾರ್ಥಂ ೧೩೭

ಓವೊ ಮುನ್ನೊರ್ವ ಚಂಡಾಲಂ ಸಹಸ್ರಭೂ
ದೇವರಂ ಕೊಂದವರ ವಿತ್ತಮುಮನಪಹರಿಸಿ
ಯಾ ವಿಧದೆ ಗೋವಂ ಹತಿಸಿ ಸಕಲ ದೋಷಮಂ ಮಾಡಿಯೊರ್ಮೆ ವಿನೋದದಿಂ
ಶ್ರೀ ವಿಶದ ರುದ್ರಾಕ್ಷಮಂ ಧರಿಸಿ ಮೇಣಳಿಯೆ
ವೈವಸ್ವತಂ ಮುಟ್ಟಲಣ್ಮದೆ ವಿಮಾನದೊಳ್
ದೇವತತಿಯೊಡನೆ ಶಿವಪುರಕೆ ಕಳಿಪಿದನೆಂದು ವಾಸಿಷ್ಠ ಲೈಂಗ್ಯಮುಲಿಗುಂ ೧೩೮

ಬಳಿಕೊಂದು ಶುನಕಂಬೆರಸು ಪುಳಿಂದಂ ಬೇಂಟೆ
ಗೆಳಸಿ ವನಕೆಯ್ದಿಯಾ ರುದ್ರಾಕ್ಷಭೂರುಹದ
ಕೆಳಗೆ ಬಿಸಿಲಡಸೆ ಕುಳ್ಳಿರ್ದೊಂದು ರುದ್ರಾಕ್ಷಮಂ ಕೊಱೆದು ತಚ್ಛುನಕನಾ
ಗಳಕಾತ್ಮಲೀಲೆಯಿಂ ಕಟ್ಟಿ ಬರುತಿರಲೊಂದು
ಬಳವದ್ವರಾಹನೊಳ್ ಸೆಣಸಿಯದು ಸಾಯೆ ನಿ
ರ್ಮಳ ರುದ್ರಪದವಾಯ್ತದರ್ಕೆಂದು ಶಿವವಾಕ್ಯಮಿದೆ ನರರ್ ಧರಿಸಲೆಂತೋ ೧೪೯

ಆದಿಯೊಳ್ ಸಾನಂದನೊಲ್ದು ಶಿವಧರ್ಮಮುಮ
ನೋದಿಸುತ್ತಲ್ಲಿ ನರಕಿಗಳಂ ಯಮಂ ಬಾಧಿ
ಪಾ ದುಃಖಮಂ ಕೇಳ್ದು ಕೃಪೆಯಿನಲ್ಲಿಗೆ ಪೋಗಿ ಯಮನಿನಾ ನರಕವಿಧಿಯಂ
ಸಾದರದಿನಱಿದು ಪಂಚಾಕ್ಷರಿಯನೊರೆದು ನರ
ಕೋದಧಿಗತರನುದ್ಧರಿಸಿದಂ ಶತಾನಂದ
ನೀ ದಿವ್ಯಮಂತ್ರದಿಂ ಸಂಗಿರಾದಿಗಳಂ ಪೊರೆದನಿವಾ ಸ್ಕಾಂದಸಿದ್ಧಂ ೧೫೦

ತ್ರೇತೆಯೊಳ್ ವಿದಳನೆಂಬವನಿಪಂ ಸೊರ್ಕಿ ದುರ್
ನೀತಿಯೊಳ್ ನಡೆದರಿಗೆ ಸೆಡೆದಡವಿಯೊಕ್ಕಂಗ
ನಾ ತುರಗ ಸರ ಪಶುಗಳಂ ಕೊಂದು ತಿಂದು ಸಾವೆಡೆಯೊಳ್ ಸುರಾಪನೆಂಬ
ಖ್ಯಾತಸಚಿವಂಗಾ ಹರಪ್ರಹರಯೆಂದೊರೆವ
ಮಾತನಾಲಿಸಿ ಶಿವಗಣಂ ಬಂದು ಮೃತ್ಯುವಂ
ದೂತರಂ ಬಡಿದು ಶಿವನೆಡೆಗೊಯ್ದುರವನನಿದು ಪದ್ಮಪೌರಾಣಸಿದ್ಧಂ ೧೫೧

ಪಿಂದೆ ನರವರ್ಮಸತಿ ವಸುದೇವಿ ಶಿವಗೃಹವ
ನೊಂದಿ ಸಮ್ಮಾರ್ಜನಂಗೆಯ್ವುತಿರೆ ಗಾಲವನಿ
ದೊಂದನೇಕೆಸಪೆಯೆನೆ ಕಿಷ್ಕಿಂಧಗಿರಿಯೊಳೊರ್ವಂ ಲಿಂಗಕಿತ್ತಶನಕೆ
ಬಂದು ಮುಂಪಕ್ಕಿಯಾಗಿರ್ದಾನೆಱಿಗಿ ಪಕ್ಷ
ದಿಂದಲೆದ ಧೂಳಿಯ ಫಲದೆ ವಸುಗೊಗೆದು ನೃಪತಿ
ಗಿಂದಗ್ರವಧುವಾದೆನೆನೆ ಶಿವಕೃಪೆಯ ಪೊಗಳ್ದನವನಿದಾ ಸ್ಕಾಂದಸಿದ್ಧಂ ೧೫೨

ಮುನ್ನಮೀಶಾಲಯದೊಳಗೆ ಚಿತ್ರರಥನೆಂಬ
ವಂ ನಿಖಿಲ ವರ್ಣಕದೆ ಚಿತ್ರಮುಂ ಬಿನದದಿಂ
ಬಿನ್ನಣಿಸೆ ತನ್ನೃಪಂಗೀಶ್ವರಂ ಸಾಯುಜ್ಯವಿತ್ತನೆಂಗುಂ ಪುರಾಣಂ
ಪನ್ನಗಧರಂಗೆ ಜೀರ್ಣಾರ್ಕಪರ್ಣದಿನರ್ಘ್ಯ
ಮಂ ನಲಿಯುತಾ ವ್ಯಾಸನೀಯೆ ಸರ್ವಗುಣಸಂ
ಪನ್ನತೆ ಮುನೀಂದ್ರತೆ ಸುಮತಿಯಿವಂ ಶಿವನಿತ್ತನಿದು ಧರ್ಮಸಂಹಿತಾರ್ಥಂ ೧೪೩

ಪೂರ್ಣಭದ್ರನ ಸುತಂ ಪಿಂಗಳಂ ಧೂಪವನ
ಹರ್ನಿಶಂ ಶಂಭುಗರ್ಪಿಸುತಿರೆಯದಂ ತಂದೆ
ನಿರ್ನಿಮಿತ್ತಂ ಪಳಿಯೆ ತಾತನಂ ತ್ಯಜಿಸಿ ಕಾಶಿಯೊಳರ್ಧಮಾಸವದಱಿಂ
ಸ್ವರ್ಣದೀಧರನಂ ಯಜಿಸೆ ದಲಾ ಯಕ್ಷಂಗೆ
ತೂರ್ಣದೆ ವರದನಾಗಿ ಗಣಪತಿತ್ವವನಕ್ಷಿ
ಕರ್ಣಾಭರಣನಿತ್ತನೆಂದು ಶೈವದಧರ್ಮಸಂಹಿತೆಯೆ ಮತ್ತಮುಲಿಗುಂ ೧೪೪

ಶ್ರೀಕಂಧರಂಗೆ ಘಂಟಾಪ್ರದಾನಂಗೆಯ್ಯೆ
ಲೋಕಪತಿಯತಿಬಲಗಣೇಶನಂ ಮಾಡಿ ಘಂ
ಟಾಕರ್ಣಗಣದಾಧಿಪತ್ಯಮುಂ ಕುಡನೆ ಘಂಟಾಕರ್ಣನೆಂಬವಂಗೆ
ಪ್ರಾಕಟಮಿದು ದಧೀಚಿ ನೀರಾಜನಮನಿತ್ತೊ
ಡಾ ಕಪಾಲಿಯೆ ಸೌಖ್ಯಮುಂ ನಿಗ್ರಹಾನುಗ್ರ
ಹಾಕಲಿತ ಶಕ್ತಿಯನವಂಗೀಯನೇ ಶಿವಪುರಾಣದಲ್ಲಿವು ಸುಸಿದ್ಧಂ ೧೪೫

ಮತ್ತೊರ್ವ ಚೋರನೀಶಾಲಯಂಬೊಕ್ಕು ತ
ದ್ವಿತ್ತಮುಂ ಕಳಲಱಿಸುವೊಡೆ ಕೆಡುವ ದೀವಿಗೆಯ
ನೆತ್ತಿ ಲಿಂಗದ ಮುಂಡದುಜ್ವಲಿಸಿತಾ ಫಲದಿನಾತಂಗೆ ನಿಜಸೌಖ್ಯಮುಂ
ವಿತ್ತಾಧಿಪತ್ಯಮುಂ ಯಕ್ಷಪೂಜ್ಯತೆಯನಾ
ಯತ್ತ ದಿಕ್ಪಾಲಪದಮುಂ ಕುಬೇರಾಖ್ಯಮುಸು
ದಾತ್ತ ವಿಭವವನೀಶನಿತ್ತನೇಂ ಚಾಗಿಯೋ ಇದು ಶಿವರಹಸ್ಯದರ್ಥಂ ೧೪೬

ಶತಶಲಾಕದ್ವಿಜನ ಸೂನು ಜೈನಿಷತವ್ಯ
ಯತಿ ನೃತ್ಯ ಗೀತಂಗಳೆಸಗೆ ಶಿವೆವೆರಸಿ ಬಂ
ದತುಳಭಕ್ತಿಜ್ಞಾನವಿರತಿಗಳನಾತಂಗೆ ಶಿವನಿತ್ತನೆಂದು ಶೈವಂ
ಪತಿಯುತೆಗೆ ಸಾವಿತ್ರಿಗಖಿಲ ವಿಭವವನದಿತಿ
ದಿತಿಶಚೀವಿನತಾದಿಗಳ್ಗಮಿತಸುತರನ
ರ್ಚಿತನಾಗಿ ಶಿವನಿತ್ತನೆಂದಿನಪುರಾಣದೊಳ್ ಮುನಿಕುಲಕೆ ಸೂತನೊರೆದಂ ೧೪೭

ಅದನೇನನೆಂದಪೆಂ ಮುನ್ನೊಂದು ಫಣಿಪಂ ಪ
ಸಿದು ಬಾಯ್ವಿಡುತ್ತೊರ್ಮೆ ಶಿವಪದಾಂಬುಪ್ರಸಾ
ದದ ಮೇಲೆ ತೀಡಿದನಿಲಂ ಬೀಸೆ ತದನಿಲಸ್ವೀಕಾರದಿಂದದರ್ಕೆ
ಮದನಹರನವನಿಭಾರಧುರೀಣತೆಯನಹಿಪ
ಪದವಿಯಂ ಸರ್ವಜ್ಞತೆಯನಾತ್ಮಭೂಷಣ
ತ್ವದ ಪೆಂಪನಿತ್ತನೆಂದಿಂದ್ರಂಗೆ ನಾರದಂ ಹರಿವಂಶದಲ್ಲಿ ಪೇಳ್ದಂ ೧೪೮

ಮತ್ತೆ ಕೇಳ್ವೈ ಶ್ವೇತನೆಂಬ ರಾಜರ್ಷಿ ಸ
ದ್ವೃತ್ತನೆಂದಿನವೊಲೀಶಾರ್ಚನದೊಳಿರೆ ಕಾಲ
ನೊತ್ತಂಬದಿಂ ಬಂದವನನೊಯ್ಯಲೆಳಸಿ ಕೆಡೆನುಡಿದಾಗ್ರಹಿಸುತೆಯ್ತರೆ
ಮತ್ತೆ ಶಿವನವರಳ್ಕುವರೆಯೆನುತೆ ಶಿವ ಮನುವ
ನೆತ್ತಿ ಜಪಿಸಲ್ಕೆ ಶಿವನಾ ಕಾಲನಂ ಸುಟ್ಟು
ದಾತ್ತಗಣಪದವಿಯಂ ಶ್ವೇತಂಗೆ ಕೊಟ್ಟನಿದು ವಿಸ್ತೃತಂ ಸ್ಕಾಂದದಲ್ಲಿ ೧೪೯

ಸುತಕಾಮರಾಗಿ ಬಿಲ್ವಾರಣ್ಯದಲ್ಲಿ ಗುಣ
ವತಿ ಮೃಕಂಡುಗಳೆಸಗೆ ತಪವನೀಶಂ ಬಂದು
ಶತವರ್ಷದಧಮು ಷೋಡಶವರ್ಷದುತ್ತಮರೊಳಾರಿಷ್ಟಮೆನೆಯುತ್ತಮಂ
ಹಿತಮೆಂದು ಪಡೆದು ಸುಖಮಿರ್ದವಧಿಯೊರೆದೊಡಿಲೆ
ಶಿತಿಗಳನನೊಲಿಸಿ ಮಾರ್ಕಂಡೇಯನಂತಕನ
ಹತಿಸಿ ಪಿತರರನುದ್ಧರಿಸಿ ನಿತ್ಯತೆಯ ಪಡೆದನಿದು ತತ್ಪುರಾಣಸಿದ್ಧಂ ೧೫೦

ನೆನೆಯಬಾರದನೇಕ ದೋಷವನೆಸಗಿ ವಾರ
ವನಿತೆಗೆಂದೊರ್ವ ಕಮ್ಮಲರನೊಯ್ವಲ್ಲಿಯೊಂ
ದು ನೆಲಕ್ಕೆ ಬೀಳ್ದೊಡೆತ್ತುವುದು ಘಟಿಸದೆ ಶಿವಂಗೆನುತೆಯ್ದಿಯಳಿಯಲದಱಿಂ
ದಿನವೊಂದನನುಭವಿಸೆ ರಂಭೆಯೊಳ್ ನೆರಪಲಾ
ವನಜಮುಖಿಯುಪದೇಶದಿಂ ಶಿವನ ಭಜಿಸೆ ಕಾ
ಲನನೀಶನುರುಪಿಯಾ ಶ್ವೇತಂಗೆ ಗಣಪದವನಿತ್ತನಿದು ಲೈಂಗ್ಯಸಿದ್ಧಂ ೧೫೧

ಸುಕುಮಾರನೆಂಬನೊರ್ವಂ ವಿಪ್ರಸೂನು ಕು
ಬ್ಜಕೆಯೊಳಿರ್ದಲ್ಲಿಯ ಸಮಸ್ತ ಪರವಧುಗಳೊಳ್
ವಿಕರಿಸಿ ನೃಪಂ ಪೊಱಮಡಿಸೆ ಪರವಿಷಯಕೆ ಬಂದಿರೆ ಕೊಳಕೆ ಮೀಯಲೆಂದು
ಅಕುಲಜೆ ರಜಸ್ವಲೆ ಬರುತ್ತಮಿರೆ ಕಂಡುಪಾ
ತಕನವಳ ರಮಿಸಿ ಮಧುಮಾಂಸಮಂ ಗ್ರಹಿಸಿ ಪಾ
ತಕರನೈವರ್ ಸುತರನಿರ್ವರ್ ಸುತೆಯರನಾಕೆಯೊಳೆಸಗೆಯವಳಳಿವುದುಂ ೧೫೨

ಆ ಸುತೆಯರಂ ನೆರೆದಖಿಲ ಪಾಪಮಂ ಮಾಡಿ
ಭೂಸುರಶತಮನೆಯ್ದೆ ಕೊಂದು ತದ್ರವ್ಯಮಂ
ಹೇಸದುಣುತಿರೆ ತದ್ಧರೇಶಂ ಕೊಲಲ್ ಭಟರನಟ್ಟೆಯಱಿದೋಡಿ ಪೋಗಿ
ಭಾಸುರ ಕಿರಾತದೇಶದ ವಣಿಕ್ಪಥಪುರದೊ
ಳೋಸರಿಸದಿರಲಲ್ಲೆಸೆವ ಭಕ್ತರಾ ಬಹಿ
ರ್ವಾಸಿನಾಗೇಶನಂ ಮಾಘಕೃಷ್ಣ ಚತುರ್ದಶಿಯ ಮಹಾನಿಶಿಯೊಳೊಲವಿಂ ೧೫೩

ಪೂಜಿಸುತ್ತಿರಲಲ್ಲಿಗಂತ್ಯಜೆಗೆನುತೆ ಕುಸುಮ
ರಾಜಿಯಂ ತಿಱಿಯಲೆಯ್ತಂದವರ್ಗಳಂ ನೋಡಿ
ಸೋಜಿಗಂಬಡುತೆ ಗೃಹಕೆಯ್ದಿಯಂದಿಂಗೆ ಸಪ್ತತಿವರ್ಷಮಾಗಿ ಮಡಿಯೆ
ಆ ಜವನ ಭಟರೊಯ್ಯುತಿರೆ ಕುಡದೆ ಶಿವದೂತ
ರಾಜಿಯೊಳ್ ಬಡಿದು ಶಿವನೆಡೆಗೊಯ್ಯಲಾತಂಗೆ
ನೈಜ ಗಣಪದವಿತ್ತು ಯಮನನೀಶಂ ಬೋಧಿಸಿದನಧಿಕ ವಿಸ್ತಾರದಿಂ ೧೫೪

ಎಂತೆಂಬೆನವನಾ ಫಲದಿನೀಶಪುರದೊಳೋ
ರಂತೊಂದು ಕಲ್ಪಮನುಪಮಸುಖಮನನುಭವಿಸಿ
ಮುಂತೆ ಮುನಿಪ ದಧೀಚಿಯಾಗೊಗೆದು ಹರಿಯ ಭಂಗಿಸೆ ಶಿವನೊಳೊಡವೆರೆಯನೇ
ಇಂತುಟು ವಲಂ ಸ್ಕಾಂದವಿುದೆಪೂರ್ವದಲ್ಲಿ ಬಲ
ವಂತಂ ಹಿರಣ್ಯಾಕ್ಷತನಯನಂಧಕನಾಮ
ವಾಂತ ದನುಜಂ ಹರೀಂದ್ರಾದಿಗಳನಂಡಲೆದೊಡಳ್ಕಿ ತದ್ದೇವನಿಕರಂ ೧೫೫

ಮಂದರಕ್ಕೆಯ್ದಿ ಶಿವನಂ ಶರಣ್ಬೊಕ್ಕಿರ್ಪು
ದುಂ ದೈತ್ಯನಲ್ಲಿಗುಂ ಬರೆಯುವನ ಬಲವೆಲ್ಲ
ವಂ ದಹಿಸಿ ಶೂಲದಿಂದವನನಿಱಿದೆತ್ತಿ ಚಿರಕಾಲವಲ್ಲಿರ್ದು ತನ್ನಾ
ಮಂದತೆಯಳಿದು ಶಿವಜ್ಞಾನವುದ್ಭವಿಸಿ ಬಾ
ಲೇಂದುಧರನಂ ನುತಿಸೆ ಶಂಕರಂ ಭೃಂಗಿರಿಟಿ
ಯೆಂದೆಂಬ ಪೆಸರಿಟ್ಟು ಗಣಪದವನಿತ್ತನಿದು ಲೈಂಗ್ಯಾದಿಗಳೊಳುಜ್ವಲಂ ೧೫೬

ಬಳವಚ್ಛುನಕನನೀಕ್ಷಿಸಿ ಭಯದಿನೋಡಿ ಬರು
ತಳಘುಶಿವತೀರ್ಥಕುಂಡಂಗಾಣದಲ್ಲಿ ಬಿ
ಳ್ದಳಿದ ಕಿಟಿಗೀಯನೆ ಶಿವಂಗಣಪ ಪದವನಿದು ಲೈಂಗ್ಯೋಕ್ತಿ ಮತ್ತಮೊರ್ವಾ
ಖಳನಾ ಮೃಗಧ್ಯಾನದಿಂ ಬಿಲ್ವವೇಱಿ ಸಂ
ಚಳಿಪೆಸಳ್ಗಳಂ ಪರಿದು ಬಿಸುಡುತಿರೆ ಲಿಂಗವಾ
ಕೆಳಗಿರಲವಡರೆ ಶಿವರಾತ್ರಿ ಸಮನಿಸೆ ಮುಕ್ತಿಯಾಯ್ತಿದಾ ಸ್ಕಾಂದಸಿದ್ಧಂ ೧೫೭

ಪಿಂದೆ ಕೋಲಾಹಲಾಖ್ಯಂ ಶೂದ್ರನತಿ ಪಾಪಿ
ತಂದೆಯಂ ಕೊಂದು ತಾಯ್ಗಳಿಪಿ ವೇದವನಕ್ಕೆ
ಬಂದಳಿಯೆ ತನ್ಮಹಿಮೆಯಿಂ ಮುಕ್ತಿಯಾಯ್ತವಂಗಿದು ಮುಕ್ತಿಖಂಡದರ್ಥಂ
ಸಂದು ಧನದಾಸೆಯಿಂ ತ್ರಿಸಹಸ್ರವಿಪ್ರರಂ
ಕೊಂದಾ ಪುಲಾಲವಧು ಕಾಳಹಸ್ತಿಯೊಳಗೊ
ಲ್ದೊಂದಿ ಶೈವನನನಘೆಯಾಗಿ ಶಿವನೊಳ್ ಬೆರೆದಳಿದು ವಲಂ ಸ್ಕಾಂದಸಿದ್ಧಂ ೧೫೮

ಶಿವನೆಂದು ಮುಳಲಗುಡ್ಡೆಯ ರಚಿಸಿಯದಱ ಮೇ
ಲೆ ವಿಶುದ್ಧ ಗೋವಂ ಕಱೆಯೆ ತಂದೆ ಕಂಡದನ
ಳಿವುದುಮವನಂ ಹತಿಸೆ ಚಂಡಂಗೆ ಶಿವನೊಲ್ದನಿದು ಬಹುಪುರಾಣಸಿದ್ಧಂ
ತವೆ ಹರ್ಯಜೇಂದ್ರ ಸುರದನುಜ ನರಫಣಿ ಮನು ಮು
ನಿ ವಿಹಂಗಪಾದ್ಯಖಿಲರೀಶಕಾರುಣ್ಯದಿಂ
ದವೆ ಬಾಳ್ದರಿದು ಸಕಲ ಶಾಸ್ತ್ರಸಿದ್ಧಂ ಬಳಿಕೆ ಬಹು ವಿಧದೊಳಾರಯ್ದೊಡಂ ೧೫೯

ನೀವೆ ಹರಿಗಿಲ್ಲದೊಂದಭಿಯೋಗಮೆಸಗಿ ಪರ
ದೈವಮೆಂದುಲಿವಿರಲ್ಲದೆ ಪರಮ ಶಿವಭಕ್ತ
ನಾ ವಿಷ್ಣುವೆಂತೆನಲ್ ಭಸ್ಮದಿಗ್ಧಾಂಗಂ ತ್ರಿಪುಂಡ್ರಾಂಕಿತೋಕ್ತಸ್ಥಲಂ
ಶ್ರೀ ವಿಶದ ರುದ್ರಾಕ್ಷಭೂಷಂ ಜಟಾಮಂಡ
ಲಾವಭಾಷಿತನಿಂದ್ರನೀಲಮಯ ಲಿಂಗಪೂ
ಜಾವಿಭವನಕ್ಷಮಾಲಾರ್ಪಿತಕರಂ ಮೂಲಮಂತ್ರಪ್ರಸಿತಮಾನಸಂ ೧೬೦

ದೇವಮುನಿಸಂಸ್ತುತ್ಯನಾಗಿಂತು ಮೆಱೆವನಿದು
ಸಾವರ್ಣಿಕಾಖ್ಯಸಂಹಿತೆಯಾದಿಯಾದ ಶಾ
ಸ್ತ್ರಾವಲಿಗಳೊಳ್ ಪ್ರಸಿದ್ಧಂ ಪ್ರಣವವೇದಗಾಯತ್ರಿಗಳುಮಾ ವ್ಯಾಸನುಂ
ಆ ವಿಬುಧರುಂ ತಾಪಸರುಮಂತೆಸೆವರಿಳೆಯೊ
ಳೋವೊ ಹರಿ ತನ್ನಯ ದಶಾವತಾರಂಗಳೊಳು
ಮಾವರನನರ್ಚಿಸನೆ ತತ್ತದಾಖ್ಯೆಗಳಿಂದವಿುವೆ ಲಿಂಗಮುವೆ ಪೇಳವೇ ೧೬೧

ಶಿವನ ಶುದ್ಧತೆಯೊಳ್ ನಿಮಿತ್ತವಿಲ್ಲದು ನಿಸ
ರ್ಗವೆಯಾದುದಱಿನಾ ಸ್ಫಟಿಕದಂತುಳಿದ ದೇವ
ರ ವಿಶುದ್ಧಿಯೊಳ್ ಹೇತುವಿಲ್ಲದುದು ನೈಜವಾದುದಱಿನಾ ತಾಮ್ರದಂತೆ
ಇವನಿಂತು ತಿಳಿಯದಿರಲಿಲ್ಲಿಯಾತ್ಮಾಶ್ರಯಾ
ದಿ ವಿಪಕ್ಷಬಾಧಕಂ ತರ್ಕಮೊಗೆಗುಂ ಬಗೆಯೆ
ಶಿವನಿಂದೆ ಶುದ್ಧರಪ್ಪರನಾದಿಶುದ್ಧಂಗೆಣೆಯೆ ಬಿಡಿಂ ಪಲವು ಮಾತೇಂ ೧೬೨

ಸಕಲ ಪ್ರಮಾಣಸಿದ್ಧನನೆ ಸಿದ್ಧಿಪುದತಾ
ರ್ಕಿಕವಲ್ಲಿ ಸಿದ್ಧಸಾಧನವೆಂಬ ದೋಷಂ ಸ್ಫು
ರಿಕುಮದಱಿನೀಶ್ವರನೆ ಪತಿ ಹರಿಮುಖರ್ ಭೃತ್ಯರಿಂತೆಂದು ಗುರುವಲ್ಲಭಂ
ಪ್ರಕಟಮಿರ್ಪತ್ತೆಂಟುದಿವಸಂಬರಂ ವಾದಿ
ನಿಕರಂ ಪುರೇಯೆನಲ್ ಶ್ರುತದಿನನುಮಾನದಿಂ
ದೆ ಕರಂ ತಿಳಿಪೆ ವಾದಿ ನುಡಿಯುಡುಗಿ ದೃಷ್ಟಾಂತಮುಂಟೇ ಯಿದರ್ಕೆಂದನೇ ೧೬೩

ಶರಧಿಮಧ್ಯದ ಮತ್ಸ್ಯಕೇಶನಿದಿರೊಳ್ ವಾತಿ
ಯುರು ಜಯಸ್ತಂಭದೊಳ್ ರಾಮನಾಧಿಕ್ಯಮಂ
ಬರೆಯುತಿರೆ ವಾಯುಬಂದಾ ಹರಿಯ ಕುತ್ಸಿತದೊಳಗನೊರೆಯೆ ಬಿಟ್ಟು ಹರನೇ
ಪರವೆಂದು ತದ್ವಿಭವಮಂ ಬರೆದನದೆ ದೃಷ್ಟ
ಮೊರೆವುದೇನೆನೆಯದಂ ತೋಱಿಲಾಂ ಸೋಲ್ತೆನೆನೆ
ಗುರುವರನೊಡಂಬಟ್ಟು ಶರಧಿಪತಿಗೋಲೆಯಂ ಬರೆಯಿಸಿದನಳವದೆಂತೋ ೧೬೪

ಎಂತೆನಲ್ ಶ್ರೀ ಶಿವಾದ್ವೈತ ಸಾಕಾರಸಿ
ದ್ಧಾಂತ ಪ್ರತಿಷ್ಠಾಪನಾಚಾರ್ಯ ಪದ್ಮಣಾ
ರ್ಯಂ ತಚ್ಛಿವಾಜ್ಞೆಯಿಂ ಜಲಧಿಪಂಗಾ ಶೀರ್ಪನೆಸಗಿ ಕಳಿಪಿದ ಲೇಖನಂ
ನೀಂ ತಡೆಯದಾ ಮತ್ಸ್ಯಕೇಶನಿದಿರಲ್ಲಿ ಹನು
ಮಂತಂ ಬರೆದ ಜಯಸ್ತಂಭೋಕ್ತಿಯಂ ಕಳಿಪು
ಕಂತುಜನಕನೆ ಭೃತ್ಯನೀಶನೇ ಸ್ವಾಮಿಯಾದೊಡೆನುತ್ತೆ ತಾಂ ಬರೆಯಿಸಿ ೧೬೫

ಧರಣೀಶನಂ ನೋಡಿ ನಿನ್ನ ಮುದ್ರೆಯ ಮನು
ಷ್ಯರ ಕೈಯೊಳಿದನಿತ್ತು ವಾದಿಯುವರಿಮ್ಮವರ್
ಬೆರಸಬ್ಧಿಗಟ್ಟೆನೆ ನೃಪಂ ತದ್ವಿಧಿಯೊಳಟ್ಟುವೆಡೆಯೊಳವರೆಂದರೊಂದಂ
ಶರಧಿಯೇನೊರ್ಬ ಮನುಜನೆ ನೀರ್ಗೆ ಕೊಡುವವೋಲ್
ನಿರವಿಸುವವೋಲ್ ಮಾಳ್ಪುದಕ್ಕುಮೇ ಯೆನೆ ನೃಪತಿ
ಗುರುವನೀಕ್ಷಿಸೆ ವಿಸ್ಮಯಂ ಸಭಾಜನವನಾವರಿಸುತಿರೆ ನುಡಿದರಿಂತು ೧೬೬

ಏವಣ್ಣಿಪೆಂ ಶಿವಶಿವಾ ಗುರುಕುಲಾಗ್ರಣಿಯ
ಭಾವೈಕನಿಷ್ಠೆಯೆಂತೋ ದೃಢಸ್ವಾಂತದೊಳು
ಮಾವರಧ್ಯಾನಮಂ ಮಾಡಿ ಕಾಲತ್ರಯಜ್ಞಾನಿವಾರ್ಧಿಗೆ ಪೋಪರಂ
ಓವೊ ಕರುಣಾದೃಷ್ಟಿಯಿಂ ನೋಡಿ ನಸುನಗುತೆ
ನೀವಿನಿಬರುಂ ಕಡಲ ತಡಿಗೆಯ್ದುವನಿತರ್ಕೆ
ಶೈವನೋರ್ವಂ ಪ್ರಸನ್ನಾನನಂ ಪಾಶಹಸ್ತಂ ಪಡುವಣಿಂದೆ ಬರ್ಪಂ ೧೯೭

ಆತನೀ ಸ್ಥಿತಿಯೆಲ್ಲವಂ ನಿಮ್ಮ ಮುಖದಿನಱಿ
ದಾತತ ವಹಿತ್ರದೊಳ್ ನಿಮ್ಮನೇಱಿಸಿಕೊಂಡ
ನಾತಂಕದಿಂ ಜಲಧಿಯೊಳ್ ನಡೆಯಿಸಲ್ಕೆ ಪಟವಿಲ್ಲದೆ ನಡೆದು ಚಲಿಸದೆ
ಓತದಾವೆಡೆ ನಿಲ್ವುದದು ಜಯಸ್ತಂಭ ಮಿ
ರ್ಪಾ ತಾಣವಲ್ಲೆಮ್ಮ ಪೆಸರ್ವೇಳ್ದು ಶಿವಯೆಂಬ
ಮಾತುಗೆಡದೀ ಲೇಖಮಿರಿಸಲೊಡನಾ ಜಲಂ ಸ್ಥಲಮಾಗೊಳಗುದೋರ್ಪುದು ೧೯೮

ಆ ಮಾರ್ಗದೊಳ್ ಪಡಂಗಿಳಿದುರು ಜಯಸ್ತಂಭ
ಸೀಮೆಯೊಳ್ ನಿಲ್ವುದಾಗಳ್ ತಲ್ಲಿಖಿತದೊರೆಯ
ನೀ ಮಯಣವಲಗೆಯೊಳ್ ನಾಡೆ ಪತ್ತಿಸಿಕೊಂಡು ಬಳಿಕಂ ವಹಿತ್ರವೇಱಿ
ಏ ಮಾತೊ ಮೇಗಣ್ಗಡರ್ದು ತಡಿಯೆಯ್ದಿಸುವು
ದೀ ಮಾಳ್ಕೆಯಿಂ ತನ್ನಿಮಿದು ಪುಸಿದೊಡಾಂ ಭಕ್ತ
ನೇ ಮಹೇಶಂ ಪರಮೆ ಯಲ್ತಲ್ತು ಹರಿಯೆ ಪರವೀ ವಾದಿಯೇ ಗೆಲ್ದವಂ ೧೯೯

ಪಲವೇಕೆ ಪೋಗಿಮೆಂದೆನೆಯುವರ್ ಬೀಳ್ಕೊಂಡು
ಜಲಧಿಗೆಯ್ದಿದರತ್ತಲಿತ್ತಲಾ ಸಭೆಯೊಳಿದು
ನೆಲದೊಳೊಗೆದಂದವಲ್ತೆಂಬರ್ ಕೆಲಬರಕ್ಕಟಾಯಿದೇನಂ ನೆಗಳ್ದನೋ
ಉಲಿಯಲೆರ್ದೆ ನಡುಗುತಿದೆಯೆಂಬರ್ ಕೆಲಂಬರಿದೆ
ನೆಲೆಗೆ ನಿಲ್ವುದೆ ಎಂಬುವರ್ಕೆಲಬರಾ ಭರ್ಗ
ನೊಲವುಳ್ಳವರ್ಗಿದೇನಱಿದೆಂಬುವರ್ ಕೆಲಬರಿಂತು ಗಜಬಜಿಸುತುಮಿರೆ ೧೭೦

ಇನ್ನೇಕೆ ಗೆಲ್ದಿವೆನುತಿರ್ದವರ ಕೂಡೆ ಬಱಿ
ಪನ್ನತಿಕೆಯಂ ಬೀಱುತೇನಪ್ಪುದೋಯೆನುತೆ
ತನ್ನೊಳಗೆ ಚಿಂತಿಸುತೆ ವಾದಿಯಿರೆ ಕೆಲವು ದಿವಸಂಗಳೆದವರ್ ಶೀಘ್ರದಿಂ
ಮುನ್ನೀರತಡಿಗೆಯ್ದಲನಿತಱೊಳ್ ಪಡುವದಿ
ಕ್ಕಿನ್ನಾಡೆ ಗುರುವೊರೆದ ಕುಱುಪಿನಿಂದೊರ್ವ ಶ್ರೈ
ವನ್ನೆಟ್ಟನಿವರ ಪೊರೆಗೆಯ್ದಿಯನ್ಯೋನ್ಯಸಂಭಾಷಣಂಗೆಯ್ದು ಮೇಲೆ ೧೭೧

ಈ ಯಥಾಕಥನಮಂ ಕೇಳ್ದು ಪುಳಕಿಸಿಯಾಂ ಸ
ಹಾಯಿಯಾಗಿ ಪಡಂಗನುಱೆ ನಡೆಯಿಸುವೆನೆನು
ತ್ತಾ ಯೆಲ್ಲರಂ ತರಂಡದ ಮೇಲೆ ಕುಳ್ಳಿರಿಸಿಕೊಂಡು ಪಟಮಂ ಹಾರದೆ
ಒಯ್ಯಾರಮುಳಿದವರ್ ಸೋಜಿಗಂ ಬಡೆ ನಡೆಯಿ
ಪಾ ಯವಸರದೊಳನಿಭ್ರಾಭ್ರಮುಭ್ರಾಜಿತಾ
ಭ್ರಾಯತ್ತಕಣಗಣೋಡ್ಡಿಂಡೀರ ಪಿಂಡದೆ ವನಧಿಯೆಸೆದುದೇವಣ್ಣಿಪೆಂ ೧೭೨

ವಿದ್ರುಮವನಾವೃತಂ ವಿದ್ರುಮವನಾವೃತಂ
ಭದ್ರಮುಕ್ತಾಶೋಭಿ ಭದ್ರಮುಕ್ತಾಶೋಭಿ
ಯುದ್ರಾವಮೈನಾಗವರ ಶರಣನುದ್ರಾವಮೈ ನಾಗವರ ಶರಣಕಂ
ಸದ್ರತ್ನಸಂಗಸತ್ವೋದ್ರೇಭಶರನಿಚಯ
ಸದ್ರತ್ನಸಂಗಸತ್ವೋದ್ರೇಭಶರನಿಚಯ
ಮುದ್ರಿಕ್ತತಾಶೂನ್ಯಮುದ್ರಿಕ್ತತಾಶೂನ್ಯಮಂಬೋಧಿಯುಜ್ಜೃಂಭಿಕುಂ ೧೭೩

ಕುವಲಯಾವೃತಶೋಭಿ ಮಾರ್ತಂಡಮಂಡಿತಂ
ವಿವಿಧ ಬೇರುಂಡಾತ್ತಮಖಿಲ ಹರಿರಿಪುಸೇವ್ಯ
ಮವಿರತಂ ಜಡನಿಧಿಯಶೇಷಾನಿಮಿಷ ಮಹಾ ಕ್ರೀಡಾಸ್ಥಲಂ ಭಾವಿಸೆ
ನವ ವಿದ್ರುಮಾ[೨]ಭಾ[೧]ಸಿವ[೨]ನ[೨]ವಸು[೧]ಪ್ರ[೧]ಥಿತಮು
ದ್ಭವ[೧]ನ[೧]ವೀಚಿಸ್ಫೂರ್ತಿ ಮುಕ್ತಾವಲೀ ವಿಲಸಿ
ತವೆನಿಸಿ ಸಮುದ್ರಮೆಸೆದುದು ವೈರವೃತ್ತಿ ಶಾಂತರಸಾತ್ಮರೆಡೆ ನಿಲ್ವುದೇ ೧೭೪

---

೧ ಪ್ರಥಿತಮುದ್ರವನ (ಕ) ೨ ಭಾಷಶ್ಮಿವನ (ಬ)

ವನಗಜಧ್ವನಿ ಮರ್ದಲಸ್ವನಂ ವೇಲಾವಿ
ಪಿನ ಕೀಚಕವೆಸುಷಿರವಾ ಮಹಾಘೋಷವೇ
ಘನಗೀತಮೂರ್ವಿಘಟ್ಟನವೆ ತಾಳಂ ನೀರ್ಗಳಿವ ಘನವಸಿತಯವನಿಕೆ
ಮಿನುಗುವ ತಟಸ್ಥಶುಕ್ತಿಜಮೆ ಪುಷ್ಪಾಂಜಲಿ ಪ
ವನನೇ ನಟಂ ಶೀಕರಾಳಿ ನರ್ತಕಿಯಿಂತಿ
ವನುಗೊಳೆ ಪಯೋಧಿ ವರುಣನ ನಾಟ್ಯರಂಗಸ್ಥಲವೊ ಯೆನಿಸಿ ಕಣ್ಗೆಸೆದುದು ೧೭೫

ಇಂತೆಸೆವ ವಾರ್ಧಿಯಂ ನೋಡುತುಂ ಕೊಂಡಾಡು
ತುಂ ತರಂಡದ ಮೇಲವರ್ ಪೋಗುತಿರೆ ಜವದಿ
ನಂತದೆಯ್ದುತೆ ಜಲಧಿಮಧ್ಯದೊಳಗೊಂದೆಡೆಯೊಳಿತ್ತಲುಂ ಚಲಿಸದೆ ನಿಲೆ
ಅಂತವಱಿದಾ ಜಯಸ್ತಂಭದ ಸಸಿನವೆಂದ
ನಂತ ಚೋದ್ಯಂಬಡುತ್ತಾರ್ಯನಟ್ಟಿದನೆನು
ತ್ತಾಂತ ಲೇಖವನೀಶಮನುವೊರೆವುತಾ ನೀರೊಳಿಡಲೊಡನದೇ ವಣ್ಣಿಪೆಂ ೧೭೬

ಮದನಹರ ಮತ್ಸ್ಯಕೇಶ್ವರನಾಲಯವನಮಮ
ಪದಪಿಂ ಪ್ರದಕ್ಷಿಣಂಗೆಯ್ವ ಬಗೆಯೊ ಶಿವಾಂಕಿ
ತದ ಜಯಸ್ತಂಭಮಂ ತೋಱಿಸೆಂದಬ್ಧಿಪತಿಯಂ ಗುರುವಿನಧಿಕ ಶಕ್ತಿ
ಅದಿರದೆ ತೆಗೆದು ನಿಲಿಸೆ ಗೆರೆಯ ಬರೆವಿರವೊ ಶಿವ
ಪದವನಱಿಯದವರ್ ತೊಳಲ್ವರಿಂತು ಭವಾರ್ಣ
ವದೊಳೆಂದು ತೋರ್ಪನುವೊಯೆನೆ ಲೇಖವಾ ಪಡಂಗಂ ಬಳಸಿ ತಿರುಗುತ್ತಿರೆ ೧೭೭

ಪಿಂದೊರ್ವ ಶಿವಭಕ್ತಮುನಿ ಮುನಿದು ತನ್ನ ಕೈ
ಗೊಂದು ಬಿಂದುವವೊಲೆನ್ನಂ ಮಾಡಿ ಕುಡಿದನದ
ಱಿಂದೆ ಗುರು ಪೇಳ್ದಟ್ಟಿದಂತೆಸಗದೊಡೆ ಕೆಡುವೆನೆಂದನಿತು ನೀರ್ದೆಗೆದನೋ
ಮುಂದೆ ವಾದಿಯ ಗರ್ವರಸವರೆವಿರವ ಸೂಚಿ
ಪಂದವೋ ಮೇಣ್ ಗುರೋರಾಜ್ಞಾಂ ನ ಲಂಘಯೇ
ದೆಂದುಲಿವ ಶಾಸ್ತ್ರೋಕ್ತಿಯಂ ಜನಕೆ ತಾಂ ನಡೆದುತೋರ್ಪ ಬಗೆಯೋ ಬಳಿಕ್ಕಂ
೧೭೮

ಸಾರತರ ಶಿವನಾಮಮಂ ಸ್ಮರಿಸಿದರ್ಗಮಮ
ವಾರಾಂ ನಿಧಿರ್ಧ್ರುವಂ ಸ್ಥಲತಿ ಯೆಂದೊರೆದಾದ್ಯ
ರಾ ರಸೋಕ್ತಿಯೆ ಸತ್ಯಮೆಂದು ದೃಷ್ಟಂದೋರ್ಪನುವೊ ದೇಶಿಕನ ಕೀರ್ತಿಯಂ
ಚಾರು ಪಾತಾಳಕೆಯ್ದಿಪೊಡೆ ವರುಣಂ ಸಮೆದ
ದಾರಿಯೋ ಗುರುಮಹಿಮೆಗಳ್ಕಿ ಜಜ್ಜನೆ ಜರಿದ
ವಾರಿನಿಧಿಯೆರ್ದೆಯೊ ಗುರುರಾಟ್ ಪ್ರತಾಪಾಗ್ನಿಯನಿತುದಕಮಂ ಪೀರ್ದುದೊ
ಯೆನೆ ೧೭೯

ಆ ಪತ್ರಿಕಾಭ್ರಮಣದನಿತು ವಲಯದೊಳುಳ್ಳ
ಕೂಪಾರವಾರಿ ಕೂಪಂದೋಡಿದವೊಲಾಗೆ
ಮಾಪನುತ ಮತ್ಸ್ಯಕೇಶ್ವರನೆಡೆಗೆ ಸುರರೇಱಿಪೋಪ ಪುಷ್ಪಕವೋಯೆನೆ
ಆ ಪಥದೊಳಾ ಪಡಂಗಿರ್ದವೊಲಿಳಿಯೆ ವಹಿ
ತ್ರೋಪರಿಸ್ಥಲದಿನವರಿಳಿದಾ ಶಿವಂಗೆಱಗಿ
ದೀಪಿತ ಜಯಸ್ತಂಭಲಿಖಿತಮಂ ಮಯಣವಲಗೆಯೊಳೊಪ್ಪುವೋಲ್ ಪತ್ತಿಸೆ ೧೮೦

ಸೀರೆಯಂ ಸುತ್ತಿ ಮುದ್ರೆಯನಿಕ್ಕಿ ತಲ್ಲಿಂಗ
ಕೋರಂತೆ ನಮಿಸಿ ಬೀಳ್ಕೊಂಡು ಭೈತ್ರವನೇಱಿ
ಮಾರಾರಿಸಮಯಮಿಂತೂರ್ಧ್ವಗತಮಪ್ಪುದೆಂದಱಿವುವೊಲದೂರ್ಧ್ವಕಡರೇ
ಚಾರು ದೇಶಿಕನೊಡನೆ ಸೆಣಸುವನ ಬಾಯ್ಮುಚ್ಚು
ವಾ ರೀತಿಯಂ ತೋರ್ಪವೋಲ್ ಮುನ್ನಿನಂತೆ ತ
ದ್ವಾರಿಯಮರ್ದುದು ಬಳಿಕ್ಕಾ ನಾವಿಕಂ ಪಡಂಗಂ ತಡಿಯನುಱ್ ಸೇರಿಸಿ ೧೮೧

ಹರಹರಾ ನೋಡನೋಡಲದೃಶ್ಯನಾಗಲ
ಚ್ಚರಿವಡುತವರ್ ತದ್ವಹಿತ್ರಮನಿಳಿದು ದೋರ
ಶರಧಿಗೆ ಭರದೆ ಬಂದು ತತ್ ಸಮಸ್ತರಿನೆಸೆವ ಭೂಪಂಗೆ ಕೈಮುಗಿವುತುಂ
ಗುರುವಿಂಗೆಱಗುತೆ ವಾದಿಯ ನುಡಿಸುತುಂ ಸಭಾ
ಸ್ಥರನೀಕ್ಷಿಸುತ್ತಾ ಮಯಣವಲಗೆಯಂ ನೃಪನ
ಕರದೊಳಿಟ್ಟಾ ಸ್ಥಿತಿಯನೆಲ್ಲವಂ ಬಿನ್ನವಿಸೆ ಕೇಳ್ದು ಚೋದ್ಯಂಬಡುತ್ತುಂ ೧೮೨

ಮೋದದಿಂ ಸಾಮಾಜಿಕರ ಕರದೊಳೀಯುತಿದ
ನೋದಿಮೆನೆ ಕೈಕೊಂಡು ತತ್ಫಲಕಮುದ್ರೆಯಂ
ವಾದಿಯೆರ್ದೆಯೊಡೆಯಲೊಡೆದವನ ಮಱವೆಯನುಗಿವವೋಲದಱಮುಸುಕನುಗಿದು
ಆದಿಚರಮಂಬರಮುದಂ ನೋಡಿ ಮೇಣ್ ಗುರುವ
ನಾದರಿಸುತಾ ವಾದಿಯಂ ನೋಡಿ ನಸುನಗು
ತ್ತೋದಿದರ್ ಭೂಪ ಚಿತ್ತವಿಸೆಂದು ತತ್ಸರ್ವರುಂ ಕೇಳುತಿರಲಿಂತೆನೆ ೧೮೩

ಸ್ವಸ್ತಿ ಸರ್ವಾಮರಾನರ್ಘ್ಯಮಣಿಮುಕುಟ ವಿ
ನ್ಯಸ್ತಪಾದಂಗೆ ನಿತ್ಯಾಮಲಾನಂದ ಪರ
ವಸ್ತುಗೆ ಲಸನ್ಮಹಾದೇವಂಗೆ ನಿರುಪಮ ಜಯಪ್ರಾಪ್ತಿಯಲ್ಲದುಳಿದಾ
ವಾಸ್ತೋಷ್ಪತಿ ಬ್ರಹ್ಮ ವಿಷ್ಣ್ವಾದ್ಯಖಿಲಸುರರ್ಗೆ
ಶಸ್ತಮಿಲ್ಲಿಲ್ಲಪಜಯಪ್ರಾಪ್ತರಿಂತುಂ ನಿ
ರಸ್ತರದಱಿಂ ಪಶುಗಳೀಶನೇ ಪತಿ ತಚ್ಛಿವಾಸ್ಥಾನದೊಳ್ ಗಣಕುಲಂ ೧೮೪

ರವಿಗೆ ಪುಂಡ್ರೇಕ್ಷುವಂ ಶಿಖಿಗೆ ಮಣಿಕಂಕಣವು
ನವಿಕಲಿತ ಮಂದಾರಮಾಲೆಯಂ ಶಾರದಾ
ಯುವತಿಗೈವೊಗದ ಮಕುಟವನಬ್ಜಜಂಗೀ ಪರಿಯೊಳಖಿಲ ಸುರರ್ಗೆ ಕೊಟ್ಟು
ಅವರನುಱೆ ನಾಣ್ಚಿಸುತ್ತಿರೆ ನಂದಿಕೇಶನೊ
ಪ್ಪುವ ಹಾಸ್ಯಮುಖನಾಗಿ ವೇತ್ರಮುಂ ಜಡಿಯುತಾ
ದಿವಿಜರಂ ಭಂಗಿಸುವುದಂ ಬಿಡಿಪನಾತಂ ಸಲಹುಗೆನುತ್ತೀಯರ್ಥಮಂ ೧೮೫

ಎತ್ತಿ ಪೂಷ್ಣೇಯೆನುತೆ ಪುಂಡ್ರೇಕ್ಷುಕಾಂಡಮೆನು
ತುತ್ತಮಾಶೀರ್ಮುಖದಿನೀಶನ ಘನವನಿಂತು
ಬಿತ್ತರಿಸಿ ವಾತಿ ಬರೆದಿರಿಸಿದ ಜಯಸ್ತಂಭದೊರೆಯನವರೋದಲೊಡನೆ
ಸುತ್ತೇನೊ ನೃಪತಿಯುಂ ವಿಬುಧರುಂ ಸಭ್ಯರುಂ
ಮತ್ತುಳಿದ ಜನಮುಂ ಪುರೇಯೆಂದು ಕರಯುಗವ
ನೆತ್ತಿ ನಮಿಸಿದರೀಶಭಕ್ತರುಘೆಯುಘೆಯೆಂದರಾ ವಾದಿ ನುಡಿಯುಡುಗಿದಂ ೧೮೬

ಪರವಾದಿ ಮೋಹಾಂಧಕಾರಮಾರ್ತಂಡ ಜಯ
ಪರವಾದಿಗರ್ವಪರ್ವತದಳನವಜ್ರ ಜಯ
ಪರವಾದ ಮಹಿವೋನ್ನತಿಪ್ರಬಲಭೂಜವಿಚ್ಛೇದನ ಪರಶ್ವಥಜಯಾ
ಪರವಾದಿವಾಹಿನೀ ವಾರ್ಧಿ ಬಡಬಾಗ್ನಿ ಜಯ
ಗುರು ಪದ್ಮಣಾರ್ಯ ಜಯಜಯಯೆಂದು ಪಾಠಕಾ
ದ್ಯರನೇಕ ವಿಧದೊಳಂಕಿಸಿದರಾಗಳ್ ನೃಪಪ್ರಮುಖರ್ ಗುರುವನೀಕ್ಷಿಸಿ ೧೮೭

॥ಇದುಚಕ್ರವಾಳಂ॥ ನೆನೆಯಲಕ್ಕುಮೆ ನೆನೆದೊಡಂ ನುಡಿಯಲಕ್ಕುಮೇ
ನೆನೆದೊಡಂ ನುಡಿದೊಡಂ ಬರೆಯಿಸಲ್ ಬಕ್ಕುಮೇ
ನೆನೆದೊಡಂ ನುಡಿದೊಡಂ ಬರೆಯಿಸಿದೊಡಂ ಕಳಿಪಲಕ್ಕುಮೇ ತಾಂ ನೆನೆದೊಡಂ
ಸಿನೆ ನುಡಿದೊಡಂ ಬರೆಯಿಸಿದೊಡಂ ಕಳಿಪಿದೊಡಂ
ನನಸಾಗಿ ತೋಱಲಕ್ಕುಮೆ ನೆನಪು ನುಡಿ ಬರೆಯಿ
ಪನು ಕಳುಪುವುದು ತೋರ್ಪುದಿನಿತುವುಂ ನಿನಗಲ್ಲದಿಲ್ಲೆಂದು ಬಣ್ಣಿಸುತಿರೆ ೧೮೮

ತಲೆದೂಗದವರಿಲ್ಲ ನಾಸಾಗ್ರಭಾಗಕಂ
ಗುಲಿಯನಿಡದವರಿಲ್ಲ ಶಿವಶಿವಾ ಪೊಸತಿದೆಂ
ದುಲಿಯದವರಿಲ್ಲೆಂದುವುಂ ಕಂಡು ಕೇಳ್ದುದಲ್ಲೆಂದು ಕುಱುಪಿಡದರಿಲ್ಲಾ
ಉಲುಪಡಂಗಿದ ವಾದಿಯಂ ನೋಡಿ ನುಡಿಸಿ ಮೂ
ದಲಿಸದವರಿಲ್ಲ ಪೊಗಳದವರಿಲ್ಲಾಶ್ಚರ್ಯ
ಜಲಧಿಯೊಳ್ ಮೂಡಿ ಮುಳುಗಾಡದವರಿಲ್ಲಾ ಸಮಯದಲ್ಲಿ ಪದ್ಮಣಾರ್ಯಂ
೧೮೯

ಮುಂದಿರ್ಪ ವಾದಿಬಲಮಂ ನೋಡಿ ಮದ್ಭಾಷೆ
ಸಂದುದೇ ದಾಸನೀನಿನ್ನಿಂತಸತ್ಯದ
ಲ್ಲೊಂದಿ ಕಾಳ್ಗೆಡೆಯದಿರ್ ವೇದದೊಳ್ ಪುರುಷಾರ್ಥಮಿಲ್ಲೆಂಬ ಪಾಂಚರಾತ್ರ
ನೀಂ ದಲುಲಿಯದಿರು ಪಾಷಾಣತ್ವವಪವರ್ಗ
ವೆಂದೆಂಬ ವೈಶೇಷಿಕನೆ ಮಿಡುಕದಿರನಿತ್ಯ
ವೆಂದೆನಿಪ ಚಿತ್ತಿಗಾಶ್ರಯನಾತ್ಮನೆಂಬ ನೈಯಾಯಿಕ ನಿನಗೆ ನಿಲ್ಕುಮೇ ೧೯೦

ಕೆಡುವೀ ಪ್ರಪಂಚಮಂ ನಿತ್ಯವೆಂದೆಂಬ ಬಾ
ಯ್ಬಡಿಕ ಮೀಮಾಂಸಕಾ ನೀಂ ಸುಮ್ಮನಿರ್ ಪುಂಸ್ತ್ವ
ಜಡಭಾವಪುರುಷ ಪ್ರಕೃತಿಗಳವಿವೇಕಿಸಿಯಱಿಯೆ ಮೋಕ್ಷವೆಂಬ ಸಾಂಖ್ಯಾ
ಉಡುಗು ಷಡ್ವಿಂಶಮೀಶ್ವರತತ್ವಮೆಂದು ನಿಜ
ದೆಡೆಯನಱಿಯದೆ ಭವಕೆ ಬರ್ಪ ಪಾತಂಜಲನೆ
ನುಡಿಯದಿರ್ ಬ್ರಹ್ಮಕ್ಕೆ ಜೀವತೆಯನೊರೆದ ವೇದಾಂತಿ ನಿನಗೇತರಱಿವೈ ೯೯೧

ಪರಶಿವಂ ಪರಿಣಮಿಪನೆಂಬೆಲೆ ಪ್ರಾತ್ಯಭಿ
ಜ್ಞರಿರ ಪರಿಣಾಮವುಂಟೇ ಚಿನ್ಮಯಂಗಿದು ಬು
ಧರು ಮೆಚ್ಚೆ ಘನಶಿವಾದ್ವೈತದ ರಹಸ್ಯವಱಿಯದ ಭೇದವಾದಿ ತೊಲಗೈ
ಕರಣೇಂದ್ರಿಯಂಗಳಂ ಚೈತನ್ಯವೆಂದಱಿಯ
ದೊರೆವ ತತ್ತ್ವಚೈತನಿಕ ವಾದಿಗಳಿರ ಸೈ
ತಿರಿಮಕಟ ನಿಷ್ಫಲಂ ನಿತ್ಯಕರ್ಮ ಯೆನಲ್ಕೆ ಸಲ್ವುದೇ ಪ್ರಾಭಾಕರಾ ೯೯೨

ಓವಲಱಿಯದ ಯಜ್ಞಪುರುಷನೆಲೆ ಯಾಜ್ಞಿಕಾ
ದೈವವೆ ಪಿತಾಮಹನ ಬಗೆಯಱಿಯ ಪೌರಾಣಿ
ಕಾವಚಿಸುವರೆ ದೈವವೆಂದವನನೀಶಕೃತ ವೇದಂ ಸ್ವಯಂಭುವೆಂಬಾ
ಗಾವಿಲನುಡಿಯ ಭಾಟ್ಟವಾದಿ ಮಟ್ಟಮಿರ ಶೌ
ಚಾವಿಷ್ಟ ನರಕಪಾಲದೊಳೆ ಭಿಕ್ಷೆಯನೆರೆದು
ಸೇವಿಸಲ್ವೇಳ್ಕುಮೆಂದೆಂಬ ಕಾಪಾಲಿಕಾ ನಿನ್ನ ಮಾತುಂ ಸೇವ್ಯಮೇ ೯೯೩

ಯುಕ್ತಿಸಲ್ ಸಂಸೃತ್ಯವಸ್ಥೆಯೊಳಮಣುಗೆ ಚಿ
ಚ್ಛಕ್ತಿಯೇಯೆಂಬೆಲೆ ಮಹಾವ್ರತನೆ ನಿನ್ನದು ದು
ರುಕ್ತಿ ಬಿಡು ಶಿವನ ಚಿತಿಯಾತ್ಮರೊಳ್ ಸಂಕ್ರಮಿಪುದೆಂಬಪಾಶುಪತ ನಿಲ್ಲೈ
ಯುಕ್ತಿಯಂ ಬಿಟ್ಟು ಜಡಕರ್ಮವೇ ದೈವಮೆಂ
ದುಕ್ತಿಸುವ ಕರ್ಮವಾದಿ ಸಮಂತಿರಚಿದಧಃ
ಶಕ್ತಿತತ್ವವನೆಯ್ದುವುದೆ ಮುಕ್ತಿಯಾದ ಶಾಕ್ತನೆ ನಿನ್ನ ತಿಳಿವೆಂತುಟೈ ೯೯೪

ಎಲೆಲೆ ಹಿಂಸಾ ಮೈಥುನಂಗಳುಳ್ಳದಱಿನು
ಜ್ವಲಿಕುಂ ಪಿಶಾಚಪದವದನಡರ್ವ ಕೌಳಯಾ
ಮಳರಿರಾ ಕೆಲೆಯದಿರಿಚೈತನ್ಯಭೂತಂಗಳುಂ ರಾಹುಭಯದೆ ನೋವಾ
ಜಲಜಾರಿ ರವಿಗಳುಂ ಭದ್ಧಾತ್ಮನುಂ ಶಿವನ
ತುಲ ತನುಗಳಂತಱಿಂದಿವೆ ದೈವವೆಂದಱಿಯ
ದುಲಿವಷ್ಟಮೂರ್ತಿ ವಾದಿಯವರ್ಕೆ ಶಿವನೊಡೆಯನೆಂದಱಿಯೆ ನಿನಗೆ ಮಾತೇಂ ೧೯೫

ಹರಿಹರರ್ಗಾ ಹರಿಹರಾಜರ್ಗಭೇದವೆಂ
ಬೊರೆಯಿಂ ದ್ವಿಮೂರ್ತಿ ತ್ರಿಮೂರ್ತಿ ವಾದಿಗಳಿರಾ
ಸೊರಹದಿರಿಮುವರ್ಗೆ ಹರನೊಡೆಯನೆಂದಾಮ್ನಾಯಮುಖದೆ ಸಿದ್ಧಿಸಿದೆವಾಗಿ
ಇರದಳಿವೊಡಲೆಯಾತ್ಮನಳಿದುದೆ ಮುಕುತಿಯೆಂಬ
ನರಕಿ ಲೋಕಾಯತನೆ ಗಳಪದಿರ ಶುದ್ಧಿಗಾ
ಕರವಾದ ಬುದ್ಧಿ ಪರವೆಂದು ಯತ್ಸತ್ತತ್ಕ್ಷಣಿಕಮೆಂಬ ಬೌದ್ಧಮತದಾ ೧೯೬

ಸರ್ವಶೂನ್ಯತೆಯೊರೆವ ಮಾಧ್ಯಮಿಕ ಮತಿಯುಡುಗು
ಗರ್ವಿ ಯೋಗಾಚಾರ ಬುದ್ಧಿಮಾತ್ರವನೆ ಬಗೆ
ದುರ್ವದಿರು ಬುದ್ಧಿಯಾಕಾರದಿಂದಖಿಲ ಬಾಹ್ಯಾರ್ಥಮನುಮೇಯಮೆಂಬಾ
ದುರ್ವಿದಗ್ಧತೆಯನುಳಿ ಸೌತ್ರಾಂತಿಕನೆ ನಿನಗ
ನಿರ್ವಾಹ್ಯವೆನಿಸುವವಯವ ಮಾತ್ರವನೆ ನೆರ್ವಿ
ಕೊರ್ವದಿರು ವೈಭಾಷಿಕಾ ವ್ಯಕ್ತಚಿತಿಯಳಿವುದೇ ಪ್ರವಾಹೇಶವಾದಿ ೧೯೭

ಸಲೆಯಚೇತನತಾ ಧ್ರುವತ್ವಾದಿ ದೋಷಂಗ
ಳಲೆವುವು ಶರೀರ ಪರಿಮಿತನಾತ್ಮನಾದೊಡೆಂ
ದೆಲೆತಿಳಿಯದಪ್ರಬುದ್ಧಕ್ಷಪಣಕಾ ಬೆಸೆಯದಿರನೇಕ ಮುಖದಿನೊಗೆದು
ನೆಲೆಯಿಲ್ಲದಳಿವ ಕಾಲನೆ ದೈವವೆಂಬನು
ಜ್ವಲ ಕಾಲವಾದಿಯುರ್ಬದಿರನೇಕೇಚ್ಛೆಯಿಂ
ಫಲಿಸದಾವುದುಮೆಂದಱಿಯದನೇಕೇಶ್ವರಾಹ್ವಯ ವಾದಿ ಸೊರ್ಕನುಳಿಯೈ ೧೯೮

ಜಡನಿಸರ್ಗಂಗಳ್ ನಿವೃತ್ಯಾದಿ ಭುವನಂಗ
ಳಡಸಿಯವನೆಯ್ದುದುದೆ ಮುಕ್ತಿಯಾಗುಳ್ಳ ಗಾ
ರುಡ ದಕ್ಷಿಣ ಸುವಾಮಭೂತ ತಾಂತ್ರಿಕರಿರಾ ನಿಮ್ಮ ನುಡಿಗಳ್ ಶ್ಲಾಘ್ಯಮೇ
ಬಿಡಿಮುಭವಮತಕೆ ಸರಿಯಿಲ್ಲಿಲ್ಲ ಯೀನುಡಿಗೆ
ಮುಡಿಗೆಯಿಕ್ಕದೆ ನಾಪೊರ್ಡೆತ್ತಿಮೆಂದಾರ್ಯನವ
ಗಡಿಸಿ ವಾದಿಗಳೆಱಗುವಿನಮಿಂತೊರೆಯೆ ನೃಪಾದಿಗಳೇಳ್ದು ನಿಂದು ನಮಿಸಿ ೧೯೯

ಸೂರ್ಯಾಂಶುಗಿದಿರೆ ತಿಮಿರಾಳಿಯುರ್ವೆಲೆ ಪದ್ಮ
ಣಾರ್ಯ ನಿನ್ನುಕ್ತಿಗಿದಿರೇ ವಾದಿತತಿಯ ಚಾ
ತುರ್ಯವೆಂದಿಂತು ಪಲತೆಱದೆ ಪೊಗಳ್ದುಚಿತ ಸತ್ಕಾರಮನೆಸಗೆ ಗುರುವರಂ
ತೌರ್ಯ[೧]ತ್ರಿಕಂ[೧] ಪೊಣ್ಮಲೇಳ್ದು ನಡೆತಂದು ನರ
ವರ್ಯ ಮುಖರಂ ನಿಜ ಗೃಹದ್ವಾರದೊಳ್ ಕಳಿಪಿ
ಯಾರ್ಯೇಶಭಕ್ತತತಿವೆರಸಂತವುರಕೆಯ್ದಿ ಶಿವಸುಖದೊಳೊಪ್ಪುತಿರ್ದಂ ೨೦೦

ಮದಕುಧರ ವಿದಳನಭಿದುರ ಪರಮ ಶಿವಭಕ್ತ
ಪದಶತದಳಾದಭ್ರಮುಕರಂದಲೀಲಾ ಪ್ರ
ಮುದ ಪರವಶೀಭೂತ ಮಧುಕರೋಪಮ ಪದ್ಮಣಾಂಕಪ್ರಣೀತಮಾಗಿ
ಸದಮಳಾಖಿಳ ಶಾಸ್ತ್ರಸಾರಮೆಂದೆನಿಸುವ
ಭ್ಯುದಯಕರ ಪದ್ಮರಾಜ ಪುರಾಣಕಥೆಯೊಳಿಂ
ತಿದು ವಾದಿಯಂ ಗುರುವೊಡಂಬಡಿಸಿ ಗೆಲ್ದ ಪನ್ನೊಂದನೆಯ ಸಂಧಿಯೆನಿಕುಂ ೨೦೧

ಈಶಾಪರಾವತಾರನ ವಿಬುಧನುತನ ಭವ
ಪಾಶನಾಶಕ ಕೆಱಿೞಿಯ ಪದ್ಮಣಾರ್ಯನ ಲಸತ್
ಶ್ರೀ ಶಿವಾದ್ವೈತ ಸಾಕಾರ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯನಾ
ಈ ಶುದ್ಧ ಚರಿತಮಂ ತಿಳಿಪಿದಗೊರ್ೀದಿದ
ಗಾರ್ಸೆಯಿಂ ಕೇಳ್ದರ್ಗೆ ಭುಕ್ತಿಮುಕ್ತಿಗಳಂ ಮಹಾ
ಶುಭಂಗಳನಾಯುವಂ ಕೊಟ್ಟು ಗುರುರೂಪ ವಿಶ್ವನಾಥಂ ರಕ್ಷಿಪಂ ೨೦೨

---

೧ ತ್ರಯಂ (ಬ)

ಅಂತು ಸಂಧಿ ೧೧ ಕ್ಕಂ ಪದಂಗಳು ೧೧೪೨ ಕ್ಕಂ

ಮಂಗಳಮಗಮತ್

ಶ್ರೀ

ಹನ್ನೆರಡನೆಯ ಸಂಧಿ

ಸೂಚನೆ : ಆ ಉರಿಯಲಕ್ಕುವೋ ಶಿವಶಿವಾನರರ ಸಂ
ಸ್ಕಾರವಂ ತದ್ವಾದಿ ಗುರುಪುಂಗವನನೊಲಿಸಿ
ಚಾರು ಶಿವದೀಕ್ಷೆಯಂ ನಿಜಕುಟುಂಬಂವೆರಸು ಪಡೆದವುಲ ಸುಖದೊಳೆಸೆದಂ

ಭದ್ರತರ ಘನಕೂಲಮುದ್ರುಜವಿಸ್ಫತ್ವರೋ
ದ್ಯದ್ರೇಭಶೋಭಿತಾಶೀರ್ಣ ಶೀಕರ ವಿಕೀ
ರ್ಣೋದ್ರಿಕ್ತ ಭೂರಿ ಭಂಗಾಭೋಗ ಭಂಗೀಭರಿತ ಭಾಸಮಾನ ಫೇನ
ಸದ್ರಾಜಿ ರಮಣೀಯ ಭಾರ್ಗವಚ್ಛಾತ್ರದುರ್
ಹೃದ್ರುಚಿರಮಂದಿರ ವರ ತರಂಗಿಣೀ ಪೂರ
ಭೃದ್ರುಂಭಿತೋರುನೀರಂಧ್ರಮೇದುರಜಟೋನ್ನಿದ್ರ ಜಯ ವಿಶ್ವನಾಥಾ ೧

ಅಂತಾರ್ಯವರ್ಯಂಗೆ ವಾದಿ ವಾದದೆ ಸೋಲ್ತ
ನಂತಱಿದೊಳವರೊಡನೆ ಸಂಭಾಷಿಸಿದ ಪುಣ್ಯ
ದಿಂ ತಚ್ಛಿವಜ್ಞಾನಶಕ್ತಿಪಾತಂ ಸ್ಫುರಿಸೆ ನಿಜ ಭವಿತ್ವಕ್ಕೆ ಪೇಸಿ
ಕಂತುಹರದೀಕ್ಷೆಯಂ ಕೈಗೊಂಡು ದುಷ್ಕೃತ
ಧ್ವಾಂತಮನಲೆವೆನೆಂದು ನೆನೆದು ತನ್ನ ಕುಟುಂಬ
ವಂ ತಡೆಯದಾ ಪುರಕೆ ಬರಿಸಿ ವಾಸಂಗೆಯ್ದು ಗುರುಕೃಪೆಯ ಪಡೆವೆನೆನುತುಂ ೨

ಏವಣ್ಣಿಸುವೆನಾತ್ಮಮಲಿನವಂ ತೊಳೆವಂತಿ
ರೋವೊ ತಚ್ಛ್ವೇತವೃತ್ತಿಕೆಯುಮಂ ತೊಳೆದಸಮ
ಪಾವನ ವಿಭೂತಿಯಂ ತಳೆದು ಭವಪಾಶಮಂ ಪರಿವಂತೆ ಕಂಠದಲ್ಲಿ
ತೀವಿರ್ಪ ತುಳಸೀಮಣಿಯ ಮಾಲೆಯಂ ಪರಿದು
ಶೈವಾಂಕ ರುದ್ರಾಕ್ಷಮಾಲೆಯಂ ಧರಿಸಿ ಸದ್
ಭಾವಿಯಂತಿರದೆ ಮುಕ್ತಿಯೊಳಿಚ್ಛೆಯುಣ್ಮೆ ಸಂಸೃತಿಗುದಾಸೀನವೊದವೆ ೩

ಶಿವಭಕ್ತರೊಳ್ ಭಕ್ತಿ ಸಂಘಟಿಸೆ ಶಿವಶಾಸ್ತ್ರ
ನಿವಹದೊಳ್ ಶ್ರದ್ಧೆಯೊಗೆಯೆ ಶಿವಾರ್ಚನೇಚ್ಛೆಸಂ
ಭವಿಸೆ ಭಕ್ತ್ಯಾವೇಶದಿಂ ಕೆಱೆಯ ಪದ್ಮಣಾರ್ಯರ ಸಭಾಸ್ಥಲಕೆ ಬಂದು
ಶಿವಶರಣಗೋಷ್ಠಿಯಲ್ಲಿಸೆವ ಗುರುವಂ ಕಂಡು
ನವ ಸಾತ್ವಿಕಂ ಸಮಂತಡರೆ ದಂಡಪ್ರಣಾ
ಮವನೆಸಗಿ ಚರಣದೊಳ್ ಬಿಳ್ದೇಳ್ದು ಕೈಮುಗಿದು ಭಯಭಕ್ತಿಸಹಿತನಾಗಿ ೪

ಗುರುವೆ ನತಜನ ಕಲ್ಪತರುವೆ ಭಕ್ತಿಗೆ ನೆಗಳ್ದ
ಕರುವೆ ಭಜಕರ ಭಾಗ್ಯದಿರವೆ ಶಿವಚಿತ್ಸುಖಾ
ಕರವೆ ಕಾರುಣ್ಯಸಾಗರವೆ ಸಾಕ್ಷಾತ್ ಪರಾತ್ಪರವೆ ಸುಸ್ಥಿರವೆ ವರವೇ
ನರಕಿಯೊಳ್ ದುರ್ಮಾರ್ಗಿಯೊಳ್ ಶಿವದ್ರೋಹಿಯೊಳ್
ಹರಿ ದೈವವೆಂದು ಗೆಡೆದಜ್ಞಾನಿಯೊಳ್ ಭಯಾ
ತುರನೊಳೆನ್ನೊಳ್ ಗುಣವನಱಿಸದುಳುಹೆಂದು ದೈನ್ಯಂದೋಱಿ ಮತ್ತಮೆಱಗೆ ೫

ನಸುನಗುತ್ತೇಳೇಳದೇಕಿನಿತಳಲ್ವೆಯೆಂ
ದೊಸೆದವನನೀಕ್ಷಿಸಿ ಸಹಸ್ರ ಜನ್ಮಾಂತರದೊ
ಳೆಸಗಿದ ಸುಕೃತದಿನಲ್ಲದೆ ಶೈವಮತಿಯೊಗೆಯದೇಗೆಯ್ವೆ ನೀನೆನೆಯವಂ
ಅಸಮ ಗುರುಕೃಪೆಗೆ ಪುಳಕಿಸಿ ನಿಮ್ಮ ಚರಣಸಾ
ರಸದ ಮಱೆಯೊಕ್ಕೆನಗೆ ಶಿವದೀಕ್ಷೆಯಿತ್ತು ರ
ಕ್ಷಿಸನಾಥನಂ ಕಾಡಲೇಕೆಂದು ಮುಗುಳೆ ಮೈಯಿಕ್ಕೆ ನಿನಗದು ಶಕ್ಯಮೇ ೬

ಮಾಡು ಪೀಠಾರ್ಚನಮನೆನೆ ಕೇಳದಿರೆ ನಾಳೆ
ನಾಡಿದೆಂದಿತೊಂದು ಬರಿಸಂಬರಂ ಶಿಷ್ಯ
ಚೂಡಾಮಣಿಯ ಚಿತ್ತಮಂ ಬಹು ವಿಧದೊಳೊರೆದು ನೋಡಿ ಮನವೊಲ್ದು ನಿನಗೆ
ಮಾಡುವೆವನುಗ್ರಹವನೆಂದೊಂದು ಶುಭದಿನದೊ
ಳಾಡೆ ಪೆರ್ಚಿ ತದಾಜ್ಞೆಯಿಂದೆ ಸುಸ್ನಾನಮಂ
ಮಾಡಿ ಧೌತಾಂಬರಾಭರಣ ಮಾಲ್ಯ ತ್ರಿಪುಂಡ್ರಾದ್ಯಲಂಕಾರಿಯಾಗಿ ೭

ಗುರುಪದಾಬ್ಜನ ಬಳಿಗೆ ಬಂದು ಮೆಯ್ಯಿಕ್ಕೆ ಶುಭ
ಕರ ಸುವರ್ಣಪ್ರಸೂನಾದ್ಯಖಿಲ ವಸ್ತುವಂ
ವರಭಕ್ತಿಯಿಂ ಸಮರ್ಪಿಸಿ ನಲಿವ ಶಿಷ್ಯನಂ ನೋಡಿ ವಿಧ್ಯುಕ್ತಮಾಗಿ
ಕರಮೆಸೆವ ಋತ್ವಿಕ್ಕುಗಳನರ್ಚಿಸಿಸಿ ಶಂಭು
ಶರಣಸಂಘಕೆ ಭಸಿತ ತಾಂಬೂಲಮಂ ಕಾಣ್ಕೆ
ವೆರಸುಕೊಡಿಸಿಯನಂತರಂ ತತ್ಸಭಾಪ್ರದಕ್ಷಿಣಮನೆಸಗಿಸಿ ಬಳಿಕ್ಕಂ ೮

ಸ್ಫುರದಲಂಕೃತ ಮಂಡಪದ ವರ್ಣಮಂಡಲದೊ
ಳುರು ನವ ಸ್ವರ್ಣಾದಿ ಕಲಶಪಂಚಕಮನವ
ಱಿರವೆಸೆಯೆ ಮಧ್ಯದಲ್ಲೊಂದಂ ಚತುಷ್ಕೋನದಲ್ಲಿ ನಾಲ್ಕಂ ಸ್ಥಾಪಿಸಿ
ತರದಿಂದವಂ ನೂತ್ನವಸ್ತ್ರದೊಳ್ ಸುತ್ತಿಯು
ತ್ಕರ ಹೇಮ ರತ್ನಾದಿಗಳನವಱೊಳಿರಿಸಿ ಭಾ
ಸುರ ಶುದ್ಧ ತಂತುಪಂಚಕದೆ ವೇಷ್ಟಿಸಿ ಮಧ್ಯಕಲಶವಂ ತಾನರ್ಚಿಸಿ ೯

ಉಳಿದವಂ ಋತ್ವಿಕ್ಕುಗಳ ಕರದಿನರ್ಚಿಸಿಸಿ
ಬಳಿಕೆ ತತ್ತೀರ್ಥಾಂಬು ಪೂರ್ಣೋದ್ಧಕಳ ಶಾಳಿ
ಗಳನಾಮ್ರಪಲ್ಲವ ಸುದೂರ್ವಾಂಕುರ ಕ್ರಮುಕ ತಾಂಬೂಲ ಪತ್ರಂಗಳಿಂ
ಜ್ವಳಿಸೆ ಸಾಂಗಗೆಯ್ಸಿ ಮೂಲದಿಂದಾ ಕಲಶ
ಜಲಮನಭಿಮಂತ್ರಿಸಿ ಸದುಕ್ತಾಸನಸ್ಥನಾ
ಗಲಘು ತೂರ್ಯತ್ರಯರವಂ ಮಿಗಲ್ ಸ್ವಸ್ತಿಕಾರೋಹಣಮೆಸಗಿಯವಂಗೆ ೧೦

ಕ್ಷಾರಕ್ರಿಯೆಯನೋವಿ ಶಿವಮನುನ್ಯಾಸಮಂ
ಪೂರಯಿಸಿ ದೂರ್ವಾಂಕುರಾದಿಗಳಿನುದ್ಧೃತೋ
ದಾರ ಕುಂಭಾಂಬುವಂ ಋತ್ವಿಕ್‌ಸಮೇತಂ ತ್ರಿವಾರಂ ಯಥಾ ನ್ಯಾಯದಿಂ
ಚಾರು ಮೂರ್ಧಾಭಿಷವನೆಸಗಿ ಶಿವಶಾಂತಿಕಮ
ನಾರಯ್ದು ಶಿವಹಸ್ತಮಂ ಮಾಡಿ ಶಿರದೊಳಿ
ಟ್ಟು ರುದ್ರತೇಜೋಮಯೋರು ಪಾಣಿಯನೀಶವನುವನೊರೆವುತೆ ಗೂಢದಿಂ ೧೧

ಭಾವಿಸಿ ಶಿವಾಸನಮನಾ ಶಿಖಿಯೊಳಂತದಱೊ
ಳಾವಾಬನಿ ಯಥಾವಿಧಿಯಿನೀಶನಂ ಮನದೊ
ಳೋವಿ ಪೂಜಿಸಿ ಬೇಡಿಕೊಂಡಂಜಲಿಯನಿತ್ತು ದೇವ ನೀಂ ತೊಲಗದಿಲ್ಲಿ
ಆವಗಮಿರೆಂದು ವಿಜ್ಞಾಪಿಸಿ ಮಹೇಶತೇ
ಜೋವಿಭವದಿಂದೆಸೆವ ಘನಮನುವನವಸ ಕ
ರ್ಣಾವಗತಮಪ್ಪಂತು ಪಾಂಶೂಪದೇಶಮಂ ಮಾಡೆ ಹೃಷ್ಟಾತ್ಮನಾಗಿ ೧೨

ಅಂಜಲ್ಯುಪೇತನಾಗಿರ್ದ ಸಚ್ಛಿಷ್ಯಂ ಚಿ
ದಂಜನವೆನಿಸುವ ತನ್ಮಂತ್ರಾತ್ತಮನನಾಗ
ದಂ ಜಗದ್ಗುರು ಪೇಳ್ದವೊಲ್ ಮೆಲ್ಲ ಮೆಲ್ಲನೊರೆವುತಿರೆ ಕರ್ತರಿಯಿನವನಾ
ಭಂಜಿಸುವಶೇಷಪಾಶಚ್ಛಿತ್ತಿಗೆಯ್ದು ಮು
ನ್ನಂ ಜಲದೊಳಧಿವಾಸಿಸಿರ್ದ ಘನ ಲಿಂಗಮಂ
ರಂಜಿಸುವವೋಲ್ ಸಾಂಗದಿಂ ಯಜಿಸಿಯಘಹಾರಿಯಾದ ವಿಸ್ಫುರಿತಮಾದ ೧೩

ಪರವಾದ ಸೂಕ್ಷ್ಮವಾದಖಿಲ ಮಂತ್ರಾಳಿಗು
ತ್ತರ ಪರಮ ಬೋಧವಾದಾ ಶಿಖಾಕಲೆಯನು
ತ್ಕರ ಭಾವದಿಂ ಮನಕ್ಕಾಮನದಿನಕ್ಷಿಗದಱಿಂ ಕರಾಂಭೋಜದಲ್ಲಿ
ಸ್ಫುರಿಪ ತಲ್ಲಿಂಗದೊಳ್ ತಂದಿರಿಸಿಯದನವನ
ಕರ ಶುದ್ಧಿಗೆಯ್ದಿತ್ತನನ್ಯಂ ಗೆಯಿಸಿ ನಿನಗಿ
ದುರುತರ ಪ್ರಾಣಲಿಂಗಮಿದಂ ಸಮಂತೊರ್ಮೆಯುಂ ತೊಲಗದರ್ಚಿಸೆನುತುಂ ೧೪

ತತ್ತದಾಚರಣಮಂ ತಿಳಿಪಿ ಬಳಿಕೆಂದನಿದ
ನುತ್ತಮಾಂಗಾದಿ ಸ್ಥಲಂಗಳೊಳ್ ತಳೆನಾಭಿ
ಯತ್ತಣಿಂ ಕೆಳಗೆ ತಳೆಯದಿರಿದಿರ್ದವನ ಕರವೀಶಸಂಪದಕಾಕರಂ
ಚಿತ್ತಿನೊಳ್ದಿರುಳಿದು ನಿಜೋಜ್ವಲ ವಿಮುಕ್ತ್ಯಂಗ
ನೋತ್ತಮಾಂಗಾಗ್ರಸ್ಫುರತ್ ಪರಂಜ್ಯೋತಿಯಿದು
ದಾತ್ತ ಸಂಜೀವಿನೀಘುಟಿಕೆಯಿದು ದಿವ್ಯಾನುಭವ ರಹಸ್ಯಾಶ್ರಯವಿದು ೧೫

ಮತ್ತಂ ಸಕಲ ಕಲಾತತ್ವಭುವನೋದ್ಭ ವ
ರ್ಣಾತ್ತಪದಮಂತ್ರಭರಿತಾಮಲಕರಂಡಮು
ತ್ಯುತ್ತರ ಪದದ್ಯೋತಕಂ ವಿವಿಧ ಸಿದ್ಧಿಬೀಜಮಪಾರ ಮಹಿಮಾವರ್ಣವಂ
ಸುತ್ತೇನಿದಂ ಹರಿಮುಖರ್ ತಾಳ್ದರಿದನಾಂತ
ನುತ್ತಮನವಂಗಾವ ಭಯಮಿಲ್ಲ ಹುತವಹಾ
ಯತ್ತ ಲೋಹದವೊಲೀಶೈಕ್ಯಮೆಲ್ಲರವೊಲಲ್ಲೆಂದಱಿಪಿ ಮತ್ತವೊರೆದಂ ೧೬

ಅಮಲಿನಶ್ಲಿಷ್ಟ ಕೇಶೌಘಮರ್ಧೇಂದು ವಿ
ಭ್ರಮ ಭಾಳಮಂಭೋಜಲೋಚನಂ ಮಂದಹಾ
ಸ ಮುಖಾಂಬುಜಂ ವರಾಂಸದ್ವಯೊಪೇತಂ ಕವಾಟವಿತತೋರಸ್ಥಲಂ
ಸುಮಹದಾಜಾನು ಬಾಹೂದ್ಧದೋಸ್ತಂಭಮರು
ಣಿಮಹಸ್ತಪಲ್ಲವಂ ಘನನಿತಂಬಂ ಸುರ
ಕ್ತಿಮತಳೋನ್ನತ ಪದಾಬ್ಜಂ ಜಗನ್ಮಾನಸಾಕ್ಷಿ ವಿಮೋಹನ ಪರಿವೃಢಂ ೧೭

ಅತಿ ಸುಂದರಾಕಾರಯುಕ್ತಂ ವಿಲಾಸವ
ಕ್ಷತಘನಂ ಭೋಗೈಕಲಾಲಸಂ ತದ್ವಿಶ್ವ
ಪತಿಯ ತೇಜೋಮೂರ್ತಿಯದನನುದಿನಂ ಧ್ಯಾನಿಸೆಂದು ಪೇಳ್ದಕ್ರೋಧಮುಂ
ವಿತತ ಗುರು ಶುಶ್ರೂಷೆ ಶೌಚಮಾಹಾರದಲ
ಘುತೆಯಪ್ರಮಾದವಿಂವು ನಿಯಮವನವರ್ಷ ಸೂ
ನೃತಸಂವಿಭಾಗ ಕ್ಷಮಾ ದಮಾನುಗ್ರಹ ಸುದಾನಮಿವು ಶೀಲಮೆನಿಕುಂ ೧೮

ಗೌರವಂ ಲೈಂಗಿಕಂ ಚಾರಂ ಪ್ರಸಾದಪದ
ವಾರಿ ಭಾಕ್ತಿಕಮಿವಾಱುಂ ವ್ರತಮಿವುಂ ವರಿಪು
ದೋರಂತಕೃಪಣತಾನಾಯಾಸ ಶೌಚ ಶಾಂತಿ ದಯಾ ಸ್ಪೃಹಾನುಸೂಯೇ
ಸಾರಂಗಳೆಂದಱಿದು ಯತ್ನದಿಂ ಭಾವಿಪುದು
ದಾರ ಮನು ಜಪವೀಶಪೂಜೆಗಳನಾ ತ್ರಿಕಾ
ಲೋರು ವಿಧಿಯಿಂ ಚರಿಪುದೊದವಿದುಪಚಾರಂಗಳಿಂ ತೋಷಿಪುದು ಶಂಭುವಂ ೧೯

ಹರಣಮಳಿದೊಡಮಾತ್ಮ ಶಿರಮನರಿದೊಡಮುಮಾ
ವರನಂ ಭಜಿಸದುಣಲ್ ನರಕಮುಱ್ ಹರನಿಂದ
ಕರನಿಱಿವುದಾಱದೊಡಳಿವುದಲ್ಲದಿರ್ದೊಡಲ್ಲಿಂಪೋಪುದಿವಱೊಳೊಂದಂ
ಚರಿಸದೊಡೆ ದೋಷಂ ಶಿವಾಲಯ ಶಿವಾರಾಮ
ವರ ಶಿವದ್ರವ್ಯ ಶಿವಪುರವೆಂಬಿವಂ ಪೊರೆವ
ತಿರವೇಳ್ಕುಮವನಪಹರಿಸಿದನಂ ಕೊಲ್ವುದಾ ಕೊಂದಂಗೆ ಮುಕ್ತಿಯಕ್ಕುಂ ೨೦

ಲಿಂಗಮುದ್ರಾಂಕಿತ ವೃಷಾದಿಗಳ್ಗಾ ಶಿವಗ
ಣಂಗಳ್ಗೆ ಕೃತ್ಯಮಂ ನೆಗಳ್ದ ಪಾತಕನೊಳ್ ದ
ಯಂಗೆಯ್ಯದುಱ್ ಹರಿಪುದೀಶಾರ್ಥವೀಶಭಕ್ತಾರ್ಥವೀಶಾಗಮಾರ್ಥಂ
ಸಾಂಗಮಾದೀಶ್ವರಾಚಾರಾರ್ಥಮಳಿದವನ
ಭಂಗಗಣನಪ್ಪಂ ಶಿವಾರ್ಚಕರ್ ಬರೆ ನಮಿಸೆ
ಮಂಗಳೋಕ್ತಿಗಳಿಂ ಯಥಾಶಕ್ತಿಯಾಗಿ ಸತ್ಕರಿಸುವುದು ಭಕ್ತಿಯುಕ್ತಂ ೨೧

ಪರಧನ ಪರಸ್ತ್ರೀಜನಕ್ಕಳುಪದಾವಗಂ
ಹರನ ಕಿಂಕರನೆಂಬ ಭಾವಂ ಬಲಿದು ಲಸತ್
ಗುರುವಿಂಗೆ ಜಾತಿ ವಿದ್ಯಾ ಧನಾದಿಗಳಿನಭಿಮಾನಿಸದೆ ಭಯಭಕ್ತಿಯಿಂ
ಕರನು ದಂಡಪ್ರಣಾಮಂ ಗೆಯ್ದು ಕಯ್ಮುಗಿದು
ಗುರುವಾಕ್ಯಮಂ ಮೀಱದಾ ಗುರುವಿನಲ್ಲಿ ತ
ತ್ಪರನಾಗಿ ತಾಯ್ತಂದೆ ಮೊದಲಾದ ಬಳಗಮೆಲ್ಲಂ ಗುರುವೆಯೆಂದು ನಂಬಿ ೨೨

ತನಗೆನಿತು ವಸ್ತುವುಂಟನಿತುಮಂ ಶ್ರೀಗುರುವಿ
ನನುವಿಂಗೆ ನಿರ್ವಂಚಕದೆ ಸಮರ್ಪಿಸುತಾತ್ಮ
ತನುವನಂತಿತ್ತು ಗುರು ಶಿವನಾ ಗುರುಸ್ತ್ರೀ ಗಿರಿಜೆಯೆಂದಱಿದು ಗುರುವಿನಾ
ತನುಜಾನುಜಾಗ್ರಜರನಾ ಗುರುಸಮಾನರೆಂ
ದೆನಸುಂ ಬಗೆದು ತನಗೆ ಪಿರಿಯರಂ ಗುರುಚರಣ
ವನಜದವೊಲೀಕ್ಷಿಸಿ ಕನಿಷ್ಠರಂ ತನ್ನಂತೆ ತಿಳಿದು ವಿಶ್ವಾಸಿಯಾಗಿ ೨೩

ತನು ಮನೋಧನವೆಂಬಿವಂ ಗುರುಪರ ಚರಕ್ಕೆ
ವಿನಯದಿಂದಱಿದರ್ಪಿಸುತೆ ಪಂಚಸೂತಕವ
ನನುಕರಿಸದಿತರ ಪಾ[1]ಪ[1]ವನೊಲ್ಲದೀಶಾನುಭವಗೋಷ್ಠಿಯೊಳ್ ಚಿತ್ತಮಂ
ಅನುಗೊಳಿಸಿ ಭಸಿತ ರುದ್ರಾಕ್ಷಾದಿ ಸತ್ಕ್ರಿಯಾ
ವನನಾಗಿ ದೇಹವುಳ್ಳನ್ನೆವರಮಿಂತು ನಡೆ
ವನೆ ನರಾಕೃತಿಯ ರುದ್ರಂ ಪುನರ್ಭವಕೆ ಬಾರಂ ಬಳಿಕ್ಕಾ ಸುಕೃತಿಗೆ ೨೪

ಎಲೆಲೆ ಸೌಭಾಗ್ಯಂ ಸಮಸ್ತ ಭೋಗಂಗಳು
ಜ್ವಲಿಕುಂ ಸದಾಯುರಾರೋಗ್ಯ ಸತ್ಕೀರ್ತಿ ನಿ
ರ್ಮಲಿನಾನವದ್ಯ ವಿದ್ಯಾ ಭೂತಿಗಳ್ ದ್ಯೋತಿಕುಂ ನಿಖಿಲ ಸನ್ಮಂಗಳಿಂ
ನೆಲೆಯಾಗಿ ನಿಂದಘಚಯಂ ಪರೆಗುಮುರುಭೂತ
ಕುಲ ದುಷ್ಟರೋಗಾದಿ ಭೀತಿಗಳ್ ಕೆಡುಗುಂ ಸ
ಕಲ ಭೋಗಮುಮನವಂ ಭೋಗಿಸಿ ವಲಂ ಮುಕ್ತನಪ್ಪನೆಂದಾಗಮೋಕ್ತಂ ೨೫

ಸುತ್ತೇನದಱಿನಿವು ಮೊದಲೆನಿಪ್ಪವಣುಗದೀ
ಕ್ಷೋತ್ತರಾನುಷ್ಠೇಯ ಕರ್ಮಂಗಳಿವಱೊಳಾ
ಯತ್ತನಾಗಿ ಯಥಾತ್ಮಶಕ್ತಿಯಿಂದಾಚರಿಪುದೆಂದು ಬೋಧಿಸೆ ವಂದಿಸಿ
ಮತ್ತಂ ಸುಖಾವೇಶದಿಂ ಗುರುಪ್ರಭೃತಿಗ
ಳ್ಗಿತ್ತು ದಕ್ಷಿಣೆಯನಾತ್ಮಕುಟುಂಬಕಾ ಪರಿಯೊ
ಳುತ್ತಮನನುಗ್ರಹಂಗೆಯ್ಸಿ ಗಣಪರ್ವಮಂ ಮಾಡಿ ಪರಮಾನಂದದಿಂ ೨೬

---

೧ ಕ (ಬ, ಕ)

ಸಲೆ ಗುರೂಕ್ತಾಚಾರದೋಳ್ ನಿಷ್ಠನಾಗಿಂತು
ಕೆಲವು ಪಗಲಿರ್ದೊಂದು ದಿವಸಮಾಚಾರ್ಯಕುಲ
ತಿಲಕನ ಪದಾಬ್ಜದೊಳ್ ಬೀಳ್ದಲೆ ಸ್ವಾಮಿಯೆನ್ನಂ ಘೋರಭವಜಲಧಿಯಿಂ
ತಲೆವಿಡಿದು ತೆಗೆದು ಶೈವಾಚಾರಸಂಪದದ
ನೆಲೆಯನಱಿಪಿ ಕೃತಾರ್ಥನಂ ಮಾಡಿ ಪೊರೆದಿರಿದ
ನುಲಿಯಲೇನೀಗಳೊಂದುರು ಶಂಕೆ ಪುಟ್ಟಿಯಲೆವುತಿದೆ ಚಿತ್ತಮನೆಂತೆನೆ ೧೭

ಲಿಂಗಕರ್ಪಿಸದೆ ಭೋಗಿಸಿದವೆಲ್ಲಂ ಕಿಲ್ಬಿ
ಷಂಗಳೆಂದೊರೆದಿರೀ ರೂಪಾದಿಗಳನಿಷ್ಟ
ಲಿಂಗಕೀಯಲ್ಬರ್ಕುಮಲ್ಲದಾ ರುಚಿಯನೆಂತೀಯಲಕ್ಕುಮದಲ್ಲದೆ
ಪೊಂಗುವಖಿಲೇಂದ್ರಿಯ ಮುಖಂಗಳಿಂದೆಯ್ದುವ ಸು
ಖಂಗಳೀಕ್ಷಿಸಲರೂಪಂಗಳವನೀಶಾರ್ಪಿ
ತಂ ಗೆಯ್ವ ತೆಱನಾವುದಿದನಱಿಯದುಱಿ ಬಳಲ್ವಂಗೆನಗೆ ಕೃಪೆಗೆಯ್ಕೆನೆ ೧೮

ಅಸಮ ಗುರುರಾಜನಾತನ ಬಗೆಗೆ ಮೆಚ್ಚಿ ಸಂ
ತಸದಿನಿಂತೆಂದನೆಲೆ ಮಗನೆ ಕೇಳ್ ನಿನ್ನ ಮಾ
ನಸದಳಲ್ ಪ್ರಾಣಲಿಂಗದ ನೆಲೆಯನಱಿದಲ್ಲದಳಿಯದೆನೆ ಗುರುವರೇಣ್ಯಾ
ಉಸಿರ್ದರಿದೆ ದಲ್ ಪ್ರಾಣಲಿಂಗವೆಂದಂದು ದೀ
ಕ್ಷಿಸುವಾಗಳೀಗಲಱಿವುದದಾವುದೆನೆ ನೋಡಿ
ನಸುನಗುತಿದೇ ತಪ್ಪದಾ ರಹಸ್ಯಂ ಷಟ್‌ಸ್ಥಲ ಜ್ಞಾನನಿಷ್ಠನಾಗಿ ೧೯

ಲಿಂಗಾಂಗಸಂಯೋಗಸಂಪನ್ನನಾದ ಮಹಿ
ಮಂಗಲ್ಲದಱಿಯಲಳವಲ್ಲ್ತದಂ ಪೇಳ್ವೆನೆಲೆ
ಮಂಗಲಾಂಗನೆ ಕೇಳ್ ಪರಾತ್ಪರವೆನಿಪ್ಪ ಶಿವತತ್ವಂ ಚರಾ ಚರಕ್ಕೆ
ಪೊಂಗಿ ಲಯ ಗಮನ ಸಂಸ್ಥಾನವಾದುದಱಿಂದೆ
ಲಿಂಗಮೆನಿಸುಗುಮಾ ಮಹತ್ವದ ಯುತದೆ ಮಹಾ
ಲಿಂಗವಾಯ್ತುದಱಿನಾಚಾರಲಿಂಗಾಂತಂ ಕ್ರಮದೆ ಲಿಂಗಷಟ್ಕಮೊಗೆಗುಂ ೨೦

ಅವು ದಲಾಚಾರಾದಿಯಾಗಿಯೊಂದಕೊಂದು
ಸು ವಿದಿತಪ್ರಾಣವಾಗಿರ್ಪವವಱಿಲ್ಲಿ ಭೇ
ದವಿವಕ್ಷೆಯಂ ಮಾಡಲಾಗದಿದು ಲಿಂಗಷಟ್‌ಸ್ಥಳದ ನಿರ್ಣಯವಿದರ್ಕೆ
ತವೆಯಂಗವಾದ ಭಕ್ತಾದ್ಯೈಕ್ಯಚರಮವೆನಿ
ಸುವವಂಗ ಷಟ್‌ಸ್ಥಲವೆನಿಪ್ಪವಿನ್ನಿವಱ ವೃ
ತ್ತಿ ವಿಧಾನವೆಂತೆನೆ ಸದಾಚಾರದೊಳ್ ನಿರತನಾಗಿ ಶಿವಭಕ್ತಿ ಘಟಿಸಿ ೩೧

ಗುರು ಲಿಂಗ ಜಂಗಮದೊಳೆರವುಗಾಣದೆ ವೇಷ
ಧರರಂ ಪರೀಕ್ಷಿಸದವಂ ಭಕ್ತನೆನಿಸುವಂ
ಪರಧನ ಪರಸ್ತ್ರೀರಹಿತನಾಗಿ ಸದ್ಭಾವದಿಂ ಲಿಂಗನಿಷ್ಠೆ ಬಲಿದು
ಚರಿಪವಂ ಮಾಹೇಶನೆನಿಸುವಂ ಶಿವಲಿಂಗ
ದುರುಶೇಷಮಲ್ಲದಿತರವನೊಲ್ಲದಾ ಲಿಂಗ
ಭರಿತನಾಗಿರ್ಪಂ ಪ್ರಸಾದಿಯೆನಿಪಂ ಮುಂದೆ ಕೇಳುಳಿದವಱ ಭೇದಮಂ ೩೨

ಪ್ರಾಣಗುಣವಂ ಲಿಂಗದೊಳ್ ನಿಲಿಸಿ ಲಿಂಗವೇ
ಪ್ರಾಣವಾಗಸುಖ ಸುಖವೆಂಬಿವನಱಿಯದವಂ
ಪ್ರಾಣಲಿಂಗಿ ಸಮಂತು ಪತಿ ಲಿಂಗವಾನೆ ಸತಿಯೆಂದೀ ಪ್ರಪಂಚಸುಖಮಂ
ಕಾಣದನೆ ಶರಣಂ ಷಡೂರ್ಮಿ ಷಡ್ವರ್ಗಂಗ
ಳಾಣತಿಯನಲೆದು ಪೂಜಾಭ್ರಾಂತಿಗೆಟ್ಟು ನಿ
ರ್ವಾಣಭಾವದೊಳುರಿಯನಪ್ಪಿದುರು ಕರ್ಪೂರದಂತೆಸೆವನೈಕ್ಯನೆನಿಪಂ ೩೩

ಇಂತು ಭಕ್ತಾಂಗಷಟ್‌ಸ್ಥಲಮಾದವೀ ಷಟ್ಕ
ಮುಂ ತಿಳಿಯಲೇಕವಿವು ಲಿಂಗಷಟ್‌ಸ್ಥಲವನೋ
ರಂತೊಂದಿ ಮೆಱೆವುದಾವುದರಲ್ಲಿ ಮುಕ್ತಿ ಸಂಘಟಿಸಿ ಸಂಸೃತಿಯುಳಿವುದು
ಅಂತದೆ ಬುಧಾಳಿಯಿಂ ಸ್ಥಲವೆನಿಕುವಿನ್ನಿವಱೊ
ಳಂತಸ್ಥವಾದಂಗಹಸ್ತ ಭಕ್ತಿಗಳಂ ಸ
ಮಂತಕ್ಷಲಿಂಗವಕ್ತ್ರಾರ್ಪಿತ ಸುಶೇಷ ಸಿದ್ಧಿಗಳನೊರೆದಪೆವಾಲಿಸೈ ೩೪

ಧರೆಯಂಬು ಶಿಖಿವಾಯು ನಭವಾತ್ಮವೆಂಬಿವೆಲೆ
ತರುಣ ಭಕ್ತಾದಿಗಳ್ಗಂಗವೆಂದೆನಿಪವಂ
ತುರು ಸುಚಿತ್ತ ಸುಬುದ್ಧಿ ನಿರಹಂಕೃತಿ ಲಸನ್ಮನೋಜ್ಞಾನವಮಲ ಭಾವಂ
ತರದೆ ಹಸ್ತಂಗಳೆಂದೆನಿಪವಮಿತಶ್ರದ್ಧೆ
ವರನಿಷ್ಠೆಯವಧಾನವನುಭಾವವಾನಂದ
ಮುರು ಸಮರಸಂಗಳಿವು ಭಕ್ತಿಗಳೆನಿಪ್ಪವಿನ್ನಱಿ ಶೇಷಸಿದ್ಧಿಯನುವಂ ೩೫

ನಾಸಿಕೇಂದ್ರಿಯದೊಳಾಚಾರ ಲಿಂಗಕ್ಕತಿ ವಿ
ಲಾಸದಿಂ ಪೃಥ್ವೀಮುಖದೆ ಗಂಧಮಂ ಕೊಟ್ಟು
ಭಾವಿಸುವ ಜಿಹ್ವೇಂದ್ರಿಯದೊಳೆ ಗುರುಲಿಂಗಕಂಭೋಮುಖದೆ ರಸವನಿತ್ತು
ಆ ಸೌಮ್ಯ ನೇತ್ರೇಂದ್ರಿಯದೊಳೆ ಶಿವಲಿಂಗಕು
ಲ್ಲಾಸದಿಂದಗ್ನಿಮುಖದಿಂದೆ ರೂಪಮನಿತ್ತು
ಲೇಸಿಂ ತ್ವಗಕ್ಷದೊಳ್ ಚರಲಿಂಗಕನಿಲಮುಖದಿಂ ಸ್ಪರ್ಶಮಿತ್ತು ಬಳಿಕಂ ೩೬

ಮೋದದಿಂ ಶ್ರೋತ್ರೇಂದ್ರಿಯದೊಳುಜ್ವಲಿಸುವಾ ಪ್ರ
ಸಾದಲಿಂಗಕೆ ಗಗನಮುಖದೆ ಶಬ್ದವನಿತ್ತು
ಸಾದರದೆ ಮನ ಇಂದ್ರಿಯದೊಳಾ ಮಹಾಲಿಂಗಕಾತ್ಮಮುಖದಿಂದೆ ಕೂರ್ತು
ಈ ದ್ರವ್ಯ ಪರಿಣಾಮುವಿತ್ತು ತತ್ತತ್ಪ್ರಸಾ
ದೋದಧಿ ನಿಮಗ್ನನಾಗುವುದು ತನು ಸೋಂಕಿದ ಸು
ಖಾದಿಗಳ್ ಶೇಷಂಗಳಪ್ಪವಿಂತಖಿಲಾಂಗದೊಳ್ ಲಿಂಗಮಿರ್ಪ ಕತದಿಂ ೩೭

ತರುಣ ಕೇಳೀ ತೆಱನನಱಿದರ್ಪಿಸಿದೊಡವನೊ
ಳಿರದನರ್ಪಿತ ದೋಷವದು ನಿಮಿತ್ತಂ ಪಲವು
ಪರಿಯಿನೊದವಿದ ಸಕಲ ಭೋಗಮನವಂಚಕದಿನೀಶ್ವರಾರ್ಪಣ ಬುದ್ಧಿಯಿಂ
ವರಿಪುದೊಂದಿಂದ್ರಿಯ ಸುಖಮನೊಂದು ಮುಖಕಿತ್ತೊ
ಡೆರವಪ್ಪುದಾಭರಣಮಂ ಪಲ್ಲಟಂ ಗೆಯ್ದು
ಧರಿಸಿದವೊಲಂತಱಿಂದಾ ಸುಖಮನಾ ಮುಖಕ್ಕಿತ್ತು ಭೋಗಿಪುದೆಚ್ಚರಿಂ ೩೮

ಎನೆ ಶಿಷ್ಯನೆಂದನೆಲೆ ದೇವ ಹೇಯಂಗಳೀ
ತನುವನಂಟಲ್ ಶೇಷಮಪ್ಪ ವಿಧಿಯಾವುದೀ
ತನು ಲಿಂಗಮಯಮಾದುದಱಿನಿದಱ ಸೋಂಕೆಲ್ಲವುಂ ಶೇಷಮೆಂದಿರದರಾ
ಅನುವಾವುದೆನೆ ಮಗನೆ ಕೇಳಾತ್ಮಹಿತವಾದು
ದನಘಲಿಂಗಾರ್ಪಿತಕೆ ಸಲ್ವುದಲ್ಲದೆ ತನ್ನ
ಮನವೊಪ್ಪದದು ಸಲ್ವುದೇ ಇದಱ ಸರಣಿ ಲಿಂಗಪ್ರಾಣಿಗಳಿನಲ್ಲದೆ ೩೯

ತಿಳಿಯಲಱಿದೆನೆಯುದಂ ಬೆಸಸಿಮೆಂದೆಱಿಗೆ ಪೊಱ
ಗೊಳಗೆಂಬ ಸಂದಳಿದು ಲಿಂಗಮಯಮಾಗಲ್ಲ
ದಳವಡದೆನಲ್ಕೆ ಲಿಂಗಂ ಪ್ರಾಣವಾಗದೊಡೆ ಕೇಳೀಯಂಗಮುಂ
ಬಳಿಕೆ ಮುಟ್ಟಿದುವೆಲ್ಲವೆಂತುಟರ್ಪಿತವೆನೆ ಮು
ರುಳಕೊಡುತ ಕೊಳುತೆ ತತ್ಪ್ರಾಣವೇ ಲಿಂಗವೆಂ
ಬಳವಿನಿಂ ಪ್ರಾಣಮುಖವಾಗಱಿವವರ್ ಪ್ರಾಣಲಿಂಗಿಗಳೆನಿಪ್ಪರದಱಿಂ ೪೦

ಕೊಡುವ ಕೊಳ್ವಿರಡನಱಿಯದೆ ಲಿಂಗಮುಖವಾಗಿ
ನಡೆದು ತಲ್ಲಿಂಗವೇ ಪ್ರಾಣವಾಗಾ ಲಿಂಗ
ಮೊಡಲುಸುರನೊಳಕೊಂಡವರ್ ಸುಲಿಂಗಪ್ರಾಣಿಗಳ್ ದಲೆನಿಪರವರ್ಕಳಾ
ಅಡವೆಲ್ಲಿ ಲಿಂಗದಡವವರ ಚರಿತಂ ಗರಂ
ಪೊಡೆದವರವೋಲ್ ಯೆಸೆವುದರ್ಪಿತಾನರ್ಪಿತದೊ
ಳಿಡಹರಿಷ್ಟಾನಿಷ್ಟಮಱಿಯರವರಖಿಲಾಂಗಮುಂ ಲಿಂಗವದಱಿಂದೆನೆ ೪೧

ಗುರುವೆ ನೀವವರ್ಗೆ ಸರ್ವಾಂಗಮುಂ ಲಿಂಗಮೆಂ
ದೊರೆದಿರೀಯಂಗಗತ ಲಿಂಗವೊಳಗಂ ವೇದಿ
ಪಿರವದೆಂತೆನೆಯುದಕಘಟದಬಾಹ್ಯಕ್ಕಿಕ್ಕಿದಗ್ನಿಯೊಳಗಂ ವೇದಿಸಿ
ಕರಮೆ ಬಿಸುಗೆಯ್ದು ಬಱಿಯುಷ್ಣಮೇಳ್ವಂತೆ ಮೇ
ಣುರಗದಷ್ಟಾಂಗ ವಿಷವೇಧೆಯಂತೊಳಗನಾ
ವರಿಸಿ ತಲ್ಲಿಂಗಮೇ ಪ್ರಾಣವೆನಿಕುಂ ಭಾವಗತಮಾಗಿ ತೃಪ್ತಿಯೆನಿಕುಂ ೪೨

ಇಂತೆಂದನೇಕ ದೃಷ್ಟಂಗಳಿನವನ ಸಂಶ
ಯಂ ತವಿಸಲೊರೆಯೆ ಸರ್ವಂ ಲಿಂಗಮಾದೊಡೆಲೆ
ಶಾಂತಿರೂಪನೆ ಭಕ್ತನೆಲ್ಲಿರ್ಪನೆನೆ ಲಿಂಗದಖಿಲಾವಯವದೊಳಮಿರ್ದು
ತಾಂತದ್ವಿಧಿಯೊಳೆ ಚೇಷ್ಟಿಸುತಿರ್ಪನಾ ಲಿಂಗ
ಮುಂ ತಚ್ಚರಣಚೇಷ್ಟೆಗೂಡಿಯುವಿನಾ ಭಾವ
ದಿಂ ತೊಳಪುದವನಬ್ಧಿಯಲ್ಲಿ ಬೀಳ್ದಾಲಿವರಲಂತೆ ಬೆರೆದೊಪ್ಪುವನೆನೆ ೪೩

ವಲ್ಲಭನೆ ಸತ್ಕ್ರಿಯಾಮುಖದಿನಾ ಭಕ್ತಾಂಗ
ವೆಲ್ಲವುಂ ಲಿಂಗಮಾದೊಡೆ ಕೇಳ್ ಪ್ರಸಾದ ಮಿ
ನ್ನೆಲ್ಲಿಯದುಭಯವಳಿದಬಳಿಕದಱ ಸಿದ್ಧಿಯೆಂತೆನೆ ಗುರುವದಕ್ಕೆ ಮೆಚ್ಚಿ
ಸಲ್ಲಲಿತ ಕೇಳ್ ತನುಮನೋಭೇದದಿಂ ಶೇಷ
ಮಿಲ್ಲಿ ಸವ್ಯಕ್ತಮವ್ಯಕ್ತ ಮೆನಿಸುಗುಮದಂ
ಬಲ್ಲರಾರೊ ಪದಾರ್ಥಪರಿಣತಿಗಳಿಂ ಖಂಡಿತಮುಮಖಂಡಿತಮುಮೆನಿಕುಂ ೪೪

ಆ ಮಹತ್ತಾದಖಂಡಿತ ಸುಪ್ರಸಾದವಕ
ಟಾ ಮುಟ್ಟದೀ ಮನಸ್ಸಂ ಶಿವಂಗಿತ್ತುಭಯ
ಸೀಮೆಯುಳ್ಳನುಪಮಂಗಲ್ಲದಾ ಶಿವನ ಕಲೆ ಸರ್ವಗತಮಾಗಿ ಮೊದಲೇ
ಪ್ರೇಮದಿಂ ಮುಟ್ಟಿದ ಪದಾರ್ಥಚಯಮಂ ಬಳಿಕೆ
ನೇಮಿಸುವವಂಗೆ ಸಿದ್ಧಿಪುದೆ ಅಂತರ್ಪಿಪರ್
ಭೂಮಿಯೊಳಗೋಚರರವರ ಸಿದ್ಧಿ ಹರ್ಯಜಾದ್ಯರ್ಗಸಾಧ್ಯಮೆನಲ್ಕವಂ ೪೫

ಎಲೆ ಕೃಪಾಂಬುಧಿಯೆ ತತ್ಕಲೆಯಿೀಯಖಿಲದಲ್ಲಿ
ಕಲಸಿಪ-ನುವನಱಿಯೆನಱಿಪೆಂದಳಲ್ವಂಗೆ
ಮಲರಹಿತ ಗುರುವೆಂದನವಱಿೊಳಿರ್ದುದನಱಿಸುವರೆ ಘಟಾಂಬುವಿನೊಳೊಂದಿ
ಸಲೆ ಮೆಱೆವ ಶೈಲದಂತಮಿರ್ದು ಕಾರ್ಮುಗಿಲೊಳು
ಜ್ವಲಿಪ ಮಿಂಚಿನ ಗೊಂಚಲಂತೆ ಬೆಳಗುವುದದ
ಕೆರ್ಲಲವಿನಿಂ ಪ್ರಾಣಾರ್ಪಿತಂಗೆಯ್ದು ತಾನಿಲ್ಲದಿರವೇಳ್ಕುಮೆನೆ ಕೊಱಗುತೆ ೪೬

ಗುರುವೆ [೧]ತ್ರ[೧]ತ್ಕಲೆಯನಾನೆಂತು ತಂದುಱಿದೆನ್ನ
ಹರಣಮುಮನರ್ಪಿಸುವೆನೀಯಿಷ್ಟಲಿಂಗವೇ
ಪರವೆಂದು ಮೊದಲೊರೆದಿರೀಗಳಿದನೊಂದನೊರೆದಿರೆನಲ್ಕೆ ನಸುನಗುತ್ತೆ
ತರುಣ ಬೇಱಾಗಿ ತಿಳಿಯದಿರಾ ಶಿರಃ ಕಲೆಯೆ
ಗುರುಕೃಪೆಯಿನೀ ಲಿಂಗದೊಳ್ ಭರಿತವಾಗಿ ನಿ
ನ್ನಿರವನೊಳಕೊಂಡು ಸಮರಸದೊಳನ್ಯಾನನ್ಯತೆಯಿನುಪಮೆಯಿಲ್ಲದೆಸೆಗುಂ ೪೭

ಇದೆ ಸಕಲ ಸಕಲನಿಷ್ಕಲನಿಷ್ಕಲಮುಮೆನಿಪು
ದಿದು ಜಗತ್ ಸೃಷ್ಟಿ ಸ್ಥಿತಿ ಪ್ರಹೃತಿಯಂ ಮಾಳ್ಪು
ದಿದೆ ಲಿಂಗದೊಳ್ ಧ್ಯಾನಪೂಜೆಗಳ ಕೈಕೊಳ್ವುದಿದೆ ಭುಕ್ತಿ ಮುಕ್ತಿಬೀಜಂ
ಇದೆ ಹರ್ಯಜೇಂದ್ರಾದಿಗಳ್ಗೆ ನಿಲ್ಕದ ವಸ್ತು
ವಿದೆ ವೇದ ಶಾಸ್ತ್ರಾಗಮಾಭೇದ್ಯಸಂವಿತ್ತು
ವಿದು ಹರಣದೊಡನೆಯ್ದೆಯಾ ಲಿಂಗಮೇತರ್ಕವಾಗದಿದೆ ಮುಖ್ಯವದಱಿಂ ೪೮

ಇದು ನಾದ ಬಿಂದ್ವಾತ್ಮಕಮುಮಾಗಿ ಸರ್ವರ ಶಿ
ರದೊಳಿರ್ಪುದಿದಱೊಳಗನಱಿಯದೆಲ್ಲರ್ ಕೆಡುವ
ರಿದು ನಿನಗೆ ಸುಕೃತಬಲದಿಂ ವ್ಯಕ್ತಮಾಯ್ತಿದೊಂದೇ ತನುತ್ರಯ ಭೇದದಿಂ
ಪುದಿದು ಮೂಱಾಯ್ತಿಂದ್ರಿಯಾವಗತಮಾಗಿ ಮೇ
ಣಿದೆ ದಲಾಱಾಯ್ತು ಸ್ಥಲ ಸ್ಥಲ ವಿಭಜನದಿಂ
ದೊದವಿ ಛತ್ತೀಸಮಾಯ್ತುವಱ ಮಿಶ್ರತೆಯಿನಿನ್ನೂಱಿಪದಿನಾಱೆನಿಸಿತು ೪೯

ಇಂತು ಭಕ್ತಾನುಗ್ರಹಾರ್ಥಂ ವಿವಿಧ ವಿಧಮ
ನಾಂತೇಕಮಾಗಿ ತೊಳಗುವ ಪರಬ್ರಹ್ಮವನಿ
ದಂ ತಿಳಿವರಾರೊ ಗುರುಕರುಣಾಯತಂಗಲ್ಲದುಳಿದವರ್ಗಿದು ಸಾಧ್ಯಮೇ
ಅಂತಱಿನಿದಂ ಕ್ರಿಯಾಚಿದ್ವಯದಿನೆಯ್ದಿ ನೈ
ರಂತರ್ಯ ಶಿವಸುಖವನನುಭವಿಸು ನೀಂ ಮೇಣಿ
ದಂ ತಳೆದವಂ ಜೀವಿಸುತ್ತಿರ್ದುಂ ಮುಕ್ತನವನಖಿಲಗುಣಗಣಾಢ್ಯಂ ೫೦

---

೧ ಸ (ಬ, ಕ)

ಎಂದಿಂತು ಶಿವತತ್ವಗೋಪ್ಯಮಂ ಗೋಪ್ಯದ
ಲ್ಲೊಂದಿನಿಸುಮುಳಿಯದೆಲ್ಲವನಱಿಪೆ ಬೂದಿಯು
ಲ್ಲೊಂದಿದನಲುಂ ಮುಗಿಲ್ಮುಸುಕಿದಿನನುಂ ಚಂಡಪವನನೆಸಕದೆ ಮಿನುಗುವಾ
ಚೆಂದದಂತಾರ್ಯಬೋಧದಿನವನ ಮಱಿಹಳಿದು
ನಿಂದ ನಿಜದಱಿವು ಸಾಕ್ಷಾತ್ಕರಿಸೆ ಘನಹರ್ಷ
ದಿಂದುರ್ವಿ ಕೊರ್ವಿ ಗುರುಚರಣದೊಳ್ ಬೀಳ್ದು ಪರವಶನಾಗಿ ಬಳಿಕೆ ತಿಳಿದು ೫೧

ಎನ್ನವೋಲ್ ಸುಜ್ಞಾನಹೀನರ್ ಧರೆಯೊಳಿಲ್ಲ
ನಿನ್ನವೋಲ್ ತಿಳಿಪುವ ಸಮರ್ಥರಿಲ್ಲಕಟಕಟ
ನಿನ್ನ ಕರುಣೌಷಧಂ ಸಮನಿಸದೊಡೀ ಭವವ್ಯಾಧಿಯೊಳಗಾನುಳಿವೆನೆ
ಅನ್ನಯದತವರನೆನ್ನಂ ತಂದು ಸಚ್ಚರಣ
ಸನ್ನಿಹಿತನಪ್ಪಂತೆ ಕೃಪೆಗೆಯ್ದೆ ಹರಹರಾ
ನಿನ್ನ ಮಹಿಮೆಗೆ ಮಱೆವರಾರ್ ನೀನುಳಿಯೆ ಕೊಲ್ವ ಕಾಯ್ವ ಸಾಹಸಿಗಳುಂಟೇ ೫೨

ಎಂದಿಂತು ಪಲವು ಪರಿಯಿಂದೆ ವರ್ಣಿಪ ಶಿಷ್ಯ
ನಂ ದಯಾಪಾಂಗದಿಂ ನೋಡಿ ಪುಳಕಿಸುತೆನ್ನ
ತಂದೆ ಬಾಯೆನ್ನಣ್ಣ ಬಾಯೆನ್ನನುದ್ಧರಿಪ ಕಂದ ಬಾ ನಿನ್ನೊಳಿನಿತುಂ
ಕುಂದಿಲ್ಲ ವಿಶ್ವನಾಥನ ಸಕಲ ಸಾಮ್ರಾಜ್ಯ
ಮಂ ದಲಾಳ್ವನಿತು ಭಾಗ್ಯಂ ನಿನ್ನ ವಶವಾದು
ದೆಂದಂಕಿಸುವ ಗುರೂಕ್ತಿಗೆ ಕಂದಿ ಕುಂದಿ ನಿಜ ನುತಿಗಳ್ಕುವನನೀಕ್ಷಿಸಿ ೫೩

ತೆಗೆದೆತ್ತಿ ಸಂತವಿಸೆ ತದ್ಗುರುಕೃಪಾಲಬ್ಧಿ
ಗಗಣಿತಾನಂದಾಶ್ರು ಸೂಸೆ ಪುಳಕಶ್ರೇಣಿ
ಯೊಗೆಯೆ ಗದ್ಗದ ವಚೋವಿಭವದಿಂ ನುತಿಸಿ ತತ್ ಸೇವಾನಿಮಗ್ನನಾಗಿ
ಮಿಗೆ ಮುದ್ರಿಸಿದ ಚಿತ್ಸುಖದಿನಾತನಿರ್ದನಾ
ಸೊಗಸನೀಕ್ಷಿಸಿ ಪೊಳೆವ ದೀವಿಗೆಯೊಳೊಂದು ದೀ
ವಿಗೆಯ ಪೊತ್ತಿಸಿದಂತೆ ಸಮಕಲೆ ಘಟಿಸಿತಿಂತು ತಿಳಿಪುವ ಸಮರ್ಥರುಂಟೇ ೫೪

ಭಾಪು ದೇಶಿಕಶಿರೋರತ್ನ ಧರೆಯಂ ಪೊರೆಯ
ಲೌಪಚಾರಿಕ ವಿಗ್ರಹಂದಾಳ್ದು ಬಂದ ಗುರು
ರೂಪ ವಿಶ್ವೇಶನಲ್ಲದೆ ಪೆಱನೆ ನಿನಗಿದರಿದೇಯೆಂದು ಭಕ್ತರುಲಿಯೆ
ಓಪ ಶಿಷ್ಯನ ಬೋಧಿಸಿದ ರೀತಿಯಿಂದೆ ರಘು
ಟಾ ಪದ್ಧತಿಯೊಳುಱೆ ಸಸಾಕ್ಷಿಕಂ ವೀರಶೈ
ವೋಪಕಾರಾರ್ಥವಿಂಪಮರೆ ದೀಕ್ಷಾಬೋಧಮೆಂಬ ಕೃತಿಯಂ ವಿರಚಿಸಿ ೫೫

ಬಳಿಕೆ ಸಮಯಸ್ಥಾಪನಾರ್ಥಂ ಶ್ರುತಿ ಸ್ಮೃತಿ ವಿ
ಮಲ ಪುರಾಣಾಗಮೋಪನಿಷತ್‌ಪ್ರಭೃತಿಶಾಸ್ತ್ರ
ಕುಳದ ಸಾರಂದೆಗೆದು ದೃಷ್ಟಕೆ ಬರೆದು ಸರ್ವರಱಿಯೆ ಕರ್ಣಾಟವಾಗಿ
ಅಲಘು ವರ್ಣಕರೀತಿಯಿಂ ರಸಂ ಮುಸುಕಿಯು
ಜ್ವಳಿಪಂತೆ ಸಾನಂದಚರಿತಾಖ್ಯಶಾಸ್ತ್ರಮಂ ನ
ತುಳ ಗುರುವರಂ ನಿಜಾತ್ಮನಿನೊರೆಯಿಸುತೆ ಶಿವಸುಖದೊಳಿಂತುವೊಪ್ಪುತಿರ್ದಂ ೫೬

ಮದಕುಧರವಿದಳನಭಿದುರಪರಮಶಿವಭಕ್ತ
ಪದ ಶತದಳಾದಭ್ರಮಕರಂದಲೀಲಾಪ್ರ
ಮದ ಪರವಶೀಭೂತ ಮಧುಕರೋಪಮ ಪದ್ಮಣಾಂಕಪ್ರಣೀತಮಾಗಿ
ಸದಮಳಾಖಿಲ ಶಾಸ್ತ್ರಸಾರಮೆಂದೆನಿಸುವ
ಭ್ಯುದಯಕರ ಪದ್ಮರಾಜಪುರಾಣಕಥೆಯೊಳಿಂ
ತಿದು ದೇಶಿಕಂ ವಾದಿಗೊಲ್ದು ದೀಕ್ಷಿಸಿದ ಪನ್ನೆರಡನೆಯ ಸಂಧಿಯೆನಿಕುಂ ೫೭

ಈಶಾಪರಾವತಾರನ ವಿಬುಧನುತನಭವ
ಪಾಶನಾಶಕ ಕೆಱೆಯ ಪದ್ಮಣಾರ್ಯನ ಲಸ
ಚ್ಛ್ರೀ ಶಿವಾದ್ವೈತಸಾಕಾರಸಿದ್ಧಾಂತ ಪ್ರತಿಷ್ಠಾಪನಾಚಾರ್ಯನ
ಈ ಶುದ್ಧಚರಿತಮಂ ತಿಳಿಪಿದರ್ಗೋದಿದ
ರ್ಗಾಶೆಯಿಂ ಕೇಳ್ದರ್ಗೆ ಭುಕ್ತಿಮುಕ್ತಿಗಳಂ ಮ
ಹಾ ಶುಭಂಗಳನಾಯುಮಂ ಕೊಟ್ಟು ಗುರುರೂಪ ವಿಶ್ವನಾಥಂ ರಕ್ಷಿಪಂ ೫೮

ಅಂತು ಸಂಧಿ ೧೨ ಕ್ಕಂ ಪದಂಗಳು ೧೨೦೦ ಕ್ಕಂ

ಮಂಗಳಮಹಶ್ರೀ

ಶ್ರೀ

ಹದಿಮೂರನೆಯ ಸಂಧಿ

ಸೂಚನೆ : ಒಡನೆ ವಿಧವಾಧನವ್ಯಾಜದೆ ಶಿವಂ ಕುಡುವ
ಪಡಿಯನುಳಿದು ಸುತಂಗೆ ಪಟ್ಟವುಂ ಕಟ್ಟಿರಿಸಿ
ಮೃಡನಿರೂಪದೆ ಕಾಶಿಗೆಯ್ದಿ ಗುರು ವಿಶ್ವೇಶನಲ್ಲೈಕ್ಯವಾಗಿ ಮೆಱೆದಂ

ಪ್ರಾಥಮಿಕಪುರುಷ ಗಣಯೂಥದೀಪಕ ಗರ್ವ
ಸೀಥು ಪ್ರಮತ್ತ ಜನ ವೀಥೀವಿಗಮನಾಘ
ಪಾಥೋಧಿವಾಡಬಾನಾಥ ಬಾಂಧವಲೋಕನಾಥಾತಿರಿಕ್ತಚರಿತ
ಯಾಥಾರ್ಥ್ಯ ಪರ ವೃಷವರೂಥ ಶಮತಾಜಿತ ನಿ
ಶೀಥಿನೀಧವಭವನ್ಮೋನ್ಮಾಥಕರ ದುರ್ಮೋಹ
ಯೂಥನಾಥ ಮೃಗಾಧಿನಾಥನಾಥಾರ್ಯಾಸನಾಥ ಜಯ ವಿಶ್ವನಾಥಾ ೧

ಈ ಪ್ರಕಾರದೊಳಿಳಾಜನವನುದ್ಧರಿಸಿ ಶೈ
ವಪ್ರತಿಷ್ಠಾಪನಂಗೆಯ್ದಿರುತ್ತಾರ್ಯನು
ಕ್ತಪ್ರಕಾರದೊಳೀಶಪೂಜೆಯಂ ನೆಗಳ್ದು ಮೇಣ್ ಮೃಡನಿತ್ತ ಪಡಿವೊಂಗಳಂ
ಕ್ಷಿಪ್ರದಿಂ ತೀರ್ಥಭಾಜನದೆ ತೆಗೆದುಚಿತ ವ
ಸ್ತುಪ್ರಕರಮಂತರಿಸಲೆಂದಿನಂತೀವೆಡೆಯೊ
ಳಪ್ರತಿಮನರಮನೆಯ ನೆರೆಮನೆಯೊಳೋರ್ವಳುಚ್ಚ ಪ್ರಲಾಪೋಕ್ತಿಗೂಡಿ ೨

ಶಿವಧೋಯೆನುತ್ತಳುತ್ತಿರೆ ಕೇಳ್ದಿದೆಲ್ಲಿಯದೊ
ಶಿವಭಕ್ತರೋದನನೆನುತೆ ಶಿಷ್ಯರಂ ಕಳುಪಿ
ಯವಳನಲ್ಲಿಗೆ ಕರೆಯಿಸಲ್ಕೆ ತನುಜಂಗೂಡಿ ಬಂದು ಗುರುಚರಣದಲ್ಲಿ
ತವೆ ಬೀಳ್ದು ಮಱುಗುತಿರೆ ತಲೆವಿಡಿದು ನೆಗಪಿ ಶೋ
ಕವದೆತ್ತಣಿಂ ಬಂದುದೆಲೆ ಮಗಳೆ ಪೇಳೆಂದು
ಭುವನರಕ್ಷಾಮಣಿ ವಿಚಾರಿಸಲೊಡಂ ಪೇಳ್ದಳಾಕೆ ಕಣ್ಣೀರ್ದೊಡೆಯುತೆ ೩

ಗುರುವೆಯವಧಾರು ಕಿಱಿಯಂದೆನಗೆ ಪತಿಯಳಿದು
ಪೊರೆವರಿಲ್ಲದೆ ಕೊಟ್ಟಣಂಗುಟ್ಟಿ ಕೊಡನೀರ
ನಿರದೆ ತಂದೊರ್ಪೊಳ್ತುಪಾವಾಸವೊರ್ಪೊಳ್ತು ಪಾರಣೆಯನೆಸಗಿ ಪಲವು
ಪರಿಯ ಬೇವಸದಿನೀಯಣುಗನಂ ಸಲಹುವಾ
ತುರದೊಳಿರ್ದೀರಾಱು ಪೊಂಗಳಂ ನೆರಪಿಯೋ
ರ್ವರುಮಱಿಯದಂತೆ ತಂಡುಲಭಾಂಡದೋಳ್ ಮುಚ್ಚುಳಿಟ್ಟಿರಿಸಿ ತದ್ದ್ರವ್ಯದಿಂ ೪

ಈ ಸುತಂಗೊಂದು ಬಡ ಮದುವೆಯಂ ಮಾಳ್ಪೆನೆಂ
ದಾಸೆಗೆಯ್ದಿರ್ದಿಂದದಂ ನೋಡಲೆಳಸಿಯು
ಲ್ಲಾಸದಿಂದೀಕ್ಷಿಸಲ್ಕಿಟ್ಟ ಮುಚ್ಚಳನಿಳುಹದಾ ಕುಱುಪನಿನಿಸಳಿಯದೆ
ಆ ಸುವರ್ಣದ ಗಂಟನಾವನೋ ಬಲ್ಗಳ್ಳ
ನೋಸರಿಸದೊಯ್ದನಿನ್ನೇಗುವೆಂ ಕೆಟ್ಟೆಂ ಪ್ರ
ಯಾಸವೇ ಕೈದಟ್ಟಿತೆಂದೊರಲುತಾತ್ಮಜಂ ಬೆರಸು ಮೆಯಿಕ್ಕಲೊಡನೆ ೫

ತಂಗಿ ತಲ್ಲಣಿಸಲೇಕೇಳೇಳೆನುತೆ ದಯಾ
ಪಾಂಗದಿಂ ನೋಡಿ ನಿಜ ಹಸ್ತದಲ್ಲಿರ್ದ ಪಡಿ
ಪೊಂಗಳನಿವೇಂ ನಿನ್ನವಕ್ಕುವೋ ಅಂಜವೇಡುಸಿರೆನಲ್ಕಬಲೆ ತನ್ನಾ
ಪೊಂಗಳಂ ಕಂಡು ಪುಳಕಿಸಿ ನುಡಿಯಲಳ್ಕಿರೆ ತ
ದಿಂಗಿತವನಱಿದಾ ಧನವನಾಕೆಗಿತ್ತು ಗುರು
ಪುಂಗವಂ ಬೀಳ್ಕೊಟ್ಟನದು ಭೂತಹಿತಚರಿತ್ರಂಗಕಟ ಸಹಸಮಲ್ತೆ ೬

ಅತ್ತಲಾ ವಿಧವೆ ನಲಿವುತೆ ನಿಜಗೃಹಕೆ ಪೋದ
ಳಿತ್ತ ಗುರುವನಿತಱಿಂ ಮೇಲೆ ಶಿವನೊಳ್ ಮುನಿದು
ವಿತ್ತನಾಥಾಪ್ತಂ ಸುವರ್ಣಾದ್ರಿವಾಸನೆಮಗಾಗಿಂತು ಚೌರ್ಯಗುಣಮಂ
ಪೊತ್ತನೇ ಗಣಪತಿನೃಪಾಲ ನನ್ನರಮನೆಯ
ವಿತ್ತಮಂ ಕೊಂಡೊಡಂ ಕೊಳ್ಗೆ ಬಡವೆಯ ಬಾಯ
ತುತ್ತನೇಕಪಹರಿಸಿದಂ ಠಕ್ಕಿಸುವ ತನ್ನ ನಿಜಗುಣವನೇಕೆ ಮಾಣ್ಬಂ ೭

ತಿರುನೀಲಕಂಠರಂ ಮಾಂಜಿ ಸೂರುಳ್ಗೊಂಡ
ನಿರತಂಗಮರನೀತಿಯಂ ಠಮಾಳಿಸಿ ಮಟ್ಟ
ಮಿರದೊಕ್ಕಲಂ ಮಾಱುಗೊಂಡಂಗೆ ನಂಬಿಯನಳಿಪಿ ತೊಳ್ತುಗೊಂಡವಂಗೆ
ಅರಿದಾವುದಿದರಲ್ಲಿ ಮೇಣ್ ಗೋಪನಾರಿ ಶಂ
ಕರದೇವನಂ ಬಿಟ್ಟಿಗೆಯ್ದು ಪಿಟ್ಟಾಂಬೆಯಂ
ಬರದೆ ಪೊರೆವೊತ್ತಮುಗಿದೇವಗಳನಿಂತು ಪಲರಂ ಪೊರೆದನಂತಲ್ಲದೆ ೮

ಇಂದು ಗತಿಗೆಟ್ಟೆಮ್ಮುವಂ ಪೊರೆವೆನೆಂಬೊಂದು
ದಂದುಗಂಬೊತ್ತು ವಿಧವಾವಿತ್ತಮಂ ಕಳ್ದು
ತಂದಿತ್ತನವರಟ್ಟೆ ಬಂದೊಡಾನೇಂ ಗುಂಡಬೊಮ್ಮಯ್ಯನೇ ಕಾಯ್ವೊಡೆ
ಚೆಂದವಾಯ್ತೆಮಗೆ ತಾಂ ನೆಗಳ್ದುದದನಾಡಲೇಂ
ಸಂದ ವಿಶ್ವಕುಟುಂಬಿ ಎಂತೊದವಿಪಂ ಬಿಟ್ಟೆ
ವಿಂದು ಮೊದಲಾಗಿ ತಾನಿಂತೀವ ಪಡಿಯನೆಂದೊರೆದು ಗುರು ಮತ್ತಮೆಂದಂ ೯

ತನ್ನನೆನ್ನುವನುಂಟುಮಾಳ್ಪಧಿಕ ಶಕ್ತಿ ಸಂ
ಪನ್ನ ಶರಣರ ಕರುಣವೆಮಗುಂಟು ತಾಂ ಬಳಲ
ಲಿನ್ನೇಕೆನುತೆ ಕಟಾಕ್ಷಿಸಿ ಶಿವನ ನುಡಿದು ಮುಸುಕಿಟ್ಟು ಮಣಿಮಂಚದಲ್ಲಿ
ಚಿನ್ನಿಧಾನಂ ಮಲಗಲೊಡನೆ ಗುರು ವಿಶ್ವಪತಿ
ಮುನ್ನಿನಾಕಾರದಿಂ ಬಂದವರ ಮುಂಡೆಗಡೆ
ಯುನ್ನತಾಸನದಲ್ಲಿ ಕುಳ್ಳಿರ್ದು ಮುಸುಕನುಗಿವುದುಮೀಕ್ಷಿಸುತೆ ಪುಳಕಿಸಿ ೧೦

ಇನಿಸಿನಿಸು ಭಯವದಱಿಂ ಳಿನಿಸಿನಿಸು ಭಕ್ತಿಯೊಡ
ನಿನಿಸಿನಿಸು ಮುಳಿಸುಗೂಡಿನಿಸಿನಿಸು ಮುದ್ದು ಮೇ
ಣಿನಿಸಿನಿಸು ಗದ್ಗದಂಗಳ್ವೆರಸು ತದ್ಗುರುಸ್ವಾಮಿಗಭಿನಮಿಸೆ ನಗುತೆ
ವಿನಯದಿಂ ತೆಗೆದು ಬಿಗಿಯಪ್ಪಿ ನೀಂ ಶಿವನೊಳೇ
ಕಿನಿಸು ಮುಳಿಸಂ ತಾಳ್ದಿ ಮಗನೆ ಯೆನೆ ನೀನಱಿಯ
ದನುವೇ ಸ್ವತಂತ್ರಚರಿತಾ ನುಡಿದುತೋಱಲೇಂ ನಿನ್ನೊಳ್ ಪ್ರಮಾಣಮುಂಟೇ ೧೧

ಪಾಲೆಱೆದರಂ ನಿರಾಕಾರದಲ್ಲಿರಿಸಿದೆ ಮ
ಹಾಲಯದ ವಿಷವನಿಕ್ಕಿದರಂ ಸಲಹಿದೆ ಮ
ತ್ತಾ ಲೋಕಬಾಂಧವನ ಪಲ್ಗಳಿದೆ ಪೊರ್ದಿದ[೧]ರಿ[೧] ತಿಂಬವನನೊಲ್ದು ಪಿಡಿದೆ
ನೀಲೋತ್ಪಲದಲಿಟ್ಟನಂ ಕೊಂದೆ ನಡುದಲೆಯ
ಮೇಲೆ ಕಲ್ಲೆತ್ತಿ ಹಾಯ್ಕಿದನ ಮನ್ನಿಸಿದೆ ಭಲ
ರೇ ಲೇಸು ಲೇಸು ವಿಶ್ವಾಧಿಪಾ ಪ್ರಭುಗಳೇನಂ ನೆಗಳ್ದೊಡಂ ಮೆಱೆಯದೇ ೧೨

ಎಂದಿಂತು ಸವ್ಯಾಜನುತಿಗಳಿಂ ತನ್ಮಹಿಮ
ನಂದು ಗುರುವೇಷದೀಶ್ವರನೊಡನೆ ನುಡಿಯಲೊಡ
ನೆಂದನೆಲೆ ಕಂದ ಕೇಳ್ ಧನನಿಮಿತ್ತಂ ನೆಗಳ್ದುದಲ್ತು ನೀನೀ ಮರ್ತ್ಯಕೆ
ಬಂದು ಪರವಾದಿಗಳ್ಗಖಿಲ ದೃಷ್ಟಂದೋಱಿ
ನಿಂದು ಸದ್ಭಸಿತ ರುದ್ರಾಕ್ಷಾದಿಕಂ ಧಾರ್ಯ
ಮಿಂದುಧರನೇ ದೈವವಾ ಸಮಯವೇ ಶ್ರೇಷ್ಠವೆಂದು ನಿಜಮಂ ಸ್ಥಾಪಿಸಿ ೧೩

ಸ್ಥಿರಬೋಧವೆಂಬ ವರ್ಷಂಗಱೆದು ಸುಜನರಾಂ
ತರವೆಂಬ ಸುಕ್ಷೇತ್ರಮಂ ಶುದ್ಧಿಗೆಯ್ದು ಶುಭ
ಕರ ಸತ್ಕ್ರಿಯೆಗಳೆಂಬ ಬೀಜಮಂ ಬಿತ್ತಿ ಮಱಹೆಂಬ ಕಳೆದೆಗೆದದರ್ಕೆ
ಪರರ ದುರ್ಬೋಧಾದಿ ವಿಘ್ನಂಗಳೊಂದದಂ
ತಿರೆ ನಿಯಮವೆಂಬ ಕಾಪಿಟ್ಟಮಲ ಮುಕ್ತಿಯೆಂ
ಬುರು ಫಲಂಬಡೆದು ಭಕ್ತಿಯ ಬಱನನಲೆದು ಶುಭಮಂ ಮಾಡಿ ಪೊರೆದೆ ಧರೆಯಂ ೧೪

---

೧ ರ (ಬ)

ನೀಂ ಬಂದ ಕೃತ್ಯಮಂ ಕುಂಧಿಲ್ಲದೀಶಂಗ
ಳುಂಬಮಪ್ಪಂತೆ ಸಾಗಿಸಿದೆ ನಿನ್ನಂ ವಿಜಿತ
ಶಂಬರಹರಂ ಮೆಚ್ಚಿ ನಿಜದೊಳೊಂದಿಸುವೆನೆಂದೆಯ್ದೆ ನೆನೆದಿಂತು ನೆಗಳ್ದಂ
ನಂಬಿ ನೀನೀ ಮುಳಿಸನುಳಿ ಮಗನೆ ನಿನ್ನ ಪು
ತ್ರಂ ಬಗೆಯೆ ನಾಡಾಡಿಯಲ್ತು ಕಾರಣಿಕನವ
ನಿಂ ಬಣ್ಣವಪ್ಪವು ಕೆಲವು ಶೈವಕರ್ಮಂಗಳುಂಟಂತಱಿಂದವಂಗೆ ೧೫

ಹರಿಸದಿಂದಾಚಾರ್ಯಪಟ್ಟವಂ ಕಟ್ಟಿ ನೀ
ನಿರದೆ ಕಾಶಿಗೆ ಬರ್ಪುದಲ್ಲಿ ವಿಶ್ವೇಶ್ವರನ
ಕರುಣದೊದವಂ ಕಾಣಿಸುವೆನೆನೆ ಮುದಂಬೆತ್ತು ವೇಷಮಂ ಪಲ್ಲಟಿಸಿದಾ
ಪರಿಯೊಳೆರಡಿಟ್ಟು ನುಡಿವಂದವಲ್ಲದೆ ಬೇಱೆ
ಹರನನಾರ್ ನೀನಲ್ಲದೆನ್ನೊಳೇಕಿನಿತೆಂದು
ಚರಣಕೆಱಗುವುದುಮಂತರ್ಧಾನನಾದನೀಶಂ ಚೋದ್ಯರಸಮಾನೆಸಗಿ ೧೬

ಅಲ್ಲಿ ಗುರುರೂಪಮಂ ಕಾಣದೆ ಗುಣಾರ್ಣವಂ
ತಲ್ಲಣಿಸಿಯೊಡನೆ ತಿಳಿದೆನ್ನ ಮೇಗಣ ಕೃಪೆಯಿ
ನಿಲ್ಲಿಗೆಯ್ತಂದು ನಂಬಿಸಿ ಪಂಬಲಿಕ್ಕಿ ಪೋದನೆ ಅಕಟ ವಿಕಟಚರಿತಂ
ಇಲ್ಲಿ ತಾನೇಂ ಭಿನ್ನನೇ ಆದೊಡಂ ತನ್ನ
ಸೊಲ್ಲನೇ ಮನ್ನಿಸುವೆನೆಂದು ನಿಶ್ಚೈಸಿ ಪರ
ಮೋಲ್ಲಾಸದಿಂ ಸಕಲ ಭಕ್ತರಂ ಬರಿಸಿ ಕಾಲೋಚಿತ ಕ್ರಿಯೆಯನೆಸಗಿ ೧೭

ಏತತ್ ಕಥನಮನುಳಿಯದೆ ತಿಳುಪಿ ತದ್ಗಣ
ವ್ರಾತಂಬೆರಸು ಶಿವಾರ್ಚನಮಂ ನಿರ್ಮಿಸಿ ಪರಿ
ಪೂತ ಪ್ರಸಾದಸಂತುಷ್ಟರಾಗಿಯನಂತರಂ ತದನುಮತಿ ಪೂರ್ವಕಂ
ಓತು ವಿಧ್ಯುಕ್ತಮಾಗಾಚಾರ್ಯಪಟ್ಟಮಂ
ಖ್ಯಾತ ಸುಕುಮಾರ ಪದ್ಮರಸರ್ಗೆ ರಚಿಸಿ ಸಂ
ಪ್ರೀತಿಯಿಂದಾ ಶರಣಸಭೆಗೆ ಸಾಷ್ಟಾಂಗದಿಂ ನಮಿಸಿ ಕೈಮುಗಿದು ನಿಂದು ೧೮

ಎನ್ನನಿಂದುವರಮತಿ ಮೋಹದಿಂದಾರಯ್ದು
ಮನ್ನಿಸಿ ಮಹಾನುಭವಸುಧೆಯೆಱೆದು ರಕ್ಷಿಸಿದಿ
ರಿನ್ನುಂ ಶಿವಪ್ರಸಾದಾಮರಕುಜಂ ನಿಮ್ಮ ಕರುಣಾಜಲಧಿನಲ್ಲದೆ
ಚೆನ್ನಾಗಿ ಫಲಿಸದಂತಱಿನದಂ ಮಱೆಯವೇ
ಡೆನ್ನೊಳೆಂದೊರೆದೆಱಗಿ ಬೀಳ್ಕೊಳೆ ಶರಣಕುಲಂ
ಖಿನ್ನಮಾಗಿ ಪುರಾರಿಯಕ್ಕಟಾ ಮಾಹೇಶ್ವರರ ಸುಖವನಿಂದಳಿದನೇ ೧೯

ಕುಲಹೀನನಂ ಕುಷ್ಠನಂ ಶ್ರೇಷ್ಠನೆಂದು ನಿ
ರ್ಮಲ ತನುವನಿತ್ತುದಱಿನಿದೆ ಮಹಾಸತ್ವವನಿ
ಚಲವಾದಿ ಬರೆ ಕುಂದದವನಂ ಗೆಲಲ್ ಪೆರ್ಚಿದುದಱಿನಿದೆ ಯತಿಗಭೀರಂ
ಸಲೆ ವಿಧವೆಯಂ ಪೊರೆದುದಱಿನಿದೆ ಕೃಪಾಳುತ್ವ
ವಲಘು ನಿಜನುತಿಗಳ್ಕುವದಱಿನವಿಕತ್ಥನಂ
ಫಲಿಸುತಿದೆ ಪದ್ಮಣಾರ್ಯಂ ಸುಧೀರೋದಾತ್ತನಾಯಕಗಾರ್ಯನಲ್ತೆ ೨೦

ಆರುಂಟು ಶಿವಶರಣರೊಳ್ ಕುಲ ಗುಣಾದಿಗಳ
ನಾರಯ್ಯದವರ ಮುದ್ದಂ ಸಲಿಸಿ ಸಂತವಿಪ
ರೀ ರಸೆಯೊಳೆಂದು ಕರಗುತಿರೆ ಸುತನಂ ನೋಡಿ ಸಾಧಯಾಮ ಯಿತಿ ವಾಕ್ಕಿಂ
ಚಾರು ಪ್ರಯಾಣಮಂ ಬೆಸಗೊಳೆ ಕರಂ ಕೊಱಗಿ
ಯಾರಾಧ್ಯಕುಲಚಕ್ರವರ್ತಿ ನೀವಗಲಲ್ ಶ
ರೀರಮಂ ಧರಿಸಿಯಾನಿರಲಾರ್ಪೆನೇ ನಿಮ್ಮ ಚರಣಸೇವನಮನುಳಿದು ೨೧

ಆನೇಕೆ ಸಂಸೃತಿವ್ಯಾಪಾರಮೇಕೆ ಪರ
ಮಾನಂದಸಾಗರಾ ಗುರುರೂಪ ಶಶಿಧರಾ
ಜ್ಞಾನೈಕ ಗೋಚರಾ ಯೆನುತೆ ನಿರ್ಮಾಯಿಕ ವ್ಯಥೆಯಿನಡಿಯಲ್ಲಿ ಬೀಳ್ದು
ತಾನೆಯ್ದೆ ಮಱುಗುತಿರೆ ತೆಗೆದಪ್ಪಿ ನೀಂ ಶಿವ
ಜ್ಞಾನಿ ನಿನಗೇಕೀ ತನು ವ್ಯಾವಹಾರಿಕ
ಗ್ಲಾನಿ ನಿನಗೆಮಗೆ ಬಗೆಯೆ ವಿಯೋಗಮುಂಟೇಯೆನುತೆ ಸಹಜ ಸದ್ಬೋಧದಿಂ ೨೨

ತಿಳಿಪಿ ನಿನ್ನಿಂದಿನ್ನುಮೆಸಪ ಶಿವಕಾರ್ಯದು
ಜ್ವಲವೃತ್ತಗಳ್ ಕೆಲವೊಳವು ಬಳಿಕೆ ನಿನ್ನುದರ
ದೊಳಗೋರ್ವ ಸತ್ಪುತ್ರನೊಗೆವನವನಿಂದೆಮ್ಮ ಸಮಯಂ ಸಫಲಮಂತಱಿಂ
ಉಳಿವುದೀ ವೈರಾಗ್ಯಬುದ್ಧಿಯನೆನುತ್ತಾರ್ಯ
ತಿಳಕಂ ಬಹು ಪ್ರಕಾರದೊಳೊಡಂಬಡಸಿ ಗುಣ
ನಿಳಯನಂ ಸತ್ಕರಿಸಿ ಬೀಳ್ಕೊಟ್ಟುಳಿದ ಬಂಧುಗಳನಂತೆ ಸಂತವಿಟ್ಟು ೨೩

ಕರಮೆ ಶಿಷ್ಯಾಳಿಯಂ ನೋಡಿ ಸುಕುಮಾರ ಪ
ದ್ಮರಸನಿರ್ದಪನಾತನಿಂ ಕೃತಾರ್ಥತ್ವಮುಂ
ಧರಿಸಿಮೆಂದಿರಿಸಿಯುಘೆ ಚಾಂಗು ಭಲ ಜೀಯ ಜಯಯೆಂಬ ಮಂಗಳಘೋಷದಿಂ
ಸ್ಫುರದಾತ್ಮವಾಸಮಂ ಪೊಱಮಟ್ಟು ಪೋಗಿಮೆಂ
ದೊರೆದೊಡಂ ಕೇಳದೊಡನೆಯ್ತರ್ಪ ಕೆಲವು ಶಿ
ಷ್ಯರುಮಂತೆ ಭಕ್ತರುಂಬೆರಸು ಕೇಳಿಕೆಯುಣ್ಮೆ ಘನ ವಿಭವಸಹಿತನಾಗಿ ೨೪

ಭಾಪುರೇ ಗುರುವರ್ಯನಿಂತಧಿಕ ತೇಜಃಕ
ಲಾಪದಿಂದವಿಮುಕ್ತಪುರಕೆಂದು ನಡೆವೆಡೆಯೊ
ಳಾ ಪಥದೊಳಿದಿರ್ವಂದು ತಂತಮ್ಮ ಪುರಕೆ ಕೊಂಡೊಯ್ದು ಮನ್ನಿಪ ಭಕ್ತರಾ
ಓಪ ಸತ್ಕಾರಂಗಳಂ ಗ್ರಹಿಸುತೊಲ್ದು ಪಂ
ಪಾಪುರಕೆ ಗಮಿಸುವನಿತಱೊಳಾ ಹರೀಶನಂ
ಬಾಪತಿಯನರ್ಚಿಸುತ್ತಾ ಲಿಂಗದೊಳ್ ಪದ್ಮರಸರ ಬರವಂ ಕಾಣುತೆ ೨೫

ಪ್ರಮುದಿತಾಂತಃಕರಣನಾಗಿ ಪುಳಕಿಸಿ ಶೈವ
ಸಮಯಾಬ್ಧಿಶಶಿ ಕೆಱೆಯ ಪದ್ಮಣಾಂಕಂ ಕಾಶಿ
ಗಮನ ಪೊಱಮಟ್ಟುದಕ್ಕುಮಿದೆನುತೆ ಸುಜ್ಞಾನಿ ತಿಳಿದು ತತ್ಪುರದೊಳೆಸೆವಾ
ಅಮಿತಭಕ್ತರ್ವೆರಸು ಸಕಲ ಸಂಭ್ರಮದೆ ಬಂ
ದಮಲಿನನಿದಿರ್ಗೊಂಡು ಕಂಡು ಪರಿರಂಭಾದಿ
ಸಮುಚಿತಮನಾಚರಿಸಿ ಗುರು ವಿರೂಪಾಕ್ಷಾಲಯಕ್ಕೆ ಕೊಂಡೊಯ್ದು ಪೋಗಿ ೨೬

ದೇವಕುಲಸಾರ್ವಭೌಮುನನೆಯ್ದಿ ಕಂಡು ನಾ
ನಾ ವಿಧದೆ ನುತಿಸಿ ತತ್ಕರುಣಮಂ ಪಡೆದು ಸ
ದ್ಭಾವಿ ಹರಿಹರದೇವನೊಡನೆ ನಾಲ್ಕೆರಡು ಪಗಲೀಶ್ವರಾನುಭವಸುಖದಿಂ
ಆ ವಿಮಲ ಪುರದೊಳಿರ್ದಲ್ಲಿಂದೆ ತಳರ್ವೆಡೆಯೊ
ಳೋವೊ ತದ್ಧರಿದೇವನಂ ಪರಿಮಿತಕೆ ಕರೆದು
ಮಾವರಂ ನಿಮ್ಮನಿಂದಿಂಗೆಂಟನೆಯ ದಿನಕೆ ತನ್ನೊಳ್ ನೆರಪಲಿರ್ದಪಂ ೨೭

ಅಂತಱಿಂ ನೀವೀಗಳೊರೆವೀ ಮಹಾಕಾವ್ಯ
ಮಂ ತಡೆಯದನಿತಱೊಳ್ ಪೂರವೆಯ್ದಿಪುದೆಂದ
ದಂ ತಿಳಿಪಿಯವರಿಂದೆ ಬೀಳ್ಕೊಂಡು ಕಾಶೀಪುರಾಭಿಮುಖಮಾಗಿ ಗಮಿಸಿ
ಮುಂತೆಸೆವ ಶಿವಪುರ ಶಿವಕ್ಷೇತ್ರ ತತಿಗಳುಮ
ನಂತಸಮ ಪುಣ್ಯವನ ಪುಣ್ಯನದಿಗಳುಮಂನೋ
ರಂತೀಕ್ಷಿಸುತ್ತಮಲ್ಲಲ್ಲಿ ಮಾಳ್ಪುಪಚಾರಮಂ ಭಕ್ತರಿಂ ಗ್ರಹಿಸುತೆ ೨೮

ಪರಮಾನುರಾಗದಿಂ ಕೆಱೆಯ ಪದ್ಮರಸಾಂಕ
ಗುರುವಿಂತು ವಾರಾಣಸಿಗೆ ಗಮಿಸುತಿರಲಿತ್ತ
ಹರಿದೇವನೊರ್ಪಗಲ್ ಪಥದೊಳ್ ವಿಮುಕ್ತಾಂಗನಾದಳಿಯನುರು ಮಹಿಮೆಯಂ
ಕರಮೆ ವಿಪ್ರರ್ಗೆ ಕಾಣಿಸಿಯಾತನಂ ಶಂಭು
ಪುರಿಯನೆಯ್ದಿಸಿ ಬಳಿಕ್ಕಾಯೆಂಟನೆಯ ದಿನದೊ
ಳರರೇ ವಿರೂಪಾಕ್ಷನಂ ಯಜಿಸಿ ಸಮುಚಿತಸ್ತೋತ್ರಮಂ ಮಾಡೆ ಮೆಚ್ಚಿ ೨೯

ಕರುಣದಿಂ ತನ್ನುದರಮಂ ತೆಱೆದು ಸರ್ವರ
ಚ್ಚರಿವಟ್ಟುಘೇಯುಘೇಯೆನಲಡಂಗಿಸಿದನಾ
ಪರಿಯೊಳಗುಳಿದ ನಾಲ್ಕು ಲಿಂಗದೊಳ್ ಕಾಣಿಸಿ ಹರೀಶ್ವರಂ ಮುಕ್ತಿಸತಿಯಂ
ವರಿಸಿ ಸುಖಮಿರ್ದನಿತ್ತಲ್ ಕೆಱೆಯ ಪದ್ಮರಸ
ಗುರು ಕೆಲವು ದಿವಸಂಗಳಿಂ ಮೇಲೆ ಕಾಶಿಗುರು
ತರ ಹರ್ಷದಿಂದೆಯ್ದುವಲ್ಲಿ ಭಾಗೀರಥೀನದಿ ಮುಂದದೇಂ ಮೆಱೆದುದೋ ೩೦

ಹರಹರಾ ಸಕಲರಘಮಂ ತೊಳೆಯಲೆಂದು ಶಂ
ಕರನ ಸಮ್ಯಜ್ಞಾನರಸವೆ ಜಲರೂಪಮಂ
ಧರಿಸಿ ಪರಿದುದೊ ವಿಶ್ವಪತಿ ತನ್ನ ನಿಜವಾಸವಾದ ಕಾಶಿಯನೆಯ್ದಿದಾ
ನರರಪ್ರಯಾಸದಿಂ ಬರ್ದುಕುಗೆಂದುಱೆ ಸುರಿದ
ಕರುಣಾಮೃತವೋ ಭಗೀರಥನುಗ್ರ ತಪಕೊಲ್ದು
ಪರಮನೆರ್ದೆ ಕಟ್ಟನೆಕರಗಿ ಮೇಣ್ ಪ್ರವಾಹಿಸಿತೊಯೆನೆ ಗಂಗೆ ಕಂಗೊಳಿಸಿತು ೩೧

ಆ ನದೀತಟದೊಳ್ ಜಪಂಗೆಯ್ವ ಪರಶಿವ
ಧ್ಯಾನಮಂ ಮಾಳ್ಪ ಶಿಪೂಜೆಯಂ ನೆಗಳ್ವ ವಿಮ
ಲಾನುಭವದೊಳ್ ಸಲ್ವ ವೇದಮಂ ಪಠಿಪ ವಿವಿಧಾಧ್ವರಂಗಳನೆಸಗುವಾ
ನಾನಾವಿಧೋರು ಯೋಗಾಭ್ಯಾಸಮಂ ರಚಿಪ
ನೂನ ಮನುಸಂಸಿದ್ಧಿಯಿಂ ಮಾಡಿಕೊಂಬ ಸು
ಜ್ಞಾನಿಗಳ್ ಮೌನಿಗಳ್ ತಾಪಸರ್ ಮೆಱೆದರತಿ ಶಾಂತಿರಸಮಂ ಸೂಸುತೆ ೩೨

ಅಂತುಭಯ ಕೂಲದೊಳ್ ನಿತ್ಯನಿಯಮಂ ಗೆಯ್ವ
ಸಂತರಂ ತೆಱೆಗಯ್ಯನೆತ್ತಿ ನಂಬುಗೆಗೊಟ್ಟು
ಸಂತವಿಸುತುಂ ನಿಜೇಷ್ಟವನೀವೆನೆಂದು ಭೋರ್ಗಱೆವ ರವದಿಂದುಲಿಯುತುಂ
ಕಂತುಕಾಲಾದಿಭಯಮಿಲ್ಲಿಲ್ಲ ವರ್ತಿಪರ್ಗೆ
ಮೆಂತುಮೆಂದಾವರ್ತಮೆಂಬ ಬಾಯ್ದೆಱೆದಱಿಪು
ತುಂ ತತ್ಪ್ರಳಯವನಾ ಫೇನದಿಂ ನಗುತೆಸೆವ ಗಂಗೆಯಂ ನೋಡಿ ನಲಿದು ೩೩

ಈ ವಿಮಲ ಗಂಗಾಜಲವನಿನಿಸು ಸೋಂಕಿ ಸುಳಿ
ವಾ ವಾಯುವಾವವರ ಮೇಲೆ ತೀಡುವುದವರ್
ಪಾವನಾತ್ಮಕರಪ್ಪರೆನಲಿದಱ ತೀರವಾಸಿಗಳ ಸುಕೃತದ ಸುಗ್ಗಿಯಾ
ಏವೇಳ್ವೆನೀ ಜಾಹ್ನವೀ ಸ್ಮರಣವೇ ಮುಕ್ತಿ
ಭಾವಕಿಯನೊಲಿಪುದೆನೆ ದರ್ಶನಾದಿಗಳಿನ
ಪ್ಪಾ ವಿವಿಧ ಫಲಕೆ ಶಂಕರನೆ ಸಾಲಿಗನಲ್ಲದೇನನಿತ್ತಪೆನೆನುತ್ತುಂ ೩೪

ಜಯ ಸಕಲ ಜನನಿ ಜಯ ಲೋಕೈಕಪಾವನೇ
ಜಯಮಂಗಲಾಂಗಿ ಜಯದರ್ಶನಾನ್ಮುಕ್ತಿದೇ
ಜಯ ಜಗದ್ಧರಜಟಾಜಾಲಮಧ್ಯಾಲಯೇ ಜಯ ನಿರ್ವಿಕಾರಾಮೃತೇ
ಜಯ ಸರ್ವ ಪಾಪೋಪಪಾಪತಾಪಾಪಹೇ
ಜಯ ಸಕೃತ್ಸ್ನಾತಜನಶತಯಜ್ಞಸುಫಲದೇ
ಜಯ ಲಸತ್‌ತ್ರಿಪಥಗೇ ಜಯ ಜಹ್ನು ಪುತ್ರಿ ಜಯ ದಿವ್ಯ ಗಂಗೇ ಜಯ ಜಯ ೩೫

ಎಂದಿಂತು ನುತಿಸುತದಱ ಮಹತ್ವಮಂ ಶರಣ
ವೃಂದಕುಸಿರುತ್ತಡಂ ಪಾಯ್ದು ಕಾಶಿಗೆ ಬಂದು
ನಿಂದನಿತಱೊಳ್ ವಿಶ್ವನಾಥನಾ ಪುರದವರ ಕನಸಿನೊಳ್ ಪೋಗಿಯೆಮ್ಮಾ
ಕಂದಂ ಕೆಱೆಯ ಪದ್ಮಣಾರ್ಯನೆಯ್ತುರುತಿರ್ದ
ಪಂ ದಿವ್ಯ ಸಂಭ್ರಮದೆ ನೀವೆಯ್ದಿಯಾತನಂ
ಚೆಂದದಿಂದಿರ್ಗೊಂಡು ಮೆಱೆವೀ ಮಹಾಕ್ಷೇತ್ರವಲಯವಂ ನೆಱೆತೋಱಿಸಿ ೩೬

ಬಳಿಕಮಿಲ್ಲಗೆ ಕರೆದುತನ್ನಿಮೆನೆ ಗುಡಿಗಟ್ಟ
ಪುಳಕಿಸುತವರ್ ಶಿವಂ ಪೇಳ್ದಂತೆ ಪೋಗಿಯು
ಜ್ವಳ ವಿಭವದಿಂದಿರ್ಗೊಂಡು ಕಂಡನ್ಯೋನ್ಯ ಸಮುಚಿತ ಕ್ರಿಯೆಯನೆಸಗಿ
ಮಲಹರನದೇಂ ಸೋಲ್ತನೋ ಇಂತು ನಿನ್ನವೋ
ಲೊಳರೆ ಶಿವನಿಂದೆ ಮನ್ನಿಸಿಕೊಳ್ವ ಮಹಿಮರೆಂ
ದೆಳಸಿ ಗುರುವಂ ಪೊಗಳುತೊಯ್ಯುತಿರೆ ತನ್ಮಹತ್ವವನೊರೆವುತೆಯ್ದುತಿರ್ಪಂ ೩೭

ಹೇಮಾರುಣಾಸಿತೋಜ್ವಲ ನೀಲಲೋಹಿತೋ
ದ್ದಾಮಸ್ಫಟಿಕ ಹರಿನ್ಮದ ಮಣಿರಜತವೆಂಬ
ಸೀಮಾತ್ತವರ್ಣದಿಂ ಮೂಲೆಗೊಳಗಾಗಿದಿಗಿನಾಂಕಮಾದಮರಾವತೀ
ಭೀಮ ತೇಜೋವತಿ ಸುಸಂಯಮಿನಿ ಕೃಷ್ಣಾವ
ತೀ ಮಹಾನಗರಿ ಶುದ್ಧವತಿ ಗಂಧವತಿ ಮ
ತ್ತಾ ಮಹೋದಯೆ ಯಶೋವತಿಗಳಿನಿತೂಣೆಯಂಬುಗದ ಕಾಶಿಗೆ ಸಾಟಿಯೇ ೩೮

ಇಲ್ಲಿ ವಿಹರಿಸುವಂತ್ಯಜರ್ಗೆ ಸರಿಯೇ ನಾಕ
ದಲ್ಲಿಯಗ್ರಜರಿಲ್ಲಿಯೊಡಕುಗಲ್ಗಿದಿರೆ ದಿವ
ದಲ್ಲಿಯ ಷರುಷವಿಲ್ಲಿ ಪುಟ್ಟಿರ್ದ ಶಾಲ್ಮಲಿಗೆ ಸರಿಯೆ ಸಗ್ಗದ ಭೂರುಹಂ
ಇಲ್ಲಿರ್ಪ ಬಂಜೆ ಹಸುವಿಂಗೆ ಪಡಿಯೇ ತ್ರಿದಿವ
ದಲ್ಲಿರ್ಪ ಪಶುಗಳಿಲ್ಲಿಯ ಪಲ್ವಲೋದಕ
ಕ್ಕುಲ್ಲಸಿತ ಸುರಲೋಕದಮರ್ದಣೆಯೆ ಪಲವೇನಿದೇ ಪರಬ್ರಹ್ಮಸದನಂ ೩೯

ಸುಮ್ಮನೀ ಸುಕ್ಷೇತ್ರವಾಸಿ ವಿಹರಿಸಿದುದೇ
ಅಮ್ಮಮ್ಮ ಸತ್ಪ್ರದಕ್ಷಿಣಮುವಂ ನುಡಿದುದೆ
ಲ್ಲಂ ಮಂತ್ರವವನ ಕರಧೃತವೆಲ್ಲವುಂ ಸೇವೆಯವನ ಮೈಸೋಂಕೆಲ್ಲವುಂ
ದಿಮ್ಮಿತಪ್ಪೊಡನಾಟವವನಿರವೆ ಯೋಗವಾ
ತಂ ಮಾತನಾಡದಿರ್ದುದೆ ವಲಂ ಧ್ಯಾನಮೆಂ
ದೆಮ್ಮ ವಿಶ್ವೇಶ್ವರಂ ಕೈಕೊಂಡು ಮುಕ್ತಿಯಂ ಕೊಡುವನೆನಲೇಂ ಮಹಿಮೆಯೋ
೪೦

ಸಕಲ ವಿಧಿ ವಿಧು ಜಿಷ್ಣು ಸುರದನುಜ ಮನುಜ ಗು
ಹ್ಯಕ ಸಿದ್ಧ ಸಾಧ್ಯ ಮನು ಮುನಿ ಯತಿ ವಸೂರಗರ
ವಿಕಲಾನಿಧಿಗ್ರಹನಿಧಿನಿಧಾನ ಗರುಡ ಗಂಧರ್ವಭ ಪಿಶಾಚ ಭೂತ
ಸುಕರ ಕಿಂಪುರುಷ ಭೈರವ ಯಕ್ಷವಿದ್ಯಾಧ
ರ ಕಲಾಪ್ಸರಶ್ಶಕ್ತಿ ಮಂತ್ರಸಿದ್ಧಿನದೀನ
ದ ಕುಧರೌಷಧ ಷಡಂಗಾಮ್ನಾಯ ಶಾಸ್ತ್ರಾಗಮಾದಿಗಳ ಲೀಲಾಸ್ಥಳಂ ೪೧

ಭಾವಿಸಿದವಂ ಪುನರ್ಭೂತಿ ತನಗಿಲ್ಲೆಂದು
ಭಾವಿಸಿದವಂ ನೆನೆದವಂ ಸಗ್ಗದೊಡೆತನವ
ದೇವಿರಿದೊ ಎಂದು ನೆನೆದವನೊರ್ಮೆ ನುಡಿದವಂ ಹರ್ಯಜಾದಿಗಳ ಪದಮುಂ
ಓವೊ ಪುಲ್ಮಾಡಿ ನುಡಿದವನೇಳಡಿಯನಿಟ್ಟ
ನಾ ವಿಮಲ ಮುಕ್ತಿಗಡಿಯಿಟ್ಟವನಿದಂ ಪೊಕ್ಕ
ನೇ ವಿಶ್ವಪತಿಯ ಗರ್ಭಂಬೊಕ್ಕವಂ ಪೊಗಳ್ವುದೇನನ್ನದಿನ್ನದೆಂದು ೪೨

ಆವನಿಲ್ಲಸುಗಳೆವುತಿರ್ಪನಾ ಕಾಲದೊಳ್
ದೇವಿ ಮೇಲುದಱಿಂದೆ ಬೀಸುವಳ್ ನಿಜಕರದೊ
ಳೋವೊ ಗಂಗಾಂಬುವಂ ತಂದು ಗಣಪಂ ಬಾಯ್ಗೆ ಬಿಡುವನಮಮಾ ಜಾಹ್ನವಿ
ಓವಿ ಮೆಯ್ದಡವುವಳ್ ಭೃಂಗಿ ಭಸಿತವನಿಡುವ
ನಾ ವಿಮಲನಂದಿ ತೊಡೆಗುಡುವನಾತನ ತಲೆಗು
ಮಾವರಂ ತಾರಕಬ್ರಹ್ಮಮಂ ಬಲಗಿವಿಯೊಳೊರೆವನೆನೆ ಘನವದೆಂತೋ ೪೩

ಅಂತಿಂತುಟೆಂದು ಬಣ್ಣಿಪುದೇನೊ ವೇದ ವೇ
ದಾಂತ ಶಾಸ್ತ್ರಪುರಾಣ ತತಿಗಳಾ ಕ್ಷೇತ್ರದ
ರ್ಥಾಂತರಕೆ ಬರೆದ ಟೀಕೆಗಳೆನಿಪವಿಲ್ಲಿ ಭಕ್ತಾಭಕ್ತರೆಂದೆನ್ನದೆ
ಅಂತೆ ಪುಣ್ಯಾತ್ಮ ಪಾಪಾತ್ಮರೆನ್ನದೆ ಶಿವಾ
ಕಾಂತನೆಲ್ಲರ್ಗೆ ಮುಕ್ತಿಯನೀವನೆನುತಖಿಲ
ಮಂ ತಾಂ ಮೊದಲ್ ಬಲ್ಲವೊಲವಂ ತಿಳಿಪಿದನದೇಂ ಶಿವಜ್ಞಾನದೊದವೋ ೪೪

ರವಿ ಸುಕೇಶನ ಪುರದ ಮಾಹೇಶ್ವರರ ನೋಯಿ
ಪವಸರದೊಳಾ ನಂದಿ ಕೋಪದಿಂ ನೋಡೆ ಬೀ
ಳ್ದು ವಸುಂಧರೆಯೊಳಾರ್ತನಾಗುರುಳುತುಂ ಬಂದು ನಿಜಪದಂಬಡೆಯಲೆಳಸಿ
ತವೆ ಸಮರ್ಚಿಸಿದ ಬಾಲಾರ್ಕೇಶಲಿಂಗಮಿದು
ಶಿವರಹಿತ ದಕ್ಷಯಾಗಕೆ ಪೋದ ದೋಷಮಂ
ತವಿಸೆ ಸೋಮಂ ಬಂದು ಪೂಜಿಸಿದ ಸೋಮೇಶಲಿಂಗಮಿದು ನೋಡಿಮೆನುತುಂ ೪೫

ಅಂದು ನಿಜಸುತೆಗಳಿಪಿದತಿ ಪಾಪಮಂ ಕಳೆಯ
ಲೆಂದಜಂ ಯಜಿಸಿದಾ ಬ್ರಹ್ಮೇಶಲಿಂಗಮಿದು
ಸಂದ ಮುನಿಪತ್ನಿಯಂ ನೆರೆದಘವನಳಿಯಲೆಂದಿಂದ್ರಂ ಕರಂ ಯಜಿಸಿದಾ
ಚೆಂದದಿಂದ್ರೇಶನಿದು ಸರ್ವೇಷ್ಟ ಸಿದ್ಧ್ಯರ್ಥ
ಮಿಂದಿರಾಕಾಂತನರ್ಚಿಸಿದ ಕೃಷ್ಣೇಶನಿದು
ಬಂದ ಭಕ್ತಾಪರಾಧಂಗಳಿಯೆ ಕಾಲನರ್ಚಿಸಿದ ಕಾಲೇಶ್ವರನಿದು ೪೬

ಅನ್ಯಾಯಕಳ್ಕದೀರಾಱು ಬರಿಸಂಬರಂ
ಸನ್ಯಾಸಿಯೋರ್ವನತಿಕಾಮಿ ಕೌಂಡಿನಿಯುಮಾ
ದಸ್ಯವಧುವಂ ನೆರೆದು ತತ್ ಸುರಾಭಾಂಡದೊಳಳಿದು ಲಿಂಗವಾಗಿ ಪುಟ್ಟಿ
ಅನ್ಯೂನದಿಂ ಸುರಾಭಾಂಡೇಶನೆನಿಸಿ ಬಹು
ಮಾನ್ಯತೆಯನಾಂತನಿದೆ ಪೇಳ್ವುದೇಂ ಗಿರಿರಾಜ
ಕನ್ಯಾಧವನೆ ಬಲ್ಲನಿದಱ ಮಹಿಮೆಯನೆನುತುಳಿದ ಚೋದ್ಯಮಂ ನೋಡುತುಂ ೪೭

ಅಲ್ಲಿ ತಂತಮ್ಮ ಪೆಸರಿಂ ಸುರ ನರೋರಗರ್
ಸಲ್ಲೀಲೆಯಿಂ ಯಜಿಸಿದಖಿಲ ಲಿಂಗಾಳಿಗಳ
ನುಲ್ಲಾಸದಿಂದೀಕ್ಷಿಸುತೆ ಬಂದು ಮಣಿಕರ್ಣಿಕೆಯ ನೋಡಿ ಕೊಂಡಾಡುತುಂ
ಇಲ್ಲಿರ್ಪ ಮೃತ್ತೆಲ್ಲವುಂ ಸಕಲ್ಪಿಕ ಭೂತಿ
ಕಲ್ಲೆಲ್ಲವುಂ ಲಿಂಗಮುದಕವೆಲ್ಲಂ ತೀರ್ಥ
ವೆಲ್ಲ ಜನರುಂ ರುದ್ರರಿಂತೆಂದು ನಂಬದವನೇ ಶಿವದ್ರೋಹಿ ಯೆನುತುಂ ೪೮

ಇಂತು ಕಾಶೀಕ್ಷೇತ್ರದೊಳಗುಳ್ಳಖಿಲ ಮಹಿಮೆ
ಯಂ ತಾಂ ನಿರೀಕ್ಷಿಸುತೆ ಹೃದಯದ
ಲ್ಲಂತಕಹರಧ್ಯಾನ ಶಂಭುಮಂತ್ರ ಸ್ಮರಣಯುತನಾಗಿ ಪುಳಕಿಸುತ್ತುಂ
ಮುಂಚೆ ಶಿವಲೆಂಕಪಂಡಿತರ್ಗೆಱಗಿದಾ ದಾನ
ವಾಂತಕನನಾ ಶಾರದಾ ಪೀಠಮಂ ತದ್ವ
ಜಾಂತರದೊಳೊಪ್ಪುವಾ ವ್ಯಾಸಭುಜವೊಳಗಾದವಂ ನೋಡುತುಂ ಪೊಗಳುತುಂ ೪೯

ಪರಮ ಸಂಭ್ರಮದೆ ಗುರುರೂಪ ವಿಶ್ವೇಶ್ವರನ
ವರ ಭವನಮಂ ಬಂದು ಪೊಕ್ಕು ನಯನಾನಂದ
ಕರ ಪರಂಜ್ಯೋತಿರಾಕಾರನಂ ಕಂಡು ಭಯಭಕ್ತಿ ಸಂಯುಕ್ತನಾಗಿ
ವರದ ವಾಚಾಮಗೋಚರವಚೋದ್ಯೋತಕೋ
ತ್ತರಪದ ಪದಾತೀತ ಪದವೃತ್ತಿಕಾರಕಾ
ನಿರುಪಮ ನಿಜಾನಂದ ಚರರೂಪ ನಿಷ್ಪ್ರಪಂಚ ಸಕಲಕಲಾ ಪ್ರೇರಕಾ ೫೦

ವರ ಪರವ್ಯೋಮಸಂಕ್ಷೋಭಜಾಖಿಲತತ್ವ
ಪರಿಕರಣ ಶೀಲ ತತ್ತದ್ವೃತ್ತಿ ಸಂಸ್ಥಾಪ
ನ ರಸಾವಗತ ಯಥಾ ಸ್ಫುರಣಾನುಸರಣ ಸಂಲೀನಕರಸಕಲಕೃತ್ಯಾ
ಪರತರಔದಾಸೀನ್ಯಭಾವ ನಿರುಪಾಧಿಕಾ
ಚರಣ ಸಂವಿನ್ಮಾತ್ರ ನಿರ್ವಿಕಲ್ಪಕಶಕ್ತಿ
ಭರಿತ ಪುರುಷಾರ್ಥಮನುಲಾಣ್ವಧಿಷ್ಠಿತ ದೇಶಿಕಾಕಾರ ಕೈವಲ್ಯದಾ ೫೧

ಕರ್ಣಾಟ ವಿಭಕ್ತಿಮಾತ್ರದಲ್ಲಿಯುಪನ್ಯಾಸಚ್ಛಾಯೆಂದನುಲೋಮ
ಪ್ರತಿಲೋಮಾರ್ಥಪದಮಾಗಿ ಮಾಡಿದ ಕವಿಮುಖಕವಾಟಾಖ್ಯಾನ
ಸಾರ್ಥಕಮಾದ ಮಹಾ ಪ್ರಬಂಧಮಿದು :

ವರವಿತನು[೧]ನಿ[೧]ರಲೀಗಕ[೨]ನ[೨]ತಾವಿಕಭಸಶಿವ । ನಿರತತನು । ವಿರುಚಾರು ।
ಚಜರಾತ । ೩ನು೩ ಪಶುಪಶು । ಸರಸರಸ । ಕಮನಣರ । ತವಿರ[೪]ತಹಿ[೪] ।
ಯತ ಯಜಕ[೫] । ಕುಶಲಕರ । ಶಶಕಕರ । ಕರಕ ಕಶ । ಶರಕಲಶ ।
ಶುಕಜಯತ । ಯಹಿತರವಿ । ತರಣರಮ । ಕ ಸರಸರ ।
ಸಶುಪಶುಪ । ನುತರಾಜ । ಚರುಚಾರು । ವಿನುತತರ ।
ನಿವಶಿಸಭ । ಕವಿತಾನ । ಕಗಭೀರ । ನಿನುತವಿರವ[೬] ॥ ೫೨

ಸಾಮರ್ಗಥರ್ವ ಯಜುಷಾಮುಗವ್ಯೇಶ ಪ್ರ
ಕಾಮುಮನ್ಯೋನ್ಯಂ ವಿವಾದಮತಿಕೃತ್ಯಾ ಭಿ
ತೋ ಮಾರ್ಗಣಂ ಕುರ್ವತೋಸ್ಸಾಮ್ಯ ಲಸಯೋರ್ವಿಧು
[೭]ಬ್ರಹ್ಮಣೋರಭೇದ್ಯ[೭].
ಶ್ರೀಮನ್ನಶೇಷ ತತ್ವಾತೀತ ಸರ್ವಗೋ
ದ್ಧಾಮ ಘನನಾದ ಬಿಂದು ಕಲೋತ್ಕ್ರಮ ಪ್ರಥಿತ
ಕಾಮದ ಶರಣವತ್ಸಲೋದ್ಧಗುರುರೂಪ ವಿಶ್ವೇಶ ಮೇ ಪ್ರಾದುರ್ಭವ ೫೩

೧ ಮ (ಬ) ೨ ವ (ಬ) ೩ ನ (ಬ) ೪ ಹಿತ (ಬ) ೫ ನ (ಬ) ೬ ದ (ಬ)
೭ ಬ್ರಹ್ಮಣೋರೋರಭೇದ್ಯ (ಬ) ಬ್ರಹ್ಮಾಣೋರಪ್ಯಭೇದ್ಯ (ಅ, ಕ)

ಯೋ ದಿವ್ಯ ವಿಗ್ರಹೋಯಂ ವಿಮುಕ್ತಿದವಾಹು
ರಾದರೇಣ ಚಿತಿಸ್ಫುಟಾ ಯೇನ ಯಸ್ಮೈ ಸ
ದಾ ದೇವತಾ ನಮಸ್ಕುರ್ವಂತಿ ಯಸ್ಮಾನ್ನರಃ ಕೃತಾರ್ಥಾ ಭವಂತಿ
ಆದಿ ಮಧ್ಯಾಂತ ರಹಿತಾ ಯಸ್ಯ ಶಕ್ತಿಃಕ್ರ
ಮಾದಣೂನಾಂ ಚಯಸ್ಮಿನ್ನೈಜ ಯೋ ಗೋಮ
ಹಾದೇವ ಸತ್ವಮವಿಮುಕ್ತೇಶ ಗುರು ವಿಶ್ವನಾಥ ಮೇ ಪ್ರಾದುರ್ಭವ ೫೪

ಎಂದಿಂತು ನುತಿಸೆ ಶಿವನತಿ ತುಷ್ಟನಾಗಿ ತ
ನ್ನೆಂದಿನುರು ಗುರ್ವಾಕೃತಿಯನಾಂತು ಪೊಱಮಡುವೆ
ನೆಂದು ತಲ್ಲಿಂಗಗರ್ಭಂದೆಗೆಯೆ ಜಾಜ್ವಲ್ಯಮಾನವಾಗೊಂದು ಬೆಳಗು
ಮಂದಯಿಸಿ ಪೊಱಪೊಣ್ಮೆ ದೇಗುಲವನಾವರಿಸೆ
ಮುಂದುವರಿದೀಶ್ವರಕೃಪಾಶಕ್ತಿ ಪದ್ಮರಸ
ರಂದಲಪ್ಪಿತೊ ಇವರ ಚಿತ್ಸತಿ ಶಿವನನವಗ್ರಹಿಸಿ ತರ್ಪನುವೊಯೆನಿಸಿ ೫೫

ನಳನಳಿಸಿ ತೊಳತೊಳಗುವಾ ಬೆಳಗಿನಲ್ಲಿ ಕ
ಣ್ಗೊಳಿಸಿ ನಂದೀಶ ಭೃಂಗೀಶ ವೀರೇಶಾದ್ಯ
ಖಿಲ ಗಣಾವಳಿಯಿಟ್ಟಣಿಸೆ ಚಂಡಿ ಕೀರ್ತಿಗಳ್ ಪೊಗಳೆ ಸತ್ತೂಣವಘೋಷಂ
ಮೊಳಗೆ ಶಿವೆ ಬೆಂಬಳಿಯೊಳೆಯ್ದೆ ಭೂಕಾಂತೆ ಪದ
ತಳಕೆ ತಳಿರ್ಗಯ್ಯಹಾಸಿಕೆಗುಡುತ್ತಿರೆ ವಿನಿ
ರ್ಮಳಮೂರ್ತಿ ಗುರುರೂಪ ವಿಶ್ವಪತಿ ಲಿಂಗದಿಂ ತಳರ್ದು ಬರೆಕಂಡುನಲಿದು ೫೬

ಕರುವಿಟ್ಟವೊಲ್ ಮರುವಡುತೆ ರತಾಂತಸ್ತ್ರೀಯ
ಪರಿವೊಲಿಂದ್ರಿಯ ಚೇಷ್ಟೆಯುಡುಗುತಗೆವೊಯ್ದಂತೆ
ಕರಮೆ ಮೆಯ್ನವಿರೇಳುತಾಲಿವರಲಂತೆ ಕರುಗುತ್ತೆ ಸಂಧ್ಯಾರ್ಕನಂತೆ
ಹರಿಸದೆ ವಿವರ್ಣಿಸುತೆ ಲತೆಯವೊಲ್ ಕಂಪಿಸುತೆ
ವರ ಮೇಘದಂತಶ್ರು ಸುರಿಯುತೆ ಮದಾಳಿಯಂ
ತಿರೆ ವಿಸ್ವರಂದೋಱುತಮಲ ಸಾತ್ವಿಕವೆ ಸಾಕಾರವಾದಂತೆ ಬಂದು ೫೭

ಆ ತೀವ್ರ ಸುಖದ ಸೊರ್ಕಿಂದೆ ಮೂರ್ಛಿಸಿ ಬಿಳ್ದ
ರೀತಿಯಿಂದಂಘ್ರಿಯೊಳ್ ಬೀಳ್ದು ತೊದಲಿಸಿ ಮುದ್ದು
ವಾತಿನಿಂ ಬಣ್ಣಿಸುವ ಮಹಿಮನಂ ನೋಡಿ ಕರುಣಾಮೃತದೊಳೋಲಾಡಿಸಿ
ಆತುರದೆ ತೆಗೆದು ತಳ್ಕೈಸಿ ಮುಂಡಾಡಿ ಸಂ-
ಪ್ರೀತಿಯಿಂ ದಿವ್ಯಪ್ರಸಾದ ತಾಂಬೂಲ ವಿ
ತ್ರೋತು ಮೆಯ್ದಡವಿ ಯಿವನೆಮ್ಮನುದ್ಧರಿಸಿದವನೆಂದು ಗಣಕುಲಕುಸಿರುತೇ ೫೮

ಮಂಗಲಾತ್ಮಕ ಕೆಱೆಯ ಪದ್ಮರಸರಂ ಸರ್ವ
ಮಂಗಲೇಶಂ ಸರ್ವರತಿಶಯಂಬಟ್ಟುಘೇ
ಚಾಂಗು ಬಲ ಮಝು ಭಾಪು ಶಿವ ಮಹಾದೇವ ಜಯ ಜೀಯ ಜಯ ಜಯ
ಪೊಂಗುತೊಯ್ದೆರಡು ಬೆಳಗು ಪಳಂಚಿಯೊಂದಾದ [ಯೆನುತಿರೆ
ಪಾಂಗಿನಿಂ ಲಿಂಗದಮೃತಾಂಗದೊಳಡಂಗೆ ಗಣ
ಪುಂಗವರ್ ಪೂಮಳೆಗಱೆದರಾಗಳೊಡನೊಡನೆ ಭೃಂಗಿಗೀತಂಗಳಮರೆ ೫೯

ಆ ಮಹಾ ದೇವದುಂದುಭಿ ರವಂಗೆಯ್ದು ಸುರ
ರಾಮೋದದಿಂದೆ ನರ್ತನವನೆಸಗಿದರಿಂತು
ಸೌಮನಸ್ಯಮನಖಿಲಕಿತ್ತು ಶಿವನೊಳ್ ಕೆಱೆಯ ಪದ್ಮರಸರೈಕ್ಯಮಾಗಿ
ವೈಮಲ್ಯ ನಿತ್ಯ ನಿರತಿಶಯಾನವಚ್ಛಿನ್ನ
ತಾ ಮಹಿತ ನಿರ್ವಿಕಲ್ಪಾನಂದ ಸಚ್ಚಿದು
ದ್ದಾಮಾಬ್ಧಿಯೊಳಗದ್ವಯಾಖಂಡ ಲಕ್ಷಾನುಪಮ ಸುಖದೊಳೊಪ್ಪುತಿರ್ದಂ ೬೦

ಮತ್ತಮಲ್ಲಿರ್ದ ಶಿವಶರಣರಾ ಕಾಶಿಯೊಳ
ಗುತ್ತಮಾನಂದದಿಂ ಗುರುವರನ ನುತಿಸುತಾ
ಯತ್ತ ಗಣಪರ್ವಮಂ ಮಾಡಿ ತಂತಮ್ಮ ತಾಣಕೆ ಸೋದರೀವಾರ್ತೆಯಂ
ಇತ್ತ ಸುಕುಮಾರ ಪದ್ಮರಸಾರ್ಯರುಱೆ ಕೇಳ್ದು
ಚಿತ್ತದೊಳ್ ಹರಿಸಮಂ ತಾಳ್ದಭವಭಕ್ತರ್ಗು
ದಾತ್ತೋತ್ಸವಂಗಳಂ ರಚಿಸಿ ಶಿವಸುಖದೊಳಿಳೆಯಂ ಪೊರೆವುತೊಪ್ಪುತಿರ್ದಂ ೬೧

ಇಂತೀ ಕೆಱೆಯ ಪದ್ಮರಾಜ ಚರಿತಮನುಮಾ
ಕಾಂತ ಭಕ್ತರ ಪಾದರಕ್ಷೆಯಂ ಮಚ್ಚಿರದೊ
ಳಾಂತು ತಚ್ಛಕ್ತಿಯಿಂದಱಿದನಿತನೊರೆದೆನೀ ಕೃತಿಶೈವವೀತನೆಮಗೆ
ಎಂತಾದೊಡಂ ಲೆಂಕನೆಂಬೆನಿಱು ಪಕ್ಷದಿಂ
ಕಂತುಹರನವರೆನ್ನ ರಚನಾಪ್ರಯೋಗದೊಳ
ಗಂ ತಿಳಿದು ಕೈಕೊಂಡು ಪುಸ್ತಕಮನೆನ್ನನಾರಯ್ದು ನಡೆಸುವುದು ಸತತಂ ೬೨

ಇದು ಕಾಲಕಾಮ ಮಾಯಾ ಭಯಧ್ವಾಂತರವಿ
ಇದು ಸಕಲ ದುಷ್ಟರೋಗಾಟವೀ ಪಟುದಾವ
ವಿದು ಫಣಿಗ್ರಹ ಚೋರ ನೃಪ ರಿಪು ವಿಷಾಗ್ನಿ ವಿಪದಾದಿ ಬಾಧಾಭ್ರವಾತಂ
ಇದು ಸಮಸ್ತಾಘಾದಿವಿದಳನನಿಶಿತಭಿದುರ
ವಿದು ಸಕೃಚ್ಛರಣಮಾತ್ರಾಭೀಷ್ಟ ಫಲದಾತೃ
ವಿದು ಮುಮುಕ್ಷುಗಳ ಚಿದ್ಭುಟಿಕೆಯಿದು ಸುಪವಿತ್ರಮದಱಿನಿದು ಪಠ್ಯಮೆಂದುಂ ೬೩

ವರಶಿವಸಮಯಮತ್ಯಧಿಕವಾಗಿ ನಿಲ್ಕೆಮ್ಮ
ಗುರುವಂಶಮುದ್ಧಪ್ರವೃತ್ತಿಯಿಂ ಬಾಳ್ಗೆಮಗೆ
ಗುರು ವಿಶ್ವಪತಿ ಪರಮ ಸೌಖ್ಯಮಂ ಮೇಣಪುನರಾಗತಿಯನಿತ್ತು ಪೊರೆಗೆ
ಧರೆ ಸಕಲ ಸಸ್ಯಂಗಳಿಂದೆ ಸಂಪನ್ನಮ
ಕ್ಕರಸುಗಳ್ ಪ್ರಕೃತಿಹಿತಮಾಗಿ ವರ್ತಿಸುಗೆ ವಿಬು
ಧರ ಬುದ್ಧಿಯಂ ಸರಸ್ವತಿಬಣ್ಣಿಪುಡುಗಖಿಲ ಶಾಂತಿಯಕ್ಕಿದಱ ಫಲದಿಂ ೬೪

ಅಚ್ಚ ಕನ್ನಡಂ

[೧]ಹಂತಿಗೊರಲವನನೇಳಿಸೆ[೧] ಪೆರ್ಚಿರಲೊಳೊತ್ತಿ
ಹಂತಮಂ ಮುಱಿದು ಮೂಱವತೆಯುಳ್ಳರಮನೆಯ
ನಂತವುರಮಂ ಮಾಡಿ ನಿರ್ಮಾವ ಮುಡಿದು ತನ್ನಂ ನೆನೆವ ಮಾಹೂನ್ಮೂರಾ
ಪಿಂತಿಲಮರ್ದುಣಿವರನೆನಿಸಿ ಕಪ್ಪುವಟ್ಟೆಗನ
ನಾಂತು ಬರ ಮೀವ ಹತ್ತದೆ ತುತ್ತತುದಿಯಾಗಿ
ಮಂತುರವರಿಜುದಾಳ್ದು ನೆಱೆ ಮೆಱೆವ ಕಾಶಿಯೊಡೆಯಂ ತಡೆಯದೋವುಗೆಮ್ಮಂ ೬೫

---

೧ ಹಂತಿಗೊರಲವನೇಳಿದದ (ಬ) ಹಂತಿಗೊರಲವನೇಳಿದ (ಕ)

ಪ್ರಾಕೃತಂ

ಅಕ್ಕವಾದತ್ತಣಖ್ಖತ್ತೇಸಣಯಣಸಿವ
ಸಕ್ಕ ದೇವಜ್ಜೆತ್ಥಳಜ್ಜೀಸ ಮಹಳೇಹ
ಚಕ್ಕಮದ್ದಕ್ಕಿಣ್ಣ ಗುರುಚರಣಸವ್ವದೋಮುಹಜಾಿದಿಿದಿಕ್ಕಿಗಣ್ಣ
ಉಕ್ಕಿತ್ಥಸಗ್ಗಿತ್ಥದಣ ಯೀಕಪದ್ಧವಿಳ
ಸಕ್ಕ್ಯಪಹಿಯಯಜಮ್ಮಕಾಣಿಣದಹಣಭಕ್ತ
ಚಕ್ಕವಾಯದಿ ಯತ್ತಣಕ್ಕೂರಹರತುಮಂ ರಳಿಖ್ಖುಮಂ ವಿಸ್ಸೆಸ್ಸರಾ ೬೬

ಸ್ಫುರಿಸಿ ಲಿಂಗತ್ರಯಮನಾ ಕ್ರಿಯಾಕಾರಕೋ
ತ್ಕರನಾಗಿ ತದ್ಧಿತಮನಱಿಪಿಯಂತಸ್ಥೋರು
ತರ ವಿಧಿಯನೊರೆದು ವಕ್ತವ್ಯವಿಂತೆಂದು ಬೋಧಿಸಿಯಾಗಮದ ಹೃದಯಮಂ
ನಿರವಿಸಿ ಲಸತ್ಪ್ರತ್ಯಯಂಬೇಳ್ದು ಮೇಣ್ ಪ್ರಕೃತಿ
ಪುರುಷವೃತ್ತಿಯನೆಯ್ದೆ ಕಾಣಿಸಿ ಸುಸೂತ್ರದಿಂ
ಚರಿಪನೊಲೆಸಗಿ ಶಾಬ್ದಿಕರ ಗುರುವೆನಿಪ ಕೆಱೆಯ ಪದ್ಮಸರೋವುಗಿಳೆಯಂ ೬೭

ಕಾಮಿತಜನಕೆ ಕಾಮದುಘವೆ ಭಕ್ತೌಘಚಿಂ
ತಾಮಣಿಯೆ ಭಜಕರ ಸುರದ್ರುಮವೆ ನತಜನ
ಸ್ತೋಮಮೇರುವೆ ಭಾವಿಪರ ಸಿರಿಯೆ ನೆನೆವವರ ನಿಧಿಯೆ ಕರುಣಾಜಲಧಿಯೇ
ಸ್ವಾಮಿ ಮತ್ ಕೆಱೆಯ ಪದ್ಮರಸಾಂಕಗುರುವೆ ನಿ
ವ್ಮೀ ಮಹಾಕೃತಿಯನೊರೆದೆವುಗೊಲ್ದವಿಘ್ನಮನ
ನಾಮಯತ್ವಮನಮೃತವಾಣಿಯನಮಲ ಮತಿಯನತಿಸುಖವನಿತ್ತು ಸಲಹಾ ೬೮

ಮುದಕುಧರವಿದಳನಭಿದುರ ಪರಮಶಿವಭಕ್ತ
ಪದಶತದಳಾದಭ್ರಮಕರಂದಲೀಲಾಪ್ರ
ಮದ ಪರವಶೀಭೂತ ಮಧುಕರೋಪಮ ಪದ್ಮಣಾಂಕಪ್ರಣೀತಮಾಗಿ
ಸದಮಳಾಖಿಳಶಾಸ್ತ್ರಸಾರಮೆಂದೆನಿಸುವ
ಭ್ಯುದಯಕರ ಪದ್ಮರಾಜಪುರಾಣಕಥೆಯೊಳಿಂ
ತಿದು ಗುರುವಿನ್ಯೈಕ್ಯಮಂ ಪೇಳ್ದ ಪದಿಮೂಱನೆಯ ಸಂಧಿ ಶಿವಮಸ್ತು ಸತತಂ ೬೯

---

೨ ದು (ಬ) ೩ ಚ (ಕ) ೪ ದ (ಕ)

ಈಶಾಪರಾವತಾರನ ವಿಬುಧನುತನ ಭವ
ಪಾಶನಾಶಕ ಕೆಱೆಯ ಪದ್ಮಣಾರ್ಯನ ಲಸತ್
ಶ್ರೀ ಶಿವಾದ್ವೈತಸಾಕಾರಸಿದ್ಧಾಂತಪ್ರತಿಷ್ಠಾಪನಾಚಾರ್ಯನಾ
ಈ ಶುದ್ಧಚರಿತಮಂ ತಿಳಿಪಿದಗ್ರೋದಿದ
ರ್ಗಾಸೆಯಿಂ ಕೇಳ್ದರ್ಗೆ ಭುಕ್ತಿಮುಕ್ತಿಗಳಂ ಮಹಾ
ಶುಭಂಗಳನಾಯುವಂ ಕೊಟ್ಟು ಗುರುರೂಪ ವಿಶ್ವನಾಥಂ ರಕ್ಷಿಪಂ ೭೦

ಅಂತು ಸಂಧಿ ೧೩ ಕ್ಕಂ ಪದಂಗಳು ೧೨೭೦ ಕ್ಕಂ

ಮಂಗಳಮಹಾ

ಶ್ರೀ

ಸಂಪೂರ್ಣಂ

ಪದ್ಮರಾಜಪುರಾಣ

ಶಬ್ದಕೋಶ

ಶಬ್ದಕೋಶ

ಅ

ಅಜಿನ-ಚರ್ಮ ೧-೧
ಅವಬದ್ಧ-ಅಂಟಿದ ೧-೧
ಅಸಿ-ಖಡ್ಗ ೧-೧
ಅಮರೀ-ದೇವತಾಸ್ತ್ರೀ ೧-೪
ಅನಾರತ-ನಿರಂತರ ೧-೧೪
ಅಖರ್ವ-ಹೆಚ್ಚಿನ ೧-೮
ಅನಿಮಿಷ-ಮೀನ, ದೇವತೆ ೧-೩೫
ಅಭಿದುರ-ಸಮರ್ಥ ೧-೫೨
ಅವಧಿ-ಯಮ ೨-೧೭
ಅಕ್ಷೀಣ-ಕ್ಷಯವಾಗದ ೨-೨೮
ಅವಕೀರ್ಣ-ವ್ಯಾಪಿಸು ೬-೮೨
ಅತನು-ಮನ್ಮಥ ೩-೬೮
ಅಡಸು-ಮೇಲೇರು ೩-೧೬
ಅರೆಯಟ್ಟು-ಬೆನ್ನುಹತ್ತು ೩-೧೬
ಅಲಂಪು-ಸೊಗಸು ೪-೫೭
ಅನಾಮಯ-ಶಿವ ೪-೫೮
ಅಳ್ತಿಕಾರ-ಪ್ರಿಯತಮ ೫-೩
ಅಳ್ತಿ-ಪ್ರೀತಿ,ಇಚ್ಛೆ ೫-೮
ಅಕ್ಕಿಗಟ್ಟು-ದೃಷ್ಟಿಯುಸೆಳೆತ ೮-೧೧
ಅವಿದಿರು-ಅಡಗಿರು ೮-೭೦
ಅಂದಳ } -ಪಲ್ಲಕ್ಕಿ ೯-೧೧
ಅಂದಣ }
ಅಭಿಯಾತಿ-ಎದುರಾಳಿ ೯-೨೯
ಅವಧಾರು-ಚಿತ್ತೈಸು ೧೦-೩೦
ಅಣಿಯರ-ಯೋಗ್ಯ ೧೦-೩೦
ಅವನಿನಾರಾಯಣಬಲಿ-ಕಂದಮೂಲಾದಿಗಳಿಂದ ಕೊಡುವಪಿಂಡ ೧೦-೧೫೪
ಅರ್ಹವ್ರತ-ಜೈನವ್ರತ ೧೦-೧೬೨
ಅಂಗಯಿಸು-ಹಾರಯಿಸು ೧೦-೨೧೨
ಅನುವಾಗು-ಸಜ್ಜಾಗು ೧೦-೨೫೦
ಅನಿಮಿತ್ತ-ಸಹಜ,ಸ್ವಾಭಾವಿಕ ೧೧-೬೭
ಅರ್ಕಪರ್ಣ-ಸೂರ್ಯಪಾನ ೧೧-೧೪೩
ಅಸ್ತೋಕ-ಹಿರಿಮೆ ೧೧-೨೪
ಅನವದ್ಯ-ದೋಷರಹಿತ ೧೨-೨೫
ಅವಿಕತ್ಥನ-ನಿರಭಿಮಾನ ೧೩-೨೦
ಅರೆದಿಂಬವ-ಚಂದ್ರ ? ೧೩-೧೨
ಅಳುಂಬಮಾದ-ಮೀರಿದ,ಹೆಚ್ಚಾದ ೨-೪
ಅಚಲಾಗಾರ-ಪರ್ವತಗಳಲ್ಲಿವಾಸಿಸುವ ೨-೭
ಅಂಬಳಿಕ್ಕು-ಅಂಬೆಗಾಲಿಡು ೨-೭೧
ಅಗುರಿಸು-ಹೊಳೆ ೩-೪೩
ಅಂಕಿಸು-ಗುರುತಿಸು ೩-೪೯
ಅವದಾತ-ಹೊಳೆಯುವ,ಶುಭ್ರ
ಅಳೆ-ಮಜ್ಜಿಗೆ ೫-೫೫

ಆ

ಆಮ್ನಾಯ-ವೇದ ೧೧-೧೨೪
ಆಮಯ-ರೋಗ ೧೧-೮೮
ಆಮರ್ಷ-ರೋಷ ೧೧-೬೦
ಆಕರವಾರಿ-ಜಲಸಮೂಹ ೧೧-೫೮
ಆಹ್ವಯ-ನಾಮ ? ,ಹೆಸರು ೧೦-೧೮೨
ಆಲಂಬನಂಗೆಯ್-ತೂಗುಹಾಕು ೧೦-೨೩
ಆವಲ್ವೂ-ಕೆಂಪುಹೂ ೮-೨೦
ಆರಾವ-ಧ್ವನಿ ೫-೧೯
ಆಶ್ವಿತ್ರರುಜೆ-ತೊನ್ನುರೋಗ ೪-೫೮
ಆಲವಾಲ-ಮಡಿ ೩-೩೮
ಆಭ-ಸ್ವರೂಪ ೩-೭೬
ಆಮೋದ-ಸಂತೋಷ ೩-೭೮
ಆತತ-ಪ್ರಸಿದ್ಧ ೧-೧೪
ಆನೀಕ-ಸಮೂಹ ೧೦-೧೪೫

ಇ

ಇಕ್ಷುಚಾಪ-ಮನ್ಮಥ ೪-೨
ಇಸು-ಬಾಣಹೊಡೆ ೧೧-೬೭

ಉ

ಉತ್ಸೇಕ-ಗರ್ವ ೪-೧
ಉದ್ವಾಹ-ವಿವಾಹ ೪-೩೭
ಉದ್ವ-ಶ್ರೇಷ್ಠ ೪-೪೬
ಉಪರಿ-ಮೇಲಿನ,ಹೆಚ್ಚಿನ ೪-೬೨
ಉಷ್ಣೀಷ-ರುಮಾಲ ೪-೩೦
ಉಲ್ಬಣ-ಅತಿರೇಕ ೮-೭೭
ಉರುಳ್ಗಣ್ಣಿ-ಕುತ್ತಿಗೆಗೆಬಿಗಿಯುವಕಣ್ಣಿ ೮-೯
ಉದ್ಧೂಳಿಸು-ಲೇಪಿಸು ೭
ಉನ್ಮೀಲಿತ-ಅರಳಿದ ೧೧-೧೧೮
ಉಕ್ಷಗ-ಶಿವ ೧೧-೧೨೯
ಉತ್ಥಿತ-ಎದ್ದ,ಹೊರಹೊಮ್ಮಿದ ೧-೧
ಉತ್ತಾಡಿತ-ಹೊಡೆಯಲ್ಪಟ್ಟ ೧-೧
ಉಣ್ಮು-ಹೊರಹೊರಡು ೧-೩
ಉತ್ತಾಳ-ಉನ್ನತವಾದ,ಶ್ರೇಷ್ಠ ೪-೨೨
ಉಕ್ಕಂದ-ಹೊರಸೂಸು ೨-೬೬

ಊ

ಊಣೆ-ಕೊರತೆ ೧೩-೩೮
ಊರ್ಧ್ವರೇತ-ಶಿವ ೧೧-೨೬
ಊರ್ಮಿ-ತೆರೆ ೧೦-೧೯
ಊಳ್-ಒದರು ೧೦-೨೭೪
ಊಣೆಯ-ಕೊರತೆ ೪-೪
ಊಡು-ಉಣಿಸು ೧-೧೯
ಊಷ್ಮ-ತೇಜ ೨-೭೫
ಊರ್ಮಿಘಟ್ಟನ-ತೆರೆಗಳಹೊಯ್ಲು ೧೧-೧೭೫

ಎ

ಎಡಚ-ಶನಿ ? ೪-೩೩
ಎಬ್ಬಟ್ಟು-ಹಿಮ್ಮೆಟ್ಟಿಸು ೯-೪
ಎರೆಯ-ಒಡೆಯ ೨-೨೫

ಏ

ಏನೋಹರ-ಪಾಪನಾಶ ಮಾಡುವವ ೧೧-೧೨೪
ಏಣ-ಚಿಗರಿ ೧೦-೧೫೦

ಐ

ಐರಾವಣ-ಇಂದ್ರನಆನೆ ೧-೫

ಒ

ಒರೆ-ಹೇಳು ೧೦-೧

ಕ

ಕಟ್ಟಿಗೆಕಾರ-ವೇತ್ರಧಾರಿ ೧೦-೧
ಕಡವರ-ಹೊನ್ನು ೩-೩೦
ಕಡಿತ-ಲೆಕ್ಕ ೫-೪೦
ಕಣಿಶ-ಅಗಳು ೮-೧೨
ಕರುವಿಡು-ಎರಕಹೊಯ್ ೧೩-೫೭
ಕರಗ-ಕೊಡ ೮-೭
ಕರುಬು ಅಸೂಯೆಪಡು ೮-೭೫
ಕಳಮ-ಬತ್ತ ೮-೧೪
ಕಲಗರ್ಚು-ಮುಸುರೆ ೬-೧೭
ಕಲ್ಪಾಂತಕಾಲ-ಪ್ರಳಯಕಾಲ ೯-೩೯
ಕಳಿಕೆ-ಅಡಕೆಯಹೊಡೆ ೮-೩೪
ಕವಾಟ-ಬಾಗಿಲುಕದ ೧೨-೧೭
ಕಾಳ್ಗಿಡೆ-ತಿರಸ್ಕರಿಸು ೧೦-೨೮೭
ಕಾದಂಬಿನಿ-ಮೇಘ ೮-೬೭
ಕಾಂಚಿ-ಪಟ್ಟಿ ೩-೪೫
ಕಿನಿಸು-ಸಿಟ್ಟಾಗು ೧೦-೨೫೦

ಕಿವಿವೇಟ-ಕೇಳುವಇಚ್ಛೆ ೫-೨೭
ಕುರಿವಾನಿಸರ್-ಮಂದಬುದ್ಧಿಗಳು ೬-೨೧
ಕುಧರ-ಪರ್ವತ ೬-೪
ಕುಬ್ಜಿಕೆ-ಒಂದುಊರಹೆಸರು ೧೧-೧೫೨
ಕುಭೃತ್-ಪರ್ವತ ೬-೧
ಕುಹಳಿ-ಹಿಂಗಾರದಎಸಳು ೮-೩೪
ಕುಳಿರ್ವೆಟ್ಟು-ಚಳಿಬೆಟ್ಟ,ಹಿಮಗಿರಿ ೧-೩೨
ಕೂಪಾರ-ಭಾವಿ ೨-೫
ಕೂರ್ಪಾಸ-ಬಟ್ಟೆ,ಕುಪ್ಪಸ ೪-೬೩
ಕೂಲ-ದಂಡೆ,ನದೀತೀರ ೧೩-೩೩
ಕೇಣಿಗೊಡು-ಪ್ರದರ್ಶಿಸು ೮-೭೮
ಕೊನಬು-ವಿರಹಿ ೮-೯೭
ಕೋಲ-ವರಾಹ ೧೦-೧೪೦
ಕೌಶಿಕ-ಗೂಗೆ ೨-೬೨
ಕಂತು-ಮನ್ಮಥ ೩-೭೨
ಕಂದುಕ-ಚಂಡು ೮-೯೮
ಕಂಕಾಳ-ಅಸ್ತಿಪಂಜರ ೮-೯೮
ಕೃಷ್ಣಾಚರಣ-ಕೆಟ್ಟನಡತೆ ೮-೭೨
ಕ್ಸುಪ-ಅಸ್ತಿ ? ೧೦-೨೪೨
ಕಕುಬ್-ಆಕಾಶ ೧
ಕಲಾಪ-ಭೂಷಣ ೧
ಕರ್ಬುರಲ್-ಇಂದ್ರನೀಲ ೩-೪೪
ಕಮ್ಮಂಗಣೆಯ-ಮನ್ಮಥ ೨-೩೮
ಕಣ್ದೆರೆವು-ದರ್ಶನ ೪-೩೪
ಕರ್ಣೇಜಪರ್-ಚಾಡಿಕೋರರು ೬

ಗ

ಗಭಸ್ತಿ-ಕಿರಣ ೨-೧
ಗರಳ-ವಿಷ ೬-೧೭
ಗರಿಮಾವಾಪಿ- ಹಿರಿಮೆಯಪ್ರಾಪ್ತಿ ೧೧-೧೦೮
ಗೇಕು-ಜೇಕು ೧೦-೧೪೮
ಗೊಪೆ-ಗುಹೆ ೨-೨೭
ಗೋಪ-ದೀಪದಹುಳ ೨-೨೩
ಗೋಪಿ-ಗೊಲ್ಲತಿ ೧೧-೯೭
ಗೋಮಿನಿ-ಲಕ್ಷ್ಮಿ ೧೧-೬೦
ಗಂಡುಗೆಲೆ-ಉದ್ಧಟತನದಿಂದನಡೆ ೬-೩

ಘ

ಘಟ್ಟಿಶೆಟ್ಟಿ-ರತ್ನದವ್ಯಾಪಾರಿ ೮-೮೦
ಘಟ್ಟಿವಳ್ತಿಯರು-ಗಂಧತೇಯುವವರು ೮-೮೦
ಘನ-ಮೋಡ ೧-೧
ಘಾರಾಘಾರಿ-ಖಡಖಡಾಟಿಕೆ ೮-೮೬
ಘೃಣಿ-ಕಾಂತಿ ೭-೨೦
ಘೃಣಾನಿಧಿ-ದಯಾನಿಧಿ ೧೧-೩೮

ಚ

ಚಢಾಳ-ಆಧಿಕ್ಯ ೮-೮೬
ಚಂಚರೀಕ-ಭ್ರಮರ ೧-೨೧
ಚಾಮೂರ-ಅಸ್ತಿ ೧೦-೨೬
ಚಾಂಪೇಯ-ಸಂಪಿಗೆ ೬-೩೭
ಚುನ್ನವಾಡು-ಅಣಕಿಸು ೩-೩೦
ಚೂಡಿಕಾ-ತುದಿ,ಶಿಖರ ೫-೬
ಚೇಲ-ಸೆಲ್ಲೆ ೪-೬೬

ಜ

ಜರಕ-ಮೀನಬಲೆಗಾರ ೧೦-೧೪೮
ಜಲ್ಪ-ವ್ಯರ್ಥಮಾತು ೧೦-೨೪೮
ಜಲ್ಪಕ-ಸ್ತೋತ್ರಮಾಡುವವ ೯-೩೮
ಜಲದ-ಮೋಡ ೫-೮
ಜಾವಳ-ಸಾಮಾನ್ಯಮನುಷ್ಯ ೭-೪೬

ಜೂರ್ತಿ-ತಾಪ ೯-೨೭
ಜ್ಯೇಷ್ಠೆ-ದರಿದ್ರಲಕ್ಷ್ಮಿ ೧೦-೩೬
ಝಷಕೇತು-ಮನ್ಮಥ ೧-೧೪
ಜೂಟ-ಜಡೆ ೧-೨೩
ಜಡಸ್ಥಲ-ನೀರಿನಸ್ಥಾನ ೧-೩೫
ಜಿನುಗು-ಹಾಡು ೧-೪೧
ಜಕ್ಕುಲಿಸು-ಆನಂದಪಡಿಸು ೧-೪೧

ಠ

ಠಮಾಳಿಸು-ಮೋಸಗೊಳಿಸು ೧೩-೮

ಡ

ಡಾಳ-ಕಾಂತಿ ೩-೩೦
ಡಂಬಕ-ಗರ್ವಿಷ್ಠ ೧೦-೧೪೬
ಡಿಂಗರಿಗ-ಸೇವಕ ೧೦-೪೧

ತ

ತಗುಳ್-ದೂರಸರಿಸು ೫-೪೯
ತನೂನಪಾನ್-ಅಗ್ನಿ ೬-೧
ತನ್ವಿ-ಸ್ತ್ರೀ ೩-೩೫
ತರಣ-ದಾಟಿಸುವ ೧-೧೯
ತರಂಡ-ಹಡಗ ೧-೧೯
ತವನಿಧಿ-ಅಕ್ಷಯನಿಧಿ ೭-೪೮
ತಳಾರಿಕೆ-ಮಸಣವಾಡಿಗೆ ೪-೨೪
ತಳೋದರಿ-ಸ್ತ್ರೀ ೫-೩೨
ತಾತಿ-ತಾಯತ ೩-೪೫
ತಾರಕ-ಸಂರಕ್ಷಿಸುವ ೧೧-೩
ತಾರ್ಕ್ಷ್ಯಸ್ಥ-ಗರುಡವಾಹನ,ವಿಷ್ಣು ೧೦-೧೨
ತಿಗ್ಮಾಂಶು-ಸೂರ್ಯ ೧೦-೮೫
ತಿಂತಿ-ತಿಂಡಿ ೪-೬೪
ತುರುಗು-ತುಂಬು ೮-೩೪
ತೂರ್ಣ.ವೇಗ ೧೧-೪೪
ತೂಪಿರಿ-ಉಃಪೆಂದುಊದು,ನಿವಾಳಿಸು ೩-೩೮
ತೂಳ್-ಹೊಡೆದೋಡಿಸು ೪-೫
ತೌರ್ಯತ್ರಿಕ-ಮೂರುತೂರ್ಯಗಳು ೧೧-೨೦೦

ದ

ದಸಿ-ಮುಳ್ಳು ೩-೨೧
ದರ್ವೀಕರ-ಸರ್ಪ ೨-೧೭
ದಂದುಗ-ಕಾರ್ಯ ೧೩-೯
ದಂಭ-ಅಭಿಮಾನ,ಕಾಪಟ್ಯ ೨-೧೬
ಧ್ವಸ್ತ-ನಾಶಮಾಡಿದ ೨-೧
ಧಾನುಷ್ಕ-ಬಿಲ್ಲುಗಾರ ೧-೩
ದಾಂಗುಡಿಯಿಡು-ಹಬ್ಬು ೧-೩೦
ಧ್ವಾಂತ-ನಾಶಕ ೧-೨೧
ದಿಗ್ಧ-ಲೇಪಿತ ೧೧-೧೬೦
ಧಿಷ್ಣ್ಯ-ನಕ್ಷತ್ರ,ನಿವಾಸ,ಶುಕ್ರ ಬುದ್ಧಿ,ಮನಸ್ಸು ೭-೧
ಧೀವರ-ಜಾಲಗಾರ ೧೦-೧೩೪
ದುಗ್ಧಸಿಂಧು-ಕ್ಷೀರಸಮುದ್ರ ೭-೩೨
ದುರ್ಭಗ-ದುರ್ಭಾಗ್ಯ,ದುರ್ದೈವಿ ೧೧-೮೬
ದುರ್ವಹ-ವಹಿಸಲಸಾಧ್ಯ ೧೦-೩
ಧೂಮಕರ-ಅಗ್ನಿ ೧೦-೨೧೧
ದೂಸಿಗ-ಅರಿವೆವ್ಯಾಪಾರಿ ೮-೭೭

ನ

ನಾಕ-ಸ್ವರ್ಗ ೭-೨೭
ನಿಷ್ಣ-ಅಂಟು,ಹತ್ತು ೧೦-೧೨
ನಿಮಿರ್ಚು-ಉಂಟುಮಾಡು ೨-೧೫
ನಿರ್ವಾಹ-ಆಧಾರ ೧೦-೨೮೫

ನಿಶ್ರೇಣಿ-ನಿಚ್ಚಣಿಕೆ ೬-೭೧
ನೀರದ-ಮೋಡ ೧-೫
ನೀಲಗಳ-ಶಿವ ೧೧-೬೫
ನೀಹಾರ-ಮಂಜು ೧-೫

ಪ

ಪಚ್ಚಡಿಸು-ಹಾಸು ೮-೨೭
ಪಟೀರ-ಶ್ರೀಗಂಧ ೧-೫
ಪಟ್ಟಿರು-ಮಲಗು ೧೦-೧೫೦
ಪಡಂಗ-ಹಡಗ ೧೧-೧೭೬
ಪಡಿ-ಪ್ರತಿ ೭-ಸೂಚನೆ
ಪದಪು-ಸಂತೋಷ ೯-೪೧
ಪದಿರ್-ಶ್ಲೇಷ, ದ್ವಂದ್ವ ೮-೪೬
ಪದುಳ-ಪ್ರೀತಿ ೯-೪೧
ಪದುಳಿಸು-ಪ್ರೀತಿಸು ೩-೭೦
ಪನಿನೀರ್ಗುಪ್ಪಿಗೆ-ಗುಲಾಬದಾನಿ ೮-೭
ಪರದ-ವ್ಯಾಪಾರಿ ೮-೭೭
ಪಳಂಚಲೆ-ಜೋರಾಗಿ ಅಪ್ಪಳಿಸು ೩-೩೦
ಪಲ್ವಲ-ಸಣ್ಣ ಸರೋವರ ೧೩-೩೯
ಪ್ರತ್ಯಾಹರಿಸು-ನಿಯಂತ್ರಿಸು ೨-೪೮
ಪ್ರಪಾ-ಅರವಟ್ಟಿಗೆ ೮-೯
ಪ್ಲವ-ಪ್ರವಾಹ ೧೦-೨೩೬
ಪ್ರಸೂನ-ಪುಷ್ಪ ೧೨-೮
ಪ್ರಹೃತಿ-ಲಯ ೧೦-೨೫೨
ಪಾತಕ-ಬಟ್ಟಂಗಿ ೯-೩೮
ಪಾಣ್ಬ-ಜಾರ ೮-೬೯
ಪಾವಕ-ಅಗ್ನಿ ೨-೩
ಪಾಂಶೂಪದೇಶ-ಕಿವಿಯಲ್ಲಿ ಹೇಳುವದು ೧೨-೧೨
ಪಾಂಸುಲೆ-ಜಾರೆ ೮-೬೯
ಪ್ರಾಚುರ್ಯ-ಆಧಿಕ್ಯ ೯-೨೭
ಪಿಡಿ-ಹೆಣ್ಣಾನೆ ೩-೨೮
ಪೀವರ-ದೊಡ್ಡ ೨-೪೨
ಪಿಂಡಗ್ರಸನ-ಪಿಂಡವನ್ನು ನುಂಗುವದು ೧೦-೨೦೯
ಪುದುವಾಳ್-ಹುದುವಿನಿಂದ ಇರು ೧೧-೬೦
ಪುಂಜಿಸು ಗುಂಪಿ ಹಾಕು ೮-೧೫
ಪುಂಡ್ರೇಕ್ಷು-ಬಿಳಿಯ ಕಬ್ಬು ೧೧-೧೮೫
ಪುರೀಷ-ಹೊಲಸು, ನರಕ ೧೧-೧೯
ಪುರುಹೂತ-ಇಂದ್ರ ೧೧-೩೯
ಪುಲಾಲವಧು-ಶೂದ್ರಕನ್ಯೆ ೧೧-೧೫೮
ಪುಲ್ವಾನಿಸ-ಕೀಳುಮನುಷ್ಯ ೧-೪೭
ಪುಲೋಮ-ಒಬ್ಬ ರಾಕ್ಷಸ ೬-೧
ಪೂಷ-ಸೂರ್ಯ ೧೦-೨೪೦
ಪೇಠಿಕಾ-ಪೀಠಿಕೆ ೧-೫೨
ಪೊಟ್ಟಳ-ಪುಡಿಕೆ ೮-೭
ಪೊಣರ್ಕೆಯಾಳ್-ಕಲಿ ೮-೪೪
ಪೊರವಾರ-ಜಘನ ೮-೯೯
ಪೊರಗುಂಡ-ಸೇವಕ ೫-೩೩
ಪೊರೆಯೇರು-ಕಳೆಗೊಳ್ಳು, ಹೆಚ್ಚಾಗು ೮-೨
ಪೋರುಸೃಣಿ-ಹೋರಾಟದ ಸ್ವಭಾವದವಳು ೫-೨೭
ಫೇನ-ಬುರುಗು ೧೩-೩೩
ಬಲ್ಗನ್ನ-ದೊಡ್ಡ ಮೋಸ ೧೦-೧೪೬
ಬಂಬಲ್-ಸಮೂಹ ೮-೨೦
ಬಂಭರ-ಗುಂಗೀಹುಳ ೧೩೩೭
ಬರ್ದುಕು-ಶ್ರೇಯಸ್ಸು ೧೦-೧೭
ಬರ್ಬೂರ-ವೃಕ್ಷವಿಶೇಷ ೨-೨೩
ಬಭ್ರು-ಅಗ್ನಿ, ಬಂಗಾರವರ್ಣ, ವಿಷ್ಣು ೧-೭

ಬ್ರಹತಿಕೆ-ಉತ್ತರೀಯ ೫-೩೦
ಬಾಡಬರು-ಬ್ರಾಹ್ಮಣರು ೧೧-೯
ಬಾಣಾಸನ-ಕಬ್ಬು ೩-೬೮
ಬಾಸುಗಿ-ಸರ್ಪ ೪-೧೪
ಬಿಜ್ಜಣ-ಬೀಸಣಿಗೆ ೮-೯೨
ಬಿಸವಲ್ಲಿ-ಕಮಲ ೩-೨೯
ಬಿಡುಗಣ್ಣರ್-ದೇವತೆಗಳು ೭-೩೫
ಬಿಂಬಾಭ-ತೊಂಡೆಹಣ್ಣಿನ ಕಾಂತಿ ೧೧-೧೩೭
ಬೀಳುಡೆ-ಹರಕು ಬಟ್ಟೆ ೪-೬೩
ಬೂತುಗೆಯ್-ಅಪಹಾಸ್ಯಮಾಡು ೫-೧೧
ಬೆದಡು-ಕಂಟಿ ೪-೨೭
ಬೆಸಗೆಯ್-ಆಜ್ಞೆಪಾಲಿಸು ೯-೪೦
ಬೆಚ್ಚಂತೆ-ಬೆಸೆದ ಹಾಗೆ ೧-೭
ಬೇಳು-ಯಜ್ಞಮಾಡು ೧೦-೧೭೬
ಬೇವಸ-ವ್ಯಥೆ ೧೩-೪
ಬೈತ್ರ-ಡೋಣಿ ೧೧-೧೮೧
ಬೋಹರಿಸು-ಸುತ್ತು ೧೦-೩೦
ಬೋಳೆ-ತುದಿ ೩-೩೨
ಭಗ-ಸೂರ್ಯ ೧೦-೨೪೦
ಭಗಣ-ನಕ್ಷತ್ರ ೬-೯೭
ಭಣಿತೆ-ಮಾತು, ಧ್ವನಿ ೧೦-೩೦
ಭಾಜನ-ಪಾತ್ರೆ ೩-೧೮
ಭಾವಕಿ-ರಸಿಕ ಸ್ತ್ರೀ ೮-೧೫
ಭುಜಗ-ಸರ್ಪ ೨-೫೧
ಭೇಕ-ಕಪ್ಪೆ ೧-೨೦
ಭೌರಿಕ-ಭಂಡಾರಿ ೫-೪೦

ಮ

ಮಂತಣ-ಆಲೋಚನೆ ೫-೪೮
ಮಣಿಹ-ಕಾರ್ಯ ೬-೧೨
ಮಧುಪಾವಲಿ-ಭ್ರಮರಸಮೂಹ ೩-೬೮
ಮನು-ಮಂತ್ರ ೭-೧೦
ಮಯೂಖ-ಕಿರಣ ೮-೫೧
ಮರ್ದಲಸ್ವನ-ಮದ್ದಳೆಯಧ್ವನಿ ೧೧-೧೭೫
ಮಶಕ-ಹುಳ ೨-೫೭
ಮಸಕ-ಉದ್ವೇಗ ೩-೧೭
ಮಾಕಂದ-ಮಾವಿನಮರ ೨-೬೬
ಮಾತೃಕೆ-ಮೂಲ ೩-೮೧
ಮಾನಿಜೇಶ-ಶಿವ ೧೦-೨೩೭
ಮಿತ್ರ-ಸೂರ್ಯ ೧-೨೪
ಮಿಹಿರ-ಸೂರ್ಯ ೬-೧
ಮಿಳ್ತು-ಸಾವು ೬-೫
ಮುಯ್ವು-ಭುಜಾಗ್ರ ೯-೯
ಮುಸಲ-ಒನಕೆ ೧೦-೧೪೮
ಮೂಡಿಗೆ-ಬತ್ತಳಿಕೆ ೮-೨೪
ಮೃಷತ್ವ-ಹುಸಿ ೩-೮೦

ಮೆ

ಮೇದುರ-ದಪ್ಪ ೧೦-೨೦
ಮೇಳಾಪಕ-ಕೂಟ ೩-೬೦
ಮೇಕು-ಮಾತ್ಸರ್ಯ ೮-೮೬
ಐಂದವಕಲ-ಚಂದ್ರಕಲೆ ೧೦-೨೦೩
ಮೊಕ್ಕಳ-ಗುಂಪು ೧೦-೨೪

ಯ

ಯಷ್ಟಿ-ಬಡಿಗೆ ೧-೩೪
ಯಾದೃಚ್ಛಿಕಂ-ಮನಬಂದಂತೆ ೬-೯೩

ರ

ರಥ್ಯಾವಿಕೀರ್ಣತೆ-ರಥಿಕರಸಮೂಹ ೨-೫
ರಯ್ಯ-ಹೊನ್ನು ೪-೫

ರಾಣುವೆ-ರಾಜ್ಯ ೯-೧೮
ರುಚಿ-ಕಾಂತಿ ೧-೧

ಲ

ಲಟಕಟಿಸು-ಅಸಮಾಧಾನಹೊಂದು ೧೦-೬
ಲತಾಂತ-ಹೂ ೩-೩೩
ಲಪನ-ಮುಖ ೧-೧೭
ಲಲ್ಲೆ-ಸರಸ ೩-೩೧
ಲವಿತ್ರ-ಕುಡಗೋಲು ೨-೩೨
ಲಾಮಜ-ಬಾಳದಬೇರು ೮-೮
ಲೆಂಕ-ಸೇವಕ ೧೩-೬೨
ಲೇವಣ-ಕೊರಲಹಾರ ೩-೪೬
ಲೋಕಬಾಂಧವ-ಸೂರ್ಯ ೧೩-೧

ವ

ವಲ್ಲವಿ-ಗೋಪಿ ೮-೧೪
ವಹಿತ್ರ-ಡೋಣಿ ೧-೨೪
ವೃಜಿನ-ಪಾಪ ೧-೨೪
ವ್ಯವಹೃತಿ-ವ್ಯಾಪಾರ ೧-೪೨
ವಾತಿ-ಹನುಮಂತ ೧೧-೧೬೪
ವಾರುವ-ಕುದುರೆ ೬-೨೫
ವಾಸಾರ-ಕಿರಣ ೮-೧೦
ವಾಸುಕಿ-ಶೇಷ ೯-೩೮
ವಾರ್ತೆ-ಮಾತು ೪-೬೧
ವ್ಯಾಜ-ನಿಮಿತ್ತ ೧-೧೮
ವ್ಯಾಲ-ಸರ್ಪ ೬-೧೭
ವಿಡಾಯ-ಡೌಲು ೫-೩
ವಿಚಕಿಲ-ಕುಸುಮ ೮-೮೩
ವಿತಾನಾಂಬರ-ಪರದೆ ೫-೧೭
ವಿಧಿ-ಬ್ರಹ್ಮ ೨-೧೭
ವಿಪಂಚಿ-ಕೊಳಲು ೮-೮೬
ವಿಪಣಿ-ಪೇಟೆ ೮-೭೭
ವಿಯನ್ಮಣಿ-ಸೂರ್ಯ ೬-೧
ವಿಯನ್ನದಿ-ಆಕಾಶಗಂಗೆ ೧-೨೯
ವಿರಜ-ರಜೋರಹಿತ ೧೧-೨೮
ವಿಲುಳಿತ-ಉರುಳಿದ
ವಿಲೂನ-ಕತ್ತರಿಸು ೧-೧೩
ವಿಸರ-ಸಮೂಹ ೧೦-೨೭೦
ವಿಷ್ಟಪ-ಆಸನ ೧೦-೨೩೩
ವಿಷಾಣ-ಕೋಡು ೧-೨೮
ಅಹೋವಿಷ್ಟಿ-ನರಕದಒಂದುಭಾಗ ೧೧-೧೧೧
ವಿಹಂಗಪ-ಗರುಡ ೧೧-೧೫೯
ವೀತಿಹೋತ್ರ-ಅಗ್ನಿ ೧-೫೧
ವೀಕ್ಷಣ-ನೋಟ ೧-೨
ವೇತಂಡ.ಆನೆ ೧-೧೯
ವೇಲಾವಿಪಿನ-ಸಮುದ್ರದ ದಂಡೆಯಬನ ೧೧-೧೭೫
ವೇಲಾವಿಪಿನಕೀಚಕ-ಸಮುದ್ರದಂಡೆಯ ಮೇಲಿನಅಡವಿಯೊಳಗಿನ ಬಿದಿರು ೧೧-೧೭೫
ವೇಷ್ಟನ-ಹೊದಿಕೆ ೧೦-೧
ವೈಖರಿ-ಮಾತು ೯-೩೮

ಶ

ಶಕುಂತ-ನವಿಲು ೧೧-೮೩
ಶಸ್ತ-ಕತ್ತರಿಸಿದ ೧೦-೨
ಶಂಬರಹರ-ಶಂಬರಾಸುರನನ್ನು ಸಂಹರಿಸಿದವ, ಶಿವ ೧೩-೧೫
ಶಾರ್ಜೀಲಿ-ಪ್ರಾಣಿವಿಶೇಷ ೧೦-೧೭೨
ಶಾಲ್ಮಲಿ-ಶಾಲ್ಮಲೀ ವೃಕ್ಷ ೧೩-೩೯
ಶಾಲಿ-ಬತ್ತದ ಗದ್ದೆ ೮-೨೧

ಶಿವಾಣು-ಶಿವಮಂತ್ರ ೯-೨೮
ಶ್ರುತಿಪುಚ್ಛ-ಶ್ರುತಿಗಳ ಸಮೂಹ ೧೦-೧
ಶೂರ್ಪಕ-ಒಬ್ಬ ರಾಕ್ಷಸನ ಹೆಸರು ೩-೨೩
ಶೌಂಡ-ಉನ್ಮತ್ತ ೧-೧೯
ಸಪತ್ನ-ಶತ್ರು ೧-೨೨
ಸಮ್ಮಾವುಗೆ-ಚರ್ಮದ, ಆವುಗೆ ೫-೪೨
ಸದೃಕ್ಷ-ಸಮಾನ ೩-೩೬
ಸಸ್ಮೇರ-ಮುಗುಳುನಗೆಯುಳ್ಳ ೧-೫
ಸರ್ವವಿತ್-ಎಲ್ಲಬಲ್ಲವ ೧೦-೮
ಸಪರ್ಯೆ-ಸೇವೆ ೬-೧೦೭
ಸಂವಿತ್-ಜ್ಞಾನ ೧೧-೧೯
ಸಂವರಣ-ಪರಿಣಾಮ ೪-೨೩
ಸಂಕಾಶ-ಪ್ರಕಾಶ ೧-೧೮
ಸ್ವರ್ಣದೀ-ದೇವಗಂಗೆ ೧೧-೧೪೪
ಸ್ವರ್ಧುನೀ-ದೇವಗಂಗೆ ೬-೩೫
ಸ್ಮಯ-ಮನ್ಮಥ ೬-೧
ಸಾನು-ಪರ್ವತದ ತಪ್ಪಲು ೧-೧೭
ಸಾಂಕರ್ಯ-ಮಿಶ್ರಣ ೧೧-೮
ಸಿತಗ-ಅಂಜುಬುರುಕ ೧೧-೬೪
ಸೀಧು-ಮದ್ಯ ೧೧-೬೪
ಸುಗಿವಡೆ-ಅಂಜು ೧೧-೧೩೪
ಸುಖೋಪಚಯ-ಸುಖದ ಸಮೂಹ ೮-೧೦೦
ಸುಧಾಸೂತಿ-ಚಂದ್ರ ೩-೪೪
ಸುತಾನ-ಇಂಪಾದ ಸ್ವರ ೧-೩
ಸೂಸಕ-ಬೈತಲೆಮಣೆ ೩-೪೭
ಸೂಳಾಯ್ತ-ದೂತ ೯-೧೮
ಸೆಡೆ-ಸೆಟೆ ೧೧-೬೭
ಸೊಮ್ಮು-ಸೊತ್ತು ೧೦-೧೨೭
ಷಂಡ-ಸಮೂಹ ೧-೧೯
ಹಟ್ಟಳೆ-ಬೇಡಿ ೨-೧೮
ಹಡಿಕೆ-ಪಾತ್ರೆ ೬-೧೬
ಹರಿದಂತದಂತಿ-ದಿಗ್ಗಜ ೩-೫೦
ಹಲಿ-ಬಲರಾಮ ೧೧-೬೪
ಹೃದ್ಯ-ಮನೋಹರವಾದ ೧-೪೬
ಹಂಸಕ-ನೂಪುರ ೩-೪೫
ಹಾಹೆ-ಗೊಂಬೆ ೧-೩
ಹೊಗರು-ಕಾಂತಿ ೩-೩೧
ಹೊರಗುಂಡ-ಸೇವಕ? ೧೧-೬೭

ಒಪ್ಪೋಲೆ

ಪುಟ	ಪದ್ಯ	ಸಾಲು	ತಪ್ಪು	ಒಪ್ಪು
೭	೨೩	೪	ಅಜೀವೆವೆ	ಅಜೀವೆ
೯	೩೨	೪	ಒಳೆದಿಂತು	ಬಳೆದಿಂತು
೨೭	೪೩	೩	ಉನತಮೆನ್ನಿಪ್ಪು	ಉನ್ನತಮೆನಿಪ್ಪು
೩೦	೫೮	೧	ಎಣ್ದೆ ಸೆಯೆ	ಎಣ್ದೆಸೆಯ
೩೦	೫೮	೬	ಡೆನತೆ	ದೆನುತೆ
೭೫	೬೪	೩	ರಂತರ್ದ	ರಂತಮರ್ದ
೭೮	೬	೩	ಶ್ವ್ಟಾಡಿಕಾ	ಶ್ವ್ಚಾಡಿಕಾ
೭೯	೧೦	೪	ಸಕೆಲ	ಸಕಲ
೯೨	೬೦	೫	ಭಕ್ತಿ	ಭುಕ್ತಿ
೯೬	೧೪	೪	ಸ್ವರಮಂ	ಸರ್ವಸ್ವಮಂ
೧೦೨	೩೮	೬	ಯೊಡ್ಣಿ	ಯೊಡ್ಡಿ
೧೦೩	೪೨	೬	ಳ್ವೈಂತ	ಳ್ವಂತೆ
೧೧೮	೧೦೦	೩	ಕಂಡಿಜೀ	ಕಂಡಜೀ
೨೦೦	೯೧	೪	ತಚ್ಛಿಜ್ಞಾನ	ತಚ್ಛಿವಜ್ಞಾನ
೨೦೦	೯೧	೬	ಯೊಗಂತಲ್ಲದೆ	ಯೊಳಗಂತಲ್ಲದೆ
೨೦೦	—	೨೧	ಹೀನಸ	ಹೀನಸ್ಯ
೨೦೪	೧೦೪	೩	ನ್ನರ್ಮ	ನ್ಮರ್ಮ
೨೦೬	೧೦೮	೬	ವಬ್ಜಾಕ್ಷ	ನಬ್ಜಾಕ್ಷ
೨೧೭	೧೪೬	೪	ಕಾಮಿಯು	ಕಾಮಿಯು
೨೨೯	—	೨೬	ವಿಷವೆ	ವಿಷ್ಣವೆ
೨೪೨	೨೩	೬	ಕಂಡನ್ನ	ಕಂಡವನ
೨೯೬	೧೩೦	೩	ಹಾಸಿಸು	ವಾಸಿಸು
೩೧೯	೧೨	೨	ವಾಬನಿ	ವಾಹಿಸಿ
೩೧೯	೧೪	೩	ಗದ ಜೀಂ	ಗದಜೀಂ

೩೨೦	೧೭	೩	ಸದ್ವಯೊ	ಸದ್ವಯೋ
೩೪೧	೨೭	೧	ವಿಲ್ಲಗೆ	ವಿಲ್ಲಿಗೆ
೩೪೧	೩೭	೧	ಗುಡಿಗಬ್ಬ	ಗುಡಿಗಟ್ಟಿ
೩೪೬	೫೭	೧	ಮುರುವಡುತೆ	ಮುರವಡುತೆ
೩೪೮	೬೫	೧	ಪೆರ್ಚಿರಲೊ	ಪೆರ್ಬೆರಲೊ
೩೪೯	೬೭	೬	ಪದ್ಮಸ	ಪದ್ಮರಸ

VIJAYA EVENING COLLEGE,
LIBRARY
BANGALORE-4.
ACCN. NO. 3179
SECTION
COST : Rs. 5/-
Date 19/2/1972 Librarian.

Call No
Author
Title

ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ

ಸಂಚಾಲಕರು :

ಶ್ರೀ ನಿ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು

ಮುರುಘಾಮಠ, ಧಾರವಾಡ

ಪ್ರಕಟವಾಗಿರುವ ಕೆಲವು ಗ್ರಂಥಗಳು

ಶ್ರೀ ಸಿದ್ಧಾದೃಶ್ಯಕವಿ ವಿರಚಿತ
ಪ್ರೌಢದೇವರಾಯನ ಕಾವ್ಯ

ಶ್ರೀ ಷಣ್ಮುಖಸ್ವಾಮಿ ವಿರಚಿತ
ಅಖಂಡೇಶ್ವರ ವಚನ

ಶ್ರೀ ಸಿದ್ಧನಂಜೇಶ ವಿರಚಿತ
ಗುರುರಾಜಚಾರಿತ್ರ

ಮುಪ್ಪಿನ ಷಡಕ್ಷರದೇವ ವಿರಚಿತ
ಸುಬೋಧಸಾರ

ಶ್ರೀ ಕಲ್ಮಠ ಪ್ರಭುದೇವ ವಿರಚಿತ
ಲಿಂಗಲೀಲಾವಿಲಾಸಚಾರಿತ್ರ

ಶ್ರೀ ಚಿಕ್ಕನಂಜೇಶ ವಿರಚಿತ
ರಾಘವಾಂಕ ಚರಿತೆ

ಮಗ್ಗಿ ಮಾಯಿದೇವ ಕೃತ
ಶಿವಾನುಭವಸೂತ್ರ

ಅದೃಶ್ಯಕವಿ ವಿರಚಿತ
ಪ್ರೌಢರಾಯನ ಕಾವ್ಯ

ಆದಯ್ಯನ ವಚನಗಳು
ಸಂಪಾದಕರು : ಶ್ರೀ ಉತ್ತಂಗಿ ಚನ್ನಪ್ಪನವರು

ಪಂ. ಹುಕ್ಕೇರಿ ಸದಾಶಿವಶಾಸ್ತ್ರಿ ವಿರಚಿತ
ಶ್ರೀಮದಥಣಿ ಮುರುಘೇಂದ್ರ ಶಿವಯೋಗಿಗಳ ಚಾರಿತ್ರ

***